ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾ ಪ್ರಬಂಧ)

ಸಂಶೋಧಕಿ

ಸುಜಾತ ಅಕ್ಕಿ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರವಾಚಕರು

ಜಾನಪದ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೪

ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾ ಪ್ರಬಂಧ)

ಸಂಶೋಧಕಿ
ಸುಜಾತ ಅಕ್ಕಿ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರವಾಚಕರು
ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೪

ಪ್ರಮಾಣ ಪತ್ರ

"ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವು ಮೂಲರೂಪದ ಸಂಶೋಧನಾ ಕೃತಿಯಾಗಿದ್ದು, ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೦೨-೨೦೦೪

(ಸುಜಾತ ಅಕ್ಕಿ)
ಸಂಶೋಧಕಿ

ದೃಢೀಕರಣ ಪತ್ರ

ಸುಜಾತ ಅಕ್ಕಿ ಇವರು **"ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ"** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : -೦೨-೨೦೦೪

(ಡಾ. ಮಂಜುನಾಥ ಬೇವಿನಕಟ್ಟಿ)
ಪ್ರವಾಚಕರು
ಜಾನಪದ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಂಶೋಧನೆ ಎಂದರೆ ವಾಸ್ತವವನ್ನು ಯಥಾವತ್ತಾಗಿ ಹೇಳುವುದು ಎಂದು ಹಲವು ವಿದ್ವಾಂಸರ ಅಭಿಮತ. ಆಯಾ ವಿಷಯದ ಬಗ್ಗೆ ಸವಿಸ್ತಾರವಾಗಿ ವಿಶ್ಲೇಷಣೆಯನ್ನು ಮಾಡಿಕೊಂಡು ಹೋಗುವುದು. ಜೊತೆಗೆ ಆಯಾ ಕಾಲಮಾನದ ಮನೋಧರ್ಮವನ್ನು ತಿಳಿದುಕೊಳ್ಳಬಹುದಾಗಿದೆ. ಕ್ರಮೇಣ ಆ ವಿಷಯದ ಅವಲೋಕನ ಮಾಡಿ. ಸೈದ್ಧಾಂತಿಕ ಚೌಕಟ್ಟಿನೊಂದಿಗೆ ಒಂದು ವ್ಯವಸ್ಥಿತ ಕ್ರಮಕ್ಕೆ ವಿಷಯದ ಜೋಡಣೆಯನ್ನು ಮಾಡಲಾಗುತ್ತದೆ. ತನ್ನ ಮಿತಿಯೊಂದಿಗೆ ಪೂರ್ಣಪ್ರಮಾಣದಲ್ಲಿ ವಸ್ತುವಿನ ಗುಣಮಟ್ಟವನ್ನು ಮೌಲ್ಯಾಧಾರಿತವಾಗಿ ಕಟ್ಟಿಕೊಡಲಾಗುವುದು.

ಬಳ್ಳಾರಿ ಜಿಲ್ಲೆಯು ಹಲವಾರು ರೀತಿಯಲ್ಲಿ ತನ್ನ ಅನನ್ಯತೆಯನ್ನು ಮೆರೆದಿದೆ. ಐತಿಹಾಸಿಕವಾಗಿ ಹಂಪಿ, ನವೀನ ಬೆಳವಣಿಗೆಯಲ್ಲಿ ತುಂಗಭದ್ರ ಆಣೆಕಟ್ಟು, ಬಳ್ಳಾರಿಯ ಸುಡುಬಿಸಿಲು ಇವೆಲ್ಲವುಗಳೊಂದಿಗೆ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ನೈಸರ್ಗಿಕವಾಗಿ, ಸಾಂಸ್ಕೃತಿಕವಾಗಿ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡಿರುವ ನೆಲ, ಹಲವಾರು ಪುಣ್ಯಪುರುಷರ ನೆಲವೀಡು, ಕಲಾವಿದರ ತವರೂರು. ಆದ್ದರಿಂದ ಹಲವಾರು ಜನ ಸಂಶೋಧಕರು ಬಳ್ಳಾರಿ ಜಿಲ್ಲೆಯ ಬಗ್ಗೆ, ರಂಗಭೂಮಿ ಬಗೆಗೆ ಅಧ್ಯಯನವನ್ನು ಮಾಡಿದ್ದು ಪ್ರಸ್ತುತದಲ್ಲಿ "ಬಳ್ಳಾರಿ ಜಿಲ್ಲೆಯ ರಂಗನಟಿಯರು" ಎಂಬ ವಿಷಯವನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಈ ಅಧ್ಯಯನದಿಂದ ಹಲವಾರು ವಿಷಯಗಳ ಬಗ್ಗೆ ಇಲ್ಲಿ ಅವಲೋಕನ ಮಾಡಲಾಗಿದೆ. ಮೊದಲು ಇಡೀ ಬಳ್ಳಾರಿ ಜಿಲ್ಲೆಯನ್ನು ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಮಾಡಿದ್ದು, ಪ್ರತಿ ಹಳ್ಳಿ, ಹಳ್ಳಿಗೂ ಹೋಗಿ ಕಲಾವಿದರನ್ನು ಭೇಟಿಯಾಗಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿದ್ದೇನೆ. ಸಂಪೂರ್ಣವಾಗಿ ಮಾಹಿತಿಯನ್ನು ಒಂದು ಚೌಕಟ್ಟಿನಲ್ಲಿ ಬರುವಂತೆ ಅದನ್ನು ತಾತ್ವಿಕವಾಗಿ ಚರ್ಚೆ ಮಾಡಿದ್ದೇನೆ. ಈ ವಿವರಣೆಗಳನ್ನು ವಿಶ್ಲೇಷಿಸಿದಾಗ ಹಲವಾರು ಪ್ರಶ್ನೆಗಳು ನನ್ನ ಗಮನಕ್ಕೆ ಬಂದವು.

೧. ರಂಗನಟಿಯರು ಯಾವ ಮೂಲದಿಂದ ಹೆಚ್ಚಾಗಿ ರಂಗಭೂಮಿಗೆ ಬಂದರು?

೨. ರಂಗನಟಿಯರಿಗೆ ಹಿಂದಿನ ಕಾಲದಲ್ಲಿ ಎಂಥಹ ವ್ಯವಸ್ಥೆ ಇತ್ತು?

೩. ಕಲೆಗೆ ಯಾವ ನೆಲೆ ಏಕೆ ಸರಿಯಾಗಿ ಒಗ್ಗಿಕೊಳ್ಳುವುದಿಲ್ಲ?

೪. ಕಲಾವಿದೆಯರ ಸಾಂಸ್ಕೃತಿಕ ಅನನ್ಯತೆಗೆ ಬೆಲೆ ಏನು?

೫. ಸಮಾಜ ಇವರ ಬಗ್ಗೆ ಯಾವ ಹಿನ್ನೆಲೆಯಿಂದ ಕೀಳರಿಮೆಯನ್ನು ಹೊಂದಿದೆ?

೬. ಇಂದಿಗೂ ಅವರು ಸಂಪೂರ್ಣವಾಗಿ ಏಕೆ ವ್ಯವಸ್ಥೆಯಿಂದ ದೂರ ಇದ್ದಾರೆ?

೭. ಹಿಂದಿನ ರಂಗನಟಿಯರ ಸ್ಥಾನಮಾನಕ್ಕೂ ಇಂದಿನ ರಂಗನಟಿಯರ ಸ್ಥಾನ ಮಾನದಲ್ಲಿರುವ ವೈರುಧ್ಯಗಳೇನು?

೮. ನಿಜವಾದ ಕಲಾವಿದೆಯರಿಗೆ ಎಂದು ಬೆಲೆ ಸಿಗುವುದು? ಅವರ ಪ್ರೌಢ ಅಭಿನಯಕ್ಕೆ ತಕ್ಕ ಪ್ರೋತ್ಸಾಹವೇಕೆ ಸಿಗುತ್ತಿಲ್ಲ?

೯. ಇನ್ನು ಮುಂದೆ ಕಲಾವಿದೆಯರ ಪರಂಪರೆ ಮುಂದುವರಿಯಲು ಸಾಧ್ಯವೆ?

೧೦. ಸರಕಾರದಿಂದ ಎಂದು ಈ ಕಲಾವಿದೆಯರಿಗೆ ಆರ್ಥಿಕ ಭದ್ರತೆಯು ಒದಗಲು ಸಾಧ್ಯ?

೧೧. ನಟಿಯರ ಭವಿತವ್ಯ ಒಂದು ಯಕ್ಷಪ್ರಶ್ನೆ?

ಪುರುಷ ಮೌಲ್ಯದ ಈ ವ್ಯವಸ್ಥೆಯು ರಂಗನಟಿಯರನ್ನು ತನ್ನ ಶೋಷಣೆಯಿಂದ ಅತಿಯಾದ ಒತ್ತಡದಲ್ಲಿಯೇ ನೂಕಿದೆ. ಇದು ಉತ್ಪ್ರೇಕ್ಷೆಯಲ್ಲ ಹಾಗೂ ವಿಪರೀತ ಅನುಕಂಪವಂತೂ ಅಲ್ಲವೇ ಅಲ್ಲ. ಪ್ರತ್ಯಕ್ಷ ದರ್ಶನವಾಗಿದ್ದು, ರಂಗನಟಿಯರಲ್ಲಿ ಕೆಲವೊಂದಿಷ್ಟು ಜನರು ಮಾತ್ರ ನೆಮ್ಮದಿಯಿಂದ ಬದುಕುತ್ತಿದ್ದು, ಇನ್ನುಳಿದ ಎಲ್ಲ ನಟಿ ಮಣಿಯರ ಬಾಳು ಬರೀ ವೇದಿಕೆಯೊಂದರಲ್ಲಿಯೇ ರಾಣಿಯಾಗಿ, ಖಳನಾಯಕಿಯಾಗಿ, ಹಾಸ್ಯನಟಿಯಾಗಿ ಮೆರೆದಿರುವುದನ್ನು ಬಿಟ್ಟರೆ, ನಿಜಜೀವನದಲ್ಲಿ ಇವರ ಬದುಕು ರಂಗೇರಿಯೇ ಇಲ್ಲ. ಬಣ್ಣ ಬಳಿದುಕೊಂಡು, ತಳುಕಿನ ವಿದ್ಯುತ್ ದೀಪದಲ್ಲಿ ಅಷ್ಟೇ ಅಧಿಕಾರಿಣಿ, ರಾಣಿ, ಸಿರಿವಂತೆ, ಬಣ್ಣ ತೊಳೆದುಕೊಂಡ ಮೇಲೆ ಮುಗೀತು ಜೀವನದ ಕಷ್ಟಗಳ ಸರಮಾಲೆ. ಕೆಲವಂತೂ ಪರಿಹಾರವಿಲ್ಲದ ಸಮಸ್ಯೆಗಳೇ ಹೆಚ್ಚು.

ಮರಿಯಮ್ಮನಹಳ್ಳಿ ರಂಗಕಲಾವಿದರ ತವರೂರು. ಕನ್ನಡ ರಂಗಭೂಮಿ ಇತಿಹಾಸದಲ್ಲಿ ಮರಿಯಮ್ಮನ ಹಳ್ಳಿ ಕಲಾವಿದರ ಕೊಡುಗೆ ಗಣನೀಯ. ಈ ಊರಿನಲ್ಲಿ ನಟಿಯರ ದೊಡ್ಡ ಪರಂಪರೆಯೇ ಇದೆ. ತುಂಗಭದ್ರಾ ಜಲಾಶಯದ ಮುಳುಗಡೆಯಲ್ಲಿ ಇತಿಹಾಸವಾಗಿರುವ 'ನಾರಾಯಣ ದೇವರ ಕೆರೆ' ಮೂಲದವರಾದ ಇವರು ಬಳ್ಳಾರಿ ಜಿಲ್ಲೆಯ ರಂಗಭೂಮಿಯ ತಾರೆಗಳೆನಿಸಿದ್ದಾರೆ. ಇವರಿಗೆ ನಟನೆಯು ಸಂಪೂರ್ಣವಾಗಿ ಅಂತರ್‌ಗತವಾಗಿದೆ. ಒಂದು ಕಾಲದಲ್ಲಿ ರಂಗಭೂಮಿ ಪ್ರವೇಶಿಸುವುದಿರಲಿ ನಾಟಕವನ್ನು ಹೆಣ್ಣುಮಕ್ಕಳು ನೋಡುವುದೇ ಅಪರಾಧ ಎನ್ನುವಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿರುವಾಗ ಮರಿಯಮ್ಮನಹಳ್ಳಿ ನಟಿಯರು ದಿಟ್ಟವಾಗಿ ರಂಗಭೂಮಿಗೆ ಪ್ರವೇಶಿಸಿಯೇ ಬಿಟ್ಟರು. ಮೊದಲು ವೃತ್ತಿ ಕಂಪನಿಗಳಲ್ಲಿ ನಾಟಕ ಮಾಡುತ್ತಿದ್ದು ಕ್ರಮೇಣ ಹವ್ಯಾಸಿ ಗ್ರಾಮೀಣ ಕಲಾವಿದರೊಂದಿಗೆ ನಾಟಕದಲ್ಲಿ ಪಾತ್ರವಹಿಸುತ್ತಾರೆ. ಮರಿಯಮ್ಮನಹಳ್ಳಿಯ ಡಿ.ಸಂಜೀವಮ್ಮ, ಡಿ. ಹನುಮಂತಮ್ಮ, ನಟಿ ಸಹೋದರಿಯರು ಗರುಡರ ಕಂಪನಿಯಲ್ಲಿದ್ದು, ಡಿ.ಸಂಜೀವಮ್ಮ ಮೈಸೂರು ಒಡೆಯರಿಂದ ಪೀತಾಂಬರ ಸೀರೆಯನ್ನು ಪುರಸ್ಕಾರವನ್ನಾಗಿ ಪಡೆದಿದ್ದಾರೆ.

೧೯೪೮ ರ ಸುಮಾರಿನಲ್ಲಿ ಜಿ.ಮೈಲಾರಪ್ಪ ಎಂಬ ಕಲಾ ಆಸಕ್ತರ ನೇತೃತ್ವದಲ್ಲಿ ಮಹಿಳೆಯರೆಲ್ಲರೂ ಒಂದು ಗೂಡಿ ನಾಟಕ ಪ್ರದರ್ಶನ ನೀಡಿದ್ದರು. ಬಳ್ಳಾರಿ ಜಿಲ್ಲೆಯಲ್ಲಿನ ರಂಗಭೂಮಿ ಇತಿಹಾಸದಲ್ಲಿ ಇದೊಂದು ಐತಿಹಾಸಿಕ ಘಟನೆ ಎಂದೇ ಹೇಳಬಹುದಾಗಿದೆ. ಗಂಭೀರ ದಿನಗಳಲ್ಲಿ ಸಮಾಜದ ಕಟ್ಟುಕಟ್ಟಳೆಯನ್ನು ಮೀರಿ ರಂಗಭೂಮಿಯಲ್ಲಿ ತಮ್ಮ ಛಾಪನ್ನು ಮೂಡಿಸಿದವರು ಮರಿಯಮ್ಮನ ಹಳ್ಳಿಯ ರಂಗ ಕಲಾವಿದೆಯರು. ಇನ್ನೂ ಮುಂದುವರೆದು ಲಲಿತಕಲಾರಂಗ, ಗ್ರಾಮೀಣ ಮಹಿಳಾ ಹವ್ಯಾಸಿ ಸಂಘಗಳನ್ನು ಮಾಡಿಕೊಂಡು ಸೃಜನ ವೈಚಾರಿಕ ಪ್ರಜ್ಞೆಯ ನಾಟಕಗಳ ಪ್ರದರ್ಶನವನ್ನು ನೀಡುತ್ತಿದ್ದಾರೆ. ಕರ್ನಾಟಕದಲ್ಲೆಲ್ಲಾ ಹೆಸರು ಮಾಡಿದ್ದು, ಬೆಂಗಳೂರು, ಮೈಸೂರು ಕಡೆಯ ಹೆಣ್ಣುಮಕ್ಕಳು ಬಂದು ಇಲ್ಲಿ ನೆಲೆಸಿ ಜೀವನದಲ್ಲಿ ಯಾವುದೇ ಕ್ಷೇತ್ರವು ದೊರೆಯದೇ ಇದ್ದ ಸಂದರ್ಭದಲ್ಲಿ ಇಲ್ಲಿಗೆ ಬಂದು ನಟಿಯರಾಗಿದ್ದಾರೆ. ಹೀಗೆ ಮರಿಯಮ್ಮನ ಹಳ್ಳಿಯು ನಿರಾಶ್ರಿತ ಕಲಾವಿದೆಯರಿಗೂ ಆಶ್ರಯ ಕಿರಣವಾಗಿದೆ ಎಂದರೂ ತಪ್ಪಿಲ್ಲ. ಇಂಥ ಹೀನ ಸ್ಥಿತಿಯಲ್ಲಿ ಇದ್ದರೂ ಅವರೆಂದೂ ತಮ್ಮ ಕಲಾ ಬದುಕಿನಲ್ಲಿ ಉತ್ಸಾಹವನ್ನು ಕಳೆದುಕೊಂಡೇ ಇಲ್ಲ. ನಟಿಯರ ಉತ್ಸಾಹಕ್ಕೆ ಪ್ರೋತ್ಸಾಹ, ಪುರಸ್ಕಾರ ತುಂಬಾ ಕಡಿಮೆಯೇ. ಅದಕ್ಕೆ ಬಿಸಿತುಪ್ಪವನ್ನು ಸುರಿದವರೇ ಈ ವ್ಯವಸ್ಥೆಯಲ್ಲಿ ಹೆಚ್ಚಾಗಿದ್ದಾರೆ ಎಂದು ಅವರೇ ತಮ್ಮ ಅನುಭವದ ಮಾತುಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.

ಮೊದಲು ದಾಖಲೆಗಳನ್ನು ಆಯಾ ತಾಲೂಕಿನಿಂದ ಬೇರ್ಪಡಿಸಿ ಅಧ್ಯಯನಕ್ಕೆ ಅಳವಡಿಸಿದೆ. ಪ್ರಥಮವಾಗಿ ಕೂಡ್ಲಿಗಿ ತಾಲೂಕನ್ನು ಕ್ಷೇತ್ರಕಾರ್ಯ ಮಾಡಿದೆ. ಈ ತಾಲೂಕಿನಲ್ಲಿ ಹೆಚ್ಚಾಗಿ, ಕೂಡ್ಲಿಗಿ, ವಿರುಪಾಪುರ, ಅಮ್ಮನಕೇರಿ ಈ ಊರುಗಳಲ್ಲಿ ಮಾತ್ರ ರಂಗನಟಿಯರು ವಾಸಿಸುತ್ತಿದ್ದಾರೆ. ಈ ತಾಲೂಕಿನ ಇತರ ಭಾಗದಲ್ಲಿ ನಟಿಯರು ಸ್ವಲ್ಪವೂ ಇಲ್ಲ. ಅದಕ್ಕೆ ಹಲವಾರು ಸಾಮಾಜಿಕ, ಆರ್ಥಿಕ ಪರಿಸರಗಳು ಕಾರಣವಾಗಿದೆ. ನಟಿಯರು ತಮ್ಮ ಅನನ್ಯತೆಗೋಸ್ಕರ ಹಳ್ಳಿಗಳಲ್ಲಿರುವವರು ಈಗ ಕೂಡ್ಲಿಗಿ ಪಟ್ಟಣದಲ್ಲಿದ್ದಾರೆ. ಈ ನಟಿಯರಲ್ಲಿ ಕೆಲವೊಂದಿಬ್ಬರು ತಮ್ಮ ಮನೆತನದಲ್ಲಿ ನಟನಾಪರಂಪರೆಯಿಂದಲೇ ರಂಗಭೂಮಿಗೆ ಬಂದಿದ್ದಾರೆ. ಇನ್ನು ಕೆಲವರು ಸ್ವಆಸಕ್ತಿಯಿಂದ, ಇನ್ನೂ ಕೆಲವರು ದೇವದಾಸಿ ಸಂಪ್ರದಾಯದಿಂದ, ಇನ್ನೂ ಕೆಲವರು ಮನೆಯ ಆರ್ಥಿಕ ಪರಿಸ್ಥಿತಿ ಕಾರಣದಿಂದ ಹೀಗೆ ಒಂದಲ್ಲ ಒಂದು ಉದ್ದೇಶವನ್ನಿಟ್ಟುಕೊಂಡು ಕೂಡ್ಲಿಗಿ ತಾಲೂಕಿನ ನಟಿಯರು ರಂಗಪ್ರವೇಶ ಮಾಡಿದ್ದಾರೆ.

ಈ ತಾಲೂಕಿನಲ್ಲಿ ಹೆಚ್ಚಾಗಿ ನಾಯಕ ಸಮುದಾಯದವರೇ ಇದ್ದು, ಅದರಲ್ಲಿ ಊರನಾಯಕ ಜಾತಿಗೆ ಸೇರಿದ ಹೆಣ್ಣುಮಕ್ಕಳೆಲ್ಲರೂ ರಂಗಭೂಮಿಗೆ ಬಂದಿದ್ದಾರೆ. ಸಾಂಸ್ಕೃತಿಕವಾಗಿ ಕೂಡ್ಲಿಗಿ ತಾಲೂಕು ವಿಶೇಷತೆಯನ್ನು ಪಡೆದಿದೆ. ಪ್ರತೀ ವರ್ಷವೂ ಹಬ್ಬ, ಜಾತ್ರೆ, ಹುಣ್ಣಿಮೆಗಳಲ್ಲಿ ಗ್ರಾಮೀಣ ರಂಗಭೂಮಿಯ ಹವ್ಯಾಸಿ ಕಲಾವಿದರು ನಾಟಕಗಳನ್ನು ಆಡುತ್ತಿದ್ದು, ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಕೂಡ್ಲಿಗಿ ತಾಲೂಕಿನ ನಟಿಯರೆಲ್ಲರೂ ಪಾತ್ರವನ್ನು ನಿರ್ವಹಿಸುತ್ತಾರೆ. ಪ್ರಸ್ತುತದಲ್ಲಿ ಕನಿಷ್ಟಪಕ್ಷ ೩೫ ಜನ ರಂಗನಟಿಯರು ನಮಗೆ ಕಂಡುಬರುತ್ತಾರೆ. ಇವರೆಲ್ಲರೂ ಬಳ್ಳಾರಿ ಜಿಲ್ಲೆಯಲ್ಲಿ ಅಲ್ಲದೆ ಆಂಧ್ರ, ರಾಯಚೂರು, ಹುಬ್ಬಳ್ಳಿ, ಧಾರವಾಡ ಮುಂತಾದ ಜಿಲ್ಲೆಗಳಿಗೂ ಹೋಗಿ ತಮ್ಮ ನಟನಾಕೌಶಲ್ಯವನ್ನು ಅಭಿವ್ಯಕ್ತಿಸಿದ್ದಾರೆ.

ನಾಯಕ ಸಮುದಾಯದ ನಟಿಯರೇ ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಹೆಚ್ಚಾಗಿದ್ದಾರೆ. ಮುಸ್ಲಿಂ ಸಮುದಾಯದ ನಟಿಯರಂತೂ ಇಲ್ಲವೇ ಇಲ್ಲ. ಸಂಡೂರು ಹಾಗೂ ಶಿರುಗುಪ್ಪ ತಾಲೂಕಿನಲ್ಲಿ ನಟಿಯರು ಇಲ್ಲವೇ ಇಲ್ಲ. ಎಷ್ಟೇ ಪ್ರೌಢ ಅಭಿನಯವನ್ನು ನಮ್ಮ ನಟಿಯರು ನೀಡುತ್ತಿದ್ದರೂ ಕೂಡ ಪ್ರಾದೇಶಿಕ ಅಸಮಾನತೆಯಿಂದ ನಟಿಯರು ಹೆಚ್ಚು ಪ್ರಖರಕ್ಕೆ ಬರಲು ಸಾಧ್ಯವಾಗಿಲ್ಲ. ಬಳ್ಳಾರಿಯ ಕಪ್ಪಗಲ್ ಹಾಗೂ ಹಗರಿಬೊಮ್ಮನಹಳ್ಳಿಯ ಸೊನ್ನ ಪ್ರದೇಶದಲ್ಲಿ ಹರಿಜನ ರಂಗ ನಟಿಯರೂ ಇದ್ದಾರೆ.

ನಟಿಯರನ್ನು ಎಲ್ಲ ದೃಷ್ಟಿಕೋನದಿಂದ ವಿಸ್ತೃತ ಅಧ್ಯಯನವನ್ನು ಮಾಡಿ, ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಸಂಪೂರ್ಣ ಕ್ಷೇತ್ರಕಾರ್ಯವನ್ನು ಮಾಡಿದ್ದೇನೆ. ನಟಿಯರ ಸಾಮಾಜಿಕ ಸ್ಥಿತ್ಯಂತರಗಳು, ನಟಿಯರ ಶೋಷಣೆಗಳ ನೆಲೆಗಳು ಹೀಗೆ ಹತ್ತು ಹಲವಾರು ರೀತಿಯಲ್ಲಿ ನಟಿಯರ ಬಗ್ಗೆ ಈ ಅಧ್ಯಯನದಲ್ಲಿ ಚರ್ಚೆಮಾಡಲಾಗಿದೆ. ವೃದ್ಧಾಪ್ಯ, ಮಕ್ಕಳು, ಮಕ್ಕಳ ಭವಿಷ್ಯ, ನಟಿಯರ ಭವಿತವ್ಯ ಈ ಎಲ್ಲಾ ನೆಲೆಗಳಲ್ಲಿ ರಂಗನಟಿಯರ ಅಧ್ಯಯನವನ್ನು ಮಾಡಿದ್ದು, ಹಿಂದಿನ ರಂಗನಟಿಯರು ಹಾಗೂ ಇಂದಿನ ರಂಗನಟಿಯರ ನಡುವಿನಲ್ಲಿ ವ್ಯತ್ಯಾಸವೇನು? ಅವರಲ್ಲಿ ಕಂಡುಕೊಂಡಿರುವ ಸಾಮಾಜಿಕ ಬದಲಾವಣೆಗಳೇನು? ನಟಿಯರು ಈ ಬದಲಾವಣೆಯಿಂದ ಯಾವ ಪಥದಲ್ಲಿ ಸಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಅವರ ಸಮಸ್ಯೆಗಳಾವುವು? ಅವುಗಳನ್ನು ಹೇಗೆ ಪರಿಹರಿಸಬಹುದು. ಇಂಥ ಹಲವಾರು ವಿಷಯಗಳ ಬಗೆಗೆ ಇಲ್ಲಿ ಚರ್ಚೆಮಾಡಲಾಗಿದ್ದು, ರಂಗನಟಿಯರಿಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅನನ್ಯತೆ ಏನಿದೆ. ಅಲ್ಲದೆ ನಟಿಯರುಗಳ ಭವಿತವ್ಯದಲ್ಲಿ ಹೊಸ ಸವಾಲುಗಳೇನು ಅವುಗಳನ್ನು ಯಾವ ನಿಟ್ಟಿನಲ್ಲಿ ಪರಿಹರಿಸಲು ಸಾಧ್ಯವಾಗುತ್ತದೆ. ನಟಿಮಣಿಯರು ಹೊಸ ಆಲೋಚನೆಯಿಂದ ರಂಗಭೂಮಿಯ ಹೊಸ ಪರಂಪರೆಯನ್ನು ಹುಟ್ಟುಹಾಕಲು ಸಾಧ್ಯವೇ ಎನ್ನುವ ಹೊಸ ಪರಿಹಾರದ ನಿಟ್ಟಿನಲ್ಲಿ ಸಲಹೆ ಸೂಚನೆಗಳೊಂದಿಗೆ ಚರ್ಚೆ ಮಾಡಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಬಳ್ಳಾರಿ ಆಂಧ್ರದ ಗಡಿಭಾಗಗಳಲ್ಲಿ, ಆಂಧ್ರದಿಂದಲೂ ಬಂದು ಬಳ್ಳಾರಿಯಲ್ಲಿ ನೆಲೆಸಿ ಬಳ್ಳಾರಿ ಜಿಲ್ಲೆಯ ರಂಗಭೂಮಿಯ ಸೇವೆಯನ್ನು ಹಲವಾರು ನಟಿಯರು ಇಂದಿಗೂ ಮಾಡುತ್ತಿದ್ದಾರೆ. ಉದಾ: ಬಳ್ಳಾರಿ ಲಲಿತಮ್ಮ, ಆದವಾನಿ ವೀಣಾ, ಲಕ್ಷ್ಮೀಸುಬ್ಬಮ್ಮ, ಮನ್ನೂರು ಸುಭದ್ರಮ್ಮ, ಅಂಬುಜಮ್ಮ, ಚಾಮುಂಡೇಶ್ವರಿ ಹೀಗೆ ಮುಂತಾದ ನಟಿಯರು ಆಂಧ್ರದಿಂದಲೇ ಬಂದು ಬಳ್ಳಾರಿಯಲ್ಲಿ ನೆಲೆಸಿದ್ದಾರೆ. ಇನ್ನೂ ವಿಶೇಷವೆಂದರೆ ಕಪ್ಪಗಲ್‌ನಲ್ಲಿ ಕಲಾವಿದರ ಮನೆತನಗಳೇ ಇದ್ದು, ಅದರಲ್ಲಿ ಅಸ್ಪೃಶ್ಯರೆನಿಸಿಕೊಂಡ ಮಾದಿಗ ಜನಾಂಗದವರಲ್ಲಿ, ಒಂದು ಶತಮಾನದ ಕೆಳಗಡೆ ನರಸೂಬಾಯಿ ಎಂಬ ಕಲಾವಿದೆ ಸೂತ್ರಧಾರಿಯಾಗಿದ್ದಳು. ಇಂದಿಗೂ ಹನುಮಂತಮ್ಮ ಮುಂತಾದ ಈ ಜನಾಂಗದ ನಟಿಯರು ರಾಜ್ಯಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಈ ಭಾಗದಲ್ಲಿ ಹಾಗೂ ಶಿರುಗುಪ್ಪ ತಾಲೂಕಿನಲ್ಲಿ ಬಯಲಾಟಗಳಿಗೆ ಹೆಚ್ಚು ಪ್ರಾಧಾನ್ಯತೆ ಇದ್ದು, ಬಯಲಾಟಗಳನ್ನು ನೋಡುವ ಪ್ರೇಕ್ಷಕರೇ ಹೆಚ್ಚಾಗಿದ್ದಾರೆ. ಇನ್ನೂ

ವಿಶೇಷವೆಂದರೆ ಈ ಭಾಗದಲ್ಲಿ ನಟಿಯರಿಗೆ ಸಂಭಾವನೆಯನ್ನು ಹೆಚ್ಚು ಕೊಡುತ್ತಿದ್ದಾರೆ. ಅದಕ್ಕೆ ಎಷ್ಟೋ ನಟಿಯರು ಸಾಮಾಜಿಕ ನಾಟಕಗಳನ್ನು ಬಿಟ್ಟು ಬಯಲಾಟವನ್ನೇ ತಮ್ಮ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆ.

ಕೂಡ್ಲಿಗಿ ತಾಲೂಕು ವಿರುಪಾಪುರದಲ್ಲಿಯೂ ಕೂಡ ರಂಗನಟಿಯರಿದ್ದು, ಹೆಚ್ಚಾಗಿ ಬಯಲಾಟದ ನಟಿಯರೇ ಇಲ್ಲಿಯೂ ಇದ್ದಾರೆ. ಹೊಸಪೇಟೆ ಹಾಗೂ ಕಂಪ್ಲಿಯಲ್ಲಿಯೂ ರಂಗನಟಿಯರಿದ್ದು, ಸಾಮಾಜಿಕ ಹಾಗೂ ಜನಪದ ರಂಗನಟಿಯರೂ ಇಲ್ಲಿದ್ದಾರೆ. ಮರಿಯಮ್ಮನಹಳ್ಳಿಯ ನಟಿಯರು ಮಾತ್ರ ವೃತ್ತಿರಂಗ ಭೂಮಿಯ ಹೆಚ್ಚಿನ ಪ್ರಭಾವದಿಂದ ಸಾಮಾಜಿಕ, ಪೌರಾಣಿಕ, ಸೃಜನಶೀಲ ನಾಟಕಗಳಲ್ಲಿ ಇಂದಿಗೂ ಪಾತ್ರವಹಿಸುತ್ತಿದ್ದಾರೆ. ಇವರುಗಳಲ್ಲಿ ಹೆಚ್ಚಾಗಿ ನಟಿಯರು ಕಂಪನಿಗಳನ್ನು ಬಿಟ್ಟು ಗ್ರಾಮೀಣ ಹವ್ಯಾಸಿ ಕಲಾವಿದರೊಂದಿಗೆ ಪಾತ್ರಮಾಡುತ್ತಾ ವೃತ್ತಿಯನ್ನು ಮಾಡುತ್ತಿದ್ದಾರೆ. ಈಗೀಗ ಲಲಿತ ಕಲಾರಂಗದಿಂದ ಪ್ರಭಾವಿತ ರಾದ ರಂಗನಟಿಯರು ಸೃಜನಾತ್ಮಕ ನಾಟಕಗಳನ್ನು ಪ್ರಯೋಗಿಸುತ್ತಾ ನಾಡಿನಾದ್ಯಂತ ಹೆಸರಾಗಿರುವ ಮರಿಯಮ್ಮನಹಳ್ಳಿ ನಟಿಯರ ಪ್ರತಿಭಾವಂತ ಪ್ರತಿನಿಧಿ ಡಿ.ಸಣ್ಣಹನುಮಕ್ಕ.

ಹಡಗಲಿ ತಾಲೂಕಿನಲ್ಲಿ ಸೋಗಿರತ್ನ ಪ್ರತಿಭಾನ್ವಿತ ಕಲಾವಿದೆ. ತಾನೇ ಸ್ವತಃ ತಂಡವನ್ನು ಕಟ್ಟಿ ಮೈಸೂರಿನ ವರೆಗೂ ಹೋಗಿ ನಾಟಕ ಪ್ರದರ್ಶಿಸಿದ ಪ್ರತಿಭಾವಂತ ನಟಿ. ಈ ಭಾಗದಲ್ಲಿ ಕೆಲವೇ ನಟಿಯರು ಇದ್ದು, ಬಳ್ಳಾರಿ ಜಿಲ್ಲೆ ರಂಗಭೂಮಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹಗರಿಬೊಮ್ಮನಹಳ್ಳಿಯಲ್ಲಿ ಕೆಲವೊಂದಿಬ್ಬರು ನಟಿಯರಿದ್ದು ಇಲ್ಲಿ ಸಂಗೀತ ಮಾಸ್ತರ, ಹಾಗೂ ಕಲಾವಿದರೂ ಆಗಿರುವ ಉಲುವತ್ತಿ ವೀರಣ್ಣ, ಏಣಗಿ ಖಾಸಿಂಸಾಬ್ ಇವರುಗಳ ಪ್ರಭಾವದಿಂದ ಹಲವಾರು ನಟಿಯರು ರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಕೊಟ್ಟೂರಿನಲ್ಲಿ ನಾಗರತ್ನಮ್ಮ ಹೊಸಮನಿ, ಮಲ್ಲವ್ವ, ಶಾಂತಮ್ಮ, ಎಸ್.ಕಮಲಮ್ಮ ಮುಂತಾದ ನಟಿಯರು ರಂಗಭೂಮಿ ಸೇವೆಯನ್ನು ಮಾಡುತ್ತಿದ್ದಾರೆ.

ಈ ವ್ಯಾಪಕ ಕ್ಷೇತ್ರಕಾರ್ಯದಿಂದ ಹಲವಾರು ಮಾಹಿತಿಗಳು ದೊರೆತಿದ್ದು, ಜಿ.ಟಿ. ರಾಘವ, ಜೋಳದ ರಾಶಿ ದೊಡ್ಡನಗೌಡರು, ಎಚ್.ಟಿ.ಮಹಾಂತೇಶ ಶಾಸ್ತ್ರೀ, ದುರ್ಗಾದಾಸ್, ಎಲುವತ್ತಿ ವೀರಣ್ಣ, ಏಣಗಿ ಖಾಸಿಂಸಾಬ್, ಡಿ.ಎಂ.ತೋಟಯ್ಯ ಸ್ವಾಮಿ, ಮ.ಬ.ಸೋಮಣ್ಣ, ಡಾ.ಅಂಬಣ್ಣ, ಕೆ.ಮಹಾಬಲೇಶ್ವರ ಬಳ್ಳಾರಿ, ಈ ಎಲ್ಲಾ ಕಲಾವಿದರು ಹಾಗೂ ರಂಗಾಸಕ್ತರಿಂದ ಬಳ್ಳಾರಿ ಜಿಲ್ಲೆಯು ಈಗ ತನ್ನ ಉಜ್ವಲ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದೆ.

ಬಳ್ಳಾರಿ ಜಿಲ್ಲೆಯಲ್ಲಿ ವೃತ್ತಿ ರಂಗಭೂಮಿಗಳ ಕೊಡುಗೆ ಅಪಾರ. ವೃತ್ತಿ ಕಂಪನಿಗಳನ್ನು ಕಟ್ಟಿಕೊಂಡು ಬಳ್ಳಾರಿ ಡಿ.ಸಂಜೀವಮ್ಮ, ಲಲಿತಮ್ಮ. ಬಳ್ಳಾರಿ ಸುಜಾತಮ್ಮ ಹೆಣಗಾಡಿದ್ದಾರೆ. ಒಬ್ಬ ಪುರುಷನೇ ಕಂಪನಿ ಗಳನ್ನು ಸಂಭಾಳಿಸಿಕೊಂಡು ಹೋಗಲು ಹಿಂದುಮುಂದು ನೋಡುತ್ತಿರುವಾಗ, ಮಹಿಳೆಯು ನಾಟಕವನ್ನು ನೋಡುವುದು, ರಂಗಪ್ರವೇಶವನ್ನು ಮಾಡುವುದೇ ಸಮಾಜದ ದೃಷ್ಟಿಯಲ್ಲಿ ದೊಡ್ಡ ಅಪರಾಧವಾಗಿರುವಾಗ,

ಅಂಥ ಸಂದರ್ಭಗಳಲ್ಲಿ ಮಹಿಳೆಯು ಕಂಪನಿಗಳನ್ನು ಕಟ್ಟಿಕೊಂಡು ಸಾರಿಗೆ ಸೌಕರ್ಯಗಳಿರದ ವೇಳೆಯಲ್ಲಿ ರಂಗಭೂಮಿಗಾಗಿ ಹೋರಾಟ ಮಾಡಿದ್ದು ದೊಡ್ಡ ಸಾಹಸವೇ ಸರಿ. ಬಳ್ಳಾರಿ ಜಿಲ್ಲೆಯಲ್ಲಿ ಅಂತವರು ಉದಾಹರಣೆಗೆ ಸಿಗುತ್ತಿರುವುದು ಈ ಜಿಲ್ಲೆಯ ರಂಗಭೂಮಿಯ ಉಜ್ವಲ ಪರಂಪರೆಯ ಪ್ರತೀಕವಾಗಿದೆ.

ಅಧ್ಯಯನದ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯ ರಂಗಭೂಮಿಯು ಹಲವಾರು ಮಾಹಿತಿಗಳನ್ನು ಒದಗಿಸುತ್ತದೆ. ಈ ಜಿಲ್ಲೆಯಲ್ಲಿ ಕಲಾಕಾರರು, ಗಾಯಕರು, ನಟರು, ನಟಿಯರು, ಸಂಗೀತಗಾರರು, ವೃತ್ತಿ ಕಂಪನಿಯ ಮಾಲಿಕರು, ಹವ್ಯಾಸಿ ಕಲಾವಿದರು, ಹಲವಾರು ರಂಗಭೂಮಿ ಸಂಘಟನಾಕಾರರು, ತಬಲಾ ವಾದಕರು, ದಿಲ್‌ರುಬ್, ಹಾರ್ಮೋನಿಯಂ, ಪಿಯಾನೋ, ಕ್ಯಾಸಿಯೋ, ಗೊಂಬೆಯಾಟ, ತೊಗಲು ಗೊಂಬೆ ಯಾಟ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮುಂತಾದ ಕಲಾಕಾರರ ಕೊಡುಗೆ ಬಳ್ಳಾರಿ ಜಿಲ್ಲೆಯಲ್ಲಿ ಅಪಾರವಾಗಿದೆ. ಆದ್ದರಿಂದ ಇವರೆಲ್ಲರ ಸೇವೆ ಇಲ್ಲಿ ಉಜ್ವಲವಾಗಿದ್ದು, ರಂಗಭೂಮಿಯ ಪರಂಪರೆಗೆ ಇವರೆಲ್ಲಾ ಒಳ್ಳೆಯ ಭದ್ರ ಬುನಾದಿಯನ್ನು ಹಾಕಿ ಸೇವೆಯನ್ನು ಮೌಲ್ಯಾಧಾರಿತವನ್ನಾಗಿಸಿದ್ದಾರೆ.

ನಟಿಯರ ಬಗ್ಗೆ ಅಧ್ಯಯನ ಮಾಡಲು ಹೋದರೆ ಪ್ರತಿಯೊಬ್ಬ ರಂಗನಟಿಯರಿಂದಲೂ ಒಂದೊಂದು ಸಂಶೋಧನಾ ಕೃತಿಯಾಗುವಷ್ಟು ಬಳ್ಳಾರಿ ಜಿಲ್ಲೆಯ ನಟಿಯರು ರಂಗಭೂಮಿ ಸೇವೆಯನ್ನು ಮಾಡಿದ್ದಾರೆ. ನಟಿಯರ ಜನನ, ಬಾಲ್ಯ, ಕಲಿಕೆ, ಕೌಟುಂಬಿಕ ಹಿನ್ನೆಲೆ, ಸಾಮಾಜಿಕ ಆರ್ಥಿಕ ಪರಿಸರ, ಜಾತಿವಾರು ನೆಲೆಗಳು, ವರ್ಗವಾರು ನೆಲೆಗಳು, ಕೌಟುಂಬಿಕ ನೆಲೆಗಳು, ಬಾಲ್ಯ, ಯೌವ್ವನ, ಮದುವೆ, ಮಕ್ಕಳು, ಮಕ್ಕಳ ಭವಿಷ್ಯ, ವೃದ್ಧಾಪ್ಯ, ನಟಿಯರು ಸಮಾಜದ ದೃಷ್ಟಿಯಲ್ಲಿ, ನಟಿಯರು ಸಾಂಸ್ಕೃತಿಕವಾಗಿ, ನಟಿಯರ ರಾಜಕೀಯ ಪ್ರಾತಿನಿಧ್ಯ. ರಂಗನಟಿಯ ಭವಿತವ್ಯ ಹೀಗೆ ಹತ್ತು ಹಲವಾರು ನಿಟ್ಟಿನಿಂದ ರಂಗನಟಿಯರನ್ನು ಇಲ್ಲಿ ಕೂಲಂಕ ಷವಾಗಿ ಅಧ್ಯಯನವನ್ನು ಮಾಡಲಾಗಿದೆ.

ಸರಕಾರ ಸಾಂಸ್ಕೃತಿಕವಾಗಿ ನಟಿಯರಿಗೆ ಇನ್ನು ಚಿಕ್ಕ ವಯಸ್ಸಿನಲ್ಲಿಯೇ ಮಾಶಾಸನವನ್ನು ಹೆಚ್ಚು ಮಾಡಿ ಅವರ ಕುಟುಂಬಕ್ಕೆ ಭದ್ರತೆಯನ್ನು ನೀಡಿದರೆ ರಂಗಭೂಮಿಯು ಇನ್ನೂ ಉಜ್ವಲವಾಗಿ ನಟಿಯರು ಯಾವ ತೊಂದರೆ ಇಲ್ಲದೆ ಹೆಚ್ಚಿನ ರೀತಿಯಲ್ಲಿ ರಂಗಭೂಮಿಯ ಸೇವೆಯನ್ನು ಮಾಡಲು ಮುಂದೆ ಬರುತ್ತಾರೆ. ಇಲ್ಲದಿದ್ದರೆ ರಂಗಭೂಮಿಯು ಈ ಕೊರತೆಯನ್ನು ಯಾವ ರೀತಿ ತುಂಬಿಕೊಳ್ಳುತ್ತದೆಯೋ ಕಾದು ನೋಡ ಬೇಕಾಗಿದೆ.

ಅಧ್ಯಾಯ ೨

ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ನೋಟ

ಅಧ್ಯಾಯ ೨

ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ನೋಟ

ಜೀವಿಯು ಈ ವಿಶ್ವದಲ್ಲಿ ಸೃಷ್ಟಿಯಾಗಿ ಅದು ಸಂಪೂರ್ಣವಾಗಿ ಬೆಳವಣಿಗೆ ಹೊಂದಿ ಒಂದು ಹಂತ ತಲುಪಿದಾಗ ಮಾನವನ ನಾಗರೀಕತೆ ಪ್ರಾರಂಭವಾಯಿತು. ನಾಗರೀಕತೆ ಕ್ರಮೇಣವಾಗಿ ಪ್ರಗತಿಯನ್ನು ಹೊಂದಿ ದಂತೆಲ್ಲಾ ಮನುಷ್ಯನ ಬುದ್ಧಿ ಪ್ರಜ್ವಲವಾಗಿ ಆ ಮುಖಾಂತರ ಹೊಸ ಹೊಸ ಆವಿಷ್ಕಾರಗಳನ್ನು ಮಾಡತೊಡಗಿದೆ. ನಂತರದ ದಿನಗಳಲ್ಲಿ ಆವಿಷ್ಕಾರಗಳು ಹೆಚ್ಚಾದಂತೆ ಮಾನವರಿಗೆ ಅನುಕೂಲತೆಗಳು ಅತಿಯಾದ ಪ್ರಗತಿಗೆ ದಾರಿಯಾಗಿ ಜಾಗತೀಕರಣ ಹಾಗೂ ಉದಾರೀಕರಣ, ವೈಜ್ಞಾನಿಕ ಬೆಳವಣಿಗೆ, ಖಾಸಗೀಕರಣ ಉಂಟಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ಉಲ್ಬಣಗೊಂಡು ಮಾನವ ತನ್ನದೇ ಆದ ಧೀಮಂತ ವಿಶ್ವ ಕಲ್ಪನೆಗೆ ತಕ್ಕಂತಹ ಜೀವನದ ಹಲವು ಮಗ್ಗಲುಗಳಲ್ಲಿ ನವೀನ ಶೋಧನಾ ಹಾದಿಯನ್ನು ತನ್ನಲ್ಲೇ ತಾನು ಕಂಡುಕೊಂಡು ಪ್ರಗತಿಯ ಪಥವನ್ನು ಉತ್ತುಂಗಕ್ಕೇರಿಸಿದ್ದಾರೆ.

ಸಹಜ ಜೀವನದಿಂದ ಭಾಷೆ, ಕುಟುಂಬ, ಸಮಾಜ, ಸಂಸ್ಕೃತಿ, ಧರ್ಮ ಇವುಗಳು ಮಾನವೀಯತೆಯ ನೆಲೆಯಲ್ಲಿ ಎಲ್ಲೆಲ್ಲೂ ವಿಶ್ವವ್ಯಾಪ್ತಿಯಾಗಿ ಮನೆಮಾಡಿದೆ. ಸಂಸ್ಕೃತಿಯ ಬೆಳೆವಣಿಗೆಯ ಬಗ್ಗೆ ಹಲವಾರು ಜಿಜ್ಞಾಸುಗರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ 'way of life'ನ್ನು ಸಂಸ್ಕೃತಿ ಎಂದು ಕರೆಯಬಹುದು. ಸಂಸ್ಕೃತಿಯು ಯಾವಾಗ ಹುಟ್ಟಿತು? ಎಲ್ಲಿ? ಹೇಗೆ? ಯಾವ ರೀತಿಯಲ್ಲಿ? ಎಂದು ಪ್ರಶ್ನಿಸಿ ಕೊಂಡಾಗ, ನಿಖರ ಹಾಗೂ ನಿರ್ಧಿಷ್ಟತೆಯಿಲ್ಲ. ಸಂಸ್ಕೃತಿಯು ತಾನಾ ಗಿಯೇ ಕ್ರಮವಾಗಿ ನಮಗೆ ಗೊತ್ತಿಲ್ಲದ ಹಾಗೆನೇ ಅದು ತನ್ನ ಅಸ್ತಿತ್ವವನ್ನು ಪಡೆದುಕೊಂಡಿತು. ಸಂಸ್ಕೃತಿಗೆ ತನ್ನದೇ ಆದ ಮಹತ್ವ, ವ್ಯಾಪ್ತಿ ಇರುವುದು ಸ್ಪಷ್ಟ. ಜನಪದರ ಮೌಖಿಕ ಸಂಪ್ರದಾಯವು ಯಾವುದೇ ಸಾಹಿತ್ಯಕ್ಕೆ ಮೂಲವಾದ ಆಧಾರವಾಗಿರುತ್ತದೆ. ಅಂತೆಯೇ ಸಂಸ್ಕೃತಿಯ ಮೂಲವನ್ನು ತಿಳಿಯಬೇಕಾದರೆ ಜನಪದರ ಸೊಗಡಿಗೆ ಮೊರೆ ಹೋಗಬೇಕಾದ ಅನಿವಾರ್ಯತೆ ಇದೆ. ಜನಪದರಲ್ಲಿ ಹುದುಗಿರುವ ಸಾಹಿತ್ಯವು ಹೊರ ಹೊಮ್ಮಲು ಇಂಥದೇ ಸಮಯ ಸ್ಥಳವಿರಬೇಕೆಂಬ ನಿಯಮವಿಲ್ಲ. ಅದರೊಂದಿಗೆ ಅವರು ಬಾಳಿದ ರೀತಿ-ನೀತಿಗಳು-ಆಳ-ವಿಸ್ತಾರವು ಅವರ ಪರಂಪರೆ ಮತ್ತು ಆಚರಣೆ, ವಿಧಿವಿಧಾನಗಳಲ್ಲಿ ಅಡಗಿರುತ್ತದೆ. ಇವೆಲ್ಲ ಅಂಶಗಳನ್ನು ಅವಲಕ್ಕಿಸಬೇಕಾದರೆ ಅವರ ಸಾಂಸ್ಕೃತಿಕ ನೆಲೆಗಳ ಅಧ್ಯಯನದ ಪ್ರಕ್ರಿಯೆ ಇಂದು ಅತ್ಯವಶ್ಯವಾಗಿದೆ.

ಭಾರತೀಯ ಇತಿಹಾಸ ಪರಂಪರೆಯಲ್ಲಿ, ಕರ್ನಾಟಕ ಸಂಸ್ಕೃತಿಗೆ ಅಗ್ರಸ್ಥಾನವಿದೆ. ಕರ್ನಾಟಕದ ಚಾರಿತ್ರಿಕ ನೋಟದಲ್ಲಿ ಬಳ್ಳಾರಿ ಜಿಲ್ಲೆಯೂ ವಿಶ್ವವ್ಯಾಪಿಯಾಗಿ ವಿಖ್ಯಾತವಾಗಿದೆ. ಕನ್ನಡ ಸಂಸ್ಕೃತಿಗೆ ಬಳ್ಳಾರಿ ಜಿಲ್ಲೆಯ ಕೊಡುಗೆ ಅಪಾರ. ವಿಜಯನಗರ ಸಾಮ್ರಾಜ್ಯವನ್ನು ವಿಶ್ವವೇ ಬೆರಗು ಗಣ್ಣಿನಿಂದ ನೋಡಿದೆ. ಇಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಜನಪದ ಸಾಹಿತ್ಯವು ಅತ್ಯಂತ ಮಹತ್ವ ಪಡೆದು ಬೆಳೆದಿತ್ತು. ಅಲ್ಲದೆ ಪುರಾಣ, ಪುಣ್ಯಕಥೆಗಳ ನೆಲೆವೀಡಾಗಿತ್ತು. ಹಲವು ವೈವಿಧ್ಯಮಯ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶ ಚರಿತ್ರೆಯಲ್ಲಿ ಗಣನೀಯ ಪಾತ್ರ ನಿರ್ವಹಿಸಿದೆ.

೨.೧. ಬಳ್ಳಾರಿ : ನಾಮ ವಿವೇಚನೆ

'ಬಳ್ಳಾರಿ' ಎಂಬ ಹೆಸರು ತುಂಬಾ ಕುತೂಹಲಕರ ಹಾಗೂ ವಿಶಿಷ್ಟವಾದುದಾಗಿದೆ. ಇದು ಕರ್ನಾಟಕ ರಾಜ್ಯದ ಜಿಲ್ಲಾ ಕೇಂದ್ರವಾಗಿ ಉತ್ತರ ಕರ್ನಾಟಕ ರಾಜ್ಯಗಳಲ್ಲಿ ವಿಲೀನವಾಗಿದೆ. ಈ ಭಾಗವನ್ನು 'ಗಂಡು ಮೆಟ್ಟಿನ ನಾಡು'' ಎಂದು ಕರೆಯಲ್ಪಡುತ್ತದೆ. ಅದಕ್ಕಾಗಿಯೇ ವಿದ್ಯಾರಣ್ಯರು ಇಲ್ಲಿ ವಿಜಯನಗರ ಸಾಮ್ರಾಜ್ಯ ವನ್ನು ಕಟ್ಟಿದರು ಎಂಬ ಪ್ರತೀತಿ ಇದೆ. ಇದಕ್ಕೆ ಮೊಲವೇ ನಾಯಿಯನ್ನು ಎದುರಿಸಿ ತಿರುಗಿನಿಂತು ಓಡಿಸಿಕೊಂಡು ಹೋಗುವುದನ್ನು ಕಂಡೇ ಇದು ಪುಣ್ಯ ಭೂಮಿ, 'ಗಂಡು ಮೆಟ್ಟಿದ ನಾಡು' ಎಂಬುದನ್ನರಿತು ವಿಜಯನಗರ ಸಾಮ್ರಾಜ್ಯವನ್ನು ಇಲ್ಲಿ ಕಟ್ಟಿದರು ಎಂಬ ಐತಿಹ್ಯ ಇದೆ. ಆದ್ದರಿಂದ ಈ ನಾಡಿನ ಜನತೆ ವೀರರು, ಧೀರರು, ಪರಾಕ್ರಮಶಾಲಿಗಳಾಗಿ, ಎದುರಾಳಿಗಳಿಗೆ ಸಿಂಹಸ್ವಪ್ನ ವಾಗಿದ್ದರು. ಇದರೊಂದಿಗೆ ಸದ್ಗುಣಗಳು, ಸರಳ ಸ್ವಭಾವದ ಸಜ್ಜನ ವ್ಯಕ್ತಿಗಳಾಗಿದ್ದರೆಂದೂ ಹೇಳುತ್ತಾರೆ. ಇದಕ್ಕೆ ಪ್ರತೀಕವೆಂಬಂತೆ ಕ್ರಿ.ಶ.೧೪೧೧ರ ಪ್ರೌಢರಾಯನ ಕಾಲದ ಲಕ್ಷ್ಮೀಧರ ಅಮಾತ್ಯನ ಶಾಸನವು ದೊರೆಯುತ್ತದೆ.

ಬಳ್ಳಾರಿ ಪದನಿಷ್ಪತ್ತಿ ಬೆಳವಣಿಗೆಯನ್ನು ಗಮನಿಸುವುದಾದರೆ ಲಭ್ಯವಿದ್ದ ಗೆಝೆಟೀಯರ್ ಉಲ್ಲೇಖದಂತೆ The Name Bellary city godess Durugamma whose temple in Gandhinagar Bellary in poet Jann's Yashodhar charita the word Balary 'ಬಳ್ಳಾರಿ' is used mean a goddess and mean a goddess and town is said hall derived its name from this word because Durugamma had manifested her self in this town the old district Gazzatter (ಗೆಝೆಟೀರ್ ೧೯೯೪).

ಮೇಲೆ ಸೂಚಿಸಿದಂತೆ ಬಳ್ಳಾರಿ ಎಂಬ ಪದವು ಜನ್ನನ 'ಯಶೋಧರ ಚರಿತೆ' ಕೃತಿಯಲ್ಲಿ ಬಳಕೆಯಾಗಿದೆ. ಇದಕ್ಕಿಂತಲೂ ಪೂರ್ವದ ಜನಪದ ಗೀತೆ ಕಾವ್ಯ ಶಾಸನಗಳಲ್ಲೂ 'ಬಳ್ಳಾರಿ' ಎಂಬುದು ಪ್ರಸ್ತಾಪವಾಗಿದೆ. ಇದನ್ನು ಗಮನಿಸುವುದಕ್ಕಿಂತ ಮುಂಚೆ ಕಿಟಲ್ ಕೋಶದಲ್ಲಿ ಬಳರಿ, ಬಳಾರಿ ಪದದ ಅರ್ಥವು ಬಳಹರಿ-ಬಳಾರಿ ಎಂಬುದು The demon Balari or Mahakali ಎಂದಿದೆ. ಇಲ್ಲಿ ವಿವರಿಸಿದ ಮಹಾಕಾಳಿ ಕುರಿತು

ಹೆನ್ರಿವೈಟ್ ಹೆಡ್ ರವರು 'The south Indian village god's Durga is one of the many names of kali, the wife of Siva. ಎಂದು ತಿಳಿಸಿದ್ದಾರೆ. ಇದರಿಂದಲೇ ಶಿವನ ಪತ್ನಿಯಾದ ಪಾರ್ವತಿಯ ಹಲವು ಅವತಾರಗಳಲ್ಲಿ ಈ ಬಳರಿ ಒಂದಾಗಿದೆ. ಬಳರಿ, ಬಳಾರಿಯು ಸಂಸ್ಕೃತ ಪದ ಎನ್ನುವುದಾದರೆ ಪದವನ್ನು ವಿಭಜಿಸಿದಾಗ ಬಲ+ಅರಿ ಅಥವಾ Bala+Ari=enemy of demon (ಬಳ್ಳಾರಿ ಗೆಝೆಟೀಯರ್ ಪು.೩: ೧೯೭೩) ಎಂದು ಅರ್ಥೈಸುವುದಾದರೆ ಹೆಣ್ಣು ದೇವತೆ ಎಂಬ ಅರ್ಥವನ್ನು ನೀಡಲಾರದು. ಇಲ್ಲಿ ಬಲ ಎಂಬ ರಾಕ್ಷಸನನ್ನು ಇಂದ್ರನು ಕೊಂದ, ಇಲ್ಲವೆ ರಾಕ್ಷಸನ ವೈರಿ ಎಂದು ಸೂಚಿಸುತ್ತದೆ. ಆದರೆ 'ಬಳರಿ' ಪದವು ತುಂಬಾ ಪ್ರಾಚೀನ ಎಂಬುದಂತೂ ಸ್ಪಷ್ಟ. ಇದು ಸಂಸ್ಕೃತಕ್ಕಿಂತಲೂ ಕನ್ನಡದ ಸಹಜ ನಾಮವೇ ಆಗಿರಬೇಕು.

'ಬಳರಿ' ಪದವು ಭಟಾರಿಭಡಾರಿ>ಭಳಾರಿ>ಬಳಾರಿ>ಬಳರಿ>ಬಳ್ಳಾರಿ ಎಂದು ಬದಲಾವಣೆಯಾಗಿ ರಬೇಕು. ಮೇಲೆ ಸೂಚಿಸಿದಂತೆ ಕೇಶಿರಾಜನ ಶಬ್ದ ಮಣಿದರ್ಪಣ ಕೃತಿಯಲ್ಲಿಯ ಸೂತ್ರದಲ್ಲಿ 'ಟ'ಕಾರವು 'ಡ'ಕಾರ ಆದೇಶವಾಗಿ ಬಳಸಲ್ಪಟ್ಟಿರಬೇಕು. ನಂತರ ಡ್>ಳ ಅಂದರೆ ಡಕಾರಂ ಬೆಟ್ಟಿತ್ತಾಗಿ ಉಚ್ಚರಿಸಿದೊಡೆಳ ಕಾರಂ ಬರೆಗುಂ'' ಎಂದಂತೆ ಡ>ಳ ಆಗಿರಬೇಕು. ಗ್ರಾಮೀಣ ಜನರಲ್ಲಿ ಭಡಾರಿ ಶಬ್ದವು ಸರ್ವೇಸಾಮಾನ್ಯ ವಾಗಿದೆ. ಭಡಾರಿಯಂತಿರುವವಳು, ಭಡಾಯಿ ಕೊಚ್ಚಿಕೊಳ್ಳುವವಳು, ಸ್ವಸಾಮರ್ಥ್ಯದಂತೆ ನಿಲುವು ಕೈಕೊಳ್ಳು ವವಳು ಎಂದಾಗುತ್ತದೆ. ಇದಲ್ಲದೆ ಊರಿನ ಹೆಸರು ದೇವತೆಗಳ ಹೆಸರಿನಿಂದ ಆರಂಭವಾದಂತೆ ಉದಾಹರಣೆಗೆ ಬಸವನದುರ್ಗ, ಅನಂತಶಯನಗುಡಿ ಆದಂತೆ ಇಲ್ಲಿ ಬಳರಿ ದೇವತೆಗೆ ಸಂಬಂಧಿಸಿದಂತೆ "ಬಳ್ಳಾರಿ ದುರ್ಗಮ್ಮ" ಎಂದು ಈಚೆಗೆ ಬಳಸಲಾಗುತ್ತದೆ. ಬಹುಶಃ ಬಳರಿಯು ಉಗ್ರ ಸ್ವರೂಪದವಳು ಆದಂತೆ ದುರ್ಗೆಯು ಉಗ್ರಸ್ವರೂಪದವಳು ಎಂಬ ಸಾಮ್ಯತೆಯಂತೆಯೇ ಹೆಸರು ಬಂದಿರಬೇಕು.

'ಬಳ್ಳಾರಿ' ಪದ ಉಲ್ಲೇಖವು ತುಂಬಾ ಸ್ವಾರಸ್ಯಪೂರ್ಣವಾದುದು. ಇದರ ಉತ್ಪತ್ತಿ ಕಾವ್ಯಗಳಲ್ಲಿ ಶಾಸನಗಳಲ್ಲಿ ಜನಪದ ಗೀತೆ ಹಾಗೂ ದಂತಕತೆಗಳಲ್ಲಿ ಉಲ್ಲೇಖಗೊಂಡಿದೆ. ಸ್ಕಂದ ಪುರಾಣದಲ್ಲಿ ಬಳ್ಳಾರಿ ಪ್ರದೇಶವನ್ನು 'ಲೋಹಾಚಲ' ಎಂದು ಕರೆಯಲಾಗಿದೆ. ಇತರೆ ಪ್ರಾಚೀನ ಕಾವ್ಯಗಳಲ್ಲಿ 'ಜಂಬೂದ್ವೀಪ' ಎಂದು ಕರೆಯುತ್ತಿದ್ದರು. ಬಳ್ಳಾರಿ ಪದವು ಉಗ್ರ ಸ್ತ್ರೀ ಸೂಚಕ, ವ್ಯಕ್ತಿ ಸೂಚಕ, ರಾಕ್ಷಸ ಸೂಚಕ, ಶಿವಶರಣರ ಸೂಚಕವಾಗಿ ಬಳಕೆಯಲ್ಲಿ ಬಂದಿದೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಳರಿ-ಬಳಾರಿ ಪದದ ಬಳಕೆಯಾಗಿದೆ. ಅವುಗಳಲ್ಲಿ ಕ್ರಿ.ಶ.೧೦೪೦ರ ಚಂದ್ರರಾಜನ ಮದನತಿಲಕವೆಂಬ ಕಾಮಶಾಸ್ತ್ರ ಗ್ರಂಥದಲ್ಲಿ ಈ ರೀತಿ ನಿರೂಪಿತ ವಾಗಿದೆ.

ಬಳರಿಯ ನೋಂಪಿಗೆ ಬೀದಿಗೆ
ಮುಳಿವರ ಮನೆಗಳ್ಗೆ ಮಧ್ಯಪೀಗಳಲ್ಲಿಗೆ
ಕೋಮಳಯಂ ಪೋಗಲಿತ್ತಡೆ
ಬಳರಿಗೆ ಪುಯ್ಯಲಿಡವೋದ ಕುರಿಯಂತಕ್ಕುಂ (ಮದನತಿಲಕ)

ಗೌರವಾನ್ವಿತ ಸ್ತ್ರೀಯರು ಉಗ್ರರೂಪದ ಬಳರಿಯ ಕಂಡು ಭೀತಿಗೊಳಗಾಗಬಹುದೆಂದು ಬಳರಿ ನೋಂಪಿಗೆ ಹೋಗಕೂಡದೆಂದು ಮೇಲಿನ ಪದ್ಯದಿಂದ ಬಳಾರಿಯ ಬಗ್ಗೆ ಆಗಲೇ ಜನಸಾಮಾನ್ಯರು ದೇವತೆಯಾಗಿ ಪರಿಚಿತಳಿದ್ದಳು. ಹಾಗೂ ಅಲ್ಲಿ ನಡೆಯುತ್ತಿದ್ದ ಕುರಿಬಲಿಯನ್ನು ಕವಿಯು ಗಮನಿಸಿರಬೇಕೆಂದು ತಿಳಿಯುತ್ತದೆ. ಆದ್ದರಿಂದಲೇ ಕುಲವಧುವನ್ನು ಬಳರಿ ನೋಂಪಿಗೆ ಹೋಗ ಕೂಡದೆಂದು ನಿಷೇಧಿಸಿರುವುದು ವ್ಯಕ್ತವಾಗುತ್ತದೆ. ಕ್ರಿ.ಶ.೧೧೦೦ರಲ್ಲಿ ಬ್ರಹ್ಮ ಶಿವನ ಸಮಯ ಪರೀಕ್ಷೆ ಎಂಬ ಕೃತಿಯಲ್ಲಿ 'ಬಳರಿ' ಎಂಬುದು ಅನೇಕ ಬಾರಿ ಬಳಕೆಯಾಗಿದೆ. ಈ ಪದ್ಯದಲ್ಲಿ ಬನದ ಬಳಾರಿ ಎಂತಲೂ ಬಳಸಲಾಗಿದೆ.

ಉಕ್ಕಲ ದೇವಿಗ ಮಮಾ

ಲಕ್ಕನಿಗಂ ಬನದ ಬಳರಿಗಂ ಮೈಲಾರಂ

ಗಳ್ಕದೆ ಜಾತ್ರೆಯ ನಾಳ್ವಂ

ಮಕ್ಕಳಗಂ ಜೈನನಲ್ಲನೆಂತು ಕಾಳಂ (ಉದೃತ: ನಾಗಯ್ಯ ಜೆ.ಎಂ.ಪು.೩, ೧೯೯೧)

ಈ ಪದ್ಯದಲ್ಲಿ ಬಳಸಿದ ಎಕ್ಕಲದೇವಿಗೆ ಮಾಲಕ್ಕನಿಗೆ, ಬನದ ಬಳರಿಗೆ, ಮೈಲಾರಿಗೆ ಅಳುಕದೆ ಜಾತ್ರೆಯನ್ನು ಮಾಡುವವರಿಗೆ ಬ್ರಹ್ಮಶಿವನು ಖಂಡಿಸಿದ್ದಾನೆ. ಬ್ರಹ್ಮಶಿವನ ಇದೇ ಕೃತಿಯಲ್ಲಿ ಬಂಧುವರ್ಮನನ್ನು ಸ್ತುತಿಸಿದ್ದರಿಂದ ಆತನ ಜೀವ ಸಂಭೋದನೆಯಲ್ಲಿ 'ಗಿರಿವಾಸಿ'ನಿ ಎಂಬ ಭಕ್ತಿ ಕಂಡುಬರುತ್ತದೆ. ಇದರಿಂದ ಪ್ರೇರಣೆಗೊಂಡ ಬ್ರಹ್ಮಶಿವನು ಗಿರಿವಾಸಿನಿಯು ಗಿರಿವಾಸದಲ್ಲಿರುವಳು ಎಂಬಂತೆ ಅರ್ಥೈಸಿ ಬನದ ಬಳಾರಿಯಾಗಿ ಬಳಸಿರಬೇಕೆನಿಸುತ್ತದೆ.

ನಂತರದಲ್ಲಿ ಕ್ರಿ.ಶ.೧೨೩೦ರ ಜನ್ನನ ಯಶೋಧರ ಚರಿತೆಯಲ್ಲಿ ಪ್ರಸ್ತಾಪಿತವಾದಂತೆ ರಾಜಪುರ ಪಟ್ಟಣದ ದಕ್ಷಿಣ ದಿಕ್ಕಿನಲ್ಲಿ ಜೀವಹತಿಯಿಂದ ಸುಖಪಡುವ ಪಾಪಕುಳಾ ಪಂಡಿತೆ ಚಂಡಮಾರಿ ದೇವತೆ ಇದ್ದಳು. ಅಶ್ವಯುಜ ಚೈತ್ರಮಾಸದಲ್ಲಿ ಜಾತ್ರೆ ಮಾಡದಿದ್ದರೆ ಊರ ಜನರನ್ನೇ ನಾಶಮಾಡುತ್ತಿದ್ದಳು. (ಹಿರೇಮಠ ಎಸ್.ಎಸ್.ಸಾಧನೆ-ತ್ರೈಮಾಸಿಕ, ೧೯೭೮) ಈ ಕಾವ್ಯದಲ್ಲಿಯೇ ಮುಂದುವರೆದು ಹೇಳುವ ಜನ್ನನು ಚಂಡಕರ್ಮನೆಂಬ ತಳಾರನ್ನು ರಾಜನ ಅಪ್ಪಣೆಯಂತೆ ಉತ್ತಮ ಲಕ್ಷಣದ ಮಾನವ ಜೋಡಿಯನ್ನು ಬಲಿನೀಡಲು 'ಬಳರಿಯ ಬನದಿಂ ಪೊಟಮಟ್ಟನು' ಎಂದಿದೆ. ಇದಲ್ಲದೆ ಬಲಿ ನೀಡದೇ ಇದ್ದದ್ದಕ್ಕೆ ಹಿಟ್ಟಿನ ಕೋಳಿಯನ್ನು ಬಲಿ ನೀಡಿದ ಪ್ರಸಂಗವು ಕಂಡು ಬರುತ್ತದೆ.

ಕ್ರಿ.ಶ.೧೩೬೯ರ ಭೀಮಕವಿಯು ಬಸವಪುರಾಣದಲ್ಲಿ 'ದಿಟ್ಟಬಳಹರಿ ಮಾರಿಗೆ' ಎಂದಿದ್ದಾರೆ, ಕ್ರಿ.ಶ.೧೫೫೦ರ ಚತುರಾಸ್ಯ ನಿಘಂಟುವಿನಲ್ಲಿ ಬಳಾರಿ-ಮಹಾಕಾಳಿ ಎಂದು ಬಳಸಲಾಗಿದೆ. ಕ್ರಿ.ಶ.೧೬೫೦ರ

ರಾಜಶೇಖರ ವಿಳಾಸ ಕೃತಿಯಲ್ಲಿ ಒಬ್ಬ ಸೂಳೆಯು ಮೋಸ ಮಾಡಿದ ವ್ಯಕ್ತಿಯೊಬ್ಬನಿಗೆ ಬಲಿ ಕಟ್ಟಿ ಮನ್ಮಥ ಬಳಾರಿಗೆ ದೊಡ್ಡ ಕುರಿ ಮಾಡಿ ಕಡಿಯುತ್ತೇನೆ. ಇಲ್ಲಿ ಬಳರಿಗೆ ಕುರಿ ಬಲಿಕೊಟ್ಟಂತೆ ಕಡಿಯ ಬೇಕಾಗುತ್ತದೆ ಎಂಬುದರ ಜೊತೆಗೆ 'ಮನ್ಮಥ ಬಳರಿ' ಎಂಬ ವಿಶಿಷ್ಟ ಪದದ ಬಳಕೆ ಕಂಡುಬರುತ್ತದೆ.

ಶಾಸನಗಳು

ಶಾಸನಗಳ ಆಧಾರದಿಂದಲೂ ಬಳಾರಿಯ ಬಳಕೆಯನ್ನು ಗಮನಿಸಬಹುದು, ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ದೊರೆತ ಕ್ರಿ.ಶ.೯೭೧ರ ಶಾಸನದಲ್ಲಿ ರಾಷ್ಟ್ರಕೂಟರ ಆಳ್ವಿಕೆ ಇತ್ತು ಎಂದು ತಿಳಿಯುತ್ತದೆ. ಆದರೆ 'ಬಳ್ಳಾರಿ'ಯ ಪ್ರಸ್ತಾಪವಿಲ್ಲ. ಆದರೆ ಸಿರಿವಾರದ ಕ್ರಿ.ಶ.೧೦೪೪ರ ಈಶ್ವರ ದೇವಾಲಯದ ಮುಂಭಾಗದ ಶಾಸನದಲ್ಲಿ ಈ ರೀತಿಯಾಗಿ ಉಲ್ಲೇಖವಿದೆ, "ಚಾಳುಕ್ಯ ದೊರೆಯ ಸಾಮಂತ ಪಲ್ಲವರಸನು ಕಪ್ಪಗಲ್ಲು ಗ್ರಾಮದಲ್ಲಿ ಮಹಾದೇವರಿಗೆ ಎಂಟು ಮತ್ತರು, ಮಠಕ್ಕೆ ಎಂಟು ಮತ್ತರು ಭೂಮಿಯನ್ನು ಜೇಷ್ಟರಾಶಿ ಭಳಾರಿಗೆ ದಾರಾಪೂರ್ವಕವಾಗಿ ಕೊಟ್ಟರು ಎಂದಿದೆ. ಇದು ಮೊಟ್ಟಮೊದಲು ಭಳಾರಿ ಪದ ಬಳಕೆಯಾದ ಶಾಸನವಾಗಿದೆ. ಕ್ರಿ.ಶ.೧೧೦೦-೪೧ರ ವರೆಗೆ ಆಳಿದ ವಿಷ್ಣುವರ್ಧನ ವಶದಲ್ಲಿದ್ದ ಹೊಯ್ಸಳರ ಮಾರ್ಗಗಳಲ್ಲಿ ಬಳ್ಳಾರಿ ದುರ್ಗಮ್ಮ ಒಂದಾಗಿತ್ತು ಎಂದು ತಿಳಿಯುತ್ತದೆ. ಇದರೊಂದಿಗೆ ಕ್ರಿ.ಶ.೧೧೩೧ರ ಚಾಳುಕ್ಯದೊರೆ ತ್ರಿಭುವನ ಮಲ್ಲದೇವನ ಕಾಲದ ಶಾಸನದಲ್ಲಿ ಬಳಾರಿಯ ಬೀವರಸನಿಗೆ ಭೂದಾನ ನೀಡಲಾಗಿದೆ ಎಂದು ಇದೆ. ನಂತರ ಕ್ರಿ.ಶ.೧೧೪೭ರ ಕೋಳೂರ ಸೂರ್ಯನಾರಾಯಣನ ಗುಡಿಯಲ್ಲಿರುವ ಶಾಸನದ ಉಲ್ಲೇಖದಂತೆ ಬಳ್ಳಾರಿ ೩೦ರ ಪೊಲೆವಾರಿಗೆ ತೆರಿಗೆ ಬಿಟ್ಟಿದ್ದನ್ನು ತಿಳಿಸುತ್ತದೆ. ನಂತರ 'ಬಳ್ಳಾರಿಯ ದಾರಿ' (ಪಂಚಮುಖ, ೧೯೫೭) ಎಂಬ ವಿವರಗಳು ಕಾಣ ಸಿಗುತ್ತದೆ. ಕಾಕುಬಾಳು ಗ್ರಾಮ ರಸ್ತೆಯ ಕಂಪಲೆಪ್ಪಿನ ಗುಡ್ಡದಲ್ಲಿ ಅಪ್ರಕಟಿತ ಶಾಸನವೊಂದರಲ್ಲಿ 'ಬಳಾರಿಸೀಮೆ' ಎಂದಿದೆ. ಇದು ಸುಮಾರು ೧೨-೧೩ನೇ ಶತಮಾನದ್ದಿರಬೇಕೆಂದು ತಿಳಿದು ಬರುತ್ತದೆ. ಈ ಎಲ್ಲಾ ಶಾಸನಗಳಿಂದ ಬಳಾರಿ-ಬಳರಿ, ಬಳ್ಳಾರಿ, ಬಳಾರಿ ಎಂದು ಇದೆ. ಆದರೆ ಬನದ ಬಳ್ಳಾರಿ ಎಂಬ ಉಲ್ಲೇಖವು ಎಲ್ಲಿಯೂ ಕಂಡು ಬರುವುದಿಲ್ಲ.

ಐತಿಹ್ಯ

ತುಂಗಾಭದ್ರಾತೀರದ ದಕ್ಷಿಣ ದಿಕ್ಕಿನ ಕುಂತಳವೆಂಬ ನಗರದಲ್ಲಿ ಚಂದ್ರಹಾಸನೆಂಬ ರಾಜನು ಆಳುತ್ತಿದ್ದು, ಆಗ ಈ ಪ್ರದೇಶವೆಲ್ಲವೂ ಅರಣ್ಯವಾಗಿತ್ತು. ಆ ತರುವಾಯ ಈ ಸ್ಥಳದ ಗುಡ್ಡದ ಮೇಲೆ ಬಳಸುರನೆಂಬ ಒಬ್ಬ ರಾಕ್ಷಸನು ಆಶ್ರಯ ಮಾಡಿಕೊಂಡು ಜೀವ ಕೋಟಿಗಳಿಗೆ ಉಪಟಳ ನೀಡುತ್ತಿದ್ದನು. ಸ್ವರ್ಗದ ದೇವಕನ್ನೆಯರಿಗೂ ಉಪದ್ರವ ನೀಡತೊಡಗಿದನು. ಇದರಿಂದ ಬೇಸತ್ತ ದೇವಕನ್ನಿಕೆಯರು ದೇವೇಂದ್ರನಿಗೆ ಮೊರೆಹೋದರು. ಆಗ ಇಂದ್ರನು ಬಳಾಸುರನನ್ನು ವಧೆ ಮಾಡುವ ನಿಮಿತ್ತದಿಂದ ಭೂಲೋಕಕ್ಕೆ ಬಂದು ಬಳಾಸುರನ ಸಂಗಡ ಯುದ್ಧ ಮಾಡಿ, ವಜ್ರಾಯುಧದಿಂದ ಆತನನ್ನು ಸಂಹರಿಸಿದನು. ಅಂದಿನಿಂದ ಈ

ಗುಡ್ಡಕ್ಕೆ 'ಬಳ್ಳಾರಿ' ಎಂಬ ಹೆಸರು ಬಂದಿತು (ಕಲಬುರ್ಗಿ ಎಂ.ಎಂ. ಪು. ೫೨೪; ೧೯೫೪) ಎಂದು ತಿಳಿಯುತ್ತದೆ.

ದಂತ ಕಥೆ

ಶಕದೊರೆಗೂ ಗುಪ್ತರಿಗೂ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಗುಪ್ತರಿಗೆ ಜಯವಾಯಿತು. ಈ ಘಟನೆಯು 'ಅರಿಪುರ ಬೀಡಿನಲ್ಲಿ' ಜರುಗಿತ್ತು ಎಂದು ವಿಶಾಖದತ್ತನ ದೇವಿ ಚಂದ್ರಗುಪ್ತ ನಾಟಕದಿಂದ ತಿಳಿದು ಬರುತ್ತದೆ. ಈ ಪ್ರಸಂಗವು ಬಾಣನ ಹಾಗೂ ಭೋಜನ ಕಾವ್ಯಗಳಲ್ಲಿ ಬಳಕೆಯಾಗಿದೆ. ಇದರಿಂದ ಬಾಣನ ಅರಿಪುರವೇ ಈಗಿರುವ ಬಳ್ಳಾರಿಯ ಜೈಲು ಇರುವ ಭಾಗವಾದ 'ಅಲಿಪುರ'ವಾಗಿದೆ. ಈ ಘಟನೆಯು ಕ್ರಿ.ಶ.೩೮೮ರಲ್ಲಿ ಜರುಗಿರಬೇಕೆಂದು ಈ ದಂತಕಥೆಯಿಂದ ತಿಳಿಯುತ್ತದೆ. ಇಲ್ಲಿ ಬಳ್ಳಾ+ಅರಿಪುರ=ಬಳ್ಳಾರಿಪುರ-ಬಳ್ಳಾರಿಪುರವು ಬಳಕೆಯಲ್ಲಿ ಪುರ ಮಾಯವಾಗಿ ಬಳ್ಳಾರಿಯಷ್ಟೇ ಉಳಿದುಕೊಂಡಂತೆ ಭಾಸವಾಗುತ್ತದೆ.

ಇದೇ ರೀತಿಯಲ್ಲಿ ಇನ್ನೊಂದು ಕಥೆಯ ಪ್ರಕಾರ ಬಲ್ಲಾಳನೆಂಬ ಪ್ರಸಿದ್ಧ ಶಿವಶರಣನಿದ್ದನು. ಅವನು ಸರ್ವ ಧರ್ಮ ಸಮನ್ವಯಿ ವ್ಯಕ್ತಿಯಾಗಿದ್ದು, ಒಮ್ಮೆ ಬೇಟೆಯಾಡುತ್ತಾ ದುಷ್ಟಮೃಗಗಳನ್ನು ಕೊಂದು ಬಾಯಾರಿ ನೀರಿಗಾಗಿ ಅಲೆದಾಡುತ್ತಿರುವಾಗ ಬೆಟ್ಟದ ದೇವ ನಿರ್ಮಿತವಾದ ನಿರ್ಮಲೋದಕ ಸರಸ್ಸನ್ನು ಕಂಡು ನೀರಿನ ತೃಷೆಯನ್ನು ನಿವಾರಿಸಿಕೊಂಡನು. ಸುಂದರವಾದ ತಾಣ ಕಂಡು ಬಲಗುಡ್ಡದವರೆಗೂ ಪಟ್ಟಣ ನಿರ್ಮಿಸಿ ಯೋಗ್ಯ ಸ್ಥಳವೆಂದುಭಾವಿಸಿ ವಿಷ್ಣುದೇವಾಲಯ, ಶಿವದೇವಾಲಯ ಹಾಗೂ ಬಸದಿಯನ್ನು ಕಟ್ಟಿಸಿದನು (ಪಂಚಮುಖಿ ಆರ್.ಎಸ್.೧೯೬೭) ಎಂದು ತಿಳಿಯುತ್ತದೆ.

ಇದೇ ಪ್ರಕಾರ ಇನ್ನೊಂದು ಕಥೆ ಇದೆ. ಅದೆಂದರೆ ಕೋಳೂರು ಅಗ್ರಹಾರದಲ್ಲಿ ಬಳ್ಳೇಶಮಲ್ಲಯ್ಯನೆಂಬ ಶಿವಶರಣನಿದ್ದನು. ಅವನು ಹುಟ್ಟುಕುರುಡನಾಗಿದ್ದನು. ಭಕ್ತಿಯಿಂದ ಇಷ್ಟ ಲಿಂಗವಾದ ಮಲ್ಲೇಶನನ್ನು ಧ್ಯಾನಿಸುತ್ತಿದ್ದನು. ಈಶನನ್ನು ಕಣ್ಣಿನಿಂದ ನೋಡಬೇಕೆಂಬ ಆಸೆಯಾಯಿತು. ಶಿವನು ಈತನ ಭಕ್ತಿಗೆ ಮೆಚ್ಚಿ ಬಳ್ಳದಲ್ಲಿ ತನ್ನ ನಿಜರೂಪ ತೋರಿಸಿದನಂತೆ. ಅಂದಿನಿಂದ ಮಲ್ಲೇಶ್ವರ ಎಂಬ ಅಭಿದಾನದಿಂದ ನೆಲೆಯೂರಿದನು. ಆದ್ದರಿಂದ ಈಗಲೂ ಬಳ್ಳಾರಿಯ ಕೋಟೆಯಿರುವ ಸ್ಥಳದಲ್ಲಿ ಮಲ್ಲೇಶ ದೇವಾಲಯವಿದೆ. ಇದು ತುಂಬಾ ಪುರಾತನವಾದುದಾಗಿದೆ. ಇದಕ್ಕೆ ಸಾಮ್ಯತೆಯಿರುವ ಬಳ್ಳೇಶನೆಂಬ ಶರಣನಿದ್ದನು. ಆತನು ಶಿವ ಪೂಜೆ ಮಾಡಿದ ನಂತರವೇ ಊಟ ಮಾಡುತ್ತಿದ್ದನು. ಒಮ್ಮೆ ಪೂಜೆ ಮಾಡಲು ಹೊರಟಾಗ ಕಿಡಿಗೇಡಿಗಳು ಶಿವಲಿಂಗವನ್ನು ಒಯ್ದು ಆ ಸ್ಥಳದಲ್ಲಿ ಬಳ್ಳವನ್ನು ಇರಿಸುವರು. ಆ ಬಳ್ಳವನ್ನೇ ಶಿವಲಿಂಗವೆಂದು ಭಾವಿಸಿ ಪೂಜೆ ಮಾಡಿದ ಭಕ್ತಿಗೆ ಶಿವನು ಪ್ರತ್ಯಕ್ಷನಾದನಂತೆ. ಅಂದಿನಿಂದಲೇ ಈ ಬಳ್ಳೇಶನಿಂದಲೇ 'ಬಳ್ಳಾರಿ' ಎಂಬ ಪದ ಬಳಕೆಯಾಗಿ ರೂಢಿಗೆ ಬಂದಿರಬೇಕೆಂದು ತಿಳಿಯುತ್ತದೆ.

ಬಳ್ಳಾರಿಯ ದುರ್ಗಮ್ಮ ದೇವಾಲಯದ ಅರ್ಚಕರು ಗಾಣಿಗ ಮನೆತನದವರೇ ಆಗಿದ್ದಾರೆ. ಅವರ ಪ್ರಕಾರ ತಮ್ಮ ಪೂರ್ವಜರಲ್ಲಿ ಒಬ್ಬ ವ್ಯಕ್ತಿಗೆ ಕನಸಿನಲ್ಲಿ 'ಬಳರಿದೇವತೆ' ಬಂದು ತಾನು ಊರ ಹೊರಗಿನ ಬನದಲ್ಲಿ ನೆಲೆ ನಿಂತಿರುವೆ ಎಂದು ತಿಳಿಸಿದಳಂತೆ. ಒಮ್ಮೆ ಆ ಮೂಲ ಪುರುಷನಿಗೆ ದರ್ಶನ ನೀಡಿ ಆ ಗುಡ್ಡ ದಿಂದ ಜಿಗಿದು ಈಗಿರುವ ಸ್ಥಳದಲ್ಲಿ ಮಾಯವಾದಳಂತೆ. ಇದರಂತೆ ಒಬ್ಬ ಮುದುಕಿಯು ಅಸಹ್ಯವಾಗಿದ್ದು ತಲೆಕೂದಲು ಕೆದರಿಕೊಂಡು ಮರದ ಕೆಳಗೆ ಕುಳಿತಿರುತ್ತಾಳೆ. ಇದನ್ನು ಗಮನಿಸಿದ ಜನತೆ ತುಚ್ಚವಾಗಿ ಬಯ್ಯುತ್ತಾರೆ. ಅರ್ಚಕರಿಗೆ ಸಂಬಂಧಿಸಿದ ವ್ಯಕ್ತಿಯೊಬ್ಬನನ್ನು ಕರೆದು ಮುದುಕಿ ತಲೆಯಲ್ಲಿದ್ದ ಹೇನನ್ನು ತೆಗೆಯಬೇಕೆಂದು ಸೂಚಿಸಿದಳಂತೆ. ಆಗ ಆ ವ್ಯಕ್ತಿ ಬಂದು ತಲೆಗೆ ಕೈ ಹಾಕಿ ಕೂದಲನ್ನು ಬಗೆದು ನೋಡುವಾಗ ತಲೆ ತುಂಬಾ ರತ್ನಗಳು ಕಂಡವು. ಆಗ ದಿಗಲುಗೊಂಡ ಅರ್ಚಕ ವ್ಯಕ್ತಿಗೆ ತನ್ನ ನಿಜರೂಪ ತೋರಿಸಿ ತನಗೆ ಗುಡಿಕಟ್ಟಿ ಪ್ರತಿದಿನ ಪೂಜೆ ಮಾಡಬೇಕೆಂದು ಹೇಳಿ ಮಾಯವಾದಳಂತೆ (ರಮೇಶ ಸ.ಚಿ., ಪುಟ, ೩೮೧, ೧೯೩-೯೪). ಅಂತೆಯೇ ಆ ಗಾಣಿಗ ಮನೆತನದವರೇ ಈಗಲೂ ಪೂಜೆ ಸೇವೆಯಲ್ಲಿ ತೊಡಗಿದ್ದಾರೆ.

ಜನಪದರ ಗೀತೆಗಳಲ್ಲಿ ಬಳರಿ ದೇವತೆ ಬಳ್ಳಾರಿಯ ಪ್ರಸ್ತಾಪ ಕಂಡುಬರುತ್ತದೆ. ಬಳ್ಳಾರಿ ದೊಡ್ಡನರಸಮ್ಮ ಹೇಳಿದ ಜನಪದ ಗೀತೆಯಲ್ಲಿ 'ಬನದ ದೇವತೆ' ಎಂಬ ವಿಚಾರ ಬರುತ್ತದೆ. ಆ ಒಂದು ಪ್ರಸಂಗ ಹೀಗಿದೆ. ಒಬ್ಬ ಮಾದಿಗರ ಹುಡುಗನು ಬನಕ್ಕೆ ತಂಗಡಿ ಕಟ್ಟಿಗೆ ತರಲು ತೆರಳುತ್ತಾನೆ. ಅಲ್ಲಿದ್ದ ಬಳರಿಯು ಇವನ ಸೌಂದರ್ಯಕ್ಕೆ ಮಾರುಹೋಗಿ ತನ್ನ ಸಂಗಡ ಕರೆದೊಯ್ಯಲು ತಿಳಿಸುತ್ತಾಳೆ. ಇತ್ತ ಮನೆಗೆ ಬಂದ ಸೊಸೆ ಮಗನಿಗೆ ಅತ್ತೆ ನೀ ನೀಡಿ ಒಳಗಡೆ ಕರೆಯುತ್ತಾಳೆ. "ಬಳರಿ"ಯು ಅತ್ತಿಗೆ ತಲೆಯಲ್ಲಿದ್ದ ಹೇನು ತೆಗೆಯಲು ಹೇಳಿದಾಗ ಅತ್ತೆಯು ತಲೆಗೆ ಕೈ ಹಾಕಿ ಬಗಿಯುವಾಗ ಕೂದಲಲ್ಲಿ ಕಣ್ಣು ಕಂಕಣ ನೋಡಿ ಬೆಚ್ಚಿಬೀಳುವಳು. ಅನಂತರ ರಾತ್ರಿ ವೇಳೆಯಲ್ಲಿ ಮಾದಿಗನ ಜೊತೆಯಲ್ಲಿ ಮಲಗಿ ಅವನ ಹೊಟ್ಟೆ ಬಗಿದು ರಕ್ತ ಕುಡಿದು ಅಲ್ಲಿಂದ ಹೊರಬರುತ್ತಾಳೆ. ಪೂರ್ವಕ್ಕೆ ಮುಖಮಾಡಿ ಹೊರಟಿರುವ ಬಳರಿಗೆ ಬಳೆಮಾರುವವನು ಎದುರಾಗುತ್ತಾನೆ. ಆತನಿಂದ ಬಳೆಹಾಕಿಸಿಕೊಂಡು ಪೂರ್ವ ದಿಕ್ಕಿಗೆ ಮುಖ ಮಾಡಿ ಹೋರಟು ಹೋದಳು. ಇದರಿಂದಲೇ ಬಳ್ಳಾರಿ ದುರ್ಗಮ್ಮನ ಗುಡಿಯಲ್ಲಿ ಬಳರಿ ದೇವತೆಯ ಬೆನ್ನಿಗೆ ಪೂಜೆ ಮಾಡಲಾಗುತ್ತದೆ. ಎಂದು ತಿಳಿಸಿದ್ದಾರೆ. ಇಲ್ಲಿ ಮಾದಿಗನನ್ನು ಕೊಂದ ಸಂಕೇತದಿಂದಲೇ ದುರ್ಗಿಯ ಶಿಲ್ಪದಲ್ಲಿ ಆಕೆಯ ಪಾದದ ಕೆಳಗೆ ಒಬ್ಬ ವ್ಯಕ್ತಿ ಬಿದ್ದಿರುವುದನ್ನು ಡಾ.ಎಂ.ಎಂ.ಕಲಬುರ್ಗಿ ಸೂಚಿಸಿದ್ದಾರೆ. ಇದಲ್ಲದೆ ಬಳರಿಯ ಶಿಲ್ಪದ ಶಾಲಿನ ಬಳಿ ಗೂಬೆಯ ಚಿತ್ರದ ಬಗ್ಗೆ ಶೋಧನೆ ಆಗಬೇಕೆಂದಿದ್ದಾರೆ. ಗೂಬೆಯು ಸಾವಿನ ಸುದ್ದಿಯನ್ನು ತರುವ ಪಕ್ಷಿ ಎಂಬ ನಂಬಿಕೆ ಜನರಲ್ಲಿದೆ. ಅದು ಬಂದು ನಾಡೊಳಗೆ ಅರಚಿಕೊಂಡ ಕೆಲವು ದಿಗಳಲ್ಲೇ ಸಾಯುವರೆಂಬ ಅಚಲವಾದ ನಂಬಿಕೆ ಇದೆ. ಅಲ್ಲದೆ ಇಲ್ಲಿ ದುರ್ಗೆ(ಬಳರಿಯು) ಸಾವನ್ನು ತರುವ ದೇವತೆಯಾಗಿದ್ದರಿಂದಲೂ ಅವಳ ಪಕ್ಕದಲ್ಲಿ ಗೂಬೆ ಇದೆ ಎನಿಸುತ್ತದೆ.ಈ ಕಥೆಗೆ ಹೊಂದಿಕೊಂಡಿರುವಂತೆ ತಿಂದಪ್ಪ ಎಂಬುವರು ಹೇಳುವಂತೆ 'ಬಳರಿ' (ಬಳ್ಳಾರಿ ದುರ್ಗಮ್ಮ) ಗುಡಿಯಲ್ಲಿ ಪೂಜೆಗಾಗಿ ಬಂದ ಭಕ್ತರಲ್ಲಿ ಒಬ್ಬ,

ಬಾಲಕನು ಆಹಾರವಾಗಿ ಸೇವಿಸುತ್ತಿರುವುದನ್ನುಎದುರುಗಿರುವ ಮಲ್ಲೇಶದೇವನು ಗಮನಿಸಿ ನೀನು ಹೀಗೆ ದಿನಾಲು ಬಂದ ಭಕ್ತರನ್ನು ಕೊಲ್ಲುತ್ತಾ ಹೋದರೆ ಜನಸಂಖ್ಯೆ ಬೆಳೆಯಲಾರದು ಎಂದು ಕೇಳಿದ್ದಕ್ಕೆ ಮಲ್ಲೇಶನಿಗೆ ಕಾಣಿಸದಂತೆ ಪೂರ್ವಕ್ಕೆ ಮುಖಮಾಡಿ ಬಾಲಕನನ್ನು ತಿನ್ನಲು ತೊಡಗಿದಳಂತೆ. ಅಂದಿನಿಂದಲೇ ದುರ್ಗೆಯ (ಬಳರಿ ದೇವತೆಗೆ) ಬೆನ್ನಿಗೆ, ಹುತ್ತಿಗೆ ಪೂಜೆಮಾಡುತ್ತಿರುವುದನ್ನು ಗಮನಿಸಬಹುದು. ಅಲ್ಲದೆ ಬಳರಿಯು ಉಗ್ರಸ್ವರೂಪದವಳೆಂದು ಅವಳನ್ನು ಮಾನವರು ನೋಡಿದರೆ ಭೀತಿಗೊಳಗಾಗುವರೆಂದು ಅರ್ಚಕರು ಮೊದಲು ಪೂಜೆಯನ್ನು ಪರದೆ ಮುಚ್ಚಿಕೊಂಡು ಪೂಜಿಸುವರು.(ಅರ್ಚಕರು ಇಲ್ಲಿ ಇಂದಿಗೂ ಪ್ರತಿದಿನ ಹೀಗೆ ಆಚರಿಸುತ್ತಾರೆ). ಇವೆಲ್ಲಾ ಆಧಾರಗಳನ್ನು ನಾವು ಅವಲೋಕಿಸುವುದಾದರೆ 'ಬನದ ಬಳಾರಿ' ಎಂಬುದು ಕಾವ್ಯದಲ್ಲಿ ಹಾಗೂ ಜನಪದ ಗೀತೆಗಳಲ್ಲಿ ಬಳಕೆಯಾಗಿದ್ದು, ಹುಲಿಗೆಮ್ಮ ಎಂಬ ಜನಪದ ವ್ಯಕ್ತಿ ಹೇಳಿರುವ ಗೀತೆಯಲ್ಲಿ ಬಳ್ಳಾರಿ ದುರ್ಗಮ್ಮ' ಬನದ ಮಾತೆಯಾಗಿರಬಹುದು. ಈ ರೀತಿಯ ಮೌಖಿಕ ಪರಂಪರೆಯ ಕಥನಗಳಿವೆ. ಈ ಅಂಶಗಳನ್ನು ಪ್ರತಿಪಾದಿಸುವ ಕೆಲವು ಶಾಸನಗಳು 'ಬನದ ಬಳಾರಿ' ಎಂಬ ದೇವತಾ ಸೂಚಕ ಪದ ಉಲ್ಲೇಖಿಸುವುದನ್ನು ಗಮನಿಸಬೇಕಾಗುತ್ತದೆ.

ಈ ಎಲ್ಲಾ ರೀತಿಯಿಂದ ನಾವೂ ನೋಡಿದಾಗ ಬಳ್ಳಾರಿ ಜಿಲ್ಲೆಯು ಭೌಗೋಳಿಕವಾಗಿ, ಐತಿಹಾಸಿಕವಾಗಿ, ಪೌರಾಣಿಕವಾಗಿ, ಸಂಸ್ಕೃತಿ, ಸಾಮಾಜಿಕವಾಗಿ, ರಾಜಕೀಯ, ಆರ್ಥಿಕವಾಗಿ ನೈಸರ್ಗಿಕವಾಗಿ ಬಹು ಅನನ್ಯತೆಯಿಂದ ಕೂಡಿದ್ದು, ಕರ್ನಾಟಕದ ಸಾಂಸ್ಕೃತಿಕತೆಗೆ ಪೂರಕವಾಗಿದೆ.

೨.೨. ಭೌಗೋಳಿಕ ಲಕ್ಷಣಗಳು

ರಾಜ್ಯದ ನಕ್ಷೆ ಪ್ರಕಾರ ಈ ಜಿಲ್ಲೆಯು ಪೂರ್ವ ಭಾಗದ ಮಧ್ಯದಲ್ಲಿ ನಂದಿ ಆಕಾರದಲ್ಲಿರುವಂತೆ ಗೋಚರಿಸುತ್ತದೆ. ಈ ಜಿಲ್ಲೆಯ ಪಶ್ಚಿಮಕ್ಕೆ ಹಾವೇರಿ, ಉತ್ತರಕ್ಕೆ ರಾಯಚೂರು, ದಕ್ಷಿಣಕ್ಕೆ ದಾವಣಗೇರಿ, ಪೂರ್ವಕ್ಕೆ ಆಂಧ್ರಪ್ರದೇಶಗಳಿವೆ. ಪೂರ್ವ-ಪಶ್ಚಿಮ ಭಾಗವು ೧೬೧.೮ ಕಿ.ಮೀ. ಉದ್ದ, ಉತ್ತರ-ದಕ್ಷಿಣ ೮೩.೭೮ ಕಿ.ಮೀ. ಅಗಲವಾಗಿದೆ. ನೈರುತ್ಯ-ಈಶಾನ್ಯ ೧೮೭೮ ಕಿ.ಮೀ. ಉದ್ದವಾಗಿದ್ದು ಪೂರ್ವ ರೇಖಾಂಶ ೭೫ ಡಿಗ್ರಿ, ೪೦'೭೦'೧೧' ಹಾಗೂ ಉತ್ತರ ರೇಖಾಂಶ ೧೪ ಡಿಗ್ರಿ ೩೦'-೧೫'೫ರ ನಡುವೆ ಇದೆ. (ಕರ್ನಾಟಕ ಗೆಝೆಟಿಯರ್) ಪ್ರಮುಖವಾಗಿ ಬಳ್ಳಾರಿ ಹೊಸಪೇಟೆ ಎಂಬ ಎರಡು ಉಪ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮದರಾಸು ಪ್ರಾಂತಕ್ಕೆ ಸೇರಿದ ಬಳ್ಳಾರಿಯಲ್ಲಿ ಆದೋನಿ, ಆಲೂರು, ಮತ್ತು ರಾಯದುರ್ಗ ತಾಲೂಕುಗಳು ಸೇರ್ಪಡೆಯಾಗಿದ್ದವು.೧೯೫೩ ರಂದು ಆಂಧ್ರ ಪ್ರದೇಶ ಭಾಷಾವಾರು ಪ್ರಾಂತದಿಂದ ವಿಭಜನೆಗೊಂಡಾಗ ಈ ಮೂರು ತಾಲ್ಲೂಕುಗಳು ಆಂಧ್ರಪ್ರದೇಶಕ್ಕೆ ಸೇರಿದವು. ಈಗಿರುವ ಏಳು ತಾಲ್ಲೂಕುಗಳಲ್ಲಿ (ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸಿರುಗುಪ್ಪ, ಸೊಂಡೂರು) ೧೧ ಪಟ್ಟಣಗಳು, ಮತ್ತು ೬೭೨ ಗ್ರಾಮಗಳನ್ನೊಳಗೊಂಡ ಜಿಲ್ಲೆ ಇದಾಗಿದೆ. ಈ ಜಿಲ್ಲೆಯು ೯೮೬೮ ಕಿ.ಮೀ. ವಿಸ್ತೀರ್ಣದಲ್ಲಿ ೧೧,೨೨,೬೮೬ ಜನಸಂಖ್ಯೆಯನ್ನು ಹೊಂದಿದೆ.

ಈ ಜಿಲ್ಲೆಯ ಪಶ್ಚಿಮ, ವಾಯು, ಉತ್ತರ ಮತ್ತು ಈಶಾನ್ಯದ ಗಡಿ ಭಾಗದಿಂದ ತುಂಗಭದ್ರಾ ನದಿಯು ಹರಿಯುತ್ತದೆ. ಪಶ್ಚಿಮಕ್ಕೆ ಧಾರವಾಡ, ಉತ್ತರಕ್ಕೆ ರಾಯಚೂರು ಜಿಲ್ಲೆಯಲ್ಲಿ ಈ ನದಿಯು ಬೇರ್ಪಡುತ್ತದೆ. ಆದರೆ ವಾಯುವ್ಯದಿಂದ ಆಗ್ನೇಯದವರೆಗೂ ಹಬ್ಬಿರುವ ಸೊಂಡೂರು ಬೆಟ್ಟಗಳು ಜಿಲ್ಲೆಯನ್ನು ಪೂರ್ವ ಪಶ್ಚಿಮವಾಗಿ ಎರಡು ಪ್ರಮುಖ ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಿವೆ. ಬಳ್ಳಾರಿಯ ಪೂರ್ವ ಭಾಗವು ಸಿರುಗುಪ್ಪ ತಾಲ್ಲೂಕನ್ನು ಒಳಗೊಂಡಿದೆ. ಸಮತಟ್ಟಾದ ಪ್ರದೇಶಗಳಲ್ಲಿ ಹತ್ತಿ ಬೆಳೆಯಲು ಯೋಗ್ಯವಾದ ಕಪ್ಪು ಮಣ್ಣಿನ ಬಯಲಲ್ಲಿ ಮರಗಿಡಗಳ ಸಂಖ್ಯೆ ಕಡಿಮೆ ಇವೆ. ಅಲ್ಲಲ್ಲಿ ಕಲ್ಲು ಬೆಟ್ಟಗಳು ಯಥೇಚ್ಛವಾಗಿ ಕಾಣಸಿಗುತ್ತದೆ. ಪಶ್ಚಿಮ ಭಾಗದಲ್ಲಿ ಕಪ್ಪು ಮಣ್ಣಿನ ಬಯಲು ಮತ್ತು ಅಧಿಕ ಭಾಗದ ಕಪ್ಪು ಕೆಂಪುವಿಶ್ರಿತ ಮಣ್ಣು ಇಲ್ಲಿದೆ. ಈ ಪ್ರದೇಶದಲ್ಲಿ ಕೆಲ ಊರುಗಳನ್ನು ಬಿಟ್ಟರೆ ಉಳಿದೆಲ್ಲಾ ಕಾಡು ಬೆಟ್ಟಗುಡ್ಡಗಳಿಂದ ಆವೃತವಾಗಿದೆ.

ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗವು ಪೂರ್ವದ ಭಾಗಕ್ಕಿಂತಲು ಉತ್ತಮವಾಗಿದ್ದು, ಇಲ್ಲಿ ಮಳೆಯು ಹೆಚ್ಚಾಗಿ ಬೀಳುತ್ತದೆ. ತುಂಗಭದ್ರಾ ನದಿಯ ಮಲ್ಲಾಪುರಂ ಬಳಿಯವರೆಗೂ ಸಂಡೂರು ಬೆಟ್ಟದ ಸಾಲು ಹಬ್ಬಿದ್ದು, ಹಡಗಲಿ ತಾಲ್ಲೂಕಿನ ಸೋಗಿ ಗ್ರಾಮದ ಬಳಿ ಬೆಟ್ಟದ ಮಲ್ಲಯ್ಯ ಗುಡ್ಡದ ಸಾಲು ಇದ್ದು, ಆ ಭಾಗದಲ್ಲಿ ಹೆಚ್ಚು ಮಳೆಯನ್ನು ತರುತ್ತದೆ. ಪ್ರತಿ ವರ್ಷ ಸಂಡೂರು ಹಾಗೂ ಹಡಗಲಿ ತಾಲ್ಲೂಕಿನಲ್ಲಿಯೇ ಹೆಚ್ಚು ಮಳೆಯಾಗುತ್ತದೆ. ಸಂಡೂರು ಬೆಟ್ಟದ ಸಾಲು ಆಗ್ನೇಯದ ಕಡೆಗೆ ಸುಮಾರು ೪೮ ಕಿ.ಮೀ.ದೂರ ವಿಸ್ತಾರವಾಗಿದೆ. ಈ ಬೆಟ್ಟದ ಮಧ್ಯಭಾಗದಲ್ಲಿ ನಾರಿಹಳ್ಳದ ಎರಡು ಕಮರಿಗಳಿವೆ. ಸಂಡೂರಿಗೆ ಮುಕುಟ ಪ್ರಾಯವಾಗಿರುವ ಕುಮಾರ ಸ್ವಾಮಿದೇವಾಲಯ ಬೆಟ್ಟ ಸಮುದ್ರ ಮಟ್ಟದಿಂದ ೧೦೩೬ ಮೀಟರ್ ಎತ್ತರದಲ್ಲಿದೆ. ಇದರ ಮಧ್ಯದಲ್ಲಿರುವ ರಾಮನಮಲ್ಲೈ ೯೯೨ ಮೀ ಹಾಗೂ ಜಂಬುನಾಥ ಬೆಟ್ಟವು ೯೦೮ ಮೀಟರ್ ಎತ್ತರದಲ್ಲಿದೆ.

ಸಂಡೂರು ಪೂರ್ವ ಭಾಗದಲ್ಲಿರುವ ವಾಯುವ್ಯದಿಂದ ಆಗ್ನೇಯದವರೆಗೆ ಹೆಚ್ಚಿರುವ ಸುಗ್ಗಮಹದೇವ ಬೆಟ್ಟ ಅಥವಾ ತಾಮ್ರ ಪರ್ವತಶ್ರೇಣಿಯು ದರೋಜಿ ಕೆರೆಯವರೆಗೂ ೪೨ ಕಿ.ಮೀ.ಗಳಷ್ಟು ಉದ್ದವಿದೆ. ಇದರ ಉತ್ತರವು ೧೦,೦೦೨ ಮೀ. ಇದೆ. ಈ ಭಾಗದ ನೈರುತ್ಯಕ್ಕೆ ೪೮ ಕಿ.ಮೀ. ದೂರದಲ್ಲಿರುವ ಮಲ್ಲಯ್ಯನ ಗುಡ್ಡದ ಶ್ರೇಣಿಯು ಹಡಗಲಿ ಹರಪನಹಳ್ಳಿಯವರೆಗೂ ವ್ಯಾಪಿಸಿದೆ. ತುಂಗಭದ್ರ ಬಳಿ ಹೊನ್ನೂರಿನ ಹತ್ತಿರ ಆರಂಭವಾಗಿ ಆಗ್ನೇಯದವರೆಗೂ ಹಬ್ಬಿ ಸುಮಾರು ೪೦ ಕಿ.ಮೀ. ದೂರವನ್ನು ಹೊಂದಿದೆ. ಇದು ಮುಂದೆ ಚಿಕ್ಕ ಹಗರಿ ಕಣಿವೆ ಬಳಿ ಕಡಿದು ಹೋಗಿ ಮುಂದೆ ೧೧ಕಿ.ಮೀ. ದೂರದಲ್ಲಿ ಕಾಣಿಸಿಕೊಂಡು ಚಿತ್ರದುರ್ಗದ ವರೆಗೂ ಹಬ್ಬಿದೆ.

ಮಲ್ಲಯ್ಯ ಗುಡ್ಡದ ಶ್ರೇಣಿಯ ಎತ್ತರವು ೯೭೪ ಕಿ.ಮೀ.ವರೆಗೂ ನೈರುತ್ಯಕ್ಕೆ ೧೩-೧೬ ಕಿ.ಮೀ ಅನತಿ ದೂರದಲ್ಲಿ ವಾಯುವ್ಯದಿಂದ ಆಗ್ನೇಯಕ್ಕೆ ಕಲ್ಲಹಳ್ಳಿ ಗುಡ್ಡದವರೆಗೂ ಈ ಶ್ರೇಣಿ ಇದೆ. ಇಲ್ಲಿರುವ ಅತಿ

ದೊಡ್ಡದಾದ ಕಲ್ಲಹಳ್ಳಿ ಗುಡ್ಡವು ೮೫೩ ಮೀ ಎತ್ತರವಿದೆ. ಇದು ೧೪ ಕಿ.ಮೀ ದೂರದಲ್ಲಿ ಕವಲೊಡೆದು ತೆಲಗಿ ಗುಡ್ಡದವರೆಗೂ ಮಾರ್ಪಟ್ಟು, ಮುಂದೆ ಹರಪನಹಳ್ಳಿಯ ದಕ್ಷಿಣ ಗುಡ್ಡದವರೆಗೂ ಹಬ್ಬಿದೆ. ಈ ಗುಡ್ಡಗಳಲ್ಲಿ ನರಸಿಂಹದೇವರ ಗುಡ್ಡವು ೭೭೫ ಮೀ ಎತ್ತರವಿದೆ. ಈ ಶ್ರೇಣಿ ದಕ್ಷಿಣ ಭಾಗದ ಉಚ್ಚಂಗಿದುರ್ಗದ (೮೧೫ಮೀ) ವರೆಗೂ ತಲುಪುತ್ತದೆ. ಕೂಡ್ಲಿಗಿ ಬೆಟ್ಟದ ಶ್ರೇಣಿಯು ಉತ್ತರ ಮತ್ತು ಪೂರ್ವ ಭಾಗದಲ್ಲಿ ಹಾದು ಹೋಗುತ್ತದೆ. ಇದರಲ್ಲಿ ಆನೇಕಲ್ ದುರ್ಗವು(೭೨೪ಮೀ) ಮತ್ತು ಜರಿಮಲೆ ದುರ್ಗವು ೮೩೮ ಮೀ ಒಳಗೊಂಡಿದೆ. ಸಂಡೂರಿನ ಚೋರುನೂರು ಸಮೀಪದ ಗುಡೇಕೋಟೆ ಶ್ರೇಣಿಯಿಂದ ಆರಂಭವಾಗಿ ಕೂಡ್ಲಿಗಿ ತಾಲೂಕಿನ ಗುಡೇಕೋಟೆ ದುರ್ಗದ ಉತ್ತರದವರೆಗೂ ಹಬ್ಬಿ ಚೆನ್ನಗಿರಿ ಕಣಿವೆ ದಾಟಿ ಚಿತ್ರದುರ್ಗದ ಸೆರಗಿನಲ್ಲಿ ಹಾಯುತ್ತಿದೆ. ಇದರ ದಕ್ಷಿಣ ಭಾಗದಲ್ಲಿರುವ ಕೈಲಾಸ ಕೊಂಡ ಶಿಖರವು ೯೧೭ಕಿ.ಮೀ ಉತ್ತರವಿದೆ. ಈ ಭಾಗವು ಹೆಚ್ಚಾಗಿ ಅರಣ್ಯ ಭರಿತವಾಗಿದೆ. ಈ ಜಿಲ್ಲೆಯ ಉತ್ತರ ಭಾಗದಲ್ಲಿ ಆಲೂರು ಗುಡ್ಡವಿದೆ. ಮತ್ತೊಂದು ಶ್ರೇಣಿ ಸುತ್ತಮುತ್ತ ಗುಡ್ಡ ಸಮೂಹಗಳಾಗಿ ಮಾರ್ಪಟ್ಟಿದೆ. ಈ ಭಾಗದ ಇನ್ನಿತರೆ ಗುಡ್ಡಗಳಲ್ಲಿ ದರೋಜಿ ಮತ್ತು ಕುರುಗೋಡು ಬಳಿಯ ಗುಡ್ಡಗಳು ಪ್ರಮುಖವಾದವುಗಳಾಗಿವೆ.

ಈ ಜಿಲ್ಲೆಗೆ ತುಂಗಭದ್ರ ನದಿ ವರದ ಪ್ರತಿರೂಪವಾಗಿದೆ. ಹಗರಿ ಅಥವಾ ವೇದಾವತಿ ಮತ್ತು ಚಿಕ್ಕಹಗರಿಗಳು ತುಂಗಭದ್ರ ನದಿಯ ಉಪನದಿಗಳಾಗಿವೆ.ಪಶ್ಚಿಮ ಮತ್ತು ಉತ್ತರ ದಂಡೆಗೆ ಗಡಿರೇಖೆಯಾಗಿ ಈ ನದಿಯು ಹರಿಯುತ್ತದೆ. ಇದು ಹರಪನಹಳ್ಳಿಯ ಕಡತಿ ಗ್ರಾಮದಿಂದ ಪ್ರವೇಶಿಸಿ ಹರಪನಹಳ್ಳಿ, ಹಡಗಲಿ, ಹೊಸಪೇಟೆ ಮತ್ತು ಸಿರುಗುಪ್ಪ ತಾಲ್ಲೂಕುಗಳ ಎತ್ತರದ ಎಲ್ಲೆಯಾಗಿ ೩೨೨ ಕಿ.ಮೀ ದೂರ ಹರಿಯುತ್ತದೆ. ಮಲ್ಲಾಪುರ ಎಂಬ ಊರಿನಲ್ಲಿ ತುಂಗಭದ್ರ ಅಣೇಕಟ್ಟು ನಿರ್ಮಿತವಾಗಿದೆ. ಇದು ಮೊದಲು ಉಪತಾಲ್ಲೂಕು ಅಗಿತ್ತು. ದೇಶನೂರು ದ್ವೀಪವು ೯.೫ ಕಿ.ಮೀ ಉದ್ದ ಇದ್ದು, ಇದು ನದಿಯ ಮಧ್ಯಭಾಗದಲ್ಲಿದೆ.ಹಗರಿ ಹೊಳೆಯು ತುಂಗಭದ್ರಾ ನದಿಯ ಉಪನದಿಯಾಗಿದೆ. ಚಿಕ್ಕಮಂಗಳೂರು ಜಿಲ್ಲೆ ಮುಳ್ಳಯ್ಯನ ಗಿರಿಯಲ್ಲಿ ಹುಟ್ಟಿ ನಂತರ ಚಿತ್ರದುರ್ಗ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಕೂಡ್ಲಿಗಿ, ಹಡಗಲಿ ತಾಲ್ಲೂಕು ಗಳಲ್ಲಿ ಹರಿದು ತುಂಗಭದ್ರ ನದಿಯನ್ನು ಕೂಡುತ್ತದೆ. ಚಿನ್ನಹಗರಿಯು ಕೂಡ್ಲಿಗಿ ತಾಲ್ಲೂಕಿನಿಂದ ಹರಿದು ಹಗರಿ ಸೇರುತ್ತದೆ. ಇದಲ್ಲದೆ ಸಣ್ಣ ಪುಟ್ಟ ತೊರೆಗಳಿಂದ ನೀರಾವರಿಗೆ ತುಂಬಾ ಉಪಯುಕ್ತವಾಗಿದೆ. ಇಲ್ಲಿರುವ ತೊರೆಗಳಲ್ಲಿ ಹಗ್ಗನೂರು ತಂಬ್ರಹಳ್ಳಿ ಹೊಳೆ, ಹಂಪಸಾಗರ ಹೊಳೆ, ಚೆಲ್ಲಹುಣಿಸೆ ಹೊಳೆ, ಗೌರಿಪುರ ಹೊಳೆ, ನಾರಿಹಳ್ಳಗಳಿವೆ. ಇದರೊಂದಿಗೆ ೨೨ ದೊಡ್ಡ ಕೆರೆಗಳು,೧೭೦ ಸಣ್ಣ ಕೆರೆಗಳು ಈ ಜಿಲ್ಲೆಯಲ್ಲಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಉಷ್ಣತೆ ಅಧಿಕವಾಗಿದೆ. ಸಂಡೂರು ತಾಲ್ಲೂಕಿನ ಅರಣ್ಯ ಪ್ರದೇಶಗಳನ್ನು ಬಿಟ್ಟರೆ ಉಳಿದಂತೆ ಹೆಚ್ಚು ಮಳೆಬೀಳುವ ಸಂಭವ ಕಡಿಮೆ. ಏಕೆಂದರೆ ಇಲ್ಲಿ ಮರಗಿಡಗಳು ತುಂಬಾ ವಿರಳವಾಗಿವೆ. ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶವು ೧೬೧೮.೨೫ ಕಿ.ಮೀ.ಗಳು. ಇಲ್ಲಿರುವ ಕುರುಚಲು ಕಾಡಿನಲ್ಲಿಯ ಮರಗಳ ಎಲೆ ಉದುರುವ ಸ್ಥಿತಿ ಕಾಣುತ್ತದೆ. ಸಂಡೂರು ಬೆಟ್ಟ ಶ್ರೇಣಿಗಳಲ್ಲಿ ಶ್ರೀಗಂಧ ಮತ್ತು ಬೀಟೆ

ಮರಗಳು ಅಧಿಕವಾಗಿವೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಈಚಲು ಮರಗಳಿವೆ. ಈ ಅರಣ್ಯಗಳಲ್ಲಿ ಕಾಡುಹಂದಿ, ಜಿಂಕೆ, ಕಡವೆ, ಚಿರತೆಗಳಿವೆ. ಇಲ್ಲಿ ಜೇನು ಮತ್ತು ದಿಂಡಿಗದ ಅಂಟು ದೊರೆಯುವುದು. ಸಂಡೂರು ಸುತ್ತಮುತ್ತಲಿನ ಬೆಟ್ಟಗಳಲ್ಲಿ ಹುಲಿಗಳಿದ್ದರೆ ದರೋಜಿ ಮತ್ತು ಕೂಡ್ಲಿಗಿಯ ಅಡವಿ ಪ್ರದೇಶಗಳಲ್ಲಿ ಕರಡಿಗಳಿವೆ. ಅಲ್ಲದೆ ಜಿಂಕೆ, ತೋಳ, ಕತ್ತೆಕಿರುಬ ಈ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕಾಣಿಸಿಗುತ್ತದೆ. ಈ ಪ್ರದೇಶದ ಆಸುಪಾಸಿನಲ್ಲಿ ಜೊತೆಗೆ ನವಿಲು, ಹದ್ದು, ಪಾರಿವಾಳ, ಗಿಡುಗ, ಬೆಳುವ, ಗುಬ್ಬಿ, ಚಿಟ್ಟೆ, ಪಿಕಳಾರ, ನಾಗರಹಾವು, ಕೆರೆಹಾವು, ಹೆಬ್ಬಾವು, ಕಟುಗದ ಹಾವುಗಳು ಕಂಡುಬರುತ್ತದೆ.

೨.೩. ಚರಿತ್ರೆ

ಬಳ್ಳಾರಿ ಪ್ರದೇಶವು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಪ್ರಾಚ್ಯ ಸಂಶೋಧನ ಫಲಿತದಿಂದ ದೊರೆತ ಮಾಹಿತಿಗಳಿಂದ ಹಳೆಯ ಶಿಲಾಯುಗದಿಂದ ಕಬ್ಬಿಣದ ಯುಗದವರೆಗೆ ಪಳೆಯುಳಿಕೆಗಳು ಜಿಲ್ಲೆಯ ಕಪ್ಪಗಲ್ಲು, ಸಂಗನಕಲ್ಲು, ತೆಕ್ಕಲಕೋಟೆ, ಗಾದಿಗನೂರು, ಹಂಪೆ ಮುಂತಾದೆಡೆ ಆಗಿನ ಮಾನವನಿಗೆ ಸಂಬಂಧಿಸಿದ ಶಿಲಾಯುಧಗಳು ಮಡಿಕೆ, ಕುಡಿಕೆ, ಗವಿವರ್ಣ ಚಿತ್ರಗಳು ಹಾಗೂ ಬೂದಿಗುಡ್ಡಗಳು ಬೆಳಕಿಗೆ ಬಂದಿವೆ. ಈಚೆಗೆ ಬೈಲುವದ್ದಿಗೇರಿ, ಗುಂಡ್ಲವದ್ದಿಗೇರಿ, ತಂಬ್ರಹಳ್ಳಿ, ಕಾಕುಬಾಳು, ಧರ್ಮಗುಡ್ಡ ಹಾಗೂ ಕಮಲಾಪುರದ ವಿದ್ಯಾರಣ್ಯದಲ್ಲಿ ಶಿಲಾಯುಧ, ವರ್ಣ ಚಿತ್ರ ಮತ್ತಿತರ ಅವಶೇಷಗಳು ದೊರೆತಿವೆ.

ಮಹಾಕಾವ್ಯಗಳು ಸ್ಥಳ ಪುರಾಣ ಹಾಗೂ ಐತಿಹ್ಯಗಳ ಹಿನ್ನಲೆಯಲ್ಲಿ ಹಂಪೆಗೆ ತನ್ನದೇ ಆದ ಚರಿತ್ರೆಯಿದೆ. ಮೊದಲಿಗೆ ಹಂಪೆಯು ರಾಮಾಯಣ ಕಾಲದಲ್ಲಿ ಕಿಷ್ಕಂಧೆ ಎಂಬ ಹೆಸರು ಪಡೆದಿತ್ತು. ಅಲ್ಲದೆ ಹಲವು ಮಹಾಕಾವ್ಯಗಳಲ್ಲಿ ಹೇಮಕೂಟ, ಮಾತಂಗ ಪರ್ವತ, ವಿರೂಪಾಕ್ಷಪುರ, ಪಂಪಾಪುರ, ಪಂಪಾಸರೋವರ, ಪಂಪತೀರ್ಥ ಎಂದು ಕರೆಯಲಾಗಿದೆ. ಪಂಪಾ ಮಹಾತ್ಮೆಯ ಸ್ಥಳ ಪುರಾಣದ ಉಲ್ಲೇಖದಂತೆ ಬ್ರಹ್ಮನ ಮಗಳಾದ ಪಂಪಾಂಬಿಕೆಯು ಹಂಪೆಯಲ್ಲಿ ತಪಸ್ಸು ಮಾಡಿ ವಿರುಪಾಕ್ಷನನ್ನು ಒಲಿಸಿಕೊಂಡ ಸ್ಥಳಕ್ಕೆ ಪಂಪಾ ಕ್ಷೇತ್ರ ಎಂದು ಕರೆಯುತ್ತಿದ್ದರು. ಇಲ್ಲಿರುವ ತುಂಗಭದ್ರ ನದಿಯನ್ನು ಮೊದಲು ಪಂಪಾತೀರ್ಥವೆಂದು ಕರೆಯ ಲಾಗಿದೆ. ಪಂಪಾಂಬಿಕೆ, ಪಂಪಾಪತಿಯಾದ ವಿವಾಹ ಸ್ಥಳವು ಹಂಪಿಯಲ್ಲಿರುವ ಹೇಮಕೂಟವೆಂದು ಹೇಳಲಾಗಿದೆ.

ಶಾಸನಗಳು ಒಂದು ಪ್ರದೇಶದ ಇತಿಹಾಸವನ್ನು ಸಂಸ್ಕೃತಿಯನ್ನು ತಿಳಿಸುವ ಮುಖ್ಯ ಆಧಾರಗಳಾಗಿವೆ. (ನಾಗಯ್ಯ ಜೆ.ಎಂ., ಪುಟ, ೬, ೧೯೯೯) ಅಂದರೆ ಶಾಸನಗಳಿಂದ ಐತಿಹಾಸಿಕ ಅಂಶಗಳು ಲಭ್ಯವಾಗುತ್ತದೆ. ಕ್ರಿ.ಶ ೩ನೇ ಶತಮಾನದಲ್ಲಿ ಈ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಗಾಗಿತ್ತೆಂದು ಹೇಳಬಹುದು. ಅಶೋಕನಿಗೆ ಸಂಬಂಧಿಸಿದ ಶಾಸನಗಳು ಬಳ್ಳಾರಿ ಜಿಲ್ಲೆಯ ಉದೇಗೊಳಂ ಮತ್ತು ನಿಟ್ಟೂರಿನಲ್ಲಿ ದೊರೆತಿವೆ. ಇವರ ನಂತರ ಶಾತವಾಹನರು ಈ ಪ್ರದೇಶವನ್ನಾಳುತ್ತಾರೆ. ನಂತರದಲ್ಲಿ ಈ ಜಿಲ್ಲೆಯು ಪಲ್ಲವರ ಆಳ್ವಿಕೆಗೆ

ಒಳಗಾಯಿತು. ಇವರನ್ನು ಹಿರೇಹಡಗಲಿಯಲ್ಲಿ ದೊರೆತ ತಾಮ್ರ ಶಾಸನದಲ್ಲಿ ಶಾತವಾಹನಿರಠ್ಠ ಎಂದು ಕರೆಯಲಾಗಿದೆ. ಇತ್ತೀಚೆಗೆ ಹಂಪೆಯ ಉತ್ಖನನಗಳಲ್ಲಿ ಕ್ರಿ.ಶ. ೧-೨ ನೇ ಶತಮಾನದ ಪ್ರಾಕೃತ ಶಾಸನಗಳು ಹಾಗೂ ಬೌದ್ಧ ಶಿಲ್ಪ ಫಲಕಗಳು ದೊರೆತಿವೆ. ಇವರ ನಂತರ ಆಳ್ವಿಕೆ ನಡೆಸಿದ ಬನವಾಸಿ ಕದಂಬರು ಈಗಿನ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿ ದುರ್ಗವನ್ನು ಉಪರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಶಾಸನಗಳಲ್ಲಿ ನಮೂದಿತವಾದಂತೆ ಉಚ್ಚಂಗಿಯು ಬನವಾಸಿ ೧೨೦೦ ರಲ್ಲಿ ಸೇರ್ಪಡೆಯಾಗಿತ್ತು. ಅನಂತರ ಬದಾಮಿ ಚಾಳುಕ್ಯರು, ರಾಷ್ಟ್ರಕೂಟರು, ನೊಳಂಬರು, ಗಂಗರು, ಹೊಯ್ಸಳರು ಮತ್ತು ಸೇವುಣರು ಈ ದೇಶವನ್ನಾಳಿದರು. ಕ್ರಿ.ಶ ೭೨೫ ನೆಯ ಶಾಸನವೊಂದರಲ್ಲಿ ದುಗ್ಗಮಾರ ಎರೆಯಪ್ಪನ್.... ಕಂಪಲಿಗೆ ಪಡೆವೋದಲ್ಲಿ ಪಾಂಡಪ್ಪನೆಂಬುವನು ಕಾಳೆಗೆ ದೂಳ್ ಸುತ್ತಲ್ಲಿ ಎಂದಿದೆ. (ಹೆರೆಂಜೆ ಕೃಷ್ಣ ಭಟ್ಟ, ಪುಟ, ೯೧೫ : ೧೯೯೫) ಶ್ರೀಪುರುಷನ ಮಗನಾದ ದುಗ್ಗಮಾರನು ಸತ್ತ ಪಾಂಡವನಿಗೆ ದತ್ತಿ ನೀಡಿದನೆಂದಿದೆ. ಕ್ರಿ.ಶ ೧೦೨೨ರ ಶಾಸನದಂತೆ ಜಗದೇಕಮಲ್ಲನೆಂಬ ನೊಳಂಬ ಪಲ್ಲವರಾಜನು ಕಪಿಲಿಯ ವಾಸನಂ ಗೆಯ್ದು ರಾಜ್ಯಂ ಗೈಯುತ್ತಿರಲು ಎಂದಿದೆ. ಇಲ್ಲಿ ಬಳಕೆಯಾದ ಕಪಿಲಿಯೇ ಬಳ್ಳಾರಿ ಜಿಲ್ಲೆಯ ಕಂಪಿಲಿಯೆಂಬ ಊರಾಗಿದೆ (ಹೆರೆಂಜೆ ಕೃಷ್ಣಭಟ್ ಪು.೯೧೫:೧೯೯೫). ಕ್ರಿ.ಶ.೧೦೫೫ರ ಕೋಗಳಿಯ ಶಾಸನವು ಗಂಗದೊರೆ ದುರ್ವಿನೀತನು ಬಸದಿಯನ್ನು ನಿರ್ಮಿಸಿದನೆನ್ನುತ್ತದೆ. ಕ್ರಿ.ಶ.೧೦೪೫ ರ ಮೋರೆಗೇರಿ ಶಾಸನವು ತ್ರೈಲೋಕ್ಯ ಮಲ್ಲನನ್ನಿ ನೊಳಂಬನು ಬಲಕುಂದಿ ೩೦೦, ಕೋಗಳಿ ೫೦೦, ಕದಂಬಳಿಗೆ ೧೦೦೦, ಕುಡಿಹಾರ ೭೦ ನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ.೯೮೭ರ ಬಾಗಳಿ ಶಾಸನ ಕ್ರಿ.ಶ.೧೦೭೧ರ ಹೂವಿನ ಹಡಗಲಿಯ ಶಾಸನ ಹಾಗೂ ಕ್ರಿ.ಶ.೧೧೦೬ರ ಶಾಸನಗಳಿಂದ ಕದಂಬರು ಈ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರೆಂಬುದು ಸ್ಪಷ್ಟ. ಪಲ್ಲವರು ಸಹ ಬಳ್ಳಾರಿಯನ್ನು ನೊಳಂಬವಾಡಿಯ ಭಾಗವನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಈ ಎಲ್ಲಾ ಶಾಸನಗಳು ಬಳ್ಳಾರಿ ಪ್ರದೇಶವನ್ನು ಆಳಿದ ರಾಜಮನೆತನಗಳನ್ನು ಕುರಿತು ಮಾಹಿತಿ ನೀಡುತ್ತವೆ.

ಕುಮ್ಮಟದುರ್ಗದ ಕಂಪಿಲದೇವನು ಜಿಲ್ಲೆಯ ರಾಮನ ಮಲೆದುರ್ಗಗಳನ್ನು ಮತ್ತೊಂದು ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪ್ರದೇಶವನ್ನು ಆಳಿದನು. ಇವನ ಮಗನಾದ ಕುಮಾರ ರಾಮನು ತನ್ನ ಶೌರ್ಯದಿಂದಾಗಿ ದೇವತ್ವವನ್ನು ಪಡೆದಿದ್ದಾನೆ. ಈಗಲೂ ಈತನ ಹೆಸರಿನ ದೇವಾಲಯಗಳು ಕಂಡುಬರುತ್ತದೆ. ಕುಮಾರರಾಮನು ತುಘಲಕ್ ಸೈನ್ಯದೊಂದಿಗೆ ಹೋರಾಡಿ ಮೃತಪಟ್ಟನು. ಈತನಿಗೆ ಸಂಬಂಧ ಪಟ್ಟಂತೆ ವೀರಗಲ್ಲು, ಶಾಸನ ಹಾಗೂ ದೇವಾಲಯವೊಂದು ಸಂಡೂರಿನ ರಾಮನ ಮಲೆದುರ್ಗದಲ್ಲಿ ಕಂಡುಬರುತ್ತದೆ. ಕುಮ್ಮಟದುರ್ಗದ ಅವಸಾನವು ಬೃಹತ್ ವಿಜಯನಗರ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾಯಿತು. ಇದಕ್ಕೆ ಹೊಯ್ಸಳರ ಉದಾರವಾದ ಪ್ರೋತ್ಸಾಹ ಸಹಕಾರಗಳೇ ಕಾರಣ. ವಿಜಯನಗರ ಸಾಮ್ರಾಜ್ಯವು 'ವಿಜಯನಗರ'ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೩೦೦ವರ್ಷಗಳ ಕಾಲ ನಾಲ್ಕು ವಂಶಸ್ಥರು ಆಳ್ವಿಕೆ ನಡೆಸಿದರು. ಇದು ಕ್ರಿ.ಶ.೧೫೬೫ ರ ರಕ್ಕಸ ತಂಗಡಿ ಯುದ್ಧದಿಂದ ಪತನವಾಯಿತು. ನಂತರದ ಕಾಲದಲ್ಲಿ ಹರಪನಹಳ್ಳಿ,

ಮೊದಲುಗೊಂಡು ಅನೇಕ ಪಾಳೆಗಾರರ ಆಳ್ವಿಕೆಯಲ್ಲಿ ಹಂಚಿಹೋಯಿತು. ಶಾಹಿಸುಲ್ತಾರನ್ನು ಹೊಡೆದೋಡಿಸಿದ ಹಂಡೆ ಕುರುಬರ ಹನುಮಪ್ಪ ನಾಯಕನಿಗೆ ಬಳ್ಳಾರಿ ಪ್ರಾಂತ್ಯವು ದೊರೆಯಿತು. ಆಗ ನಿರ್ಮಿಸಿದ ಬಾವಿ ಹಾಗೂ ದೇವಾಲಯಗಳು ಇಂದಿಗೂ ಕಾಣಬರುತ್ತವೆ. ತರುವಾಯ ಮೊಗಲರು ಮತ್ತು ಮರಾಠರು ಈ ಭಾಗವನ್ನು ವಶಪಡಿಸಿಕೊಂಡು ಆಳಿದರು.

ನಂತರದ ಶತಮಾನದಲ್ಲಿ ಮೈಸೂರಿನ ಹೈದರ ಆಲಿ ಮತ್ತು ಅವನ ಮಗ ಟಿಪ್ಪುಸುಲ್ತಾನನು ಬಳ್ಳಾರಿಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿದರು. ಟಿಪ್ಪು ಪತನವಾದ ನಂತರ ಬಳ್ಳಾರಿ ಪ್ರಾಂತ್ಯವು ಬ್ರಿಟಿಷರ ವಶವಾಯಿತು. ಹೀಗೆ ಬ್ರಿಟಿಷರ ವಶವಾದ ಬಳ್ಳಾರಿ ಪ್ರದೇಶವು ಮದರಾಸು ಪ್ರಾಂತದಲ್ಲಿ ವಿಲೀನ ವಾಯಿತು. ೧೯೫೩ರ ಸುಮಾರಿನಲ್ಲಿ ಪ್ರಾಂತೀಯ ವಿಂಗಡಣೆಯಿಂದ ಬಳ್ಳಾರಿ ಜಿಲ್ಲೆಯಲ್ಲಿದ್ದ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳು ಆಂಧ್ರಪ್ರದೇಶಕ್ಕೆ ಸೇರ್ಪಡೆಯಾದವು. ಆಗ ಬಳ್ಳಾರಿಯು ೮ ತಾಲ್ಲೂಕುಗಳನ್ನೊಳಗೊಂಡ ಜಿಲ್ಲೆಯಾಯಿತು. ಅವುಗಳೆಂದರೆ ಬಳ್ಳಾರಿ, ಶಿರುಗುಪ್ಪ, ಸೊಂಡೂರು, ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಮಲ್ಲಾಪುರ. ಈ ಮಲ್ಲಾಪುರ ತಾಲೂಕು ಹೊಸದಾಗಿ ರಚನೆಗೊಂಡು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಸೇರಿಕೊಂಡಿತು. ಈಚಿನ ಬೆಳವಣಿಗೆಯಲ್ಲಿ ಹರಪನಹಳ್ಳಿ ತಾಲ್ಲೂಕು ದಾವಣಗೆರೆ ಜಿಲ್ಲೆಗೆ ಸೇರಿಕೊಂಡು ಈಗ ಏಳು ತಾಲ್ಲೂಕುಗಳಷ್ಟೆ ಬಳ್ಳಾರಿ ಜಿಲ್ಲೆಗೆ ಸೇರಿವೆ. ಬಳ್ಳಾರಿ ಪ್ರದೇಶವು ಚಾರಿತ್ರಿಕವಾಗಿ ಇಡೀ ದಕ್ಷಿಣ ಭಾರತದಲ್ಲೆ ಮಹತ್ವದ ಸ್ಥಾನವನ್ನು ಪಡೆದಿದೆ. ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕಾಲದ ಇತಿಹಾಸಕಾರರ ಗಮನ ಸೆಳೆದಿದೆ.

೨.೪. ಪೌರಾಣಿಕ

ಬಳ್ಳಾರಿ ಜಿಲ್ಲೆಯು ಸಾಕಷ್ಟು ಪೌರಾಣಿಕ ಘಟನಾವಳಿಗಳನ್ನು ಹೊಂದಿದೆ. ಇಲ್ಲಿ ದೇವಿ ಪುರಾಣದ ಚಿತ್ರಣ, ರಾಮಾಯಣ-ಮಹಾಭಾರತದ ಪ್ರಸಂಗವು ಕಂಡುಬರುತ್ತದೆ. ದೇವಿಪುರಾಣಕ್ಕೆ ಸಂಬಂಧಿಸಿದಂತೆ ಬಳ್ಳಾರಿಯ ದುರ್ಗೆ(ದುರುಗಮ್ಮ) ದೇವಿಯು ಒಂದು ಅವತಾರವಾಗಿ ನೆಲೆಸಿದ್ದಾಳೆ. ಇದರಿಂದಲೇ ಬಳರಿಯು ಒಂದು ಗ್ರಾಮದೇವತೆಯಂತೆ ಕಂಡುಬರುತ್ತದೆ. ಇದಲ್ಲದೆ ಬನದ ದೇವತೆ ಎಂಬ ಉಲ್ಲೇಖದಂತೆ ಈಗಿರುವ ದುರ್ಗದೇವಾಲಯದ ಸ್ಥಳವು ಬನದ ಸ್ಥಳವಾಗಿತ್ತೆಂದು ದೃಢಪಡುತ್ತದೆ.

ರಾಮಾಯಣದ ಚಿತ್ರಣಕ್ಕೆ ಸಂಬಂಧಿಸಿದಂತೆ ಇಡೀ ಹಂಪೆಯು ಅಂದರೆ ಇಲ್ಲಿರುವ ಕಿಷ್ಕಿಂಧಾ ಸ್ಥಳವು ಪ್ರಮುಖವಾಗಿದೆ. Sugreeva later deiveen out by his brother vali,was the vanara king at the time and Kishkindha which has been generally acknowledged to have been near the present Hampi in Hospet Talku (ಗೆಝಿಟಿಯರ್) ಈ ಪ್ರದೇಶವು ರಾಮಾಯಣ ಮಹಾಕಾವ್ಯದಲ್ಲಿ ಕಂಡು ಬರುವ ಕಿಷ್ಕಿಂಧೆಯಾಗಿದೆ ಎಂದು ನಂಬಲಾಗಿದೆ. ಈ ಕಿಷ್ಕಿಂಧೆಯಲ್ಲಿ ರಾಮ ಇಲ್ಲಿಗೆ ಬರುವುದಕ್ಕೆ

ಮುಂಚಿತವಾಗಿ ಇಲ್ಲಿ ವಾಲಿ-ಸುಗ್ರೀವ, ಹನುಮಂತ, ಮಾತಂಗ, ಜಾಂಬವಂತ, ಮುಂತಾದ ವಾನರ ವೀರರು ಈ ಸ್ಥಳದ ಸುತ್ತಮುತ್ತಲೂ ಜೀವಿಸಿದ್ದರೆಂದು ತಿಳಿಯಬರುತ್ತದೆ.

ಹಂಪೆಯಲ್ಲಿ ಶಿವ ಪಾರ್ವತಿಯರು ತಪಸ್ಸು ಮಾಡಿದ್ದು ಅಲ್ಲದೆ ಇಲ್ಲಿಯೇ ಶಿವ ಪಾರ್ವತಿಯರ ವಿವಾಹ ಹಾಗೂ ಮನ್ಮಥನನ್ನು ಶಿವನು ತನ್ನ ಹಣೆಗಣ್ಣಿನಿಂದ ಸುಟ್ಟು ಭಸ್ಮ ಮಾಡಿದ ಸ್ಥಳ ಇದಾಗಿದೆ. ಈಗಿರುವ ಶಿವನ ದೇವಾಲಯಕ್ಕಿಂತ ಬೆಟ್ಟದ ತುದಿಯಲ್ಲಿ ಮೂಲ ವಿರೂಪಾಕ್ಷ ಗುಡಿ ಇತ್ತೆಂದು ಅಲ್ಲದೆ ಆ ಗುಡಿಯ ಎದುರಿಗೆ ಮನ್ಮಥ ಕುಂಡ ಇದೆ ಎಂದು ತಿಳಿದು ಬರುತ್ತದೆ. ಇಲ್ಲಿ ಪ್ರಸ್ತಾಪವಾಗಿರುವ ಪಂಪಾ ವಿಷ್ಣುವಿನ ಮೊಮ್ಮಗಳು, ಬ್ರಹ್ಮನ ಮಗಳು ಸತ್ಯ ಗೋತ್ರೋದ್ಭವಳು ಪಂಪಾ ಹೆಸರಿನ ಕನ್ಯೆಯನ್ನು ಸದಾಶಿವನ ಮೊಮ್ಮಗನೂ ಮಹೇಶ್ವರನೂ ಆದ ವಿರೂಪಾಕ್ಷನಿಗೆ ಕೊಟ್ಟು ವಿವಾಹ ನೆರವೇರಿಸಿದನೆಂದು ಇಲ್ಲಿನ ಸ್ಥಳ ಪುರಾಣದಿಂದ ತಿಳಿದು ಬರುತ್ತದೆ. ಅಲ್ಲದೆ ಹಂಪೆಯ ಖ್ಯಾತಿಯ ವಿರೂಪಾಕ್ಷನೆಂಬುದಕ್ಕೆ ಜನಪದ ಐತಿಹ್ಯ ವಲ್ಲದೆ ಅನೇಕ ಕೃತಿಗಳಲ್ಲಿ ಹೇಮಕೂಟ, ಕಿಷ್ಕಿಂಧ, ಪಂಪಾ ವಿರೂಪಾಕ್ಷ, ಪಂಪಾ ಸರೋವರ ಎಂಬ ಹೆಸರುಗಳು ಪ್ರಸ್ತಾವ ಗೊಂಡಿವೆ. ಪಂಪಾಂಬಿಕೆಯ ತವರೂರು, ಹೊಸಪೇಟೆಯ ಚಿಲಕನಹಟ್ಟಿಯಾಗಿತ್ತು. ಈ ಊರಿನ ಜನರು ಹಂಪೆಯ ಜಾತ್ರೆ ಫಲಪೂಜೆ ದಿನವನ್ನು ನಿಶ್ಚಿತಾರ್ಥದ ದಿನ ವಿವಾಹ ದಿನವನ್ನಾಗಿ ಆಚರಿಸುವುದು ಕಂಡುಬರುತ್ತದೆ.

ನಂತರದಲ್ಲಿ ರಾಮಾಯಣದ ಘಟನೆ ಅಂದರೆ ರಾಮನು ೧೪ ವರ್ಷದ ವನವಾಸ ಸಮಯದಲ್ಲಿ ರಾವಣನು ಸೀತೆಯನ್ನು ಕದ್ದೊಯ್ದ ಮೇಲೆ ಆಕೆಯನ್ನು ಹುಡುಕುತ್ತಾ ಹಂಪೆಯ ಕಿಷ್ಕಿಂಧಾ ಸ್ಥಳಕ್ಕೆ ಬಂದಿದ್ದನೆಂದು ಸ್ಥಳ ಪುರಾಣಗಳು ತಿಳಿಸುತ್ತವೆ. ಆಗ ಕಿಷ್ಕಿಂಧೆಯಲ್ಲಿ ವಾಲಿ-ಸುಗ್ರೀವ ಹನುಮಂತ ಎಂಬ ವಾನರರು ಹಾಗೂ ಜಾಂಬುವಂತರ ನೆಲೆವೀಡಾಗಿತ್ತು. ಅವರ ಸ್ನೇಹವಾದ ಬಳಿಕವೇ ವಾಲಿ-ಸುಗ್ರೀವರ ಯುದ್ಧಕ್ಕೆ ರಾಮನೆ ಅಣಿಗೊಳಿಸಿ ವಾಲಿಯನ್ನು ಕೊಲ್ಲುವ ಘಟನೆ ಇಲ್ಲಿ ಜರುಗಿತ್ತೆಂದು ತಿಳಿದು ಬರುತ್ತದೆ. ನಂತರ ಅವರೆಲ್ಲರ ನೆರವಿನಿಂದ ರಾವಣನನ್ನು ಕೊಂದು ಸೀತೆಯನ್ನು ಕರೆತರುತ್ತಾರೆ. ಅನಂತರ ಸೀತೆಗೆ ಕಿಷ್ಕಿಂಧ ಸ್ಥಳದ ಮಹತ್ವದ ಬಗ್ಗೆ ತಿಳಿಸುತ್ತಾ ಕೋದಂಡರಾಮನ ದೇವಸ್ಥಾನದಲ್ಲಿ ಕೆಲವು ದಿನ ತಂಗಿದ್ದರೆಂದು ತಿಳಿದು ಬರುತ್ತದೆ. ಅನಂತರ ಸೊಂಡೂರಿನ ರಾಮಘುಡಕ್ಕೂ ಹೋಗಿದ್ದರೆಂದು ತಿಳಿದುಬರುತ್ತದೆ. ಈ ಕಿಷ್ಕಿಂದ ಪ್ರದೇಶದಲ್ಲಿ ವಾಲಿ ವಾಸವಾಗಿದ್ದರಿಂದ ವಾಲಿಭಂಡಾರವೆಂಬ ಗುಹೆಗಳು ಈಗಲೂ ಇರುವುದರ ಬಗ್ಗೆ ಆಧಾರಗಳು ಸಿಗುತ್ತದೆ. ಜೊತೆಗೆ ಸೀತೆಯನ್ನು ರಾವಣನು ಕದ್ದೊಯ್ದ ಬಗ್ಗೆ ಕೆಲವು ಸಂಗತಿಗಳನ್ನು ತಿಳಿಸುತ್ತಾರೆ. ಅವೆಂದರೆ ಕಿಷ್ಕಿಂಧ ಮಾರ್ಗದಲ್ಲಿ ರಾವಣ ಸೀತೆಯನ್ನು ಕರೆದೊಯ್ಯುವಾಗ ಆಕೆ ಧರಿಸಿದ ಆಭರಣಗಳು ಪಂಪಾಸರೋವರದಲ್ಲಿ ಬಿದ್ದಿರುವುದು ಹಾಗೂ ಈಗಲೂ ಗಮನಿಸುವ ಬಂಡೆಯ ಮೇಲೆ ಗೋಚರವಾಗುವ ಪಟ್ಟಿಯಾಕಾರದ ಗುರುತು ಬಿದ್ದಿರುವ ಸೀತೆಯ ಸೆರಗಿನ ಗುರುತು ಚಿತ್ರವು ರಾಮಾಯಣದ ಘಟನೆಯನ್ನು ತಿಳಿಸುತ್ತದೆ. ಆದರೆ ಇದು ಲಾವಾರಸದ ಕಲ್ಲಿನ ಪದರದ ಹೆಗ್ಗುರುತಾಗಿರಬೇಕೆಂದು ಭೂವಿಜ್ಞಾನಿಗಳ ಅಭಿಪ್ರಾಯವಾಗಿದೆ. ಅಲ್ಲದೆ

ಇಲ್ಲಿಯೇ ಮಾತಂಗ ಮುನಿಯು ತಂಗಿದ್ದನೆಂಬ ನಂಬಿಕೆ ಇದೆ. ಆತನು 'ಬೃಹದ್ದೇಶಿ' ಎಂಬ ಕೃತಿಯನ್ನು ಇಲ್ಲಿಯೇ ರಚಿಸಿರಬೇಕು. ಜೊತೆಗೆ ಮಾತಂಗ ಮುನಿಯ ಮಗಳಾದ ಮಾತಂಗಿ ಈಗ ಸ್ತ್ರಿ ದೇವತೆಯಾಗಿ ಪೂಜೆಗೊಳ್ಳುತ್ತಿರುವಳು. ಈ ಮುನಿಯಿಂದಲೇ ಮಾತಂಗ ಪರ್ವತ ಎಂದು ಈಗಲೂ ಕರೆಯುತ್ತಾರೆ.

ಜಾಂಬವಂತನು ತನ್ನ ಅವಸಾನದ ಅಂಚಿನಲ್ಲಿ ರಾಮನಿಗೆ ತಿಳಿಸಿ ತನಗೆ ಯೋಗ್ಯವಾದ ಸ್ಥಳವನ್ನು ಸೂಚಿಸಿದರೆ ತಪಸ್ಸು ಮಾಡಲು ತೆರಳುವೆನು ಎಂದು ಕೇಳಿದಾಗ ರಾಮನು ಜಾಂಬವಂತನಿಗೆ ಹಂಪೆಯ ದಕ್ಷಿಣದೆಸೆಯೊಳು ಜಂಬೂದ್ವೀಪಯೆಂಬ ಸ್ಥಳವಿದೆ. ಅಲ್ಲಿಗೆ ಹೋಗಿ ತಪಸ್ಸು ಮಾಡಲು ತಿಳಿಸುವನು. ಅಂತೆಯೇ ಜಾಂಬವಂತನು ಜಂಬೂದ್ವೀಪ ಅಂದರೆ ಈಗಿರುವ ಜಂಬುನಾಥ ಬೆಟ್ಟವೆ ಜಾಂಬವಂತನು ತಪಸ್ಸು ಮಾಡಿದ ಸ್ಥಳವೆಂದು ಐತಿಹ್ಯಗಳಿಂದ ತಿಳಿಯುತ್ತದೆ.

ಮಹಾಭಾರತಕ್ಕೆ ಸಂಬಂಧಿಸಿದಂತೆ ಹೆಚ್ಚು ಘಟನೆಗಳು ಇಲ್ಲಿ ಜರುಗಿಲ್ಲವೆನಿಸುತ್ತದೆ. ಆದರೂ ಪ್ರಾಸಂಗಿಕವಾಗಿ ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿ ಹತ್ತಿರದ ಧರ್ಮಗುಡ್ಡದ ಗುಹೆಗಳಲ್ಲಿ ಧರ್ಮರು (ಪಾಂಡವರು) ವಾಸವಾಗಿದ್ದರೆಂದು ತಿಳಿಸುತ್ತದೆ. ಹಂಪೆಯ ಪಂಪಾಸರೋವರ ದಾಟಿ ಬಂದಾಗ ವಿರಾಟ ಪರ್ವದ ದಿನದಲ್ಲಿ ಅಲೆದಾಡಿಕೊಂಡು ಇಲ್ಲಿಗೆ ಬಂದಿರುತ್ತಾರಂತೆ. ಈ ಗುಡ್ಡದಲ್ಲಿ ತಂಗಿದ್ದಾಗ ಪೂಜಾರಿಗೂ, ಮೊಸರು ಮಾರುವ ಭಕ್ತನಿಗೂ ಕಾಣಿಸಿಕೊಂಡ ಬಗ್ಗೆ ಸ್ಥಳ ಐತಿಹ್ಯ ಮಾಹಿತಿ ನೀಡುತ್ತದೆ. ಈ ಧರ್ಮರ ಗುಡ್ಡದಲ್ಲಿ ಕೆಲವು ಪುರಾವೆಗಳು ಪಾಂಡವರು ಇದ್ದರೆಂಬುದರ ಬಹು ಸ್ಪಷ್ಟ ದಾಖಲೆಗಳಾಗಿವೆ. ಅವೆಂದರೆ ಅರ್ಜುನನು ಈ ಭಾಗದಲ್ಲಿ ನೀರುಸಿಗದೇ ಇದ್ದಾಗ ತನ್ನ ಬಾಣದಿಂದ ಕಲ್ಲಿನಲ್ಲಿ ನೀರನ್ನು ತರಿಸಿದನಂತೆ. ಅದು ಈಗಲೂ ಬತ್ತದ ಬಾವಿಯಾಗಿದೆ. ಅಲ್ಲದೆ ಭೀಮನ ಡೋಗಿ, ಪಗಡೆಕಲ್ಲು, ಹಾಗೂ ಪಾಂಡವರು ಗುಂಡುಕಲ್ಲಿನ ಮೇಲೆ ಕೃಷಿ ಮಾಡಿದ ಗೆರೆಗಳು ವಿಸ್ಮಯಕಾರಿ ಸಂಗತಿಗಳಾಗಿವೆ. ಇದರಿಂದಲೇ ಪ್ರತಿವರ್ಷವೂ ದಸರಾ ಹಬ್ಬದ ಊರ ಬನ್ನಿಗಿಂತ ಹಿಂದಿನ ದಿನ ಇಲ್ಲಿ ಗುಡ್ಡದ ಬನ್ನಿ ಎಂಬ ಆಚರಣೆ ಮಾಡುತ್ತಾರೆ. ಆ ದಿನ ಅಕ್ಕ ಪಕ್ಕದ ಊರಿನ ಜನರು ಗ್ರಾಮದೇವತೆಗಳನ್ನು ಪಲ್ಲಕ್ಕಿಯಲ್ಲಿಟ್ಟು ಕೊಂಡು ಬಂದು ಬನ್ನಿ ಮುಡಿದು ಹೋಗುತ್ತಾರೆ. ಈ ಗುಹೆಯಲ್ಲಿ ತುಂಬ ಸುಂದರವಾದ ಕಪ್ಪು ಕಲ್ಲಿನ ಬಸವ, ಗಣಪ, ವೀರಭದ್ರ, ಲಿಂಗ ಹಾಗೂ ಸರ್ಪ, ಕಾಳಿಂಗರುಂಡ ಎನ್ನುವ ಗುಂಡು ಕಲ್ಲುಗಳು ಕಾಣಸಿಗುತ್ತದೆ. ಇದಲ್ಲದೆ ಈ ಭಾಗದಲ್ಲಿ ಯಾವುದೇ ಹಳ್ಳಿಯಲ್ಲಿ ಕರೆಕಲ್ಲು (ಕಪ್ಪುಕಲ್ಲು) ಸಮೂಹದ ಬೆಟ್ಟ ಇದ್ದರೆ ಅಲ್ಲಿ ಪಾಂಡವರು ನಡೆದು ಬಂದುದಕ್ಕೆ ಅವರ ಸ್ಪರ್ಶದಿಂದ ಕಪ್ಪು ಕಲ್ಲಾಗಿದೆ ಎಂದು ತಿಳಿಸುತ್ತಾರೆ. ಇದೇನೇ ಇರಲಿ ಈ ಭಾಗದಲ್ಲಿ ಪೌರಾಣಿಕ ಅಂಶಗಳ ಮಾಹಿತಿಯಿಂದ ತನ್ನದೇ ಆದ ಪ್ರಾಮುಖ್ಯತೆ ಪಡೆದಿದೆ ಎಂದು ತಿಳಿದುಬರುತ್ತದೆ.

೨.೫. ಸಾಹಿತ್ಯ

ಬಳ್ಳಾರಿ ಜಿಲ್ಲೆಯ ಸಾಹಿತ್ಯವು ವಿಪುಲವಾಗಿಯೂ ಉತ್ಕೃಷ್ಟವಾಗಿಯೂ ಬೆಳೆದು ಪ್ರಸಿದ್ಧಿ ಪಡೆದಿದೆ. ಇದರಿಂದ ರಾಜ್ಯಕ್ಕೆ ಅತ್ಯಮೂಲ್ಯ ಕೊಡುಗೆಯನ್ನು ನೀಡಿದೆ. ಇಲ್ಲಿ ಸಂಸ್ಕೃತ, ಕನ್ನಡ ಕೃತಿಗಳ ರಚನೆಗೆ ಕೈ ಹಾಕಲಾಗಿದೆ. ಜೊತೆಗೆ ತೆಲುಗು ಸಾಹಿತ್ಯವೂ ಬೆಳೆದು ಬಂದಿದ್ದು ಕಾಣಿಸುತ್ತದೆ. ಸಂಸ್ಕೃತ ಕವಿಗಳಲ್ಲಿ ಮಾತಂಗ ಮುನಿಯ ಬೃಹದ್ದೇಶಿ'ಯನ್ನು ಗುರುತಿಸಬಹುದು. ಈತನ ಕಾಲಾವಧಿಯ ಬಗ್ಗೆ ಸ್ಪಷ್ಟತೆ ಇಲ್ಲ. ಕ್ರಿ.ಶ.೮೫೦ ರಿಂದ ೧೨೭೦ ರವರೆಗೂ ಗುರುತಿಸುತ್ತಾರೆ. ಪ್ರಸಿದ್ಧವಾದ ಐತಿಹಾಸಿಕ ಸ್ಥಳವಾದ ಹಂಪೆಯಲ್ಲಿ ಈ ಕೃತಿ ರಚನೆಯಾಗಿರಬೇಕೆಂದು ಕಂಡು ಬರುತ್ತದೆ. ನಂತರ ಕನ್ನಡದಲ್ಲಿ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯ ವಿಭಾಗ ಕ್ರಮದಲ್ಲಿ ಹಲವಾರು ಸಾಹಿತಿಗಳು ಕಾಣಿಸುತ್ತಾರೆ. ಹಳಗನ್ನಡ ಸಾಹಿತ್ಯದಲ್ಲಿ ಮೊದಲು ಗದ್ಯ ಕವಿಯೆಂಬ ಖ್ಯಾತಿಗೆ ಗುರಿಯಾದ ಶಿವಕೋಟ್ಯಾಚಾರ್ಯನೇ ಬಳ್ಳಾರಿ ಕೋಗಳಿ ನಾಡಿನವನು. ಈತ ಬರೆದ 'ವಡ್ಡಾರಾಧನೆ' ಗದ್ಯ ಕೃತಿಯು ತುಂಬಾ ಉತ್ಕೃಷ್ಟವಾದುದು. ಶಿವಕೋಟ್ಯಾಚಾರ್ಯನೇ ಜಿಲ್ಲೆಯ ಪ್ರಥಮ ಕನ್ನಡ ಕವಿಯೆನ್ನಬಹುದು. ಈತನನ್ನು ಕೆಲವು ವಿದ್ವಾಂಸರು ಕೋಗಳಿ ನಾಡಿನವನಲ್ಲವೆಂದು ಟೀಕಿಸುತ್ತಾರೆ. ಆದರೂ 'ವಡ್ಡಾರಾಧನೆ' ಕೃತಿಯಲ್ಲಿ ಬಳ್ಳಾರಿ ಭಾಷೆಯ ಸೊಗಡು, ಸಂಸ್ಕೃತಿ, ವಿಚಾರ, ಜನಪದೀಯ ಕಥಾನಕ ಶೈಲಿ, ಗದ್ಯ ಶೈಲಿ ಈ ಭಾಗದ ಹೆಸರುಗಳು ಬಳಸಿರುವುದು ಗಮನಾರ್ಹವೇ ಸರಿ.

ಕ್ರಿ.ಶ. ೧೧೪೦ರ ಕಾಲಾವಧಿಯಲ್ಲಿದ್ದನೆಂದು ಹೇಳಲಾದ ಶಿವಶರಣ ಬಳ್ಳೇಶ ಮಲ್ಲಯ್ಯನು ಆದ್ಯವಚನಕಾರನೆಂದು ಗುರುತಿಸಲಾಗಿದೆ. ಈ ವಚನಕಾರನ ಕೆಲವೇ ವಚನಗಳು ಲಭ್ಯವಾಗಿವೆ. ಅವುಗಳಲ್ಲಿ ಬಳ್ಳೇಶ್ವರ ಎಂಬ ನಾಮಾಂಕಿತವಿದೆ. ಈತನ ಹೆಸರಿನಿಂದಲೇ ಬಳ್ಳಾರಿ ಎಂಬ ಹೆಸರು ಬಂದಿರಬೇಕೆಂದು ಜನಪದರು ಹೇಳುತ್ತಾರೆ.ಬಸವ ಪೂರ್ವಯುಗದಲ್ಲಿ ಇನ್ನೂ ಹಲವಾರು ಶರಣರನ್ನು ಈ ಜಿಲ್ಲೆಯಲ್ಲಿ ಗುರುತಿಸಬಹುದಾಗಿದೆ. ಕ್ರಿ.ಶ. ೧೦೪೦ ರಿಂದ ೨೦ನೇ ಶತಮಾನದ ದಮ್ಮೂರ ವೆಂಕಟಪ್ಪನವರೆಗೂ ೬೮ ಶಿವಶರಣರನ್ನು ಶಾಂತರಸ ಗುರುತಿಸಿದ್ದಾರೆ. (ಶಾಂತರಸ, ಪು, ೧೧:೧೯೭೫) ಬಸವ ಯುಗದ ಕಾಲ ಘಟ್ಟದಲ್ಲಿ ಸಾಹಿತ್ಯವಲಯದಲ್ಲಿ ಕ್ರಾಂತಿ ಮಾಡಿದ ಇಬ್ಬರು ಕವಿಗಳು ಕಂಡುಬರುತ್ತಾರೆ.ಇವರು ಧಾರ್ಮಿಕ ಕೃತಿ ರಚನೆಗೆ ಕೈಹಾಕಿ, ವಿಜಯನಗರದಲ್ಲಿದ್ದುಕೊಂಡೇ ಸಾಹಿತ್ಯ ರಚಿಸಿದರು. ಆ ಕವಿಗಳೆಂದರೆ ಹರಿಹರ ಮತ್ತು ರಾಘವಾಂಕರು. ಇವರಲ್ಲಿ ಹರಿಹರನು 'ರಗಳೆ', ರಾಘವಾಂಕನು ಷಟ್ಪದಿ ಪ್ರಕಾರದಲ್ಲಿ ಕೃತಿ ರಚಿಸಿದರು. ರಾಘವಾಂಕನನ್ನು 'ಷಟ್ಪದಿ ಬ್ರಹ್ಮ'ನೆಂದೇ ಕರೆದಿದ್ದಾರೆ. ಹರಿಹರನು ಬಸವರಾಜದೇವರ ರಗಳೆ, ಗಿರಿಜಾಕಲ್ಯಾಣ, ರಕ್ಷಾಶತಕ, ಪಂಪಾಶತಕಗಳನ್ನು ರಚಿಸಿದರೆ, ರಾಘವಾಂಕರು ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣಗಳನ್ನು ಬರೆದನು. ನಂತರ ೧೪ನೇ ಶತಮಾನದಲ್ಲಿ ಮಂಗರಾಜನ ಖಗೇಂದ್ರಮಣಿ ದರ್ಪಣವು ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಪ್ರೌಢದೇವರಾಯನ ಆಳ್ವಿಕೆಯಲ್ಲಿ ೧೦೧ ವಿರಕ್ತರು ಇದ್ದರು. ಅವರಲ್ಲಿ ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ, ಚಾಮರಸನ ಪ್ರಭುಲಿಂಗಲೀಲೆ ಪ್ರಮುಖವಾದವುಗಳು. ಕಲ್ಲು ಮಠದ ಪ್ರಭುದೇವನ ಲಿಂಗಲೀಲಾ ವಿಲಾಸ, ಬತ್ತಲೇಶ್ವರನ ರಾಮಾಯಣ, 'ಕರಸ್ಥಲನಾಗಿದೇವನ ತ್ರಿಪದಿ' ಹಾಗೂ ಚಂದ್ರಕವಿಯ 'ಗುರುಮೂರ್ತಿ ಶತಕ' ಮುಂತಾದವು ರಚನೆಯಾಗಿವೆ. ಇದಲ್ಲದೆ ಬುಕ್ಕರಾಯನ ಮಗ ಕೆಂಪರಾಯನ(ಕೆಂಪಣ್ಣ) ಹೆಂಡತಿ ಗಂಗಾದೇವಿಯು ಸಂಸ್ಕೃತದಲ್ಲಿ 'ಮಧುರಾವಿಜಯ' ಅಥವಾ ವೀರ ಕಂಪಣ್ಣರಾಯ ಚರಿತಂ ಬರೆದಿದ್ದಳು. ಇವಳೆ ಮೊಟ್ಟಮೊದಲು ಸಂಸ್ಕೃತದಲ್ಲಿ ಕೃತಿ ರಚಿಸಿದ ಮಹಿಳಾ ಲೇಖಕರಲ್ಲಿ ಒಬ್ಬರೆನ್ನಬಹುದು. ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅಷ್ಟದಿಗ್ಗಜ ಸಾಹಿತಿಗಳು ಇದ್ದರು. ಇವರೊಂದಿಗೆ ರಾಜನೇ ಕೆಲವು ಕೃತಿಗಳನ್ನು ರಚಿಸಿದನು. ಅವುಗಳಲ್ಲಿ ಅಮುಕ್ತ ಮೌಲ್ಯದ, ರಸಮಂಜರಿ, ಮದಾಂಸ ಚರಿತ್ರಂ, ಜ್ಞಾನ ಚಿಂತಾಮಣಿ, ಸತ್ಯವಧು ಸಾಂತ್ವಾನ ಹಾಗೂ ಜಾಂಬವತಿ ಕಲ್ಯಾಣವನ್ನು ನೋಡ ಬಹುದು. ಈತನ ಆಸ್ಥಾನದ ಕವಿಗಳಲ್ಲಿ ಪ್ರಮುಖರಾದವರೆಂದರೆ ಅಲ್ಲಸಾನಿಪೆದ್ದಣ್ಣ, ನಂದಿ ತಿಮ್ಮಣ್ಣ, ದೂರ್ಜಟಿ, ರಾಮಭಕ್ತಕವಿ, ಪೊನ್ನ ವೀರಭದ್ರ, ಡಿಂಡಿಮರಾಜನಾಥ, ತಿಮ್ಮರಸು, ನಾಟ್ಯಾಚಾರ್ಯ, ಪಿಂಗಳಸೂರನ್ನ ಮುಂತಾದವರು. ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ ಅಲ್ಲದೆ ವಿದ್ಯಾರಣ್ಯ, ವ್ಯಾಸರಾಯ, ಶ್ರೀಪಾದರಾಯರು, ಪುರಂದರದಾಸರು, ಕನಕದಾಸರು, ಸರ್ಪಭೂಷಣ ಶಿವಯೋಗಿಗಳು ಕಂಡು ಬರುತ್ತಾರೆ. ಇದರಲ್ಲಿ ವ್ಯಾಸರಾಯರು, ಕನಕದಾಸರು, ಪುರಂದರದಾಸರು ಹೊರಗಿನವರಾದರೂ ಹಂಪೆಯಲ್ಲಿ ಕೃತಿ ರಚಿಸತೊಡಗಿದರು. ೧೧ನೇ ಶತಮಾನದಲ್ಲಿ ಅಚ್ಯುತರಾಯನ ಆಸ್ಥಾನದಲ್ಲಿ ಕೃಷ್ಣದೇವರಾಯನ ಮಗಳಾದ ತಿರುಮಲಾಂಬಿಕೆ 'ವರದಾಂಬಿಕ ಪರಿಣಯ' ಎಂಬ ಚಂಪೂಕಾವ್ಯ ರಚಿಸಿದಳಂತೆ. ಇದೇ ಅವಧಿಯಲ್ಲಿದ್ದ ಮಧುರವಾಣಿ ಎಂಬ ಕವಿಯತ್ರಿಯು ಇದ್ದಳು. ಚಾಟುವಿಠಲನಾಥನ ಭಾಗವತ, ಅದೃಶ್ಯ ಕವಿಯ ಪ್ರೌಢರಾಯ ಕಾವ್ಯ, ದೇವರಾಜನ ಸೊಬಗಿನ ಸೋನೆ, ಅಮರಶತಕಗಳು ರಚನೆಯಾಗಿದ್ದು ಕಂಡುಬರುತ್ತದೆ.

೧೯ನೇ ಶತಮಾನದಲ್ಲಿ ಕನ್ನಡ, ತೆಲಗು ಸಾಹಿತ್ಯ ಕೃತಿಗಳು ಬೆಳಕಿಗೆ ಬಂದವು. ಇದರಲ್ಲಿ ಆಂಧ್ರ ಕರ್ನಾಟಕ ಪಿತಾಮಹ ಎನಿಸಿದ ಕೃಷ್ಣಮಾಚಾರುಲು, ಕೋಲಾಚಲಂ ಶ್ರೀನಿವಾಸರಾವ್ ಹಾಗೂ ಕೆ.ಎಂ.ಕರಿಬಸವಪ್ಪ ಶಾಸ್ತ್ರಿಗಳನ್ನು ಗಮನಿಸಬಹುದು. ಈ ಸಮಯದಲ್ಲಿ ಅನೇಕ ಶಿವಶರಣರು ಅನುಭಾವಿಗಳಾದ ಹಲವಾರು ಅವಧೂತರೂ ಇದ್ದರು. ಅವರಲ್ಲಿ ಚಿದಾನಂದ ಅವಧೂತ, ಚೆನ್ನವೀರೇಶ, ಕುರುಗೋಡು ಬಸವ, ಕುರುಗೋಡು ನೀಲಮ್ಮ, ಗದ್ದಿಕೇರಿ ದೊಡ್ಡಬಸಪ್ಪ, ಮೈಲಾರ ಬಸವಲಿಂಗಗಳು, ಚಿತ್ತವಾಡ್ಗಿ ಕಲ್ಮಠೇಶ್ವರ, ಕಾನಾಮಡುಗು ಶರಣಪ್ಪ, ಗೂಳ್ಯಂ ಗಾದಿಲಿಂಗಪ್ಪ, ಕುಡುತಿನಿ ನಯನಸ್ವಾಮಿ ಬಸವಣ್ಣ, ಚಳುಗುರುಕಿ ಎರ್ರಿತಾತ, ಆದವಾನಿ ಲಕ್ಷ್ಮಮ್ಮ, ಶಿವರಾಮ ಅವಧೂತ, ಗಡಗಿಪರಪ್ಪ, ದಮ್ಮೂರು ವೆಂಕಪ್ಪ, ಗೋಣಿ ಬಸವೇಶ್ವರ ಮುಂತಾದವರನ್ನು ಗುರುತಿಸಲಾಗುತ್ತದೆ. ಬಳ್ಳಾರಿಯ ರಾಘವಾಂಕ ಸ್ವಾಮಿ ಮುಂತಾದವರು ೨೦ನೇ ಶತಮಾನದ ಕಾಲಾವಧಿಯಲ್ಲಿದ್ದರು. ಈ ಶತಮಾನದ ಅಂತ್ಯದಲ್ಲಿ ಹರಪನಹಳ್ಳಿ ಭೀಮವ್ವ 'ಭೀಮೇಶ

ಕೃಷ್ಣ' ಎಂಬ ಅಂಕಿತದಿಂದ ಕೀರ್ತನೆ ಹಾಗೂ ಗೀತೆಗಳನ್ನು ರಚಿಸಿದ್ದಾರೆ. ಅಂತೆಯೇ ಓರುವಾಯಿ ಲಕ್ಷ್ಮಮ್ಮ ಎಂಬುವರು ಭಕ್ತಿ ಪೂರ್ವಕವಾಗಿ ಹಾಡುಗಳನ್ನು ರಚಿಸಿದರೆಂದು ತಿಳಿದು ಬರುತ್ತದೆ.

೨೦ನೇ ಶತಮಾನದ ಆರಂಭದಲ್ಲಿ ಆನೇಕ ಪಂಡಿತರ ಪರಂಪರೆಯ ಚಳುವಳಿಯೇ ಆಗಮಿಸಿ ದಂತಾಯಿತು. ಆ ಅವಧಿಯಲ್ಲಿ ವೈ.ನಾಗೇಶ ಶಾಸ್ತ್ರಿ, ಸರ್ವದರ್ಶನ ತೀರ್ಥರು ಕನ್ನಡ ಮರಾಠಿ, ತೆಲಗು, ಹಿಂದಿ, ಬಂಗಾಲಿ ಇಂಗ್ಲಿಶ್‌ನಲ್ಲಿ ಕೃತಿ ರಚನೆ ಮಾಡತೊಡಗಿದರು. ಅವರ ಗವಿಸಿದ್ದೇಶ್ವರ ಪುರಾಣ, ಷಟ್‌ಸ್ಥಲ ಸಿದ್ಧಾಂತ. ಅರ್ಧನಾರೇಶ್ವರ ಪುರಾಣ, ವಿಜಯನನ ಅಭ್ಯುದಯ(ನಾಟಕ) ನೀತಿ ಮಣಿ ಕೃತಿಗಳನ್ನು ಬರೆದರು. ಬೈಲೂರಿನ ಗುರುಸಂಗಮೇಶ್ವರ ಶಾಸ್ತ್ರಿಗಳು ಕನ್ನಡ ಪಂಡಿತರಾಗಿ ಇಂಗ್ಲಿಶ್, ತೆಲುಗು ಸಾಹಿತಿಗಳಾಗಿದ್ದರು. ಪಿ.ಶ್ಯಾಮರಾಯರು ಆದಿಶಂಕರಾಚಾರ್ಯರ ಆನಂದಲಹರಿಯನ್ನು ಅನುವಾದಿಸಿದರು. ಬಳ್ಳಾರಿ ಜಿಲ್ಲೆಯ ಹಾಸ್ಯ ಸಾಹಿತಿ ಎಂದೇ ಹೆಸರು ಪಡೆದ ಆರ್.ಭೀಮಸೇನರಾಯರು ಬೀಚಿ ಎಂಬ ಕಾವ್ಯನಾಮದಿಂದ ಸಾಹಿತ್ಯ ರಚನೆ ಯಲ್ಲಿ ತೊಡಗಿದರು. ಇವರ ತಿಮ್ಮನ ಪದಗಳು ಇಂದಿಗೂ ಮಾದರಿಯಾಗಿವೆ. ಅಲ್ಲದೆ ಇವರು ಕನ್ನಡ ಎಮ್ಮೆ ಹಾಗೂ ಹಲವಾರು ಹಾಸ್ಯ ಪ್ರಸಂಗಗಳ ತುಣುಕುಗಳಂತೂ ಮನಪುಳಕಿತವಾಗುವಂತೆ ಮಾಡುತ್ತವೆ. ಶ್ರೇಷ್ಠ ನಾಟಕಕಾರರೂ, ಗಮಕಿಗಳೂ ಆದ ಜೋಳದರಾಶಿ ದೊಡ್ಡನ ಗೌಡರು ಕನ್ನಡ ಸಂಸ್ಕೃತಗಳೆರಡರಲ್ಲಿ ಅಪಾರ ಪಾಂಡಿತ್ಯ ಗಳಿಸಿದ್ದರು. ಇವರು ಬಳ್ಳಾರಿ ಜಿಲ್ಲೆಯ ಜೋಳದರಾಶಿಯವರು. ಇವರೊಂದಿಗೆ ಕಪ್ಪಗಲ್ ಸಂಜೀವಮೂರ್ತಿ, ಕೊಟ್ರಬಸಯ್ಯ, ಸೋಗಿ ಭಾಸ್ಕರಾಚಾರ್ಯ, ಕೆ.ವಿರುಪಾಕ್ಷಗೌಡ, ಹಿ.ಮ.ನಾಗಯ್ಯ, ಕೋ.ಚೆ., ರಾಮಾಶಾಸ್ತ್ರಿಗಳು ಮುಂತಾದ ಸಾಹಿತಿಗಳು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಇವರಲ್ಲದೆ ಭಾರತದ ರಾಷ್ಟ್ರಾಧ್ಯಕ್ಷರಾದ ವಿ.ವಿ.ಗಿರಿಯವರ ಪತ್ನಿ ಸರಸ್ವತಿಬಾಯಿ ಗಿರಿಯವರು ಬಳ್ಳಾರಿ ಸಂಪರ್ಕವಿಟ್ಟು ಕೊಂಡವರು. ಇವರು ಹಲವಾರು ತೆಲುಗು ಭಕ್ತಿಗೀತೆಗಳನ್ನು ರಚಿಸಿದರಂತೆ. ಇದರೊಂದಿಗೆ ಬೀಜಾಕ್ಷರದ ಮೇಲೆ ಶಿವಸ್ತುತಿ, ಜೀವಿತ ಸ್ವರ್ಗ ಭೀಮ ಮೊದಲಾದವನ್ನು ಬರೆದರು. ಅಲ್ಲದೆ ಬೆಳಗೆರೆ ಜಾನಕಮ್ಮನವರು ಕಥೆ, ಕಾವ್ಯ ರಚಿಸಿದರೆ, ಬಳೇಗಾರ ಲಕ್ಕಮ್ಮ ಉತ್ತಮ ಲೇಖಕಿಯಾಗಿದ್ದರು. ರಾಮಸಾಗರದ ಸಾಲಿ ವೆಂಕಣ್ಣನವರು ಪಂಡಿತರಾಗಿದ್ದರು. ಈಚಗೆ ಹಲವಾರು ಸಾಹಿತಿಗಳು ಕೃತಿಗಳನ್ನು ರಚಿಸುತ್ತಿದ್ದಾರೆ. ಈ ಜಿಲ್ಲೆಯು ಕರ್ನಾಟಕ ಸಂಗೀತ, ರಂಗಭೂಮಿ, ಪತ್ರಿಕೋದ್ಯಮ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಖ್ಯಾತಿ ಪಡೆದಿದೆ. ೧೪೫೦ ರಲ್ಲಿದ್ದ ಸಾರಂಗದೇವನ ಸಂಗೀತರತ್ನಾಕರ ಇವರೊಂದಿಗೆ ಕೃಷ್ಣದೇವರಾಯನ ಆಸ್ಥಾನಗಳಲ್ಲಿದ್ದ ರಾಘುವೇಂದ್ರಸ್ವಾಮಿಗಳ ದೊಡ್ಡಪ್ಪನವರಾದ ಕೃಷ್ಣ ಭಟ್‌ರವರು ವಿದೂಷಿಗಳಲ್ಲೊಬ್ಬರು. ಇವರಲ್ಲದೆ ಶ್ರೀಪಾದರಾಯರು, ವ್ಯಾಸರಾಯರು, ಪುರಂದರದಾಸರು, ಕನಕದಾಸರು ಹಂಪೆಯಲ್ಲಿ ಉಳಿದುಕೊಂಡು ಕರ್ನಾಟಕ ಸಂಗೀತ ಸೇವೆ ಸಲ್ಲಿಸಿದವರು. ಸುಭದ್ರಮ್ಮ ವೆಂಕಟಪ್ಪ(ವೀಣಾವಾದನ), ಜಿ.ಮರಿಯಣ್ಣ(ಮೃದಂಗ), ಕೆ.ಸೀತಾರಾಮಶಾಸ್ತ್ರಿ (ವಾದಕ) ಜಯರಾಮ ಚಂದ್ರಯ್ಯನವರು ಆಕಾಶವಾಣಿ ಕಲಾವಿದರಾಗಿದ್ದರು.

ಇನ್ನು ಸಾಹಿತ್ಯವನ್ನು ಹೇಳುವುದಾದರೆ ಕುಡುತಿನಿ ಭೀಮೇಶನನ್ನು ನೆನೆಯದೆ ಇದ್ದರೆ ಸಾರ್ಥಕವಾಗುದಿಲ್ಲ ವೆಂದು ಹೇಳಬಹುದು. ನಾಟಕ ಸಾಹಿತ್ಯಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಅಪಾರವಾದ ಕೃಷಿ ನಡೆದಿದೆ. ಹೆಸರುವಾಸಿ ನಾಟಕಕಾರರಲ್ಲಿ ಸಾಲಿವೆಂಕಣ್ಣ, ತೆಲಗಿ ವೀರಣ್ಣ, ದೊಡ್ಡ ಕವಿ ಕುರುಗೋಡು ಕೃಷ್ಣಮಾಚಾರ್, ಟಿ.ರಾಘವಾಚಾರ್, ಬಲಕುಂದಿ ಓಬಳಶಾಸ್ತ್ರಿ, ದೊಡ್ಡನಗೌಡ ಮುಂತಾದವರನ್ನು ಗುರುತಿಸಬಹುದು. ೧೮೯೦ರಲ್ಲಿ ಸರಸ ವಿನೋದಿನಿಸಭಾ ಸ್ಥಾಪನೆ, ೧೯೧೨ರಲ್ಲಿ ವೀರಭದ್ರ ಬಸವೇಶ್ವರ ನಾಟಕ ಮಂಡಳಿ ಸ್ಥಾಪನೆ, ಬೆಂಗಳೂರು ಆಮೇಚೂರ್ ನಾಟಕ ಅಸೋಸಿಯೇಷನ್, ೧೯೫೪ ರಂದು ಕಲಾಮಂದಿರ ಸ್ಥಾಪಿಸಿದರು. ಈ ಭಾಗದಲ್ಲಿದ್ದ ಮಹಿಳಾ ರಂಗ ನಟಿಯರು ಹಲವರಿದ್ದಾರೆ. ಬಳ್ಳಾರಿ ಲಲಿತಮ್ಮ, ಆದವಾನಿ ಲಕ್ಷ್ಮಮ್ಮ, ಮನಸೂರ್ ಸುಭದ್ರಮ್ಮ, ಕೆ.ನಾಗರತ್ನಮ್ಮ ಮುಂತಾದವರು ಕಂಡುಬರುತ್ತಾರೆ.(ಹೆಚ್ಚಿನ ವಿವರಣೆಗಾಗಿ ಈ ಭಾಗದ ಬಳ್ಳಾರಿ ಜಿಲ್ಲೆಯ ರಂಗಭೂಮಿಯನ್ನು ನೋಡಿ) ಕೂಡ್ಲಿಗಿ, ವಿರೂಪಾಪುರ, ಬಳ್ಳಾರಿ, ಕಪ್ಪಗಲ್ಲು, ಶಿರಗುಪ್ಪ, ಮರಿಯಮ್ಮನಹಳ್ಳಿ, ಸೋಗಿ ಮುಂತಾದ ಕಡೆ ನಾಟಕ ಆಡುವ ಕಲಾವಿದರು ಅಧಿಕ ಸಂಖ್ಯೆಯಲ್ಲಿದ್ದಾರೆ. ಈಗಲೂ ಹಬ್ಬ, ಹುಣ್ಣಿಮೆ, ಆಚರಣೆ, ಉತ್ಸವ ಸಂದರ್ಭಗಳಲ್ಲಿ ಮಹಾಭಾರತ, ರಾಮಾಯಣದ ಘಟನೆಗಳನ್ನಾಧರಿಸಿದ ಬಯಲು ನಾಟಕಗಳನ್ನು ಆ ಗ್ರಾಮದ ಜನರೇ ಪ್ರದರ್ಶಿಸುತ್ತಾರೆ. ಈ ಹವ್ಯಾಸಿ ಕಲಾವಿದರು ಪ್ರತಿ ವರ್ಷವು ಬಳ್ಳಾರಿ ಜಿಲ್ಲೆಯಲ್ಲಿ ತಪ್ಪದೇ ನಾಟಕಗಳನ್ನು ಆಡುತ್ತಾರೆ.

೨.೫.೧. **ಬಳ್ಳಾರಿ ಜನಪದ ಸಾಹಿತ್ಯ :** ಬಳ್ಳಾರಿ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಜನಪದ ಸಾಹಿತ್ಯ ಸಂಗ್ರಹಿಸಿ ದವರೆಂದರೆ, ಚಿಗಟೇರಿಯ ಮುದೇನೂರು ಸಂಗಣ್ಣನವರು, ನವಿಲು ಕುಣಿದಾವೋ, ಹಳ್ಳಿಯ ಪದಗಳು, ಗೊಂದಲಿಗರ ದೇವೇಂದ್ರಪ್ಪನ ಆಟಗಳು, ಗೊಂಬಿ ಗೌಡರ ಸೂತ್ರದ ಗೊಂಬೆ ಆಟಗಳು, ಚಿಗಟೇರಿ ಪದಕೋಶ, ಜನಪದ ಮುಕ್ತಕಗಳು, ಲಕ್ಷಾಧಿಪತಿ ರಾಜ, ರಸವಾಳ ರಾಜ ಈ ಎಲ್ಲಾ ಜನಪದ ಸಂಗ್ರಹಗಳನ್ನು ಸಂಪಾದಿ ಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ರಾಜ್ಯ ಪ್ರಶಸ್ತಿ ಗೌರವಕ್ಕೆ ಸಂಗಣ್ಣ ನವರು ಪಾತ್ರರಾಗಿದ್ದಾರೆ.

ಬಾಚಿಕೊಂಡನಹಳ್ಳಿಯ ಕೆ.ವಿರೂಪಾಕ್ಷಗೌಡ, ಕಲ್ಲೇಶ ಇಟಗಿ, ಪಿ.ಕರಿವೀರಣಗೌಡರೊಂದಿಗೆ, ಹೊಲಮನೆ ಪದಗಳು, ನಮ್ಮ ಹಳ್ಳಿಯ ಪದಗಳು, ನಮ್ಮ ಹಳ್ಳಿ ಕಥೆಗಳು ಕೃತಿಗಳನ್ನು ಹೊರತಂದಿದ್ದಾರೆ. ಜನಪದ ಪರಿಚಯ ಪುಸ್ತಕ, ಮುತ್ತು ಹವಳ ಈ ಗ್ರಂಥಗಳನ್ನು ಗುರುಮೂರ್ತಿ ಪೆಂಡಕೂರರೊಂದಿಗೆ ತಂದಿದ್ದಾರೆ. ನಡಿಯಪ್ಪ ನಮ್ಮ ನಾಡಿಗೆ ಮೇಟಿ ಕೊಟ್ರಪ್ಪರೊಂದಿಗೆ ಸಂಗ್ರಹಿಸಿದ್ದಾರೆ. ಕಲೆ ಮತ್ತು ಕಲಾವಿದರ ಪರಿಚಯ ಪುಸ್ತಕವಾದ 'ಯಡ್ರಾಮನಹಳ್ಳಿ ದೊಡ್ಡ ಭರ್ಮಪ್ಪನ ತೊಗಲುಗೊಂಬೆ ಆಟ' ಎಂಬ ಪ್ರವಾಸ ಕಥನ ಹುರುಕಡ್ಲಿ ಶಿವಕುಮಾರರೊಂದಿಗೆ ಸಂಪಾದಿಸಿ ಪ್ರಕಟಿಸಿದ್ದಾರೆ.

ಬಯಲಾಟವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ ಬಸವರಾಜ ಮಲಶೆಟ್ಟರು 'ಉತ್ತರ ಕರ್ನಾಟಕದ ಬಯಲಾಟ'ಗಳು 'ಇಜಿಯಣ್ಣನ ಹಾಡು' ಈ ಸಂಗ್ರಹವನ್ನು ಸಂಪಾದಿಸಿದ್ದಾರೆ. ಉಡುಪಿಯ

ಎಸ್.ಎ.ಕೃಷ್ಣಯ್ಯ ಇವರು ಬಾಚಿಕೊಂಡನ ಹಳ್ಳಿ, ಏಣಗಿ ಬಸಾಪುರದ ಜಾನಪದ ಗೀತೆಗಳು, ಎಂಬ ಪುಸ್ತಕ ಗಳನ್ನು ಹೊರತಂದಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಟಿ.ಎಸ್.ರಾಚಪ್ಪ 'ಬಳ್ಳಾರಿ ಜಿಲ್ಲೆಯ ಜಾನಪದ ಗೀತೆಗಳು' ಈ ಸಂಕಲನ ಸಂಪಾದಿಸಿದ್ದಾರೆ. ಅಡ್ನಂಗಡಿ ಕೊಟ್ರಪ್ಪ ಇವರು 'ಭದ್ರೇರು'ಹಸೆಯ ಬರೆದಿದ್ದಾರೆ. ಎಸ್.ಎಸ್.ಹಿರೇಮಠರು ಹಬ್ಬಗಳು, ಜಾತ್ರೆಗಳು, ಮಾನವಪದ ಶಾಸ್ತ್ರ, ಇವುಗಳಲ್ಲದೆ ಹೆಚ್.ಬಾಲರಾಜರೊಂದಿಗೆ ಕ್ಯಾದಿಗಿಹಳ್ಳಿ ಅಂಬವ್ವನ ಪದಗಳು ಇವುಗಳನ್ನು ಸಂಗ್ರಹಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಬಯಲಾಟವನ್ನು ಶಾಸ್ತ್ರೀಯವಾಗಿ ಅಧ್ಯಯನಕ್ಕೊಳಪಡಿಸಿದ ಇನ್ನೊಬ್ಬರೆಂದರೆ ಡಾ.ಕೆ.ಆರ್.ದುರ್ಗಾದಾಸರು. ನಂತರ ಶಿವಲಿಂಗ ಶೆಟ್ಟಿ, ಎಸ್.ತಿಪ್ಪೇಗೌಡ, ಬಣಗಾರ ಹೊನ್ನಪ್ಪ, ಬೈಲೂರಿನ ಯಮುನಪ್ಪ, ಉತ್ತಂಗಿ ಷಣ್ಮುಖಪ್ಪ, ಕರಾಕ್ರ, ಮೃತ್ಯಂಜಯ ಹೊರಕೇರಿ, ಎಂ.ಬಿ.ನೇಗಿನಹಾಳ ಇವರೆಲ್ಲರೂ ಜಾನಪದ ಸಾಹಿತ್ಯಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ.

ಹಡಗಲಿಯ ಡಾ.ಕೆ.ರುದ್ರಪ್ಪ ಇವರು ಬಳ್ಳಾರಿಯ ಜಿಲ್ಲೆಯ ಜನಪದ ಸಾಹಿತ್ಯ ಎಂಬ ಪುಸ್ತಕ ಪ್ರಕಟಿಸಿ ದ್ದಾರೆ. ತೀರ ಇತ್ತೀಚಿಗೆ ಶ್ರೀಮತಿ ಸುಜಾತ ಅಕ್ಕಿಯವರು ತಮ್ಮ ತಾಯಿ ಹಾಡುವ ಹಾಡುಗಳನ್ನು ಸುರಗಿ ಸುವ್ವಾಲೆ ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ಜಾನಪದ ಗಾಯಕಿ, ಗಾಯಕರೂ ಇದ್ದಾರೆ. ಗುಡಿಹಿಂದ್ಲ ಪಕ್ಕೀರಪ್ಪ, ಬಾಚಿಕೊಂಡನ ಹಳ್ಳಿ, ದರೋಜಿ ಬುರ್ರಕಥಾ ಈರಮ್ಮ ಇನ್ನೂ ಮುಂತಾದ ಹಲವಾರು ಕಲಾವಿದರಿದ್ದು ತಮ್ಮದೇ ಆದ ಸೇವೆಯನ್ನು ಜಾನಪದದ ನೆಲೆಯಲ್ಲಿ ಮಾಡುತ್ತಲಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಜನಪದ ಸಾಹಿತ್ಯವು ವಿಪುಲವಾಗಿ ಕಂಡು ಬರುತ್ತದೆ. ಈ ಭಾಗದಲ್ಲಿ ಅನೇಕ ಜನಪದ ಮುಕ್ತಕಗಳು, ಕಥನ ಗೀತೆ, ಕಥೆಗಳು, ಕಾವ್ಯಗಳನ್ನು ಹಾಡುವ ಜನಪದ ಗಾಯಕರು ಎಲೆ ಮರೆಯ ಕಾಯಿಯಂತೆ ಇದ್ದಾರೆ. ಕನಿಷ್ಟ ೫೦೦ ಜನ ಜನಪದ ಕಲಾವಿದರನ್ನು ಕನ್ನಡ ಸಂಸ್ಕೃತಿ ಇಲಾಖೆ ಗುರುತಿಸಿದೆ. ಇವರಲ್ಲದೆ ಈಗಾಗಲೇ ಪ್ರಶಸ್ತಿಗಳನ್ನು ಅದರಲ್ಲೂ ರಾಜ್ಯ ಪ್ರಶಸ್ತಿಯನ್ನು ಪಡೆದ ದರೋಜಿ ಈರಮ್ಮ ಜಿಲ್ಲೆಯ ಜನಪದ ಗಾಯಕರಲ್ಲಿ ಒಬ್ಬರಾಗಿದ್ದಾರೆ. ಅಲ್ಲದೆ ರಾಮಸಾಗರದ ಚೌಡಮ್ಮ, ಮಾರೆಮ್ಮ, ಹಂಪಮ್ಮ, ಗಾಳೆಮ್ಮ, ಮೊಳಮ್ಮ ಹಾಗೂ ನಾಗೇನಹಳ್ಳಿಯ ಮಾದೆಮ್ಮ, ಬಳ್ಳಾರಿಯ ದೊಡ್ಡ ಹುಲಿಗೆಮ್ಮ ಇನ್ನೂ ಮುಂತಾದ ಜನಪದ ಗಾಯಕರನ್ನು ಕಾಣುತ್ತೇವೆ. ಇಲ್ಲಿ ಎಲ್ಲಮ್ಮನ ಕಾವ್ಯ, ಕಾಳಿಂಗರಾಯನ ಕಾವ್ಯ, ದುರುಗಮ್ಮನ ಕಥನ ಗೀತೆ, ಕಾಶಿಬಾಯಿಯ ಕಥನ ಗೀತೆ, ಮೈಲಾರನ ಲಿಂಗನ ಕಾವ್ಯ, ಗಾದೆ, ಒಗಟು, ಒಡಪುಗಳು ಯಥೇಚ್ಛವಾಗಿ ಬಳಕೆಯಲ್ಲಿವೆ. ಇದರೊಂದಿಗೆ ನಂಬಿಕೆ ಸಂಪ್ರದಾಯಗಳಿಂದ ಆಚರಣೆ ಗಳು ರೂಢಿಯಲ್ಲಿವೆ. ಪದ್ಮಮ್ಮ ಕಪ್ಪಗಲ್, ಜೋಗತಿ ಕಾಳವ್ವ, ಕೂಡ್ಲಿಗಿಯ ಪದ್ಮ ಇವರಿಗೆ ಈ ಬಾರಿ ಜಾನಪದ ಅಕಾಡೆಮಿ ಪ್ರಶಸ್ತಿ ದೊರೆತಿದೆ.

೨.೬. ಸಾಮಾಜಿಕ ಜೀವನ

ಬಳ್ಳಾರಿ ಜಿಲ್ಲೆ ಹಲವು ಹಳ್ಳಿಗಳನ್ನೊಳಗೊಂಡಿದ್ದು ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ತನ್ನದೇ ಆದ ಅನನ್ಯತೆಯನ್ನು ಪಡೆದಿದೆ. ಗ್ರಾಮೀಣ ಪರಿಸರಕ್ಕೆ ಒಗ್ಗಿಕೊಂಡ ಹಲವಾರು ಜನರು ಅವಿಭಕ್ತ ಕುಟುಂಬದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಪುರಾತನ ಧರ್ಮ ಪಾಲನೆಯುನ್ನು ಒಳಗೊಂಡು ಅದರಲ್ಲೂ ಬಾಲ್ಯವಿವಾಹ, ಬಹುಪತ್ನಿತ್ವ, ದೇವದಾಸಿ ಪದ್ಧತಿ, ಬಸವಿ ಪದ್ಧತಿ ರೂಡಿಯಲ್ಲಿದ್ದು, ಇದು ಈಗಲೂ ಮುಂದುವರೆದಿದೆ. ಈ ಭಾಗದ ಜನತೆ ವಾಸಿಸುವ ಮನೆಗಳನ್ನು ಜೋಳದ ದಂಟು, ಗಿಡಮರ, ಪೊಟರೆ, ರೆಂಬೆ-ಕೊಂಬೆ, ಬೊಂಬೆಗಳೇ ಆಶ್ರಯ ತಾಣಗಳಿಗೆ ಬಳಸುವ ಸಾಮಗ್ರಿಗಳು. ಇಂಥ ಕಟ್ಟಿಗೆಯಿಂದ ಗೋಡೆಗಳನ್ನು ನಿರ್ಮಿಸಿ ಹಸಿ ಮಣ್ಣು ಮೆತ್ತಿ ಗೋಡೆ ನಿರ್ಮಿಸಿಕೊಂಡು ಗುಡಿಸಲುಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇನ್ನೂ ಹಲವು ಮಣ್ಣಿನ ಇಟ್ಟಿಗೆಗಳನ್ನು ಬಳಸಿ ದೇಶಿ ಹೆಂಚುಗಳಿಂದ ಮೇಲ್ಚಾವಣಿಯನ್ನು ಮುಚ್ಚಿದ್ದಾರೆ. ನಿಸರ್ಗದಿಂದಲೇ ದೊರೆಯುವ ಮರ-ಮುಟ್ಟುಗಳಿಂದ ಬಾಗಿಲುಗಳನ್ನು ರಚಿಸಿಕೊಂಡು ಕನಿಷ್ಟ ಮಟ್ಟದ ಸೌಕರ್ಯಗಳನ್ನು ಬಳಸಿಕೊಂಡು ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ. ಪಟ್ಟಣದ ಜನತೆಯು ಸಿಮೆಂಟ್, ಇಟ್ಟಿಗೆ ಕಲ್ಲುಗಳಿಂದ, ಆರ್.ಸಿ.ಸಿ. ಕಡಪ ಕಲ್ಲುಗಳಿಂದ ಮನೆಗಳನ್ನು ಕಟ್ಟಿಕೊಂಡು ಮನೆಗಳಿಗೆ ಸಾಕಷ್ಟು ವಿಶಾಲ ಕೋಣೆಗಳು ಮತ್ತು ಗಾಳಿ ಬೆಳಕಿಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇಲ್ಲಿಯ ಜನರ ಉಡುಗೆ-ತೊಡುಗೆಯು ಸಾಮಾನ್ಯವಾಗಿದೆ. ಪಟ್ಟಣದ ಶೈಲಿಯ ಸೋಗಿಗೆ ಮಾರುಹೋಗುವ ಅನೇಕ ಹಳ್ಳಿಗಳು ಇಂದು ಮಾರ್ಪಾಡು ಹೊಂದಿವೆ. ಮೊದಮೊದಲು ಲುಂಗಿ, ಜುಬ್ಬ, ಒಳಅಂಗಿ, ಪೂರ್ತಿ ಜುಬ್ಬಾ, ಹೆಗಲ ಮೇಲೆ ಶಾಲು ಹಾಕುತ್ತಿದ್ದರು. ಈಗ ಅಧುನಿಕ ಶೈಲಿಯ ಜೀನ್ಸ್ ಪ್ಯಾಂಟ್ ಶರ್ಟ್‌ಗಳನ್ನು ಗಂಡುಮಕ್ಕಳು, ಹೆಣ್ಣು ಮಕ್ಕಳು ಧರಿಸುತ್ತಿದ್ದಾರೆ. ತೀರಾ ಹಳೆಯದಾದ ಬೆಲ್‌ಬಾಟಮ್ ಪ್ಯಾಂಟ್ ಇಂದು ಫ್ಯಾಷನ್ ಮಾದರಿಯಾಗಿದೆ. ಮಹಿಳೆಯರು ಧರಿಸುವ ಉಡುಪುಗಳಲ್ಲಿ ವಾಯಿಲ್, ಜಾರ್ಜೆಟ್, ಟರಿಲೀನ್, ಶಿಫಾನ್, ರೇಷ್ಮೆ ಬಟ್ಟೆ, ಕಾಟನ್‌ಗಳನ್ನು ದೈನಂದಿನ ಉಡುಗೆಗೆ ಬಳಸುತ್ತಾರೆ. ಹಾಗೆಯೇ ಬೆಡಗಿನ ಹೈ ಹೀಲ್ಸ್ ಪಾದರಕ್ಷೆಗಳನ್ನು ಮೆಟ್ಟುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಆಹಾರ ವೈವಿಧ್ಯ ಪದ್ಧತಿಯಿಂದ ಕೂಡಿದೆ. ಸಸ್ಯಹಾರಿ, ಮಾಂಸಹಾರಿಗಳಿದ್ದಾರೆ. ಗ್ರಾಮೀಣ ನೆಲೆಯ ಕೃಷಿ ಕಸುಬುದಾರರೇ ಹೆಚ್ಚಾಗಿದ್ದಾರೆ. ಕೆಲವು ಮೇಲ್ವರ್ಗದವರು ಕೆಳವರ್ಗದವರೂ ಮಾಂಸಗಳನ್ನು ಸೇವಿಸುತ್ತಾರೆ. ಜೋಳದ ರೊಟ್ಟಿಯನ್ನೇ ಹೆಚ್ಚಾಗಿ ಬಳಸುತ್ತಿದ್ದು, ಅಕ್ಕಿ, ಗೋಧಿ, ರಾಗಿ ಮುದ್ದೆಯನ್ನು ಬಳಸುತ್ತಾರೆ.

ಜನ ಸಂಖ್ಯೆಯು ಸಾಮಾಜಿಕ ಜೀವನದಲ್ಲಿ ಮಹತ್ವವಾದ ಅಂಶವಾಗಿದೆ. ಆರ್ಥಿಕ ಅಭಿವೃದ್ಧಿಯ ಒನ್ನೆಡೆಗೆ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆ ಮುಖ್ಯ ಕಾರಣವಾಗಿದೆ. ನಮ್ಮ ರಾಜ್ಯದಲ್ಲಿ ಬಳ್ಳಾರಿ

ಜಿಲ್ಲೆಯ ಜನಸಂಖ್ಯೆಯ ದೃಷ್ಟಿಯಿಂದ ೧೧ನೇ ಸ್ಥಾನವನ್ನು ಪಡೆದಿದೆ. ೧೯೦೧ ರಿಂದಲೂ ಜನಸಂಖ್ಯೆಯು ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿಯಲ್ಲಿ ಸೂಚಿಸಿದಂತೆ ಅಧಿಕವಾಗುತ್ತಾ ಸಾಗಿದೆ. ಆದರೆ ೧೯೨೧ ರಲ್ಲಿ ಮಾತ್ರ ಜನಸಂಖ್ಯೆಯು ಏರಿಕೆ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಅಂಕಿ ಅಂಶಗಳಿಂದ ಕಂಡು ಬರುತ್ತದೆ. ಬಳ್ಳಾರಿ ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿ ಶೇ೪೩ರಷ್ಟು ಮಾತ್ರ ಜನಸಂಖ್ಯೆ ಸೇರ್ಪಡೆಯಾಗಿ ರುವುದು ಕಾಣುತ್ತದೆ.

ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನಸಂಖ್ಯೆಯು ೧೯೯೧ರಲ್ಲಿ ಈ ರೀತಿ ಇತ್ತು. ಪರಿಶಿಷ್ಟ ಜಾತಿಯ ಮಹಿಳೆ ೧,೫೪,೩೦೮ ಹಾಗೂ ಪುರುಷರು ೧,೫೬,೯೪೪ ಇಂದು ಒಟ್ಟು ಜನಸಂಖ್ಯೆ ೦೩,೧೧,೨೫೨ ಇತ್ತು ಪರಿಶಿಷ್ಟ ಪಂಗಡದ ಮಹಿಳೆ ೭೩,೪೬೭ ಇದ್ದರೆ. ಪುರುಷರು ೭೪,೪೦೩ ರಷ್ಟಿದ್ದಾರೆ. ಒಟ್ಟು ಜನಸಂಖ್ಯೆ ೧,೮೭,೮೬೯ ರಷ್ಟಾಗಿತ್ತು. ಇಲ್ಲಿ ಮಿತಿಮೀರಿ ಬೆಳೆಯುತ್ತಿರುವ ಜನ ಸಂಖ್ಯೆಗೆ ವಲಸೆ ಬರುತ್ತಿರುವ ಸಂಖ್ಯೆಯೂ ಕಾರಣವಾಗಿದೆ. ಅಲ್ಲದೆ ತಲವಾರ ಮಾನವು ೧೯೯೫-೯೯ ರಲ್ಲಿ ೦೮,೫೪೪ ರೂಪಾಯಿ ಇತ್ತು. ಜಿಲ್ಲಾ ವರಮಾನವು ೦೧,೧೨೬ ಕೋಟಿ ರೂಗಳಷ್ಟಾಗಿತ್ತೆಂದು ದಾಖಲೆಗಳು ತಿಳಿಸುತ್ತವೆ.

೨.೭. ಆರ್ಥಿಕ ಜೀವನ

ಬಳ್ಳಾರಿ ಜಿಲ್ಲೆಯಲ್ಲಿ ನೈಸರ್ಗಿಕ ಸಂಪನ್ಮೂಲವು ಹೇರಳವಾಗಿದೆ. ಹಾಗೂ ಹವಾಗುಣ ಪರಿಸರವು ಉತ್ತಮವಾಗಿದೆ. ಈ ಆರ್ಥಿಕ ಅಭಿವೃದ್ಧಿಗೆ ಸಂಪನ್ಮೂಲಗಳೇ ಹೆಚ್ಚು ಪ್ರಗತಿಗೆ ದಾರಿಯನ್ನು ಮಾಡಿ ಕೊಡುತ್ತವೆ. ಇಲ್ಲಿ ಮಾನವನ ದಕ್ಷತೆ, ಬಂಡವಾಳ ಮಹತ್ವವಾದ ಅಂಶಗಳಾಗಿವೆ. ಇಂಥ ಅಂಶಗಳ ಅಭಿವೃದ್ಧಿಗೆ ಒಂದು ಸೀಮಿತತೆ ಇರುತ್ತದೆ. ಅಲ್ಲದೆ ಈ ಬದಲಾವಣೆಯಲ್ಲಿ ಏರು ಪೇರುಗಳುಂಟು. ಆದರೂ ಅವುಗಳನ್ನು ಕಡೆಗಣಿಸುವಂತಿಲ್ಲ. ಆರ್ಥಿಕ ಅಭಿವೃದ್ಧಿಯು ಆಯಾ ಜಿಲ್ಲೆಯ ಆದಾಯ ಹಾಗೂ ತಲಾ ಆದಾಯಗಳು ಗಣನೀಯವಾದ ಪಾತ್ರವನ್ನು ವಹಿಸುತ್ತದೆ. ಬೆಲೆ ಹೆಚ್ಚಾದಂತೆ ಜನರ ಜೀವನ ಮಟ್ಟವೂ ಸುಧಾರಣೆಗೊಳ್ಳುತ್ತದೆ. ಅತೀ ಹೆಚ್ಚು ಜನರು ಗ್ರಾಮೀಣ ಜೀವನವನ್ನು ಅನುಸರಿಸುತ್ತಿರುವುದರಿಂದ ಅವರ ದಿನಗೂಲಿ, ಸಂಬಳ ಸಾರಿಗೆ ವ್ಯವಸ್ಥೆಗಳಲ್ಲಿ ಸ್ಥಿರತೆ ಇರುತ್ತದೆ. ಆದರೂ ಬೇಸಾಯ, ಕೈಗಾರಿಕೆ, ಸಾರಿಗೆ ಸಂಪರ್ಕ, ಶಿಕ್ಷಣ ಮಟ್ಟ, ಆರೋಗ್ಯ ಹಾಗೂ ಸಮಾಜದ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುತ್ತದೆ. ಇವೆಲ್ಲಕ್ಕೂ ಜಿಲ್ಲೆಯಲ್ಲಿ ಅತಿಯಾದ ನೈಸರ್ಗಿಕ ಸಂಪತ್ತಿದೆ.

ಸಾಮಾನ್ಯವಾಗಿ ಜನರ ಬಳಕೆಯ ವಸ್ತುಗಳಾದ ಆಹಾರ, ಬಟ್ಟೆಗಳಿಗಾಗಿ ಅಧಿಕವಾದ ಹಣವನ್ನು ವ್ಯಯ ಮಾಡುತ್ತಿರುವುದು ಸಾಮಾನ್ಯವಾಗಿದೆ. ಅಂತೆಯೇ ಔಷಧಿ, ಶಿಕ್ಷಣ ಮತ್ತು ವಸ್ತುಗಳ ಉಪಯೋಗದ ಪ್ರಮಾಣ ಕಡಿಮೆ. ಆದರೆ ಜನತೆ ಸಾಮಾಜಿಕ ಧಾರ್ಮಿಕ ಸಮಯದಲ್ಲಿ ಹೆಚ್ಚು ಹಣ ಮತ್ತು ಸಮಯವನ್ನು ವ್ಯರ್ಥ

ಮಾಡುವುದಲ್ಲದೆ ಅಧಿಕವಾದ ಹಣವನ್ನು ಹಾಳು ಮಾಡುತ್ತಿರುವುದು ಕಂಡು ಬರುತ್ತದೆ. ಇಲ್ಲಿ ಬರೀ ಜನರಷ್ಟೇ ಅಲ್ಲದೆ ನಮ್ಮ ಸರಕಾರವು ವಿದೇಶಗಳಿಂದ ಬಂಡವಾಳವನ್ನು ವಿಶ್ವಬ್ಯಾಂಕ್‌ನಿಂದ ಹಲವು ರೀತಿಯಲ್ಲಿ ಸಾಲ ಗಳನ್ನು ತೆಗೆದು ಕೊಳ್ಳುತ್ತಿರುವುದು ಗಮನಾರ್ಹ ಸಂಗತಿ.

ಇಲ್ಲಿ ಅತೀ ಹೆಚ್ಚು ಜನರು ಗ್ರಾಮೀಣ ಪರಿಸರದಲ್ಲಿ ವಾಸಿಸುತ್ತಿರುವುದರಿಂದ ಅವರಿಗೆ ಬೇಸಾಯ ಪ್ರಮುಖ ಕಸುಬಾಗಿದ್ದುದರಿಂದ ಆರ್ಥಿಕ ಹಿನ್ನಡೆಗೆ ಇದು ಕಾರಣವಾಗಿದೆ. ಶೇ.೭೫ ರಷ್ಟು ಜನರು ಇಲ್ಲಿ ಕಸುಬಿನಲ್ಲಿ ತೊಡಗಿಕೊಂಡಿದ್ದಾರೆ. ಇದರಿಂದ ಆದಾಯ ಮತ್ತು ಉದ್ಯೋಗ ನಿಶ್ಚಿತವಾಗಿರುತ್ತದೆ. ಅಲ್ಲದೆ ಗ್ರಾಮೀಣ ಭಾಗದಲ್ಲಿರುವ ಸಣ್ಣ ಪುಟ್ಟ ಹಿಡುವಳಿದಾರರು, ಕುಶಲ ಕರ್ಮಿಗಳು ತುಂಬಾ ದುರ್ಬಲರಾಗಿದ್ದಾರೆ.

ಮೈಸೂರು ಸಂಸ್ಥಾನದ ಅಧೀನಕ್ಕೊಳಪಟ್ಟಾಗ ಆರ್ಥಿಕತೆಯಲ್ಲಿ ಏರುಪೇರು ಇತ್ತು. ಇತರ ನಾಗರೀಕ ಸೌಲಭ್ಯಗಳ ಪ್ರದೇಶಗಳಿಗಿಂತ ಉತ್ತಮವಾಗಿತ್ತು. ಆದರೆ ಏಕೀಕರಣವಾದ ನಂತರ ಉತ್ತರ ಕರ್ನಾಟಕ ಪ್ರದೇಶದಲ್ಲಿ ವಿಲೀನವಾದಾಗ ಬರಪರಸ್ಥಿತಿಯನ್ನು ಅನುಭವಿಸಿತು. ಇಲ್ಲಿ ಜೋಳ, ಎಣ್ಣೆಕಾಳು, ಬೇಳೆಕಾಳು ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಇದರಲ್ಲಿ ಅಕ್ಕಿ, ಜೋಳ, ಮತ್ತು ಮೆಕ್ಕೆಜೋಳ ಮುಖ್ಯ ಆಹಾರ ಬೆಳೆಗಳಾಗಿವೆ. ಅಲ್ಲದೆ ಕಡ್ಲಿ, ತೊಗರಿ, ನೆಲಗಡಲೆ, ಕಬ್ಬು, ಸೂರ್ಯಕಾಂತಿ, ಹೆಚ್ಚು ಬೆಳೆಯಲಾಗುತ್ತಿದ್ದು ಹತ್ತಿ ವಾಣಿಜ್ಯ ಬೆಳೆಯಾಗಿದೆ.

ಈ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಫಲಕಾರಿಯಾಗಿವೆ. ಇದರಿಂದ ೧೯೫೦ರಲ್ಲಿ ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳು ಜನರ ಪ್ರತಿಯೊಂದು ಸಮಸ್ಯೆಗೆ ಸ್ಪಂದಿಸುತ್ತಲಿವೆ. ಈ ಕಾರ್ಯಕ್ರಮದಿಂದ ಬಡವರಿಗೆ ಆಶ್ರಯ ಮನೆಗಳು, ಕೃಷಿಕರಿಗೆ ಪಂಪಸೆಟ್, ಗೊಬ್ಬರ, ಭೂಸ್ವಾಧೀನತೆ, ಶಾಲಾ ಕಟ್ಟಡ ನಿರ್ಮಿಸಲು, ದೇವಾಲಯ ನಿರ್ಮಾಣ ಮಾಡಲು ಸರಕಾರವು ನೆರವು ನೀಡುತ್ತಾ ಬಂದಿದೆ. ಇದರೊಂದಿಗೆ ದುರ್ಬಲ ವರ್ಗದವರಿಗೆ ಸರಕಾರವು ಅನೇಕ ಪ್ರಾತಿನಿದ್ಯ ನೀಡಿ, ಶ್ರೀಮತಿ ಇಂದಿರಾ ಗಾಂಧಿಯವರು ಮಾಡಿದ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆತರಲಾಯಿತು. ಇದರಿಂದ ಕೆಲವರು ಫಲದಾಯಕರಾಗಿದ್ದಾರೆ. ೧೯೭೨-೭೩ರಲ್ಲಿ ಜಯಂತಿ ಗ್ರಾಮಗಳು ಎಂಬ ಯೋಜನೆಯನ್ನು ಬಳ್ಳಾರಿಯಲ್ಲಿ ರೂಪಿಸಲಾಯಿತು. ಹೀಗಾಗಿ ಆಶ್ರಯ ಮನೆಗಳು ಎಲ್ಲೆಲ್ಲೂ ತಲೆ ಎತ್ತಿವೆ. ಈ ಆಶ್ರಯ ಯೋಜನೆಯಿಂದ ಎಷ್ಟು ಕುಟುಂಬಗಳು ಈಗ ಬಳ್ಳಾರಿ ಜಿಲ್ಲೆಯಲ್ಲಿ ನೆಮ್ಮದಿಯಿಂದ ನಿದ್ರಿಸುತ್ತಿವೆ. ಸಮುದಾಯ ಕೇಂದ್ರ, ಬಾಲವಾಡಿ, ಕುಡಿಯುವ ನೀರಿನ ವ್ಯವಸ್ಥೆ, ಬಡತನರೇಖೆಯ ಕೆಳಗೆ ಜೀವಿಸುವವರಿಗೆ ಮನೆ, ಶಾಲೆ, ಅಂಚೆ ಕಛೇರಿ, ಒಳಚರಂಡಿ, ವಿದ್ಯುತ್ ಪೂರೈಕೆ ಮುಂತಾದ ಸಾರ್ವಜನಿಕ ಸೌಲಭ್ಯಗಳನ್ನು ಜಾರಿಗೆ ತರಲಾಯಿತು.

೨.೭.೧. ಉದ್ಯೋಗ : ಕೃಷಿಯನ್ನು ಹೆಚ್ಚಾಗಿ ಪ್ರತಿಯೊಬ್ಬರು ಅವಲಂಬಿಸಿದ್ದರೂ ಮನೆತನದಿಂದ ಬಂದಿರುವ ಕಸುಬನ್ನು ಹೊಂದಿಕೊಳ್ಳಲಾರದವರು ಇದ್ದಾರೆ. ಆ ರೀತಿ ಮೂಲ ಕಸುಬನ್ನು ಬಿಟ್ಟವರು ಇಂದು ನಿರುದ್ಯೋಗಿಗಳಾಗಿದ್ದಾರೆ. ಈಗ ಇದರ ಸಂಖ್ಯೆ ಮಿತಿಮೀರಿ ಬೆಳೆಯುತ್ತಿದೆ. ಇಂಥ ನಿರುದ್ಯೋಗಿಗಳನ್ನು ಸುಶಿಕ್ಷಿತರಲ್ಲಿ ಹೆಚ್ಚಾಗಿ ಕಾಣಬಹುದು. ಸಣ್ಣ ಬೇಸಾಯಗಾರರು, ಸಣ್ಣ ವ್ಯಾಪಾರಿಗಳು ಕುಶಲ ಕರ್ಮಿಗಳನ್ನು ಕಾಣಬಹುದು(ಗೆಝೆಟೀಯರ್ ಭಾಗ-೨ಪು.೨೦೩). ಇಂಥ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿ ಕೊಡಲು ಸರಕಾರವು ಉದ್ಯೋಗ ವಿನಿಮಯ ಕೇಂದ್ರವನ್ನು ಸ್ಥಾಪಿಸಿ, ನಿರುದ್ಯೋಗಿಗಳ ಹೆಸರನ್ನು ನೊಂದಾವಣಿ ಮಾಡಿಸಿ ಈ ಇಲಾಖೆಯ ಹುದ್ದೆಗಳ ನೇಮಕಾತಿಯನ್ನು ಸಂದರ್ಶನಗಳ ಮೂಲಕ ಈ ಕೇಂದ್ರದಿಂದ ಕಳಿಸಿ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶವನ್ನು ಕಲ್ಪಿಸಿದೆ.

೨.೭.೨. ಖನಿಜ ಸಂಪತ್ತು : ಕೈಗಾರಿಕೆ ಅಭಿವೃದ್ಧಿಯಲ್ಲಿ ಖನಿಜ ಸಂಪತ್ತು ಪ್ರಮುಖವಾದುದು. ಇದು ಬಳ್ಳಾರಿ ಜಿಲ್ಲೆಯಲ್ಲಿ ಹೇರಳವಾಗಿ ಲಭ್ಯವಾಗುತ್ತದೆ. ಮ್ಯಾಂಗನೀಸ್, ತಾಮ್ರ, ಮ್ಯಾಗ್ನಸೈಟ್, ಸುಣ್ಣದ ಕಲ್ಲು. ಮುಂತಾದವು ಸಿಗುತ್ತದೆ. ೧೯೬೮ರಲ್ಲಿ ಶೇ ೮೪ರಷ್ಟು ಅಧಿಕ ಖನಿಜವು ವಿದೇಶಕ್ಕೆ ರಫ್ತಾಗುತ್ತದೆ.

೧೯೭೦ರಲ್ಲಿ ದೋಣಿಮಲೈ ಕಬ್ಬಿಣದ ಅದಿರು ಯೋಜನೆಯ ರಾಷ್ಟ್ರೀಯ ಖನಿಜ ಅಭಿವೃದ್ಧಿ ಸಂಸ್ಥೆಯು(ಎನ್.ಎಂ.ಡಿ.ಸಿ) ಜಿಲ್ಲೆಯ ಸಂಡೂರು ತಾಲೂಕಿನ ನರಸಾಪುರದಲ್ಲಿ ಸ್ಥಾಪಿತವಾಯಿತು. ಇಲ್ಲಿ ೯೮ ದಶಲಕ್ಷ ಟನ್ ಕಬ್ಬಿಣ ತಯಾರಿಸುವ ಗುರಿಹೊಂದಿತು (ಟಿ.ಆರ್.ಚಂದ್ರಶೇಖರ್, ಪುಟ, ೪೯.೧೯೪). ಇದಲ್ಲದೆ ಮೈಸೂರು ಸರಕಾರದವರು ಮೈಸೂರು ಮಿನಿರಲ್ಸ್ ಲಿಮಿಟೆಡ್‌ನ್ನು ಸ್ಥಾಪಿಸಿದರು (ಎಂ.ಎಂ.ಎಲ್.). ಅಲ್ಲದೆ ಸಂಡೂರು ಮ್ಯಾಂಗನೀಸ್ ಮತ್ತು ಖನಿಜ ನಿಯಮಿತ ಹಾಗೂ ಹಲವಾರು ಸಣ್ಣ ಪುಟ್ಟ ಗಣಿಗಾರಿಕಾ ಸಂಸ್ಥೆಗಳು ಬೆಳಕಿಗೆ ಬಂದಿವೆ. ಅವುಗಳಲ್ಲಿ ಜಿ.ಜಿ.ಮೈನ್ಸ್, ಆರ್.ಪಿ.ಮೈನ್ಸ್ ಮುಂತಾದವು ಕಂಡುಬರುತ್ತವೆ.

೨.೭.೩. ಜಲಸಂಪತ್ತು : 'ನೀರು' ಪ್ರತಿಯೊಂದು ಜೀವಿಗೂ ಅತ್ಯಾವಶ್ಯ. ಮೂಲತಃ ಮಳೆ ನೀರನ್ನು ಕೆರೆ, ಹಳ್ಳಗಳಲ್ಲಿ ಸಂಗ್ರಹಿಸಿ ಆ ನೀರನ್ನೇ ಕೃಷಿಗೆ ಬಳಸುತ್ತಿದ್ದರು. ಈಗ ಆ ಪದ್ಧತಿ ಕಡಿಮೆಯಾಗುತ್ತಿದೆ. ಅಂತರ್ಜಲ ಶೋಧನೆಯಿಂದ ಕೆರೆಗಳು ಇಂದು ಬತ್ತಿ ಹೋಗುತ್ತಿವೆ. ನೀರಾವರಿ ಇದ್ದು, ಇದರಿಂದ ಕಾಲುವೆಗಳ ಮೂಲಕ ನೀರು ಸರಬರಾಜು ಆಗುತ್ತದೆ. ೧೫೨೦ರಲ್ಲಿ ತುಂಗಾ ನದಿಯ ಹಾಗೂ ಹಗರಿಯ ಮೇಲೆ ಜಲಸಂಪರ್ಕವು ಬಾಸ್ಕೆಟ್ ಮೂಲಕ ಸಾಗುತ್ತಿತ್ತು. ಈ ಜಿಲ್ಲೆಯ ತುಂಗಭದ್ರ ನದಿಯಲ್ಲಿ ಮೀನು ಹಿಡಿದು ಸಾಕಾಣಿಕೆ ಮಾಡುವ ಕಾರ್ಯ ನಡೆಯುತ್ತದೆ. ಇದರಿಂದ ಆರ್ಥಿಕ ಆದಾಯ ದೊರೆಯುತ್ತದೆ. ಇದರಿಂದಲೇ ಹಗರಿಬೊಮ್ಮನಹಳ್ಳಿ, ಅಲಿಪುರ, ತುಂಗಾಭದ್ರ ಜಲಾಶಯ ಹಾಗೂ ನಾಗೇನಹಳ್ಳಿಯಲ್ಲಿ ಮರಿಮೀನು ಉತ್ಪಾದನೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಸಹಕಾರಿ ಮೀನುಗಾರಿಕೆ ಸಂಘಗಳಿವೆ. ಇಲ್ಲಿಯ ಮೀನುಗಳನ್ನು ದೂರದ ಊರಿಗೆ ರವಾನಿಸಲಾಗುತ್ತದೆ. ಮೀನು ಸಂಗ್ರಹಿಸಲು ಶೈತ್ಯಾಗಾರವನ್ನು ಸ್ಥಾಪಿಸಲಾಗಿದೆ.

ಇಲ್ಲಿ ಹಲವಾರು ದೊಡ್ಡ ಕೆರೆಗಳಿದ್ದು, ಸಣ್ಣ ಪುಟ್ಟ ನೀರಾವರಿ ಯೋಜನೆಗಳನ್ನು ಮಾಡಿಕೊಂಡಿದ್ದಾರೆ. ದರೋಜಿ ಕೆರೆ, ಹನಸಿ ಕೆರೆ ಪ್ರಸಿದ್ಧ ಕೆರೆಗಳಾಗಿದ್ದವು. ತುಂಗಭದ್ರ ಹಿನ್ನೀರಿನ ಹಲವಾರು ಜಲಸಂಪನ್ಮೂಲಗಳ ಅನುಕೂಲತೆಯಿಂದ ರೈತರು ಅನುಕೂಲದಿಂದ ಇದ್ದಾರೆ.

ಆರ್ಥಿಕಾಬಿವೃದ್ಧಿಯಲ್ಲಿ ಬ್ಯಾಂಕ್, ವಿದ್ಯುತ್, ರೈಲು ಸಂಪರ್ಕಗಳು ಪ್ರಮುಖವಾಗಿವೆ. ಇದಲ್ಲದೇ ಇಡೀ ಜಿಲ್ಲೆಯ ತಲಾ ಅದಾಯವು ಯಾವ ರೀತಿ ಅಧಿಕವಾಗಿ ಹೋಗುತ್ತದೆ ಎಂಬುದನ್ನು ಗಮನಿಸುವುದು ಸರಿ ಎನ್ನಿಸುತ್ತದೆ. ಬಳ್ಳಾರಿಯಲ್ಲಿ ವಾಣಿಜ್ಯ ಬ್ಯಾಂಕುಗಳೊಂದಿಗೆ ಕೃಷಿ ಕಾರ್ಮಿಕರ ಅನುಕೂಲಕ್ಕಾಗಿ ದೇಶಿಯ ಬ್ಯಾಂಕ್ ಎಂದು ಕರೆಸಿಕೊಳ್ಳುವ ಸಹಕಾರಿ ಬ್ಯಾಂಕ್‌ಗಳು ಆರಂಭವಾದವು. ಜಿಲ್ಲೆ ಸಹಕಾರ ಬ್ಯಾಂಕ್ (Co-operative Bank) ಬ್ಯಾಂಕ್ ಜೊತೆಗೆ ಕೃಷಿ ಭೂ ಅಭಿವೃದ್ಧಿ ಬ್ಯಾಂಕ್‌ನ್ನು ತೆರೆಯಲಾಯಿತು. ನಂತರ ಅನೇಕ ವಾಣಿಜ್ಯ ಬ್ಯಾಂಕ್‌ಗಳು ಉಗಮವಾದವು. ಇವುಗಳಿಗಿಂತ ಪೂರ್ವದಲ್ಲಿ ಹಣಕಾಸು ವ್ಯವಹಾರದಲ್ಲಿ ಸ್ಥಳೀಯ ಹಣಕಾಸಿನ ಪಾತ್ರ ಹಿರಿದಾದುದು. ೧೯೧೫ರಲ್ಲಿ ಪಟ್ಟಣ ಸಹಕಾರ ಬ್ಯಾಂಕ್ ೧೯೫೩ರಲ್ಲಿ ಕೆನರಾ ಬ್ಯಾಂಕ್, ೧೯೫೭ರಲ್ಲಿ ಮೈಸೂರು ಬ್ಯಾಂಕ್, ೧೯೬೧ರಲ್ಲಿ ಇಂಡಿಯನ್ ಬ್ಯಾಂಕ್ ಸ್ಥಾಪಿತವಾದವು. ಇದರ ಶಾಖೆಗಳನ್ನು ಅನೇಕ ತಾಲ್ಲೂಕುಗಳಲ್ಲಿ ತೆರೆಯಲಾಯಿತು. ಇಡೀ ಜಿಲ್ಲೆಯಲ್ಲಿ ೧೪ ಸಿಂಡಿಕೇಟ್ ಬ್ಯಾಂಕ್, ೨ ಕೆನರಾ ಬ್ಯಾಂಕ್, ೧ ಇಂಡಿಯನ್ ಬ್ಯಾಂಕ್, ೨ ಕೇಂದ್ರೀಯ ಭಾರತೀಯ ಬ್ಯಾಂಕ್, ೧ ಬ್ಯಾಂಕ್ ಆಫ್ ಇಂಡಿಯಾ, ೧೦ ಸ್ಟೇಟ್ ಬ್ಯಾಂಕ್ ಅಫ್ ಮೈಸೂರು, ೩ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ೪ ವೈಶ್ಯ ಬ್ಯಾಂಕ್‌ಗಳನ್ನು ಸ್ಥಾಪಿಸಲಾಯಿತು.

ವ್ಯಾಪಾರಾಭಿವೃದ್ಧಿಯಲ್ಲಿ ರೆಡಿಮೇಡ್ ಗಾರ್ಮೆಂಟ್ ಸಹ ಅನೇಕ ಜನರಿಗೆ ವಸತಿ ಕಲ್ಪಿಸುವುದರೊಂದಿಗೆ ಉದ್ಯೋಗವನ್ನು ಒದಗಿಸಿದೆ.೧೯೬೮-೬೯ರಲ್ಲಿ ೮೦ ಯುನಿಟ್ ರೆಡಿಮೇಡ್ ಗಾರ್ಮೆಂಟ್ ನ್ನು ೩೦ ಲಕ್ಷರೂ ಖರ್ಚಿನಲ್ಲಿ ಸ್ಥಾಪಿಸಲಾಯಿತು. ಅಲ್ಲದೆ ರೈಲ್ವೆ ಇಲಾಖೆಯಲ್ಲಿ ರೈಲ್ವೆ ಕಾರ್ಮಿಕರು ಸಹ ತುಂಬಾ ಪ್ರಾಮುಖ್ಯತೆಯನ್ನು ಹೊಂದಿದ್ದಾರೆ. ಮ್ಯಾಂಗನಿಸ್ ಖನಿಜವನ್ನು ತುಂಬಿಸಲು ಇವರು ಅತ್ಯಾವಶ್ಯಕವಾಗಿ ಬೇಕಾಗುತ್ತಾರೆ. ೫ ವ್ಯಾಗನ್ ಕೇಂದ್ರಗಳನ್ನು ಜಿಲ್ಲೆಯಲ್ಲಿ ತೆರೆಯಲಾಗಿದ್ದು, ಇದರಿಂದ ಸಾಕಷ್ಟು ಸಂಖ್ಯೆ ರೈಲ್ವೆ ಕೂಲಿಕಾರ್ಮಿಕರ ಜೀವನಕ್ಕೆ ಆಧಾರ ಒದಗಿಸಿದಂತಾಗಿದೆ.

೨.೭.೪. ವಿದ್ಯುತ್ : ತುಂಗಾಭದ್ರ ಯೋಜನೆಯಲ್ಲಿ ಇತರೆಡೆಯಿಂದ ತಯಾರಾಗಿ ಬರುವ ಉತ್ಪಾದನೆಯು ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಮುನಿರಾಬಾದ್ ಜನರೇಟರ್‌ನಿಂದ ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ, ಮಲ್ಲಾಪುರ, ಸಿರುಗುಪ್ಪಾಗಳಿಗೆ ವಿದ್ಯುತ್ ಸರಬರಾಜು ಆಗುತ್ತದೆ. ತುಂಗಾಭದ್ರ ಡ್ಯಾಂ ಮತ್ತು ಹಂಪಿ ಪವರ್ ಹೌಸ್‌ನಿಂದ ಉತ್ಪತ್ತಿಯಾದ ವಿದ್ಯುತ್ತಿನಲ್ಲಿ ಬಳ್ಳಾರಿ, ಸಂಡೂರು, ಹೊಸಪೇಟೆಗೆ ವಿದ್ಯುತ್ ಸರಬರಾಜು ಕಲ್ಪಿಸಲಾಗುತ್ತದೆ. ಇದರಿಂದ ಅತಿ ಹೆಚ್ಚು ಪಂಪ್‌ಸೆಟ್‌ಗಳನ್ನು ಹೊಂದಿರುವ ಕೂಡ್ಲಿಗಿಗೆ ಹೆಚ್ಚು ವಿದ್ಯುತ್ ನೀಡಲಾಗಿದೆ.

ವ್ಯಾಪಾರ ವಾಣಿಜ್ಯ ಮಳಿಗೆಗಳಲ್ಲಿ ರೈತರು ಬೆಳೆದ ದವಸ ಧಾನ್ಯ ಬಾಳೆಗೊನೆ ಮತ್ತಿತರ ವಸ್ತುಗಳನ್ನು ತಂದು ಮಾರಾಟ ಮಾಡಿಕೊಂಡು ಹೋಗುತ್ತಾರೆ. ಇಲ್ಲಿ ಬಳ್ಳಾರಿ, ಹೊಸಪೇಟೆ, ಕೊಟ್ಟೂರು, ಹಗರಿಬೊಮ್ಮನ ಹಳ್ಳಿ, ಕಂಪ್ಲಿ ಮುಂತಾದ ವ್ಯಾಪಾರದ ಕೇಂದ್ರಗಳಾಗಿವೆ. ಇವುಗಳಲ್ಲದೆ ಪ್ರತಿಯೊಂದು ಊರಿನಲ್ಲಿ ಪ್ರತಿವಾರ ಕ್ಕೊಂದು ನಡೆಯುವ ಸಂತೆಯ ಮೂಲಕ ದಿನ ನಿತ್ಯದ ಉಪಯೋಗದ ವಸ್ತುಗಳನ್ನು ಮಾರಾಟ ಮಾಡ ಲಾಗುತ್ತದೆ. ಇಂಥ ಮಳಿಗೆಗಳಲ್ಲಿ ದಲ್ಲಾಳಿಗಳದೇ ಪ್ರಮುಖ ಪಾತ್ರವಾಗಿರುತ್ತದೆ. ನಿಗದಿತ ಧರವನ್ನು ರೈತರು ಪಡೆಯದೆ ಹೋದರೆ ರೈತನಿಗೆ ಅತೀ ಕಷ್ಟವಾಗುತ್ತದೆ. ಇದರಿಂದಲೇ ಸರಕಾರವು ರೈತನ ಬೆಳೆಗೆ, ತರಕಾರಿ ಇತರ ವಸ್ತುಗಳಿಗೆ ನಿರ್ದಿಷ್ಟ ಧರವನ್ನು ನಿಗದಿಪಡಿಸಿದೆ. ಇವುಗಳನ್ನು ಎ.ಪಿ.ಎಂ.ಸಿ.ಗಳೆಂದು ಕರೆಯ ಲಾಗುತ್ತದೆ.

ಇವೆಲ್ಲವುಗಳೊಂದಿಗೆ ಬೇರೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿರುವ ಜನವರ್ಗವಿದೆ. ಅವರಿಂದಲೂ ಅಲ್ಪಮಟ್ಟಿಗೆ ಆರ್ಥಿಕ ಬೆಳವಣಿಗೆಗೆ ಸಹಾಯವಾಗಲಿದೆ. ಅವರುಗಳಲ್ಲಿ ಸಮಾಜ ವಿಜ್ಞಾನಿಗಳು, ಶಿಕ್ಷಕರು, ಸಾಹಿತಿಗಳು, ಕಲಾವಿದರು ಅಲ್ಲದೆ ಜಾತಿ ಸೂಚಕವಾಗಿ ಬಳಸುತ್ತಿರುವ ಜನವರ್ಗಗಳಾದ ಅಗಸರು, ಮೀನುಗಾರರು, ನೇಕಾರರು, ಬೀಡಿಕಟ್ಟುವವರು, ದರ್ಜಿಯವರು, ಚಮ್ಮಾರರು, ಬಡಗಿಗಳು, ಕಲ್ಲುಕುಟಿಗರು, ಕಮ್ಮಾರರು, ಅಕ್ಕಸಾಲಿಗರು, ಕೂಲಿಕಾರರು, ಇತ್ಯಾದಿ ಕರ್ಮಿಗಳು ಸಹ ಆಯಾ ಸ್ಥಳದಿಂದ ಆರ್ಥಿಕ ಅಭಿವೃದ್ಧಿಗೆ ಸಹಕಾರ ನೀಡಿದ್ದಾರೆ.

೨.೮. ವ್ಯಾಸಂಗ ವ್ಯವಸ್ಥೆ

ಮೂಲತಃ ದೇವಾಲಯಗಳಲ್ಲಿ ಆರಂಭವಾದ ಶಿಕ್ಷಣ ವ್ಯವಸ್ಥೆಯನ್ನು ಶಾಸನಗಳು ತಿಳಿಸುತ್ತವೆ. ರಾಜರ ಆಳ್ವಿಕೆ ಸಂದರ್ಭದಲ್ಲಿ ಬಾಗಳಿ, ಕುರುವತ್ತಿ, ಹೊಳಲು, ಹಿರೇಹಡಗಲಿ, ಹೂವಿನ ಹಡಗಲಿ, ತಿಮ್ಮಲಾಪುರ, ನೀಲಗುಂದಿ, ನಾಗೇನ ಹಳ್ಳಿಗಳು ಅಗ್ರಹಾರಗಳಾಗಿಯೂ, ಮೋರೆಗೇರಿ ಘಟಕ ಸ್ಥಾಪನೆಯಾಗಿಯೂ ಪರಿಣ ಮಿಸಿದ್ದವು. ಚಾಲುಕ್ಯ ಪೂರ್ವದಿಂದ ಹಿಡಿದು ವಿಜಯನಗರ ಸಾಮ್ರಾಜ್ಯ ಹಾಗೂ ಸಣ್ಣಪುಟ್ಟ ಪಾಳೆಗಾರರ ವರೆಗೂ ದೇವಾಲಯಗಳನ್ನು ಕಟ್ಟಿಸಿ ಕಲೆಗೆ, ವಾಸ್ತುಶಿಲ್ಪಕ್ಕೆ ಮಾದರಿಯಾಗಿ ನಿಲ್ಲುವಂತೆ ಮಾಡಿದ ಕಾರ್ಯ ಅಮೋಘವಾಗಿದೆ. ಹಾಗೂ ಶ್ಲಾಘನೀಯವಾಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಈ ಭಾಗದಲ್ಲಿ ಹಂಪಿ ಹಾಗೂ ಸಂಡೂರಿನ ಕಾರ್ತಿಕೇಯ ದೇವಸ್ಥಾನಗಳು ಅತ್ಯುತ್ತಮವಾದವುಗಳಾಗಿವೆ. ಹರಪನಹಳ್ಳಿಯಲ್ಲಿ ಚಾಲುಕ್ಯರ ದೇವಸ್ಥಾನಗಳಿವೆ. ಬದಾಮಿ ಚಾಲುಕ್ಯರಿಗೆ ಸಂಬಂಧಿಸಿದಂತೆ ಸಂಡೂರಿನ ಪಾರ್ವತಿ ದೇವಾಲಯವಿದೆ. ಹಂಪೆಯ ಕಿಷ್ಕಿಂಧ ಜೈನರ ಬಸದಿಗಳ ಸಮೂಹ ಸ್ಥಳವಾಗಿದೆ. ಹೊಯ್ಸಳ ದೇವಾಲಯಗಳು ಅಂಬಳಿ, ಸೋಗಿ, ಕುಡುತಿನಿ ಪ್ರದೇಶಗಳಲ್ಲಿ ದ್ರಾವಿಡ ಶೈಲಿಯಲ್ಲಿ ರಚನೆಯಾಗಿವೆ. ಚಿತ್ರ ಕಲೆ, ಸಂಗೀತದ ಕ್ಷೇತ್ರದ ಸಾಧನೆಗಳು ಬಳ್ಳಾರಿ ಜಿಲ್ಲೆಗೆ ಕೊಡುಗೆಯಾಗಿ ಪರಿಣಮಿಸಿವೆ. ನಮ್ಮಲ್ಲಿ ದಾಸರಿಂದ ಇಲ್ಲಿಯವರೆಗೂ ಅನೇಕ ಸಂಗೀತ

ವಿದ್ವಾಂಸರು ಬಾಳಿದ್ದು ಕಂಡು ಬರುತ್ತದೆ. ಇದರಲ್ಲಿ ವ್ಯಾಸ, ಪುರಂದರದಾಸ, ಕನಕದಾಸ, ಮುಂತಾದವರು ಕಂಡುಬರುತ್ತದೆ.

೨.೯. ಹಬ್ಬಾಚರಣೆಗಳು

ಹಿಂದೂಗಳಲ್ಲಿ ಪ್ರತಿವರ್ಷಕ್ಕೊಮ್ಮೆ ತಿಂಗಳ, ಹದಿನೈದು ದಿನಗಳಿಗೊಮ್ಮೆ ಆಚರಣೆಗಳನ್ನು ಆಚರಿಸುವ ಕ್ರಮವಿದೆ. ಇವರು ವ್ರತ, ಉಪವಾಸಾದಿಗಳನ್ನು ಕೈಗೊಳ್ಳುತ್ತಾರೆ. ಯಾವುದೇ ಹಬ್ಬಗಳಲ್ಲಿ ಭೇದಭಾವ ಎಣಿಸದೇ ಸಾಮೂಹಿಕವಾಗಿ ಬೆರೆಯುವರು. ಪ್ರಮುಖವಾದ ಹಬ್ಬಗಳು ನಾಗರಪಂಚಮಿ, ಗಣೇಶಚತುರ್ಥಿ, ವಿಜಯದಶಮಿ(ದಸರಾ), ದೀಪಾವಳಿ, ಶಿವರಾತ್ರಿ, ಯುಗಾದಿ, ಕಾರಹುಣ್ಣಿಮೆ, ಹುತ್ತರಿ ಹಬ್ಬ, ಭಾರತ ಹುಣ್ಣಿಮೆ, ಹೋಳಿ ಹುಣ್ಣಿಮೆ, ಇವುಗಳೊಂದಿಗೆ ರಾಷ್ಟ್ರೀಯ ಹಬ್ಬಗಳಾದ ಜನವರಿ ೨೬, ಗಣರಾಜ್ಯೋತ್ಸವ ದಿನ, ಆಗಸ್ಟ್ ೧೫, ಅಕ್ಟೋಬರ್ ೨ ಗಾಂಧಿ ಜಯಂತಿ ಮುಂತಾದವುಗಳನ್ನು ಆಚರಿಸುತ್ತಾರೆ.

ಮುಸ್ಲಿಂ ಸಮುದಾಯವು ತಮ್ಮ ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಈದ್-ಉಲ್-ಫಿತರ್ (ರಮಾಸನ್, ರಂಜಾನ್) ಇದ್-ಉಲ್-ಝಾ (ಬಕ್ರೀದ್) ಮಿಲಾದ್-ಉನ್‌ಸಲಿ-ಪೈಗಂಬರರ ಜನ್ಮದಿನದ ಅಂಗವಾಗಿಯೂ ಹಬ್ಬವನ್ನು ಮಾಡುತ್ತಾರೆ. ಕ್ರಿಶ್ಚಿಯನ್ನರು ಕೂಡ ಡಿಸೆಂಬರ್ ೨೫ ರಂದು ಗುಡ್‌ಫ್ರೈಡೆಗಳ ಜೊತೆಗೆ ಸಂತಮೇರಿಯನ್ನರ ಆಚರಣೆಯನ್ನು ಮೂರು ದಿನಗಳ ಕಾಲ ಜರುಗಿಸುವರು. ಜೈನರು ಯುಗಾದಿ ಯನ್ನು ಆದಿತೀರ್ಥಂಕರನಾದ ವೃಷಭನ ದಿಗ್ವಿಜಯ, ಮಹಾವೀರ ಜಯಂತಿ ಹಾಗೂ ಮಹಾವೀರ ಮಹಾಪರಿ ನಿರ್ವಾಣದ ದಿನವನ್ನು, ದೀಪಾವಳಿಯನ್ನು ಆಚರಿಸುವರು. ಶಿಖ್ ಧರ್ಮದವರು ಕಾರ್ತಿಕ್ ಪೂರ್ಣಿಮೆ ದಿನದಂದು ಗುರುನಾನಕರ ಹಬ್ಬವನ್ನು ಮಾಡುವರು.

ಬಳ್ಳಾರಿ ಜಿಲ್ಲೆಯಲ್ಲಿ ಜಾತ್ರೆ-ಉರುಸುಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಡಗಲಿ ಉರುಸು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ. ಬಳ್ಳಾರಿಯ ದುರುಗಮ್ಮ, ಹಂಪೆಯ ವಿರೂಪಾಕ್ಷ, ಮೈಲಾರದ ಮೈಲಾರಲಿಂಗೇಶ್ವರ, ಕುರವತ್ತಿ ಬಸವಣ್ಣ, ಕುರುಗೋಡು ಬಸವಣ್ಣ, ಮುಂತಾದ ದೈವಗಳಿಗೆ ಜಾತ್ರೋತ್ಸವ ಜರುಗಿಸಲಾಗುತ್ತದೆ.

೨.೧೦. ಧಾರ್ಮಿಕ ಜೀವನ

ಬಳ್ಳಾರಿ ಜಿಲ್ಲೆಯು ಸಾಮರಸ್ಯಕ್ಕೆ ಪ್ರತೀಕವಾಗಿದೆ. ಇಲ್ಲಿ ಎಲ್ಲಾ ಧರ್ಮಗಳ ಜನರು ವಾಸಿಸುತ್ತಾರೆ. ಯಾವುದೇ ಧರ್ಮದಲ್ಲಿ ಧಾರ್ಮಿಕ ವೈಶಮ್ಯ ಇರಲಿಲ್ಲ, "ಯಾವ ಧರ್ಮವು ಕೂಡ ಒಬ್ಬರನ್ನೊಬ್ಬರು ದ್ವೇಶಿಸು ಎಂದು ಹೇಳುವುದಿಲ್ಲ". ಒಂದು ಧರ್ಮದವರು ಇನ್ನೊಂದು ಧರ್ಮದ ದೇವಾಲಯಗಳಿಗೆ ದಾನ-ದತ್ತಿಗಳನ್ನು ಬಿಟ್ಟಿದ್ದಾರೆ. ಹೀಗಾಗಿ ಸರ್ವಧರ್ಮ ಸಮಯನ್ವಯವನ್ನು ಇಲ್ಲಿ ಕಾಣುತ್ತವೆ (ನಾಗಯ್ಯ.ಜೆ.ಎಂ.

೧೯೯೧, ಪುಟ ೪೬). ಅಲ್ಲದೆ ವಿಜಯನಗರ ಆಸ್ಥಾನದಲ್ಲಿ ಎಲ್ಲಾ ಧರ್ಮದವರಿಗೂ ಸಮಾನ ಅವಕಾಶವನ್ನು ಕಲ್ಪಿಸಿಕೊಟ್ಟಿದೆ ಎಂದು ತಿಳಿಸುತ್ತದೆ. ಶೈವ, ಜೈನ, ವೈಷ್ಣವ, ಮುಸ್ಲಿಂರಿಗೆ ಸಂಬಂಧಿಸಿದ ಗುಡಿ ದೇವಾಲಯ ಗಳನ್ನು ಕಟ್ಟಿಸಿದ್ದಾರೆ. ರಾಜರು ಧರ್ಮಕ್ಕೆ ವಿಶೇಷ ಪ್ರೋತ್ಸಾಹ ಉತ್ತೇಜನ ಕೊಟ್ಟಿರುವುದು ಕಾಣಿಸುತ್ತದೆ. ಬೌದ್ಧ ಧರ್ಮದ ಬಗ್ಗೆ ಖಚಿತ ಆಧಾರ ದೊರೆಯದಿದ್ದರೂ ಸಹ ಅಶೋಕನ ಆಳ್ವಿಕೆಯಿಂದ ಅವನು ಬೌದ್ಧ ಧರ್ಮ ಪ್ರಸಾರಕ್ಕೆ ಕೈಗೊಂಡ ಯಾತ್ರೆ ಹಾಗೂ ದೊರೆತ ಶಾಸನಗಳಿಂದ ಬೌದ್ಧ ಧರ್ಮ ಪ್ರಸಾರವು ಮುಂಚೂಣಿ ಯಲ್ಲಿ ಇತ್ತೆಂದು ತಿಳಿಯುತ್ತದೆ.

ನಂತರದಲ್ಲಿ ಬೆಳೆದು ಬಂದ ಜೈನ ಧರ್ಮಕ್ಕೆ ರಾಜರ ಆಶ್ರಯ ಸಿಕ್ಕಿತು. ಈ ಧರ್ಮದ ವಿಸ್ತರಣೆ ಹೆಚ್ಚಾಗಿದೆ. ಕೋಗಳಿ ಶಾಸನದಲ್ಲಿ ಕ್ರಿ.ಶ.೧೦೫೫ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಧರ್ಮ ಪ್ರಸಾರ ಇತ್ತು ಎಂಬುದು ನಮಗೆ ಗೊತ್ತಾಗುತ್ತದೆ. ಗಂಗರ ಅರಸನಾದ ದುರ್ವಿನೀತನು ಬಸದಿಯನ್ನು ಕಟ್ಟಿಸಿದ್ದನೆಂಬುದಕ್ಕೆ ಈ ಶಾಸನ ಆಧಾರವಾಗಿದೆ. ಮಾಗಳಿ, ಸೊಂಡೂರು, ಕುರುಗೋಡು, ನಂದಿ ಬೇವೂರು, ಯರಹಳ್ಳಿ, ಮೋರಗೇರಿ, ಹೇಮಕೂಟದಲ್ಲಿರುವ ಜೈನ ಬಸದಿಗಳು ಕಾಣಿಸುತ್ತವೆ. ಕುರುಗೋಡಿನ ಕ್ರಿ.ಶ.೧೫೪೫ರ ಶಾಸನವೊಂದು ಜೈನಬಸದಿಗಾಗಿ ದಾನ ನೀಡಿರುವ ವಿವರಗಳನ್ನು ಒಳಗೊಂಡಿದೆ.

ಶೈವ ಧರ್ಮವು ಇತರೆ ಧರ್ಮಗಳಿಗಿಂತಲೂ ಹೆಚ್ಚು ಪ್ರಸಾರವನ್ನು ಹೊಂದಿತ್ತು. ಹಾಗೆಯೆ ಹೆಚ್ಚು ಪ್ರಭಾವವಾಗಿತ್ತು. ಇಲ್ಲಿ ಲಕುಲೇಶ ಪಾಶಪತರು, ಕಾಪಾಲಿಕರು, ಅಘೋರಿಗಳು ತಮ್ಮ ತಾಣವನ್ನಾಗಿ ಮಾಡಿಕೊಂಡುರುವುದಕ್ಕೆ ಕ್ರಿ.ಶ.೧೦೪೫ರ ಮೋರೆಗೇರಿ ಶಾಸನ ದಾಖಲೆ ಮಾಡಿಕೊಡುತ್ತದೆ. ಕಾಳಾಮುಖರಿಗೆ ಸಂಬಂಧಿಸಿದ ಅನೇಕ ಮಠಗಳು ಇಲ್ಲಿ ಇದ್ದವು. ಅವುಗಳಲ್ಲಿ ಕ್ರಿ.ಶ.೧೧೧೧ ಕ್ಕೆ ಸಂಬಂಧಪಟ್ಟ ಶಾಸನದಲ್ಲಿ ಕಾಳಮುಖ ಸ್ಥಾನ ಕರ್ತಾರ ಮಠ ಎಂದೂ ಇದೆ. ಅದರೊಂದಿಗೆ ಹೀರೇಕುರುವತ್ತಿಯು ಶೈವ ಕೇಂದ್ರವಾಗಿದೆ. ಅಲ್ಲದೆ ಶಿರುಗುಪ್ಪ, ಕೂಡ್ಲಿಗಿ, ಉಜ್ಜಿನಿಯ ಕೇಂದ್ರಗಳು ಈಗಲೂ ಶೈವರಿಗೆ ಸಂಬಂಧಿಸಿದ ಗುಡಿಗಳನ್ನು ಹೊಂದಿವೆ. ಉಜ್ಜಿನಿಯು ಪಂಚಪೀಠಗಳಲ್ಲಿ ಒಂದು ಕೇಂದ್ರವಾಗಿದೆ. ವಿಜಯನಗರ ಅರಸರಲ್ಲಿ ಇಮ್ಮಡಿ ದೇವರಾಯನ ಆಸ್ಥಾನದಲ್ಲಿ ೧೦೧ ವಿರಕ್ತರು ಇದ್ದರೆಂದು, ಅವರೆಲ್ಲರೂ ಶರಣರ ಕುರಿತಾಗಿ ಕೃತಿ ರಚನೆಗೆ ತೊಡಗಿದ್ದ ವಿಷಯ ಕಾವ್ಯಗಳಿಂದಲೂ ತಿಳಿಸುತ್ತದೆ. ಕೂಲಹಳ್ಳಿ ಗೋಣಿಬಸವೇಶ್ವರ ಕೊಟ್ಟೂರಿನ ಕೊಟ್ಟೂರೇಶ್ವರ, ನಾಯಕನ ಹಟ್ಟಿ ತಿಪ್ಪೇಸ್ವಾಮಿ, ಹರಪನಹಳ್ಳಿ ಮದ್ದಾನ ಸ್ವಾಮಿ, ಕೋಲಶಾಂತ ಕೆಂಪಯ್ಯ, ಮುಂತಾದ ಶೈವ ಪಂಥದ ಪ್ರಮುಖ ಕೇಂದ್ರಗಳ ಸ್ಥಳಗಳಿವೆ.

ವೈಷ್ಣವ ಧರ್ಮವು ಪ್ರಾರಂಭದಲ್ಲಿ ಅಷ್ಟು ಪ್ರಾಬಲ್ಯತೆಯನ್ನು ಪಡೆದಿಲ್ಲ. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಅದಕ್ಕೆ ಉತ್ತಮವಾದ ಸ್ಥಾನ ದೊರಕಿತ್ತು. ಕೆಲ ಶಾಸನಗಳು ವೈಷ್ಣವ ಧರ್ಮಕ್ಕೆ ಉತ್ತೇಜನ ನೀಡಿ ದೇವಾಲಯ ನಿರ್ಮಿಸಿದ್ದಕ್ಕೆ ಸಾಕ್ಷಿ ನೀಡುತ್ತವೆ. ಕ್ರಿ.ಶ.೧೧೨೧ರಲ್ಲಿ ಸೋಗಿಯಲ್ಲಿ ದೊರೆತ ಶಾಸನದಿಂದ ಕೇಶವ ದೇವರನ್ನು ಪ್ರತಿಷ್ಠಾಪಿಸಿ ಭೂಮಿಯನ್ನು ವೃತ್ತಿದಾನವಾಗಿ ಬಿಟ್ಟರೆಂದು ತಿಳಿದು ಬರುತ್ತದೆ.

ಕಮಲಾಪುರದ ಕ್ರಿ.ಶ.೧೫೧೮ರ ಶಾಸನವೊಂದರಲ್ಲಿ ಕೃಷ್ಣದೇವರಾಯನ ಪಟ್ಟ ಮಹಾದೇವಿಯಾದ ತಿರುಮಲಾದೇವಿಗೆ ಪುಣ್ಯವಾಗಲೆಂದು ತಿರುಮಲಾ ದೇವಾಲಯವನ್ನು ಕಟ್ಟಿಸಿ, ಭೂದಾನ ನೀಡಲಾಗಿದೆ ಎಂಬ ಉಲ್ಲೇಖವಿದೆ. ಹಾಗೆಯೇ ನಾಗೇನಹಳ್ಳಿಯ ಶಾಸನವೊಂದರಲ್ಲಿ ಶೇಷಶಯನ ದೇವಾಲಯ ನಿರ್ಮಿಸಿ ಆ ಊರನ್ನೇ ಅಗ್ರಹಾರವನ್ನಾಗಿ ಪರಿವರ್ತಿಸಿದನೆಂದು ನಮಗೆ ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯವು ಸರ್ವಧರ್ಮ ಸಮನ್ವಯಕ್ಕೆ ಪ್ರಮುಖ ನೆಲೆಯಾಗಿತ್ತು ಎಂಬ ಹೇಳಿಕೆಯಂತೆ, ಇಲ್ಲಿ ಘಟ್ಟದ ಕೆಳಗಿನ ಘೋರಿ ಎಂಬ ಸ್ಥಳದಲ್ಲಿ ಹೆಚ್ಚಾಗಿ ಮುಸ್ಲಿಂ ಗೋರಿಗಳು ಇರುವುದು ಎಲ್ಲರ ಗಮನಕ್ಕೆ ಬರುತ್ತವೆ. ಜೊತೆಗೆ ದೇವಾಲಯದ ಹೊರಗಿನ ಶಿಲ್ಪಕಲೆಯನ್ನು ದೇವಾಲಯ ಆಕಾರವನ್ನು ನೋಡಿದರೆ ಸಂಪೂರ್ಣವಾಗಿ ಘೋರಿಗಳ ಆಕಾರದಂತೆ ಹಾಗೂ ಮುಸ್ಲಿಂರ ಪವಿತ್ರ ಸ್ಥಳಗಳ ಕಟ್ಟಡ ಮಸೀದಿ ಗಳಂತೆ ಗೋಚರಿಸುತ್ತದೆ. ಆನೆಸಾಲು, ಒಂಟೆಸಾಲು, ಕಮಲ ಮಹಲ್, ರಾಣಿಸ್ನಾನ ಗೃಹ ಇವುಗಳೆಲ್ಲವೂ ಮಸೀದಿ ಆಕಾರದಲ್ಲಿ ಇರುವುದರಿಂದ ಮುಸ್ಲಿಂರ ಪ್ರಭಾವ ವಿಜಯನಗರ ಅಳ್ವಿಕೆಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಅಲ್ಲದೆ ಇಮ್ಮಡಿ ದೇವರಾಯನು ಖುರಾನ್ ಪ್ರಕಟನೆ ಹಾಗೂ ಅದರ ತತ್ವದಂತೆ ಪಾಲಿಸುತ್ತಿದ್ದನು. ಹೊಸಪೇಟೆಯ ಎ.ಸಿ. ಬಂಗಲೆಯಲ್ಲಿ, ಕಡ್ಡಿರಾಂಪುರದ ಹತ್ತಿರ ದೊಡ್ಡದಾದ ಘೋರಿಗಳು ಕಾಣಿಸುತ್ತವೆ. ಇವುಗಳನ್ನು ವಿಜಯನಗರ ಆಸ್ಥಾನದವರು ಕಟ್ಟಿಸಿದರೆಂದು ಕಂಡುಬರುತ್ತದೆ. ಇದರಿಂದ ಈ ಜಿಲ್ಲೆಯಲ್ಲಿ ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶಗಳಿದ್ದುವೆಂದು ತಿಳಿದು ಬರುತ್ತದೆ.

೨.೧೧. ತಾಪಮಾನ

ಇಲ್ಲಿ ವರ್ಷದಲ್ಲಿ ಹೆಚ್ಚಾಗಿ ಒಣಹವೆ ಇರುತ್ತದೆ. ಮಾರ್ಚನಿಂದ ಮೇ ತಿಂಗಳವರೆಗೆ ಬೇಸಿಗೆಯ ತಾಪ ಅಧಿಕವಾಗಿರುತ್ತದೆ. ಜೂನ್‌ನಿಂದ ನವಂಬರವರೆಗೆ ಮಳೆಗಾಲವಿರುತ್ತದೆ. ಕೆಲವೊಮ್ಮೆ ಪ್ರವಾಹ ಬಂದು ಬೆಳೆನಾಶ, ಪಶು, ಪ್ರಾಣಿ, ಮನುಷ್ಯರು ಹೆಚ್ಚಾಗಿ ಅನಾಹುತಕ್ಕೆ ಈಡಾಗುತ್ತಾರೆ. ಡಿಸೆಂಬರ್ ತಿಂಗಳಲ್ಲಿ ಸುಮಾರು ೨೯.೭ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶವಿದ್ದರೆ, ಮಧ್ಯಮ ಕನಿಷ್ಟ ಉಷ್ಣಾಂಶ ೧೯.೭ ಸೆಂಟಿ ಗ್ರೇಡ್ ಇರುವುದು. ಎಪ್ರೀಲ್ ತಿಂಗಳಲ್ಲಿ ೩೯.೨ ಸೆಂಟಿಗ್ರೇಡ್ ಇರುತ್ತದೆ. ಮಳೆಯು ಯಾವಾಗಲೂ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಬರುತ್ತದೆ. ಬಳ್ಳಾರಿ ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣವು ೩೧೧೮ ಮಿ.ಮೀ ಆಗಿರುವುದು. ೧೯೭೧ರಲ್ಲಿ ಶಿರುಗುಪ್ಪ ತಾಲೂಕಿನಲ್ಲಿ ಬಿದ್ದ ಮಳೆ ೭೨೩.೪ ಮಿ.ಮೀ.ನಷ್ಟಿತ್ತು ಮತ್ತು ಮಲ್ಲಾಪುರ ಎಂಬಲ್ಲಿ ೩೬೯.೪ ಮಿ.ಮೀ ನಷ್ಟು ಮಳೆಯಾಗಿತ್ತು.

ಕಳೆದ ೪೦ವರ್ಷಗಳಿಂದಲೂ ಮಳೆ ಪ್ರಮಾಣವು ೪೦೦ ಮಿ.ಮೀ ನಿಂದ ೭೦೦ ಮಿ.ಮೀಗಳಷ್ಟು ಆಗಿದೆ. ಈ ಭಾಗದಲ್ಲಿ ಆಗಾಗ ಬಂಗಾಳ ಕೊಲ್ಲಿಯಿಂದ ಬೀಸಿರುವ ಚಂಡಮಾರುತದ ಪರಿಣಾಮದಿಂದ ಅದರಲ್ಲೂ ಅಕ್ಟೋಬರ್-ನವಂಬರ್ ತಿಂಗಳಲ್ಲಿ ಅತಿ ಹೆಚ್ಚಾದ ಬಿರುಸಾದ ಮಳೆಗಾಳಿ ಆಗುತ್ತದೆ. ಕೃಷಿಗೆ

ಸಂಬಂಧಿಸಿವಂತೆ ಸಂಶೋಧನಾ ಕೇಂದ್ರ ಹಾಗೂ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅದರಲ್ಲಿ ೧೯೫೪ರಿಂದು ಕೇಂದ್ರ ಸರಕಾರವು ದಾಕ್ಷಿಣಾತ್ಯ ಪ್ರಾದೇಶಿಕ ಮಣ್ಣು ಸಂರಕ್ಷಣ ಸಂಶೋಧನ ಕೇಂದ್ರ ವ್ಯವಸಾಯ ತರಬೇತಿಯನ್ನು ಬಳ್ಳಾರಿಯಲ್ಲಿ ಸ್ಥಾಪಿಸಿದೆ. ಹೊಸಪೇಟೆ, ಕಂಪ್ಲಿ ಗ್ರಾಮದಲ್ಲಿ ವ್ಯವಸಾಯ ತರಬೇತಿ ಶಾಲೆ ಇದೆ. ಹಾಗೂ ೧೯೦೬-೦೭ ಮದ್ರಾಸ್ ಸರಕಾರವು ಹಗರಿ ಮತ್ತು ಸಿರುಗುಪ್ಪ ಬಳಿ ವ್ಯವಸಾಯ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿತು. ವ್ಯವಸಾಯ ಇಲಾಖೆ ಇತರೆ ಸಂಘ, ಸಂಸ್ಥೆ ಹಾಗೂ ತೋಟಗಾರಿಕಾ ಇಲಾಖೆಯೊಂದಿಗೆ ಸೇರಿ ವ್ಯವಸಾಯ ರಂಗದಲ್ಲಿ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳುವಲ್ಲಿ ಸಫಲವಾಗುತ್ತಿದೆ. ೧೯೭೦-೭೧ರಲ್ಲಿ ಒಣಭೂಮಿ ವ್ಯವಸಾಯ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಇವೆಲ್ಲವುಗಳಿಂದ ಉತ್ಪಾದನೆ ಯಲ್ಲಿ ಪ್ರಗತಿ ಸಾಧಿಸಲು ಸಹಕಾರಿಯಾಗಿದೆ.

೨.೧೨. ಕೈಗಾರಿಕೆಗಳು

ಬಳ್ಳಾರಿ ಜಿಲ್ಲೆಯು ಪ್ರಮುಖವಾಗಿ ವ್ಯವಸಾಯ ಪ್ರಧಾನವಾಗಿದ್ದರೂ ಸಹ ಕೈಗಾರಿಕೆ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಬಳ್ಳಾರಿ, ಹೊಸಪೇಟೆ, ಸಂಡೂರು ತಾಲೂಕಿನಲ್ಲಿ ೨೧ ಗಣಿಗಳಿವೆ. ಈ ಗಣಿಗಳಲ್ಲಿ ಕಬ್ಬಿಣ, ಮ್ಯಾಂಗನೀಸ್, ಮತ್ತು ರೆಡ್‌ಆಕ್ಸೈಡ್‌ಗಳು ಯಥೇಚ್ಚವಾಗಿವೆ. ಸಂಡೂರು ತಾಲೂಕಿನಲ್ಲಿ ಅಧಿಕ ಪ್ರಮಾಣದ ಮ್ಯಾಂಗನೀಸ ದೊರೆಯುತ್ತದೆ. ಈ ಅದಿರನ್ನು ಕಾರವಾರ, ಗೋವಾ ಮತ್ತು ಮದರಾಸು ಬಂದುರುಗಳಿಗೆ ರವಾನಿಸಲಾಗುತ್ತದೆ. ಈ ಉದ್ಯಮದಿಂದಲೇ ಅಧಿಕ ಆದಾಯವು ಸಿಗುತ್ತದೆ. ಸಂಡೂರು ತಾಲೂಕಿನ ದೋಣಿಮಲೈಯಲ್ಲಿ ೧೯೭೦ರಲ್ಲಿ ಕಬ್ಬಿಣ ಅದಿರು ಯೋಜನೆಯೊಂದು ಜಾರಿಗೆ ಬಂದಿತು. ಈ ಯೋಜನೆಯನ್ನು ಎನ್.ಎಂ.ಡಿ.ಸಿ. (ರಾಷ್ಟ್ರೀಯ ಖನಿಜ ಅಭಿವೃದ್ಧಿ ಸಂಸ್ಥೆ) ವಹಿಸಿಕೊಂಡಿದೆ. ಇದರಿಂದ ೯೮ ದಶಲಕ್ಷದಷ್ಟು ಕಬ್ಬಿಣದ ಅದಿರು ಉತ್ಪಾದನೆ ಮಾಡುವ ಗುರಿ ಹೊಂದಿತ್ತು. ಇದಕ್ಕೆ ೨೧ ಕೋಟಿ ಬಂಡವಾಳ ವಿನಿಯೋಗಿಸಲಾಯಿತು (ಚಂದ್ರಶೇಖರ ಟಿ.ಎಸ್. ಪುಟ, ೪೯.೧೯೯೪) ಎಂದು ತಿಳಿದಿದೆ. ಹೊಸಪೇಟೆ ಕಂಪ್ಲಿ ಮುನಿರಾಬಾದ್ ಸಕ್ಕರೆ ಕಾರ್ಖಾನೆ ಸ್ಥಾಪನೆಯಾದವು. ಈಗ ಹೊಸಪೇಟೆ ಸಕ್ಕರೆ ಕಾರ್ಖಾನೆಯೊಂದು ಚಾಲನೆಯಲ್ಲಿದೆ. ಇನ್ನೆರಡೂ ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಲಾಗಿವೆ. ಸಕ್ಕರೆ ಕಾರ್ಖಾನೆಯ ಉಪ ಉತ್ಪನ್ನದಿಂದ ಸ್ಪಿರಿಟ್ ಮತ್ತು ಮಾದಕ ಪಾನೀಯಗಳನ್ನು ತಯಾರಿಸುವ ಕಾರ್ಖಾನೆಯ ಕಾರ್ಯಾಗಾರ ಮೊದಲು ಸ್ಥಾಪನೆಯಾಗಿದೆ. ಇದು ಕರ್ನಾಟಕ-ಆಂಧ್ರ ಮತ್ತು ಕೇಂದ್ರ ಸರಕಾರದ ಪಾಲು ಹಂಚಿಕೆಯೊಂದಿಗೆ ನಡೆಯುತ್ತಿದೆ. ಇಲ್ಲಿ ೧೯೬೯-೭೦ ರಲ್ಲಿ ವಾರ್ಷಿಕ ಉತ್ಪನ್ನವು ೩೮೬೨ ಮೆಟ್ರಿಕ್‌ಟನ್ ರಷ್ಟಿತ್ತು. ಈಚೆಗೆ ಹೊಸಪೇಟೆ ಸಮೀಪದ ಸಂಡೂರು ತಾಲೂಕಿನ ತೋರಣಗಲ್ಲಿನಲ್ಲಿ ಜಿಂದಾಲ್ ಸಂಸ್ಥೆಯೊಂದು ನಡೆಸುತ್ತಿರುವ ವಿಜಯನಗರ ಉಕ್ಕಿನ ಕಾರ್ಖಾನೆಯು ಭಾರಿ ಉದ್ಯಮಗಳಲ್ಲಿ ಒಂದಾಗಿದೆ. ಜಿಲ್ಲೆಯ ಬೃಹತ್ ಉದ್ಯಮಗಳಲ್ಲಿ ಒಂದಾಗಿರುವ ಎಂ.ಜಿ.ಆಟೋಮೊಬೈಲ್ ಎಂಜಿನಿಯರಿಂಗ್ ಕಂಪನಿಯನ್ನು ೧೯೨೮ರಲ್ಲಿ ಸ್ಥಾಪಿಸಲಾಗಿದೆ. ಪ್ರತಿ ತಿಂಗಳು ಬಸ್ಸುಗಳ ಮೈಕಟ್ಟುಗಳನ್ನು ನಿರ್ಮಿಸುತ್ತದೆ.

ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ೨೪೩ ಕೈಗಾರಿಕೆಗಳಿದ್ದು ಒಂದು ಕೈಗಾರಿಕಾ ಎಸ್ಟೇಟ್ ಮತ್ತು ಆರು ಶೆಡ್‌ಗಳಿವೆ. ೧೫ ಎಣ್ಣೆ ಗಿರಣಿಗಳಿದ್ದರೆ ೨೧ ಘಟಕಗಳು, ಹತ್ತಿ ಕೈಗಾರಿಕೆಗಳು ಮತ್ತು ೨೯ ಸಾಮಾನ್ಯ ಇಂಜಿನಿಯರಿಂಗ್ ಉದ್ಯಮಗಳಿವೆ. ಸಣ್ಣ ಕೈಗಾರಿಕೆಗಳಾದ ಚರ್ಮ ಮತ್ತು ರಬ್ಬರ ತಯಾರಿಕೆ, ಬೀಡಿ ಕಟ್ಟುವ ಉದ್ಯಮ ಮತ್ತು ಮುದ್ರಣಾಲಯಗಳಿವೆ. ೧೯೬೯-೭೦ರಲ್ಲಿ ಬಳ್ಳಾರಿ ಹಾಗೂ ಹೊಸಪೇಟೆಯಲ್ಲಿ ಎರಡು ರಾಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ಹತ್ತಿ, ರೇಷ್ಮೆ ಮತ್ತು ಉಣ್ಣೆ ನೇಯುವ ೬೦೦ ಕೈಮಗ್ಗಗಳಿವೆ. ಸಹಕಾರ ಸಂಘಗಳ ನೆರವಿನಿಂದ ಆರಂಭಗೊಂಡ ೯ ಗಾಣದ ಎಣ್ಣೆ ಉತ್ಪಾದನಾ ಘಟಕಗಳಿವೆ. ಇದಲ್ಲದೆ ಮರಕೊರೆಯುವ, ಎತ್ತಿನ ಗಾಡಿಗೆ ಲಭ್ಯವಾಗುವ ಸಲಕರಣೆಗಳನ್ನು ತಯಾರಿಸುವ ೨೪ ಘಟಕಗಳು ಹಾಗೂ ಮಡಿಕೆ, ಚಾಪೆ ಮೊದಲಾದವನ್ನು ತಯಾರಿಸುವ ಸಣ್ಣ ಪ್ರಮಾಣದ ಆದಾಯ ನೀಡುವ ಉದ್ಯಮಗಳು ಹೆಚ್ಚಾಗಿವೆ.

ಈ ಜಿಲ್ಲೆಯಲ್ಲಿ ರಫ್ತಾಗುವ ವಸ್ತುಗಳೆಂದರೆ ಹತ್ತಿ, ನೆಲಗಡಲೆ, ಜೋಳ, ಭತ್ತ, ಸಕ್ಕರೆ, ಈರುಳ್ಳಿ, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಜಮಖಾನೆಗಳು, ಉಣ್ಣೆಕಂಬಳಿ ಮುಂತಾದವು. ಆಮದು ಆಗುವ ವಸ್ತಗಳೆಂದರೆ ಸಿಮೆಂಟು, ಆಭರಣಗಳು, ಟೀ, ಕಾಫಿ ಬೀಜ, ಮಸಾಲೆ ಸಾಮಾನು, ಗೋಧಿ, ಹತ್ತಿಬಟ್ಟೆ, ಯಂತ್ರೋಪಕರಣಗಳು, ಔಷಧಿಗಳು, ಕಾಗದ ಮುಂತಾದುವು. ಹೊಸಪೇಟೆ, ಕೊಟ್ಟೂರು, ಬಳ್ಳಾರಿಯ ಆಂತರಿಕ ವ್ಯಾಪಾರದ ಕೇಂದ್ರಗಳಿವೆ. ಸಗಟು ವ್ಯಾಪಾರದಿಂದ ಇರುವ ವಸ್ತಗಳೆಂದರೆ ಹತ್ತಿ, ಕಡಲೆಕಾಯಿ, ಎಣ್ಣೆ, ಜೋಳ, ದ್ವಿದಳ ಧಾನ್ಯ ಕಂಬಳಿ ಮುಂತಾದುವು. ಜಾನುವಾರುಗಳ ವ್ಯಾಪಾರವು ಪ್ರಮುಖವಾಗಿದೆ. ಜಿಲ್ಲೆಯ '೪೦' ಸ್ಥಳಗಳಲ್ಲಿ ವಾರಕ್ಕೊಮ್ಮೆ ಮಾರುಕಟ್ಟೆ ಇರುತ್ತದೆ. ಕೆಲವು ಸ್ಥಳಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳು ಇರುತ್ತವೆ.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಶಾಖೆಗಳಿವೆ. ಪ್ರಾಥಮಿಕ ಅಭಿವೃದ್ಧಿ ಬ್ಯಾಂಕ್, ಕೃಷಿಸಾಲ ನೀಡಿಕೆ ಸಹಕಾರ ಸಂಘಗಳು ವ್ಯವಸಾಯೇತರ ಉದ್ದೇಶಕ್ಕೆ ನೀಡುವ ಸಂಘಗಳು ಆರಂಭವಾಗಿವೆ. ಪ್ರಾಥಮಿಕ ಬಳಕೆದಾರರ ಸಹಕಾರ ಬ್ಯಾಂಕ್ ಅದರ ಶಾಖೆಗಳು, ಗೃಹ ನಿರ್ಮಾಣ ಸಹಕಾರ ಸಂಘ, ತುಂಗಾಭದ್ರ ವ್ಯವಸಾಯ ಉಪಕರಣ ಸಹಕಾರ ಸಂಘಗಳು ಭಾರತೀಯ ಸ್ಟೇಟ್ ಬ್ಯಾಂಕ್‌ಗಳು ೧೯೭೨ರಲ್ಲಿ ೩೯ ವಾಣಿಜ್ಯ ಬ್ಯಾಂಕ್‌ಗಳು ಸ್ಥಾಪಿತವಾಗಿವೆ. ಇವುಗಳು ಹಣಕಾಸು ವ್ಯವಹಾರದ ಕಾರ್ಯವನ್ನು ನಿರ್ವಹಿಸುತ್ತದೆ.

೨.೧೩. ಮಾರ್ಗಗಳು

ದಕ್ಷಿಣ ಭಾರತದಲ್ಲೇ ಬಳ್ಳಾರಿಯು ಮಧ್ಯಭಾಗದಲ್ಲಿದೆ. ಬಳ್ಳಾರಿಯಿಂದ ಸಾಗಿಬರುವ ಸಂಪರ್ಕ ಸಾಧನೆಗಳಲ್ಲಿ ರಸ್ತೆ ಮಾರ್ಗವು ಒಂದಾಗಿದೆ. ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಪಣಜಿ, ಮಂಗಳೂರು, ಸೊಲ್ಲಾಪುರ, ಪುಣೆ, ಮುಂಬೈ, ಹೈದರಾಬಾದ್, ವಿಜಯವಾಡ, ಮದ್ರಾಸ್, ಮಚಲಿಪಟ್ಟಣ ಮೊದಲಾದ

ಸ್ಥಳಗಳಿಗೆ ಹೆದ್ದಾರಿ ಸ್ಥಳಗಳಿವೆ. ಕೆಲವು ರಸ್ತೆಗಳು ಇಂತಿವೆ. ಹೊಸಪೇಟೆ- ಸಂಡೂರು ರಸ್ತೆ, ಹೊಸಪೇಟೆ-ಹಗರಿಬೊಮ್ಮನಹಳ್ಳಿ ರಸ್ತೆ, ಹೊಸಪೇಟೆ-ಕಂಪ್ಲಿ ರಸ್ತೆ, ಹರಪನಹಳ್ಳಿ ರಸ್ತೆ, ಕೂಡ್ಲಿಗಿ, ಸಂಡೂರು, ಕುರುಗೋಡು ರಸ್ತೆ, ಕೂಡ್ಲಿಗಿ-ಗುಡೇಕೋಟೆ, ರಾಯದುರ್ಗ ರಸ್ತೆ, ಕೂಡ್ಲಿಗಿ ಗೌರಾಪುರ ರಸ್ತೆ, ಬಳ್ಳಾರಿ ಹೊಸಪೇಟೆ ತಂಬ್ರಹಳ್ಳಿ, ಬಳ್ಳಾರಿ ಕಂಪ್ಲಿ ರಸ್ತೆ, ಬಳ್ಳಾರಿ ಸಿರುಗುಪ್ಪ ರಸ್ತೆ, ಸೋಮನಹಳ್ಳಿ ರಸ್ತೆ, ರಾಮದುರ್ಗ ಕಣೇಕಲ್ಲು ರಸ್ತೆ, ತೋರಣಗಲ್ಲು ರಾಯದುರ್ಗ ರಸ್ತೆಗಳು ಕಂಡುಬರುತ್ತದೆ. ಇಂದು ತಾಲೂಕಿನ ಹೋಬಳಿ ಹಾಗೂ ಗ್ರಾಮದಲ್ಲಿ ಸಾರಿಗೆ ಸೌಕರ್ಯ ಕಲ್ಪಿಸಿದೆ.

೨.೧೪. ರೈಲು ಮಾರ್ಗ

ರೈಲು ಮಾರ್ಗವು ಬಳ್ಳಾರಿ ಜಿಲ್ಲೆಯಲ್ಲಿ ೨೦೯ ಕಿ,ಮೀ ಇದೆ. ಬಳ್ಳಾರಿ-ರಾಯದುರ್ಗ ಮಾರ್ಗ, ಗುಂತಕಲ್ಲು, ಬಳ್ಳಾರಿ, ಹೊಸಪೇಟೆ ಕೊಟ್ಟೂರು ಮಾರ್ಗ ೧೯೬೬ರಲ್ಲಿ ಹಾಗೂ ಗುಂತಕಲ್ಲು, ಹೊಸಪೇಟೆ ಬ್ರಾಡ್‌ಗೇಜ್ ಮಾರ್ಗಗಳನ್ನು ನಿರ್ಮಿಸಲಾಯಿತು. ಮುನಿರಾಬಾದ್-ಸಿಕೆಂದರಾಬಾದ್‌ಗೆ ಬ್ರಾಡ್‌ಗೇಜ್ ನಿರ್ಮಾಣ ಕಾರ್ಯಕ್ಕೆ ಶಿಲಾ ಕಟ್ಟಡವನ್ನು ಹಾಕಲಾಗಿದೆ. ಇಲ್ಲಿ ಅಂಚೆ ಕಛೇರಿಗಳು ೪೩೨, ತಂತಿ ಕಛೇರಿಗಳು ೪೪ ಇವೆ. ೧೯೭೨ರಲ್ಲಿ ದೂರವಾಣಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳಿವೆ. ಇವುಗಳಲ್ಲಿ ೮ ಅಸ್ಪತ್ರೆ, ೩೩ ಔಷಧಾಲಯಗಳು ೧೨ ಪ್ರಾಥಮಿಕ ಅರೋಗ್ಯ ಕೇಂದ್ರಗಳು ೭೬ ಆರೋಗ್ಯ ಕೇಂದ್ರಗಳು, ೨ ವಿ.ಡಿ.ವೈದ್ಯಾಲಯಗಳು, ೧ ಕ್ಷಯರೋಗ ಚಿಕಿತ್ಸಾಕೇಂದ್ರ, ೧ ರಕ್ತ ಬ್ಯಾಂಕ್, ೧ ಆರೋಗ್ಯ ಪ್ರಯೋಗವನ್ನು ೧೯೭೪ರಲ್ಲಿ ಸ್ಥಾಪಿಸಲಾಗಿದೆ.

೨.೧೫. ಪತ್ರಿಕೋದ್ಯಮ

ಬಳ್ಳಾರಿ ಜಿಲ್ಲೆಯಲ್ಲಿ ಪತ್ರಿಕೋದ್ಯಮದಲ್ಲಿ ಹೊಸ ದಾಖಲೆಯನ್ನು ನಿರ್ಮಿಸಲಾಗಿದೆ. ೧೮೧೫ರಲ್ಲಿ ಮೊಟ್ಟ ಮೊದಲು ಪ್ರಿಂಟಿಂಗ್ ಪ್ರೆಸ್ ಬಳ್ಳಾರಿಯಲ್ಲಿ ಪ್ರಾರಂಭವಾಯಿತು. ಇದು ಲಂಡನ್ನಿನ ಮಿಷನರಿಗಳ ಸಹಯೋಗದೊಂದಿಗೆ ಸ್ಥಾಪಿಸಲಾಯಿತು. ಆಗ ಇದ್ದ ಸೂಪರಿಟೆಂಡೆಂಟ್ ಮಿ.ಕೇನಿಯವರ ನೇತೃತ್ವದಲ್ಲಿ ಅಮರಕೋಶ ಹಾಗೂ ಬೈಬಲ್ಲಿನ ಕನ್ನಡ ಅನುವಾದ ೧೯ನೇ ಶತಮಾನದಲ್ಲಿ ಪ್ರಕಟವಾದವು. ಈಗಿರುವ ಬಳ್ಳಾರಿಯ ವಾರ್ಡ್ಲಾ ಪ್ರೌಢ ಶಾಲೆಯಲ್ಲಿ ಅಂದು ಪ್ರಿಂಟಿಂಗ್ ಪ್ರೆಸ್ಸನ್ನು ನಡೆಸಲಾಗುತ್ತಿತ್ತು. ಇದರ ನಂತರ ಬೇರ ಬೇರೆ ಭಾಷೆಗಳ ಪತ್ರಿಕೆಗಳು ಬೆಳಕಿಗೆ ಬಂದವು. ೧೯೧೨ರಲ್ಲಿ ಸನ್ಮಾರ್ಗ ವಿಜಯ ಬೇತಾಳ, ಚಂದ್ರಿಕ ಎಂಬ ತೆಲುಗು ಪತ್ರಿಕೆ ಪ್ರಕಟಿಸಲಾಯಿತು. ಇದೇ ಅವಧಿಯಲ್ಲಿ ಕೆ.ಎಂ.ಕರಿಬಸವ ಶಾಸ್ತ್ರಿಗಳ ಸಂಪಾದನೆಯಲ್ಲಿ ಬಳ್ಳಾರಿಯಲ್ಲಿ 'ಬಳ್ಳಾರಿ ಭಾರತಿ'ಯೆಂಬ ಪತ್ರಿಕೆ ಪ್ರಕಟಿಸುತ್ತಿದ್ದರು.

೧೯೨೪ರಲ್ಲಿ ಕರ್ನಾಟಕ ಬಂಧು ಎಂಬ ವಾರಪತ್ರಿಕೆಯನ್ನು ವೈ.ನಾಗೇಶ ಶಾಸ್ತ್ರಿ ಹೊರಡಿಸಿದರು. ೧೯೨೬ರಲ್ಲಿ ರಂಗನಾಥ ಮೊದಲಿಯಾರ್ ಹಾಗೂ ಡಾ. ಅರ್.ನಾಗನಗೌಡನವರು ಸೇರಿಕೊಂಡು 'ಪ್ರಜಾಬಿಂದು' ಪತ್ರಿಕೆ

ಪ್ರಕಟಿಸಿದರು. ಟಿ.ಹೆಚ್.ಎಂ.ಒಳ ಬಸವಶಾಸ್ತ್ರಿಯವರ ಸಂಪಾದಕತ್ವದಲ್ಲಿ 'ನವಸಂದೇಶ' ಎಂಬ ಮೊಟ್ಟ ಮೊದಲ ವಾರಪತ್ರಿಕೆ ಪ್ರಕಟವಾಯಿತು. ಇವರ ನಂತರ ಪತ್ರಿಕೆಯನ್ನು ಟಿ.ಹೆಚ್.ಎಂ. ಚಂದ್ರಶೇಖರ ಶಾಸ್ತ್ರಿಗಳು ವಹಿಸಿಕೊಂಡರು.

ಪ್ರಥಮಬಾರಿಗೆ 'ಮಂಗಳೂರು ಸಮಾಚಾರ' ಪತ್ರಿಕೆಯು ಬಳ್ಳಾರಿಯಲ್ಲಿ ೧೯೪೪ರಲ್ಲಿ 'ಕನ್ನಡ ಸಮಾಚಾರ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ನಂತರ ಸ್ವಾತಂತ್ರ್ಯ ಚಳುವಳಿಯ ನೆಪದಲ್ಲಿ ಹಲವಾರು ಪತ್ರಿಕೆಗಳು ಪ್ರಕಟವಾಗ ತೊಡಗಿದವು. ಅವುಗಳಲ್ಲಿ ೧೯೩೨ರಲ್ಲಿ 'ಸತ್ಯಾಗ್ರಹ' ಹಾಗೂ 'ನವಭಾರತ' ಎಂಬ ವಾರ ಪತ್ರಿಕೆಯನ್ನು ಹೊಸಪೇಟೆಯ ಎಸ್.ಎಂ.ಕೊಟ್ರಯ್ಯನವರು ಪ್ರಕಟಿಸಿದರು. ೧೯೫೭ರಲ್ಲಿ 'ನಗರನಗಾರಿ' ಎಂಬ ಪತ್ರಿಕೆಯನ್ನು ಹೆಚ್.ಸೋಮೇಶ್ವರರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು.

ಕರ್ನಾಟಕದಲ್ಲಿ ದಿನ ಪತ್ರಿಕೆಗಳ ಪಾತ್ರವೂ ಇಂದು ಗಣನೀಯ ಬದಲಾವಣೆಯನ್ನು ತಂದಿದೆ. ಅವುಗಳಲ್ಲಿ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡ ಪ್ರಭ, ವಿಜಯ ಕರ್ನಾಟಕ, ಜನವಾಹಿನಿ, ಉದಯವಾಣಿ, ದಿನ ಪತ್ರಿಕೆ ಜೊತೆಗೆ ವಾರ ಪತ್ರಿಕೆಗಳಾದ ವನಿತ, ಪ್ರಜಾಮತ, ಕರ್ಮವೀರ, ಸುಧಾ, ಕಸ್ತೂರಿ, ಮಲ್ಲಿಗೆ, ಮೈಯೂರ, ಮುಂತಾದವುಗಳು ಅಲ್ಲದೆ ಇಂಗ್ಲೀಷ್ ಪತ್ರಿಕಗಳಾದ ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸಪ್ರೆಸ್, ಟೈಮ್ಸ್ ಅಫ್ ಇಂಡಿಯಾ, ದಿನ ಪತ್ರಿಕೆಗಳನ್ನು ಬಳ್ಳಾರಿಯಲ್ಲಿ ಅಧಿಕ ಸಂಖ್ಯೆಯ ಓದುಗರು ಇದ್ದಾರೆ.

೨.೧೬. ಶಿಕ್ಷಣ

ಶ್ರೀ ಸಾಮಾನ್ಯನಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸುವಲ್ಲಿ ಸರಕಾರಿ ಶಿಕ್ಷಣ ಸಂಸ್ಥೆ, ಖಾಸಗಿ ಶಿಕ್ಷಣ ಸಂಸ್ಥೆ, ಸ್ಥಳೀಯ ಸಂಸ್ಥೆಗಳ ಪಾತ್ರ ಹಿರಿದಾದುದಾಗಿದೆ. ಈ ಹಿಂದೆ ಇಂತಹ ಶಿಕ್ಷಣವನ್ನು ಗುರುಕುಲಗಳು, ಮಠಮಾನ್ಯಗಳು ದೇವಾಲಯಗಳಲ್ಲಿ ಹೇಳಿ ಕೊಡುತ್ತಿದ್ದರು. ಈ ಶಿಕ್ಷಣದಲ್ಲಿ ಕೇವಲ ಸೀಮಿತ ಜನರಿಗೆ ಮಾತ್ರ ಅವಕಾಶವಿತ್ತು. ಆಗ ತೀರಾ ಕೆಳವರ್ಗ ಮತ್ತು ಜಾತಿಯವರು ಶಿಕ್ಷಣದಿಂದ ವಂಚಿತರಾಗುತ್ತಿದ್ದರು.

ಕ್ರಿ.ಶ.೧೯ನೇ ಶತಮಾನದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಸಾಮಾನ್ಯರಿಗೂ ದೊರೆಯುವಂತೆ ಮಾಡಿದವರು ಕ್ರೈಸ್ತ ಮಿಷನರಿಗಳು. ಇವರಲ್ಲಿ ಮೊಗ್ಲಿಂಗ್‌ನು ೧೮೩೭ರಲ್ಲಿ ಇಂಗ್ಲಿಷ್ ಶಾಲೆಯನ್ನು ಬಳ್ಳಾರಿಯಲ್ಲಿ ಆರಂಭಿಸಿದರು. ನಂತರದಲ್ಲಿ ಪ್ರತಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದರೊಂದಿಗೆ ಸರಕಾರವು ಕಡ್ಡಾಯ ಶಿಕ್ಷಣ ಎಂಬ ಯೋಜನೆ ಹಮ್ಮಿಕೊಂಡಿದೆ. ಜೊತೆಗೆ ಅನಕ್ಷರತೆ ನಿವಾರಣೆಗಾಗಿಯೇ ಶಾಶ್ವತ ಅಕ್ಷರ ಕಲಿಕಾ ಕೇಂದ್ರಗಳನ್ನು ತೆರೆಯಲಾಗಿದೆ.

೧೯೯೧-೯೨ರಲ್ಲಿ ಪಟ್ಟಣಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ೫೩,೨೩೨ ಬಾಲಕರು ಪಡೆದರೆ ೪೨,೯೯೯ ಬಾಲಕಿಯರು ಶಿಕ್ಷಣವನ್ನು ಹಾಗೂ ಗ್ರಾಮೀಣ ಪ್ರದೇಶದಲ್ಲಿ ೧,೧೭೨೫೩ ಬಾಲಕರು ೮೩,೯೦೧

ಬಾಲಕಿಯರು ಶಿಕ್ಷಣ ಪಡೆಯುತ್ತಿದ್ದರು. ಇಷ್ಟಾದರು ಬರುಬರುತ್ತಾ ಅನೇಕ ಹಳ್ಳಿಗಳಲ್ಲಿ ನವೋದಯ ಹಾಗೂ ಮುರಾರ್ಜಿದೇಸಾಯಿ ಶಾಲೆಗಳನ್ನು ತೆರೆದು ವಿದ್ಯೆಯನ್ನು ಕಲಿಯಲು ಸರಕಾರವು ಅನುವು ಮಾಡಿಕೊಡುತ್ತಿದೆ. ಕೂಡ್ಲಿಗಿಯ ಹತ್ತಿರದ ಚಿಕ್ಕಜೋಗಿ ಹಳ್ಳಿಯಲ್ಲಿ ಜವಾಹರ ನವೋದಯ ವಸತಿ ಶಾಲೆಯನ್ನು ತೆರೆಯಲಾಯಿತು. ೧೯೯೧-೯೨ರಲ್ಲಿ ೩೨೦ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ.

ಪ್ರೌಢಶಾಲಾ ವಿದ್ಯಾರ್ಥಿಗಳ ಸಂಖ್ಯೆ ೪೩೧೩೨ರಷ್ಟು ಇತ್ತು. ಪದವಿ ಪೂರ್ವ ಶಿಕ್ಷಣವು ಪ್ರೌಢಶಾಲೆಯಲ್ಲಿ ಸೇರ್ಪಡಿಸಲಾಗಿದೆ. ಅಲ್ಲದೆ ಕೆಲವು ಕಾಲೇಜುಗಳ ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ ಸೇರಿರುತ್ತವೆ. ಆದರೆ ಸ್ವಾತಂತ್ರ ಪದವಿ ಪೂರ್ವ ವಿದ್ಯಾಲಯಗಳನ್ನು ೩ ಭಾಗಗಳಾಗಿ ವಿಂಗಡಿಸಬಹುದು. ೧೯೯೧-೯೨ ರಲ್ಲಿ ೨೧ ಸಂಯುಕ್ತ ಪದವಿಪೂರ್ವ ವಿದ್ಯಾಲಯಗಳು ಇದ್ದವು. ಅನುದಾನರಹಿತ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯಗಳ ಸಂಖ್ಯೆ ೩, ಅನುದಾನರಹಿತ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಗಳು ಜಿಲ್ಲೆಯಲ್ಲಿ ೪ ಹಾಗೂ ಸರಕಾರವು ನಡೆಸುತ್ತಿದ್ದ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯಗಳು ೧೪ ಇವೆ. ಅಲ್ಲದೆ ೧೬ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯಗಳನ್ನು ನಡೆಸುತ್ತಿದ್ದರು. ಒಟ್ಟಾಗಿ ೩೭ ಪದವಿ ಪೂರ್ವ ವಿದ್ಯಾಲಯಗಳು ಸ್ಥಾಪನೆಯಾಗಿದ್ದವು. ೧೯೮೯-೯೦ ರಲ್ಲಿ ಪದವಿ ಪೂರ್ವ ವಿದ್ಯಾರ್ಥಿಗಳ ಸಂಖ್ಯೆ ೧೩,೯೩೮ ಇತ್ತು (ವೆ.ಮ.ರಾಜಶೇಖರ ಪು. ೧೯:೧೯೯೪).

ಉನ್ನತ ಶಿಕ್ಷಣ ಸೌಲಭ್ಯಗಳು ಬಳ್ಳಾರಿ ಜಿಲ್ಲೆಯಲ್ಲಿ ಬಹಳ ತಡವಾಗಿಯೇ ಆರಂಭಗೊಂಡವು. ಕರ್ನಾಟಕ ವಿಶ್ವವಿದ್ಯಾಲಯದ ಅಡಿಯಲ್ಲಿ ೧೯೬೪-೬೫ರಲ್ಲಿ ಗುಲ್ಬರ್ಗದಲ್ಲಿ ಆರಂಭದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆಯಲಾಯಿತು. ಅನಂತರ ಆ ಕೇಂದ್ರವು ಪ್ರತೇಕ ವಿಶ್ವವಿದ್ಯಾಲಯವಾಗಿ ರೂಪುಗೊಂಡಿದೆ. ಈ ಮಹಾ ವಿದ್ಯಾಲಯದ ಅಡಿಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘ ೧೯೫೪ ರಿಂದ ವೀರಶೈವ ಮಹಾವಿದ್ಯಾಲಯವನ್ನು ಸ್ಥಾಪಿಸಲಾಯಿತು. ಆಗ ಆ ಕಾಲೇಜಿಗೆ ವೈ.ಮಹಾಬಲೇಶ್ವರರ ಶ್ರಮದಿಂದ ಚಾಲನೆ ದೊರೆಯಿತು. ೧೯೯೧-೯೨ರಲ್ಲಿ ಬಳ್ಳಾರಿಯಲ್ಲಿ ೨೭೧೨ ವಿದ್ಯಾರ್ಥಿಗಳು, ೩೧೩ ವಿದ್ಯಾರ್ಥಿನಿಯರಿಗೆ ಬೇರೆಬೇರೆ ರೀತಿಯಲ್ಲಿ ಕೋರ್ಸ್‌ಗಳನ್ನು ಆರಂಭಿಸಿ ಶಿಕ್ಷಣ ನೀಡಲಾಯಿತು. ಆಗ ಇದ್ದ ಬೋಧಕರ ಸಂಖ್ಯೆ ೧೧೫ ಹಾಗೂ ಭೋಧಕೇತರ ಸಿಬ್ಬಂದಿಯ ಸಂಖ್ಯೆ ೩೩ರಷ್ಟು ಇತ್ತು. ಈ ಸಂಘವು ಅನೇಕ ಶಾಖೆಗಳನ್ನು ತೆರೆಯಿತು. ಅವುಗಳಲ್ಲಿ ಹೊಸಪೇಟೆ, ಹರಪನಹಳ್ಳಿ, ಕೊಟ್ಟೂರು, ಹಡಗಲಿ, ತಂಬ್ರಹಳ್ಳಿ, ಕುಡುತಿನಿ, ಇನ್ನೂ ಮುಂತಾದ ಕಡೆ ಸ್ಥಾಪಿಸಲಾಯಿತು. ೧೯೯೨-೯೩ರಲ್ಲಿ ೬೪ ಪ್ರೌಢ ಶಾಲೆ ೭೦೪ ಕಿರಿಯ ಪ್ರಾಥಮಿಕ ಶಾಲೆ, ೭೦ ಜೂನಿಯರ್ ಕಾಲೇಜ್‌ಗಳು ೭ ಕಲೆ ಮತ್ತು ವಿಜ್ಞಾನ, ವಾಣಿಜ್ಯ ಪದವಿ ಕಾಲೇಜುಗಳು ಮತ್ತು ೧ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲಾಗಿದೆ.

ಸಂಡೂರು ತಾಲೂಕಿನ ನಂದಿಹಳ್ಳಿಯಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇಲ್ಲಿ ಗಣಿತಶಾಸ್ತ್ರ, ವಾಣಿಜ್ಯಶಾಸ್ತ್ರ, ಕನ್ನಡ ಭೂವಿಜ್ಞಾನ, ಮಿನರಲ್,

ಎಕ್ಸಪ್ಲೋರೇಷನ್, ಮಿನರಲ್ ಪ್ರೊಸಸಿಂಗ್ ವಿಷಯಗಳ ಬೋಧನೆ ನೀಡಲಾಗುತ್ತಿದೆ. ಕೊನೆಯ ಎರಡು ಕೋರ್ಸುಗಳನ್ನು ಬಿಟ್ಟರೆ ಇನ್ನುಳಿದ ವಿಷಯಗಳನ್ನು ಬಳ್ಳಾರಿ, ರಾಯಚೂರಿನ ಪಿ.ಜಿ.ಸೆಂಟರ್‌ಗಳಿಗೆ ಸ್ಥಳಾಂತರಿಸಲಾಗಿದೆ. ಈಚೆಗೆ ಇದೇ ವಿಶ್ವವಿದ್ಯಾಲಯದಿಂದ ಎಂ.ಬಿ.ಎ. ಕೋರ್ಸ್‌ನ್ನು ಬಳ್ಳಾರಿಯಲ್ಲಿ ಆರಂಭಿಸಲಾಗಿದೆ. ೧೯೯೧-೯೨ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಹಂಪೆಯಲ್ಲಿ ಸ್ಥಾಪಿತವಾಯಿತು. ಇದು ಕೇವಲ ಸಂಶೋಧನೆಗಾಗಿಯೇ ಮೀಸಲಾಗಿಟ್ಟ ವಿಶ್ವವಿದ್ಯಾಲಯವಾಗಿ ವೈಶಿಷ್ಟ್ಯ ಪಡೆದಿದೆ. ಇಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಇಲ್ಲಿನ ಅಧ್ಯಾಪಕರಿಂದ ಹಾಗೂ ಹೊರಗಿನ ವಿದ್ವಾಂಸರಿಂದ ಹಲವಾರು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲಾಗುತ್ತಿದೆ. ಇದು ಕನ್ನಡಿಗರೆಲ್ಲರ ಸಾಂಸ್ಕೃತಿಕ ಪ್ರತಿನಿಧಿಯಾಗಿದೆ. ಇತ್ತೀಚೆಗೆ ಕನ್ನಡ ಸಾಹಿತ್ಯ, ಜನಪದ ಅಧ್ಯಯನ, ಮಹಿಳಾ ಅಧ್ಯಯನಗಳಲ್ಲಿ ಎಂ.ಎ., ಪಿಹೆಚ್.ಡಿ. ಕೋರ್ಸ್‌ನ್ನು ನಡೆಸುತ್ತಿದ್ದಾರೆ.

೨.೧೭. ಬಳ್ಳಾರಿ ಜಿಲ್ಲೆಯಲ್ಲಿ ರಂಗಭೂಮಿ

ರಂಗಭೂಮಿಯು ದೃಶ್ಯ ಹಾಗೂ ಶ್ರವ್ಯಗಳಿಂದ ಕೂಡಿದ ಒಂದು ಪ್ರಬಲ ಮಾಧ್ಯಮ. ನಾಡಿನ ಸಂಸ್ಕೃತಿ ಹಾಗೂ ನಾಗರಿಕತೆಯ ಪ್ರತೀಕವಾಗಿದೆ. ಕಲಾವಿದರಲ್ಲೇ ಸಮ್ಮತಿ- ಒಮ್ಮತಿ, ಪರಸ್ಪರ ಹೊಂದಾಣಿಕೆ ಸಹಕಾರ ಮನೋಭಾವಗಳು ಅವರಲ್ಲಿಯ ಸುಪ್ತ ಪ್ರತಿಭೆಯು ಆವಿರ್ಭವಿಸಲು ಸಹಕಾರಿಯಾಗಿದೆ.

ಕಲೆಗಳಲ್ಲಿ ಪ್ರದರ್ಶನ ಕಲೆಯು ಅಭಿವ್ಯಕ್ತ ಸ್ಥಾನವನ್ನು ಭದ್ರಪಡಸಿಕೊಂಡಿರುವ ಗಂಡು ಕಲೆ. ಇದು ಮೂಲತಃ ಗ್ರಾಮೀಣ ನೆಲೆಗಳಲ್ಲಿ ಹುಟ್ಟಿ ನಾಗರಿಕತೆ ಬೆಳೆದಂತೆಲ್ಲಾ ತನ್ನ ಅಸ್ತಿತ್ವವನ್ನು ಪಡೆದುಕೊಂಡ ಟೊಂಗೆಗಳು ಎಲ್ಲೆಡೆ ಬೆಳೆದು ಗ್ರಾಮ ಮಣ್ಣಿನ ಗುಣಾಂಶವನ್ನು ಪಡೆದು ಕೊಂಡು ಆಯಾ ಭಾಷೆಗೆ ತಕ್ಕಂತೆ ನಾಟಕಗಳು ಬೆಳೆದು ಸಂಸ್ಕೃತಿಯ ಕನ್ನಡಿಯಾಗಿದೆ. ಹಳೆಗನ್ನಡದಲ್ಲಿ ನಾಟಕಗಳಿಲ್ಲದಿರುವುದು ಇತಿಹಾಸದ ದೃಷ್ಟಿಯಿಂದ ಇದೊಂದು ವಿಪರ್ಯಾಸ. ಆದರೆ ಜನಪದ ಪ್ರದರ್ಶನ ಕಲೆಗಳಾದ ತೊಗಲುಗೊಂಬೆಯಾಟ, ಸೂತ್ರದ ಬೊಂಬೆಯಾಗಟ, ಬಯಲಾಟದಂತಹ ಶ್ರೇಷ್ಠ ಕಲೆಗಳು ರಂಗಭೂಮಿಯನ್ನು ಉಳಿಸಿ ಬೆಳಸಿಕೊಂಡು ಬಂದಿರುವುದು ಸ್ತುತ್ಯ.

ಹಗರಿಬೊಮ್ಮನಹಳ್ಳಿ ತಾಲ್ಲೂಕು ಯಡ್ರಾಮನಹಳ್ಳಿ ದೊಡ್ಡ ಭರ್ಮಪ್ಪ ಅವರದು ವೃತ್ತಿಯಿಂದ ಬಂದಿರುವ ಕಲೆಯೆಂದರೆ ತೊಗಲುಗೊಂಬೆಯಾಟ. ಈ ಕಲೆ ಭರ್ಮಪ್ಪನವರಿಗೆ ಪರಂಪರಾಗತವಾಗಿ ಬಂದಿದೆ. ಕಿಳ್ಳೇಕ್ಯಾತ ಪಂಗಡಕ್ಕೆ ಸೇರಿದ ಇವರು ತಾಯಿ ಭರಮ್ಮಜ್ಜಿಯವರ ಪ್ರೇರಣೆಯಿಂದ ಎಳೆತನದಲ್ಲೇ ಮೇಳಗಾರಿಕೆಯಿಂದ ಹಿಡಿದು ಎಲ್ಲಾ ಕಲೆಗಳ ಕೆಲಸವನ್ನು ಕಲಿತವರು. ತೊಗಲಿನ ನೂರಾರು ಗೊಂಬೆಗಳು ಅಜ್ಜನ ಆಸ್ತಿಯಾಗಿ ಬಳುವಳಿಯಾಗಿವೆ. ಈ ಕಲೆಯಿಂದ ಜೀವನ ನಿರ್ವಹಣೆಗೆ ಕೊರತೆಯಾದಾಗ ಕೃಷಿಗೆ ಅನಿವಾರ್ಯವಾಗಿ ಭರ್ಮಪ್ಪ ಇಳಿದಿದ್ದರು. ಆದರೆ ಭರ್ಮಪ್ಪನವರಿಗೆ ಪ್ರೇರಕ ಶಕ್ತಿಯಾಗಿ, ಬಟ್ಟೆಕಟ್ಟೆ

ಅಟ್ಟದ ಮೂಲೆಯೊಂದರಲ್ಲಿ ಒಗೆದಿದ್ದ ಧೂಳಿನಿಂದ ಕೂಡಿದ್ದ ಗೊಂಬೆಗಳಿಗೆ ಕುಣಿಯುವಂತೆ ಪ್ರೇರಣೆ ನೀಡಿದವರು ಆಗಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಿ.ನಾರಾಯಣರು.

ಯಡ್ರಾಮನಹಳ್ಳಿ ದೊಡ್ಡಭರ್ಮಪ್ಪ ಕೈಚಳಕದಿಂದ 'ಅಟ್ಟಕಟ್ಟುವಿಕೆ'ಯ ರಂಗವಿನ್ಯಾಸ ಬಹಳ ವಿಶೇಷರೀತಿಯಿಂದ ಕೂಡಿರುವುದು. ವ್ಯವಸ್ಥೆ ಬಹಳ ಸುಲಭ ಹಾಗೂ ಸರಳ. ಮನೆಯ ಮಂದಿಯೆಲ್ಲರೂ ಗೊಂಬೆಗಳ ಕೆಲಸದಲ್ಲಿ, ಆಟ ನಡೆಯುವಾಗ ಧ್ವನಿ ಕೊಡುವಲ್ಲಿ ನಿರತರಾಗಿರುತ್ತಾರೆ. ನನ್ನ ಊರಿಗೆ ಐದಾರು ಕಿ.ಮೀ. ದೂರದಲ್ಲಿರುವ ಕಿಳ್ಳೇಕ್ಯಾತರ ದೊಡ್ಡಭರ್ಮಪ್ಪ ಪ್ರಾದೇಶಿಕ ಆಸುಪಾಸಿನಲ್ಲೆಲ್ಲಾ ಪ್ರಸಿದ್ಧರು. ನಮ್ಮ ಊರಿನಲ್ಲಿ ಅತ್ತೆ, ಮಾವ, ಸೊಸೆ, ಮೊಮ್ಮಕ್ಕಳು, ಕಟ್ಟೆಗೆ ಕುಳಿತು ಮಾತಾಡುತ್ತಿದ್ದರೆ ಹೊರಗಿನವರ ಊರಿಗೆ ಅಯ್ಯೋ ಇವರು ಕಿಳ್ಳೇಕ್ಯಾತರ ಭರ್ಮಪ್ಪ ಆಟ ಆಡುತ್ತಿದ್ದಾರೆ. ಎಂದು ಇಂದಿಗೂ ತಮಾಷೆ ಮಾಡುತ್ತಾರೆ. ಇವರ ಗೊಂಬೆಗಳಿಗೆ ರಾಮಾಯಣವೇ ಕಥಾವಸ್ತು. ದೊಡ್ಡಭರ್ಮಪ್ಪ ರಾಮಾಯಣದ ಪ್ರಸಂಗಗಳನ್ನು ಕ್ರಮಬದ್ಧವಾಗಿ ನಿರೂಪಿಸುತ್ತಾರೆ. ಒಂದು ವಾರ ಪೂರ್ತಿ ಪ್ರಯೋಗಿಸಿದರೂ ಆಗದಷ್ಟು ಗೊಂಬೆಗಳಿವೆ. ಅಂಥ ಪ್ರಸಂಗದ ಸನ್ನಿವೇಶದ ಗೊಂಬೆಗಳೂ ಇವರಲ್ಲಿ ಇವೆ.

ಹಲವಾರು ಕಡೆ ಭರ್ಮಪ್ಪ ಪ್ರದರ್ಶನ ನೀಡಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ೧೯೮೫ರಲ್ಲಿ ಜರ್ಮನಿಯ ಅಂತರಾಷ್ಟ್ರೀಯ ತೊಗಲುಗೊಂಬೆ ಮೇಳಕ್ಕೆ ಹೋಗಿ ನಾಡಿನ ಕೀರ್ತಿಗೆ ಗರಿಯನ್ನು ಕಟ್ಟಿದ್ದಾರೆ. ಹಾಗೆಯೇ "ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ" ಪ್ರಶಸ್ತಿಯೂ ಲಭಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿನ ವಿವಿಧ ಸಂಘ ಸಂಸ್ಥೆಗಳು ಭರ್ಮಪ್ಪನವರನ್ನು ಗೌರವಿಸಿವೆ.

ಗೊಂದಲಿಗರು ಗಂಧರ್ವಲೋಕವನ್ನೇ ತೋರಿಸುತ್ತಾರೆಂದು ಪ್ರಖ್ಯಾತಿ ಪಡೆದ ಹಂಪಾಪಟ್ಟಣದ ಗೊಂದಲಿಗರ ದೇವೇಂದ್ರಪ್ಪ ಮತ್ತು ಅವರ ತಂಡದ ಸಂಗಡಿಗರು ರಂಗಭೂಮಿಯ ಜೀವಾಳವಾಗಿದ್ದಾರೆ. ಗೊಂದಲಿಗರು ಕತೆ ಹೇಳುವ ವಿಧಾನ ತುಂಬಾ ಆಕರ್ಷಕವಾದುದು. ಮಧ್ಯದಲ್ಲಿ ನಾಲ್ಕೈದು ಜನರು ಶೃತಿ, ಚೌಡಿಕೆ, ಸಮಾಳ, ಕೈತಾಳ, ವಾದ್ಯಗಳನ್ನು ಬೀಸಿಕೊಂಡು ಮಾತು ಹಾಡುಗಳ ಮೂಲಕ ಅಲ್ಲಲ್ಲಿ ಅಭಿನಯ ನೀಡಿ ಕಥೆ ಹೇಳುತ್ತಾ ಹೋದರೆ, ಪ್ರೋಷಕರು ಗಂಧರ್ವ ಕಿನ್ನರಲೋಕಕ್ಕೆ ಕರೆದೊಯ್ದು ಬಿಡುತ್ತಾರೆ. ನಡುವೆ ಕಲಾವಿದರ ಸುತ್ತಲೂ ಜನರು ನೆರೆದಿರುತ್ತಾರೆ. ಮನೆಯ ಮುಂದಿನ ಕಟ್ಟೆ, ಕಲ್ಲು ಬಂಡೆ, ಇವು ವೇದಿಕೆ ಯಾಗಿದ್ದವು. ಮನೆಯ ಮೇಲೆ ಹತ್ತಿ ಕುಳಿತು ಎಲ್ಲಾ ಮಗ್ಗಲುಗಳಿಂದ ನೋಡುತ್ತಾರೆ. ಹೆಚ್ಚಾಗಿ ರಾಮಾಯಣ ಮಹಾಭಾರತಕ್ಕೆ ಸೇರಿದ ಕಥೆಗಳೇ. ಇವುಗಳಿಗೆ ಕಾಲ ದೇಶಗಳ ನಿಬಂಧನೆಗಳೇ ಇಲ್ಲ. ರಾತ್ರಿ ಊಟವಾದ ಮೇಲೆ ಬೆಳಗುಜಾವದವರೆಗೂ ಕಥೆ ಹೇಳುತ್ತಾರೆ. ಇವರ ಮೋಡಿಯು ಪ್ರೇಕ್ಷಕರ ಮನವನ್ನು ಹಿಡಿದಿಟ್ಟಿರುತ್ತದೆ. ಜನಪದ ವೃತ್ತಿಗಾಯಕರಾಗಿರುವ ಗೊಂದಲಿಗರು ಹಾಡುತ್ತಲೇ ಕುಣಿಯುತ್ತಾರೆ. ಅವರ ಪಂಜಿನ ಕುಣಿತವು ತುಂಬಾ ವಿಶಿಷ್ಟ. ಇವರ ಕುಣಿತವೇ ಕವಿ ಬೇಂದ್ರೇಯವರ 'ಕುರುಡು ಕಾಂಚಾಣ' ಕವನಕ್ಕೆ ಪ್ರೇರಣೆಯಾಗಿದೆ. ಕುರುಡು ಕಾಂಚಾಣದ ಕುಣಿತದ ವರ್ಣನೆ ಗೊಂದಲಿಗರ ಕುಣಿತದ ವರ್ಣನೆಯಾಗಿದೆ.

ಗೊಂದಲಿಗರು ಮಹಾರಾಷ್ಟ್ರದಿಂದ ಶಿವಾಜಿಯ ಕಾಲದಲ್ಲಿ ಕರ್ನಾಟಕಕ್ಕೆ ಗೂಢಚರ್ಯೆಗಾಗಿಯೇ ಬಂದವರೆಂದು ನಂಬಲಾಗಿದೆ. ಇಂಥ ಕುಟುಂಬವೊಂದು ಬಳ್ಳಾರಿ ಜಿಲ್ಲೆಯ ತಂಬ್ರಹಳ್ಳಿಯಲ್ಲಿ ನೆಲೆಯೂರಿದ್ದು ೨೦-೧-೧೯೧೬ರಲ್ಲಿ ದೇವೇಂದ್ರಪ್ಪ ಜನಿಸಿದ್ದಾರೆ. ೫ನೇ ತರಗತಿಯವರೆಗೆ ವ್ಯಾಸಂಗ ಮಾಡಿ ತಮ್ಮ ಹಿಂದೆಯೇ ಹುಟ್ಟಿದ ಸಹೋದರ ಸಣ್ಣ ದುರುಗಪ್ಪನವರೊಡಗೂಡಿ ೧೯೩೪ ರಲ್ಲಿ ಹೊಸಪೇಟೆಗೆ ಹೋಗಿ ಅಲ್ಲಿ ರಾಮಪ್ಪ ಬಿಸೆ ಎಂಬ ಅನುಭವಸ್ಥ ಗೊಂದಲಿಗರ ಬಳಿ ಹಾಡು, ಕಥೆಗಳನ್ನು ಕಲಿತು, ಮುಂದೆ ೧೯೯೧ ಅಂದರೆ ಸುಮಾರು ೪೫ ವರ್ಷಗಳ ಕಾಲ ಹಳ್ಳಿಹಳ್ಳಿಗಳಲ್ಲಿ ಓಡಾಡಿ ಗೊಂದಲಿಗರ ಹಾಡು, ಆಟ, ಕಥೆಗಳನ್ನು ನಿರೂಪಿಸಿ ಸಾವಿರಾರು ಜನರಿಗೆ ಮನರಂಜನೆ ನೀಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ನೀತಿಯನ್ನು ರೂಪಿಸುವಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ. ಜನಪದ ಕಲಾವಿದರ ಮಹತ್ವ ಇರುವುದೇ ಇಲ್ಲಿ. ಸಾರಿಗೆ ಶಿಕ್ಷಣಗಳಂಥ ಸೌಲಭ್ಯಗಳಿಲ್ಲದ ಹಳ್ಳಿಯ ಸಮುದಾಯಕ್ಕೆ ಮನರಂಜನೆ ನೀಡುತ್ತಾ ಸಾಮಾಜಿಕ ಶಿಕ್ಷಣ ನೀಡಿದವರೇ ಇಂಥ ಜನಪದ ಕಲಾವಿದರು. ಅಲ್ಲದೇ ಇವರೆಂದೂ ರಾಜಾಶ್ರಯ, ಬಿರುದುಬಾವಲಿ, ಸನ್ಮಾನಗಳನ್ನು ಬಯಸಿದವರೇ ಅಲ್ಲ. ಶತಶತಮಾನಗಳಿಂದಲೂ ಜನಪದವನ್ನೇ ನಂಬಿ ಬಡತನದಲ್ಲಿಯೇ ಬಾಳಿ ಬೆಳೆದು ಗ್ರಾಮೀಣ ಪ್ರದೇಶದವರಿಗೆ ಜ್ಞಾನಾಭಿವೃದ್ಧಿಗೆ ಕಾರಣರಾಗಿದ್ದಾರೆ. ಇಂಥ ಅಪ್ಪಟ ಪ್ರತಿಭೆ ದೇವೇಂದ್ರಪ್ಪ ವೃತ್ತಿಗಾಯಕರಾಗಿ ತಂಬ್ರಹಳ್ಳಿಯು ತುಂಗಾಭದ್ರ ಜಲಾಶಯದಲ್ಲಿ ಮುಳುಗಡೆಯಾದ್ದರಿಂದ ಹಂಪಾಪಟ್ಟಣಕ್ಕೆ ಬಂದು ನೆಲೆಸಿದ್ದಾರೆ. ಹನ್ನೊಂದು ಜನ ಮಕ್ಕಳು. ದೊಡ್ಡ ಕುಟುಂಬದ ನಿರ್ವಹಣೆಗೆ ದೇವೇಂದ್ರಪ್ಪ ಬೇರೆಯಾವ ವೃತ್ತಿಯಲ್ಲಿ ತೊಡಗಲಿಲ್ಲ. ಗೊಂದಲಿಗರ ಆಟವೇ ಅವರ ಮುಖ್ಯ ವೃತ್ತಿಯಾಗಿದೆ. ಅವರದು ಪರಿಣತ ಮೇಳ. ಅವರು ಆಡುತ್ತಿರುವ ಹದಿನಾಲ್ಕು ಕಥೆಗಳಲ್ಲಿ 'ಗ್ನಾವತಿ ಕೀಲುಗುರುಮ' ಲಕ್ಷಾಪತಿ ರಾಜನ ಕಥೆ, 'ಶೀಲಾವತಿ'' ಮತ್ತು 'ಶಿವಲೋಚನ' ಎಂಬ ಕಥೆಗಳು ಬಹಳ ಹೊಸದಾಗಿದ್ದವು. ಶೋತೃಗಳ ಬೇಸರ ನಿವಾರಿಸಲು ಹಾಸ್ಯ ಕಥೆಗಳನ್ನು ಹೇಳುತ್ತಾ, ಶರೀಫರ ತತ್ವಪದಗಳು, ದಾಸರ ಕೀರ್ತನೆಗಳು, ಶರಣರ ವಚನಗಳನ್ನು ಹೇಳುತ್ತಿದ್ದರು.(ಲೇ: ಹುರಕಡ್ಲಿ ಶಿವಕುಮಾರ, (ಲೇಖನ) ಗೊಂದಲಿಗರ ದೇವೇಂದ್ರಪ್ಪ) ಧಾರವಾಡದ ಆಕಾಶವಾಣಿಯಲ್ಲಿ ಇವರ ಮುವತ್ತು ಹಾಡುಗಳು ಬಿತ್ತರಗೊಳ್ಳುತ್ತಿರುತ್ತವೆ.

ಹಂಪಾಪಟ್ಟಣದ ದೇವೇಂದ್ರಪ್ಪನವರು ತೀರ ಸಾಮಾನ್ಯರಂತೆ ಬಡತನದಲ್ಲಿಯೇ ಬಾಳಿದರೂ ನಿರ್ಭಯದಿಂದ ವರ್ತಿಸುತ್ತಿದ್ದರು. ಹಾಸ್ಯ ಪ್ರಧಾನವಾದ ನಕ್ಕುನಗಿಸುವ ಕತೆಗಳಿಗಾಗಿಯೂ ಜನ ಇವರ ಆಟ ಆಡಿಸುತ್ತಿದ್ದರು. ಹೊಟ್ಟೆ ತುಂಬಾ ನಕ್ಕು ರೋಚಕ ಪತ್ತೇದಾರಿ ಶೈಲಿಯ ಕಥೆಗಳನ್ನು ಕೇಳಿ ಆನಂದಿಸಿದ ಜನ ಇವರಿಗೆ ಹಣವನ್ನು ಕೊಡಲು ಹಿಂದೆ ಮುಂದೆ ಎಂದೂ ನೋಡುತ್ತಿರಲಿಲ್ಲ. ಒಂದು ಆಟಕ್ಕೆ ನೂರಾರು ರೂಪಾಯಿ ಸಿಗುತ್ತಿತ್ತು. ಮತ್ತೆ ಮುಂದಿನ ಊರಲ್ಲಿ ಅದೇ ಕಾಯಕ ಮುದುವರಿಯುತ್ತಿತ್ತು. ಜಾನಪದಕ್ಕೆ ಜನಪದವೇ ಮನ್ನಣೆ ಹಾಗೂ ಪೋಷಣೆ.

೧೯೭೬ರಲ್ಲಿ ಹಂಪಿ ಜನಪದ ಕಲಾ ಮಹೋತ್ಸವ, ೧೯೮೬ರ ಉಡುಪಿಯ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ೧೯೮೩ರ ರಾಷ್ಟ್ರೀಯ ಕಮ್ಮಟ ಹೀಗೆ ಅನೇಕ ಕಡೆ ದೇವೇಂದ್ರಪ್ಪನವರ ಮೇಳ ಯಶಸ್ವಿ ಪ್ರದರ್ಶನ ನೀಡಿದ್ದನ್ನು ಗಮನಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೫ರಲ್ಲಿ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಶಿವರಾಮ ಕಾರಂತರಿಂದ ಸನ್ಮಾನಿಸಿತು. ಗೊಂದಲಿಗರ ಆಟವನ್ನು ತಮ್ಮ ಸಿನಿಮಾ, ನಾಟಕಗಳಲ್ಲೂ ಬಳಸಿಕೊಳ್ಳುವ ಉದ್ದೇಶದಿಂದ ಪ್ರಸಿದ್ಧ ಸಿನಿಮಾ ನಟ ದಿವಂಗತ ಶಂಕರನಾಗ ೧೯೮೯ರಲ್ಲಿ ಇವರನ್ನು ಹುಡುಕಿಕೊಂಡು ಬಂದು ಚಿಗಟೇರಿಯ ಮುದೇನೂರು ಸಂಗಣ್ಣನವರ ನೆರವಿನಿಂದ ಈ ತರಹದ "ಶಿವಲೋಚನ" ಎಂಬ ಕತೆಯನ್ನು ವಿಡಿಯೋ ಚಿತ್ರಿಸಿಕೊಂಡರು. ಹಳ್ಳಿಗಳಲ್ಲಿ ಮದುವೆ, ಹಬ್ಬ, ಹರಿದಿನ, ಮುಂಜಿಗಳಲ್ಲಿ ದೇವೇಂದ್ರಪ್ಪ ಜಿಲ್ಲೆಗಷ್ಟೇ ಸೀಮಿತವಾಗಿರದೇ ರಾಜ್ಯದ ಬಹುಭಾಗಗಳಲ್ಲಿ ಪ್ರದರ್ಶನ ಮಾಡಿ ಪ್ರಸಿದ್ಧರಾಗಿದ್ದಾರೆ.

ಗೊಂದಲಿಗರ ಕಥೆಯಾದ 'ಶೀಲಾವತಿ' ಕತೆ ಕೇಳಿಕೊಂಡ ಪ್ರಖ್ಯಾತ ಜಾನಪದ ತಜ್ಞರಾದ ಮುದೇನೂರು ಸಂಗಣ್ಣನವರು ಕತೆಯನ್ನು ರಂಗರೂಪಕ್ಕಿಳಿಸಿ, ಮರಿಯಮ್ಮನಹಳ್ಳಿಯ ಲಲಿತಕಲಾ ರಂಗಕ್ಕೆ ಅಭಿನಯಿಸಲು ಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ರವೀಂದ್ರ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ಮೂಡಿ ಬಂದ ಈ ನಾಟಕ ಅತ್ಯಂತ ರಂಜನೀಯವಾಗಿದ್ದು, ಈ ಭಾಗದ ಪ್ರೇಕ್ಷಕರಿಗೆ ಹೊಸ ಅನುಭವ ನೀಡುವಲ್ಲಿ ಯಶಸ್ವಿಯಾಗಿ, ಕೆ.ನಾಗರತ್ನಮ್ಮನವರ ಶೀಲಾವತಿ ಅಭಿನಯ ಅಮೋಘ ವಾಗಿದ್ದು, ಪ್ರೌಢತೆಯಿಂದ ಕೂಡಿದ್ದು ಕರ್ನಾಟಕದ ತುಂಬಾ ಹೆಸರು ಪಡೆಯಿತು. ಜೊತೆಗೆ 'ಲಕ್ಷಪತಿ ರಾಜನ ಕತೆ' ರಂಗರೂಪಕ್ಕೆ ಬಂದು ಗುರಿಮೀರಿ ಸಾಧನೆಯನ್ನು ಮಾಡಿದೆ. ಸಂಗಣ್ಣನವರ ಸಹಕಾರದಿಂದ ಪಾಶ್ಚಾತ್ಯ ದೇಶಕ್ಕೆ ಹೋಗಿಬಂದ ದೇವೇಂದ್ರಪ್ಪ, ಧಾರವಾಡ ಆಕಾಶವಾಣಿ ನಿಲಯದ ಕಲಾವಿದರಾಗಿದ್ದು ಹಲವು ಸಂಘಸಂಸ್ಥೆಗಳಿಂದ ಸರಕಾರದ ಮಾನ್ಯತೆ ಪಡೆದು ಗೌರವ ಪಡೆದಿರುವರು.

ರಂಗಭೂಮಿಯನ್ನು ಜೀವಂತವಾಗಿ ಸೆರೆಹಿಡಿದುಕೊಂಡು ಬಂದವರೇ ಹಗಲು ವೇಷಗಾರರು. ಪ್ರೇಕ್ಷಕರು ನಾಟಕ ನೋಡಲು ಒಂದರಿಂದ ಇನ್ನೊಂದು ಊರಿಗೆ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ರಂಗ ಭೂಮಿಯನ್ನೇ ಹುಡುಕಿಕೊಂಡು ಬಂದು ಪ್ರದರ್ಶಿಸುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಹಗಲು ವೇಷಗಾರಿಕೆಯ ಅಭಿನಯದ ಸವಿಯನ್ನು ಪ್ರಬುದ್ಧರಷ್ಟೇ ಅಲ್ಲದೆ, ಎಳೆಯ ಮಕ್ಕಳೂ ನೋಡಿ ನಲಿಯುತ್ತಾರೆ. ಚಿಕ್ಕಮಕ್ಕಳ ಮನಸ್ಸಿನ ಮೇಲೆ ರಂಗಭೂಮಿಯ ನಟನಾ ಸಾಮರ್ಥ್ಯದ ಕಲ್ಪನೆಯನ್ನು ತಂದು ಕೊಡುತ್ತದೆ.ಇಂಥ ಕಲೆಯನ್ನು ನಮ್ಮ ಜಿಲ್ಲೆಯಲ್ಲಿ ಬೆಳೆಸಿಕೊಂಡು ಬಂದವರು ಹಗರಿಬೊಮ್ಮನಹಳ್ಳಿಯ ವೇಷಗಾರ ಪ್ರಹ್ಲಾದ ಹಾಗೂ ಹೊಸಪೇಟೆಯ ರಾಮಣ್ಣ. ಕುಲದ ಪರಂಪರೆಯಾಗಿ ಬಂದ ಕಲೆ ಹಗಲು ವೇಷ. ಬಾಲ್ಯದಿಂದ ವೇಷಗಾರರಾಗೇ ಬಂದ ಪ್ರಹ್ಲಾದ ಅವರು ಗ್ರಾಮದ ಜನಕ್ಕೆ ಬೇಕಾದ ಕಲಾವಿದ. ಬಹುರಂಜನೀಯ, ಸಮಯ ಪ್ರಜ್ಞೆಯ

ಆಶುಕವಿತ್ವದಂಥ ಮಾತುಗಳು, ಸಂಗೀತ ವಾದ್ಯಗಳನ್ನು ಯಾವಾಗಲೂ ಹೊತ್ತುಕೊಂಡೇ ಇರುತ್ತಾರೆ. ವೇಷ ಧರಿಸಿಕೊಂಡು ಬಣ್ಣ ಬಳಿದುಕೊಂಡು, ರಸ್ತೆಯಲ್ಲಿ ಮನೆ-ಮನೆಯ ಅಂಗಳಗಳಲ್ಲಿಯೇ ರಂಗಭೂಮಿಯನ್ನು ಆ ಕ್ಷಣವೇ ರೂಪಿಸಿಕೊಳ್ಳುತ್ತಾರೆ. ಹನುಮಂತ, ಅರ್ಧನಾರೀಶ್ವರ, ವಡ್ಡರ ವೇಷ, ಕೃಷ್ಣ, ಜಂಗಮ, ಲಂಬಾಣಿ, ಇತ್ಯಾದಿ ವೇಷಗಳೇ ಅತ್ಯಂತ ಜನಪ್ರಿಯವಾಗಿವೆ. ಬಸವಣ್ಣನವರ ವಚನ ಹಾಗೂ ಸರ್ವಜ್ಞನ ವಚನಗಳನ್ನು ಶಾಸ್ತ್ರೀಯವಾಗಿ ಹಾಡಬಲ್ಲರು. ಕಬೀರದಾಸ, ಕನಕದಾಸ, ಪುರಂದರದಾಸ, ರಾಮಾಯಣ ಮತ್ತು ಮಹಾಭಾರತ ಇವರು ಅಭಿನಯಿಸುವ ವಿಶೇಷವಾದ ಪ್ರಸಂಗಗಳಾಗಿವೆ. ಹಾರ್ಮೋನಿಯಂ, ತಬಲಾ, ಬುಲ್‌ಬುಲ್ ತಾರಾ, ಡೋಲಕ್, ಸಿತಾರ್, ಕ್ಯಾಸಿಯೋಗಳನ್ನು ನುಡಿಸುವರು. ಕನ್ನಡ ಸಾಹಿತ್ಯ ಪರಿಷತ್ತು, ಜಾನಪದ ಕಲಾಮೇಳಗಳು, ಉಡುಪಿ ಜಾನಪದ ಸಂಶೋಧನಾ ಕೇಂದ್ರ ಮೊದಲಾದ ಕಡೆಗಳಲ್ಲಿ ಪ್ರದರ್ಶನ ಕೊಟ್ಟು ಪ್ರಶಸ್ತಿ ಪಡೆದಿದ್ದಾರೆ.

ಅವಿಭಕ್ತ ಕುಟುಂಬದಲ್ಲಿ ಮೂವತ್ತು ಜನರ ಕುಟುಂಬ. ತಂಡದ ಹಿರಿಯರಾದ ವೇಷಗಾರ ರಾಮಣ್ಣ ಹಳ್ಳಿಗಳಲ್ಲಿ ಸುತ್ತಿ ಮನೆಯಂಗಳವನ್ನೇ ರಂಗ ಮಂದಿರ ಮಾಡಿಕೊಂಡು ಕಲೆ ಪ್ರದರ್ಶನ ಮಾಡುತ್ತಾರೆ. ಕಲೆ ಇವರಿಗೆ ಕುಲಕಸಬಾಗಿದೆ. ಅಲೆಮಾರಿ ಜನಾಂಗ ಎಂದೇ ಹೇಳಿಕೊಳ್ಳುತ್ತಾ ಊರಿನಿಂದ ದೂರದಲ್ಲಿ ಡೇರೆ ಹಾಕಿಕೊಂಡು ಜೀವನವನ್ನು ಸಾಗಿಸುವ ಇವರಿಗೆ "ಬಹುರೂಪಿಗಳು" ಎಂದು ಕರೆಯುತ್ತಾರೆ. ಐದನೇ ತರಗತಿಯವರೆಗೆ ವ್ಯಾಸಂಗ ಮಾಡಿರುವ ರಾಮಣ್ಣ ಜನಪದ ಕಲೆಗಳ ಅಧ್ಯಯನದಲ್ಲಿ ಅವರಿಗೆ ಹೆಚ್ಚು ಒಲವು. ಸಾಮಾಜಿಕ, ಮಹಾಭಾರತ, ರಾಮಾಯಣ, ಪುರಾಣ ಹೀಗೇ ಎಲ್ಲ ಬಗೆಯ ಕಥಾವಸ್ತು ಇರುವ ಪ್ರಸಂಗಗಳನ್ನು ವೇಷಗಳಿಗೆ ಅಳವಡಿಸಿ ಪಾತ್ರ ನಿರ್ವಹಿಸುತ್ತಾರೆ. ಕಲೆಯೇ ವೃತ್ತಿಯಾಗಿರುವ ಹಳ್ಳಿಗಳಲ್ಲಿ ತಿರುಗಿ ಮನೆಮನೆಗೆ ಹೋಗಿ ಪ್ರದರ್ಶನ ನೀಡುವುದು ಇವರ ಪದ್ಧತಿ. ರಾಮಣ್ಣನವರು ತಮ್ಮ ತಂಡದೊಟ್ಟಿಗೆ ಬಳ್ಳಾರಿ ಜಿಲ್ಲೆಯಲ್ಲದೆ ಬೇರೆಡೆಗೆ ಹೋಗಿ ಪ್ರದರ್ಶನ ನೀಡಿದ್ದಾರೆ.

ಪ್ರತಿ ವರ್ಷ ವೇಷಗಾರರು ಬರದೇ ಇದ್ದರೆ, ಜನರು ವೇಷಗಾರರು ಬರಲಿಲ್ಲವೆನ್ನುತ್ತಾರೆ. ಅಷ್ಟು ಜನಪ್ರಿಯರಾದವರು ವೇಷಗಾರ ರಾಮಣ್ಣ. ಇವರ ಪ್ರದರ್ಶನ ಹಳ್ಳಿಗಳಲ್ಲಷ್ಟೇ ಅಲ್ಲದೇ ದೊಡ್ಡ ಯಾತ್ರ ಸ್ಥಳದಲ್ಲಿ ನಗರಗಳಲ್ಲಿ ನಡೆಯುತ್ತದೆ. ಜಾತ್ರೆ, ಹಬ್ಬ, ಸಾಂಸ್ಕೃತಿಕ ಮೇಳ, ಸಭೆ, ಸಮಾರಂಭ, ಸಮ್ಮೇಳನಗಳಲ್ಲಿ ಭಾಗವಹಿಸುವ ಇವರಿಗೆ ಹಲವಾರು ಪ್ರಶಸ್ತಿಗಳು ಬಂದಿವೆ. ಭೀಮ, ವಾಲಿ, ಭಸ್ಮಾಸುರ, ಕನಕದಾಸ, ಸರ್ವಜ್ಞ ಮೊದಲಾದ ಪ್ರದರ್ಶನಗಳು ಜನರಿಂದ ಅಪಾರ ಮೆಚ್ಚಿಗೆ ಗಳಿಸಿವೆ. ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಇವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬಳ್ಳಾರಿಯಿಂದ ಈಶಾನ್ಯಕ್ಕೆ ಬೀದರದವರೆಗೆ ಮತ್ತು ಗುಲಬರ್ಗಾ, ರಾಯಚೂರು, ಜಿಲ್ಲೆಗಳಲ್ಲಿ ದೊಡ್ಡಾಟ ಮತ್ತು ಸಣ್ಣಾಟ ಇಲ್ಲವೇ ದಪ್ಪಿನಾಟ (ಬಯಲಾಟ) ಈ ಹೆಸರಿನ

ಕತೆಗಳು ಪ್ರಸಾರವಾಗಿವೆ. ''ಪೊಡವಿಯೊಳು ಕುಡುತಣಿಯ'' ಎಂಬ ನಾಂದಿ ಪದ್ಯವು ಯಾವ ಕಥೆಯೇ ಇದ್ದರೂ ಈ ಭಾಗದ ಬಯಲಾಟಗಳಲ್ಲಿ ದೊರೆಯುತ್ತದೆ. ಈ ಗೀತೆಯು ಯಾವ ಕಥೆಯೇ ಇದ್ದರೂ ಈ ಭಾಗದ ಆಟಗಳಲ್ಲಿ ದೊರಕುವುದು. ಬಳ್ಳಾರಿ ಜಿಲ್ಲೆಯು ಬಯಲಾಟ ಕತೆಗಳಿಗೆ ಪ್ರಸಿದ್ಧಿ ಪಡೆದುದರ ದ್ಯೋತಕ. ಬಳ್ಳಾರಿ, ಕಲಬುರ್ಗಿ, ಬೀದರ ಭಾಗಕ್ಕಿಂತ ಪ್ರವೀಣರಾದ ಬಯಲಾಟ ಕವಿಗಳು ಮತ್ತು ಕಲಾವಿದರು, ಕೃತಿ ರಚನೆ ಮಾಡಿ ಪ್ರದರ್ಶಿಸಿ ಬಳ್ಳಾರಿ ಜಿಲ್ಲೆಯನ್ನು ಬಯಲಾಟ ಕಲೆಯ ತವರು ಮನೆಯಾಗಿಸಿದ್ದಾರೆ. ದೊಡ್ಡಾಟಗಳ ಪರಂಪರೆಯಲ್ಲಿ ಪ್ರಚಲಿತವಿದ್ದ ಕಥೆಗಳನ್ನೇ ಕಲಬುರ್ಗಿ, ಬೀದರ ಭಾಗಗಳಲ್ಲಿ ಈ ಕಥಾವಸ್ತುಗಳಿಂದ ಮಾಡಿರುವುದೂ ಕಂಡು ಬರುತ್ತದೆ.

ಜಾನೋಜಿರಾವ್ ಎಂಟನೆಯ ತರಗತಿಯವರೆಗೆ ವ್ಯಾಸಂಗ ಮಾಡಿ ಚಿಕ್ಕ ವಯಸ್ಸಿನಿಂದಲೂ ಬಾಲಕೃಷ್ಣ ಪಾತ್ರವಹಿಸುತ್ತಾರೆ. ಅವರ ಮೂವತ್ತನೇ ವಯಸ್ಸಿನಿಂದ ಬಯಲಾಟ ಕಲಿಸುವ ಮಾಸ್ತರರಾಗಿಯೂ ಕೆಲಸ ನಿರ್ವಹಿಸುತ್ತ ಬಂದಿದ್ದಾರೆ. ನೂರಾರು ಬಯಲಾಟಗಳನ್ನು ಕಲಿಸಿರುವ ಇವರು ಗಿರಿಜಾ ಕಲ್ಯಾಣ, ಬಬ್ರುವಾಹನ, ವೀರ ಅಭಿಮನ್ಯು, ದುಶ್ಯಾಸನ, ರತಿ ಕಲ್ಯಾಣ, ಮೊದಲಾದ ಪಾತ್ರಗಳಲ್ಲಿ ಅತ್ಯಂತ ಜನಪ್ರಿಯರಾಗಿದ್ದಾರೆ. ಜಾನೋಜಿರಾವ್ ಕಲಿಸಿರುವ ಬಯಲಾಟಗಳೆಂದರೆ ದೂರದಿಂದಲೇ ಜನರು ದಂಡು ದಂಡಾಗಿ ಬರುತ್ತಿದ್ದರು. ಪ್ರತಿ ವರ್ಷ ಎರಡು-ಮೂರು ಬಯಲಾಟಗಳನ್ನು ಆಡಿ ಸನ್ಮಾನಗಳನ್ನು ಪಡೆದಿದ್ದಾರೆ. ವಾಮದೇವಾಚಾರ್ ಅವರು ಎಳೆತನದಿಂದಲೂ ಬಯಲಾಟಕ್ಕೆ ಬಂದಿದ್ದಾರೆ. ಒಳ್ಳೆಯ ಸಂಗೀತಗಾರರು ಹಾಗೂ ಹಾರ್ಮೋನಿಯಂ ವಾದಕರಾಗಿರುವ ಇವರು ಬಳ್ಳಾರಿ ಜಿಲ್ಲೆಯ ಆಸುಪಾಸಿನಲ್ಲೂ ಹೆಸರುವಾಸಿ. ಅವರ ಸ್ತ್ರೀ ಪಾತ್ರಗಳು ಇಂದಿಗೂ ಜನಪ್ರಿಯವಾಗಿವೆ. ಬಯಲಾಟಗಳಲ್ಲಿ ಬರುವ ಎಲ್ಲಾ ಕಥೆಗಳು ಮುಖ್ಯವಾಗಿ ರಾಮಾಯಣ, ಮಹಾಭಾರತ, ಗಿರಿಜಾ ಕಲ್ಯಾಣ, ದಕ್ಷಯಜ್ಞ ಮೊದಲಾದವುಗಳಲ್ಲಿ ಸ್ತ್ರೀಪಾತ್ರದ ನಾಯಕಿಯಾಗಿ ಅಭಿನಯಿಸಿದ್ದಾರೆ. ಇಂದಿಗೂ ವಾಮದೇವಾಚಾರ್ ಬಯಲಾಟ ಕಲಿಸುವ ಮಾಸ್ತರರಾಗಿ ಸದಾ ರಂಗಭೂಮಿಯ ಕೆಲಸದಲ್ಲಿ ನಿರತರಾಗಿರುತ್ತಾರೆ. ಕುರುಗೋಡು ವಾಸುದೇವರು ಸೀತೆಯ ಪಾತ್ರವನ್ನೂ ನಿರ್ವಹಿಸುತ್ತಾರೆ ಎನ್ನುವುದೇ ನಾಟಕ ಪ್ರದರ್ಶನಕ್ಕೆ ಜನರು ಆಕರ್ಷಣೆಯಾಗಿದ್ದ ದಿನಗಳೂ ಒಂದು ಕಾಲದಲ್ಲಿ ಇದ್ದವು.

ನಟ, ನಾಟಕ, ನಿರ್ದೇಶಕ, ಸಂಗೀತ ಮಾಸ್ತರರಾಗಿ ಪ್ರಸಿದ್ಧಿ ಹೊಂದಿದವರು ಸೋಗಿಯ ಉಜ್ಜಿನಿ ಸಿದ್ಧವೀರಪ್ಪನವರು. ಐದನೇ ತರಗತಿಯವರೆಗೆ ಓದಿ ಬಿಟ್ಟಿರುವ ಇವರು ಬಯಲಾಟಗಳಲ್ಲಿ ಮೊದಮೊದಲು ಸಣ್ಣ ಪುಟ್ಟ ಪಾತ್ರಗಳಲ್ಲಿ ಮಿಂಚಿದವರು. ಹಡಗಲಿಯ ಸುತ್ತಲೂ ನಡೆಯುವ ನಾಟಕಗಳು ಬಹುತೇಕ ಇವರೇ ಬರೆದಂಥವು. ಇವರ ಪಾತ್ರಗಳೇ ಬಯಲಾಟದಲ್ಲಿ ಆಕರ್ಷಣೆಯಾಗಿದ್ದವು. ರಕ್ತರಾತ್ರಿ, ವೀರ ಅಭಿಮನ್ಯು, ಗಿರಿಜಾಕಲ್ಯಾಣ, ರತಿಕಲ್ಯಾಣ, ಲಕ್ಷ್ಮೀ ಕಲ್ಯಾಣ, ಕನಕಾಂಗಿ ಕಲ್ಯಾಣ, ಸುಭದ್ರ ಕಲ್ಯಾಣ, ಶಿವಭಕ್ತ ಮಾರ್ಕಂಡೇಯ, ಸುಗಂಧ ಪುಷ್ಪಹರಣ, ದ್ರೌಪದಿ ವಸ್ತ್ರಾಪಹರಣ, ಕಾಳಸೂರೆ, ಪಾಂಡವರ ವಿಜಯ, ಇಂದ್ರಜಿತ ಕಾಳಗ, ಅಹಿರಾವಣ ಮಹಿರಾವಣ ಮೊದಲಾದವುಗಳಲ್ಲಿ ನಾಯಕನ ಪಾತ್ರವನ್ನು

ನಿರ್ವಹಿಸುತ್ತಿದ್ದರು. ಮುಪ್ಪು ಆವರಿಸಿದ್ದರೂ ರಂಗಭೂಮಿಯ ಕೆಲಸವೆಂದರೆ ಮನೆ ಕೆಲಸದಂತೆ ನಿರತರಾಗುತ್ತಾರೆ. ಸೋಗಿಯ "ಶ್ರೀ ವೀರೇಶ್ವರ ಬಸವೇಶ್ವರ ಜಾನಪದ ದೊಡ್ಡಾಟ" ಸಂಘವನ್ನು ಸ್ಥಾಪಿಸಿರುವ ಸಿದ್ಧವೀರಪ್ಪನವರು ರಾಜ್ಯದಲ್ಲೆಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಕರ್ನಾಟಕ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಹಾಗೂ ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ, ಸನ್ಮಾನಗೊಂಡು ಈ ಭಾಗದಲ್ಲೆಲ್ಲಾ ಮನೆಮಾತಾಗಿ ಹೆಸರು ಮಾಡಿದ್ದಾರೆ.

ರಂಗಭೂಮಿ ಜೀವಂತಿಕೆಯಿಂದಿರಬೇಕಾದರೆ ಅಥವಾ ರಂಗಪ್ರದರ್ಶನಕ್ಕೆ ವೇದಿಕೆ ಯಶಸ್ವಿಗೊಳ್ಳಬೇಕಾದರೆ ಅಲ್ಲಿಯ ಪ್ರದೇಶಗಳಲ್ಲಿ ರಂಗಪರಂಪರೆಯು ಉಜ್ವಲವಾಗಿ ಬೆಳಗಬೇಕು. ರಂಗಪರಂಪರೆ ಉದಾತ್ತವಾಗಿರ ಬೇಕಾದರೆ ರಂಗಭೂಮಿಯ ಪರಿಕರಗಳು ಶಿಸ್ತುಬದ್ಧವಾಗಿರಬೇಕು. ರಂಗಭೂಮಿಯ ಪರಿಕರಗಳಲ್ಲಿ ಸೇರುವ ನಾಟಕಕಾರರು, ನಟರು, ನಿರ್ದೇಶಕರು, ಸಂಗೀತಗಾರರು, ಗಾಯಕರು, ವೇಷಭೂಷಣ ಸಾಮಗ್ರಿ ಒದಗಿಸುವ ಮತ್ತು ನಾಟಕ ಮಂಡಳಿಗಳು ಇವುಗಳನ್ನು ಗಮನಿಸಬೇಕಾಗಿದೆ.

ನಾಟಕಕಾರರು : ಸಮಾಜಿಕ, ಪೌರಾಣಿಕ, ಐತಿಹಾಸಿಕ ಎಂಬ ಸಂಪ್ರದಾಯ ಬದ್ಧ ಶೈಲಿ ನಾಟಕ ಪರಂಪರೆಯ, ಜನಪದೀಯ ದೊಡ್ಡಾಟ ಪರಂಪರೆಗಳಿಗಿಂತ ಭಿನ್ನವಾಗಿ ಇವು ಸುಸಂಸ್ಕೃತಿ ನಾಟಕಗಳು ಎನ್ನುವಂತೆ ಬೆಳೆದು ಬಂದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ನಾಟಕಕಾರರು ಇಂಥ ನಾಟಕ ಕೃತಿಗಳನ್ನು ರಚಿಸುತ್ತಾ ಬಂದಿದ್ದಾರೆ. ಜೋಳದರಾಶಿ ದೊಡ್ಡನಗೌಡ, ರವಿಕುಮಾರ್, ತುಂಬಿನಕೆರೆ ಭೀಮಪ್ಪ, ಚಂದ್ರಯ್ಯ, ನಾಗಯ್ಯ ಶಾಸ್ತ್ರಿ, ಡಿ.ಗೋಪಾಚಾರ್ಲು, ಹನುಮಂತಗೌಡ, ಕೃಷ್ಣಮಾಚಾರಿ, ಟಿ.ಪರಮೇಶ್ವರಪ್ಪ, ಕನಕಗಿರಿ ವಾದಿರಾಜ, ಸಾಸ್ವಿ ಹಳ್ಳಿ ದ್ಯಾಮಪ್ಪ, ಬಸವರಾಜ(ಹೊಸಪೇಟೆ), ಪಾರ್ಶ್ವನಾಥ (ಬಳ್ಳಾರಿ), ನಾ.ಶಿ.ಶ್ರೀಪಾದ ನಾಗರಕೊಂಡ, ಬಾಗಳಿ ಕೊಟ್ರಪ್ಪ, ಹಿ.ಶೇಷಾದ್ರಿ, ಕೋಗಳಿ ಪಂಪಣ್ಣ, ತೆಲಗಿ ಬಸವರಾಜ, ಭರಮಲಿಂಗಪ್ಪ, ಸೋಮ ಬಡಿಗೇರ ಕೋಟೆ, ದೇಶಿ, ಹೆಚ್.ಟಿ.ಮಹಂತೇಶ ಶಾಸ್ತ್ರಿ ತೆಗ್ಗಿನಕೇರಿ ಹಿರೇಮಠ, ಸೊಪ್ಪಿನಮಠ, ಬಿ.ವಿ.ಈಶ, ವೀರಭದ್ರಯ್ಯ ಹೀರೇಮಠ, ಎ.ಚಿದಾನಂದಗೌಡ, ಬಿ.ಎಂ.ಮರಳುಸಿದ್ದಯ್ಯ, ಎನ್.ಎಂ.ರವಿಕುಮಾರ, ಮುದೇನೂರು ಸಂಗಣ್ಣ, ಡಾ.ಟಿ.ಶಿವಕುಮಾರ ಕೊಡುದರ ಹಾಳ, ಎನ್.ಟಿ.ಹುರಳಿಹಾಳ, ಜಿ.ಎಸ್.ಗೌಡ, ಜಿ.ಎಸ್.ಹೆರಕಲ್ಲ, ಎಲ್.ಪಿ.ಟಿಕ್ಯನಾಯ್ಕ, ಕೆ.ಜಿ.ಸೊಪ್ಪಿನಮಠ, ಎಸ್.ಎಂ.ಕೊಟ್ರೇಶ, ಎಸ್.ಎಸ್. ಹಿರೇಮಠ, ವಾಸುದೇವರಾಜ ಉಬಾಳೆ, ಕೆ.ಸೋಮಶೇಖರಪ್ಪ, ಯು.ಜಗನ್ನಥಾ, ಮಾ.ಬ.ಸೋಮಣ್ಣ, ಸುಜಾತ ಅಕ್ಕಿ, ಮುಂತಾದ ಬರಹಗಾರರು ಸಾಕಷ್ಟು ನಾಟಕಗಳನ್ನು ಬರೆದು ಜಿಲ್ಲೆಯ ರಂಗಭೂಮಿಗೆ ತಮ್ಮ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಕಂಪ್ಲಿಗೂ ಕನ್ನಡ ರಂಗಭೂಮಿಗೂ ಎಲ್ಲಿಲ್ಲದ ನೆಂಟಸ್ತಿಕೆ. ರಂಗಭೂಮಿ ಸೇವೆಸಲ್ಲಿಸಿ ದವರಲ್ಲಿ ಬಳ್ಳಾರಿ ಜಿಲ್ಲೆಯ ಕಂಪ್ಲಿಯವರೇ ಹೆಚ್ಚಾಗಿದ್ದಾರೆ. ರಂಗಭೂಮಿಯಲ್ಲಿಯೇ ಇದ್ದು ಚಲನಚಿತ್ರ

ರಂಗದಲ್ಲಿ ಎಲ್ಲರ ಗಮನ ಸೆಳೆದವರು ಕಂಪ್ಲಿ ಹನುಮಂತಾಚಾರ್. ಡಾ.ರಾಜಕುಮಾರ್ ಅವರಿಗೆ ಕಂಪ್ಲಿ ಚಿರಪರಿಚಿತ. ರಾಜ್ಯಮಟ್ಟದಲ್ಲಿ ಹೆಸರು ಪ್ರಶಸ್ತಿ ಗಳಿಸಿದ ಹುಸೇನ್‌ಸಾಬ್ ಈ ಊರಿನವರೇ. ಕನಕಗಿರಿ ವಾದಿರಾಜರು ನೆಲೆನಿಂತ ಊರು ಕಂಪ್ಲಿ. ಹಿಂದಿನ ತಲೆಮಾರಿನ ಹೆಸರಾಂತ ನಾಟಕಗಳಿಗೆ ನಿರ್ದೇಶನ ನೀಡಿ ಸುಮಾರು ಐದುನೂರಕ್ಕೂ ಹೆಚ್ಚು ರಂಗಗೀತೆಗಳಿಗೆ ಸಂಗೀತ ನೀಡಿ ಉತ್ತರ ಕರ್ನಾಟಕದಲ್ಲಿಯೇ ಮನೆಮಾತಾಗಿ ರುವ ರಂಗಭೂಮಿ ಸಾರ್ವಭೌಮರೆಂದೇ ಹೆಸರಾಗಿದ್ದಾರೆ. ವಾದಿರಾಜ್ ಕಂಪ್ಲಿಯಲ್ಲಿ ಕಲಾವಿದರ ತಂಡವೇ ನೆಲೆ ಊರಿದೆ. ತಾವೇ ಇಪ್ಪತ್ತು ನಾಟಕಗಳನ್ನು ರಚಿಸಿ ಹಳೇ ಸಂಪ್ರದಾಯದಿಂದ ಹೊಸ ತಿರುವು ನೀಡಿ ತಮ್ಮ ಸಂಗೀತ ಪಾಂಡಿತ್ಯದಿಂದ ನಾಟಕಗಳಿಗೆ ರಾಗ ಸಂಯೋಜನೆ ಮಾಡಿ ರಂಗಕಲಾಸಕ್ತರಿಗೆ ಪ್ರೀತಿ ಅಭಿಮಾನಿತರಾಗಿದ್ದಾರೆ.

ಇವರ ಕುಮಾರ ರಾಮು, ರತ್ನ ಸಿಂಹಾಸನ, ಐತಿಹಾಸಿಕ ನಾಟಕಗಳಾಗಿದ್ದರೆ, ಶ್ರೀ ಕೃಷ್ಣ ತುಲಾಭಾರ, ಇಚ್ಛಾಮರಣಿ ಈ ಮುಂತಾದ ಎರಡು ನಾಟಕಗಳು ಪೌರಾಣಿಕ ನಾಟಕಗಳು. ಕಲಾವಿದ, ಮನೆತುಂಬಿದ ಮಡದಿ, ದೇವಮಾನವ, ಅತ್ಯಾಚಾರ, ಸುಂಟರಗಾಳಿ, ಮಮತಾಮಯಿ, ವಿಷಕನ್ಯೆ, ಸತ್ಯಮೇವ ಜಯತೆ, ಹಿರಿಯಕ್ಕ, ಸಮಾಜಕ್ಕೆ ಕಣ್ಣಿದೆಯೇ, ಮಾತೇ ಮಾಣಿಕ್ಯ, ಮುಂದೇನು ಮೊದಲಾದವು ಸಾಮಾಜಿಕ ನಾಟಕಗಳು. ವೃತ್ತಿ ರಂಗಭೂಮಿಯ, ಪ್ರಾಯೋಗಿಕ ನಾಟಕಗಳಲ್ಲಿ ಸಾಕಷ್ಟು ಹೆಸರು ಮಾಡಿದ ವಾದಿರಾಜ, ರಾಜ್ಯದ ಕೆಲವು ಪ್ರದೇಶಗಳನ್ನು ಬಿಟ್ಟು ಉಳಿದಲ್ಲೆಲ್ಲಾ ನಾಟಕ ಪ್ರದರ್ಶನ ಇಂದಿಗೂ ನೀಡುತ್ತಿದ್ದಾರೆ.

ಕಂಪ್ಲಿಯ ವಾದಿರಾಜರು ೧೯೩೪ ಜನವರಿ ೨೨ರಲ್ಲಿ ಜನಿಸಿದರು. ಇವರ ವ್ಯಾಸಂಗ ಮೆಟ್ರಿಕ್‌ವರೆಗೆ ಮಾತ್ರ. ಇವರು ೧೯೫೪ರಲ್ಲಿ ರಂಭೂಮಿಗೆ ಪ್ರವೇಶ ಮಾಡಿ ಅಂದಿನಿಂದ ಇಂದಿಗೂ ಸತತವಾಗಿ ರಂಗಭೂಮಿ ಗೋಸ್ಕರ ಸೇವೆ ಮಾಡುತ್ತಲೇ ಬಂದಿದ್ದಾರೆ. ನಟರಾಗಿ ಪಾತ್ರ ಮಾಡಿದ್ದು ಒಂದೆರೆಡು ನಾಟಕಗಳಲ್ಲಿ ಮಾತ್ರ. ರಕ್ತ ರಾತ್ರಿ, ಸೌಭಾಗ್ಯ ಲಕ್ಷ್ಮಿ, ಇಂಥ ನಾಟಕಗಳಲ್ಲಿ ಬಿಟ್ಟರೆ ಪಾತ್ರ ಮಾಡಿರುವುದೇ ಬಹಳಷ್ಟು ವಿರಳ. ನಾಟಕಕಾರರಿಗೆ, ಸಂಗೀತಗಾರರಿಗೆ ಕೆಲಸ ಮಾಡಿ ಅಚ್ಚುಮೆಚ್ಚಿನವರೆನ್ನಿಸಿಕೊಂಡಿದ್ದಾರೆ. ಪ್ರಾರಂಭದಲ್ಲಿ ಮನೆಯಲ್ಲಿ ತಂದೆಯಿಂದಲೇ ಸಂಗೀತವನ್ನು ಕಲಿತರೂ ಹೆಚ್ಚಿನ ಅಧ್ಯಯನ ಗದಗನಲ್ಲಿ ಕೀರ್ತನ ಕೇಸರಿ ಶ್ರೀದಾಸಾಚಾರ್ಯ ತಂಗೋಡ ಇವರಿಂದ ಕಲಿತಿದ್ದಾರೆ. ಹಿನ್ನೆಲೆ ಸಂಗೀತದಲ್ಲಿ ರಂಗಭೂಮಿಯಲ್ಲಿ ದಾಖಲೆ ನಿರ್ಮಿಸಿದ್ದಾರೆ.

ವಾದಿರಾಜರು ವಿಜಾಪುರದಲ್ಲಿ ಕಂದುಗಲ್ಲುರಾಯರ ನಾಟಕೋತ್ಸವದಲ್ಲಿ ಸನ್ಮಾನ ಪಡೆದು ಬಹತೇಕ ನಾಟಕದ ನುಡಿಗಳನ್ನು ತೊದಲಿಲ್ಲದೇ ಹೇಳುತ್ತಾರೆ. ಹಲ್ಲು ಹೋದರೂ ಬೊಚ್ಚಬಾಯಿ ಇದ್ದರೂ ಸ್ಫುಟವಾದ ಉಚ್ಛಾರ, ಹೊಸ ಅಲೆಯ ನಾಟಕ ತಂತ್ರ ಮೀರಿಸುವ ವ್ಯಕ್ತಿತ್ವ ಅವರದು. ರಾಜ್ಯ ಮಟ್ಟದ ನಾಟಕೋತ್ಸವದಲ್ಲಿ ಭಾಗಿಯಾಗಿ ಮೆಚ್ಚಿಗೆ ಪಡೆದ ಕನಕಗಿರಿ ವಾದಿರಾಜ ಇಲ್ಲಿ "ವಾಜಪ್ಪ"ನೆಂದೇ ಪ್ರಖ್ಯಾತಿ. ಕನಕಗಿರಿ ವಾದಿರಾಜ

ಅವರಿಗೆ ನಾಟಕವೇ ಜೀವನ- ಜೀವನವೇ ನಾಟಕ. ರಂಗಭೂಮಿಗೆ ಅಮೋಘ ಸೇವೆ ಸಲ್ಲಿಸಿದ್ದನ್ನು ಗಮನಿಸಿ ೧೯೯೫ರಲ್ಲಿ ರಾಜ್ಯ ಸರ್ಕಾರದ ಕರ್ನಾಟಕ ನಾಟಕ ಅಕಾಡೆಮಿಯು ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ. "ಗೌಡ್ರಗದ್ಲ" ಖ್ಯಾತಿಯ ಮೀರಾಕೊರ್ನಳ್ಳಿಯ ಬಿ.ವಿ.ಈಶ ರಂಗಭೂಮಿಯ ಅಪ್ಪಟ ಧ್ರುವತಾರೆ. ೧೯೫೧ರಲ್ಲಿ ಜನಿಸಿದ ಈಶರ ಅಭ್ಯಾಸ ಪ್ರಾಥಮಿಕ ಶಾಲೆಗೆ ಮಾತ್ರ, ಮುಂದೆ ರಂಗಭೂಮಿಯ ಜೀವನ ಆಯ್ಕೆ. ಸಾಹಿತ್ಯ ರಚನೆಯಲ್ಲಿ ಆಸಕ್ತಿಯ ಜೊತೆಗೆ ದೇಸಾಯಿ ನಾಟಕ ಕಂಪನಿಯ ಅನುಭವ ಜೊತೆಯಲ್ಲಿ ಇದೆ. ಅನುಭವದ ಪ್ರತಿಬಿಂಬ ಎಂಬಂತೆ ಪ್ರಥಮ ನಾಟಕ "ಕಲಿತ ಕಳ್ಳ". ಇವರು ಬರೆದಿರುವ ಹದಿನೈದು ನಾಟಕಗಳಲ್ಲಿ ಪ್ರಕಟಿಸಿದ್ದು ಹತ್ತು. "ಗೌಡ್ರಗದ್ಲ", "ಆಶಾಲತಾ", "ಗೌರಿ ಗೆದ್ದಳು", "ಪ್ರೇಮದ ಬಲೆಯೇ ಪ್ರಾಣ", "ಛಲತೊಟ್ಟ ಗಂಡು", "ಮಟಕಾ ರಾಜ" ಮುಂತಾದ ಸಾಮಾಜಿಕ ಕೃತಿಗಳು. "ಗೌಡ್ರಗದ್ಲ" ಹುಬ್ಬಳ್ಳಿಯಲ್ಲಿ ೩೬೫ ದಿನ ಪ್ರಚಂಡ ಜಯಭೇರಿ ಭಾರಿಸಿತು. ಬಿ.ವಿ.ಈಶರನ್ನು ಉನ್ನತ ಶಿಖರಕ್ಕೆ ಏರಿಸಿದೆ.

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನವರಾದ ಬಿ.ವಿ.ಈಶ ಬರೆದ ನಾಟಕಗಳು ಕೊಪ್ಪಳ, ಹಂಪಸಾಗರ, ಅಗಳಕೇರಿ, ತಂಬ್ರಹಳ್ಳಿ, ಶಿವಪುರ, ಹುಲುಗಿ, ಹಗರಿಬೊಮ್ಮನಹಳ್ಳಿ, ಮರಿಯಮ್ಮನಹಳ್ಳಿ, ಹೀಗೇ ಸುತ್ತಮುತ್ತ ಪ್ರದೇಶಗಳಲ್ಲಿ ಪ್ರದರ್ಶನ ಕಂಡಿವೆ. ಎಂಥವರನ್ನು ಥಣಿಸುವ ಶಕ್ತಿ ಆ ನಾಟಕಗಳಿಗಿರುವದರಿಂದ ಹುಬ್ಬಳ್ಳಿ-ಧಾರವಾಡದಂಥ ಮಹಾನಗರಗಳಲ್ಲಿ ಯಶಸ್ವಿ ಪ್ರಯೋಗ ಕಂಡು, ರಂಗಭೂಮಿಗೆ ಸಾಕಷ್ಟು ಪ್ರೋತ್ಸಾಹವಿಲ್ಲದೇ ಇರುವ ಕಾಲದಲ್ಲಿ ನಾಟಕಗಳನ್ನು ರಚಿಸಿ ಪ್ರದರ್ಶಿಸಿ ಜನತೆಯಿಂದ ಸಂಘ ಸಂಸ್ಥೆಗಳಿಂದ ಸನ್ಮಾನ ಪಡೆದು ಕರ್ನಾಟಕದಲ್ಲೆಲ್ಲಾ ರಂಗಭೂಮಿ ಕ್ಷೇತ್ರದಲ್ಲಿ ಬಿ.ವಿ.ಈಶ ಚಿರಸ್ಮರಣೀಯರು.

ವೀರಶೈವ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದ ಉಭಾಳೆ ವಾಸುದೇವರಾಜರು ಸರಕಾರ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ಸಮರ್ಥ ನಾಟಕಕಾರರು, ನಟರು, ನಿರ್ದೇಶಕರು ಆಗಿದ್ದಾರೆ. ಬಾಲ್ಯದಲ್ಲಿ ಬಾಲನಟರಾಗಿ ಅಭಿನಯಿಸಿ ಪೌರಾಣಿಕ ನಾಟಕಗಳ ಮೂಲಕ ರಂಗಭೂಮಿಯ ಸೇವೆ ಮಾಡುತ್ತಾ ಬಂದಿರುವ ಉಭಾಳೆಯವರು, ಭಕ್ತಿ ಪ್ರಧಾನವಾದ ನಾಟಕಗಳನ್ನು ಬರೆಯುವುದರಲ್ಲಿ ಎತ್ತಿದ ಕೈ. ಮಹಾಶಿವಶರಣೆ, ಗುಡ್ಡಾಪುರ ದಾನಮ್ಮ, ಹಾಗೂ ಶಿವಭಕ್ತ ಮೇದಾರ ಕೇತಯ್ಯ ಜನಮೆಚ್ಚುಗೆಗೆ ಪಾತ್ರವಾಗಿವೆ. "ತಾಳಿಕೋಟಿ ಶಿವಯೋಗಿ ಬಾಸ್ಗತೇಶ ಮತ್ತೊಂದು ಭಕ್ತಿ ಪ್ರಧಾನ ನಾಟಕ. "ಗಂಡನಗೆಳೆಯ" ಹಾಗೂ "ಮಧ್ಯಪಾನದ ಮಡಿಲಲ್ಲಿ" ಕ್ರಾಂತಿಕಾರಕ ಸಾಮಾಜಿಕ ನಾಟಕಗಳು. ತೆಲುಗು ಹಾಗೂ ಕನ್ನಡ ಭಾಷೆಗಳ ಬಗ್ಗೆ ಸಾಕಷ್ಟು ಅನುಭವವಿರುವ ಉಭಾಳೆ ಬಣ್ಣ ಬಳಿದುಕೊಂಡು ರಂಗ ಮಂಟಪವನ್ನು ಬಹಳ ಏರದಿದ್ದರೂ ರಂಗಭೂಮಿಯ ಅನುಭವ ಸಾಕಷ್ಟಿದೆ. ನಾಟಕ ರಂಗಕ್ಕೆ ಇವರ ಸೇವೆ ಅಪಾರವಾಗಿದೆ. "ಕಾಡಿನಲ್ಲಿ ಕೈವಲ್ಯ" ನಾಟಕ ಆಂಧ್ರ ಪ್ರದೇಶಕ್ಕೆ ಒಳಪಟ್ಟು ಸಿದ್ದಾಪುರ ಗವಿಸಿದ್ದೇಶ್ವರ ಕ್ಷೇತ್ರಕ್ಕೆ ಮಹಿಮೆ ಕೊಡುವ ಆಧ್ಯಾತ್ಮಿಕ ಬದುಕಿನತ್ತ ಕೊಂಡೊಯ್ಯುವ ಭಕ್ತಿ ಪ್ರಧಾನ ನಾಟಕ. ಈ ಕೃತಿಯು ತೆಲುಗು ಜನರಿಗೆ ಅತ್ಯಂತ ಜನಪ್ರಿಯವಾದ ನಾಟಕ. ಇವರ ನಾಟಕ ಕೃತಿಗಳೆಲ್ಲವೂ ಪ್ರಸಿದ್ಧ ವಿಮರ್ಶಕರಿಂದ ವಿಮರ್ಶಿಸಲ್ಪಟ್ಟಿವೆ. ದೇವರ ಸ್ಮರಣೆಯ ಸ್ತುತಿಗಳನ್ನು,

ಜಾನಪದ ಗೀತೆಗಳು, ಚುಟುಕುಗಳನ್ನು ಬರೆದು ಉಭಾಳೆ ಹಲವಾರು ಮಹಾತ್ಮರ ಸ್ಮರಣೆಗಳನ್ನು ಬರೆದಿದ್ದಾರೆ. ಜಿಲ್ಲೆಗೆ ಸಂಬಂಧಪಟ್ಟ ರಂಗಭೂಮಿಯ ವಿಷಯಗಳ ಸಂಗ್ರಹಕಾರರಲ್ಲಿ ಪ್ರಮುಖರಾಗಿದ್ದಾರೆ.

ಎಂ.ಎನ್.ರವಿಕುಮಾರ ಅವರು ಮುದ್ದಬಸಪ್ಪ ನಾಯ್ಕನಹಳ್ಳಿಯ ಮೂಲೆಯೊಂದರಲ್ಲಿ ಕುಳಿತು ವೃತ್ತಿ ರಂಗಭೂಮಿಗೆ ನೀರೆರೆದು ಗ್ರಾಮೀಣ ಭಾಷೆಯನ್ನು ಮೈಗೂಡಿಸಿಕೊಂಡು ಹತ್ತಾರು ನಾಟಕಗಳನ್ನು ಬರೆದು ಹೆಸರು ಮಾಡಿದ್ದಾರೆ. ಜ್ಯೋತಿ ಬೆಳಗಿತು, ನುಡಿ ತಪ್ಪಿದ ದಾರಿ, ಸೂಳೆಗೂ ಬಂತು ತಾಳಿಯ ಭಾಗ್ಯ, ಲವ್ ಮ್ಯಾರೇಜ್ ಅರ್ಥಾತ್ ಪ್ರೇಮ ಬಂಧನ, ಕಲಿಯುಗದ ಶಕುನಿ, ಮುಡಿದ ಮಲ್ಲಿಗೆ, ಖಾದಿ ಕೇಳಿ ಅರ್ಥಾತ್ ಸೊಸೆ ತಂದ ಸಿರಿ, ಎಲ್ಲಿಂದಲೋ ಬಂದವನು, ನೌಕರಿ ಗಂಡ, ಎಲ್ಲಿಗೆ ಬಂತು ಸ್ವಾತಂತ್ರ್ಯ, ಪ್ರೇಮಪಲ್ಲವಿ, ಮುಂತಾದ ನಾಟಕಗಳನ್ನು ಬರೆದು ಆಡಿಸಿ ಜನಪ್ರಿಯರಾಗಿದ್ದಾರೆ. ಚಿನ್ನದ ಗೊಂಬೆ, ಬಸ್ ಹಮಾಲ, ಸುವರ್ಣ, ಬಂಜೆಯ ತೊಟ್ಟಿಲು, ರಾಜಾವೀರ ಮದಕರಿನಾಯಕ, ರತ್ನ ಮಾಂಗಲ್ಯ, ಅಣ್ಣ ತಂಗಿ, ನಡೆ ತಪ್ಪಿದ ನಾರಿ, ಮುಂತಾದ ನಾಟಕಗಳಲ್ಲಿ ರವಿಕುಮಾರ ನಟರಾಗಿ ಅಭಿನಯಿಸಿ ಶ್ರೇಷ್ಠ ನಟ ಎಂಬ ಹೆಸರನ್ನು ಪಡೆದಿದ್ದಾರೆ. ಈ ಅಭಿವ್ಯಕ್ತಿ ಅಲ್ಲದೆ ರವಿಕುಮಾರ ಹಲವಾರು ನಾಟಕಗಳಿಗೆ ನಿರ್ದೇಶನ ಮಾಡುತ್ತಾ ರಾಜ್ಯದ ಪ್ರಮುಖ ಸ್ಥಳಗಳಾದ ಧಾರವಾಡ, ಗುಲ್ಬರ್ಗ, ಬಳ್ಳಾರಿ, ರಾಯಚೂರು, ಚಿತ್ರದುರ್ಗಗಳಲ್ಲಿ ಪ್ರದರ್ಶನ ಮಾಡಿದ್ದು ನಾಟಕದಲ್ಲಿ ಕಾಣುವ ಭಾಷೆಯ ಸರಳತೆ, ಶೈಲಿ ತಂತ್ರಗಳಿಂದ ಗ್ರಾಮೀಣ ರಂಗಭೂಮಿ ಕಲಾವಿದರಿಗೂ, ಕಲಾಬಾಂಧವರಿಗೂ ರವಿಕುಮಾರ ಹತ್ತಿರವಾಗಿದ್ದು, ಕೂಡ್ಲಿಗಿ ಕೊಟ್ಟೂರು ಭಾಗಗಳಲ್ಲಿ ಹೆಚ್ಚು ಜನ ಮನ್ನಣೆಗಳಿಸಿದ್ದಾರೆ.

ಜಿಲ್ಲೆಯ ಇನ್ನೊಂದು ಪ್ರತಿಭೆಯಾದ ಸಾ.ಹ.ದ್ಯಾಮಪ್ಪ ನಾಟಕಗಳನ್ನು ಬರೆಯದೇ ಕಾವ್ಯಗದ್ಯಗಳಿಗೆ ಮನಸೋತಿದ್ದರೆ, ರಂಗಭೂಮಿ ಬರಡಾಗಿ ಕೊರಗುತ್ತಿತ್ತೊ ಏನೋ. ದ್ಯಾಮಪ್ಪ ಹುಟ್ಟಿದ ಊರಿನಲ್ಲಿ ಪ್ರತಿ ವರ್ಷ ಜಾತ್ರೆಗೋಸ್ಕರವೇ ನಾಟಕಗಳನ್ನು ಬರೆದವರು. ಮೊದಲ ನಾಟಕ ಅಕ್ಕನ ಆಸ್ತಿ ದಕ್ಕದೆ ಹೋಯ್ತು, ಸಬ್ ಇನ್ಸ್‌ಪೆಕ್ಟರ್ , ಗಯ್ಯಾಳಿ ಗೌರಿ, ದೇವರಿಗೂ ಸೂಳೆ ಬೇಕು? ಪ್ರಧಾನರ ಮಗಳು, ವೀರ ಭೂಮಿ, ಹೆಣ್ಣಿನ ಕರ್ತವ್ಯ, ಶಿವ ಶರಣಾದ ಪದ್ಮಗೊಂಡ, ಕೊಟ್ಟೂರೇಶ್ವರ ಮಹಾತ್ಮೆ, ಹೆಳವನಕಟ್ಟೆ ಗಿರಿಯಮ್ಮ, ಮೈಲಾರಲಿಂಗ ಮಹಾತ್ಮೆ, ಅವಳಿ-ಜವಳಿ ಇತ್ಯಾದಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ. ಆಡುಭಾಷೆಗೆ ಪ್ರಾಧಾನ್ಯತೆ ನೀಡಿ ವೈವಿಧ್ಯತೆಯಲ್ಲಿ ಅವರ ನಾಟಕ ಪ್ರತಿಧ್ವನಿಸುತ್ತದೆ. ಪಕ್ಕದ ಜಿಲ್ಲೆಗಳಾದ ಶಿವಮೊಗ್ಗ, ದಾವಣಗೇರಿ, ಚಿತ್ರದುರ್ಗದಂಥ ದೊಡ್ಡ ಪಟ್ಟಣಗಳಲ್ಲಿ ಯಶಸ್ಸು ಕಂಡಿವೆ. ರಾಷ್ಟ್ರದ ಭವಿಷ್ಯವನ್ನು ನಿರ್ಮಿಸುವ ಶಕ್ತಿಯುಳ್ಳ ಶಿಕ್ಷಕ ವೃತ್ತಿಯನ್ನು ಮಾಡುತ್ತಿರುವ ದ್ಯಾಮಪ್ಪ ಸಮಾಜದ ಓರೆ-ಕೋರೆಗಳನ್ನು ತಿದ್ದುವುದನ್ನು ನಾಟಕಗಳ ಮೂಲಕ ಸಮಾಜಕ್ಕೆ ಸಂದೇಶವನ್ನು ನೀಡಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಬಯಲಾಟಕ್ಕೆ ಹೆಸರುವಾಸಿಯಾದ ಊರು ರಾಮಸಾಗರ. ಭರಮಲಿಂಗಯ್ಯ ಐದು ವರ್ಷದ ಬಾಲಕನಾಗಿದ್ದಾಗ, ಕಂದಗಲ್ಲು ಹನುಮಂತರಾಯರ ಹಾಗೂ ಗರೂಡ ಸದಾಶಿವರಾಯರ ನಾಟಕಗಳ ಪ್ರಭಾವದಿಂದ ರಂಗಭೂಮಿಗೆ ಆಸಕ್ತಿ ತೀವ್ರವಾಯಿತು. ತಂದೆ-ತಾಯಿಗಳ ಪ್ರೋತ್ಸಾಹ ಸಿಗದ ಭರಮಲಿಂಗಯ್ಯ ಟಿ.ಸಿ.ಹೆಚ್.ಟ್ರೇನಿಂಗ್‌ಗೆಂದು ಹೊಸಪೇಟೆಗೆ ಹೋಗಿ ಅಲ್ಲಿಂದಲೇ ಹಾಡು ಬರೆಯುವ ಹವ್ಯಾಸ ಬೆಳೆಯಿಸಿ ಕೊಂಡರು. ಐದು-ಆರು ನೂರಕ್ಕೂ ಹೆಚ್ಚು ಗೀತೆಗಳನ್ನು ಬರೆದು ನಾಟಕಕ್ಕೆ ಸಂಗೀತ ಅಳವಡಿಸಿ ಕಲಾಭಿಮಾನಿ ಗಳ ಮನದಲ್ಲಿ ಹೆಸರು ಗಳಿಸಿದ್ದಾರೆ. ಭರಮಲಿಂಗಯ್ಯ ನಾಟಕಗಳಲ್ಲಿ ಚಂದ್ರಹಾಸ ಪೌರಾಣಿಕವಾದರೆ, ಜೀವನ ರಹಸ್ಯ, ಮುಳ್ಳುಮಲ್ಲಿಗೆ, ಇದೆಂಥ ಸಮಾಜ, ಸತ್ತವಳ ಸಾಕ್ಷಿ, ಹಾಗೂ ದೇವರಿಗೆ ಕಣ್ಣಿಲ್ಲ ಇವು ಸಾಮಾಜಿಕ ನಾಟಕಗಳು. ಸೀತೆ ಪರಿತ್ಯಾಗ, ಜೀಮೂತವಾಹನ ಹಾಗೂ ಸತ್ಯವಂತ ಸಾವಿತ್ರಿ ಇವೆಲ್ಲ ಏಕಾಂಕ ನಾಟಕಗಳಾಗಿವೆ. ಎಂದೂ ಸ್ವಪ್ರತಿಷ್ಟೆಯನ್ನು ಮೆರೆಯದಿರುವ ಭರಮಲಿಂಗಯ್ಯ ನಟಿಸಿದ ನಾಟಕ "ಬೆಳ್ಳಿಚುಕ್ಕಿ." ವೇದಿಕೆ ಏರಿದರೆಂದರೆ ಅತೀ ಭಾವುಕತೆಗೆ ಒಳಗಾಗಿ ಇಂದಿನ ನಾಟಕ ಸಾಹಿತ್ಯ ಕುರಿತು ಭರಮಲಿಂಗಯ್ಯ ವ್ಯಂಗ್ಯವಾಗಿ ಮಾತಾಡುತ್ತಾರೆ.

ಹಗರಿಬೊಮ್ಮನಹಳ್ಳಿಯಲ್ಲಿ ಎಪ್ಪತ್ತರ ದಶಕದಲ್ಲಿ ಹೆಗ್ಗೋಡಿನ ಪ್ರಸಿದ್ಧ ನಾಟಕ ಶಾಲೆ ನೀನಾಸಂ ರಂಗ ಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದ ಹುಲುಗಪ್ಪ ಕಟ್ಟಿಮನಿ, ಎ.ಚಿದಾನಂದ ಗೌಡ, ಕೆಲವು ನಾಟಕಗಳನ್ನು ಪ್ರಯೋಗಿಸಿ ಅಂದಿನ ಸಾಮಾಜಿಕ ಬದಲಾವಣೆಯಲ್ಲಿ ರಂಗಭೂಮಿಗೆ ಸೇವೆಗೈದಿದ್ದಾರೆ. ಚಿದಾನಂದ ಗೌಡ ನೀಲಿ ಕುದುರೆ, ಬಾವಿ ಕಳೆದಿದೆ ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸರ್ಕಾರಿ ಲೆಕ್ಕದಲ್ಲಿ ಸತ್ತಾಕಿ, ವೀರಪ್ಪನ್ ಅವಾಂತರ, ಮಾರ್ಜಾಲ, ನೀರಿಲ್ಲದೂರಿನಲ್ಲಿ ಕಾಗೆಗಳು, ಚಿನ್ನದಗುಂಡಿ, ಇನ್ನಾದರೂ ಬದು ಕಬೇಕು, ಸಾಲಾದೀ ಸಂಶಯ ಇತ್ಯಾದಿ ನಾಟಕಗಳನ್ನು ಬರೆದು ನಿರ್ದೇಶಿಸಿದ್ದಾರೆ. "ಸಾಂಸ್ಕೃತಿಕ ರಂಗ ತಂಡ" ಕಟ್ಟಿಕೊಂಡು ನಾಟಕ ಪ್ರಯೋಗಿಸಿದ್ದಾರೆ. ರಂಗತಜ್ಞರಾದ ಎಂ.ಪಿ.ಪ್ರಕಾಶ ಅನುವಾದಿಸಿರುವ "ಸೂರ್ಯ ಶಿಕಾರಿ" ನಾಟಕದಲ್ಲಿ ನಾಯಕ ಹಯಗ್ರೀವನಾಗಿ ಅಭಿನಯಿಸಿ ಅತ್ಯುತ್ತಮ ನಟರೆಂದು ದೆಹಲಿಯಲ್ಲಿ ನಡೆದ ಸಭೆಯಲ್ಲಿ ಪ್ರಶಸ್ತಿ ಪಡೆದಿದ್ದಾರೆ.

ಎಸ್.ಎಸ್.ಹಿರೇಮಠ ಪ್ರಭಾವಶಾಲಿ ಸಾಹಿತಿಗಳು "ಹಪ್ಪಿಅವಾರ" ಹಾಗೂ ಜೋಗತಿಕಲ್ಲು ನಾಟಕ ಗಳನ್ನು ಬರೆದಿದ್ದಾರೆ. ಶೋಷಣೆ ವಿರುದ್ದ ಪ್ರತಿಭಟನೆ, ವಂಚನೆ, ಅನ್ಯಾಯ ಮೋಸ ಇತ್ಯಾದಿ ಕ್ರಾಂತಿಕಾರಕ ವಿಷಯಗಳನ್ನೇ ತಮ್ಮ ಕಥಾವಸ್ತುವಾಗಿ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಬೀದಿ ನಾಟಕಗಳ ಹರಿಕಾರ ಎಂದೇ ಬಳ್ಳಾರಿ ಜಿಲ್ಲೆಯಲ್ಲಿ ಹೆಸರುವಾಸಿಯಾದ ಎಸ್.ಎಸ್.ಹಿರೇಮಠರು "ಜಲಸ್ ", ಮೆರವಣಿಗೆ, ಕುರಿ, ಕತ್ತಲೆ ರಾಜ್ಯ, ಬೆಲೆ ಏರಿಕೆ, ಕತ್ತಲೆ ದಾರಿದೂರ, ಮಾರೀಚನ ಬಂಧುಗಳು, ಈರೋಬಿ, ಸತಿಯೊಡನೆ ಸಹಗಮನ, ಏಕಲವ್ಯ, ಜೋಗತಿ ಕಲ್ಲು, ಚೆಲ್ವಿ, ಧರ್ಮಪುರಿಯ ಶ್ವೇತ ವೃತ್ತ, "ಹೊಸ ಬಾಳಿನ ಕಡೆಗೆ", ಅಬ್ಬ ಮನ ಅದ್ಭುತ ನ್ಯಾಯ, ಭಾಗೀರಥಿ, ನಾ ಬೆಳೆದ ಬಾಳಿಯ ಸುಳಿಯಾಗ, ಗೋದಾನ, ಹಪ್ಪಿ ಅವಾರಗಳನ್ನು ರಚಿಸಿದ್ದಾರೆ. ಹಿರೇಮಠರ ನಾಟಕಗಳು ಜಿಲ್ಲೆಯ ಗಡಿದಾಟಿ ಪ್ರದರ್ಶನವನ್ನು ಕಂಡಿವೆ.

ರೈತ ಕುಟುಂಬದಲ್ಲಿ ಜನಿಸಿ, ನಾಟಕಗಳನ್ನು ರಚಿಸಿ, ರಂಗಭೂಮಿಗೆ ತಮ್ಮದೇ ಆದ ಕೊಡಿಗೆಯನ್ನು ಕೊಟ್ಟಿರುವ ಕೋಡಿಬಾಳ ಸೋಮಶೇಖರಪ್ಪನವರು 'ಉಮಾಮಹೇಶ್ವರ ಹಾಗೂ ರಾಜಾವಿಕ್ರಮಾದಿತ್ಯ' ಎಂಬ ಎರಡು ಪೌರಾಣಿಕ ನಾಟಕಗಳನ್ನು ರಚಿಸಿ ಹಲವಾರು ಪ್ರಶಸ್ತಿ ಪಡೆದು ಸನ್ಮಾನಿತರಾಗಿದ್ದಾರೆ.

ಜೋಳದರಾಶಿ ದೊಡ್ಡನಗೌಡ ಗಮಕಿಗಳೆಂದೇ ಇಡೀ ಕರ್ನಾಟಕದ ರಂಗಭೂಮಿಯಲ್ಲಿ ಹೆಸರು ಮಾಡಿದ್ದಾರೆ. ಬಾಲ್ಯದಲ್ಲಿಯೇ ನಾಟಕ ಅಭಿರುಚಿ ಬೆಳಸಿಕೊಂಡು ಇವರು, ತಂದೆ ಪಂಪನಗೌಡರ ವಿರೋಧವಿದ್ದರೂ ಸಹ ತಾತ ಸಣ್ಣಹೊನ್ನೇಗೌಡ ಮೂಲತಃ ಪ್ರಸಿದ್ಧ ಬಯಲಾಟದ ಕವಿ, ನಟ ಆಗಿದ್ದುದರಿಂದ ದೊಡ್ಡನ ಗೌಡರಿಗೂ ಸಂಗೀತ ಮತ್ತು ನಾಟಕಗಳ ಒಲವುಗಳಿಗೆ ದಕ್ಕಿದ ಪ್ರಶಸ್ತಿ ಪ್ರೋತ್ಸಾಹ ಹಲವಾರು. "ತಮ್ಮ ಕನಸಿನ ಕಣ್ಮಣೀ ಸರ್ವಜ್ಞ ಮನೋರಂಜನಾ ನಾಟಕ ಸಭಾ" ಎಂಬ ಸಂಸ್ಥೆ ರಚಿಸಿ ೧೯೩೧ರ ಆಸುಪಾಸಿನ ವರ್ಷಗಳಲ್ಲಿ ಜಲಂಧರ, ಗಂಡರ ಗರ್ವಭಂಗ, ಚವತಿ ಚಂದ್ರ, ಶಾಪವಿಮೋಚನೆ ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿ ಹಲವಾರೆಡೆ ಪ್ರದರ್ಶನ ನೀಡಿದ್ದಾರೆ. "ಶ್ರೀ ಗವಿಮಠದ ಚೆನ್ನ ಬಸವೇಶ್ವರ ಕೃಪಾ ಪೋಷಿತ ಸಂಗೀತ ನಾಟಕ ಸಂಘ" ಎಂಬ ಮತ್ತೊಂದು ಮಂಡಳಿಯನ್ನು ಆರಂಭಿಸಿದರು. ಇಲ್ಲಿಯ ಬಹುಪಾಲು ಕಲಾವಿದರು ಒಕ್ಕಲು ಮಕ್ಕಳಾಗಿದ್ದು ಇವರಿಗೆ ರಂಗಭೂಮಿ ಚಟುವಟಿಕೆಯ ಮಣ್ಣಿನ ಗುಣದಿಂದಲೇ ಬಂದಿವೆ. ೧೯೩೪ನೇ ವರ್ಷದ ಸುಮಾರಿಗೆ ರಾಘುವರ ಪರಿಚಯವಾಗಿ ಅವರ ಶಿಷ್ಯರೇ ಆಗಿ ಹೋದರು. ರಾಘುವರ "ಆರ್ಟ ಲವರ್ಸ್ ಲೀಗ್"ನಲ್ಲಿ ಕಬೀರ, ನಾರದ, ಚಂದ್ರಗುಪ್ತ ಮೊದಲಾದ ಪಾತ್ರಗಳಲ್ಲಿ ಅಭಿನಯಿಸುತ್ತ ಪ್ರೇಕ್ಷಕರ ಮನಕ್ಕೆ ರಂಜನೆಯನ್ನು ನೀಡಿ ಕರ್ನಾಟಕ ಆಂಧ್ರ ಪ್ರದೇಶದಲ್ಲಿ ಹೆಸರು ಮಾಡಿದ್ದಾರೆ. ತಾವೇ ಬರೆದ ನಾಟಕಗಳಲ್ಲಿ ಅಭಿನಯಿಸಿ ದೊಡ್ಡನಗೌಡರು ಕಲೆಯನ್ನು ಆತ್ಮವಿಕಾಸದ ಸಾಧನೆಯೆಂಬಂತೆ ಆತ್ಮ ಸಂಸ್ಕೃತಿ ಪಡೆದು ಕಲೆಯ ಎಲ್ಲಾ ಪ್ರಕಾರಗಳನ್ನು ಅಭ್ಯಾಸ ಮಾಡಿದರು. ಕರ್ನಾಟಕದಲ್ಲೆಲ್ಲಾ ಮಹಾವ್ಯಕ್ತಿಗಳೂ ಇವರ ಗಾನ ಭಕ್ತಿಗಳ ಪರವಶ್ಯವನ್ನು ಕಂಡು ಮೆಚ್ಚಿ ಪ್ರಶಂಸಿದ್ದಾರೆ. ಬಳ್ಳಾರಿಯಲ್ಲಿರುವ "ರಾಘುವ ಕಲಾ ಮಂದಿರ"ದ ನಿರ್ಮಾಣಕ್ಕೆ ಗೌಡರೇ ಕಾರಣೀಕರ್ತರು. ಕನ್ನಡ ನಾಟಕ ಕಲಾ ಪರಿಷತ್ತನ್ನು ನಡೆಸಿ ಆಗಿಂದಾಗ್ಗೆ ಗರೂಡ ಸದಾಶಿವರಾಯರು, ಜಿ.ಹೆಚ್.ವೀರಣ್ಣ, ಆರ್.ನಾಗೇಂದ್ರರಾಯರು, ಅನ.ಕೃ. ಇವರೇ ಮೊದಲಾದ ಪ್ರಮುಖರನ್ನೆಲ್ಲಾ ಕರೆಸಿ ವಿಚಾರ ಮಂಥನ ನಡೆಸಿದ್ದಾರೆ. ಹಲವಾರು ಪ್ರಶಂಸೆ, ಬಿರುದುಗಳು ದೊಡ್ಡನಗೌಡರ ಗಮಕ ಕಲೆಗೆ ಸಂಧಿವೆ.

೧೯೪೩ರಲ್ಲಿ ಗೋಕಾಕದಲ್ಲಿ ನಡೆದ ಜನಪದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ೧೯೬೬-೬೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ನೀಡಿದರೆ, ರಾಜ್ಯೋತ್ಸವ ಪ್ರಶಸ್ತಿ ಲಭಿಸಿದ್ದು, ಶ್ರೇಷ್ಠ ಕಲಾವಿದರಾದ ದೊಡ್ಡನಗೌಡರು ರಂಗಭೂಮಿಯನ್ನು ಭಕ್ತಿ ಪ್ರದಾನ ವಿದ್ಯೆಯನ್ನಾಗಿ ಸ್ವೀಕರಿಸಿದ್ದಾರೆ.

ಉತ್ತಮ ನಟ, ನಾಟಕಕಾರ, ತಬಲವಾದಕ, ಸಾಹಿತಿ ಆದ ಮ.ಬ.ಸೋಮಣ್ಣನವರು ಜನಿಸಿದರು. ೧೯೫೩.ರಲ್ಲಿ ಹೊಸಪೇಟೆ ತಾಲ್ಲೂಕಿನ ಸಿದ್ಧಮಾಂಬೆ ವಂಶದ ಹಿರಿಯರೆಲ್ಲರೂ ಕಲಾವಂತರಾದ್ದರಿಂದ ಕಲೆಯು

ಇವರಿಗೆ ಅನುವಂಶೀಯವಾಗಿ ಬಂದಿದೆ. ಕವನ ರಚಿಸುವುದು, ನಟಿಸುವುದು, ತಬಲಾವಾದನ, ಚಿಕ್ಕಂದಿನಿಂದಲೇ ಬಂದ ಹವ್ಯಾಸಗಳು. ಉತ್ತಮ ಭಾಷೆ ಭೋಧಕರು ಎಂದು ವಿದ್ಯಾರ್ಥಿಗಳಿಂದ ಮತ್ತು ಅಧಿಕಾರಿಗಳಿಂದ ಪ್ರಶಂಸಿಸಲ್ಪಟ್ಟ ಇವರು ನೂರಾರು ನಾಟಕಗಳಲ್ಲಿ ಹಾಗೂ ಸಂಗೀತ ಕಛೇರಿಗಳಿಗೆ ತಬಲಾವಾದನ ಮಾಡಿದ್ದಾರೆ. ಅನೇಕ ವೃತ್ತಿ ಹಾಗೂ ಹವ್ಯಾಸಿ ನಾಟಕ ಸಂಸ್ಥೆಗಳಿಗೆ ನೂರಾರು ರಂಗಗೀತೆಗಳನ್ನು ರಚಿಸಿದ್ದಾರೆ. ಇವರ ಹಾಡು ಹಾಗೂ ತಬಲವಾದನ ರೇಡಿಯೋದಲ್ಲಿ ಪ್ರಸಾರವಾಗಿದೆ. ಬೆಂಗಳೂರಿನ ರವೀಂದ್ರಕಲಾ ಕ್ಷೇತ್ರ, ಸಾಹಿತ್ಯ ಪರಿಷತ್ತಿನಲ್ಲಿ ಇವರು ರಚಿಸಿದ ನಾಟಕಗಳು ಪ್ರದರ್ಶನಗೊಂಡಿವೆ.

ಸಂಡೂರಿನ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಅಧ್ಯಾಪಕರಾಗಿರುವ ಡಾ.ಮೃತ್ಯುಂಜಯ ಹೊರಕೇರಿ ಯವರು ಸೃಜನ, ಸೃಜನೇತರ, ಜಾನಪದ, ನಾಟಕ, ಸಂಶೋಧನ ಕ್ಷೇತ್ರದಲ್ಲಿ ಪ್ರಚಾರ ಗದ್ದಲ್ಲವಿಲ್ಲದೆ ದುಡಿಯುತ್ತಿದ್ದಾರೆ. ಶ್ರೇಷ್ಠ ನಾಟಕಕಾರರೆನ್ನಿಸಿ ಭಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದಾರೆ. ರುದ್ರ ಭೂಮಿ, ಗಂಡುಗಲಿ ಕುಮಾರರಾಮ ಹಾಗೂ ಕನಸಿನ ರಾಣಿ ಇವು ಹೊರಕೇರಿಯವರ ನಾಟಕ ಕೃತಿಗಳು. ನಲವಡಿ ಶ್ರೀಕಂಠಶಾಸ್ತ್ರಿಗಳ ಜೀವನ ಮತ್ತು ಕೃತಿಗಳು ಪಿಹೆಚ್.ಡಿ. ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ದೊರೆತಿದೆ. ಇತ್ತೀಚೆಗೆ ಇವರ 'ರಂಗ ವೃತ್ತಿ' ರಂಗ ಪುಸ್ತಕ ಹಲವಾರು ನಾಟಕ ಕಂಪನಿಗಳ ಏಳು-ಬೀಳು ಇವರ ನಾಟಕ ಗಳೊಂದಿಗೆ ಸಂಬಂಧ ಹಿರಿಯ ನಾಟಕಕಾರರ ಅನುಭವ ಸ್ವ ಅನುಭವ ಎಲ್ಲವನ್ನು ಈ ಗ್ರಂಥದಲ್ಲಿ ಹಂಚಿ ಕೊಂಡಿದ್ದಾರೆ. ಅನೇಕ ಸಂಘ, ಸಂಸ್ಥೆಗಳಿಂದ ಸನ್ಮಾನಗೊಂಡ ಹೊರಕೇರಿಯವರು ಚುರುಕು ಬುದ್ಧಿಯ ಶ್ರಮಜೀವಿ, ಪ್ರಾಮಾಣಿಕ ಹಾಗೂ ಸರಳ ವ್ಯಕ್ತಿಯಾಗಿದ್ದಾರೆ.

ಹೂವಿನಹಡಗಲಿಯ ಎಂ.ಪಿ.ಪ್ರಕಾಶ ಅವರು ಉತ್ತಮ ನಟ, ನಾಟಕಕಾರ, ನಿರ್ದೇಶಕ, ಸಂಘಟಕ, ರಾಜಕಾರಣಿಯೂ ಆಗಿದ್ದಾರೆ. ಇವರು ಮುಂಬೈಯಲ್ಲಿ ಇದ್ದಾಗ ಕೈಲಾಸಂ, ಪರ್ವತವಾಣಿ, ಎ.ಕೆ.ಮೂರ್ತಿ ಯವರ ನಾಟಕಗಳನ್ನು ಪ್ರದರ್ಶಿಸಿದ್ದರು. ಹಾಗೆಯೇ "ತಾಯಿ", ಸಾಕ್ರೇಟೀಸ್, ಹೃದಯ ದೇಗುಲ ಮುಂತಾದ ನಾಟಕಗಳನ್ನು ರಂಗಕ್ಕೆ ತಂದಿದ್ದರು. ತಮ್ಮೊಂದಿಗೆ ದಕ್ಷಿಣಕನ್ನಡ ಜಿಲ್ಲೆಯ ಸಹಕಾರಿಗಳೊಂದಿಗೆ ತಾವು ಕೂಡ ಅವರಂತೇ ಯಕ್ಷಗಾನವನ್ನು ಪ್ರದರ್ಶಿಸಿದ್ದರು. ಮುಂಬೈ ಉಲ್ಲಾಳ ಶೀಲ್ಡ್ ಸ್ಪರ್ಧೆಯಲ್ಲಿ ಇವರ ತಂಡವೇ ಪ್ರಥಮ ಬಹುಮಾನ ಪಡೆಯಿತು. ತದನಂತರದಲ್ಲಿ ತಾಯಿ ಮತ್ತು ಹೃದಯ ದೇಗುಲಗಳನ್ನು ಪ್ರದರ್ಶಿಸಿ ಸತತ ಎರಡು ವರ್ಷಗಳ ಕಾಲ "ಮುನ್ನಿ ಅವಾರ್ಡ್"ನ್ನು ಪಡೆದರು. ತರುವಾಯ 'ಅಂಗುಲಿಮಾಲ' ದಲ್ಲಿ ರಾಮಕೃಷ್ಣ ಪರಮಹಂಸರ ಪಾತ್ರದಲ್ಲಿ ಹಾಗೂ "ಅಮ್ರಪಾಲಿ" ನಾಟಕಗಳಲ್ಲಿ ಪಾತ್ರಗಳನ್ನು ಮಾಡಿದರು. ಮುಖ್ಯವಾಗಿ ಆವರೆಗೆ ರಂಗಭೂಮಿಯಲ್ಲಿ ಬಳಕೆಯಾಗಿರದ ಸ್ಯಾಕ್ಸೋಫೋನನ್ನು ಯಕ್ಷಗಾನದಮುಖೇನ ಕಾರ್ಯಕ್ರಮ ಪ್ರದರ್ಶಿಸಿದ ಪ್ರಕಾಶ ಅವರ ನೂತಿ ಪ್ರಯೋಗ ಗಮನಾರ್ಹವಾದುದು. ಇಂತಹ ಹಲವಾರು ಹೊಸ ಪ್ರಯೋಗ ಮಾಡಿ ರಂಗಭೂಮಿ ಸಂಘಟಿಸಿದ ಕೀರ್ತಿ ಇವರದು.

ಹೂವಿನ ಹಡಗಲಿಯಲ್ಲಿ ವಕೀಲ ವೃತ್ತಿಗೆ ಬಂದು ಅಲ್ಲಿನ ಹವ್ಯಾಸಿ ಕಲಾವಿದರನ್ನು ಒಂದೆಡೆ ಸೇರಿಸಿ ''ರಂಗಭಾರತಿ''ಯಂಥ ತಂಡವನ್ನು ಕಟ್ಟಿ ಆ ಮೂಲಕ ಮೊದಮೊದಲು ಏಕಾಂಕ ನಾಟಕಗಳನ್ನು ಆರಂಭಿಸಿ, ಅಸಂಗತ ನಾಟಕಗಳನ್ನು ಗೀತನಾಟಕಗಳನ್ನು ಮಾಡಿದರು. ಹಾಗೆಯೇ ಮುಂದುವರಿದ ದಿನಗಳಲ್ಲಿ ''ಅಷಾಡದ ಒಂದು ದಿನ'' ಕಾಳಿದಾಸನ ಪಾತ್ರದಲ್ಲಿ ''ಜೋಕುಮಾರಸ್ವಾಮಿ''ಯಲ್ಲಿ ಸೂತ್ರಧಾರನಾಗಿ, ಸೂರ್ಯ ಶಿಕಾರಿಯಲ್ಲಿ ಚಂದ್ರಗುಪ್ತನಾಗಿ ಅಭಿನಯಿಸಿದ್ದೇ ಅಲ್ಲದೆ ಅನೇಕ ನಾಟಕಗಳಿಗೆ ನಿರ್ದೇಶನವನ್ನು ಮಾಡಿದ್ದಾರೆ. ಈ ಮೂಲಕ ಹೂವಿನ ಹಡಗಲಿಯ ರಂಗಭಾರತಿ ತಂಡವನ್ನು ರಾಜ್ಯದ ರಾಜಧಾನಿ ಬೆಂಗಳೂರು ಹಾಗೂ ದೆಹಲಿಯವರೆಗೂ ಪರಿಚಯಿಸಿದ ರೂವಾರಿಯೇ ಎಂ.ಪಿ.ಪ್ರಕಾಶ್. ಒಂದೆಡೆಗೆ ರಂಗ ಚಟುವಟಿಕೆಗಳೊಂದಿಗಿದ್ದರೂ ಇನ್ನೊಂದೆಡೆ ರಾಜಕೀಯ ಹೋರಾಟಗಳೊಂದಿಗೂ ಪ್ರಕಾಶ ಅನನ್ಯತೆಯನ್ನು ಪಡೆದುಕೊಂಡಿದ್ದಾರೆ.

ರಂಗಭೂಮಿಯ ಕ್ರಿಯಾಶೀಲತೆಗೆ ಸಂಬಂಧಪಟ್ಟಂತೆ ಇವರು ಅಭ್ಯಸಿಸುತ್ತಿರುವ ಕಾಲದಲ್ಲಿಯೇ ಉತ್ಪಾಲ ದತ್ತರ ಬಂಗಾಳಿ ನಾಟಕ ಇವರ ಕಣ್ಣಿಗೆ ಬಿದ್ದು ಸೂರ್ಯಶಿಕಾರಿಯ ಹೆಸರಿನಲ್ಲಿ ಕನ್ನಡ ಅನುವಾದವಾದದ್ದು ಕರ್ನಾಟಕ ರಂಗಭೂಮಿಗೆ ನೀಡಿದ ದೊಡ್ಡ ಕೊಡುಗೆ ಎನ್ನಬಹುದು. ಅಲ್ಲಿಂದ ಈ ತನಕ ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಅನೇಕ ಜನ ಸಾಹಿತಿಗಳೊಂದಿಗೆ ಕಲಾವಿದರೊಂದಿಗೆ, ಗಾಢವಾದ ಸಂಬಂಧವನ್ನಿಟ್ಟು ಕೊಂಡ ಇವರು ಆ ಮೂಲಕ ಇಡೀ ರಾಜ್ಯದಲ್ಲಿಯೇ ಸಾಹಿತ್ಯಿಕ ತಿಳುವಳಿಕೆ ಇರುವ ಒಬ್ಬ ವಿಶಿಷ್ಟ ಅಪರೂಪದ ರಾಜಕಾರಣಿ, ಸಾಂಸ್ಕೃತಿಕ ವ್ಯಕ್ತಿ ಎಂದು ಗುರುತಿಸಿಕೊಂಡಿದ್ದಾರೆ.

ಇಂದು ನಶಿಸುತ್ತಿರುವ ಜಾನಪದ ಕಲಾಪ್ರಕಾರಗಳನ್ನು ರಕ್ಷಿಸಲು ಇತ್ತೀಚೆಗೆ ನಡೆಯುತ್ತಿರುವ ಪ್ರಯತ್ನವಂತು ಸ್ವಾಗತಾರ್ಹವೇ ಸರಿ. ಜಾನಪದ ತಜ್ಞರಾದ ಮುದೇನೂರು ಸಂಗಣ್ಣನವರು ಈ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಾ ಬಂದಿರುವುದು ನಮ್ಮೆಲ್ಲರ ಹೆಮ್ಮೆಯ ವಿಷಯ. ಜಾನಪದ ಸಾಹಿತ್ಯವನ್ನು ಉಳಿಸಬೇಕೆಂಬ ಈ ತಹತಹಿಕೆಯಲ್ಲಿ ಅದಕ್ಕೆ ತಕ್ಕ ಪರಿಹಾರವನ್ನು ಕಂಡುಕೊಂಡವರು ಮುದೇನೂರು ಸಂಗಣ್ಣ. ಮೂಲತಃ ಸಾಹಿತಿಗಳಾದ ಇವರು ಗೊಂದಲಿಗರ ಪಂಗಡಕ್ಕೆ ಸೇರಿದ ಜನರ ವಿಶಿಷ್ಟ ಜಾನಪದ ಪ್ರಕಾರವಾದ ಗೊಂದಲಿಗರ ಆಟದ ಮೂಲಕ್ಕೆ ಧಕ್ಕೆ ಬರದ ಹಾಗೆ ಶೀಲಾವತಿ ಕಥೆಯನ್ನು ರಂಗರೂಪಕ್ಕೆ ಅಳವಡಿಸಿದ್ದಾರೆ. ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿಯ ಲಲಿತ ಕಲಾರಂಗಕ್ಕೆ ಅಭಿನಯಿಸಲು ಕೊಟ್ಟಾಗ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯ ರವೀಂದ್ರ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೆರವಿನೊಂದಿಗೆ ಮೂಡಿಬಂದ ಈ ನಾಟಕ ಅತ್ಯಂತ ಸಮರ್ಪಕವಾಗಿ ಈ ಭಾಗದ ಪ್ರೇಕ್ಷಕರಿಗೆ ಹೊಸ ಅನುಭವ ನೀಡುವಲ್ಲಿ ಯಶಸ್ವಿಯಾಗಿದೆ.

ಅಲೆಮಾರಿಗಳಾದ ಗೊಂದಲಿಗರ ಆಟವನ್ನು ಅಟ್ಟಕ್ಕೇರಿಸಿ ಅದಕ್ಕೆ ಹೊಸ ರೂಪವನ್ನು ಕೊಟ್ಟ ಕೀರ್ತಿ ಸಂಗಣ್ಣನವರಿಗೆ ಸಲ್ಲುತ್ತದೆ. ''ಲಕ್ಷಾಪತಿ ರಾಜನ ಕಥೆ'' ಕೂಡ ಗೊಂದಲಿಗರ ಆಟದ ರಾಗ ರೂಪ. ಸ್ವತಃ ನಟರಲ್ಲದ ಸಂಗಣ್ಣ ಜಾನಪದದ ಹಲವು ಪ್ರಕಾರಗಳನ್ನು ಕ್ರೋಢಿಕರಿಸಿ ಪ್ರದರ್ಶಿಸುತ್ತಿರುವುದು ಶ್ಲಾಘನೀಯವೇ ಸರಿ. ಇಂಥಹ ಇಳಿವಯಸ್ಸಿನಲ್ಲೂ ಸಂಗಣ್ಣನವರು ತಾಳ್ಮೆ, ಸಹನೆಯಿಂದ ನಾಟಕಗಳನ್ನು ಕಟ್ಟಿಕೊಂಡು ಜಿಲ್ಲೆಗಳ ತುಂಬಾ ಓಡಾಡುತ್ತಿರುವುದು ಸಂತೋಷದ ಸಂಗತಿ.

ಜೀವನದಿಂದಲೇ ಹೆಚ್ಚು ಅನುಭವ ಪಡೆದಿರುವ ಬಿ.ಎಂ.ಮರುಳಸಿದ್ದಯ್ಯನವರು ಯಾವ ವಿಶ್ವವಿದ್ಯಾಲಯದ ಪದವೀಧರರೇನಲ್ಲ. ಆದರೆ ಅವರು ಜೀವನದಲ್ಲಿ ಸಾಕಷ್ಟು ಅನುಭವ ಪಡೆದಿರುವ ಅನುಭವ ಜನ್ಯರು. ಇಂದಿನ ರಂಗಭೂಮಿಯಲ್ಲಿ ಪ್ರಪಂಚಕ್ಕೆ ಪೂರಕವಾದ ರಸಿಕ ನಾಟಕಕಾರ ನಲವಡಿ ಶ್ರೀಕಂಠಶಾಸ್ತ್ರಿಗಳಂಥ ಮಹಾಪ್ರಾಜ್ಞರು ಮರುಳರ "ಸರ್ವೋದಯ" ನಾಟಕವನ್ನು ಮೆಚ್ಚಿದರು. ನಾಟಕವು ಸಂಗೀತಮಯದಿಂದ ಕೂಡಿದ್ದು ಉತ್ತಮವಾದ ನಾಟಕವಾಗಿದೆ. ನಾಟಕವು ಇವತ್ತಿನ ಜಗತ್ತಿಗೆ ಬೇಕಾದ ರೀತಿ ನೀತಿಗಳನ್ನು ಬೋಧಿಸಿ ರಸಿಕರ ಮನಸ್ಸಿಗೆ ಆನಂದವನ್ನು ನೀಡುತ್ತದೆ. ಇಲ್ಲಿಯ ಸಾಹಿತ್ಯ, ಸಂಗೀತ ಮಧುರವಾಗಿದ್ದು ನಾಟಕ ಜನಮನ್ನಣೆ ಪಡೆದಿದೆ. ೧೯೪೭ರಲ್ಲಿ "ಗರ್ಜನೆ" ಮಾಸಪತ್ರಿಕೆಯಲ್ಲಿ ರಂಗಭೂಮಿಯ ಕುರಿತು ಆಳವಾದ ಚಿಂತನೆ ವ್ಯಕ್ತ ಪಡಿಸಿದ್ದಕ್ಕಾಗಿ ಜನರೆಲ್ಲರಿಗೂ ಚಿರಪರಿಚಿತರಾಗಿದ್ದಾರೆ. ೧೯೪೩ರಲ್ಲಿ ಕ್ವಿಟ್ ಇಂಡಿಯಾ ಆಂದೋಲನದಲ್ಲಿ ಧುಮುಕಿ ತಮ್ಮ ಮುಂದಾಳತ್ವದಲ್ಲಿ ಕನ್ನಡಿಗರದೇ ಆದ ಬ್ಲಾಕ್‌ಗಳನ್ನು ಸ್ಥಾಪಿಸಲು ಟೊಂಕ ಕಟ್ಟಿನಿಂತರು. ಆಶು ನಾಟಕವೊಂದನ್ನು ಅಭಿನಯಿಸಿ ಎಲ್ಲಾ ಪ್ರೇಕ್ಷಕ ರನ್ನು ಮೆಚ್ಚಿಸಿದ್ದಾರೆ. ಬಿ.ಎಂ.ಮರಳುಸಿದ್ದಯ್ಯನವರು ಸಾಮಾಜಿಕ ನಾಟಕ "ಸರ್ವೋದಯ" ಪೌರಾಣಿಕ ಕೃತಿ "ರಕ್ತ ಮುಕುಟ".

ರಂಗಭೂಮಿ ನಶಿಸಿ ಹೋಗುತ್ತಿರುವ ಈ ಜಾಗತೀಕರಣದ ದಿನಗಳಲ್ಲಿ ನಮ್ಮ ಪರಂಪರೆಗೆ ಅಂಟಿಕೊಂಡು ನಾಟಕ ಕಲೆ ಏಳಿಗೆಗಾಗಿ ಶ್ರಮಿಸುತ್ತಿರುವ ಸಾಹಿತಿಗಳಲ್ಲಿ ಎನ್.ಎಸ್.ಹುರಳಿಯಾಳ್ ಕೂಡ ಒಬ್ಬರು. ನಮ್ಮ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಕವಿಗಳು, ಸಂಗೀತಗಾರರು, ನಾಟಕಕಾರರು, ಅಮೋಘ ಸೇವೆಯನ್ನು ಸಲ್ಲಿಸಿದ್ದಾರೆ. ಇನ್ನೂ ಕೆಲವರು ಉಪಜೀವನ ಅಥವಾ ತಮ್ಮ ಹವ್ಯಾಸಕ್ಕಾಗಿ ಕಲಾ ಸೇವೆಯನ್ನು ಮಾಡುವವ ರಿದ್ದಾರೆ. ಆದರೆ ಎನ್.ಎಚ್.ಹುರಳಿಯಾಳ್‌ರ ಕಲಾಸೇವೆಯೇ ಭಿನ್ನರೀತಿಯದು. ಹೊಸಪೇಟೆಯ ಖಾಸಗಿ ಗಣಿ ಸಂಸ್ಥೆಯೊಂದರಲ್ಲಿ ಫೋರ್ಮ್‌ನ್‌ರಾಗಿ ಸೇವೆ ಸಲ್ಲಿಸುವ ಹುರಳಿಯಾಳ್ ಬಿಡುವಿಲ್ಲದೆ ಕಾರ್ಮಿಕರ ಹಾಗೂ ಯಂತ್ರೋಪಕರಣಗಳಲ್ಲಿ ಕೆಲಸ ಮಾಡಿ ಸಂಜೆಯ ವೇಳೆಯಲ್ಲೂ ಸಹ ಸಮಯವನ್ನು ಹಾಳು ಮಾಡದೇ ತಮ್ಮ ಸಾಹಿತ್ಯ ರಚನೆಗಾಗಿ ವಿನಿಯೋಗಿಸುತ್ತಾರೆ. ಇವರು ನಾಟಕಕಾರರಲ್ಲದೇ ಹಾರ್ಮೋನಿಯಂ ಸಂಗೀತ ವಾದಕರಾಗಿ, ನಟ ಹಾಗೂ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಬಳ್ಳಾರಿ ಜಿಲ್ಲಾ ಮಟ್ಟದ ಗಣಿ ಸಂರಕ್ಷಣಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಸುಮಾರು ಹನ್ನೆರಡು ವರ್ಷಗಳಿಂದಲೂ ಪ್ರಥಮ ಬಹುಮಾನವನ್ನು ಪಡೆದ ಅಭಿವ್ಯಕ್ತಿ ಇವರದು. ಕರ್ನಾಟಕ ನಾಟಕ ಅಕಾಡೆಮಿಯ ಸ್ಪರ್ಧೆಯಲ್ಲಿ ಇವರ ನಾಟಕ "ವರದಕ್ಷಿಣೆ ಪಿಡುಗು" ಏಕಾಂಕ ನಾಟಕಕ್ಕೆ ಪ್ರಥಮ ಪ್ರಶಸ್ತಿ ದೊರಕಿದೆ. ಬಹುಮುಖ ಪ್ರತಿಭೆಯ ಲೇಖಕ ಹುರುಳಿಯಾಳ್‌ರು ಚಿಕ್ಕಂದಿನಿಂದಲೂ ಕಷ್ಟಗಳನ್ನು ಅನುಭವಿಸಿ ತಮ್ಮ ಹಿಂದಿನ ಕಷ್ಟ ಜೀವನದ ನೆನಪುಗಳನ್ನು ಗಟ್ಟಿಯಾಗಿಸಿ ಕೊಂಡಿದ್ದಾರೆ. ಚೇರ್ಮನ್ ಚೆನ್ನಯ್ಯ, ಕಲೆಕ್ಟರ್ ಕಮಲ, ಹಾಗೂ ಕುಡುಕನ ಕಿಮ್ಮತ್ತು ಸೂಳೆಯ ನಿಯತ್ತು ಪ್ರಮುಖ ನಾಟಕಗಳಲ್ಲದೆ ಒಟ್ಟು ಆರು ನಾಟಕಗಳನ್ನು ಬರೆದು ಹೊಸಪೇಟೆ, ಬಳ್ಳಾರಿ ಹಾಗೂ ಚಿತ್ರದುರ್ಗ ಭಾಗಗಳಲ್ಲಿ ಪ್ರದರ್ಶನಗೊಂಡು ಯಶಸ್ವಿಯಾಗಿವೆ.

ಸರಳ ಹಾಗೂ ಮಿತಭಾಷಿಯಾಗಿರುವ ಎಲ್.ಪಿ.ಟೀಕ್ಯಾ ನಾಯ್ಕ ಬಹುಮುಖ ಪ್ರತಿಭೆ. ಗ್ರಾಮೀಣ ಪರಿಸರದಲ್ಲಿದ್ದು ಪರಿಶ್ರಮದಿಂದ ಪ್ರತಿಭೆಯನ್ನು ಬೆಳಸಿಕೊಂಡು ನಾಟಕಗಳನ್ನು ಬರೆದದ್ದಲ್ಲದೆ ಅವುಗಳನ್ನು ರಂಗಕ್ಕೆ ತಂದು ಪ್ರೇಕ್ಷಕರಿಗೆ ತಮ್ಮ ಸಾಹಿತ್ಯವನ್ನು ಪರಿಚಯಿಸುವುದು ಅವರ ಸಾಧನೆ ಎಂದೇ ಹೇಳಬಹುದು. ಸಮಾಜದಲ್ಲಿಯ ಅನ್ಯಾಯ, ಅಕ್ರಮಗಳು, ವಿರೋಧಾಭಾಸಗಳು ನಾಯಕರ ನಾಟಕಗಳಲ್ಲಿ ಅವು ಕಥಾವಸ್ತುಗಳಾಗಿವೆ. ರಂಗುರಂಗಿನ ಆಧುನಿಕ ಬದುಕು ಅದರ ಕ್ಷಣ ಭಂಗುರತೆ, ಆಸೆ, ನಿರಾಶೆ, ದುಃಖ ಜೀವನ ಮೌಲ್ಯಗಳು, ಮಾನವೀಯ ಸಂಬಂಧಗಳು, ಛಲ, ಸ್ವಾರ್ಥ, ಕಾನೂನು, ಶೋಷಣೆ, ಬಂಡಾಯ ಹೀಗೆ ಹಲವಾರು ವಿಷಯಗಳು ಜನಮನದಲ್ಲಿ ನಿಂತಿವೆ. ವೈಚಾರಿಕತೆಯನ್ನು ಬೆಳೆಸಿವೆ. ಟೀಕ್ಯಾನಾಯಕರು ನಟರಾಗಿದ್ದಲ್ಲದೆ ನಿರ್ದೇಶನ ಕೂಡ ಮಾಡಿದ್ದಾರೆ. ಹಳ್ಳಿಹಳ್ಳಿಗಳನ್ನು ಸುತ್ತಿ ನಾಟಕಗಳನ್ನು ಪ್ರದರ್ಶನ ಮಾಡಿದ್ದಾರೆ. 'ಕಾಲೇಜ್ ಕಲಾವತಿ' ಬಡವ ಕೊಟ್ಟ ಎಚ್ಚರಿಕೆ, ಪ್ರೀತಿ ದರ್ಶನ ಇವು ಇವರ ಪ್ರಮುಖ ನಾಟಕಗಳಾಗಿವೆ.

ಟಿ.ಪರಮೇಶ್ವರಪ್ಪನವರು ಕತ್ತಲೆ ಬೆಳಕು, ಕುಂಕಮ ಸೌಭಾಗ್ಯವತಿ, ದೇವರಿಗೂ ಸೂಳೆ ಬೇಕೆ, ತಪ್ಪಡೆ ತಮ್ಮಣ, ರೂಬಿ ಕ್ಲಬ್ಬಿನ ರಹಸ್ಯ, ಕಾಮ ಮತ್ತು ಕಲಿ ಇತ್ಯಾದಿ ನಾಟಕಗಳನ್ನು ಮರಿಸ್ವಾಮಿ ಮದಿರೆ ಹಾಗೂ ಸಿರಗೇರಿ ನಾಗನಗೌಡರಿಂದ ಹುಬ್ಬಳ್ಳಿ, ಬಾಗಲಕೋಟೆ ಮತ್ತು ಹೊಸಪೇಟೆಯಲ್ಲಿ ಪ್ರಯೋಗಿಸಿದ್ದಾರೆ. ೧೯೬೨ ರಿಂದ ಇಂದಿನವರೆಗೆ ಸತತವಾಗಿ ರಂಗಭೂಮಿಯ ಬಗ್ಗೆ ಕಳಕಳಿಯನ್ನಿಟ್ಟುಕೊಂಡು ನಡೆಯುತ್ತಲೇ ಬಂದಿರುವ ಇವರಿಗೆ ಹಲವು ಪ್ರಶಸ್ತಿಗಳು ಲಭ್ಯವಾಗಿವೆ. ಸಾಹಿತ್ಯ, ನಾಟಕಕಾರ, ಜಿ.ಎಸ್.ಗೌಡ ಹೊಳಗುಂದಿ ಬರೆದ "ಮೋಹದ ಬಲಿ" ನಾಟಕವು ಉತ್ತಮ ಹಾಡುಗಳಿಂದಲೂ ಸರ್ವಸುಂದರವಾಗಿದ್ದುದರಿಂದ ಹಲವಾರು ಪ್ರಯೋಗ ಕಂಡು ಮೆಚ್ಚುಗೆಗೆ ಪಾತ್ರವಾಗಿದೆ. ಡಾ.ಟಿ.ಶಿವಕುಮಾರ ಕುಡದರಹಾಳರ "ಸಹೋದರರ ಸೇಡು" ಹಾಗೂ "ಕೆ.ಜಿ.ಸೊಪ್ಪಿವಾಠ" ಹುಚ್ಚು ಹಿಡಿಸಿದ ಹೆಣ್ಣು ಜಿಲ್ಲೆಯಲ್ಲಿ ಹಲವಾರು ಬಾರಿ ಪ್ರದರ್ಶನ ಕಂಡ ಯಶಸ್ವಿ ನಾಟಕಗಳಾಗಿವೆ.

ನಟರು : ನಾಟಕ ಸಾರಸ್ವತ ಲೋಕಕ್ಕೆ ಸಹಸ್ರಾರು ಕಲಾವಿದರು ಬದುಕಿ ಬಾಳಿದ್ದು ಗಮನಾರ್ಹ. ಕಲೆ ಕವಲೊಡೆಯಬೇಕಾದರೆ ಆಸಕ್ತಿ ಶ್ರದ್ಧೆಯು ನೀರಾಗಬೇಕಾಗುತ್ತದೆ. ನಟನೆ ಮೈಗೂಡ ಬೇಕಾದರೆ ಕಲಾವಿದ ಅದನ್ನು ಆರಾಧಿಸಬೇಕಾಗುತ್ತದೆ. ವೇದಿಕೆಯ ಮೇಲೆ ಪಾತ್ರ ಮಾಡಿ ನಾಟಕಗಳಿಗೆ ಜೀವ ತುಂಬುವಕಲಾವಿದರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ವೃತ್ತಿಪರಂಪರೆ ಹವ್ಯಾಸಿಗಾರರು ಅರೆವೃತ್ತಿ ಕಲಾವಿದರು ಬಳ್ಳಾರಿ ಜಿಲ್ಲೆಯ ರಂಗಭೂಮಿಯನ್ನು ಪ್ರಜ್ವಲಗೊಳಿಸಿದ್ದಾರೆ.

ಅಭಿಮಾನವನ್ನೇ ಜೀವನವನ್ನಾಗಿಸಿಕೊಂಡು ಬದುಕುವ ಮಾರ್ಗವನ್ನು ಕಂಡುಕೊಂಡ ಕಲಾವಿದರೆಷ್ಟೋ ನಮ್ಮಲ್ಲಿ ಆಗಿ ಹೋಗಿದ್ದಾರೆ. ಅಂತಹವರಲ್ಲಿ ಬಳ್ಳಾರಿಯ ಜಿ.ಟಿ.ರಾಘವ, ಹನುಮಂತಗೌಡ, ನಾಗೇಶ ಶಾಸ್ತ್ರಿಗಳು, ಪದ್ಮನಾಭ, ವೆಂಕೋಬಾಚಾರ್ಯರು, ಪಿ.ಹನುಮಂತಪ್ಪ, ಕೃಷ್ಣಮಾಚಾರ್ಯರು, ಜೋಳದರಾಶಿ

ದೊಡ್ಡನಗೌಡರು, ಕೊಟ್ಟೂರು ಬಸಯ್ಯ, ಎಲಿವಾಳ ಸಿದ್ದಯ್ಯ, ಎಣಗಿ ಕಾಸಿಂಸಾಬ್ , ಹಣ್ಣೆ ವೀರಭದ್ರಮ್ಮ, ಮರಿಯಮ್ಮನಹಳ್ಳಿ ದುರ್ಗದಾಸ್, ಉಲವತ್ತಿ ವೀರಣ್ಣ, ಉತ್ತಂಗಿ ಚೆನ್ನಬಸಪ್ಪ, ಕೋಗಳಿ ಪಂಪಣ್ಣ, ಕನಕಗಿರಿ ವಾದಿರಾಜ, ಹುಬ್ಬೆ ಕರಿಯಲ್ಲಪ್ಪ, ಎಂ.ಪಿ.ಪ್ರಕಾಶ, ಮ.ಬ.ಸೋಮಣ್ಣ, ಎ.ಚಿದಾನಂದ ಗೌಡ, ಹುಲುಗಪ್ಪ ಕಟ್ಟೀಮನಿ, ಕೆ.ಶ್ರೀಶೈಲಪ್ಪ ವಾತ್, ವಾರಿಯಣ್ಣ, ಡಾ.ಬಸವರಾಜ ಮಲಶೆಟ್ಟಿ, ಎನ್.ಎಂ. ರವಿಕುಮಾರ, ಟಿ.ಗೋವಿಂದಪ್ಪ, ಜೋಗಿ ಬಸವರಾಜ, ಮಾಡ್ಲಿ ದೊಡ್ಡಮಲ್ಲಪ್ಪ, ರವೀಂದ್ರ ಉತ್ತಹಳ್ಳಿ, ಬಿ.ಮೌನೇಶ್ವರ, ಕಾಳಿಂಗ ಏರ್ರಿಸ್ವಾಮಿ, ವಾಡಿಗೇರ ಮಂಜುನಾಥ, ಬಳ್ಳಾರಿ ಕೆ.ಜಂಬುನಾಥ, ಸುಭದ್ರಮ್ಮ ಮನ್ಸೂರ್, ಲಿಂಗರಾಜ್ ಮನ್ಸೂರ್, ಮೈದೂರು ಚೆನ್ನಬಸಪ್ಪ, ಬಳ್ಳಾರಿ ಲಲಿತಮ್ಮ, ಊರಮ್ಮನಹಳ್ಳಿ ಡಿ.ಹನುಮಂತಮ್ಮ, ಆದವಾನಿ ಲಕ್ಷ್ಮೀದೇವಿ, ಆದವಾನಿ ದೊಡ್ಡ ಮುದ್ದಮ್ಮ, ಸೋಗಿ ರತ್ನ, ಎ.ಚಿದಾನಂದಪ್ಪ, ಟಿ.ಹನುಮಂತಮ್ಮ, ಎಂ.ಅಂಭುಜ, ಎಸ್.ರೇಣುಕ, ಎಚ್. ಶಾಂತಮ್ಮ, ಎ.ಚಂದ್ರಕಲಾ, ಬಿ.ಸುಮತಿ, ಎನ್.ಮಾಲತಿ, ಬಿ.ಶಾರದ, ಜಿ.ಅಂಜಿನೆಮ್ಮ, ಎನ್.ರೇಣುಕ, ಹೊಸಪೇಟೆ ಮಧುರ, ವಿರುಪಾಕ್ಷರ ಅಂಜಿನಮ್ಮ, ಏಣಿಗಿ ನೀಲಮ್ಮ, ಬಿ.ಶಿವಕುಮಾರಿ, ಕೆ.ಗೀತಾ, ಕಮಲ, ವಿಶಾಲಾಕ್ಷಿ, ಕೆ.ವೆಂಕಮ್ಮ, ಜ್ಯೋತಿ, ಡಿಸ್ಕೊ ಪದ್ಮ, ಮುಂತಾದವರು ಪ್ರಮುಖ ಕಲಾವಿದರೆಂದು ಹೆಸರುವಾಸಿಯಾಗಿದ್ದಾರೆ.

ಈ ಶತಮಾನದ ಆರಂಭದ ದಿನಗಳನ್ನು ರಂಗಭೂಮಿಯ ವಿಜೃಂಭಣೆಯ ದಿನಗಳೆಂದು ಹೇಳಬಹುದು. ಬಹು ಜನಕಲಾವಿದರು ೧೯೧೦ ರಿಂದ ೧೯೫೦ರ ವರೆಗಿನ ಕಾಲದಲ್ಲಿ ಅನೇಕರು ಕಂಪನಿಗಳನ್ನು ಕಟ್ಟಿ ನಾಟಕ ಆಡಿದರು. ಕೆಲವರು ನೇತೃತ್ವವನ್ನು ವಹಿಸಿಕೊಂಡು ಆಡಿಸಿದರು ಕೂಡ ಅಂಥವರಲ್ಲಿ ಜೋಳದರಾಶಿ ದೊಡ್ಡನಗೌಡರು ಹಾಗೂ ಬಳ್ಳಾರಿಯರಾಘುವಾಚಾರ್ಯರು ಪ್ರಸಿದ್ಧರು. ಬಳ್ಳಾರಿಯಲ್ಲಿ ಹುಟ್ಟಿ ಬೆಳೆದು ತಮ್ಮ ಅಭಿವ್ಯಕ್ತಿಯನ್ನು ಮೆರೆದವರು. ತಂದೆಯ ಆಸೆಯಂತೆ ಬಿ.ಎ., ಎಲ್.ಎಲ್.ಬಿ. ಓದಿ ಕಾನೂನು ಪದವೀಧರರಾದರೂ ಕೂಡ ಕಲೆಯ ಕಡೆಗಿದ್ದ ಅವರ ಆಸಕ್ತಿಯನ್ನು ಹೆಚ್ಚಾಗಿ ಅಭಿನಯಿಸಲು ಪ್ರಚೋದನೆ ನೀಡಿತು.

ಬಳ್ಳಾರಿ ಜಿಲ್ಲೆಯ ಸಾಕಷ್ಟು ಹಳ್ಳಿಗಳಲ್ಲಿ ಹನುಮಂತಗೌಡರು, ಪದ್ಮನಾಭ, ನಾಗೇಶಶಾಸ್ತ್ರಿಗಳು, ವಿ.ಹನುಮಂತಪ್ಪ ವೆಂಕೋಬಾಚಾರ್ಯರು ಮುಂತಾದವರು ವಿವಿಧ ನಾಟಕಗಳಲ್ಲಿ ತಲ್ಲೀನರನ್ನಿಸುತ್ತಿದ್ದ ಕಾಲವೇ ಅದು. ಆ ಸಮಯದಲ್ಲಿ ರಾಘುವರ ಸೋದರ ಮಾವ ಡಿ.ಕೃಷ್ಣಮಾಚಾರ್ಯರು, "ಸರಸವಿನೋದಿನಿ" ಎಂಬ ನಾಟಕ ಮಂಡಳಿಯನ್ನು ನಡೆಸುತ್ತಿದ್ದರು. ಅದರಲ್ಲಿ ರಾಘುವರು ಸಾಕಷ್ಟು ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದರು. ಕನ್ನಡ ಭಾಷೆಯಲ್ಲಷ್ಟೇ ಅಲ್ಲದೆ ತೆಲುಗಿನಲ್ಲೂ ರಾಘುವರು ಗುರುತಿಸಲ್ಪಟ್ಟಿದ್ದಾರೆ. ಅನಂತರ ಹಲವು ಗೆಳೆಯರ ಸಹಾಯದಿಂದ ಬಳ್ಳಾರಿಯಲ್ಲೇ "ಷೇಕ್ಸ್ ಪಿಯರ್ ಕ್ಲಬ್‌ನ್ನು ಸ್ಥಾಪಿಸಿ ಕೊಂಡು "ಕಿಂಗ್ಲಿಯರ್, ಒಥೆಲೋ, ಹ್ಯಾಮ್ಲೆಟ್, ಮ್ಯಾಕ್‌ಬೆತ್ " ಮುಂತಾದ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದ ಕೀರ್ತಿ ರಾಘುವರಿಗೆ ಸಲ್ಲುತ್ತದೆ. ಇಂಗ್ಲೀಷ್ ನಾಟಕಗಳ ಜೊತೆಗೆ ಭಕ್ತ ರಾಮದಾಸ, ಸುಭದ್ರ,

ಸಾರಾಂಗಧರ, ತಾಳೀಕೋಟೆ, ಪೃಥ್ವಿರಾಜ, ಮುಂತಾದ ನಾಟಕಗಳನ್ನು ಪ್ರಯೋಗಿಸಿದರು. ಎಂಥ ನಟನೆಯಾದರೂ ಅದರಲ್ಲಿ ಮಿಂಚಿಬಿಡುವ ಸಾಮರ್ಥ್ಯ ಅವರಿಗಿದ್ದರಿಂದಲೇ ಬೆಂಗಳೂರು ಅಮೇಚೂರ ನಾಟಕ ಸಂಘ ಮತ್ತು ಕಲಾವಿಲಾಸಿನಿ ಸಂಘದವರ ವತಿಯಿಂದ ಲಂಡನ್, ರಮಗೂನ್, ಮತ್ತು ಪ್ಯಾರಿಸ್‌ಗಳಲ್ಲಿ ಸಂಚರಿಸಿ ಅನೇಕ ನಾಟಕಕಾರರನ್ನು ಮತ್ತು ಬಾರ್ನಾಡ್‌ಶಾ, ರಾಬರ್ಟಸನ್, ವಿನ್‌ಸ್ಟನ್ ಮತ್ತು ಚರ್ಚಿಲ್ ಮುಂತಾದವರನ್ನು ಭೇಟಿಯಾಗುವ ಅವಕಾಶ ಅವರಿಗೆ ದೊರಕಿತು.

ಪಾಶ್ಚಾತ್ಯ ನಾಟಕಗಳನ್ನು ಮೆಚ್ಚಿ ಅವರಿಂದ ಪ್ರಭಾವಿತರು ಆಗಿದ್ದ ಬಳ್ಳಾರಿ ರಾಘವರ "ಆರ್ಟ್ಸ್‌ಲವರ್ಸ್ ಲೀಗ್" ಎಂಬ ಮತ್ತೊಂದು ಸಂಘವನ್ನು ಹುಟ್ಟು ಹಾಕಿದರು. ನಾಲ್ಕು ದಶಕಗಳಷ್ಟು ಕೊಡುಗೆಯನ್ನು ನೀಡಿದ್ದಾರೆ. ಆದರೆ ರಂಗಭೂಮಿಯ ವಿಷಯದ ಬಗ್ಗೆ ಯಾರೇ ಮಾತಾಡಲಿ ಅಥವಾ ಬರೆಯಲಿ ರಾಘವರನ್ನು ಮರೆಯುವಂತೆಯೇ ಇಲ್ಲ. ಅಷ್ಟರ ಮಟ್ಟಿಗೆ ಅವರು ತಮ್ಮ ಗಾಢವಾದ ನೆನಪನ್ನು ಬಳ್ಳಾರಿಯ ಮಣ್ಣಿನಲ್ಲಿ ಬಿಟ್ಟು ಹೋಗಿದ್ದಾರೆ. ಆದ್ದರಿಂದ ಇವರ ಹೆಸರಿನ "ರಾಘವ ಕಲಾಮಂದಿರ"ವನ್ನು ಇವರ ಶಿಷ್ಯರಾದ ಜೋಳದ ರಾಶಿ ದೊಡ್ಡನಗೌಡರು ಮತ್ತವರ ಗೆಳೆಯರು ಕಟ್ಟಿಸಿರುವುದು ಸ್ತುತ್ಯಾರ್ಹವಾಗಿದೆ. ರಂಗಭೂಮಿಗೆ ರಾಘವ ನೀಡಿರುವ ಅಗಾದ ಸೇವೆಗೋಸ್ಕರ ಸರಕಾರ ೧೯೬೬-೬೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ರಾಘುವರು "ಜಲಂಧರ, ಗರುಡನ ಗರ್ವಭಂಗ, ಚವತಿಯ ಚಂದ್ರ, ಶಾಪವಿಮೋಚನೆ" ಮೊದಲಾದ ನಾಟಕಗಳನ್ನು ಅಭಿನಯಿಸಿದ್ದಾರೆ.

ಜೋಳದರಾಶಿ ದೊಡ್ಡನಗೌಡರು : ಗಮಕಿಗಳೆಂದೇ ಪ್ರಸಿದ್ಧರಾಗಿದ್ದ ಗೌಡರು ಚಿಕ್ಕಂದಿನಿಂದಲೇ ನಾಟಕದ ಗೀಳು ಅಂಟಿಸಿಕೊಂಡು ಕನ್ನಡದ ಗಡಿ ಭಾಗದಲ್ಲಿ ತೆಲುಗಿನವರ ಪ್ರದೇಶವನ್ನು ಸುತ್ತಾಡಿದ್ದಾರೆ. ಎರಡೂ ರಾಜ್ಯಗಳಲ್ಲಿ ಇವರ ಗಾಯನ, ಅಭಿನಯ ಕಂಡು ಮೆಚ್ಚಿದ ರಂಗಾಭಿಮಾನಿಗಳಿದ್ದಾರೆ. ೧೯೩೪ನೇ ವರ್ಷದ ಸುಮಾರಿಗೆ ರಾಘವರ ಪರಿಚಯವಾಗಿ ಅವರ ಶಿಷ್ಯರೇ ಆಗಿ ಹೋದರು. ಜೋಳದರಾಶಿ ದೊಡ್ಡನಗೌಡರು ಸಾಕಷ್ಟು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಉತ್ತಮ ಶಿಷ್ಯರು ಎನ್ನಿಸಿದ್ದಾರೆ.

ರಾಘವ ಹಾಗೂ ದೊಡ್ಡನಗೌಡರಿಗಿಂತ ಪೂರ್ವದಲ್ಲಿ ಹುಟ್ಟಿ ಬೆಳೆದು ನಾಟಕವಾಡಿದ ಕಲಾವಿದ ಕೊಟ್ಟೂರು ಬಸವಯ್ಯನವರು. ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಸೋಗಿ ಗ್ರಾಮದಲ್ಲಿ ಜನಿಸಿದರು. ಪ್ರೌಢರಾದಂತೆ ರಂಗಾಸಕ್ತಿ ಹೆಚ್ಚುತ್ತಾ ಹೋಗಿ ವೆಂಕೋಬರಾಯರ "ಶ್ರೀ ಮಹಾಲಕ್ಷ್ಮಿ ನಾಟಕ ಸಭಾ" ವನ್ನು ಸೇರಿಕೊಂಡರು. ಅದು ನಿಂತು ಹೋದಾಗ ಪುನಃ "ಚಾಮುಂಡೇಶ್ವರಿ ಕಂಪನಿ" ಸೇರಿ ಅಭಿನಯಕ್ಕೆ ಅಂಟಿಕೊಂಡರು. ಎರಡು ಕಂಪನಿಗಳಲ್ಲಿ ಇದ್ದುಕೊಂಡು ಬಸಯ್ಯನವರು "ಭೋಜ ಪ್ರಬಂಧ", ಕ್ರೂರಸೇನ ಚರಿತ್ರೆ, ದಾನಶೂರ ಕರ್ಣ, ಶಾಕುಂತಲಾ, ಕುರುಕ್ಷೇತ್ರ, ರಾಜಸೂಯ ಯಾಗ ನಾಟಕಗಳಲ್ಲಿ ಅದ್ಭುತ ಅಭಿನಯ ನೀಡಿ ಇಂದಿಗೂ ಜನ ಮನದಲ್ಲಿ ಉಳಿಸಿದ್ದಾರೆ.

ಪ್ರಸ್ತುತ ಈ ಹಿರಿಯರನ್ನು ಬಿಟ್ಟರೆ ಜಿಲ್ಲೆಯ ರಂಗಭೂಮಿಯನ್ನು ಮತ್ತಷ್ಟು ಉಜ್ವಲಗೊಳಿಸಿದವರು ಎಲಿವಾಳ ಸಿದ್ದಯ್ಯನವರು. ಎಲಿವಾಳ ಸಿದ್ದಯ್ಯನವರು ಕರ್ನಾಟಕ ರಂಗಭೂಮಿ ಮತ್ತು ಚಲನಚಿತ್ರ ರಂಗದಲ್ಲಿ ಬೆರಳೆಣಿಕೆಯಷ್ಟು ಪ್ರಸಿದ್ಧ ನಟರಲ್ಲಿ ಒಬ್ಬರು. ಕನ್ನಡನಾಡು ಕಂಡಿರುವ ಅತ್ಯಂತ ಪ್ರತಿಭಾವಂತ ನಟರಲ್ಲಿ ಎಲಿವಾಳರು ಮೇರು ಪರ್ವತ. ಬದುಕಿರುವಾಗಲೇ ದಂತಕಥೆಯಾಗಿದ್ದಂಥವರು ಅಷ್ಟು ಜನ ಪ್ರಿಯತೆಯನ್ನು ರಂಗಭೂಮಿಯಲ್ಲಿ ಪಡೆದಂಥವರೇ ಅಪರೂಪ. ನಾಟಕವೆಂದರೆ ಮೂಗು ಮುರಿಯುವ ಕಾಲದಲ್ಲಿ ನಟನೊಬ್ಬ ತಾರೆಯಾಗಿ ಜನಮನದಲ್ಲಿ ನೆಲೆಸಬಲ್ಲನೆಂಬುದಕ್ಕೆ ಸಿದ್ದಯ್ಯನವರು ಉದಾಹಾರಣೆಯಾಗಿದ್ದಾರೆ. ತನ್ನ ಅಂತಃ ಸತ್ವವನ್ನು ಕಳೆದುಕೊಂಡು ಕ್ಷೀಣಿಸುತ್ತಿರುವ ನಮ್ಮ ವೃತ್ತಿರಂಗಭೂಮಿಯು ಇಂಥ ನಟ ಶ್ರೇಷ್ಠನನ್ನು ಮತ್ತೆ ಕಂಡೀತೆಂದು ಭವಿಷ್ಯವನ್ನು ಹೇಳಲಾಗುವುದಿಲ್ಲ.

ಎಲಿವಾಳ ಎಂಬುದು ಹುಬ್ಬಳ್ಳಿ ಸಮೀಪದ ಒಂದು ಹಳ್ಳಿ. ಅಲ್ಲಿ ೧೯೨೭ರಲ್ಲಿ ಸಿದ್ದಯ್ಯನವರ ಜನನ. ತಂದೆಯಿಂದ ಪ್ರಾಥಮಿಕ ಸಂಗೀತಾಭ್ಯಾಸ ಅವರಿಗೆ ದೊರೆಯಿತು. ಒಂಭತ್ತು ವರ್ಷದ ಬಾಲಕನಾಗಿದ್ದಾಗ ಬಯಲಾಟದಲ್ಲಿ ಮಾರ್ಕಂಡೇಯನ ಪಾತ್ರವಹಿಸುವುದರ ಮೂಲಕ ರಂಗಭೂಮಿಗೆ ನೇರವಾಗಿ ಪ್ರವೇಶಿಸಿದರು. ಬಾಲ್ಯದಲ್ಲಿಯೇ ಬಯಲಾಟ, ನಾಟಕ, ಭಜನೆ ಪದಗಳನ್ನು ಅನುಕರಣೆಯಿಂದ ಹಾಡುವ ಹುಚ್ಚು ಅಂಟಿಕೊಂಡಿತು. ತಂದೆ-ತಾಯಿಗಳಿಬ್ಬರನ್ನು ಕಳೆದುಕೊಂಡು ದಿಕ್ಕೆಟ್ಟು ಅಲೆದಾಡಿದ ನಂತರ ಗದುಗಿಗೆ ಬಂದು ಪಂಚಾಕ್ಷರಿ ಗವಾಯಿಗಳವರ ಶಿಷ್ಯತ್ವವನ್ನು ಸ್ವೀಕರಿಸಿದರು. ಸಿದ್ದಯ್ಯನವರ ಕಂಠಮಾಧುರ್ಯ ಮತ್ತು ಸುರದ್ರೂಪತೆ ಅವರನ್ನು ಗವಾಯಿಗಳವರ ನಾಟಕ ಕಂಪನಿಗೆ ಕರೆತಂದವು. ಅಲ್ಲಿಂದ ಸಿದ್ದಯ್ಯನವರು ಬಾಲಪಾತ್ರ ಮತ್ತು ಸ್ತ್ರೀಪಾತ್ರಗಳನ್ನು ಮಾಡುತ್ತ ರಂಗಭೂಮಿಯ ಸಂಪೂರ್ಣ ಸಂಬಂಧ ಬೆಳೆಸಿಕೊಂಡರು.

ಯೌವ್ವನ ಬಂದಾಗ ಅನೇಕ ನಾಟಕ ಕಂಪನಿಗಳಲ್ಲಿ ಪಾತ್ರವಹಿಸಿದ್ದರು. ಜಮಖಂಡಿಯ ಗಜಾನನ ನಾಟ್ಯ ಸಂಘದಲ್ಲಿ ಎರಡು ವರ್ಷವಿದ್ದು ಎಲ್ಲ ತರಹದ ಸ್ತ್ರೀಪಾತ್ರ ನಿರ್ವಹಿಸಿ ಹೆಸರನ್ನು ಮಾಡಿದ್ದಾರೆ. ಅವರ ಕೀರ್ತಿಯನ್ನು ಕೇಳಿದ ಪ್ರಸಿದ್ಧ ಗೋಕಾಕ್ ಕಂಪನಿಯ ಮಾಲೀಕರಾದ ಬಸವಣ್ಣೆಪ್ಪನವರು ತಮ್ಮ ಕಂಪನಿಗೆ ಕರೆಸಿಕೊಂಡರು. ಈ ಕಂಪನಿಯಿಂದ ಸಿದ್ದಯ್ಯನವರು ಒಬ್ಬ ಪಕ್ಕಾ ಹಾಸ್ಯನಟ ಎಂಬುದೇ ಸ್ಥಿರವಾಯಿತು. ನಡುವೆ ಒಂದೆರಡು ವರ್ಷದ ನ್ಯಾವಾತಿ ಕಂಪನಿ ಇನಾಮದಾರರ ಕಂಪನಿಗಳಲ್ಲಿ ದುಡಿದು ಪುನಃ ೧೯೪೮ರಲ್ಲಿ ಗೋಕಾಕ ಕಂಪನಿಗೆ ಸೇರಿದಾಗ ಸಿದ್ದಯ್ಯನವರಿಗೆ ಕೀರ್ತಿ ಭಾರತಿ ಪ್ರಾಯ. ಅಷ್ಟೊತ್ತಿಗಾಗಲೇ ಅವರೊಬ್ಬ ಪ್ರೌಢ ನಟನಾಗಿ ನಾಡಿನಾದ್ಯಂತ ಹೆಸರುಗಳಿಸಿದ್ದರು. ಇಷ್ಟೆಲ್ಲಾ ಕಂಪನಿಗಳನ್ನು ತಿರುಗಿದವರು ಪರ್ಯಾಯವಾಗಿ ಸಿದ್ಧಯ್ಯನವರು ನಾಯಕ, ಖಳನಾಯಕ, ಮತ್ತು ಹಾಸ್ಯ ಪಾತ್ರಗಳನ್ನು ಮಾಡುವುದರಲ್ಲಿ ನಿಸ್ಸೀಮ ರೆನ್ನಿಸಿಕೊಂಡಿದ್ದಾರೆ.

ಕರ್ನಾಟಕದ ಶೇಕ್ಸಪಿಯರ್ ಎಂದು ಹೆಸರಾಗಿರುವ ಕಂದಗಲ್ಲು ಹನುಮಂತರಾಯರು ಸಿದ್ದಯ್ಯನವರ ಅಭಿನಯ ಕೌಶಲ್ಯಕ್ಕೆ ಮನ ಸೋತವರು. ಅವರ ಹೆಸರನ್ನು ಅಜರಾಮರವಾಗಿರಿಸಿರುವ "ರಕ್ತರಾತ್ರಿ" ನಾಟಕ

ರಚನೆಗೆ ಸಿದ್ದಯ್ಯನವರೇ ಪ್ರೇರಕ ಶಕ್ತಿ ಎಂದರೂ ತಪ್ಪಿಲ್ಲ. “ಅಶ್ವತ್ಥಾಮನ ಪಾತ್ರ” ಸಿದ್ಧಯ್ಯನವರನ್ನು ಜನಪ್ರಿಯತೆಯ ತುತ್ತತುದಿಗೇರಿಸಿತು. ಅವರಂತೆ ಆ ಪಾತ್ರವನ್ನು ಇಲ್ಲಿಯವರೆಗೆ ಯಾರೂ ಅಭಿನಯಿಸಿಲ್ಲವೆಂದು ಹೇಳಿದರೆ ಅತಿಶಯೋಕ್ತಿ ಅನಿಸಲಾರದು. ೧೯೫೦ರಿಂದ ಈ “ರಕ್ತರಾತ್ರಿ” ನಾಟಕ ಅದೆಷ್ಟು ಸಾವಿರ ಪ್ರಯೋಗಗಳನ್ನು ಕಂಡಿದೆಯೋ ಏನೋ! ಲೆಕ್ಕವಿಟ್ಟವರಾರು? (ಬಳ್ಳಾರಿ ಜಿಲ್ಲೆಯ ಗಣ್ಯಮಾನ್ಯರು, ಲೇ.ಡಾ.ಬಸವರಾಜ ಮಲಶೆಟ್ಟಿ, ಶ್ರೀ ಎಲಿಹಾಳ ಸಿದ್ಧಯ್ಯನವರು, ಲೇಖನ, ೧೯೯೪ ಪು.೧೮).

೧೯೫೪ರಲ್ಲಿ ಗುಬ್ಬಿ ವೀರಣ್ಣನವರು ಸಿದ್ಧಯ್ಯವರನ್ನು ತಮ್ಮ ಕಂಪನಿಗೆ ಕರೆದೊಯ್ದರು. ತದನಂತರ ಮದ್ರಾಸಿಗೆ ಪ್ರಯಾಣ. ಗುಬ್ಬಿ ಕರ್ನಾಟಕ ಪ್ರೊಡಕ್ಷನ್ ಸಂಸ್ಥೆಯ ಮೂಲಕ ಸಿನೆಮಾ ಕ್ಷೇತ್ರ ಪ್ರವೇಶಿಸಿದರು. ಆರೇಳು ವರ್ಷಗಳ ಅವಧಿಯಲ್ಲಿ “ಸತಿಸಳಾಯಿನಿ”, ಓಹಿಲೇಶ್ವರ, ಭಕ್ತ ವಿಜಯ, ಶ್ರೀಕೃಷ್ಣಗಾರುಡಿ, ಭೂ ಕೈಲಾಸ, ಮುಂತಾದ ಹನ್ನೊಂದು ಸಿನೆಮಾಗಳಲ್ಲಿ ಪ್ರಮುಖ ಪಾತ್ರಗಳನ್ನು ಮಾಡಿದರು. ಶ್ರೀಕೃಷ್ಣಗಾರುಡಿಯಲ್ಲಿ ಸಿದ್ಧಯ್ಯನವರು ಶ್ರೀಕೃಷ್ಣ ಪಾತ್ರವನ್ನು ಮನಮೋಹಕವಾಗಿ ಅಭಿನಯಿಸಿದ್ದಾರೆ. ಕನ್ನಡ ಚಿತ್ರರಂಗದ ಚರಿತ್ರೆಯಲ್ಲಿ ಶ್ರೀಕೃಷ್ಣಗಾರುಡಿ ಒಂದು ಸ್ಮರಣೀಯವಾದ ಅಧ್ಯಾಯವಾಗಿದೆ. ೧೯೬೦ರಲ್ಲಿ ಚಿತ್ರರಂಗ ತಲ್ಲಣಿಸಿ ಸಿನಿಮಾ ನಿರ್ಮಾಣ ಕಾರ್ಯ ಸ್ಥಗಿತಗೊಂಡಿತು. ೧೯೭೪ರಲ್ಲಿ ಕೆಲವು ತೆಲಗು ಸಿನಿಮಾ ನಿರ್ಮಾಣ ಕಾರ್ಯ ಸ್ಥಗಿತಗೊಂಡಿತು. ೧೯೭೪ರಲ್ಲಿ ಕೆಲವು ತೆಲಗು ಸಿನಿಮಾದ ಡಬ್ಬಿಂಗ್ ಕಾರ್ಯದಲ್ಲಿ ಸಿದ್ದಯ್ಯನವರು ಎಸ್.ವಿ.ರಂಗರಾವ್ ಅವರಿಗೆ ಧ್ವನಿ ನೀಡಿದ್ದಾರೆ.

ಅಲ್ಲಿಂದೀಚೆಗೆ ಸಿದ್ಧಯ್ಯನವರು ಬಳ್ಳಾರಿ ತಾಲೂಕಿನ ಗೆಣಿಹಾಳ ಮತ್ತು ಕಲಕಂಬ ಗ್ರಾಮಗಳಲ್ಲಿ ನೆಲೆಗೊಂಡು ಬಳ್ಳಾರಿ ಜಿಲ್ಲೆಯವರಾಗಿದ್ದಾರೆ. ಅಭಿನಯವನ್ನು ವೃತ್ತಿಯಾಗಿಸಿಕೊಂಡು ಹವ್ಯಾಸಿ ನಾಟಕ ಕಾರರಾಗಿದ್ದರು. ಅಂದರೆ ಯಾವುದೇ ನಾಟಕ ಕಂಪನಿಯಲ್ಲಿ ಖಾಯಂ ಆಗಿ ಸೇರಿಕೊಳ್ಳದೇ ಆಗಾಗ ಕೆಲವು ದಿನಗಳ ಮಟ್ಟಿಗೆ ಪಾತ್ರವಹಿಸುತ್ತಾ ಬಂದರು. ಜೊತೆಗೆ ಕಂಪನಿಗಳಿಗೆ ಮತ್ತು ಹವ್ಯಾಸಿ ತಂಡಗಳಿಗೆ ನಾಟಕ ನಿರ್ದೇಶಿಸುತ್ತಿದ್ದರು. ಕಲೆಕ್ಷನ್ ಸ್ವಲ್ಪ ಡಲ್ ಆದರೆ ಬಂದು ಕೆಲವು ದಿನ ಪಾತ್ರ ವಹಿಸುತ್ತಿದ್ದರೂ “ಭರಪೂರ ಕಲೆಕ್ಷನ್ ಗ್ಯಾರಂಟಿ” ಎಂಬುದು ಸಾಮಾನ್ಯವಾಗಿ ಎಲ್ಲ ಕಂಪನಿಗಳು ಕಂಡು ಕೊಂಡಿರುವ ಸತ್ಯವಾಗಿತ್ತು. ಹಳ್ಳಿಗಳಲ್ಲಿ ಹವ್ಯಾಸಿ ತಂಡದವರು “ರಕ್ತರಾತ್ರಿ” ನಾಟಕವಾಡಿದರೆ ಅದಕ್ಕೆ ಸಿದ್ದಯ್ಯನವರು ಬರಲೇಬೇಕು. ಅವರ ಬಗ್ಗೆ ಹಳ್ಳಿಗರ ಅಭಿಮಾನ ಭಕ್ತಿಗಳು ಅಚ್ಚರಿಯನ್ನು ಹುಟ್ಟಿಸುತ್ತವೆ.

ಎಲಿವಾಳ ಸಿದ್ಧಯ್ಯನವರಿಗೆ ನಾಡಿನ ತುಂಬಾ ಕಲಾ ಬಳಗವಿದೆ. ಸುಮಾರು ನೂರೈವತ್ತು ಶಿಷ್ಯರಿದ್ದಾರೆ. “ವಿನೋದ ಪುಷ್ಪ”, “ರಂಗಭೂಮಿ ನಟ ಚಕ್ರವರ್ತಿ” ಮುಂತಾದ ಬಿರುದುಗಳಿಂದ ಅವರು ಸನ್ಮಾನಿತರಾಗಿದ್ದಾರೆ. ಇಳಿಯ ವಯಸ್ಸಿನಲ್ಲಿಯೂ ನಾಟಕಗಳಲ್ಲಿ ಪಾತ್ರ ವಹಿಸುತ್ತಾ ನಿರ್ದೇಶಿಸುತ್ತಾ ಸದಾ ಚಟುವಟಿಕೆಯುಳ್ಳಿರುವ ಸಿದ್ಧಯ್ಯ ಯಾವಾಗಲೂ ಸಂಚಾರ ಜೀವಿ. ಅವರಿದ್ದಲ್ಲಿ ಜನವಿರುತ್ತಿತ್ತು. ಉತ್ಸಾಹ, ಚೈತನ್ಯ ತುಂಬಿರುತ್ತಿತ್ತು. ಅಲ್ಲಿ ಒಂದು ಇತಿಹಾಸವೇ ಸೃಷ್ಟಿಯಾಗುತ್ತಿತ್ತು. ರಂಗಭೂಮಿ ಸೇವೆಗೆ ಸರಕಾರ ಕರ್ನಾಟಕ

ನಾಟಕ ಅಕಾಡೆಮಿ ಅವರಿಗೆ ೧೯೮೭ನೇ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ. ಬಳ್ಳಾರಿ ಮರೆಯಲಾರದಂಥ ಕನ್ನಡ ನೆಲ ಮರೆಯಲಾರದ ಶ್ರೇಷ್ಠ ನಟ ಎಲಿವಾಳ ಸಿದ್ದಯ್ಯನವರು.

ಬಳ್ಳಾರಿ ಜಿಲ್ಲೆಯ ರಂಗಭೂಮಿಯ ಇನ್ನೊಂದು ಚೇತನ ಏಣಿಗಿ ಕಾಸಿಂ ಸಾಹೇಬ್. ಹುಟ್ಟು ೧೯೩೭ರಲ್ಲಿ, ವ್ಯಾಸಂಗ ಆರನೇ ತರಗತಿಯವರೆಗೆ ಮಾತ್ರ. ವಿದ್ಯಾಭ್ಯಾಸ ನಿಂತಮೇಲೆ ಸಂಗೀತ ಹೆಚ್ಚು ಹತ್ತಿರವಾಗತೊಡಗಿತು. ಇದರ ಪ್ರಭಾವವೋ ಏನೋ ಎಂಬಂತೆ ೧೯೪೪ರಲ್ಲಿ ಹಂಪಸಾಗರಕ್ಕೆ ಪಂಚಾಕ್ಷರಿ ನಾಟಕ ಕಂಪನಿ ಬಂದಿತ್ತು. ಕಾಸಿಂ ಪೈಸೆ ಪೈಸೆಗಳನ್ನು ಸಂಗ್ರಹಿಸಿಟ್ಟು, ನಾಟಕ ನೋಡುವ ಹುಚ್ಚು. ಹುಚ್ಚು ಕ್ರಮೇಣ ಮನಸ್ಸಿಗೆ ಮಚ್ಚಾಗ ತೊಡಗಿತು. ಎಷ್ಟು ಸಾಧ್ಯವೋ ಅಷ್ಟು ನಾಟಕ ಪ್ರಯೋಗಗಳನ್ನು ನೋಡಿದರು. ಯಾವಗಲೂ ಚಿಕ್ಕವರಿದ್ದಾಗ ಹಾರ್ಮೋನಿಯಂ ಮಾಸ್ತರ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಕೆಲವು ದಿನ ಕಾಯ್ದು ಕಂಪನಿಯ ಮಾಸ್ತರರಾದ ನಾಗಭೂಷಣ ಗವಾಯಿಗಳನ್ನೇ ಪರಿಚಯಿಸಿಕೊಂಡು ನಂತರ ಅವರನ್ನೇ ಗುರುಗಳೆಂದು ಸ್ವೀಕರಿಸಿದರು.

ಹಂಪಸಾಗರದಲ್ಲಿ ೧೯೪೫ರ ವೇಳೆಗೆ "ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ" ನಾಟಕದಲ್ಲಿ ಅಭಿನಯಿಸುವುದರ ಮೂಲಕ ಕಾಸಿಂ ರಂಗಭೂಮಿಗೆ ಕಾಲಿಟ್ಟರು. ನಾಟಕಕ್ಕೆ ಅಭೂತಪೂರ್ವವಾದ ಯಶಸಿಕ್ಕಿತು. ಪಕ್ಕದ ಊರುಗಳಾದ ತಂಬ್ರಹಳ್ಳಿ, ನಾರಾಯಣದೇವರ ಕೆರೆ ಮೊದಲಾದ ಕಡೆಗೂ ಪ್ರದರ್ಶನಗೊಂಡು ಆ ಭಾಗದಲ್ಲೆಲ್ಲಾ ಏಣಿಗಿ ಕಾಸಿಂ ಸಾಬ್ ಮನೆಮಾತಾದರು. ಸತತವಾಗಿ ಏಳೆಂಟು ವರ್ಷ ನಟನೆ ಮಾಡಿ ಬೇಸರಿಸಿದಾಗ ನಾಟಕದ ನಿರ್ದೇಶನಕ್ಕೂ ಕಾಸಿಂ ಕೈ ಹಾಕಿದರು. ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ, ಮಲ್ಲಿಕಾರ್ಜುನ ನಾಟ್ಯ ಸಂಘ, ಸುಳ್ಳ ಮಹಾಕೋಟೇಶ್ವರ ನಾಟ್ಯ ಸಂಘ, ಬನ್ನಿ ಕಲ್ಲು ಕಂಪನಿ, ಮುಂತಾದ ಕಂಪನಿಗಳಲ್ಲಿ ರಂಗಭೂಮಿಯ ಸೇವೆಯನ್ನು ಬಹುಕಾಲ ಕಾಸಿಂ ಮಾಡಿದ್ದಾರೆ. ಹಲವಾರು ನಾಟಕ ಮಂಡಳಿಗಳಲ್ಲಿ ದುಡಿದು ಅನುಭವಗಳಿಸಿದ್ದ ಕಾಸಿಂ ಸಾಹೇಬರು "ಮಾರುತಿ ಪ್ರಸಾದಿತ ನಾಟ್ಯ ಸಂಘ" ಸ್ಥಾಪಿಸಿ ಅದರ ಉಸ್ತುವಾರಿ ನೋಡಿಕೊಂಡರು. ಇವರ ರಾಜವಿಕ್ರಮ, ರಾವಣ, ಮಲ್ಲಿಕಾರ್ಜುನ, ಸಿಂಧೂರು ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ, ಹರಿಶ್ಚಂದ್ರ, ಕೃಷ್ಣ ಧುರ್ಯೋಧನ ಮೊದಲಾದ ಪಾತ್ರಗಳು ಹೆಚ್ಚು ಜನಪ್ರಿಯವಾಗಿದ್ದವು.

ಉತ್ತಮ ಕಂಠಮಾಧುರ್ಯದಿಂದ ಅತ್ಯುತ್ತಮ ಗಾಯಕರೂ ಆಗಿರುವುದರಿಂದ ಗಾಯಕ, ನಟರಾಗೇ ಜನಪ್ರಿಯರಾದರು. ಹೊನ್ನಾಳಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಂದ ಮುಂಡರಗಿಯ ಅನ್ನದಾನೇಶ್ವರ ಮಹಾಸ್ವಾಮಿಗಳಿಂದ, ಗದುಗಿನ ತೋಂಟದಾರ್ಯ ಸ್ವಾಮಿಗಳಿಂದ ಕಾಸಿಂಸಾಹೇಬ್ ಸನ್ಮಾನಿತರಾಗಿದ್ದಾರೆ. ಮುಂಡರಗಿ ಹವ್ಯಾಸಿ ಕಲಾವೃಂದದವರು ೧೯೭೬ರಲ್ಲಿ ಕಾಸಿಂಗೆ ನಾಟಕ ಕಲಾಭೂಷಣ ಬಿರುದನ್ನು ನೀಡಿ ಗೌರವಿಸಿದ್ದಾರೆ. ೧೯೮೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಯೂ ಇವರಿಗೆ ದೊರತಿದ್ದು, ಹಲವಾರು ಸಂಘ ಸಂಸ್ಥೆಗಳಿಂದಲೂ ಏಣಗಿ ಕಾಸಿಂ ಸಾಹೇಬ್ ಸನ್ಮಾನಿತರಾಗಿದ್ದಾರೆ.

ನಾರಾಯಣ ದೇವರಕೆರೆಯ ಮೂಲದಿಂದ ಬಂದು ಈಗ ಮರಿಯಮ್ಮನ ಹಳ್ಳಿಯಲ್ಲಿ ವಾಸಿಸುತ್ತಿದ್ದರು. (ಫೆಬ್ರುವರಿ ೨೦೦೨) ತಿಂಗಳು ಸ್ವರ್ಗಸ್ಥರಾದ ದಿವಂಗತ.ಡಿ.ದುರ್ಗಾದಾಸರು ಬಳ್ಳಾರಿ ಜಿಲ್ಲೆಯಲ್ಲದೇ ಕನ್ನಡ

ರಂಗಭೂಮಿಯು ಮರೆಯಲಾಗದ ಅಪ್ಪಟ ಪ್ರತಿಭೆ. ಆರಂಭವು ನಾಟಕ ಮಂದಿರವೇ ಶಿಕ್ಷಣದ ಮೂಲ ವಾಯಿತು. ಇವರ ಅಕ್ಕ ಡಿ.ಹನುಮಂತಮ್ಮ ವಿಶ್ವ ಕಲಾದರ್ಶನ ನಾಟಕ ಕಂಪನಿಯನ್ನು ಕಟ್ಟಿದಂಥ ಮಹಿಳೆ. ಹೆಣ್ಣು ಮಕ್ಕಳೇ ರಂಗಭೂಮಿಯಲ್ಲಿ ಇರದಂಥ ಪರಿಸ್ಥಿತಿಯಲ್ಲಿ ಒಬ್ಬ ಮಹಿಳೆ ನಾಟಕ ಕಂಪನಿ ಕಟ್ಟುವುದು ಎಂದರೆ ಸಾಮಾನ್ಯ ಮಾತೇನು ಅಲ್ಲ. ಕಲಾ ಆಸಕ್ತಿ ಇದ್ದ ದುರ್ಗಾದಾಸರಿಗೆ ಇನ್ನೂ ಕೇಳಬೇಕೇ ಚಿಗುರೊಡೆದ ಕಾಲ ಚೇತನ ಅವರಲ್ಲಿ ಮೈಗೂಡಿಕೊಂಡಿತು. ಇವರ ಕುಟುಂಬವೇ ಮೂಡಲಪಾಯ ಬಯಲಾಟ ಆಡು ತ್ತಿದ್ದರು. ಕುಟುಂಬದ ಸಹೋದರ ಸಹೋದರಿಯರು ಬಣ್ಣ ಹಚ್ಚಿಕೊಳ್ಳುವ ಕ್ಷೇತ್ರಕ್ಕೆ ಕಾಲಿಟ್ಟಿದ್ದರಿಂದ ಇವರಿಗೆ ಬಣ್ಣ ಹಚ್ಚಿಕೊಳ್ಳುವ ಕಲೆಯು ಕಷ್ಟದಾಯಕವೆನ್ನಿಸಲಿಲ್ಲ.ವೃತ್ತಿ ನಾಟಕ ಸಂಸ್ಥೆಗೆ ಸೇರಿ ಗರೂಡ ಸದಾಶಿವರಾಯರ ಕಂಪನಿಯಲ್ಲಿ ಬಾಲಕನಾಗಿದ್ದಾಗಿನಿಂದ ಬಣ್ಣ ಹಚ್ಚಿಕೊಂಡರು. ಮುಂದೆ ವಾಮನರಾವ್ ಮಾಸ್ತರರ ಕಂಪನಿಯಲ್ಲಿ ತಮ್ಮ ಸಹೋದರಿಯ ವಿಶ್ವ ಕಲಾ ದರ್ಶನ ನಾಟಕ ಕಂಪನಿಯಲ್ಲಿ ದುಡಿದರು. ಕಂದಗಲ್ಲರ "ಶ್ರೀ ಅರವಿಂದ ನಾಟ್ಯ ಸಂಘ" ಬಡತನದ ಭೂತ ನಾಟಕದ ಇಂದಿರಾ ಚರಣನ ಪಾತ್ರದಲ್ಲಿ ಜನಪ್ರಿಯರಾದರು. ಅಂದಿನ ಯುವ ಜನಾಂಗಕ್ಕೆ ಇವರು ಒಂದು ಆದರ್ಶ ಎಂಬಷ್ಟು ದುರ್ಗದಾಸರ ಶೈಲಿಯು ಜನ ಪ್ರಿಯವಾಯಿತು.

ನಾಟಕಕಾರರಾಗಿಯೂ ಜನಪ್ರಿಯ ನಾಟಕಗಳನ್ನು ರಚಿಸಿದರು. ಇವರ ಅನೇಕ ನಾಟಕಗಳನ್ನು ಬೇರೆ ಬೇರೆ ಕಂಪನಿಯವರು ಅಭಿನಯಿಸಿದ್ದಾರೆ. ಇವರ ನಿರ್ಮಲ "ದ್ರುಪದ ಕನ್ಯೆ" ನಾಟಕಗಳನ್ನು ನಾಡಿನ ಹೆಸರಾಂತ ವೃತ್ತಿ ನಾಟಕ ಸಂಸ್ಥೆಗಳು ಅಭಿನಯಕ್ಕೆತ್ತಿಕೊಂಡು ಜನಪ್ರಿಯಗೊಳಿಸಿವೆ. ಹಲವಾರು ಕನ್ನಡ ನಾಟಕಗಳು ಮರಾಠಿ ಭಾಷೆಗೆ ತರ್ಜುಮೆ ಮಾಡಿದ್ದಾರೆ. ಹಾಗೆಯೇ ಆಂಧ್ರಪ್ರದೇಶ, ತಮಿಳುನಾಡಿನಲ್ಲಿಯೂ ಅನೇಕ ನಾಟಕಗಳನ್ನು ಭಾಷಾಂತರಗೊಳಿಸಿ ಆಡಿಸಿ ತೋರಿಸಿ ಕನ್ನಡ ರಂಗಭೂಮಿಯ ಪರಂಪರೆಯನ್ನು ಕಾಪಾಡಿದ್ದಾರೆ. ಉತ್ತಮ ಅಭಿನಯ, ನಿರ್ದೇಶನ, ಸಂಗೀತ, ನೃತ್ಯ ಹಾಗೂ ಉಡುಗೆ ತೊಡುಗೆಗಳಲ್ಲಿ ಔಚಿತ್ಯದಿಂದ ನಿರ್ದೇಶನ ಮಾಡಿದ್ದಾರೆ. ಬಳ್ಳಾರಿಯ ರಾಘವ ಸ್ಮಾರಕ ಸಮಿತಿಯವರು ೧೯೭೯ರಲ್ಲಿ ದುರ್ಗದಾಸರವರಿಗೆ "ಕಲಾಕಿನ್ನರ" ವೆಂದು ಬಿರುದಿತ್ತು ಸನ್ಮಾನಿಸಿದ್ದಾರೆ. ವಿಜಾಪುರದಲ್ಲಿ "ಕಂದಗಲ್ ಹನುಮಂತರಾಯ ಸ್ಮೃತಿ ನಾಟಕೋತ್ಸವ" ಸಂದರ್ಭದಲ್ಲಿ ೧೯೯೫ರಲ್ಲಿ ಕರ್ನಾಟಕ ಶೇಕ್ಸಪಿಯರ್ "ನಾಟಕ ಕೇಸರಿ" ಎಂದು ಬಿರುದು ನೀಡಿ ಗೌರವಿಸ ಲಾಗಿದೆ.

ಹಣ್ಣೆ ವೀರಭದ್ರಪ್ಪನವರು ಹುಟ್ಟಿದ್ದು ಹೂವಿನ ಹಡಗಲಿಯಲ್ಲಿ. ಆಗಸ್ಟ್ ೧೯೧೪ರಂದು. ಕಲಿತದ್ದು ನಾಲ್ಕನೇ ತರಗತಿಯವರೆಗೆ ಮಾತ್ರ. ಮನೆಯ ಆರ್ಥಿಕ ಪರಿಸ್ಥಿತಿಯಿಂದ ಓದಿಗೆ ತಿಲಾಂಜಲಿ ನೀಡಲಾಯಿತು. ಚಿಕ್ಕಂದಿನಿಂದಲೇ ತಾಯಿ ಮಮತೆಯಿಂದ ದೂರಾದ ಇವರು ಮಾವಂದಿರ ಪೋಷಣೆಯಲ್ಲಿ ಬೆಳೆಯುತ್ತಾ ಮನೆಯಲ್ಲಿ ಮಲತಾಯಿ ಮತ್ತು ಸಂಬಂಧಿಕರ ಕಿರುಕುಳ ತಾಳಲಾರದೆ ಎಳೆ ಜೀವ ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಮನೆ ತೊರೆದು ಹೊಸಪೇಟೆ ಹೋಟೆಲ್‌ವೊಂದರಲ್ಲಿ ಜೀವನ ಸಾಗಿಸಬೇಕಾಯಿತು. ೧೯೨೯ರಲ್ಲಿ

ಗದುಗಿನ ಡಂಬಳ ನಾಟಕಕಂಪನಿವೊಂದರಲ್ಲಿ ಕಲಾಜೀವನಕ್ಕೆ ಕಾಲಿಟ್ಟರು. ವಾಣಿ ವಿಲಾಸ ನಾಟಕ ಕಂಪನಿಯಲ್ಲಿ ಬಾಲ ಕಲಾವಿದರಾಗಿ ಜೀವನ ಪ್ರಾರಂಭಿಸಿದ ವೀರಭದ್ರನವರು ಅಲ್ಲಿಂದ ಮುಂದೆ ಅಸಂಖ್ಯಾತ ನಾಟಕಗಳಲ್ಲಿ ಅಭಿನಯಿಸಿ ತಮ್ಮಲ್ಲಿ ಅಡಗಿದ್ದ ನಟನಾ ಶಕ್ತಿಗೆ ಚಾಲನೆ ನೀಡಿದರು. ಮಲ್ಲಿಕಾರ್ಜುನ ಮನ್ಸೂರು, ರಾಘುವರು ನಟಿಸಿದ "ಕಿತ್ತೂರು ಚೆನ್ನಮ್ಮ" ನಾಟಕದಲ್ಲಿ ವೀರಭದ್ರಪ್ಪನವರು "ಬಾಪು"ವಿನ ಪಾತ್ರವನ್ನು ಪ್ರೇಕ್ಷಕರ ಮನಮಿಡಿಯುವಂತೆ ನಿರ್ವಹಿಸಿದ್ದು ಇದು ಮುಂದಿನ ಅವರ ಕಲಾಜೀವನಕ್ಕೆ ಸಿಕ್ಕ ಉತ್ತೇಜನವೇ ಸರಿ ಎನ್ನಬಹುದು. ಕಿತ್ತೂರು ಚೆನ್ನಮ್ಮ ನಾಟಕದಲ್ಲಿನ ಕಮಿಷನರ್ ಪಾತ್ರವನ್ನು ಮೆಚ್ಚಿ ಅಂದಿನ ಮಂತ್ರಿಗಳಾಗಿದ್ದ ಎಸ್.ಆರ್.ಕಂಠಿಯವರು ಇವರಿಗೆ "ಕಮಿಷನರ್" ಎಂಬ ಬಿರುದನ್ನಿತ್ತು ಸನ್ಮಾನ ಮಾಡಿದ್ದಾರೆ. ಮುಂದೆ ಕಂಪಗಲ್ಲರ "ಕಲೋದ್ಧಾರ ಕರ್ನಾಟಕ ನಾಟಕ ಸಂಘ"ವನ್ನು ಸೇರಿ ಅಕ್ಷಯಾಂಬರ, ಎಚ್ಚಮ್ ನಾಯಕ, "ಬಡತನದ ಭೂತ" ಮತ್ತು ಎಂ.ಎ. ಎಂಬಿತ್ಯಾದಿ ನಾಟಕಗಳನ್ನು ಅಭಿನಯಿಸಿ ಪ್ರೇಕ್ಷಕರ ಗಮನಸೆಳೆದಿದ್ದಾರೆ.

೧೯೪೧-೪೨ರಷ್ಟೊತ್ತಿಗೆ ಹಡಗಲಿ ತಾಲೂಕಿನವರೇ ಆದ ಹಕ್ಕಂಡಿ ವೀರಪ್ಪನವರ "ವಿಶ್ವರಂಜನಿ ನಾಟಕ ಕಂಪನಿ"ಪ್ರಾರಂಭವಾದ್ದರಿಂದ ಕಲಾಸೇವೆಗೈಯಲು ತಕ್ಕ ಸಂದರ್ಭವೆಂದು ಇಲ್ಲಿಗೆ ಅಡಿಯಿಟ್ಟರು. ಮುಟ್ಟಿದ್ದೆಲ್ಲವೂ ಚಿನ್ನವೆಂಬಂತೆ ಹಾಸ್ಯ ಪಾತ್ರಗಳೇ ಇರಲಿ, ಸ್ತ್ರೀ ಪಾತ್ರಗಳೇ ಇರಲಿ, ಗಂಭೀರ ಪಾತ್ರಗಳೇ ಇರಲಿ, ಕುಡುಕ, ಭಿಕ್ಷುಕ, ಮುದುಕ, ಹೀಗೆ ಯಾವುದೇ ಪಾತ್ರ ಮಾಡಿದರೂ ಅದಕ್ಕೊಂದು ಜೀವತುಂಬಿ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುತ್ತಿದ್ದರು. ಇವರ "ಟೀಪುಸುಲ್ತಾನ್"ದ ಕಾರ್ನವಾಲಿಸ್‌ನ ಪಾತ್ರ ಜನಮನ್ನಣೆಗಳಿಸಿ ಇವರಿಗೆ ಅದೇ ಹೆಸರು ಜನತೆಯಿತ್ತು ಅಭಿಧಾನವಾಗಿದೆ. ಇವರ ಅಭಿನಯದ ಕಲೆ ದೆಹಲಿಯವರೆಗೂ ತಲುಪಿತ್ತು. ಬಳ್ಳಾರಿ ರಾಘುವರಿಂದ ಶಹಭಾಷ್‌ಗಿರಿ ಪಡೆದರು. ಶಿವರಾಮ ಕಾರಂತರ ನೃತ್ಯ ತಂಡಕ್ಕೆ ಕೊಳಲು ನುಡಿಸಿ ಮೆಚ್ಚಿಗೆ ಪಡೆದವರು. ನಾಟಕಗಳಲ್ಲಿಯೇ ವಿಶೇಷವಾಗಿರುವ "ದಾರುಬಂದಿ" ಎಂಬ ನಾಟಕವನ್ನು ಸ್ವತಃ ರಚಿಸಿದರು.

ಕೋಲು ಮುಖ ನೀಟಾದ ಮೈಕಟ್ಟು ಕಂಚಿನ ಕಂಠವಾದ ಸ್ವರ, ಸನ್ನಿವೇಶಕ್ಕೆ ತಕ್ಕಂತೆ ಶೀವಿ, ಸಂಭಾಷಣೆ ಯಲ್ಲಿ ಅಚ್ಚುಕಟ್ಟುತನ ಹಾಗೂ ಸ್ಪಷ್ಟವಾದ ಭಾಷೆ, ನಡಿಗೆಯಲ್ಲಿ ವಿನೂತನ ಶೈಲಿ, ಹಣ್ಣಿ ವೀರಭದ್ರಪ್ಪನವರ ಪಾತ್ರಗಳನ್ನು ಜೀವಂತಗೊಳಿಸಿದ್ದವು. ತಮ್ಮಷ್ಟಕ್ಕೆ ತಾವೇ ಅಲಂಕಾರ ವೇಷ ಭೂಷಣ ಮಾಡಿಕೊಳ್ಳುವುದು ಅಷ್ಟೊಂದು ಸುಲಭ ಸಾಧ್ಯವಾದುದೇನೂ ಅಲ್ಲ. ಅಪಾರವಾದ ಕಲಾ ಪ್ರತಿಭೆ ಇದ್ದರೆ ಮಾತ್ರ ಸಾಧ್ಯ. ಇದನ್ನು ಅವರು ಸಾಧಿಸಿಕೊಂಡಿದ್ದರು. ತಾವೇ ಬರೆದ "ದಾರುಬಂದಿ" ನಾಟಕ ಪ್ರಕಟಗೊಂಡು ಯಶಸ್ವಿ ಕಂಡಿದ್ದರೆ ರಂಗಕಲೆಯ ಇತಿಹಾಸದಲ್ಲೇ ವಿಶಿಷ್ಟ ಸ್ಥಾನ ಪಡೆಯುತ್ತಿತ್ತು. ನಾಟಕವು ಹಸ್ತ ಪ್ರತಿಯಲ್ಲಿದ್ದುದರಿಂದ ಪ್ರಚಾರ ಹೊಂದದೇ ಅದು ಯಶಸ್ವಿಗೊಳ್ಳಲಿಲ್ಲ. ಇವರು ಅಭಿನಯಿಸಿದ ನಾಟಕಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೇ ಮಹಾರಾಷ್ಟ್ರ, ಮುಂಬೈ, ಆಂಧ್ರಪ್ರದೇಶ, ಮದ್ರಾಸ್. ದೆಹಲಿಯ ಪ್ರೇಕ್ಷರನ್ನು ರೋಮಾಂಚನಗೊಳಿಸಿದವು. ವೀರಭದ್ರಪ್ಪನವರು ರಂಗಭೂಮಿಯ ಉತ್ತಮ ಕಲಾವಿದರು.

ಹೊಸಪೇಟೆ ಕೆ.ಶ್ರೀಶೈಲಪ್ಪನವರನ್ನು ಕಂಡಾಗ ನಾಟಕ ರಂಗದ ಬಗ್ಗೆ ನಿಜವಾದ ಕಳಕಳಿಯಿರುವ ವ್ಯಕ್ತಿ ಎಂದೆನ್ನಿಸುತ್ತದೆ. ೧೯೪೨ರ "ಕ್ವಿಟ್ ಇಂಡಿಯಾ" ಚಳುವಳಿಯ ಸಮಯದಿಂದ ಸಾಗಿ ಬಂದು ೧೯೪೭ರಲ್ಲಿ "ರಾಜಶೇಖರ" ಎಂಬ ಐತಿಹಾಸಿಕ ನಾಟಕದಿಂದ ರಂಗಬದುಕಿಗೆ ಕಾಲಿಟ್ಟಿದ್ದಾರೆ. ಅಂದಿನ ನಾಟಕದಲ್ಲಿ ಪಿಯಾನೋ ವಾದಕರಾಗಿದ್ದ ದಿವಂಗತ ಹನುಮಂತರಾವ್ ಅವರು ಇವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ "ಚಂದ್ರಕಾಂತ" ಎಂಬ ಸಾಮಾಜಿಕ ನಾಟಕದಲ್ಲಿ ಪ್ರಮುಖ ಪಾತ್ರಕ್ಕೆ ತರಬೇತಿ ನೀಡಿದರು. ಅಂದಿನ "ವಿಜಯಾ" ನಾಟಕದಿಂದ ಜನ ಮೆಚ್ಚಿಗೆಗೆ ಪಾತ್ರರಾದರು. ಗಜಾನನೋತ್ಸವದಲ್ಲಿ ಈಗಲೂ ಪ್ರತಿ ವರ್ಷ "ಭಕ್ತ ಕನಕದಾಸ", "ಶಾಂತಿ ಎಲ್ಲಿ?", "ಹೃದಯ ದೇಗುಲ", "ಅಳಿಯ ದೇವರು", "ಉತ್ತರ ಭೂಪ" ಹಾಗೂ ದಿವಂಗತ ಹಿರಣ್ಣಯ್ಯನವರ "ದೇವದಾಸಿ" ನಾಟಕಗಳನ್ನು ಆಡುತ್ತಾ ಬಂದಿದ್ದಾರೆ. ಈಗಲೂ ಒಂದಲ್ಲ ಒಂದು ನಾಟಕದಲ್ಲಿ ನಿರ್ದೇಶನ, ರಂಗಸಜ್ಜಿಕೆಗಳಲ್ಲಿ ದಕ್ಷತೆಯಿಂದ ಕಲಾ ಸೇವೆ ಮಾಡುತ್ತಿದ್ದಾರೆ.

೧೯೭೪ರಲ್ಲಿ ಚಳ್ಳಿಕೇರಿಯಲ್ಲಿ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ "ದತ್ತಕ ಮಗ" ನಾಟಕಕ್ಕೆ ಪ್ರಥಮ ಬಹುಮಾನ ಗಳಿಸಿದ್ದಲ್ಲದೆ ೧೯೫೧ರಲ್ಲಿ ದೆಹಲಿಯಲ್ಲಿ ಆಗಿನ ಸಾರಿಗೆ ಮಂತ್ರಿ ಶ್ರೀಮತಿ ಸರೋಜಿನಿ ಮಹಿಷಿಯವರ ಸಮ್ಮುಖದಲ್ಲಿ ನಡೆದ ಸರ್ವಭಾಷಾ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಎಲ್ಲರ ಮೆಚ್ಚಿಗೆ ಗಳಿಸಿದ್ದಾರೆ.

ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯಲ್ಲಿ ಆಪದ್ಬಾಂದವ ನಟ ಎಂದೇ ಹೆಸರಾಗಿರುವ ಹೊಸಪೇಟೆ ಎಸ್.ಮರಿಯಣ್ಣ ಹಲವಾರು ವೃತ್ತಿ ನಾಟಕ ಕಂಪನಿಗಳಲ್ಲಿ ಕಳೆದ ಅರ್ಧಶತಮಾನಕ್ಕೂ ಹೆಚ್ಚುಕಾಲ ಸೇವೆ ಸಲ್ಲಿಸಿ ಯಾವ ಪಾತ್ರದ ಕೊರತೆ ಬಂದರೂ ನಿರ್ವಹಿಸಲು ಸದಾಸಿದ್ಧರಾಗುತ್ತಾರೆ. ತಬಲ, ಹಾರ್ಮೋನಿಯಂ ಬಾರಿಸಲು, ಮೇಕಪ್ ಹಾಗೂ ಕಂಪನಿಯ ನಿರ್ವಹಣೆ ಮಾಡುವುದನ್ನು ಅವರು ಬಲ್ಲವರು. ಬಾಲನಟನಾಗಿ ಭರತನ ಪಾತ್ರದಿಂದ "ಕೊಂಡು ತಂದ ಗಂಡ" ನಾಟಕದ ನಾಯಕ ನಟನಾಗಿ ಹೆಸರು ಪಡೆದಿದ್ದಾರೆ. ಹುಟ್ಟು ಕುರುಡರಾದ ಬಸವಣ್ಣಪ್ಪನವರ ಯೋಗ ಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ಹೊತ್ತ ಸಹೋದರ ಮರಿಯಣ್ಣನ ಪಾಲಿಗೆ ಬಂತು. ಎಂಟು ವರ್ಷದವರಿದ್ದಾಗಲೇ ಬಸವಣ್ಣಪ್ಪನವರ ಜೊತೆ ಬಾಲಕ ಮರಿಯಣ್ಣ ಅಲೆಯ ತೊಡಗಿದರು. ಈ ಸಂದರ್ಭದಲ್ಲಿ ಮರಿಯಣ್ಣನ ಅಣತೆಯ ಪ್ರಕಾರ ಹುಲಿಮನಿ ಸೀತಾರಾಮಶಾಸ್ತ್ರಿ ಅವರ ಕಂಪನಿಯಲ್ಲಿ ಬಾಲ ನಟನಾಗಿ ವೃತ್ತಿ ರಂಗಭೂಮಿಗೆ ದುಮುಕಿದರು. ಬರಬರುತ್ತಾ ಸ್ತ್ರೀ ಪಾತ್ರದಲ್ಲಿ ಮಿಂಚಿ, ನಂತರ ಪುರುಷ ಪಾತ್ರಗಳಲ್ಲಿ ಲೀಲಾಜಾಲವಾಗಿ ಅಭಿನಯ ನೀಡಿ ನೋಡುಗರ ಮೆಚ್ಚಿಗೆ ಗಳಿಸಿದರು.

ಕೌಲಿ ಚೆನ್ನಬಸಪ್ಪನವರ "ಕಲಾ ಪ್ರಕಾಶ ನಾಟ್ಯ ಸಂಘ" ಬ್ಯಾಡಗಿ, ಏಣಗಿ ಬಾಳಪ್ಪನವರ ಕಂಪನಿ, ಬಿ.ಆರ್.ಅರಿಶಿಣ ಗುಡಿ ಕಂಪನಿ ಇತ್ಯಾದಿ ಹಲವಾರು ಕಂಪನಿಗಳಲ್ಲಿ ಅಭಿನಯ, ಹಾಡು, ವಾದನ, ಆಡಳಿತ ನಿರ್ವಹಣೆ ಮುಂತಾದವುಗಳಲ್ಲಿ ಪರಿಣತಿ ಪಡೆದಿದ್ದಾರೆ. "ಲವ್ ಇನ್ ಹುಬ್ಬಳ್ಳಿ" ಎಂಬುದು ಹುಬ್ಬಳ್ಳಿ,

ನಗರದ ಸಮಸ್ಯೆಗಳ ಬಗ್ಗೆ ಇರುವ ಹೊಸ ಪ್ರಯೋಗವೊಂದನ್ನು ಮರಿಯಣ್ಣ ಪ್ರಯೋಗಿಸಿದರು. ಮರಿಯಣ್ಣ ರವರ ಮೂಲಕ ಸಾಹಿತ್ಯಕ್ಕೆ ಬೆಲೆ ಕೊಟ್ಟು ನಿರ್ದೇಶಕನ ಹಿರಿತನದಲ್ಲಿ ನಾಟಕಗಳು ಸಿದ್ಧವಾಗುತ್ತಿದ್ದವು. ಆದರೆ ಇಂದು ಬದುಕುವುದಕ್ಕಾಗಿ ಪ್ರೇಕ್ಷಕನ ಅಭಿರುಚಿ ಕೆಡೆಸುತ್ತಿರುವ ವೃತ್ತಿ ರಂಗಭೂಮಿ ತಿದ್ದಿಕೊಳ್ಳಬೇಕಾದ ಅನಿವಾರ್ಯತೆಯ ಕಾಲ ಬಂದಿದೆ ಎನ್ನುತ್ತಾ ವಿಷಾದದಿಂದ ನುಡಿಯುತ್ತಾರೆ. ೧೯೯೯ರಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ಇವರ ಕಲಾ ಸೇವೆಗೆ ಸಂದಿದೆ.

ಕನ್ನಡ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯನ್ನು ನಾವು ನೋಡಿದರೂ ರಂಗಕ್ರಿಯಾ ಶೀಲತೆಗೆ ಒತ್ತು ಕೊಟ್ಟು ಸೃಜನ ಶೀಲತೆಯನ್ನು ಮೆರೆದವರಲ್ಲಿ ಎಂ.ಪಿ.ಪ್ರಕಾಶ್ ಅವರೂ ಒಬ್ಬರು. ಅವರ ಕೊಡುಗೆ ಅನನ್ಯವಾದುದೇ ಸರಿ. ರಂಗಕರ್ಮಿ ಎಂ.ಪಿ.ಪ್ರಕಾಶ್ ಅವರು ಸತತ ಅಭ್ಯಾಸಿಗಳು ಆಳವಾದ ವಿಷಯ ಜ್ಞಾನ ಹೊಂದಿರುವ ಉತ್ತಮ ವಾಗ್ಮಿಗಳು, ಸಮಯ ಪ್ರಜ್ಞೆ, ಸಂಯಮತೆ ಹಾಗೂ ಸಂಸ್ಕೃತಿ ನೃತ್ಯ ಕಲಾವಿದ ರೊಡನೆ ಸಕ್ರಿಯ ಸಂಪರ್ಕವಿಟ್ಟು ಕೊಂಡು ರಂಗ ಕಲೆಯ ಭವಿಷ್ಯಕ್ಕಾಗಿ ಶ್ರಮಿಸುತ್ತಿರುವುದು ಅವರ ಸಾಂಸ್ಕೃತಿಕ ಕಾಳಜಿಯ ದ್ಯೋತಕವಾಗಿದೆ.

ಬಾಲ್ಯದಲ್ಲಿಯೇ ಬಣ್ಣದ ಲೋಕಕ್ಕೆ ಮಾರುಹೋದ ಪ್ರಕಾಶರು "ಜರಾಸಂಧ" ನಾಟಕದಲ್ಲಿ ನಟರಾಗಿ ಪಾತ್ರ ಮಾಡುವುದರೊಂದಿಗೆ ರಂಗಭೂಮಿ ಪ್ರವೇಶ ಮಾಡಿದರು. "ಪೃಥ್ವಿ ಮಾಧವ ಭೂಮಾಸುರ"ದಲ್ಲಿ ಬಾಲಕನ ಪಾತ್ರ ಮಾಡಿದರು. ಅವರ ದೊಡ್ಡಪ್ಪನವರೇ ಮಿತ್ರಕೂಟ ಮಂಡಳಿಯನ್ನು ಸ್ಥಾಪಿಸಿದ್ದರಿಂದ ಅಸಂಖ್ಯಾತ ನಾಟಕಗಳಲ್ಲಿ ಪಾತ್ರ ಮಾಡುವ ಅವಕಾಶ ಸುಲಭವಾಗಿ ಸಿಕ್ಕಿತು. ಹಾಗಾಗಿ ನೂರಾರು ನಾಟಕಗಳಲ್ಲಿ ಪಾತ್ರ ಮಾಡಿ ಬಹುಮುಖ ಅನುಭವಗಳಿಸಿದ್ದರಿಂದ ಅವರೊಬ್ಬ ಆದರ್ಶ ನಟರಾಗಿ ಮಾರ್ಪಾಡು ಹೊಂದಿದರು. ಮುಂಬೈ ಜೀವನ ಆಳವಾದ ಅನುಭವ ದೊರಕಿಸಿ ಕೊಟ್ಟಿದ್ದರಿಂದ "ಅಂಗುಲಿ ಮಾಲ"ದಲ್ಲಿ ರಾಮಕೃಷ್ಣ ಪರಮಹಂಸರ ಪಾತ್ರದಲ್ಲಿ ಹಾಗೂ "ಅಮ್ರಪಾಲಿ" ನಾಟಕದಲ್ಲಿ ಯಶಸ್ಸಿನ ಪಾತ್ರ ಮಾಡಿ ಅಪಾರ ಕೀರ್ತಿಗಳಿಸಿದ್ದಾರೆ. ಪ್ರಾರಂಭದ ದಿನಗಳಲ್ಲಿ ಏಕಾಂತ ನಾಟಕಗಳಲ್ಲಿ ಅಸಂಗತ ನಾಟಕಗಳಲ್ಲಿ, ಗೀತ ನಾಟಕಗಳಲ್ಲಿ ಅಭಿನಯಿಸಿ ಮುಂದುವರೆದ ದಿನಗಳಲ್ಲಿ "ಆಷಾಢದ ಒಂದು ದಿನ"ದಲ್ಲಿ ಕಾಳಿದಾಸನ ಪಾತ್ರದಲ್ಲಿ "ಜೋಕುಮಾರ ಸ್ವಾಮಿ"ಯಲ್ಲಿ ಸೂತ್ರಧಾರನಾಗಿ "ಸೂರ್ಯ ಶಿಕಾರಿ"ಯಲ್ಲಿ ಚಂದ್ರಗುಪ್ತನಾಗಿ ನಟಿಸಿದ್ದೇ ಅನೇಕ ನಾಟಕಗಳಿಗೆ ನಿರ್ದೇಶನ ನೀಡುವಂತ ಅರ್ಹತೆ ಅವರಿಗೆ ಒದಗಿ ಬಂತು. ರಂಗ ಭೂಮಿಯ ವಿವಿಧ ಪ್ರಕಾರಗಳಲ್ಲಿ ರಂಗ ಸಾಹಿತ್ಯ ಕುರಿತಂತೆ ವಿಶೇಷ ಅಧ್ಯಯನದ ಫಲವಾಗಿ ೧೯೯೮ರ ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ "ಫೆಲೋಷಿಪ್"ನ ಗೌರವಕ್ಕೆ ಪಾತ್ರರಾದರು.

ಸುಮಾರು ಅರ್ಧ ಶತಮಾನವನ್ನು ನಾಟಕ ದೇವತೆ ಆರಾಧನೆಯಲ್ಲಿಯೇ ಕಳೆದು ಇನ್ನುಳಿದ ತನ್ನ ವಯಸ್ಸನ್ನು ಈ ದಿಕ್ಕಿನಲ್ಲೇ ಕಳೆಯಲು ನಿರ್ಧರಿಸಿ ಆಕಸ್ಮಿಕವಾಗಿ ಮರಣ ಹೊಂದಿದ ಹುಚ್ಚ ಕರಿಯಲ್ಲಪ್ಪ

ಸಮರ್ಥ ಗ್ರಾಮೀಣ ಕಲಾವಿದ. ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ನಾಟಕಗಳಲ್ಲಿ ಭಾಗವಹಿಸುವುದರಿಂದ ಆಸಕ್ತಿ ಇಟ್ಟುಕೊಂಡಿದ್ದ ಹುಚ್ಚಿ ಕರಿಯಲ್ಲಪ್ಪ, ತಮ್ಮ ಅಧ್ಯಯನ ಬಿಟ್ಟು ರಂಗಭೂಮಿಗೆ ತಮ್ಮನ್ನು ಅರ್ಪಿಸಿಕೊಂಡ ಕಲಾ ಆರಾಧಕರು. ಸುಮಾರು ೧೨ನೇ ವಯಸ್ಸಿನಲ್ಲಿಯೇ ಊರಿನ ಬಯಲು ನಾಟಕ "ಕನಕಾಂಗಿ ಕಲ್ಯಾಣ"ದಲ್ಲಿ ಸಖಿಯ ಪಾತ್ರವಹಿಸಿ ಮುಂದೆ ನಾಟಕದ ಗೀಳನ್ನು ಹಚ್ಚಿಕೊಂಡು ಈ ರಂಗ ಪ್ರವೇಶಿಸಿ ಹಲವು ಹತ್ತಾರು ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿ ಹೆಸರು ಮಾಡಿದ್ದಾರೆ. ಕರಿಯಲ್ಲಪ್ಪ ಪಾತ್ರವಹಿಸಿದ ನಾಟಕಗಳು ಬಹಳವೇ ಆದರೂ ಕೆಲವು ಇವರ ನಟನಾ ಸಾಮರ್ಥ್ಯಕ್ಕೆ ಕೈ ಗನ್ನಡಿಯಾಗಿದೆ. ಇವರು "ಚಿತ್ರಾಂಗದ" ನಾಟಕದಲ್ಲಿನ ಕೌಂಡಣ್ಯನ ಪಾತ್ರಕ್ಕೆ ಹೆಸರುವಾಸಿಯಾದವರು. ಇದಲ್ಲದೇ "ರಕ್ತರಾತ್ರಿ"ಯಲ್ಲಿನ ಅಶ್ವತ್ಥಾಮನ ಪಾತ್ರ, "ಕೃಷ್ಣಲೀಲೆ"ಯಲ್ಲಿ ಮಕರಂದ, ಬಂಧು ರತ್ನ "ಅಣ್ಣಾ ತಂಗಿ" "ರಕ್ಷ ಬಂಧನ"ದಲ್ಲಿ ಹಾಸ್ಯ ಪಾತ್ರಗಳನ್ನು ಮಾಡಿ ತದ ನಂತರ ಇತ್ತೀಚೆಗೆ "ಜೋಕುಮಾರಸ್ವಾಮಿ" ನಾಟಕದಲ್ಲಿನ ನಟನೆಗೆ ರಾಜ್ಯಮಟ್ಟದ ಪ್ರಶಸ್ತಿ ಪಡೆದಿರುವುದು ಸ್ತುತ್ಯಾರ್ಹ. ಇದರಲ್ಲಿಯ ಗೌಡ ಪಾತ್ರಕ್ಕೆ ಜೀವಂತಿಕೆ ನೀಡಿ ಜನಮನ ಸೂರೆಗೊಂಡಿರುವರು. ಎಲಿವಾಳ ಸಿದ್ದಯ್ಯ, ಏಣಗಿ ಕಾಸಿಂ ಸಾಹೇಬ್, ಸುಭದ್ರಮ್ಮ ಮನ್ಸೂರ್, ಕಲ್ಪನಾ ಶಿರೂರ್, ಮುಂತಾದವರ ಒಡನಾಟದಿಂದ ತಮ್ಮ ಪ್ರೌಢ ಅಭಿನಯದ ಮೂಲಕ ಶ್ರೇಷ್ಠ ನಟನಟಿಯರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

"ಜೋಕುಮಾರಸ್ವಾಮಿ" ಯಲ್ಲಿ ಗೌಡನ ಪಾತ್ರ ಮಾಡುತ್ತಿದ್ದ ಹುಚ್ಚಿ ಕರಿಯಲ್ಲಪ್ಪ ಅಭಿನಯ, ಸಂಗ್ಯಾ-ಬಾಳ್ಯದಲ್ಲಿ ಸಂಗ್ಯಾನ ಪಾತ್ರ ಮಾಡುತ್ತಿದ್ದ ಜಯವಂತ ಪಟೇಲರ ಅಭಿನಯ ಹಾಗೂ ಇವರೆಡು ನಾಟಕಗಳಿಗೆ ಹಿನ್ನೆಲೆ ಸಂಗೀತ ನೀಡಿ ಹಾಡುತ್ತಿದ್ದ ಮಹಾಲಿಂಗರಾಜ ಗವಾಯಿಗಳು ಹಾಗೂ ಮನ್ಸೂರು ಸುಭದ್ರಮ್ಮನವರ ಹಾಡುಗಳನ್ನು ನಾಟಕಕಾರ ಇವರಿಗಾಗಿಯೇ ರಚಿಸಿದ್ದನೇನೋ ಎಂಬ ಭಾವನೆ ಬೆಳೆಸಿದ್ದವು. ಇವರ ಅಭಿನಯ ಯಾವಾಗಲೂ ಭಾವಾತ್ಮಕತೆಯಿಂದ ಕೂಡಿತ್ತು.

ಎ.ಚಿದಾನಂದಪ್ಪ ಹರಪನಹಳ್ಳಿ ಇವರು ತುಂಬಾ ಚಿಕ್ಕವರಿದ್ದಾಗಲೇ ಓದಿಗೆ ತಿಲಾಂಜಲಿ ಇತ್ತು ನಾಟಕದ ಹುಚ್ಚನ್ನು ಬೆನ್ನಿಗಂಟಿಸಿಕೊಂಡವರು. ಮೂರನೇ ಫಾರಂನಲ್ಲಿ ಓದುತ್ತಿದ್ದ ಚಿದಾನಂದಪ್ಪನವರನ್ನು ಮೊದಲು ಆಕರ್ಷಿಸಿದ ಹಂದಿಗನೂರು ಸಿದ್ದರಾಮಪ್ಪನವರ ಅಭಿನಯ. ಕೊಟ್ಟೂರೇಶನ ಜಾತ್ರೆಗೆ ಆಗ ವಿಶ್ವರಂಜನಿ ನಾಟಕ ಕಂಪನಿ ಬಂದಿತ್ತು. ಅನಂತರ ಬಹಳಷ್ಟು ಕಂಪನಿಗಳವರ ನಾಟಕ ನೋಡುವ ಹವ್ಯಾಸವನ್ನು ಬೆಳಸಿಕೊಂಡರು. ನಾಟಕ ರಂಗವೇ ನನ್ನ ಕ್ಷೇತ್ರವೆಂದು ಘಟಾನುಘಟಿಗಳಾಗಿ ಮೆರೆದು ರಂಗದಲ್ಲಿ ತಾನೂ ಅಭಿನಯ ಮಾಡಬೇಕೆಂಬ ಕನಸನ್ನು ಹೊತ್ತ ಚಿದಾನಂದಪ್ಪನವರು ಬಹಳಷ್ಟು ಹವ್ಯಾಸಿ ತಂಡದೊಂದಿಗೆ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕಂಪನಿಯ ನಟನಾಗಿ ನಾಲ್ಕು,ಐದು ವರ್ಷ ಸೇವೆ ಸಲ್ಲಿಸಿದ್ದು ಹರಪನಹಳ್ಳಿ ಟಿ.ಜಿ.ಬಸವೇಶ್ವರ ನಾಟಕ ಮಂಡಳಿಯಲ್ಲಿದ್ದು, ತದನಂತರ ಬಹಳಷ್ಟು ಕಂಪನಿಗಳಲ್ಲಿ ಅಭಿನಯಿಸಿ ಎಲ್ಲ ಬಗೆಯ ಪ್ರೇಕ್ಷಕರ ನಾಡಿಮಿಡಿತವನ್ನು ಅರಿತು, ಅವರನ್ನೆಲ್ಲಾ ರಂಜಿಸುತ್ತಾ,

ತಮ್ಮ ಅಮೋಘವಾದ ನಟನಾ ಸಾಮರ್ಥದಿಂದ ಜನಪ್ರಿಯ ನಟರೆಂದು ಹೆಸರಾಗಿದ್ದಾರೆ. ಅವರು ಅಭಿನಯಿಸಿದ ಕಂಪನಿಗಳು : "ಅಮರೇಶ್ವರ ನಾಟಕ ಸಂಘ" ಸಿಂಧನೂರು, "ಕುಮಾರ ವಿಜಯ ನಾಟಕ ಸಂಘ" ನೆರೆಗಲ್ಲು, "ಶ್ರೀ ವೀರಭದ್ರೇಶ್ವರ ನಾಟಕ ಸಂಘ" ಬೆಳವಣಿಕೆ, "ಶ್ರೀ ಓಕಾಂರೇಶ್ವರ ನಾಟಕ ಸಂಘ" ರಾಣೇಬೆನ್ನೂರು, "ಶ್ರೀ ಬಸವಲಿಂಗ ನಾಟಕ ಸಂಘ" ಪಟ್ಟದ ಕಲ್ಲು, ಗದುಗಿನ ಕೊಟ್ಟುರೇಶ್ವರ ನಾಟಕ ಸಂಘ" ಬದುಕಿಗೆ ಬೀಡಿ ಅಂಗಡಿ ಇಟ್ಟುಕೊಂಡಿರುವ ಚಿದಾನಂದಪ್ಪ ಲಂರ ಅಂಚಿನಲ್ಲಿದ್ದರೂ ರಂಗಭೂಮಿಯ ಸೇವೆ ಸಲ್ಲಿಸುವ ಅಗಾಧ ಆಸಕ್ತಿ ಇಟ್ಟುಕೊಂಡವರು.

ರಾಯದುರ್ಗ ತಾಲೂಕಿನ ರಂಗಚೇಡ ಭೀಮಪ್ಪಚೆಟ್ಟಿಯವರ ಹುಟ್ಟೂರು, ಬಳ್ಳಾರಿ ಜಿಲ್ಲೆಯ ಶ್ರೀಧರಗಡ್ಡೆ. ಕೃಷಿಕ ಮನೆತನ. ೭-೮ರ ಪ್ರಾಯದಲ್ಲಿ ಬಯಲಾಟಕ್ಕೆ ಪ್ರವೇಶ. ಕಾಲೇಜು ಕಲಿಯುವಾಗಲೂ ರಜೆಯ ದಿನಗಳಲ್ಲಿ ಬಯಲಾಟದ ಸ್ತ್ರೀ ವೇಷ ಹಾಕಲು ಓಡೋಡಿ ಬರುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಿಕೆ, ನಾಡ ನೇತಾರರ ಸಾಮಿಪ್ಯ ಆತನನ್ನು ಕಲೆ ಸಂಸ್ಕೃತಿಯಲ್ಲಿ ಹೆಚ್ಚಿನ ಒಲವು ಬೆಳೆಸಿಕೊಳ್ಳಲು ಪ್ರೇರೇಪಿಸಿತು. ಖ್ಯಾತ ತೊಗಲುಗೊಂಬೆ ಆಟದ ತಜ್ಞರಾದ ರುದ್ರಾರೆಡ್ಡಿಯವರಿಂದ ತೊಗಲು ಗೊಂಬೆ ಆಟ ಕಲಿತರು.

ಓಬಳಾಚಾರ್ ಬಳ್ಳಾರಿ ರಾಘವರ ಪ್ರೋತ್ಸಾಹದಿಂದಾಗಿ ಪೌರಾಣಿಕ ಹಾಗೂ ಕೈಲಾಸಂ ನಾಟಕಗಳಲ್ಲೂ ಪಾತ್ರವಹಿಸಿದರು. ರಾಜ್ಯದ ಗಡಿ ಪ್ರದೇಶವಾಸಿಯಾದ್ದರಿಂದ ಆಂಧ್ರದ ಕಲೆ-ಸಂಸ್ಕೃತಿಯ ಪರಿಚಯ. ಅತ್ತಣ ಹಿರಿಯ ಕಲಾವಿದರ ಸ್ನೇಹ. ಹೀಗೆ ಇವರ ಆಂಗ್ಲ ಕನ್ನಡತೆಗೂ ನಾಟಕಗಳನ್ನು ಅಂದಿನ ಖ್ಯಾತ ಚಿತ್ರನಟ-ನಟಿಯರನ್ನು ಸೇರಿಸಿಕೊಂಡು ಆಡಿದ್ದುಂಟು. ಒಂದು ಕಾಲದಲ್ಲಿ "ಒಥೆಲೋ" ಪಾತ್ರಕ್ಕೆ ಒಬಳಾಚಾರ್ ಅವರಿಗೆ ಅಪಾರ ಪ್ರಶಂಸೆಯಿತ್ತು.

ಹೊರ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ನಮ್ಮ ಕಲೆ ಸಂಸ್ಕೃತಿಯ ಬಗ್ಗೆ ಅನೇಕ ಸಭೆ ಸಮಾರಂಭಗಳಲ್ಲಿ ಉಪನ್ಯಾಸ ನೀಡಿ, ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರವನ್ನು ನಿರ್ವಹಿಸಿದ್ದಾರೆ. ರಾಘವ ಕಲಾಮಂದಿರದ ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಇವರ ಅರವತ್ತು ವರ್ಷದ ಹುಟ್ಟು ಹಬ್ಬದ ನೆನಪಿಗಾಗಿ ಕಲೆ- ಕಲಾವಿದರ ನೆರವಿನೊಂದಿಗೆ ಇವರ ಹೆಸರಿನಲ್ಲಿ ಒಂದು ಟ್ರಸ್ಟ್ ಸ್ಥಾಪಿಸಿದರು. ೧೯೬೯ರಲ್ಲಿ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಮೂಲತಃ ಕೊಟ್ಟೂರಿನವರಾದ ಮೈದೂರು ಚೆನ್ನಬಸವಪ್ಪನವರು ಬಾಲ ಪಾತ್ರಗಳಿಂದ ರಂಗ ಪ್ರವೇಶ ಮಾಡಿದರು. ತಮ್ಮ ಹನ್ನೆರಡರ ಬಾಲ್ಯದಲ್ಲಿಯೇ ಯಾರು ಯಾವ ಪಾತ್ರಕ್ಕೆ ಇಲ್ಲವಾದರೂ ತಾನು ನಿರ್ವಹಿಸಿ ತೂಗಿಸುವಷ್ಟು ರಂಗಭೂಮಿಯ ಜನಪ್ರಿಯ ನಾಟಕಗಳಲ್ಲಿ ಪರಿಣಿತಿ ಪಡೆದಿದ್ದರು.

ಬಳ್ಳಾರಿ ಅಗಸರ ಸಿದ್ದಪ್ಪನವರ ಒತ್ತಾಯದಿಂದ ಕರೆದೊಯ್ದು ಅವರ ಶನಿಮಹಾತ್ಮೆ ನಾಟಕದ ವಿಕ್ರಮ ರಾಜ ಪಾತ್ರವನ್ನು ಹಾಕಿಸಿದರು. ಪಿಯಾನೋ ನುಡಿಸುವುದು ಕಲಿತು ಅವರ ಕಂಪನಿಯ "ಶಾಪ ವಿಮೋಚನೆ" ನಾಟಕದ ಮಮಲೋಹಣದ ಪಾತ್ರದಲ್ಲಿಯೂ ಇವರು ಜನಮನ್ನಣೆಯನ್ನು ಗಳಿಸಿದ್ದಾರೆ. ಆ ದಿನಗಳಲ್ಲಿ ಇವರ ವಿಕ್ರಮ ಪಾತ್ರಕ್ಕೆ ಸೊಂಡೂರಿನ ಮಹಾರಾಜರು ಬಿರುದು ಕೊಟ್ಟು ಸತ್ಕರಿಸಿದ್ದರು. ಹತ್ತಾರು ವರ್ಷಗಳ ಕಾಲ ಊರೂರು ಸುತ್ತಿ ಬಂದರು. ಹೆಸರಾಂತ ನಟರುಗಳ ಜೊತೆ ರಾಮಾಯಣದ ಸೀತೆಯಾಗಿ, ರಾಣಿಯಾಗಿ ಮೆರೆದವರು. "ವಿಜಯ ಲಕ್ಷ್ಮಿ ನಾಟಕ ಮಂಡಳಿ"ಯಲ್ಲಿ "ಜಲಂಧರ", "ಉತ್ತರ ಭೂಪ", "ಚೌಮಾಸೂರ", "ಕಿತ್ತೂರಿಯ ಚೆನ್ನಮ್ಮ", "ರಾಮಾಯಣ" ಮೊದಲಾದ ಅನೇಕ ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. "ಕುಸುಗಲ್ಲು ಕಂಪನಿ", "ತಳಕಲ್ಲು ಕಂಪನಿ" ರಾಮಸಾಗರ ಕಂಪನಿಗಳಲ್ಲಿ ಅನೇಕ ಅಮೆಚೂರು ಕಂಪನಿಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಕಾಣಿಸಿ ಕೊಂಡಿದ್ದಾರೆ. ಹಳ್ಳಿ ಹಳ್ಳಿಗಳಲ್ಲಿ ನಾಟಕಗಳನ್ನು ಕಲಿಸಿದ್ದಾರೆ. ಇಂದೂ ಅದೇ ದಿಕ್ಕಿನಲ್ಲೇ ಶ್ರಮಿಸುತ್ತಿದ್ದಾರೆ. ಅನೇಕ ಮಠ-ಮಾನ್ಯಗಳು, ಸಂಘ-ಸಂಸ್ಥೆಗಳು ಇವರಿಗೆ ಬಿರುದುಗಳನ್ನು ನೀಡಿ ಸತ್ಕರಿಸಿವೆ.

ಮೈದೂರು ಚೆನ್ನಬಸಪ್ಪನವರು ತಮ್ಮ ಇಳಿ ವಯಸ್ಸಿನಲ್ಲೂ ರಂಗಭೂಮಿಗಾಗಿ ಶ್ರಮಿಸುತ್ತಿದ್ದಾರೆ. ಅವರ ಸ್ತ್ರೀ ಪಾತ್ರಗಳು, ಸೌಮ್ಯ ಪಾತ್ರಗಳು ಜನಮನದಲ್ಲಿ ಇಂದಿಗೂ ಹಸಿರಾಗಿವೆ. ಮೈದೂರು ಚೆನ್ನಬಸಪ್ಪ ತರಬೇತಿ ನೀಡಿ ರಂಗಕ್ಕೆ ತರುತ್ತಿರುವ ಕಲಾವಿದರು ಅವರ ಪರಂಪರೆಯನ್ನು ಉಳಿಸಬಲ್ಲರೆಂಬ ನಂಬಿಕೆ ಅವರಲ್ಲಿದೆ.

ಧಾರವಾಡ ಜಿಲ್ಲೆಯವರಾದ ಲಿಂಗರಾಜು ಮನ್ನೂರ ಹುಟ್ಟಿದ್ದು ಮನ್ನೂರಿನಲ್ಲಿ. ಇವರು ನೆಲೆನಿಂತದ್ದು ಬಳ್ಳಾರಿಯಲ್ಲಿ. ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ಆಸಕ್ತಿ ತೋರಿದ್ದು ರಂಗಭೂಮಿಗೆ. "ವಾಣಿ ವಿಲಾಸ ಕಂಪನಿ" ಗದಗ, ವಿಶ್ವರಂಜನಿ-ಸೊಲ್ಲಾಪುರ, ಬಸವರಾಜ ಮನ್ನೂರರ ಕಂಪನಿಯಾದ "ಕಲಾ ಪ್ರಕಾಶ ನಾಟಕ ಮಂಡಳಿ", ಧಾರವಾಡ ನಿಜಗುಣ ನಾಟ್ಯ ಮಂಡಳಿ-ಆದವಾನಿ ಸುಮಂಗಲಿ ನಾಟಕ ಸಭಾ - ಬಳ್ಳಾರಿ, "ಹಿರಣ್ಣಯ್ಯ ಮಿತ್ರ ಮಂಡಳಿ" ಬೆಂಗಳೂರು ಇಲ್ಲೆಲ್ಲ ಪಾತ್ರವಹಿಸಿ ಹಲವಾರು ವರ್ಷಗಳ ಕಾಲ ದುಡಿದಿದ್ದಾರೆ. "ಶಾಂತಿ ಕಲಾ ನಾಟಕ ಸಭಾ"- ಗದಗ, ಎಂಬ ನಾಟಕ ಸಂಸ್ಥೆ ಕಟ್ಟಿ ಎರಡು ವರ್ಷಗಳ ಕಾಲ ನಡೆಸಿ ಕೊಂಡು ಬಂದರು. ಇವರ ಭೀಮ, ರಾವಣ, ಬಾಣಾಸುರ, ಬಿಜ್ಜಳ ಮೊದಲಾದ ಪಾತ್ರಗಳು ಅತ್ಯಂತ ಜನಪ್ರಿಯ ವಾಗಿದ್ದವು.

ಸುಮಾರು ೫೦ ವರ್ಷಗಳು ಮೇಲ್ಪಟ್ಟು ರಂಗಾನುಭವ ಪಡೆದಿರುವ ಕೆ.ಜಂಭುನಾಥ ೧೯೩೮ರಲ್ಲಿ ರಂಗ ಪ್ರವೇಶ ಮಾಡಿದರು. ಇವರು ಹೆಚ್ಚಾಗಿ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಅಂತೆಯೇ "ಲಂಕಾದಹನ" ಮೋಹಿನಿ ರುಕ್ಮಾಂಗದ, ಶ್ರೀಕೃಷ್ಣ ತುಲಾಭಾರ, ನಾರದ ಗರ್ವಭಂಗ, ಹಣೆ ಬರಹ, ನಾಟಕಗಳಲ್ಲಿಯ ಹಾಸ್ಯ ಪಾತ್ರಗಳು ಪ್ರಧಾನವಾಗಿವೆ. ಇಲ್ಲಿನ ಅಭಿನಯಕ್ಕಾಗಿ ಪ್ರೇಕ್ಷಕರಿಂದ ದೊರೆತ ಪುರಸ್ಕಾರ ಅಪಾರವಾಗಿದೆ. ಕೆ.ಜಂಭುನಾಥ ಅವರ "ದತ್ತುಮಗ" ನಾಟಕದಲ್ಲಿನ ಸಕ್ಕುಬಾಯಿ ಎಂಬ

ಬಾಲವಿಧವೆಯ ಪಾತ್ರ ವಿಶಿಷ್ಟವಾದುದು. ''ದೇವದಾಸಿ'' ನಾಟಕದಲ್ಲಿನ ನಾಜೂಕಮ್ಮನ ಪಾತ್ರಾಭಿನಯಕ್ಕೆ ಪ್ರೇಕ್ಷಕರಿಂದ ಬಂದ ಪ್ರತಿಕ್ರಿಯೆ ಸ್ಮರಣೀಯವೇ ಸರಿ. ''ಬೃಹನ್ನಳೆ'', ''ರಕ್ಷತಾ'', ಗಂಡ್ಸಲ್ಲೆ-ಗಂಡ್ಸು'', ನಾಟಕಗಳಲ್ಲಿನ ನಾಯಕನ ಪಾತ್ರ ವಿಶಿಷ್ಟ ಆಕರ್ಷಣೆ ಹೊಂದಿದ್ದವು. ''ನನ್ನ ರಾಮರಾಜ್ಯ'' ನಾಟಕದಲ್ಲಿ ಗಾಂಧೀಜಿಯ ಪಾತ್ರ ಮಾಡಿ ಇಂದಿಗೂ ಬಳ್ಳಾರಿ ಗಾಂಧಿ- ಎಂದೇ ಕರೆಸಿಕೊಳ್ಳುತ್ತಾರೆ. ನಟನಾಗಿ ಪುರುಷರಿಂದ ಸ್ತ್ರೀಪಾತ್ರದವರೆಗೆ, ನಾಯಕನಿಂದ ಖಳನಾಯಕನವರೆಗೆ ಹಾಸ್ಯದಿಂದ ಅಂಧನ ಪಾತ್ರದವರೆಗೆ ವಿವಿಧ ರಸಪೋಷಣೆಯ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಜಂಬುನಾಥರವರು ಹಲವಾರು ಸಂಘ-ಸಂಸ್ಥೆಗಳಿಂದ ಗೌರವವನ್ನು ಪಡೆದು ಕೊಂಡಿದ್ದಾರೆ.

೧೯೫೨ರಲ್ಲಿ ಸಿರುಗುಪ್ಪ ಶಾಲೆಯ ಉಪಾಧ್ಯಾಯರ ಸಂಘದಲ್ಲಿ ''ಬಡತನ ಭೂತ'' ನಾಟಕದಲ್ಲಿ ಖಳನಾಯಕ ಶಕುನಿಯ ಪಾತ್ರವನ್ನು ಅಭಿನಯಿಸುವುದರೊಂದಿಗೆ ಜೋಯಿಸ್ ರಾಘವೇಂದ್ರಾಚಾರ್ ರಂಗ ಪ್ರವೇಶ ಮಾಡಿದರು. ೧೯೫೫ರಲ್ಲಿ ''ಮಿಸ್ ಕಮಲಾ'' ನಾಟಕದಲ್ಲಿ ಪ್ರಭಾಕರನ ಪಾತ್ರ ೧೯೬೫ರಲ್ಲಿ ಪಂಡಿತ ಪಂಚಾಕ್ಷರಿ ಗವಾಯಿಗಳ ಕಂಪನಿಯಲ್ಲಿ ಗರೂಡ ಸದಾಶಿವರಾಯರು ರಚಿಸಿದ ''ಎಚ್ಚೆಮ್ ನಾಯಕ'' ನಾಟಕದಲ್ಲಿ ಶ್ರೀರಂಗರಾಯನ ಪಾತ್ರ, ಕಲಾವಿಲಾಸ ಸಂಸ್ಥೆಯಲ್ಲಿ ''ಜೀವನ ಯಾತ್ರೆ''ಯಲ್ಲಿ ಬಿಹಾರಿ, ಶಿವಜಲಂಧರ''ದಲ್ಲಿ ಈಶ್ವರನ ಪಾತ್ರವನ್ನು ''ಮಾರ್ಗದರ್ಶಿಯಲ್ಲಿ ಶಾಸ್ತ್ರಿ,ರಣದುಂದುಭಿ'' ಯಲ್ಲಿ ಪೌರವನ ಪಾತ್ರವನ್ನು ''ಹರಿಜನೋದ್ಧಾರ'' ನಾಟಕದಲ್ಲಿ ವಕೀಲನ ಪಾತ್ರ ''ಗೌಡ್ರಗದ್ಲ''ದಲ್ಲಿ ಕರಿಯನ ಪಾತ್ರ, ನವರಸ ಯುಕ್ತವಾದ ರಂಗಭೂಮಿಯಲ್ಲಿ ಎಲ್ಲಾ ರಸಗಳ ಪಾತ್ರಗಳನ್ನು ಅಭಿನಯಿಸಿ ಕೊನೆಗೆ ಟಿಪ್ಪುಸುಲ್ತಾನ ನಾಟಕದಲ್ಲಿ ಲಾರ್ಡ್ ಕಾರ್ನವಾಲೀಸ್‌ನ ಪಾತ್ರದಲ್ಲಿ ಮನಸೂರೆಗೊಂಡಿದ್ದಾರೆ.

೧೯೭೪ರಲ್ಲಿ ''ಸಮಾಜವಾದ ಜಿಂದಾಬಾದ್ '' ನಾಟಕದಲ್ಲಿನ ಪಾತ್ರಕ್ಕೆ ನಟ ಶ್ರೇಷ್ಟರೆಂದು ಬಿರುದು ಪಡೆದರೆ, ೧೯೭೫ರಲ್ಲಿ ''ಟಿಪ್ಪುಸುಲ್ತಾನ'' ನಾಟಕದಲ್ಲಿನ ಅಭಿನಯಕ್ಕೆ ''ರಂಗಭೂಮಿಯ ಸಿಂಹ'' ಎಂಬ ಬಿರುದನ್ನು ಪಡೆದಿದ್ದಾರೆ. ಅಲ್ಲದೆ ''ಶ್ರೀಗುರು ಕೆ.ಬಿ.ಆರ್.ಡ್ರಾಮಾ ಕಂಪನಿ'' ಡಾವಣಗೇರೆ, ಓಂಕಾರೇಶ್ವರ ನಾಟಕ ಕಂಪನಿ ರಾಣೆಬೆನ್ನೂರು, ನಾಟ್ಯ ಸಭಾ- ಮೈಸೂರು ''ಸಂಘಪ್ಪನ ಕಂಪನಿ'' ಬೆಳವಣಿಕೆ, ಪಂಚಾಕ್ಷರಿ ಗವಾಯಿ ಕಂಪನಿ, ಭಾರತ ನಾಟ್ಯ ಕಲಾ ಕಂಪನಿ-ಸೋಡಿ, ಕರ್ನಾಟಕ ನಾಟಕ ಕಲಾ ಕಂಪನಿ-ಯಂಕಚ್ಚಿ ಅನೇಕ ವೃತ್ತಿ ಮತ್ತು ಹವ್ಯಾಸಿ ಕಲಾ ಸಂಘಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಬಡತನದಲ್ಲಿ ಹುಟ್ಟಿ ಬಡತನದಲ್ಲೇ ಬೆಳೆದು ಹನ್ನೊಂದನೇ ವಯಸ್ಸಿನಲ್ಲಿ ರಂಗಭೂಮಿಗಿಳಿದು ಅಭಿನಯ, ನಾಟಕ ರಚನೆ, ನಿರ್ದೇಶನ, ಕವನ, ಕಾದಂಬರಿ ರಚನೆ, ಹಾಡುಗಾರಿಕೆ, ರಾಗ ಸಂಯೋಜನೆ, ಸಂಗೀತ ಸಂಯೋಜನೆಯಲ್ಲಿ ಪಳಗುತ್ತ ಬಂದಿರುವ ಹೆಚ್.ಪಿ.ಕಲ್ಲಂಭಟ್ಟರ ಸಾಧನೆ ಅಮೋಘ. ಅರವತ್ತಕ್ಕೂ ಹೆಚ್ಚು ನಾಟಕ ರಚನೆ (ಅಪ್ರಕಟಿತ) ನೂರಕ್ಕೂ ಮಿಕ್ಕ ನಾಟಕಗಳಲ್ಲಿ ಅಭಿನಯ, ನಾಟಕ ಅಭಿನಯದಲ್ಲಿ

ಹಾಸ್ಯ ಪಾತ್ರಗಳನ್ನು ಮಾಡುತ್ತ ಜನ ಮೆಚ್ಚುಗೆಗೆ ಪಾತ್ರರಾಗಿ ''ಜ್ಯೂನಿಯರ್ ಮುಸರಿ ಕೃಷ್ಣಮೂರ್ತಿ'' ಎಂಬ ಬಿರುದು ತೆಗೆದುಕೊಂಡರೆ ಸಂಗೀತ ಕ್ಷೇತ್ರದಲ್ಲಿ ''ಜ್ಯೂನಿಯರ್ ಭೀಮಸೇನ ಜೋಷಿ'' ಎಂಬ ಬಿರುದಿಗೆ ಪಾತ್ರರಾಗಿದ್ದಾರೆ.

''ಶ್ರೀ ಭುವನೇಶ್ವರಿ ಕನ್ನಡ ಕಲಾ ಸಂಘ''ವನ್ನು ಹುಟ್ಟುಹಾಕಿ ಆ ಮುಖಾಂತರ ತಾಲೂಕು ಮತ್ತು ಜಿಲ್ಲಾ ಯುವಜನ ಸಮ್ಮೇಳನ, ರಾಜ್ಯಮಟ್ಟದ ಸಂಗೀತ ಸ್ಪರ್ಧೆ, ಕವಿಗೋಷ್ಠಿ ಸ್ಪರ್ಧೆಗಳಲ್ಲಿ ಭಾಗವಹಿಸಿ, ಹಲವಾರು ಮೇಳ, ಸಭೆ-ಸಮಾರಂಭ, ಸಂಘ-ಸಂಸ್ಥೆಗಳಿಂದ ಶ್ರೇಷ್ಠ ನಟ ಪ್ರಶಸ್ತಿ, ಉತ್ತಮ ಗಾಯಕ ಪ್ರಶಸ್ತಿ, ಉತ್ತಮ ಸ್ವರ ಸಂಯೋಜಕ, ಉತ್ತಮ ನಿರ್ದೇಶನ ಪ್ರಶಸ್ತಿ ಪಡೆದಿರುವರು.

ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ಉಜ್ಜನಿ ಗಡದಯ್ಯ ನಾಟಕವಾಡುವ ಆಸಕ್ತಿ ಬೆಳೆಸಿಕೊಂಡಿರುವವರು. ''ಲವಕುಶ'' ನಾಟಕದಲ್ಲಿ ಲವನ ಪಾತ್ರದ ಮುಖಾಂತರ ಇವರ ಕಲಾಸೇವೆ ಪ್ರಾರಂಭವಾಯಿತು. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ ಗಡದಯ್ಯನವರು ಸುಮಾರು ೧೫೦ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಗಡದಯ್ಯ ಅಭಿನಯಿಸಿದ ನಾಟಕಗಳಲ್ಲಿ ಹೆಚ್ಚಾಗಿ ಕೃಷ್ಣನ ಹಾಗೂ ಹೆಣ್ಣಿನ ಪಾತ್ರಗಳನ್ನು ಮಾಡಿದ್ದಾರೆ.''ಉತ್ತರ ಕುಮಾರ''ದಲ್ಲಿ ಉತ್ತರೆ, 'ಎಚ್ಚೆಮ್ ನಾಯಕ'ದಲ್ಲಿ ಬಾಯಮ್ಮ, ಸಂಪೂರ್ಣ 'ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿ ಮಲ್ಲಮ್ಮ, 'ಪ್ರಚಂಡ ಪರೀಕ್ಷೆ'ಯಲ್ಲಿ ಪಿಂಗಳ ರಾಣಿ, 'ಸತ್ಯ ಹರಿಶ್ಚಂದ್ರ'ದಲ್ಲಿತಾರಾಮತಿ, ಈಗಿನ ಪರಿಸ್ಥಿತಿ ನಾಟಕದಲ್ಲಿ 'ಕಮಲಿ' ರಕ್ತರಾತ್ರಿಯಲ್ಲಿ ಶ್ರೀಕೃಷ್ಣ, ಕುರುಕ್ಷೇತ್ರದಲ್ಲಿ ಶ್ರೀಕೃಷ್ಣ ಪಾತ್ರಗಳಲ್ಲಿ ನಟಿಸಿ ಜನರ ಪ್ರಶಂಸೆಗೆ ಕಾರಣಕರ್ತರಾಗಿದ್ದಾರೆ.

ಇವರು ಮನ್ನೂರು ಸುಭದ್ರಮ್ಮ, ಮೈಸೂರು ಸುಮತಿ, ಉಳಬೀಡು ರಂಗವೇಣಿ, ಆಲೂರು ಸುಶೀಲ, ಕುಕನೂರು ರೈಮ್ ಜಾನ್ ಹಾಗೂ ಗೋರಾಜಾನ್ ಇನ್ನಿತರ ಪ್ರಸಿದ್ಧ ಕಲಾವಿದರೊಂದಿಗೆ ಅಭಿನಯಿಸಿ ಅವರ ಜೊತೆ ಹಾಡಿದ್ದಾರೆ. ''ಶ್ಯಾಮಲಿ ಪ್ರೇಮಲಿ'' ಅನ್ನುವ ಹಾಡಿನ್ನು ಹಾಡಿ ಪ್ರೇಕ್ಷಕರ ಮನರಂಜಿಸಿದ್ದಾರೆ.

ಸುಭದ್ರಮ್ಮ ಮನ್ಸೂರು ಅವರು ತಮ್ಮ ಇಂಪಾದ ಕಂಠದಿಂದ, ಪ್ರೌಢ ಅಭಿನಯದಿಂದ ರಂಗಭೂಮಿಯ ಶ್ರೀಮಂತಿಕೆಯನ್ನು ಕಾಪಾಡಿಕೊಂಡು ಬಂದಿರುವುದು ನಮಗೆಲ್ಲರಿಗೂ ಅಭಿಮಾನದ ಸಂಗತಿ. ಬಳ್ಳಾರಿಯಲ್ಲಿ ಕೆಳ ಮಧ್ಯಮದ ವರ್ಗದಲ್ಲಿ ಜನಿಸಿದ ಸುಭದ್ರಮ್ಮನವರಿಗೆ ಹಾಡುಗಾರಿಕೆಯು ತಂದೆ ತಾಯಿಗಳಿಂದ ದೊರೆತ ವರವಾಗಿದೆ. ತಾಯಿ ಭಾಗ್ಯಮ್ಮನವರು ದಕ್ಷಿಣಾದಿ ಸಂಗೀತ ವಿದೂಷಿ, ತಾಯಿಯೇ ಮೊದಲು ಗುರು. ತಂದೆಯು ವೃತ್ತಿಯಲ್ಲಿ ಮೆಕಾನಿಕ್ ಆಗಿದ್ದರೂ ಒಳ್ಳೆಯ ಹಾರ್ಮೋನಿಯಂ ವಾದಕರು. ಇಂಥ ತಂದೆ-ತಾಯಿಗಳ ಪಡೆದ ಇವರಿಗೆ ಸಂಗೀತದ ಹುಚ್ಚು ಅಂಟಿಕೊಂಡಿದ್ದು ತೀರಾ ಸಹಜವೆಂದೇ ಹೇಳಬೇಕು.

ತೆಲುಗು ಶಾಲೆಯಲ್ಲಿ ಆರನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ. ಬೆಳೆಯುತ್ತಾ ರೂಢಿಯಿಂದ ಕನ್ನಡ ಭಾಷೆ ಓದಲು ಬರೆಯಲು ಕಲಿತರು. ಮೊದಲು ನಾಟಕದ ಮಾತುಗಳನ್ನು ತೆಲುಗಿನಲ್ಲಿ ಬರೆದು ಕೊಂಡು ಬಾಯಿಪಾಠ ಮಾಡುತ್ತಿದ್ದರು. ತಂದೆಯ ಆಕಸ್ಮಿಕ ಮರಣದಿಂದ ಕುಟುಂಬಕ್ಕೆ ಬಡತನದ ಬಿಸಿ ತಾಕುವಂತೆ ಮಾಡಿತು. ಸಂಗೀತ ಕಛೇರಿಗಳಿಂದ ಬರುತ್ತಿದ್ದ, ಅಲ್ಪ ಆದಾಯದಿಂದ ಮಕ್ಕಳನ್ನು ಪೋಷಿಸಲು ತಾಯಿಗೆ ಪರದಾಟ. ಅದೇ ಹೊತ್ತಿಗೆ ಬಳ್ಳಾರಿಯಲ್ಲಿ ''ಸುಮಂಗಳಿ ನಾಟಕ ಸಂಘ'' ಎಂಬ ನಾಟಕ ಕಂಪನಿ ಬಂದಿತು. ಮುದ್ದು ಮುಖ, ಸುಮಧುರ ಕಂಠ ಇರುವ ಬಾಲೆ ಸುಭದ್ರಮ್ಮನನ್ನು ಕಂಪನಿಗೆ ಸೇರಿಸಲು ಅವರಿವರು ಭಾಗ್ಯಮ್ಮನವರಿಗೆ ಸಲಹೆ ಮಾಡಿದರು. ಅವರು ಅಳಕುತ್ತಲೇ ಮಗಳೊಂದಿಗೆ ಕಂಪನಿಗೆ ಹೋದರು. ಅಲ್ಲಿಗೆ ಆಕಸ್ಮಿಕವಾಗಿ ಬಂದಿದ್ದ ಪ್ರಸಿದ್ಧ ನಟ ಶ್ರೀ ಬಸವರಾಜ ಮನ್ಸೂರು ಸುಭದ್ರಮ್ಮನವರ ಸಂದರ್ಶನ ನಡೆಸಿದರು. ರೂಪ-ಕಂಠ ಎರಡೂ ಅವರಿಗೆ ಮೆಚ್ಚುಗೆಯಾದವು. ಕಂಪನಿಗೆ ಸೇರಿಸಿಕೊಳ್ಳಲು ಮಾಲಿಕರಿಗೆ ಶಿಫಾರಸ್ಸು ಮಾಡಿದರು. ಹೀಗೆ ಸುಭದ್ರಮ್ಮನವರ ರಂಗಭೂಮಿ ಸೇವೆ ಆರಂಭವಾಯಿತು.

ಬಾಲ ನಟಿ ಸುಭದ್ರಮ್ಮ ''ಸುಮಂಗಳಿ ನಾಟ್ಯಸಂಘ''ದಲ್ಲಿ ಹರಿಶ್ಚಂದ್ರದಲ್ಲಿ ಲೋಹಿತ, ಟಿಪ್ಪುಸುಲ್ತಾನದಲ್ಲಿ ಟಿಪ್ಪು ಮಗು ಆರತಿ ಹಿಡಿದುಕೊಂಡು ನಿಲ್ಲುವ ಸಖಿ ಪಾತ್ರ ಇಂಥವುಗಳಿಂದ ಪಾತ್ರಾಭಿನಯ ಪ್ರಾರಂಭವಾದಾಗ ಸುಭದ್ರಮ್ಮನವರಿಗೆ ವಾರಕ್ಕೆ ಒಂದು ರೂಪಾಯಿ ಸಂಬಳ. ಎರಡೇ ವರ್ಷಕ್ಕೆ ಈ ಸಣ್ಣಕಂಪನಿ ಮುಚ್ಚಿತು. ಆದರೆ ಈ ಕಂಪನಿ ಸುಭದ್ರಮ್ಮನವರಿಗೆ ದೊಡ್ಡ ಕೊಡುಗೆ ನೀಡಿತು. ಅದೇ ಕಂಪನಿಯಲ್ಲಿದ್ದ ಲಿಂಗರಾಜ ಮನ್ಸೂರವರೊಂದಿಗೆ ಸುಭದ್ರಮ್ಮನವರು ಹದಿನಾಲ್ಕನೇ ವಯಸ್ಸಿನಲ್ಲಿ ಮದುವೆಯಾದರು.

ಇಬ್ಬರೂ ದಂಪತಿಗಳು ಏಣಗಿ ಬಾಳಪ್ಪನವರ ಕಂಪನಿಗೆ ಸೇರಿದರು. ಮೊದಲು ಬಾಲನಟಿ ಈಗ ನವನಾಯಕಿ. ಜಗಜ್ಯೋತಿ ಬಸವೇಶ್ವರದಲ್ಲಿ ಗಂಗಾ, ಕಲಾವತಿ, ನೀಲಾಂಬಿಕೆ, ಅಕ್ಕಮಹಾದೇವಿ, ಹೇಮರೆಡ್ಡಿ ಮಲ್ಲಮ್ಮದಲ್ಲಿ ಮಲ್ಲಮ್ಮ, ನಾಗಮ್ಮ, ಮಾದೇವಿ, ''ಕುರುಕ್ಷೇತ್ರ''ದಲ್ಲಿ ದ್ರೌಪತಿ ಮೊದಲಾಗಿ ಇನ್ನೂ ಅನೇಕ ಸಾಮಾಜಿಕ ನಾಟಕಗಳಲ್ಲಿ ನಾಯಕಿ ಪಾತ್ರಗಳನ್ನು ಮಾಡಿ ಅಪಾರ ಜನಮೆಚ್ಚುಗೆ ಗಳಿಸಿದವರು.

ಹಾಡುಗಾರಿಕೆಯೇ ಅಂದಿನ ಸಂಗೀತ ಪ್ರಧಾನ ನಾಟಕಗಳಲ್ಲಿ ನಟನಟಿಯರ ಮುಖ್ಯವಾದ ಬಂಡವಾಳ ವಾಗಿತ್ತು. ದೈವದತ್ತವಾದ ಮಧುರ ಕಂಠ ಮತ್ತು ತಾಯಿಯಿಂದ ಲಭಿಸಿದ ಸಂಗೀತ ಜ್ಞಾನಗಳನ್ನು ಬಳಸಿಕೊಂಡು ಸುಭದ್ರಮ್ಮನವರು ಯಶಸ್ವಿ ಗಾಯಕಿ, ನಟಿ ಎನ್ನಿಸಿಕೊಂಡರು. ಏಣಗಿಯವರ ಕಂಪನಿಯಲ್ಲಿ ಎಂಟುವರ್ಷ ಸೇವೆಸಲ್ಲಿಸಿದ ನಂತರ ಮಾ.ಹಿರಣ್ಣಯ್ಯನವರ ಕಂಪನಿಯಲ್ಲಿ ದಂಪತಿಗಳು ಐದುವರ್ಷ ದುಡಿದರು. ಕಂಪನಿಯ ಅನಿಯಮಿತ ಜೀವನ, ಮಕ್ಕಳ ಆರೋಗ್ಯ, ವಿದ್ಯೆ, ಆರ್ಥಿಕ ಚಿಂತೆ ಹೀಗಾಗಿ ಕಂಪನಿ ಜೀವನ ತ್ಯಜಿಸಿ ಬಳ್ಳಾರಿಗೆ ಬಂದು ಅಣ್ಣನ ಆಶ್ರಯದಲ್ಲಿಯೇ ಉಳಿದಿದ್ದಾರೆ.

ಒಂದೊಮ್ಮೆ ರೇಲ್ವೆ ಇನ್ಸ್‌ಟಿಟ್ಯೂಟ್‌ನವರು ''ಮನೆ ಅಳಿಯ' ನಾಟಕದಲ್ಲಿ ನಾಯಕಿ ಪಾತ್ರ ಮಾಡಲು ಸುಭದ್ರಮ್ಮನವರನ್ನು ಕೇಳಿಕೊಂಡರು. ಇದು ಇವರ ಪ್ರಥಮ ತಂಡದ ನಾಟಕ. ನಂತರ ಮಲ್ಲನ ಕೇರಿ ಗ್ರಾಮದವರು ಕುರುಕ್ಷೇತ್ರದ ದ್ರೌಪದಿ ಪಾತ್ರಕ್ಕೆ ಆಹ್ವಾನಿಸಿ ಆಂರೂಪಾಯಿ ಸಂಭಾವನೆ ನೀಡಿದರು. ಈ ಮೊತ್ತದೀದ ಸುಭದ್ರಮ್ಮನವರಿಗೆ ಗಾಬರಿ, ಸಂತೋಷ. ಏಕೆಂದರೆ ಎಷ್ಟೋ ವರ್ಷ ಕಂಪನಿಗಳಲ್ಲಿ ದುಡಿಯುವಾಗ ಇದು ಅವರ ಒಂದು ತಿಂಗಳ ಸಂಬಳವಾಗಿತ್ತು. ಹೀಗೆ ನಗರ-ಹಳ್ಳಿಗಳ ಹವ್ಯಾಸ ತಂಡಗಳು ಪಾತ್ರಕ್ಕೆ ಕರೆಯುವ ರೂಢಿಯೇ ಹೆಚ್ಚಾಗಿ ಬೆಳೆಯಿತು. ಸುಭದ್ರಮ್ಮನವರು ಹವ್ಯಾಸಿಗಳೊಂದಿಗೆ ಪಾತ್ರ ಮಾಡುವುದೇ ಹೆಚ್ಚಾಯಿತು. ಇಂಥ ವೃತ್ತಿ ನಟಿಯರ ಒಂದು ದೊಡ್ಡ ಬಳಗವೇ ಬಳ್ಳಾರಿ ಜಿಲ್ಲೆಯಲ್ಲಿ ಇದೆ. ಈ ಬಳಗಕ್ಕೆಲ್ಲಾ ಸುಭದ್ರಮ್ಮ ಇಂದು ಹಿರಿಯಕ್ಕ, ಮಾರ್ಗದರ್ಶಿ ಹಾಗೂ ಗುರುವಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಈಗೀಗ ಇಳಿ ವಯಸ್ಸು, ಆದರೆ ಅವರ ಕಲಾ ಸೇವೆ ಮಾತ್ರ ಸ್ಥಗಿತಗೊಂಡಿಲ್ಲ. ಎಂಥ ಕುಗ್ರಾಮಕ್ಕೂ ಅಭಿಮಾನದಿಂದಲೇ ಹೋಗುತ್ತಾರೆ, ಪಾತ್ರ ಮಾಡುತ್ತಾರೆ. ಉತ್ತರ ಕರ್ನಾಟಕದಲ್ಲೆಲ್ಲಾ ಸುಭದ್ರಮ್ಮನವರು ಮನೆಮಾತಾಗಿದ್ದಾರೆ. ಸುಭದ್ರಮ್ಮನವರ ಪಾತ್ರಭಿನಯದ ಬಗೆಗೆ ಜನರಿಗೆ ಅಪಾರವಾದ ಅಭಿಮಾನ. ಸುಭದ್ರ., ಎಂದರೆ ದ್ರೌಪತಿ, ದ್ರೌಪತಿ ಎಂದರೆ ಸುಭದ್ರಮ್ಮ. ರಾಯಚೂರು ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ಹವ್ಯಾಸಿ ತಂಡಗಳು ಅವರನ್ನು ಕರೆಸಿಕೊಂಡು ನಾಟಕ ಮಾಡಿವೆ. ಸುಭದ್ರಮ್ಮ ಪಾತ್ರವಹಿಸಲು ಬರುತ್ತಾರೆಂದರೆ ಆ ಕಳೆಯೇ ಬೇರೆ. ದ್ರೌಪತಿ ಮತ್ತು ಮಲ್ಲಮ್ಮನ ಪಾತ್ರಕ್ಕೆ ಸುಭದ್ರಮ್ಮನವರೇ ಬೇಕು. ಅವರ ಹೊರತಾಗಿ ಮತ್ತೊಬ್ಬರನ್ನು ಆ ಪಾತ್ರಗಳಲ್ಲಿ ನೋಡಲು ಜನ ಒಪ್ಪುವುದಿಲ್ಲ. ಆ ರೀತಿಯಾಗಿ ಸುಭದ್ರಮ್ಮ ಪಾತ್ರದೊಂದಿಗೆ ತಾದ್ಯಾತ್ಮತೆಯನ್ನು ಸಾಧಿಸಿದ್ದಾರೆ.

ಬೆಂಗಳೂರಿನಲ್ಲಿ ಒಮ್ಮೆ ಮಾ.ಹಿರಣ್ಣಯ್ಯನವರ ''ಲಂಚಾವತಾರ''ದ ಜಿಗನೇ ಪ್ರಯೋಗದ ಉತ್ಸವ. ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಯವರು ಆಗ ಮುಖ್ಯ ಅಥಿತಿಯಾಗಿ ಆಗಮಿಸಿದ್ದರು. ಈ ಸಂದರ್ಭಕ್ಕೆ ಒಂದು ವಚನ ಹಾಡಿದರೆ ಚೆನ್ನಾಗಿರುತ್ತದೆ ಎಂದು ಯೋಚಿಸಿದರು. ಯೋಗಾನರಸಿಂಹರು ಅಕ್ಕ ಮಹಾದೇವಿಯ ''ಬೆಟ್ಟದಾ ಮೇಲೊಂದು ಮನೆಯ ಮಾಡಿ'' ವಚನಕ್ಕೆ ರಾಗ ಸಂಯೋಜನೆ ಮಾಡಿದರು. ಸುಭದ್ರಮ್ಮ ಈ ವಚನವನ್ನು ಹಾಡಿದಾಗ ಪ್ರೇಕ್ಷಕರ ಮೆಚ್ಚುಗೆ ಪಡೆಯಿತು. ಅಂದಿನಿಂದ ಇಂದಿಗೂ ಈ ವಚನ ಜಯಭೇರಿ ಹೊಡೆದಿದೆ. ಸುಭದ್ರಮ್ಮ ಯಾವ ಸಭೆ ಸಮಾರಂಭಗಳಿಗೆ ಹೋಗಲಿ ಈ ವಚನವನ್ನು ಹಾಡಲೇ ಬೇಕೆಂದು ಜನರು ಆಗ್ರಹಿಸುತ್ತಾರೆ. ಅವರೆಲ್ಲರ ಅಭಿಲಾಷೆಯೊಂದಿಗೆ ಅವರ ನಾಟಕ ಯಾವುದೇ ಇರಲಿ ಬಿಡಲಿ. ಆದರೆ ''ಬೆಟ್ಟದ ಮೇಲೊಂದು'' ಹಾಡುವವರೆಗೆ ಪ್ರೇಕ್ಷಕರು ಸುಮ್ಮನಿರುವುದಿಲ್ಲ. ಅಕ್ಕನ ವಚನಕ್ಕೆ ಸುಭದ್ರಮ್ಮನವರ ಮಧುರ ಕಂಠ ಸೇರಿ ಅಂಥ ಮೋಡಿ ಮಾಡಿದ್ದು, ಅವರ ಮಲ್ಲಿನಾಥನಧ್ಯಾನ ಇನ್ನೂ ಅನೇಕ ಹಾಡುಗಳು ಕ್ಯಾಸೆಟ್ ಮೂಲಕ ಜನಪ್ರಿಯಗೊಂಡಿದ್ದು, ಸುಭದ್ರಮ್ಮನವರನ್ನು ಬಳ್ಳಾರಿ ಜಿಲ್ಲೆಯ 'ರಂಗ ಕೋಗಿಲೆ'' ಎಂದೇ ಕರೆಯುತ್ತಾರೆ.

ಬಹುಭಾಷಾ ಪ್ರವೀಣೆಯಾದ ಸುಭದ್ರಮ್ಮ ಪಾತ್ರಗಳಲ್ಲಿ ಲೀನವಾಗಿ ಪ್ರೇಕ್ಷಕರ ಅಂತರಂಗವನ್ನೇ ಕಲಕಿಬಿಡುವಂಥ ಅಪ್ಪಟ ಕಲಾವಿದೆ. ಸುಭದ್ರಮ್ಮ ಇದ್ದರೆ ಗಲ್ಲಾ ಪೆಟ್ಟಿಗೆಗೆ ಯಾವ ಕಂಪನಿಗೂ ಮೋಸವಿಲ್ಲ ಎಂಬಂಥ ಗಟ್ಟಿಕುಳ. ಇಂದೂ ಸುಭದ್ರಮ್ಮನವರ ಹಾಡುಗಾರಿಕೆ ಅಭಿನಯಕ್ಕೆ ಜನ ಮುಗಿಬೀಳುತ್ತಾರೆ. ಇವರ ಕಲಾಸೇವೆಯನ್ನು ಗಮನಿಸಿ ಕರ್ನಾಟಕ ನಾಟಕ ಅಕಾಡೆಮಿಯು ಅವರಿಗೆ ೧೯೮೫-೮೬ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೇ೨೦೦೩ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಬೆಳಗಾವಿ ಜಿಲ್ಲೆಯ ಬೈಲುಹೊಂಗಲ ತಾಲೂಕಿನ ''ತಿಗಡೊಳ್ಳಿ''ಯಲ್ಲಿ ಜನಿಸಿದವರು ಡಾ. ಬಸವರಾಜ ಮಲಶೆಟ್ಟರು. ಇವರು ಒಂದಲ್ಲ ಒಂದು ರೀತಿಯಲ್ಲಿ ಚಿಕ್ಕಂದಿನಿಂದ ರಂಗಭೂಮಿಯ ಸಂಪರ್ಕ ಹೊಂದಿದವರು. ತಂದೆಯ ನೇತೃತ್ವದಲ್ಲಿ ಬಯಲಾಟಗಳಲ್ಲಿ ಪ್ರವೇಶ. ಈ ಬಗ್ಗೆ ಅತೀವ ಆಸಕ್ತಿ ಮೂಡಿದಾಗ ಈ ಕುರಿತೇ ವಿಶೇಷ ಅಧ್ಯಯನವನ್ನು ಮಾಡಬೇಕೆಂಬ ಹಂಬಲ. ಅದರಿಂದಾಗಿಯೇ 'ಉತ್ತರ ಕರ್ನಾಟಕದ ಬಯಲಾಟಗಳು' ಎಂಬ ವಿಷಯವಾಗಿ ಪಿಹೆಚ್.ಡಿ. ಅಧ್ಯಯನವನ್ನು ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಮಲಶೆಟ್ಟಿಯವರಿಗೆ ಜನಪದ ರಂಗಭೂಮಿಯ ಬಗ್ಗೆ ಅತೀವ ಕಾಳಜಿ. ಆ ರಂಗದಲ್ಲಿ ದುಡಿದ ಮತ್ತು ದುಡಿಯುತ್ತಿರುವವರಿಗೆ ಆತ್ಮೀಯವಾಗಿ ಅವರು ಕಂಡು ಮಾತಾಡಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಇವರು ಇಂದಿಗೂ 'ಹವ್ಯಾಸಿ' ನಾಟಕಗಳನ್ನೆಂದು ಮರೆತವರಲ್ಲ. ಸದಾ ಹೊಸತನಕ್ಕಾಗಿ ಹಂಬಲಿಸಿ ಹವ್ಯಾಸಿ ರಂಗದ ಬಹಳಷ್ಟು ನಾಟಕಗಳಲ್ಲಿ ಅಭಿನಯಿಸಿ ಹೆಸರಾದವರು. ''ಶ್ರೀ ಕೃಷ್ಣ ಪಾರಿಜಾತ''ವನ್ನುನೂರಾರು ಸಾರಿ ಪ್ರದರ್ಶಿಸಿ ಮಲಶೆಟ್ಟರೆಂದರೆ ಶ್ರೀಕೃಷ್ಣ ಪಾರಿಜಾತ, ಶ್ರೀಕೃಷ್ಣ ಪಾರಿಜಾತವೆಂದರೆ ಮಲಶೆಟ್ಟರು ಎನ್ನುವಷ್ಟರ ಮಟ್ಟಿಗೆ ಕರ್ನಾಟಕದಾದ್ಯಂತ ಪ್ರಸಿದ್ಧಿ ಪಡೆದಿದ್ದಾರೆ. ಉತ್ತರ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಪ್ರದರ್ಶಿಸಿ ದೆಹಲಿಗೂ ಹೋಗಿ ಬಂದವರು. ಹವ್ಯಾಸಿಗಳನ್ನು ಒಂದೆಡೆ ಸೇರಿಸಿ ತಮ್ಮದೇ ಸ್ವತಃ ತಂಡವನ್ನು ಕಟ್ಟಿಕೊಂಡು, ನಾಟಕ ಆಡುತ್ತಾ ನಾಟಕಗಳನ್ನು ನಿರ್ದೇಶಿಸುತ್ತ ಬಹಳಷ್ಟು ನಾಟಕಗಳಿಗೆ ಸಂಗೀತವನ್ನು ಸಂಯೋಜಿಸಿದ್ದಾರೆ.

ಹೊಸಪೇಟೆಯಲ್ಲಿ ನಾಟಕ ಚಳುವಳಿ ಬೆಳೆಯಲು ಬಹಳಷ್ಟು ನಾಟಕೋತ್ಸವ, ವಿಚಾರ ಸಂಕಿರಣ ನಡೆಸಿದ ಶ್ರೇಯಸ್ಸು ಇವರದು. ನಾಡಿನ ಅನೇಕ ವಿಚಾರ ಸಂಕಿರಣಗಳಲ್ಲಿ ಅರ್ಥಪೂರ್ಣವಾಗಿ ಪ್ರಬಂಧಗಳನ್ನು ಮಂಡಿಸಿದವರು. ದೂರದ ಊರಿನ ತಂಡಗಳನ್ನು ತಮ್ಮೂರಿಗೆ ಕರೆಸಿಕೊಂಡರು. ಸಾಕಷ್ಟು ರೇಡಿಯೋ ನಾಟಕಗಳಲ್ಲಿ ಸಂಭಾಷಣೆಯಲ್ಲಿ ಭಾಗವಹಿಸಿದ್ದಾರೆ. ಖ್ಯಾತ ರೇಡಿಯೋ ಕಲಾವಿದರೆಂದು ಹೆಸರಾಗಿದ್ದಾರೆ. ಹಲವಾರು ಸಂಗೀತ ಪದ್ಯ ಪುಸ್ತಕಗಳು ಹಲವಾರು ಸಂಶೋಧನಾ ಲೇಖನಗಳನ್ನು ಜಾನಪದ ಕಲಾವಿದರನ್ನು ಸಂದರ್ಶಿಸಿ, ನಾಡಿನಾದ್ಯಂತ ಹೆಸರು ಮಾಡಿದ್ದಾರೆ. ''ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ'' ವಿಷಯ ಕುರಿತು ಗ್ರಂಥ ರಚಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಕೂಡ್ಲಿಗಿ ಪದ್ಮ ಊರು ಕೂಡ್ಲಿಗಿ. ಇವರು ಎಂಟನೇ ತರಗತಿವರೆಗಷ್ಟೇ ವ್ಯಾಸಂಗ ಮಾಡಿ ತಮ್ಮ ಹತ್ತನೆಯ ವಯಸ್ಸಿನಲ್ಲಿಯೇ ರಂಗಭೂಮಿ ಪ್ರವೇಶ ಮಾಡಿದರು. ಎಲ್ಲಾ ಹಳ್ಳಿಗಳಲ್ಲೂ ಹವ್ಯಾಸಿ ತಂಡಗಳು ಅಭಿನಯಿಸುವ ನಾಟಕಗಳಿಗೆ ಪದ್ಮಾ ಕೂಡ್ಲಿಗಿ ಬೇಕೆಬೇಕು. ಇವರು ಅಭಿನಯಿಸಿರುವ ರಕ್ತರಾತ್ರಿ, ಹೇಮರೆಡ್ಡಿ ಮಲ್ಲಮ್ಮ, ಅಣ್ಣ ತಂಗಿ, ಕುರುಕ್ಷೇತ್ರ, ಆದರ್ಶ ಪ್ರೇಮ, ''ಜೋಕುಮಾರ ಸ್ವಾಮಿ, ಸಂಗ್ಯಾಬಾಳ್ಯ ನಾಟಕಗಳು ಇವರಿಂದಲೇ ಜನಪ್ರಿಯವಾದವು ಎಂದರೆ ಉತ್ಪ್ರೇಕ್ಷೆಯ ಮಾತಲ್ಲ.

ಜನಪದ ನಾಟಕವಾದ ಸಂಗ್ಯಾ ಬಾಳ್ಯ ನಾಟಕದಲ್ಲಿ 'ಗಂಗಿ' ಪಾತ್ರದಲ್ಲಿ, ರಕ್ತರಾತ್ರಿಯಲ್ಲಿ ಭಾನುಮತಿ ಪಾತ್ರದಲ್ಲಿ ಇರುವರೆಂದರೆ ಪ್ರೇಕ್ಷಕರು, ಆಸಕ್ತರು ಸಾಲುಗಟ್ಟಿ ನಿಲ್ಲುತ್ತಾರೆ. ಪದ್ಮಾ ಅವರಿಗೆ ಈ ಪಾತ್ರಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಶ್ರೇಷ್ಟ ನಟಿ ಪ್ರಶಸ್ತಿಯೂ ದೊರಕಿದೆ. ಇಂಥ ಮೆಚ್ಚಿಗೆಯ ಬಹುಮಾನಗಳು ಅವರಿಗೆ ಅನೇಕ ಸಂಘ, ಸಂಸ್ಥೆಗಳಿಂದ ಸಿಕ್ಕಿದೆ. ಪ್ರತಿವರ್ಷ ಸುಮಾರು ೧೦೦ ಕ್ಕೂ ಹೆಚ್ಚು ನಾಟಕಗಳಲ್ಲಿ ತಪ್ಪದೇ ಅಭಿನಯಿಸಿ ಅವರು ಇಲ್ಲಿಯವರೆಗೆ ಸುಮಾರು ೧,೫೦೦ ನಾಟಕಗಳ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಬಳ್ಳಾರಿ, ರಾಯಚೂರು ಜಿಲ್ಲೆಯಲ್ಲಿಯೂ ಪದ್ಮರ ಅಭಿಮಾನಿ ಗಳಿದ್ದಾರೆ.

ಪಿಟೀಲು ವಿದ್ವಾಂಸ ತಿಮ್ಮಪ್ಪ ಇವರ ಮಗಳು ಬಳ್ಳಾರಿ ಲಲಿತಮ್ಮ. ಬಳ್ಳಾರಿ ಜಿಲ್ಲೆಯ ಆಮಿದ್ಯಾಲ ಇವರ ಗ್ರಾಮ. ತಂದೆಯ ಪ್ರೋತ್ಸಾಹದಿಂದಾಗಿ ಸಂಗೀತ, ನೃತ್ಯಗಳಲ್ಲಿ ಪರಿಣಿತರಾದ ಲಲಿತ ಚಿತ್ರ ನಟಿಯರಾಗಿ ಹೆಸರಾದರು. ಚಿತ್ರರಂಗದಲ್ಲಿದ್ದಾಗಲೇ ಪರಿಚಯವಾದ ಕೆ.ಹಿರಣ್ಣಯ್ಯನವರ ಮೂಲಕ ರಂಗಭೂಮಿಗೆ ಹಿಂದಿರುಗಿದರು. ರಂಗಭೂಮಿಯ ಪ್ರಯುಕ್ತ ಶ್ರದ್ಧೆಯಿಂದ ಕನ್ನಡವನ್ನು ಓದಿ ಪಾತ್ರಗಳನ್ನು ಅಭ್ಯಾಸ ಮಾಡಿ ರೂಢಿಸಲು ಕಲಿತು ಆ ದಿನಗಳಲ್ಲಿ ಹೊಸ ಪ್ರಯೋಗ ಎನಿಸಿದ ''ಸದಾರಮೆ' ನಾಟಕದ ನಾಯಕಿಯಾಗಿ ರಂಗಕ್ಕೆ ಬಂದರು. ಹಿರಣ್ಣಯ್ಯ ಮಿತ್ರ ಮಂಡಲಿಯಲ್ಲಿ ಅಧಿಕಕಾಲ ಸೇವೆ ಸಲ್ಲಿಸಿದ ಲಲಿತಮ್ಮನವರು ಮಣಿ ಮಂಜರಿ ಪಾತ್ರವನ್ನು ಇಂದಿಗೂ ಪ್ರೇಕ್ಷಕರು ಮರೆತಿಲ್ಲ.

ಲಲಿತಮ್ಮ ಬಳ್ಳಾರಿಯಲ್ಲಿ ಲಲಿತ ಕಲಾ ಸಂಘ ಎಂಬ ತನ್ನದೇ ಸಂಸ್ಥೆಯನ್ನು ಕಟ್ಟಿ ಕರ್ನಾಟಕದಾದ್ಯಂತ ನಾಟಕ ಪ್ರದರ್ಶನ ಮಾಡಿ ರಸಿಕರ ಮನವನ್ನು ರಂಜಿಸಿದ್ದರು. ಲಲಿತಮ್ಮರ ಸೌಂದರ್ಯ, ಸಂಭಾಷಣೆ ಹೇಳುವ ರೀತಿ ಹಾಗೂ ಭಾವ ಪ್ರದರ್ಶನಕ್ಕೆ ಆ ದಿನಗಳಲ್ಲಿ ಅಪಾರ ಜನಪ್ರಿಯತೆ ದೊರಕಿತು. ೧೯೭೭ರಲ್ಲಿ ನಾಟಕ ಅಕಾಡೆಮಿಯು ಇವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಇಂದು ಚಿತ್ರರಂಗದ ಇತಿಹಾಸದಲ್ಲಿ ಹೆಸರಾದ ಆದವಾನಿ ಲಕ್ಷ್ಮೀದೇವಿಯ ಅಭಿನಯ ಕಲೆಯ ಮೂಲ ರಂಗಭೂಮಿ. ತಮ್ಮ ಸಹೋದರಿ ರಂಗಭೂಮಿಗೆ ಬಂದರು. ಇವರು ತನಗೆ ಬಲು ಪ್ರಿಯವಾದ ವಾದ್ಯ

ಸಂಗೀತಗಳನ್ನು ಅಕ್ಕರೆಯಿಂದ ಕಲಿತು ಸೊಗಸಾಗಿ ಹಾಡುತ್ತಾ ಇದ್ದುದು ಲಕ್ಷ್ಮಿದೇವಿಯ ಅಭಿನಯ ರಂಗದ ಶ್ರೇಯಸ್ಸಿಗೆ ಬಹುಮಟ್ಟಿಗೆ ಕಾರಣವಾಯಿತು. ನಾಟಕಗಳನ್ನು ನೋಡಲು ಅಭಿನೇತ್ರಿ ಅಕ್ಕನೊಂದಿಗೆ ಹೋಗುತ್ತಿದ್ದ ಇವರು ದೃಶ್ಯ ಬದಲಾವಣೆಯ ಸಮಯದಲ್ಲಿ ತಡವಾದರೆ ಗಲಾಟೆ ಮಾಡುತ್ತಿದ್ದ ಪ್ರೇಕ್ಷಕರನ್ನು ಆಕರ್ಷಿಸಲು ಹಾಡುವುದರಿಂದ ರಂಗಪ್ರವೇಶ ಮಾಡಿದ್ದೇ ವಿಶೇಷ. ಸಿಡಿಗಿನಮಳೆ ಚಂದ್ರಯ್ಯನವರ ಮನೆಯಲ್ಲಿ ಸಂಗೀತಾಭ್ಯಾಸ ಮಾಡುತ್ತಾ "ಕೃಷ್ಣ ಗಾರುಡಿ" ನಾಟಕದಲ್ಲಿ ಪಾತ್ರವಹಿಸಿ, ಹಿರಿಯರಾದ ರಂಗ ಕಲಾವಿದೆ ರುದ್ರಮ್ಮ ಹಾಗೂ ಜೋಳದರಾಶಿ ದೊಡ್ಡನಗೌಡರಿಂದ ಮೆಚ್ಚಿಗೆ ಪಡೆದರು.

ಕುರುಕ್ಷೇತ್ರದಲ್ಲಿ ರುಕ್ಮಿಣಿ, ಉತ್ತರೆ ಪಾತ್ರಗಳಲ್ಲಿ ಅದ್ವಿತೀಯರೆನ್ನಿಸಿಕೊಂಡ ಇವರು ಸಂಗೀತದ ಜೊತೆಗೆ ನೃತ್ಯವನ್ನು ಅಳವಡಿಸಿಕೊಂಡು ಉಭಯ ಭಾಷಾ ಕಲಾವಿದೆಯೂ ಆಗಿ ಕರ್ನಾಟಕ, ಆಂಧ್ರ ಪ್ರದೇಶ ಚಲನಚಿತ್ರ ಕಲಾವಿದರು ಕಟ್ಟಿದ ರಂಗ ಸಂಸ್ಥೆಯಲ್ಲೂ ಅಭಿನಯಿಸಿದ್ದಾರೆ. ಮುಂದೆ ಚಲನಚಿತ್ರ ಕ್ಷೇತ್ರದಲ್ಲೂ ಇವರು ಅಷ್ಟೇ ಜನಪ್ರಿಯರಾದರು.

ಓದುತ್ತಿರುವಾಗಲೇ ನಾಟಕದ ಗೀಳು ಹಚ್ಚಿಕೊಂಡು ೧೧ನೇ ತರಗತಿಯವರೆಗೆ ಓದಿ ತಂದೆ ಮಾರಪ್ಪರ ಪ್ರೋತ್ಸಾಹದಿಂದ ರಂಗಭೂಮಿಗೆ ಕಾಲಿಟ್ಟರು. ಮಾರಪ್ಪನವರ ಬಯಲಾಟದ ಕಲೆ ಇವರ ಮೇಲೆ ಪ್ರಭಾವ ಬೀರಿತು. ಇವರದು ನಟನೆಯಲ್ಲಿ ಎತ್ತಿದ ಕೈ. ರಾಯಚೂರು, ಕೊಪ್ಪಳ, ಬಳ್ಳಾರಿ, ಧಾರವಾಡ, ಗದಗ, ಮತ್ತು ಚಿತ್ರದುರ್ಗ ಜಿಲ್ಲೆಗಳ ಹಳ್ಳಿಗಳಲ್ಲಿ ತಿರುಗುತ್ತಾ ನಿರ್ವಹಿಸುತ್ತಾ ತಮ್ಮ ಜೀವನವನ್ನು ಕಳೆದಿದ್ದಾರೆ. ನಾಗರತ್ನಮ್ಮ ತಮ್ಮ ಹೊಟ್ಟೆಪಾಡಿಗಾಗಿ ನಾಟಕ ಕಲೆಯನ್ನು ಅವಲಂಬಿಸಿ ನಾಡಿನಾದ್ಯಂತ ಹೆಸರಾಗಿದ್ದಾರೆ.

ಸುಮಾರು ಒಂದುವರೆ ದಶಕದ ಹಿಂದೆ ಮರಿಯಮ್ಮನ ಹಳ್ಳಿಯಲ್ಲಿ ಹವ್ಯಾಸಿ ರಂಗತಂಡವೊಂದನ್ನು ಹುಟ್ಟು ಹಾಕಿದವರಲ್ಲಿ ನಾಗರತ್ನಮ್ಮನವರೇ ಒಬ್ಬರು. ೧೯೮೦ರ ದಶಕದಲ್ಲಿ ಮಹಿಳೆಯರೇ ನಾಟಕವಾಡುವ ಮಂಡಳಿಯೊಂದು ಅಸ್ತಿತ್ವದಲ್ಲಿದ್ದು ಕ್ರಿಯಾಶೀಲವಾಗಿತ್ತು. ಕೆಲವು ಕಾಲ ಸ್ಥಗಿತಗೊಂಡಿದ್ದ ಆ ಮಂಡಳಿಯನ್ನು "ಮಹಿಳಾ ವೃತ್ತಿರಂಗ ಕಲಾವಿದರ ಸಂಘ" ಎಂದು ಪುನರ್‌ನಾಮಕರಣ ಮಾಡಿ ಆರಂಭಿಸಿದ್ದು ನಾಗರತ್ನಮ್ಮನವರ ಹೆಚ್ಚುಗಾರಿಕೆ. ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ "ಸಂಸಾರ" ಎಂಬ ನಾಟಕದಿಂದ ರಂಗಪ್ರವೇಶ ಮಾಡಿದ ಇವರು ಇದುವರೆಗೂ ಸುಮಾರು ೨೦೦೦ಕ್ಕಿಂತಲೂ ಹೆಚ್ಚು ನಾಟಕಗಳಲ್ಲಿ ವೈವಿಧ್ಯಮಯವಾದ ಪಾತ್ರಗಳನ್ನು ಮಾಡಿದ್ದಾರೆ. ನಾಗರತ್ನಮ್ಮನವರು ಒಂದು ರೀತಿಯಲ್ಲಿ ಹಳೆಯ ಕಂಪನಿ ನಾಟಕಗಳಲ್ಲಿ ಹೊಸ ಕಂಪನಿ ನಾಟಕಗಳಿಗೂ ಕೊಂಡಿಯಂತೆ, ಎರಡೂ ತುದಿಗಳನ್ನು ಅವರು ಬೆಸೆಯ ಬಲ್ಲರು. ಇವರ "ದೊಡ್ಡಪ್ಪ" ನಾಟಕದ ಸಿಂಗಾರಿಯ ಪಾತ್ರ, "ಕಾಡು ಕುದುರೆ"ಯ ದುರ್ಗ, "ರಂಗಾತರಂಗ ವಿಲಾಸ" ದಲ್ಲಿ ಗೌಡತಿ "ರಕ್ತ ರಾತ್ರಿ"ಯ ಉತ್ತರೆ "ಅಣ್ಣ ತಂಗಿ" ನಾಟಕದ ಗಂಗೆ, ರತ್ನ ಮಾಂಗಲ್ಯದಲ್ಲಿ ಶಕೀಲಾ, 'ಶೀಲಾವತಿ'ಯಲ್ಲಿ ಶೀಲಾವತಿ ಈ ಎಲ್ಲಾ ಪಾತ್ರಗಳು ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿದೆ.

"ಜೋಕುಮಾರಸ್ವಾಮಿ, ಅಕ್ಷಯಾಂಬರ, ವೀರ ಅಭಿಮನ್ಯು, ಮಹಾರಥಿ ಕರ್ಣ, ಚಿತ್ರಾಂಗದಾ, ಕುರುಕ್ಷೇತ್ರ, ಸಂಗ್ಯಾ-ಬಾಳ್ಯಾ, ನಾಗಮಂಡಲ, ರಾವಿ ನದಿಯ ದಂಡೆಯಮೇಲೆ ಮೊದಲಾದ ನಾಟಕಗಳಲ್ಲಿ ಪಾತ್ರವಹಿಸಿ ಪ್ರೇಕ್ಷಕರ ಮನಸೂರೆಗೊಂಡ ಕೀರ್ತಿ ನಾಗರತ್ನಮ್ಮನವರದಾಗಿದೆ.

ಹಲವಾರು ರೂಪಕಗಳು, ಸ್ಥಳದ ವಿಶೇಷಗಳ ಬಗ್ಗೆ ಚಿತ್ರಸಿಕೊಂಡು ಚಲನಚಿತ್ರ ಹಾಗೂ ಟಿ.ವಿ. ಧಾರಾವಾಹಿಗಳಲ್ಲೂ ಮಾತನಾಡುತ್ತಾ ನಾಗರತ್ನಮ್ಮ ವೇದಿಕೆಯ ಮೇಲೆ ಹರಳು ಹುರಿದಂತೆ ಮಾತನಾಡುತ್ತಾ ತಮ್ಮ ನಟನಾ ಕೌಶಲ್ಯದಿಂದ ಪ್ರೇಕ್ಷಕರನ್ನು ದಂಗು ಬಡಿಸುತ್ತಾರೆ. ವರ್ಷವೊಂದರಲ್ಲಿ ಸುಮಾರು ೬೦ರಿಂದ ೧೦೦ ರಷ್ಟು ನಾಟಕಗಳಲ್ಲಿ ನಟಿಸುವ ಇವರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹೀಗೆ ಎಲ್ಲಾ ಪ್ರಕಾರದ ನಾಟಕಗಳಲ್ಲಿಯು ಅಭಿನಯ ಪ್ರೌಢತೆ ಹಾಗೂ ಪರಿಣತಿ ತೋರಿಸುವ ಕಲೆ ಇವರಲ್ಲಿದೆ. ಇವರು ಪೌರಾಣಿಕ ನಾಟಕದಲ್ಲಿ ಭಾಗವಹಿಸುತ್ತಾರೆಂದರೆ ಕಲಿಯುಗ ದ್ವಾಪರವಾಗುವುದು ಎಂಬ ಮಾತಿನಲ್ಲಿ ಉತ್ಪ್ರೇಕ್ಷೆ ಇಲ್ಲ ಎಂದೇ ಹೇಳಬೇಕಾಗುತ್ತದೆ. ನಾಗರತ್ನಮ್ಮನವರು ರಾಜ್ಯಮಟ್ಟದಲ್ಲಿ ಹಾಗೂ ಜಿಲ್ಲಾಮಟ್ಟದ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇಲ್ಲಿಯವರೆಗೆ ಸುಮಾರು ೪೦ಕ್ಕೂ ಹೆಚ್ಚು ನಟಿ ಸ್ಪರ್ಧೆಗಳಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಲ್ಲದೇ ಸದ್ಯಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿದ್ದಾರೆ. ೧೯೯೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಸಿಕ್ಕಿದೆ.

ವೃತ್ತಿಯಲ್ಲಿ ವ್ಯವಸಾಯಗಾರರಾಗಿದ್ದು, ಪ್ರವೃತ್ತಿಯಲ್ಲಿ ರಂಗಕಲಾವಿದರಾದ ಟಿ.ಎಂ. ವೀರಯ್ಯನವರು ಸುಮಾರು ಮೂವತ್ತು ವರ್ಷಗಳ ಕಾಲ ರಂಗಭೂಮಿಗೆ ನಟ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಹಾಗು ಚಲನಚಿತ್ರ ನಿರ್ಮಾಪಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ತಮ್ಮ ಹದಿನೈದನೇ ವಯಸ್ಸಿನಲ್ಲಿ ರಂಗ ಪ್ರವೇಶಮಾಡಿ "ಹೂವು ಮುಳ್ಳು", "ಮಣ್ಣಿನ ಮಗ" ಕಣ್ಣೀರು, ಜಾಣರ ಜಾಣ, ಹರಕೆ ಇದುವೇ ಜೀವನ ಹಾಗೂ ಧೂಮ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಕಮಲೆಯ ಕೊರಗು, ಅಣ್ಣ ತಮ್ಮ, ಅಣ್ಣ ತಂಗಿ, ಜಗಜ್ಯೋತಿ ಬಸವೇಶ್ವರ, ಮುನಿಸಿಪಾಲಿಟಿ, ನಾಟ್ಯರಾಗಿ, ಹೇಮರೆಡ್ಡಿ ಮಲ್ಲಮ್ಮ, ರತ್ನ ಮಾಂಗಲ್ಯ, ದಾರಿದೀಪ, ವಾತ್ಸಲ್ಯ, ಬಡತನದ ಭೂತ, ಇನ್ನೂ ಅನೇಕ ನಾಟಕಗಳಲ್ಲಿ ನಟನೆ ಮಾಡಿದ್ದಾರೆ. ಈ ಭಾಗದಲ್ಲಿ ಜನಮನ ಸೂರೆಗೊಂಡವರು ಅಂತೆಯೇ ಅವರನ್ನು ಹಲವಾರು ಪ್ರಶಸ್ತಿಗಳು ಹುಡುಕಿಕೊಂಡು ಬಂದು ಗೌರವ ನೀಡಿವೆ.

ಏಳನೇ ವಯಸ್ಸಿನಿಂದ ರಂಗಭೂಮಿಯಲ್ಲಿ ಚಿಕ್ಕ ಚಿಕ್ಕ ಪಾತ್ರಗಳೊಂದಿಗೆ ಪ್ರವೇಶಿಸಿದ ಹುಳೇಬೀಡು ರಂಗನಾಯಕಮ್ಮ ತರುವಾಯದಲ್ಲಿ "ಬೆಳವಣಿಕೆ ಸಂಗಪ್ಪನ ಕಂಪನಿ" ಬಸಯ್ಯಸ್ವಾಮಿ ಕಂಪನಿ" ಪಟ್ಟದಕಲ್ಲು ಶ್ರೀ ಮಲ್ಲಿಕಾರ್ಜುನ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ, ಬದನೆಹಾಳು, ಮೊದಲಾದ ಕಂಪನಿಗಳಲ್ಲಿ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಆಧಾರಾಭಿಮಾನಗಳನ್ನು ಸೂರೆಗೊಂಡಿದ್ದಾರೆ. ಅನೇಕ ಅಮೆಚೂರ್ ನಾಟಕ ಸಂಸ್ಥೆಗಳಲ್ಲಿ ಎಲ್ಲಾ ರೀತಿಯ ಪಾತ್ರಗಳನ್ನು ಅಭಿನಯಿಸಿ ಹಲವಾರು ಪ್ರಶಸ್ತಿ ಪಡೆದಿದ್ದಾರೆ.

ಬಳ್ಳಾರಿಯ ಎ.ವರಲಕ್ಷ್ಮಿ ಬಯಲಾಟದಲ್ಲಿ ಪ್ರವೇಶ ಮಾಡಿದಾಗ ವಯಸ್ಸು ಕೇವಲ ಹತ್ತು ವರ್ಷ. ಸ್ಫುರದ್ರೂಪಿ ದುಂಡನೆ ಮುಖಕ್ಕೆ ತಕ್ಕ ಚಿಕ್ಕ ಪುಟ್ಟ ಪಾತ್ರಗಳ ಅಭಿನಯ. ''ದಾರಿಯಾವುದಯ್ಯ ಮುಂದೆ'' ನಾಟಕದಲ್ಲಿ ಶಾಂತಾಳ ಪಾತ್ರದ ಮುಖಾಂತರ ರಂಗ ಪ್ರವೇಶ. ಶ್ರೀ ಲಲಿತಕಲಾ ನಾಟ್ಯ ಮಂಡಳಿ, ಬಳ್ಳಾರಿ ಗುಬ್ಬಿ ವೀರಣ್ಣನವರ ಕಂಪನಿ- ಏಣಗಿ ಬಾಳಪ್ಪ ಕಂಪನಿ, ಶ್ರೀ ಓಂಕಾರೇಶ್ವರ ನಾಟ್ಯ ಮಂಡಳಿ- ರಾಣೇಬೆನ್ನೂರು ಮೊದಲಾದ ಕಂಪನಿಗಳಲ್ಲಿ ಅಭಿನಯಿಸಿ ಉತ್ತರ ಕರ್ನಾಟಕದ ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸಿದವರು. ಇವರ ಸಂತಾನ ಸಾಕು-ಬಡತನ ಬೇಕು, ಅಣ್ಣ-ತಂಗಿ, ಹೆಣ್ಣಿನ ಜೀವನ, ರಕ್ತರಾತ್ರಿ, ಹೇಮರೆಡ್ಡಿ ಮಲ್ಲಮ್ಮ, ಬಸ್ ಕಂಡಕ್ಟರ್, ಗೌಡ್ರ ಗದ್ಲ, ಬಂಜೆಯ ತೊಟ್ಟಿಲು, ಕಲೆಕ್ಟರ್ ಕವಾಲಿ, ಸಂಗಮ, ಲಂಚಯ್ಯ ಮತ್ತು ಕೆಂಚಯ್ಯ, ರೈತನೇ ಅನ್ನದಾತ, ಮೇದಾರ ಕೇತಯ್ಯ, ಟಿಪ್ಪುಸುಲ್ತಾನ, ಹಚ್ಚಿದ ದೀಪ, ಮೊದಲಾದ ನಾಟಕಗಳಲ್ಲಿನ ಪಾತ್ರಗಳು ಹೆಚ್ಚು ಜನಪ್ರಿಯವಾಗಿದ್ದವು. ಅನೇಕ ಸಲ ಉತ್ತಮ ಪೋಷಕ ನಟಿ, ಹಾಗೂ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿರುವ ಇವರು ಇಂದು ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿ ಕೊಂಡಿದ್ದಾರೆ.

ಎಸ್.ರೇಣುಕಾ ತಮ್ಮ ಇಪ್ಪತ್ತು ವರ್ಷಗಳ ಕಲಾಜೀವನದಲ್ಲಿ ಪ್ರೇಕ್ಷಕರನ್ನು ನಕ್ಕು ನಗಿಸಿ ಕಲಾರಸಿಕರ ಮನಸ್ಸು ಸೂರೆಗೊಂಡಿರುವರು. ಹಿರಿಯ ರಂಗಕಲಾವಿದೆ ಸುವರ್ಣಮ್ಮನವರ ಪುತ್ರಿ ರೇಣುಕಾ ೧೯೭೬ರಲ್ಲಿ ತನ್ನ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ಹಂತದಲ್ಲಿರುವಾಗಲೇ ಇಲ್ಲಿ ಹೆಸರಾಂತ ರಂಗ ಕಲಾವಿದೆ ಕೆ. ನಾಗರತ್ನ ಅವರ ನೆರವಿನಿಂದ ಬಣ್ಣದ ಲೋಕಕ್ಕೆ ಕಾಲಿಟ್ಟರು.

ಈ ಭಾಗದ ಬಹುಕಡೆಗಳಲ್ಲಿ ನಡೆಯುವ ನಾಟಕಗಳಿಗೆ ಎಸ್.ರೇಣುಕಾ ಅತ್ಯಂತ ಬೇಡಿಕೆಯ ನಟಿಯಾಗಿದ್ದ ಕಾಲವೊಂದಿತ್ತು. ರೇಣುಕಾ ಇದ್ದ ನಾಟಕಗಳು ನೂಕುನುಗ್ಗಲು ಆಗುತ್ತಿದ್ದವು. ಬಳ್ಳಾರಿ, ರಾಯಚೂರು, ಗುಲ್ಬರ್ಗ ಜಿಲ್ಲೆಯ ರಂಗಾಸಕ್ತರ ಮನಸಲ್ಲೂ ಬೇರೂರುವ ಇವರು ಬೀದರ್, ಉಡುಪಿ, ಮುಂತಾದ ಕಡೆಗಳಲ್ಲಿಯೂ ತಮ್ಮ ಪ್ರತಿಭೆಯಿಂದ ಪರಿಚಿತರಾಗಿದ್ದಾರೆ. ರಂಗಭೂಮಿಯ ಮೇಲೆ ನಾಯಕಿ, ಖಳನಾಯಕಿ ಹಾಗೂ ಹಾಸ್ಯ ಪಾತ್ರಗಳಲ್ಲಿ ಅಭಿನಯಿಸಿದ ಇವರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಹಾಗೂ ಹೊಸ ಅಲೆಯ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರಕ್ತ ರಾತ್ರಿಯ ಉತ್ತರೆ, ರತ್ನ ಮಾಂಗಲ್ಯದಲ್ಲಿನ ಬಾಯಿ, ಅಣ್ಣ-ತಂಗಿ 'ಗೌರಿ' ಕೆಟ್ಟ ಮೇಲೆ ಬುದ್ಧಿ ಬಂತು ನಾಟಕದ ಸುನಿತಾ, ಸುರಪುರದ ವೆಂಕಟಪ್ಪ ನಾಯಕದ ಕನಕಾಂಬರಿ ಪಾತ್ರಗಳು ಪ್ರೇಕ್ಷಕರ ಮೆಚ್ಚಿಗೆ ಗಳಿಸಿವೆ.

ರೇಣುಕಾ ''ಜೋಕುಮಾರ ಸ್ವಾಮಿ'' ನಾಟಕದಿಂದ ಹೊಸ ಅಲೆ ನಾಟಕದಲ್ಲಿ ಅಭಿನಯಿಸಿರುವುದನ್ನು ಆರಂಭಿಸಿದ ಈ ಕಲಾವಿದೆ ಕಾಡು ಕುದುರೆ, ಮ.ಬ.ಸೋಮಣ್ಣನವರ ಕಚದೇವಯಾನಿ, ಮುದೇನೂರು ಸಂಗಣ್ಣನವರ ''ಶೀಲಾವತಿ'' ಮುಂತಾದ ನಾಟಕಗಳಲ್ಲಿ ಅಭಿನಯಿಸಿದರು. ಹಲವಾರು ಬಾರಿ ಶ್ರೇಷ್ಠ ನಟಿ ಪ್ರಶಸ್ತಿ ಪಡೆದಿದ್ದಾರೆ.

ಕಾಳಂಗಿ ಎರ್ರಿಸ್ವಾಮಿ ಕಾನೂನು ಪದವೀಧರರು. ೧೯೮೮ ರಿಂದ ೧೯೯೭ರ ನಡುವಣ ಅವಧಿಯಲ್ಲಿ ಸರಿಸುಮಾರು ಒಂದು ನೂರಕ್ಕೂ ಮಿಕ್ಕ ನಾಟಕಗಳಲ್ಲಿ ನಟಿಸಿ ಜನಪ್ರಿಯರಾಗಿದ್ದಾರೆ. ನಾಟಕಗಳ ಸಂಭಾಷಣೆ ಹಾಗೂ ನಿರ್ದೇಶನಕ್ಕೂ ಹೆಸರಾದವರು. ''ಕುರುಕ್ಷೇತ್ರ'', ''ರಕ್ತರಾತ್ರಿ'' ಉತ್ತರ ಭೂಪ, ಜಗಜ್ಯೋತಿ ಬಸವೇಶ್ವರ, ರತ್ನ ಮಾಂಗಲ್ಯ, ಅಣ್ಣ-ತಂಗಿ, ಆಕಾಲತೆ, ಸೂರ್ಯಶಿಕಾರಿ, ಹಸಿರು ಬಳೆ, ಕತ್ತಲೆ ರಾಜ್ಯ, ಹೆಣದ ಬಟ್ಟೆ, ಪ್ರೇಮಾಯಣ, ಸಂಗೀತ ಸಾರ್ವಭೌಮರು ಮೊದಲಾದ ನಾಟಕಗಳಲ್ಲಿ ಪರಿಣಾಮಕಾರಿಯಾಗಿ ನಟಿಸಿ ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿದ್ದಾರೆ. ಗಡಿನಾಡುಗಳಲ್ಲಿ ಬಳ್ಳಾರಿ ಸುತ್ತಮುತ್ತಲ ತೆಲುಗು ಭಾಷೆಯಲ್ಲಿ ಪ್ರಾವೀಣ್ಯತೆ ಇದ್ದುದರಿಂದ ''ಅಂತಂ ಕಾದಿದಿ ಆರಂಭಂ'', ''ಫಾರ್ ಸೇಲ್'', ''ಬಾಲನಾಗಮ್ಮ'' ಶ್ರೀ ಕೃಷ್ಣರಾಯಭಾರಂ'', ''ವಿಷಾದಿಸ್ ರಂಗಧರ'', ''ಅಲ್ಲೂರಿ ಸೀತಾರಾಮರಾಜು'' ಇತ್ಯಾದಿ ನಾಟಕಗಳಲ್ಲಿ ಅಭಿನಯಿಸಿ ಆಂಧ್ರದಲ್ಲೂ ಯಶಸ್ವಿಯ ಸಾಧನೆ ಮಾಡಿದ್ದಾರೆ.

ಬಯಲಾಟದಲ್ಲಿ ಬಳ್ಳಾರಿ ಜಿಲ್ಲೆಯ ಸೋಗಿ ರತ್ನ ಚಿರಪರಿಚಿತವಾದ ಹೆಸರು. ರತ್ನ ರಂಗಭೂಮಿಗೆ ಕಾಲಿಟ್ಟಿದ್ದು ೧೯೭೭ರಲ್ಲಿ. ಅಲ್ಲಿಂದ ಇಲ್ಲಿಯವರೆಗೂ ಆಡಿದ ನಾಟಕಗಳು, ಮಾಡಿದ ವೈವಿಧ್ಯಮಯ ಪಾತ್ರಗಳು ಲೆಕ್ಕವಿಲ್ಲದಷ್ಟು. ಓದಿದ್ದು ಎರಡನೇ ತರಗತಿಯವರೆಗೆ. ಬಯಲಾಟ-ದೊಡ್ಡಾಟಗಳೇ ಇಂದು ಅಪರೂಪವಾದ ದಿನಮಾನದಲ್ಲಿ ಮಹಿಳೆಯೊಬ್ಬಳೂ ಬಯಲಾಟದ ತಂಡ ಕಟ್ಟಿಕೊಂಡು ಸುತ್ತಲು ನೂರಾರು ಗ್ರಾಮಗಳಲ್ಲಿ ಸಂಚರಿಸಿ ಉತ್ತಮ ಕಲಾ ಪ್ರದರ್ಶನಕ್ಕೆ ಸಾರ್ವಜನಿಕರಿಂದ ಮೆಚ್ಚಿಗೆ ಗಳಿಸಿದ್ದು ಸುಲಭದ ಮಾತಲ್ಲ. ಸೋಗಿ ರತ್ನ ಎಂದೇ ರಂಗಭೂಮಿಯಲ್ಲಿ ಹೆಸರು ಪಡೆದು, ಐತಿಹಾಸಿಕ, ಸಾಮಾಜಿಕ ಹಾಗೂ ಪೌರಾಣಿಕ ಪಾತ್ರಗಳಿಗೆ ತನ್ನ ಪ್ರತಿಭೆಯ ಕಲೆಯಿಂದ ಜೀವಕಳೆ ತುಂಬಿದವಳು. ಹಾಸ್ಯ ಪಾತ್ರಗಳಿಗೆ ರತ್ನ ಎತ್ತಿದ ಕೈ. ಖಳನಾಯಕಿ ಪಾತ್ರಗಳಲ್ಲಿ ರತ್ನ ಮಿಂಚಿರುವುದು ಉಂಟು. ಮೊದಲು ಅನೇಕ ನಾಟಕ ಕಂಪನಿಯಲ್ಲಿ ರಂಗನಟಿಯಾಗಿ ದುಡಿದು ಅನುಭವದಿಂದ ಪಕ್ವವಾದ ನಟಿಯಾದವರು. ''ಕಡಪಟ್ಟಿ ಪ್ರಕಾಶನ ನಾಟಕ ಕಂಪನಿ'' ಚಿತ್ರದುರ್ಗ ಕುಮಾರಸ್ವಾಮಿ ಕಂಪನಿ, ಆಲಮಟ್ಟಿ ರಾಜಣ್ಣ ಕಂಪನಿ, ಬೀಳಗಿ ಕುಳೀಸ್ಯ ಕಂಪನಿ, ಹೀಗೆ ವಿವಿಧ ಕಂಪನಿಗಳಲ್ಲಿ ರಂಗ ಕಲಾವಿದೆಯಾಗಿ ದುಡಿದರು. ''ಪ್ರಮೀಳಾ ದರ್ಬಾರು'', ''ಗಿರಿಜಾ ಕಲ್ಯಾಣ'', ''ಲಕ್ಷ್ಮೀಸ್ವಯಂವರ'' ''ಭಕ್ತ ಮಾರ್ಕಂಡೇಯ'' ಇಂಥ ಹಳೆಯ ನಾಟಕಗಳ ಜೊತೆ ''ಸತಿ ಸಂಸಾರದ ಜ್ಯೋತಿ'', ಮನೆಮಗಳು, ಮಡದಿ ಕೊಟ್ಟಮಾತು, ಬದುಕು ಬಂಗಾರವಾಯ್ತು, ಹೇಮರೆಡ್ಡಿ ಮಲ್ಲಮ್ಮ, ಧರ್ಮದೇವತೆ, ರಕ್ತರಾತ್ರಿ, ಮೊದಲಾದ ಹೊಸ ಅಲೆಯ ನಾಟಕಗಳಲ್ಲಿ ಸನ್ನಿವೇಶಗಳನ್ನು ಉತ್ತಮವಾಗಿ ಅಭಿನಯಿಸಬಲ್ಲರು.

ರತ್ನ ಸುತ್ತಲಿನ ರಂಗಾಸಕ್ತರನ್ನೆಲ್ಲಾ ಕೂಡಿ ಹಾಕಿ 'ವೀರೇಶ್ವರ ಜಾನಪದ ದೊಡ್ಡಾಟ ಸಂಘ'ವನ್ನು ಕಟ್ಟಿ ನಾಟಕಗಳಲ್ಲಿ ಅಭಿನಯಿಸುತ್ತಲೇ ''ಚನ್ನಪ್ಪ ಚನ್ನಗೌಡ''ದಂಥ ನವೀನ ಮಾದರಿಯ ನಾಟಕದಲ್ಲೂ ಅಭಿನಯಿಸಿ ಸೈ ಎನ್ನಿಸಿ ಕೊಂಡವರು.

ವಡಿಗೇರಿ ಮಂಜುನಾಥರು ತಮ್ಮ ಹದಿನೈದನೇ ವಯಸ್ಸಿನಲ್ಲಿ ನಾಟಕಗಳಲ್ಲಿ ಸಣ್ಣಸಣ್ಣ ಪಾತ್ರ ಮಾಡುವುದರೊಂದಿಗೆ ರಂಗ ಪ್ರವೇಶ ಮಾಡಿದರು. ಸುಮಾರು ೫೦೦ ನಾಟಕಗಳಲ್ಲಿ ನಟಿಸಿದ ಮಂಜುನಾಥ "ರಕ್ತರಾತ್ರಿ" ಪ್ರೀತಿಯ ಸುಳಿಯಲ್ಲಿ, ಗೌಡ್ರಗದ್ಲ, ನಾಟಕಗಳಲ್ಲಿನ ಅಭಿನಯಕ್ಕೆ ಶ್ರೇಷ್ಠ ನಟ ಪ್ರಶಸ್ತಿ ಪಡೆದು ಜನಪ್ರಿಯರಾದವರು. ಹವ್ಯಾಸಿ ರಂಗಕಲಾವಿದರಾದ ಇವರು ರಂಗಸಜ್ಜಿಕೆ ಹಾಗೂ ಬಣ್ಣ ಹಚ್ಚುವಲ್ಲಿ ನಿಸ್ಸೀಮರು ನಟ ಶ್ರೇಷ್ಠ ವಡಿಗೇರಿ ಮಂಜುನಾಥ.

ಹತ್ತನೇ ತರಗತಿಯವರೆಗೆ ಓದಿರುವ ಬಿ.ಶ್ರೀನಿವಾಸರಾವ್ ತಮ್ಮ ಹತ್ತನೇ ವಯಸ್ಸಿನಲ್ಲೇ ನಾಟಕಗಳಲ್ಲಿ ಅಭಿನಯಿಸಲು ಕಲಿತರು. ಮನೆಯಲ್ಲಿ ಅಜ್ಜನವರ ತಲೆಮಾರಿನಿಂದ ನಡೆದು ಬಂದ ಕಲೆಯಾಗಿದ್ದರಿಂದ ಸಹಜವಾಗಿ ಕರಗತವಾಯಿತು. ಮಧುರ ಕಂಠ ಹೊಂದಿದ ಇವರು ಅರುಣೋದಯ, ಬಕಪಕ್ಷಿ, ಯಾರ ಹೆಂಡತಿ, ಲಾಟರಿ ಮ್ಯಾರೇಜ್ , ಕನಕದಾಸ, ಉತ್ತರಭೂಪ, ಅಣ್ಣ-ತಂಗಿ, ಎಚ್ಚೆಮ್ ನಾಯಕ, ದೇವದಾಸ, ಬೆಳ್ಳಿಚುಕ್ಕಿ, ಹೃದಯದೇಗುಲ, ಶಾಂತಿ ಎಲ್ಲಿ, ಅಳಿಯ ದೇವರು, ಟೂ-ಲೇಟ್ ಮೊದಲಾದ ನಾಟಕಗಳಲ್ಲಿ ಅಭಿನಯಿಸಿ ಜನಪ್ರಿಯರಾಗಿದ್ದಾರೆ.

ಮಜ್ಜಿಗಿ ಬಸವರಾಜ ಓದು ಕಲಿತದ್ದು ಹತ್ತನೇ ತರಗತಿವರೆಗೆ. ವಂಶ ಪಾರಂಪರ್ಯದಿಂದ ಬಂದ ಕಲೆಯನ್ನು ಬಸವರಾಜರವರು ತಲೆಯ ಮೇಲೆ ಹೊತ್ತುಕೊಂಡದ್ದರಿಂದ ವಿದ್ಯಾಭ್ಯಾಸಕ್ಕೆ ಶರಣು ಹೇಳಬೇಕಾಯಿತು. ವಿಶಿಷ್ಟ ಪ್ರತಿಭೆ ಹಾಗೂ ಇಂಪಾದ ಕಂಠದ ಪ್ರತಿಫಲವಾಗಿ ನಟರಾಗಿ, ನಿರ್ದೇಶಕರಾಗಿ ಹಾಗೂ ಹಾಡುಗಾರರಾಗಿ ಪ್ರೇಕ್ಷಕರನ್ನು ರಂಜಿಸಿದರು. ಸತ್ಯ ಹರಿಶ್ಚಂದ್ರ, ಮಂಗಳ ನನ್ನ ಅತ್ತಿಗೆ, ಬಡವನ ಬಾಳು, ಅಣ್ಣ-ತಂಗಿ, ಬಸ್ ಕಂಡಕ್ಟರ್, ಬಸ್ ಹಮಾಲ, ಹಸಿರು ಬಳೆ, ಎಚ್ಚೆಮ್ ನಾಯಕ, ಬಂಜೆ ತೊಟ್ಟಿಲು, ವರದಕ್ಷಿಣೆ, ಇತ್ಯಾದಿ ನಾಟಕಗಳನ್ನು ರಂಗಭೂಮಿಯ ಮೇಲೆ ನಟಿಸಿ ಪ್ರೇಕ್ಷಕರ ಆದರಾಭಿಮಾನಗಳಿಗೆ ಪಾತ್ರರಾಗಿ ಜನವಿತ್ತ ಪ್ರಶಸ್ತಿಗಳನ್ನು ಸ್ವೀಕರಿಸಿದರು.

ಶಿವಪೂಜಿ ಚಂದ್ರಪ್ಪ ಓದಿದ್ದು ಕೇವಲ ಆರನೇ ತರಗತಿ. ತಮ್ಮ ಹದಿನಾರನೇ ವಯಸ್ಸಿನಲ್ಲಿ ರಂಗಭೂಮಿಗೆ ಪ್ರವೇಶ ಮಾಡಿ ಸುಮಾರು ೨೦ರಿಂದ ೮೦ ದೊಡ್ಡಾಟಗಳನ್ನು ಪ್ರದರ್ಶಿಸಿದ ಕೀರ್ತಿ ಅವರದು. ೧೦೦ಕ್ಕೂ ಮಿಕ್ಕ ಪೌರಾಣಿಕ, ಸಾಮಾಜಿಕ, ನಾಟಕಗಳಲ್ಲಿ ಅಭಿನಯಿಸಿ ಉತ್ತರ ಕರ್ನಾಟಕದಲ್ಲಿ ಹೆಸರು ವಾಸಿಯಾದರು. ಹೃದಯ ಮಿಲನ, ಗೌರಿಗೆದ್ದಳು, ಭಕ್ತ ಮಾರ್ಕಂಡೇಯ, ಸುಧಾಮ ನಾಟಕಗಳು ಅವರನ್ನು ಉನ್ನತ ಮಟ್ಟಕ್ಕೆ ಏರಿಸಿದ ನಾಟಕಗಳು.

ಬಾರಿಕರ ಲಿಂಗಮ್ಮ ೮೫ ವರ್ಷದ ಹಿರಿಯ ರಂಗ ಕಲಾವಿದೆ. ೭೦ವರ್ಷಗಳ ಹಿಂದೆ ನಾಣಿಕೆರೆ (ನಾರಾಯಣದೇವರ ಕೆರೆ) ಹಾಗೂ ಸುತ್ತಲಿನ ಕೆಲವು ಹಳ್ಳಿಗಳಲ್ಲಿ ತಮ್ಮ ಹವ್ಯಾಸಕ್ಕಾಗಿ 'ಕೃಷ್ಣ ತುಲಾಭಾರ", "ಪ್ರಮೀಳ ದರ್ಬಾರ", "ಶಾಕುಂತಲಾ" ಮೊದಲಾದ ನಾಟಕಗಳಲ್ಲಿ ಅಭಿನಯಿಸಿ, ಪ್ರಸಿದ್ಧಿ ಪಡೆದವರು.

ಇವರ ಮಗ ಡಾ.ಬಿ.ಅಂಬಣ್ಣನವರು ತಮ್ಮ ತಾಯಿಯ ಹೆಸರಿನಲ್ಲಿ ದತ್ತಿ ಸ್ಥಾಪಿಸಿ ರಂಗ ಚಟುವಟಿಕೆಗಳಿಗೆ ಈಗಲೂ ಪ್ರೋತ್ಸಾಹ ನೀಡುತ್ತಿದ್ದಾರೆ.

೧೫೦ಕ್ಕೂ ಹೆಚ್ಚು ನಾಟಕಗಳಿಗೆ ನಿರ್ದೇಶನ ಹಾಗೂ ೧೦೦ಕ್ಕೂ ಮಿಕ್ಕ ನಾಟಕಗಳಲ್ಲಿ ಅಭಿನಯ ನೀಡಿದ ವಿ.ಶಂಭುನಾಥ ಪಾಟೀಲರು ವಂಶ ಪಾರಂಪರ್ಯದಿಂದ ಬಂದ ಕಲೆಯನ್ನೇ ಕೈಗೆತ್ತಿಕೊಂಡರು. ಸ್ತ್ರೀ ರತ್ನ, ಕಮಲಾಕ್ಷಿ, ಆದರ್ಶ ಪ್ರೇಮ, ರಕ್ತರಾತ್ರಿ, ಹೇಮರೆಡ್ಡಿ ಮಲ್ಲಮ್ಮ, ಭೀಷ್ಮ ಪ್ರತಿಜ್ಞೆ, ಜಗಜ್ಯೋತಿ ಬಸವೇಶ್ವರ ಇತ್ಯಾದಿ ನಾಟಕಗಳಲ್ಲಿ ವಿ.ಶಂಭುನಾಥ ಅಭಿನಯಿಸಿ ಖ್ಯಾತಿ ಪಡೆದಿದ್ದಾರೆ.

ಹನುಮಂತಮ್ಮ ತಳವಾರ ತಮ್ಮ ಕಂಚಿನ ಕಂಠದಿಂದ ಅಮೋಘ ಅಭಿನಯದಿಂದ ನಾಲ್ಕು ದಶಕಗಳ ಕಾಲ ಸುತ್ತಲಿನ ನೂರೆಂಟು ಹಳ್ಳಿಗಳಲ್ಲಿ ಖ್ಯಾತಿವೆತ್ತ ನಟಿ. ಮನೆಮಗಳು, ಹೀಗ್ಯಾಂಗಾತು?, ಸತಿ ಸಂಸಾರದ ಜ್ಯೋತಿ, ಸುರುಪುರದ ವೆಂಕಟಪ್ಪ ನಾಯಕ, ರತ್ನ ಮಾಂಗಲ್ಯ, ಇತ್ಯಾದಿ ನಾಟಕಗಳು ಇವರಿಗೆ ಕೀರ್ತಿಯನ್ನು ತಂದು ಕೊಟ್ಟವು.

''ರಕ್ತ ರಾತ್ರಿ''ಗಾಗಿಯೇ ಕೋಗಳಿ ಪಂಪಣ್ಣ ಮೈದಳೆದಂತೆ ತೋರುತ್ತಾರೆ. ನೂರಾರು ನಾಟಕಗಳಲ್ಲಿ ಅವರು ಅಭಿನಯಿಸಿದ್ದರೂ ರಕ್ತರಾತ್ರಿಯ ಖ್ಯಾತಿಯನ್ನು ಬೇರೆ ನಾಟಕಗಳು ತಂದು ಕೊಡಲಿಲ್ಲ. ಅವರ ರಕ್ತ ರಾತ್ರಿಯ ಜನಪ್ರಿಯತೆ ಎಷ್ಟೆಂದರೆ ಪಂಪಣ್ಣನವರು ಯಾವುದಾದರೂ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿದರೆ ಅಭಿಮಾನಿಗಳು ಅವರ ಭೀಮ ಏಕಪಾತ್ರಾಭಿನಯಕ್ಕಾಗಿ ಒತ್ತಾಯಿಸುತ್ತಾರೆ. ರಕ್ತರಾತ್ರಿಯ ದೃಶ್ಯ ಪ್ರೇಕ್ಷಕರ ಮುಂದೆ ಬಂದು ನಿಲ್ಲುತ್ತದೆ. ಕೂಡಲೇ ಪ್ರೇಕ್ಷಕರು ಕಿವಿಗಡಿಚಿಕ್ಕುವ ಹಾಗೆ ಚಪ್ಪಾಳೆ ತಟ್ಟುತ್ತಾರೆ.

ರಕ್ತರಾತ್ರಿ ನಾಟಕದಲ್ಲಿ ಅಶ್ವತ್ಥಾಮ- ಎಲಿವಾಳ ಸಿದ್ದಯ್ಯ. ಶಕುನಿ- ಉಲವತ್ತಿ ವೀರಣ್ಣ. ಭೀಮ- ಏಣಗಿ ಕಾಸಿಂ ಸಾಬ್, ಕೋಗಳಿ ಪಂಪಣ್ಣ. ದ್ರೌಪತಿ- ಸುಭದ್ರಮ್ಮ ಮನ್ಸೂರು. ಭಾನುಮತಿ-ಪಿ.ಪದ್ಮ ಕೂಡ್ಲಿಗಿ. ಉತ್ತರೆ- ಕೆ.ನಾಗರತ್ನ ಮರಿಯಮ್ಮನಹಳ್ಳಿ. ಮದಹಂಸಿ-ಆದವಾನಿ ವೀಣಾ, ಎಸ್.ರೇಣುಕಾ. ರಕ್ತರಾತ್ರಿಯು ೧೦೧ ಸಾರಿ ಪ್ರದರ್ಶನ ನೀಡಿ ದಾಖಲೆ ನಿರ್ಮಿಸಿದ ಕೀರ್ತಿ ಪಂಪಣ್ಣನವರದು. ಚಿತ್ರಾಂಗದ ಕಿತ್ತೂರು ಚೆನ್ನಮ್ಮ, ಕುರುಕ್ಷೇತ್ರದ ಬಾಣಸಿಗ ಭೀಮ, ಮಾತಂಗಿ ಕನ್ಯೆ, ಮುಂತಾದವು ಬಹುಮುಖ್ಯವಾದವು. ಇಂದು ರಂಗಮಂಚದ ಮೇಲೆ ರಕ್ತರಾತ್ರಿಯ ಭೀಮನ ಪಾತ್ರದಲ್ಲಿ ಕೋಗಳಿ ಪಂಪಣ್ಣನವರನ್ನು ನೋಡುವುದೆಂದರೆ ಉತ್ತರ ಕರ್ನಾಟಕದ ಜನರಿಗೆ ಅತ್ಯುತ್ಸಾಹ.

ಕುರುಕ್ಷೇತ್ರದ ಶಕುನಿ ಪಾತ್ರಕ್ಕೆ ಉಲವತ್ತಿ ವೀರಣ್ಣನದು ಹೇಳಿ ಮಾಡಿಸಿದ ವ್ಯಕ್ತಿತ್ವ. ಸಾವಿರ ವೀಕ್ಷಕರಿಗೆ ಮೋಡಿ ಮಾಡಿದ ಅವರು ಆಕರ್ಷಕ ಸಂಭಾಷಣೆಗಳು ಇತರ ಪೌರಾಣಿಕ ನಾಟಕಗಳಿಗಿಂತ ಭಿನ್ನವಾಗಿಯೇ ಸಮರ್ಥವಾಗಿ ಇವೆ. ಅಂತೆಯೇ ಕಂದಗಲ್ಲರ ರಕ್ತರಾತ್ರಿಯ ಶಕುನಿ ಪಾತ್ರಕ್ಕೆ ಅದ್ವಿತೀಯ ಜೀವಕಳೆಯನ್ನು

ತಂದು ಕೊಟ್ಟ ಕೀರ್ತಿ ಅವರದು. ಕುರುಕ್ಷೇತ್ರ, ಬಾಣಸಿಗನ ಭೀಮ, ಮುಂತಾದ ನಾಟಕಗಳಲ್ಲಿ ಸಮರ್ಥವಾಗಿ ಅಭಿನಯಿಸಿ ರಂಗಭೂಮಿಯ ಮೇರು ನಟ ಎನ್ನಿಸಿದ್ದಾರೆ.

ಮಣೆಗಾರ ಹನುಮಂತಮ್ಮ ಹಳ್ಳಿಗಳಲ್ಲಿ ನಟಿಸುತ್ತಿದ್ದ ಈ ಪ್ರಸಿದ್ಧ ರಂಗತಾರೆ ಓದು ಕಲಿತದ್ದು ೩ನೇ ಫಾರಂನವರೆಗೆ. ಅಭಿನಯಿಸಿದುದು ನೂರಾರು ನಾಟಕಗಳಲ್ಲಿ. ಇವರನ್ನು ವರಿಸಿದ ಗಂಗಾವತಿ ಪಂಪನಗೌಡ ಎಂಬುವವರು ಇವರಿಗಾಗೇ ಒಂದು ನಾಟಕ ಕಂಪನಿ ಮಾಡಿಕೊಟ್ಟರು. ಕಂಪನಿಯನ್ನು ಕಟ್ಟಿಕೊಂಡು ಈ ಭಾಗದ ಎಲ್ಲ ಮೂಲೆ ಮೂಲೆಗೆ ಅಲೆದು ಇವರು ಜನಪ್ರಿಯರಾಗಿದ್ದಾರೆ.

ಚಿಕ್ಕ ವಯಸ್ಸಿನಲ್ಲೇ ರಂಗಕ್ಕೆ ಧುಮುಕಿದ ವೃತ್ತಿ ಕಲಾವಿದೆ. ಸೆರೆಗಾರ ಸುವರ್ಣಮ್ಮ ಮಲ್ಲಿಕಾರ್ಜುನನ ಪಾತ್ರದಲ್ಲಿ ಹೆಚ್ಚು ಪ್ರಸಿದ್ಧರಾಗಿದ್ದು ಇವರ ಮಕ್ಕಳಾದ ಶ್ಯಾಮಲ ಮತ್ತು ಎಸ್.ರೇಣುಕಾ ಸಹ ತಾಯಿಯ ವೃತ್ತಿಯನ್ನು ಮುಂದುವರಿಸಿದರು. ಶ್ಯಾಮಲಾ ಕೆಲವೇ ವರ್ಷಗಳಲ್ಲಿ ಅಭಿನಯಿಸುವುದನ್ನು ನಿಲ್ಲಿಸಿದರು. ನಂತರ ಹಲವು ವರ್ಷಗಳ ಕಾಲ ರೇಣುಕಾ ನಟಿಸುತ್ತಿದ್ದು ಪ್ರತಿಭಾವಂತ ಕಲಾವಿದೆ ಎನಿಸಿಕೊಂಡಿದ್ದಾರೆ. ಪಾತ್ರಕ್ಕೆ ಜೀವ ತುಂಬುವಲ್ಲಿ ಈಕೆ ಎತ್ತಿದ ಕೈ ಆದರೆ ಇತ್ತೀಚಿನ ವರ್ಷಗಳಲ್ಲಿ ರೇಣುಕಾಗೆ ನಟನೆಯಲ್ಲಿ ಆಸಕ್ತಿ ಕಡಿಮೆಯಾಗಿರುವುದು ಕಲಾರಂಗಕ್ಕೆ ಆದ ನಷ್ಟದ ಸಂಗತಿ ಎನ್ನಬಹುದಾಗಿದೆ.

ಪತ್ರಕರ್ತರಾಗಿ, ನಾಟಕಕಾರರಾಗಿ, ನಟರಾಗಿ, ಮೆರೆದ ಎ.ಚಿದಾನಂದಗೌಡರು ಓದಿದ್ದು ಎಂ.ಎ. ಅಭಿನಯಿಸಿದ್ದು ಸುಮಾರು ಒಂದು ನೂರು ನಾಟಕಗಳಲ್ಲಿ. ''ಸೂರ್ಯಶಿಕಾರಿ'' ನಾಟಕದಲ್ಲಿಯ ಹಯಗ್ರೀವ ಪಾತ್ರಕ್ಕೆ ಹೆಸರು ಪಡೆದವರು. ಅವರ ಔಚಿತ್ಯಪೂರ್ಣ ಅಭಿನಯ ಗ್ರಾಮೀಣ ಪ್ರೇಕ್ಷಕರಿಗೆ ಹೆಚ್ಚು ಆಕರ್ಷಣೀಯವಾಗಿದ್ದವು. ನೀಲಿ ಕುದುರೆ, ಸಂಧ್ಯಕಾಲ, ಸದ್ದು ವಿಚಾರಣೆ ನಡೆತಿದೆ, ಬಾವಿ ಕಳೆದಿದೆ ಮೊದಲಾದ ನಾಟಕಗಳಲ್ಲಿನ ಅಭಿನಯ ಮಾಡಿ ಪ್ರೇಕ್ಷಕರಿಗೆ ದಂಗುಬಡಿಸಿದ್ದವು.

ಮ.ಬ.ಸೋಮಣ್ಣನವರು ಉತ್ತಮ ನಟರು. ಉತ್ತಮ ಸಂಸ್ಕಾರದಿಂದ ಬೆಳೆದ ಇವರು ಗಾಯಕರೂ, ನಾಟಕಕಾರರೂ ಆಗಿ ಮೆರೆದವರು. ನೂರಾರು ರಂಗಗೀತೆಗಳನ್ನು ರಚಿಸಿದ್ದಾರೆ. ಅವರ ಅನೇಕ ಹಾಡುಗಳು ರೇಡಿಯೋದಲ್ಲಿ ಪ್ರಸಾರವಾಗಿದೆ. ''ಅಂತಶ್ಚಕ್ಷು ತೆರೆಯಿತು'' ನಾಟಕದ ಆತ್ಮಾರಾಮ ''ಸಮರ್ಪಣ'' ನಾಟಕದ ಕತ್ತಲೆ ಬೆಳಕು, ನಾಟಕದ ಶ್ರೀ ಕಾಂತಪ್ಪ, ಸ್ತ್ರೀರತ್ನ ನಾಟಕದ ಕಥಾನಾಯಕ, ಅರ್ಪಣ ನಾಟಕದ ವಸಂತ, ಹರಿದ್ರಾ ಕುಂಕುಮದ ರಾಮಾಯಣ, ''ಜ್ವಾಲಾ''ನಾಟಕದ ಯುವರಾಜ ವಿಚಿತ್ರ ವರದಾನದಲ್ಲಿ ಭಿಕ್ಷುಕ ''ಶಿವನೊಲುಮೆಯ ಶಿಶು'' ನಾಟಕದ ಶಿವದೇವ ''ಇಂಗತಿಂದ ಮಂಗ'' ಮತ್ತು ಕೆಟ್ಟ ಮೇಲೆ ಬುದ್ಧಿ ಬಂತು ನಾಟಕಗಳಲ್ಲಿ ಹಾಸ್ಯ ಪಾತ್ರಗಳು ಅತ್ಯಂತ ಜನ ಮೆಚ್ಚುಗೆ ಗಳಿಸಿದ ಪಾತ್ರಗಳಾಗಿವೆ.

ಶಿರವಾರ ಮಠದ ಶರಣಯ್ಯನವರು ಕಲಾಪ್ರೇಮಿಗಳು ಹಾಗೂ ಕಲಾವಿದರೂ ''ಶ್ರೀ ಜಗಜ್ಯೋತಿ ಬಸವೇಶ್ವರ'' ನಾಟಕದಲ್ಲಿ ಪರಮೇಶ್ವರ ಮತ್ತು ಮಧುವರಸನ ಪಾತ್ರಗಳನ್ನು ಹಾಗೂ ''ರತ್ನ ಸಿಂಹಾಸನ'' ನಾಟಕದಲ್ಲಿ ತಿಮ್ಮಾಗಾರ್ಯರ ಪಾತ್ರವನ್ನು ನಟಿಸಿ ಜನ ಮನ್ನಣೆ ಪಡೆದಿದ್ದಾರೆ.

ಇವರಲ್ಲದೆ ಜಿಲ್ಲೆಯ ಮರಿಯಮ್ಮನಹಳ್ಳಿ ಹಾಗೂ ಕೂಡ್ಲಿಗಿಯಲ್ಲಿ, ವಿರುಪಾಪುರ, ಬಳ್ಳಾರಿಯಲ್ಲಿ ವೃತ್ತಿ ರಂಗಕಲಾವಿದೆಯರ ತವರೆಂದೇ ಖ್ಯಾತಿಯಾಗಿದೆ. ಮರಿಯಮ್ಮನಹಳ್ಳಿಯಂಥ ಸಣ್ಣ ಹಳ್ಳಿಯಲ್ಲಿ ಐವತ್ತು ಜನ ರಂಗಕಲಾವಿದೆಯರು ಇದ್ದಾರೆ. ಕೂಡ್ಲಿಗಿಯಲ್ಲಿ ನೂರಾರು ಕಲಾವಿದರು ಇದ್ದು, ಇದು ರಂಗತವರು ಎಂದೇ ಖ್ಯಾತಿಯಾಗಿದೆ.

ಎಂ.ಅಂಬುಜ, ಹೆಚ್.ಶಾಂತಮ್ಮ, ಆರ್.ನಾಗವೇಣಿ, ಎ.ಚಂದ್ರಕಲಾ ಇವರೆಲ್ಲಾ ೧೯೬೦ರ ಸುಮಾರಿಗೆ ರಂಗಭೂಮಿಗೆ ನಟಿಯರಾಗಿ ಬಂದವರು. ಇದಕ್ಕೂ ಮುಂಚೆ ೧೯೬೫ರಲ್ಲಿ ತಳವಾರ ಹನುಮಂತಮ್ಮ, ಸೆರೆಗಾರ ಗಂಗಮ್ಮ, ಚಿಕ್ಕ ತಾಯಿ ಸುಮತಮ್ಮನಂಥಹ ಕಲಾವಿದೆಯರು ನಟಿಸತೊಡಗಿದರು. ಬೂದಾಳ ತಿಮ್ಮಯ್ಯ, ತಳವಾರ ಹುಲಿಗೆಮ್ಮನವರು ೧೯೬೫ರಲ್ಲಿ ಮುಖಕ್ಕೆ ಬಣ್ಣಹಚ್ಚಿಕೊಂಡರು.

ಭೀಮನ ಪಾತ್ರದಲ್ಲಿ ಹೆಸರುವಾಸಿಯಾಗಿದ್ದವರು ಸುಮತೆಮ್ಮ. ಪೌರಾಣಿಕ ನಾಟಕಗಳಲ್ಲಿ ಕ್ಲಿಷ್ಟ ಮಾತುಗಳನ್ನು ಪಟಪಟನೆ ಹೇಳುತ್ತಿದ್ದ ಮತ್ತೊಬ್ಬ ಖ್ಯಾತ ನಟಿ ಗಂಗಮ್ಮ, ಜೋಗಿ ಬಸಮ್ಮ ಎಲ್ಲ ಬಗೆಯ ನಾಟಕಗಳಲ್ಲಿ ಹೆಸರಾದವರು. ಪಾತ್ರಕ್ಕೆ ಅಂದವಾಗಿ ಒಪ್ಪುತ್ತಿದ್ದ, ಅಷ್ಟೇ ಉತ್ತಮವಾಗಿ ಅಭಿನಯಿಸುತ್ತಿದ್ದ ತಿಮ್ಮಪ್ಪ ದೀರ್ಘಕಾಲ ಇದೇ ವೃತ್ತಿಯನ್ನು ಅವಲಂಬಿಸಿದರು. ಇವರ ಮಗಳು ಶಾರದ ಹಾಲಿ ಅಭಿನಯಿಸು ತ್ತಿರುವ ನಟಿ. ತಿಮ್ಮಪ್ಪ ಮಾತಾಡಿದರೆ ಸಾಕು ವೇದಿಕೆಯಲ್ಲೆಲ್ಲಾ ಸ್ತಬ್ಧ. ಮತ್ತೊಬ್ಬ ಪ್ರೌಢ ಅಭಿನಯದ ನಟಿ ನಂದಿಹಳ್ಳಿ ರಾಮಕ್ಕ. ಬೇಗ ವೃತ್ತಿಯಿಂದ ನಿವೃತ್ತಿಹೊಂದಿ ಹೊಲಗದ್ದೆ ಕೆಲಸಗಳಿಗೆ ಕೂಲಿ ಹೋಗ ಲಾರಂಭಿಸಿದರು. ಕನಕಪ್ಪ ಎಂಬ ವೃತ್ತಿ ನಟ ಮಕ್ಕಳನ್ನು ಓದಿಸಿ ನೌಕರಿ ಕೊಡಿಸಿದ್ದಾರೆ. ಈಗ ಅವರದು ಸ್ವಲ್ಪಮಟ್ಟಿನ ಸಂತೃಪ್ತ ಜೀವನ.

ಅರಸಿಕೇರಿ ಯಲ್ಲಮ್ಮ ಸಾಮಾಜಿಕ, ಪೌರಾಣಿಕ ನಾಟಕಗಳೆರಡರಲ್ಲೂ ಪ್ರಸಿದ್ಧಿ ಹೊಂದಿದವರು. ದೀರ್ಘಕಾಲ ರಂಗದ ಮೇಲಿದ್ದವರು. ಇವರ ಮಕ್ಕಳಾದ ಪಾರ್ವತಿ ಮತ್ತು ಎ.ರೇಣುಕಾ ಅವರನ್ನು ನಟಿಯ ರನ್ನಾಗಿ ತರಬೇತಿಗೊಳಿಸಿದರು. ಎಲ್ಲಿಂದಲೋ ಬಂದು ಮರಿಯಮ್ಮನಹಳ್ಳಿಯಲ್ಲಿ ನೆಲೆಸಿದ ಆರ್.ನಾಗವೇಣಿ, ಅನುರಾಧ ಮೈಸೂರು ಶ್ರೇಷ್ಠ ದರ್ಜೆಯ ನಟಿಯರು ಎಂದೆನ್ನಿಸಿಕೊಂಡಿದ್ದಾರೆ. ಗಾಯನ, ಅಭಿನಯ ಎರಡರಲ್ಲೂ ಪರಿಣತಿ ಇದ್ದು ಉಜ್ವಲ ಭವಿಷ್ಯವಿದ್ದ ಮತ್ತೊಬ್ಬ ಪ್ರತಿಭಾವಂತ ಯುವ ನಟಿ ಯಶೋಧ. ೧೫ ವರ್ಷಗಳ ಹಿಂದೆ ನಿಗೂಢವಾಗಿಯೇ ವಿಷ ಕುಡಿದರು. ಹಾಸ್ಯ ಪಾತ್ರವೆಂದರೆ ಯಶೋಧ ಹೇಳಿ ಮಾಡಿಸಿದ ನಟಿ. ಜಿಂಕೆಯಂತೆ ಹಾರುವಂಥ ನಟಿ ತೆಳ್ಳಗೆ, ಬಳ್ಳಿಯ ಹಾಗೆ ಇದ್ದು ವೇದಿಕೆಗೆ ಬಂದರೆ ನೋಡುಗರಿಗೆ ಮೋಡಿ ಹಾಕುತ್ತಿದ್ದಳು.

ಕೂಡ್ಲಿಗಿ ನಾಗವೇಣಿ ಎಂದರೆ ಹಳ್ಳಿಗಳಲ್ಲಿ ನಟಿಸುವುದರೊಂದಿಗೆ ಕೆಲ ಕಾಲ ನಾಟಕ ಕಂಪನಿಗಳಲ್ಲೂ ಇದ್ದರು. ಗಂಟಿ ಹುಲಿಗೆಮ್ಮ, ಗಂಟಿ ಅಂಜಿನಮ್ಮ ಎಂಬುವರು ಅನಕ್ಷರಸ್ಥ ಪರಂಪರೆಯ ಮತ್ತಿಬ್ಬರು

ನಟಿಯರು. ಮುಗಲಿ ಬಸಮ್ಮ ಎಂಬ ಉತ್ತಮ ಕಲಾವಿದೆ, ಅನಾರೋಗ್ಯದಿಂದ ನರಳಿ ನರಳಿ ಸತ್ತರು. ಎಚ್.ಶಾಂತಮ್ಮ ಮತ್ತು ಜಿ.ಶ್ಯಾಮಲ ಎಂಬ ಅಕ್ಕ ತಂಗಿಯರು ೨೦ ದಶಕಗಳ ಕಾಲ ನಟಿಸಿ ನಿವೃತ್ತಿ ಹೊಂದಿದರು. ಬರೀ ಕೆಲವೇ ದಿನಗಳು ನಟಿಸಿದರೂ ತಮ್ಮ ಛಾಪು ಮೂಡಿಸಿದವರು ಪದ್ಮಾವತಿ, ಚಂದ್ರಕಲಾ, ಮತ್ತು ಕಾಳಿಂಗಮ್ಮ. ಮಧ್ಯಕ್ಕೆ ನಿಲ್ಲಿಸಿದವರು ಶೈಲಶ್ರೀ, ಕೆ.ಅಂಬುಜ, ಶ್ಯಾಮಲಾ, ಕಲಾವತಿ, ಮುಂತಾದವರು.

ಹಾಲಿ ನಟಿಸುತ್ತಿರುವ ನಟಿಯರೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ಅಲ್ಲದೆ ಪಕ್ಕದ ಜಿಲ್ಲೆಯಲ್ಲೂ ಹೆಸರುವಾಸಿಯಾದ ಕೆ. ನಾಗರತ್ನ, ಪಿ.ಪದ್ಮಾ, ಎನ್.ರೇಣುಕಾ, ಎಸ್.ರೇಣುಕಾ, ಜಿ.ಶ್ಯಾಮಲಾ, ಜಿ.ಶಾಂತ, ಟಿ.ರೇಣುಕಾ, ಸಾವಿತ್ರಿ, ಸರ್ವಮಂಗಳ, ಭಾಗ್ಯ, ಮಾಯಮ್ಮ, ಅಂಜಿನಮ್ಮ, ಗೀತಾ, ಬಿ.ಶಿವಕುಮಾರಿ, ಮುಂತಾದ ಕಲಾವಿದೆಯರು. ಪಾದಾರ್ಪಣ ಮಾಡಿ ಮರೆಯಲಾಗದ ಮೈಲುಗಲ್ಲುಗಳಂತೆ ಶಾಸನವಾಗಿ ಉಳಿದಿದ್ದಾರೆ.

ಕಣವಿಹಳ್ಳಿ ರಾಮಚಂದ್ರಪ್ಪ ಶೆಟ್ಟಿಯವರಿಗೆ ಬಯಲಾಟದ ಪಾತ್ರ ಮಾಡುವುದೆಂದರೆ ಎಲ್ಲಿಲ್ಲದ ಹಿಗ್ಗೇ ಸರಿ. ಬಿ.ಕೆ.ಕೊಟ್ರಯ್ಯ ಬಯಲಾಟದಿಂದ ಆರಂಭಿಸಿ ನಂತರ ಪೌರಾಣಿಕ ನಾಟಕಗಳ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದರು. ಕುರುಬರ ಕರಿಯಪ್ಪ ಬಯಲಾಟದ ಶುಂಭ, ನಿಶುಂಭ ಪಾತ್ರದಲ್ಲಿ ಹೆಸರುವಾಸಿಯಾಗಿದ್ದಾರೆ. ಬಯಲಾಟವನ್ನು ಸಂಘಟಿಸುತ್ತಿದ್ದ ಹಕಾರಿ ಹನುಮಂತಪ್ಪ ಈ ಭಾಗದಲ್ಲಿ ಸಂಗ್ಯಾ-ಬಾಳ್ಯ ದಪ್ಪಿನಾಟಕವನ್ನು ಮೊದಲು ರಂಗಕ್ಕೆ ತಂದ ಕಲಾವಿದ. ಸ್ವತಃ ಅಭಿನಯಿಸಿ ನಾಟಕಗಳನ್ನಾಡಲು ಹುರಿದುಂಬಿಸುತ್ತಿದ್ದವರೆಂದರೆ ಬಳ್ಳಾರಿ ರಾಮಣ್ಣ.

ಜಿ.ಮೈಲಾರಪ್ಪನವರು ಮೂಲತಃ ಮರಿಯಮ್ಮನಹಳ್ಳಿಯವರು. ಒಂದು ಕಾಲದಲ್ಲಿ ಮಹಿಳಾ ರಂಗಕಲಾವಿದರು ಧೈರ್ಯದಿಂದ ರಂಗಕ್ಕೆ ಬರಲು ಇವರ ಪ್ರೋತ್ಸಾಹವೇ ಕಾರಣ. ಶಾಲೆಯ ಮಕ್ಕಳಿಗೆ ರಜಾ ದಿನಗಳಲ್ಲಿ ನಾಟಕಗಳನ್ನು ಕಲಿಸಿ ಚಿಕ್ಕ ವಯಸ್ಸಿನಲ್ಲಿಯೇ ಈ ರಂಗದ ಬಗ್ಗೆ ಆಸಕ್ತಿ ಬರಲು ಕಾರಣರಾದವರು. ಮೈಲಾರಪ್ಪ, ಹೇಮರೆಡ್ಡಿ ಮಲ್ಲಮ್ಮ, ರಕ್ತರಾತ್ರಿಯಂಥ ನಾಟಕಗಳ ಪ್ರದರ್ಶನಗಳಿಗೆ ಮರಿಯಮ್ಮನ ಹಳ್ಳಿಯಲ್ಲಿ ಏರ್ಪಾಟು ಮಾಡಿ ಸುಭದ್ರಮ್ಮ ಮನ್ಸೂರು, ಎಲಿವಾಳ ಸಿದ್ದಯ್ಯ ಸ್ವಾಮಿ ಅವರಂಥ ಪ್ರಖ್ಯಾತ ಕಲಾವಿದರು ಮರಿಯಮ್ಮನಹಳ್ಳಿಗೆ ಹಗಲೆಲ್ಲಾ ಬರಲು ಕಾರಣರಾದರು. ಸುಭದ್ರಮ್ಮ ಹಾಗೂ ಸಿದ್ದಯ್ಯ ನವರಿಗೆ ಮರಿಯಮ್ಮನಹಳ್ಳಿ ತವರು ಮನೆಯಾಯಿತು. ಕನ್ನಡ ರಂಗಭೂಮಿಯ ದಂತಕಥೆಯಾಗಿರುವ ಸಿದ್ದಯ್ಯ ಸ್ವಾಮಿಯವರ ಕೊನೆಗಾಲದ ಕಾರ್ಯಕ್ಷೇತ್ರವೇ ಬಳ್ಳಾರಿ ಜಿಲ್ಲೆ. ಅವರ ಪತ್ನಿ ಮಕ್ಕಳು ಈ ಊರಿನಲ್ಲೇ ನೆಲೆನಿಂತರು. ಮೈಲಾರಪ್ಪನವರ ರಂಗಸೇವೆಯ ಪ್ರತಿಫಲವಾಗಿ ನಾಟಕ ಅಕಾಡೆಮಿಯು ೧೯೯೮ರ ಸಾಲಿನ "ಪದ್ದಣ್ಣಶ್ರಮ ಪ್ರಶಸ್ತಿ"ಯನ್ನು ನೀಡಿ ಗೌರವಿಸಿದೆ.

ಬಾಲ್ಯದಿಂದಲೂ ಬಯಲಾಟ ನಾಟಕಗಳಲ್ಲಿ ಅಭಿನಯಿಸುತ್ತಾ ಬಂದ ಖಾದರ್ ಸಾಬ್ ಅಭಿನಯ, ಅರ್ಥ ಹಚ್ಚುವುದು, ವಾದ್ಯ ಬಾರಿಸುವುದು, ಭಾಗವತಿಕೆ ಹೀಗೆ ಎಲ್ಲಾ ವಿಷಯದಲ್ಲೂ ಪಾರಂಗತರು. "ಇಮಾಂಸಾಬ್‌ಗೂ ಗೋಕುಲಾಷ್ಟಮಿಗೂ ಎಲ್ಲಿಂದೆಲ್ಲಿಯ ಸಂಬಂಧ ಎಂಬ ಗಾದೆಯನ್ನೇ ಸುಳ್ಳು ಮಾಡಿದ ಸಾಧನೆ ಖಾದರ್‌ಸಾಬ್ ಅವರದು. ಉಪೇಂದ್ರಚಾರ್ ಕೊಟಗಿ ಲಕ್ಷ್ಮಣಗೌಡ, ಹಕಾರಿ ಹನುಮಂತಪ್ಪ, ಗುರುಬಸಪ್ಪ, ಕುರುಬರ ಹುಚ್ಚಪ್ಪ, ಸಣ್ಣ ಈರಣ್ಣ, ಬಿ.ಎಂ.ಎಸ್.ರೇವಣಸಿದ್ದಯ್ಯ, ಗುಂಡೂರು ಫಕ್ಕೀರಪ್ಪ, ಬಳಿಗಾರ ಶಾಂತಪ್ಪ, ಪೂಜಾರಿ ಕೃಷ್ಣಪ್ಪ, ನಂದಿಹಳ್ಳಿ ಸೋಮಪ್ಪ, ಕೆ.ಮಾರೆಪ್ಪ, ಹಾಲಪ್ಪ, ಪತ್ರಿ ಬಸಪ್ಪ, ಕೋಟೆ ನಾಗಪ್ಪ, ಮುದ್ದಾಪುರದ ಶಿವಲಿಂಗಪ್ಪ, ಕುರೇನ ಕೊಪ್ಪದ ಮಲ್ಲಿಕಾರ್ಜುನಸ್ವಾಮಿ, ಪಾಂಡುರಂಗಶೆಟ್ಟಿ, ಎಚ್.ರಾಮಕೃಷ್ಣ ಶೆಟ್ಟಿ ಮೊದಲಾದವರು ಈ ಭಾಗದ ರಂಗಚಟುವಟಿಕೆ ಜೀವಂತವಾಗಿರಲು ಅಮೂಲ್ಯವಾದ ಕಾಣಿಕೆ ನೀಡಿದ್ದಾರೆ.

ಬಳ್ಳಾರಿ ಜಿಲ್ಲೆಯ ರಂಗಭೂಮಿ ಎಂದಾಕ್ಷಣ ಮೊತ್ತ ಮೊದಲು ನೆನಪಿಗೆ ಬರುವ ಊರು ಮರಿಯಮ್ಮನ ಹಳ್ಳಿ. ಬಹುಜನ ಕಲಾವಿದರು, ರಂಗಾಸಕ್ತರಿಂದ, ರಂಗತಜ್ಞರುಗಳಿಂದ ಈ ಊರು "ರಂಗಕಲೆಗಳ ತವರೂರು". ನಾಟಕಗಳ ರಾಜಧಾನಿ ಎಂದು ಕರೆಸಿಕೊಂಡಿದೆ. ನಾಟಕವೇ ಈ ಊರಿನಲ್ಲಿ ಪ್ರಧಾನವಾಗಿದೆ. ಕಲೆಯೇ ಈ ಊರವರ ಜೀವನಾಡಿಯಾಗಿದೆ.

ಪ್ರಸ್ತುತವಾಗಿ ಕೂಡ್ಲಿಗಿಯಲ್ಲಿ ಬಿ.ಶಿವಕುಮಾರಿ, ಕೆ.ಸುಶೀಲ, ಕೆ.ಗೀತಾ, ವಿಶಾಲಾಕ್ಷಿ, ಕೆ.ವೆಂಕಮ್ಮ, ಜ್ಯೋತಿ, ಪದ್ಮ, ಡಿಸ್ಕೋ ಪದ್ಮ, ಲಕ್ಷ್ಮಿ, ಮಲಾವತಿ, ಗೌರಮ್ಮ, ಕೆ.ವನಜಾಕ್ಷಿ, ಕವಿತಮ್ಮ, ಸಿ.ಮಹಾದೇವಿ, ಜಿ.ರೇಣುಕಾ, ಜಿ.ಜ್ಯೋತಿ, ಜಿ.ವೆಂಕಮ್ಮ ಪಾಲವನವರ ನಾಗಮ್ಮ, ಕೆ.ವಿಶಾಲಾಕ್ಷಿ, ಬಿ.ನಾಗರತ್ನಮ್ಮ, ಸಿ.ಬಿ.ಓಬಳಮ್ಮ, ಅಂಜಲಿ, ಟಿ.ಭಾರತಿ, ಜಿ.ಗೀತಾ, ಚೌಡಮ್ಮ, ಜಯಮ್ಮ, ವೀರಾಪುರದಲ್ಲಿ ಎ.ಅಂಜಿನಮ್ಮ, ಬಿ.ವಿಜಯಲಕ್ಷ್ಮಿ, ಭಾಗ್ಯ, ಹಟ್ಟಿ ಮಾರಮ್ಮ, ಗೀತಾ ಮುಂತಾದವರು ಇಂದು ಬಯಲಾಟಗಳಲ್ಲಿ ಹೆಚ್ಚಾಗಿ ಅಭಿನಯಿಸುತ್ತಿದ್ದಾರೆ.

ಬೇಸಿಗೆಯ ದಿನಗಳಲ್ಲಿ ಕೈತುಂಬಾ ನಾಟಕವಿರುವ ಈ ಕಲಾವಿದೆಯರಿಗೆ ಮಳೆಗಾಲದಲ್ಲಿ ನಿರುದ್ಯೋಗ. ರೈತರಿಗೆ ಸುಗ್ಗಿ ಸಮಯದಲ್ಲಿ ಯಾವ ನಾಟಕವನ್ನು ಆಡುವುದಿಲ್ಲ. ಇದು ಅರೆವೃತ್ತಿ ಬದುಕೇ ಸರಿ. ಇರುವೆ ಜೇನಿನಂತೆ ಮಳೆಗಾಲದಲ್ಲಿ ಆಹಾರ ಸಂಗ್ರಹಿಸಿಟ್ಟುಕೊಂಡು ಬೇಸಿಗೆಯಲ್ಲಿ ನಾಟಕಗಳಲ್ಲಿ ದುಡಿದದ್ದನ್ನು ಮಳೆಗಾಲದಲ್ಲಿ ನಟಿಯರು ತಮ್ಮ ಮನೆಗಳಲ್ಲಿ ತಮ್ಮ ಹವ್ಯಾಸಿ ಕಲೆಗಳನ್ನು ಕಲಿಯುತ್ತಾ ಜೀವನ ನಡೆಸಿ ಕೊಂಡು ಹೋಗುತ್ತಾರೆ.

ರಂಗನಟಿಯರು ಹಲವಾರು ಪ್ರಯೋಗಾತ್ಮಕ ನಾಟಕಗಳಲ್ಲಿ ಅಭಿನಯಿಸುವ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಹಾಗೂ ನಟಿಸಿದ್ದಾರೆ. ಜೋಕುಮಾರ ಸ್ವಾಮಿ, ಶೀಲಾವತಿ, ದೊಡ್ಡಪ್ಪ, ರಂಗಾಂತರಂಗ,

ವಿಲಾಸ, ಅಣ್ಣ-ತಂಗಿ, ಸಂಗ್ಯಾ-ಬಾಳ್ಯಾ, ಬಾಗಿಲಿಂದಾಚೆಗೆ, ಕಾಡುಕುದುರೆ, ಕೊಟ್ಟರುಣ, ಊರಕೆರೆ, ಕುರುಕ್ಷೇತ್ರ, ರಕ್ತರಾತ್ರಿ, ಕಲಿತ ಕಳ್ಳ, ಗೌಡ್ರ ಗದ್ಲ, ಅಶಾಂತಾ, ಚಿನ್ನದ ಗೊಂಬೆ, ಮುಂತಾದ ನಾಟಕಗಳಲ್ಲಿ ನಟಿಸಿ ತಮ್ಮ ಅಭಿನಯದ ಹರವನ್ನು ವಿಶಾಲಗೊಳಿಸಿದ್ದಾರೆ.

ಕೆ.ವನಜಾಕ್ಷಿ ಅನಕ್ಷರಸ್ಥರಾಗಿದ್ದರೂ ಕಲಿಯುವ ಕಳಕಳಿ ಇರುವುದರಿಂದ ನಾಟಕದ ಸಂಭಾಷಣೆಗಳನ್ನು ಕಂಠ ಪಾಠ ಮಾಡಿಯೋ ಸಂಗ್ಯಾ-ಬಾಳ್ಯ ನಾಟಕದ ಗಂಗಿಯ ಪಾತ್ರವನ್ನು ಸುಮಾರು ೨೦೦ ಸಲ ಮಾಡಿದರೆ, ಸ್ಟೇಷನ್ ಮಾಸ್ಟರ್ ನಾಟಕದ ಗಂಗಿ ಪಾತ್ರ ೪೦೦ ಸಾರೆ ಮಾಡಿ ಈ ಭಾಗದಲ್ಲೆಲ್ಲಾ ಹೆಸರಾಗಿದ್ದಾರೆ.

ಕಾಯಿ ಕೆಡುವ ಚಂದ್ರಪ್ಪ, ವಿಭೂತಿವೀರಣ್ಣ, ವೈ.ಬಸವರಾಜಪ್ಪ ಮುಂತಾದವರು ಚಿನ್ನದ ಗೊಂಬೆ, ಸರ್ಪದ ಸಾಮ್ರಾಜ್ಯ, ದೇವಕತೆ, ಗಿರಿಜಾ ಕಲ್ಯಾಣ, ಹದಗೆಡಿಸಿದ ಹೆಣ್ಣು, ರಂಟೆಯ ಬಂಟ, ಖಾದಿ ಖಾವಿ, ಖಾಕಿ, ದಾಸ ಮೆಚ್ಚಿದ ದೇಸಾಯಿ, ಜಗಜ್ಯೋತಿ ಬಸವೇಶ್ವರ ಮೊದಲಾದ ಹೊಸ ಅಲೆಯ ನಾಟಕಗಳನ್ನು ಹುಟ್ಟು ಹಾಕಿ ರಂಗಭೂಮಿಗೆ ಅಮೋಘ ಸೇವೆ ಸಲ್ಲಿಸಿದ್ದಾರೆ.

೧೯೪೦ರ ಸಂದರ್ಭದಲ್ಲಿ ದ್ರೌಪತಿ ವಸ್ತ್ರಾಪಹರಣ, ರಾಮಾಂಜನೇಯ ಯುದ್ಧ, ಕುರುಕ್ಷೇತ್ರ ಮೊದಲಾದ ಬಯಲಾಟಗಳು ಹಡಗಲಿ, ಹರಪನಹಳ್ಳಿಯ ಸುತ್ತಮುತ್ತ ನಡೆಯುತ್ತಿದ್ದು, ಏರಿ, ಮಾಗಳ ಅನಂತರಪುರ ಮಹಮ್ಮದಲಿ ಸಾಬ್, ಕಾದುರಿ ನಿಂಗಪ್ಪ ಮತ್ತೊಂದು ಮೂಲೆಯ ಮುದೇನೂರು ಗೇಟ್ ಮಲ್ಲಪ್ಪ ಮೂಲಿಮನೆ ಇಮಾಂಸಾಬ್, ಮೊಹಮ್ಮದ್ ಹುಸೇನ್‌ಸಾಬ್ ಇವರೆಲ್ಲಾ ಸೇರಿಯೇ ಇಂಥ ದೊಡ್ಡಾಟಗಳನ್ನು ಆಡುವ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ.

ನಾಟಕಗಳೆಂದರೆ ಆಗಿನ ಬಳ್ಳಾರಿ ಜಿಲ್ಲೆಯ ಭಾಗದಲ್ಲಿ ಬರುವ ಪ್ರತಿಯೊಂದು ಹಳ್ಳಿಗಳಲ್ಲಿ ಹವ್ಯಾಸಿಕಲಾ ಬಳಗದ ಸಂಘಗಳಿವೆ. ಅಕ್ಕಸಾಲಿ ಕಾಳಪ್ಪ, ಗವಿಅಯ್ಯನವರ ವೀರಯ್ಯನವರದು ಹಾಗೂ ಬಸೆಟ್ಟಿ ಶಂಕರಪ್ಪನವರೂ ಆಗಿನ ಪ್ರಮುಖ ನಾಟಕದ ಗೀಳು ಹಚ್ಚಿಕೊಂಡ ಪ್ರಮುಖರು. ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ಮಲ್ಲಮ್ಮನ ಪಾತ್ರಕ್ಕೆ ವೀರಭದ್ರಪ್ಪನವರು, ಸ್ತ್ರೀ ಪಾತ್ರಕ್ಕೆ ಶೀಲಪ್ಪನವರು ಪ್ರಮುಖರು. ರೋಣದ ಸಿದ್ದಲಿಂಗಪ್ಪನವರು, ಕೊಂಬಳಿ ವೀರಭದ್ರಪ್ಪನವರು ಹೆಣ್ಣು ಪಾತ್ರಕ್ಕೆ ಹೆಸರು ವಾಸಿಯಾದವರು. ಮಲ್ಲಮ್ಮನ ಪಾತ್ರದಲ್ಲಿ ಹೆಸರು ಗಳಿಸಿದವರು ರಜಿಯಾ. ಕೊಟ್ಟೂರು ಚೆನ್ನಬಸಪ್ಪ, ಹಿಂಡಿ ಪಂಡಿತ ಸಿದ್ದವೀರಪ್ಪ, ಡೊಂಬಳ ಸಂಕೇಶ, ಏಣಗಿ ಕಾಸಿಂಸಾಬ್, ಅಲಬೂರ್ ರಾಮಲಿಂಗಪ್ಪ ಇವರು ಎಲ್ಲಾ ನಾಟಕಗಳಲ್ಲಿ ನಟರಾಗಿ ನಟಿಸಿದರೆ, ಕಂಪ್ಲಿ ವಸಂತ, ಬೆಂಗಳೂರು ಸರೋಜ, ಕೂಡ್ಲಿಗಿ ಗಂಗಾ ಇವರೆಲ್ಲರೂ ಸ್ತ್ರೀ ಪಾತ್ರಕ್ಕೆ ಕಳೆಕೊಟ್ಟವರು.

ರಂಗಭೂಮಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದ ಅಂದಿನ ಯುವಕರಾದ ಈಟಿ ರಾಮಮೂರ್ತಿ, ಕಪನಾಪುರ ಗುರುಮೂರ್ತಿ, ವಾಸುದೇವ, ಎ.ಕಾಳಪ್ಪ, ಹುಚ್ಚಿ, ಕರಿಯಪ್ಪ, ಕೆ.ಎಸ್.ಜಮೀರುದ್ದೀನ್,

ಶಿವಲಿಂಗನಹಳ್ಳಿ ಬಸವರಾಜ, ಟಿ.ಕೊಟ್ರಪ್ಪ, ಗುರುಮೂರ್ತಿ ಮೋರಗೇರಿ ಇವರೆಲ್ಲಾ ಸೇರಿ ''ಮಿತ್ರ ಸಮಾಜ ನಾಟ್ಯ ಸಂಘ''ವನ್ನು ಸ್ಥಾಪಿಸಿ ಆ ಮೂಲಕ ಪ್ರದರ್ಶನ ನಡೆಸಿದರು. ಕೈಲಾಸನಾಥ, ಈಟಿ ಶಂಭುನಾಥ, ಖಾಜಿ ಭಾಷ ಸಾಬ್, ಗೌರಿಶಂಕರ ಇವರುಗಳೂ ಸೇರಿ ಕಲಾ ಪ್ರದರ್ಶನಕ್ಕೆ ಪ್ರೋತ್ಸಾಹಿಸಿದರು.

ಲಾರ್ಡ್ ಕಾರ್ನ್‌ವಾಲೀಸ್‌ನ ಪಾತ್ರಕ್ಕೆ ವಕೀಲರಾದ ಟಿ.ಸೋಮಪ್ಪ ಟಿಪ್ಪುಸುಲ್ತಾನ ಪಾತ್ರದಲ್ಲಿ ಈಟಿ.ಮೂರ್ತಿ, ಜಯಂತಿ ಪಾತ್ರದಲ್ಲಿ ಕಂಪ್ಲಿ ವಸಂತಕುಮಾರಿ ಇವರುಗಳೆಲ್ಲಾ ತಮ್ಮ ಪ್ರಬುದ್ಧ ಅಭಿನಯ ನೀಡಿದವರು. ಹಲವಾರು ವಿಭಿನ್ನ ಬಗೆಯ ನಾಟಕಗಳಲ್ಲಿ ನಟಿಸಿ ರಂಗಾಸಕ್ತಿಯನ್ನು ಮೈಗೂಡಿಸಿಕೊಂಡಿರುವ ಕೆ.ಸುಲ್ತಾನ ಮೊಹಿಯುದ್ದೀನ್ ಎತ್ತರದ ದಿಗ್ದರ್ಶಕ ನಟ ಶ್ರೇಷ್ಠರೆನಿಸಿದ್ದಾರೆ.

ಹೀಗೆಯೇ ಹಿರಿಯ ನಟ ಬಿ.ಪಂಪಣ್ಣ, ಬೆಲ್ಲದ ಕೊಟ್ರಪ್ಪನವರನ್ನು ಒಳಗೊಂಡಂತೆ ಎಸ್ .ಎಂ. ಗುರುಬಸವರಾಜ, ಎಸ್.ಎಂ.ಕೊಟ್ರಯ್ಯ ವೃತ್ತಿ ನಟಿ ಉದ್ಯೋಗಸ್ಥ ಗೃಹಿಣಿ ಹೊಸಪೇಟೆಯ ಜಿ.ಕಲ್ಯಾಣಿಯವರ ''ಇಂದ್ರಾಣಿಯ''ಯ ಅಭಿನಯ, ಸಮುದ್ರಗುಪ್ತನಾಗಿ ಕೊಟ್ರಯ್ಯ, ಕಲ್ಹಣನಾಗಿ ಬಿ.ಪಂಪಣ್ಣನವರು ಕಾಣಿಸಿ ಕೊಂಡಿರುವುದು ರಂಗಭೂಮಿಗೆ ವಿಶೇಷ ಗಾಂಭೀರ್ಯವನ್ನು ಒದಗಿಸಿದೆ.

ಹವ್ಯಾಸಿ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅದರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ ಎಂ.ಪಿ.ಪ್ರಕಾಶರವರ ನೇತೃತ್ವದಲ್ಲಿ ಈ ಎಲ್ಲಾ ನಟರನ್ನೊಳಗೊಂಡು ಉತ್ತಮ ಕಲಾ ಪ್ರದರ್ಶನಗಳನ್ನು ನೀಡಿದ್ದಾರೆ. ಮುಖ್ಯವಾಗಿ ಸಂಗ್ಯಾ-ಬಾಳ್ಯಾ,ಜೋಕುಮಾರ ಸ್ವಾಮಿ, ಆಷಾಢದ ಒಂದು ದಿನ, ಸೂರ್ಯಶಿಕಾರಿ, ಯಯಾತಿ, ನಾಗಮಂಡಲ, ಅಗ್ನಿ ಮತ್ತು ಮಳೆ, ಬೆಳ್ಳಕ್ಕಿ ಹಿಂಡು ಬೆದರ್ಯಾವೋ, ರಾವಿ ನದಿಯ ದಂಡೆಯ ಮೇಲೆ, ಅಂತಹ ನಾಟಕಗಳ ಅಭೂತ ಪೂರ್ವ ಪ್ರದರ್ಶನದ ಹಿನ್ನೆಲೆಯಲ್ಲಿ ಅವರ ಕಲಾ ಪ್ರೌಢಿಮೆಯನ್ನು ನಾವು ಕಾಣಬಹುದಾಗಿದೆ.

ನಿರ್ದೇಶಕರು : ನಾಟಕ ನಿರೀಕ್ಷೆಯ ಗುರಿ ಮುಟ್ಟಲು ರಂಗಭೂಮಿಯಲ್ಲಿ ನಿರ್ದೇಶನ ಒಂದು ಮಹತ್ತರ ಘಟ್ಟ. ಗಲ್ಲಾ ಪೆಟ್ಟಿಗೆ ತುಂಬಿಸಲು ಬರಿದಾಗಿಸಲು ಆತನೇ ನೇರ ಹೊಣೆಗಾರನಾಗುತ್ತಾನೆ. ಒಂದು ಪ್ರದರ್ಶನ ಯಶಸ್ವಿಯಾಗುವಲ್ಲಿ ಸಂಭಾಷಣೆ, ಸಂಗೀತ, ಹಾಡು, ಅಭಿನಯ, ತಂತ್ರಶೈಲಿ ಎಲ್ಲವೂ ಔಚಿತ್ಯಪೂರ್ಣ ವಾಗಿರಬೇಕು. ಯಾವುದೊಂದು ಇದರಲ್ಲಿ ಕಡಿಮೆಯಾದರೆ ಪ್ರದರ್ಶನ ಫಲದಾಯಕವೆಂದೂ ಆಗಲಾರದು. ಹಾಗಾಗಿ ನಿರ್ದೇಶಕ ಅನುಸರಿಸುವ ದಾರಿ ತಂತಿಯ ಮೇಲಿನದು. ಸ್ವಲ್ಪ ಉದಾಸೀನ ಮಾಡಿದರೂ ಅನಾಹುತ ತಪ್ಪಿದ್ದಲ್ಲ. ಉತ್ಸಾಹದ ಜೊತೆಗೆ ಎಂಥ ಕ್ಲಿಷ್ಟ ಸಂದರ್ಭ ಬಂದರೂ ಎದೆಗುಂದದ ವ್ಯಕ್ತಿತ್ವ ವುಳ್ಳವನಾಗಿರಬೇಕು. ಅಂಥ ದಿಟ್ಟತನ ನಿರ್ದೇಶನವಾದಾಗ ಮಾತ್ರ ತಾನಂದುಕೊಂಡಂತೆ ತನ್ನ ಕನಸನ್ನು ನನಸಾಗಿಸಲು ಸಾಧ್ಯ.

ಇಂಥ ನಿರ್ದೇಶಕರ ಬಳಗವೊಂದು ಜಿಲ್ಲೆಯ ಬಹು ಭಾಗದಲ್ಲಿ ಇದ್ದಾರೆ. ಅಂಥಹ ವಿಶೇಷ ವ್ಯಕ್ತಿಗಳಲ್ಲಿ ಹುಲುಗಪ್ಪ ಕಟ್ಟಿಮನಿ, ಡಾ. ಬಸವರಾಜ ಮಲಶೆಟ್ಟಿ, ಎಂ.ಪಿ.ಪ್ರಕಾಶ್, ಕನಕಗಿರಿ ವಾದಿರಾಜ, ಎ.ಚಿದಾನಂದ

ಗೌಡ, ಎನ್.ಎಂ.ರವಿಕುಮಾರ, ಶಂಭುನಾಥ ಪಾಟೀಲ್, ಮಜ್ಜಿ ಬಸವರಾಜಗೌಡ, ಗಡದಯ್ಯ, ಎಚ್.ಪಿ.ಕಲ್ಲಂಭಟ್, ಏಣಗಿ ಖಾಸಿಂಸಾಬ್, ದಿ.ಜೋಳದರಾಶಿ ದೊಡ್ಡನಗೌಡ, ಮೈಸೂರು ಚೆನ್ನಬಸಪ್ಪ, ಕಾಳಿಂಗ, ಎರ್ರಿಸ್ವಾಮಿ, ಸೋಗಿರತ್ನ, ಎಚ್.ಮರಿಯಣ್ಣ, ಟಿ.ಎಂ.ವೀರಯ್ಯ, ಪೋಲಿಸ್ ಮಹಾದೇವಪ್ಪ, ಕೆ.ಜಂಬುನಾಥ, ಭರಮಲಿಂಗಯ್ಯ.ಟಿ, ಸಾಹು ದ್ಯಾಮಪ್ಪ, ವಾಸುದೇವ ರಾಜ್ ಉಭಾಳೆ, ಕೆ.ಶ್ರೀ ಶೈಲಪ್ಪ, ಪಿ.ಮುರ್ಗಾದಾಸ್, ಶ್ರೀನಿವಾಸ ಪುರೋಹಿತ್, ಪತ್ತಾರ ವೀರಪ್ಪ, ಬಿ.ಮೌನೇಶ್ವರಯ್ಯ, ಎ.ಜಿ.ಚೆನ್ನಬಸವನ ಗೌಡ, ಹಣ್ಣೆ ವೀರಭದ್ರಪ್ಪ, ಡಿ.ಶಂಕರಪ್ಪ, ಏಣಗಿ ನೀಲಮ್ಮ, ಉಲವತ್ತಿ ವೀರಣ್ಣ, ಮೊದಲಾದ ಪ್ರಮುಖ ನಿರ್ದೇಶಕರು ಬಳ್ಳಾರಿಯಲ್ಲಿದ್ದಾರೆ.

ನಾಟಕರಂಗದಲ್ಲಿ ಸರಿಯಾದ ವ್ಯವಸ್ಥೆಯೊಂದಿಗೆ ಸಮತೋಲನ ಸಾಧಿಸಿ, ಅರ್ಥಪೂರ್ಣ ಪ್ರಯೋಗಗಳನ್ನು ಕಾಣಬೇಕಾದರೆ ಪ್ರಯೋಗ ಕಲೆ ಒಂದು ಪ್ರತ್ಯೇಕ ಕಲೆಯಾಗಿ ಬೆಳೆಯ ಬೇಕಾದರೆ ಯೋಗ್ಯ ನಿರ್ದೇಶಕನಿಂದ ಮಾತ್ರ ಸಾಧ್ಯ. ಈ ಮಾತು ನಿರ್ದೇಶಕ ಹುಲುಗಪ್ಪ ಕಟ್ಟಿಮನಿಯವರಿಗೆ ಅಕ್ಷರಶಃ ಅನ್ವಯಿಸುತ್ತದೆ. ಅಂತೆಯೇ ಈ ನಿರ್ದೇಶಕ ಹಳ್ಳಿಗಾಡಿನ ಯುವಕಲಾವಿದರಿಂದ ಪರಿಣಾಮಕಾರಿಯಾದ ಪ್ರಯೋಗಗಳನ್ನು ಪ್ರದರ್ಶಿಸಿದ್ದಾರೆ.

ಕೆ.ವಿ.ಸುಬ್ಬಣ್ಣನವರ ''ನೀನಾಸಂ'' ಮೂಲಕ ನಾಟಕದ ಎಲ್ಲಾ ಆಯಾಮಗಳನ್ನು ಮೈಗೂಡಿಸಿಕೊಂಡು, ''ರಂಗಾಯಣ''ದಲ್ಲಿ ಹದಗೊಂಡ ಪ್ರಥಮ ದರ್ಜೆ ನಿರ್ದೇಶಕರೆನ್ನಿಸಿದ್ದಾರೆ. ಬಿ.ವಿ.ಕಾರಂತರ ಮಾರ್ಗದರ್ಶನದಲ್ಲಿ ರಂಗಾಯಣ ತಂಡದೊಂದಿಗೆ ೧೯೯೨ರಲ್ಲಿ ಅಮೇರಿಕಾದ ''ಆಫ್ ಬ್ರಾಡವೇ'' ೧೯೯೫ರಲ್ಲಿ ಜರ್ಮನ್ ಗೋಯ್ಥ ಇನ್‌ಸ್ಟಿಟ್ಯೂಟ್‌ನಲ್ಲಿ ''ಮಿಡ್ ಸಮ್ಮರ್ ನೈಟ್ ಡ್ರೀಮ್'' ಮತ್ತು ''ಹಿಪ್ಪೋಲಿಟಸ್'' ನಾಟಕಗಳಲ್ಲಿ ಅಭಿನಯಿಸುವುದರ ಮೂಲಕ ಅಲ್ಲಿನ ಪ್ರೇಕ್ಷಕರ ಮತ್ತು ವಿಮರ್ಶಕರ ಗಮನ ಸೆಳೆದಿದ್ದಾರೆ. ಈ ಎಲ್ಲಾ ಅನುಭವಗಳ ಜೊತೆಗೆ ಸೂರ್ಯ ಶಿಕಾರಿ, ಹರಕೆಯ ಕುರಿ, ನಾಗಮಂಡಲ, ತಲೆದಂಡ, ಯಯಾತಿ, ಹಿಟ್ಟಿನ ಹುಂಜ, ಅಂಜು ಮಲ್ಲಿಗೆ, ಮಾನಿಷಾದ, ತುಘಲಕ್, ಹಯವದನ ಹಾಗೂ ಅಗ್ನಿ ಮತ್ತು ಮಳೆ, ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅಗ್ನಿ ಮತ್ತು ಮಳೆ ನಾಟಕದಲ್ಲಿ ಅಭಿನಯ ಮತ್ತು ನಿರ್ದೇಶನದಿಂದ ಗರಿಗೆದರಿಕೊಂಡಿದ್ದಾರೆ. ಇವರಲ್ಲಿರುವ ತೀವ್ರತೆ, ತನ್ಮಯತೆ, ಪರಿಣಿತನದಿಂದಲೇ ಕನ್ನಡ ನಾಟಕ ಪ್ರಪಂಚ ಒಬ್ಬ ಮಹತ್ವಾಕಾಂಕ್ಷಿಯ ನಟ-ನಿರ್ದೇಶಕರನ್ನು ಪಡೆದಿದೆ. ಅಂತೆಯೇ ಕಟ್ಟಿಮನಿ ನಿರ್ದೇಶನದ ''ನಾಗಮಂಡಲ'' ನಾಟಕವು ದೂರದರ್ಶನದ ಮೂಲಕ ಪ್ರಸಾರಕ್ಕೆ ಸಿದ್ಧವಾಯಿತು.

ಬಾಲ್ಯದಿಂದಲೂ ೧೦-೧೧ನೇ ವಯಸ್ಸಿಗೆ ಸಂಗೀತ ನಾಟಕಗಳ ಕಡೆಗಿದ್ದ ಎಂ.ಪಿ.ಪ್ರಕಾಶ್‌ರ ಆಸಕ್ತಿ, ಉನ್ನತ ಶಿಕ್ಷಣಕ್ಕೆಂದು ಬಾಂಬೆಗೆ ಹೋದಾಗ ಕೈಲಾಸಂ, ಪರ್ವತವಾಣಿ, ಎ.ಕೆ.ಮೂರ್ತಿಯವರ ಒಡನಾಟದಿಂದ ಅಭಿನಯ ಹಾಗೂ ನಿರ್ದೇಶನದ ಹವ್ಯಾಸ ಮೈಗೂಡಿಸಿಕೊಂಡು ಪ್ರಮುಖ ಸಾಧನೆಗೈದಿದ್ದಾರೆ. ೧೯೬೪ರಲ್ಲಿ ಪ್ರಕಾಶರು ''ಅಳಿಯದೇವರು'' ನಾಟಕವನ್ನು ನಿರ್ದೇಶಿಸಿ ಆಡಿಸಿದ ಮೊದಲ ನಾಟಕ. ಈ ನಾಟಕದ ಯಶಸ್ಸು

ಎಲ್ಲರಲ್ಲೂ ಅತೀವ ಆತ್ಮ ವಿಶ್ವಾಸವನ್ನು ಮಹತ್ವದ ನಾಟಕವನ್ನೇ ಆಡಬೇಕೆಂದು ಆಶಯವನ್ನು ಹುಟ್ಟಿಸಿತು. ಟಿಪ್ಪುಸುಲ್ತಾನ ನಾಟಕದಲ್ಲಿ ಪ್ರಕಾಶ್ ನಿರ್ದೇಶಿಸಿದ್ದಲ್ಲದೇ ಸ್ವತಃ ದಿವಾನ್ ಪೂರ್ಣಯ್ಯನ ಪಾತ್ರದಲ್ಲಿ ನಟಿಸಿದರು. ನಿರ್ದೇಶನ ಮತ್ತು ಅಭಿನಯಕ್ಕೆ ಸವಾಲಾಗಲು ವೈವಿಧ್ಯಮಯ ನಾಟಕಗಳನ್ನು ಪ್ರಯೋಗಾತ್ಮಕವಾಗಿ ಸ್ವೀಕರಿಸಬೇಕೆಂಬ ಪ್ರಕಾಶರ ಧೋರಣೆಯ ಫಲವಾಗಿ ಸ್ನೇಹಿತರೊಂದಿಗೆ ಚರ್ಚಿಸಿ "ಬಾಳೊಂದು ನಂದನ"ವನ್ನು ಕೈಗೆತ್ತಿಕೊಂಡರು. ಗಿರೀಶ್ ಕಾರ್ನಾಡರ "ಯಯಾತಿ" ನಾಟಕದ ಎಲ್ಲ ಓರೆ-ಕೋರೆಗಳನ್ನೆಲ್ಲಾ ತಿದ್ದಿಕೊಂಡು ಆಧುನಿಕ ರಂಗಭೂಮಿಯ ಪ್ರಯೋಗದ ಎಲ್ಲಾ ಸಾದ್ಯತೆಗಳೊಂದಿಗೆ ಸತ್ವಶಾಲಿಯಾಗಿ ಪ್ರಯೋಗಗೊಂಡ ನಾಟಕವೆಂದರೆ ೧೯೬೮-೬೯ರ "ಆಷಾಢದ ಒಂದು ದಿನ" ಎಂದೇ ಹೇಳಬೇಕು. ಇದು ಮೂಲ ರಾಕೇಶ್ ಮೋಹನ್‌ರದು. ಈ ನಾಟಕವನ್ನು ಸಿದ್ದಲಿಂಗ ಪಟ್ಟಣಶೆಟ್ಟಿಯವರು ಕನ್ನಡಕ್ಕೆ ಅನುವಾದಿಸಿದ್ದು, ಪ್ರಕಾಶರು ಅತ್ಯುತ್ಸಾಹದಿಂದ ಈ ನಾಟಕಕ್ಕೆ ನಿರ್ದೇಶನವನ್ನು ನೀಡಿದರು.

ಜೋಕುಮಾರ ಸ್ವಾಮಿ ಹಾಗೂ ಸಂಗ್ಯಾ-ಬಾಳ್ಯಾ ಪ್ರಕಾಶರವರಿಗೆ ರಾಷ್ಟ್ರೀಯ ಮನ್ನಣೆಯನ್ನು ತಂದು ಕೊಟ್ಟ ಮಹತ್ವದ ನಾಟಕಗಳಾಗಿವೆ. ಚಂದ್ರಶೇಖರ ಕಂಬಾರರ ಈ ನಾಟಕಗಳನ್ನು ಎಂ.ಪಿ.ಪ್ರಕಾಶರು ನಿರ್ದೇಶಿಸಿ ಪ್ರದರ್ಶಿಸಿದರು. ಇವರ ನಿರ್ದೇಶನ ಎಷ್ಟು ಪಕ್ವವಾಗಿತ್ತೆಂದರೆ ಒಂದು ಬಾರಿ ಅವರು ಹೇಳಿ ಕೊಟ್ಟರೆ ಅದರ ಕ್ರಮ ಬದಲಾಯಿಸಬೇಕು, ಎಂದು ಯಾರಿಗೂ, ಎಂದಿಗೂ ಅನಿಸುತ್ತಲೇ ಇರಲಿಲ್ಲ. ಅವರು ಹಿನ್ನೆಲೆ ಹಾಡಿಗೆ ಕುಣಿಯುತ್ತಿದ್ದ ಶೈಲಿ ಸ್ತ್ರೀ ಪಾತ್ರಗಳ ಕುಣಿತವನ್ನು ತೋರಿಸಿ ಕೊಡುವ ಅವರ ಹೆಜ್ಜೆಯ ಗತ್ತುಗಳು, ಲಾಸ್ಯ, ಶೃಂಗಾರ, ಭಾವನೆಯ ಅಭಿವ್ಯಕ್ತಿಯ ಕ್ರಮ ನಮ್ಮಲ್ಲಿ ಆಶ್ಚರ್ಯವನ್ನು ಬೆರಗನ್ನು ಹುಟ್ಟಿಸುತ್ತಿದ್ದವು ಎಂದು "ಜೋಕುಮಾರ ಸ್ವಾಮಿ"ಯಲ್ಲಿನ ಪಾತ್ರಕ್ಕೆ ಶ್ರೇಷ್ಠ ನಟಿ ಪ್ರಶಸ್ತಿ ಪಡೆದ ಪಿ. ಪದ್ಮ ಕೂಡ್ಲಿಗಿಯವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಈ ಎರಡು ನಾಟಕಗಳು ಬಳ್ಳಾರಿ, ರಾಯಚೂರು, ಗುಲ್ಬರ್ಗ, ಚಿತ್ರದುರ್ಗ, ದಾವಣಗೇರೆ, ಬೆಂಗಳೂರು ಮತ್ತು ದೆಹಲಿಗಳಲ್ಲಿ ಪ್ರದರ್ಶನಗೊಂಡವು. ೧೯೯೩ರಲ್ಲಿ "ಸೂರ್ಯಶಿಕಾರಿ" ಯನ್ನು ಸೂರ್ಯನ ಬೇಟೆಯನ್ನುವ ಹೆಸರಿನಲ್ಲಿ ರಂಗದ ಮೇಲೆ ತಂದರು. ಈ ನಾಟಕದ ನಿರ್ದೇಶನವನ್ನು ಮಾಡಿದ್ದಲ್ಲದೇ ತಾವೇ "ಸಮುದ್ರ ಗುಪ್ತನ" ಪಾತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದರು.

ಜೋಳದರಾಶಿ ದೊಡ್ಡನ ಗೌಡ ಗಮಕಿಗಳು, ನಟರು, ಹಾಗೂ ನಿರ್ದೇಶಕರಾಗಿ ಕರ್ನಾಟಕ ಆಂಧ್ರ ಎರಡೂ ರಾಜ್ಯಗಳ ಸೌಹಾರ್ದ ಬಾಂಧವ್ಯಕ್ಕೋಸ್ಕರ ಶ್ರಮವಹಿಸಿದರು. ಬಹುಪಾಲು ನಾಟಕಗಳಲ್ಲಿ ಅಭಿನಯಿಸುತ್ತ ಪ್ರೇಕ್ಷಕರನ್ನು ರಂಜಿಸುತ್ತ ತಾವೇ ಸ್ವತಃ ನಿರ್ದೇಶನ ಮಾಡಿದ್ದಾರೆ.

ಡಾ. ಬಸವರಾಜ ಮಲಶೆಟ್ಟಿಯವರು ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿ ಹೆಸರು ಪಡೆದವರು. ಶ್ರೀಕೃಷ್ಣ ಪಾರಿಜಾತ, ಗಿರಿಜಾ ಕಲ್ಯಾಣ, ಆಟಗಳಿಗೆ ನಿರ್ದೇಶನ ನೀಡಿ ತಾವೇ ಭಾಗವತರಾಗಿ ಪಾಲ್ಗೊಂಡವರು. ನಾಟಕವಾಡುತ್ತಾ, ಹಲವಾರು ನಾಟಕಗಳನ್ನು ನಿರ್ದೇಶಿಸುತ್ತ ಸಂಗೀತವನ್ನು ಸಂಯೋಜಿಸಿದವರು.

ಮೈದೂರು ಚೆನ್ನಬಸಪ್ಪ ಅಭಿನಯದಲ್ಲಿ ನಿಸ್ಸೀಮರು. ವಿಕ್ರಮ ಪಾತ್ರಕ್ಕೆ ಸೊಂಡೂರಿನ ಮಹಾರಾಜರಿಂದ ಸತ್ಕರಿಸಿ ಕೊಂಡವರು. ಜಲಂಧರ, ಉತ್ತರ ಭೂಪ, ಭೌಮಾಸುರ ಮೊದಲಾದ ನಾಟಕಗಳಿಗೆ ನಿರ್ದೇಶನ ಮಾಡಿದವರು.

ಕವಿಕೇಸರಿ, ಕರ್ನಾಟಕದ ಶೇಕ್ಸ್‌ಫಿಯರ್ ಎಂದು ಹೆಸರುವಾಸಿಯಾದ ಹಣ್ಣೆ ವೀರಭದ್ರಪ್ಪ ಉತ್ತಮ ನಿರ್ದೇಶಕರಾಗಿ ಮಿಂಚಿದ್ದಾರೆ. ಸಮಂಜಸವಾದ ಅಭಿನಯ, ಹಾಡುಗಾರಿಕೆ, ಶೈಲಿ ಕಂಡುಬರದಿದ್ದಲ್ಲಿ ಹಣ್ಣೆ ವೀರಭದ್ರಪ್ಪನವರು ಹಿಂದು-ಮುಂದು ನೋಡದೇ ಟೀಕೆ ಮಾಡುತ್ತಿದ್ದದ್ದಕ್ಕೆ ತಮಾಷೆಗೆ ಅವರನ್ನು ಟೀಕಾಚಾರ್ಯರೆಂದು ಕರೆಯುತ್ತಿದ್ದುದು ವಾಡಿಕೆಯಾಗಿದೆ. ಅಕ್ಷಯಾಂಬರ, ಎಚ್ಚಮ್ ನಾಯಕ, ಬಡತನದ ಭೂತ, ಟಿಪ್ಪುಸುಲ್ತಾನ ಇವು ಅವರು ನಿರ್ದೇಶಿಸಿದ ಪ್ರಮುಖ ನಾಟಕಗಳಾಗಿವೆ.

ಕನಕಗಿರಿ ವಾದಿರಾಜ ಬರೆದಿದ್ದು ಸುಮಾರು ೨೦ ನಾಟಕಗಳು. ಉತ್ತರ ಕರ್ನಾಟಕದಲ್ಲಿ ಹೆಸರು ಮಾಡಿದ್ದಾರೆ. ೫೦೦ ರಂಗಗೀತೆಗಳನ್ನು ಬರೆದು ನಾಟಕಗಳಿಗೆ ನಿರ್ದೇಶನ ಮಾಡಿದ್ದು ಅವರ ಹಿರಿಮೆ. ತಾವು ಬರೆವ ನಾಟಕಗಳಿಗೆ ನಿರ್ದೇಶನ ಮಾಡಿದ್ದಲ್ಲದೇ ಅವರ ರಕ್ತರಾತ್ರಿ, ಚಿತ್ರಾಂಗದ, ಮಾತಂಗಕನ್ಯೆ, ಆಗಸ್ಟ್ ೧೫ರ ನಂತರ, ಬಂಜೆ ತೊಟ್ಟಿಲು, ರಕ್ತ ಸಿಂಹಾಸನ ಮೊದಲಾದವುಗಳಿಗೆ ನಿರ್ದೇಶಿಸಿ ಜನಪ್ರಿಯರಾಗಿದ್ದಾರೆ.

ನಾಟಕ ನಿರ್ದೇಶನದಲ್ಲಿ ಬಿಡುವಿಲ್ಲದ ವ್ಯಕ್ತಿ ಎಂದರೆ ನಿರ್ದೇಶಕ, ರಂಗನಟ, ಏಣಗಿ ಕಾಸಿಂ ಸಾಹೇಬ್. ಕಾಸಿಂ ಅವರು ಐದು ನೂರು ನಾಟಕಗಳನ್ನು ನಿರ್ದೇಶಿಸಿದ್ದಾರೆಂದರೆ ಆಶ್ಚರ್ಯಕರ ಸಂಗತಿಯೇ ಸರಿ. ಅವುಗಳಲ್ಲಿ ಪ್ರಮುಖವಾದವುಗಳು ರಾಜಾ ವಿಕ್ರಮ, ಸಂಗೊಳ್ಳಿರಾಯಣ್ಣ, ಹರಿಶ್ಚಂದ್ರ, ವೀರ ಸಿಂಧೂರ ಲಕ್ಷ್ಮಣ, ಕಿತ್ತೂರು ರಾಣಿ ಚೆನ್ನಮ್ಮ, ನರವೀರಪಾರ್ಥ, ಕುರುಕ್ಷೇತ್ರ, ಅಕ್ಷಯಾಂಬರ, ಹೇಮರೆಡ್ಡಿ ಮಲ್ಲಮ್ಮ, ರಕ್ತರಾತ್ರಿ, ಮುಂತಾದವುಗಳು.

ಉಭಾಳೆ ವಾಸುದೇವರಾಜ ನಟರು, ನಾಟಕಕಾರರು, ನಿರ್ದೇಶಕರಾಗಿ ಜಿಲ್ಲೆಯ ರಂಗಭೂಮಿಗೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಮತ್ತೊಬ್ಬ ಕಲಾವಿದ ನಿರ್ದೇಶಕ ಕೆ.ಶ್ರೀಶೈಲಪ್ಪ ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ನಟರಾಗಿ ಜನಮೆಚ್ಚಿಗೆಗೆ ಪಾತ್ರರಾದವರು. ಹೃದಯ ದೇಗುಲ, ಅಳಿಯ ದೇವರು, ವಿಷಮ ಶಕ್ತಿ, ದೇವದಾಸಿ, ಉತ್ತರ ಭೂಪ, ಲಾಟರಿ ಟಿಕೇಟ್ ಇತ್ಯಾದಿ ನಾಟಕಗಳಿಗೆ ನಿರ್ದೇಶನ ಗೈದಿದ್ದಾರೆ.

ತಮ್ಮ ಜೀವನಾವಧಿಯ ಹೆಚ್ಚು ಕಾಲವನ್ನು ನಟರಾಗಿ ಕಲಾಸೇವೆಗೆ ಅರ್ಪಿಸಿಕೊಂಡು, ನಿರ್ದೇಶನದ ಕ್ಷೇತ್ರದಲ್ಲಿ ಅವಿರತವಾಗಿ ದುಡಿದವರೆಂದರೆ ಡಿ.ದುರ್ಗಾದಾಸ್. ಅಭಿನಯ, ಸಂಗೀತ, ನೃತ್ಯ, ಉಡುಗೆ, ತೊಡುಗೆಗಳಲ್ಲಿ ಸರಿಯಾಗಿ ಔಚಿತ್ಯವನ್ನರಿತು ನಿರ್ದೇಶನ ಕೈಗೊಂಡಿದ್ದಾರೆ. ಸ್ವತಃ ಅವರೇ ಬರೆದ ನಿರ್ಮಲ, ದ್ರುಪದ ಕನ್ಯೆ, ಹಲವಾರು ನಾಟಕಗಳನ್ನು ನಿರ್ದೇಶನ ಮಾಡಿ ಆಡಿಸಿದ್ದಾರೆ. ಮಹಾರಾಷ್ಟ್ರ, ಆಂಧ್ರಪ್ರದೇಶ,

ತಮಿಳುನಾಡು ಮುಂತಾದ ರಾಜ್ಯದ ಗಡಿನಾಡಿನಲ್ಲಿ ಕನ್ನಡದ ನಾಟಕಗಳನ್ನು ಅನುವಾದ ಮಾಡಿ ನಿರ್ದೇಶಿಸಿ ಪ್ರದರ್ಶಿಸಿದ್ದಾರೆ. ಪೂರ್ವಕಾಲದಿಂದಲೂ ನಟರಾಗಿ ಜನಮೆಚ್ಚುಗೆಗೆ ಪಾತ್ರರಾದವರು. ಹೃದಯ ದೇಗುಲ, ಆಳಿಯ ದೇವರು, ವಿಷಯ ಶಕ್ತಿ, ದೇವದಾಸಿ, ಉತ್ತರ ಭೂಪ, ಲಾಟರಿ ಟಿಕೇಟ್ ಇತ್ಯಾದಿ ನಾಟಕಗಳಿಗೆ ನಿರ್ದೇಶನ ಮಾಡಿದ್ದಾರೆ.

ಮೂವತ್ತು ವರ್ಷಗಳವರೆಗೆ ರಂಗಭೂಮಿಯಲ್ಲಿ ನಟಿಸಿ, ನಿರ್ದೇಶನ ಕೈಗೊಂಡು ಪ್ರಸುತ್ತದಲ್ಲಿ ಚಲನಚಿತ್ರ ನಿರ್ಮಾಪಕರಾಗಿ ಹೋದ ಟಿ.ಎಂ.ವೀರಯ್ಯನವರು ಉತ್ತಮ ನಿರ್ದೇಶಕರು. ಜಗಜ್ಯೋತಿ ಬಸವೇಶ್ವರ, ರತ್ನ ಮಾಂಗಲ್ಯ, ಬಡತನದ ಭೂತ, ಹೇಮರೆಡ್ಡಿ ಮಲ್ಲಮ್ಮ, ಇವು ವೀರಯ್ಯ ನಿರ್ದೇಶಿಸಿದ ನಾಟಕಗಳು.

ಹಾಸ್ಯ ಪ್ರಧಾನ ಪಾತ್ರಗಳಲ್ಲಿ ಬಳ್ಳಾರಿಯ ಕೆ. ಜಂಬುನಾಥರು ನೂರಾರು ನಾಟಕಗಳಲ್ಲಿ ನಟಿಸಿದಂತೆ ಹಲವಾರು ನಾಟಕಗಳಿಗೆ ನಿರ್ದೇಶನ ಮಾಡಿದ್ದಾರೆ. ೧೯೫೫ರಲ್ಲಿ ಸಾಕ್ಷರತಾ ಮತ್ತು ಗಂಡ್ಸಲ್ಲೆಗಂಡ್ಸು ಎಂಬ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಬಳ್ಳಾರಿ ಕಲಾ ಪ್ರೇಮಿ ಸಂಘದ ಆಶ್ರಯದಲ್ಲಿ ಇವರ ನಿರ್ದೇಶನದ (ತಾವು ಅಭಿನಯಿಸುವುದರೊಂದಿಗೆ) ನೂರಾರು ನಾಟಕಗಳ ಯಶಸ್ವಿ ಪ್ರಯೋಗಗಳಾಗಿವೆ. ಅವುಗಳಲ್ಲಿ ಮುಖ್ಯವಾದವುಗಳು ಗಿರೀಶ್ ಕಾರ್ನಾಡ್‌ರ ಯಯಾತಿ ನಾಟಕ ೧೯೭೭ರಲ್ಲಿ ಕರ್ನಾಟಕ ಅಕಾಡೆಮಿ ನಿರ್ವಹಿಸಿದ ನಾಟಕ ಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆಯಿತು. ಇವರ ನಿರ್ದೇಶನದಲ್ಲಿಯೇ "ಅಪರಾಧಿನಿ" ನಾಟಕ ಪ್ರಯೋಗಿಸಲ್ಪಟ್ಟಿತು. ಇದರ ಯಶಸ್ವಿ ಪ್ರದರ್ಶನವನ್ನು ನೋಡಿದ ಹೈದ್ರಾಬಾದಿನ ಚಾರ್ ಮಿನಾರ್ ಸಂಸ್ಥೆಯವರು ಇದೇ ನಾಟಕಗಳನ್ನು ಬೆನಿಫಿಟ್ ನಾಟಕವಾಗಿ ಪುನಃ ಆಡಿಸಿದರು. ೧೯೬೮ರಲ್ಲಿ 'ಶಾಸ್ತ್ರ ಸುಳ್ಳೆ' ಎಂಬ ನಾಟಕದ ಯಶಸ್ವಿ ಪ್ರಯೋಗ ಮೈಸೂರು ದಸರಾ ಉತ್ಸವದಲ್ಲಿ ಜರುಗಿತು.

ರಾಮಸಾಗರದ ಭರಮಲಿಂಗಯ್ಯ ನಾಟಕಗಳನ್ನು ಬರೆದಿರುವುದು ಒಂದೆರೆಡು ಮಾತ್ರ. ಸುಮಾರು ೫೦೦ರಕ್ಕೂ ಮಿಕ್ಕ ಹಾಡುಗಳನ್ನು ಬರೆದು ನಾಟಕಗಳಿಗೆ ಅಳವಡಿಸಿದ್ದಾರೆ. ಅನೇಕ ನಾಟಕಗಳಿಗೆ ನಿರ್ದೇಶನ ಮಾಡಿ ಯಶಸ್ವಿಯಾಗಿದ್ದಾರೆ.

ನಟನಾಭಿಮಾನದಲ್ಲಿ ಹಾಸ್ಯ ಪಾತ್ರಗಳನ್ನೇ ನಟಿಸುತ್ತ ಜನರ ಪ್ರೀತಿಗೆ ಪಾತ್ರರಾಗಿ ಹಲವಾರು ಬಿರುದುಗಳನ್ನು ಪಡೆದ ಹೆಚ್.ಪಿ.ಕಲ್ಲಂಭಟ್ಟರು ಬಹುವಿಧಕಲಾವಿದರು. ೬೦ಕ್ಕೂ ಹೆಚ್ಚು ನಾಟಕಗಳ ರಚನೆ, ೧೦೦ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯ ನಾಯಕರಾಗಿ, ಸಂಗೀತಗಾರರಾಗಿ ಹಲವಾರು ನಾಟಕಗಳಿಗೆ ಪ್ರೋತ್ಸಾಹಿಸಿದ್ದಲ್ಲದೆ, ಸುಮಾರು ೪೦-೫೦ ನಾಟಕಗಳನ್ನು ನಿರ್ದೇಶಿಸಿ ಜಿಲ್ಲೆಯ ತುಂಬಾ ಹೆಸರು ಗಳಿಸಿದ್ದಾರೆ.

ಸಾ.ಹು.ದ್ಯಾಮಪ್ಪ ಹತ್ತು ನಾಟಕಗಳ ಕರ್ತೃ. ನಟರಾಗಿ, ನಾಟಕಕಾರರಾಗಿ, ನಿರ್ದೇಶಕರಾಗಿ, ರಂಗಭೂಮಿಗೆ ಸೇವೆ ಸಲ್ಲಿಸಿದ್ದಾರೆ. ಬೇರೆಯವರ ನಾಟಕಗಳನ್ನು ನಿರ್ದೇಶಿಸಿದ್ದಷ್ಟೇ ಅಲ್ಲದೆ ತಮ್ಮೆಲ್ಲ

ನಾಟಕಗಳನ್ನು ನಿರ್ದೇಶಿಸುವುದರೊಂದಿಗೆ ಹಲವಾರು ಪ್ರದರ್ಶನ ನೀಡಿದ್ದಾರೆ. ವೀರಸ್ವರ್ಗ, ದುಡ್ಡು ಧನಿಕರ ಸ್ವತ್ತು. ಇತ್ಯಾದಿ ೧೮ ನಾಟಕಗಳನ್ನು ರಚಿಸಿ ನಿರ್ದೇಶನ ಮಾಡಿದ್ದಾರೆ. ತಮ್ಮ ಎಲ್ಲಾ ನಾಟಕಗಳನ್ನು ಪ್ರದರ್ಶಿಸಿ ಅನೇಕ ಪ್ರದರ್ಶನಗಳನ್ನು ಪಡೆದು ಜನಮೆಚ್ಚಿಗೆ ಗಳಿಸಿರುವ ಇವರು ಇಂದು ಪ್ರತಿಭಾವಂತ ನಾಟಕಕಾರ ಹಾಗೂ ನಿರ್ದೇಶಕರು. ಎಂ.ಎ. ಪದವೀಧರರಾಗಿರುವ ಇವರು ರಂಗಭೂಮಿಯಲ್ಲಿ ೩೦ ವರ್ಷ ಸೇವೆ ಸಲ್ಲಿಸಿದ್ದಾರೆ.

ಪ್ರತಿಭಾವಂತ ನಾಟಕಕಾರ ಮತ್ತು ನಿರ್ದೇಶಕ ಎಸ್.ಎಂ.ರವಿಕುಮಾರ ಜ್ಯೋತಿ ಬೆಳಗಿತು, ನಡೆ ತಪ್ಪಿದ ದಾರಿ. ಕಲಿಯುಗದ ಶಕುನಿ, ಸೂಳೆಗೂ ಒಂದು ತಾಯಿ ಭಾಗ್ಯ, ನೌಕರಿ ಗಂಡ, ಎಲ್ಲಿಂದಲೋ ಬಂದವರು, ಸೊಸೆ ತಂದ ಸಿರಿ, ಪ್ರೇಮ ಬಂಧನ, ಮುಡಿದ ಮಲ್ಲಿಗೆ ಇತ್ಯಾದಿ ನಾಟಕಗಳಿಗೆ ನಿರ್ದೇಶನ ನೀಡಿ ಗ್ರಾಮೀಣ ಪರಿಸರದಲ್ಲಿ ಹೆಸರು ಮಾಡಿಕೊಂಡವರು.

ಡಿ.ಶಂಕರಪ್ಪ ವೃತ್ತಿಯಿಂದ ದೈಹಿಕ ಶಿಕ್ಷಕರು ಪ್ರವೃತ್ತಿಯಿಂದ ಹಲವಾರು ನಾಟಕಗಳಲ್ಲಿ ನಟಿಸಿ ಕೆಲವು ನಾಟಕಗಳಿಗೆ ನಿರ್ದೇಶನವೂ ನೀಡಿದ್ದಾರೆ. ಕಿತ್ತೂರು ಚೆನ್ನಮ್ಮ, ಬಲಿದಾನ, ಯಾರ ವಿಶ್ವಾಸ ಯಾರಿಗೆ, ಪುಣ್ಯ ಭೂಮಿ, ರಕ್ತದಾನ, ಏಕಲವ್ಯ, ಮರಣವೇ ಮಹಾನವಮಿ, ಟಿಪ್ಪುಸುಲ್ತಾನ ಹಾಗೂ ಸಿರಿಗಂಧದ ಬಂಡಾಯ ಪ್ರಮುಖವಾಗಿದೆ.

ಸುಮಾರು ೭೦-೮೦ ನಾಟಕಗಳಲ್ಲಿ ನಟಿಸಿರುವ ಹಂಪಾಪಟ್ಟಣದ ಎಂ.ಜಿ.ಚೆನ್ನಬಸವನಗೌಡ, ಹೇಮರೆಡ್ಡಿ ಮಲ್ಲಮ್ಮ, ಸತ್ಯ ಹರಿಶ್ಚಂದ್ರ, ಅಣ್ಣ-ತಂಗಿ, ದೇವರ ದುಡ್ಡು, ರಕ್ತರಾತ್ರಿ, ಕೊಟ್ಟೂರೇಶ್ವರ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಮತ್ತೊಬ್ಬ ಕಲಾವಿದ ನಿರ್ದೇಶಕ ಬಿ. ಮೌನೇಶ್ವರರ ತಂಗಿಯ ತಾಳಿ, ಬಂಜೆಯ ತೊಟ್ಟಿಲು, ಬಡವ ಬದುಕಲೇ ಬೇಕು, ಯಾರು ನನ್ನವರು, ಗೌರಿಗೆದ್ದಳು, ರಕ್ತರಾತ್ರಿ ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿ ಮನೆಮಾತಾಗಿ ಎಪ್ಪತ್ತೈದರ ಇಳಿ ವಯಸ್ಸಿನಲ್ಲೂ ರಂಗಭೂಮಿ ಸೇವೆಗೈಯುತ್ತಿದ್ದಾರೆ.

ಧಾರವಾಡ ಹವ್ಯಾಸಿ ರಂಗಭೂಮಿಯ ಕ್ರಿಯಾಶೀಲ ವ್ಯಕ್ತಿ ಧನಂಜಯ ಕುಲಕರ್ಣಿ. ಪ್ರಸ್ತುತ ವಸತಿ ಬಳ್ಳಾರಿ ಜಿಲ್ಲೆಯ ತೋರಣಗಲ್ಲು. ನಟನೆ, ಸಂಗೀತ ಸಂಯೋಜನೆ, ನಿರ್ದೇಶನ ಹೀಗೆ ರಂಗಭೂಮಿಯ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಗಮನ ಸೆಳೆದಿದ್ದಾರೆ. ರಾಷ್ಟ್ರೀಯ ನಾಟಕೋತ್ಸವಗಳಲ್ಲಿ ಭಾಗವಹಿಸಿರುವ ಇವರು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮಕ್ಕಳಿಗಾಗಿ ಹಾಗೂ ದೊಡ್ಡವರಿಗಾಗಿ ಧಾರವಾಡ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ರಂಗ ತರಬೇತಿ ಶಿಬಿರಗಳನ್ನು ನಿರ್ದೇಶಿಸಿದ್ದಾರೆ. ತಬರನ ಕಥೆ, ಅಶೋಕ ಚಕ್ರ, ಹೆಜ್ಜೆರಳು, ಭಾರತ ಸುಂದರಿ, ಟಿಪ್ಪು ಮುಂತಾದ ನಾಟಕಗಳು ಇವರ ನಿರ್ದೇಶನದಲ್ಲಿ ಅರಳಿವೆ. ಇವರ ನಿರ್ದೇಶಿಸಿದ "ದಫನ್" ನಾಟಕವು ರಾಷ್ಟ್ರಮಟ್ಟದಲ್ಲಿ ಮೂರು

ಪ್ರಥಮ ಬಹುಮಾನಗಳನ್ನು ಪಡೆದಿರುತ್ತದೆ. ಸಮುದಾಯ ಸಂಘಟನೆಯ ಸಕ್ರಿಯ ಕಾರ್ಯಕರ್ತ, ಸದ್ಯ ಇವರು ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನ ಜಿಂದಾಲ್ ವಿಜಯನಗರ ಸ್ಟೀಲ್ ಲಿಮಿಟೆಡ್‌ನಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

"ಅದ್ಭುತ ರಾಮಾಯಣ" ನಾಟಕದ ನಿರ್ದೇಶನಕ್ಕೆ ಪತ್ತಾರ ವೀರಪ್ಪ ಬಹು ಪ್ರಸಿದ್ಧ. ಬೀದಿ ನಾಟಕ ಹಾಗೂ ಅಸಂಗತ ನಾಟಕಗಳ ನಿರ್ದೇಶನಕ್ಕೆ ಶ್ರೀನಿವಾಸ ಪುರೋಹಿತ ಊರೂರು ಅಲೆದು ಹೆಸರು ವಾಸಿಯಾಗಿದ್ದಾರೆ. ಎಸ್.ಎನ್.ಹಿರೇಮಠ, ಕೆ.ಮಹಾಬಲೇಶ್ವರ ಹಾಗೂ ಅಬ್ದುಲ್ ಅವರು ತಮ್ಮ ಊರು ಗಳನ್ನೇ ಕಾರ್ಯ ಕ್ಷೇತ್ರ ಮಾಡಿಕೊಂಡು ಅಸಂಖ್ಯಾತ ಬೀದಿ ನಾಟಕಗಳಿಗೆ ನಿರ್ದೇಶನ ನೀಡಿದ್ದಾರೆ.

ನಟನೆಯಲ್ಲಿಯೇ ಕರಗತವಾಗಿರುವ ಹೆಚ್.ಮರಿಯಣ್ಣ ಸಂದರ್ಭ ಬಂದಾಗ ಸಾಕಷ್ಟು ನಾಟಕಗಳಿಗೆ ನಿರ್ದೇಶನ ಮಾಡಿದ್ದು ಉಂಟು. ಸಾವಿರಕ್ಕಿಂತಲೂ ಹೆಚ್ಚು ನಾಟಕಗಳಿಗೆ ನಿರ್ದೇಶನ ಮಾಡಿದ್ದು ಉಂಟು. ಪಾತ್ರೆ ಅವಾಂತರ, ತಾಳಿ ಇಲ್ಲದೆ ತಾಯಿಯಾದೆ ನಾಟಕಗಳನ್ನು ನಿರ್ದೇಶಿಸಿದ್ದಾರೆ.

ಎಂಭತ್ತಕ್ಕೂ ಹೆಚ್ಚಿನ ನಾಟಕಗಳಲ್ಲಿ ನಟಿಸಿದ ವಿ.ಶಂಭುನಾಥ ಪಾಟೀಲ ಭೀಷ್ಮ ಪ್ರತಿಜ್ಞೆ, ಸ್ತ್ರೀ ರತ್ನ, ರಕ್ತ ರಾತ್ರಿ, ಹೇಮರೆಡ್ಡಿ ಮಲ್ಲಮ್ಮ, ಅಣ್ಣ-ತಂಗಿ, ಜಗಜ್ಯೋತಿ ಬಸವೇಶ್ವರ ಮೊದಲಾದ ೧೨೦ಕ್ಕೂ ಮೀರಿದ ನಾಟಕಗಳಿಗೆ ನಿರ್ದೇಶಕರಾಗಿದ್ದಾರೆ. ಮತ್ತೊಬ್ಬ ಹೆಸರಾಂತ ನಿರ್ದೇಶಕ ಮಜ್ಜಿ ಬಸವರಾಜ ಹಸಿರು ಬಳೆ, ಬಸ್ ಹಮಾಲ್, ಬಸ್ ಕಂಡಕ್ಟರ್, ಕೈಲಾಗದ ಗಂಡ ಕೈಲಾಸ ಕಂಡ, ಹೆಬ್ಬೆಟ್ಟು ಮೊದಲಾದ ನಾಟಕಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿದ್ದಾರೆ.

ಏಣಗಿ ನೀಲಮ್ಮ "ಬಡವ ಬದುಕಲೇಬೇಕು" ಎಂಬ ನಾಟಕವನ್ನು ಬರೆದು ನಿರ್ದೇಶಿಸಿ ಏಣಗಿಯಲ್ಲಿ ನಾಟಕವಾಡಿಸಿದ್ದಾರೆ. ಏಣಗಿ ರುದ್ರೇಶನ ಜಾತ್ರೆಯಲ್ಲಿ ಪ್ರತಿ ವರ್ಷ ಹವ್ಯಾಸಿ ಕಲಾವಿದರು ನಾಟಕವಾಡುತ್ತಿದ್ದ ಅವರಿಗೆ ನೀಲಮ್ಮ ನಿರ್ದೇಶನ ಮಾಡುತ್ತಾರೆ. ಹಲವಾರು ಕಂಪನಿಗಳಲ್ಲಿ ಕೆಲಸ ಮಾಡಿದ, ನಟಿಸಿದ, ನಿರ್ದೇಶಿಸಿದ ಅನುಭವವಿರುವುದರಿಂದ ಬೇರೆಡೆಗೆ ನೀಲಮ್ಮ, ಇಂದಿಗೂ ನಿರ್ದೇಶನಕ್ಕೆ ಹೋಗಿ ಬಳ್ಳಾರಿ ಜಿಲ್ಲಾ ರಂಗಭೂಮಿಗೆ ತಮ್ಮದೇ ಕೊಡುಗೆ ಸಲ್ಲಿಸಿದ್ದಾರೆ.

ಸಮಕಾಲೀನ ಕನ್ನಡ ರಂಗಭೂಮಿಗೆ ತನು ಮನ ಧನಗಳನ್ನು ಕೃಷ್ಣಪ್ಪನವರಂತೆ ವಿನಿಯೋಗಿಸಿದವರು ತೀರಾ ವಿರಳವಾಗಿ ಸಿಗುತ್ತಾರೆ. ಕಳೆದ ಎರಡು ದಶಕಗಳಿಂದ ರಂಗಭೂಮಿಯನ್ನು ಹಿನ್ನೆಲೆಯಲ್ಲಿ ದುಡಿಯುತ್ತಿದ್ದು ನಿರ್ದೇಶಕರಾಗಿ ಮುನ್ನೆಡೆಗೆ ಬಂದಿದ್ದಾರೆ. ರಂಗ ತಜ್ಞರಾಗಿ, ಸಂಯೋಜಕರಾಗಿ, ಬೆಳಕಿನ ವಿನ್ಯಾಸಕಾರರಾಗಿ, ಸಂಘಟಕರಾಗಿ ಹಲವು ಬಗೆಯಲ್ಲಿ ಸಮಕಾಲೀನ ಕನ್ನಡ ರಂಗಭೂಮಿಯನ್ನು ಸಮೃದ್ಧಿಗೊಳಿಸಿದ್ದಾರೆ.

ಗಾಯಕರು : ನಾಟಕ ಕಲೆಯಲ್ಲಿ ಯಾವೊಂದಂಶ ಕಡಿಮೆಯಾದರೂ ಅಥವಾ ಹೆಚ್ಚಿಗೆಯಾದರೂ ನಷ್ಟ ರಂಗಭೂಮಿಗೆ. ಆದ್ದರಿಂದಲೇ ಎಲಿವಾಳ ಸಿದ್ದಯ್ಯನವರು "ನಾಟಕದಲ್ಲಿ ಸಂಗೀತ ಇರಲೇಬೇಕು. ತೀವ್ರತರ ಭಾವನೆಗಳನ್ನು ಹಾಡಿನ ಮೂಲಕ ಚೆನ್ನಾಗಿ ವ್ಯಕ್ತಪಡಿಸಲು ಸಾಧ್ಯ. ಆದರೆ ಸಂಗೀತ ವಿಪರೀತವಾಗಿ ಬೆಳೆದು ನಾಟಕವನ್ನೇ ನುಂಗುವಂತಾಗಬಾರದು. ಹಿಂದೆ ನಮ್ಮ ಕಾಲಕ್ಕೆ ಸಂಗೀತ ನಾಟಕಗಳ ಹಾವಳಿ ಜೋರಾಗಿತ್ತು. ನಟರು ಸ್ಪರ್ಧೆಗಿಳಿದಂತೆ ಹಾಡುಗಳನ್ನು ವಿಸ್ತರಿಸಿ, ವಿಸ್ತರಿಸಿ ಹಾಡುತ್ತಿದ್ದರು ಇದು ನನಗೆ ಸೇರುತ್ತಿರಲಿಲ್ಲ. ನಾಟಕ ಸಂಗೀತ ಕಛೇರಿಯಾಗಬಾರದೆಂದು ನನ್ನ ಅಭಿಪ್ರಾಯ. (ಡಾ.ಬಸವರಾಜ ಮಲಶೆಟ್ಟರು, ಬಳ್ಳಾರಿ ಜಿಲ್ಲೆಯ ಗಣ್ಯ ಮಾನ್ಯರು, ಶ್ರೀ ಎಲಿವಾಳ ಸಿದ್ದಯ್ಯನವರ ಲೇಖನದಲ್ಲಿ ಎಲಿವಾಳರ ಅಭಿಪ್ರಾಯ ೧೯೬೪ಳ ಪುಟ,೨೦).

ಆದರೂ ನಾಟಕದ ಸಂಭಾಷಣೆ ಮಧ್ಯದಲ್ಲಿ ಪ್ರೇಕ್ಷಕರ ಬೇಸರವನ್ನು ನಿವಾರಿಸಲು ಹಾಗೂ ಅವರ ಮನಸ್ಸಿಗೆ ಮುದ ನೀಡಲು ಅಲ್ಲಲ್ಲಿ ಅರ್ಥವತ್ತಾದ ಹಾಡುಗಳ ಅವಶ್ಯಕತೆ ಇದೆ. ಪ್ರೇಕ್ಷಕರ ಮನರಂಜನೆ ತಮ್ಮ ಜೀವನೋಪಾಯ ಸಾಗಿಸಿಕೊಂಡು ಹೋಗುವ ಅಂಥ ವೃತ್ತಿಗಾಯಕರು ಹವ್ಯಾಸಿಗರು ನಮ್ಮಲ್ಲಿ ಹೇರಳವಾಗಿ ದೊರೆಯುತ್ತಾರೆ. ಅಂಥವರಲ್ಲಿ ಜೋಳದರಾಶಿ ದೊಡ್ಡನಗೌಡ, ಮ.ಬ.ಸೋಮಣ್ಣ, ಕಂಪ್ಲಿ ಪ್ರಹ್ಲಾದ, ಶ್ರೀಮತಿ ಕಲಾವತಿ, ಹನುಮಂತರಾವ್, ಪೊಲೀಸ್ ಮಹಾದೇವಪ್ಪ, ಎಚ್.ಪಿ.ಕಲ್ಲಂಭಟ್ಟ, ಕೆ.ಜಂಬುನಾಥ, ಕನಕಗಿರಿ ವಾದಿರಾಜ, ಹಣ್ಣೆ ವೀರಭದ್ರಪ್ಪ, ಆದವಾನಿ ಲಕ್ಷ್ಮಿದೇವಿ, ಡಾ.ಬಸವರಾಜ ಮಲಶೆಟ್ಟಿ, ಬಳ್ಳಾರಿ ಲಲಿತಮ್ಮ, ಸುಭದ್ರಮ್ಮ ಮನ್ಸೂರು, ರತ್ನ ಸೋಗಿ, ಬೂದಗುಂಪಿ ವೀರಭದ್ರಪ್ಪ, ಎಸ್.ಎಂ.ರುದ್ರಯ್ಯ ಸ್ವಾಮಿ, ಬಿ.ಪ್ರಕಾಶ್, ಗಡದಯ್ಯ, ಬಿ.ಮೌನೇಶ್ವರ, ಎಚ್.ಎಂ.ವೀರಭದ್ರಯ್ಯ ಯಳ್ಳಾರ್ತಿ ಮುಂತಾದವರೆಲ್ಲ ಪ್ರಮುಖರು.

ಜೋಳದರಾಶಿ ದೊಡ್ಡನಗೌಡರು ಗಮಕಿಗಳಾಗಿದ್ದರಿಂದ ಸುಶ್ರಾವ್ಯವಾಗಿ ಹಾಡಲು ಕಲಿಯುತ್ತಿದ್ದರು. ನೂರಾರು ನಾಟಕಗಳಿಗೆ ತಮ್ಮ ಅಮೂಲ್ಯ ಕಂಠದಾನ ಮಾಡಿ, ಕರ್ನಾಟಕ-ಆಂಧ್ರ ಎಲ್ಲೆಡೆಯ ಮಹಾವ್ಯಕ್ತಿಗಳಿಂದ ತಮ್ಮ ಗಾನ ಭಕ್ತಿಗಳ ಪಾರವಶ್ಯದಿಂದ ಮನ ಮೆಚ್ಚಿಕೊಂಡಿದ್ದಾರೆ.

ಆದವಾನಿ ಲಕ್ಷ್ಮೀದೇವಿ ತನಗೆ ಬಲು ಪ್ರಿಯವಾದ ವಾದ್ಯ ಸಂಗೀತಗಳನ್ನು ಅಕ್ಕರೆಯಿಂದ ಕಲಿತು ಸೊಗಸಾಗಿ ಹಾಡುತ್ತಿದ್ದುದರಿಂದ ಆಕೆಯ ಅಭಿನಯ ರಂಗದ ಮೇಲೆ ಬರಲು ಕಾರಣವಾಯಿತು. ಪ್ರೇಕ್ಷಕರನ್ನು ರಂಜಿಸಲು ಹಾಡುವುದರಿಂದ ರಂಗಪ್ರವೇಶ ಮಾಡಿದ್ದೇ ಒಂದು ವಿಶೇಷ ಪ್ರಸಂಗವಾಗಿ ಕೊನೆಗೆ ತನ್ನ ನಟನೆಯೊಂದಿಗೆ ಹಿನ್ನೆಲೆಯಾಗಿ ಹಾಡುವ ನಂಟನ್ನು ಉಳಿಸಿಕೊಂಡು ಬಂದರು.

ಬಳ್ಳಾರಿ ಲಲಿತಮ್ಮ ಸಂಗೀತ, ನೃತ್ಯಕ್ಕೆ ಹೆಸರಾದವರು. ಮೊದಲು ಚಲನಚಿತ್ರಗಳಲ್ಲಿ ನಟಿಸಿ ರಂಗಭೂಮಿಗೆ ಮರಳಿ ಬಂದು ಪೂರ್ವಜರ ಕಲೆಯಾದ ಹಾಡುಗಾರಿಕೆಯನ್ನೇ ತನ್ನ ವೃತ್ತಿಯನ್ನಾಗಿಸಿ ಕೊಂಡು ರಂಗಭೂಮಿಯ ಮೇಲೆ ರಂಗ ಕಲೆಯನ್ನು ಉಳಿಸಿ-ಬೆಳೆಸಿದ್ದಾರೆ.

ಸಂಗೀತ ಪ್ರಧಾನವಾದ ನಾಟಕಗಳ ಸಂದರ್ಭದಲ್ಲಿ ಹಾಡುಗಾರಿಕೆಯನ್ನು ಮುಖ್ಯ ಬಂಡವಾಳವನ್ನಾಗಿಸಿಕೊಂಡು ಸುಭದ್ರಮ್ಮ ಮನ್ಸೂರ ಮಧುರವಾದ ಕಂಠ ಹಾಗೂ ವಂಶಸ್ಥರಿಂದ ದೊರೆತ ಸಂಗೀತದಿಂದ ಅಪಾರ ಜನಮನ್ನಣೆಗಳಿಸಿದವರು. ಒಳ್ಳೆಯ ಅಭಿನಯದ ಜೊತೆಗೆ ಹಾಡನ್ನು ಕೇಳಿಸಿ ಅಭಿಜಾತ ನಟಿ ಎನಿಸಿಕೊಂಡಿದ್ದಾರೆ. ಅವರು ಯಾವುದೇ ಸಭೆ ಸಮಾರಂಭಕ್ಕೆ ಹೋದರು ಅಲ್ಲಿ ಹಾಡಲೇಬೇಕು ಎಂಬಂತೆ ಪ್ರಸಿದ್ಧಿ ಪಡೆದಿದ್ದಾರೆ. ಸಾಕಷ್ಟು ನಾಟಕ ಕಂಪನಿಗಳಲ್ಲಿಯೂ ತರಬೇತಿ ಪಡೆದು ಹಲವಾರು ಹಳ್ಳಿಗಳಲ್ಲಿಯೂ ಕಾರ್ಯನಿರ್ವಹಿಸಿದ ಸುಭದ್ರಮ್ಮನವರು ಉತ್ತಮ ಹಿನ್ನಲೆ ಗಾಯಕಿಯಾಗಿ ಪ್ರಸಿದ್ಧಿ ಪಡೆದಿದ್ದು ಬಳ್ಳಾರಿ ಜಿಲ್ಲೆಯ ರಂಗಕೋಗಿಲೆ ಎಂದೇ ಹೆಸರಾಗಿದ್ದಾರೆ.

ಗಿರಿಜಾ ಕಲ್ಯಾಣ ಮತ್ತು ಶ್ರೀಕೃಷ್ಣ ಪಾರಿಜಾತಗಳ ಹಾಡುಗಳಿಗೆ ಪ್ರಸಿದ್ಧರಾದವರು ಡಾ.ಬಸವರಾಜ ಪುಲಶೆಟ್ಟಿ. ಶ್ರೀಮತಿ ಕಲಾವತಿ ಮತ್ತು ಹನುಮಂತರಾವ್, ಈರ್ವರೂ ರಣದುಂದುಭಿ, ಅಂಗುಲಿ ಮಾಲ, ಹಸಿರು ಬಳೆ, ಹಾಗೂ ಸೂರ್ಯಶಿಕಾರಿ ನಾಟಕಗಳಿಗೆ ಹಾಡುವ ಗೀಳನ್ನು ಅಂಟಿಸಿಕೊಂಡು ಲಯಬದ್ಧವಾಗಿ ಹಾಡುವ ಗತ್ತನ್ನು ಮೈಗೂಡಿಸಿಕೊಂಡವರು.

ಪ್ರಹ್ಲಾದ ಕಂಪ್ಲಿ ಮಧುರ ಕಂಠದಲ್ಲಿ ರಂಗಗೀತೆಗಳನ್ನು ಚಲನಚಿತ್ರ ಗೀತೆಗಳನ್ನು ಹಾಡುತ್ತಾರೆ. ಅವರ ಕಂಠ ಬಾಲಸುಬ್ರಮಣ್ಯಂನಂತಿರುವುದರಿಂದ ಪ್ರಹ್ಲಾದರಿಗೆ "ಜ್ಯೂನಿಯರ್ ಬಾಲಸುಬ್ರಮಣ್ಯಂ" ಎಂದೇ ಕರೆಯುತ್ತಾರೆ. ಕನ್ನಡ ಹಾಗೂ ಹಿಂದಿ ಭಾಷೆಗಳೆರಡರಲ್ಲೂ ಚೆನ್ನಾಗಿ ಹಾಡಬಲ್ಲರು. ಬಾಲ್ಯದಿಂದಲೇ ಹಾಡುಗಳನ್ನು ಹಾಡುವ ಹವ್ಯಾಸವನ್ನು ರೂಢಿಸಿ ಕೊಂಡಿರುವ ಇವರು ಕಾಲೇಜು ವ್ಯಾಸಂಗ ಮಾಡುತ್ತಿದ್ದಾಗ ಬಹು ರಂಜನೀಯವಾಗಿ ಹಾಡಿ ಅನೇಕ ಬಹುಮಾನಗಳನ್ನು ಪಡೆದಿದ್ದಾರೆ. ವಂಶದ ಹಿರಿಯರೆಲ್ಲರೂ ಕಲಾವಂತರಾಗಿದ್ದರಿಂದ ಕಲೆಯು ಪ್ರಹ್ಲಾದರಿಗೆ ವಂಶಪಾರಂಪರ್ಯವಾಗಿ ಹರಿದು ಬಂದಿದೆ. ಅನೇಕ ವೃತ್ತಿ ಹಾಗೂ ಹವ್ಯಾಸಿ ನಾಟಕ ಸಂಸ್ಥೆಗಳಿಗೆ ನೂರಾರು ರಂಗಗೀತೆಗಳನ್ನು ರಚಿಸಿಕೊಟ್ಟು ಹಾಡಿದ್ದಾರೆ. ಇವರ ಅನೇಕ ಹಾಡುಗಳು ರೇಡಿಯೋದಲ್ಲಿಯೂ ಪ್ರಸಾರವಾಗಿವೆ. ಪೋಲೀಸ್ ಮಹಾದೇವಪ್ಪ, ಕೆ.ಜಂಬುನಾಥರಿಗೆ ಬಾಲ್ಯದಿಂದಲೂ ಸಂಗೀತದ ಗೀಳು. ಇವರ ಮಧುರ ಕಂಠದ ಕಾರಣದಿಂದ ಇವರ ಪಾತ್ರಗಳಿಗೆ ಹಾಡುಗಳು ಇರಲೇ ಬೇಕು. ತಾಯಿಯವರಿಂದ ಸಂಗೀತ ಜ್ಞಾನ ಪಡೆದ ಇವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿತವರು. ನಂತರದಲ್ಲಿ ಹಿಂದೂಸ್ತಾನಿ ಸಂಗೀತವನ್ನು ಅಭ್ಯಸಿಸಿ ಶಾಸ್ತ್ರೋಕ್ತವಾಗಿ ಹಾಡಲು ಕಲಿತು ನೂರಾರು ನಾಟಕಗಳಿಗೆ ಹಿನ್ನೆಲೆ ಗಾಯನ ಹಾಡಿದ್ದಾರೆ.

ಸಮಂಜಸವಾದ, ಅರ್ಥವತ್ತಾದ ಹಾಡುಗಾರಿಕೆಯು ಹಡಗಲಿಯ ಹಣ್ಣೆ ವೀರಭದ್ರಪ್ಪನವರದು. ಉತ್ತಮ ವಾಗ್ಮಿ, ನಾಟಕದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ ಸಿಡಿಮಿಡಿಗೊಂಡು ಬಿಡುವ ವೀರಭದ್ರಪ್ಪ ಗತಿಸಿದ ದಿನಮಾನಗಳಲ್ಲಿ ಶ್ರೇಷ್ಠ ಹಾಡುಗಾರ ಎಂಬ ಹೆಸರನ್ನು ಪಡೆದಿದ್ದರು.

ತಮ್ಮ ಹಲ್ಲು ಕಳೆದುಕೊಂಡು ಬೊಚ್ಚುಬಾಯಿ ಆದರೂ ಸ್ಪಷ್ಟವಾದ ಉಚ್ಚಾರ, ನಿರರ್ಗಳ ಹಾಡುವಿಕೆ ಹೊಸ ಅಲೆಯ ನಾಟಕ ತಂತ್ರ ಮೀರಿಸುವ ಛಲ ಕನಕಗಿರಿ ವಾದಿರಾಜರದು. ಕೀರ್ತನ ಕೇಸರಿ ದಾಸಚಾರ್ಯರು ತಂಗೋಡರ ಬಳಿ ಸಂಗೀತ ಕಲಿತ ಅವರು ಇಂದು ರಂಗಭೂಮಿ ಹಿನ್ನೆಲೆ ಸಂಗೀತದಲ್ಲಿ ದಾಖಲೆ ನಿರ್ಮಿಸಿದ್ದಾರೆ. ಇಲ್ಲಿಯವರೆಗೆ ಸುಮಾರು ಐದುನೂರು ರಂಗಗೀತೆಗಳನ್ನು ಬರೆದು ಹಾಡಿ, ಸಂಗೀತ ನಿರ್ದೇಶನ ಮಾಡಿದ್ದಾರೆ.

ಹಾಡುಗಾರಿಕೆ, ರಾಗ ಸಂಯೋಜನೆ, ಸಂಗೀತ ಸಂಯೋಜನೆಯಲ್ಲಿ ಪಳಗುತ್ತ ಬಂದಿರುವ ಕಲ್ಲಂಭಟ್ಟರ ಸಾಧನೆ ಒಂದಲ್ಲ ಎರಡಲ್ಲ. ಭಕ್ತಿಗೀತೆ, ಭಾವಗೀತೆ, ಹಾಗೂ ರಂಗಗೀತೆಗಳ ಸಮನ್ವಯಕಾರ. ಮನೆಯಲ್ಲಿರುವ ಆರೇಳು ಜನರೆಲ್ಲರೂ ಸಂಗೀತಗಾರರೇ. ಇವರಾರೂ ಸಂಗೀತ ಅಭ್ಯಾಸ ಮಾಡಿದವರಲ್ಲ. ಯಾರ ಬಳಿಗೂ ಹೋದವರಲ್ಲ. ಇವರಿಗೆ ಸಂಗೀತ ಹಾಗೂ ಹಾಡುಗಾರಿಕೆ ದೈವದತ್ತವಾದದು. ಹಾಡುಗಾರಿಕೆಯಲ್ಲಿ ಭೀಮಸೇನ ಜೋಷಿಯಂತೇ ಕಲ್ಲಂಭಟ್ಟರು ಪ್ರಸಿದ್ಧರಾದವರು.

೧೯೮೫ರಿಂದ ರಂಗಭೂಮಿಯ ಹಿನ್ನೆಲೆ ಗಾಯಕರಾಗಿ ಕುಡುತಿನಿ ಪ್ರಕಾಶರು ಬೆಳಕಿಗೆ ಬಂದರು. ರಾಯಚೂರು, ಬಿಜಾಪುರ, ಬಳ್ಳಾರಿ ಜಿಲ್ಲೆ ಹಾಗೂ ಆಂಧ್ರದ ಹೊರನಾಡುಗಳಲ್ಲಿಯೂ ಸಂಚರಿಸಿ ಖ್ಯಾತಿ ಪಡೆದಿದ್ದಾರೆ. "ಭಾವನಾತ್ಮಕ ಗಾಯಕ" ಎಂಬ ಬಿರುದು ಪಡೆದು ಸನ್ಮಾನಿತರಾಗಿದ್ದಾರೆ.

ಇಪ್ಪತ್ತೆರೆಡು ವರ್ಷಗಳ ರಂಗಭೂಮಿಯ ಸೇವೆಯಲ್ಲಿ ಅಪಾರ ಅನುಭವ ಹಾಗೂ ಅಭಿನಯ ಕಲೆಗಳಿಸಿರುವ ಸೋಗಿ ರತ್ನ ಉತ್ತಮ ಗಾಯಕಿ. ರಂಗಗೀತೆಗಳನ್ನು ತಮ್ಮ ಕಂಚಿನ ಕಂಠದಿಂದ ಹಾಡಬಲ್ಲವರು. ರತ್ನನ ಕನ್ನಡ ಪದಗಳನ್ನು ದಾಸರ ಹಾಗೂ ಶರಣರ ವಚನಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲರು. ಬಾನುಲಿ ಕಲಾವಿದೆಯಾಗಿ ಅನೇಕ ರಂಗಗೀತೆ ಕಾರ್ಯಕ್ರಮ ನೀಡಿದ್ದಾರೆ.

ಸುಮಾರು ೨೦೦ ನಾಟಕಗಳಲ್ಲಿ ಅಭಿನಯಿಸಿ ಐವತ್ತಕ್ಕೂ ಹೆಚ್ಚು ನಾಟಕಗಳಿಗೆ ಹಿನ್ನೆಲೆ ಗಾಯನ ನೀಡಿರುವ ಗಡದಯ್ಯನವರು ಕ್ರಮ ಬದ್ಧವಾಗಿ ಸಂಗೀತ ಕಲಿಯದೇ ಇದ್ದರೂ ಅವರಿಗೆ ಹಲವಾರು ರಾಗಗಳ ಪರಿಚಯವಿದೆ. ಮಾಲಕೌನ್ಸ್, ತಿಲಂಗ, ಚಾಂದ್, ಬಿಹಾಗ್, ಅಸಿವೇರಾ ಇತ್ಯಾದಿ. ಅವರು ಹೆಚ್ಚಾಗಿ ಅಲಪ್ ಮತ್ತು ಬಯತ್ ಎನ್ನುವ ರಾಗದಲ್ಲಿ ಹಾಡಿ ಪ್ರೇಕ್ಷಕರ ಮನವನ್ನು ಗೆದ್ದು ಉತ್ತಮ ಗಾಯಕರೆನಿಸಿದ್ದಾರೆ.

ಉಲವತ್ತಿ ಮೌನೇಶ್ವರ ಸಕಲ ಕಲೆಯ ಪ್ರವೀಣರಾಗಿದ್ದಾರೆ. ಭಕ್ತಿಗೀತೆ, ಭಾವಗೀತೆ, ಜಾನಪದ ಗೀತೆ, ದೇಶ ಭಕ್ತಿಗೀತೆ, ಹೀಗೇ ಎರಡು ನೂರಕ್ಕೂ ಹೆಚ್ಚಿನ ಗೀತೆಗಳನ್ನು ರಚಿಸಿ ರಾಗ ಸಂಯೋಜಿಸಿದ್ದಾರೆ. ಸುಂದರವಾಗಿ ಹಾಡುವ ಕಲೆಯನ್ನು ಹೊಂದಿದ್ದರಿಂದ ರಂಗಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ಆಕರ್ಷಿಸಿದ್ದಾರೆ. ಬೂದಗುಂಪಿ ವೀರಭದ್ರಪ್ಪ, ಹಾಗೂ ಎಸ್.ಎಂ. ರುದ್ರಯ್ಯಸ್ವಾಮಿ ಈ ಭಾಗದಲ್ಲಿ ರಂಗಗೀತೆಗಳಿಗಾಗಿ ಹೆಸರಾಗಿದ್ದರು.

ಸಂಗೀತಗಾರರು

ನಾಟಕ ಕೇವಲ ಅಭಿನಯ, ಹಾಡು, ರಂಗ ಸಜ್ಜಿಕೆಗಳಿಂದ ನಡೆಯುವ ಕಲೆಯಲ್ಲ. ಅಭಿನಯ ಹಾಗೂ ಗೀತೆಗೆ ಸಂಗೀತವೂ ಸೇರಿದಾಗ ಅದಕ್ಕೆ ಅರ್ಥಬರುತ್ತದೆ. ಪರಿಪೂರ್ಣತೆ ದೊರೆಯುತ್ತದೆ. ಅಂಥ ಪರಿಪೂರ್ಣತೆಯನ್ನು ಒದಗಿಸುವಲ್ಲಿ ಸಹಾಯಕಾರಿಯಾದವರು ಹಾರ್ಮೋನಿಯಂ ಮಾಸ್ತರರು ಹಾಗೂ ತಬಲಾ ಸಾಥಿಗಳು.

ನಾಟಕಗಳಲ್ಲಿ ಈ ಹಾರ್ಮೋನಿಯಂ ಮಾಸ್ತರು ಹಾಗೂ ತಬಲಾ ಸಾಥಿಗಳ ಪಾತ್ರ ಮುಖ್ಯವಾದುದು. ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಉಜ್ಜಿನಿ ಸಿದ್ಧಲಿಂಗಪ್ಪ, ಕುಂಚೂರು ಕೃಷ್ಣಪ್ಪ, ಅಂಬಳಿ ಪಂಚಯ್ಯ, ಕಂಪ್ಲಿ ಕೊಟ್ರಪ್ಪ, ಉಲವತ್ತಿ ವೀರಣ್ಣ, ಕನಕಗಿರಿ ವಾದಿರಾಜ, ಡಣಾಯಕನಕೆರೆ ಡಿ.ಎಂ.ತೋಟಯ್ಯ ಸ್ವಾಮಿ, ಕುಮಾರ ಸೋಮಣ್ಣ, ಸಿರಿಗೇರಿ ನಾಗನಗೌಡ, ಮಹಲಿಂಗ ಗವಾಯಿಗಳು, ಎ.ಕಾಳಪ್ಪ ಪತ್ತಾರ, ಕರುಣಾನಿಧಿ, ಪತ್ತಾರ ನಾಗರಾಜು, ಬಿ.ಸುಭಾಷಚಂದ್ರ, ಟಿ,ಬಿ,ಡ್ಯಾಂ ವೆಂಕನಗೌಡ, ಹಿಟ್ನಾಳ್ ವೀರೇಶ, ಹೆಚ್.ಪಿ.ಕಲ್ಲಂಭಟ್, ಮೀರಾಹಳ್ಳಿ ಜಂಬಯ್ಯ, ಬೆಳಗಲ್ ವೀರಣ್ಣ, ಸಾಣೆಹಳ್ಳಿ ಎಂ.ನಾಗಪ್ಪ, ಉಲವತ್ತಿ ಬಿ.ಮೌನೇಶ್ವರ, ಎಸ್.ಶೇಷಾದ್ರಿ, ಮೈದೂರು ಚೆನ್ನಪ್ಪ, ಏಣಗಿ ಕಾಸಿಂ ಸಾಬ್, ಎ.ವಾಮದೇವಾಚಾರ್, ಚಿನ್ನಸ್ವಾಮಿ, ಜಿ.ಉಡೆಗೌಡ್ರ ವೀರೇಶ, ಕುಡುತಿನಿ ಹನುಮಂತಪ್ಪ, ಎಚ್.ಮರಿಯಣ್ಣ, ಇವರೆಲ್ಲಾ ಹಾರ್ಮೋನಿಯಂ ನುಡಿಸುವುದರಲ್ಲಿ ನಿಪುಣರಾಗಿದ್ದಾರೆ. ಮೋರಗೇರಿ ವೀರಯ್ಯ, ಸಣ್ಣಪ್ಪ, ಉತ್ತಂಗಿ ಚೆನ್ನಪ್ಪ, ಹಗರಿಬೊಮ್ಮನಹಳ್ಳಿ ವಿರೂಪಾಕ್ಷಪ್ಪ, ಮ.ಬ.ಸೋಮಣ್ಣ, ಟಿ.ಪರಮೇಶ್ವರಪ್ಪ, ಹಡಗಲಿ ಕಾಳಪ್ಪ, ಬಗ್ಗೂರು ಭಂಗಾರಪ್ಪ ಹೂಗಾರ, ಪತ್ತಾರ ವೀರಪ್ಪ, ಕೆ.ಅಂಜಿನಪ್ಪ, ವಾಸುದೇವ ಹೆಚ್ .ಪಿ, ಡಾ.ಬಸವರಾಜ ಮಲಶೆಟ್ಟಿ, ಎಮ್.ಭೀಮಲಿಂಗಪ್ಪ, ವೀರೇಶ ಶಿಲ್ಪ, ಮುಂತಾದವರು ತಬಲಾ ವಾದಕರು. ಕೆ.ಹನುಮಂತಪ್ಪ ಬನ್ನಿಗೋಳ, ಲಕ್ಷ್ಮಿನಾರಾಯಾಣ ಮಾಸ್ತರ ಬನ್ನಿಗೋಳ, ಕಿತ್ತೂರು ಬಾಳಪ್ಪ ಇವರೆಲ್ಲರೂ ಹಾರ್ಮೋನಿಯಂ ಮಾಸ್ತರರೆಂದು ಹೆಸರು ವಾಸಿಯಾಗಿದ್ದಾರೆ.

ಕಮ್ಮಾರ ಸೋಮಣ್ಣ ಇವರ ಮುಖ್ಯ ಕಸುಬು ಬಡಗಿತನ. ಆದರೂ ಸಂಗೀತದ ಮೇಲೆ ಮೋಹ. ಹಾರ್ಮೋನಿಯಂ ವಾದ್ಯ ನುಡಿಸುವಲ್ಲಿ ವಿಶೇಷವಾದ ಸಾಧನೆ. ಹಲವಾರು ನಾಟಕಗಳಿಗೆ ಹಾರ್ಮೋನಿಯಂ ಮಾಸ್ತರರಾಗಿ ಸೇವೆ ಸಲ್ಲಿಸಿರುವುದಲ್ಲದೇ ಆ ಕಾಲಕ್ಕೆ ಬರುತ್ತಿದ್ದ ಹಾರ್ಮೋನಿಯಂ ವಾದ್ಯಗಳನ್ನು (ಕಾಲ ಪೆಟ್ಟಿಗೆ) ಕೊಂಡು ತಂದು ಹಳ್ಳಿ ನಾಟಕಗಳಿಗೆ ಬಾಡಿಗೆ ಕೊಡಲಾರಂಭಿಸಿದರು. ೧೫ ರಿಂದ ೨೦ ಕಾಲು ಪೆಟ್ಟಿಗೆಗಳು ಇವರ ಬಳಿ ಇರುತ್ತಿದ್ದವು. ಸುತ್ತಲಿನ ಹಳ್ಳಿಗಳಲ್ಲಿ ಬಯಲಾಟ ನಾಟಕಗಳ ಪ್ರಯೋಗ ಹೆಚ್ಚಲು ಇಂಥ ಉತ್ಸಾಹಗಾರರು ಬಹಳ ಮುಖ್ಯ.

ಹಾರ್ಮೋನಿಯಂ ಹಾಗೂ ಮದ್ದಳೆ ವಾದ್ಯ ಬಾರಿಸುತ್ತಿದ್ದ ಕಣವಿಹಳ್ಳಿ ರಾಮಚಂದ್ರಪ್ಪ ಶೆಟ್ಟಿ ನಾಟಕಗಳಲ್ಲಿ ಪಾತ್ರ ಮಾಡುವುದೆಂದರೆ ಅವರಿಗೆ ಎಲ್ಲಿಲ್ಲದ ಹಿಗ್ಗು. ಹಾರ್ಮೋನಿಯಂ ನುಡಿಸಿ ನಾಟಕಗಳನ್ನು

ನಿರ್ದೇಶಿಸುತ್ತಿದ್ದ ಕಮ್ಮಾರ ವೀರಭದ್ರಪ್ಪ ಸಾಕಷ್ಟು ಸಂಖ್ಯೆಯ ಶಿಷ್ಯರನ್ನು ಸೃಷ್ಟಿ ಮಾಡಿದ್ದಾರೆ. ಹಾರ್ಮೋನಿಯಂ, ಕ್ಯಾಷಿಯೋ, ದಿಲ್‌ರುಬಾ, ಹೀಗೆ ಐದಾರು ವಾದ್ಯ ನುಡಿಸುವ ಡಣಾಯಕನ ಕೆರೆ ತೋಟಯ್ಯಸ್ವಾಮಿ ಈ ಭಾಗದ ನಾಟಕಗಳ ಆಪದ್ಬಾಂಧವ. ಮತ್ತೊಬ್ಬ ಕಲಾವಿದ ಖಾದಕರ್ ಸಾಬ್ ವಾದ್ಯ ಬಾರಿಸುವಿಕೆ, ಭಾಗವಂತಿಕೆ ಹೀಗೆ ಎಲ್ಲ ವಿಷಯದಲ್ಲೂ ಪಾರಂಗತರು.

ಪಂಡಿತ ಪುಟ್ಟರಾಜಗವಾಯಿಗಳ ನಾಟಕ ಕಂಪನಿಯಲ್ಲಿ ಹಾರ್ಮೋನಿಯಂ ನುಡಿಸುವ ಮತ್ತು ಹಿನ್ನೆಲೆಯಲ್ಲಿ ಹಾಡುವ ಮಾಧುರ್ಯ ಎಂ.ಪಿ.ಪ್ರಕಾಶರ ಕಿವಿಗೆ ಬಿದ್ದುದರ ಪರಿಣಾಮವಾಗಿ ಬಳ್ಳಾರಿ ಜಿಲ್ಲೆಗೆ ಮಹಾಲಿಂಗರಾಜ ಗವಾಯಿಗಳು ಕಾಲಿಡುವಂತಾಯಿತು. ಜೀವನಕ್ಕೊಂದು ನೌಕರಿ ಗಿಟ್ಟಿಸಿಕೊಂಡು ಗವಾಯಿಗಳು ಜಿಲ್ಲೆಯಲ್ಲಿಯೇ ನೆಲೆನಿಂತು ಮುಂದಿನ ಎಲ್ಲಾ ನಾಟಕಗಳಿಗೆ ಮಹಾಲಿಂಗರಾಜರ ಸಂಗೀತ ಸುಧೆ, ಮಧುರ ಗಾಯನ ಪ್ರಾಪ್ತವಾಗುವಂತಾಯಿತು. ಅಂತೆಯೇ ರಕ್ಷಾಬಂಧನ, ಲಾಟರಿ ಬಂತಪ್ಪೋ ಲಾಟರಿ, ಶುದ್ಧ ಸೋಂಬೇರಿ, ಅಳಿಯ ದೇವರು, ಅಜ್ಜನ ಅವಾಂತರ, ಸಂಗ್ಯಾ-ಬಾಳ್ಯಾ, ಜೋಕುಮಾರ ಸ್ವಾಮಿ, ಆಷಾಡದ ಒಂದು ದಿನ, ಸೂರ್ಯ ಶಿಕಾರಿ, ಯಯಾತಿ, ನಾಗಮಂಡಲ, ಅಗ್ನಿ ಮತ್ತು ಮಳೆಯಂಥ ನಾಟಕಗಳು ಅಭೂತಪೂರ್ವ ಪ್ರದರ್ಶನ ಕಂಡವು.

ಬಹು ನಾಟಕಗಳಿಗೆ ಹಾರ್ಮೋನಿಯಂ ನುಡಿಸುವ ಡಾ.ಬಸವರಾಜ ಮಲಶೆಟ್ಟರು ಸಂಗೀತ ಸಂಯೋಜನೆಗೆ ಖ್ಯಾತರಾದರೆ, ಮೈದೂರು ಚೆನ್ನಬಸಪ್ಪನವರು ತಮ್ಮ ಗುರುವನ್ನೆ ಮೀರಿಸುವ ಪಿಯಾನೋ ವಾದಕರಾಗಿದ್ದರು.

ಉತ್ತರ ಕರ್ನಾಟಕದಲ್ಲಿ ನಾಟಕಕಾರರು, ನಿರ್ದೇಶಕರು ಹಾಗೂ ರಂಗಭೂಮಿ ಹಿನ್ನೆಲೆ ಸಂಗೀತಗಾರರೆಂದು ಖ್ಯಾತಿ ಪಡೆದ ಕನಕಗಿರಿ ವಾದಿರಾಜರು ಐದುನೂರು ಗೀತೆಗಳನ್ನು ಬರೆದು ಅವುಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಉತ್ತಮ ಹಾರ್ಮೋನಿಯಂ ಸಂಗೀತಗಾರರು ರಾಜಕೀಯದ ಅಂಧಕಾರದಲ್ಲಿ ಪ್ರತಿಭೆ ಇದ್ದರೂ ಪುರಸ್ಕಾರವಿಲ್ಲದೆ ಇಂದು ವಾದಿರಾಜರು ಕೇವಲ ಪೇಟಿ ಮಾಸ್ತರರಾಗಿದ್ದಾರೆ. ಸಂಗೀತ ತುಂಬ ಪ್ರಿಯವಾದ ಕಲೆಯಾಗಿದ್ದರಿಂದಲೂ ತಮ್ಮ ಪಾಂಡಿತ್ಯವನ್ನು ನಾಟಕಕ್ಕೆ ಬಳಸುವ ಆಸೆಯಿಂದಲೂ ಸುಮಾರು ೫೨ ನಾಟಕಗಳಿಗೆ ರಾಗಸಂಯೋಜನೆ ಮಾಡಿ ನಾಟಕದವರಿಗೂ ಹಾಗೂ ಪ್ರೇಕ್ಷಕರಿಗೂ ತುಂಬಾ ಬೇಕಾದವರಾಗಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆದ "ಚೆನ್ನಪ್ಪ ಚೆನ್ನೇಗೌಡ" ನಾಟಕದ ೧೫೧ನೇ ಪ್ರಯೋಗದವರೆಗೂ ಸಂಗೀತ ನೀಡಿ ಹೆಸರು ಪಡೆದ ಕಲಾವಿದ ಹಗರಿಬೊಮ್ಮನಹಳ್ಳಿಯ ಶೇಷಾದ್ರಿ. ಶೇಷಾದ್ರಿಯವರಿಗೆ ಸಂಗೀತ ವಿದ್ಯೆ ವಂಶಪರಂಪರೆಯಿಂದ ಬಂದಿದ್ದು. ಜೊತೆಗೆ ಅದರ ಸಾಧನೆಗಾಗಿ ತಮ್ಮ ಪ್ರಾಥಮಿಕ ಶಿಕ್ಷಣದ ನಂತರ ಗದುಗಿನ "ವೀರೇಶ್ವರ ಪುಣ್ಯಾಶ್ರಮ"ದಲ್ಲಿ ಶಿಷ್ಯತ್ವ ಪಡೆದು ಆರು ವರ್ಷಗಳ ತಮ್ಮ ಅವಿರತ ಸಾಧನೆ. ಸ್ಥಳೀಯ ಕಲಾವಿದರನ್ನು ಕೂಡಿಸಿಕೊಂಡು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ನಡೆಯುವ ನಾಟಕ ಪ್ರದರ್ಶನಗಳಲ್ಲಿ ಶೇಷಾದ್ರಿ ಸಂಗೀತ ನೀಡುತ್ತಾ ಹೆಸರು ಮಾಡಿದ್ದಾರೆ.

ವಾಮದೇವಾಚಾರ್ ಒಳ್ಳೆಯ ಸಂಗೀತಗಾರ ಹಾಗೂ ಹಾರ್ಮೋನಿಯಂ ವಾದಕ. ಬಳ್ಳಾರಿ ಜಿಲ್ಲೆಯ ಆಸುಪಾಸಿನ ಎಲ್ಲಾ ಗ್ರಾಮಗಳಿಗೂ ಚಿರಪರಿಚಿತರಾದವರು. ಹುಟ್ಟು ಕುರುಡರಾದ ಎಡೆಗೌಡ್ರ ವೀರೇಶ, ಪಂಡಿತ ಪುಟ್ಟರಾಜ ಗವಾಯಿಗಳ ಗರಡಿಯಲ್ಲಿ ಹದಿನೆಂಟು ವರ್ಷಗಳ ಸಂಗೀತದ ಅನುಭವ ಪಡೆದು ಗವಾಯಿಗಳಿಂದಲೇ "ನಾಟ್ಯ ಚತುರ" ಎಂಬ ಬಿರುದು ಹೊಂದಿ ಬಿಜಾಪುರ, ಧಾರವಾಡ, ಬಳ್ಳಾರಿ ಹಾಗೂ ಬೆಳಗಾವಿ ಜಿಲ್ಲೆಯಲ್ಲೆಲ್ಲಾ ಪರಿಚಿತರಾಗಿದ್ದಾರೆ.

ಜಿ.ಚಿನ್ನಸ್ವಾಮಿಯವರಿಗೆ ಚಿಕ್ಕಂದಿನಿಂದಲೂ ಕ್ಯಾಷಿಯೋ, ಗಿಟಾರ್ ನುಡಿಸುವ ಅಭ್ಯಾಸ. ಅನೇಕ ಅಮೇಚರ್ ಕಂಪನಿಗಳಲ್ಲಿ ಹಲವಾರು ನಾಟಕಗಳಿಗೆ ಸಾಥ್ ನೀಡಿದ್ದಲ್ಲದೇ, ಸುಮಾರು ೨೦ ವರ್ಷಗಳಿಂದ ಶ್ರೀಮಲ್ಲಿಕಾರ್ಜುನ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿಯಲ್ಲಿ ಸಂಗೀತ ನಿರ್ದೇಶಕರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ಎಚ್.ಪಿ.ಕಲ್ಲಂಭಟ್ ಉತ್ತಮ ತಬಲಾ ವಾದಕ ಹಾಗೂ ಹಾರ್ಮೋನಿಯಂ ವಾದಕರೂ ಹೌದು. ಸಾಮಾಜಿಕ, ಪೌರಾಣಿಕ ನಾಟಕಗಳಿಂದ ಪ್ರಾರಂಭವಾದ ಅವರ ಸಂಗೀತದ ಸೇವೆ ಅಸಂಗತ, ಏಕಾಂಕ ನಾಟಕಗಳವರೆಗೂ ಹರಡಿದ್ದು ಅವರ ವ್ಯಕ್ತಿತ್ವದ ಹೆಚ್ಚುಗಾರಿಕೆಯಾಗಿದೆ. ಬಿ.ಮೌನೇಶ್ವರ ನಿರರ್ಗಳವಾಗಿ ಕ್ಯಾಷಿಯೋ ಹಾರ್ಮೋನಿಯಂ ನುಡಿಸುವ ಕಲಾವಿದರು.

ಎಂ.ನಾಗಪ್ಪ ತಮ್ಮ ಹದಿನೈದನೇ ವಯಸ್ಸಿಗೆ ರಂಗಭೂಮಿ ಪ್ರವೇಶಿಸಿ ಐವತ್ತು ವರ್ಷಗಳ ಸಂಗೀತದ ಸುದೀರ್ಘ ಅನುಭವ ಪಡೆದಿದ್ದಾರೆ. ಜೊತೆಗೆ ಕ್ಯಾಷಿಯೋ ನುಡಿಸುವುದನ್ನು ಕಲಿತ ನಾಗಪ್ಪನವರು ಹಲಗೇರಿ, ಚಿತ್ರದುರ್ಗ, ನರಗುಂದ, ಗೋಕಾಕ್, ಧಾರವಾಡ, ರಾಯಚೂರು, ಬಳ್ಳಾರಿ ಪ್ರದೇಶಗಳಲ್ಲಿ ಸುತ್ತಾಡಿ ರಂಗಭೂಮಿಗೆ ಹಗಲಿರುಳೂ ದುಡಿದು ರಂಗಭೂಮಿಯನ್ನು ಮೆರೆಸಿದ್ದಾರೆ.

ಕುಡುತಿನಿ ಹನುಮಂತಪ್ಪ ಸಾವಿರಾರು ನಾಟಕಗಳಲ್ಲಿ ಕ್ಲಾರಿಯೋನೆಟ್ ಹಾಗೂ ಕ್ಯಾಷಿಯೋ ವಾದಕರು. ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿರುವ ಹನುಮಂತಪ್ಪ ಆಕಾಶವಾಣಿ ಕಲಾವಿದರೂ ಹೌದು.

ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಎಚ್.ಮರಿಯಣ್ಣ ಆಸಕ್ತಿವಹಿಸದ ಕ್ಷೇತ್ರವೇ ಇಲ್ಲ. ನಟರೂ, ನಿರ್ದೇಶಕರು, ನಿರ್ವಹಣೆ, ಹಾರ್ಮೋನಿಯಂ, ತಬಲಾ, ಮೇಕಪ್, ಸನ್ನಿವೇಶ, ಸಾಮಗ್ರಿ ಸರಬರಾಜು ಈ ರೀತಿಯಾಗಿ ಎಲ್ಲಾ ಕ್ಷೇತ್ರಗಳಲ್ಲಿ ಮರಿಯಣ್ಣ ದುಡಿದಿದ್ದಾರೆ.

ಶಿರಗೇರಿ ನಾಗನಗೌಡ, ಬೆಳಗಲ್ ವೀರಣ್ಣ, ವಿರಾತೊರ್ನಹಳ್ಳಿ ಜಂಬುನಾಥ, ಇವರುಗಳ ಕಂಪನಿ ನಾಟಕ, ಸಂಘ ಸಂಸ್ಥೆಗಳ ನಾಟಕಗಳಿಗೆ ಸಂಗೀತವನ್ನು ನೀಡಿ ಜಿಲ್ಲೆಯಲ್ಲಿ ಅತೀ ಉನ್ನತದ ಮೇಲುಸ್ತರದ ಸಂಗೀತಗಾರರೆಂದು ಪ್ರಸಿದ್ಧಿ ಹೊಂದಿದ್ದಾರೆ. ಇನ್ನೂ ಕೆಲವರಾದ ಎ.ಕಾಳಪ್ಪ, ನಾಗರಾಜ ಪತ್ತಾರ, ಕರುಣಾನಿಧಿ ಪತ್ತಾರ್, ಬಿ.ಸುಭಾಷಚಂದ್ರ, ವೆಂಕನಗೌಡ, ಹಿಟ್ನಾಳ್ ವೀರೇಶ, ಇವರೆಲ್ಲಾ ಹಳ್ಳಿ ಹಳ್ಳಿಗೂ ಸಂಚರಿಸಿ ರಂಗಭೂಮಿಗೆ ಸಂಗೀತದ ಸೇವೆ ಮಾಡಿದ್ದಾರೆ.

ತಬಲಾವಾದನ ಮ.ಬ.ಸೋಮಣ್ಣನವರಿಗೆ ಚಿಕ್ಕಂದಿನಿಂದಲೇ ಹವ್ಯಾಸವಾಗಿ ಬೆಳೆದು ಬಂದಿರುವ ಕಲೆ. ಕ್ರಮೇಣ ಸಾವಿರಾರು ತಬಲಾಸಕ್ತರಿಂದ ಪ್ರಶಂಸಿಸಲ್ಪಟ್ಟು ನೂರಾರು ನಾಟಕಗಳಿಗೆ ತಬಲಾವಾದನ ಮಾಡಿದ್ದಾರೆ. ಆಕಾಶವಾಣಿ ಕಲಾವಿದರಾದ ಸೋಣ್ಣನವರಿಂದ ಹಲವಾರು ಬಾರಿ ತಬಲಾವಾದನ ರೇಡಿಯೋದಲ್ಲಿ ಪ್ರಸಾರಗೊಂಡಿವೆ. ಇವರಂತೆ ಎಂ.ಭೀಮಲಿಂಗಪ್ಪ ಉತ್ತಮ ತಬಲಾವಾದಕರು. ಪ್ರಸಿದ್ಧ ತಬಲಾವಾದಕ ಜೀರು ಶಿವಲಿಂಗಪ್ಪ ಮುದ್ದಾಪುರ ಅವರ ಪಟ್ಟದ ಶಿಷ್ಯರು. ಇವರು ನಾಟಕಗಳಲ್ಲದೇ ಬಯಲಾಟಗಳಲ್ಲಿ ತಬಲಾವಾದಕರಾಗಿ ಸೇವೆಯನ್ನು ಮಾಡಿದ್ದಾರೆ.

ಗುಲ್ಬರ್ಗ ಜಿಲ್ಲೆಯ ಅಫಜಲ್ ಪುರದವರಾದ ಭಗವಂತಪ್ಪ ಹೂಗಾರ, ಹುಟ್ಟು ಪ್ರತಿಭಾವಂತರು. ಇವರ ಪ್ರಾರಂಭಿಕ ತಬಲಾ ಶಿಕ್ಷಣವು ತಂದೆಯವರಿಂದ ಆಂರಭಗೊಂಡು ನಂತರ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಸುಮಾರು ೧೫ ವರ್ಷ ತಬಲಾ ಶಿಕ್ಷಣ ಪಡೆದು ಕೊಂಡು ನಾಡಿನ ಹಾಗೂ ರಾಷ್ಟ್ರದ ಹೆಸರಾಂತ ಗಾಯಕರು, ವಾದಕರಿಗೆ ತಬಲಾ ಸಾಥಿ ನೀಡಿದವರು. ೧೯೭೫ ರಲ್ಲಿ ಬಳ್ಳಾರಿ ಜಿಲ್ಲೆಯ ಶಿರುಗುಪ್ಪ ದಲ್ಲಿ ನೆಲೆಸಿ ನಾಟಕಗಳಲ್ಲಿ ತಬಲಾ ಸೇವೆ ಮಾಡುತ್ತಿದ್ದಾರೆ. ಇವರ ತಬಲಾ ವಾದನಕ್ಕೆ ಮಾರುಹೋಗಿ ಬಳ್ಳಾರಿ ಆಗರ್ಭ ಶ್ರೀಮಂತರಾದ ಎಂ.ಗೋಪಾಲರೆಡ್ಡಿ ಗೌಡರು ಇವರನ್ನ ಇಲ್ಲಿಯೇ ಇಟ್ಟು ಕೊಂಡು ಆಸ್ತಿ ನೀಡಿದ್ದಾರೆ. ಅದೇ ತಾಲೂಕಿನ ಶಾಸಕರಾದ ಎಂ. ಶಂಕರರೆಡ್ಡಿ ಅವರು ಇವರ ತಬಲಾ ವಾದನ ಮೆಚ್ಚಿ ಐದು ಎಕರೆ ಜಮೀನನ್ನು ದಾನವಾಗಿ ಕೊಟ್ಟಿರುವುದು ಪ್ರಶಂಸಾರ್ಹವೇ ಸರಿ.

ಕರ್ನಾಟಕ ಹಾಗೂ ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ಏರ್ಪಡಿಸಿದ ಅನೇಕ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿ, ಅನೇಕ ಸಂಗೀತಗಾರರಿಂದ ಮೆಚ್ಚುಗೆ ಪಡೆದು, ಮಧ್ಯ ಪ್ರದೇಶ ಭೂಪಾಲ್, ಮುಂಬೈ, ಮದ್ರಾಸ್, ಹೈದ್ರಾಬಾದ್, ಮೈಸೂರು, ಬೆಂಗಳೂರು, ಮಂಗಳೂರು, ಧರ್ಮಸ್ಥಳ, ಶಿವಮೊಗ್ಗ, ಪೂನಾ ಮುಂತಾದ ಕಡೆಗಳಲ್ಲಿ ಇವರು ತಬಲಾ ಸಾಥ ನೀಡಿಲು ಆಹ್ವಾನಿತ ಕಲಾವಿದರಾಗಿ ಭಾಗವಹಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳಿಂದ, ಮಠಾಧೀಶರಿಂದ ಸನ್ಮಾನಿತರಾಗಿದ್ದಾರೆ.

ಹೆಗ್ಗೋಡು, ಉಡುಪಿ, ಬೆಂಗಳೂರು, ಮಣಿಪಾಲ, ಇತ್ಯಾದಿ ಪ್ರದೇಶಗಳಲ್ಲಿ ತಬಲಾ ವಾದಕರೆಂದು ಪ್ರಸಿದ್ಧಿ ಪಡೆದು ಪತ್ತಾರ ವೀರಪ್ಪ ಬಯಲಾಟಗಳಲ್ಲಿ ಭಾಗವತರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಆಪದ್ಬಾಂಧವ ನಟನೆಂದೇ ಕರೆಸಿಕೊಳ್ಳುವ ಹೆಚ್.ಮರಿಯಣ್ಣ ಉತ್ತಮ ತಬಲಾ ಸಾಥಿಗಳು ಹೌದು.

ಅನುಭವಿಗಳೂ, ಮೇಧಾವಿಗಳೂ, ಆದ ಡಾ.ಬಸವರಾಜ ಮಲಶೆಟ್ಟರು ತಬಲಾ ಸಾಥಿಗಳಾಗಿ ನಿಷ್ಣಾತರು. ಸ್ನಾತಕೋತ್ತರ ಪದವಿ ಪಡೆದಿರುವ ಕೆ.ವಾಸುದೇವ ಚಿಕ್ಕ ವಯಸ್ಸಿನಲ್ಲಿ ತಬಲಾ ವಾದಕರಾಗಿ ರಂಗಭೂಮಿಗೆ ಅಗಾಧ ಸೇವೆಯನ್ನು ಸಲ್ಲಿಸಿದ್ದಾರೆ.

ತಬಲಾ, ಮೃದಂಗಾ ಹಾಗೂ ಕ್ಲಾರಿಯೋನೆಟ್ ವಾದ್ಯಗಳಲ್ಲಿ ಅಪಾರ ಜ್ಞಾನಗಳಿಸಿದ ಕೆ.ಅಂಜಿನಪ್ಪ ಸತತವಾಗಿ ೩೫ ವರ್ಷಗಳಿಂದ ರಂಗಭೂಮಿಗೋಸ್ಕರ ದುಡಿದ ಶ್ರಮಜೀವಿ. ಆಂಧ್ರ ಮತ್ತು ಕರ್ನಾಟಕ ಪ್ರಾಂತಗಳಲ್ಲಿ ಅನೇಕ ಅಮೇಚೂರ್ ಕಂಪನಿಗಳಲ್ಲಿ ಸೇವೆ ಸಲ್ಲಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಟಿ.ಪರಮೇಶ್ವರ ವೃತ್ತಿಯಲ್ಲಿ ಉಪನ್ಯಾಸಕರಾಗಿ ಸುತ್ತಮುತ್ತಲಿನ ಜಿಲ್ಲೆಯ ಹಳ್ಳಿಗಳಲ್ಲಿ ತಬಲಾ ಸಾಥಿಯಾಗಿ ಹೆಸರಾಗಿದ್ದಾರೆ. ಇನ್ನೋರ್ವ ತಬಲಾವಾದಕ ವೀರೇಶ ಶಿಲ್ಪ ಚಿಕ್ಕ ವಯಸ್ಸಿನಲ್ಲೇ ಕಲೆಯನ್ನು ತನ್ನದಾಗಿಸಿಕೊಂಡು ರಂಗಭೂಮಿಯ ನಾಟಕಗಳಿಗೆ ತಬಲಾವಾದನ ನೀಡುವಲ್ಲಿ ಪ್ರೇಕ್ಷಕರ ಆಕರ್ಷಣೆಗೆ ಒಳಗಾಗಿದ್ದಾರೆ.

ನಾಟಕಗಳಿಗೆ ಹಿನ್ನೆಲೆ ಸಂಗೀತ ನೀಡುತ್ತ ವಿಶೇಷವಾಗಿ ತಬಲಾ ವಾದಕರಾಗಿ ಹೆಸರು ಮಾಡಿರುವ ಅಕ್ಕ ಸಾಲಿ ಕಾಳಪ್ಪನವರು ಬಾಳೊಂದು ನಂದನ, ಆಷಾಡದ ಒಂದು ದಿನ, ಅಂಗುಲಿ ಮಾಲ, ಜೋಕುಮಾರ ಸ್ವಾಮಿ, ಸಂಗ್ಯಾ-ಬಾಳ್ಯಾ, ಅಗ್ನಿ ಮತ್ತು ಮಳೆ, ನಾಗಮಂಡಲ, ಈ ನಾಟಕಗಳು ಅವರಿಗೆ ಹೆಸರನ್ನು ತಂದಿವೆ.

ವೇಷಭೂಷಣ ಪರಿಕರಗಳು : ಮೊದಮೊದಲು ರಂಗಸಜ್ಜಿಕೆಗಳೇ ಇದ್ದಿಲ್ಲ. ಯಾವುದಾದರೊಂದು ಎತ್ತರವಾದ ಸ್ಥಳದಲ್ಲಿ ಅಟ್ಟವನ್ನು ಹಾಕುತ್ತಿದ್ದರಿಂದ ಅದರ ಮೇಲೆ ರಂಗ ನಿರ್ಮಿಸಿಕೊಂಡು ನಾಟಕವನ್ನು ಆಡುತ್ತಿದ್ದರು. ಆದರೆ ಈಗ ಸುವ್ಯವಸ್ಥಿತವಾದ ರಂಗ ಮಂದಿರಗಳು ನಿರ್ಮಿತವಾಗಿವೆ. ಹಿಂದೆ ಒಂದೇ ಒಂದು ಸಾದಾ ಪರದೆಯನ್ನು ಇಳಿ ಬಿಟ್ಟುಕೊಂಡು ನಾಟಕಗಳನ್ನು ಅಭಿನಯಿಸುತ್ತಿದ್ದರು. ಇಳಿ ಬಿಟ್ಟಿರುವ ಬಿಳಿ ಪರದೆಯನ್ನು ಪ್ರೇಕ್ಷಕರು ಸಂದರ್ಭಕ್ಕೆ ತಕ್ಕಂತೆ ಸನ್ನಿವೇಶಗಳನ್ನು ತಮ್ಮ ಮನದಲ್ಲಿ ಊಹಿಸಿಕೊಳ್ಳ ಬೇಕಾಗಿತ್ತು. ಏಕೆಂದರೆ ಅಂದು-ಇಂದಿನಂತೆ ವಿವಿಧ ರೀತಿಯ ದೃಶ್ಯ ಪರದೆಗಳು ಇದ್ದಿಲ್ಲವಾದ್ದರಿಂದ ಸಾದಾ ಪರದೆ ಒಂದೇ ಸಾಮಾನ್ಯವಾಗಿ ಇರುತ್ತಿತ್ತು.

ಕ್ರಮೇಣ ರಂಗ ಸಜ್ಜಿಕೆಯಲ್ಲಿ ಬದಲಾವಣೆಗಳು ಉಂಟಾದವು ವಿವಿಧ ರೀತಿ ದೃಶ್ಯಗಳ ಪರದೆಗಳನ್ನು ರಂಗ ಸಜ್ಜಿಕೆಯ ನೈಜತೆಯನ್ನು ತೋರಿಸಲು ನಿರ್ಮಿಸಿದರು. ಗುಬ್ಬಿ ಕಂಪನಿಯವರು ತಯಾರಿಸಿದ ಚಲಿಸುವ ರಂಗ ಸಜ್ಜಿಕೆ, ಪ್ರೇಕ್ಷಕರ ದೃಷ್ಠಿ ಬದಲಾಯಿಸುವಷ್ಟರಲ್ಲಿ ಬೇರೆಯಾಗುತ್ತಿದ್ದ ದೃಶ್ಯಗಳು ಪ್ರೇಕ್ಷಕರ ಮನಸೂರೆಗೊಳ್ಳುತ್ತಿದ್ದವು. ಇಂದು ನಾಟಕಗಳಲ್ಲಿ ಹೆಚ್ಚಾಗಿ ನೈಜತೆಯನ್ನು ತೋರಿಸುವ ಸಲುವಾಗಿ ಸ್ವಾಭಾವಿಕ ವಾದ ದೃಶ್ಯಗಳನ್ನು ನಿರ್ಮಿಸುವಷ್ಟು ರಂಗಭೂಮಿ ಮುಂದುವರಿದಿದೆ. ಉದಾ: ಉದಯಿಸುವ ಸೂರ್ಯನ ದೃಶ್ಯವನ್ನು ಬೆಳಕಿನ ಚಳಕದಿಂದ ಪರದೆಯ ಮೇಲೆ ಸೂರ್ಯ ಉದಯಿಸುತ್ತಾನೇನೋ ಎಂಬಂತೆ ತೋರಿಸು ವುದು. ಅಂದಿನ ನಟರಿಗೆ ಕಂಠ ಚೆನ್ನಾಗಿದ್ದು ಜೊತೆಗೆ ಸಂಗೀತದ ಜ್ಞಾನ ಅವರಿಗಿರಬೇಕಾಗಿತ್ತು. ಆದರೆ ಇಂದು ಹಿನ್ನಲೆ ಗಾಯನವಿರುವುದರಿಂದ ಅದರ ಅಗತ್ಯತೆ ಅವಶ್ಯವೆನ್ನಿಸುವುದಿಲ್ಲ. ಸಣ್ಣ ಕಂಠದವರು ಮೆಲ್ಲನೆ ಮಾತನಾಡಿದರೂ ಈಗ ನಡೆಯುತ್ತದೆ. ಆದರೆ ಹಿಂದೆ ಧ್ವನಿವರ್ಧಕಗಳು ಇರಲಿಲ್ಲವಾದ್ದರಿಂದ ಹಾಡುತ್ತಾ ಮಾತಾಡುತ್ತಾ ರಕ್ತ ಕಾರಿದವರು ಎಷ್ಟೋ ಕಲಾವಿದರು ಇದ್ದಾರೆ. ಇಂದಿನ ರಂಗ ಭೂಮಿಯಲ್ಲಿ ರಂಗ ತಂತ್ರಜ್ಞರು

ಬೆಳಕಿನ ಯೋಜನೆಯಲ್ಲಿ ಹೆಚ್ಚು ಪ್ರಾವಿಣ್ಯತೆಯನ್ನು ಪಡೆದಿದ್ದಾರೆ. ಮೊದಮೊದಲು ಪಂಜಿನ ಬೆಳಕಿನಲ್ಲಿ ನಾಟಕಗಳನ್ನು ಅಭಿನಯಿಸುತ್ತಿದ್ದರು. ನಂತರ ಗ್ಯಾಸ್ ಲೈಟ್‌ನಲ್ಲಿ, ಲೈಮ್‌ಲೈಟ್, ಕ್ಯಾಲ್ಸಿಯಂ ಲೈಟ್, ಆರ್ಕಲ್ಯಾಂಪ್, ಇನ್ ಕ್ಯ ಡಿಸೆಂಟ್, ಇತ್ತೀಚೆಗೆ ನವೀನ ರೀತಿಯ ಸ್ಪಾಟ್‌ಲೈಟ್‌ಗಳು ಬೆಳಕಿಗೆ ಬಂದು ರಂಗಭೂಮಿಯನ್ನು ರಂಗೇರಿಸಿದೆ.

ಅಂದು ನಾಟಕಗಳು ಒಂದೇ ತೆರನಾದ ಬೆಳಕಿನಲ್ಲಿ ಅಭಿನಯಿಸುತ್ತಿದ್ದರಿಂದ ಜನರ ಮೇಲೆ ಅಷ್ಟೊಂದು ಪ್ರಭಾವ ಬೀರುತ್ತಿರಲಿಲ್ಲ. ಬೆಳಕಿನ ಪ್ರಭಾವದಿಂದಾಗಿ ಇಂದಿನ ನಾಟಕಗಳು ಅಂದಿನ ನಾಟಕಗಳಿಗಿಂತ ಹೆಚ್ಚು ಪ್ರಭಾವಿತವಾಗಿ ಪ್ರೇಕ್ಷಕರನ್ನು ದಿಗ್ಮೂಢರನ್ನಾಗಿ ಮಾಡಿವೆ. ರಂಗ ಭೂಮಿಯ ಮೆರಗನ್ನು ಹೆಚ್ಚಿಸಿವೆ. ವರ್ಣಾಲಂಕಾರ ಹಾಗೂ ವಸ್ತ್ರಾಲಂಕಾರ ರಂಗಭೂಮಿಯಲ್ಲಿ ಅತೀ ಮುಖ್ಯವಾದುದು. ಹಿಂದೆ ನಟರಿಗೆ ಒಂದೇ ರೀತಿಯ ಮೇಕಪ್ ಮಾಡಲಾಗುತ್ತಿತ್ತು. ಅಂದರೆ ರಾಜನ ಪಾತ್ರಕ್ಕೂ ಭಿಕ್ಷುಕನ ಪಾತ್ರಕ್ಕೂ ಒಂದೇ ತರಹದ ಅಲಂಕಾರ ಮಾಡುತ್ತಿದ್ದರು. ಇಂದಿನ ನಾಟಕಗಳಲ್ಲಿ ಹೆಚ್ಚಾಗಿ ನೈಜತೆಯನ್ನು ಕಾಪಾಡಿಕೊಂಡು ಬಂದಿರುವುದರ ಸಲುವಾಗಿ ರಾಜನಿಗೆ ರಾಜನ ಅಲಂಕಾರ, ಭಿಕ್ಷುಕನಿಗೆ ಭಿಕ್ಷುಕನ ಅಲಂಕಾರ ಮಾಡಿ ವ್ಯತ್ಯಾಸವನ್ನು ವ್ಯಕ್ತಪಡಿಸುತ್ತಾರೆ.

ರಂಗಸಜ್ಜಿಕೆಗೆ ಬೇಕಾಗುವ ದೃಶ್ಯ ಪರದೆ, ಧ್ವನಿವರ್ಧಕ, ಬೆಳಕಿನ ವಿನ್ಯಾಸ, ವಾದ್ಯಗಳು, ಬಣ್ಣ ಹಚ್ಚುವಿಕೆ, ಉಡುಗೆ-ತೊಡುಗೆ ಸಾಮಗ್ರಿಗಳನ್ನೊದಗಿಸುವ ಕಲೆ ಮೊದಲಿನಿಂದಲೂ ಕೆಲವು ಕಲಾವಿದರು ಉಳಿಸಿ ಬೆಳಸಿಕೊಂಡು ಬರುತ್ತಿದ್ದಾರೆ. ನರಸಿಂಹಾಚಾರ್ಯರು ಪೌರಾಣಿಕ, ಐತಿಹಾಸಿಕ, ನಾಟಕಗಳಿಗೆ ಬೇಕಾದ ಬಹಳಷ್ಟು ಪರಿಕರಗಳನ್ನು ತರಿಸಿ ಬಾಡಿಗೆ ಕೊಡುತ್ತಿದ್ದರು. ಆ ಕಾಲಕ್ಕೆ ಮದ್ರಾಸಿನಿಂದ ದುಬಾರಿಯಾದ ನಾಟಕದ ವೇಷಭೂಷಣಗಳನ್ನು ತರಿಸಿದ್ದರು. ನಾಟಕದ ಸೀನರಿಗಳನ್ನು ಬಾಡಿಗೆಗೆ ಕೊಡುವ ವೃತ್ತಿಯನ್ನು ಅವಲಂಬಿಸಿ ಈಗ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಅಗಳಕೇರಿಯಲ್ಲಿ ನೆಲಸಿರುವ ಜಿ.ಮೈಲಾರಪ್ಪ ಮೂಲತಃ ಬಳ್ಳಾರಿಯವರು. ನಾರಾಯಣಸ್ವಾಮಿ ಎಂಬ ಜಮೇದಾರ್ ಸುತ್ತಲು ಹಳ್ಳಿಗಳ ನಾಟಕಗಳಲ್ಲಿ ಮುಖಕ್ಕೆ ಬಣ್ಣ ಹಚ್ಚುತ್ತಿದ್ದರು.ಈ ರೀತಿ ಪ್ರಯೋಗಗಳನ್ನು ನಡೆಸಿಕೊಂಡು ಬರುತ್ತಿದ್ದರು.

ಮರಿಯಮ್ಮನಹಳ್ಳಿಯಲ್ಲಿ ನಾಟಕವೇ ಪ್ರಧಾನವಾದ್ದರಿಂದ ಅಕ್ಕಪಕ್ಕದ ೪೦ ಹಳ್ಳಿಗಳಲ್ಲಿ ನಾಟಕ, ಬಯಲಾಟಗಳಿಗೆ ಇಲ್ಲಿನ ಪರದೆ, ಧ್ವನಿವರ್ಧಕ, ರಂಗಪರಿಕರಬೇಕು. ಪರಿಕರಗಳನ್ನು ಬಾಡಿಗೆಗೆ ಕೊಡುವ ನಾಲ್ಕೈದು ಕುಟುಂಬಗಳು ಇಲ್ಲಿವೆ. ಜೊತೆಗೆ ಕೂಡ್ಲಿಗಿಯಲ್ಲಿಯೂ ಇಂಥ ಕುಟುಂಬಗಳಿವೆ. ಬಹುತೇಕ ಅನೇಕ ನಾಟಕ ಕಂಪನಿಗಳ ಹೀರೋ ಆಗಿ ಅಭಿನಯಿಸಿ ಅತ್ಯಂತ ಪ್ರಸಿದ್ಧ ನಟರಾದ ದುರ್ಗಾದಾಸ್ ಅವರು ಅನೇಕ ನಾಟಕಗಳ ನಟರಿಗೆ ಬಣ್ಣ ಹಚ್ಚಿದರು. ತಾವೇ ಸ್ವತಃ ಕಿರೀಟ, ಖಡ್ಗಗಳನ್ನು ತಯಾರಿಸಿ ನಾಟಕಗಳಲ್ಲಿ ಉಪಯೋಗಿಸುತ್ತಿದ್ದರು.

ಅಂದಿನ ದಿನಮಾನದಲ್ಲಿ ಮೇಕಪ್ ಕಲೆಯು ಉತ್ತಮ ಮಟ್ಟದ್ದಾಗಿರಲಿಲ್ಲವಾದ್ದರಿಂದ ಹಣ್ಣಿ ವೀರಭದ್ರಪ್ಪನಂಥವರು ಆ ಕಲೆಗೆ ಕೈ ಹಾಕಬೇಕಾಯಿತು. ಮೇಕಪ್ ಹಾಗೂ ಜರಿ ಕೆಲಸಗಳಲ್ಲಿ ಮತ್ತು ಪೋಟೋಗ್ರಾಫಿಯಂಥ ಮಹಾನ್ ಸೂಕ್ಷ್ಮ ಕೆಲಸಗಳಲ್ಲಿ ಪರಿಣತಿ ಹೊಂದಿದ್ದರಿಂದ ಕಂದಗಲ್ ಹನುಮಂತರಾಯರು, ಟಿ.ರಾಘುವಾಚಾರ್ಯರಂಥ ಮಹಾನ್ ನಾಟಕಕಾರರು ಇವರನ್ನು ಕರೆಸುತ್ತಿದ್ದರು. ದೊಡ್ಡ ಬಸಪ್ಪ, ವಡಿಗೇರಿ ಮಂಜುನಾಥ, ಶಿರಿಗೇರಿ ನಾಗನಗೌಡ, ಬೆಳಗಲ್ ವೀರಣ್ಣ, ಹೀರೆ ಇಂಗಳಿಗಿ, ಯು.ಜಗನ್ನಾಥ, ಮಜ್ಜಿಗಿ ಬಸವರಾಜ, ಶ್ರೀಶೈಲಪ್ಪ ಕೆ., ಪೊಲೀಸ್ ಮಹಾದೇವಪ್ಪ, ಹೆಚ್.ಮರಿಯಣ್ಣ, ಡಿ.ಶಂಕರಪ್ಪ, ಟಿ.ಪರಮೇಶ್ವರಪ್ಪ, ಮುಂತಾದವರು ಈ ಜಿಲ್ಲೆಯಲ್ಲಿ ರಂಗ ಚಟುವಟಿಕೆ ಸದಾ ಜೀವಂತವಾಗಿರಲು ತಲ್ಲೀನರಾಗಿದ್ದಾರೆ. ಹೆಚ್.ಪಿ.ಕಲ್ಲಂಭಟ್, ಬಿ.ಶ್ರೀನಿವಾಸರಾವ್, ಶ್ರೀನಿವಾಸ ಪುರೋಹಿತ್, ವಡಿಗೇರಿ ಮಂಜುನಾಥ ಮುಂತಾದವರು ಉಡುಗೆ-ತೊಡುಗೆ, ಧ್ವನಿವರ್ಧಕ, ಪರದೆಗಳು ಬೆಳಕಿನ ಸಂಯೋಜನೆ ಕ್ಷೇತ್ರದಲ್ಲಿ ರಂಗಭೂಮಿಗಾಗಿ ಸತತವಾಗಿ ದುಡಿದಿದ್ದಾರೆ.

ಟಿ.ಪರಮೇಶ್ವರಪ್ಪನವರು ನಿವೃತ್ತ ಶಿಕ್ಷಕರು. ಹೊಳಗುಂದಿಯಲ್ಲಿರುವ ಇವರು ನೂರಾರು ನಾಟಕ ಪಾತ್ರಧಾರಿಗಳ ಮುಖಕ್ಕೆ ಬಣ್ಣ ಹಚ್ಚುವ ಕೆಲಸ ಮಾಡಿ ಜಿಲ್ಲೆಯಲ್ಲಿಯೇ ಶ್ರೇಷ್ಠ ಕಲಾಕಾರರೆಂದೆನಿಸಿ ಕೊಂಡಿದ್ದಾರೆ. ವೇಷ ಭೂಷಣ ಒದಗಿಸುವಲ್ಲಿ ಇತರ ಸಾಮಗ್ರಿಗಳನ್ನು ಸರಬರಾಜು ಮಾಡುವಲ್ಲಿ ಪರಮೇಶ್ವರಪ್ಪನವರದು ಎತ್ತಿದ ಕೈ. ಹೊಸಪೇಟೆ ಸುತ್ತಮುತ್ತ ಹಳ್ಳಿಗಳಲ್ಲಿ ಬಣ್ಣ ಹಚ್ಚುವಿಕೆಯ ಕೆಲಸಕ್ಕೆ ಹೆಸರಾಂತ ವ್ಯಕ್ತಿಯಾಗಿದ್ದಾರೆ.

ನಾಟಕ ಮಂಡಳಿಗಳು : ಬಳ್ಳಾರಿ ಜಿಲ್ಲೆಯ ನಾಟಕ ಕಲಾ ಪ್ರಕಾರವು ಉತ್ಕರ್ಷವಾಗಿ ಬೆಳೆಯುವಲ್ಲಿ ನಾಟಕ ಮಂಡಳಿಗಳ ಕೊಡುಗೆಯು ಅನನ್ಯವಾದುದೇ. ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಜನರನ್ನು ಮನರಂಜಿಸಲು ಇಂಥ ಸುಶಿಕ್ಷಿತ ಹಾಗೂ ಜನಪದ ಮಂಡಳಿಗಳು ಹುಟ್ಟಿ ರಂಗಭೂಮಿಯ ವೈಶಿಷ್ಟ್ಯಗಳನ್ನು ಕಾಪಾಡಿಕೊಂಡು ಬಂದಿರುವುದು ಹೆಮ್ಮೆಯ ವಿಷಯವಾಗಿದೆ. ಹಡಗಲಿಯ ''ರಂಗಭಾರತಿ'' ಮರಿಯಮ್ಮನಹಳ್ಳಿಯ ''ಲಲಿತ ಕಲಾರಂಗ'', ಬಳ್ಳಾರಿಯ ಶ್ರೀಲಲಿತಕಲಾ ನಾಟ್ಯ ಮಂಡಳಿ, ಹರಪನಹಳ್ಳಿಯ ''ಬಸವೇಶ್ವರ ನಾಟಕ ಮಂಡಳಿ, ''ಕೊಟ್ಟೂರಿನ ಬಯಲು ರಂಗ ಮಂದಿರ'', ಕಂಪ್ಲಿಯ ''ನಟರಾಜ ಕಲಾ ವಿಜಯ ಸಂಘ'', ಟಿ.ಬಿ.ಡ್ಯಾಂನ '' ಕನ್ನಡ ಕಲಾ ಸಂಘ'', ಹೊಸಪೇಟೆಯ ''ನಾವು'' ಸಮುದಾಯ ಹಾಗೂ ''ಭಾವೈಕ್ಯತಾ ವೇದಿಕೆ'' ಹೀಗೆ ಹಲವಾರು ಸಂಘ ಸಂಸ್ಥೆಗಳು ರಂಗಭೂಮಿಯನ್ನು ಪೋಷಿಸಿ ಬೆಳೆಸಿವೆ.

''ರಂಗಭಾರತಿ''ಯು ಸುಮಾರು ೩೫ ವರ್ಷಗಳ ಇತಿಹಾಸವನ್ನು ಹೊಂದಿದ್ದು, ರಂಗಾಭಿನಯ ಆಧುನಿಕ ಬೆಳವಣಿಗೆಯ ಬಗೆಗೆ ಸಾಕಷ್ಟು ತಿಳುವಳಿಕೆ ಹಾಗೂ ಸಮಾಜವಾದದ ಪ್ರಖರವಾದ ವೈಚಾರಿಕತೆಗಳನ್ನು ಮೂಡಿಸುತ್ತಾ ಬಂದ ಹವ್ಯಾಸಿ ನಾಟಕ ಮಿತ್ರರ ಸಮೂಹ ವೇದಿಕೆ. ಕೇವಲ ಕಂಪನಿ ಸ್ವರೂಪದ ಹವ್ಯಾಸಿ ನಾಟಕಗಳು ಎಂ.ಪಿ.ಪ್ರಕಾಶರ ನಿರ್ದೇಶನದೊಂದಿಗೆ ವೈಚಾರಿಕ ಸ್ಪಷ್ಟನೆಯನ್ನು ಹಾಗೂ ಕಲಾತ್ಮಕ

ಅಭಿವ್ಯಕ್ತಿಯನ್ನು ಪಡೆದವು. ಕೆಲವೇ ದಶಕಗಳ ಹಿಂದೆ ಕೇವಲ ಹಡಗಲಿ ಮತ್ತು ಹತ್ತಿರ ಜಿಲ್ಲೆಯ ಒಳಗಿನ ತಾಲೂಕುಗಳಿಗಷ್ಟೇ ಸೀಮಿತವಾಗಿದ್ದು ಹೂವಿನ ಹಡಗಲಿಯ ನಾಟಕಗಳು ರಾಜ್ಯಮಟ್ಟದಲ್ಲಿಯೇ ಮನ್ನಣೆಯನ್ನು ಗಳಿಸಿದ್ದು ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿವೆ. ರಂಗಭೂಮಿಯ ಬಹುಮುಖಿ ಬೆಳವಣಿಗೆಯಲ್ಲಿ ಕಾಳಜಿಯನ್ನು ಹೊಂದಿದ್ದ ''ರಂಗಭೂಮಿ'' ಕೇವಲ ತಮ್ಮ ತಂಡದ ಮೂಲಕ ನಾಟಕಗಳನ್ನು ಪ್ರದರ್ಶಿಸುವುದಷ್ಟೇ ಅಲ್ಲದೇ ನಾಯಕ ಸ್ಪರ್ಧೆಯನ್ನು ನಡೆಸುವ ಮೂಲಕ ಒಂದೇ ವೇದಿಕೆಯಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಲಾಗಿದೆ. ಅಲ್ಲಿ ಪ್ರಯೋಗಗಳ ಮೂಲಕ ರಂಗ ತಂಡಗಳು ಮತ್ತು ಪ್ರೇಕ್ಷಕರು ಒಂದು ನಾಟಕವನ್ನು ಇನ್ನೊಂದರೊಂದಿಗೆ ಹೋಲಿಸಿ ನೋಡುವ, ಆ ಮೂಲಕ ರಂಗ ತಂಡಗಳು ತಮ್ಮ ಕೌಶಲ್ಯವನ್ನು ಇನ್ನೂ ಗಟ್ಟಿಗೊಳಿಸಿಕೊಂಡತಹ ಅವಕಾಶವನ್ನು ಒದಗಿಸಿತು.

ಬಳ್ಳಾರಿ ಜಿಲ್ಲೆಯ ರಂಗಭೂಮಿಯ ಇತಿಹಾಸದಲ್ಲಿ 'ಹಡಗಲಿಯ' ಯೋಗ್ಯ ನಾಟಕವೆಂದರೆ ''ಬಾಳೊಂದು ನಂದನ''. ನಂತರದ ದಿನಗಳಲ್ಲಿ ''ರಂಗ ಭಾರತಿ'' ಹೊಸ ರೂಪವನ್ನು ಪಡೆಯಿತು. ಉನ್ನತ ಶಿಕ್ಷಣ ಪಡೆದ ಕಾಲೇಜು ವಿದ್ಯಾರ್ಥಿಗಳು ಹಾಗೂ ಉತ್ಸಾಹಿ ಡಿ. ಉಲ್ಲಾಸ್ ಹಾಗೂ ರಾಮಕೃಷ್ಣರಂಥವರ ಪ್ರವೇಶದಿಂದ ಗುಣಾತ್ಮಕವಾಗಿ ಬೆಳೆವಣಿಗೆಯಾದವು. ರಾಜ್ಯದ ತುಂಬಾ ವ್ಯಾಪಕವಾಗಿ ಹರಡಿದ್ದ ಪ್ರಗತಿಪರ ಚಳುವಳಿಗಳು ಹಾಗೂ ಎಲ್ಲೆಡೆ ಕೇಳಿ ಬರುತ್ತಿದ್ದ ಪ್ರಭುತ್ವ ವಿರೋಧಿ ಅಲೆ, ಸಮಾಜವಾದೀ ಚಿಂತನೆ,ಇವುಗಳು ತೀವ್ರವಾದವು. ಇದರ ಜೊತೆ ಜೊತೆಯಾಗಿಯೇ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಸಮಕಾಲೀನ ಸಂಗತಿಗಳು, ರಂಗಭೂಮಿಯ ಹೊಸ ಸವಾಲುಗಳು ''ರಂಗಭಾರತಿ''ಯ ಚರ್ಚೆಗಳು ವಸ್ತುಗಳಾದವು. ಇಂಥ ಸಂದರ್ಭದಲ್ಲಿಯೇ ''ಯಯಾತಿ'' ಹಾಗೂ ಆಷಾಢದ ಒಂದು ದಿನ'' ನಾಟಕಗಳು ಅಭೂತಪೂರ್ವ ಪ್ರದರ್ಶನ ಕಂಡವು. ಜೊತೆಗೆ ''ಜೋಕುಮಾರ ಸ್ವಾಮಿ'' ಹಾಗೂ ಸಂಗ್ಯಾ-ಬಾಳ್ಯಾ, ''ರಂಗಭಾರತಿ''ಗೆ ರಾಷ್ಟ್ರೀಯ ಮನ್ನಣೆಯನ್ನು ತಂದು ಕೊಟ್ಟ ಮಹತ್ವದ ನಾಟಕಗಳು. ಈ ಎಲ್ಲಾ ನಾಟಕಗಳು ಹೂವಿನ ಹಡಗಲಿ ಮಾತ್ರವಲ್ಲದೇ, ಬಳ್ಳಾರಿ, ಹೊಸಪೇಟೆ, ಬೆಂಗಳೂರು, ದಾವಣಗೇರಿ, ಮೈಸೂರು, ಮತ್ತು ದೆಹಲಿಗಳಲ್ಲಿ, ಪ್ರದರ್ಶನಗೊಂಡವು. ಈ ನಾಟಕಗಳ ಮೂಲಕ ಮೊಟ್ಟ ಮೊದಲ ಬಾರಿಗೆ ಹೂವಿನ ಹಡಗಲಿಗೆ ಬೆಂಗಳೂರಿನಿಂದ ಡಿಮ್ಮರ್ಸ್, ಸ್ಪಟ್ ಲೇಟ್, ವಸ್ತ್ರವಿನ್ಯಾಸ, ಧ್ವನಿವರ್ಧಕ, ಅಲಂಕಾರಗಳೆಲ್ಲ ಬಂದವು. ಇವು ರಂಗಭಾರತಿ ಕಂಡ ಮೊದಲ ಭವ್ಯ ನಾಟಕಗಳಾಗಿದ್ದವು.

''ಸಂಗ್ಯಾ-ಬಾಳ್ಯಾ'' ರಂಗಭೂಮಿಯ ನಾಟಕಗಳ ಪೈಕಿ ಒಂದು ರೀತಿ ಮೇರು ಪ್ರಯೋಗ ಎಂದರೆ ತಪ್ಪಾಗಲಿಕ್ಕಿಲ್ಲ. ೧೯೮೧ ರಿಂದ ೧೯೯೯ರವರೆಗೆ ಸುಮಾರು ೧೯ ವರ್ಷಗಳ ಕಾಲದಿಂದ ಈ ನಾಟಕವನ್ನು ರಂಗಭಾರತಿ ತಂಡ ಪ್ರದರ್ಶಿಸುತ್ತಲೇ ಬಂದಿದೆ. ೧೯೯೪ರ ''ಸೂರ್ಯಶಿಕಾರಿ'' ಅದ್ಭುತವಾದ ಪ್ರದರ್ಶನವನ್ನೇ ಕಂಡಿತು. ಈ ನಾಟಕದಿಂದ ರಂಗ ವಿನ್ಯಾಸವಿಡೀ ಕಟ್ಟಡ ಸ್ವರೂಪದಲ್ಲಿದ್ದು ವೇದಿಕೆಯ ಮೇಲೆ ಪ್ರದರ್ಶಿಸಲು

ಬಾರದ ವಿಭಿನ್ನ ತರಬೇತಿ ಹಾಗೂ ವಿನ್ಯಾಸದ ಅಳವಡಿಕೆ ಸೂರ್ಯಶಿಕಾರಿಯನ್ನು ಹಲವು ಬಾರಿ, ಹಲವು ಕಡೆಗಳಲ್ಲಿ ಪ್ರದರ್ಶಿಸುವಂತೆ ಮಾಡಿತು. ೧೯೯೩ರಲ್ಲಿನ "ಅಗ್ನಿ ಮತ್ತು ಮಳೆ"ನಾಟಕದ ಯಶಸ್ಸಿನ ನಂತರ ದಲ್ಲಿ ತಂಡ ಗಿರೀಶ್ ಕಾರ್ನಾಡ್‌ರ "ನಾಗಮಂಡಲ"ವನ್ನು ಹೊಸ ಸವಾಲಿನಂತೆ ಸ್ವೀಕರಿಸಿತು. "ರಾವಿ ನದಿಯ ದಂಡೆಯ ಮೇಲೆ" ಇಂಥ ಮಹತ್ವದ ನಾಟಕಗಳೂ ರಾಜ್ಯದಲ್ಲೆಲ್ಲಾ ಪ್ರದರ್ಶನ ಕಂಡವು.

ರಂಗಭಾರತಿಯ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ನಾಟಕವೊಂದು ದೂರದರ್ಶನದಲ್ಲಿ ಪ್ರವೇಶ ಪಡೆಯುವುದು "ನಾಗಮಂಡಲ"ದಿಂದ ಸಾಧ್ಯವಾಯಿತು. ಬೆಂಗಳೂರಿನ ದೂರದರ್ಶನ ಕೇಂದ್ರವು ಈ ನಾಟಕವನ್ನು ಇಡಿಯಾಗಿ ಚಿತ್ರೀಕರಿಸಿ ಕೊಂಡು ಎರಡು ಕಂತುಗಳಲ್ಲಿ ಎರಡೆರಡು ಭಾರಿ ಪ್ರಸಾರಗೊಳಿಸಿತು. ಈ ಮೂಲಕ ರಂಗಭೂಮಿಯ ಮೇಲಷ್ಟೇ ಉಳಿದಿದ್ದ ರಂಗಭಾರತಿ ತನ್ನನ್ನು ಕಿರುತೆರೆಯ ಮೇಲೆಯೂ ಅನನ್ಯತೆಯನ್ನು ಪಡೆದುಕೊಂಡಂತಾಯಿತು.

ಸಾಂಸ್ಕೃತಿಕ ಕಾಳಜಿಯ ವ್ಯಕ್ತಿ ಹಾಗೂ ಕ್ರಿಯಾಶೀಲರಾದ ಎಂ.ಪಿ.ಪ್ರಕಾಶರ ನೇತೃತ್ವದಲ್ಲಿ "ರಂಗಭಾರತಿ" ಹಡಗಲಿಯಲ್ಲಿ ಜನ್ಮತಳೆದಿದೆ. ೧೯೬೪ರಿಂದಲೂ ನಿರಂತರ ಪ್ರಯಾಣದಲ್ಲಿ ಆಗಾಗ್ಗೆ ಕೆಲವು ಪ್ರಮುಖ ನಾಟಕಗಳನ್ನು ಪ್ರಯೋಗಿಸುತ್ತಾ ಬಂದಿದೆ. ಉತ್ಪಲದತ್ತರ ಸೂರ್ಯಶಿಕಾರಿ ಎಂ.ಪಿ.ಪ್ರಕಾಶರು ಅನುವಾದ ಮಾಡಿದ್ದ ಈ ನಾಟಕ ರಂಗಭಾರತಿ ಮೂಲಕ ಪ್ರದರ್ಶನ ಗೊಂಡಿತು. ವೃತ್ತಿ ರಂಗಭೂಮಿ ನಾಟಕಗಳ ಮೂಲಕ ಕೇವಲ ಸಾಂಪ್ರದಾಯಿಕ ಬದುಕಿನ ಸ್ಥಿತಿಯಲ್ಲಿದ್ದ ಜನತೆಗೆ ಹೊಸಕಾಲದ ಸಾಮಾಜಿಕ ಸಮಸ್ಯೆಗಳು, ಸೃಜನಾತ್ಮಕ ಸಂವೇದನೆಗಳು, ಆತ್ಮಾವಲೋಕನ ಮಾಡಿಕೊಳ್ಳುವ ಕಥಾವಸ್ತು-ವಿಷಯದ ನಾಟಕಗಳ ಪ್ರದರ್ಶನದ ಹೊಸ ಪರಂಪರೆಯನ್ನು ಹೂವಿನ ಹಡಗಲಿಯ ರಂಗಭಾರತಿ ಹುಟ್ಟು ಹಾಕಿತು. ಈ ಹಿನ್ನಲೆಯಿಂದಲೇ ಸಂಪ್ರದಾಯಸ್ಥ ಮನಸ್ಸುಗಳು ಕುತೂಹಲ ಭರಿತವಾದವು. ನಾಟಕ ನೋಡುವಲ್ಲಿ ಅದನ್ನು ಅರ್ಥೈಸಿಕೊಳ್ಳುವಲ್ಲಿ ಹೊಸ ದೃಷ್ಟಿಕೋನ ಬೆಳೆಯಿತು. ಇದೊಂದು ಈ ಭಾಗದಲ್ಲಿ ನಡೆದ ಸಂಕ್ರಮಣದ ಸ್ಥಿತಿ ಎಂದೇ ಪರಿಗಣಿಸಬೇಕು.

ಆಷಾಡದ ಒಂದು ದಿನ, ಯಯಾತಿ, ಹಕ್ಕಿ ಹಾರುತಿದೆ ನೋಡಿದಿರಾ, ಬಾಕಿ ಇತಿಹಾಸ, ದೊಡ್ಡಪ್ಪ, ಅಂಧಯುಗ, ಜೋಕುಮಾರ ಸ್ವಾಮಿ, ಲಕ್ಷಾಪತಿರಾಜನ ಕತೆ, ಸಂಗ್ಯಾ-ಬಾಳ್ಯಾ ಮೊದಲಾದ ನಾಟಕಗಳನ್ನು ರಂಗಭಾರತಿ ಪ್ರೇಕ್ಷಕರಿಗೆ ನೀಡಿದೆ. ಹೊಸ ರೀತಿಯ ಅಲೆಗಳ ನಾಟಕ ಪ್ರದರ್ಶನದೊಂದಿಗೆ ರಂಗಭಾರತಿ ಜನಮೆಚ್ಚಿಗೆ ಪಡೆಯುತ್ತ ಹೊಸ ನಟರನ್ನು ರಂಗಭೂಮಿಗೆ ಪರಿಚಯಿಸುತ್ತಿರುವುದು. ಈ ತಂಡದ ಅಮೋಘ ಕೊಡುಗೆಯಾಗಿದೆ.

"ಲಲಿತ ಕಲಾರಂಗ" ಮರಿಯಮ್ಮನಹಳ್ಳಿ ಗ್ರಾಮೀಣ ಭಾಗದ ಕೆಲವೇ ಪ್ರಯೋಗಾತ್ಮಕ ನಾಟಕ ತಂಡಗಳಲ್ಲಿ ಒಂದಾಗಿದೆ. ವೃತ್ತಿ ನಾಟಕದ 'ರಂಗಬದ್ಧತೆ ಹಾಗೂ ಹವ್ಯಾಸಿ ನಾಟಕದ "ಪ್ರಯೋಗ ಶೀಲತೆ"

ಎರಡನ್ನು ಮೈಗೂಡಿಸಿ ಕೊಂಡ ಅಪರೂಪದ ತಂಡ. ''ಲಲಿತ ಕಲಾರಂಗ'' ಮರಿಯಮ್ಮನಹಳ್ಳಿ ಎಂದರೆ ಆ ಕ್ಷಣ ಇಲ್ಲಿನ ವೃತ್ತಿರಂಗ ಕಲಾವಿದರೆಲ್ಲಾ ನೆನಪಾಗುತ್ತಾರೆ. ಹೊಸಲೋಕಕ್ಕೆ ಗೊತ್ತಿರುವವರು ಇಲ್ಲಿಯ ವೃತ್ತಿಯ ನಟರೇ ಆದರೆ ಹೊರಲೋಕಕ್ಕೆ ಗೊತ್ತಿರದೇ ಇರುವ ಸಂಗತಿಯೊಂದಿದೆ. ಅದೆಂದರೆ ಈ ಊರಿನಲ್ಲಿಯೇ ಪ್ರಸಿದ್ಧ ಬಯಲಾಟದ ಮೇಸ್ತ್ರುಗಳಿದ್ದಾರೆ, ಸಂಗೀತಗಾರರಿದ್ದಾರೆ. ಶಿಲ್ಪಿಗಳು, ಜಾನಪದ ವಾದ್ಯಗಳಲ್ಲಿ ಪರಿಣಿತಿ ಹೊಂದಿದವರೂ ಇದು ಎಲ್ಲ ಕಲೆಗಳ ಸಂಗಮವೇ ಈ ಲಲಿತ ಕಲಾ ರಂಗದ ಊರು ಮರಿಯಮ್ಮನಹಳ್ಳಿ. ಎಲ್ಲಾ ಕಲೆಗಳಿಗೆ (ಲಲಿತ ಕಲೆ) ಪ್ರೋತ್ಸಾಹ ಕೊಡುವ ದೃಷ್ಟಿಯಿಂದಲೇ ಲಲಿತ ಕಲಾರಂಗ ಸ್ಥಾಪನೆಯಾಯಿತು. ಇದರ ಪ್ರಮುಖ ಗುರಿ ನಾಟಕವೇ ಆಗಿದ್ದು ಇದರ ಮಹತ್ವವನ್ನರಿತೇ ಈ ಊರಿನ ಯುವಕರು ಕಳೆದ ಹತ್ತು ವರ್ಷಗಳ ಹಿಂದೆ ಕಟ್ಟಿರುವ ''ಲಲಿತ ಕಲಾರಂಗ'' ರಾಜ್ಯದ ರಂಗಭೂಮಿ ಆಸಕ್ತರಿಗೆಲ್ಲ ಈ ಸಂಸ್ಥೆ ಚಿರಪರಿಚಿತವಾದ ಹೆಸರಾಗಿದೆ. ಡಿ.ಎಂ.ತೋಟಯ್ಯಸ್ವಾಮಿ ನೇತೃತ್ವದಲ್ಲಿ ಸಂಗೀತ ಪಾಠಶಾಲೆಯು ಆರಂಭವಾಗಿದ್ದು, ರಂಗ ಚಟುವಟಿಕೆಗಳು ಈ ಸಂಸ್ಥೆಯಿಂದ ನಿರಂತರ ಕ್ರಿಯಾಶೀಲವಾಗಿರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ೧೯೮೮ರಲ್ಲಿ ಆರಂಭವಾದ ಈ ತಂಡ ಈಗಾಗಲೇ ಹತ್ತಾರು ವೈವಿಧ್ಯಮಯ ನಾಟಕಗಳ ಪ್ರದರ್ಶನ ನೀಡಿದೆ. ರಾಜ್ಯ-ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ಗಿಟ್ಟಿಸಿದೆ. ಹಲವಾರು ನಾಟಕೋತ್ಸವಗಳನ್ನು ಸಂಘಟಿಸಿ ಕಳೆದ ಕೆಲವು ವರ್ಷಗಳಿಂದ ಕಲ್ಬುರ್ಗಿ ವಿಭಾಗ ಮಟ್ಟದ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿ ಇತರ ತಂಡಗಳಿಗೆ ಪ್ರೋತ್ಸಾಹ ನೀಡುವ ಕೆಲಸ ಮಾಡುತ್ತಲೇ ಬಂದಿದೆ.

ಕಂಪನಿ ನಾಟಕಗಳು ಅವನತಿ ಹೊಂದುತ್ತಿರುವ ಹಾಗೂ ಜಾನಪದ ರಂಗಗಳು ಕಡಿಮೆಯಾದ ಈ ಕಾಲ ಘಟ್ಟದಲ್ಲಿ, ಅಷ್ಟೇ ಏಕೆ ಹಳ್ಳಿಗಾಡಿನಲ್ಲಿ ಪ್ರಯೋಗಿಸುತ್ತಿದ್ದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳು ಕಡಿಮೆಯಾಗಿರುವ ಈ ಸ್ಥಿತ್ಯಂತರ ಕಾಲದಲ್ಲಿ ನಾಟಕ ಪ್ರದರ್ಶನಗಳು ಆಧುನಿಕತೆಯನ್ನು ಅನಿವಾರ್ಯವಾಗಿ ಮೈಗೂಡಿಸಿಕೊಳ್ಳಬೇಕಾಯಿತು. ಬೆಳಗಾಗುವವರೆಗೂ ಆಡುವ ನಾಟಕ ಕೈಬಿಟ್ಟು ಪ್ರದರ್ಶನದ ಅವಧಿಯನ್ನು ಕಡಿಮೆ ಮಾಡಲೇಬೇಕಾಯಿತು. ಬದಲಾವಣೆಯ ಎಲ್ಲಾ ಅನಿವಾರ್ಯ ಪ್ರಕ್ರಿಯೆಗಳಿಗೆ ಈ ಲಲಿತ ಕಲಾರಂಗ ತನ್ನನ್ನು ಒಗ್ಗಿಸಿಕೊಂಡಿತೆಂಬ ಕಾರಣಕ್ಕೆ ಯಶಸ್ಸನ್ನು ಪಡೆದಿದೆ.

ಲಲಿತ ಕಲಾರಂಗದಲ್ಲಿರುವ ಕಲಾವಿದರೆಲ್ಲಾ ಸುತ್ತ-ಮುತ್ತ ಪ್ರದೇಶಗಳಲ್ಲಿ ನಟಿಸುವ ವೃತ್ತಿಕಲಾವಿದರಾದರು. ಮು.ಬ.ಸೋಮಣ್ಣನವರ ಕನಸಾದ ''ನಮ್ಮ ಊರಿನ ಕಲಾವಿದ ಲೋಕದ ಜನರ ಕಲೆಯ ಹಸಿವನ್ನು ತಣಿಸುವಾಗ ನಮ್ಮೂರಿನಲ್ಲೇ ಅಂಥ ಹವ್ಯಾಸಿ ತಂಡ ಏಕೆ ಇರಬಾರದು? ಎಂಬ ಪ್ರಶ್ನೆಗೆ ಪ್ರಸಿದ್ಧ ತಬಲಾವಾದಕರಾದ, ನಾಟಕಕಾರರು ಆದ ಸೋಮಣ್ಣರೊಂದಿಗೆ ಎಚ್.ರಸೂಲ್, ಚಿದಂಬರ ದೀಕ್ಷಿತ, ನೇಮಿರಾಜ, ಡಾ.ಅಂಬಣ್ಣ ಹಾಗೂ ವೃತ್ತಿ ಕಲಾವಿದೆಯರಾದ ಕೆ.ನಾಗರತ್ನ, ಬಿ.ಶಾರದ, ಎಸ್.ರೇಣುಕಾ, ಡಿ.ಎಂ.ತೋಟಯ್ಯ ಸ್ವಾಮಿ ಮುಂತಾದವರ ಸಹಯೋಗದೊಂದಿಗೆ ಈ ಲಲಿತ ಕಲಾರಂಗದ ಸ್ಥಾಪನೆಗೆ ಕಾರಣವಾಗಿದೆ. ಈ ತಂಡ ಆರಂಭದ ದಿನಗಳಲ್ಲಿ ಸುಪ್ರಸಿದ್ಧ ನಾಟಕಕಾರರಾದ ಎಸ್.ಎಸ್.ರಾವ್,

ನವರತ್ನರಾಂ, ಚಂದ್ರಶೇಖರ ಕಂಬಾರ, ಎಂ.ಕೆ.ಕೀರಣಗಿ, ಎಂ.ಎಸ್.ಲಿಂಗರಾಜ್ ಅಂಥವರ ನಾಟಕಗಳನ್ನು ಪ್ರಯೋಗಕ್ಕೆ ತೆಗೆದುಕೊಂಡಿತು. ಕಾಳಿದಾಸನ ಶಾಕುಂತಲಾ, ಕಾಡಿನ ಮಗಳು, ಆಕೆಯ ಕಥೆಯನ್ನು ಪರಿಸರ ಸಂರಕ್ಷಣೆಯ ಮಹತ್ವವನ್ನು ಹೇಳುವ ಪ್ರತಿಮೆಯಾಗಿ ಬಳಸಿಕೊಂಡು ''ಶಾಕುಂತಲಾ'' ಮೀಸಲಾತಿ ಜಾರಿ ನಂತರ ಉಂಟಾದ ಪರಿಣಾಮಗಳನ್ನು ಶೋಧಿಸುವ ''ಕಚದೇವಯಾನಿ''ಯಂಥ ನಾಟಕಗಳನ್ನು ರಚಿಸಿ ಈ ತಂಡದ ಮೂಲಕ ಪ್ರದರ್ಶನಕ್ಕೆ ಕೈಗೆತ್ತಿಕೊಂಡಿರುವ ಸೋಮಣ್ಣ ಅವರು ಸಮಕಾಲೀನ ಸಾಂಸ್ಕೃತಿಕ ಜಗತ್ತಿಗೆ ಸ್ಪಂದಿಸುವ ವೇದಿಕೆಯಾಗಿ ಲಲಿತ ಕಲಾರಂಗವನ್ನು ರೂಪಿಸಿದರು.

ಜಾನಪದ ಪ್ರಕಾರವಾದ ಗೊಂದಲಿಗರ ಆಟವನ್ನು ಮೊಟ್ಟಮೊದಲ ಬಾರಿಗೆ ರಂಗಕ್ಕೆ ತಂದವರು ಈ ಲಲಿತ ಕಲಾರಂಗದವರೇ. ಶೀಲಾವತಿ ನಾಟಕದ ರಂಗರೂಪಕ್ಕೆ ಅಳವಡಿಸಿದವರು ಮುದೇನೂರು ಸಂಗಣ್ಣ. ಶೀಲಾವತಿ ಪಾತ್ರದಿಂದ ಕೆ.ನಾಗರತ್ನಮ್ಮ ನಾಡಿನ ತುಂಬಾ ಹೆಸರುವಾಸಿ ಕಲಾವಿದೆಯರಾಗಿದ್ದಾರೆ. ಜನಪದ ಒಲವುಗಳಿದ್ದರೂ ಸಾಮಾನ್ಯ ಕಮರ್ಷಿಯಲ್ ಎಂದೇ ಹಣೆಪಟ್ಟಿ ಅಂಟಿಕೊಂಡಿದ್ದ ಕೆಲವು ನಾಟಕಗಳನ್ನು ಈ ತಂಡದ ರಸೂಲ್ ಅವರು ವಿನೂತನವಾಗಿ ನಿರ್ದೇಶಿಸಿದರು. ಇದು ಲಲಿತಕಲಾ ರಂಗದವರ ಹೆಗ್ಗಳಿಕೆಯೇ ಆಗಿದೆ. ಇತ್ತೀಚಿನ ಬೆಳವಣಿಗೆಯ ದಿನಗಳಲ್ಲಿ ಈ ತಂಡ ನಾಟಕದ ಪ್ರದರ್ಶನಗಳ ಜೊತೆಗೆ, ತರಬೇತಿ ಶಿಬಿರ, ವಿಚಾರ ಸಂಕಿರಣ, ಸಂಗೀತ, ನಾಟ್ಯ ಶಾಲೆ ಆರಂಭ, ಚಿತ್ರ ಪ್ರದರ್ಶನ, ಪುಸ್ತಕ ಪ್ರಕಟನೆಯಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗಮಕ ಸಂಜೆ, ಯಕ್ಷಗಾನ ಕಲಾವಿದರ ಸಮಾವೇಶ, ಸುಗಮ ಸಂಗೀತ, ದಾಸರ ಸಂಗೀತ, ರಂಗ ತರಬೇತಿ ಶಿಬಿರ ಇವೇ ಮೊದಲಾದವು ಲಲಿತ ಕಲಾರಂಗದ ವ್ಯಾಪ್ತಿಯನ್ನು ಹೆಚ್ಚಿಸುತ್ತಿವೆ.

ಜೋಗ್, ದೋಣಿಮಲೆ, ಉಡುಪಿಗಳಲ್ಲಿ ನಡೆದ ರಾಜ್ಯದ ಸ್ಪರ್ಧೆಗಳಲ್ಲಿ ಈ ತಂಡದ ಅನೇಕ ಸದಸ್ಯರು ನಟನೆ ನಿರ್ದೇಶನಗಳಿಗಾಗಿ ಹಲವು ಬಾರಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬಿ.ಎಂ.ಎಸ್.ಪ್ರಭು ಅವರಂಥ ಉತ್ತಮ ನಟರನ್ನು ಈ ತಂಡ ಹೊಂದಿರುವುದರ ಜೊತೆಗೆ, ತಂಡದೊಂದಿಗೆ ಸಾಕಷ್ಟು ಬೆಳೆದ ನಾಗೇಶ್, ಶಿವಯ್ಯ, ಕೊಟ್ರೇಶ್, ಮಂಜುನಾಥ, ಪಂಕಜ, ಮಹಾಬಲೇಶ್ವರ, ಮಲ್ಲನಗೌಡ ಮುಂತಾದವರು ಇಲ್ಲಿ ಉಲ್ಲೇಖಾರ್ಹ. ಮರಿಯಮ್ಮನ ಹಳ್ಳಿಯ ಬಯಲು ರಂಗ ಮಂದಿರ ರಚನೆಯ ಹಿಂದೆ ಸಾಕಷ್ಟು ಶ್ರಮಿಸಿದ ಲಲಿತ ಕಲಾರಂಗ ರಚನಾತ್ಮಕ ಕೆಲಸಗಳಲ್ಲೂ ಹಿಂದಿಲ್ಲ ಎಂಬುದನ್ನು ಅದು ರುಜುವಾತು ಮಾಡಿದೆ. ವಾರ್ತ ಇಲಾಖೆಯ ಕೆ.ಶಿವರುದ್ರಯ್ಯನವರು ನಿರ್ದೇಶಿಸಿದ ''ಬೆಳ್ಳಕ್ಕಿ ಹಿಂಡು ಬೆದರ್ಯಾವೊ'' ಶ್ರೀ ಚೆನ್ನಬಸಪ್ಪ ರಚಿಸಿರುವ ಲಲಿತ ಕಲಾರಂಗದಿಂದ ಈಚೆಗೆ ಬಳ್ಳಾರಿ ಜಿಲ್ಲೆಯಾದ್ಯಂತ ಅನೇಕ ಪ್ರಯೋಗಗಳನ್ನು ಕಂಡಿದ್ದು ಅಂಬಣ್ಣ ಡಾಕ್ಟರ್ ಎಂದೇ ಜನಮನದಲ್ಲಿ ಹೆಸರಾಗಿರುವ ಅಂಬಣ್ಣ ಅವರು ರಂಗಕಲಾವಿದೆಯ ಮಗನಾಗಿದ್ದು ಈ ಸಂಘಟನೆಯ ಅಭಿವೃದ್ಧಿಗೆ ದುಡಿಯುತ್ತಿರುವುದು ಅಭಿಮಾನದ ಸಂಗತಿ.

ರಾಘವಾಚಾರ್ಯರ ''ಕಲಾಪೂರ್ಣ'' ಕಲಾವೈಭವದಿಂದ ಮೆರೆದ ಬಳ್ಳಾರಿಯಲ್ಲಿ ನಂತರ ಕಲೆಗಾಗಿಯೇ ಮೀಸಲಾದ ಕಲಾ ಸಂಸ್ಥೆಯ ಅಗತ್ಯ ಬಹಳ ಇತ್ತು. ಸಣ್ಣ ಸಣ್ಣ ಮನೋರಂಜನೆಗಳನ್ನು ಮಾತ್ರ ನೀಡಿ

ಸಂತೃಪ್ತಿ ಪಡುವ ಚಿಕ್ಕ ಸಂಸ್ಥೆಗಳು ಮೆರೆಯುತ್ತಿದ್ದುದೊಂದು ಕಾಲ. ೧೯೫೮ರಲ್ಲಿ ''ಶ್ರೀ ಲಲಿತಕಲಾ ನಾಟ್ಯ ಮಂಡಳಿ'' ಉದಯವಾಗಿ ಬಳ್ಳಾರಿಯ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮಹತ್ತರ ಘಟ್ಟವಾಗಿದೆ.

ಆರಂಭದ ದಿನಗಳಲ್ಲಿ ಮಂಡಳಿಯು ಚಿಕ್ಕಪುಟ್ಟ ಮನೋರಂಜನೆಗಳನ್ನು ಮಾತ್ರ ನೀಡುತ್ತಿತ್ತು. ಬಳ್ಳಾರಿಯಲ್ಲಿ ಮುಖ್ಯವಾದ ಸ್ತ್ರೀ ಪಾತ್ರಗಳಿಗೆ ಕಲಾವಿದರು ಸಿಗದೇ ಇರುವ ಅಂದಿನ ಕಾಲಗಳಲ್ಲಿ ಮೊಟ್ಟ ಮೊದಲಿಗೆ ''ರಕ್ಷಿತಾ'' ಮತ್ತು ''ಗಂಡ್ಸಲ್ವೆ ಗಂಡ್ಸು'' ಎಂಬ ಏಕಾಂತ ನಾಟಕಗಳನ್ನು ಮಂಡಳಿ ಪ್ರದರ್ಶಿಸಿ ನಾಟಕಗಳ ಪರಂಪರೆಗೆ ಅಡಿಪಾಯವನ್ನು ಹಾಕಿತು. ಬಡತನದ ಭೂತ, ಆದರ್ಶ ಪ್ರೇಮ, ಅಣ್ಣ-ತಮ್ಮ, ರೂಪಾವತಿ, ರಕ್ಷಿತಾ, ಗಂಡ್ಸಲ್ವೆ ಗಂಡ್ಸು, ನಿಜಗಲ್ಲು ಗಿರಿಜಮ್ಮ, ಪಾಶುಪತಾಸ್ತ್ರ, ಅಪರಾಧಿನಿ, ಸತಿ-ಸತಿ, ಯಯಾತಿ, ಇದೆಂಥ ಸರಕಾರ, ಉತ್ತರ ಭೂಪ ಮುಂತಾದ ನಾಟಕಗಳು ಪ್ರದರ್ಶನ ನಡೆಸಿದ ಪ್ರಮುಖ ನಾಟಕಗಳಾಗಿವೆ.

ಕೆ.ಯಂ.ವಿರೂಪಾಕ್ಷಯ್ಯ, ಪಿ.ತಿಮ್ಮಾರೆಡ್ಡಿ, ಕೃಷ್ಣಮೂರ್ತಿ, ವಿ.ಕೆ.ಪಂಪಾಪತಿರಾವ್, ಬೆಳಗಲ್ ವೀರಣ್ಣ, ಜಿ.ಡಿ.ಪೀರಣ್ಣ ಮತ್ತು ಸಂಗೀತ ಕ್ಷೇತ್ರದಲ್ಲಿ ಕೆ.ವಿ.ಚೆನ್ನಯ್ಯ, ಐ.ವಿ.ಸಿ.ದಿವಾಕರ, ಜಾಲಿಬ್ರದರ್ಸ್, ಕೆ.ವಿ.ಭೀಮಪ್ಪ ಮತ್ತು ಎನ್.ತಿಮ್ಮಪ್ಪ ಇವರೆಲ್ಲರೂ ಪ್ರಮುಖ ಕಲಾವಿದರು.

ಮೈಸೂರು ದಸರಾ ಸಮಿತಿಯ ಆಮಂತ್ರಣದ ಮೇರೆಗೆ ೧೯೬೮ರಲ್ಲಿ ರಘುಪತಿ ರಚಿತ ''ಶಾಸ್ತ್ರ ಸುಳ್ಳೆ?'' ಎಂಬ ನಾಟಕವನ್ನು ಲಲಿತ ಕಲಾರಂಗವು ಮೈಸೂರಿನಲ್ಲಿ ಯಶಸ್ವಿಯಾಗಿ ಅಭಿನಯಿಸಿತು. ಅಲ್ಲದೆ ಆದರ್ಶ ಪ್ರೇಮ, ಅಣ್ಣ ತಮ್ಮ ನಾಟಕಗಳನ್ನು ಕುರುಗೋಡು, ಸಿರುಗುಪ್ಪ, ವಡ್ಡುಗಳಲ್ಲಿ ಯಶಸ್ವಿಯಾಗಿ ಅಭಿನಯಿಸಿ ಜನಾದರಣೆಯನ್ನು ಪಡೆಯಿತು. ೧೯೭೨ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿಯು ಏರ್ಪಡಿಸಿದ ಕಲಾವಿಲಾಸ ಸಂಘಗಳ ನಾಟಕ ಸ್ಪರ್ಧೆಯಲ್ಲಿ ಲಲಿತಕಲಾರಂಗದ ಯಯಾತಿ ನಾಟಕವು ಪ್ರಥಮ ಬಹುಮಾನ ಪಡೆದು ಪ್ರೇಕ್ಷಕರ ಆಕರ್ಷಣೆಗೆ ಒಳಗಾಗಿ ಅಪಾರ ಮೆಚ್ಚುಗೆ ಪಡೆಯಿತು.

೧೯೫೫ರಲ್ಲಿ ಕನ್ನಡ ಚಲನಚಿತ್ರ ರಂಗದ ಖ್ಯಾತ ಕಲಾವಿದರಾದ ಡಾ.ರಾಜಕುಮಾರ, ಜಿ.ವಿ.ಅಯ್ಯರ್, ಕೆ.ಎಸ್.ಅಶ್ವತ್, ನರಸಿಂಹರಾಜ, ಆದವಾನಿ ಲಕ್ಷ್ಮಿದೇವಿ ಮುಂತಾದವರು ಹಲವು ನಾಟಕಗಳನ್ನು ನೋಡಿ ಮೆಚ್ಚಿಗೆ ವ್ಯಕ್ತಪಡಿಸಿದ್ದರು. ಹಿನ್ನಲೆಯಲ್ಲಿ ಸುಭದ್ರಮ್ಮ ಮನ್ಸೂರ್, ದಾವಣಗೆರೆ ವನಮಾಲ ಮತ್ತು ಬೆಂಗಳೂರು ಭವಾನಿಯಂಥ ವೃತ್ತಿ ಕಲಾವಿದೆಯರು ಗುಣಾತ್ಮಕ ಕಲೆ ಮೈಗೂಡಿಸಿಕೊಂಡಿದ್ದರಿಂದ ಉತ್ತಮ ಕಲಾವಿದೆಯರು ಎಂದು ಹೆಸರಾಗಿದ್ದಾರೆ.

ಕಂಪ್ಲಿಯಲ್ಲಿ ೧೯೫೮ರಲ್ಲಿ ಸ್ಥಾಪಿತವಾದ ''ನಟರಾಜ ಕಲಾವಿಜಯ'' ಸಂಘವು ನಾಟಕ, ಗಾಯನ, ಸಂಗೀತ, ಸಂಸ್ಕೃತಿ, ಸಾಹಿತ್ಯ, ಹಾಗೂ ಕ್ರೀಡೆ ಇತ್ಯಾದಿ ಕಲೆಗಳನ್ನು ಅಭಿವೃದ್ಧಿಗೊಳಿಸುವ ಧ್ಯೇಯೋದ್ದೇಶ ಗಳನ್ನಿಟ್ಟುಕೊಂಡು ತನ್ನ ಕಾರ್ಯಕಲಾಪಗಳನ್ನು ವಿಸ್ತರಿಸಿಕೊಂಡಿತು.

೧೯೫೪-೫೭ರ ಅವಧಿಯಲ್ಲಿ ಈ ಸಂಘದ ಕಲಾವಿದರಾದ ರಾಜಿ ಗೋಪಾನಾಥ, ಶಿವಪ್ಪ, ಪಂಪಣ್ಣ ಅವರ ನಿರ್ದೇಶನದಿಂದ ವಧು-ವರ, ಪ್ರಪಂಚ ಪರೀಕ್ಷೆ, ರೂಪಾಯಿ, ಬಾಲಚಂದ್ರ, ಮಾದ್ರಿ, ಹುಚ್ಚ ಎಂಬ ಸಾಮಾಜಿಕ ನಾಟಕಗಳನ್ನು ಅದ್ದೂರಿಯಿಂದ ಸಂಘವು ಪ್ರದರ್ಶಿಸಿ ಅಪಾರ ಜನ ಮೆಚ್ಚುಗೆ ಪಡೆಯಿತು. ೧೯೫೮-೫೯ರಲ್ಲಿ ವೆಂಕೋಬ ಸಾಳೆಯವರು ಬರೆದು ನಿರ್ದೇಶಿಸಿದ ಜರಿಪೇಟ, ಜೀವನಯಾತ್ರೆ, ಶನಿಕ ಚಕ್ರ, ವಿಜಯನಗರದ ಮಣಿ ಮಕುಟ ಹಾಗೂ ಪಡೆದ ತುತ್ತು ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ ಜನಮನವನ್ನು ಚೇತನಗೊಳಿಸಿತು.

೧೯೬೯ರ ಸುಮಾರು ಕನಕಗಿರಿ ವಾದಿರಾಜರ ಗಂಡುಗಲಿ ಕುಮಾರರಾಮ ಎಂಬ ಐತಿಹಾಸಿಕ ನಾಟಕಗಳನ್ನು ಹಾಗೂ ಕಣ್ಣೆದುರ್ರ ಕುರುಡ ಎಂಬ ಸಾಮಾಜಿಕ ನಾಟಕವನ್ನು ಅದ್ದೂರಿಯಿಂದ ಪ್ರದರ್ಶಿಸಿದರೆ, ೧೯೭೦ರಲ್ಲಿ "ಅತ್ಯಾಚಾರ"ವನ್ನು, ೧೯೭೨ರಲ್ಲಿ "ಸತ್ಯಮೇವ ಜಯತೆ"ಯನ್ನು, ೧೯೭೪ರಲ್ಲಿ "ರಕ್ತ ಸಿಂಹಾಸನ"ವನ್ನು ಮತ್ತು ೧೯೭೫ರಲ್ಲಿ "ಸಮಾಜಕ್ಕೆ ಕಣ್ಣೆದೆಯೆ" ಎಂಬ ನಾಟಕಗಳನ್ನು ಪ್ರದರ್ಶಿಸಲಾಯಿತು.

ಗುಬ್ಬಿ ಚೆನ್ನಬಸವೇಶ್ವರ ನಾಟಕ ಸಂಘದವರು ೧೯೮೦ರ ಅಕ್ಟೋಬರ್ ತಿಂಗಳಲ್ಲಿ ಪ್ರದರ್ಶಿಸುವ ಎಡೆಯೂರು ಸಿದ್ಧಲಿಂಗೇಶ್ವರ ಮಹಾತ್ಮೆ ಹಾಗೂ ಎಮ್ಮಿಗನೂರು ಜಡೆಸಿದ್ದೇಶ್ವರ ಮಹಾತ್ಮೆ ಎಂಬ ಪೌರಾಣಿಕ ನಾಟಕಗಳೊಂದಿಗೆ ಇತರ ನಾಟಕಗಳನ್ನೊಳಗೊಂಡು ಸತತವಾಗಿ ೭೫ ದಿನಗಳ ಕಾಲ ಪ್ರದರ್ಶನ ನಡೆಯಿತು. ಜಿಲ್ಲೆಯ ತುಂಬ ಪ್ರದರ್ಶನ ನೀಡಿದ ಸಂಘವು ಇಂದಿಗೂ ವರ್ಷಕ್ಕೊಂದರಂತೆಯಾದರೂ ನಾಟಕಗಳನ್ನು ಪ್ರದರ್ಶಿಸುತ್ತಾ ಜೀವಂತವಾಗಿದೆ ಎಂಬುದು ಸಂತಸದ ಸಂಗತಿ.

೧೯೫೫ರಿಂದ ೧೯೫೮ರವರೆಗೆ ತುಂಗಭದ್ರಾ ಅಣೆಕಟ್ಟಿನ ನಿರ್ಮಾಣದ ನಿಮಿತ್ತ ಆಂಧ್ರ, ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಂದ ವಲಸೆ ಬಂದಿರುವ ಸಾವಿರಾರು ಕುಟುಂಬಗಳು ತುಂಗಭದ್ರ ಡ್ಯಾಂನಲ್ಲಿ ತಳವೂರಿದರು. ಅಂದಿನಿಂದ ೧೯೬೦ ರವರೆಗೆ ಕನ್ನಡೇತರರ ಸಾಂಸ್ಕೃತಿಕ ರಂಗದಲ್ಲಿ ಮೇಲುಗೈ ಸಾಧಿಸಿತ್ತು.

೧೯೬೦ರಲ್ಲಿಯ ಒಂದು ಮಹತ್ತರ ಬದಲಾವಣೆಯಿಂದಾಗಿ ಅಂದಿನ ಮೈಸೂರು ರಾಜ್ಯ ಮತ್ತು ಆಂಧ್ರ ರಾಜ್ಯಗಳ ಒಡೆತನದಿಂದ "ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್ ಲಿಮಿಟೆಡ್",ಎಂಬ ಸರ್ಕಾರಿ ಸ್ವಾಮ್ಯದ ಉದ್ದಿಮೆ ಉದಯವಾಯಿತು. ಈ ಉದ್ದಿಮೆಯಲ್ಲಿ ಕೆಲಸ ಮಾಡುವ ಕನ್ನಡಿಗರಾದ ಕನ್ನಡದ ಅಪ್ಪಟ ಅಭಿಮಾನಿಗಳಾದ ಎಂ.ಕಾಳಪ್ಪ, ದೇವದಾಸ್, ರಾಮಯ್ಯ, ಎಸ್.ಕೆ.ಅರಸ್, ಎಮ್.ಎಸ್ ರಾಮಚಂದ್ರ, ಲಕ್ಷ್ಮೀಪತಿ, ರುದ್ರಪ್ಪ, ಕೆ.ಆರ್.ಭಟ್ಟ್, ಡಬ್ಲ್ಯು. ಹೆಚ್.ನಾಗರಾಜ, ಎಂ.ಶಂಕರಗೌಡ, ವೈ.ಬಿ.ಪ್ರಹ್ಲಾದ, ಸಾಲ್ಮನ್ ಸೋಮಪ್ಪ ಮುಂತಾದವರು ಒಂದುಗೂಡಿ "ಕನ್ನಡ ಕಲಾ ಸಂಘ"ವನ್ನು ೧೯೬೮ರಲ್ಲಿ ತುಂಗಭದ್ರಾ ಡ್ಯಾಂನಲ್ಲಿ ಸ್ಥಾಪಿಸಿದರು. ಈ ಸಂಘವು ಕನ್ನಡ ಸಾಂಸ್ಕೃತಿಕ ರಂಗದಲ್ಲಿ ತನ್ನ ಛಾಪನ್ನು ತೆರೆದು ಕೊಂಡಿತು. ಅಂದಿನಿಂದ ಇದು ಕನ್ನಡ

ಧ್ವಜ ಹಾಗೂ ಕನ್ನಡದ ಕಂಪನ್ನು ಇಂದಿಗೂ ನಿರಂತರವಾಗಿ ಮೆರೆಯುತ್ತಲೇ ಬಂದಿದೆ. ದುಡಿಯುವ ವರ್ಗಕ್ಕೆ ಆಡಳಿತ ವರ್ಗದ ಪ್ರೋತ್ಸಾಹದಿಂದ ಅಸ್ತಿತ್ವಕ್ಕೆ ಬರುವ ಸಂಘಗಳ ಪೈಕಿ ಸದಾ ಕ್ರಿಯಾಶೀಲವಾಗಿರುವ ವಿರಳ ಸಂಘಗಳಲ್ಲಿ ಇದು ಒಂದಾಗಿದ್ದು, ಅಂದು ಕೇವಲ ೨೫ ಜನ ಸದಸ್ಯರನ್ನು ಹೊಂದಿದ್ದ ಸಂಘವು ಇಂದು ೨೫೦ಕ್ಕೂ ಹೆಚ್ಚು ಜನ ಆಜೀವ ಸದಸ್ಯರನ್ನು ಹೊಂದಿ ೧೯೮೦ ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಲ್ಲಿ ನೋಂದಾಯಿಸಲ್ಪಟ್ಟ ಬಳ್ಳಾರಿ ಜಿಲ್ಲೆಯಲ್ಲಿಯೇ ವ್ಯವಸ್ಥಿತವಾಗಿ ಬೆಳೆದು ನಿಂತ ಏಕೈಕ ಕಲಾ ಸಂಘ ಇದಾಗಿದೆ.

೧೯೬೪ರಲ್ಲಿ ಸ್ಥಾಪಿತವಾದ ಕನ್ನಡ ಕಲಾ ಸಂಘವು ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಸಾಹಿತ್ಯ, ಸಂಗೀತ, ಕಲೆ, ರಂಗಭೂಮಿ, ಮುಂತಾದ ಪ್ರಕಾರಗಳಲ್ಲಿ ಹಲವಾರು ಯಶಸ್ವಿ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. ಕೇವಲ ಟಿ.ಬಿ.ಡ್ಯಾಂನ ಪ್ರೇಕ್ಷಕರಿಗೆ ಮಾತ್ರ ಸೀಮಿತವಾಗಿರದೇ ಸುತ್ತಮುತ್ತಲಿನ ಪ್ರದೇಶಗಳಾದ ಹುಲಿಗಿ, ಮುನಿರಾಬಾದ್, ಹೊಸಪೇಟೆ, ಮರಿಯಮ್ಮನಹಳ್ಳಿಗಳಿಂದಲೂ ಪ್ರೇಕ್ಷಕರು ಬಂದು ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾರೆ. ನಿರಂತರವಾಗಿ ಕ್ರಿಯಾಶೀಲತೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಾ ಸಾಂಸ್ಕೃತಿಕ ರಂಗದಲ್ಲಿಯೇ ತನ್ನ ಅನನ್ಯತೆಯನ್ನು ನಿರ್ಮಿಸಿದೆ. ಸಂಘದ ಕಲಾವಿದರು ಸ್ಥಳೀಯ "ಆಕಾಶವಾಣಿ" ಕೇಂದ್ರದಲ್ಲೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡಿ ಆಕಾಶವಾಣಿ ಶ್ರೋತೃಗಳ ಮೆಚ್ಚುಗೆ ಪಡೆದಿದ್ದಾರೆ.

ಪ್ರತಿಭಾ ಸ್ಪರ್ಧೆ, ಪುರಂದರದಾಸರ ಸಂಗೀತೋತ್ಸವ, ಟಿ.ಪಿ.ಕೈಲಾಸಂ ದಿನಾಚಾರಣೆ, ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚಾರಣೆಗಳನ್ನು ಕನ್ನಡ ಸಂಘವು ಪ್ರತಿವರ್ಷವೂ ಐದು ನಿಗದಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಿದೆ. ಸ್ಥಳೀಯ ಪ್ರೇಕ್ಷಕರಿಗೆ ಕಾರ್ಯಕ್ರಮಗಳನ್ನು ನೀಡುತ್ತಾ ಕ್ರಿಯಾಶೀಲವಾಗಿ ಬಂದಿರುವುದಲ್ಲದೇ ಸಾಹಿತ್ಯ ಕ್ಷೇತ್ರದ ಬೆಳವಣಿಗೆಯನ್ನು ಸಹ ಮಾಡುತ್ತಿದೆ. ತನ್ನದೇ ಆದ ಚಿಕ್ಕ ಪುಸ್ತಕ ಭಾಂಡಾರವನ್ನು ತೆರೆದಿರುವ ಇದರಲ್ಲಿ ಸುಮಾರು ೫೦೦೦ ಕಥೆ, ಕವನ, ನಾಟಕ, ಕಾದಂಬರಿ, ಪುಸ್ತಕಗಳಿವೆ. ಕಲೆ, ಸಾಹಿತ್ಯ, ಸಂಗೀತ, ನಾಟಕಗಳಲ್ಲಿ ಸಂಘವು ಸಕ್ರಿಯವಾಗಿ ಪಾತ್ರ ನಿರ್ವಹಿಸುತ್ತಾ ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಜಾನಪದ, ಅಸಂಗತ ನಾಟಕಗಳನ್ನು ಹಲವಾರು ಬಾರಿ ಹಲವಾರು ಕಡೆ ಪ್ರದರ್ಶಿಸಿ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದು, ಬಳ್ಳಾರಿ ಜಿಲ್ಲೆಯಲ್ಲೆ ಹೆಸರುವಾಸಿಯಾದ ಸಾಂಸ್ಕೃತಿಕ ಸಂಘವಾಗಿದೆ. ಕನ್ನಡ ಸಂಘದ ಕಲಾವಿದರು ಅನೇಕ ಜಿಲ್ಲಾಮಟ್ಟದ ರಾಜ್ಯಮಟ್ಟದ ಹಾಗೂ ಅಖಿಲಭಾರತ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಹಲವಾರು ಪ್ರಶಸ್ತಿ, ಪಾರಿತೋಷಕಗಳನ್ನು ಪಡೆದು ಕರ್ನಾಟಕ ರಂಗಭೂಮಿಯಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿದ್ದಾರೆ. ಹೆಸರಾಂತ ನಾಟಕಕಾರರ ನೂರಾರು ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸಿ ಸತತವಾಗಿ ಪ್ರದರ್ಶಿಸಿ ಜನಮನಕ್ಕೆ ಸಂತಸವನ್ನು ಹಂಚಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಸಂಘ ರಂಗಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿ, ರಾಜ್ಯ ಮಟ್ಟದ ಹಾಗೂ ಅಖಿಲ ಭಾರತ ಮಟ್ಟದವರೆಗೆ ಪ್ರಶಸ್ತಿಗಳನ್ನು ಪಡೆದಿದೆ. ಕರ್ನಾಟಕ ಹಾಗೂ

[illegible]

ನೆರೆಯ ರಾಜ್ಯಗಳಲ್ಲಿಯೂ ಗುರುತಿಸಿಕೊಂಡಿದೆ. ರಾಜ್ಯದಾದ್ಯಂತ ರಂಗಾಸಕ್ತರ ಗಮನ ಸೆಳೆದು ಬಂದಿರುವ ಈ ಸಂಘ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೇಕ್ಷಕರನ್ನು ಪಡೆದು ಈ ಭಾಗದಲ್ಲೆಲ್ಲಾ ನಿರಂತರವಾಗಿ ರಂಗಚಟುವಟಿಕೆಗಳು ಬೆಳೆಯಲು ಶ್ರಮಿಸುತ್ತದೆ.

ಸಂಗೊಳ್ಳಿ ರಾಯಣ್ಣ, ಅಂಗುಲಿಮಾಲ, ಇಂಟರ್ ಈಡಿಯಟ್, ಪತ್ನಿಸೇವಕರು, ರಣಧುಂದುಬಿ, ಹುತ್ತ, ಸುಳಿಯಲ್ಲಿ ಸಿಕ್ಕವರು, ದಿವ್ಯದರ್ಶನ, ಆರ್.ಅಂತ್ಯವಲ್ಲ.-ಇದು ಆರಂಭ, ಮಹಾನಟಿ ಕಾಲಧರ್ಮ, ಜೈ ಮೈಲಾರಲಿಂಗ, ಹೆಂಡತಿಯೇ ನಿನಗೆ ನಮೋ ನಮೋ, ದಫನ್, ರಾವಿ ನದಿಯ ದಂಡೆಯ ಮೇಲೆ, ಇವು ಈ ಸಂಘವು ಪ್ರದರ್ಶಿಸಿದ ಕೆಲವು ಪ್ರಮುಖ ನಾಟಕಗಳಾಗಿವೆ.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅದರಲ್ಲೂ ವಿಶೇಷವಾಗಿ ರಂಗಭೂಮಿಯ ಚಟುವಟಿಕೆಗಳನ್ನು ಉದ್ದೇಶವಾಗಿಟ್ಟುಕೊಂಡು ಹೊಸಪೇಟೆಯಲ್ಲಿ ೧೯೮೨ರಲ್ಲಿ ಮಾಬ್ಲಿಯವರ ನೇತೃತ್ವದಲ್ಲಿ "ನಾವು ಗೆಳೆಯರು" ಎಂಬ ಸಂಘ ಹುಟ್ಟಿಕೊಂಡಿತು. ಮೂರು ವರ್ಷಗಳ ನಂತರ "ನಾವು" ಸಾಂಸ್ಕೃತಿಕ ಸಂಘಟನೆ ಎಂಬ ಹೆಸರನ್ನು ಕೊಡಲಾಯಿತು. ಅಂದಿನಿಂದ ಇಂದಿಗೂ ೧೫ ವರ್ಷಗಳಲ್ಲಿ ನೂರಕ್ಕೂ ಹೆಚ್ಚು ರಂಗಭೂಮಿಯ ಕಾರ್ಯಕ್ರಮಗಳನ್ನು ಸಂಘಟನೆಯು ಏರ್ಪಡಿಸಿದೆ.

ಯಾವುದೇ ರಾಜಕೀಯ, ಧಾರ್ಮಿಕ ಕಟ್ಟುಪಾಡುಗಳಿಗೆ ತನ್ನನ್ನು ಒಗ್ಗಿಸಿಕೊಳ್ಳದೇ, ಶುದ್ಧ ಸಾಂಸ್ಕೃತಿಕವಾದ ಆರ್ಥಿಕ ಲಾಭ ರಹಿತ ಸಂಸ್ಥೆಯಾಗಿ ಮುಂದುವರೆದಿದೆ. ಇದುವರೆಗೆ ಗಿರೀಶ್ ಕಾರ್ನಾಡರ ತುಘಲಕ್, ಪ್ರಸನ್ನರ ತದ್ರೂಪಿ, ಕಂಬಾರರ ಪುಷ್ಪವಾಣಿ, ಕೈಲಾಸಂ ಅವರ ಟೊಳ್ಳುಗಟ್ಟಿ, ಲಿಂಗದೇವರು ಹಳೆಮನಿಯವರ ಚಿಕ್ಕದೇವಭೂಪ, ಚಂದ್ರಶೇಖರ ಪಾಟೀಲರ ಮೂರು ನಾಟಕಗಳನ್ನು ತಯಾರಿಸಿ ಅನೇಕ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಅಭಿನಯ, ನಿರ್ದೇಶನ, ವಸ್ತ್ರಾಲಂಕಾರ, ರಂಗವಿನ್ಯಾಸಗಳಿಗಾಗಿ ಸುಮಾರು ೨೫ ಬಹುಮಾನಗಳನ್ನು ಪಡೆದಿದೆ. ಹವ್ಯಾಸಿ ಕಲಾವಿದ ಯುವಕ ಯುವತಿಯರಿಗೆ ಹಾಗೂ ಮಕ್ಕಳಿಗೆ ಹನ್ನೆರೆಡು ಪೂರ್ಣ ಪ್ರಮಾಣದ ರಂಗತರಬೇತಿ ಶಿಬಿರಗಳನ್ನು ಏರ್ಪಡಿಸಿದೆ. ಹೆಗ್ಗೋಡಿನ ನೀನಾಸಂ, ಮೈಸೂರಿನ ರಂಗಾಯಣ, ಕೊಡಗಿನ ಸೃಷ್ಟಿ ತಂಡ ಇಂಥ ಪ್ರತಿಷ್ಟಿತ ತಂಡಗಳ ಜೊತೆಗೆ, ಬೆಂಗಳೂರು, ಹುಬ್ಬಳ್ಳಿ, ಬಳ್ಳಾರಿ, ಬೀದರ, ಗುಲ್ಬರ್ಗ, ರಾಯಚೂರು, ಕೊಪ್ಪಳ ಮುಂತಾದ ಕಡೆಗಳಿಂದ ತಂಡಗಳನ್ನು ಕರೆಸಿ ೪೦ಕ್ಕೂ ಹೆಚ್ಚು ನಾಟಕಗಳನ್ನು ಪ್ರಯೋಗಿಸಿದೆ.

ರಂಗಭೂಮಿ ಕಾರ್ಯಕ್ರಮಗಳಲ್ಲದೇ ಅನೇಕ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದೆ. ಡಿ.ವಿ.ಜಿ. ಹಾಗೂ ದ.ರಾ.ಬೇಂದ್ರೆ ಶತಮಾನೋತ್ಸವ, ರಂಗವಿನ್ಯಾಸಗಳು, ರಾಜ್ಯೋತ್ಸವ, ನಾಡಹಬ್ಬ, ಸ್ವತಂತ್ರ್ಯೋತ್ಸವ ರಸಮಂಜರಿ, ಸದ್ಭಾವನಾ ಸಮಾರೋಪ, ನಾಟಕ ಸಾಹಿತ್ಯ ಪ್ರದರ್ಶನ, ಹಾಸ್ಯ ರಸಾಯನ, ಪುಸ್ತಕ ಪ್ರದರ್ಶನ, ಹಾಗೂ ಮಾರಾಟ ಸತ್ಕಾರ ಸಮಾರಂಭಗಳು ಇತ್ಯಾದಿ. ವಿವಿಧ ಘಟಕಗಳನ್ನು

ಸ್ಥಾಪಿಸಿಕೊಂಡು ಸಂಘವು ನಿರ್ದಿಷ್ಟ ಗುರಿಗಳತ್ತ ಸಾಗಿದೆ. ಗ್ರಾಮೀಣ ರಂಗಕಲೆಗಳನ್ನು ಪ್ರೋತ್ಸಾಹಿಸಲು'' ನಾವು ಜಾನಪದ ರಂಗ'' ಘಟಕ, ಮಕ್ಕಳ ರಂಗಭೂಮಿಯ ಚಟುವಟಿಕೆಗಳನ್ನು ನಡೆಸುವ ''ನಾವು ಮಕ್ಕಳ ರಂಗ'' ಘಟಕ ಸಾಮಾಜಿಕ ಸಮಸ್ಯೆಗಳ ಬಗ್ಗೆ ಕಾಳಜಿಯನ್ನು ''ನಾವು ಬೀದಿ ನಾಟಕ'' ರಂಗ ಚಟುವಟಿಕೆಗಳಿಗಾಗಿ ''ನಾವು ಮಹಿಳಾರಂಗ'' ನಾಟಕ ಕಲಾವಿದರಿಗೆ ಅಲ್ಪ ಆರ್ಥಿಕ ನೆರವು ಕೊಡಬಲ್ಲ ''ನಾವು ಅರೆವೃತ್ತಿ'' ರಂಗ ಘಟಕಗಳನ್ನು ಸ್ಥಾಪಿಸಿದೆ.

ಇದೇ ರೀತಿಯಾಗಿ ಸುಸಂಸ್ಕೃತಿ ರಂಗ ಚಳುವಳಿಯನ್ನು ನಡೆಸಿರುವ ಸಂಘವು ಬಳ್ಳಾರಿ ಜಿಲ್ಲೆಯಾದ್ಯಂತ ಘಟಕಗಳನ್ನು ಆರಂಭಿಸಿದೆ. ಈ ನಿಟ್ಟಿನಲ್ಲಿ ಈಗಾಗಲೇ ೧೯೯೪ರಲ್ಲಿಯೇ ಬಳ್ಳಾರಿ ಘಟಕವು ಸ್ಥಾಪನೆಯಾಗಿದೆ. ಈಗ ಸೊಂಡೂರು, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಕೂಡ್ಲಿಗಿಗಳಲ್ಲೂ ಘಟಕಗಳು ಸ್ಥಾಪನೆಯಾಗಿದೆ. ಅತ್ಯಂತ ಕಡಿಮೆ ದರಲ್ಲಿರುವ ನಿರಂತರವಾಗಿ ನಾಟಕಗಳನ್ನು ಪ್ರೇಕ್ಷಕರಿಗೆ ತೋರಿಸುವ ಸಲುವಾಗಿಯೇ ಬಳ್ಳಾರಿ, ಹೊಸಪೇಟೆಗಳಲ್ಲಿ ಪ್ರೇಕ್ಷಕ ಸದಸ್ಯರನ್ನು ಹೊಂದಿ ಯಶಸ್ಸು ಸಾಧಿಸಿದೆ.

ಕೆ.ಮಹಾಬಲೇಶ್ವರ ''ನಾವು'' ಸಂಘದ ರೂವಾರಿಗಳೂ, ಜಿಲ್ಲೆ ಸಂಚಾಲಕರು ಆದ ಮಾಬ್ಲಿಯೆಂದು ಕರೆಯಿಸಿಕೊಳ್ಳುವ ಇವರು ಬಳ್ಳಾರಿಯ ವೀರಶೈವ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. ನೀನಾಸಂನಲ್ಲಿ ಒಂದು ವರ್ಷ ಕಲಾರಂಗ ಯೋಜನೆಗೆ ನಿರ್ದೇಶಕರಾಗಿಯೂ, ತಿರುಗಾಟದ ಪ್ರಸನ್ನರ ನಾಟಕ ''ಹುದ್ದೆ ಮೀರಿದ ಹಾಡಿಗೆ'' ಸಹನಿರ್ದೇಶಕರಾಗಿಯೂ, ಅಕ್ಷರ ವಿಜಯದ ಸಾಂಸ್ಕೃತಿಕ ಸಮಿತಿಗೆ ಜಿಲ್ಲಾ ಸಂಯೋಜಕರಾಗಿ, ಜಾಥಾ ಸಾಹಿತ್ಯ ನಿರ್ಮಾಣ ಶಿಬಿರ, ೨೦೦ ಕಲಾವಿದರ ನಾಟಕ ಶಿಬಿರ, ಗಣಪತಿ ಪೂರ್ವ ಜಾಥಾ ಇವುಗಳನ್ನು ನಡೆಸಿಕೊಟ್ಟಿದ್ದಾರೆ. ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ನಾಟಕೋತ್ಸವ ಹಾಗೂ ಸ್ಪರ್ಧೆಗಳಿಗೆ ಆಹ್ವಾನಿತ ವೀಕ್ಷಕರಾಗಿಯೂ ಪಾಲ್ಗೊಂಡಿದ್ದಾರೆ. ಹಾಗೂ ಅನೇಕ ರಂಗ ಶಿಬಿರಗಳಲ್ಲಿ ತರಬೇತಿಯನ್ನು ಪಡೆದಿದ್ದಾರೆ.

ಈ ಸಂಘಟನೆಯಲ್ಲಿ ಹೆಚ್ಚು ಅನುಭವವುಳ್ಳ ಕಲಾವಿದರೇ ಇದ್ದು, ಹೊಸಪೇಟೆಯ ಘಟಕದಲ್ಲಿ ಯಶೋಧಮ್ಮ ಕೈಲಾಸ, ಎಸ್.ಎಂ.ಬಸವರಾಜ, ಬಿ.ಎಸ್.ಲೋಕನಾಥ, ಹರೀಶ, ಆನಂದ ಕುಲಕರ್ಣಿ, ಡಂಬಳ ಕಲ್ಯಾಣಿ, ಪಿ.ಆರ್.ಕುಲಕರ್ಣಿ, ಶ್ರೀನಿವಾಸ ಲೇಪಾಕ್ಷಿ, ಕೆ.ಅಶೋಕ ಕುಮಾರ, ರಮೇಶ ವಾಡೇಕರ್, ಲಗುಮರಾಜ, ರಾಜಲಕ್ಷ್ಮಿ, ಸೌಭಾಗ್ಯ ಲಕ್ಷ್ಮಿ, ಶೈಲೇಂದ್ರ, ರೂಪ, ಶಿವಶಂಕರ ಬಣಗಾರ, ವಡಿಗೇರಿ ವಿರೂಪಾಕ್ಷಪ್ಪ, ಮುಂತಾದವರು ಇದ್ದಾರೆ. ಹಾಗೆಯೇ ಬಳ್ಳಾರಿಯ ಘಟಕದಲ್ಲಿ ಎ.ಮಲ್ಲಿಕಾರ್ಜುನಪ್ಪ, ಹೆಚ್. ಹನುಮನಗೌಡ, ವೇದವ್ಯಾಸ, ವೈ.ರಾಘವೇಂದ್ರರಾವ್, ಸಿದ್ರಾಮ ಮುಳಚೆ, ಬಾದಾಮಿ ಶಿವಲಿಂಗು, ಆರ್.ಬಿ.ದಿವಾಕರ, ರಾಮಚಂದ್ರ, ಗುರುಬಸವರಾಜ, ಜೆ.ಆರ್.ನಾಗರಾಜ, ಚೆನ್ನಬಸವಣ್ಣ, ಡಾ.ರಾಜಶೇಖರ ನೀರಮಾನ್ವಿ, ಹೆಚ್.ಎಂ.ಮಹೇಂದ್ರ ಮುಂತಾದವರು ಈ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ.

ಜಿಲ್ಲೆಯಾದ್ಯಂತ ವರ್ಷವಿಡಿ ತನ್ನ ಹದಿನೈದನೇ ವಾರ್ಷಿಕೋತ್ಸವವನ್ನು ೧೯೯೬-೯೭ರಲ್ಲಿ "ರಂಗ ಸಂಭ್ರಮ ವರ್ಷ" ವೆಂದು ಆಚರಿಸಿತು. ನಾಟಕೋತ್ಸವ, ವಿಚಾರ ಸಂಕಿರಣ, ಸನ್ಮಾನ, ರಂಗಗೀತೆ, ಕ್ಯಾಸೆಟ್ ಸಂಚಿಕೆ, ಶಾಲಾ ಕಾಲೇಜುಗಳಿಗೆ ಅಭಿನಯ ಸ್ಪರ್ಧೆಗಳು, ವಿವಿಧ ನಾಟಕ ಶಿಬಿರಗಳು, ರಂಗ ವಾಚಾನಾಲಯ ಸ್ಥಾಪನೆ ಮುಂತಾದ ಹದಿನೈದು ವೈವಿಧ್ಯಮಯ ಕಾರ್ಯಕ್ರಮಗಳನ್ನು ಜಿಲ್ಲೆಯಾದ್ಯಂತ ಹಮ್ಮಿ ಕೊಂಡಿತು. ಇಡೀ ಕಾರ್ಯಕ್ರಮಗಳನ್ನು ಬಳ್ಳಾರಿಯಲ್ಲಿ ಮೈಸೂರಿನ ರಂಗಾಯಣ ತಂಡದ ಐದು ದಿನಗಳ ನಾಟಕೋತ್ಸವ ಏರ್ಪಡಿಸುವುದರ ಮೂಲಕ ನಡೆಯಿತು.

ಬೀದಿ ನಾಟಕಕ್ಕೆ ಹೆಸರುವಾಸಿಯಾದ ಹೊಸಪೇಟೆ "ಭಾವೈಕ್ಯತಾ ವೇದಿಕೆ" ಇಡೀ ರಾಜ್ಯವನ್ನೇ ಸುತ್ತಿ ಬರುವ ಸಾಹಸಕ್ಕೆ ಕೈಹಾಕಿರುವುದು ಜಿಲ್ಲೆಯ ಗಮನಾರ್ಹ ಸಂಗತಿ. ಭಾವೈಕ್ಯತೆಯ ಮತವನ್ನೇ ಗುರಿಯಾಗಿಟ್ಟು ಕೊಂಡು ಜನರಲ್ಲಿ ಜಾಗೃತಿ ಮೂಡಿಸಲು ಹೊರಟಿರುವ ಈ ವೇದಿಕೆ ಸಾಮರಸ್ಯದ ಕುರುಹಾದ ಮೋಹರಂ ಪದಗಳ ರಾಜ್ಯಮಟ್ಟದ ಸ್ಪರ್ಧೆಯನ್ನು ಏರ್ಪಡಿಸುವುದರ ಮೂಲಕ ತನ್ನ ಹರವನ್ನು ಹೆಚ್ಚಿಸಿಕೊಂಡು ಹತ್ತು ಹಲವಾರು ರಚನಾತ್ಮಕ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನಮ್ಮ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲೂ ಬೀದಿ ನಾಟಕ ಪ್ರದರ್ಶನ ನೀಡಿರುವುದಲ್ಲದೆ, ಗುಲಬರ್ಗ ವಿಭಾಗ ಮಟ್ಟದಲ್ಲಿ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯವತಿಯಿಂದ ಜನ ಜಾಗೃತಿ ಆಂದೋಲನದಲ್ಲಿ ಭಾಗವಹಿಸಿ ಬಳ್ಳಾರಿ, ರಾಯಚೂರು, ಗುಲಬರ್ಗ, ಬೀದರ, ಪ್ರಾಂತಗಳ ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶನ ನೀಡಿ ಜನ ಮೆಚ್ಚಿಗೆ ಪಾತ್ರವಾಗಿದೆ.

ಪ್ರಸ್ತುತವಾಗಿ ತಂಡದಲ್ಲಿ ಇಪ್ಪತ್ತೊಂದು ಜನ ಕಲಾವಿದರಿದ್ದಾರೆ. ಶಾಲೆಯಲ್ಲಿ ಓದುವ ಮಕ್ಕಳು, ಆರ್ಥಿಕ ತೊಂದರೆಯಿಂದ ಶಾಲೆ ಬಿಟ್ಟವರು, ನಿರುದ್ಯೋಗಿ ಯುವಕರು, ಕೂಲಿನಾಲಿ ಮಾಡಿಕೊಂಡು ಹೊಟ್ಟೆಹೊರೆಯುವವರು ಇವರೇ ಈ ತಂಡದಲ್ಲಿನ ಕಲಾವಿದರು. ಮಕ್ಕಳನ್ನೇ ಹೆಚ್ಚಾಗಿ ಹೊಂದಿರುವ ಈ ತಂಡ ಅತ್ಯಂತ ಲವಲವಿಕೆ, ಉತ್ಸಾಹದಿಂದ ಕೂಡಿದೆ. ಈ ತಂಡವು ಪ್ರದರ್ಶನ ನೀಡುವ ಬೀದಿ ನಾಟಕಗಳಲ್ಲಿ ದಹನ, ಈನೆಲ ಈಜಲ, ಅರಿವು, ಹುಡಿಗಿ ಓದಲೇ ಬೇಕು, ನಾವು ಮನುಜರು, ವಿಸರ್ಜನೆ, ಊರು ನುಂಗುವವರು ಮತ್ತು ಬಂದರು ಇವು ಪ್ರಮುಖವಾದವುಗಳಾಗಿವೆ. ಉತ್ತರ ಕರ್ನಾಟಕದಲ್ಲಿ ಬೀದಿನಾಟಕಕ್ಕೆ ಒಂದು ಸುಸಜ್ಜಿತ ನೆಲೆಗಳನ್ನು ನಿರ್ಮಿಸಿಕೊಂಡು ಈ ಭಾಗದ ಜನಾಂದೋಲನ ಜನಜಾಗೃತಿ ಮಾಡುವ ಸದುದ್ದೇಶವನ್ನು ಈ ವೇದಿಕೆಯು ಹೊಂದಿದೆ.

ಕಳೆದ ಕೆಲವೇ ವರ್ಷಗಳಿಂದ ಪ್ರಾರಂಭವಾದ ಈ ತಂಡದ ತಿರುಗಾಟ ಮರಿಯಮ್ಮನಹಳ್ಳಿ, ಹರಪನಹಳ್ಳಿ, ಹೊನ್ನಾಳಿ, ಶಿವಮೊಗ್ಗ, ಕುಂಸಿ, ಸಾಗರ, ಜೋಗ್‌ಫಾಲ್ಸ್, ಹೆಗ್ಗೋಡು, ತೀರ್ಥಹಳ್ಳಿ, ಆಗುಂಬೆ, ಶೃಂಗೇರಿ, ಓರಿಯಡ್ಕ, ಉಡುಪಿ, ಸುರತ್ಕಲ್, ಮಂಗಳೂರು, ಉಪ್ಪಿನಂಗಡಿ, ಉಜಿರೆ, ಧರ್ಮಸ್ಥಳ, ಬಾಬಾಬುಡನ್‌ಗಿರಿ, ತರೀಕೆರೆ, ಭದ್ರಾವತಿ, ಲಕ್ಕವಳ್ಳಿ, ತೆಲಿಕಾ, ಇಟಗಿ ಇಲ್ಲೆಲ್ಲಾ ಪ್ರದರ್ಶನ ನೀಡಿದೆ.

ಮಕ್ಕಳ ತಂಡವನ್ನು ಕಟ್ಟಿಕೊಂಡು ಯಾವುದೇ ಆರ್ಥಿಕ ನೆರವಿಲ್ಲದೆ ಕೇವಲ ಕಲಾಸಕ್ತರು, ಸಂಘ-ಸಂಸ್ಥೆಗಳ ನೆರವು ದೊರೆಯುವುದೆಂಬ ಭರವಸೆ ಇಟ್ಟುಕೊಂಡು ಬೀದಿನಾಟಕ ತಂಡ ಕಟ್ಟಿಕೊಂಡು ತಿರುಗಾಟ ಹೊರಟಿರುವ ಪಿ.ಅಬ್ದುಲ್ ಅವರದು ದಿಟ್ಟತನದ ಸಾಹಸ ಎಂದೇ ಹೇಳಬೇಕು. ಹಲವಾರು ಯೋಜನೆಗಳಿಗೆ ಬಳಸುವ ಬೀದಿ ನಾಟಕವು ಜನಪ್ರಿಯ ಮಾಧ್ಯಮವಾಗಿದ್ದು ಪ್ರಸ್ತುತವಾಗಿ ಈ ವೇದಿಕೆಯು ತನ್ನ ಗುರಿಯನ್ನು ತಲುಪುತ್ತಾ ಬಂದಿದೆ.

ಅಧ್ಯಾಯ ೩

ನಟಿಯರ ಪ್ರವೇಶ

ಅಧ್ಯಾಯ ೩

ನಟಿಯರ ಪ್ರವೇಶ

ರಂಗಭೂಮಿಯಲ್ಲಿ ನಟಿಯರ ಪ್ರವೇಶ ಇತ್ತೀಚಿಗೆ ಆಗಿದ್ದರೂ ಕೂಡ, ನಾವು ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕಿಸಿದಾಗ, ಪುರಾಣಕಾಲದ ರಂಗಭೂಮಿ ಇತಿಹಾಸದಲ್ಲಿ ನಟಿಯರು ಕಾಣಿಸಿಕೊಂಡಿದ್ದಾರೆ. ಆದರೆ ಅದು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಅದರಲ್ಲೂ ಆ ನಟಿಯರು ಸೀಮಿತ ವರ್ಗದರೂ ಮತ್ತು ಶ್ರೇಣೀಕರಣದಲ್ಲಿ ತೀರ ಕೆಳಗಿನವರೇ ಆಗಿದ್ದಾರೆ. ಒಂದು ವೇಳೆ ರಾಣಿಯರು ಉನ್ನತ ಶ್ರೇಣೀಕರಣದ ಸ್ತ್ರೀಯರು ನಾಟಕವನ್ನು ಆಡುವುದು ಇರಲಿ ನೋಡುವುದೂ ಕೂಡ ನಿಷಿದ್ಧವಾಗಿತ್ತು. ಇತಿಹಾಸದಲ್ಲಿ ನಾಟಕ ನೋಡಲು ಹೋದ ಪತ್ನಿಯನ್ನು ಕೊಂದಿರುವಂಥ ಘಟನೆಗಳು ನಮಗೆ ಸಿಗುತ್ತದೆ. ಹಲವಾರು ಜಾನಪದ ಕಥೆಗಳಲ್ಲಿ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ತಿರುವಿದಾಗ ಇಂಥ ದಾಖಲೆಗಳು ನಮಗೆ ಸ್ತ್ರೀಯ ಸ್ವಾತಂತ್ರ್ಯತೆಯ ಬಗ್ಗೆ ಸ್ಪಷ್ಟೀಕರಣವನ್ನು ನೀಡುತ್ತದೆ. ನಟಿಯು ರಂಗವನ್ನು ಪ್ರವೇಶಿಸಿದಾಗ ಹಲವಾರು ರೀತಿಯಲ್ಲಿ ವಿರೋಧವನ್ನು ಕಂಡು, ಕೇಳಿ, ಅನುಭವಿಸಿಯೇ ರಂಗಭೂಮಿಗೆ ಕಾಲಿಟ್ಟು, ನಂತರದ ದಿನಗಳಲ್ಲಿ ಎಲ್ಲವನ್ನು ಮೆಟ್ಟಿ ನಿಂತಿದ್ದಾಳೆ ಎಂದರೆ ತಪ್ಪಿಲ್ಲ.

ಮೊದಲು ಕೇವಲ ನಟರು : ನಂತರ ನಟಿಯರು : ಅನಿವಾರ್ಯತೆ : ನಾಟ್ಯಶಾಸ್ತ್ರದಲ್ಲಿ ನಟಿಯರ ಅನಿವಾರ್ಯತೆ ಕುರಿತು ಒಂದು ಪ್ರಸ್ತಾಪವಿದೆ. ಬ್ರಹ್ಮನು ಭರತನಿಗೆ ನಾಟ್ಯ ವೇದವನ್ನು ಉಪದೇಶಿಸಿ 'ನಿನಗೆ ನೂರು ಜನ ಮಕ್ಕಳಿದ್ದಾರೆ. ಅವರನ್ನು ಕೂಡಿಕೊಂಡು ನಾಟ್ಯ ಪ್ರದರ್ಶನ ನೀಡು ಎಂದು ಉಪದೇಶಿಸುತ್ತಾನೆ. ಅದರಂತೆ ಭರತನು ತನ್ನ ನೂರು ಜನ ಗಂಡು ಮಕ್ಕಳಲ್ಲಿ ಯಾವನು ಯಾವ ಪಾತ್ರಕ್ಕೆ ಯೋಗ್ಯ ಎಂಬುದನ್ನು ವಿಚಾರಿಸಿ ಅವರವರಿಗೆ ತಕ್ಕನಾದ ಪಾತ್ರಗಳನ್ನು ಹಂಚಿ ಪ್ರಯೋಗ ಮಾಡಿದನು. ಈ ಪ್ರಯೋಗವು ಭಾರತಿ, ಸಾತ್ವತಿ, ಆರಭಟೀ ವೃತ್ತಿಗಳನ್ನಾಧರಿಸಿದಾಗಿತ್ತು. ಆಗ ಬ್ರಹ್ಮನು ಭರತನಿಗೆ ಕೃಶಿಕಿ ವೃತ್ತಿ ಬಳಸಿ ಪ್ರಯೋಗ ಮಾಡು ಎಂದನು. ಭರತನು ಕೃಶಿಕೀ ವೃತ್ತಿಯಲ್ಲಿ ನರ್ತನ ರಸಭಾವಗಳ ಅಭಿವ್ಯಕ್ತಿ ಮುಖ್ಯ. ಈ ವೃತ್ತಿಗೆ ಶೃಂಗಾರವೇ ಮೂಲ ಈ ವೃತ್ತಿಯ ಪ್ರಯೋಗವು ಕೇವಲ ಪುರುಷರಿಂದ ಸಾಧ್ಯವಿಲ್ಲ ಸ್ತ್ರೀಯರು ಬೇಕು. ನೀನು ನಟಿಯರನ್ನು ಕೊಟ್ಟು ಆ ಕೊರತೆಯನ್ನು ನಿವಾರಿಸು ಎಂದು ಭಿನ್ನವಿಸಿಕೊಂಡನು. ಬ್ರಹ್ಮನು ಅಲಂಕಾರ ಪ್ರಿಯರಾದ ಕೃಶಿಕೀ ವೃತ್ತಿಯಲ್ಲಿ ಚತುರರಾದ ಮಂಜು, ಕೇಶೀ, ಸುಕೇಶೀ, ಸುಲೋಚನಾ, ಸೌದಾಮಿನಿ,

ಸುಂದರಿ, ವಿದಗ್ದ ಮುಂತಾದ ೨೪ ಜನ ನಟಿಯರನ್ನು ಮಾನಸೀ ಸೃಷ್ಟಿಯಿಂದ ಹುಟ್ಟಿಸಿ ಭರತನಿಗೆ ನೀಡಿದನು (ನಾಟ್ಯಶಾಸ್ತ್ರ, ಲೇ: ಆದ್ಯರಂಗಾಚಾರ್ಯ, ಅಕ್ಷರ ಪ್ರಕಾಶನ, ಸಾಗರ, ೧೯೮೪ ಪುಟ, ೨,೩). ಹೀಗೆ ನಟಿಯರ ಅನಿವಾರ್ಯತೆ ಬಂದು ಬ್ರಹ್ಮನೇ ಸೃಷ್ಟಿಸಿದವರು ನಟಿಯರಾಗಿದ್ದಾರೆ ಎಂದು ಹೇಳಬಹುದು.

ಜೀವನವೆಂಬ ನಾಟಕದಲ್ಲಿ ಗಂಡು-ಹೆಣ್ಣುಗಳನ್ನು ಸೃಷ್ಟಿಸಿದ ಬ್ರಹ್ಮನು ಕಲೆಗಾಗಿಯೇ ನಟಿಯರನ್ನು ಸೃಷ್ಟಿಸಿದನೆಂದು ಭರತನ ನಾಟ್ಯಶಾಸ್ತ್ರದಲ್ಲಿ ಹೇಳಲಾಗುತ್ತಿದೆ. ಹೀಗೆ ಮುಂದುವರಿದು ಈ ೨೪ ಜನ ನಟಿಯರಲ್ಲಿ ಯಾರು ಯಾವ ಯಾವ ಪಾತ್ರವನ್ನು ಮಾಡಬಲ್ಲವರು. ಇವರ ಲಕ್ಷಣಗಳನ್ನು ಗಮನಿಸಿ ಯಾವ ನಟಿಯರಿಗೆ ಎಂತೆಂಥ ಪಾತ್ರ ಸೂಕ್ತವಾಗುತ್ತದೆ. ಅವರೇ ಆ ಪಾತ್ರವನ್ನು ನಿಭಾಯಿಸಬಲ್ಲಂಥ ಲಕ್ಷಣ ಉಳ್ಳವರು ಎಂಬುದನ್ನು ಅರಿತು ಭರತನೇ ಇವರ ಸೂಕ್ಷ್ಮ ಭಾವವನ್ನು ಗಮನಿಸಿ ನಾಟಕವನ್ನು ಅಭಿನಯಿಸಲು ಇಂಥವರೇ ಸೂಕ್ತರೆನಿಸಿದ್ದಾರೆ ಎಂದು ತನ್ನ ನಾಟ್ಯ ಶಾಸ್ತ್ರದಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾನೆ. ಭರತನು ತನಗೆ ಅಭಿನಯಿಸಲು ೨೪ ಜನರನ್ನು ಕೊಟ್ಟನೆಂದು, ಅವರನ್ನು ಸ್ವೀಕರಿಸಿ ಸುಮ್ಮನೆ ಕೂಡಲಿಲ್ಲ ನಂತರ ಅವರವರ ಭಾವ ಅಭಿನಯ ಅವರ ವ್ಯಕ್ತಿತ್ವಕ್ಕೆ ತಕ್ಕಂತೆ ಯಾರು ಯಾವ ಪಾತ್ರಕ್ಕೆ ಅರ್ಹರು. ಯಾರು ಯಾವ ಪಾತ್ರಕ್ಕೆ ಜೀವತುಂಬುವಂಥ ಗುಣವುಳ್ಳವರೆಂದು ಗಮನಿಸಿ, ನಾಯಕಿಯ ಪಾತ್ರಕ್ಕೆ ಅಂಥವರನ್ನೇ ಆರಿಸಿಕೊಳ್ಳುತ್ತಾನೆಂದು ಮುಂದೆ ಹೇಳಲಾಗಿದೆ.

"ನಾಟಕ ನಾಯಕಿಯರಲ್ಲಿ ಎಂಟು ಪ್ರಕಾರ. ವಾಸಕ ಸಜ್ಜಾ, ವಿರಹೋತ್ ಕಂಠಿಕಾ, ಸ್ವಾಧೀನ ಭರ್ೃಕಾ, ಕಲಹಾಂತರಿಕಾ, ಖಂಡಿತಾ, ವಿಪ್ರಲಬ್ಧ, ಪ್ರೋಷಿತ, ಭರ್ತೃಕಾ, ಅಭಿಸಾರಿಕಾ ಇವರುಗಳ ಸ್ವಭಾವ ಲಕ್ಷಣಗಳನ್ನು ತಿಳಿಸಿರುವಂತೆ ಭರತನು ಇವರ ಸೂಕ್ಷ್ಮಾಭಿನಯದ ಕ್ರಮವನ್ನು ವಿವರಿಸಿದ್ದಾನೆ. ಇಂಥ ಅಭಿನಯ ಸ್ತ್ರೀಯರಿಂದ ಮಾತ್ರ ಸಾಧ್ಯ. ಆದ್ದರಿಂದಲೇ ಅಂದು ನಟಿಯರಿಗೆ ಈ ನಾಟಕದಲ್ಲಿ ಪ್ರಾಶಸ್ತ್ಯ ಅನಿವಾರ್ಯವಾಗಿತ್ತು (ನಾಟ್ಯಶಾಸ್ತ್ರ, ಪುಟ ೨೯೯-೩೦೦). ಮುಂದೆ ಈ ಎಲ್ಲಾ ನಟಿಯರೇ, ವರ್ಗದವರೇ ಇಂದು ರಂಗ ನಟಿಯ ರಾಗಿದ್ದಾರೆ ಎಂದು ತಿಳಿಯಬಹುದಾಗಿದೆ. ಅಲ್ಲದೆ ರಾಜನಲ್ಲಿರುವ ಸಖಿಯರು ಹಾಗೂ ಅಂತಃಪುರದ ಸ್ತ್ರೀ ಪಾತ್ರಗಳ ಸಂಖ್ಯೆಯನ್ನು ನಾಟ್ಯಶಾಸ್ತ್ರದಲ್ಲಿಯೇ ನಾವು ತಿಳಿದು ಕೊಳ್ಳಬಹುದು. "ಅಂತಃಪುರದ ಸ್ತ್ರೀ ಪಾತ್ರಗಳ ಸಂಖ್ಯೆ ಗಮನಾರ್ಹವಾದುದು ಮಹಾದೇವಿ, ದೇವಿ, ಸ್ವಾಮಿನಿ, ಸ್ಥಾಯಿಸಿ, ಭೋಗಿನಿ, ಶಿಲ್ಪಕಾರಿಣಿ, ಪರಿಚಾರಿಕೆಯರು, ಸಂಚಾರಿಕೆಯರು, ಪ್ರೇಷಣ ಚಾರಿಕೆಯರು, ಸ್ಥವಿರಾ, ಅಯುಕ್ತಿಕಾ ಇತ್ಯಾದಿ (ನಾಟ್ಯಶಾಸ್ತ್ರ, ಪುಟ ೪೯೯). ಇಷ್ಟೆಲ್ಲಾ ವೈವಿಧ್ಯಮಯವಾದ ಸ್ತ್ರೀ ಪಾತ್ರಗಳಿದ್ದಾಗ ಅವುಗಳನ್ನು ಅಭಿನಯಿಸಲು ನಟಿಯರು ಬೇಕೇ ಬೇಕಾಯಿತೆಂದು ಹೇಳಲಾಗುತ್ತಿದೆ.

ಮೂಲತಃ ನಟಿಯರಾಗಿ ರಂಗಭೂಮಿಗೆ ಬಂದಿದ್ದು ಭರತನ ನಾಟ್ಯ ಶಾಸ್ತ್ರದಲ್ಲಿಯೇ. ಇಲ್ಲಿ ಉಕ್ತವಾದ ನಟಿಯರೇ ಮುಂದೆ ರಂಗಭೂಮಿಯಲ್ಲಿ ಅಭಿನಯಿಸುತ್ತಿರುವ ನಟಿಯರೆಂದು ಹೇಳಬಹುದು. ಬ್ರಹ್ಮ ಸೃಷ್ಟಿಸಿದ

ನಂತರ ಭರತನು ತನ್ನ ನಾಟ್ಯಕ್ಕೆ ಬಳಸಿಕೊಂಡನು. ಮೊದ ಮೊದಲು ನಾಟಕವು ನೃತ್ಯವಾಗಿದ್ದು, ನೃತ್ಯ ನಾಟಕವೆಂದೇ ಹೆಸರನ್ನು ಪಡೆದು, ನಂತರದ ದಿನಗಳಲ್ಲಿ ನಾಟಕ ಹಾಗೂ ನೃತ್ಯ ಬೇರೆಯಾಗಿ, ನೃತ್ಯ ರೂಪವು ಹೋಗಿ 'ನಾಟಕ' ಸ್ವತಃ ತನ್ನ ಅಸ್ತಿತ್ವವನ್ನು ರಾಜಾಶ್ರಯದಲ್ಲಿಯೇ ಪಡೆದುಕೊಂಡು ರಂಗಭೂಮಿಯನ್ನು ರಾಜಾಶ್ರಯದಲ್ಲಿಯೇ ಪಡೆದುಕೊಂಡು ರಂಗಭೂಮಿಯ ವೈವಿಧ್ಯಗಳಲ್ಲಿ 'ನಾಟಕ' ತನ್ನದೇ ಆದ ಸ್ಥಾನ ಪಡೆವಿದೆ.

ಶೇಕ್ಸಪಿಯರ್ ಕಾಲದ ಸ್ತ್ರೀ ಪಾತ್ರಗಳು : ಪರದೇಶದ ರಂಗಭೂಮಿ ನಟಿಯರ ಪರಿಸ್ಥಿತಿ ಸಹಿತ ನಮ್ಮ ದೇಶದ ರಂಗಭೂಮಿ ನಟಿಯರಿಗಿಂತ ಭಿನ್ನವಾಗೇನಿಲ್ಲ. ಅಂದರೆ ನಮಗಿಂತ ಅವರು ಎಲ್ಲ ಕ್ಷೇತ್ರಗಳಲ್ಲಿ ನಾಲ್ಕು ಹೆಜ್ಜೆ ಮುಂದೆ ಇರಬಹುದೇ ವಿನಃ ಏನು ಮುಂದುವರಿದ ದೇಶಗಳು ಎಂದರೂ ಸಹಿತ, ಅವರಲ್ಲಿಯೂ ಕೂಡ ಪರಿಸ್ಥಿತಿಗನುಗುಣವಾಗಿ ಬದಲಾಗುತ್ತಿದ್ದಾರೆ. ಗ್ರೀಕ್ ರಂಗಭೂಮಿಯಲ್ಲಿಯೂ ಮೊದಮೊದಲು ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರು ಎಂಬುದನ್ನು ನಾವು ಇಲ್ಲಿ ಗಮನಿಸಬಹುದು.

ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದು ಅವರಲ್ಲಿ ಬಹಳ ಹೆಸರುವಾಸಿಯಾಗಿ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಸ್ತ್ರೀ ಪ್ರವೇಶವಾಯಿತೆಂದು ಹಲವಾರು ನಿದರ್ಶನಗಳೇ ನಮ್ಮ ಮುಂದಿವೆ. "ಗ್ರೀಕ್ ನಾಟಕಗಳಲ್ಲಿ ಪುರುಷರೇ ಸ್ತ್ರೀ ಪಾತ್ರ ಮಾಡುತ್ತಿದ್ದು, ರಾಣಿ ಪಾತ್ರ ಮಾಡುವ ನಟನು ಬೆಲೆಯುಳ್ಳ ಉಡುಪು ಧರಿಸಿದ ಸಖಿಯರನ್ನು ತನಗೆ ಒದಗಿಸಬೇಕೆಂದು ಹಠ ಹಿಡಿದ ಕತೆಯೊಂದಿದೆ (ಗ್ರೀಕ್ ರಂಗಭೂಮಿ ಮತ್ತು ನಾಟಕ, ಲೇ: ಎಲ್.ಎಸ್.ಶೇಷಗಿರಿರಾವ್, ಕರ್ನಾಟಕ ನಾಟಕ ಆಕಾಡೆಮಿ, ಬೆಂಗಳೂರು, ೧೯೮೬).

ವಿಶ್ವದ ನಾಟಕ ಕ್ಷೇತ್ರದಲ್ಲಿಯೇ ಅತ್ಯಂತ ಶ್ರೇಷ್ಠರೆಂದೇ ಗುರುತಿಸಿಕೊಂಡಿರುವ ಹೆಸರಾಂತ ಲೇಖಕ, **ನಾಟಕಕಾರ ಶೇಕ್ಸ್‌ಪಿಯರ್ ಕಾಲದಲ್ಲಿಯೂ ಕೂಡ** ಸ್ತ್ರೀ ಪಾತ್ರಗಳನ್ನು ಅಭಿನಯಿಸಲು ಹೆಣ್ಣು ಮಕ್ಕಳು ಇನ್ನು ಮುಂದೆ ಬಂದಿರಲಿಲ್ಲ ಆದ್ದರಿಂದ ಅಲ್ಲಿನ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರು. "ಆ ಕಾಲದಲ್ಲಿ ನಾಟಕವು ಕುಲವಂತರು, ಮರ್ಯಾದಸ್ತರು ಮಾಡುವ ಉದ್ಯೋಗವೆಂದು ಇನ್ನೂ ಮನ್ನಣೆ ಪಡೆದಿರಲಿಲ್ಲ. ಹದಿನೆಂಟನೆಯ ಶತಮಾನದಲ್ಲಿ ಶ್ರೀಮತಿ ಸೇರ ಸೀಡನ್ಸ್‌ರಂಥ ಪ್ರತಿಭಾವಂತ ನಟಿಯರು ಪ್ರಸಿದ್ಧಿಗೆ ಬಂದು ಆಭಿನಯಕ್ಕೊಂದು ಗೌರವ ತಂದು ಕೊಡುವವರೆಗೆ ಗಂಡಸರೇ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಶೇಕ್ಸ್‌ಪಿಯರ್‌ನ ಕಾಲಕ್ಕೆ ಇನ್ನು ದನಿ ಒಡೆಯದ, ಮೀಸೆ ಮೂಡದ ಎಳೆಯ ಹುಡುಗರೇ ಈ ಕೆಲಸಕ್ಕೆ ಮೀಸಲಾಗಿದ್ದರು (ನಾಟಕ ಸಾಹಿತ್ಯ ಮತ್ತು ರಂಗಭೂಮಿ, ಲೇ: ಗಿರಡ್ಡಿ ಗೋವಿಂದರಾಜು ಅಕ್ಷರ ಪ್ರಕಾಶನ ಸಾಗರ ೧೯೮೯, ಪುಟ, ೧೨೦). ಗ್ರೀಕ್ ನ ಗಂಭೀರ ನಾಟಕಗಳಲ್ಲಿಯೂ ಕೂಡ ನಾಟಕದ ಪಾತ್ರಧಾರಿಗಳು ಪುರುಷರೇ ಇದ್ದರು, ಥೇಸ್ಪಿಸ್ ಗ್ರೀಕ್ ಗಂಭೀರ ನಾಟಕ ಪರಂಪರೆಗೆ ಭದ್ರ ಬುನಾದಿ ಹಾಕಿದವನು (ಕ್ರಿ.ಪೂ. ೫೬೦). ಅವನ ಪ್ರಯೋಗಗಳಲ್ಲಿ ಪುರುಷರೇ ಇದ್ದರು. ಈ ಥೆಸ್ಪಿಸ್‌ನೇ ಸ್ತ್ರೀ ಪಾತ್ರಗಳಿಗೆ ಮುಖವಾಡಗಳನ್ನು

ರೂಢಿಗೆ ತಂದನು. ಗ್ರೀಕ್ ನಾಟಕಗಳಲ್ಲಿ ನೃತ್ಯ ಮೇಳಗಳಲ್ಲಿ ಪುರುಷರಿಂದ ಕೂಡಿತ್ತು. ನಟರು ಪುರುಷರಾಗಿದ್ದರು (ಪಾಶ್ಚಾತ್ಯ ಗಂಭೀರ ನಾಟಕಗಳು ಲೇ: ಎಸ್.ವಿ.ರಂಗಣ್ಣ ಮೈಸೂರು ವಿ.ವಿ., ೧೯೭೦).

ನಾಟಕ ಕೀಳು : ಉಜ್ವಲ ಪರಂಪರೆಯಾಗಿ ಬೆಳೆದು ಬಂದಿರುವ ಗ್ರೀಕ್ ರಂಗಭೂಮಿಯೂ ಮೊದ ಮೊದಲು ನಟಿಯರಿಲ್ಲದೆ ತನ್ನ ಮೆರಗನ್ನು ಪಡೆಯಲು ಪ್ರಯತ್ನಿಸುತ್ತಿತ್ತು. ಸಮಾನತೆಯನ್ನು ಕೊಟ್ಟಿದ್ದೇವೆ ಎಂದು ಹೇಳುವ ಕ್ರಿಶ್ಚಿಯನ್ ಧರ್ಮದವರೂ ಕೂಡ 'ನಾಟಕ ಕೀಳು' ಅದನ್ನು ನೋಡಲು, ಕೇಳಲು ಹೆಣ್ಣು ಮಕ್ಕಳು ಹೋಗುವಂತಿಲ್ಲ. ಅಲ್ಲಿ ಕೆಟ್ಟ ಪುರುಷರ ಸಮೂಹವೇ ಇರುತ್ತದೆ. ಅಲ್ಲಿ ಯಾವ ಸ್ತ್ರೀಯ ಪ್ರವೇಶವಿರ ಕೂಡದು. ಇಡೀ ಸಮೂಹದಲ್ಲಿ ಪ್ರೇಕ್ಷಕರಾಗಿ ರಾಜಾಶ್ರಯದಲ್ಲಿಯೂ ಕುಳಿತುಕೊಳ್ಳುವಂತಿಲ್ಲ. ಒಂದು ವೇಳೆ ರಾಣಿಯರು ನಾಟಕವನ್ನು ನೋಡುವಂತಿದ್ದರೆ. ಅವರಿಗೆ ಪರದೆಯನ್ನು ಹಾಕಿ ಬೇರೆಡೆಗೆ ಕುಳಿತು ಕೊಂಡು ನೋಡಲು ರಾಜನು ವ್ಯವಸ್ಥೆ ಮಡುತ್ತಿದ್ದನು. ಹೀಗಿದ್ದ ಮೇಲೆ ಇನ್ನೂ ಸಾಮಾನ್ಯ ವರ್ಗದ ಸ್ತ್ರೀಯರ ಪಾಡು ಲೆಕ್ಕಕ್ಕೆ ಇಲ್ಲ. ರೋಮ್ ನಗರದಲ್ಲಿಯೂ ಮೊದಲು 'ನಾಟಕ'ವೆಂದರೆ ಕೀಳು. ಅದನ್ನು ಸ್ತ್ರೀಯರು ನೋಡಲು ನಿಷಿದ್ಧ ಎಂದೇ ಇತ್ತು. ಅದಕ್ಕೆ ಉದಾಹರಣೆಯಾಗಿ ಇಲ್ಲಿ ನೋಡೋಣ "ರೋಮ್‌ನಲ್ಲಿಯೂ ನಾಟಕ ಕೀಳು ಎಂಬ ಮನೋಭಾವನೆ ಇತ್ತು. ಇದಕ್ಕೆ ಜ್ವಲಂತ ನಿರ್ದೇಶನವೆಂದರೆ ತನ್ನ ಹೆಂಡತಿ ನಾಟಕ ಶಾಲೆಗೆ ಹೋಗಿ ಬಂದದ್ದಕ್ಕೆ ಆತ ಆಕೆಯನ್ನು ಬಹಿಷ್ಕರಿಸಿದ" (ಪಾಶ್ಚಾತ್ಯ ಗಂಭೀರ ನಾಟಕಗಳು, ಲೇ: ಎಸ್.ವಿ.ರಂಗಣ್ಣ ಕ್ರಿ.ಶ.೨೦೦, ರೋಮನ್‌ದ ಕ್ರಿಶ್ಚಿಯನ್ನರಿಗೆ ಪುಟ, ೧೭೧).

ವಾಸ್ತವವಾಗಿ ಯಾವ ಧರ್ಮಗಳು ಸ್ತ್ರೀಯರನ್ನು ಮುಂದೆ ಬಿಟ್ಟಿಲ್ಲ. ಒಂದು ವೇಳೆ ಕ್ರಮೇಣ ಮುಂದೆ ಬಿಟ್ಟಿದ್ದರೂ ಕೂಡ ಹಲವಾರು ಹಿಡಿತಗಳಿಂದ ಸ್ತ್ರೀಯರಿಗೆ ಸಮಾನತೆಯ ಹೆಸರಿನಲ್ಲಿ ಅವಕಾಶಗಳನ್ನು ಕೊಟ್ಟಿದ್ದಾರೆ. ಪರದೇಶದ ಅನಿಭಾವಿಗಳಾಗಲಿ, ನಮ್ಮ ದೇಶದ ಮೈತ್ರೇಯಿ ಗಾರ್ಗಿಯರಿಗಾಗಲೀ ಅಕ್ಕ ಮಹಾದೇವಿಯಂಥ ಧೀಮಂತ ವ್ಯಕ್ತಿತ್ವದ ಸ್ತ್ರೀಯರಿಗೆ ಸಮಾನತೆ ದೊರೆತಿರುವುದು ಅವರವರ ವ್ಯಕ್ತಿತ್ವದ ಯೋಗ್ಯತೆಯ ಅನುಗುಣವಾಗಿ. ಆದರೆ ಪಾಶ್ಚಾತ್ಯದಲ್ಲಿಯೂ ಕೂಡ ನಮ್ಮ ವ್ಯವಸ್ಥೆಗಿಂತ ಅಲ್ಲಿ ಭಿನ್ನವೇನಿಲ್ಲ. ಒಬ್ಬ ಸಾಮಾನ್ಯ ಮಹಿಳೆಯು ನಾಟಕ ಶಾಲೆಗೆ ಹೋಗಿ ಬಂದಿದ್ದಾಳೆ ಎಂದಾಕ್ಷಣ ಆಕೆಯನ್ನು ತಿರಸ್ಕರಿಸಿ ಹೊರದೂಡಿದ್ದು ಅಮಾನವೀಯತೆಯೇ ಸರಿ. ಈ ತಿಳುವಳಿಕೆಯೂ ಇತ್ತೀಚೆಗೆ ಬಂದಿದೆ. ಆದರೆ ವಾಸ್ತವದಲ್ಲಿ ನಮಗೆ ಸಿಗುವ ಈ ವ್ಯವಸ್ಥೆ ಹಾಗೂ ಪೈಶಾಚಿಕಗುಣ ಹೊಂದಿರುವ ಪುರುಷರ ಮಧ್ಯೆ ಒಬ್ಬ ಸ್ತ್ರೀಯು ಜೀವಿಸುವುದೇ ದುಸ್ತರವಾಗಿರುವಾಗ ಇನ್ನು ನಾಟಕ ಶಾಲೆಗೆ ಹೋಗುವುದು, ನಾಟಕ ನೋಡುವುದು, ನಾಟಕದಲ್ಲಿ ಬೇರೆ ಪುರುಷರೊಂದಿಗೆ ಪಾತ್ರವನ್ನು ಮಾಡುವುದು ಇವೆಲ್ಲವೂ ಕೂಡ ಮಾನವ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ನಿಷಿದ್ಧವೇ ಸರಿ. ಆದರೂ ಮಾನವ ನಾಗರೀಕತೆ ಪಡೆದಂತೆಲ್ಲಾ ಬುದ್ಧಿ ಬೆಳೆದಂತೆಲ್ಲಾ ಸರಕಾರ ಕಾನೂನಿನ ಮೂಲಕ ಸಮಾನತೆಯನ್ನು ತರಲು ಪ್ರಯತ್ನಿಸಿದರೂ ಕೂಡ ಅದಿನ್ನೂ ಮಹಿಳೆಯರಿಗೆ ನಿಲುಕದ ವ್ಯವಸ್ಥೆ ಎಂದೇ ಹೇಳಬಹುದು.

ಇನ್ನೊಂದು ರೀತಿಯಲ್ಲಿ ಯೋಚಿಸುವುದಾದರೆ, ನಾಟಕ ಮೊದಲು ರಾಜಾಶ್ರಯದಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತಿತ್ತು. ಸೀಮಿತ ವರ್ಗದವರು ಅಧಿಕಾರಿಗಳು, ಕೆಲಸಗಾರರು ಮಾತ್ರ ಅಲ್ಲಿ ನಾಟಕವನ್ನು ನೋಡುತ್ತಿದ್ದರು. ತದನಂತರ ಕ್ರಮೇಣವಾಗಿ ರಂಭೂಮಿಯನ್ನು ಆಕ್ರಮಿಸಿಕೊಂಡಿತು. ಸಾಮಾನ್ಯವಾಗಿ ಜನವರ್ಗದರು ಅಲ್ಲಿ ಹೋಗಲು, ನೋಡಲೂ ಆಗುತ್ತಿರಲಿಲ್ಲ. ಹೆಚ್ಚಾಗಿ ರಾಜ ವ್ಯವಸ್ಥೆಯಲ್ಲಿ ಪುರುಷರೇ ನೋಡುತ್ತಿದ್ದರಿಂದ ಗ್ರೀಕ್ ರಂಗಭೂಮಿ ಗ್ರೀಕ್ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಕೂಡ ಮೊದಲು ನಾಟಕವನ್ನು ಕೀಳು ಹಾಗೂ ನಾಟಕ ನೋಡುವುದು ನಿಷಿದ್ಧ ಎಂಬ ಭಾವನೆಯು ಬೆಳೆದುಕೊಂಡು ಬಂದಿರಬೇಕು. ಈ ದೃಷ್ಟಿಯಿಂದ ಅಲ್ಲಿ ಸ್ತ್ರೀಯರನ್ನು ಪಾತ್ರಕ್ಕೆ ತೆಗೆದುಕೊಳ್ಳದೇ ಸುಂದರ ಪುರುಷರನ್ನೇ ಸ್ತ್ರೀ ಪಾತ್ರವನ್ನು ನಿರ್ವಹಿಸುತ್ತಿದ್ದನೆಂದು ಹೇಳಬಹುದು. ನಂತರದ ದಿನಗಳಲ್ಲಿಯೇ ಅದು ಬದಲಾವಣೆ ಗೊಂಡಿರಬೇಕೆಂದು ಹೇಳಲಾಗುತ್ತದೆ." Actors are in a unifue position they are both Introspective and exhibitionist you havi to be an Intronert befor you can find within yourself the symbols of extroversion that are required to put the performance actros it is a paradox." (ಎಂ.ಎಸ್.ನಾಗರಾಜ, ನಾಂದಿ, ಜಯ ಪ್ರಕಾಶನ, ಬೆಂಗಳೂರು)

ಮೊದಲು ನಟಿಯರನ್ನು ನರ್ತಕಿಯರನ್ನಾಗಿ ಪ್ರದರ್ಶನಕ್ಕೆ ರಾಜಾಶ್ರಾಯದಲ್ಲಿ ಇದ್ದು ಅದು ನಂತರದ ದಿನ ಮಾನದಲ್ಲಿ ನಾಟಕಕ್ಕೆ, ಅಭಿನಯಕ್ಕೆ ತೆಗೆದುಕೊಳ್ಳಲಾಗಿದೆ. ಈ ವಿಧ್ಯಾಭ್ಯಾಸದ ನಡುವೆಯೂ ಕೂಡ ಸ್ತ್ರೀಯರು ರಂಗಭೂಮಿಯಲ್ಲಿ ಹೆಜ್ಜೆ ಹಾಕಿದ್ದಾರೆ. ಮೊದ ಮೊದಲು ಗುರುತಿಗಾಗಿ ಪುರುಷರು ಜೊತೆಗೆ ನಿಲ್ಲಲು ಪ್ರದರ್ಶನಕ್ಕೆ ಬಂದ ನಟಿಯರು ಮುಂದೆ ನರ್ತನ ನಂತರ ಪಾತ್ರವನ್ನು ವಹಿಸಿ ನಟಿಯರೆನಿಸಿ ಕೊಂಡಿದ್ದಾರೆ. The Directo-prodcer surya dutta of the Natta company a shriveled old man of eighty four has spent sixty six years in the Jatra diseassing the easthetics if acting he said it is art if a woman play a woman. when we represent a lame of cros-eyed man. we do not import a cripple or a cros-eyed man into the stage. Theatrical enjoyment lies in the fact that an abl- bodied man is limping and squimiting the natural thing is not the natural thing on the stage. When a man ects as a woman it is art.Hari gopal Dos, Thirt-two is the best emotional " actrels" in the role of Dedi, wife of the cobbler saint Ruidas in prtitier Bhagawan, He plays a victmixed woman with voluptu-ous charm, He has twentey years of experience behind has feminine grace and wifely pathos. After watching the show I went in to the dreshing room where the actors were removing their beards and thick mak-up Har-Gopal das was Introduced to me

He still looked the but when I wanted to his hand and I looked the betwitcfhing wife. He hell out his hand and I shook it but when I wanted to embrave him in appreciation of his art I become embarrassed becourse he looked so stumningly feminine. Most actors add the suffex Rani (graceful lady) to theit name to distingish them selves as female artists wubal Mahanta a framer o mindnapur who was a star "actrelg" twenty years ago know by his feminine name subal Rani shyamaapade chakravarty styles himself chhabe Rani and sunil Roy, who plays an amorous princess or a coquesltish wife is famous as satadal Rani These actors do not grow ther hair long or walk down the street with an affected gait. Most of them are married. and lead a completelu noomal familu lige when one sees them off the stage it is diffifult to believe in thetr Transformation (A.Balwant Gargi : Folk Theater in India, published by Rupa & co. 1991, Jatra. Page.23).

ನಾವು ಏನೇ ಸುಂದರವಿದ್ದರೂ ಸ್ತ್ರೀ ಪಾತ್ರಕ್ಕೆ ಒಪ್ಪುವಂಥ ವ್ಯಕ್ತಿತ್ವವುಳ್ಳ ಪುರುಷನಿದ್ದರೂ ಸಹಿತ ಕೆಲವು ಗುಣಗಳು ಸ್ತ್ರೀಯರಿಗಾಗಲೀ ಪುರುಷರಿಗಾಗಲೀ ದೈವದತ್ತವಾಗಿಯೇ ಬಂದಿರುತ್ತವೆ. ಪುರುಷ ಸ್ತ್ರೀ ಪಾತ್ರವನ್ನು ಮಾಡಿದರೆ ಅದು ಕಲೆ ಎನಿಸಿಕೊಳ್ಳುವುದಿಲ್ಲ. ಸ್ತ್ರೀ ಪಾತ್ರವನ್ನು ಸ್ತ್ರೀಯರೇ ಮಾಡಿದರೆ ಮಾತ್ರ ಅದು ಕಲೆ ಎನಿಸಿಕೊಳ್ಳುತ್ತದೆ ಎಂಬುದು ಗಾರ್ಗಿಯವರ ಅಭಿಪ್ರಾಯವಾಗಿದೆ. ಆಯಾ ಪಾತ್ರಕ್ಕೆ ಅದರದೇ ಆದ ಗುಣ, ಗತ್ತು, ನಯ, ವಿನಯ, ತಾಳ್ಮೆ, ಗಂಭೀರ, ವಾಕ್‌ಚಾತುರ್ಯ, ಕ್ರೌರ್ಯ ಹೀಗೆ ಹತ್ತು ಹಲವಾರು ವಿಧದಲ್ಲಿ ಪಾತ್ರವು ಜೀವಂತಿಕೆಯನ್ನು ಪಡೆದಿರುತ್ತದೆ. ನಡೆಯುವಾಗ ಹೆಣ್ಣು ಪಾತ್ರಧಾರಿಯು ಹಂಸ ನಡಿಗೆಯನ್ನು ನಡೆಯಬೇಕಾಗುತ್ತದೆ. ಪುರುಷ ಪಾತ್ರಧಾರಿಯು ಹುಟ್ಟು ಗುಣಕ್ಕೆ ತಕ್ಕಂತೆ ನಡೆಯುತ್ತಿರುತ್ತಾನೆ. ಸ್ತ್ರೀಯ ಗುಣಗಳನ್ನು ಅನುಸರಿಸದರೂ ಕೂಡ ಅಲ್ಲಿ ನೈಜತೆ, ನಯಗಾರಿಕೆ ಕಲ್ಪನೆಗೆ ತಕ್ಕಂತೆ ಪಾತ್ರ ಹೊಂದಿಕೊಳ್ಳು ವುದಿಲ್ಲ. ಸೂಕ್ತವೆನಿಸಿಕೊಂಡ ಪಾತ್ರವು ಸೂಕ್ತರೀತಿಯಲ್ಲಿ ಅದು ತನ್ನದೇ ಆದ ರೂಪವನ್ನು ಪಡೆದುಕೊಂಡು, ಪಾತ್ರದಲ್ಲಿ ಭಾವತನ್ಮಯತೆ, ತಾದ್ಯಾತ್ಮತೆಯನ್ನು ಪಡೆದು ಕೊಳ್ಳಲು ಸಾಧ್ಯವಾಗುತ್ತದೆ. ಅದು ಪುರುಷರಲ್ಲಿ ಅಷ್ಟು ಸರಾಗವಾಗಿ ಬರಲು ಸಾಧ್ಯವಾಗುವುದಿಲ್ಲ. ರಾಜಗಾಂಭೀರ್ಯ ಪಡೆದಂತವರಿಗೆ ಸೇವಕ ಪಾತ್ರವನ್ನು ನೀಡಲು ಸಾಧ್ಯವಾಗುವುದಿಲ್ಲ. ರಾಣಿಯು ರಾಣಿಯೇ ಆಗಿರಬೇಕು. ಸಖೀ ಪಾತ್ರ ಸಖಿಯೇ ಮಾಡಬೇಕು. ಕ್ರಿಯಾಶೀಲ ವ್ಯಕ್ತಿಗಳು ಮಾತ್ರ ಪಾತ್ರಕ್ಕೆ ಜೀವಂತಿಕೆ ತುಂಬಿ ಪ್ರೌಢವಾದ ಅಭಿನಯವನ್ನು ನೀಡುತ್ತಾರೆ. ಆದ್ದರಿಂದ ನಟಿಯರು ನಮ್ಮಲ್ಲಿ ನಟುವರು ಜನಾಂಗದಿಂದ ಬಂದು ಕ್ರಮೇಣ ಆ ಜನಾಂಗದ ಮಹಿಳೆಯರೇ ಇಂದಿನ ರಂಗಭೂಮಿಯಲ್ಲಿ ಕಂಡುಬರುತ್ತಾರೆ. ಎಂದು ಹೇಳಬಹುದಾಗಿದೆ.

ಜನಾಂಗದ ಹೆಸರಿನ ಅರ್ಥ, ಪುರಾಣ, ಪ್ರಾಚೀನತೆ, ಮತ್ತು ಸಾಹಿತ್ಯದಲ್ಲಿ ನಾಟಕದ ಪ್ರಸ್ತಾಪ : "ನಟುವರನ್ನು ಕುರಿತಂತೆ ಅನೇಕ ಪ್ರಸ್ತಾಪಗಳು ಮತ್ತೆ ಕೆಲವು ಕಡೆ ಪರೋಕ್ಷವಾಗಿ ಮಾಹಿತಿಗಳು ದೊರೆಯುತ್ತವೆ. ಹಳೆಗನ್ನಡ ಸಾಹಿತ್ಯ ಮತ್ತು ಶಾಸನ ಸಾಹಿತ್ಯ ನಮಗೆ ಮುಖ್ಯವಾಗಿ ನೆರವಿಗೆ ಬರುತ್ತದೆ. ಅನೇಕ ಕಡೆ ನಟುವರ ವಾದ್ಯಗಳಿಗೆ ಸಂಬಂಧಿಸಿದಂತೆ ಮತ್ತೊಂದು ಕಡೆ ನಾಟ್ಯಕ್ಕೆ ಸಂಬಂಧಿಸಿದಂತೆ ಹೀಗೆ ಸಾಹಿತ್ಯ ಕೃತಿಗಳು 'ನಟುವರ' ನ್ನು ಒಳಗೊಂಡಿವೆ.

ನಟುವರನ್ನು ಕುರಿತಂತೆ ಎಂ.ಎ.ಶೇರ್ರಿಂಗ್ ಥರ್ಸಟನ್‌ರವರ ಮಾತುಗಳನ್ನು ಕೆಳಕಂಡಂತೆ ಉಲ್ಲೇಖಿಸುತ್ತಾರೆ. "Natva's are Danver's these Natvas are probably the same as the Nat's of Nothern India mr' Rive say's that they can Scarcely be called a distinct caste lead an imnodest lige Tose attacted to temples are Know as Devadasis and "Basavis" The cast has the following su-division.೧). Ka-Kala೨) Basavi೩) Knada Golaka೪) Nay : kasani೫) Natvanga೬) Devadasi (b) ೬

ನಟುವ ಎಂದರೆ ನಾಟ್ಯ ಮಾಡುವವನು ಎಂದು ಅರ್ಥ. 'ನಟಿಯರು' ಎಂದರೆ ನಾಟ್ಯ ಮಾಡುವವರು ಯಾರೋ ಅವರೆಲ್ಲರನ್ನು ಒಳಗೊಳ್ಳವಂಥದ್ದು. ಅರ್ಥಕೋಶದಲ್ಲಿ ನಟ ಮತ್ತು 'ನಟಿ' ಪದಗಳಿಗೆ ವ್ಯಾಪಕ ಅರ್ಥಗಳನ್ನು ಗುರುತಿಸಲಾಗಿದೆ. ನಟ ಎಂದರೆ ನಟಿಸುವವನು, ಸೋಗು ಹಾಕುವವನು, ಅಭಿನಯಕಾರ, ಠಕ್ಕೊಗಾರ, ಕ್ಷತ್ರಿಯನಿಗೆ ಕೀಳು ಜಾತಿಯವಳಲ್ಲಿ ಹುಟ್ಟಿದವನು ಇತ್ಯಾದಿ. 'ನಟಿ' ಎಂದರೆ ನಟಿಸುವಾಕೆ, ಕುಣಿಯುವಾಕೆ, ವೇಶ್ಯೆ, ಸೂಳೆ, ಪಾತ್ರದವಳು, ನಾಟಕದಲ್ಲಿ ಸೂತ್ರಧಾರನ ಹೆಂಡತಿ ಇತ್ಯಾದಿ. ಮೇಲೆ ಹೇಳಿರುವ ಎಲ್ಲಾ ಅರ್ಥಗಳನ್ನು ನಟುವರಿಗೆ ಅನ್ವಯಿಸಿಕೊಂಡು ಸಮಕಾಲೀನ ಸಂದರ್ಭದಲ್ಲಿ ಆಭ್ಯಾಸಿಸಲಾಗುತ್ತದೆ (A:M.A.Sherring : Native Race's of India : Hindu Tribes and castes. Valuma III publication casmo Delhi;). ಈ ರೀತಿಯಾಗಿ ಕ್ರಮೇಣ ಇಲ್ಲಿ ನಟುವರು ಜನಾಂಗದವರೇ ಕಲೆಗಾಗಿಯೇ ಸೀಮಿತ ವರ್ಗವಾಯಿತು. ಅಲ್ಲಿ ನಾಯಕಿ, ನರ್ತಕಿ, ನಾಯಕಿಸಾನಿ, ಗಾಯಕಿ, ಕುಣಿಯುವಾಕೆ, ನಟಿಸುವಾಕಿ, ವೇಶ್ಯೆ, ಸೂಳೆ, ಅಂತಃಪುರದವಾಸಿ, ಸಖಿ ಹೀಗೆ ಹಲವಾರು ರೀತಿಯಲ್ಲಿ ಈ ಜನಾಂಗಗಳು ಕವಲೊಡೆದವು. ನಿಧಾನವಾಗಿ ಈ ಜನಾಂಗದಲ್ಲಿ ಪಲ್ಲಟಗೊಂಡು ಹಲವಾರು ರೀತಿಯಲ್ಲಿ ಮನ್ವಂತರವಾಗಿ ಉಪವರ್ಗಗಳು ಇಲ್ಲಿ ತಲೆ ಎತ್ತಿದವು. ಉಪವರ್ಗಗಳೇ ಪಾತರದವರು, ಸೂಳೆಯರು, ಸೇವಕಿಯರು ಆಗಿ ಅಂತಃಪುರದಲ್ಲಿ ನರ್ತಕಿಯರು ಹಾಗೂ ರಾಜ ನರ್ತಕಿಯರಾಗಿ ಬೆಳವಣಿಗೆಗೆ ಬಂದರು.

ಸಮಾಜದ ಕಟ್ಟುಪಾಡುಗಳು ಏನೇ ಇದ್ದರೂ ಈ ನಟುವರು ವರ್ಗದ ಉಪವರ್ಗಗಳೆಲ್ಲವೂ ಪುರುಷರೊಂದಿಗೆ ಸರಾಗವಾಗಿ ಬೆರೆಯುವಂಥವರಾದರು. ಇವರಿಗೆ ಇಲ್ಲಿ ಮುಕ್ತತೆಯು ದೊರೆತಂತಾಯಿತು. ಇವರೇ

ದಾಸರು, ವೇಷಗಾರರು, ಹಗಲು ವೇಷಗಾರರು, ಬಸವಿಯರು ಈ ಎಲ್ಲ ಹೆಸರಿನಿಂದ ಬೆಳಕಿಗೆ ಬಂದರು. ಹುಟ್ಟು ಅದೇ ಆದ್ದರಿಂದ ಅವೆಲ್ಲವು ಕೀಳು ಎಂಬ ಭಾವನೆ ಬರಲಿಲ್ಲ. ಅದೊಂದು ಜನಾಂಗ ಹಾಗೂ ಜಾತಿ ಎಂದು ಸಮಾಜದಲ್ಲಿ ಮನ್ನಿಸಲ್ಪಟ್ಟು ಬಂದು ವರ್ಗವಾಗಿ ಇಲ್ಲಿ ಪರಿಣಮಿಸಿತು. ಕೀಳು ಎಂಬ ಭಾವನೆಯು ಹೋಗಿ, ಸಮಾಜದಲ್ಲಿ ಈ ವರ್ಗ-ಉಪವರ್ಗಗಳು ತಮ್ಮ ಅನನ್ಯತೆಯನ್ನು ಕಾಪಾಡಿ ಕೊಳ್ಳಲು ಹೆಣಗಿದವು. ನಂತರ ಈ ಎಲ್ಲ ಜನಾಂಗದವರಲ್ಲಿ ಸಾಮಾಜಿಕ ಸ್ಥಿತ್ಯಂತರಗಳಿಗೆ ಸಿಲುಕಿ ಗಂಡು ಸಂತಾನಗಳು ಕಡಿಮೆ ಯಾಗಿಯೂ ಇನ್ನೊಂದು ಅರ್ಥದಲ್ಲಿ ಪುರುಷ ಪ್ರಧಾನತೆಯೂ ತೊಡೆದು ಹೋಗಿ 'ಅಳಿಯಕಟ್ಟು' ಅಥವಾ ಮಾತೃ ಪ್ರಧಾನ ಸಮುದಾಯ ಅಥವಾ ಮಾತೃ ಪ್ರಧಾನ ಕುಟುಂಬಗಳು ಉಂಟಾದವು. ಮುಂದೆ ಹೆಣ್ಣನ್ನು ಮನೆತನಕ್ಕೆ ಮೀಸಲಿಡುವ ಪದ್ಧತಿ ಬಂದಿತು. ಜೊತೆಗೆ ದೇವಸ್ಥಾನಗಳಿಗೆ ಮೀಸಲಿಟ್ಟ ಹೆಂಗಸರನ್ನು ನೃತ್ಯಗಾತಿಯಾಗಿ, ಪಾತ್ರಧಾರಿಯಾಗಿ, ಗಾಯಕಿಯಾಗಿ ಹೀಗೆ ಹಲವಾರು ವಿಧದಲ್ಲಿ ನೋಡಿಕೊಳ್ಳುವ ಕ್ರಮ ಬಂತು.

ಹೀಗೆ ಬೆಳೆದು ಬಂದ ಸಮುದಾಯದವರೇ ಹೆಚ್ಚಾಗಿ ರಂಗನಟಿಯರಾಗಿ ಇಂದು ರಂಗಭೂಮಿಯಲ್ಲಿ ತಮ್ಮ ಅಸ್ತಿತ್ವವನ್ನು ಪಡೆದು ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಮಾತೃ ಪ್ರಧಾನ್ಯತೆ ಕುಟುಂಬದಲ್ಲಿ ಕೆಲವರು ಆಸಕ್ತಿಯಿಂದ ರಂಗನಟಿಯರಾಗಿದ್ದರೆ, ಕೆಲವರು ಮನೆಯ ಆರ್ಥಿಕ ನಿರ್ವಹಣೆಗೆ ಇದನ್ನು ವೃತ್ತಿಯನ್ನಾಗಿಸಿ ಕೊಂಡು 'ರಂಗನಟಿ' ಎಂದು ಸಮಾಜದಲ್ಲಿ ಅನನ್ಯತೆಯನ್ನು ಪಡೆದುಕೊಂಡಿದ್ದಾಳೆ.

ನಾಟಕವೊಂದು ವೃತ್ತಿಯಾದಾಗ ಮತ್ತು ಅರೆರಂಗಭೂಮಿ ಪ್ರಕಾರಗಳಲ್ಲಿ ನಾವು ಸ್ತ್ರೀ ಪಾತ್ರಗಳನ್ನು ಕಾಣುತ್ತೇವೆ. ಆದರೆ ಗ್ರಾಮ ಸಮುದಾಯಗಳಲ್ಲಿ ಹಬ್ಬ-ಉತ್ಸವ-ಜಾತ್ರೆಗಳಲ್ಲಿ ಆಡುವ ಆಟಗಳಲ್ಲಿ ಸಾಮಾನ್ಯವಾಗಿ ಆ ಸಮುದಾಯದ ಸ್ತ್ರೀಯರಿಗೆ ರಂಗಭೂಮಿಯಲ್ಲಿರುವುದು ಸಾಧ್ಯವಿಲ್ಲ. ಇದಕ್ಕೆ ಮುಖ್ಯವಾದ ಕಾರಣ ಅಂದಿನ ಸಾಮಾಜಿಕ ಸ್ಥಿತಿಗತಿಗಳಲ್ಲಿ ಪುರುಷ ಪ್ರಧಾನ ಕುಟುಂಬ ಪದ್ಧತಿ ಇತ್ಯಾದಿಗಳು ಕಾರಣವಾಗಿರ ಬಹುದು ಮತ್ತು ನಟಿಯರನ್ನೇ ಕಸುಬಾಗಿ ಮಾಡಿಕೊಂಡ 'ನಟುವರ್' ಜನಾಂಗವನ್ನು ಅಂದಿನ ಸಮಾಜ ಕೀಳಾಗಿ ಕಾಣುತ್ತಿತ್ತು. ರಾಮಾಯಣ, ಮಹಾಭಾರತ ಕಾಲದಿಂದಲೂ ನಟುವರರಿಗೆ ಸಮಾಜದಲ್ಲಿ ಉನ್ನತವಾದ ಸ್ಥಾನವಿರಲಿಲ್ಲ. 'ನಟಿ'ಯನ್ನು ಈಗಲೂ ವೇಶ್ಯೆ, ಸೂಳೆ, ಇತ್ಯಾದಿಯಾಗಿ ಭಾವಿಸುವುದನ್ನು ಗ್ರಾಮಸಮುದಾಯ ದಲ್ಲಿ ಕಾಣುತ್ತೇವೆ. ಈ ದೃಷ್ಟಿಯಿಂದ ನೋಡಿದರೆ ಉತ್ತರ ಕರ್ನಾಟಕ ರಂಗಭೂಮಿಯಲ್ಲಿ ಸಣ್ಣಾಟ ಪ್ರಕಾರ ಗಳೂ ಅದರಲ್ಲೂ ಮುಖ್ಯವಾಗಿ ಶ್ರೀ ಕೃಷ್ಣಪಾರಿಜಾತ ಮತ್ತು ದಾಸರಾಟ, ಸಂಗ್ಯಾ-ಬಾಳ್ಯಾ ಮುಂತಾದ ನಾಟಕಗಳು ಸ್ತ್ರೀ ಪಾತ್ರದ ಕೊರತೆಯನ್ನು ಮತ್ತೆ ಪುನಃ ಚೇತನಗೊಳಿಸಿದವು. ಶ್ರೀಕೃಷ್ಣ ಪಾರಿಜಾತ ಖ್ಯಾತಿಯ ಕೌಜಲಗಿ ನಿಂಗಮ್ಮ, ಚಂದ್ರವ್ವ, ಆಲತಗಿಯ ಸೀತವ್ವ ಈ ಪ್ರಕಾರದ ಪ್ರಮುಖ ನಟಿಯರು.

ನಂತರ ಕರ್ನಾಟಕದಲ್ಲಿ ಕಾಣಿಸಿಕೊಂಡ ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿಯಲ್ಲಿ ಸ್ತ್ರೀ ಪಾತ್ರಗಳು ಈ ಕಟ್ಟು, ಪಾಡುಗಳನ್ನೆಲ್ಲಾ ಮೀರಿ ಬೆಳೆದವು. ಆದರೆ ಜಾನಪದ ರಂಗಭೂಮಿ ಮಾತ್ರ ಸ್ತ್ರೀ ಪಾತ್ರದ

ವಿಚಾರದಲ್ಲಿ ಈಗಲೂ ಮಡಿವಂತಿಕೆಯನ್ನು ಉಳಿಸಿಕೊಂಡಿರುವುದಕ್ಕೆ ಅದರದೇ ನಂಬಿಕೆ, ಸಂಪ್ರದಾಯಗಳೂ ಕಾರಣವಾಗಿವೆ (ಜನಪದ ರಂಗಭೂಮಿ ಮತ್ತು ಆಧುನಿಕ ಜನಪದ ರಂಗಭೂಮಿ, ಸ್ವರೂಪ, ಸಂರಚನೆ, ಪಿಹೆಚ್.ಡಿ. ಪ್ರಬಂಧ, ಲೇ: ಆರ್.ವೆಂಕಟೇಶನ್, ಕ.ವಿ.ವಿ.ಹಂಪಿ, ೧೯೯೭).

ಇಂದಿನ ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ ಪ್ರಮುಖ ಪಾತ್ರಧಾರಿ ಮಾತ್ರ ನಟಿಯಾಗಿದ್ದು ಇನ್ನುಳಿದ ಪಾತ್ರಗಳನ್ನು ಪುರುಷರೇ ನಿರ್ವಹಿಸುವ ಮಡಿವಂತಿಕೆಯನ್ನು ಈಗಲೂ ಬೆಳೆಸಿಕೊಂಡು ಬಂದಿದ್ದಾರೆ. ಇದಕ್ಕೆ ಪುರುಷ ಸ್ತ್ರೀಯಾಗುವ ಬಯಕೆಯೇ ಅಥವಾ ಆರ್ಥಿಕ ತೊಂದರೆಯೂ ಅಥವಾ ಹವ್ಯಾಸಿ ಕಲಾವಿದರು ಅವನನ್ನು ಇವನನ್ನೇ ಹೆಣ್ಣು ಪಾತ್ರವೆನಿಸಿಯೇ ತೀರ ಬೇಕು ಎಂಬ ವಾಂಛೆಯೋ ಒಟ್ಟಿನಲ್ಲಿ ಇಂದಿಗೂ ನಮ್ಮ ಜಿಲ್ಲೆಯಲ್ಲಿ ಅದೂ ಬಯಲಾಟಗಳಲ್ಲಿ ಪುರುಷರೇ ಸ್ತ್ರೀ ಪಾತ್ರ ಮಾಡುವ ಸಂಪ್ರದಾಯವು ಇಂದಿಗೂ ಪ್ರಚಲಿತದಲ್ಲಿ ಇದೆ.

ಭಾರತದ ಎಲ್ಲ ಜನಪದ ರಂಗಪ್ರಕಾರಗಳಲ್ಲಿ ಸಾಮಾನ್ಯವಾಗಿ ಪುರುಷರೇ ಸ್ತ್ರೀ ಪಾತ್ರಧಾರಿಗಳು : ಬಂಗಾಲದ ಜಾತ್ರೆ ಬಯಲಾಟದಲ್ಲಿ ಪುರುಷರೇ ಸ್ತ್ರೀ ಪಾತ್ರ ಮಾಡುವರು. ಸುಪ್ರಸಿದ್ಧಿ ಸ್ತ್ರೀ ಪಾತ್ರಧಾರಿಗಳು ತಮ್ಮ ಹೆಸರಿನ ಹಿಂದೆ 'ರಾಣಿ' ಎಂದು ಸೇರಿಸಿಕೊಳ್ಳುತ್ತಾರೆ. (ಪುಟ-೧೪೯)

ರಾಜಸ್ತಾನದ 'ಭಾವಾಯಿ'ಯಲ್ಲಿ ಪುರುಷರೇ ಸ್ತ್ರೀ ಪಾತ್ರವಹಿಸುವರು (ಪುಟ-೧೫೩)

ಉತ್ತರ ಪ್ರದೇಶದ 'ಬಾಲ್ಯ'ದಲ್ಲಿ ಪುರುಷರೇ ಸ್ತ್ರೀ ಪಾತ್ರವಹಿಸುವರು (ಪುಟ-೧೬೨)

ತಮಿಳುನಾಡಿನ ತೆರುಕ್ಕೂತ್ತು, ಓರಿಸ್ಸಾದ ಪ್ರಹ್ಲಾದ ನಾಟಕ ಪುರುಷರೇ ಸ್ತ್ರೀ ಪಾತ್ರ ಮಾಡುತ್ತಾರೆ (Tradituional Indian theatre by Kaplia vatyayan. NBT. N.Delhi-1980). ಹೀಗೆ ಜನಪದ ರಂಗ ಪ್ರಕಾರಗಳಲ್ಲಿ ಎಲ್ಲ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಾರೆ.

ನಾಟಕ ಕಂಪನಿಗಳಲ್ಲಿ ಕೂಡ ಮೊದಲು ಪುರುಷರಿಂದಲೇ ಸ್ತ್ರೀ ಪಾತ್ರವನ್ನು ಮಾಡಿಸುತ್ತಿದ್ದರು.

ಕಾರಣ : ೧. ಸ್ತ್ರೀಯರು ನಾಟಕ ಕಂಪನಿ ಸೇರುತ್ತಿರಲಿಲ್ಲ ಅದಕ್ಕೆ ಕಾರಣ ಸಾಮಾಜಿಕ ಕಟ್ಟಳೆ. ೨. ಸ್ತ್ರೀಯರಿದ್ದರೆ ಅವರ ವ್ಯಾಮೋಹಕ್ಕೋಳಗಾಗಿ ನಟರು ಪರಸ್ಪರ ಜಗಳವಾಡುವರು. ಕಂಪನಿಯಲ್ಲಿ ಒಡಕು ತಲೆದೋರುವುದು ಇದರಿಂದ ಕಂಪನಿಯು ಹಾಳಾಗುವುದು (ನಾಟ್ಯ ಕಲಾಪೂರ್ಣ ಟಿ.ರಾಘುವರು, ಲೇ: ಜೋಳದರಾಶಿ ದೊಡ್ಡನಗೌಡ, ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ, ಬೆಂ. ೧೯೭೨).

ಈ ಕಾರಣದಿಂದಲೇ ಸ್ತ್ರೀ ಪಾತ್ರವನ್ನು ಪುರುಷರೇ ಮಾಡುತ್ತಾರೆ. ಒಂದೆಡೆ ಸಾಮಾಜಿಕ ಕಟ್ಟಳೆಯಾಗಿದ್ದರೆ, ಇನ್ನೊಂದೆಡೆ ಹೆಣ್ಣಿನ ವ್ಯಾಮೋಹ ಏನನ್ನಾದರೂ ಮಾಡಿಸಿ ಬಿಡುತ್ತದೆ. ಆದ್ದರಿಂದ ಹೆಣ್ಣು-ಹೊನ್ನು-ಮಣ್ಣಿಗಾಗಿ

ಬಡಿದಾಡಿದ ರಾಜ್ಯಗಳು ಮೀಸೆಯನ್ನು ಮಣ್ಣಾಗಿಸಿಕೊಂಡಿದ್ದಾರೆ. ಕೆಲವು ಕಂಪನಿಗಳ ಪುರುಷರು ಹೆಣ್ಣಿನ ವ್ಯಾಮೋಹಕ್ಕೆ ಸಿಲುಕಿ ಸಂಸಾರವನ್ನು ಹಾಳು ಮಾಡಿಕೊಂಡವರು ಇದ್ದಾರೆ. ಜೊತೆಗೆ ಕಂಪನಿಯಲ್ಲಿದ್ದ ಪುರುಷರು ಏಕ ಪತ್ನಿವ್ರತಸ್ಥರೂ ಇದ್ದಾರೆ. ಸಮಯ, ಸಂದರ್ಭ ಹೇಳಲಿಕ್ಕೆ ಬರುವುದಿಲ್ಲ. ಯಾಕೆಂದರೆ ಮನುಷ್ಯ ಸಂದರ್ಭಗಳು ಶಿಶುವಾದ್ದರಿಂದ ಯಾರಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲ. ಕಾಲಾಯ ತಸ್ಮೈ ನಮಃ ಎಂದರೂ ಕಾಲವು ಎಲ್ಲವನ್ನು ಮರೆಯಿಸುತ್ತದೆ. ಆದ್ದರಿಂದಲೇ ಕಂಪನಿ ನಾಟಕಗಳಲ್ಲಿ ಹೆಚ್ಚಾಗಿ ಪುರುಷರೇ ಸ್ತ್ರೀ ಪಾತ್ರವನ್ನು ಅಭಿನಯಿಸುತ್ತಾರೆ. ಗದುಗಿನ ಪಂಚಾಕ್ಷಾರ ಗವಾಯಿಗಳವರ ಕಂಪನಿಯಲ್ಲಿ ಇಂದಿಗೂ ಪುರುಷರೇ ಸ್ತ್ರೀ ಪಾತ್ರವಹಿಸಲು ಇದೇ ಕಾರಣವಾಗಿದೆ.

ಸ್ತ್ರೀ ಪಾತ್ರಧಾರಿ; ಪುರುಷರು : ಕನ್ನಡ ರಂಗಭೂಮಿಯ ಆರಂಭದ ದಿನಗಳಲ್ಲಿ ಪುರುಷರೇ ಸ್ತ್ರೀ ಪಾತ್ರ ಮಾಡುತ್ತಿದ್ದು, ಅವರಲ್ಲಿ ಹಲವರು ಹೆಂಗಸರನ್ನು ನಾಚಿಸುವಂತೆ, ಅಭಿನಯಿಸುತ್ತಿದ್ದರೆನ್ನುತ್ತಾರೆ. ಸ್ತ್ರೀ ಪಾತ್ರಧಾರಿ ಡಂಬಳ ಹುಚ್ಚಾಚಾರ್ಯರೆಂಬುವವರು ಹಗಲಲ್ಲಿ ಹೆಂಗಸಿನ ವೇಷಧರಿಸಿ ಅರಿಶಿಣ ಕುಂಕುಮಕ್ಕೆ ಹೋದರೂ ಯಾರಿಗೂ ಗುರುತು ಹಿಡಿಯಲಾಗುತ್ತಿರಲಿಲ್ಲವಂತೆ. ಈ ನಿಟ್ಟಿನಿಲ್ಲಿ ಮಹಾರಾಷ್ಟ್ರದ ಬಾಲ ಗಂಧರ್ವರು ಆಂಧ್ರದವರೇ ಆದ ಕೊಂಡಗೋಳ್ ರಾಮರಾಯರು, ಮರಾಠಿ ನಾಟಕ ಕಂಪನಿಯಲ್ಲಿ ಸ್ತ್ರೀ ಪಾತ್ರ ಹಾಕುತ್ತಿದ್ದರು. ಒಮ್ಮೆ ಪುಣೆಯಲ್ಲಿ ಒಬ್ಬ ರಂಗಮಂಚದಲ್ಲಿ ಪ್ರವೇಶಿಸಿ ಪ್ರೇಕ್ಷಕ "ಕನ್ನಡಿ ಗಾಯಕ್" ಎಂದು ಮೂದಲಿಕೆ ಮಾತು ಕೂಗಿದನಂತೆ ಕೋಪಗೊಂಡು ರಾಯರು ಸೆರಗನ್ನು ಬಿಸುಟು ಟೋಫನ್ ಕಿತ್ತೊಗೆದು ಶಾಸ್ತ್ರೀಯವಾಗಿ ಅದ್ಭುತಗಾನ ಮಾಡಲು ಅಲ್ಲಿದ್ದ ಹಿರಿಯರೇ ಅವರಿಗೆ "ಸವಾಯ್ ಗಂಧರ್ವ" ಎಂಬ ಬಿರುದು ಕೊಟ್ಟರಂತೆ. ಸವಾಯ್ ಗಂಧರ್ವ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಕಿರಾನಾ ಘರಾನಾದ ಅಧ್ವರ್ಯರು. ಅವರುಗಳ ಶಿಷ್ಯರೇ ಹೆಸರಾಂತ ಸಂಗೀತಗಾರರಾದ ಗಂಗೂಬಾಯಿ ಹಾನಗಲ್, ಭೀಮಸೇನ್ ಜೋಷಿ ಮುಂತಾದವರು.

ವರದಾಚಾರ್ಯರನ್ನು ನಾಟಕಕ್ಕೆ ತಂದ ಗೌರೀ ನರಸಿಂಹಯ್ಯನವರೇ ಸ್ತ್ರೀ ಪಾತ್ರಧಾರಿಗಳು. ವರದಾಚಾರ್ಯರ ತಂಡದಲ್ಲಿ, ಭೋಧರಾಯರು ಪ್ರಹ್ಲಾದ ನಾಟಕದ 'ಕಯಾದು' ಪಾತ್ರದಲ್ಲಿ ಆಚಾರ್ಯರನ್ನು ಸಮತೂಗುತ್ತಿದ್ದರೆಂದ ಮೇಲೆ ಅವರ ಪ್ರತಿಭೆ ಅಸಮಾನವಾದದ್ದಿರಬೇಕು. ಆದಿಯಲ್ಲಿ ಆರ್.ನಾಗೇಂದ್ರ ರಾಯರು ಬೆಳಗಿದ್ದೇ ಸ್ತ್ರೀ ಪಾತ್ರಗಳಲ್ಲಿ. ಭೋಧರಾಯರು ನಾಗೇಂದ್ರರಾಯರು ಜನಮನದಲ್ಲಿ ಶ್ರೀದೇವಿ, ಭೂದೇವಿಯಾಗಿ ಹೋಗಿದ್ದರು. ಬಹಳಷ್ಟು ಪ್ರಸಿದ್ಧಿ ಪಡೆದ ಮತ್ತೊಬ್ಬ ಸ್ತ್ರೀ ಪಾತ್ರಧಾರಿ ಎಂದರೆ ಮಂಗಳೂರಿನ ರಂಗನಾಥ ಭಟ್ಟರು, ಶಿವಮೂರ್ತಿ ಶಾಸ್ತ್ರಿ, ಕಣಬರ್ಗಿಮಠ ಎಂಬುವರು ಪ್ರಸಿದ್ಧ ನಟಿ ಗಂಗೂಭಾಯಿ ಗುಳೇದಗುಡ್ಡರವರ ತಾಯಿ ಮಲ್ಲಮ್ಮನವರಿಗೆ ಪಾತ್ರ ಕೊಟ್ಟು, ಹೆಂಗಸರೇ ಸ್ತ್ರೀ ಪಾತ್ರ ಮಾಡುವ ಸಂಪ್ರದಾಯ ಹುಟ್ಟುಹಾಕಿದರು (ಎಂ.ಎಸ್.ನಾಗರಾಜ, 'ನಾಂದಿ' ಜಯ ಪ್ರಕಾಶನ ಬೆಂಗಳೂರು).

ಈ ರೀತಿಯಾಗಿ ಪುರುಷರೇ ಸ್ತ್ರೀಯರನ್ನು ನಾಚಿಸುವಷ್ಟು ರಂಗನಟಿಯಾಗಿ ರಂಗಭೂಮಿಯಲ್ಲಿ ಮೆರೆದವರು ಇದ್ದಾರೆ. ಆದ್ದರಿಂದಲೇ ಸ್ತ್ರೀ ಪಾತ್ರಧಾರಿ ಪುರುಷರು ತಮ್ಮ ಹೆಸರಿನ ಹಿಂದೆ 'ರಾಣಿ' ಎಂದು ಹೆಸರನ್ನು ಇಟ್ಟುಕೊಂಡವರೂ ಇದ್ದಾರೆ. ರಂಗಭೂಮಿಯ ಅಭಿನೇತ್ರಿಯರಾಗಿ ಮೆರೆದಂತ ಪುರುಷರು ಇದ್ದಾರೆ. ಬರುಬರುತ್ತ ರಂಗಭೂಮಿಗೆ ನಿಧಾನವಾಗಿ ಮಹಿಳೆಯರ ಪ್ರವೇಶವಾಯಿತು. ನಂತರದ ದಿನಗಳಲ್ಲಿ ಅದರಲ್ಲೂ ಹಲವಾರು ವಿರೋದಾಭಾಸಗಳ ನಡುವೆಯೂ ಮಹಿಳೆಯರು ಹಿಂದೆ ಬಿದ್ದಿಲ್ಲ.

ಹಲವಾರು ಮಹಿಳೆಯರು ನಾಟಕ ಕಂಪನಿಗಳಿಂದ ಹಾಗೂ ವೃತ್ತಿ ರಂಗಭೂಮಿಯಿಂದ ಪ್ರೇರಿತರಾಗಿ ನಿಧಾನವಾಗಿ ರಂಗಭೂಮಿಗೆ ಪ್ರವೇಶಿಸಿದರು. ಬೇಸಿಗೆಯಲ್ಲಿ ತಂಗಾಳಿ ಬೀಸುವಂತೆ ಸ್ತ್ರೀಯರಿಗೆ ಪಾತ್ರ ಮಾಡಲು ಕ್ರಮೇಣ ಕಂಪನಿಗಳಲ್ಲಿ ಅವಕಾಶ ದೊರೆಯಿತು. ಕೆಲವು ನಟಿಯರು ಸ್ವತಃ ಕಂಪನಿಯನ್ನು ಕಟ್ಟಿ ರಂಗಭೂಮಿಯಲ್ಲಿ 'ರಂಗನಾಯಕಿ'ಯರಾಗಿ ಮೆರೆದಿದ್ದಾರೆ. ಅಂತಹ ಉದಾಹರಣೆಗಳು ನಮ್ಮಲ್ಲಿ ಇಲ್ಲದಿಲ್ಲ. ರಂಗಭೂಮಿಯ ಇತಿಹಾಸವನ್ನು ನೋಡಿದಾಗ ಹಲವಾರು ಜ್ವಲಂತ ನಿದರ್ಶನಗಳು ನಮ್ಮ ಮುಂದಿವೆ.

ನಮ್ಮ ಜನಪದ ರಂಗಭೂಮಿ ಪುರುಷರಿಗಷ್ಟೇ ಅಲ್ಲದೆ ಸ್ತ್ರೀಯರಿಗೂ ಸಮಭಾಗಿತ್ವವಿದೆ. ಸಾಮಾನ್ಯವಾಗಿ ಬುಡಕಟ್ಟು ಸಂಸ್ಕೃತಿಯಲ್ಲಿರುವ ಜನಪದ ಕುಣಿತಗಳಲ್ಲಿ ಗಂಡು ಹೆಣ್ಣು ಸಮಾನವಾಗಿ ಭಾಗವಹಿಸುತ್ತಾರೆ. ಉದಾ: ಸಿದ್ದಿಯರ ಕುಣಿತ, ಜೋಗತಿ ಮೇಳ, ದೊಂಬಿದಾಸರ ಮೇಳ ಇತ್ಯಾದಿ. ಬುಡಕಟ್ಟು ಸಮಾಜದಲ್ಲಿ ಸ್ತ್ರೀಯರು ರಂಗಭೂಮಿಯ ಸಮಾನ ಅವಕಾಶ ಪಡೆದಿದ್ದಾರೆ. ಆದರೆ ಇಂದಿನ ಯಕ್ಷಗಾನ ಮತ್ತು ಮೂಡಲಪಾಯ ದೊಡ್ಡಾಟಗಳಲ್ಲಿ ಸ್ತ್ರೀ ಪಾತ್ರವನ್ನು ಪುರುಷರೇ ಮಾಡುವ ಪದ್ಧತಿಯಿದೆ. ಆದರೆ ಬುಡಕಟ್ಟು ಸಮಾಜಗಳಲ್ಲಿ ವೃತ್ತಿ ನಿರತ ಜನಪರ ಮನೋರಂಜನೆಗಳಲ್ಲಿ ಸ್ತ್ರೀ ಪುರುಷರಿಬ್ಬರೂ ಪಾತ್ರಧಾರಿಗಳಾಗಿರುತ್ತಾರೆ. ಪ್ರಾಚೀನ ಅರೆರಂಗಭೂಮಿಯ ಇತಿಹಾಸಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಾಚೀನವಾದ ಶಿಲ್ಪ ನರ್ತಕಿಯದೇ ಆಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. "ಅನೇ ಶತಮಾನದ ಶಾಸನದಿಂದ ನಟಿಯೊಬ್ಬಳಿಗೆ ಬಹುಮಾನವಿತ್ತ ಸಂಗತಿ ಗೊತ್ತಾಗುತ್ತದೆ," ಆದರೆ ೧೧ ರಿಂದ ೧೬ನೆಯ ಶತಮಾದವರೆಗಿನ ಅವಧಿಯಲ್ಲಿ ಭಕ್ತಿಪಂಥ ನೈತಿಕ ಮೌಲ್ಯಗಳಿಗಾಗಿ ಹೋರಾಡಿದ್ದರಿಂದ ಸ್ತ್ರೀಯರನ್ನು ನಟಿಯರನ್ನಾಗಿ ನಿಯಮಿಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಮುಸ್ಲಿಮರ ಧಾಳಿಯೂ ಇದಕ್ಕೆ ಕಾರಣವಾಗಿರಬಹುದು. ಆದರೆ ದಾಸರಾಟದ ಮೇಳಗಳು ಧರ್ಮ ಪ್ರಸಾರ ಮುಗಿಸಿ ಅಥವಾ ಬಿಟ್ಟು ಬಯಲಾಟಗಳನ್ನೇ ಕಸಬಾಗಿ ಮಾಡಿಕೊಂಡಾಗ ತತ್ಕಾಲೀನ ಪರಿಸ್ಥಿತಿ ನೋಡಿಕೊಂಡು ಸ್ತ್ರೀಯರನ್ನು ಉಪಯೋಗಿಸ ತೊಡಗಿದರು.ಆ ಪದ್ಧತಿ ಇನ್ನೂ ಕ್ವಚಿತ್ತಾಗಿ ಬಳಕೆಯಲ್ಲಿದೆ. ಮಲ್ಲಯ್ಯನ ಭಕ್ತರಾದ ಮುರಳೇರು, ಯಲ್ಲಮ್ಮನ ಭಕ್ತರಾದ ಡೊಂಬರ ಕುಟುಂಬಗಳ ಹೆಂಗಸರು ಆನುವಂಶಿಕವಾಗಿ ಸ್ತ್ರೀ ಪಾತ್ರಧರಿಸುತ್ತಾರೆ (ಲೇ: ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜನಪದ ರಂಗಭೂಮಿ, ೧೯೬೫, ಪುಟ, ೬೫).

ಬುಡಕಟ್ಟು ಸಮುದಾಯದಲ್ಲಿ ಮಹಿಳೆಯು ಸಮಭಾಗಿತ್ವವನ್ನು ಪಡೆದು ಹಬ್ಬ, ಹರಿದಿನ, ಆಚರಣೆಗಳಲ್ಲಿ ಸಮಾನತೆಯಿಂದ ಭಾಗವಹಿಸುತ್ತಾಳೆ. ಶಿಷ್ಟರಲ್ಲಿ ಹಲವಾರು ರೀತಿಯ ತಾರತಮ್ಯವನ್ನು ನಾವು ಕಾಣುತ್ತವೆ. ಆದರೆ ನಮ್ಮ ಜನಪದರಲ್ಲಿ ಮಾನವೀಯತೆ ಹಾಗೂ ಸಮಾನತೆಗೆ ಯಾವತ್ತು ಮೌಲ್ಯವಿದೆ. ಈ ಮೌಲ್ಯತೆ ಇರುವುದರಿಂದಲೇ ಇಂದಿಗೂ ಜಾನಪದ ಜೀವಂತಿಕೆ ಪಡೆದಿರುವುದು. ಆದ್ದರಿಂದ ಜಾನಪದ ಯಾವಾಗಲೂ ಕ್ರಿಯಾಶೀಲವಾಗಿರುತ್ತದೆ. ಎಂದರೆ ಅದರ ಮೌಲ್ಯಾಧಾರಿತ ಗುಣಗಳೇ ಸಾಮಾನ್ಯ ಜನರಲ್ಲಿ ಮನೆ ಮಾಡಿಕೊಂಡಿವೆ.

ಶಿಷ್ಟ ಸಂಸ್ಕೃತಿಯಲ್ಲಿಯೇ ತಾರತಮ್ಯಗಳು ಕಂಡು ಬರುತ್ತವೆ. ಹೆಣ್ಣು, ಗಂಡು, ಮೇಲು, ಕೀಳು ಹೀಗೆ ಸಮಾಜದ ಹಲವಾರು ಸ್ತರಗಳಲ್ಲಿ. ಇತಿಹಾಸದಲ್ಲಿ ಎಲ್ಲದರಲ್ಲಿ ನಾವು ಭಿನ್ನತೆಯನ್ನು ಕಾಣುತ್ತೇವೆ. ಶಿಷ್ಟರಲ್ಲಿ ಯಾರು ಯಾರು ಏನು ಮಾಡಬೇಕೊ ಅದನ್ನೇ ಅವರು ಮಾಡಲೇಬೇಕು. ಕೆಲವು ಕಡೆ ನಿಷಿದ್ಧವಾಗಿರುವುದು ಅದು ಕೊನೆಯವರೆಗೂ ನಿಷಿದ್ಧವಾಗಿಯೇ ಇರುತ್ತದೆ. ಒಬ್ಬ ಸ್ತ್ರೀ ರಂಗಭೂಮಿಯನ್ನು ಪ್ರವೇಶಿಸುವುದು, ನಾಟಕವನ್ನು ನೋಡುವುದು ಎಲ್ಲವೂ ನಿಷಿದ್ಧ. ಆದರೆ ಜಾನಪದದಲ್ಲಿ ಲಿಂಗ ಭೇದವಿಲ್ಲದೆ ಸಮಾನತೆಯೇ ಎಲ್ಲೆಲ್ಲೂ ಮನೆ ಮಾಡಿಕೊಂಡಿದೆ ಎಂಬುದಕ್ಕೆ ಹಲವಾರು ನಿದರ್ಶನಗಳೇ ಸಾಕ್ಷಿಯಾಗಿವೆ.

ಶಿಷ್ಟ ರಂಗಭೂಮಿಯ ಇಂಥಹ ಸಂದರ್ಭದಲ್ಲಿ ಕಂಪನಿಗಳಲ್ಲಿ ನಟಿಯರು ಪ್ರವೇಶಿಸಿದರು. ಮೊದಲು ಜಾನಪದರ ಪ್ರವೇಶ ಮಾಡಿದ ನಂತರ ಕಂಪನಿ ನಾಟಕಗಳಲ್ಲಿ ವೃತ್ತಿ ನಟಿಯರಾಗಿ ಹಲವಾರು ಮಹಿಳೆಯರು ಈ ರೀತಿಯ ಅವಕಾಶದಲ್ಲಿ ಇಡೀ ಕರ್ನಾಟಕದಲ್ಲಿಯೇ ಅಲ್ಲೊಬ್ಬರು, ಇಲ್ಲೊಬ್ಬರು ಕಾಣಸಿಗುತ್ತಾರೆ. ಕರ್ನಾಟಕದ ರಂಗಭೂಮಿಗೆ ಮರಾಠ ರಂಗಭೂಮಿಯ ಪ್ರಭಾವ ಬೀರಿದೆ. ಮೊದಲು ಮಹರಾಷ್ಟ್ರದಲ್ಲಿಯೇ ರಂಗಭೂಮಿಗೆ ಮಹಿಳೆಯ ಪ್ರವೇಶವಾಗಿದ್ದು ಒಂದು ಕ್ರಾಂತಿಯೇ ಆಗಿದೆ.

ಮಹಾರಾಷ್ಟ್ರದ "ತಮಾಷಾ"ದ ಪ್ರಥಮ ನಟಿಯ ಹೆಸರು 'ಪವಳಾ'. ಅವಳು ನಗರ ಜಿಲ್ಲೆಯ ಮಾಣಿಕ ರಾವ್ ರೋಹಮ್ ಅವರ ಮಗಳು. ೧೮೮೫ರಲ್ಲಿ ಅವಳು ನಾಟಕದಲ್ಲಿ ಪಾತ್ರ ಮಾಡಲು ಪ್ರಾರಂಭಿಸಿದಳು. (ಈ ರೀತಿ ಪರಂಪರೆ ಕರ್ನಾಟಕಕ್ಕೆ ಆಗಿದ್ದು ಚಿಮಣಾಗಳ ಪರಂಪರೆ) ತಮಾಷಾ ನಟಿಯರು ಮಹರಾಷ್ಟ್ರ ಕೊಲ್ಹಾಟಿ ಕೆಳಜಾತಿಯಿಂದ ಬಂದವರು.

ಆದರೆ ನಮ್ಮ ಕರ್ನಾಟಕದಲ್ಲಿ ಈ ಸಮಯದಲ್ಲಿಯೂ ಪುರುಷರೇ ಸ್ತ್ರೀ ಪಾತ್ರವನ್ನು ಮಾಡುತ್ತಿದ್ದುದು ಇಂದಿಗೂ ಪ್ರಚಲಿತದಲ್ಲಿದೆ. ಅಕ್ಕ ಪಕ್ಕದ ರಾಜ್ಯಗಳಲ್ಲಿಯೂ ಈ ರೀತಿಯ ಬೆಳವಣಿಗೆಗಳೊಂದಿಗೆ ಸ್ತ್ರೀಯು ರಂಗಭೂಮಿಗೆ ಬಂದುದು ಹೊಸರೀತಿಯ ಮಾರ್ಗದ ಬೆಳವಣಿಗೆ ಇಂಥ ಬೆಳವಣಿಗೆಯೇ ಇಂದು ರಂಗಭೂಮಿಯು ಹಲವಾರು ಕವಲುಗಳಾಗಿ ಬೆಳೆದುಕೊಂಡು ಬಂದಿದೆ. ಪುರುಷರು ಸ್ತ್ರೀ ಪಾತ್ರವನ್ನು ಮಾಡಿ ಅದರಲ್ಲಿ ಯಶಸ್ವಿಯಾಗಿ ಹೆಸರು ಗಳಿಸಿಕೊಂಡು ರಂಗಭೂಮಿಯಲ್ಲಿ ಈ ಪುರಷರು 'ರಂಗರಾಣಿ'

ಯರಾಗಿದ್ದಾರೆ. ಯಾವತ್ತು ಒಬ್ಬ ನಟನು ತಾನು ತಾನಾಗಿಯೇ ಅಭಿನಯಿಸುವುದಲ್ಲದೇ ತಾನು ಬೇರೆ ರೂಪವಾಗಿಯೇ ಅಭಿನಯಿಸುವುದು ಬಹಳ ವಿಶೇಷ ಹಾಗೂ ರೂಢಿ ಮಾಡಿಕೊಳ್ಳುವುದು ಪಾತ್ರಧಾರನು ಚಾಣಾಕ್ಷತೆಯಿಂದ ತನ್ನ ಅಭಿನಯ ಚಾತುರ್ಯತೆಯನ್ನು ತೋರಿಸುವುದು ಅವನ ಸಾಮರ್ಥ್ಯವೇ ಸರಿ.

ನಾಟಕ ಎಂಬ ಈ ಸಮುದ್ರ ಭಾವದ (oceanic feeling) ಅನುಭವಕ್ಕೆ ಅವಕಾಶ ಕೊಟ್ಟು ಮುದ ನೀಡುತ್ತದೆ ಎನ್ನಬಹುದು. ನಟ ತನ್ನ ವ್ಯಕ್ತಿತ್ವದಿಂದ ಸಮಾಜ ಹೊರಿಸಿರುವ ಬಿಗುಮಾನಗಳಿಂದ ವಿಮೋಚನೆ ಪಡೆದು ಅದುಮಿಟ್ಟ ಆಸೆಗಳ ಪೂರೈಕೆಯನ್ನು ಪರೋಕ್ಷವಾಗಿಯಾದರೂ ಪೂರೈಸಿಕೊಳ್ಳುತ್ತಾನೆ. ಅತೀ ಬಡವನಾದವನು ಆಗರ್ಭ ಶ್ರೀಮಂತನಂತೆಯೇ, ರಾಜನಂತೆಯೇ ಮೀಸಿ ಹುರಿ ಮಾಡುತ್ತಾನೆ. ಕ್ಷಣಕಾಲ ಭೀಮನಾದರೆ ನಮ್ಮ ಅಶಕ್ತತೆಯ ಅಳಕು ಮಾಸುತ್ತದೆ. ಗಂಡಸು ಹೆಂಗಸಿನ ಪಾತ್ರ ಮಾಡುವುದು ಅಥವಾ ಹೆಂಗಸು ಪುರುಷನ ಪಾತ್ರ ಮಾಡುವುದೂ ಇಂತಹ ಸುಖವನ್ನೇ ಕೊಡುತ್ತದೆ ಎನ್ನಬಹುದು. ಮುದುಕ, ಯುವಕನಾಗುವುದು, ಭಿಕ್ಷುಕ ದಾತನಾಗುವುದು ಇಂತಹದೇ ಅನುಭವ ತಾನೇ (ಎಂ.ಎಸ್.ನಾಗರಾಜ, ನಾಂದಿ, ಜಯ ಪ್ರಕಾಶನ, ಬೆಂಗಳೂರು, ಪುಟ,೭೮). ಒಬ್ಬರು ಒಂದು ಪಾತ್ರವನ್ನು ವಹಿಸಿಕೊಂಡಾಗ ತಾನು ಬೇರೆಯೇ ಆಗಿ ನಿರ್ವಹಿಸುವುದು ಸಾಮಾನ್ಯ ಮಾತೇನು ಅಲ್ಲ. ಕೆಲವು ನಟಿಯರಿಗೆ ಪಾತ್ರಗಳೇ ಸಂಗಾತಿಗಳಾಗಿರುತ್ತವೆ. ಹೆಣ್ಣು ಗಂಡಾಗುವುದು, ಬಡವನು ಶ್ರೀಮಂತನಾಗುವುದು ಹೀಗೆ ಒಬ್ಬ ವ್ಯಕ್ತಿಯು ಹಲವಾರು ರೀತಿಯ ವೈವಿಧ್ಯ ಪಾತ್ರಗಳನ್ನು ಮಾಡುವಾಗ ಮನಸ್ಸು ತಾನಾಗಿಯೇ ಹಗುರವಾಗುತ್ತದೆ. ''ಬಡತನಕ್ಕೂ ಬಣ್ಣಕ್ಕೂ ಯಾವತ್ತೂ ಬಿಡದ ನಂಟು.'' ಆದ್ದರಿಂದ ಕಲಾವಿದರು ಕಲೆಗಾಗಿಯೇ ಜೀವನ ಮುಡುಪಾಗಿಟ್ಟಾಗ, ಬಡತನದಲ್ಲಿಯೇ ಜೀವನ ಸಾಗಿಸಿದ ನಿದರ್ಶನಗಳು ನಮ್ಮ ಮುಂದಿವೆ. ಈ ಎಲ್ಲಾ ವೈರುಧ್ಯಗಳ ನಡುವೆ ರಂಗಭೂಮಿಯು ಕರ್ನಾಟಕದಲ್ಲಿ ನಿಧಾನವಾಗಿ ಪ್ರಗತಿ ಮೆಟ್ಟಲನ್ನು ಏರುತ್ತದೆ.

ಪಿ.ಬಿ.ಧುತ್ತರಗಿ ಅವರು ತಮ್ಮ ''ತಾಯಿ ಕರಳು'' ನಾಟಕವನ್ನು ನುರಿತ ನಟನಟಿಯರಿಂದ ಕೂಡಿದ ಹೆಸರಾಂತ ಕಂಪನಿಯ ಮೂಲಕ ಬೆಳಕಿಗೆ ತರಬೇಕೆಂದು ಬಯಸಿದರು. ಆಗ ಸ್ತ್ರೀ ಪಾತ್ರಗಳನ್ನು ಹೆಚ್ಚಾಗಿ ಪುರುಷರೇ ಅಭಿನಯಿಸುತ್ತಿದ್ದ ಕಾಲ. ತಮ್ಮ ಹಾವಭಾವ, ಮಾತು-ಗತ್ತು ಅಭಿನಯ ಚಾತುರ್ಯದಿಂದ ಸ್ತ್ರೀಯರನ್ನು ನಾಚಿಸುವ ರೀತಿಯಲ್ಲಿ ಅಭಿನಯಿಸುವ ಪರಿಣತ ನಟರಿದ್ದರು. ಮುರುಗೋಡಿ ಗಂಗಾಧರಪ್ಪ, ಸಿದ್ಲಿಂಗಪ್ಪ ಮದನಭಾವಿ, ಲಕ್ಷ್ಮಣರಾವ್ ಅಸುಂಡಿ, ಹಮ್ಮಿಗಿ ನೀಲಕಂಠಪ್ಪ, ನೀಲಕಂಠ ಬುವಾ ಗಾಡಗೋಳಿ, ಲಿಂಗರಾಜ ಬುವಾ, ಎರಗುಪ್ಪಿ, ಮಲ್ಲಿಕಾರ್ಜುನ ಮನ್ಸೂರ್, ಲಾಡ ಸಾಹೇಬ, ಅಮೀನ ಗಡ ಫಕ್ರುಸಾಬ ದೊಡ್ಡವಾಡ, ಬಸವರಾಜ ಹೊಸಮನಿ, ಏಣಗಿ ಬಾಳಪ್ಪ, ಮಾಕಣಿ ಮಾನಪ್ಪ, ಶ್ರೀಪಾದರಾಯ ಗರುಡ, ಕರ್ಲವಾಡ ಚೆನ್ನಬಸಯ್ಯ, ಬಿ.ಓಬಳೇಶ್ವರ, ವೀರಣ್ಣ ಚಾಲಿಹಾಳ, ಚೆನ್ನಬಸಪ್ಪ ಕವಲಿ, ಡಂಬಳ ಶಾಂತಪ್ಪ, ಸಂಕಣ್ಣ ಡಂಬಳ ಮೊದಲಾದ ನಟರು ಸ್ತ್ರೀ ಪಾತ್ರಕ್ಕಾಗಿಯೇ ಪ್ರಸಿದ್ಧರೆನಿಸಿದರು. ಕೆಲವರು ''ರಂಗಭೂಮಿಯ ರಾಣಿ''ಯರೆಂದು ಖ್ಯಾತರಾಗಿದ್ದರು.

ಈಗ ಇರುವವರಲ್ಲಿ ತಮ್ಮ ನಾಟಕದ 'ತಾಯಿ' ಪಾತ್ರವನ್ನು ತಮ್ಮ ಕಲ್ಪನೆಗೆ ತಕ್ಕಂತೆ ಸಮರ್ಪಕವಾಗಿ ನಿರ್ವಹಿಸುವ ಶಕ್ತಿ ಸಾಮರ್ಥ್ಯ ಯಾರಿಗಿದೆ? ಎಂದು ಧುತ್ತರಗಿ ಅವರು ಲೆಕ್ಕ ಹಾಕತೊಡಗಿದರು. ಆಗ ಗೋಕಾಕ ಮತ್ತು ಏಣಗಿ ಕಂಪನಿಗಳು ಹೆಚ್ಚು ಜನಪ್ರಿಯ ಎನಿಸಿದ್ದವು. ಬಸವರಾಜ ಹೊಸಮನಿ, ಏಣಗಿ ಬಾಳಪ್ಪನವರು ಸಾಧ್ವಿ ಸ್ತ್ರೀ ಪಾತ್ರಗಳ ಸಹಜ ಅಭಿನಯಕ್ಕಾಗಿ ಹೆಸರಾಗಿದ್ದರು. ಹೀಗಾಗಿ ಇಬ್ಬರಲ್ಲಿ ಒಬ್ಬರು ತಾಯಿಯ ಪಾತ್ರಕ್ಕೆ ಜೀವ ತುಂಬಬಲ್ಲರು ಎಂದು ನಿರ್ಧರಿಸಿ ಮೊದಲು ಏಣಗಿ ಬಾಳಪ್ಪನವರನ್ನು ಭೆಟ್ಟಿಯಾದರು. ನಾಟಕ ಓದಿಸಿ ಕೇಳಿ ಮೆಚ್ಚಿಕೊಂಡ ಬಾಳಪ್ಪನವರನ್ನು ಬಾಳಚಂದ ನಾಟ್ಗ ಬರ್ದೀರಿ ಆದ್ರ ಈ ತಾಯಿ ಪಾತ್ರ ಮಾಡ ಅಂತಾವ್ರು ಸದ್ಯ ನನ್ನ ಕಂಪನ್ಯಾಗ ಯಾರೂ ಇಲ್ಲ. "ನಾನಂತೂ ಕೂದ್ಲಾ ತೆಗ್ಸಿ ಸ್ತ್ರೀ ಪಾತ್ರ ಮಾಡದ ಬಿಟ್ಟು ಬಿಟ್ಟೇನಿ ಇನ್ನು ಗೋಕಾಕ ಬಸಣ್ಣೆಪ್ಪ ಮಾಡಬಹುದಿತ್ತು. ಆತ್ನೂ ಬಿಟ್ಟಾನ. ಕವಲಿ ಚೆನ್ನಬಸಪ್ಪಗೂ ಹೆಣ ಮಕ್ಕಳು ಪಾತ್ರ ಮಾಡಾರು ಹೆಚ್ಚಾಗಿಂದ ಗಂಡಸರೆಲ್ಲ ಹಿಂದಕ ಸರದಾರ. ಈಗ ಈ ಪಾತ್ರಕ್ಕೆ ಜೀವ ತುಂಬ ಅಂತಾ ಶಕ್ತಿ ಇದ್ದರಾಂದ್ರ ಕುಕನೂರು ರೆಹಮಾನವ್ವ ಒಬ್ಬಾಕಿ ಮಾತ್ರ. ಆಕಿ ಕಂಪನ್ಯಾಗ ಈ ನಾಟ್ಗ ಕುಂದ್ರಸಿ ಯಶಸ್ವೀಯಾಗುತ್ತ" ಎಂದು ಹೇಳಿದರು ಅವರ ಮಾತು ಸರಿ ಎನಿಸಿತು.

ಕುಕನೂರು ರೆಹಮಾನವ್ವನ "ಶ್ರೀ ಲಲಿತಕಲಾ ನಾಟ್ಯ ಸಂಘ" ಆಗ ಗಂಗಾವತಿಯಲ್ಲಿ ಕ್ಯಾಂಪ್ ಮಾಡಿತ್ತು. ಸಣ್ಣ ಕಂಪನಿ ರೆಹಮಾನವ್ವಳ ಆಕರ್ಷಕ ವ್ಯಕ್ತಿತ್ವ ಮತ್ತು ಪ್ರಬುದ್ಧ ಅಭಿನಯಗಳೇ ಸಂಘದ ಆಸ್ತಿಯಾಗಿದ್ದವು. ಹಂದಿಗನೂರು-ಸಿದ್ರಾಮಪ್ಪನವರ "ವಿಶ್ವಕಲಾರಂಜನ" ತಳಕಲ್ಲು ವೆಂಕರೆಡ್ಡಿ ಅವರ "ಶ್ರೀ ರಂಜನಿ" ನಾಟಕ ಮಂಡಳಿಗಳ ಪೌರಾಣಿಕ ನಾಟಕಗಳಲ್ಲಿ ನಾಯಕಿಯ ಪಾತ್ರವಹಿಸಿ ಹೆಸರುಗಳಿಸಿದ ಈಕೆ ೧೯೫೦ರಲ್ಲಿ ಸ್ವಂತ ಕಂಪನಿ ಕಟ್ಟಿ ಸ್ತ್ರೀಯರೂ ಯಶಸ್ವಿಯಾಗಿ ಕಂಪನಿ ನಡೆಸಬಲ್ಲರು ಎಂಬುದನ್ನು ತೋರಿಸಿ ಕೊಟ್ಟಳು (ಪಿ.ಬಿ.ಧುತ್ತರಗಿ, ಲೇ:ಡಾ.ವೀರಣ್ಣ ರಾಜೂರ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು). ಒಬ್ಬ ಮುಸ್ಲಿಂ ಮಹಿಳೆಯ ಈ ಸಾಧನೆಯು ಮುಂದೊಂದಿನ ವೃತ್ತಿ ರಂಗಭೂಮಿಗೆ ಅದು ದಾಖಲೆಯಾಗಿದ್ದು, ಒಂದು ಆದರ್ಶವೇ ಸರಿ. ಮುಸ್ಲಿಂ ಧರ್ಮದಲ್ಲಿ ಹಲವಾರು ಕಟ್ಟು ಪಾಡುಗಳೊಂದಿಗೆ ಮುಂದೆ ಬಂದು ಯಶಸ್ವಿಯಾಗಿ ಒಬ್ಬ ಉತ್ತರ ಕರ್ನಾಟಕದ ಹಿಂದುಳಿದ ಮಹಿಳೆಯ ಈ ಪ್ರಗತಿ ರಂಗಭೂಮಿ ಉಜ್ವಲವಾದ ಪರಂಪರೆಗೆ ಇದು ದ್ಯೋತಕವಾಗಿದೆ.

"ಕನ್ನಡ ವೃತ್ತಿ ರಂಗಭೂಮಿಗೆ ೧೩೦ ವರ್ಷಗಳ ಚರಿತ್ರೆ ಇದ್ದರೆ, ಮಹಿಳೆ ರಂಗ ಪ್ರವೇಶಿಸಿ ೧೧೦ ವರ್ಷ ಕಳೆಯಿತು ಎಂಬ ಸಂಗತಿ ರಂಗದಲ್ಲಿ ಆಕೆ ತೀರಾ ಹಿಂದೆ ಬಿದ್ದಿಲ್ಲ ಎಂಬುದನ್ನು ಹೇಳುತ್ತದೆ. ಮಹಿಳೆಯರ ಪಾತ್ರ ಸಂಖ್ಯೆಯ ದೃಷ್ಟಿಯಿಂದ ಪುರುಷನಿಗೆ ಸಮ ಇಲ್ಲದಿರಬಹುದು. ಆದರೆ ಸಾಧನೆ ದೃಷ್ಟಿಯಿಂದ ಸರಿ ಸಾಟಿಯೇ ಆಗಿದ್ದಾಳೆ. ೧೮೭೨ರಲ್ಲಿ ಕಂಪನಿ ನಾಟಕಗಳು ಆರಂಭವಾದರೆ, ೧೮೯೦ರ ಹೊತ್ತಿಗೆ ಗುಬ್ಬಿ ಕಂಪನಿ ರಾಜಮ್ಮ, ೧೯೦೧ರಲ್ಲಿ ಬಳ್ಳಾರಿ ಲಕ್ಷ್ಮಮ್ಮ, ಗುಳೇದಗುಡ್ಡದ ಯಲ್ಲುಬಾಯಿ, ಮುಂದೆ ಮತ್ತೆ ಕೆಲವು ವರ್ಷಗಳಲ್ಲೇ ದಾದಮ್ಮನವರ ಸಂಜೀವಮ್ಮ, ಹನುಮಂತಮ್ಮ ಮುಂತಾದವರು ಕೆಲವರ ವಿರೋಧದ

ನಡುವೆಯೂ ಮಹಿಳೆಯರ ಪ್ರವೇಶ ನಿರಂತವಾಗಿ ಬಿಟ್ಟಿತು. ೧೮೯೮ರಲ್ಲಿ "ಪಾಪಾಸಾನಿ' ಎಂಬಾಕೆ ಸ್ತ್ರೀ ನಾಟಕ ಮಂಡಳಿಯನ್ನೇ ಸ್ಥಾಪಿಸಿದರು. ೧೯೦೮ ರಲ್ಲಿ ಲಕ್ಷ್ಮೇಶ್ವರದ ಬಚ್ಚಾಸಾನಿ ಸ್ಥಾಪಿಸಿದ ಸ್ತ್ರೀ ನಾಟಕ ಮಂಡಳಿಯಲ್ಲಿ ಪುರುಷರು ಸೇರಿದಂತೆ ಎಲ್ಲಾ ಪಾತ್ರಧಾರಿಗಳೂ ಮಹಿಳೆಯರು. ಯಾವುದೇ ದೇಶದಲ್ಲಿ ಇಲ್ಲದ ಇಂಥದೊಂದು ಹೊಸ ಪರಂಪರೆ ಕನ್ನಡ ನಾಡಿನ ರಂಗಚರಿತ್ರೆಯಲ್ಲಿ ಹೆಗ್ಗಳಿಕೆಯ ವಿಷಯವಾಗಿದೆ. ೧೯೨೫ರಲ್ಲಿ ಗುಳೇದಗುಡ್ಡದ ಗಂಗೂಬಾಯಿ ಶ್ರೀಕೃಷ್ಣ ನಾಟಕ ಮಂಡಳಿ ಸ್ಥಾಪಿಸಿ ೫-೬ ವರ್ಷಗಳ ಕಾಲ ವೈಭವದಿಂದ ನಡೆಸುತ್ತಾಳೆ. ಇದೇ ಸುಮಾರಿನಲ್ಲಿ ಹಳೆ ಮೈಸೂರಿನಲ್ಲಿ ನಂಜಾಸಾನಿ ಮತ್ತು ಲಕ್ಷ್ಮಸಾನಿಯವರ ನಾಟಕ ಕಂಪನಿಗಳಿದ್ದವು. ಮೈಸೂರಿನ ಅಂಭುಜಮ್ಮ, ಸೋನೂಬಾಯಿ ದೊಡ್ಡಮನಿ(೧೯೩೬)ಯವರ ನಾಟಕ ಕಂಪನಿಗಳು ಬಿ.ಜಿ.ಕೆ.ಅಯ್ಯಂಗಾರ್, ಸಿ.ಬಿ.ಮಲ್ಲಪ್ಪ ಸ್ಥಾಪಿಸಿದ ಮಹಿಳಾ ನಾಟಕ ಕಂಪನಿಗಳು ಕೆಲ ಕಲಾ ನಡೆಸಿದರೆ, ೧೯೫೦ರಲ್ಲಿ ಕುಕನೂರು ರೆಹಮಾನವ್ವನ "ಲಲಿತಕಲಾ ನಾಟ್ಯ ಸಂಘ" ಪೌರಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ದಾಖಲೆಯ ಯಶಸ್ವೀ ಪ್ರದರ್ಶನ ನಡೆಸಿತು. ಕುಂದಾಪುರ ಸಾವಿತ್ರಮ್ಮ, ಜುಬೇದ ಬಾಯಿ, ಸವಣೂರು, ಇಳಕಲ್‌ನ ಲಕ್ಷ್ಮೀಬಾಯಿ, ಹಂಸನೂರಿನ ನಟಿಯರು, ಹುಬ್ಬಳ್ಳಿಯ ಥೇರೇಸಮ್ಮ, ಸರಸ್ವತಿ ನಾಯ್ಡು, ಅಂಬುಜಮ್ಮ, ಶಿರಹಟ್ಟಿ ಭಾರತಿ, ಜಯಲಕ್ಷ್ಮೀ ಹೆಗಡೆ, ಬಳ್ಳಾರಿ ಸುಜಾತಮ್ಮ ಇವರೆಲ್ಲಾ ನಾಟಕ ಕಂಪನಿ ಕಟ್ಟಿದ ಮಹಿಳೆಯರು. ಪುರುಷರೇ ನಡೆಸಿದ ನಾಟಕ ಕಂಪನಿಗಳಲ್ಲೂ ಹೆಚ್ಚಿನ ಜವಾಬ್ದಾರಿ ನೋಡಿಕೊಂಡವರು. ಅವರ ತಾರಾಪತ್ನಿಯರು ಎಂಬುದು ಅಷ್ಟಾಗಿ ಬೆಳಕಿಗೆ ಬಾರದ ಸಂಗತಿ. ಹಾಲಿ ಉಳಿದಿರುವ ೭-೮ ನಾಟಕ ಕಂಪನಿಗಳಲ್ಲಿ ಮೂರಕ್ಕೆ ಮಹಿಳೆಯರದೇ ಸಾರಥ್ಯ (ಲೇ: ಗುಡಿಹಳ್ಳಿ ನಾಗರಾಜ, ಪ್ರಜಾವಾಣಿ ಪತ್ರಿಕೆ, ಸಾಪ್ತಾಹಿಕ ಪುರವಣಿ, ೨೦೦೨).

ಕರ್ನಾಟಕದ ವೃತ್ತಿ ರಂಗಭೂಮಿಯಲ್ಲಿ ಮಹಿಳೆಯರು ನಾಟಕ ಕಂಪನಿಗಳನ್ನು ಕಟ್ಟಿ ಅದರಲ್ಲಿ ಏಳು ಬೀಳು ಹಾಗೂ ಯಶಸ್ಸು ಕಂಡು ಇಂದು ದಾಖಲೆಯಾಗಿ ಇವೆ. ರಂಗನಟಿಯರು ತಾವೇ ಕಂಪನಿ ಕಟ್ಟಿ ಇಲ್ಲವೆ ಕಂಪನಿ ಮಾಲೀಕನ ತಾರಾಪತ್ನಿಯಾಗಿ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ನಾಟಕವನ್ನು ನೋಡುವುದೇ ನಿಷಿದ್ಧವಾದ ಕಾಲದಲ್ಲಿ ಸ್ವಂತ ಕಂಪನಿ ನಡೆಸಿದ ಎದೆಗಾರಿಕೆ ನೋಡಿದರೆ, ಅವರ ಧೈರ್ಯ, ಸ್ಥೈರ್ಯ ಧೀಮಂತಿಕೆಗೆ ಯಾವ ಪ್ರಶಸ್ತಿ ನೀಡಿದರೂ ಅದು ಕಡಿಮೆಯೆ. ರಂಗಭೂಮಿಯಲ್ಲಿ ಮಹಿಳೆಯು ಕಣ್ತೆರೆಯದ ಕಾಲದಲ್ಲಿ ಇಂಥ ಸಾಹಸಕ್ಕೆ ಕೈ ಹಾಕಿದವರು ಅಭಿನಂದನಾರ್ಹರೇ ಸರಿ. ಈ ರೀತಿಯಾಗಿ ರಂಗನಟಿಯರು ನಮ್ಮ ನಾಡಿನಲ್ಲಿ ಸಾಂಸ್ಕೃತಿಕ ಇತಿಹಾವನ್ನು ಕಟ್ಟಿದ್ದಾರೆ. ಅಲ್ಲದೆ ತಮ್ಮದೇ ಆದ ಅಮೋಘ ಕೊಡುಗೆಯನ್ನು ನೀಡಿ ರಂಗಭೂಮಿಯಲ್ಲಿ ಮಿನುಗುತಾರೆಗಳಾಗಿದ್ದಾರೆ.

೧೮೭೦ರಲ್ಲಿ ಕೌಜಲಗಿ ಸಿಂಗಪ್ಪನೇ ಮೊದಲ ಕರ್ನಾಟಕದಲ್ಲಿ ರಂಗಭೂಮಿ ನಟ. "ಕೊಣ್ಣೂರು ಕಂಪನಿ ೧೮೯೯ರಲ್ಲಿ ಸ್ಥಾಪನೆಯಾದ ನಂತರ ಮೊದಲು ನಟಿಯಾಗಿ ಲಕ್ಷಾಸಾನಿ ೧೯೦೨ರಲ್ಲಿ ಬಂದರು. ಅವರ ಹಿಂದೆಯೇ ೧೯೦೪ರಲ್ಲಿ ರೇಣುಸಾನಿ, ೧೯೦೮ರಲ್ಲಿ ಗುಳೇದಗುಡ್ಡದ ಎಲ್ಲುಬಾಯಿ. ಇವಳು ಬಹುದಿನ

ಕಂಪನಿಯಲ್ಲಿದ್ದು ಪಾತ್ರ ಮಾಡಿ ಹೆಸರನ್ನು ಗಳಿಸಿದವರು (ಕೊಣ್ಣೂರು ನಾಟಕ ಕಂಪನಿ, ರಾಮಕೃಷ್ಣ ಮರಾಠೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯).

ಕೆಲವಾರು ವರ್ಷಗಳ ನಂತರ ಅಲ್ಲಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ರಂಗಭೂಮಿಗೆ ಮಹಿಳೆಯರು ಕಾಲಿಟ್ಟರು. ಜೊತೆಗೆ ತಾವು ಕಂಪನಿ ಕಟ್ಟಿ ಈ ನಿಟ್ಟಿನಲ್ಲಿ ಹೆಸರು ಮಾಡಿದರು. ಕಾಲ ಬದಲಾದಂತೆ ನಿರಂತರವಾಗಿ ಮಹಿಳೆಯರ ರಂಗಭೂಮಿ ಪ್ರವೇಶವಾಯಿತು. ಮೊದ ಮೊದಲು ಅಂಜಿಕೆ ಅಳುಕಿನಿಂದ ಕಾಲಿಟ್ಟರೂ ನಂತರ ಇದರ ಪ್ರವೇಶ ಹಾದಿ ಸುಗಮವಾಗಿ ಕ್ರಮೇಣ ಸಂಪೂರ್ಣವಾಗಿ ಮಹಿಳೆಯರು ರಂಗಭೂಮಿಯನ್ನು ಆಕ್ರಮಿಸಿಕೊಂಡು ಬಿಟ್ಟರು.

೧೯೩೦ರ ಸುಮಾರಿಗೆ ಶ್ರೀರಂಗರು ಧಾರವಾಡದಲ್ಲಿ ಹವ್ಯಾಸಿ ನಾಟಕಗಳ ಪ್ರಯೋಗ ಪ್ರಾರಂಭಿಸಿದರು. ಮೊದಲು ಪುರುಷರೇ ಸ್ತ್ರೀ ಪಾತ್ರ ಮಾಡುತ್ತಿದ್ದರು. ಇದು ಶ್ರೀರಂಗರಾಯರಲ್ಲಿ ಸರಿ ಅನಿಸಲಿಲ್ಲ. ಪುರುಷವೇಶ ಅಸಹ್ಯ ಅನಿಸಿತು. ಆಧುನಿಕ ಮನೋಭಾವದಿಂದಾಗಿ ಸ್ತ್ರೀಪಾತ್ರ ಸ್ತ್ರೀಯರಿಂದಲೇ ಸಾಧ್ಯವೆಂಬ ತೀರ್ಮಾನಕ್ಕೆ ಬಂದರು. ಅಂದಿನ ಸಾಮಾಜಿಕ ಕಟ್ಟಳೆಗಳಲ್ಲಿ ಹುಡುಗಿಯರು ನಾಟಕದಲ್ಲಿ ಪಾತ್ರವಹಿಸುವುದನ್ನು ಊಹಿಸಿಲೂ ಸಾಧ್ಯವಿರಲಿಲ್ಲ. ಆದರೆ ಶ್ರೀರಂಗರು ನಿರಾಶರಾಗಲಿಲ್ಲ. ತಮ್ಮ ಚಾರಿತ್ರ್ಯಶುದ್ಧಿಯಿಂದ ಜನರ ವಿಶ್ವಾಸ ಪಡೆದು ಕೊಂಡರು. ತಮ್ಮ ಪ್ರಯತ್ನವನ್ನು ಅವರು ಹೀಗೆ ವಿವರಿಸಿದ್ದಾರೆ. ''ಮೊದಮೊದಲು ನನ್ನ ಹತ್ತಿರದ ಮಿತ್ರರೇ ನನ್ನನ್ನು ನಂಬುವವರಲ್ಲವೆ? ಅವರ ಅಕ್ಕ-ತಂಗಿಯರಿಗಾಗಿ ಬರೀ ಸ್ತ್ರೀ ಪಾತ್ರಗಳ ದೃಶ್ಯಗಳನ್ನು ಬರೆದು ಕೊನೆಗೊಂದು ದಿನ ಕಾಲೇಜಿನ ಹೊರಗಿನ ರಂಗಸ್ಥಳದಲ್ಲಿ ತಂದಲ್ಲಿ ಸ್ತ್ರೀ ಪಾತ್ರವನ್ನು ಸ್ತ್ರೀಯರೇ ವಹಿಸುವಂತೆ ಉತ್ತರ ಕರ್ನಾಟಕದಲ್ಲಿ ಯಶಸ್ವೀ ಪ್ರಯತ್ನ ಮಾಡಿದವರಲ್ಲಿ ನಾನೆ ಮೊದಲಿಗ ಎಂಬ ಹೆಮ್ಮೆಗಿಂತ ಅದನ್ನು ಶಕ್ಯ ಮಾಡಿದ ತಾಯ್ತಂದೆಯರಿಗೆ ನನ್ನ ಮಿತ್ರರಿಗೆ ಕೃತಜ್ಞತೆಯನ್ನು ಸಲ್ಲಿಸುವುದು ನನ್ನ ಮುಖ್ಯ ಕರ್ತವ್ಯವಾಗಿದೆ'' (ಲೇ: ಶ್ರೀರಂಗ: ಸಾಹಿತಿಯ ಆತ್ಮಜಿಜ್ಞಾಸೆ. ಉಷಾ ಸಾಹಿತ್ಯ ಮಾಲೆ ಮೈಸೂರು, ಪುಟ, ೨೨೫).

ಮಿತ್ರರು ಹಾಗೂ ಕುಟುಂಬದ ಪರಿಸರದಲ್ಲಿರುವವರ ಹೆಣ್ಣು ಮಕ್ಕಳೇ ಮೊದ ಮೊದಲು ರಂಗಭೂಮಿಗೆ ಬಂದರು. ತದ ನಂತರ ನಿಧಾನವಾಗಿ ಎಲ್ಲ ವರ್ಗದ ಹೆಣ್ಣು ಮಕ್ಕಳು ನಟಿಯರಾಗಲು ಮುಂದೆ ಬಂದರು. ೧೯೫೦ರ ನಂತರದ ದಿನಗಳಲ್ಲಿ ರಂಗಭೂಮಿಗೆ ಹೆಣ್ಣು ಮಕ್ಕಳನ್ನು ಕಳುಹಿಸಲು ಹಿಂಜರಿಯುತ್ತಿದ್ದ ನಟ ನಾಟಕಕಾರ ಎ.ಎಸ್.ಮೂರ್ತಿಯವರು ತಮ್ಮ ಪತ್ನಿಯನ್ನೇ ತಮ್ಮ ತಂಡದ ಪ್ರಧಾನ ನಟಿಯನ್ನಾಗಿಸಿ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿದರು.

ಕಣಬರಗಿಮಠ ಅವರಿಗೆ ತಮ್ಮ ನಾಟಕಗಳು ಆದಷ್ಟು ವಾಸ್ತವದ ಭ್ರಮೆ ಹುಟ್ಟಿಸಬೇಕು ಎಂಬುದರ ಕಡೆಗೆ ಆಸಕ್ತಿ ಇರುವುದು ಕಾಣುತ್ತದೆ. ಅವರೇ ಮೊಟ್ಟಮೊದಲಿಗೆ ಸ್ತ್ರೀ ಪಾತ್ರಗಳನ್ನು ಸ್ತ್ರೀಯರೇ ಹಾಕಿದರೆ ಉತ್ತಮ ಎಂದು ತಿಳಿದು ಎಲ್ಲುಬಾಯಿ ಗುಳೇದಗುಡ್ಡ ಎಂಬಾಕೆಯನ್ನು ತಮ್ಮ ಮಂಡಳಿಗೆ ಸೇರಿಸಿ ಕೊಂಡರು

(ಲೇ: ಪ್ರಕಾಶ ಎಸ್.ಗರೂಡ ವೃತ್ತಿ ರಂಗಭೂಮಿಯ ಸ್ವರೂಪ ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮, ಪುಟ, ೧೩೩).

ಈ ಸಮಯದಲ್ಲಿಯೇ ಬಚ್ಚಸಾನಿಯಂತಹ ಮುಸ್ಲಿಂ ಮಹಿಳೆ ಸ್ತ್ರೀಯರನ್ನೆಲ್ಲಾ ಒತ್ತಟ್ಟಿಗೆ ಕಲೆಹಾಕಿ ಸ್ತ್ರೀ ನಾಟಕ ಮಂಡಳಿಯೊಂದನ್ನು ಕಟ್ಟಿದ್ದು ಸಾಹಸವೇ (ಪುಟ, ೧೩೦). ಹೀಗೆ ಕಂಪನಿಗಳಲ್ಲಿ ನಟಿಯರನ್ನು ಸೇರಿಸಿಕೊಂಡರು.

ಮುಸ್ಲಿಂ ಧಾಳಿಯ ನಂತರವೇ ನಮ್ಮ ಕುಲೀನ ಸ್ತ್ರೀಯರಿಗೆ ನಾಟಕ ಪ್ರದರ್ಶನ ನಿಷಿದ್ಧವಾಯಿತು. ಸಾಂಪ್ರದಾಯಕವಾಗಿ ದೇವರ ದೊಡ್ಡವರ ಕತೆಯ ಮೂಲಕ ವ್ಯವಹಾರ ಜ್ಞಾನವನ್ನು ಒದಗಿಸುವ ಸಾಧನ ವಾದ್ದರಿಂದ ನಾಟಕವು ಸ್ತ್ರೀಯರಿಗೆ ಆಗಲಿ ಬೇರೆ ಯಾರಿಗೆ ಆಗಿರಲಿ ಪ್ರಸಿದ್ಧವಾಗಿರಲಿಲ್ಲ. ಅರಮನೆಯ ನಾಟ್ಯಶಾಲೆಯ ಪ್ರದರ್ಶನವನ್ನು ಅಂತಃಪುರದ ಸ್ತ್ರೀಯರು ಪ್ರತ್ಯೇಕವಾಗಿ ಕುಳಿತು ನೋಡುತ್ತಿದ್ದರು. ಮಧ್ಯಯುಗದಲ್ಲಿ ಮಾತ್ರ ಸ್ತ್ರೀ ಪ್ರೇಕ್ಷಕರನ್ನು ಮರೆಮಾಡುವಂತೆ ಅವರಿಗೆ ಪ್ರದರ್ಶನವು ಕಾಣಲು ಶಕ್ಯವಾಗುವಂತೆ ತೆಳ್ಳನೆಯ ಪರದೆಯನ್ನು ಇಳಿ ಬಿಡಲಾಗುತ್ತಿತ್ತು (ಲೇ: ಭಾರತೀಯ ರಂಗಭೂಮಿಯ ಪರಂಪರೆ, ಕನ್ನಡ ರಂಗಭೂಮಿಯ ಮೇಲೆ ಅದರ ಛಾಯೆ, ಪ್ರ: ಸಹ್ಯಾದ್ರಿ ಪ್ರಕಾಶನ ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಕವಿ ಶೈಲ, ಜಯಲಕ್ಷ್ಮಿಪುರಂ, ೧೯೮೬, ಪುಟ, ೨೦).

ಇಲ್ಲಿ ನಟಿಯರಿಗಾಗಲೀ ಸಾಮಾನ್ಯ ಮಹಿಳೆಯರಿಗಾಗಲೀ ಸಮಾಜದ ಕಟ್ಟುಪಾಡಿನಂತೆ ರಾಜಕೀಯ ಆಡಳಿತದ ಕಟ್ಟು ಪಾಡುಗಳು ಬಿಗಿತಗೊಂಡಿದ್ದವು. ನಾಟ್ಯ ಶಾಲೆಯ ಪ್ರದರ್ಶನವನ್ನು ಅಂತಃಪುರದ ಸ್ತ್ರೀಯರೇ ಪ್ರತ್ಯೇಕವಾಗಿ ಕುಳಿತು ಕೊಂಡು ನೋಡುವಾಗ ಇನ್ನು ಸಾಮಾನ್ಯ ಸ್ತ್ರೀ ಪ್ರೇಕ್ಷಕರನ್ನು ಯಾರೂ ಕೇಳಬೇಕು. ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಬರುವುದಕ್ಕಿಂತ ಪೂರ್ವದಲ್ಲಿ ಹಾಗೂ ಸ್ವತಂತ್ರ್ಯನಂತರ ಹಲವಾರು ಸ್ಥಿತ್ಯಂತರಗಳು ಉಂಟಾಗಿವೆ. ಈ ರೀತಿಯ ಸ್ವಲ್ಪ ಬದಲಾವಣೆ ಮುಂದಿನ ರಂಗಭೂಮಿಗೆ ಸ್ತ್ರೀಯರ ಪ್ರವೇಶಕ್ಕೆ ಒಂದು ದಾರಿಯನ್ನು ಪಡೆದು ಕೊಂಡಂತಾಯಿತು.

೧೯೪೫ ರವರೆಗೆ ಈ ಭಾಗದಲ್ಲಿ ಅಂದರೆ ಉತ್ತರ ಕರ್ನಾಟಕದಲ್ಲಿ ನಾಟಕ ಕಂಪನಿಗಳಲ್ಲಿ ಸ್ತ್ರೀಯರೇ ಇರಲಿಲ್ಲ. ಎಲ್ಲ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರು. ನಂತರ "ಗೋಹರ್ ಅಮೀರ್ ಕರ್ನಾಟಕ" ಮೊದಲ ಸ್ತ್ರೀ ಪಾತ್ರ ಮಾಡಿದರು. ನಂತರ ಬ್ಯಾಡಗಿ ಸಾವಿತ್ರ ಬಾಯಿ, ದೊಡ್ಡಮನಿ ಸೋನುಬಾಯಿ, ಗುಳೇದಗುಡ್ಡದ ಗಂಗೂಬಾಯಿ, ಚಕ್ಕಲಿ ರತ್ನಾಬಾಯಿ ಮುಂತಾದವರು. ನಟಿಯರು ರಂಗಮಂಚದ ಮೇಲೆ ನಿಂತು ಸೇವೆ ಸಲ್ಲಿಸಿದವರಿಗೆ ನಾಟಕ ಕಂಪನಿಗೆ ಸೇರಿ ಬಯಸುವ ಸ್ತ್ರೀ ಪಾತ್ರದವರಿಗೆ ಹತ್ತಾರು ಸಾವಿರ ರೂಪಾಯಿ ಕೊಡುವ ಶ್ರೀಮಂತರಿದ್ದರು (ಭಾರತೀಯ ರಂಗಭೂಮಿ ಪರಂಪರೆ, ಕ.ರ.ಭೂ. ಅಧ್ಯಾಯ ಲೇ: ಆದ್ಯಾರಂಗಾಚಾರ್ಯ ಸಹ್ಯಾದ್ರಿ ಪ್ರಕಾಶನ, ಪುಟ, ೧೩೬).

ರಾಜನಿಗಾಗಿ ಅಥವಾ ಶ್ರೀಮಂತರಿಗಾಗಲೀ ಮನಸ್ಸು ಬಂತೆಂದರೆ ಮುಗೀತು. ಒಬ್ಬ ವ್ಯಕ್ತಿ ಕವಿ, ಕಲಾವಿದ, ಸಂಗೀತಗಾರ, ನಟಿ ಏನೇ ಆಗಿದ್ದರು ಅವರನ್ನು ಸನ್ಮಾನಿಸಬೇಕು ಎಂದರೆ ತಮ್ಮೆಲ್ಲ ವಸ್ತುಗಳನ್ನಾಗಲೀ ತಮಗೆ ಏನೂ ತಿಳಿಯುತ್ತದೆಯೋ ಅದನ್ನು ದಾನವಾಗಿ ಕೊಟ್ಟು ಅವರನ್ನು ಉನ್ನತವಾದ ಸ್ಥಾನಕ್ಕೆ ಏರಿಸಿ ಬಿಡುತ್ತಿದ್ದರು. ಹಾಗೆಯೇ ಮೊದ ಮೊದಲು ರಂಗಭೂಮಿಗೆ ಪ್ರವೇಶ ಮಾಡಿ ನಟಿಯರನ್ನು ವಿಶೇಷವಾಗಿ ಗೌರವಿಸಿ, ಸನ್ಮಾನಿಸಿ, ಹತ್ತು-ಹನ್ನೆರಡು ಸಾವಿರಗಟ್ಟಲೆ ಹಣವನ್ನು ನೀಡುವಂಥಹ ಕಲಾ ಪೋಷಕರೂ ಕಲಾ ಆರಾಧಕರೂ ಕಲಾಭಿಮಾನಿಗಳು ಇರುತ್ತಿದ್ದರು. ಈ ಎಲ್ಲ ಆಸಕ್ತರಿಂದಲೇ ಇಂದು ರಂಗಭೂಮಿಯು ಉಚ್ಛ್ರಾಯ ಸ್ಥಿತಿಯಲ್ಲಿರುವುದು ಸಾಧ್ಯವಾಗಿದೆ.

೩.೧. ನಟನಾ ಸಾಮರ್ಥ್ಯ

ರಂಗದ ಮೇಲೆ ಎಲ್ಲಾ ಪ್ರೇಕ್ಷಕರನ್ನು ಮನಸೂರೆಗೊಂಡು ವೃತ್ತಿ ರಂಗ ನಟಿಯರು ಪ್ರತಿಯೊಂದು ಪಾತ್ರಕ್ಕೆ ಜೀವವನ್ನು ತುಂಬಿ ರಂಗವು ರಂಗೇರುವಂತೆ ಅಭಿನಯಿಸಿ ಪ್ರೇಕ್ಷಕರ ಮನಸ್ಸು ಗೆದ್ದು ಮುಗಿಲು ಮುಟ್ಟುವಂತೆ ಚಪ್ಪಾಳೆ ಗಿಟ್ಟಿಸುತ್ತಿದ್ದರು. ಕರ್ನಾಟಕದಲ್ಲಿ ರಂಗಭೂಮಿಯ ನಟಿಯರು ಯಾವುದೇ ಪಾತ್ರವನ್ನು ನೀಡಿದರೂ ಆ ಪಾತ್ರ ಸಂಪೂರ್ಣವಾಗಿ ತಾವೇ ಆಗಿ, ಚಿಕ್ಕ ಪಾತ್ರವಾದರೂ ಅದನ್ನು ಅಭಿನಯಿಸುತ್ತಿದ್ದರು. ಆದ್ದರಿಂದ ಅಂದಿನಿಂದಲೇ ಇವರೆಲ್ಲರೂ ರಂಗಭೂಮಿಯ ಕಣ್ಮಣಿಗಳಾಗಿ ಮೆರೆದರು. ನೀರಸವಾದ ಪಾತ್ರವು ಜೀವಂತ ಗೊಳ್ಳಬೇಕಾದರೆ ಅಲ್ಲಿ ರಂಗನಟಿಯು ತನ್ನ ಅಭಿನಯ, ಕೌಶಲ್ಯ, ತಂತ್ರಗಳಿಂದ ಇಡೀ ರಂಗಭೂಮಿಯಲ್ಲಿ ಆಕರ್ಷಕ ವ್ಯಕ್ತಿಯಾಗುವಂತೆ ನಟಿಯರು ಅಭಿನಯ ಚಾತುರ್ಯವನ್ನು ತಮ್ಮ ಸಾಮರ್ಥ್ಯದಿಂದ ತೋರ್ಪಡಿಸಿದ್ದಾರೆ. ಕೆಲವರಂತೂ ಇಂಥಹ ಪಾತ್ರಕ್ಕೆ ಅವರೇ ಆಗಬೇಕು, ಪ್ರೇಕ್ಷಕರು ಅದೇ ವ್ಯಕ್ತಿಯಾದರೆ ಮಾತ್ರ ನೋಡಲು ಹೋಗುತ್ತಾರೆ. ಇಲ್ಲದಿದ್ದರೆ ಅ ನಾಟಕಕ್ಕೆ ಮಹತ್ವವೇ ಇರುವುದಿಲ್ಲ. ಇಂಥವರು ಈ ಪಾತ್ರಕ್ಕೆ ಸರಿ ಎಂದು ತೀರ್ಮಾನಿಸಿ ಅದೇ ರೀತಿ ನಟಿಯರು ಕಲಾ ಸೇವೆಗೈದಿದ್ದಾರೆ.

ನಾಯಕಿಯರು : ಅರ್ಧ ಶತಮಾನದಷ್ಟು ಹಿಂದೆಯೇ ಅಶ್ವತಮ್ಮನವರ ಗ್ರಾಮಫೋನ್ ರೆಕಾರ್ಡ್ "ಹಾ ಪ್ರಿಯಾ ಪ್ರಶಾಂತ ಹೃದಯ" ಅತ್ಯಂತ ಜನಪ್ರಿಯವಾಗಿದ್ದಿತು. ಆ ಕಾಲದಲ್ಲಿ ಗಂಗೂಬಾಯಿ ಗುಳೇದಗುಡ್ಡ ಸಾಕಷ್ಟು ರಸಿಕರನ್ನು ಆಕರ್ಷಿಸಿದ್ದರು. ಅಂದಿನ ನಟಿಯರ ಸಾಮರ್ಥ್ಯ ಅಭಿನಯ ನೈಪುಣ್ಯ ದಲ್ಲಿದ್ದಿತು ಎಂಬುದನ್ನು ಗಮನಿಸಬೇಕು. ಇಂದು ಅಂಗ ಸೌಂದರ್ಯ ಅಂಕೆಯಿಲ್ಲದ ವಿಲಾಸ ನಟಿಯ ಮುಖ್ಯ ಗುಣವೆನಿಸಿದೆ. ಗುಬ್ಬಿ ಕಂಪನಿಯ ಬೆಳವಣಿಗೆಯಲ್ಲಿ ಸಾಕಷ್ಟು ಪಾತ್ರ ವಹಿಸಿದವರಾದ ಜಿ.ವಿ. ಸುಂದರಮ್ಮನವರು ಭಾವಾಭಿನಯದಲ್ಲಿ, ಸಂಭಾಷಣಾ ಚಾತುರ್ಯದಲ್ಲಿ ಪ್ರತಿಭೆ ಕಾಣಿಸಿದವರು. ಜಿ.ಜಯಮ್ಮನವರಂತೂ ಅಭಿನಯ ಸಂಗೀತದಲ್ಲಿ ಸಮಾನ ಚತುರರು. ಅವರ ರಾಣೀ ಪಾತ್ರವಾಗಲೀ, ಆಗಸಗಿತ್ತಿ ಪಾತ್ರವಾಗಲೀ ಜನಮನವನ್ನು ಆಕರ್ಷಿಸುತ್ತಿತ್ತು. ಮುಳವಳ್ಳಿ ಸುಂದರಮ್ಮನವರು ಸುಬ್ಬಯ್ಯ

ನಾಯ್ಡುರವರೊಡನೆ ಪ್ರಧಾನ ನಟಿಯಾಗಿದ್ದು, ದೇವುಡು ನರಸಿಂಹ ಶಾಸ್ತ್ರಿಗಳ ನೇತೃತ್ವದ ಪ್ರಥಮ ಚಲನ ಚಿತ್ರ ಚಿರಂಜೀವಿಯಲ್ಲೂ ಅಭಿನಯಿಸಿದರು. ಮಹಮ್ಮದ್‌ಪೀರರೊಡನೆ ನಾಯಕಿಯಾಗಿ ಹೆಸರು ಗಳಿಸಿದ ಎಂ.ವಿ.ರಾಜಮ್ಮನವರು ಚಿತ್ರರಂಗದಲ್ಲೂ ಗಮನಾರ್ಹ ನಟಿಯೆನಿಸಿದರು.

ಸಿನಿಮಾ ರಂಗದಲ್ಲಿ ಖ್ಯಾತಿಗಳಿಸಿದ ಪಂಡರೀಬಾಯಿಯವರು ಮತ್ತು ಅವರ ತಂಗಿ ಮೈನಾವತಿಯವರೂ ಸಹ ನಾಟಕರಂಗದವಲ್ಲಿದ್ದವರೆ. ಮಾಸ್ಟರ್ ಹಿರಣ್ಣಯ್ಯನವರ "ದೇವದಾಸಿ"ಯ ನಾಯಕಿ ಬಳ್ಳಾರಿ ಲಲಿತ ರಂಗದಲ್ಲಿ ಸುದೀರ್ಘ ಸೇವೆಸಲ್ಲಿಸಿದ್ದಾರೆ.

ಇಂದು ವೃತ್ತಿ ನಾಟಕ ಅವನತಿ ಅಂಚಿನಲ್ಲಿರುವಾಗ ಚಿಂದೋಡಿ ಲೀಲಾ ನಿಜವಾದ ಹೀರೋಯಿನ್ ಅನಿಸಿಕೊಂಡಿದ್ದಾರೆ. ಅಭಿನಯವಿಲ್ಲದೆ ಒಂದು ತಂಡದ ನೇತೃತ್ವ ವಹಿಸಿಕೊಂಡು ಅವರ "ಪೋಲೀಸನ ಮಗಳು" ನಾಟಕ ಪ್ರದರ್ಶನ ಸಂಖ್ಯೆಯಲ್ಲಿ ದಾಖಲೆಗಳನ್ನು ಸ್ಥಾಪಿಸುತ್ತಿದೆ.

ಅನೇಕ ತಂಡಗಳಲ್ಲಿ ನಾನಾ ಪಾತ್ರಗಳಲ್ಲಿ ಮೆರೆದಿದ್ದ ಆರ್.ನಾಗರತ್ನಮ್ಮನವರು ಹೊಸ ಹಾದಿ ಹಿಡಿದು ಯಶಸ್ಸು ಗಳಿಸಿದ್ದಾರೆ. ಗಂಡಸರು ಹೆಂಗಸಿನ ಪಾತ್ರ ಮಾಡುವುದು ಸಾಮಾನ್ಯ. ಆದರೆ ಈ ಧೀಮಂತ ಮಹಿಳೆ ಪುರುಷ ಪಾತ್ರಗಳನ್ನು, ಅದೂ ವೀರೋತ್ಸಾಹದ ರಾಕ್ಷಸ, ರೌದ್ರ ಪಾತ್ರಗಳನ್ನು ಅತ್ಯಂತ ಯಶಸ್ವಿಯಾಗಿ ಮಾಡಿಕೊಂಡು ಬಂದಿದ್ದಾರೆ. ಅಷ್ಟೇ ಅಲ್ಲದೆ ಇತರರನ್ನು ತಯಾರಿಸಿ ಸ್ತ್ರೀಯರದೇ ಆದ ನಾಟಕ ತಂಡವನ್ನು ಜಯಪ್ರದವಾಗಿ ನಡೆಸಿಕೊಂಡು ಬಂದಿದ್ದಾರೆ.

ಉತ್ತರ ಕರ್ನಾಟಕದಲ್ಲಿ ನಟಿಯರು ರಂಗಸಂಗೀತದಲ್ಲಿ ನಾಟಕವನ್ನು ಜನಪ್ರಿಯಗೊಳಿಸಿದರು. ಅಮೀರಬಾಯಿ ಕರ್ನಾಟಕ, ಮರಾಠೀ ರಂಗದಲ್ಲಿ ಬೆಳಗಿದರೆ, ಸೋನುಬಾಯಿ ದೊಡ್ಡಮನಿ, ಸುಭದ್ರಮ್ಮ ಮನ್ಸೂರ್ ಮುಂತಾದವರು ಹಿಂದುಸ್ಥಾನಿ ಶೈಲಿಯಲ್ಲಿ ರಂಗ ಸಂಗೀತ ಹಾಡಿ ಕನ್ನಡ ಜನಕ್ಕೆ ಮೋಡಿ ಮಾಡಿದವರು (ನಾಂದಿ, ಲೇ: ಎಂ.ಎಸ್.ನಾಗರಾಜ, ಜಯಪ್ರಕಾಶನ ಬೆಂಗಳೂರು, ಪುಟ, ೧೭).

ಹೀಗೆ ರಂಗಭೂಮಿಯು ಅಭಿನಯ ಹಾಗೂ ಸಂಗೀತದಿಂದ ಭಾರತದ ರಂಗಭೂಮಿಯ ಕೀರ್ತಿಯ ಶಿಖರವನ್ನೇ ಏರಿತು. ಆಗಿನ ವೃತ್ತಿರಂಗಭೂಮಿಯಲ್ಲಿ ಸಂಗೀತ ಬರುವ ನಟಿಯರನ್ನೇ ರಂಗಭೂಮಿಗೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈಗಿನ ರೀತಿಯಲ್ಲಿ ಆಗ ಹಿನ್ನೆಲೆ ಗಾಯನದ ವ್ಯವಸ್ಥೆಯು ಇರಲಿಲ್ಲ. ನಾಯಕಿ ಅಥವಾ ಪ್ರಧಾನ ನಟಿಯ ಪಾತ್ರಧಾರಿಯು ಇರಲಿಲ್ಲ. ನಾಯಕಿ ಅಥವಾ ಪ್ರಧಾನ ನಟಿಯ ಪಾತ್ರ ಧಾರಿಯು ಸಂಗೀತವನ್ನು ಅಗತ್ಯವಾಗಿ ಕಲಿತಿರಲೇಬೇಕು. ಸಂಗೀತ ಬರದೇ ಇರುವವರು ಆಗ ನಟಿಯರೇ ಇರಲಿಲ್ಲ. ರಾಜ ನರ್ತಕಿಯರೇ ಸಂಗೀತ ನಾಟ್ಯ ಎರಡರಲ್ಲೂ ಪರಿಣಿತರಿದ್ದರು. ಬರಬರುತ್ತ ಸಂಗೀತ ನೃತ್ಯದ ನರ್ತಕಿಯರೇ ರಂಗಭೂಮಿಗೆ ನಟಿಯರಾದರು ಎಂದು ಹೇಳಬಹುದು. ರಂಗಭೂಮಿಗೆ ಯಾರಾದರೂ ಪ್ರವೇಶ

ಮಾಡಬೇಕೆಂದರೆ ಆಗ ಕಂಪನಿಗಳಲ್ಲಿ ಸಂಗೀತ ಕಲಿತಿರುವಿರೋ? ಎಂದೇ ಪ್ರಶ್ನಿಸುತ್ತಿದ್ದರು. ಸಂಗೀತವೇ ಎಲ್ಲರ ಮನ ಪ್ರಸ್ತಾಪವಾಗಲು ಕಾರಣವಾಗಿದ್ದರಿಂದ ಹಿಂದೆ ಅಲ್ಲದೆ ಈಗಲೂ ಸಂಗೀತ ಪ್ರಧಾನ ನಾಟಕಗಳು ಸಂಗೀತ, ನೃತ್ಯ ಪ್ರವೀಣೆಯರೇ ಪ್ರಧಾನ ನಾಯಕಿ ಪಾತ್ರವನ್ನು ಮಾಡುತ್ತಿದ್ದರು.

ದಿನ ಕ್ರಮೇಣ ಸಂಘದ ನಟನಟಿಯರ ಬದಲಾವಣೆಯೂ ವಿಶೇಷವಾಗಿ ಏರ್ಪಟ್ಟು ಶ್ರೀಮತಿಗಳಾದ ಸುಂದರಮ್ಮ, ಪಾರ್ವತಮ್ಮ ಎಂಬ ಇಬ್ಬರು ತರುಣಿಯರ ಪ್ರಧಾನ ಸ್ತ್ರೀ ಪಾತ್ರವನ್ನು ವಹಿಸಲು ಆರಂಭಿಸಿದರು. ಸ್ತ್ರೀಯರೇ ಸ್ತ್ರೀ ಪಾತ್ರಗಳನ್ನು ಅಭಿನಯಿಸುತ್ತಿದ್ದ ಆ ಕಾಲದಲ್ಲಿ ವಿಶೇಷ ಆಶ್ಚರ್ಯ, ಸಂತೋಷವಾದ್ದರಿಂದ; ಆಗ ಗುಬ್ಬಿ ನಾಟಕಕ್ಕೆ ಕೀರ್ತಿಯೂ ಆದಾಯವೂ ಹೆಚ್ಚಾದವು. ಇದರಲ್ಲಿ ಪಾರ್ವತಮ್ಮನವರೂ, ಗಾನ, ಅಭಿನಯಗಳು ಉತ್ತಮ ರೀತಿಯಲ್ಲಿದ್ದುದು ಮಾತ್ರವಲ್ಲದೆ, ಈಕೆಯು ಜೈಮಿನಿ ಕುಮಾರವ್ಯಾಸನ ಭಾರತ ಮೊದಲಾದ ಕಾವ್ಯಗಳ ಪದ್ಯಗಳನ್ನು ರಂಗವಿನ್ಯಾಸಗಳಿಂದ ಬಹಳ ಚೆನ್ನಾಗಿ ಓದಬಲ್ಲ ಗಮಕ ಕಲಾವಿದಳಾಗಿದ್ದಳು. ಈ ಪಾರ್ವತಮ್ಮನ ಮಗಳಾದ ಶೇಷಮ್ಮ ಈಚೆಗೆ ಗುಬ್ಬಿ ನಾಟಕ ಸಂಘದಲ್ಲಿ ಪ್ರಧಾನ ಸ್ತ್ರೀ ಪಾತ್ರವನ್ನು ವಹಿಸುತ್ತಿದ್ದರು (ಕರ್ನಾಟಕ ರಂಗಭೂಮಿ. ಲೇ: ಕೆ.ವಿ.ಆಚಾರ್, ಪ್ರ. ಬಿ.ಎಂ.ಶ್ರೀಕಂಠಯ್ಯ ಅಚ್ಚುಕೂಟ, ಕ.ಸಾ.ಪ., ಬೆಂಗಳೂರು).

ಉತ್ತರ ಕರ್ನಾಟಕದದಲ್ಲಿ ಗಾನರತ್ನ ಗುಳೇದಗುಡ್ಡದ ಯಲ್ಲುಬಾಯಿ, ಗಂಗೂಬಾಯಿ, ಅಮೀರ್ ಜಾನ್ ಕರ್ನಾಟಕಿ, ಗೋಹರ್ ಜಾನ್ ಕರ್ನಾಟಕೆ, ಕಾಶೀಬಾಯಿ, ನಲತವಾಡ, ಬ್ಯಾಡಗಿ ಸುಮಿತ್ರಮ್ಮ ಶಿರಹಟ್ಟಿ ಇಮ್ಮಾಸಾಬಿ, ರಕ್ತರಾತ್ರಿ ನಾಟಕದ ಭಾನುಮತಿ ಪಾತ್ರದ ಕೆರೂರು ಶಾಂತಮ್ಮ, ಹೇಮರೆಡ್ಡಿ ಮಲ್ಲಮ್ಮ ನಾಟಕದ ಮಲ್ಲಿಕಾರ್ಜುನ ಪಾತ್ರದಲ್ಲಿ ಮುರಗೋಡ ರೇಣುಕಾ, ಜುಬೇದಾ ಸವಣೂರ, ಚಿಂದೋಡಿ ಲೀಲಾ, ಸುಶೀಲಾ ಬಸರೂರ, ಸೋಮಬಾಯಿ ದೊಡಮನಿ, ಲೀಲಾವತಿ ರಾಮದುರ್ಗ, ಸುಭದ್ರಮ್ಮ ಮನಸೂರ, ನ್ಯಾಮತಿ ಕಮಲವ್ವ, ಕುಂದಾಪುರ ಸುಮಿತ್ರಮ್ಮ, ಲಕ್ಷ್ಮಿಬಾಯಿ ಬಳ್ಳಾರಿ, ಎಸ್. ಪಂಡರಿಬಾಯಿ, ಸತ್ಯಭಾಮ, ಚಂಪಾಪುರಿ, ಹೀರಾಬಾಯಿ ಶಂಕರಗೌಡ, ರತ್ನ ಬ್ರಹ್ಮಾವರ, ಸುಶೀಲಾ ಕುಂದಾಪುರ, ಮಳವಳ್ಳಿ ಸುಂದರಮ್ಮ, ಅಶ್ವತಮ್ಮ ಮೈಸೂರಿನ, ಆರ್.ನಾಗರತ್ನಮ್ಮ ಮುಂತಾದ ಹಲವಾರು ರಂಗ ನಟಿಯರು ಇದೇ ಪಾತ್ರಕ್ಕೆ ಸೀಮಿತವಾಗಿ ತಮ್ಮ ಕಲಾ ನೈಪುಣ್ಯತೆಯಿಂದ ಅಭಿನಯ ಚಾತುರ್ಯವನ್ನು ಮೆರೆದು ರಂಗಭೂಮಿಯನ್ನು ಬೆಳಗಿದ ಕಲಾಸಿರಿಗಳಾಗಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ನಟಿಯರ ಪ್ರವೇಶ : ಬಳ್ಳಾರಿ ಜಿಲ್ಲೆಯಲ್ಲಿ ನಟಿಯರು ದೊಡ್ಡಾಟಗಳಲ್ಲಿ ಪಾತ್ರ ವಹಿಸುತ್ತಾರೆ. ಇದೊಂದು ವಿಶೇಷ ಅಂಶ. ಈ ನಟಿಯರೆಲ್ಲಾ ಗ್ರಾಮೀಣ ನೆಲೆಯಿಂದಲೇ ಬಂದವರಾಗಿರುತ್ತಾರೆ. ಅಂದರೆ ನಟಿಯರು ನಾಟಕ ಮಾಡುವುದಕ್ಕಿಂತ ಮುಂಚಿತವಾಗಿ ಅವರು ದೊಡ್ಡಾಟ(ಬಯಲಾಟ) ಗಳಲ್ಲಿ ಪಾತ್ರವನ್ನು ವಹಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ನಟಿಯರು ರಂಗಭೂಮಿಗೆ ಪ್ರವೇಶ ಮಾಡಿದ್ದರು.

ಆಗಿನ್ನು ಸಂಪೂರ್ಣವಾಗಿ ನಟಿಯರು ಲಭ್ಯವಾಗುತ್ತಿರಲಿಲ್ಲ. ಆದ್ದರಿಂದ ಪ್ರಧಾನ ನಾಯಕಿ ಪಾತ್ರವನ್ನು ಮಾತ್ರ ನಟಿಯು ಮಾಡುತ್ತಿದ್ದು, ಉಳಿದವುಗಳಂತೆ ಪುರುಷರೇ ಸ್ತ್ರೀಪಾತ್ರ ನಿರ್ವಹಿಸುತ್ತಿದ್ದರು. ನೋಡಲು ಸುಂದರ ತೆಳ್ಳಗೆ, ಬೆಳ್ಳಗೆ ಇದ್ದು ಇನ್ನು ಧ್ವನಿ ಒಡೆಯದ ಪುರಷರೇ ಹೆಚ್ಚಾಗಿ ಸ್ತ್ರೀಪಾತ್ರವನ್ನು ಮಾಡುತ್ತಿದ್ದರು.

ರಂಗ ತಾಲೀಮು ಹಾಗೂ ಗೆಜ್ಜೆಪೂಜೆ ನಾಟಕಗಳೇ ಹೆಚ್ಚಾಗಿದ್ದರಿಂದ ಒಂದು ತಿಂಗಳು ಹಾಗೂ ಹದಿನೈದು ದಿನಗಟ್ಟಲೇ ಪೆಟ್ಟಿಗಿ ಮಾಸ್ತರ ಪ್ರಾಕ್ಟೀಸ್ ಮಾಡಿಸುತ್ತಿದ್ದರು. ಹಿಮ್ಮೇಳದ ಸಂಪೂರ್ಣ ಹೊಣೆಗಾರಿಕೆಯನ್ನು ಹೊತ್ತ ಸಂಗೀತ ಮಾಸ್ತರರೇ ಇಡೀ ದೊಡ್ಡಾಟದ ಸೂತ್ರಧಾರಿಯಾಗಿರುತ್ತಿದ್ದರು. ನೃತ್ಯ ನಾಟಕಗಳಿಂದ ಬಂದ ಈ ನಾಟಕ ಪರಂಪರೆಯು ಸಂಗೀತ ಪ್ರಧಾನವೇ ಆದ್ದರಿಂದ ಸಂಗೀತ ಕಲಿತ ಸ್ತ್ರೀಯರೇ ಆಗ ರಂಗ ನಟಿಯರು. ಯಾವ ನಟಿಯು ಸಂಗೀತದಲ್ಲಿ ಪರಿಣಿತಿ ಪಡೆದಿರುತ್ತಾಳೋ ಆಕೆಯೇ ನಾಯಕಿ ಪಾತ್ರವನ್ನು ಮಾಡಿ ಹಿಮ್ಮೇಳದ ಜೊತೆಗೆ ಎಲ್ಲಾ ಗಾಯನವನ್ನು ಅಂದರೆ ಸ್ತ್ರೀ ಪಾತ್ರದ ಹಾಡುಗಳನ್ನು ಆಕೆಯೇ ಹಾಡು ತ್ತಾಳೆ. ಈ ತೆರನಾಗಿ ಸ್ತ್ರೀಯು ರಂಗಭೂಮಿಯಲ್ಲಿ ನಿಧಾನವಾಗಿ ಹೆಜ್ಜೆ ಹಾಕತೊಡಗಿದಳು. ನಿರ್ದಿಷ್ಟ ವರ್ಗ ದಿಂದ ಬಂದ ಈ ರಂಗನಟಿಯರು ಅದರಲ್ಲಿ ಹಲವಾರು ಉಪವರ್ಗಗಳು ಉಂಟಾಗಿ ರಂಗಭೂಮಿಯಲ್ಲಿ ಹವ್ಯಾಸಿ ಕಲಾವಿದ ರೊಂದಿಗೆ ಬೆರೆತು ಜೊತೆಗೆ ವೃತ್ತಿರಂಗ ಭೂಮಿಯಲ್ಲಿ ಅಪರಿಮಿತ ಸೇವೆಯನ್ನು ಸಲ್ಲಿಸಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಈ ರೀತಿ ದಿಟ್ಟತನದಲ್ಲಿ ತಮ್ಮ ಕಲಾಪ್ರೌಢಿಮೆಯ ಧೀಮಂತಿಕೆಯನ್ನು ಕಲಾ ನೈಪುಣ್ಯತೆಯನ್ನು ಪ್ರಪ್ರಥಮವಾಗಿ ಬಳ್ಳಾರಿ ಜಿಲ್ಲೆಯಲ್ಲಿ ತಮ್ಮ ಸೇವೆಯನ್ನು ರಂಗನಟಿಯರು ಸಲ್ಲಿಸಿದ್ದಾರೆ.

೧೯೦೧ ರಲ್ಲಿ ಬಳ್ಳಾರಿ ಲಕ್ಷ್ಮಮ್ಮ ರಂಗ ಪ್ರವೇಶ ಮಾಡಿದ್ದರೆಂಬ ದಾಖಲಾತಿ ನಮಗೆ ಸಿಗುತ್ತದೆ. ನಂತರ "೧೯೨೫ರ ಸುಮಾರಿಗಂತೂ ಬಳ್ಳಾರಿ ಪ್ರದೇಶದಲ್ಲಿ ಸ್ತ್ರೀಯರು ಬಯಲಾಟಕ್ಕೆ ಪಾತ್ರವಹಿಸಲು ಬರುತ್ತಿದ್ದರು.ಜೋಳದರಾಶಿ ದೊಡ್ಡನಗೌಡರು ತಮ್ಮ 'ಗರುಡ ಗರ್ವಭಂಗ' ನಾಟಕದ ಸತ್ಯಭಾಮೆಯ ಪಾತ್ರಕ್ಕೆ ಒಬ್ಬ ಬಯಲಾಟದ ನಟಿಯನ್ನು ಕರೆಸಿಕೊಂಡು ಅವಳಿಗೆ ನಾಟಕದ ಅಭಿನಯದ ತರಬೇತಿ ನೀಡಿದರು. ಅವಳ ಹೆಸರು ಲಕ್ಷ್ಮಿ ಅಧವಾನಿ.(ಅಂದರೆ ಬಳ್ಳಾರಿ ಜಿಲ್ಲೆಯಲ್ಲಿ ನಾಟಕಕ್ಕಿಂತ ಮೊದಲು ಬಯಲಾಟಕ್ಕೆ ನಟಿಯರ ಪ್ರವೇಶವಾಗಿದೆ (ಡಾ.ಜೋಳದರಾಶಿ ದೊಡ್ಡನಗೌಡ, ನಂದೇ ನಾನೋದಿದೆ, ರಾಮೇಶ ಪ್ರಕಾಶನ ಜೋಳದರಾಶಿ, ೧೯೯೧, ಪುಟ, ೩೫). ಹೀಗೆ ನಿಧಾನವಾಗಿ ಮಹಿಳೆಯರು ದೊಡ್ಡಾಟ ಬಯಲಾಟ ನಾಟಕ ಗಳಲ್ಲಿ ಪ್ರವೇಶ ಮಾಡಿದರು. ಜೊತೆಗೆ ಬಳ್ಳಾರಿ ಜಿಲ್ಲೆಯಲ್ಲಿ ಕಂಪನಿ ನಾಟಕಗಳಲ್ಲಿಯೂ ಬೇರೆ ಜಿಲ್ಲೆಗಳಲ್ಲಿ ಹೋಗಿ ಸೇರಿಕೊಂಡರು. ಅಲ್ಲದೇ ತಾವೇ ಸ್ವತಃ ಕಂಪನಿಯನ್ನು ಕಟ್ಟಿ ರಂಗಭೂಮಿಯ ಸೇವೆಯನ್ನು ಸಲ್ಲಿಸಿದ್ದಾರೆ.

ನಂತರದ ದಿನಗಳಲ್ಲಿ "ದೊಡ್ಡನಗೌಡರು ೧೯೭೨ ರ ಸುಮಾರಿಗೆ ತಮ್ಮ ಜಲಂಧರ, ಚವತಿ ಚಂದ್ರ ನಾಟಕಗಳಿಗೆ ನಾಯಕಿಯನ್ನು ಕಷ್ಟಪಟ್ಟು ಹುಡುಕಿದರು. ಕಂಪ್ಲಿಯ ಪಾರ್ವತಮ್ಮ ಆಗ ಅವರಿಗೆ ದೊರೆತ

ನಟಿ. ಅವಳೊಂದಿಗೆ ಹಲವಾರು ಪ್ರದರ್ಶನಗಳು ಬೇರೆ ಬೇರೆ ಊರುಗಳಲ್ಲಿ ನಡೆದವು (ನಂದೇ ನಾನೋದಿದೆ, ಲೇ: ಡಾ.ಜೋಳದರಾಶಿ ದೊಡ್ಡನಗೌಡ ರಾಮೇಶ ಪ್ರಕಾಶನ ಜೋಳದರಾಶಿ, ೧೯೭೯, ಪುಟ, ೫೫). ದೊಡ್ಡನ ಗೌಡರು ಸೇವೆ ಹಾಗೂ ಆಸಕ್ತಿಯಿಂದ ಹೊಸ ನಟಿಯರನ್ನು ಕ್ರಮೇಣವಾಗಿ ರಂಗಭೂಮಿಗೆ ಪರಿಚಯಿಸಿದರು. ಆಗ ರಂಗಭೂಮಿಯಲ್ಲಿ ಅಳುಕಿನಿಂದಲೇ ಮಹಿಳೆಯರು ಬಂದರು. ಕೆಲವು ಕಲಾ ಆರಾಧಕರು ಪ್ರೋತ್ಸಾಹ ದಿಂದಲೇ ಈ ನಟಿಯರು ರಂಗಭೂಮಿಯ ಮೆಟ್ಟಿಲೇರಿದರು.

"ಬಳ್ಳಾರಿ ರಾಘವರು ೧೯೨೮ರ ಸುಮಾರಿಗೆ ಯುರೋಪ್ ಪ್ರವಾಸ ಮಾಡಿ ಅಲ್ಲಿಯ ರಂಗಭೂಮಿಯ ಒಳ ಹೊರಗುಗಳನ್ನು ಆಳವಾಗಿ ಅಭ್ಯಸಿಸಿ ಬಂದರು. ಅಲ್ಲಿಂದ ಬಂದ ಮೇಲೆ ಅವರು ಹೇಳಿದ್ದು-ನಾಟಕಗಳಲ್ಲಿ ಸ್ತ್ರೀ ಪಾತ್ರ ಸ್ತ್ರೀಯರೇ ವಹಿಸಬೇಕು. ಇಲ್ಲದಿದ್ದರೆ ಅದು ಶೋಭಿಸಲಾರದು ನಟಿಯರಲ್ಲದೆ ನಾಟಕ ನಾಟಕವೇ ಅಲ್ಲ. ತಮ್ಮ ಈ ಅಭಿಪ್ರಾಯವನ್ನು ರಾಘವರು ಉಪನ್ಯಾಸಗಳ ಮೂಲಕ ಸಾರ್ವಜನಿಕರಿಗೆ ತಿಳಿಸಿದರು. ಅವರ ಅಭಿಪ್ರಾಯಕ್ಕೆ ಪ್ರೋತ್ಸಾಹ ಬರಲಿಲ್ಲ. ರಾಘವರು ನಿರಾಶರಾಗದೆ ತಮ್ಮ ನಾಟಕಗಳಲ್ಲಿ ಪಾತ್ರವಹಿಸಲು ಸ್ತ್ರೀಯರನ್ನು ಹುಡುಕುತ್ತಲೇ ಇದ್ದರು. ೧೯೩೦ ರ ಸುಮಾರಿಗೆ ಅವರ ಉದ್ದೇಶ ಈಡೇರಿತು. ಮೊದಲು ರಾಘವರೊಂದಿಗೆ ಸ್ಟೇಜಿಗೆ ಬಂದ ನಟಿ ಸರೋಜಿನಿದೇವಿ. ನಂತರ ಪದ್ಮಾದೇವಿ, ಅನ್ನಪೂರ್ಣಮ್ಮ, ಸವರದಾಬಾಯಿ ಇವರು ಪಾತ್ರವಹಿಸಿದರು (ನಾಟ್ಯ ಕಲಾಪೂರ್ಣ ಟಿ.ರಾಘವರು, ಜೋಳದರಾಶಿ ದೊಡ್ಡನ ಗೌಡ, ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು, ೧೯೭೨).

ಈ ಸಮಯದಲ್ಲಿ ಹೆಚ್ಚು ಹೆಚ್ಚು ನಟಿಯರ ಪ್ರವೇಶವಾಯಿತು. ವೃತ್ತಿರಂಗಭೂಮಿಯಲ್ಲಿ ನಟಿಯರು ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡರು. ಅಲ್ಲದೆ ನಮ್ಮ ಜಿಲ್ಲೆಯ ಪಕ್ಕದ ರಾಯಚೂರು, ಧಾರವಾಡ, ಚಿತ್ರದುರ್ಗ, ಗುಲ್ಬರ್ಗ, ಆಂಧ್ರಪ್ರದೇಶ ಈ ಎಲ್ಲಾ ಊರುಗಳಿಗೆ ಹೋಗಿ ಅಭಿನಯಿಸಿ ಖ್ಯಾತಿಯನ್ನೂ ಪಡೆದರು. ಈ ಪರಂಪರೆಯೇ ರಂಗಭೂಮಿಯಲ್ಲಿ ಹೆಚ್ಚು ಹೆಚ್ಚು ಬೆಳವಣಿಗೆಯನ್ನು ಕಂಡಿತು. ಇಂತಹ ದೊಂದು ಹೊಸ ಪರಂಪರೆ ಬಳ್ಳಾರಿ ಜಿಲ್ಲೆಯ 'ರಂಗ' ಚರಿತ್ರೆಯಲ್ಲಿರುವುದು ಹೆಗ್ಗಳಿಕೆಯ ವಿಷಯವಾಗಿದೆ.

ಮರಿಯಮ್ಮನಹಳ್ಳಿ ದಾದಮ್ಮನವರ ಸಂಜೀವಮ್ಮ, ಹನುಮಂತಮ್ಮ, ಬಳ್ಳಾರಿ ಸುಜಾತಮ್ಮ ಇವರೆಲ್ಲರೂ ಕಂಪನಿ ಕಟ್ಟಿ ಬಳ್ಳಾರಿ ಜಿಲ್ಲೆ ರಂಗಪರಂಪರೆಯನ್ನು ಸುಲಲಿತವಾಗಿ ಮುನ್ನಡೆಸಿದ ಸಾರ್ಥಕ ಮಹಿಳೆಯರೆನಿಸಿಕೊಂಡಿದ್ದಾರೆ. ನಂತರದ ದಿನಗಳಲ್ಲಿ ವೃತ್ತಿರಂಗಭೂಮಿಯಲ್ಲಿ ಹಲವಾರು ಹೊಸ ನಟಿಯರು ಸೇರ್ಪಡೆಯಾಗಿದ್ದಾರೆ.

ಬಳ್ಳಾರಿ ಲಲಿತಾ ಸಹೋದರಿಯರು ಮಾಸ್ಟರ್ ಹಿರಣ್ಣಯ್ಯರ ಕಂಪನಿಯನ್ನು ಸೇರಿದರು. ಲಲಿತಾ ಅವರ ಅಕ್ಕ ವೆಂಕಮ್ಮನು ಚಿಕ್ಕ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಅಂದರೆ ಇಲ್ಲಿ ಇಡೀ ಕುಟುಂಬವೇ ರಂಗಭೂಮಿ ಯಲ್ಲಿ ಒಂದಲ್ಲ ಒಂದು ರೀತಿಯಿಂದ ಸೇವೆಸಲ್ಲಿಸಿದ್ದಾರೆ. ಮಾಸ್ಟರ್ ಹಿರಣ್ಣಯ್ಯನವರ ತಾರಾ ಪತ್ನಿಯಾಗಿ

[illegible]

[illegible]

[illegible]

[illegible]

ಲಲಿತಮ್ಮ ಸೇವೆಯನ್ನು ಸಲ್ಲಿಸಿದ್ದು ಅಲ್ಲದೆ, ಇವರ ತಂಗಿ ರತ್ನಮಾಲ ಜೊತೆಗೆ 'ಹಿರಣ್ಣಯ್ಯ ಮಿತ್ರ ಮಂಡಳಿ' ಕಂಪನಿಗೆ ಖಾಯಂ ನಟಿಯಾಗಿ ಸೇರಿಕೊಂಡರು. ಲಲಿತಮ್ಮನವರ ವಿಶೇಷವೆಂದರೆ ಎಲ್ಲರೂ ರಂಗಭೂಮಿ ಯಿಂದ ಸಿನಿಮಾಗೆ ಸೇರಿಕೊಂಡರು. ಇವರು ಸಿನಿಮಾದಿಂದ ರಂಗಭೂಮಿಗೆ ಮರಳಿದರು. ಜಯಪ್ರದಾ, ಸುಭದ್ರ ಕಲ್ಯಾಣ, ಬಾಲನಾಗಮ್ಮ, ಸುಮತಿ, ಚಿತ್ರಗಳಿಗೆ ಆಯ್ಕೆಯಾಗಿ ಇಲ್ಲಿ ನಟಿಸಿ ನಂತರ ಹಿರಣ್ಣಯ್ಯ ಕಂಪನಿಗೆ ಸೇರ್ಪಡೆಯಾದರು. ೧೯೪೮ರಲ್ಲಿ ಕೊಯಮತ್ತೂರಿಗೆ ಹೋದ ಹಿರಣ್ಣಯ್ಯ ಲಲಿತಮ್ಮರು 'ವಾಣಿ' ಎಂಬ ಕನ್ನಡ ಸಿನಿಮಾ ತಯಾರಿಸಿದರು. ಮಲತಾಯಿಯ ನಾಟಕಕ್ಕೆ ಗುರಿಯಾಗಿ ಪರಿತಪಿಸುವ ಮುಗ್ಧ ಹೆಣ್ಣಿನ ಸುತ್ತ ಹೆಣೆದ ಈ ಚಿತ್ರದ ಕಥೆಯೂ ಹಿರಣ್ಣಯ್ಯನವರದೇ. ಗೋಪಾಲ್ ಮತ್ತು ಹಿರಣ್ಣಯ್ಯನವರು ನಿರ್ದೇಶಕ ರಾಗಿದ್ದಾರೆ. ಲಲಿತಮ್ಮ ನಾಯಕಿ ಹೆಸರಾಂತ ಪಿಟೀಲು ವಾದಕ ಚೌಡಯ್ಯನವರು ನಾಯಕ. ಚಂಬೈ ವೈದ್ಯನಾಥ ಭಾಗವತರ್, ಮುಸುರಿ ಕೃಷ್ಣಮೂರ್ತಿ, ಚಂದ್ರಮ ಮೊದಲಾದವರು ಪಾತ್ರ ಬಳಗದಲ್ಲಿದ್ದರು.

'ವಾಣಿ'ಯ ನಂತರ ಹಿರಣ್ಣಯ್ಯನವರು ನಾಟಕರಂಗಕ್ಕೆ ಮರಳಿ ಮಿತ್ರಮಂಡಳಿಯನ್ನು ಉತ್ಸಾಹದಿಂದ ಆರಂಭಿಸಿದರು. ಆಗ 'ದೇವದಾಸಿ' ಅವರ ಅತ್ಯಂತ ಯಶಸ್ವೀ ನಾಟಕವಾಯಿತು. ವೇಶ್ಯಾ ಸಮಸ್ಯೆಯನ್ನು ಕೇಂದ್ರವಾಗಿಟ್ಟುಕೊಂಡು ಹಿರಣ್ಣಯ್ಯನವರು ರಚಿಸಿದ ಈ ಸಾಮಾಜಿಕ ನಾಟಕ ಕನ್ನಡ ರಂಗಭೂಮಿಯ ಚರಿತ್ರೆಯಲ್ಲಿ ತನ್ನದೇ ಆದ ದಾಖಲೆ ಸ್ಥಾಪಿಸಿತು. ಲಲಿತಮ್ಮನವರ ಸ್ನಿಗ್ಧರೂಪ, ಲಾವಣ್ಯ, ನೃತ್ಯದ ಸೊಗಸು, ಇಂಪಾದ ಹಾಡುಗಾರಿಕೆ, ಭಾವಪೂರ್ಣ ಅಭಿನಯ ನಾಯಕಿ ಮಣಿಮಂಜರಿ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದವು. ಆ ಪಾತ್ರಕ್ಕೆ ಲಲಿತಮ್ಮನವರಂತೆ ಮುಂದೆ ಯಾರೂ ಜೀವವನ್ನು ತುಂಬಲಿಲ್ಲ ಎಂಬುದು ಅತಿಶಯೋಕ್ತಿಯಲ್ಲ. ಮುಂದೆ ೧೯೫೬ರಲ್ಲಿ ಅದಮ್ಯ ಕಲಾ ಚೈತನ್ಯ ಲಲಿತಮ್ಮನವರನ್ನು ಸುಮ್ಮನಿರಗೊಡಲಿಲ್ಲ. 'ಲಲಿತಕಲಾ ಸಂಘ ಬಳ್ಳಾರಿ' ಸ್ಥಾಪಿಸಿ ರಂಗಭೂಮಿ ಮಿನುಗು ತಾರೆ ಎನಿಸಿಕೊಂಡರು (ಲೇ: ಡಾ.ಬಸವರಾಜ ಮಲಶೆಟ್ಟಿ, ಸಿನಿಮಾ ಆಕರ್ಷಣೆಗೆ ಸೋಲದ ಬಳ್ಳಾರಿ ಲಲಿತಮ್ಮ, ಸುಧಾ, ಫೆಬ್ರವರಿ, ೨೦೦೧).

ನಾಡಿನ ಇತಿಹಾಸದ ಪ್ರತಿಗಳನ್ನು ತಿರುವಿ ಹಾಕುತ್ತ ಅವಲೋಕನ ಮಾಡಿದಾಗ ಹತ್ತು ಹಲವಾರು ಸ್ತರಗಳಲ್ಲಿ ಕಲಾವಿದರ ನಟನಾ ಸಾಮರ್ಥ್ಯವನ್ನು ಗುರುತಿಸಬಹುದು. ನಟನೆ, ಹಾವ-ಭಾವ ಸಂಗೀತ ಲಹರಿ ಹಾಗೂ ಆಕರ್ಷಕ ನಟನೆಯಿಂದ ಕಲಾವಿದರು ಮೆರೆದವರಾಗಿದ್ದಾರೆ. ರಂಗಭೂಮಿಯಿಂದ ಹೋದವರೇ ಸಿನಿಮಾ ಕ್ಷೇತ್ರದಲ್ಲಿ ಮಿನುಗು ತಾರೆಗಳಾಗಿದ್ದಾರೆ. ಒಬ್ಬ ಪಾತ್ರಧಾರಿಯು ತನ್ನ ಪಾತ್ರದಲ್ಲಿಯೇ ಅಭಿನಯಿಸಿದಾಗ ಅವರ ಪ್ರೌಢಿಮೆಯನ್ನು ಮೆರೆಸಿದ್ದಾರೆ. ಆಯಾ ಪಾತ್ರಧಾರಿಗಳು ಸಾಮರ್ಥ್ಯಕ್ಕೆ ತಕ್ಕಂತೆ ಅಭಿನಯಿಸಿ ಪಾತ್ರಕ್ಕೆ ಜೀವಂತಿಕೆಯನ್ನು ತರುತ್ತಾರೆ

೧. ಗಂಭೀರ ಪಾತ್ರ ನಾಯಕ : ಸೌಂದರ್ಯತೆ - ಲವಲವಿಕೆ

೨. ಖಳನಾಯಕ ಪಾತ್ರ - ದೇಹದಾರ್ಢ್ಯತೆ

೩. ಹಾಸ್ಯ ಪಾತ್ರ - ಕುರೂಪಿ

೪. ಪೋಷಕ ಪಾತ್ರ - ಯಜಮಾನಿಕೆಯ ವಯಸ್ಸು

ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಆಯಾ ಪಾತ್ರಗಳನ್ನು ನಿರ್ವಹಿಸಬೇಕು. ವೃತ್ತಿ ಧರ್ಮಕ್ಕೆ ತಕ್ಕಂತೆ ಅವರು ಕಾರ್ಯ ನಿರ್ವಹಿಸಬೇಕಾಗುತ್ತದೆ. ಅನಿವಾರ್ಯತೆಯಿಂದ ಬಾಳಕಟ್ಟಿದ್ದು. ಈ ಅನಿವಾರ್ಯತೆಯಿಂದಾಗಿ ತಮ್ಮೆಲ್ಲ ಆಸೆ ಆಕಾಂಕ್ಷೆಗಳನ್ನು ನೋವುಗಳನ್ನು ಬದಿಗೊತ್ತಿ ಮುಖಕ್ಕೆ ಬಣ್ಣ ಹಚ್ಚಿಕೊಂಡು ತಾವು ನಟಿಸುವ ಪಾತ್ರಕ್ಕೆ ಜೀವವನ್ನು ತುಂಬಿ ಪ್ರೇಕ್ಷಕರನ್ನು ರಂಜಿಸಬೇಕು ಇದು ಬಹುತೇಕ ಬೇಕೆಂದು ಕಳೆದ ಮೂವತ್ತು ವರ್ಷಗಳಿಂದಲೂ ಬಣ್ಣ ಹಚ್ಚಿಕೊಂಡು ವೃತ್ತಿ ರಂಗಭೂಮಿಯಲ್ಲಿ ತನ್ನ ಸಾರ್ಥಕ ಬದುಕನ್ನು ನೂಕುತ್ತಿರುವ ಕಲಾವಿದೆ ವಸುಂದರಮ್ಮ ಹೇಳಿದ ಮಾತು. ಇದು ಕೇವಲ ವಸುಂದರಮ್ಮನ ಒಡಲಾಳದ ಕೂಗಾಗಿದೆ. ಕೆಲವರು ಗಂಟೆಗಳಲ್ಲಿ ಏನೆಲ್ಲಾ ಆಗಿ ಏನೆಲ್ಲಾ ಮಾಡಿ ಪ್ರೇಕ್ಷಕರ ಮನರಂಜಿಸುವ ಕಲಾವಿದೆಯರ ಬಣ್ಣದ ಬದುಕಿನ ಪರದೆಯ ಹಿಂದಿನ ಬದುಕಿನ ನೇರವಾದ ಚಿತ್ರಣವನ್ನು ನೋಡಿ ಕೇಳಿ ಅನುಭವಿಸಬೇಕು. ಅಲ್ಲಿ ನೋವು ಇದೆ, ಛಲವಿದೆ. ಹತಾಶೆ ಇದೆ, ಜೊತೆಗೆ ಪ್ರೇಕ್ಷಕರನ್ನು ಸಂತೋಷ ಪಡಿಸಬೇಕೆಂಬ ವೃತ್ತಿ ನಿಷ್ಠೆ ಇದೆ ಆದರೆ ಬಲಮಾತ್ರವಿಲ್ಲದಾಗಿದೆ. ಈ ಸಂದರ್ಭದಲ್ಲಿ "ಬೆರೆತ ಜೀವ" ಚಲನ ಚಿತ್ರದ ಗೀತೆ ನೆನಪಿಗೆ ಬರುತ್ತದೆ.

ಅಂಕದ ಪರದೆ ಜಾರಿದ ಮೇಲೆ

ನಾಟಕವಿನ್ನೂ ಉಳಿದಿಹುದೇ

ವಹಿಸಿದ ಪಾತ್ರ ತೀರಿದ ಮೇಲೆ

ರಂಗವ ಬಿಡದೆ ನಿಲಲಹುದೇ

ಇಲ್ಲಿ ಈ ಗೀತೆಯ ಪ್ರಸ್ತುತತೆಯನ್ನು ನಾವು ತಿಳಿಯಬಹುದಾಗಿದೆ.

ಬಳ್ಳಾರಿ, ಮರಿಯಮ್ಮನಹಳ್ಳಿ, ಕೂಡ್ಲಿಗಿ, ವಿರುಪಾಪುರ ಹೊಸಪೇಟೆ ಈ ಭಾಗಗಳಲ್ಲಿಯೇ ಹೆಚ್ಚಾಗಿ ರಂಗನಟಿಯರು ಇದ್ದಾರೆ. ಅದರಲ್ಲೂ ನಾಯಕ ಜನಾಂಗದವರೇ ನಟಿಯರಾಗಿದ್ದಾರೆ. ಕಾರಣ ಈ ಜನಾಂಗದಲ್ಲಿ ದೇವದಾಸಿ ಪದ್ಧತಿಯು ಈಗಲೂ ರೂಢಿ ಇರುವುದರಿಂದ ಅಲ್ಲದೆ ಈ ವರ್ಗದವರು ಪುರುಷರ ಜೊತೆಗೆ ಸಹಜವಾಗಿ ಬೆರೆಯುವುದರಿಂದ ಹಾಗೂ ಸಮಾಜದಲ್ಲಿ ಇವರಿಗೆ ಮುಕ್ತವಾತಾವರಣ (ಸಮಾಜ ಒಪ್ಪಿಗೆಯನ್ನು ದೇವದಾಸಿ ಪದ್ಧತಿಗೆ ಒಳಪಟ್ಟಿರುವುದರಿಂದ) ವಿರುವುದರಿಂದ ಇದೇ ವರ್ಗದ ಜನರ ಆಸಕ್ತಿ, ಮಹಿಳೆಯರು ಸಮಾಜದಲ್ಲಿ ಕಲೆಗಾಗಿ ಅನನ್ಯತೆ ಪಡೆಯಲು ಈ ಎಲ್ಲಾ ಮಹಿಳೆಯರು 'ರಂಗ ಕಲಾವಿದೆಯ'ರಾಗಿಯೇ ವೃತ್ತಿಯನ್ನು ಸ್ವೀಕರಿಸಿದ್ದಾರೆ. ಕೆಲವರು ಮನೆಯ ಆರ್ಥಿಕ ಪರಿಸ್ಥಿತಿಯಲ್ಲಿ ಬಡತನವೆನಿಸಿ ಸುಧಾರಿಸಿಕೊಳ್ಳಲು ರಂಗಾಸಕ್ತಿಯನ್ನು ಇಂದಿಗೂ ಕಳೆದುಕೊಂಡಿಲ್ಲ.

ಇವರೆಲ್ಲರೂ ಅಲ್ಲದೆ ಮೈಸೂರು ಕಡೆಯಿಂದ ಬ್ರಾಹ್ಮಣ ಹೆಣ್ಣುಮಕ್ಕಳು ಹೊಟ್ಟೆಪಾಡಿಗಾಗಿ ಮರಿಯಮ್ಮನಹಳ್ಳಿ ಹಾಗೂ ಬಳ್ಳಾರಿಗೆ ಬಂದು ರಂಗನಟಿಯರಾಗಿ ಇಲ್ಲಿಯೇ 'ವಾಸ್ತವ್ಯ' ಹೂಡಿ ಜೀವನವನ್ನು ಸಾಗಿಸುತ್ತಿದ್ದಾರೆ. ಮರಿಯಮ್ಮನಹಳ್ಳಿಯಲ್ಲಿ 'ಅನುರಾಧ' ಎಂಬ ನಟಿ, ಬಳ್ಳಾರಿಯಲ್ಲಿ ಮಮತಾ, ಸುಧಾ ಈ ನಟಿಯರೇ ಉದಾಹಾರಣೆಯಾಗಿದ್ದಾರೆ. ಇಲ್ಲಿಯೇ ಪ್ರಾದೇಶಿಕ ನಟಿಯರೂ ಕೂಡ ಮೈಸೂರು ಹಾಗೂ ಬೇರೆ ಜಿಲ್ಲೆಗಳಲ್ಲಿ ಹೋಗಿ ರಂಗಭೂಮಿಯಲ್ಲಿ ಸೇವೆಸಲ್ಲಿಸಿದ್ದಾರೆ. ಅಂದರೆ ಇಲ್ಲಿರುವ ಕಟ್ಟಳೆಗಳು ನಿರ್ಬಂಧಗಳು ಅವರನ್ನು ಈ ರೀತಿ ಪ್ರೇರೇಪಿಸಲು ಕಾರಣವಾಗಿರಬಹುದು. ಒಟ್ಟಿನಲ್ಲಿ ಬಳ್ಳಾರಿ ಜಿಲ್ಲೆ ನಟಿಯರು ಈ ರೀತಿ ಪ್ರವೇಶಿಸಿರುವುದಲ್ಲದೆ ಬೇರೆ ಜಾತಿಯವರಾದ, ಐನೋರು, ಕುರುಬರು, ಲಿಂಗಾಯತರು, ಬ್ರಾಹ್ಮಣರು ಕೆಲವರು ಮದುವೆಯಾದವರು ಇನ್ನೂ ಮದುವೆಯಾಗದವರು ಅಥವಾ ರಂಗಭೂಮಿ ಕಲಾವಿದರನ್ನು ಮದುವೆಯಾಗಿ ಅವರೊಂದಿಗೆ ಇದ್ದು, ಜೊತೆಯಾಗಿಯೇ ರಂಗಭೂಮಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. (ರಂಗಭೂಮಿಯ ಪ್ರವೇಶಿಸಿದ ಎಲ್ಲಾ ನಟಿಯರ ಹೆಸರನ್ನು ಅನುಬಂಧದಲ್ಲಿ ಕೊಡಲಾಗಿದೆ)

೩.೨. ನೇಪಥ್ಯದಲ್ಲಿ ನಟಿಯರು

ನೇಪಥ್ಯದಲ್ಲಿ ರಂಗನಟಿಯರು ಒಂದೇ ಕುಟುಂಬದಲ್ಲಿರುವಂತೆ ಪರಸ್ಪರ ಹೊಂದಾಣಿಕೆ, ಸಹಕಾರ, ಸಹಬಾಳ್ವೆಯ ಮನೋಭಾವನೆಯನ್ನು ಹೊಂದಿರುತ್ತಾರೆ. ಒಬ್ಬರ ಹತ್ತಿರವಿರುವಂತಹ ವಸ್ತುಗಳನ್ನು ಇನ್ನೊಬ್ಬರು ಹತ್ತಿರದಿಂದ ತೆಗೆದುಕೊಳ್ಳುವಿಕೆಯನ್ನು ಚೆನ್ನಾಗಿ ಇಟ್ಟುಕೊಂಡಿರುತ್ತಾರೆ. ಹಾಗೆಯೇ ಪ್ರವೇಶಗಳಿಗೆ ತಕ್ಕಂತೆ ಪಾತ್ರಧಾರಿಗಳು ಒಬ್ಬರಿಗೊಬ್ಬರು ಸಹಕರಿಸಿಕೊಂಡು ಹೋಗುವುದು ವೇಷಗಳನ್ನು ಕೊಡುವುದು, ಚೆನ್ನಾಗಿ ಮೇಕಪ್ ಮಾಡುವುದು, ಪಾತ್ರದ ಅನ್ವಯವಾಗಿ ವಸ್ತ್ರಾಲಂಕಾರ ಶಿಸ್ತು ಸಂಯಮವನ್ನು ತೋರಿಸುವುದು, ಹಿರಿಯ ನಟಿಯರು ಕಿರಿಯರಿಗೆ ಈ ರೀತಿಯಲ್ಲಿ ಮಾರ್ಗದರ್ಶನವನ್ನು ನೀಡುತ್ತಾರೆ. ಯಾವ ಪಾತ್ರದಾರಿಗಳು ಹೇಗೆ ಇರಬೇಕು ಮತ್ತು ಅವರು ಪಾತ್ರ ನಿರ್ವಹಿಸುವ ರೀತಿ ರಿವಾಜು ಗತ್ತುಗಾರಿಕೆಯನ್ನು ವೇದಿಕೆ ಹಾವ ಭಾವ ವ್ಯಂಗ್ಯ ನಗು ಎಲ್ಲಾ ಪಾತ್ರಗಳನ್ವಯ ರೂಢಿಸಿಕೊಂಡಿರುವಿಕೆಯನ್ನು ಹಿರಿಯರು ಕಿರಿಯರಿಗೆ, ಕಿರಿಯರು ಹಿರಿಯರಿಗೆ ಪರಸ್ಪರ ಸಹಕರಿಸುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ರಂಗಭೂಮಿಯ ಹಿರಿಯಕ್ಕ ಎಂದೇ ಹೆಸರಾಗಿರುವ ಸುಭದ್ರಮ್ಮ ಮನ್ಸೂರ್‌ರವರನ್ನು ಪ್ರತಿಯೊಬ್ಬ ನಟಿಯರು ನೆನಪಿಸಿಕೊಳ್ಳುತ್ತಾರೆ. ಇವರ ಮಾರ್ಗದರ್ಶನ ಇಂದು ನಮಗೆ ದಾರಿದೀಪವಾಗಿದೆ ಎಂದು ಕೆ. ನಾಗರತ್ನಮ್ಮ ಹಾಗೂ ಪಿ.ಪದ್ಮ ನೆನಪಿಸಿಕೊಳ್ಳುತ್ತಾರೆ. ಇದಕ್ಕೆ ವಿರುದ್ಧವಾಗಿ ಕೆಲವು ಹಿರಿಯ ರಂಗನಟಿಯರು ಕಿರಿಯರನ್ನು ಶೋಷಿಸುವುದು ಕೀಳಾಗಿ ಕಾಣುವುದು ಒಬ್ಬರಿಗೊಬ್ಬರು ನೋಡಿ ವ್ಯಂಗ್ಯವಾಗಿ ನಗುವುದು, ಹೀಯಾಳಿಸುವುದು ಹೀಗೆ ಹತ್ತು ಹಲವಾರು ರೀತಿಯಲ್ಲಿ ಹಿಂಸೆ ಮಾಡುತ್ತಾರೆ. ಒಂದು ರೀತಿಯಲ್ಲಿ ರ್‍ಯಾಗಿಂಗ್ ಮಾಡುತ್ತಾರೆಂದರೂ ತಪ್ಪಿಲ್ಲ.

ಬದಲಾದ ಅಭಿರುಚಿ : ಒಂದು ಕಾಲದಲ್ಲಿ ರಂಗಭೂಮಿ ನಟಿಯರೆಂದರೆ ಅಪಾರವಾದ ಗೌರವ ಮರ್ಯಾದೆ ಇತ್ತು. ಆದರೆ ಇಂದು ನೋಡುವವರ ನೋಟದಲ್ಲಿ ಹೆಚ್ಚು ವ್ಯತ್ಯಾಸವಿದೆ. ಈಗಿನವರು ನಾಟಕವನ್ನು

ನೋಡುವುದಕ್ಕಿಂತ ಮೊದಲು ಕೇಳುವುದು ನಟಿಯರ ಬಗ್ಗೆಯೇ. ಹಾಗೆಯೇ ಅವರ ಅಂದ ಚೆಂದದ ಬಗ್ಗೆಯೇ ಹೆಚ್ಚು ಮಾತನಾಡುತ್ತಾರೆ. ನಟಿಯರಿಂದ ಅಶ್ಲೀಲತೆಯ ಸಂಭಾಷಣೆಯನ್ನು ಸಿನಿಮಾಶೈಲಿ ನೃತ್ಯವನ್ನು ಹಾವಭಾವವನ್ನು ನಿರೀಕ್ಷಿಸುತ್ತಾರೆ. ಹವ್ಯಾಸಿ ಕಲಾವಿದರು ಒಂದು ದಿನದ ಹಬ್ಬ ಜಾತ್ರೆಯ ಹೆಸರಿನಲ್ಲಿ ಈ ರೀತಿ ಆಕಾಂಕ್ಷೆ ಪಡುತ್ತಾರೆ. ಇದರ ಪರಿಣಾಮವೇ ರಂಗನಟಿಯರನ್ನು ನೋಡುಗರ ನೋಟದಲ್ಲಿಯೇ ಬದಲಾವಣೆಯಾಯಿತು. ಇದು ನಮ್ಮ ಪ್ರೇಕ್ಷಕರ ಬದಲಾದ ಅಭಿರುಚಿಯ ನೋಟವಾಯಿತು (ದ.ರಾ.ಪುರೋಹಿತ ಕಲಾದಗಿ, ನೋವೆ ತುಂಬಿರುವ ಕಲಾವಿದೆಯರ ಬದುಕು, ೬ ಜುಲೈ ೨೦೦೩, ಪ್ರಜಾವಾಣಿ).

ಅಧ್ಯಾಯ ೪

ರಂಗನಟಿಯರ ಬದುಕು

ಅಧ್ಯಾಯ ೪

ರಂಗನಟಿಯರ ಬದುಕು

೪.೧. ಪ್ರವೇಶಿಕೆ

ಮಾನವ ಸಾಮಾಜೀಕರಣಗೊಂಡ ಮೇಲೆ ಒಂದು ಅಸ್ತಿತ್ವವನ್ನು ಪಡೆಯುತ್ತಾ ಬರುತ್ತಾನೆ. ಜೀವಿಯ ಜನನದೊಂದಿಗೆ ನಾಗರಿಕತೆಯನ್ನು ಹೊಂದುತ್ತಲೇ ಬುದ್ಧಿಜೀವಿಯಾದಂತೆಲ್ಲಾ ಕುಟುಂಬ, ಮನೆ, ವ್ಯವಸಾಯ ಗಳನ್ನು ಕಂಡುಕೊಂಡು, ಇವುಗಳೊಂದಿಗೆ ಬೇಟೆ, ಭಾಷೆ, ವ್ಯಾಪಾರ, ವಿಜ್ಞಾನ, ಇತಿಹಾಸಗಳು ಕ್ರಮೇಣವಾಗಿ ಅನನ್ಯತೆಯನ್ನು ಪಡೆಯುತ್ತಾ ಬಂದವು. ಹೆಣ್ಣು ಗಂಡಿನ ಕರ್ತವ್ಯಗಳು ಕ್ರಮೇಣವಾಗಿ ಒಂದು ಹಂತವನ್ನು ತಲುಪಿದವು. ದೇಶ, ಭಾಷೆ, ರಾಜ್ಯಗಳು ವರ್ಗಗಳಾಗಿ ಮಾರ್ಪಟ್ಟು ವಿಶ್ವಪ್ರಜ್ಞೆ ಮೂಡುತ್ತಾ ಬಂದಿತು.

ನಮ್ಮ ಭಾರತೀಯ ಸಮಾಜದಲ್ಲಿ ಬದುಕು ಎನ್ನುವುದು ಹಲವಾರು ರೀತಿಯಲ್ಲಿ ಸ್ಥಿರೀಕರಣಗೊಂಡಿದೆ. ಶ್ರೇಣೀಕರಣದಿಂದ ಜಾತೀಯತೆ ಬೆಳೆದು ಬೃಹದಾಕಾರವಾಗಿ ಬೇರುಬಿಟ್ಟಿದೆ. ವೈದಿಕಶಾಹಿಯು ಇಡೀ ಭಾರತ ಸಮಾಜದ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಆವರಿಸಲ್ಪಟ್ಟಿತು. ಇದರಿಂದ ಅಸಮಾನತೆ ಪ್ರಾರಂಭಗೊಂಡು ಪುರುಷಶಾಹಿಗಳು ವ್ಯವಸ್ಥೆಯಲ್ಲಿ ನೆಲದ ಮಣ್ಣಿನ ಗುಣದಲ್ಲಿ ಬೆಳೆದುಬಿಟ್ಟಿತು. ಹೆಣ್ಣು ಗಂಡಿನ ನಡುವೆ ಅಡ್ಡಗೆರೆಯನ್ನು ಹಾಕಿ ಮನುಸ್ಮೃತಿಯ ಪ್ರಕಾರ ಹೆಣ್ಣನ್ನು ತುಚ್ಚವಾಗಿ, ಕೀಳಾಗಿ, ಅದೊಂದು ಪ್ರಾಣಿ ಎಂಬಂತೆ ಎಷ್ಟೋ ಶತಮಾನಗಳ ಕಾಲ ಬಲಿಪಶುಗಳಂತೆ ಪುರುಷ ಶಾಹಿಗಳು ಬಳಸಿಕೊಂಡು ಬಂದವು. ಕಾಲಾನುಕ್ರಮ ದಲ್ಲಿ ೧೨ನೇ ಶತಮಾನದಲ್ಲಿ ವಿಶ್ವ ಗುರು ಬಸವಣ್ಣ ಮಹಾನ್ ಮಾನವತಾವಾದಿಯಾಗಿ ಮೆರೆದು ಸಮಾಜದಲ್ಲಿ ವೈದಿಕತ್ವದ ವಿರುದ್ಧ ಪಡೆಯನ್ನು ಕಟ್ಟಿ ಬೆಳೆಸಿದರು. ಆದರೆ ವೈರುಧ್ಯದ ಜನತೆಯೊಂದು ಅದೊಂದು ಐತಿಹಾಸಿಕ ಘಟನೆಯಾಗಿ, ವೈಚಾರಿಕ ಯುಗವಾಗಿ ಇತಿಹಾಸದ ಪುಟಗಳನ್ನು ಸೇರಿತೇ ವಿನಃ ಅದು ಚಲಾವಣೆಯಲ್ಲಿ ಬರಲಿಲ್ಲ. ರಾಜ ಪ್ರಭುತ್ವ, ನಿರಂಕುಶ ಪ್ರಭುತ್ವ ಮೇಲೇರಿ ಬಂದು ಮತ್ತೆ ವೈದಿಕ ಪ್ರಭುತ್ವ ಜಾರಿಯಲ್ಲಿ ಬಂದಿತು.

ಜಾನಪದರು ವ್ಯವಸ್ಥೆಯಲ್ಲಿ ಒಂದು ಭಾಗ. ಅವರ ತ್ರಿಪದಿಗಳು ವ್ಯವಸ್ಥೆಗೆ ಪೂರಕವಾಗಿ ಕೆಲವು ಮಾರಕವಾಗಿ ಸಾಹಿತ್ಯವು ಹೊರಹೊಮ್ಮಿತು. ಆದರೆ ಪೂರಕ ಮಾರ್ಗಗಳೇ ಹೆಚ್ಚಾಗಿ, ಹೆಣ್ಣು, ಸತಿ

ಹೋಗುವುದು ಪ್ರಾರಂಭವಾಯಿತು. ಕಾಣಲಾರದ ಸ್ವರ್ಗವನ್ನು ಹೆಣ್ಣಿನ ವೈಭವಯುತವಾಗಿ ಪತಿಯ ಮರಣದಲ್ಲಿ ಈ ಸಮಾಜ ಕಾಣಿಸಲು ಪ್ರಾರಂಭಿಸಿತು. ನೀನು ಪತಿಯ ಜೊತೆ ಹೋದರೆ ಸ್ವರ್ಗಕ್ಕೆ ಹೋಗುತ್ತೀಯಾ, ಪತಿಯೇ ಪರದೈವ. ನೀನು ದೇವಿಯಾಗುತ್ತೀಯಾ, ಆದಿಶಕ್ತಿ ಎಂದೆಲ್ಲಾ ಹೊಗಳಿ ಹೊನ್ನಶೂಲಕ್ಕೆ ಏರಿಸಿ ಬಲಿ ಕೊಡುತ್ತಿದ್ದರು. ಇದಕ್ಕೆ ಹಲವಾರು ಜನಪದ ಖಂಡಕಾವ್ಯಗಳು ಇಂದಿಗೂ ಈ ವ್ಯವಸ್ಥೆಗೆ ಜ್ವಲಂತ ನಿದರ್ಶನವಾಗಿವೆ.

ಬುಡಕಟ್ಟುಗಳಲ್ಲಿ ಮಾತೃಪ್ರಧಾನ ವ್ಯವಸ್ಥೆ ಬಂದಿದ್ದರೂ ಅದು ಕೆಲವೊಂದು ಕಡೆ ಈಗಲೂ ಚಾಲ್ತಿಯಲ್ಲಿದೆ. ಆದರೆ ಪುರುಷಶಾಹಿಗಳು ಎಲ್ಲೆಲ್ಲೂ ಪಸರಿಸಿವೆ. ಇದು ಹೆಚ್ಚು ಪ್ರಚಲಿತದಲ್ಲಿ ಬಂದು ಅಸಮಾನತೆ ಬೇರೆ ಬಿಟ್ಟಿದೆ. ತ್ರಿಪದಿಗಳೂ ಕೂಡ ಪುರುಷನೆಲೆಯಲ್ಲಿಯೆ ಬೆಳೆದು ದರ್ಪ ದಬ್ಬಾಳಿಕೆಗಳಿಂದ ಭಾರತೀಯ ಸಮಾಜದ ಕುಟುಂಬಗಳೇ ಈ ನೆಲೆಯಲ್ಲಿ ಸ್ಥಿರೀಕರಣಗೊಂಡುಬಿಟ್ಟವು. ಇದೇ ರೀತಿಯಲ್ಲಿ ಸಮಾಜ, ಸಂಸ್ಕೃತಿಗಳು ಪುರುಷ ಪ್ರಧಾನವಾಗಿ ರೂಪುಗೊಂಡವು.

ಭಾರತದಲ್ಲಿ ವ್ಯಾಪಾರಕ್ಕಾಗಿ ಬಂದ "ಬ್ರಿಟೀಶ್ ಈಸ್ಟ್ ಇಂಡಿಯಾ ಕಂಪನಿ"ಯು ಬಂದು ವಸಾಹತುಶಾಹಿಯಾಗಿ ಬೆಳೆದು ಭಾರತೀಯ ಆಡಳಿತವನ್ನೇ ಸಂಪೂರ್ಣವಾಗಿ ಹೊಡೆದು ತಮ್ಮ ರಾಜಪ್ರಭುತ್ವವನ್ನು ಕಂಪನಿಯ ಮೂಲಕ ಗವರ್ನರ್‌ಗಳು ಆಡಳಿತ ನಡೆಸಿದರು. 'ಲಾರ್ಡ್‌ವಿಲಿಯಂ ಬೆಂಟಿಂಕ್' ಎಂಬ ಗವರ್ನರ್ ಆಡಳಿತದಲ್ಲಿದ್ದಾಗ ಸಮಾಜ ಸುಧಾರಕ, ಧರ್ಮಪ್ರವರ್ತಕ ರಾಜಾರಾಂ ಮೋಹನರಾಯ್ ಅವರು ಸತೀ ಪದ್ಧತಿ ಹಾಗೂ ಬಾಲ್ಯವಿವಾಹವನ್ನು ಸಂಪೂರ್ಣವಾಗಿ ಕಾನೂನಿನನ್ವಯ ಹೋಗಲಾಡಿಸಿದರು. ಅಂದಿನಿಂದ ಭಾರತೀಯ ಸಮುದಾಯದಲ್ಲಿ ಸಂಪೂರ್ಣವಾಗಿ ಈ ಅನೈತಿಕ, ಅಸಮಾನ ಪದ್ಧತಿಗಳು ಹೋಗಿ ಮಾನವೀಯತೆಯಿಂದ ಮಹಿಳೆ ವಿಧವೆಯಾಗಿ ಎಲ್ಲ ಜೀವಿಯಂತೆ ಆಕೆಯು ಬಾಳಲು ಅನುಕೂಲಮಾಡಿಕೊಟ್ಟರು. ಆದರೆ ಸಮಾಜದ ದೃಷ್ಟಿಯಿಂದ ಯಾವುದೇ ಧಾರ್ಮಿಕ, ವೈವಾಹಿಕ ಕಾರ್ಯ ನಡೆದರೆ ಅದಕ್ಕೆ ವಿಧವೆ ಬಹಿಷ್ಕೃತಳಾಗಿ ಬಾಳಬೇಕಾದ ಅನಿವಾರ್ಯತೆ ಸಹಜಸ್ಥಿತಿಯಾಯಿತು.

ಸ್ವಾತಂತ್ರ್ಯ ಬಂದ ನಂತರ ಮೊದಲಿದ್ದ ಪರದಾ ಪದ್ಧತಿ ಕಡಿಮೆಯಾಯಿತು. ಆದರೆ ಪಾಶ್ಚಾತ್ಯ ರಂಗಭೂಮಿಯ ಪ್ರಭಾವದಿಂದ ನಾಟಕ ಕಂಪನಿಗಳು ಹಾಗೂ ಮಂಡಳಿಗಳು ಹುಟ್ಟಿಕೊಂಡವು. ಇದಕ್ಕಿಂತ ಮುಂಚೆ ಜನಪದ ರಂಗಭೂಮಿಯಲ್ಲಿ ಮಹಿಳೆಯು ಮನೆಯ ಅಂಗಳದ ರಂಗದಲ್ಲಿಯೇ ಗಾಯಕಿ, ವಾದ್ಯಗಾರ್ತಿಯಾದಳು. ನಂತರದ ದಿನಗಳಲ್ಲಿ ಹಲವಾರು ಬದಲಾವಣೆಗಳಾದವು. ಒಂದು ಕಾಲದಲ್ಲಿ ನಾಟಕ ನೋಡುವುದಕ್ಕೆ ಹೋಗಿರುವ ಸ್ತ್ರೀಯನ್ನೇ ಮನೆಯಿಂದ ಹೊರಹಾಕಲಾಯಿತು. ಹಾಗೂ ನಾಟಕ ನೋಡಲು ಹೋಗಿರುವವಳನ್ನು ಗಂಡ ಬಿಟ್ಟಿರುವ ಜ್ವಲಂತ ನಿದರ್ಶನಗಳು ಹಲವಾರು ಇವೆ. ಇಂಥಹ ವೈರುಧ್ಯದ ನಡುವೆಯು ಮೊದ ಮೊದಲು ಸ್ತ್ರೀ ಪಾತ್ರವನ್ನು ಪುರುಷರೇ ಮಾಡುತ್ತಿದ್ದರು. ಕಾರಣವೆಂದರೆ ಸ್ತ್ರೀಯರು ರಂಗಭೂಮಿಗೆ

ಬಂದರೆ ಜಗಳವಾಗಿ ಬಿಡುತ್ತದೆ. ಎಲ್ಲರ ಮನದ ಕೇಂದ್ರ ಸ್ತ್ರೀಯಾಗಿ ಬಿಡುತ್ತಾಳೆ. ಆದ್ದರಿಂದ ಈ ಪುರುಷಶಾಹಿಗಳು ತಾವೇ ತಮ್ಮಲ್ಲಿಯೇ ಸ್ತ್ರೀ ಪಾತ್ರಕ್ಕೆ ಹೊಂದಿಕೆಯಾಗುವ ಪುರುಷರಿಗೆ ಸ್ತ್ರೀವೇಷ ಹಾಕಿಸಿ ಪಾತ್ರವನ್ನು ಮಾಡಿಸುತ್ತಿದ್ದರು. ನಯಸೇನನ ಧರ್ಮಾಮೃತದಲ್ಲಿ ಒಂದು ದಿನದ ಪಗರಣಕ್ಕೆ ಗಡ್ಡ ಮೀಸೆಯನ್ನು ಬೋಳಿಸಿಕೊಂಡು ಪುರುಷರೇ ಸ್ತ್ರೀಪಾತ್ರ ಮಾಡುತ್ತಿದ್ದರು.

ಪುರುಷಶಾಹಿಯೊಂದಿಗೆ ಸ್ತ್ರೀಯರ ಬದುಕಿನ ಆಯಾಮಗಳು ತುಂಬಾ ವಿಚಿತ್ರವಾದರೂ ಸತ್ಯಸಂಗತಿಯಾಗಿದೆ. ಎಷ್ಟೇ ಶತಮಾನ ಬಂದರೂ ನಮ್ಮ ದೇಶದಲ್ಲಿ ಜಾತೀಯತೆ ಹಾಗೂ ಪುರುಷಶಾಹಿಗಳಲ್ಲಿ ಬದಲಾವಣೆಯಾಗುವುದಿಲ್ಲವೆನಿಸುವುದು. ಪೈಶಾಚಿಕ ಗುಣವನ್ನು ಹೊಂದಿರುವ ಪುರುಷ ಕುಶಾಗ್ರಮತಿಗಳ ಜೊತೆಗೆ ಅದೆಷ್ಟು ಸ್ತ್ರೀಯರು ಗೋಳಿಟ್ಟು ಮರಣ ಹೊಂದಿದ್ದಾರೋ, ಅವು ಆತ್ಮಹತ್ಯೆ ಹಾಗೂ ನಿಗೂಢ ಸಾವಿನಲ್ಲಿಯೇ ಮಹಿಳೆ ಅಂತಿಮವನ್ನು ಕಂಡಿದ್ದಾಳೆ. ಸಂಶಯ ಅನುಮಾನದಿಂದ ಹೆಣ್ಣನ್ನು ಒಂದು ಪಶುವಿನಂತೆ ನೋಡಿಕೊಂಡು ಆಕೆಯನ್ನು ಕ್ರೂರವಾಗಿ ಬಳಸಿ ಅಸ್ತಿತ್ವವೇ ಇಲ್ಲದ ಜೀವಿಯಂತೆ ಕಾಣುವ ಪುರುಷಶಾಹಿಗಳು ಈ ಜಾಗತೀಕರಣದಲ್ಲಿಯೂ ಇದ್ದಾರೆ.

ಸಾರ್ವಜನಿಕವಾಗಿ ಮಹಿಳೆಯು ಎಂದೂ ವೇದಿಕೆಗಳನ್ನು ಏರಿಲ್ಲ. ಅದು ಧಾರ್ಮಿಕ ಹಾಗೂ ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಮಾತ್ರ. ಎಷ್ಟೋಜನ ರಾಜಪ್ರಭುತ್ವದ ಸ್ತ್ರೀಯರು ರಾಣಿಯರಾಗಿದ್ದು, ಹೋರಾಟಗಳನ್ನು ಮಾಡಿ ಸಾಮ್ರಾಜ್ಯವನ್ನು ಆಳಿದ್ದಾರೆ ನಿಜ. ಆದರೆ ಅದು ಕೆಲವೊಂದಿಬ್ಬರು ಮಾತ್ರ. ಸ್ವತಂತ್ರತೆ ಎನ್ನುವುದು ಸ್ತ್ರೀಯರಿಗೆ ಇನ್ನೂ ಕನಸಿನ ಮಾತೇ ಸರಿ. ಆದ್ದರಿಂದ ಗಾಂಧೀಜಿ ಹೇಳಿರುವುದು "ಎಂದು ನಮ್ಮ ದೇಶದಲ್ಲಿ ಮಹಿಳೆ ಮಧ್ಯರಾತ್ರಿ ನಿರ್ಭಿಡೆಯಿಂದ ಓಡಾಡುತ್ತಾಳೋ ಅಂದು ನಮಗೆ ಸ್ವಾತಂತ್ರ್ಯ ದೊರೆತ ಹಾಗೆ" ಎಂಬ ಮಾತು ಇಲ್ಲಿ ವೇದ್ಯವಾಗುತ್ತದೆ.

ರಾಜಪ್ರಭುತ್ವ ನಿರಂಕುಶತೆ ಎಲ್ಲಾ ಹೋಗಿ ಈ ಪ್ರಜಾಪ್ರಭುತ್ವ ಬಂದರೂ ಸಮಾಜದಲ್ಲಿ ಕುಟುಂಬದಲ್ಲಿ ಇನ್ನೂ ಅಸಮಾನತೆ ಹೋಗಿಲ್ಲ. ಕಾರಣ ಪುರುಷಶಾಹಿಗಳು ಬದಲಾವಣೆಯನ್ನು ಒಪ್ಪಲು ಅವರಿಗೆ ಆಗುತ್ತಿಲ್ಲ. ಒಂದು ಕಡೆ ಭಾರತೀಯ ಸಮಾಜದಲ್ಲಿ "ಮಾತೃದೇವೋಭವ" ಎನ್ನುತ್ತಾರೆ. ಇನ್ನೊಂದೆಡೆ ಮಾತೃ ರೂಪದ ಸ್ತ್ರೀಯರ ಮಾನವನ್ನು ಹಿಂಸಿಸುತ್ತಾರೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಕಾಲಿಟ್ಟರೂ ಕೂಡ ಸಮಾನತೆ ಎಂಬುದು ಬರೀ ವೇದಿಕೆ ಹಾಗೂ ಪುಸ್ತಕಗಳಿಗೆ ಮಾತ್ರ ಸೀಮಿತ. ಆದರೆ ವಾಸ್ತವವೇ ಬೇರೆಯಾಗಿದೆ.

ಇಂದಿಗೂ ಪ್ರತಿನಿತ್ಯ ಪತ್ರಿಕೆಗಳಲ್ಲಿ ನಾವು ಮಹಿಳೆಯರ ಆತ್ಮಹತ್ಯೆ, ಕೊಲೆ ಹೆಚ್ಚಾಗಿ ಸಂಸಾರಸ್ಥ ಯುವತಿಯರೇ ಇಂಥಹ ದುರಂತಕ್ಕೆ ಈಡಾಗಿರುತ್ತಾರೆ. ಇದಕ್ಕೆ ಒಂದು ರೀತಿಯ ಕಾರಣವನ್ನು ಕೊಡಲಾಗುವುದಿಲ್ಲ. ಹಲವು ರೀತಿಯಲ್ಲಿ ಮಹಿಳೆ ದೌರ್ಜನ್ಯಕ್ಕೆ ಒಳಗಾಗಿದ್ದಾಳೆ. ಈಗಲೂ ಮುಂದೆಯೂ ಶೋಷಣೆಗೆ ಒಳಗಾಗುತ್ತಾಳೆ ಎನ್ನುವುದು ಸರ್ವವಿಧಿತ. ಜೊತೆಗೆ ಭಾರತೀಯರಾದ ನಾವು ಹೇಳುವುದು ಪ್ರಕೃತಿಯನ್ನು ಒಳಗೊಂಡಿ

ರುವ ನದೀ, ಅರಣ್ಯ, ಕೆರೆ, ಗಿಡಮರಗಳನ್ನು ಮಾತೃ ಹಿನ್ನೆಲೆಯಲ್ಲಿ ಭೂಮಿ ಮಾತೃದೇವತೆ ಎಂದು ಪೂಜಿಸುತ್ತೇವೆ ನಿಜ. ಆದರೆ ದೈನಂದಿನ ಬದುಕಿನಲ್ಲಿ ಹೆಣ್ಣನ್ನು ಕಾಣುವ ರೀತಿಯನ್ನು ನೋಡಿದರೆ ಪುರುಷಶಾಹಿಗಳ ದಬ್ಬಾಳಿಕೆಗೆ ಕೊನೆ ಎಂದೋ ಪ್ರಶ್ನಿಸಿಕೊಳ್ಳಬೇಕಾಗಿದೆ. ಕೆಲವು ಪುರುಷರು ಸಮಾನತೆಯಲ್ಲಿಯೇ ಜೀವಿಸುತ್ತಿದ್ದಾರೆ, ಹಾಗೂ ಯೋಚಿಸುತ್ತಾರೆ ನಿಜ. ಆದರೆ ಅಂಥ ಪುಣ್ಯಾತ್ಮ ಮಹಾತ್ಮರ ಸಂಖ್ಯೆ ನಮ್ಮಲ್ಲಿ ಕಡಿಮೆ ಇದೆ. ಆದ್ದರಿಂದ ಅಂಥ ಸಮಾಜ ಅಂದರೆ ಸಮಾನತೆಯ ಸಮಾಜ ನಿರ್ಮಿತವಾದರೆ ಕೌಟುಂಬಿಕ ವಾತಾವರಣದಲ್ಲಿ ಸ್ತ್ರೀ ನೆಮ್ಮದಿಯ ಬದುಕನ್ನು ನಡೆಸಲು ಸಾಧ್ಯ.

ಇಂಥ ಜಿಡ್ಡುಗಟ್ಟಿದ ಸಂಪ್ರದಾಯವುಳ್ಳ ಪರಿಸರದಲ್ಲಿ ಸ್ತ್ರೀಯರು ರಂಗವನ್ನು ಪ್ರವೇಶಿಸಿರುವುದು ಒಂದು 'ಕ್ರಾಂತಿ' ಎಂದೇ ಹೇಳಬಹುದು. ಜನಪದ ರಂಗಭೂಮಿಯಿಂದಲೇ ಸ್ತ್ರೀ ಮೊದಲು ಪ್ರವೇಶ ಮಾಡಿದ್ದು. "ಮೂಡಲಪಾಯ ರಂಗಭೂಮಿ ಹವ್ಯಾಸಿ.ಕಲಾವಿದರಿಂದಲೇ ಹುಟ್ಟಿ ಬೆಳೆದು ಬದುಕಿರುವಂಥದೆಂಬುದು ಸರ್ವಸಾಮಾನ್ಯ ಗ್ರಹಿಕೆ." ಆದರೆ ಬಳ್ಳಾರಿ ಜಿಲ್ಲೆಯ ಕಪ್ಪಗಲ್ಲಿನ ಹರಿಜನರ ಗುಂಪಿನವರು ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದರೆಂದರೆ ಬಹಳ ಜನರಿಗೆ ಆಶ್ಚರ್ಯವೆನಿಸಬಹುದು. ಬರೀ ನಾಲ್ಕೈದು ಜನರಿಂದ ಈ ಕಂಪನಿ ನಡೆಯುತ್ತಿತ್ತಂತೆ. ವಿಚಿತ್ರವೆಂದರೆ ಹೆಣ್ಣು ಮಗಳೊಬ್ಬಳು "ಸೂತ್ರಧಾರ"ಳಾಗಿದ್ದಳು. ಇವರು ಬಳ್ಳಾರಿ ಜಿಲ್ಲೆಯ ಹೊರಗೂ ಹೋಗಿ ಆಟವಾಡಿ ಬಂದುದುಂಟು. ಈಗ ಈ ಕಂಪನಿ ನಾಮಾವಶೇಷವಾಗಿದೆ. ಈ ಕಂಪನಿಯವರು ೧೯೪೦ರ ಸುಮಾರಿಗೆ ಚಿಗಟೇರಿಯಲ್ಲಿ ಪ್ರಯೋಗಿಸಿದ 'ಕುಮಾರರಾಮ' ಆಟವನ್ನು ಸ್ವತಃ ನೋಡಿರುವುದಾಗಿ ಶ್ರೀಶಾಂತ ವೀರಪ್ಪನವರು (ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ತವಾಡ್ಗಿ, ಹೊಸಪೇಟೆ) ಹೇಳುತ್ತಾರೆ. ಹಿಂದೊಮ್ಮೆ ಈ ಕಂಪನಿ ಹಾನಗಲ್ಲಿಗೆ ಬಂದು ಆಟವಾಡಿತ್ತೆಂದೂ, ಆ ಸ್ತ್ರೀ ಸೂತ್ರಧಾರಿಣಿಯ ಹೆಸರು 'ನರಸೂಬಾಯಿ' ಎಂದೂ ಹಾನಗಲ್ಲಿನ ಬಯಲಾಟದ ಸೂತ್ರಧಾರ ಶ್ರೀಕರೆಪ್ಪನವರು ಹೇಳುತ್ತಾರೆ" (ಲೇ: ಬಸವರಾಜ ಮಲಶೆಟ್ಟಿ "ಉತ್ತರ ಕರ್ನಾಟಕದ ಬಯಲಾಟಗಳು" ಪುಟ, ೮೯). ಹೀಗೆ ಬಯಲಾಟಗಳಲ್ಲಿ ಸ್ತ್ರೀಯರು ಪಾತ್ರವನ್ನು ಮಾಡುತ್ತಿದ್ದರು.

"ಸಂಪ್ರದಾಯಬದ್ಧ ಸಮಾಜದ ಜನ ಸ್ತ್ರೀಯರು ನಾಟಕಗಳಲ್ಲಿ ಪಾತ್ರವಹಿಸುವುದನ್ನು ಕೈಮಾಡಿ ತೋರಿಸಿ ಅದು ಸ್ತ್ರೀಯರ ಸ್ಥಾನಮಾನಗಳಿಗೆ, ಶೀಲಕ್ಕೆ ಭಂಗತರುವ ವೃತ್ತಿ ಎಂಬ ಅಭಿಪ್ರಾಯ ಹೊಂದಿದ್ದರು. ಅನೇಕ ನಾಟಕ ಕಂಪನಿಗಳಲ್ಲಿ ಸ್ತ್ರೀಯರು ಪಾತ್ರ ವಹಿಸುತ್ತಿರಲಿಲ್ಲ. ಪ್ರಥಮವಾಗಿ ಕೌಜಲಗಿ ನಿಂಗಮ್ಮ ನಾಟಕಗಳಲ್ಲಿ ಪಾತ್ರಮಾಡಿ ಒಂದು ಕಂಪನಿಯನ್ನೇ ಕಟ್ಟಿ ಬೆಳೆಸಿದರು. ನಂತರ ವೃತ್ತಿರಂಗಭೂಮಿಯಲ್ಲಿ ಶಿವಮೂರ್ತಿಸ್ವಾಮಿ ಕಣಬರಗಿಮಠ ಅವರ ಕೊಣ್ಣೂರು ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿಯಲ್ಲಿ ಯಲ್ಲವ್ವ ಎಂಬ ಗಾಯಕಿ ಪಾತ್ರ ವಹಿಸುತ್ತಿದ್ದು, ೧೯೨೧ ರ ಹೊತ್ತಿಗೆ ಆಕೆ ವಿಶ್ವಗುಣಾದರ್ಶ ನಾಟಕ ಮಂಡಳಿಯ ಸಂದೇಹ ಸಾಮ್ರಾಜ್ಯದಲ್ಲಿ ಪೂರ್ಣಿಮಾ, ಪಾರ್ವತೀ ಸತ್ವಪರೀಕ್ಷೆಯಲ್ಲಿ ಪಾರ್ವತಿಯ ತಾಯಿ ಮೊದಲಾದ ಸ್ತ್ರೀ

ಪಾತ್ರಗಳನ್ನು ವಹಿಸುತ್ತಿದ್ದರು. ಈಕೆಯ ಪೂರ್ಣ ಹೆಸರು ಎಲ್ಲಬಾಯಿ ದೇವದಾಸ್. ಈಕೆಯ ಮಗಳೇ ಪ್ರಸಿದ್ಧ ನಟಿ ಗಂಗೂಬಾಯಿ ಗುಳೇದಗುಡ್ಡ.

ಕರ್ನಾಟಕ ವೃತ್ತಿ ರಂಗಭೂಮಿಯ ನಟಿಯರಲ್ಲಿ ಮೊದಲು ರಂಗದ ಮೇಲೆ ಬಂದವರು ಯಾರು ಎಂಬ ಬಗ್ಗೆ ಹೇಳಿಕೆಗಳು ಭಿನ್ನವಾಗಿವೆ. ಪಂಡಿತ ಸಿ.ವೈ. ಕವಲಿಯವರ ಹಸ್ತಪ್ರತಿಯ ಆಧಾರದ ಮೇಲೆ, ಶಿವಮೂರ್ತಿ ಸ್ವಾಮಿಗಳ ಕೊಣ್ಣೂರ್‌ಕರ್ ನಾಟಕ ಮಂಡಲಿಯನ್ನು ೧೮೮೯ ರಲ್ಲಿ ಸೇರಿದ ಯಲ್ಲಪ್ಪನೇ ಉತ್ತರ ಕರ್ನಾಟಕ ರಂಗಭೂಮಿಯ ಪ್ರಥಮ ನಟ ಎಂದು ಎಚ್.ಕೆ.ರಂಗನಾಥ್ ತಿಳಿಸುತ್ತಾರೆ (ಲೇ. ಎಚ್.ಕೆ.ರಾಮನಾಥ, ಕರ್ನಾಟಕ ವೃತ್ತಿರಂಗಭೂಮಿ ಪುಟ, ೧೪೫).

ಈ ಜಿದ್ದು ಸಂಪ್ರದಾಯದಲ್ಲಿಯೇ ಸ್ತ್ರೀಯರು ರಂಗಪ್ರವೇಶಿಸಿದ ಬಗೆ

ಇಡೀ ಉತ್ತರ ಕರ್ನಾಟಕದಲ್ಲೆಲ್ಲಾ ಎಷ್ಟೋ ಜನ ದಿಟ್ಟ ಮಹಿಳೆಯರು ಯಾವ ಅಂಜಿಕೆ ಇಲ್ಲದೆ ಧೈರ್ಯದಿಂದಲೇ ರಂಗಭೂಮಿಗೆ ಕಾಲಿಟ್ಟಿದ್ದಾರೆ.

"ಶಿವಮೂರ್ತಿ ಸ್ವಾಮಿಗಳು ಬರೆದಿಟ್ಟ ದಿನಚರಿಗಳಿಂದ ಹಾಗೂ ಕಲಾವಿದರ ರಂಗಸ್ಮೃತಿಗಳನ್ನು ಆಧರಿಸಿ ಹೇಳುವುದಾದರೆ ೧೯೧೦ರ ವರೆಗಿನ ಅವಧಿಯು ಮಂಡಳಿಯ ಬೆಳವಣಿಗೆಯ ಘಟ್ಟವಾಗಿದೆ. 'ಸ್ತ್ರೀಯರಿಂದಲೇ ಸ್ತ್ರೀ ಪಾತ್ರಗಳ ಅಭಿನಯ' ಸುಸಜ್ಜಿತ ರಂಗಸಲಕರಣೆ, ಸಂಗೀತ, ಅಭಿನಯದ ತರಬೇತಿಯಿಂದ ಪರಿಣತ ಕಲಾವಿದರ ನಿರ್ಮಾಣ, ಸ್ವತಂತ್ರ ನಾಟಕ ರಚನೆ ಈ ಅವಧಿಯ ಸಾಧನೆಗಳು. 'ರಾಜಾ ಹರಿಶ್ಚಂದ್ರ, ವಿರಾಟ ಪರ್ವ, ಚಂದ್ರಹಾಸ, ಮದನ ಮೋಹನ' ಪ್ರಾರಂಭ ವರ್ಷದ ನಾಟಕಗಳಾಗಿದ್ದವು. ಬಸವಪ್ಪ ಬಳ್ಳಾರಿ, ಗೋವಿಂದ ದಾಬಡೆ, ಗುರುಲಿಂಗಪ್ಪ ಗೊಂಬಿ, ರಾಚಯ್ಯ ಬೆಳವಿ-ಇವರ ಭಾವಪೂರ್ಣ ಅಭಿನಯಗಳಿಂದ ನಾಟಕಗಳು ಜಯಭೇರಿ ಸಾಧಿಸಿದವು.

ಸ್ವಾಮಿಗಳು ಒಮ್ಮೆ ಕೌಜಲಗಿ ನಿಂಗವ್ವನ 'ಪಾರಿಜಾತ' ನೋಡಿ ಸ್ತ್ರೀ ಪಾತ್ರಗಳ ನಯ, ನಾಜೂಕಿನ ಹಾವ ಭಾವಗಳಿಗೆ ಸಹಜತೆ ಬರಬೇಕಾದರೆ ಸ್ತ್ರೀಯರೇಬೇಕು ಎಂದು ತೀರ್ಮಾನಿಸಿ ಕಂಪನಿಯಲ್ಲಿ ಪ್ರಸ್ತಾಪ ಮಾಡಿದರು. ಸ್ತ್ರೀ ಪಾತ್ರದ ಕಲಾವಿದರು ತಮ್ಮ ಮಹತ್ವ ಕಡಿಮೆಯಾಗಬಹುದೆಂದರು. ಅನೈತಿಕತೆ ತಲೆದೋರಬಹುದೆಂದರು. ಆದರೆ, ಶಿಸ್ತಿಗೆ ಹೆಸರಾಗಿದ್ದ ಸ್ವಾಮಿಗಳು ಪರಿಸ್ಥಿತಿ ಹೇಗೆ ನಿಭಾಯಿಸಬೇಕೆಂದು ಲೆಕ್ಕ ಹಾಕಿ ಸ್ತ್ರೀ ಕಲಾವಿದೆಯರನ್ನು ಕರೆತರಲು ನಿರ್ಧರಿಸಿದರು. ಅಮ್ಮಿಣಗಿಯ ಶಿವಲಿಂಗಯ್ಯ ಹಿರೇಮಠರ ಸೂಚನೆಯಂತೆ ಮ್ಯಾನೇಜರ್ ಗುರುಸಿದ್ದಯ್ಯ ಕಲಾವಿದ ಬಳ್ಳಾರಿ ಬಸಪ್ಪನನ್ನು ಕಳುಹಿಸಿ ಬಳ್ಳಾರಿಯಿಂದ ಲಕ್ಷ್ಮವ್ವ ಎಂಬ ಕಲಾವಿದೆಯನ್ನು ಕರೆಸಿದರು. ಲಕ್ಷ್ಮಾಸಾನಿಯ ಪ್ರವೇಶದಿಂದ ಕನ್ನಡ ವೃತ್ತಿರಂಗಭೂಮಿಯ ಬಾಗಿಲು ಸ್ತ್ರೀಯರಿಗಾಗಿ ತೆರೆದುಕೊಂಡಿತು. ಅಂದಿನ ಕಾಲದಲ್ಲಿ ಕೊಣ್ಣೂರು ಕಂಪನಿಯ ಈ ಸಾಧನೆ

ಕ್ರಾಂತಿಕಾರಕ ಬದಲಾವಣೆಯೇ ಸರಿ. ಸ್ಥೂಲ ಮೈಕಟ್ಟಿನಿಂದ ಇವಳ ಪಾತ್ರ ಜನರಿಗೆ ಹಿಡಿಸಲಿಲ್ಲ. ಚಿಲ್ಲರೆ ಪಾತ್ರಗಳಿಗಾಗಿ ಅವಳನ್ನು ಇಟ್ಟುಕೊಂಡು ಬೇರೊಬ್ಬ ನಟಿಯ ಹುಡುಕಾಟದಲ್ಲಿದ್ದಾಗ ಗುರುಲಿಂಗಪ್ಪ ಗೊಂಬಿ ಈತನ ನೆರವಿನಿಂದ ಎಲ್ಲೂಬಾಯಿ ಗುಳೇದಗುಡ್ಡ ದೊರೆತಳು. ಮಧುರ ಕಂಠ, ಮೋಹಕ ಮೈಮಾಟ, ಅಸ್ಖಲಿತವಾಗಿ ರಂಗಕ್ಕೆ ಬೇಕಾದ ದೈನ್ಯ ಜೊತೆಗೆ ತಾರುಣ್ಯದ ಲವಲವಿಕೆಯಿಂದ ಎಲ್ಲವ್ವ ಕಂಪನಿಯ ಜನಪ್ರಿಯ ನಟಿಯಾಗಿ ಬೆಳೆದಳು. ಈಕೆಯಿಂದ ಸ್ತ್ರೀ-ಪುರುಷ ಪಾತ್ರಗಳೆರಡೂ ಪ್ರಭಾವ ಪೂರ್ಣವಾಗಿ ನಿರ್ವಹಿಸಲ್ಪಡು ತ್ತಿದ್ದವು. 'ಬಸವೇಶ್ವರ ನಾಟಕ'ದಲ್ಲಿ ಮೊದಲಿಗೆ ಮೊದಲಾಂಬಿಕೆಯಾಗಿ ನಟನೆ, ಮುಂದೆ ಬಿಜ್ಜಳನ ಪುರುಷ ಪಾತ್ರದಲ್ಲಿ ಕಾಣುತ್ತಿದ್ದ ಈಕೆ ಮಾದಲಾಂಬಿಕೆ ಯಲ್ಲಿ ಕುಲೀನ ಹೆಣ್ಣಾಗಿ ಮುಂದೆ ಹೆಣ್ಣೆಂಬ ಅಂಶವನ್ನು ಎನಿತೂ ತೋರದಂತೆ ಪುರುಷ ಪಾತ್ರದಲ್ಲಿ ಅಭಿನಯಿಸುತ್ತಿದ್ದಳು" (ಲೇ. ಡಾ.ರಾಮಕೃಷ್ಣ ಮರಾಠೆ 'ಉತ್ತರ ಕರ್ನಾಟಕದ ವೃತ್ತಿರಂಗಭೂಮಿ' ಪುಟ, ೬೧). ಹೀಗೆ ಮಹಿಳೆಯರು ರಂಗಭೂಮಿಗೆ ಜಿಡ್ಡುಗಟ್ಟಿದ ವ್ಯವಸ್ಥೆ ಯಲ್ಲಿಯೂ ಪ್ರವೇಶ ಮಾಡಿದರು.

ಉತ್ತರ ಕರ್ನಾಟಕದಲ್ಲಿ ಸ್ತ್ರೀನಾಟಕ ಮಂಡಳಿಗಳು ಕ್ರಮೇಣ ತಲೆ ಎತ್ತಿನಿಂತವು. ಬಚ್ಚಾಸಾನಿ ದೊಡಮನಿಯವರು ೧೯೧೯ ರಲ್ಲಿಯೇ ಸ್ತ್ರೀ ನಾಟಕ ಮಂಡಳಿ ಲಕ್ಷ್ಮೇಶ್ವರ ಎಂಬ ಕಂಪನಿಯನ್ನು ಕಟ್ಟಿದ್ದು ಒಂದು ಐತಿಹಾಸಿಕ ಘಟನೆಯೇ ಸರಿ. ನಂತರದ ಗಂಗೂಬಾಯಿ ಗುಳೇದಗುಡ್ಡ ಇವರು ೧೯೭೫ರಲ್ಲಿ ಶ್ರೀಕೃಷ್ಣ ಸಂಗೀತ ನಾಟಕ ಮಂಡಳಿ ಗುಳೇದಗುಡ್ಡ ಕಂಪನಿ ಕಟ್ಟಿ ಬೆಳೆಸಿದರು. ಅಲ್ಲದೆ ೧೮೫೦ರಲ್ಲಿ ಕುಕುನೂರಿನ ರೆಹಮಾನಪ್ಪ ಶ್ರೀಲಲಿತಕಲಾ ನಾಟ್ಯ ಸಂಘವೆಂಬ ಸಂಘ ಕಟ್ಟಿದರು. ಸ್ತ್ರೀಯು ರಂಗಭೂಮಿಗೆ ಬರುವುದೇ ದುಸ್ತರವಾಗಿರುವ ಸಂದರ್ಭದಲ್ಲಿ ಕಂಪನಿಯನ್ನು ಬೆಳೆಸುವುದೆಂದರೆ ಅದೊಂದು ಸಾಮಾನ್ಯ ಮಾತೇ ಅಲ್ಲ ಎನ್ನಬಹುದು.

ಆದರೆ ಬಳ್ಳಾರಿ ಜಿಲ್ಲೆಯ ಮರಿಯಮ್ಮನ ಹಳ್ಳಿಯವರಾದ ಡಿ.ಹನುಮಂತಮ್ಮ, ಸಂಜೀವಮ್ಮ ದತ್ತಾತ್ರೇಯ ಮಂಡಳಿಯನ್ನು ಏಕಕಾಲಕ್ಕೆ ಸೇರಿ ನಂತರದಲ್ಲಿ ಗರುಡರ ಕಂಪನಿ ಸೇರಿ ೧೯೩೨ ರಲ್ಲಿ ಆದವಾನಿ ನರಸಮ್ಮನು ಮಂಡಳಿ ಪ್ರವೇಶಿಸಿದರು. ಡಿ.ಹನುಮಂತಮ್ಮ, ಸಂಜೀವಮ್ಮ ಬಳ್ಳಾರಿ ಜಿಲ್ಲೆಯ ಪ್ರತಿನಿಧಿಗಳಾಗಿ ರಂಗಭೂಮಿಯಲ್ಲಿ ಸೇವೆಯನ್ನು ಸಲ್ಲಿಸಿದರು. ಇವರು ೧. ದತ್ತಾತ್ರೇಯ ಮಂಡಳಿ, ೨. ಗರುಡ ಸದಾಶಿವ ಮಂಡಳಿ, ೩. ವಿಶ್ವಗುಣಾದರ್ಶ ಕಂಪನಿ ಸಂಗೀತ ನಾಟಕ ಮಂಡಳಿ ಈ ಮೂರು ಕಂಪನಿಯಲ್ಲಿ ಸಹೋದರಿಯರು ಸೇವೆ ಸಲ್ಲಿಸಿದ್ದರು.

ಇಡೀ ಕರ್ನಾಟಕದಲ್ಲಿಯೇ ಲಕ್ಷ್ಮಿಸಾನಿ ಬಳ್ಳಾರಿ, ಎಲ್ಲುಬಾಯಿ ಗುಳೇದಗುಡ್ಡ, ರೇಣವ್ವ ಗುಳೇದಗುಡ್ಡ, ಹನುಮಂತಪ್ಪ ಗುಳೇದಗುಡ್ಡ, ಶಿರಹಟ್ಟಿ ಇಮ್ಮಾಸಾನಿ, ಲಕ್ಷ್ಮೇಶ್ವರ ಮರ್ದಾನ್ ಜಾನ್, ಲಕ್ಷ್ಮೇಶ್ವರ

ವಜೀರಬಿ, ಬೆಟಗೇರಿ ಆನಂದಸಾನಿ, ಗುಳೇದಗುಡ್ಡ ಹನುಮಂತೆವ್ವ, ಬ್ಯಾಡಗಿ ಸಾವಿತ್ರಮ್ಮ, ಲೀಲಾವತಿ ರಾಮದುರ್ಗ, ಜುಬೇದಾ ಸವಣೂರ, ಗಾನರತ್ನ ಗಂಗೂಬಾಯಿ, ಮದ್ರಾಸ್ ಸಾನಿ, ರಾಮಕ್ಕ, ಹಣಮಂತವ್ವ, ನರಸಾಸಾನಿ, ಯಶೋಧ ಗರುಡ, ವತ್ಸಲಾಗರುಡ, ಗೋಹರ ಜಾನ ಕರ್ನಾಟಕಿ, ಗದಗ ರತ್ನಾ, ಹುಬ್ಬಳ್ಳಿ ಭಾಗೀರಥಿಬಾಯಿ, ಸೋನುಬಾಯಿ ದೊಡಮನಿ, ಅಮೀರ್‌ಜಾನ್ ಕರ್ನಾಟಕಿ, ಮನ್ನುಜಾನ ಬೀಳಗಿ, ಲಾಲಮ್ಮ ಬೆಳಗಾಂವಕರ, ವಿಮಲ ಕರ್ನಾಟಕಿ, ಗುಲಾಬಿ, ಬಸವಣ್ಣೆವ್ವ ದೊಡ್ಡವಾಡ, ಶಾಂತವೀರಪ್ಪರ ಮಗಳಾದ ಲೀಲಮ್ಮ (ಚಿಂದೋಡಿ ಲೀಲಾ), ಕೊಟ್ಟೂರು ಶಾರದಮ್ಮ, ಶಿರಾಳಕೊಪ್ಪ ವಿನೋದಮ್ಮ, (೧೯೭೯ ಸುಮಾರು) ಸರಸ್ವತಿ ಹೊಸಪೇಟೆ, ರೇಣುಕಾ ಹೊಸಪೇಟೆ, ಶಿರಾಳಕೊಪ್ಪ ರತ್ನ, ಎಚ್.ಎಸ್.ವೆಂಕೂಬಾಯಿ, ಬೆಂಗಳೂರು ವಿನೋದಮ್ಮ ಎಸ್.ಆರ್.ರಾಧಾ, ಧುತ್ತರಗಿ ಸರೋಜಮ್ಮ, ಚಿತ್ರದುರ್ಗ ಪ್ರಮೀಳಾ, ಎಸ್.ಅಂಜಲಿ ಸಿ.ಕೆ.ರೇವತಿ, ಸಾವಿತ್ರಿ ಹುಬ್ಬಳ್ಳಿ, ಕೊಟ್ಟೂರು ಕಮಲಮ್ಮ, ಸಿ.ಎಸ್. ನಿರ್ಮಲಾ(ಗಾಯಕಿ) ನಲವಡಿ ಸಾಹೇಬ ಜಾನ್, ಭೀಮವ್ವ, ಅಂಜುಜಾ ಹೊಸಮನಿ, ಸೋಮವ್ವ, ನಂದಾ ಜಿತೂರಿ, ಕೆರೂರ ಶಾಂತಮ್ಮ, ಮುರಗೋಡ ಹೀರಾಬಾಯಿ, ಹೀರಾಬಾಯಿ ತಡವಲ್ಕರ್, ನಾಗರತ್ನಮ್ಮ ಕೊಟ್ಟೂರು, ಅಂಬುಜಮ್ಮ ಹೊಸಮನಿ, ಸುಮಿತ್ರಾ ಕುಂದಾಪೂರ, ಫ್ಲೋರಿನಾ ಗುತ್ತಲ, ಜಯಲಕ್ಷ್ಮಿ ಸಿರಸಿ, ಗೌರಮ್ಮ ರಬಕವಿ, ಅನ್ನಪೂರ್ಣ ಸಾಗರ, ತಾರಾ ಜಂಬಲದಿನ್ನಿ, ಕಾಶೀಬಾಯಿ ನಲವತವಾಡ, ಹಾವೇರಿ ಮರ್ದಾನ್ ಜಾನ್, ಬೆಂಗಳೂರು ಸಹೋದರಿಯರು, ಬಸಮ್ಮ ನಲವತವಾಡ, ಹುಬ್ಬಳ್ಳಿ ರಾಧಮ್ಮ, ಸಾಸ್ತನ್ ಸರಸ್ವತಿ ಮತ್ತು ಚಂಪಾಪುರಿ, ಸುಶೀಲಾಪುರಿ, ಅನುಸೂಯ ಶಕುಂತಲಾ ಒಡೆಯರ, ಲಲಿತಾ ಲಕ್ಷ್ಮೇಶ್ವರ, ಸುಶೀಲಾ ಬಸರೂರ, ರೇಣವ್ವ ಶಿರಹಟ್ಟಿ, ಕೊಟ್ಟೂರು ಮಲ್ಲವ್ವಾ, ಬೆಂಗಳೂರು ವೆಂಕೂಬಾಯಿ, ಬೆಂಗಳೂರು ಶಾಂತಾಬಾಯಿ, ಗಂಗೂಬಾಯಿ ಹಾನಗಲ್, ಶಾರದಾ ಹಾನಗಲ್, ಮಂಜು ಘೋಷ, ಧಾರವಾಡರ ದುರ್ಗಾಬಾಯಿ ಸಿದ್ರಾಮಪ್ಪನವರ ಮಕ್ಕಳಾದ ಲಕ್ಷ್ಮಿಬಾಯಿ ಮತ್ತು ಕೃಷ್ಣಬಾಯಿ, ಬ್ಯಾಡಗಿ ಪಕೀರವ್ವ, ಹುಬ್ಬಳ್ಳಿ ಜಮುನಾ, ಹಾವೇರಿ ಮರ್ದಾನಜಾನ್, ಎಸ್.ಪಂಡರಿಬಾಯಿ, ಸತ್ಯಭಾಮ, ಸುಭದ್ರಮ್ಮ ಮನಸೂರ, ಹೀರಾಬಾಯಿ ಶಂಕರಗೌಡ, ರತ್ನ ಬ್ರಹ್ಮಾವರ, ಸುಶೀಲಾ ಕುಂದಾಪುರ, ಸುಲೋಚನ ಗದಗ, ಜಯಲಕ್ಷ್ಮಿ ದಾಂಡೇಲಿ, ಶೀಲಕ್ಕ ಸಂಗನಾಳ, ಸರೋಜ ಇಳಕಲ್, ಎಚ್.ರೇಣುಕಾ, ಜೀವಮ್ಮ ಕಾರ್ಗಲ್, ಮಾಲವಿ ಶಾಂತಮ್ಮ, ರಾಜರಾಜೇಶ್ವರಿ, ಕಮಲವ್ವ ನ್ಯಾಮತಿ, ಶಾಂತಾಬಾಯಿ ಬೆಂಗಳೂರು, ಇಂದಿರಾಬಾಯಿ ಬೆಂಗಳೂರು, ರೇಣುಕಾ ಮುರಗೋಡ, ವಜೀರಾ ಗದಗ, ಅಂಜಲೀ ದೇವಿ ಗದಗ, ನಂದಕುಮಾರಿ ಕಲ್ಕತ್ತಾ, ವಜ್ರಾವ್ವ ಮನಸೂರ, ರಾಧಾಬಾಯಿ ದೇಸಾಯಿ, ಹೀರಾಬಾಯಿ ಮಾಧ್ಯಾಳ, ಚಂದ್ರಾ ಕೌಜಲಗಿ, ರಾಧಾಬಾಯಿ ಹುಬ್ಬಳ್ಳಿ, ಸುಮಿತ್ರಾ ಕವಲಿ, ಜಯಾ ಕವಲಿ, ಜಯಶ್ರೀ ಕವಲಿ, ರತ್ನಾಬಾಯಿ ಬಳ್ಳಾರಿ, ಶಾಂತಾಬಾಯಿ ಜೋಷಿ, ಲಲಿತಾ ಕುಕನೂರ, ಜಯಮ್ಮ ಮೈಸೂರು, ಬಂದಮ್ಮ ಶಿರಹಟ್ಟಿ, ಮಂಜುಳ ಕುಕನೂರ, ಶಿಗ್ಗಾವಿ ಶಾಂತವ್ವ, ಹೊಸಪೇಟೆ ದೇವಕವ್ವಾ, ಕುಮಾರಿ ಲಕ್ಷ್ಮಿ, ಲಕ್ಷ್ಮಿಬಾಯಿ ದಾವಣಗೆರೆ, ಲಲಿತಾ ಗದಗ. ಪ್ರೇಮಾ ಗುಳೇದಗುಡ್ಡ, ಜಿ.ಎಸ್.ಅಂಜಲಿದೇವಿ, ವಿಜಯಲಕ್ಷ್ಮಿ, ಶಾಂತಾಬಾಯಿ, ಜೋಷಿ, ಜಾನಕಿಬಾಯಿ ಹಾವೇರಿ.

ಸೀತಾಬಾಯಿ ಪಾಟೀಲ ಮಮತಾ ಗುಡೂರು, ಕಾಳವ್ವ, ಶಾಂತಾ, ಕಮಲಾ, ಇಂದಿರಾ, ಸುಮತಿ ಮೈಸೂರು, ಅನಸೂಯ ಬೆಂಗಳೂರು, ಬಸವಣ್ಣೆವ್ವ ಗದಗ, ಪಾರ್ವತಿ ಬೆಂಗಳೂರು, ರಮಾ ಮತ್ತು ಇಂದ್ರಾಣಿ ಬೆಂಗಳೂರು, ಶಚಿದೇವಿ ಬೆಂಗಳೂರು, ಮಾಲತಿ ಮೈಸೂರು, ಸುಲೋಚನಮ್ಮ ಇಳಕಲ್, ಶಾಂತಾಬಾಯಿ ಅಮೀನಗಡ, ಗಾಯತ್ರಿ, ಪ್ರೇಮಾ ಗುಡೂರ, ಮುರಗೋಡ ರೇಣುಕಾ, ಲಲಿತಾ ಸಣ್ಣಂಗಿ, ಶೈಲಮ್ಮ ಗದಗ, ನಿರ್ಮಲಾ ಹುಬ್ಬಳ್ಳಿ, ಕಮಲ ಇಳಕಲ್, ಲಲಿತಾ ಕುಕನೂರು, ಜಯಲಕ್ಷ್ಮಿ ದಾವಣಗೆರೆ, ಎ.ರಾಜಲಕ್ಷ್ಮಿ, ತ್ರಿವೇಣಿ, ಲೋಲಾ, ಎಚ್.ಪಿ.ಸರೋಜಾ, ಆರೂರ ಸತ್ಯಭಾಮ, ಶನಿ ಜಯಾ ಬೆಂಗಳೂರು, ಜಯಮ್ಮ, ಅಂಜಲೀದೇವಿ ಗದಗ, ಪ್ರಮೀಳಾ ಗುಡೂರ, ಮಮತಾ ಗುಡೂರ, ಅನುಸೂಯ, ಅನ್ನಪೂರ್ಣ, ಸರೋಜಾ ಧಾರವಾಡ ಈ ಎಲ್ಲಾ ನಟಿಯರು ಇಡೀ ಉತ್ತರ ಕರ್ನಾಟಕದಲ್ಲಿ ರಂಗಭೂಮಿ ಸೇವೆಯನ್ನು ಮಾಡಿದ್ದಾರೆ.

ಇವರೆಲ್ಲರೂ ರಂಗಭೂಮಿಗೆ-ಬರಬೇಕಾದರೆ ಕೆಲವರು ಮನೆಯಲ್ಲಿಯ ಪರಂಪರೆಯಿಂದ, ಇನ್ನೂ ಕೆಲವರು ಸ್ವಆಸಕ್ತಿಯಿಂದ, ಮತ್ತೆ ಕೆಲವರು ಮನೆಯ ಆರ್ಥಿಕ ಪರಿಸ್ಥಿತಿಯಿಂದ ಹೀಗೆ ಹಲವಾರು ಕಾರಣಗಳಿಂದ ರಂಗಭೂಮಿಗೆ ಬಂದಿದ್ದರೂ ಅದೆಷ್ಟು ಜಟಿಲ ಸಮಸ್ಯೆಯನ್ನು ಎದುರಿಸಿ ಬಂದಿದ್ದಾರೋ ಒಟ್ಟಿನಲ್ಲಿ ರಂಗಭೂಮಿಗೆ ಪ್ರವೇಶಿಸಿದ ನಟಿಯರಿಗೆ ಎಂಟೆದೆಯೇ ಇರಬೇಕು ಎನಿಸುತ್ತದೆ. ಪುರುಷ ಮೌಲ್ಯಾಧಾರಿತ ವ್ಯವಸ್ಥೆಯನ್ನು ಮೆಟ್ಟಿನಿಂತು ಬದುಕಿದ್ದು ದೊಡ್ಡ ಸಾಹಸವೇ ಸರಿ.

ನಾಟಕ ಕೀಳು ಎಂಬ ಭಾವನೆ ತಳೆದು ನಾಟಕ ನೋಡಿದ ಹೆಂಡತಿಯರನ್ನು ಕೊಂದು, ತಾಲೀಮಿಗೆ ಹೋದವರನ್ನು ಮನೆಯಿಂದ ಹೊರ ಹಾಕಿ, ಕೆಲವರು ತಾವೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಸಂದರ್ಭವನ್ನು ಸೃಷ್ಟಿಸಿ ಹೀಗೆ ಹೆಣ್ಣನ್ನು ಒಂದು ಪಶುವಂತೆ ಕಂಡು ಬಲಿಯನ್ನು ತೆಗೆದುಕೊಂಡಿದೆ. ಈ ಪುರುಷ ಪೈಶಾಚಿಕ ಮೌಲ್ಯದ ಸಮಾಜ. ಇಂಥದರಲ್ಲಿ ನಟನೆ, ಕಲೆ, ಸಂಗೀತ, ನಾಟಕ, ಮಂಡಳಿ ಎಂದು ಹೊರಬಂದಿರುವ ನಟಿಯರ ಪಾಡು ದೇವರೇ ಬಲ್ಲ. ಯಾವ ಯಾವ ಕ್ಷಣ, ಸಮಯ, ಸನ್ನಿವೇಶ ಸಂದರ್ಭಗಳಲ್ಲಿ ರಂಗನಟಿಯರು ಎಂತೆಂಥ ನೋವನ್ನು ಕಂಡಿದ್ದಾರೋ ಏನೇನು ಅನುಭವಿಸಿದ್ದಾರೋ ಎಂಥ ದುಃಸ್ಥಿತಿಗೆ ಇಳಿದಿದ್ದರೋ ಅವರಿಗೇ ಗೊತ್ತು. ಇಂಥ ವೈರುಧ್ಯಗಳ ನಡುವೆ ಎಲ್ಲವನ್ನು ಮೆಟ್ಟಿನಿಂತು ರಂಗಭೂಮಿಯಲ್ಲಿ ಹೆಸರು ಮಾಡಿರುವ ಈ ಮಿನುಗು ನಕ್ಷತ್ರಗಳಿಗೆ ಕನ್ನಡ ಕಲಾಪೋಷಕ ಆಶ್ರಯ ಇದ್ದೇ ಇರುತ್ತದೆ.

ಮನೆಯಿಂದ ಹಣ ತೆಗೆದುಕೊಂಡು ಬಂದ ನಟಿ, ಪ್ರೇಮಿಸಿದವನೊಡನೆ ಓಡಿಬಂದ ನಟಿ, ಸ್ವ ಆಸಕ್ತಿಯಿಂದ ಬಣ್ಣದ ಬದುಕಿಗೆ ಮಾರು ಹೋಗಿ ಬಂದಿರುವ ನಟಿ, ರಂಗದ ಬದುಕಿನ ಹಿಂದೆಯೂ ಕನಸನ್ನು ಕಂಡು ನಂತರ ಮಾಯವಾಗಿರುತ್ತದೆಂದು ಬಂದು ಮೋಸಹೋಗಿರುವ ನಟಿ, ಪ್ರೇಮಿಸಿದವನು ನಂಬಿಕೆ ದ್ರೋಹ ಮಾಡಿ ತವರಿಗೆ ಮರುಳಲಾರದೆ ರಂಗಭೂಮಿಗೆ ಬಂದಿರುವ ನಟಿ ಹೀಗೆ ಏನೆಲ್ಲಾ ಸಮಸ್ಯೆಗಳನ್ನು ಹೊತ್ತು ಹಾಗೂ ಕಲಾ ಬದುಕಿಗೆ ಸ್ವಆಸಕ್ತಿಯಿಂದ ಬಂದು ಇಲ್ಲಿ ವಿಧಿಕ್ರೂರವಾದಾಗ ತಡೆದುಕೊಂಡು ತಮ್ಮದೇ

ಆದ ಮೌಲ್ಯಾಧಾರಿತ, ಸತ್ವಯುತ ಕಲಾಬದುಕನ್ನು ಪೋಷಿಸಿಕೊಂಡು ಬಂದಿರುವುದು ಒಂದು ವಿಪರ್ಯಾಸವೇ ಸರಿ. ಆದರೂ ಮಹಿಳೆ ಸಾಹಸ ಯಾವ ಪುರುಷನಿಗೇನು ಕಡಿಮೆ ಇಲ್ಲ ಎಂದು ಇಂಥ ವೈರುಧ್ಯ ಬದುಕಿನಲ್ಲಿ ಸ್ವಯಂ ಪ್ರೇರಣೆಯಿಂದ ನಟನಾ ಕೌಶಲ್ಯ ಮೆರೆದಿರುವ ನಟಿಯರು ಅಭಿನಂದನಾರ್ಹರೇ ಸರಿ.

ಕನ್ನಡ ವೃತ್ತಿರಂಗಭೂಮಿಗೆ ೧೩೦ ವರ್ಷಗಳ ಚರಿತ್ರೆ ಇದ್ದರೆ, ಮಹಿಳೆ ರಂಗಪ್ರವೇಶಿಸಿ ೧೧೦ ವರ್ಷ ಕಳೆಯಿತು ಎಂಬ ಸಂಗತಿ ರಂಗದಲ್ಲಿ ಆಕೆ ತೀರಾ ಹಿಂದೆ ಬಿದ್ದಿಲ್ಲ ಎಂಬುದನ್ನು ಹೇಳುತ್ತದೆ. ಮಹಿಳೆಯರ ಪಾತ್ರ ಸಂಖ್ಯೆಯ ದೃಷ್ಟಿಯಿಂದ ಪುರುಷನಿಗೆ ಸಮ ಇಲ್ಲದಿರಬಹುದು. ಆದರೆ ಸಾಧನೆ ದೃಷ್ಟಿಯಿಂದ ಸರಿಸಾಟಿಯೇ ಆಗಿದ್ದಾಳೆ. ೧೮೭೨ ರಲ್ಲಿ ಕಂಪನಿ ನಾಟಕಗಳು ಆರಂಭವಾದರೆ ೧೮೯೦ ರ ಹೊತ್ತಿಗೆ ಗುಬ್ಬಿಕಂಪನಿ ರಾಜಮ್ಮ, ೧೯೦೧ರಲ್ಲಿ ಬಳ್ಳಾರಿ ಲಕ್ಷ್ಮಮ್ಮ, ಗುಳೇದಗುಡ್ಡದ ಎಲ್ಲೂಬಾಯಿ ಮುಂದೆ ಮತ್ತೆ ಕೆಲ ವರ್ಷಗಳಲ್ಲೇ ದಾದಮ್ಮನವರ ಸಂಜೀವಮ್ಮ, ·ಹನುಮಂತಮ್ಮ-ಕೆಲವು ವಿರೋಧದ ನಡುವೆಯೂ ಮಹಿಳೆಯರ ಪ್ರವೇಶ ನಿರಂತರವಾಗಿ ಬಿಟ್ಟಿತು. ೧೮೯೮ ರಲ್ಲಿ ಪಾಪಾಸಾನಿ ಎಂಬಾಕೆ ಸ್ತ್ರೀ ನಾಟಕ ಮಂಡಳಿಯನ್ನೇ ಸ್ಥಾಪಿಸಿದರು. ೧೯೦೮ ರಲ್ಲಿ ಲಕ್ಷ್ಮೇಶ್ವರದ ಬಚ್ಚಾಸಾನಿ ಸ್ಥಾಪಿಸಿದ ಸ್ತ್ರೀ ನಾಟಕ ಮಂಡಳಿಯಲ್ಲಿ ಪುರುಷ ಸೇರಿದಂತೆ ಎಲ್ಲ ಪಾತ್ರಧಾರಿಗಳೂ ಮಹಿಳೆಯರು. ಯಾವುದೇ ದೇಶದಲ್ಲಿ ಇಲ್ಲದ ಇಂಥದೊಂದು ಹೊಸ ಪರಂಪರೆ ಕನ್ನಡ ನಾಡಿನ ರಂಗಚರಿತ್ರೆಯಲ್ಲಿ ಹೆಗ್ಗಳಿಕೆಯ ವಿಷಯವಾಗಿದೆ. ೧೯೨೫ ರಲ್ಲಿ ಗುಳೇದಗುಡ್ಡದ ಗಂಗೂಬಾಯಿ ಶ್ರೀ ಕೃಷ್ಣ ನಾಟಕ ಮಂಡಳಿ ಸ್ಥಾಪಿಸಿ ೫-೬ ವರ್ಷಗಳ ಕಾಲ ವೈಭವದಿಂದ ನಡೆಸುತ್ತಾಳೆ. ಇದೇ ಸುಮಾರಿನಲ್ಲಿ ಹಳೆ ಮೈಸೂರಿನ ಅಂಬುಜಮ್ಮ, ಸೋನೂಬಾಯಿ ದೊಡ್ಡಮನಿ(೧೯೩೬)ಯವರ ನಾಟಕ ಕಂಪನಿಗಳು ಬಿ.ಜಿ.ಕೆ.ಅಯ್ಯಂಗಾರ್, ಸಿ.ಬಿ.ಮಲ್ಲಪ್ಪ ಸ್ಥಾಪಿಸಿದ ಮಹಿಳಾ ನಾಟಕ ಕಂಪನಿಗಳು ಕೆಲಕಾಲ ನಡೆದರೆ, ೧೯೫೦ರಲ್ಲಿ ಕುಕನೂರು ರೆಹಿಮಾನವ್ವ ಸ್ಥಾಪಿಸಿದ ಲಲಿತ ಕಲಾ ನಾಟ್ಯ ಸಂಘ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ಮಾಡಿ ದಾಖಲೆಯ ಯಶಸ್ವಿ ಪ್ರದರ್ಶನ ನಡೆಸಿತು. ಕುಂದಾಪುರ ಸುಮಿತ್ರಮ್ಮ, ಜುಬೇದಾಬಾಯಿ ಸವಣೂರು, ಇಳಕಲ್‌ನ ಲಕ್ಷ್ಮೀಬಾಯಿ, ಹಂಸನೂರಿನ ನಟಿಯರು, ಹುಬ್ಬಳ್ಳಿ ಥೆರೇಸಮ್ಮ, ಸರಸ್ವತಿ ನಾಯ್ಡು, ಅಂಬುಜಮ್ಮ, ಶಿರಹಟ್ಟಿ ಭಾರತಿ, ಜಯಲಕ್ಷ್ಮಿ ಹೆಗಡೆ, ಬಳ್ಳಾರಿ ಸುಜಾತಮ್ಮ ಇವರೆಲ್ಲಾ ನಾಟಕ ಕಂಪನಿ ಕಟ್ಟಿದ ಮಹಿಳೆಯರು. ಪುರುಷರೇ ನಡೆಸಿದ ನಾಟಕ ಕಂಪನಿಗಳಲ್ಲೂ ಹೆಚ್ಚಿನ ಜವಾಬ್ದಾರಿ ನೋಡಿಕೊಂಡವರು ಅವರ ತಾರಾ ಪತ್ನಿಯರು ಎಂಬುದು ಅಷ್ಟಾಗಿ ಬೆಳಕಿಗೆ ಬಾರದ ಸಂಗತಿ. ಹಾಲಿ ಉಳಿದಿರುವ ೭-೮ ನಾಟಕ ಕಂಪನಿಗಳಲ್ಲಿ ಮೂರಕ್ಕೆ ಮಹಿಳೆಯರದೇ ಸಾರಥ್ಯ (ಲೇ. ಗುಡಿಹಳ್ಳಿ ನಾಗರಾಜ, ಪ್ರಜಾವಾಣಿ ಪತ್ರಿಕೆ, ೨೦೦೨). ಕನ್ನಡ ರಂಗಭೂಮಿಯ ಅತ್ಯುನ್ನತ ಪ್ರಶಸ್ತಿಯಾದ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಆರ್.ನಾಗರತ್ನಮ್ಮ ೧೯೫೮ರಲ್ಲಿ ಕಂಪನಿ ಕಟ್ಟಿದ ಮಹಿಳೆಯಲ್ಲಿ ಇವರೂ ಒಬ್ಬರು.

೪.೨. ರಂಗನಟಿಯರು : ಕೌಟುಂಬಿಕ ಹಿನ್ನೆಲೆಗಳು

ಕುಟುಂಬ ಮಾನವನ ಸಂರಕ್ಷಣೆಯ ಮೊದಲ ಹಂತ. ನಂತರದಲ್ಲಿ ಮಗುವಿನ ಸಾಮಾಜೀಕರಣ, ಸಂಸ್ಕೃತೀಕರಣಗಳು ಪ್ರವೇಶಗೊಳ್ಳುತ್ತವೆ. ಎಷ್ಟೋ ಮಹಾನ್ ಸಾಧಕರು ತಮ್ಮ ಮನೆಯಲ್ಲಿಯೇ ಪರಂಪರೆಯಿಂದ ಬಂದಿರುವ ಜ್ಞಾನ, ವಿಜ್ಞಾನಗಳನ್ನು ಪಡೆದುಕೊಂಡು ಇಂದು ಮೇಧಾವಿಗಳೆನಿಸಿದ್ದಾರೆ. ಇಂಥ ಅನುಕೂಲ ಮತ್ತು ಪ್ರತಿಕೂಲಗಳು ವ್ಯಕ್ತಿಯ ವ್ಯಕ್ತಿತ್ವವನ್ನೇ ಬದಲಾಯಿಸಿ ಬಿಡುತ್ತವೆ. ಸಂಗೀತಗಾರ, ಕವಿ, ನಾಟಕಕಾರ, ಕಲಾವಿದ, ಇವರ ಪರಿಸರದಲ್ಲಿ ಹುಟ್ಟುವ ಮಕ್ಕಳೂ ಕೂಡ ಪರಂಪರೆಯಿಂದ ಬೆಳೆದು ಬಂದು ಅದೇ ಕ್ಷೇತ್ರದಲ್ಲಿಯೂ ಮುಂದುವರಿಯುವವರೂ ಹೆಚ್ಚಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಯಾವ ಪರಿಸರದ ಪ್ರಭಾವವಿಲ್ಲದೆ ವಿಶೇಷವಾಗಿ ಬೆಳೆದಂಥ ವ್ಯಕ್ತಿತ್ವಗಳು ಹಲವಾರು ಇವೆ.

ಎಷ್ಟೋ ಸಾಧಕರು ಬೀದಿಯಲ್ಲಿ ಬಿದ್ದು ಅಲ್ಲಿ ಇಲ್ಲಿ ಬೆಳೆದು ಯಾರ ಆಸರೆಯೂ ಇಲ್ಲದೆ, ಸಮಾಜದ ಆಶ್ರಯದಲ್ಲಿ ಸಾಮಾಜಿಕವಾಗಿ ಬದುಕಿ ಬೆಳೆದು ಮೇರು ಪರ್ವತವಾಗಿದ್ದಾರೆ. ಇಂಥ ಮಹಾನ್ ದಿಗಂತಗಳು ನಮ್ಮ ಸಾರ್ವತ್ರಿಕತೆಯನ್ನು ಎತ್ತಿಹಿಡಿದ್ದಾರೆ. “ಸ್ತ್ರೀಯರ ವಿಷಯದಲ್ಲಿಯೂ ವೃತ್ತಿ ರಂಗಭೂಮಿ ಒಂದಿಲ್ಲೊಂದು ಸಮಸ್ಯೆ ಎದುರಿಸುತ್ತಲೇ ಬಂದಿದೆ. ಮೊದಲು ಸ್ತ್ರೀಯರ ಕೊರತೆಯನ್ನು ಅನುಭವಿಸುತ್ತಿದ್ದ ಮಂಡಳಿಗಳು ಈ ಅವಧಿಯಲ್ಲಿ ಅಭಿನಯ ಸಾಮರ್ಥ್ಯದ ಆಕರ್ಷಕ ನಟಿಯರನ್ನು ಉಳಿಸಿಕೊಳ್ಳಲು ಹೋರಾಡಬೇಕಾಯ್ತು. ಬದಲಾಗುತ್ತಿದ್ದ ಪ್ರೇಕ್ಷಕರ ಅಭಿರುಚಿ ಯಿಂದ ಸ್ತ್ರೀಯರು ನಾಟಕಕ್ಕೆ ಅವಶ್ಯವೆನಿಸಿದರು. ದೇವದಾಸಿ, ಕಲಾವಂತ ಮನೆತನಕ್ಕೆ ಸಂಬಂಧಿಸಿದ, ಪಾತರದವರ ಮನೆತನದ ಸ್ತ್ರೀಯರು ಯಾವ ಸಂಕೋಚವಿಲ್ಲದೆ ರಂಗ ಪ್ರವೇಶಿಸಿ ವಂಶ ಪರಂಪರೆಯಿಂದ ಬಂದ ಕಲೆಯ ಜೊತೆಗೆ ನಾಟ್ಯಾಚಾರ್ಯರಿಂದ ದೊರೆತ ಸಂಸ್ಕಾರದಿಂದ ಶ್ರೇಷ್ಠ ನಟಿಯರೆಂದು ಕೀರ್ತಿಯನ್ನು, ಹಣವನ್ನೂ ಸಂಪಾದಿಸಿದ್ದರಿಂದ ಇತರರೂ ರಂಗದತ್ತ ಆಕರ್ಷಿತರಾದರು. ಬಡತನ ದಾರಿದ್ರ್ಯದಿಂದಲೋ, ಹದಿಹರೆಯದಲ್ಲಿಟ್ಟ ತಪ್ಪು ಹೆಜ್ಜೆಯಿಂದಲೋ, ಗಂಡಂದಿರ ಕಾಟಕ್ಕೆ ಬೇಸತ್ತೋ ಮರ್ಯಾದೆಯಿಂದ ಬದುಕಲಾಗದ ಸ್ತ್ರೀಯರು ನಾಟ್ಯ ಸಂಘಗಳತ್ತ ಹೆಜ್ಜೆ ಹಾಕಿದರು. ಬಂದವರ ಕುಲ-ಗೋತ್ರಗಳನ್ನು ವಿಚಾರಿಸದೇ ನೆಲೆಕಳೆದುಕೊಂಡ ತರುಣಿಯರಿಗೆ ಮಂಡಳಿಗಳು ಆಶ್ರಯ ಸ್ಥಾನಗಳಾಗಿ ನಿಂತವು. ನಟನೆಯಲ್ಲಿ ತರಬೇತಿ ನೀಡಿದವು. ಎಷ್ಟಾದರೂ ದಿನೇ ದಿನೇ ಬೆಳೆಯುತ್ತಿದ್ದ ಮಂಡಳಿಗಳಿಗೆ ಸ್ತ್ರೀಯರ ಕೊರತೆ ತಪ್ಪಲಿಲ್ಲ. ಉತ್ತಮ ನಟಿಯರಿಲ್ಲದೆ ಕಲೆಕ್ಷನ್ ಕುಗ್ಗುತ್ತಿದ್ದಾಗ ಒಂದು ಮಂಡಳಿಯ ಮೂಲಕ ಮತ್ತೊಂದು ಮಂಡಳಿಯ ನಟಿಯರನ್ನು ಹಾರಿಸಿಕೊಂಡು ಬರಲು ಯೋಚಿಸ ತೊಡಗಿದರು. ಅಲ್ಲದೆ ತಮ್ಮಲ್ಲಿಯ ನಟಿಯರನ್ನು ಉಳಿಸಿಕೊಳ್ಳಲು ಸಂಘದೊಡೆಯರು ಉಪಪತ್ನಿಯರನ್ನಾಗಿ ಮಾಡಿಕೊಂಡರು. ರೂಪ-ಲಾವಣ್ಯದಿಂದ ಪಾತ್ರಕ್ಕೆ ಕಳೆಕಟ್ಟಿ ಪ್ರೇಕ್ಷಕರನ್ನು ಸೆಳೆಯುತ್ತಿದ್ದ ನಟಿಯರಿಗೆ ಸಂಬಳವೂ ಹೆಚ್ಚಿತು. ಇಂಥ ನಟಿಯರಿಗಾಗಿ ಸಂಘದೊಳಗೆ ಸ್ಪರ್ಧೆ, ಕಲಾವಿದರ ಮಧ್ಯೆ ಕಲಹಗಳು, ಕುಟಿಲ ತಂತ್ರಗಳು ತುಂಬಿಕೊಂಡವು. ಮಾಲಿಕರ ಉಪಪತ್ನಿಯೇ ನಾಯಕಿ. ನಾಟಕದಲ್ಲಿ ಅಭಿನಯಿಸುವಾಗ ಸನ್ನಿವೇಶಕ್ಕೆ

ಅಭಾಸವೆನಿಸಿದರೂ ಕಲಾವಿದರು ಅವಳ ಮೈ ಕೈ ಮುಟ್ಟದಂತೆ ಎಚ್ಚರವಹಿಸಬೇಕು. ರಂಗದ ಕಳೆಯನ್ನು ಹೆಚ್ಚಿಸಲು ಬಂದ ಸ್ತ್ರೀಯರಿಂದ ಇಂಥ ಸಮಸ್ಯೆಗಳು ಉಂಟಾದಾಗ ರಂಗದ ಕಲಾತ್ಮಕತೆ ಕುಗ್ಗುತ್ತ ನಡೆಯಿತು (ಲೇ. ಡಾ.ರಾಮಕೃಷ್ಣ ಮರಾಠೆ, 'ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ; ನಡೆದು ಬಂದ ದಾರಿ' ಪುಟ, ೪೨, ೪೩).

ಇಂಥ ಕೌಟುಂಬಿಕ ಹಿನ್ನೆಲೆಯಿಂದ ಬಂದವರೇ ಹಲವು ರಂಗನಟಿಯರು. ಯಾವ ಗಟ್ಟಿ ಕುಟುಂಬದ ಉನ್ನತ ವರ್ಗದ ನಟಿಯರು ರಂಗಭೂಮಿಗೆ ಬರುವುದು ಅಪರೂಪ. ಆದರೆ ಬಂದರೂ ಅವರು ಅನೇಕ ಕೌಟುಂಬಿಕ ಜಟಿಲ ಸಮಸ್ಯೆಯೊಂದಿಗೆ ಬಂದಿರುತ್ತಾರೆ. ಕೆಲವರು ಹೊಟ್ಟೆಪಾಡಿಗಾಗಿ, ಬಡತನದಿಂದ, ಯಾವ ನೆಲೆ ಇಲ್ಲದಾಗ ರಂಗಭೂಮಿಗೆ ಬರುತ್ತಾರೆ. ಮೈಸೂರು, ಬೆಂಗಳೂರಿನ ಹೆಣ್ಣುಮಕ್ಕಳು, ಚಿತ್ರರಂಗದಲ್ಲಿ ಅವಕಾಶ ದೊರೆಯದೇ ಹೋದಾಗ ರಂಗಭೂಮಿ ಬದುಕಿಗೆ ಬಳ್ಳಾರಿ, ಮರಿಯಮ್ಮನ ಹಳ್ಳಿ ಹಾಗೂ ಹೊಸಪೇಟೆಗೆ ಬಂದು ನೆಲೆಸಿದ್ದಾರೆ. ಕೆಲವರು ಮನೆಯಲ್ಲಿ ಪರಂಪರಾಗತವಾಗಿ ನಟಿಯರಾಗಿರುವುದೇ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿದ್ದಾರೆ. ದೇವದಾಸಿ ಹಿನ್ನೆಲೆಯಿಂದ ಬಂದವರೇ ಇಡೀ ಬಳ್ಳಾರಿ ಜಿಲ್ಲೆಯಲ್ಲಿ ಬಹುಪಾಲು ನಟಿಯರಿದ್ದಾರೆ.

'ಕಲೆಯು ಎಲ್ಲರನ್ನು ಕೈ ಬೀಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಅದು ಆಯ್ಕೆ ಮಾಡಿಕೊಳ್ಳುತ್ತದೆ.' ಅಂಥ ಸಂದರ್ಭಗಳಲ್ಲಿ ಬದುಕಿದ, ಯಾವುದೇ ಆರ್ಥಿಕ ಭದ್ರತೆ ಇಲ್ಲದ ನಟಿಯರು ರಂಗಬದುಕಿಗೆ ಬಂದು ಕೆಲವರು ತೃಪ್ತ ಜೀವನ ನಡೆಸುತ್ತಿದ್ದಾರೆ. ಇನ್ನು ಕೆಲವರ ಸ್ಥಿತಿಯು ಶೋಚನೀಯವಾಗಿದೆ. ಕೌಟುಂಬಿಕ ಹಿನ್ನೆಲೆಯು ಈ ಸ್ಥಿತಿ ಹೊಂದಿರುವುದರಿಂದ ಹಲವಾರು ನಟಿಯರು ಮೂಲದಲ್ಲಿಯೇ ಮಾನಸಿಕವಾಗಿ ಕುಬ್ಜರಾಗಿರುತ್ತಾರೆ. ಹಲವಾರು ರೀತಿಯಲ್ಲಿ ನೋವನ್ನು ಅನುಭವಿಸಿ ಸಮಾಜದಲ್ಲಿ ಕೀಳರಿಮೆಯಿಂದ ಬದುಕುತ್ತಿದ್ದಾರೆ. ಇದರಲ್ಲಿ ಸೋತು ಹತಾಶರಾಗಿ ಸಾವಿಗೆ ಶಾರಣಾದವರೂ ಅದೆಷ್ಟೋ ನಟಿಯರು ಇತಿಹಾಸದಲ್ಲಿ ಕಂಡು ಬರುತ್ತಾರೆ.

ಬಾಲ್ಯ : ನಟಿಯರು ತಮ್ಮ ಬಾಲ್ಯಾವಸ್ಥೆಯಲ್ಲಿಯೇ ಹೆಚ್ಚು ಕಡಿಮೆ ಬಣ್ಣದ ಬದುಕಿಗೆ ವಾಲಿದ್ದಾರೆ. ಸುಮಾರು ೮ ಅಥವಾ ೧೦-೧೩ ವರ್ಷಗಳಲ್ಲಿಯೇ ಬಣ್ಣದ ಬದುಕಿಗೆ ಕಾಲಿರಿಸಿರುತ್ತಾರೆ. ಬಳ್ಳಾರಿ ಲಲಿತಮ್ಮ, ಮನ್ನೂರು ಸುಭದ್ರ ಸಂಗೀತ ಕಲಿಯಲು ಪ್ರಾರಂಭಿಸಿ ನಿಧಾನಗತಿಯಲ್ಲಿ ನಾಟಕ ಕಂಪನಿಗಳಿಗೆ ಮೊದಲು ಸೇರಿಕೊಂಡಿದ್ದಾರೆ. ಎಸ್.ರೇಣುಕ, ಬಿ.ಶಿವಕುಮಾರಿ, ಕೆ.ನಾಗರತ್ನ, ಎಸ್.ಯಶೋಧ, ಸೋಗಿರತ್ನ, ಚಾಮುಂಡೇಶ್ವರಿ, ಪದ್ಮ, ಗೀತ ಮೊದಲಾದ ನಟಿಯರು ತಾವು ಹೈಸ್ಕೂಲು ಓದುವಾಗಲೇ ಶಾಲೆಗಳಲ್ಲಿ ಜೊತೆಗೆ ರಂಗನಟಿಯರೊಡಗೂಡಿ ಹಲವಾರು ಚಿಕ್ಕಪುಟ್ಟ ಪಾತ್ರಗಳನ್ನು ಅಭಿನಯಿಸುತ್ತಿದ್ದರು.

ವಿಶೇಷವಾಗಿ ಬಳ್ಳಾರಿ ಜಿಲ್ಲೆಯಲ್ಲಿ ರಂಗನಟಿಯರ ಕುಟುಂಬಗಳೇ ಹೆಚ್ಚಾಗಿರುವುದರಿಂದ, ಸ್ವಲ್ಪ ಆಸಕ್ತಿ ಇರುವ ಮಕ್ಕಳೆಲ್ಲರೂ ಆ ಪರಿಸರದಲ್ಲಿಯೇ ಹುಟ್ಟಿ ಬೆಳೆದಿರುವುದರಿಂದ ಪರಿಸರವು ವ್ಯಕ್ತಿಯ ವ್ಯಕ್ತಿತ್ವ ಬೆಳವಣಿಗೆಗೆ ಕಾರಣವಾದ್ದರಿಂದ ಎಷ್ಟೋ ರಂಗನಟಿಯರು ಈ ಪರಿಸರದ ಪ್ರಭಾವದಿಂದಲೇ ಬಾಲ್ಯಾವಸ್ಥೆಯಲ್ಲಿ ರಂಗಭೂಮಿಗೆ ಇಳಿದಿದ್ದಾರೆ. ಸಂಗೀತ ಬರುತ್ತಿರುವ ಅಥವಾ ಕಲಿಯುತ್ತಿರುವ ಬಾಲಕಿ ಎಂದರೆ ರಂಗಭೂಮಿ ತಾನಾಗಿಯೇ ಆ ಬಾಲಕಿಯನ್ನು ಕೈಬೀಸಿ ಕರೆಯುತ್ತದೆ, ಆಕರ್ಷಿಸುತ್ತದೆ. ಇಂಥಹ ಸಂದರ್ಭಗಳು ನಟಿಯನ್ನಾಗಿ ಮಾಡಲು ಪ್ರೇರಕವಾಗಿವೆ. ರಂಗಭೂಮಿಯ ಗೀಳು ಇಂದು ನಿನ್ನೆಯದಲ್ಲ. ನಾಗರೀಕತೆ ಬೆಳೆದಂತೆಲ್ಲಾ ಅದು ಕ್ರಮೇಣ ನಿರಂತರವಾಗಿ ಕ್ರಿಯಾಶೀಲವಾಗಿ ಅಸ್ತಿತ್ವವನ್ನು ಪಡೆದುಕೊಳ್ಳುತ್ತಲೇ ಇದೆ. ರಂಗ ಚಟುವಟಿಕೆಗಳನ್ನು ನೋಡಿ ಆನಂದಿಸಿ ಅನುಭವಿಸಿದಂತೆಲ್ಲಾ ಅದು ಪುನರ್ ಅವಿರ್ಭಾವಿಸಿಕೊಂಡು 'ರಂಗ' ನಿರಂತರ ಪ್ರಕ್ರಿಯೆಯಾಗಿದೆ. ನಟಿಯರ ಬದುಕಿನ ಒಳ ನೋಟಗಳನ್ನು ಅತೀ ಹತ್ತಿರದಿಂದ ಕಂಡಾಗ ಈ ಮಾತುಗಳು ಇಲ್ಲಿ ಸ್ಪಷ್ಟವಾಗಿ ಹೇಳಲು ಸಾಧ್ಯವಾಗುತ್ತವೆ. ಅದೇ ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಈ ರೀತಿಯ ನಟಿಯರು ನಮಗೆ ಸಿಗುವುದು ಅಪರೂಪ.

ಪರಿಸರ : ಬಳ್ಳಾರಿ ಜಿಲ್ಲೆಯ ನಟಿಯರಿಗೆ ಹೆಚ್ಚಾಗಿ ಸಾಂಸ್ಕೃತಿಕ ಪರಿಸರವೇ ಒದಗಿ ಬಂದಿದೆ. ಅವರ ಮನೆಯಲ್ಲಿಯೇ ನಟಿಯರ ಪರಂಪರೆ ಇದೆ. ಅಥವಾ ಬಳ್ಳಾರಿ, ಹೊಸಪೇಟೆ, ಕಪ್ಪಗಲ್, ವಿರೂಪಾಪುರ, ಕೂಡ್ಲಿಗಿ, ಮರಿಯಮ್ಮನಹಳ್ಳಿ ಮುಂತಾದ ಊರುಗಳಲ್ಲಿಯೇ ಹೆಚ್ಚಾಗಿ ನಟಿಯರಿದ್ದಾರೆ. ಮರಿಯಮ್ಮನ ಹಳ್ಳಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಎಷ್ಟೋ ನಟಿಯರು ವೃತ್ತಿ ಕಂಪನಿಯಲ್ಲಿ ಕಲಾಸೇವೆಯನ್ನು ಸಲ್ಲಿಸಿದ್ದಾರೆ. ಇಂಥ ಹಲವಾರು ನಟಿಯರು ಬಳ್ಳಾರಿ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ. ವಿಶೇಷವಾಗಿ ಬಳ್ಳಾರಿ, ಆಂಧ್ರ ಗಡಿ ಭಾಗದ ಗ್ರಾಮೀಣ ಪರಿಸರದಲ್ಲಿ ನಟಿಯರು ಹುಟ್ಟಿ ಬೆಳೆದು ಅದೇ ಸಾಂಸ್ಕೃತಿಕ ವಾತಾವರಣದಿಂದ ಪ್ರೇರಿತರಾಗಿ ಇಂದು ರಂಗನಟಿಯರಾಗಿದ್ದಾರೆ.

ಕೆಲವರು ಪರಂಪರೆಯಿಂದ ನಟಿಯರಾಗಿದ್ದು, ಇನ್ನೂ ಕೆಲವರು ಆಸಕ್ತಿಯಿಂದ, ಇನ್ನೂ ಕೆಲವರು ಬಡತನದ ಪರಿಸ್ಥಿತಿಗೆ, ಇನ್ನೂ ಕೆಲವರು ಮನೆಯವರ ಒತ್ತಡದಿಂದ ಈ ಎಲ್ಲಾ ನೆಲೆಗಳಲ್ಲಿ ನಟಿಯರು ತನ್ನದೇ ಆದ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಿಕೊಂಡು ಇಂದು ಪ್ರಬುದ್ಧ ನಟಿಯರೆನಿಸಿಕೊಂಡಿದ್ದಾರೆ. ಉದಾ : ಕೂಡ್ಲಿಗಿ, ಬಳ್ಳಾರಿ, ಹೊಸಪೇಟೆ, ವಿರೂಪಾಪುರ, ಮರಿಯಮ್ಮನಹಳ್ಳಿ ಈ ಎಲ್ಲಾ ಹಳ್ಳಿಗಳಲ್ಲಿ ಹುಟ್ಟು ಕಲಾವಿದರೇ ಇದ್ದಾರೆ. ಅವರ ಹುಟ್ಟು ಪ್ರತಿಭೆಗೆ ತಡೆಯನ್ನು ಒಡ್ಡಲಾಗುವುದಿಲ್ಲ. ಇನ್ನು ತಡೆವಡ್ಡಿದರೆ ಆ ಕಲೆಯು ಅಲ್ಲಿ ಅವಿರ್ಭವಿಸಿಕೊಂಡು ಅದು ಬೃಹದಾಕಾರವಾಗಿ ನಿಂತು ಬಿಡುತ್ತದೆ. ಆದ್ದರಿಂದ ನಮ್ಮ ತಂದೆ ತಾಯಿ ಗಳಾಗಲೀ ಪ್ರತಿಭೆಗೆ ಪುರಸ್ಕರಿಸಬೇಕು ಬದಲಾಗಿ ಅವುಗಳನ್ನು ಚಿವುಟಿಹಾಕಬಾರದು. ಪ್ರತಿಭೆಗೆ ತಕ್ಕ ಪ್ರೋತ್ಸಾಹ ಸಿಕ್ಕರೆ ಎಂಥವರು ಉತ್ತಮ ಕಲಾವಿದರಾಗಲು ಸಾಧ್ಯವಾಗುತ್ತದೆ. ಆದ್ದರಿಂದ ಕಲೆಯನ್ನು ಉಳಿಸಿ ಬೆಳೆಸುವು ದಾದರೆ ಅಲ್ಲಿ ನಾವೊಂದು ಸಂಸ್ಕೃತಿ ಪರಂಪರೆಯನ್ನು ಕಟ್ಟಿಕೊಟ್ಟಂತೆ. ಅಂಥಹ ಪರಂಪರೆಯನ್ನು ಮುಂದುವರಿಸಿ

ಕೊಂಡು ಹೋಗಲು ನಮ್ಮ ಸಮಾಜದಲ್ಲಿ ಕಲಾಕಾರರಿಗೆ ಮಹತ್ವವಾದ ಬೆಲೆಯನ್ನು ನೀಡಿದರೆ ಖಂಡಿತ ಕಲಾಪರಂಪರೆ ಉಜ್ವಲವಾಗುತ್ತದೆ.

ರಂಗಚಟುವಟಿಕೆಯ ಪರಿಸರದಿಂದಲೇ ಇಂದು ಎಷ್ಟೋ ನಟಿಯರು ಇವುಗಳ ಪ್ರಭಾವದಿಂದಲೇ ರಂಗನಟಿಯರಾಗಿದ್ದು, ವಿಶೇಷವಾಗಿ ಕೆ.ನಾಗರತ್ನ ಹೇಳುವ ಪ್ರಕಾರ "ನನಗೆ ಹತ್ತು ವರ್ಷವಿರಬಹುದು ನನ್ನ ವಾರಿಗೆಯ ಹುಡುಗಿಯರನ್ನೆಲ್ಲಾ ಕಲೆಹಾಕಿ ನಮ್ಮೂರಿನ ಮೈಲಾರಪ್ಪ ಎಂಬುವವರು 'ಸಂಸಾರ' ಎಂಬ ಸಾಮಾಜಿಕ ನಾಟಕವನ್ನು ಮಾಡಿಸಿದರು. ಅವರು ಹೇಳಿಕೊಟ್ಟಿದ್ದನ್ನೆಲ್ಲಾ ಶ್ರದ್ಧೆಯಿಂದ ಕಲಿತು ಅಭಿನಯಿಸಿದೆವು. ನಾಟಕ ಚೆನ್ನಾಗಿತ್ತು ಎಂದು ನೋಡಿದವರು ಅಭಿಪ್ರಾಯಪಟ್ಟರು. ನನಗೆ ಪಾತ್ರ ಮಾಡುವ ಆಸೆ ಆಗ ಕುಡಿಯೊಡೆದಿದ್ದು, ಮುಂದೆ ಅನಿವಾರ್ಯವಾಗಿ ನಂತರ ಅದೊಂದು ಹುಚ್ಚಾಗಿ ಬೆಳೆಯಿತು. ಸಂಸಾರ ನಾಟಕ ಮಾಡಿ ಸ್ವಲ್ಪ ದಿನಗಳ ನಂತರ ಹರಿಶ್ಚಂದ್ರ ನಾಟಕದಲ್ಲಿ ಲೋಹಿತಾಶ್ವರ ಪಾತ್ರ ಮಾಡಿದ್ದೆ (ನಿರೂಪಣೆ: ಗುಡಿಹಳ್ಳಿ ನಾಗರಾಜ 'ಮರಿಯಮ್ಮನಹಳ್ಳಿ ರಂಗಸಿರಿ' (ಕೆ.ನಾಗರತ್ನಮ್ಮನವರ ಆತ್ಮಚರಿತ್ರೆ) ರಂಗಪ್ರವೇಶ, ಪುಟ, ೭).

ಹೀಗೆ 'ನಟಿ'ಯರು ಬಾಲ್ಯದಲ್ಲಿಯೇ ರಂಗ ಪ್ರವೇಶಿಸಲು ಆಯಾ ಪರಿಸರವೇ ಬಹುಮಟ್ಟಿಗೆ ಕಾರಣವಾಗಿದೆ. ಇದಕ್ಕೆ ಹಲವಾರು ಜ್ವಲಂತ ನಿದರ್ಶನಗಳೇ ಇವೆ. 'ಸುಭದ್ರಮ್ಮನವರು ಪ್ರಥಮವಾಗಿ ಮಂಗಳೂರಿಗೆ ಸುಮಂಗಲ ನಾಟ್ಯ ಸಂಘ ಕಂಪನಿಯಲ್ಲಿ 'ಕುರುಕ್ಷೇತ್ರ' ನಾಟಕದ ಮಾಯಾ ಪಾತ್ರಕ್ಕಾಗಿ ೧೨ ವರ್ಷದ ಪ್ರಾಯದಲ್ಲಿಯೇ ಬಣ್ಣ ಹಚ್ಚಿಕೊಂಡರು' (ಲೇ. ಗವೀಶ್ ಹಿರೇಮಠ, ರಂಗ ಕುಸುಮಗಳು, ಪುಟ, ೨೪). ಇದೇ ತರಹದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ರಂಗನಟಿಯರು ಬಾಲ್ಯದಲ್ಲಿ ಅಂತದ್ದೇ ಪರಿಸರದಲ್ಲಿ ನಟಿಯರಾಗಿ ರಂಗಪ್ರವೇಶ ಮಾಡಿದ್ದಾರೆ.

ಕೂಡ್ಲಿಗಿಯ ಪದ್ಮ ಹಾಗೂ ಬಿ.ಶಿವಕುಮಾರಿ ಇವರು ಕೂಡ ಪ್ರೌಢಶಾಲಾ ಹಂತದಲ್ಲಿಯೇ ಬಣ್ಣವನ್ನು ಹಚ್ಚಿ ಕೊಂಡಿದ್ದಾರೆ. ಅಂದರೆ, ಪದ್ಮರ ಚಿಕ್ಕಮ್ಮ ರಂಗನಟಿ, ಹಾಗೂ ಬಿ.ಶಿವಕುಮಾರಿಯ ಅಜ್ಜಿ (ತಾಯಿಯ ತಾಯಿ) ಟಿ.ದುರ್ಗಮ್ಮ ಹಾಗೂ ಚಿಕ್ಕಮ್ಮ ರಂಗಕಲಾವಿದೆಯರು. ಹೀಗೆ ಅವರ ಕೌಟುಂಬಿಕ ಪರಿಸರಗಳು ಇವರನ್ನು ರಂಗಪ್ರವೇಶ ಮಾಡಲು ರಂಗಭೂಮಿಗೆ ಕಾಲಿಡಲು ಅನುವುಮಾಡಿಕೊಟ್ಟಂತಾಗಿದೆ. ಭವಿಷತ್ತಿನ ದಿನಗಳಲ್ಲಿ ಮೇರುನಟಿಯಾಗಲು ಕನಸು ಕಂಡಂಥವರು ಇವರಾಗಿದ್ದಾರೆ.

ಬಳ್ಳಾರಿಯ ಯಳ್ಳಾರ್ತಿಯ ಚಾಮುಂಡೇಶ್ವರಿಯೂ ಬಾಲ್ಯದಲ್ಲಿ ಬಣ್ಣ ಹಚ್ಚಿದ್ದು. ಹೆಚ್.ಎಂ. ವೀರಭದ್ರಯ್ಯ ಸ್ವತಃ ಪೆಟಗಿ ಮಾಸ್ತರ, ಹೀಗಿದ್ದ ಮೇಲೆ ಉನ್ನತವರ್ಗದವರಾಗಿದ್ದರೇನು? ಯಾರಾದರೇನಂತೆ ಕಲಾ ಸರಸ್ವತಿ ಕೈಬೀಸಿ ಕರೆದಾಗ ಯಾವ ಹಂಗೇಕೆ? ಇಂಥ ಪರಿಸರದಲ್ಲಿ ಬೆಳೆದಿರುವ ನಟಿಯರು ಕಲಾ ಆರಾಧಕರಾಗಿ ಕಲಾದೇವಿಯ ಸೇವೆಗೈಯುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯ ರಂಗಭೂಮಿಯನ್ನು ನಾವು ಅವಲೋಕಿಸಿದಾಗ, ಕೌಟುಂಬಿಕ ಪರಿಸರದಲ್ಲಿ ನಟಿಯರ ಪರಂಪರೆ ಸಾಗಿಕೊಂಡು ಬಂದಿರುವುದು ಸರ್ವವಿದಿತ. ಆದರೆ ಬಹುತೇಕ ನಟಿಯರು ಹೀಗೆ ಬಂದಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ನಟಿಯರು ಯಾವುದೇ ಪ್ರಭಾವಕ್ಕೆ ಒಳಗಾಗದೇ ಇವರು ರಂಗಪ್ರವೇಶ ಮಾಡಿದ್ದಾರೆ. ಇದು ಅಲ್ಲದೆ ಯೌವ್ವನಾವಸ್ಥೆಯಲ್ಲಿ ಯಾವುದೇ ಕಾರಣಕ್ಕೆ ಅನಿವಾರ್ಯವಾಗಿ ರಂಗನಟಿಯರಾಗಿದ್ದವರು ನಮ್ಮ ಪಕ್ಕದ ಜಿಲ್ಲೆಗಳಿಂದ ವಲಸೆ ಬಂದಿದ್ದಾರೆ.

ದೇಶದ ಕಲಾ ಮಾಧ್ಯಮದ ಎಲ್ಲಾ ಪ್ರತಿಭಾವಂತರು ನಾಡಿನ, ದೇಶದ ಸಂಪತ್ತು. ಈ ಸಂಪತ್ತನ್ನು ನಾವು ಬೆಳಕಿಗೆ ತರಬೇಕೇ ವಿನಃ ಅದನ್ನು ಹಾಗೆಯೇ ಕೊಳೆತು ಹೋಗುವಂತೆ ಮಾಡಬಾರದು. ಕಲೆಯು ಯಾವಾಗಲೂ ಯೋಗ್ಯತೆ ಇರುವ ವ್ಯಕ್ತಿಯನ್ನೇ ಆಯ್ಕೆ ಮಾಡಿಕೊಳ್ಳುತ್ತದೆ. ಕಲಾ ಜೀವಂತಿಕೆಗೆ ನಾವು ಕಲಾವಿದರನ್ನು ಆರಾಧಿಸಬೇಕು, ಅವರನ್ನು ಗೌರವಿಸಿ, ಪ್ರೀತಿಸಬೇಕು. ಕಲಾಬದುಕಿಗೆ ಒಗ್ಗಿಕೊಂಡ ಅವರು ಅವರದೇ ಆದ ಅನೇಕ ಸಂದರ್ಭಗಳು ಅವರನ್ನು ದುಃಖಿತರನ್ನಾಗಿ ಮಾಡುತ್ತದೆ. ಆದ್ದರಿಂದ ಕಲಾವಂತರಿಗೆ ನಾವು ಮಾನವಂತ ರಾಗಿ ನಡೆದುಕೊಳ್ಳಬೇಕು. ಇಂಥ ಪರಿಸರವಿದ್ದಾಗ ಒಬ್ಬ ನಟಿಯು ಯಾವುದೇ ಅಂಜಿಕೆ, ಅಳುಕಿಲ್ಲದೆ ಸರಾಗವಾಗಿ ಮುಕ್ತವಾಗಿ ಅವರು ರಂಗ ಪ್ರವೇಶವನ್ನು ಮಾಡುತ್ತಾರೆ. ಇಂಥಹ ಸಾಮಾಜಿಕ ಸಂದರ್ಭಗಳು ಅವರನ್ನು ಮೇರು ನಟಿಯರಾಗಲು ಕಾರಣವಾಗುತ್ತದೆ. ಆದ್ದರಿಂದ ನಟಿಯರ ಸರ್ವತೋಮುಖ ಏಳಿಗೆಗೆ ಅಲ್ಲಿಯ ಪರಿಸರ ಕಾರಣೀಭೂತವಾದ ಅಂಶವಾಗಿರುತ್ತದೆ. ಈಗ ವಯಸ್ಸಾಗಿ ಸುಮ್ಮನೆ ಕುಳಿತ್ತಿದ್ದೇನೆ ಎಂದು ನಮಗೆ ಹೇಳಿದರು. ಆ ವಯಸ್ಸು ಹಾಗಿತ್ತು ಪಾತ್ರಗಳು ಹಾಗೆಯೇ ಇದ್ದವು. ಆ ಪಾತ್ರಗಳಿಗೆ ನಾವು ಕೊಟ್ಟಿರುವ ಜೀವಂತಿಕೆ ಎಲ್ಲ ಪ್ರೇಕ್ಷಕರ ಹೃದಯಗೆದ್ದು ನಮ್ಮನ್ನೆಲ್ಲಾ ಮೈಮರೆಸುತ್ತಿದ್ದವು. ಪ್ರೇಕ್ಷಕರ ಮನವನ್ನು ರಂಜಿಸುತ್ತಿದ್ದವು.

ಇಡೀ ಬಳ್ಳಾರಿ ಜಿಲ್ಲೆಯಲ್ಲಿಯೇ ಹಲವು ರಂಗನಟಿಯರು ಚಿಕ್ಕವಯಸ್ಸಿನಲ್ಲಿ ಖ್ಯಾತಿಯನ್ನು ಗಳಿಸಿದ್ದರು. ಹಲವು ವೃತ್ತಿ ಕಂಪನಿಗಳಲ್ಲಿ ಭಾಗವಹಿಸಿ ದಾಂಡೇಲಿ, ಹಳಿಯಾಳ, ಅಂಬಿಕಾನಗರ, ಹುಬ್ಬಳ್ಳಿ, ಧಾರವಾಡ, ಹಾವೇರಿ, ಸವಣೂರು, ಶಿಗ್ಗಾಂವಿ, ಚಿತ್ರದುರ್ಗ, ಮೈಸೂರು, ಬೆಂಗಳೂರು, ದಾವಣಗೆರೆ, ಗುಲ್ಬರ್ಗಾ, ಬೀದರ್, ಬಿಜಾಪುರ, ರಾಯಚೂರು, ಗದಗ, ಡಂಬಳ, ನರಗುಂದ, ಕೊಪ್ಪಳ, ಸಿಂಧನೂರು, ಆಂಧ್ರ ಪ್ರದೇಶ ಹೀಗೆ ಕರ್ನಾಟಕದ ಹಲವು ಸ್ಥಳಗಳಲ್ಲಿ ಹಾಗೂ ಬೇರೆ ರಾಜ್ಯಗಳಿಗೂ ಹೋಗಿ ಹೆಸರು ಮಾಡಿದ್ದಾರೆ. ಗುಬ್ಬಿ ವೀರಣ್ಣ, ಬಾಳಪ್ಪ, ಧುತ್ತರಗಿ, ಕೊಣ್ಣೂರು ಅರಿಶಿಣಗೋಡಿ ಈ ಎಲ್ಲ ವೃತ್ತಿರಂಗಭೂಮಿ ಕಂಪನಿಗಳಲ್ಲಿ ನಮ್ಮ ಬಳ್ಳಾರಿ ಜಿಲ್ಲೆಯ ನಟನಟಿಯರು ಕಲಾಸೇವೆಯನ್ನು ಮಾಡುತ್ತಾ ಬಂದಿದ್ದಾರೆ.

ಈ ರೀತಿಯ ಹಂತಗಳನ್ನು ಕೊಟ್ಟಿರುವುದು ಆಯಾನಟಿಯರು ಆಯಾ ಕಾಲದಲ್ಲಿ ಏನನ್ನು ಮಾಡಿದರು. ಏಕೆ ಯಾವ ಯಾವ ಸ್ಥಾನವನ್ನು ಅವರು ಅಲಂಕರಿಸಲಿಲ್ಲ ಅಂದರೆ ಇವರ ಕಲಾ ಪೋಷಣೆಗೆ ನಮ್ಮ ಸಮಾಜ

ದಲ್ಲಿರುವ ವ್ಯವಸ್ಥೆ ಎಲ್ಲವನ್ನು ಅರಿತೇ ನಾವು ಜೀವನದ ಹಲವು ಸ್ತರಗಳಲ್ಲಿ ಯಾವ ರೀತಿಯ ಬದುಕನ್ನು ಅವರು ಸ್ವೀಕರಿಸಿಕೊಂಡು ಎದುರಿಸಿದ್ದರು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅವರು ಹೇಗೆ ನಿಭಾಯಿಸಿಕೊಂಡು ಬಂದರು. ಅವರವರ ಸಂದರ್ಭಗಳು ಅಲ್ಲಿ ಹೇಗೆ ಸೃಷ್ಟಿಗೊಂಡವು. ಅವುಗಳನ್ನೆಲ್ಲಾ ಸಂಭಾಳಿಸಿಕೊಂಡು ದುರಂತರಾಗಿರಲಿ ಹೆಸರುಗಳಿಸದೇ ಇರುವವರಾಗಲೀ, ಖ್ಯಾತಿ ಪಡೆದವರೇ ಆಗಿರಲಿ ಅವರವರ ಸಮಯ ಸಂದರ್ಭ ಒಳಹೊಕ್ಕು ನಾವು ಬರೆದರೂ ನಟಿಯ ಅನುಭವ ಸಿಹಿಯಾಗಿತ್ತೋ ಹುಳಿಯಾಗಿತ್ತೋ ಕಹಿಯಾಗಿತ್ತೋ ಆಕೆಗೇ ಗೊತ್ತು.

ಬಳ್ಳಾರಿ ಲಲಿತಮ್ಮ :

ಜನನ	:	೧೯೨೩
ವ್ಯಾಸಂಗ	:	ಐದನೇ ತರಗತಿ
ತಂದೆ	:	ತಿಮ್ಮಪ್ಪ (ಸಮರ್ಥ ಪಿಟೀಲು ವಾದಕರು)
ತಾಯಿ	:	ವೀರಮ್ಮ
ಮೂಲಭಾಷೆ	:	ತೆಲುಗು ನಂತರ ಕನ್ನಡ ಕಲಿತದ್ದು
ಊರು	:	ಮೂಲ ಅನಂತಪುರ ಜಿಲ್ಲೆಯ ಉರವಕೊಂಡ ಸಮೀಪದ ಆಮಿದ್ಯಾಲ. ಪ್ರಸ್ತುತ ಬಳ್ಳಾರಿಯಲ್ಲಿ ವಾಸಿಸುತ್ತಿದ್ದಾರೆ.
ಗುರು	:	ಅಕ್ಕ ವೆಂಕಮ್ಮ, ಪಂಡಿತ ವೆಂಕಪ್ಪಯ್ಯ, ಕೆ.ಹಿರಣ್ಯಯ್ಯ.
ಹವ್ಯಾಸ	:	ಶಾಸ್ತ್ರೀಯ ಹಾಡುಗಾರಿಕೆ ಮತ್ತು ಭರತನಾಟ್ಯ.
ಕುಟುಂಬ ವರ್ಗ	:	ಅಕ್ಕ : ವೆಂಕಮ್ಮ ಅಣ್ಣಂದಿರು : ವೆಂಕಪ್ಪ, ರಂಗಪ್ಪ ತಂಗಿ : ರತ್ನಮಾಲಾ

೪.೨.೧. ಬಾಲ್ಯ, ಪರಿಸರ, ಶಿಕ್ಷಣ, ಕಲಿಕೆ, ತರಬೇತಿ : ಲಲಿತಮ್ಮ ಐದನೇ ವಯಸ್ಸಿನಲ್ಲಿದ್ದಾಗ ಅವರ ತಂದೆ ತಿಮ್ಮಪ್ಪ ತೀರಿಕೊಂಡರು. ಅಕ್ಕ-ಅಣ್ಣಂದಿರು ತಂದೆಯ ಕೊರತೆಯ ಅನುಭವ ಬಾರದಂತೆ ಪೋಷಿಸಿದರು. ಅಕ್ಕ ವೆಂಕಮ್ಮ ಲಲಿತಮ್ಮನವರ ಮೊದಲ ಗುರುವಾಗಿದ್ದರು. ಶಾಸ್ತ್ರೀಯ ಹಾಡುಗಾರಿಕೆ ಮತ್ತು ಭರತನಾಟ್ಯಗಳೆರಡನ್ನು ಅವರು ಶ್ರದ್ಧೆಯಿಂದ ಕಲಿಸಿದರು. ಸಂಗೀತ ಶಿಕ್ಷಣ ಸಾಲದು ಎಂದೆನಿಸಿದಾಗ ಪಂಡಿತ ವೆಂಕಪ್ಪಯ್ಯನವರಿಂದ ಪಾಠ ಹೇಳಿಸಿದರು. ತೆಲುಗು ಮಾಧ್ಯಮದಲ್ಲಿಯೇ ಲಲಿತ ಐದನೇ ತರಗತಿಯವರೆಗೆ ಓದಿದರು.

ನಂತರ ಶಾಲಾ ಶಿಕ್ಷಣಕ್ಕೆ ವಿದಾಯ ಹೇಳಿದ ಲಲಿತಮ್ಮನವರಿಗೆ ಮನೆಯಲ್ಲಿಯೇ ಮೇಷ್ಟ್ರನ್ನು ನೇಮಿಸಿ ಓದಿಸಿದರು.

ಪರಿಸರ : ಲಲಿತಾ ತಮ್ಮ ಕುಟುಂಬದೊಡಗೂಡಿ ಪ್ರಥಮ ಸಲ ಕನ್ನಡ ನಾಟಕ ನೋಡಿದ್ದು ಒಂದು ಆಕಸ್ಮಿಕ. ೧೯೪೦ರಲ್ಲಿ ಬಳ್ಳಾರಿಯಲ್ಲಿ ಸುಬ್ಬಯ್ಯನಾಯ್ಡು ಅವರ ಕಂಪನಿಯು ಕ್ಯಾಂಪ್ ಹೂಡಿತ್ತು. ಅದರಲ್ಲಿ ಆರ್.ನಾಗೇಂದ್ರ ರಾವ್, ಹಿರಣ್ಣಯ್ಯ ಮುಂತಾದ ಹೆಸರಾಂತ ಕಲಾವಿದರಿದ್ದರು. ಲಲಿತಮ್ಮನವರ ಅಣ್ಣ ವೆಂಕಪ್ಪ ಕಡಪಾ ಕಲ್ಲುಗಳ ವ್ಯಾಪಾರವನ್ನು ಮಾಡುತ್ತಿದ್ದರು. ಸುಬ್ಬಯ್ಯ ನಾಯ್ಡು ಅವರು ವೆಂಕಪ್ಪನವರಿಂದ ಕಲ್ಲುಗಳನ್ನು ಬಾಡಿಗೆ ಪಡೆದು ಥೇಟರಿನಲ್ಲಿ ಹಾಕಿಸಿದ್ದರು. ಹೀಗಾಗಿ ಅವರಿಬ್ಬರಲ್ಲಿ ಪರಿಚಯ, ಸ್ನೇಹ ಇದರ ಪರಿಣಾಮದಿಂದ ವೆಂಕಪ್ಪನವರಿಗೆ ಒಂದು ಪಾಸ್ ದೊರೆತ್ತಿತ್ತು. ಕುಟುಂಬದವರೆಲ್ಲ ಹೋಗಿ 'ಎಚ್ಚಮ್ ನಾಯಕ' ನಾಟಕವನ್ನು ನೋಡಿದರು. ಇದುವೇ ಲಲಿತಮ್ಮ ನೋಡಿದ ಪ್ರಥಮ ನಾಟಕ. ಅವರಿಗೆ ನಾಟಕದ ಹಾಡುಗಳು ಬಹಳ ಆಕರ್ಷಕ ಎನಿಸಿದವು. ತಮಗೆ ಗೊತ್ತಿದ್ದ ಕರ್ನಾಟಕ ಸಂಗೀತ ಶೈಲಿಯ ಹಾಡುಗಾರಿಕೆಗಿಂತ ಸ್ವಲ್ಪ ಭಿನ್ನವಾಗಿದ್ದ ರಂಜನೀಯವೂ ಆಗಿದ್ದ ನಾಟಕದ ಹಾಡುಗಳನ್ನು ಕಲಿಯಬೇಕೆಂಬ ಇಚ್ಛೆ ಅವರಲ್ಲಿ ಹೆಚ್ಚಾಯಿತು. ಆ ಆಕಾಂಕ್ಷೆಯನ್ನು ತಾಯಿಯಲ್ಲಿ ತೋಡಿಕೊಂಡರು. ಒಂದು ದಿನ ಹೀಗೆ ಆಕಸ್ಮಾತಾಗಿ ತಮ್ಮ ಮನೆಯ ಮುಂದೆ ಹಾದು ಹೊರಟಿದ್ದ ಹಿರಣ್ಣಯ್ಯನವರನ್ನು ಲಲಿತಮ್ಮನವರ ತಾಯಿ ಮನೆಯೊಳಗೆ ಕರೆದು "ನನ್ನ ಮಗಳು ಆಸೆಯಿಂದ ನಿಮ್ಮ ನಾಟಕದ ಹಾಡನ್ನು ಕಲಿಯಬೇಕೆನ್ನುತ್ತಾಳೆ ದಯವಿಟ್ಟು ಆಕೆಗೆ ಹಾಡನ್ನು ಕಲಿಸಿರಿ" ಎಂದು ಕೇಳಿಕೊಂಡರಂತೆ. ಹಿರಣ್ಣಯ್ಯ ಅದಕ್ಕೆ ಒಪ್ಪಿ "ಸದಾರಮೆ ನಾಟಕದ ಹಾಡುಗಳನ್ನು ಕನ್ನಡವೇ ಬಾರದ ಲಲಿತಾ ಯಾವ ಭಾಷೆಯಾದರೇನು? ಆಸಕ್ತಿಯಿಂದಲೇ ಕನ್ನಡ ಹಾಡನ್ನು ಕಲಿತರು."

ಲಲಿತಮ್ಮನ ಅಣ್ಣ ಮದ್ರಾಸಿನಲ್ಲಿ ವ್ಯಾವಹಾರಿಕ ಸಂಪರ್ಕವನ್ನು ಹೊಂದಿದ್ದರು. ಕಡಪಾದ ಸಾಹುಕಾರ ರೊಬ್ಬರು ಲಲಿತಮ್ಮನವರ ಅಣ್ಣನ ಸ್ನೇಹಿತರಾಗಿದ್ದರು. ಅವರು ಲಲಿತಮ್ಮನ ರೂಪ-ಲಾವಣ್ಯ ಕಲೆಗಳ ಸುದ್ದಿ ಮದ್ರಾಸಿಗೆ ತಲುಪಿತು. ಅಲ್ಲಿಯ ಶ್ರೀಮಂತರೇ ನೇರವಾಗಿ ಬಳ್ಳಾರಿಗೆ ಬಂದು ಸಿನೇಮಾದಲ್ಲಿ ಅಭಿನಯಿಸಲು ಲಲಿತಮ್ಮನವರನ್ನು ಆಯ್ಕೆ ಮಾಡಿದರು. ಅಣ್ಣ, ಅಕ್ಕ, ಲಲಿತಮ್ಮ ಮೂವರೂ ೧೯೪೦ರಲ್ಲಿ ಮದ್ರಾಸಿಗೆ ಪ್ರಯಾಣ ಬೆಳೆಸಿದರು. ಜಯಪ್ರದಾ ಎಂಬ ತೆಲುಗು ಸಿನೇಮಾದಲ್ಲಿ ಎರಡನೆಯ ನಾಯಕಿಯಾಗಿ ಆಯ್ಕೆಯಾದರು. ಅಕ್ಕ ವೆಂಕಮ್ಮನವರಿಗೂ ಒಂದು ಸಣ್ಣ ಪಾತ್ರವಿತ್ತು. ಸ್ಟುಡಿಯೋದಲ್ಲಿಯೇ ವಸತಿಯನ್ನು ಹೂಡಿದ್ದರು.

ಅಂದಿನ ಸಿನೆಮಾಗಳು ಇಂದಿನಂತೆ ಇರಲೇ ಇಲ್ಲ. ನಾಟಕದಂತೆ ತಿಂಗಳಾನುಗಟ್ಟಲೇ ಪ್ರಾಕ್ಟೀಸು ನಂತರ ಹಂತ ಹಂತವಾಗಿ ಶೂಟಿಂಗ್ ಆರಂಭವಾಗುತ್ತಿತ್ತು. ಜಯಪ್ರದಾ ಮುಗಿಯಲು ಸುಮಾರು ಆರು ತಿಂಗಳೇ ಆಯಿತು. ಆಗ ಈ ಮೂವರಿಗೂ ಸೇರಿ ೫೦೦ ರೂಪಾಯಿ ಸಂಭಾವನೆಯನ್ನು ನೀಡಲಾಯಿತು. ಸುಂದರ

ರೂಪ-ಲಾವಣ್ಯ ಹೊಂದಿರುವ ಗಾಯಕಿ, ನಟಿ ಲಲಿತಮ್ಮಗೆ ಹೆಚ್ಚಿನ ಬೇಡಿಕೆ ಉಂಟಾಗಿದ್ದು ಸಹಜವೇ ಸರಿ. "ಸುಭದ್ರಾ ಕಲ್ಯಾಣ"ದಲ್ಲಿ ಸುಭದ್ರೆಯಾಗಿ ನಾಯಕಿಯ ಪಾತ್ರವು ದೊರೆಯಿತು. ಇದರಲ್ಲಿ ಸದಾಶಿವರಾವ್ ನಾಯಕ ಪಾತ್ರದಲ್ಲಿದ್ದರು. ಸದಾಶಿವರಾವ್ ಅವರೇ ಈ ಚಿತ್ರದ ನಿರ್ದೇಶಕರು. ಬರಬರುತ್ತ ಆರ್ಥಿಕ ತೊಂದರೆಯಿಂದ ಚಿತ್ರೀಕರಣವು ಕುಂಠಿತಗೊಂಡಿದ್ದು, ಈ ಸಮಯದಲ್ಲಿ ಲಲಿತಮ್ಮ ತಮ್ಮ ಚಿನ್ನದ ಸರ ಮಾರಿ ಅವರಿಗೆ ನೆರವನ್ನು ನೀಡಿದರು.

ಜೆಮಿನಿಯವರ "ಬಾಲನಾಗಮ್ಮ", "ಸುಮತಿ" ಚಿತ್ರಗಳಿಗೆ ಲಲಿತಮ್ಮನವರು ನಾಯಕಿಯಾಗಿ ಆಯ್ಕೆ ಯಾದರು. ಇವೆಲ್ಲ ತೆಲುಗು ಸಿನೇಮಾಗಳು. ಅಲ್ಲಿಯೂ ಆರ್ಥಿಕ ತೊಂದರೆ ಬಂದು, ಸಂಭಾವನೆ ದೊರೆಯಲೇ ಇಲ್ಲ. ಸಣ್ಣದೊಂದು ಬಾಡಿಗೆ ಮನೆಯಲ್ಲಿ ವಾಸ, ಆಕಾಶವಾಣಿ ಕಾರ್ಯಕ್ರಮಗಳ ಅಲ್ಪ ಸಂಭಾವನೆಯಿಂದ ಜೀವನ ನಿರ್ವಹಣೆ ಮಾಡಬೇಕಾಯಿತು.

ಅಲ್ಲಿ ಆಗ ಕೆ.ಹಿರಣ್ಣಯ್ಯನವರು ಮದ್ರಾಸಿಗೆ ಬಂದಿದ್ದರು. ಆಕಸ್ಮಿಕವಾಗಿ ಲಲಿತಮ್ಮನವರ ಭೆಟ್ಟಿ ಯಾಯಿತು. ಸರಿ ಅವರನ್ನು ಒಪ್ಪಿಸಿ 'ಸದಾರಮೆ' ನಾಟಕದ ಸಿದ್ಧತೆಗೆ ತೊಡಗಿದರು. ನಾಟಕದಲ್ಲಿ ಅಭಿನಯಿಸುವ ಅನುಭವವಿಲ್ಲದ ಲಲಿತಮ್ಮನವರಿಗೆ ಒಂದು ರೀತಿಯ ಅಳುಕು ಹಿಂಜರಿಕೆ ಇದ್ದುದರಿಂದ ಹಿರಣ್ಣಯ್ಯನವರು ಅವರಿಗೆ ಧೈರ್ಯವನ್ನು ತುಂಬಿದರು. ತೆಲುಗು ಲಿಪಿಯಲ್ಲಿ ಕನ್ನಡದ ಸಂಭಾಷಣೆಯನ್ನು ಬರೆದುಕೊಂಡು ಬಾಯಿಪಾಠ ಮಾಡಿದರು.

ನಾಟಕದ ದೀಕ್ಷೆ : ಹಿರಣ್ಣಯ್ಯನವರು ಕನ್ನಡ ಉಚ್ಚಾರ ವೈಶಿಷ್ಟ್ಯಗಳನ್ನು ನಾಟಕಾಭಿನಯದ ತಂತ್ರಗಳನ್ನು ಹೇಳಿಕೊಟ್ಟರು. ಹವ್ಯಾಸಿಗರ ನಾಟಕದಲ್ಲಿ ಲಲಿತಮ್ಮನವರು ಸದಾರಮೆ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಇದರಲ್ಲಿ ಹಿರಣ್ಣಯ್ಯನವರದು ಕಳ್ಳನ ಪಾತ್ರ. ಈ ಮೊದಲು ಬಳ್ಳಾರಿಯಲ್ಲಿ ಹಿರಣ್ಣಯ್ಯನವರು ಸದಾರಮೆ ನಾಟಕದ ಹಾಡುಗಳನ್ನು ಕಲಿಸಿದ್ದು ಈಗ ಪ್ರಯೋಜನಕ್ಕೆ ಬಂತು. ಮೊದಲ ನಾಟಕದಲ್ಲಿಯೇ ಮಿಂಚಿದ ಲಲಿತಮ್ಮನವರ ಅಗಾಧ ಪ್ರತಿಭೆಗೆ ಹಿರಣ್ಣಯ್ಯನವರು ಬೆರಗಾದರು. ಅಂತೂ ಸಿನೇಮಾ ನಟಿಯೊಬ್ಬಳು ನಾಟಕದ ದೀಕ್ಷೆಗೆ ಒಳಗಾದಂತಾಯಿತು.

ಮದ್ರಾಸಿನ 'ಸದಾರಮೆ'ಯ ಯಶಸ್ಸಿನಿಂದ ಉತ್ಸಾಹಿತರಾದ ಹಿರಣ್ಣಯ್ಯನವರಿಗೆ ಸ್ವಂತ ಕಂಪನಿ ಮಾಡಬೇಕೆಂಬ ಹಂಬಲ ತೀವ್ರವಾಯಿತು. ೧೯೪೧ ರಲ್ಲಿ ಮೈಸೂರಿನಲ್ಲಿ "ಹಿರಣ್ಣಯ್ಯ ಮಿತ್ರ ಮಂಡಳಿ" ಆರಂಭಿಸಿದರು. ಲಲಿತಮ್ಮ ಮತ್ತು ಅವರ ತಂಗಿ ರತ್ನಮಾಲಾ ಈ ಕಂಪನಿಗೆ ಖಾಯಂ ನಟಿಯರಾಗಿ ಸೇರಿಕೊಂಡರು (ಲೇ. ಡಾ.ಬಸವರಾಜ ಮಲಶೆಟ್ಟಿ, ಸುಧಾ ಪತ್ರಿಕೆ, ಪುಟ, ೬೨-೬೩).

ಈ ರೀತಿಯಾಗಿ ಲಲಿತಮ್ಮನವರಿಗೆ ಬಾಲ್ಯದಿಂದಲೇ ಅಂಥಹ ಪರಿಸರ ಒದಗಿ, ಇಡೀ ಕರ್ನಾಟಕದಲ್ಲೆ ಹೆಸರು ಪಟಿಂಪಿಸಿಕೊಂಡರು. ಸಿನೇಮಾದಿಂದ ರಂಗಭೂಮಿಗೆ ಬಂದರೂ, ರಂಗ ಬದುಕಲ್ಲೇ ಅವರು ಹೆಚ್ಚು ತೃಪ್ತಿಯನ್ನು ಹೊಂದಿದವರಾಗಿದ್ದರು.

ಡಿ. ಹನುಮಂತಮ್ಮ :	ಜನನ	:	ಸುಮಾರು ೧೯೧೫
	ವ್ಯಾಸಂಗ	:	೪ನೇ ತರಗತಿ
	ತಂದೆ	:	ಹುಲುಗಪ್ಪ
	ತಾಯಿ	:	ಹನುಮವ್ವ
	ಭಾಷೆ	:	ಕನ್ನಡ
	ಊರು	:	ಈಗ ಮುಳುಗಡೆಯಾಗಿರುವ ನಾರಾಯಣದೇವರ ಕೆರೆ. ಇವರ ವಂಶಸ್ಥರು ಮರಿಯಮ್ಮನಹಳ್ಳಿ ಯಲ್ಲಿದ್ದಾರೆ.
	ಗುರು	:	ಗರುಡ ಸದಾಶಿವರಾಯರು
	ಹವ್ಯಾಸ	:	ಸಂಗೀತ, ನಾಟ್ಯ
	ಕುಟುಂಬ ವರ್ಗ	:	೧೨ಜನ ಮಕ್ಕಳು ಸಂಜೀವಮ್ಮ ಕಲಾವಿದೆ. ತಮ್ಮ ದುರ್ಗಾದಾಸ ಕನ್ನಡ ರಂಗಭೂಮಿಯ ಶ್ರೇಷ್ಠ ಕಲಾವಿದ.

ಬಾಲ್ಯ : ಕಲಾವಿದರೇ ಮನೆಯಲ್ಲಿದ್ದಾಗ ಆ ರಂಗಸಂಸ್ಕಾರ ಹುಟ್ಟಿನಿಂದಲೇ ಬಂದಿದೆ. ಏಳೆಂಟು ವರ್ಷದಿಂದಲೇ ಸಂಗೀತಾಭ್ಯಾಸ. ಹನುಮಂತಮ್ಮ ಒಂಭತ್ತರ ಪ್ರಾಯದಲ್ಲಿರುವಾಗಲೇ ಸಂಜೀವಮ್ಮ ಹಾಗೂ ದುರ್ಗಾದಾಸರಿಂದ ಒಡಗೂಡಿ ಈ ಮೂವರು ಕಿರಿಯರು ದತ್ತಾತ್ರೇಯ ಮಂಡಳಿಯನ್ನು ಏಕಕಾಲಕ್ಕೆ ಸೇರಿದರು. ಆಗ ಮಂಡಳಿಯು ಕುಂದಾಪುರದಲ್ಲಿ ಕ್ಯಾಂಪ್ ಮಾಡಿದ್ದು; ಒಂಬತ್ತರ ಪ್ರಾಯದ ಹನುಮಂತಮ್ಮ ಮಂಡಳಿ ಪ್ರದರ್ಶಿಸುತ್ತಿದ್ದ ನಾಟಕಗಳ ಬಾಲ ಪಾತ್ರಗಳನ್ನೆಲ್ಲಾ ಅಭಿನಯಿಸತೊಡಗಿದರು.

ಪರಿಸರ : ಮನೆಯಲ್ಲಿ ಎಲ್ಲರು ಕಲಾವಿದರೇ ಇದ್ದು, ಆಗ ನಾರಾಯಣದೇವರ ಕೆರೆಯಲ್ಲಿ ಸಾಂಸ್ಕೃತಿಕ ಪರಿಸರವೇ ತುಂಬಿದ್ದು ಹಲವಾರು ಕಲಾವಿದರ ನೆಲೆ ಆ ಊರಾಗಿತ್ತು. ದೇವರ ದೇಣಿಗೆಯಾಗಿರುವ ಕಂಠಸಿರಿಯಿಂದ ಹನುಮಂತಮ್ಮ ಇಡೀ ನಾಟಕ ಕಂಪನಿಯವರೇ ತಮ್ಮನ್ನು ನೋಡಿ ಬೆರಗುಗೊಳ್ಳುವಂತೆ ಮಾಡಿದ್ದರು. ಬಾಲ್ಯಾವಸ್ಥೆಯಲ್ಲಿ ಕಂಪನಿಗಳಲ್ಲಿದದ್ದರಿಂದ ಅಲ್ಲಿಯ ಸಂಸ್ಕಾರಗಳು ಆಸಕ್ತಿ ಇದ್ದುದರಿಂದ ತಾನಾಗಿಯೇ ಅವುಗಳು ಹನುಮಂತಮ್ಮರ ತೆಕ್ಕೆಗೆ ಬಂದು ಚಿಕ್ಕವಯಸ್ಸಿನಲ್ಲಿ ಬದುಕೇ ಕಲೆಯಾಯಿತು. ಕಲಾವಿದರೊಂದಿಗಿನ ಪರಿಸರದಲ್ಲಿಯೇ ಇದ್ದುದರಿಂದ ಕಲೆಯು ಅವಿರತವಾಗಿ ಇವರಲ್ಲಿಗೆ ಬಂದುಬಿಟ್ಟಿತು.

೧೯೩೩ ರಲ್ಲಿ ಆದವಾನಿ ನರಸಮ್ಮ ಗರುಡರ ಮಂಡಳಿಯನ್ನು ಪ್ರವೇಶಿಸಿದರು. ಆ ಸಂದರ್ಭದಲ್ಲಿ ಹದಿಹರೆಯದ ಸ್ತ್ರೀ ಪಾತ್ರಗಳನ್ನು ಹನುಮಂತಮ್ಮ ನಿರ್ವಹಿಸಿ ನಾಟಕಗಳಿಗೆ ಹೊಸಕಳೆಯನ್ನೇ ತಂದು ಕೊಟ್ಟರು.

"ಮಾಯಾ ಬಜಾರ"ದ ವತ್ಸಲೆಯ ಪಾತ್ರವು ಹನುಮಂತಮ್ಮನ ಅಭಿನಯ ಸಾಮರ್ಥ್ಯಕ್ಕೆ ಒಳ್ಳೆಯ ನಿದರ್ಶನವಾಗಿದೆ. ತನ್ನನ್ನು ಲಕ್ಷ್ಮಣ ಕುಮಾರನಿಗೆ ಕೊಟ್ಟು ಮದುವೆ ಮಾಡುವರೆಂದು ತಿಳಿದಾಗ, ಅಭಿಮನ್ಯುವಿನ ಮೇಲೆ ಮನಸ್ಸಿಟ್ಟು ಅವಳು ತನ್ನ ಪ್ರಾಣರ್ಪಣೆಗೈಯಲು ಸಿದ್ಧಳಾಗುತ್ತಾಳೆಯೇ ಹೊರತು ಮಂಗನ ಕೈಯಿಂದ ಮಾಂಗಲ್ಯವನ್ನು ಕಟ್ಟಿಸಿಕೊಳ್ಳಲಾರೆನೆನ್ನುತ್ತಾಳೆ. ತನ್ನ ಮನೋಗತವನ್ನು ತಿಳಿದ ರುಕ್ಮಿಣಿಯನ್ನು ಕಾಲು ಹಿಡಿದು ರಕ್ಷಿಸುವಂತೆ ಪ್ರಾರ್ಥಿಸುತ್ತಾಳೆ. ವತ್ಸಲೆಯ ಪಾತ್ರದ ಹನುಮಂತಮ್ಮನಿಗೆ ಆಗ ಹದಿನೈದರ ಹರೆಯ. ಪಾತ್ರದ ಸ್ವಭಾವವನ್ನು ಅರಿತು ಅಭಿನಯಿಸಿದ ಅವರ ರೀತಿ ಮೆಚ್ಚುವಂಥದು. ಚಿಕ್ಕಪ್ಪ ಕೃಷ್ಣನ ಕಪಟವನ್ನು ತಿಳಿಯದೆ ತೋರುವ ಕೋಪ, ಅಭಿಮನ್ಯುವಿನ ಮೇಲಿನ ಅಭಿಮಾನ, ಸಹಾಯಕ್ಕಾಗಿ ರುಕ್ಮಿಣೀಯನ್ನು ಯಾಚಿಸುವಲ್ಲಿನ ಆರ್ತತೆ ಇವೇ ಮೊದಲಾದ ಭಾವಗಳನ್ನು ಅವರು ತುಂಬ ಪರಿಣಾಮಕಾರಿಯಾಗಿ ತೋರುತ್ತಿದ್ದರು.

'ಚವತಿಯ ಚಂದ್ರ'ದ ಸತ್ಯಭಾಮೆ ತುಂಬ ಮುಂಗೋಪಿ. ಅತ್ಯಾಚಾರಿಯಾದ ಚಿಕ್ಕಪ್ಪ ಪ್ರಸೇನನನ್ನು ಅವಳು ಎಷ್ಟು ಸೇರುವುದಿಲ್ಲ.

> ಏನೆಂದು ಪೇಳಲಿ । ಮಾನವಿಲ್ಲದ ಚಿಕ್ಕತಾತನ
>
> **ಹೀನ ನಡತೆಗಳನ್ನು ನೋಡೀ ಎನಗತಿ ಹೇಸಿಗೆಯು ಬಂದುದು ।**
>
> **ಆರುವಿಲ್ಲದವನಾಗಿ । ಸುರೆಯನತಿಶಯ ಪಾನಮಾಡಿ ।**
>
> **...ಲಜ್ಜೆ ದೊರೆತು ।**

ಎಂದು ಪ್ರಸೇನನ ಅನಾಚಾರವನ್ನು ಕುರಿತು ತಂದೆ ಸತ್ರಾಜಿತನೆದುರು ಹಾಡುತ್ತಿದ್ದರೆ ಚಿಕ್ಕಪ್ರಾಯದ ಸತ್ಯಭಾಮೆಯ ಪುಟ್ಟಬಾಯಿಂದ ಇಂಥ ಕಠೋರ ವಚನಗಳನ್ನು ಕೇಳಿ ಯಾರಿಗಾದರೂ ಅಚ್ಚರಿಯಾಗಬೇಕು. ಅಂತೆಯೇ "ಹನುಮಂತಮ್ಮ ಹಾಡತೊಡಗಿದರೆ ಅವರ ಪದಗಳನ್ನು ಕೇಳಲು ನಾಟ್ಯಾಚಾರ್ಯ ಗರುಡರ ವಿಂಗ್ಸ್‌ನಲ್ಲಿ ಕುರ್ಚಿಹಾಕಿ ಕೂಡ್ರುತ್ತಿದ್ದರು."

ಮಧುರ ಕಂಠದ ಹನುಮಂತಮ್ಮ ನಿರ್ವಹಿಸುತ್ತಿದ್ದ "ಗಿರಿಜಾ ಕಲ್ಯಾಣ" ನಾಟಕದ ಪಾರ್ವತಿ ಹಾಗೂ "ಕೀಚಕ ವಧೆ" ಯ ಉತ್ತರೆಯ ಪಾತ್ರಗಳು ಅವರ ಅಭಿನಯ ಕಲೆಗೆ ಸಾಕ್ಷಿಯಾದವು (ಲೇ. ಡಾ.ಬಸವರಾಜ ಜಗದಾಂಬೆ ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ಪುಟ, ೧೪೭- ೧೪೮). ಹೀಗೆ ಬಾಲ್ಯಾವಸ್ಥೆಯಿಂದಲೇ ಹನುಮಂತಮ್ಮ ಶ್ರೇಷ್ಠ ನಟಿ ಎನಿಸಿಕೊಂಡರು.

ಸೋಗಿರತ್ನ :

ಜನನ	:	೧೯೫೦
ವ್ಯಾಸಂಗ	:	೩ನೇ ತರಗತಿ
ತಂದೆ	:	ತುಮೆನಪ್ಪ
ತಾಯಿ	:	ಕಾಳಮ್ಮ
ಮೂಲಭಾಷೆ	:	ಕನ್ನಡ
ಊರು	:	ನಾಗತಿ ಬಸಾಪುರ, ಪ್ರಸ್ತುತ ಸೋಗಿಯಲ್ಲಿ ವಾಸ.
ಗುರು	:	ಮಲ್ಲೇಶಪ್ಪ ಗವಾಯಿ (ಪ್ರೋತ್ಸಾಹ)
ಹವ್ಯಾಸ	:	ಗಾಯನ, ನೃತ್ಯ
ಕುಟುಂಬ ವರ್ಗ	:	ಇಬ್ಬರು ಸಹೋದರಿಯರಿದ್ದಾರೆ
ಕೆಲಸ ಮಾಡಿದ ಕಂಪನಿಗಳು	:	ಹಂಚಿನಾಳ ಕರಿಯಪ್ಪನ ಕಂಪನಿ ೨ ವರ್ಷ, ಶಿಕಾರಿಪುರ ಆನವಟ್ಟಿ ರಾಜಣ್ಣನ ಕಂಪನಿ, ಹಿರೇಕೆರೂರು ಬೆಳವಗಿ ತುಳಸೀ ದಾಸರ ಕಂಪನಿ, ಗುತ್ತಲ, ೧ ವರ್ಷ ಕುಮಾರಸ್ವಾಮಿ ಕಂಪನಿ ಚಿತ್ರದುರ್ಗ ೧.೫ ವರ್ಷ ಕಡಪಟ್ಟಿ ಪ್ರಕಾಶನ ಕಂಪನಿ.

ಬಾಲ್ಯ : ತಮ್ಮ ೧೦ನೇ ವಯಸ್ಸಿನಲ್ಲಿ ಕರೋಕರ್ ನಾಟಕದ ಮೂಲಕ ರಂಗಕ್ಕೆ ಪ್ರವೇಶಿಸಿದರು. ಅನಂತರ 'ದಕ್ಷಬ್ರಹ್ಮ' ಎಂಬ ಜಾನಪದ ದೊಡ್ಡಾಟ, ಮಲಮಗಳು ನಾಟಕದಲ್ಲಿ ಪಾತ್ರವಹಿಸಿದರು. ಯಾವುದೇ ಅಭಿನಯ ತರಬೇತಿ ಇಲ್ಲದಿದ್ದರಿಂದ ಆರಂಭದಲ್ಲಿ ನಟಿಸಲು ಹೆದರುತ್ತಿದ್ದ ಇವರು ೧೯೬೯ ರಲ್ಲಿ 'ವೀರ ಅಭಿಮನ್ಯು' ನಾಟಕದಲ್ಲಿ ಅಭಿನಯಿಸಿದ ನಂತರ ಇನ್ನಷ್ಟು ಗಟ್ಟಿಯಾದರು. ನಂತರ ಹಲವಾರು ನಾಟಕ ಕಂಪನಿಗಳಲ್ಲಿದ್ದು ರಂಗಶಿಕ್ಷಣ ಅವರಿಗೆ ನಿರಂತರವಾಗಿ ದೊರೆಯಿತು.

ಪರಿಸರ : ಸೋಗಿ ಗ್ರಾಮದಲ್ಲಿ ವೀರೇಶ್ವರ ಜಾನಪದ ದೊಡ್ಡಾಟ ಸಂಘದಲ್ಲಿ ಸೋಗಿ ಹಾಲಯ್ಯ ಸ್ವಾಮಿ, ಮಲ್ಲಪ್ಪ ಗವಾಯಿಗಳು ಜಾನಪದ ದೊಡ್ಡಾಟಗಳನ್ನು ಆಡುತ್ತಿದ್ದು, ಚಿಕ್ಕವಯಸ್ಸಿನಲ್ಲಿ ಇದನ್ನು ಗಮನಿಸಿದ ರತ್ನ ಸಹಜವಾಗಿ ರಂಗಾಕರ್ಷಣೆಗೆ ಒಳಗಾಗಿ, ೧೦ನೇ ವಯಸ್ಸಿನಲ್ಲಿ ರಂಗ ಪ್ರವೇಶಿಸಿದರು. ಹಾಲಯ್ಯನವರ ಪ್ರೋತ್ಸಾಹದಿಂದ ರಂಗಭೂಮಿಗೆ ಬಂದು ಸ್ವತಃ ತಂಡವಾದ "ಶ್ರೀ ಜಗದಂಬಾ ಜಾನಪದ ಕಲಾ ತಂಡ ಸೋಗಿ"ಯನ್ನು ೧೯೯೬ ರಲ್ಲಿ ಆರಂಭಿಸಿದರು.

ಆಡಿರುವ ನಾಟಕಗಳು :

- ಕರೋಕರ್
- ದಕ್ಷಬ್ರಹ್ಮ
- ಮಲಮಗಳು
- ವೀರ ಅಭಿಮನ್ಯು
- ರಕ್ತರಾತ್ರಿ
- ಪ್ರಮೀಳಾ ದರ್ಬಾರ
- ಸತ್ಯಹರಿಶ್ಚಂದ್ರ
- ಗಿರಿಜಾಕಲ್ಯಾಣ
- ಶಿಶುನಾಳ ಷರೀಫ ಶಿವಯೋಗಿ
- ಸಂಗ್ಯಾ-ಬಾಳ್ಯಾ
- ಅತ್ತಿಗೆಗೆ ಬಂದ ಅಗ್ನಿ ಪರೀಕ್ಷೆ
- ಹೇಮರೆಡ್ಡಿಮಲ್ಲಮ್ಮ
- ಸೇಡಿನ ಸರ್ಪ
- ಚಿನ್ನದ ಗೊಂಬೆ
- ಧರ್ಮ ದೇವತೆ
- ಭಕ್ತ ಮಾರ್ಕಂಡೇಯ
- ತಾಯಿ ಕರಳು
- ಕಲಿತ ಕಳ್ಳ
- ನೆಲ್ಲೂರು ನಂಬೆಕ್ಕ
- ದೇವರಿಗೆ ನೌಕರಿ ಸಿಗಲಿಲ್ಲ
- ವಾತ್ಸಲ್ಯ

ಹವ್ಯಾಸಿ ತಂಡಗಳು :

- ಮರುಳ ತುಳಸೀ ದಾಸರ ಕಂಪನಿ
- ಹಂಚಿನಾಳ ಕರಿಯಪ್ಪನ ಕಂಪನಿ
- ಚಿತ್ರದುರ್ಗದ ಕುಮಾರಸ್ವಾಮಿ ಕಂಪನಿ
- ಆನವಟ್ಟಿ ರಾಜಣ್ಣ ಕಂಪನಿ
- ಸೂಡಿ ಶೇಖರಯ್ಯ ಕಂಪನಿ
- ಕರೀಂ ಸಾಬರ ಕಂಪನಿ
- ಕಡಪಟ್ಟಿ ಪ್ರಕಾಶನ ಕಂಪನಿ

"ಶ್ರೀ ಜಗದಂಬಾ ಜಾನಪದ ಕಲಾ ತಂಡ ಸೋಗಿ" ಎಂಬ ಮಹಿಳಾ ತಂಡವನ್ನು ೧೯೯೬ರಲ್ಲಿ ಕಟ್ಟಿ ಅದರ ಅಧ್ಯಕ್ಷರು ರತ್ನಾರವರೇ ಆಗಿ, ಉಪಾಧ್ಯಕ್ಷೆ ಜೆ.ಬಸಮ್ಮ, ಮಂಜುಳಾ ಹಿನ್ನೆಲೆಗಾಯನ, ಗಿರಿಜಮ್ಮ, ದುರ್ಗಮ್ಮ, ರುದ್ರಮ್ಮ, ರೇಣುಕಾ, ಸೌಭಾಗ್ಯಮ್ಮ, ದಂಡೆಮ್ಮ, ಚನ್ನಮ್ಮ ಇವರೆಲ್ಲರೊಂದಿಗೆ ೨೦೦೦ದಲ್ಲಿ ಮೈಸೂರಿನ ದಸರಾ ಉತ್ಸವದಲ್ಲಿ ದೊಡ್ಡಾಟವನ್ನು ಪ್ರದರ್ಶನ ಮಾಡಿ ಬಂದಿದ್ದಾರೆ.

ಗ್ರಾಮೀಣ ಪ್ರತಿಭೆಯಾದ ಸೋಗಿ ರತ್ನ, ಕಲೆಯಲ್ಲಿ ನಿಷ್ಣಾತರು. ಜೊತೆಗೆ ನಿರ್ದೇಶನಕ್ಕೂ ಕೈ ಹಾಕಿ ನಾಡಿನಾದ್ಯಂತ ಹೆಸರು ವಾಸಿ ನಟಿ ಎನಿಸಿದ್ದಾರೆ.

ಪಿ. ಪದ್ಮ :	ಜನನ	:	೧೯೪೫
	ವ್ಯಾಸಂಗ	:	೭ನೇ ತರಗತಿ
	ತಂದೆ	:	ರಾಮಚಂದ್ರಪ್ಪ
	ತಾಯಿ	:	ಹನುಮಂತಮ್ಮ
	ಗುರು	:	ನೀಲಕಂಠಾಚಾರ್ಯ
	ಮೂಲಭಾಷೆ	:	ಕನ್ನಡ
	ಊರು	:	ಕೂಡ್ಲಿಗಿ
	ಹವ್ಯಾಸ	:	ಅಭಿನಯ
	ಕುಟುಂಬ ವರ್ಗ	:	೯ನೇ ಮಗುವಾಗಿ ಜನಿಸಿದ್ದಾರೆ. ಎಂಟುಜನ ಅಣ್ಣಂದಿರಿದ್ದು ಎಲ್ಲರೂ ಅಭಿನಯಕ್ಕೆ ಪ್ರೋತ್ಸಾಹ ನೀಡಿದ್ದಾರೆ.

ಬಾಲ್ಯ : ಕೂಡ್ಲಿಗಿಯಲ್ಲಿ ಹುಟ್ಟಿದ ಪಿ.ಪದ್ಮ ಪ್ರಾಥಮಿಕ ಹಂತದಲ್ಲೇ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನು ಇಟ್ಟು ತಮ್ಮ ಮನೆಯಲ್ಲಿಯೇ ಪರಂಪರಾಗತವಾಗಿ ಬಂದಿರುವ ನಟನೆಯನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಲು ಅನುಕೂಲಕರ ಮನೆಯೇ ಇವರದಾಗಿತ್ತು. ತಾಯಿಯ ತಂಗಿ ಚಿಕ್ಕಮ್ಮ ಲಕ್ಷ್ಮಿ ಎಂಬ ಕಲಾವಿದೆಯ ಪ್ರೇರಣೆ ಯಿಂದ ರಂಗಭೂಮಿಗೆ ಕಾಲಿಟ್ಟ ಪದ್ಮ ಹತ್ತು ವರ್ಷದವರಿದ್ದಾಗಲೇ ಚಿಕ್ಕಮ್ಮರ ಜೊತೆಗೆ ಗ್ರಾಮೀಣ ರಂಗಭೂಮಿಗೆ ಹೋಗುತ್ತಿದ್ದು, ಕೂಡ್ಲಿಗಿಯ ಹವ್ಯಾಸಿ ಕಲಾವಿದರೊಂದಿಗೆ ಬೆಳೆದಿದ್ದು, ರಂಗಭೂಮಿಯ ಸೇವೆಯನ್ನು ಮಾಡಿದ್ದಾರೆ. ಚಿಕ್ಕವರಿದ್ದಾಗಲೇ ಹಾಡುತ್ತಾ ಹಾಡುತ್ತಾ ಗಾಯನವನ್ನು ಮಾಡುತ್ತಾ ಮಾಡುತ್ತಾ ಅಭಿನಯವನ್ನು ಕಲಿತಿದ್ದೇನೆ ಎನ್ನುತ್ತಾರೆ.

ಪರಿಸರ : ಕೂಡ್ಲಿಗಿ ಹಾಗೂ ವಿರುಪಾಪುರದಲ್ಲಿ ಹಲವಾರು ರಂಗನಟಿಯರು ವಾಸಿಸುತ್ತಿದ್ದು, ಬಳ್ಳಾರಿಯ ರಂಗಭೂಮಿಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಸಣ್ಣಮುದ್ದಮ್ಮ, ದೊಡ್ಡಮುದ್ದಮ್ಮ ಎಂಬ ನಟಿಯರು ಬಹಳ ಅಮೋಘವಾದ ಅಭಿಯನವನ್ನು ನೀಡುತ್ತಿದ್ದರು. ಚಿಕ್ಕಮ್ಮನ ಅಭಿನಯವನ್ನು ಪರಂಪರೆಯಿಂದ ರೂಢಿಸಿಕೊಂಡ ಪದ್ಮರಿಗೆ ಅಭಿನಯದ ಸಮಸ್ಯೆಯಾಗಲಿಲ್ಲ ಬದಲಾಗಿ ಇನ್ನೂ ಹೆಚ್ಚು ಸಾಧನೆ ಮಾಡುವಲ್ಲಿ ಪ್ರೇರಣೆಯನ್ನು ನೀಡಿತು.

ಸುಭದ್ರಮ್ಮ ಮನ್ಸೂರು, ಕೆ.ನಾಗರತ್ನಮ್ಮರ ಗೆಳೆತನ ದಿಂದ ರಂಗಭೂಮಿಗೆ ಇನ್ನಷ್ಟು ಪೌಷ್ಠಿಕತೆಯನ್ನು ಪದ್ಮರಿಗೆ ಒದಗಿಸಿತು. ಆರಂಭದ ದಿನಗಳಲ್ಲಿ ದಾಸಿಯ ಪಾತ್ರ ಮಾಡುತ್ತಿದ್ದು, ಕೆಲವೇ ದಿನಗಳಲ್ಲಿ ಸ್ವಸಾಮರ್ಥ್ಯದಿಂದ ಪ್ರೌಢತೆಯನ್ನು ಪಡೆದುಕೊಂಡು ಪ್ರಬುದ್ಧ ನಟಿ ಎನಿಸಿಕೊಂಡರು.

ರಂಗಭೂಮಿಯ ಹಲವು ವೈವಿಧ್ಯಗಳಾದ ಸಾಮಾಜಿಕ, ಪೌರಾಣಿಕ, ಜಾನಪದ, ಐತಿಹಾಸಿಕ ವಿಧದಲ್ಲಿ ನಾಟಕವಾಡಿದ್ದು ಬಳ್ಳಾರಿ ಹಾಗೂ ಇತರ ಜಿಲ್ಲೆಗಳಲ್ಲಿ ಹೆಸರಾಗಿದ್ದಾರೆ.

ಜಾನಪದ ನಾಟಕ :	"ಸಂಗ್ಯಾ-ಬಾಳ್ಯಾ"	ಪಾತ್ರ	- ಗಂಗಿ (ರಾಜ್ಯ ಪ್ರಶಸ್ತಿ)
ಪೌರಾಣಿಕ ನಾಟಕ :	'ರಕ್ತರಾತ್ರಿ"	ಪಾತ್ರ	- ಭಾನುಮತಿ
ಸಾಮಾಜಿಕ ನಾಟಕ :	"ಅಣ್ಣತಂಗಿ"	ಪಾತ್ರ	- ಗೌರಿ
	ಆದರ್ಶ ಪ್ರೇಮ	ಪಾತ್ರ	- ನಾಗಿ
	ದೀಪಾವಳಿ	ಪಾತ್ರ	- ಬಾಲಿ
ಐತಿಹಾಸಿಕ ನಾಟಕ :	ಟಿಪ್ಪುಸುಲ್ತಾನ	ಪಾತ್ರ	- ಪದ್ಮಾಂಬಿಕೆ

ಹೀಗೆ ವೈವಿಧ್ಯಮಯ ನಾಟಕಗಳಲ್ಲಿ ಹೆಸರಾಗಿದ್ದು ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ರಾಜ್ಯ ಪ್ರಶಸ್ತಿ ಹಾಗೂ ಗೌರವ ಪ್ರಶಸ್ತಿಗಳು ದೊರೆತಿವೆ. ಹಲವಾರು ಸ್ಥಳಿಯ ಸಂಘ-ಸಂಸ್ಥೆಗಳಿಂದಲೂ ಪ್ರಶಸ್ತಿ ದೊರೆತಿವೆ. ಹಲವಾರು ತರಬೇತಿ ಶಿಬಿರ, ಸಭೆ, ಸಮಾರಂಭದಲ್ಲಿ ಭಾಗವಹಿಸಿದ ಅನುಭವವಿದ್ದು, ಕೂಡ್ಲಿಗಿ ಊರಿನ ಪರಿಸರ ಹಾಗೂ ಪರಂಪರೆಯಿಂದ ಬಂದ ಅಭಿನಯ ಕಲೆಯು ಪದ್ಮರಿಗೆ ಹೆಚ್ಚಿನ ಪ್ರೋತ್ಸಾಹ ದೊರೆತು ಇಂದು ಅವರು ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರಬುದ್ಧ ಅಭಿನೇತ್ರಿ ಎನಿಸಿಕೊಂಡಿದ್ದಾರೆ. ಬಾಲ್ಯಾವಸ್ಥೆ ಪರಿಸರದ ಪ್ರೇರಣೆಯಿಂದಲೇ ನಾನು ರಂಗಭೂಮಿಗೆ ಬಂದಿದ್ದೇನೆ ಎಂದು ಅವರೇ ಹೇಳುತ್ತಾರೆ. ಚಲನಚಿತ್ರಕ್ಕೆ ಹೋಗಲು ಆಸೆ ಇತ್ತು ಆದರೆ ಅವಕಾಶ ನನಗೆ ಒದಗಿ ಬರಲಿಲ್ಲ ಎಂದು ವಿಷಾದದಿಂದ ಹೇಳುತ್ತಾರೆ. ರಾಜಧಾನಿ ನಮಗೆ ದೂರವಾದದ್ದರಿಂದ ಅವಕಾಶದಿಂದ ನಾವು ವಂಚಿತರು ಎಂದು ಪದ್ಮ ವಿಷಾದದಿಂದ ಹೇಳುತ್ತಾರೆ.

ಡಿ. ಅಂಜಿನಮ್ಮ :	ಜನನ	: ಸುಮಾರು ೧೯೧೦
	ವ್ಯಾಸಂಗ	: ಅನೇತರಗತಿ
	ತಂದೆ	: ಹುಲುಗಪ್ಪ
	ತಾಯಿ	: ಹನುಮವ್ವ
	ಮೂಲಭಾಷೆ	: ಕನ್ನಡ
	ಊರು	: ನಾರಾಯಣದೇವರ ಕೆರೆ (ಪ್ರಸ್ತುತ ಇವರ ಸಂಬಂಧಿಗಳು ಮರಿಯಮ್ಮನ ಹಳ್ಳಿಯಲ್ಲಿ ವಾಸ)
	ಗುರು	: ಗರುಡ ಸದಾಶಿವರಾವ್
	ಹವ್ಯಾಸ	: ಗಾಯನ
	ಕುಟುಂಬ ವರ್ಗ	: ೧೨ ಜನ ಒಡಹುಟ್ಟಿದವರು. ಖ್ಯಾತ ರಂಗಭೂಮಿ ಕಲಾವಿದೆ. ಸಹೋದರಿ ಡಿ. ಹನುಮಂತಮ್ಮ ಕನ್ನಡ ರಂಗಭೂಮಿ ಖ್ಯಾತ ಕಲಾವಿದ ಡಿ.ದುರ್ಗಾದಾಸ್. ಪ್ರಸ್ತುತದಲ್ಲಿ ಡಿ. ದುರ್ಗಾದಾಸರ ಮಗಳು ಸಣ್ಣಹನುಮಕ್ಕ ನೀನಾಸಂ ತರಬೇತಿ ಹೊಂದಿ ನಾಟಕ ಅಕಾಡೆಮಿ ಸದಸ್ಯರಾಗಿದ್ದಾರೆ.

ಬಾಲ್ಯ : ಹನ್ನೆರಡು ಜನ ಮಕ್ಕಳಲ್ಲಿ ಒಬ್ಬರಾದ ಸಂಜೀವಮ್ಮ ದೊಡ್ಡ ಕುಟುಂಬದಲ್ಲಿ ಹಲವಾರು ಮಕ್ಕಳು. ಬಡತನಕ್ಕೆ ಮಕ್ಕಳು ಹೆಚ್ಚು ಎಂಬಂತಿದ್ದರು. ತಂದೆ ಹುಲುಗಪ್ಪ ದರ್ಜಿ ವೃತ್ತಿಯಿಂದ ಜೀವನ ಚಿಂತಾಜನಕವಾದಾಗ ಇದೇ ಸಮಯಕ್ಕೆ ಹೊಸಪೇಟೆಯಲ್ಲಿ ಗದಗಿನ ಶ್ರೀ ದತ್ತಾತ್ರೇಯ ನಾಟಕ ಮಂಡಳಿ ಬಿಡಾರ ಹೂಡಿತ್ತು. ಇದರ ಮಾಲಿಕ ದಿ.ಸದಾಶಿವರಾವ್ ಗರುಡ. ಇವರ ಸಹೋದರ ಬಾಳಂಬಟ್ಟ ಈ ಕುಟುಂಬದ ವೃತ್ತಿ ಮತ್ತು ದುಃಸ್ಥಿತಿ ಅರಿತು ಇಡೀ ಕುಟುಂಬವನ್ನೇ ನಾಟಕ ಕಂಪನಿಗೆ ಸೇರಿಸಿದರು. ಹುಲುಗಪ್ಪರಿಗೆ ವಸ್ತ್ರ ಮೇಲ್ವಿಚಾರಕ ಕೆಲಸ, ತಾಯಿ ಹನುಮಕ್ಕ ಧಾನ್ಯ ಶುದ್ಧೀಕರಿಸುವುದು. ಶಾಲೆಯನ್ನು ಕಲಿಯದಿದ್ದ ದುರ್ಗಾದಾಸ್ ಗರುಡರ ಸಹಕಾರದಿಂದ ಏಳನೇ ತರಗತಿಯನ್ನು ಇಲ್ಲಿಯೇ ಮುಗಿಸಿದರು. ರಂಗಕಲಾವಿದೆ ಅಕ್ಕ ಸಂಜೀವಮ್ಮ ಮೈಸೂರು ರಾಜರಿಂದ ಸನ್ಮಾನಿತರಾಗಿದ್ದು ಇಲ್ಲಿಂದಲೇ ಅವರು ರಂಗವೃತ್ತಿಯನ್ನು ಆರಂಭಿಸಿದವರು. ಅಣ್ಣ ಹನುಮಂತಪ್ಪ, ಅಕ್ಕ ಸಂಜೀವಮ್ಮ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದರೆ ಬಾಲಕ ದುರ್ಗಾದಾಸ್ ಬಾಲನಟನಾಗಿ ರಂಗಪ್ರವೇಶಿಸಿದರು.

ಪರಿಸರ : ತಂದೆ-ತಾಯಿಗಳಿಬ್ಬರೂ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರಿಂದ ಇವರ ಮಕ್ಕಳನ್ನೇ ಸದಾಶಿವರಾವ್ ಗರುಡರು ನಾಟಕಕ್ಕೆ ಸೇರಿಸಿಕೊಂಡರು. ಇವರ ಕುಟುಂಬದಲ್ಲಿ ನಾಲ್ವರು ಮಂಡಳಿಗೆ ಸೇರಿಕೊಂಡು ನಾಟಕಗಳನ್ನು ಮಾಡಿದರು. ಸಂಜೀವಮ್ಮಗೆ "ರಂಗಭೂಮಿಯೇ ಮನೆ, ಹಾಗೂ ಮನೆಯೇ ರಂಗಭೂಮಿ" ಎನ್ನುವಂತಾಯಿತು. ರಂಗಭೂಮಿಯ ಪರಿಸರದಲ್ಲಿಯೇ ಬೆಳೆದ ಕಾರಣ ಸಂಜೀವಮ್ಮ ಯಾವ ಅಳುಕಿಲ್ಲದೆ, ತರಬೇತಿ ಇಲ್ಲದೇ ದೈವದತ್ತ ಕಂಠದಿಂದ ಮೈಸೂರು ಮಹಾರಾಜರನ್ನು ಮೆಚ್ಚಿಸಿದರು.

ರಾಜನ ಕುಟುಂಬಕ್ಕೆ ಮಾತ್ರ ಸೀಮಿತವಾಗಿರುವ ಜಗನ್‌ಮೋಹನ್ ಪ್ಯಾಲೇಸ್‌ನಲ್ಲಿ ಕಲಾವಿದೆ ಸಂಜೀವಮ್ಮ "ಸತೀ ಸಕ್ಕೂಬಾಯಿ"ಯಲ್ಲಿ ನಾಯಕಿಯಾಗಿ ಪಾತ್ರ ನಿರ್ವಹಿಸಿದ್ದಕ್ಕೆ ಮಹಾರಾಣಿಯವರು ಪಿತಾಂಬರವನ್ನು ಕೊಟ್ಟಿದ್ದರು. 'ವೀರ ಅಭಿಮನ್ಯು, ಸತೀ ಸಕ್ಕೂಬಾಯಿ, ಭಕ್ತ ಪುಂಡಲೀಕ, ಮಹಾನಂದ, ಬಾಜಿರಾವ್ ಪೇಶ್ವೆ ಈ ನಾಟಕಗಳಲ್ಲಿ ಮಹಾರಾಣಿಯಾಗಿ ಸಂಜೀವಮ್ಮ ಪಾತ್ರ ನಿರ್ವಹಿಸುತ್ತಿದ್ದಳು.

ಹೀಗೆ ದರ್ಜಿ ಕುಟುಂಬವೊಂದು ರಂಗಭೂಮಿಯಲ್ಲಿ ನೆಲೆ ಕಂಡುಕೊಂಡಿದ್ದು ಇತಿಹಾಸ. ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಪ್ರದರ್ಶನ ನೀಡುತ್ತಿದ್ದ ವಾಮನರಾಯರ ಕಂಪನಿ ಕಾರಣಾಂತರದಿಂದ ನಿಂತು, ಗರುಡರ ಕಂಪನಿಯಿಂದ ಕಲಾವಿದರನ್ನು ಕಳುಹಿಸುವಂತೆ ಕರೆಬಂದಿತು. ಇದಕ್ಕೆ ಒಪ್ಪಿದ ಗರುಡರು ಇವರನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟರು. ಈ ಸಂದರ್ಭದಲ್ಲಿ ಸಂಜೀವಮ್ಮ ಅಭಿನಯದಲ್ಲಿ ಖ್ಯಾತಿ ಗಳಿಸಿದರು. ಮೈಸೂರಿನ ಕೃಷ್ಣದೇವರಾಯ ಪ್ಯಾಲೇಸಿನಲ್ಲಿ ನಾಟಕ ವೀಕ್ಷಿಸಿ ಸಂಜೀವಮ್ಮರ ಕಲಾಕೌಶಲ್ಯಕ್ಕೆ ಅವರನ್ನು ಸನ್ಮಾನಿಸಿದರು. ಹೀಗೆ ಇಡೀ ಕುಟುಂಬವೇ ರಂಗಭೂಮಿಯನ್ನೇ ವೃತ್ತಿಯಾಗಿ ಅವಲಂಬಿಸುತ್ತಾ ಸಾಗಿತು. ಅಣ್ಣ ಹನುಮಂತಪ್ಪ ನಾರದನ ಪಾತ್ರದಲ್ಲಿ ಅಕ್ಕ ಸಂಜೀವಮ್ಮ ಉತ್ತರೆಯ ಪಾತ್ರದಲ್ಲಿ ಉತ್ತಮ ಹೆಸರು ಗಳಿಸಿದಾಗ ದಿ.ಮಲ್ಲಿಕಾರ್ಜುನ ಮನ್ಸೂರ್ ಶಕುನಿ ಪಾತ್ರ ನಿರ್ವಹಿಸುತ್ತಿದ್ದರು. ನಂತರ ವಾಮನ ರಾಯರು ಇಡೀ ಕುಟುಂಬವನ್ನೇ ತಮ್ಮ ಕಂಪನಿಯ ಮೂಲಕ ಕರ್ನಾಟಕದಾದ್ಯಂತ ಪರಿಚಯಿಸಿದರು. ಈ ಕಂಪನಿ ಅನಂತಪುರದಲ್ಲಿದ್ದಾಗ ತಂದೆ ಹುಲುಗಪ್ಪ ನಿಧನರಾದರು. ಈ ಮಧ್ಯೆ ವಾಮನರಾಯರ ಕಂಪನಿಯು ಮುಚ್ಚಿತು. ಮತ್ತೆ ಗರುಡರ ಕಂಪನಿ ಸೇರಿದ ಕುಟುಂಬ ನಾಲ್ಕೈದು ವರ್ಷ ಸೇವೆ ಸಲ್ಲಿಸಿತು. ನಂತರ ಅಣ್ಣ ಹನುಮಂತಪ್ಪ ಸಂಜೀವಮ್ಮ ಹುಬ್ಬಳ್ಳಿಯಲ್ಲಿ ವಿಶ್ವ ಕರ್ನಾಟಕ ನಾಟಕ ಮಂಡಳಿ ಎಂಬ ಸ್ವಂತ ಕಂಪನಿ ಕಟ್ಟಿದರು. ಬಹಳಷ್ಟು ಕಡೆ ಪ್ರದರ್ಶನ ನೀಡುತ್ತಿದ್ದ ಈ ಹೊತ್ತಿನ ಇವರ ನಾಟಕವನ್ನು ನೋಡಲು ಗುಬ್ಬಿ ವೀರಣ್ಣ ಮತ್ತು ಜಯಮ್ಮನವರು ಬರುತ್ತಿದ್ದರು.

ಹೀಗೆ ಸಂಜೀವಮ್ಮ ಕಲಾವಿದರ ಕುಟುಂಬದಲ್ಲಿ ಬೆಳೆದು ಯಾವ ತರಬೇತಿ ಇಲ್ಲದೆ ನೋಡುತ್ತಾ ನೋಡುತ್ತಾ ಅಭಿನಯಿಸಿ, ಹಾಡುತ್ತಾ ಹಾಡುತ್ತಾ ಗಾನ ಕೋಗಿಲೆ ಅಭಿನಯ ಶೀಲೆ ಎನಿಸಿಕೊಂಡರು.

ಜ್ಯೋತಿ ಬಳ್ಳಾರಿ : ಜನನ	:	ಸುಮಾರು ೧೯೬೦
ವ್ಯಾಸಂಗ	:	೪ನೇ ತರಗತಿ
ತಂದೆ	:	(ವೃತ್ತಿ: ಕಾರ್ ಡ್ರೈವರ್)
ತಾಯಿ	:	(ರಂಗ ಕಲಾವಿದೆ)
ಪತಿ	:	ವಿಜಯಕುಮಾರ (ಕೇರಳದ ವ್ಯಾಪಾರಿ)
ಮೂಲಭಾಷೆ	:	ತೆಲುಗು
ಊರು	:	ಬಳ್ಳಾರಿ
ಗುರು	:	ಬಳ್ಳಾರಿಯ ವನಮಾನ, ಶಾಸ್ತ್ರೀಯ ನೃತ್ಯ, ಬಳ್ಳಾರಿ ಗೋವಿಂದಪ್ಪ
ಹವ್ಯಾಸ	:	ನೃತ್ಯ ಮಾಡುವುದು
ಕುಟುಂಬ ವರ್ಗ	:	೫ ಜನ ಸಹೋದರಿಯರು ಒಬ್ಬ ಸಹೋದರ

ಬಾಲ್ಯ : ಬಡತನದ ಬೇಗೆಯಿಂದ ನರಳುತ್ತಿದ್ದ ಸಮಯದಲ್ಲಿ ಬಾಲ್ಯವು ಜ್ಯೋತಿಯವರಿಗೆ ತುಂಬಾ ದಾರುಣವಾಗಿತ್ತು. ಈಕೆಗೆ ಸ್ಕೂಲ್, ಕಾಲೇಜಿನ ಮಾತು ಕನಸಾಗಿತ್ತು. ಬಳ್ಳಾರಿಯ ಶ್ರೀಮಂತ ಕುಟುಂಬಗಳ ಮನೆಗಳಲ್ಲಿ ಕಸ-ಮುಸುರೆ ಮಾಡಿಕೊಂಡು ತಂದೆ-ತಾಯಿಗೆ ಆಸರೆಯಾದರು. ಕನಸಿನ ದಿನಗಳನ್ನೆಲ್ಲಾ ದುಡಿತದ ಯಾಂತ್ರಿಕತೆಯಲ್ಲಿ ಕಳೆಯುತ್ತಾ ಇದ್ದಾಗ ಅತೀಯಾದ ಕಷ್ಟ ಬಂದಾಗ ನಾಟ್ಯವನ್ನು ಆರಿಸಿಕೊಂಡರು.

ಪರಿಸರ : ದಿನನಿತ್ಯ ಕುಡಿದು ಉನ್ಮತ್ತನಾಗಿ ಮನೆ-ಮಕ್ಕಳು ಹೆಂಡತಿ ಎಂಬ ಅರಿವಿಲ್ಲದ ತಂದೆ, ಗಂಡ ಮಕ್ಕಳ ಚಿಂತೆಯಲ್ಲಿ ನಿಟ್ಟುಸಿರು ಬಿಡುವ ತಾಯಿ ಇಂಥ ಪರಿಸ್ಥಿತಿಯಲ್ಲಿ ೧೩-೧೪ ಪ್ರಾಯದ ಹೊಳೆವ ಕಣ್ಣುಗಳಲ್ಲಿ ತುಂಬಿ ಬರುವ ವ್ಯಾಕುಲತೆ ಸುಂದರ ಅತೀ ಸುಂದರ ಕನಸು ಕಾಣಬೇಕಾಗಿದ್ದ ಮನಸ್ಸು ಚಿಂತೆಗಳ ಆಗರವಾಯಿತು. ಈ ಕಾಲಚಕ್ರದ ತೀವ್ರಗತಿಯಲ್ಲಿ ಜ್ಯೋತಿ ಅವರದು ನಂಬಲಾರದ ಬದಲಾವಣೆಯಾಯಿತು. ಅಂದು ಮುಸುರೆ ಮಾಡಿಕೊಂಡಿದ್ದ ಕೈಗಳು ಇಂದು ಸುಂದರ ಬಣ್ಣಗಳ ಲೇಪನದಲ್ಲಿ ಮೃದುವಾಗಿವೆ. ಸದಾ ಕಾಲ ನೀರಿನಲ್ಲಿ ನೆನೆಯುತ್ತಿದ್ದ ಕೈಗಳು ಇಂದು ಬಣ್ಣ ಬಣ್ಣದಲಿ ಗೆಜ್ಜೆಗಳ ಹೆಜ್ಜೆಗಳಿಂದ ನಿನಾದ ಗೈಯ್ಯುತ್ತಿದೆ. ಅಂದು ಚಿಂತೆಯಲ್ಲಿ ಕಳಾಹೀನವಾಗಿ ವೇದನೆ ತುಂಬಿಕೊಂಡಿದ್ದ ಕಣ್ಣುಗಳು ಇಂದು ಮೋಹಕ ರೂಪದ ಹೊಳಪಿಗೆ ಕಾರಣವಾಗಿದೆ. ಅಂದು ಹಾರಿಹೋಗಿದ್ದ ಮನದ ಭಾವನೆಗಳು ಇಂದು ಭದ್ರವಾಗಿ ಕೋಮಲ ಹೃದಯದಲ್ಲಿ ಮನೆ ಮಾಡಿಕೊಂಡಿವೆ. ಎಂಥ ಬದಲಾವಣೆ ಇದು ನಂಬಲೇಬೇಕಾಗಿರುವ ಬದಲಾವಣೆ.

‘‘೧೫-೧೬ರ ಪ್ರಾಯದಲ್ಲಿ ಬದುಕುವ ದಾರಿಗಾಗಿ ಕಾತುರಗೊಂಡಾಗ ಬಳ್ಳಾರಿಯ ಗೋವಿಂದಪ್ಪ (ರಂಗ ಕಲಾವಿದ) ಗೌಡ್ರಗದ್ದ ನಾಟಕದ ಹವ್ಯಾಸಿ ತಂಡದಲ್ಲಿ ನೃತ್ಯಕ್ಕಾಗಿ ಬಣ್ಣ ಹಚ್ಚಿಸಿದ. ತಾಯಿಯ ರಂಗಕಲೆ ಪ್ರಭಾವ ಬೀರಿದ್ದರಿಂದಲೋ ಇಲ್ಲವೆ ಬದುಕಿಗೆ ಪರ್ಯಾಯ ದಾರಿ ಹುಡುಕಿಕೊಳ್ಳಲೋ ಜ್ಯೋತಿ ಬೇಗ ಗ್ರಿಪ್ ಪಡೆದರು. ಇಂದು ಜನಪ್ರಿಯ ನೃತ್ಯಗಾರ್ತಿಯಾಗಿರುವ ಈ ಕಲಾವಿದೆ, ಬಳ್ಳಾರಿಯ ವನಮಾಲಾ ಅವರಲ್ಲಿ ಶಾಸ್ತ್ರೀಯವಾಗಿ ನೃತ್ಯ ಕಲಿತಿದ್ದರೂ ಹೆಚ್ಚು ಪಡೆದದ್ದು ಚಲನಚಿತ್ರಗಳಿಂದ ಅನುಕರಣೆಯ ಕಲೆ ಮೈಗೂಡಿಸಿಕೊಂಡು ಬಂದಿದ್ದಾರೆ. ಯಾವುದೇ ಚಿತ್ರದಲ್ಲಿ ನೃತ್ಯ ನೋಡಿ ಬಂದ ಈ ಕಲಾವಿದೆ, ಹಾಡಿನ ಕ್ಯಾಸೆಟ್ ತರಿಸಿ ಯಾವ ಬದಲಾವಣೆಯೂ ಇಲ್ಲದಂತೆ ನೃತ್ಯಗೈಯುತ್ತ ಇಂದು ನೃತ್ಯಕ್ಕಾಗಿಯೇ ಪ್ರಸಿದ್ಧಿ ಪಡೆದಿದ್ದಾರೆ (ಲೇ. ಗವೀಶ ಹಿರೇಮಠ. ರಂಗ ಕುಸುಮಗಳು, ಪುಟ, ೧೨೮).

ಹೀಗೆ ಜ್ಯೋತಿಯವರು ಬಾಲ್ಯದ ಪರಿಸರದಲ್ಲಿ ತುಂಬಾ ನೋವನ್ನು ಅನುಭವಿಸಿ, ಈಗ ತೃಪ್ತಿ ಜೀವನ ನಡೆಸುತ್ತಿದ್ದಾರೆ. ರಂಗಭೂಮಿ ಸಮೀಪದ ಬಳ್ಳಾರಿ ಗೋವಿಂದಪ್ಪನವರೇ ತಮ್ಮ ಸರ್ವಸ್ವವಾಗಿದ್ದರು ಎನ್ನುವ ಜ್ಯೋತಿ ತಂದೆಗಿಂತಲೂ ಅವರಿಗೆ ಹೆಚ್ಚು ಗೌರವವನ್ನು ಕೊಡುತ್ತಿದ್ದರು. ಅವರ ಹೆಸರನ್ನೇ ಹೇಳಿಕೊಂಡು ಜೀವನದುದ್ದಕ್ಕೂ ಬದುಕುತ್ತಿದ್ದೇನೆ ಎನ್ನುತ್ತಾರೆ. ಒಂದು ವೇಳೆ ಅವರು ಇದ್ದಿದ್ದರೆ ನಾನು ಈಗಾಗಲೇ ಚಲನಚಿತ್ರದಲ್ಲಿರುತ್ತಿದ್ದೆ ಎಂದು ಅಪಾರ ಗೌರವ, ಪ್ರೀತಿ, ವಿಶ್ವಾಸಗಳಿಂದ ಮಾತನ್ನು ಹೇಳುತ್ತಾರೆ.

ಇಂಥಹ ಪರಿಸರ, ಬಾಲ್ಯ ಜ್ಯೋತಿಯವರದಾಗಿದ್ದು ಅವರಿಗೆ ಆರ್ಥಿಕ ತೊಂದರೆಯು ಇಲ್ಲದಿದ್ದರೆ ಒಬ್ಬ ಮೇರು ನಟಿಯಾಗುತ್ತಿದ್ದರೇನೋ. ಮಾತೃಭಾಷೆ ತೆಲುಗು ಆಗಿದ್ದರಿಂದ ಭಾಷೆಯ ತೊಡಕಿನಿಂದ ಅಭಿನಯಕ್ಕೆ ಆಸಕ್ತಿ ಬರಲಿಲ್ಲ. ಬರೀ ನೃತ್ಯ ನಾಟ್ಯವನ್ನೇ ಮಾಡಿ ಈಗಾಗಲೇ ಕರ್ನಾಟಕದ ಎಲ್ಲ ರಂಗಮಂದಿರಗಳು ಜ್ಯೋತಿ ಬಳ್ಳಾರಿಯವರ ನೃತ್ಯವನ್ನು ಕಂಡಿವೆ. ಅವರಿಂದ ಕಳೆದ ೧೫-೨೦ ವರ್ಷದಿಂದ ನೃತ್ಯಾಭ್ಯಾಸವನ್ನು ಮಾಡಿ ಹೆಸರುವಾಸಿ ನಾಟ್ಯಗಾರ್ತಿ ಎಂಬ ಹೆಸರನ್ನು ಪಡೆದಿದ್ದಾರೆ ಜ್ಯೋತಿ ಬಳ್ಳಾರಿ.

ಕೆ. ನಾಗರತ್ನ :	ಜನನ	:	೧೯೪೬
	ವ್ಯಾಸಂಗ	:	೧೦ನೇ ತರಗತಿ
	ತಂದೆ	:	ಕೆ. ಮಾರಪ್ಪ
	ತಾಯಿ	:	ಸಿದ್ದಮ್ಮ
	ಮೂಲಭಾಷೆ	:	ಕನ್ನಡ
	ಊರು	:	ಬಸಾಪುರ, ಪ್ರಸ್ತುತ ಮರಿಯಮ್ಮನಹಳ್ಳಿಯಲ್ಲಿ
	ಗುರು	:	ಡಿ.ಎಂ.ತೋಟಯ್ಯಸ್ವಾಮಿ

ಹವ್ಯಾಸ : ನಾಟಕಾಭಿನಯ

ಕುಟುಂಬವರ್ಗ : ಐದು ಜನ ತಂಗಿಯರು, ಒಬ್ಬ ತಮ್ಮ

ಬಾಲ್ಯ : ಕೆ.ನಾಗರತ್ನಮ್ಮ ಬಾಲ್ಯದಲ್ಲಿ ವಿದ್ಯಾಭ್ಯಾಸದೊಂದಿಗೆ ಬಡತನವನ್ನು ಅನುಭವಿಸಿದವರು. ಅವರ ತಂದೆ ಮಾರಪ್ಪ. ೧೯೬೫ ರ ಸುಮಾರಿನಲ್ಲಿ ಅಂಗಡಿಯಲ್ಲಿ ಗುಮಾಸ್ತರಾಗಿ ನೂರು ರೂಪಾಯಿಗಿಂತ ಕಡಿಮೆ ಸಂಬಳದಲ್ಲಿದ್ದರು. ತಾಯಿ ಅವರಿಗಿದ್ದ ಸ್ವಲ್ಪ ಜಮೀನಿನಲ್ಲಿ ಗಂಡಸರಿಗೆ ಸಮಾನರಾಗಿ ದುಡಿಯುತ್ತಿದ್ದರು. ನಾಗರತ್ನ ಎಲ್ಲರಿಗಿಂತ ಹಿರಿಯರು. ತಂದೆ-ತಾಯಿಗಳಿಬ್ಬರೂ ಕಷ್ಟಪಟ್ಟರೂ ಚಿಂತೆ ಇಲ್ಲ. ಮಕ್ಕಳು ಓದಲೆಂದು ಅವರನ್ನೆಲ್ಲಾ ಶಾಲೆಗೆ ಕಳುಹಿಸುತ್ತಿದ್ದರು. ತಂಗಿಯರನ್ನು ಮನೆ ಕೆಲಸ ಮಾಡಲು ಹಚ್ಚಿದರು. ಆದರೆ ಚೆನ್ನಾಗಿ ಓದುತ್ತಿದ್ದ ನಾಗರತ್ನಮ್ಮನನ್ನು ಶಾಲೆಯಿಂದ ಬಿಡಿಸಲಿಲ್ಲ. ಆದರೂ ನಾಗರತ್ನಮ್ಮರಿಗೆ ಬಾಲ್ಯದಲ್ಲಿ ಒಳ್ಳೆಯ ಸಾಂಸ್ಕೃತಿಕ ಪರಿಸರ ಹಾಗೂ ಶೆಟ್ಟರ ಹುಡುಗಿ ಕಾಮಾಕ್ಷಿ ಆಕೆಯೊಂದಿಗೆ ಗೆಳೆತನ ಇಬ್ಬರೂ ಒಂದೇ ನಾಣ್ಯದ ಮುಖದಂತಿರುವುದು. ಜತೆಯಾಗಿ ಶಾಲೆಗೆ ಹೋಗುವುದು. ಆಡುವುದು ಅವರ ಮನೆಗೆ ಹೋಗಿ ಓದಿಕೊಳ್ಳುವುದು, ಊಟಮಾಡುವುದು. ಹೀಗೆ ಗೆಳತಿಯಿಂದ ನಾಗರತ್ನಮ್ಮ ಹೆಚ್ಚು ಅನುಕೂಲತೆಯನ್ನು ಪಡೆದುಕೊಂಡರು. ಗೆಳತಿಯ ತಾಯಿ ಗಂಗಮ್ಮ ಒಳ್ಳೆಯ ಗುಣದವರು. ತಮ್ಮ ಮಕ್ಕಳಿಗೆ ಕಾಫಿ-ತಿಂಡಿ ಕೊಡುವಾಗ ನನಗೂ ಸಮಪಾಲು ಸಿಗುತ್ತಿತ್ತು. ನನ್ನನ್ನು ಸಹ ತಮ್ಮ ಒಬ್ಬ ಮಗಳಂತೆ ನೋಡಿಕೊಂಡರು ಎಂದು ತಮ್ಮ ಆತ್ಮಚರಿತ್ರೆಯಲ್ಲಿ ನಾಗರತ್ನಮ್ಮ ನಿವೇದನೆ ಮಾಡಿಕೊಂಡಿದ್ದಾರೆ.

ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗ ಹೊಸಪೇಟೆಯಲ್ಲಿ 'ಬಾಲನಾಗಮ್ಮ' ಚಲನಚಿತ್ರ ನಡೆಯುತ್ತಿದ್ದು, ಪಕ್ಕದ ಮನೆಯ ಅಜ್ಜ ನಾಗಮ್ಮನನ್ನ 'ಬಾಲನಾಗಮ್ಮ' ಎಂದು ಕರೆದರೆ, ಶಾಲೆಯಲ್ಲಿ ನಿನ್ನ ಹೆಸರೇನು? ಎಂದು ಕೇಳಿದಾಗ "ಬಾಲನಾಗಮ್ಮ" ಎಂದರಂತೆ. ಪೂರ್ಣ ಹೆಸರೆಂದಾಗ ಮೇಷ್ಟರು ಬಿ.ಕೆ. ಬಾಲನಾಗರತ್ನಮ್ಮ ಎಂದು ಹಾಜರಿಯಲ್ಲಿ ಬರೆದಾಗ, ಜತೆಗಾರರೆಲ್ಲಾ ಬಾಲನಾಗಮ್ಮ ನಿನ್ನ ಬಾಲ ಎಲ್ಲಿದೆ ಎಂದು ಛೇಡಿಸಿದ್ದು, ಬಾಲ್ಯದಲ್ಲಿ ರಂಜನೀಯತೆಯಿಂದ ಮುದುಡಿಕೊಂಡಿದ್ದು, ಹೆಸರು ಬದಲಾಗಬೇಕಾದರೆ ಕೋರ್ಟಿಗೆ ಹೋಗಬೇಕೆಂದು ಎಲ್ಲವೂ ಒಂದು ರೀತಿಯಲ್ಲಿ ಮುಜುಗರ, ನಾಚಿಕೆ, ಹಾಸ್ಯದಿಂದ ಅವರು ತೊಳಲಾಡಿದ್ದನ್ನು ನೆನೆಸಿಕೊಳ್ಳುತ್ತಾರೆ.

ಪ್ರೌಢಶಾಲಾ ಹಂತದಲ್ಲಿ ಬಡತನದ ಜತೆಯಾಗಿಯೇ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆಟ ಪಾಟಗಳಲ್ಲಿ ಹಿಂದೆ ಬೀಳಲಿಲ್ಲ. ಮನೆಯ ಪರಿಸ್ಥಿತಿ ಇವರ ವಿದ್ಯಾಭ್ಯಾಸಕ್ಕೆ ಅಡ್ಡಬಂದಿಲ್ಲ. ಹೊಸಪೇಟೆಯಲ್ಲಿ ನಡೆದ ಕ್ರೀಡಾ ಸ್ಪರ್ಧೆಯಲ್ಲಿ ಮರಿಯಮ್ಮನಹಳ್ಳಿಯ ಪ್ರತಿನಿಧಿಯಾಗಿ ಭಾಗವಹಿಸಿ ಬೆಳ್ಳಿ ಕಪ್ಪನ್ನು ಗೆದ್ದು ತಂದದ್ದು ಆಗಿನ ಕಾಲದಲ್ಲಿ ಅದು ದೊಡ್ಡ ಪಾರಿತೋಷಕವೇ ಸರಿ. ಕೊಟ್ಟೂರಿನ ಅರಬಾರ ರಾಮಪ್ಪ ಶ್ರೀ ಹೆಡ್ ಮಾಸ್ಟರಾಗಿ ಬಂದು, ಒಂದು ಆದರ್ಶ ಶಾಲೆಯನ್ನಾಗಿ ರೂಪಿಸಿದರು ಎಂದು ನೆನೆಸಿಕೊಳ್ಳುತ್ತಾರೆ. ಹೊಸಪೇಟೆಯ ಪ್ರಹ್ಲಾದ ಆಚಾರ್ಯ ಮತ್ತು ಮರಿಯಮ್ಮನಹಳ್ಳಿ ಜಿ.ಯಂ.ವೀರಯ್ಯನವರು ತಮ್ಮ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದರು ಎಂದು ನಮ್ಮೊಂದಿಗೆ ವಿಷಯವನ್ನು ಹಂಚಿಕೊಂಡರು.

ಪರಿಸರ : "ನನಗೆ ಹತ್ತು ವರ್ಷಗಳಿರಬಹುದು. ನನ್ನ ವಾರಿಗೆಯ ಹುಡುಗಿಯರನ್ನೆಲ್ಲಾ ಕಲೆಹಾಕಿ ನಮ್ಮೂರಿನ ಮೈಲಾರಪ್ಪ ಎಂಬುವವರು ಸಂಸಾರ ಎಂಬ ಸಾಮಾಜಿಕ ನಾಟಕಗಳನ್ನು ಮಾಡಿಸಿದರು. ಅವರು ಹೇಳಿಕೊಟ್ಟಿದ್ದನ್ನೆಲ್ಲಾ ಶ್ರದ್ಧೆಯಿಂದ ಕಲಿತು ಅಭಿನಯಿಸಿದೆವು. ನಾಟಕ ಚೆನ್ನಾಗಿತ್ತು ಎಂದು ನೋಡಿದವರು ಅಭಿಪ್ರಾಯಪಟ್ಟರು. ನನಗೆ ಪಾತ್ರ ಮಾಡುವ ಆಸೆ ಆಗ ಕುಡಿಯೊಡೆದದ್ದು. ಮುಂದೆ ಅನಿವಾರ್ಯವಾಗಿ.... ನಂತರ ಅದೊಂದು ಹುಚ್ಚಾಗಿ... ಬೆಳೆಯಿತು (ನಿರೂಪಣೆ : ಗುಡಿಹಳ್ಳಿ ನಾಗರಾಜ, ಮರಿಯಮ್ಮಹಳ್ಳಿ ರಂಗಸಿರಿ ಕೆ.ನಾಗರತ್ನಮ್ಮನ ಆತ್ಮ ಚರಿತ್ರೆ, ಪುಟ, ೭).

ಹೀಗೆ ಬಾಲ್ಯದಲ್ಲಿಯೇ ಅಂಥ ಪರಿಸರವು ನಾಗರತ್ನಮ್ಮರಿಗೆ ಒದಗಿರುವುದರಿಂದ ನಾಗರತ್ನಮ್ಮ ಇಂದು ಪ್ರಬುದ್ಧ ನಟಿಯಾಗಿ ಬೆಳೆದಿದ್ದಾರೆ.

ಶಾಲೆಯ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನವನ್ನೇ ತೆಗೆದುಕೊಳ್ಳುತ್ತಿದ್ದರು. ಸಂಸಾರ ನಾಟಕವನ್ನು ಮಾಡಿ ಕೆಲವು ದಿನಗಳ ನಂತರ, ಹರಿಶ್ಚಂದ್ರ ನಾಟಕದಲ್ಲಿ ನಾಗರತ್ನ ಲೋಹಿತಾಶ್ವನ ಪಾತ್ರಮಾಡಿದ್ದರು. ತುಂಬಾ ಉದ್ದನೆಯ ಕೂದಲಿದ್ದುದರಿಂದ ಹುಡುಗನ ಪಾತ್ರಕ್ಕೆ ಕೂದಲನ್ನು ಮೇಲಕ್ಕೆತ್ತಿ ಕಟ್ಟಿ ಹುಡುಗನ ಮೇಕಪ್ ಮಾಡಿದ್ದರು. ಹರಿಶ್ಚಂದ್ರ ಬೇಟೆಯಲ್ಲಿ ಜಯಶಾಲಿಯಾಗಿ ಬಂದ ನಂತರ ಪತ್ನಿ ತಾರಾಮತಿ, ಮಗ ಲೋಹಿತಾಶ್ವ ಹಾಗೂ ಸಖಿಯರೊಡಗೂಡಿ ಹಾಡುತ್ತಾ ಸ್ವಾಗತಿಸುವ ಸನ್ನಿವೇಶದಲ್ಲಿ ತಂದೆಯ ಆಗಮನದ ಸನ್ನಿವೇಶದಲ್ಲಿ ಹಾಡನ್ನು ಹಾಡುತ್ತಾ ಮುಂದಿರುವಾಗ ತಾರಾಮತಿ ಪಾತ್ರಧಾರಿ ಹಾಗೂ ಸಖಿಯರು ಆರತಿ ಹಿಡಿದುಕೊಂಡು ಹಿಂದೆ ನಿಂತಿದ್ದಾಗ ಹಾಡಿನಲ್ಲೆ ಮಗ್ನರಾಗಿರುವ ನಾಗರತ್ನ ಆರತಿ ದೀಪ ಬೆಂಕಿ ಉದ್ದನೆಯ ಕೂದಲಿಗೆ ತಾಗಿ ಕೂದಲು ಸುಟ್ಟಾಗ ಅದರ ಪರಿವೇ ಇಲ್ಲದೆ ಹಾಡುತ್ತಿರುವ ನಾಗರತ್ನನನ್ನು ಸೈಡ ವಿಂಗ್ಸ್‌ನಲ್ಲಿ ನಾಟಕ ನೋಡುತ್ತಿದ್ದ ಅವರ ತಂದೆ ಮಾರಪ್ಪ ನೋಡಿ ಕೂಗಿ ಹೇಳಿದರೂ, ಯಾರಿಗೂ ಕೇಳಿಸದಾದಾಗ ಅವರೇ ಬಂದು ಬೆಂಕಿಯನ್ನು ನಂದಿಸಿದರು. ನಂತರದ ಅವರ ಕೂದಲು ಉದ್ದವಾಗಿ ಬೆಳೆಯಲೇ ಇಲ್ಲ.

ಮರಿಯಮ್ಮನಹಳ್ಳಿ ಕನಿಷ್ಟ ಪಕ್ಷ ೪೦ ರಿಂದ ೫೦ ಜನ ರಂಗಕಲಾವಿದರು, ಸಂಗೀತಗಾರರು, ಕಲಾಕಾರರಿಗೆ ಹೆಸರುವಾಸಿಯಾದ ಊರು. ಹಲವಾರು ಕಲಾವಿದರ ಕುಟುಂಬಗಳೇ ಇಲ್ಲಿದ್ದು, ಮೈಸೂರು, ಬೆಂಗಳೂರು ಕಡೆ ವಾಸಿಸುವ ಹೆಂಗಸರು ನಟನೆ ಮಾಡಿ ಹೆಣ್ಣುಮಕ್ಕಳು ಜೀವಿಸಬಹುದೆಂದು ಮರಿಯಮ್ಮನ ಹಳ್ಳಿ ಹಾಗೂ ಬಳ್ಳಾರಿಗೆ ಬಂದಿದ್ದಾರೆ. ಪ್ರಬುದ್ಧ ನಟಿಯರಾದ ಸಂಜೀವಮ್ಮ, ಹನುಮಂತಮ್ಮ, ಸುಬ್ಬಯ್ಯನಾಯ್ಡು, ಲಕ್ಷ್ಮಿಬಾಯಿ, ದುರ್ಗಾದಾಸ್, ಲಿಂಗಮ್ಮ, ಸುವರ್ಣಮ್ಮ, ಹನುಮಂತಮ್ಮ, ಬಾರಿಕರ ಲಿಂಗಮ್ಮ, ಸುಮತೆಮ್ಮ, ಸೆರೆಗಾರ ಗಂಗಮ್ಮ, ಸುವರ್ಣಮ್ಮ, ಬುಡಾಳ ತಿರುಮಲ, ಜಿ.ಹನುಮಂತಮ್ಮ, ನಂದಿಹಳ್ಳಿ ರಾಮಕ್ಕ, ತಳವಾರ ಹನುಮಂತಮ್ಮ, ಹೆಚ್.ಶಾಂತಮ್ಮ, ಗಂಟೆ ಹುಲಿಗೆಮ್ಮ ಇನ್ನು ಮುಂತಾದ ಹಲವಾರು ಶ್ರೇಷ್ಠ ನಟಿಯರೆನಿಸಿಕೊಂಡವರು ಇಲ್ಲಿದ್ದಾರೆ.

ಇಂಥಹ ಪರಿಸರದಲ್ಲಿ ಹುಟ್ಟಿದ ನಾಗರತ್ನಮ್ಮ ಸ್ವತಃ ಆಸಕ್ತಿಯಿದ್ದು ತಂದೆಯ ಪ್ರೋತ್ಸಾಹ ಸಿಕ್ಕ ಮೇಲೆ ಇನ್ನು ಕೇಳಬೇಕೆ? ಸಂಗಾತಿಯೂ ಪ್ರೋತ್ಸಾಹ ನೀಡಿದಾಗ ಯಾವ ಅಂಜಿಕೆ, ಅಳುಕಿಲ್ಲದೆ ನಾಗರತ್ನಮ್ಮ ಚಿಕ್ಕ ನಟಿಯರಿಗೆ ಪ್ರೋತ್ಸಾಹ ನೀಡುತ್ತಾ ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆದಿದ್ದಾರೆ. ಸಂಗೀತ ಮಾಸ್ತರ ಡಿ.ಎಂ.ತೊದಿಯ್ಯಸ್ವಾಮಿ, ಡಾ.ಅಂಬಣ್ಣ, ಮ.ಬ.ಸೋಮಣ್ಣ ಮುಂತಾದ ಕಲಾ ಆಸಕ್ತರಿಂದ "ಲಲಿತ ಕಲಾರಂಗ"ದಲ್ಲಿದ್ದು ನಾಡಿನ ಸಾಂಸ್ಕೃತಿಕತೆಯನ್ನು ಮೆರೆದವರಾಗಿದ್ದಾರೆ.

ಯಳ್ಳಾರ್ತಿ ಚಾಮುಂಡೇಶ್ವರಿ :

ಜನನ	:	೧೯೭೫
ವ್ಯಾಸಂಗ	:	೬ನೇ ತರಗತಿ
ತಂದೆ	:	ವೀರಭದ್ರಯ್ಯ ಸ್ವಾಮಿ (ಹಾರ್ಮೋನಿಯಂ ಮಾಸ್ತರ)
ತಾಯಿ	:	ಬಸಮ್ಮ
ವಯಸ್ಸು	:	३೫
ಊರು	:	ಯಳ್ಳಾರ್ತಿ
ಈಗಿರುವ ಸ್ಥಳ	:	ಬಳ್ಳಾರಿ

ಬಾಲ್ಯ : ಯಳ್ಳಾರ್ತಿ ಚಾಮುಂಡೇಶ್ವರಿಯ ತಂದೆಯು ಹಾರ್ಮೋನಿಯಂ ಮಾಸ್ತರ ಆಗಿದ್ದರಿಂದ ಚಿಕ್ಕವಳಿದ್ದಾಗಲೇ ತಂದೆಯ ಜತೆಯಲ್ಲಿ ರಂಗಭೂಮಿ ಪರಿಸರದಿಂದ ಪ್ರೇರಿತರಾಗಿರುವ ಚಾಮುಂಡೇಶ್ವರಿಯು ಬಾಲ್ಯದಲ್ಲಿ ಹಲವಾರು ಅನುಭವ, ತರಬೇತಿ ಕಲಿಕೆಗಳನ್ನು ರಂಗಭೂಮಿಯಿಂದ ಕಂಡುಕೊಂಡಿದ್ದಾರೆ. ಆರ್ಥಿಕ ಪರಿಸ್ಥಿತಿಯು ಉತ್ತಮ ವಾಗಿಲ್ಲದಿರುವಾಗ ಊರಿನಲ್ಲಿ ಕಷ್ಟಪಟ್ಟು ಜೀವಿಸುತ್ತಿರುವಾಗ, ಬಡತನದ ಬೇಗೆಯನ್ನು ಅನುಭವಿಸಲಾರದೆ ತಂದೆಯ ಹಿಂದೆ ಹೋಗಿ ನಾಟಕ ಕಂಪನಿಗಳಲ್ಲಿ ಆಗಲೇ ದುಡಿಯಲು ಪ್ರಾರಂಭಿಸಿದ್ದರು. ತಂದೆಯ ಸಂಗೀತದ ಪ್ರಭಾವದಿಂದಲೇ ಅದು ರಕ್ತಗತವಾಗಿ ಕಲೆ ಚಾಮುಂಡಿಯಲ್ಲಿ ಅವಿರ್ಭವಿಸಿದೆ. ಬಾಲ್ಯ ರಂಗಭೂಮಿಯ ಅನುಭವಗಳು ಈವರಿಗೆ ಆಗಿದ್ದವು.

ಪರಿಸರ : ತಂದೆಯೆ ಹಾರ್ಮೋನಿಯಂ ಮಾಸ್ತರರಾಗಿರುವಾಗ, ನಾಟಕ ನಡೆಯುತ್ತಿರುವಾಗ ನಟ-ನಟಿಯರು ಬರುವುದು ತಡವಾಗಿರುವಾಗ ಚಾಮುಂಡಿ, ಹಾಡು ಹೇಳುವುದು, ನೃತ್ಯವನ್ನು ಮಾಡುವುದನ್ನು ಆ ಪರಿಸರದಲ್ಲಿಯೇ ರೂಢಿಸಿಕೊಂಡು ಬಿಟ್ಟಿದ್ದರು. ಕೆಲವು ಕಂಪನಿಗಳಲ್ಲಿ ಸೇರಿ ನಾಟಕಗಳನ್ನು ಆಡಿ ಈಗ ಸ್ವತಃ ವೃತ್ತಿರಂಗ ಕಲಾವಿದೆಯರಾಗಿದ್ದಾರೆ. ಇವರು ರಂಗಭೂಮಿಗೆ ಬಂದಿದ್ದು ಆಕಸ್ಮಿಕ ಹಾಗೂ ಅನಿವಾರ್ಯತೆ ಯಿಂದಲ್ಲ. ಪರಂಪರೆಯಿಂದ ಬಂದಿರುವ ಕಲೆಯನ್ನು ಪರಿಸ್ಥಿತಿ ಬಂದಾಗ ಅದನ್ನು ಸದುಪಯೋಗ ಪಡಿಸಿ

ಕೊಂಡಿದ್ದಾರೆ. ಯಾವ ಹಿಂಜರಿಕೆಯಿಲ್ಲದೆ ಪರಿಸರಕ್ಕೆ ತಕ್ಕಂತೆ ತಮ್ಮ ಬದುಕನ್ನು ಮೌಲ್ಯಾಧಾರಿತವನ್ನಾಗಿ ಮಾಡಿಕೊಂಡು ಇಂದಿಗೂ ಬಳ್ಳಾರಿಯಲ್ಲಿ ಜೀವಿಸುತ್ತಿದ್ದು ರಂಗಭೂಮಿ ಸೇವೆ ಮಾಡುತ್ತಿದ್ದಾರೆ. ಚಿಂದೋಡಿ ಲೀಲಾ, ಬಿ.ಆರ್. ಹರನೆಣಗೋಪಿ, ಗುಡಿಗೇರಿ ಬಸವರಾಜ ಈ ಎಲ್ಲ ಕಂಪನಿಗಳಲ್ಲಿ ನಾಟಕಗಳನ್ನು ಮಾಡಿದ್ದು, ೮ನೇ ವರ್ಷದಿಂದಲೇ ರಂಗಭೂಮಿ ಪ್ರವೇಶ ಮಾಡಿದ್ದಾರೆ.

ಸಾಮಾಜಿಕ ನಾಟಕ :	೧. ಆಶಾಲತಾ	೨. ಕರ್ತವ್ಯದ ಕಾಣಿಕೆ
	೩. ಗೌರಿಗೆದ್ದಳು	೪. ಮದುಮಗಳು
	೫. ಮಗಳಾಗಿ ಬಂದಳು ಸೊಸೆಯಾಗಿ ನಿಂತಳು	೬. ಕಲಿತಕಳ್ಳ
	೭. ಅಣ್ಣತಂಗಿ	೮. ಸರ್ಪಸಾಮ್ರಾಜ್ಯ
	೯. ಹಸಿರು ಬಳೆ (ಪಾರ್ವತಿ)	೧೦. ರೈತನಾಗಲಿಲ್ಲ ಸರ್ಕಾರ ಉಳಿಯಲಿಲ್ಲ
ಪೌರಾಣಿಕ :	೧. ರಕ್ತರಾತ್ರಿ	೨. ಗಾನಯೋಗಿ ಪಂಚಾಕ್ಷರಿ
	೩. ಕುರುಕ್ಷೇತ್ರ	೪. ಶಶಿರೇಖ ಪರಿಣಯ
	೫. ವೀರ ಅಭಿಮನ್ಯು	೬. ಭಕ್ತ ಸುಧನ್ವ
	೭. ರಕ್ತತರ್ಪಣ.	
ಐತಿಹಾಸಿಕ :	೧. ವೀರಸಿಂಧೂರ ಲಕ್ಷ್ಮಣ	೨. ಟಿಪ್ಪುಸುಲ್ತಾನ
	೩. ಕಿತ್ತೂರರಾಣಿ ಚೆನ್ನಮ್ಮ	೪. ಸಂಗೊಳ್ಳಿ ರಾಯಣ್ಣ

ಈ ಎಲ್ಲಾ ನಾಟಕಗಳನ್ನು ಆಡಿ ಬಾಲ್ಯ ಪರಿಸರಗಳ ಪ್ರಭಾವದಿಂದಲೇ ಇಂದು ಮೇರು ನಟಿ ಎನಿಸಿಕೊಂಡಿದ್ದಾರೆ. ತಂದೆಗೆ ಒಬ್ಬಳೇ ಮಗಳಾದ್ದರಿಂದ ಇವರು ಉನ್ನತ ... ಪರಿಸ್ಥಿತಿಯ ಬಿಕ್ಕಟ್ಟಿನಿಂದ ಅನಿವಾರ್ಯವಾಗಿ ನಾನು ರಂಗಭೂಮಿಯನ್ನು ಸೇರಿದೆ ಎನ್ನುತ್ತಾರೆ ಚಾಮುಂಡೇಶ್ವರಿ.

ಎಸ್. ರೇಣುಕಾ :	ಜನನ	:	೧೯೫೦
	ತಾಯಿ	:	ಸುವರ್ಣಮ್ಮ
	ಊರು	:	ಮರಿಯಮ್ಮನಹಳ್ಳಿ

ಮೂಲಭಾಷೆ	:	ಕನ್ನಡ
ಮಾಸ್ತರ	:	ಡಿ.ಎಂ.ತೋಟಯ್ಯಸ್ವಾಮಿ
ವ್ಯಾಸಂಗ	:	೭ನೇ ತರಗತಿ
ಕುಟುಂಬವರ್ಗ	:	ತಾಯಿ, ಸುವರ್ಣಮ್ಮ, ಅಕ್ಕ ಶ್ಯಾಮಲಾ, ರಂಗಭೂಮಿ ಕಲಾವಿದೆಯರು

ಬಾಲ್ಯ : ಕಲೆಗಳ ತವರೂರು ಮರಿಯಮ್ಮನ ಹಳ್ಳಿಯೇ ಇವರ ಊರಾದ್ದರಿಂದ, ಮೇಲಾಗಿ ಇವರ ತಾಯಿಯೇ ರಂಗನಟಿ, ಇನ್ನು ಕೇಳಬೇಕೆ? ಬಾಲ್ಯದಲ್ಲಿ ಕಲಾವಿದೆ. ಕಲಾವಿದೆಯ ಮಕ್ಕಳು ರಂಗಭೂಮಿ ನಟರು. ಸಂಗೀತ ಮಾಸ್ತರು ಮುಂಚೆ ಪರಿಚಯವಾಗಿದ್ದು, ತಾಯಿ ಜತೆಯಲ್ಲಿಯೇ ಹಳ್ಳಿಹಳ್ಳಿಗೆ ಹೋಗಿ ಗ್ರಾಮೀಣ ಪರಿಸರ, ಹವ್ಯಾಸಿ ಕಲಾವಿದರ ನಾಟಕಗಳು ಎಲ್ಲವುಗಳ ಪ್ರಭಾವ ಬಾಲ್ಯದಿಂದಲೇ ಒದಗಿ ಬಂದು, ಇಂದು ಎಸ್.ರೇಣುಕಾ ಪ್ರಬುದ್ಧ ನಟಿ ಎನಿಸಿದ್ದಾರೆ.

ಪರಿಸರ : ಮನೆಯಲ್ಲಿ ತಾಯಿ ಸುವರ್ಣಮ್ಮ ಮತ್ತು ಅಕ್ಕ ಎಫ್.ಶ್ಯಾಮಲ ನಟಿಯರೇ ಆದ್ದರಿಂದ ಅವರ ಹಿಂದೆಯೇ ಹೋಗಿ ಬಂದು ಹಲವಾರು ನಾಟಕಗಳಿಂದ ಪ್ರಭಾವಿತಳಾಗಿ ಇಂದು ಅಮೋಘ ನಟಿಯಾಗಿದ್ದಾಳೆ. ಹಲವಾರು ಸಾಮಾಜಿಕ ನಾಟಕಗಳನ್ನು ಮಾಡಿ, ಸುಮಾರು ೩೦-೩೫ ನಾಟಕಗಳನ್ನು ಬಾಲ್ಯದಲ್ಲಿಯೇ ನೋಡಿ ಆ ಪಾತ್ರಗಳ ತಾದ್ಯಾತ್ಮತೆಯನ್ನು ಆಗಲೇ ತಮ್ಮ ಮನದಲ್ಲಿ ಅಂತರ್ಗತ ಮಾಡಿಕೊಂಡು ಬಿಡುತ್ತಿದ್ದರು. ನಾಟಕ ಪುಸ್ತಕಗಳನ್ನು ಮೊದಲೇ ಓದಿಕೊಂಡಿದ್ದು ಪ್ರೌಢ ವಯಸ್ಸಿನಲ್ಲಿಯೇ ಹಲವಾರು ಹಳ್ಳಿಗಳಿಗೆ ಹೋಗಿ ನಾಟಕವಾಡಿ ಬಂದಿದ್ದಾರೆ. ಇಪ್ಪತ್ತನೇ ವಯಸ್ಸಿನಲ್ಲಿ ಎಷ್ಟೋ ನಾಟಕಗಳನ್ನು ಆಡಿದ ಕೀರ್ತಿ ಗಳಿಸಿದ್ದಾರೆ.

ಸುಭದ್ರಮ್ಮ ಮನ್ಸೂರು :

ಜನನ	:	ಕ್ರಿ.ಶ ೧೯೩೯
ಜನ್ಮಸ್ಥಳ	:	ಬಳ್ಳಾರಿ
ತಂದೆ	:	ಜ್ವಾಲಾಪತಿ (ಪಿಟೀಲು ವಾದಕರು)
ತಾಯಿ	:	ಭಾಗ್ಯಮ್ಮ (ಸಂಗೀತ ವಿದೂಷಿ)
ಒಡಹುಟ್ಟಿದವರು	:	ಸುಬ್ರಮಣ್ಯ, ನರಹರಿ, ಶ್ರೀನಿವಾಸ, ರಾಜೇಶ್ವರಿ, ಆದಿಲಕ್ಷ್ಮಿ
ವಿದ್ಯಾಭ್ಯಾಸ	:	೬ನೇ ತರಗತಿ

ಮದುವೆ	:	೧೯೫೧
ಪತಿ	:	ಲಿಂಗರಾಜ ಮನ್ನೂರು
ಮಕ್ಕಳು	:	ಶ್ರೀಲಲಿತಾ, ಜ್ಯೋತಿ, ಮಂಜುನಾಥ, ರಾಘವೇಂದ್ರ
ರಂಗಪ್ರವೇಶ	:	ಸುಮಂಗಲ ನಾಟ್ಯ ಸಂಘ, ಮಂಗಳೂರು

ಅಭಿನಯಿಸಿದ ಕೆಲ ವೃತ್ತಿ ನಾಟಕ ಕಂಪನಿಗಳು

೧. ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯಸಂಘ

೨. ಹಿರಣ್ಣಯ್ಯನವರ ನಾಟಕ ಕಂಪನಿ

೩. ಚಿಕ್ಕೇನಕೊಪ್ಪ ಶ್ರೀ ಚನ್ನವೀರಶರಣರ ನಾಟಕ ಸಂಘ

ಅನುರಾಧ ಮೈಸೂರು :

ಜನನ	:	೧೯೭೦
ತಾಯಿ	:	ಕೃಷ್ಣವೇಣಮ್ಮ
ವ್ಯಾಸಂಗ	:	ಪಿ.ಯು.ಸಿ.
ಊರು	:	ಮೈಸೂರು, ಪ್ರಸ್ತುತ ಮರಿಯಮ್ಮನಹಳ್ಳಿ
ಗುರು	:	ಗುಡಿಗೇರಿ ಬಸವರಾಜ
ಹವ್ಯಾಸ	:	ಅಭಿನಯ
ಕುಟುಂಬ ವರ್ಗ	:	ಯಾರೂ ಕಲಾವಂತರಿಲ್ಲ

ಬಾಲ್ಯ : ಬಾಲ್ಯದಲ್ಲಿಯೇ ನೃತ್ಯ ಮಾಡುವ ಅಭ್ಯಾಸವಿದ್ದು, ನಂತರ ಕುಟುಂಬವೇ ಒಂದು ನೆಲೆ ಇಲ್ಲದಾಗ, ತಾಯಿಯು ಕಾಶೀನಾಥರಲ್ಲಿಗೆ ಹೋಗಿ ಸಿನೆಮಾ ಸೇರಿಸಬೇಕೆಂದಾಗ, ಅನುಭವ ಆದಮೇಲೆ ಸೇರಿಸಿಕೊಳ್ಳುತ್ತೇವೆ, ಆಕೆ ಇನ್ನು ಚಿಕ್ಕವಳಿದ್ದಾಳೆ ಎಂದರೆ ತಾಯಿಯೇ ಗುಡಿಗೇರಿ ಬಸವರಾಜರಲ್ಲಿಗೆ ಹೋದಾಗ ಅಲ್ಲಿ ಅವರು ನಿರಾಕರಿಸಿದಾಗ ಮರಿಯಮ್ಮನಹಳ್ಳಿಗೆ ಹೋಗಬಹುದು, ಅಲ್ಲಿ ಹೆಣ್ಣುಮಕ್ಕಳು ಪಾತ್ರಮಾಡಿ ಬದುಕಬಹುದೆಂದು ಯಾರೋ ವಿಚಾರವಂತರು ತಾಯಿಗೆ ಹೇಳಿದರಂತೆ. ಅವರ ಮಾತು ಕೇಳಿಯೇ ಈಗ ಅನುರಾಧ ತಾವು ಬ್ರಾಹ್ಮಣರಾಗಿದ್ದರೂ ರಂಗ ಪ್ರವೇಶ ಮಾಡಿದ್ದಾರೆ.

ಪರಿಸರ : ಮರಿಯಮ್ಮನಹಳ್ಳಿ ಕಲಾವಿದೆಯರ ತವರೂರು. ಆದ್ದರಿಂದ ಇಲ್ಲಿ ಹಲವಾರು ನಟಿಯರು ಪರಿಸರಕ್ಕೆ ಒಗ್ಗಿಕೊಂಡು ಅನುರಾಧ ಮೈಸೂರು ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ. ಹಲವಾರು ವ್ಯತಿರಿಕ್ತ

ಪರಿಸರದಿಂದ ಬಡತನ, ಹೆಣ್ಣಿನ ಹಿಂಸೆಗೆ ಆಕೆಯಲ್ಲಿ ಸಂವೇದನೆ ಉಂಟಾಗಿ ಸ್ತ್ರೀಮುಖಿ ಜೀವನದಲ್ಲಿ ಇಂದಿಗೂ ಜೀವಿಸುತ್ತಿದ್ದಾರೆ. ಈಗ ಕಲೆಗೆ ಸರಿಯಾದ ಪರಿಸರ ಒದಗಿ ಬಂದಿದ್ದು ತಮ್ಮ ಪಾಡಿಗೆ ತಾವು ಕಲೆಯನ್ನು ಮುಂದುವರಿಸಿಕೊಂಡು ಪ್ರಸ್ತುತ ಜೀವನ ನಡೆಸುತ್ತಿದ್ದಾರೆ.

ಬಳ್ಳಾರಿ ಸುಜಾತಮ್ಮ	ಜನನ	:	೧೯೪೩
	ವ್ಯಾಸಂಗ	:	೫ನೇ ತರಗತಿ
	ಊರು	:	ಬಳ್ಳಾರಿ
	ಹವ್ಯಾಸ	:	ಗಾಯನ, ನೃತ್ಯ

ಬಾಲ್ಯ : ಬಾಲ್ಯದಲ್ಲಿಯೇ ಗಾಯನ, ನೃತ್ಯಕ್ಕೆ ಅಂಟಿಕೊಂಡು, ತಮ್ಮ ೧೨ ನೇ ವಯಸ್ಸಿನಲ್ಲಿಯೇ ಬಯಲಾಟದ ಕಲಾವಿದೆಯಾಗಿದ್ದಾರೆ. ಕರ್ನಾಟಕ, ಆಂಧ್ರ ಮೂರು ನಾಲ್ಕು ಜಿಲ್ಲೆಗಳಲ್ಲಿ ಹೆಸರಾಂತ ಬಯಲಾಟದ ಕಲಾವಿದೆಯಾಗಿದ್ದಾರೆ.

ಪರಿಸರ : ಬಳ್ಳಾರಿಯು ಹೇಳಿಕೇಳಿ ಸಾಂಸ್ಕೃತಿಕ ಪರಿಸರ. ಕಪ್ಪಗಲ್ ಕಲಾವಿದರಿಂದ ಪ್ರೇರಿತರಾಗಿರುವ ಸುಜಾತಮ್ಮ ಬಳ್ಳಾರಿಯ ಪರಿಸರದಲ್ಲಿ ಬೆಳೆದು ಚಿಕ್ಕವಯಸ್ಸಿನಿಂದಲೇ ಅದು ಬಯಲಾಟದಲ್ಲಿ ದೊಡ್ಡ ಹೆಸರನ್ನು ಮಾಡಿ, ಇಡೀ ಐದಾರು ಜಿಲ್ಲೆಗಳಿಗೆ ತಂಡವನ್ನು ಕಟ್ಟಿಕೊಂಡು, ಇಳಿ ವಯಸ್ಸಿನಲ್ಲಿಯೂ ಹೋರಾಡುತ್ತಿದ್ದಾರೆ. ಬಯಲಾಟದಲ್ಲಿ ಹೊಸದಾದ ವ್ಯವಸ್ಥೆಯನ್ನು ಮಾಡಬೇಕು ಎಂಬ ಅಭಿಲಾಷೆಯನ್ನು ಹೊತ್ತಿದ್ದು ಒಳ್ಳೆಯ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸುವ ಹೊಣೆಯನ್ನು ಹೊತ್ತಿದ್ದಾರೆ.

ಕೊಟ್ಟೂರು ಕಮಲಮ್ಮ	ಜನನ	:	೧೯೩೫
	ವ್ಯಾಸಂಗ	:	ಇಲ್ಲ
	ಊರು	:	ಕೊಟ್ಟೂರು
	ತಾಯಿ	:	ದುರುಗಮ್ಮ
	ಹವ್ಯಾಸ	:	ನೃತ್ಯ, ಗಾಯನ

ಬಾಲ್ಯ : ಬಾಲ್ಯದಲ್ಲಿ ಕಲಾಸಕ್ತಿ ಇರುವುದರಿಂದ ಹಲವಾರು ನಾಟಕ ಕಂಪನಿಗಳು ಕೊಟ್ಟೂರು ಜಾತ್ರೆಯಲ್ಲಿ ಬಂದು ಹೋಗುವುದರಿಂದ ಅವುಗಳನ್ನೆಲ್ಲಾ ನೋಡಿರುವ ಕಮಲಮ್ಮ ಚಿಕ್ಕ ವಯಸ್ಸಿನಲ್ಲಿಯೇ ನಾಟ್ಯ, ನೃತ್ಯವನ್ನು ಕಲಿಕೆ ಮಾಡುತ್ತಾ ನಾಟ್ಯರಾಣಿ, ಗಾನಕೋಗಿಲೆ ಎಂಬ ಹೆಸರನ್ನು ಪಡೆದಿದ್ದಾರೆ.

ಪರಿಸರ : ಸಾಂಸ್ಕೃತಿಕ ಪರಿಸರದಲ್ಲಿಯೇ ಬೆಳೆದಿರುವ ಕೊಟ್ಟೂರು ಕಮಲಮ್ಮ ಹಲವಾರು ನಾಟಕಗಳನ್ನು ನೋಡಿ ಚಿಕ್ಕವರಿರುವಾಗ ಚೆನ್ನಾಗಿ ಹಾಡುತ್ತಿದ್ದರು. ದಾವಣಗೆರೆ ಕಂಪನಿ ನಾಟಕಗಳಲ್ಲಿದ್ದು ಅನುಭವ ಪಡೆದುಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯ ಹಲವಾರು ರಂಗನಟಿಯರ ಸಂಪರ್ಕವನ್ನು ಹೊಂದಿದ್ದು, ಕೋಳಿ ಪಂಪಣ್ಣ, ಉಲುವತ್ತಿ ವಿರಣ್ಣ, ಬೆಳ್ಳಕ್ಕಿ ಚೌಡಮ್ಮ ಮುಂತಾದವರೊಂದಿಗೆ.

ಬಿ.ಶಿವಕುಮಾರಿ ತಾಯಿ	:	ಶಾರದಮ್ಮ
ವಯಸ್ಸು	:	೩೨
ಕುಟುಂಬ	:	ಕೃಷಿಕ
ಶಿಕ್ಷಣ	:	೧೦ನೇ ತರಗತಿ
ವೃತ್ತಿ	:	ರಂಗನಟಿ
ಕ್ಷೇತ್ರ	:	ರಂಗಭೂಮಿ
ಆಸಕ್ತಿ	:	ದುರುಗಮ್ಮ ಎಂಬ ಇವರ ಅಜ್ಜಿ ಮನೆಯಲ್ಲಿ ರಂಗನಟಿ ಇದ್ದು ತಾವು ಸ್ವಇಚ್ಛೆಯಿಂದ ವಂಶಪರಂಪರೆಯಾಗಿ ಬಂದಿರುವ ಇವರು ರಂಗಭೂಮಿಗೆ ಕಾಲಿಟ್ಟಿದ್ದು.
ರಂಗಭೂಮಿಗೆ ಕಾಲಿಟ್ಟ ವಯಸ್ಸು	:	೧೨ನೇ ವರ್ಷದವಳಿದ್ದಾಗ (ಪ್ರೌಢ ಶಿಕ್ಷಣದಿಂದ)
ನಾಟಕಗಳು	:	ಪೌರಾಣಿಕ, ಸಾಮಾಜಿಕ
ಪೌರಾಣಿಕ	:	ರಕ್ತರಾತ್ರಿ ಪಾತ್ರ - ಉತ್ತರೆ
ಸಾಮಾಜಿಕ	:	ಕೆಟ್ಟ ಮೇಲೆ ಬುದ್ಧಿ ಬಂತು. ಈ ನಾಟಕದಲ್ಲಿ ಸುನೀತ, ಹುಚ್ಚಿ ಪಾತ್ರ. ನೀತಿಗೆಟ್ಟ ಸಮಾಜ, ಗರತಿ ಹೆಣ್ಣಿಗೆ ಗರ್ವದ ಗಂಡ.
ಮಾಸ್ತರ	:	ಇಲ್ಲ ಸ್ವಪ್ರತಿಭೆ
ಸಂಭಾವನೆ	:	೧೦೦೦ ರಿಂದ ೧೨೦೦
ವರ್ಷದಲ್ಲಿ ನಾಟಕಗಳ ಪ್ರಯೋಗ	:	ತಿಂಗಳಲ್ಲಿ ಎರಡು ಅಥವಾ ಮೂರುದಿನ ರಜೆಯಿದ್ದು. ಆಂಧ್ರ ಹಾಗೂ ಕರ್ನಾಟಕಗಳಲ್ಲಿ ನಾಟಕಗಳನ್ನು ಅಭಿನಯಿಸಿ ಬರುತ್ತಾರೆ.
ಆಡಿರುವ ನಾಟಕಗಳ ಸಂಖ್ಯೆ	:	ಲೆಕ್ಕವಿಲ್ಲ (ನೂರಾರು)

ಕೆ. ದುಶೀಲ (ದುರುಗಮ್ಮ)

ತಾಯಿ	:	ರಾಮವ್ವ
ವಯಸ್ಸು	:	೨೬
ಕುಟುಂಬ	:	ಕೃಷಿಕ
ಶಿಕ್ಷಣ	:	೪ನೇ ತರಗತಿ
ವೃತ್ತಿ	:	ರಂಗನಟಿ
ಕ್ಷೇತ್ರ	:	ರಂಗಭೂಮಿ
ಆಸಕ್ತಿ	:	ಮನೆಯ ಆರ್ಥಿಕ ಹೀನಸ್ಥಿತಿ ಅನಿವಾರ್ಯವಾಗಿ ಸೇರಿದ್ದೇನೆ.
ರಂಗಭೂಮಿಗೆ ಕಾಲಿಟ್ಟ ವಯಸ್ಸು	:	೧೪ನೇ ವರ್ಷದಿಂದ
ನಾಟಕಗಳು	:	ಪೌರಾಣಿಕ, ಸಾಮಾಜಿಕ, ವೀರ ಅಭಿಮನ್ಯು (ಅಣ್ಣ-ತಂಗಿ-ವಿಲನ್, ಸಿಡಿದೆದ್ದ ಶಿವಶಕ್ತಿ (ದೀಪಾ) ಸತಿ ತಂದ ಸಂಪತ್ತು (ದೀಪ)
ಮಾಸ್ತರ	:	ಸ್ವಪ್ರತಿಭೆ ಯಾವ ತರಬೇತಿ ಇಲ್ಲ
ಸಂಭಾವನೆ	:	೮೦೦
ವರ್ಷದಲ್ಲಿ ನಾಟಕಗಳ ಪ್ರಯೋಗ	:	ವರ್ಷದಲ್ಲಿ ಹಲವಾರು ತಿಂಗಳು
ಆಡಿರುವ ನಾಟಕಗಳ ಸಂಖ್ಯೆ	:	ಲೆಕ್ಕವಿಲ್ಲ ನೂರಾರು
ಸಮಾಜಕ್ಕೆ ನೀವು ನೀಡುವ ಸಂದೇಶ	:	ಯಾರು ರಂಗನಟಿ ಆಗಬೇಡಿರಿ. ಏಕೆಂದರೆ ಈಗ ಈ ಕ್ಷೇತ್ರ ಹದಗೆಟ್ಟಿದೆ. ಇದರಿಂದಲೇ ನಾವು ಅನ್ನವನ್ನು ತಿಂದರೂ ಇಲ್ಲಿ ಚಿಕ್ಕಾಸಿಗೂ ನಾವು ಬೆಲೆ ಬಾಳೊಲ್ಲ. ನಮಗೆ ಸಮಾಜದಲ್ಲಿ ಗೌರವವಿಲ್ಲ.

ಟಿ.ಭಾರತಿ (ಬಸಮ್ಮ)

ವಯಸ್ಸು	:	೩೫
ಕುಟುಂಬ	:	ಕೃಷಿಕ
ಶಿಕ್ಷಣ	:	೫ನೇ ತರಗತಿ

ವೃತ್ತಿ	:	ರಂಗನಟಿ
ಕ್ಷೇತ್ರ	:	ರಂಗಭೂಮಿ
ಆಸಕ್ತಿ	:	ಸ್ವಇಚ್ಛೆಯಿಂದ ಸಿನೇಮಾ ಸೇರಬೇಕೆಂಬ ಹಂಬಲ
ರಂಗಭೂಮಿಗೆ ಕಾಲಿಟ್ಟ ವಯಸ್ಸು	:	೮ನೇ ವರ್ಷದಿಂದ ತಂದೆ ತಾಯಿ ಪ್ರೋತ್ಸಾಹದಿಂದ ಸೇರಿದ್ದು
ನಾಟಕಗಳು	:	ಸಾಮಾಜಿಕದಲ್ಲಿ ಹಾಸ್ಯಪಾತ್ರ
ಮಾಸ್ತರ	:	ಸ್ವ ಪ್ರತಿಭೆ ಯಾವ ತರಬೇತಿ ಇಲ್ಲದಿದ್ದರೂ ಏಣಗಿ ಖಾಸಿಂಸಾಬ್ ಮಾರ್ಗದರ್ಶನದಲ್ಲಿ
ಸಂಭಾವನೆ	:	೮೦೦ ರಿಂದ ೧೦೦೦
ವರ್ಷದಲ್ಲಿ ನಾಟಕಗಳ ಪ್ರಯೋಗ	:	ಈಗೀಗ ತುಂಬಾ ಕಡಿಮೆ
ಆಡಿರುವ ನಾಟಕಗಳ ಸಂಖ್ಯೆ	:	ಲೆಕ್ಕವಿಲ್ಲ
ಸರಕಾರಕ್ಕೆ ನಿಮ್ಮ ಸಂದೇಶ	:	ಕಲಾವಿದೆಯರ ಮಕ್ಕಳಿಗೆ ಸರಕಾರ ಯಾವುದಾದರೂ ಕ್ರಮವನ್ನು ತೆಗೆದುಕೊಂಡು ನಮ್ಮ ಮಕ್ಕಳಿಗೆ ಒಂದು ಕೆಲಸವನ್ನು ಕೊಡಬೇಕು ಕಲಾವಿದೆಯರ ಸೇವೆಗೆ ಮನ್ನಣೆ ದೊರೆತಂತಾಗುತ್ತದೆ.

ಶಿಕ್ಷಣ-ಕಲಿಕೆ

ರಂಗನಟಿಯರು ಬಳ್ಳಾರಿ ಜಿಲ್ಲೆಯಲ್ಲಿ ಅನಕ್ಷರಸ್ಥರೇ ಹೆಚ್ಚಾಗಿ ಇದ್ದಾರೆ. ಕೆಲವೊಂದಿಷ್ಟು ಜನರು ಮಾತ್ರ ಪ್ರಾಥಮಿಕ ಪ್ರೌಢಶಾಲಾ ಶಿಕ್ಷಣವನ್ನು ಪಡೆದಿದ್ದಾರೆ. ಅನಕ್ಷರಸ್ಥ ರಂಗನಟಿಯರು ತಮ್ಮ ಸ್ವಸಾಮರ್ಥ್ಯದಿಂದ ಬೇರೊಬ್ಬರ ಹತ್ತಿರ ಸಂಭಾಷಣೆಯ ಮಾತನ್ನು ಹೇಳಿಸಿಕೊಂಡು ಬಾಯಿಪಾಠ ಮಾಡಿಕೊಂಡಿರುತ್ತಾರೆ. ಯಾರಿಗೂ ಉನ್ನತ ಮಟ್ಟದ ವ್ಯಾಸಂಗ ದೊರೆತಿಲ್ಲ. ಯಾವ ರಂಗನಟಿಯೂ ಪದವಿ ಅಥವಾ ಪದವಿಪೂರ್ವ ಶಿಕ್ಷಣವನ್ನು ಪಡದೇ ಇಲ್ಲ.

'ಓದು ಒಕ್ಕಾಲು ಬುದ್ಧಿ ಮುಕ್ಕಾಲು' ಎಂಬಂತೆ ಅವಿದ್ಯಾವಂತ ರಂಗನಟಿಯರು ಬುದ್ಧಿ ಚಮತ್ಕಾರಕ್ಕೆ ತಕ್ಕಂತೆ ರಂಗದ ಮೇಲೆ ಅರಳು ಹುರಿದಂತೆ ಮಾತನಾಡಿ ರಂಗವನ್ನು ರಂಗೇರಿಸಿ ಶಹಬ್ಬಾಸ್ ಗಿರಿಯನ್ನು ಪಡೆದುಕೊಳ್ಳುತ್ತಾರೆ. ಬಡತನದ ಬೇಗೆಯಲ್ಲಿಯೇ ಬದುಕುತ್ತಾ ನಾಟಕ ಪುಸ್ತಕಗಳನ್ನು ಕೊಂಡುಕೊಂಡು

ಇಲ್ಲವೆ ಹಿರಿಯ ನಟಿಯರ ಹತ್ತಿರ ಹೋಗಿ ಅವರು ಹೇಳಿದ್ದನ್ನು ಕಲಿತುಕೊಂಡು ಅವರ ಮಾರ್ಗದರ್ಶನದಲ್ಲಿಯೇ ರಂಗಭೂಮಿಗೆ ಕಾಲಿಟ್ಟು ತಮ್ಮದೇ ಆದ ಅಮೋಘ ಅಭಿನಯ ನೀಡಿದ್ದಾರೆ.

ಇನ್ನೂ ಕೆಲವರು ಪರಂಪರೆಯಿಂದ ಅಕ್ಕತಂಗಿ, ಅಜ್ಜಿ ಮೊಮ್ಮಗಳು, ತಾಯಿ ಮಗಳು ಹೀಗೆ ಮನೆಯಲ್ಲಿಯೇ ಕೌಟುಂಬಿಕವಾಗಿ ಆ ವಾತಾವರಣದಲ್ಲಿ ಬೆಳೆದು ಎಷ್ಟೋ ರಂಗನಟಿಯರು ಅಭಿನಯ ನೀಡುತ್ತಿದ್ದಾರೆ. ಕಲೆಯು ಕೆಲವೊಬ್ಬರಿಗೆ ಹುಟ್ಟಿನಿಂದಲೇ ಬಂದಿರುತ್ತದೆ. 'ಹುಟ್ಟು ಪ್ರತಿಭೆಗಳೇ' ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿದ್ದಾರೆ. ಕಲಿಕೆಯಿಂದ ಬಂದವರೂ ಕೆಲವೊಂದಿಷ್ಟು ಜನರು ಇದ್ದಾರೆ. ಮೂಲತಃ ಯಾರು ಹುಟ್ಟಿನಿಂದಲೆ ಎಲ್ಲವನ್ನು ಕಲಿತು ಹುಟ್ಟಿರುವುದಿಲ್ಲ. ಎಲ್ಲವನ್ನು ನಾವು ಇಲ್ಲಿಂದಲೇ ಕಲಿತುಕೊಂಡು ಕೊನೆಗೆ ಇಲ್ಲಿಯೇ ಎಲ್ಲವನ್ನು ಬಿಟ್ಟು ಹೋಗುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯು ಮುನ್ನಡೆಯಬೇಕಾದರೆ ಅದಕ್ಕೆ ತಕ್ಕದಾದ ಪರಿಸರ ಒದಗಬೇಕಾಗಿರುತ್ತದೆ. ಅಂಥಹ ಪರಿಸರ, ಅದೃಷ್ಟ ಎಲ್ಲರಲ್ಲೂ ಕಂಡು ಬರಲು ಸಾಧ್ಯವಿಲ್ಲ. ತರಬೇತಿಯಲ್ಲಿ ತಾಯಿ, ಅಜ್ಜಿ, ಅಕ್ಕ, ಚಿಕ್ಕಮ್ಮ, ರಂಗನಟಿಯಾಗಿದ್ದರೆ ಅವರ ಹಿಂದೆ ಹೋಗಿ ಬಂದು ಹಾಡುವುದು, ಕುಣಿಯುವುದು, ನಾಟಕದ ಗೀಳು ಇವೆಲ್ಲವು ಬಾಲ್ಯದಲ್ಲಿಯೇ ಪ್ರಭಾವಬೀರಿದ್ದರೆ ಮುಂದೆ ಆ ಮಗು ಪ್ರಸಿದ್ಧ ನಟಿಯಾಗಲು ಸಾಧ್ಯವಾಗುತ್ತದೆ. ಅಂಥ ಅವಕಾಶವು ಬಳ್ಳಾರಿ ಜಿಲ್ಲೆಯಲ್ಲಿಯ ಎಲ್ಲ ಅಂದರೆ ಬಹುತೇಕವಾಗಿ ರಂಗನಟಿಯರಿಗೆ ಒದಗಿಬಂದಿದೆ.

ಚಲನಚಿತ್ರ ಕ್ಷೇತ್ರದಲ್ಲಿರುವ ಇಂದಿನ ಮೇರು ಪರ್ವತಗಳೆಲ್ಲರು ಮೂಲತಃ ರಂಗಭೂಮಿಯಿಂದಲೇ ಬಂದು "ಸೂಪರ್ ಸ್ಟಾರ್" ಆಗಿದ್ದಾರೆ. ಬಳ್ಳಾರಿಯ ಜಯಂತಿ, ಕಮಲಾಪುರದಿಂದ ಜಮುನ, ಆದ್ವಾನಿ ಲಕ್ಷ್ಮೀದೇವಿ, ಬಳ್ಳಾರಿ ಲಲಿತಮ್ಮ ಹೀಗೆ ಹಲವಾರು ಹಿರಿಯ ತಲೆಮಾರಿನ ನಟಿಯರು ರಂಗಭೂಮಿಯಿಂದಲೇ ಸಿನಿಮಾಕ್ಕೆ ಹಾಗೂ ಲಲಿತಮ್ಮ ಸಿನೆಮಾದಿಂದ ರಂಗಭೂಮಿಗೆ ಹೋಗಿ ಬಂದು ಶ್ರೇಷ್ಠ ನಟಿಯರೆನಿಸಿದ್ದಾರೆ. ತಮ್ಮ ಅಭಿನಯ ಕೌಶಲ್ಯದಿಂದ, ಚಾಣಾಕ್ಷತೆಯಿಂದ, ಧ್ವನಿಮಾಧುರ್ಯದಿಂದ ಪ್ರಸಿದ್ಧ ಅಭಿನೇತ್ರಿ ಎನಿಸಿಕೊಂಡಿದ್ದಾರೆ.

ಕೆಲವು ನಟಿಯರಿಗೆ ಸೌಂದರ್ಯ ದೇವರ ದೇಣಿಗೆಯಾಗಿದೆ. ಇನ್ನೂ ಕೆಲವರು ತಮ್ಮ ಕಲಾಸಕ್ತಿಯಿಂದ, ತಮ್ಮ ಕಲಾಪ್ರತಿಭೆಯಿಂದ ಇಂದು ಪ್ರಸಿದ್ಧ ನಟಿಯರು ಎನಿಸಿಕೊಂಡಿದ್ದಾರೆ. ಸೌಂದರ್ಯಕ್ಕೆ ತಕ್ಕಂತೆ ಧ್ವನಿ ಮೃದು ಭಾಷೆ ಹಾಗೂ ಸೃಜನ ಮನಸ್ಸಿನ ನಟಿಯರು ತಮ್ಮ ಹಿಡಿತವನ್ನು ಬಿಡದೆ ಏನೇ ಕಷ್ಟ ಬಂದರೂ ಅವುಗಳನ್ನೆಲ್ಲಾ ಎದುರಿಸಿ ಮೆಟ್ಟಿನಿಂತು ತಮ್ಮ ಪ್ರೌಢ ಅಭಿನಯವನ್ನು ರಂಗದ ಮೇಲೆ ಅಭಿವ್ಯಕ್ತಿಸಿದ್ದಾರೆ. ಹೀಗೆ ಹಲವಾರು ರಂಗನಟಿಯರು ತಮ್ಮ ಅಭಿನಯ ಕೌಶಲ್ಯದಿಂದ ರಂಗಭೂಮಿಯನ್ನು ಜೀವಂತವಾಗಿಸಿದ್ದಾರೆ. ಒಬ್ಬ ವ್ಯಕ್ತಿ ನಿಷ್ಠೆಯಿಂದ ಅವರು ಕರ್ತವ್ಯನಿರತರಾಗಿದ್ದರೆ ಇಂದಲ್ಲ ನಾಳೆ ಅವರಿಗೆ ಫಲವು ಯಾವಾಗಲು ಸಿದ್ಧಿಸಿಯೇ ತೀರುತ್ತದೆ. ಕಲೆಯು ಯಾವಾಗಲೂ ಅಭಿಜಾತವಾಗಿದೆ. ಒಂದು ಸಾಹಿತ್ಯವು

ರಂಗಕ್ಕೆ ತಂದು ಅದನ್ನು ಪ್ರಯೋಗಿಸಬೇಕಾದರೆ ಹಲವಾರು ಅಡ್ಡಿ ಆತಂಕಗಳು ಬರುವುದು ಸಹಜ. ಅವುಗಳಿಗೆ ಕಿವಿಗೊಡದೇ ರಂಗಭೂಮಿ ಏಳಿಗೆಗಾಗಿ ಶ್ರಮಿಸುವ ನಟಿಯರ ಕೊಡುಗೆ ಅಗಾಧವಾಗಿದೆ.

ವಿಶೇಷವಾಗಿ ಕಪ್ಪಗಲ್, ಬಳ್ಳಾರಿ, ಕೂಡ್ಲಿಗಿ, ವಿರೂಪಾಪುರ, ಮರಿಯಮ್ಮನಹಳ್ಳಿಗಳಲ್ಲಿ ಅರ್ಧ ಊರೆ ರಂಗಭೂಮಿ ಕಲಾವಿದರಿಂದ ಕೂಡಿದೆ. ವಿಶೇಷವಾಗಿ ಮರಿಯಮ್ಮನಹಳ್ಳಿಯಲ್ಲಿ ಹಲವಾರು ರಂಗನಟಿಯರು, ಕಲಾವಿದರು ಅವೋಘವಾಗಿ ರಂಗಭೂಮಿಗೆ ತಮ್ಮ ಕೊಡುಗೆಯನ್ನು ನೀಡುತ್ತಲೇ ಬಂದಿದ್ದಾರೆ. ಮಹಿಳೆಯರೆಲ್ಲಾ ಒಗ್ಗೂಡಿ ಲಲಿತ ಕಲಾರಂಗ ಎಂಬ ಸಂಸ್ಥೆಯನ್ನು ಕಟ್ಟುವಲ್ಲಿ ಸಹಾಯಕರಾಗಿ ತಮ್ಮ ಊರಿನ ಸಾಂಸ್ಕೃತಿಕತೆಯನ್ನು ಶ್ರೀಮಂತಗೊಳಿಸಿದ್ದಾರೆ. ಇಂದಿಗೂ ಎಷ್ಟೋ ನಟಿಯರು ಯಾವ ಶೈಕ್ಷಣಿಕ ಪರಿಸರದ ಹತ್ತಿರವಿಲ್ಲದೆ ತಾವು ಕಲಾವಂತಿಕೆಯನ್ನು ಜೀವಂತಗೊಳಿಸಿದ್ದಾರೆ. ಇಡೀ ಕರ್ನಾಟಕದಲ್ಲಿಯೆ ಹೆಸರು ವಾಸಿಯಾದ ರಂಗಭೂಮಿ ನಟ ಸಾರ್ವಭೌಮ ಡಿ.ದುರ್ಗಾದಾಸ್ ಇವರ ಇಬ್ಬರು ಅಕ್ಕಂದಿರಾದ ಡಿ.ಸಂಜೀವಮ್ಮ ಮತ್ತು ಡಿ.ಹನುಮಂತಮ್ಮ ಖ್ಯಾತ ಕಲಾವಿದೆಯರಾಗಿದ್ದು, ರಂಗಭೂಮಿ ಸೇವೆಗೈದಿದ್ದಾರೆ. ಇಂದು ದುರ್ಗಾದಾಸರ ಮಗಳಾದ ಸಣ್ಣ ಹನುಮಕ್ಕ ನಾಟಕ ಅಕಾಡೆಮಿಯ ಸದಸ್ಯೆ ಹಾಗು ನೀನಾಸಂ ರಂಗತರಬೇತಿ ಕೇಂದ್ರದಲ್ಲಿ ಹವ್ಯಾಸಿ ಕಲಾವಿದೆಯಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ಸಣ್ಣ ಹನುಮಕ್ಕ ಯಾವ ಶಾಲಾ ಕಾಲೇಜಿನ ಗೋಜಿಗೆ ಹೋಗದೇ ರಕ್ತಗತವಾಗಿ ಹರಿದು ಬಂದಿರುವ ಕಲಾದೇವಿಯೇ ಇವರ ಪ್ರೌಢ ಅಭಿನಯದ ದ್ಯೋತಕವಾಗಿದ್ದಾಳೆ.

ಬಳ್ಳಾರಿಯ ಹತ್ತಿರ ಕಪ್ಪಗಲ್ ಎಂಬ ಊರಿನಲ್ಲಿ ಇಂದಿಗೂ ರಂಗಕಲಾವಿದರ ಮನೆತನಗಳೇ ಇದೆ. ಅದರಲ್ಲಿ ಹೆಚ್ಚಾಗಿ ಪೌರಾಣಿಕ ನಾಟಕಗಳಿಗೆ ಸೀಮಿತವಾಗಿರುವ ಜಾನಪದ ರಂಗಕಲಾವಿದೆಯರಿದ್ದಾರೆ. ಹನುಮಂತಮ್ಮ ಎಂಬ ಕಲಾವಿದೆಗೆ ಈ ವರ್ಷದ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ಸರ್ಕಾರ ನೀಡಿದೆ. ಇವರೆಲ್ಲರೂ ಕೂಡ ಅನಕ್ಷರಸ್ಥರೇ. ಹೀಗಿದ್ದಲ್ಲಿ ಶಿಕ್ಷಣವೆಂಬುದು ಕತ್ತಲಲ್ಲಿಯ ಸಣ್ಣ ದೀಪವಿದ್ದಂತೆ. ಪ್ರಜ್ವಲ ಬೆಳಕು ಬರಬೇಕಾದರೆ ಪ್ರತಿಯೊಬ್ಬ ಕಲಾವಿದರಿಗೂ ಹುಟ್ಟಿನಿಂದ ಬಂದಿರುವ ಪ್ರತಿಭೆ ಇದ್ದರೆ ಮಾತ್ರ ಸಾಧ್ಯ. ಬರೀ ಶಿಕ್ಷಣವೊಂದೇ ಏನನ್ನು ಕೊಡುವುದಿಲ್ಲ. ಶಿಕ್ಷಣಕ್ಕೆ ಪೂರಕವಾಗುವ ಸಂಗೀತ, ಸಾಹಿತ್ಯ, ಕಲಿಕೆ, ತರಬೇತಿ ಇವೆಲ್ಲವುಗಳ ಅನುಕೂಲತೆ ಇದ್ದರೆ ಮಾತ್ರ ಸಮರ್ಥವಾದ ಒಬ್ಬ 'ನಟಿ' ಸೃಷ್ಟಿಯಾಗಲು, ಬೆಳೆಯಲು ಸಾಧ್ಯ. ಆದ್ದರಿಂದ ರಂಗನಟಿಯರಿಗೆ ಇಲ್ಲಿ ಶಿಕ್ಷಣದ ಕೊರತೆ ಹೆಚ್ಚಾಗಿ ಕಂಡು ಬರುವುದಿಲ್ಲ. ನಾವು ತೂಕಬದ್ಧವಾಗಿ ಅಥವಾ ಸಮರ್ಥವಾಗಿ ಅಳೆಯಲು ನೋಡಿದಾಗ ಶಿಕ್ಷಣವು ಒಂದು ಕೊರತೆಯಾಗಿ ಕಂಡು ಬರುತ್ತದೆ.

ಶಿಕ್ಷಣದ ಮೂಲೋದ್ದೇಶ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ. ಆದ್ದರಿಂದ ಶಿಕ್ಷಣದ ಕೊರತೆಯು ಕೆಲವು ರಂಗ ನಟಿಯರ ಏಳಿಗೆಗೆ ಕೊರತೆಯಾಗಿಯೇ ಕಂಡು ಬರುತ್ತದೆ. ಮಸ್ಕೂರ ಸುಭದ್ರಮ್ಮ, ಕೆ.ನಾಗರತ್ನ, ಬಿ.ಪದ್ಮ, ಎಸ್. ರೇಣುಕಾ, ಕೆ.ವರಲಕ್ಷ್ಮಿ, ಬಿ.ಶಿವಕುಮಾರಿ, ಅನುರಾಧ ಮೈಸೂರು ಪ್ರಸ್ತುತದಲ್ಲಿ ಇವರುಗಳು

ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಪಡೆದು ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಮಿನುಗುತಾರೆ ಗಳಾಗಿದ್ದಾರೆ. ಪೌರಾಣಿಕ ರಂಗದ ನಟಿಯರು ಯಾವ ಶೈಕ್ಷಣಿಕ ಸೌಲಭ್ಯಗಳಿಲ್ಲದೆ ಬಾಯಿಪಾಠ ಮಾಡಿ ರಂಗಭೂಮಿಯಲ್ಲಿ ಅಭಿನಯ ನೀಡುತ್ತಾರೆ. ವೈರುಧ್ಯವೆಂದರೆ ಸೃಜನ ಮನೋಭಾವನೆಯ ನಟಿಯರು ಶಿಕ್ಷಣ ವಿಲ್ಲದೆ ಕಷ್ಟಕರವಾದ ಬಯಲಾಟದ ನಾಟಕಗಳನ್ನು ಕಲಿತು ಸಮರ್ಥವಾಗಿ ಅಭಿನಯ ನೀಡಿ ಪ್ರೇಕ್ಷಕರಿಂದ ಕಿವುಡುಗಟ್ಟುವಂತೆ ಚಪ್ಪಾಳೆ ಗಿಟ್ಟಿಸುವುದು ವಿಪರ್ಯಾಸವಾದರು ಸತ್ಯ. ಸಾಮಾಜಿಕ ನಾಟಕಗಳಲ್ಲಿ ಪಾತ್ರ ಮಾಡುವ ನಟಿಯರು ನಾಲ್ಕೈದು ವರ್ಷಗಟ್ಟಲೇ ಕೆಲವೊಂದೇ ನಾಟಕ ಪಾತ್ರಗಳಿಗೆ ಸೀಮಿತವಾಗಿ ತಮ್ಮ ಅಭಿನಯವನ್ನು ಮೊಟಕುಗೊಳಿಸಿಕೊಂಡಿದ್ದಾರೆ. ಆದರೆ ಅದೇ ವಿದ್ಯಾಭ್ಯಾಸ ಮಾಡಿಕೊಂಡಿರುವ ನಟಿ ಯಾಗಿದ್ದರೆ, ಇಂತಿಷ್ಟೆ ಪಾತ್ರಗಳಿಗೆ ನಾನು ಸೀಮಿತ ಎಂದು ಯಾರೂ ಅಡ್ಡಗೆರೆಯನ್ನು ಹಾಕಿಕೊಳ್ಳುತ್ತಿರಲಿಲ್ಲ. ಯಾವ ನಟಿಯೇ ಆಗಲೀ ಪಾತ್ರದ ಜೀವಂತಿಕೆಗೆ, ಪ್ರೌಢ ಅಭಿನಯಕ್ಕೆ ಆ ವ್ಯಕ್ತಿತ್ವದ ಮೆರುಗಿಗೆ ನಟಿಯರಿಗೆ ಶಿಕ್ಷಣದ ಅಗತ್ಯತೆ ಇಂದು ಅನಿವಾರ್ಯವಾಗಿದೆ.

ರಂಗಭೂಮಿಯನ್ನು ಶಿಕ್ಷಣ ಪಡೆದವರು ಇನ್ನೂ ಕೆಲವರು ಶಿಕ್ಷಣ ಪಡೆಯದವರು ಕೈ ಹಿಡಿದು ಮುನ್ನಡೆ ಸಿದ್ದಾರೆ. ಆದರೆ ಹೆಚ್ಚಿನ ನಟಿಯರು ಅವಕಾಶದಿಂದ ವಂಚಿತರಾಗಿದ್ದಾರೆ. ಆದ್ದರಿಂದ ಈಗೀಗ ಬೆಳೆಯುತ್ತಿರುವ ಹೊಸ ಪೀಳಿಗೆಯ ರಂಗನಟಿಯರಿಗೆ ಶಿಕ್ಷಣ ಅನಿವಾರ್ಯ. ಕಾರಣ ಎಲ್ಲ ಸಮೂಹ, ಸಂಪರ್ಕ ಮಾಧ್ಯಮ ರಂಗಭೂಮಿಯ ಹೊಸರೀತಿಯ ಬೆಳವಣಿಗೆಗೆ, ಪ್ರೇರಣೆ, ಹೊಸ ಹೊಸ ಸಂಶೋಧನೆಯಿಂದ ರಂಗಭೂಮಿಯ ಬೆಳವಣಿಗೆ, ಆಧುನಿಕ ರಂಗಭೂಮಿಗೆ ಒಗ್ಗಿಕೊಳ್ಳುವಿಕೆ ಹಾಗೂ ಹೊಸ ನಾಟಕ ಸಾಹಿತ್ಯ, ಸಂವಹನ, ಸಂವಾದ, ಸಂದರ್ಭಗಳನ್ನು ಹಾಗೂ ಪಾಶ್ಚಾತ್ಯ ಪ್ರೇರಣೆಯ ರಂಗಭೂಮಿ ಬೆಳವಣಿಗೆಗೆ ಇಂದು ಬರೀ ನಟಿಯರಿಗೆ ಅಲ್ಲದೆ ರಂಗಭೂಮಿ ಹಾಗೂ ಸಿನೆಮಾ ಇನ್ನಿತರ ಎಲ್ಲರ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಶಿಕ್ಷಣ ಅವಶ್ಯಕ. ಹೊಸ ರೀತಿಯ ನಾಟಕವನ್ನು ನಾವು ಬೆಳೆಸಬೇಕಾದರೆ ಸಮಾಜದಲ್ಲಿ ನವೀನ ರೀತಿಯ ಪರಿಕರ, ಸಂಗೀತ, ಸಾಹಿತ್ಯ, ಈ ಎಲ್ಲವುಗಳನ್ನು ನಾವು ಅರಿಯಬೇಕಾದರೆ ಪ್ರತಿಯೊಬ್ಬ ರಂಗನಟಿಯು ವಿದ್ಯಾವಂತೆಯಾದರೆ ಮಾತ್ರ ಆಕೆ ಸಾಮಾಜಿಕ ಅರಿವು ಮತ್ತು ವೃತ್ತಿರಂಗಭೂಮಿಯ ಅರಿವನ್ನು ಮೂಡಿಸಿಕೊಂಡು, ಆಕೆಗೆ ನೈಜ ಅಭಿನಯ ನೀಡಲು ಸಾಧ್ಯವಾಗಿ ಶಿಕ್ಷಣ ಸ್ಫೂರ್ತಿದಾಯಕವಾಗುವುದರಲ್ಲಿ ಎರಡು ಮಾತಿಲ್ಲ.

ಕಲಿಕೆ : ಕಲಿಕೆ ಎಂಬುದು ಹುಟ್ಟಿನಿಂದ ಬರುವಂಥದ್ದಲ್ಲ. ಅದು ನಿಧಾನಗತಿಯಲ್ಲಿ ಕ್ರಮೇಣವಾಗಿ ರೂಢಿಸಿಕೊಳ್ಳುವಂಥದ್ದು. ಮೂಲ ಕಲಿಕೆಯು ಪ್ರೇರಣೆಗೊಳ್ಳುವುದು ಮೊದಲು ಮನೆಯಿಂದಲೇ ಆರಂಭ ವಾಗುತ್ತದೆ. ಒಬ್ಬ ವ್ಯಕ್ತಿಗೆ ಕಲಿಕೆಯು ನಿರಂತರವಾಗಿರುತ್ತದೆ. ಕಲಿಕೆಗೆ ಅಂತ್ಯವೆಂಬುದೇ ಇಲ್ಲ. ಮಾನವನ ಕಲಾವಧಿಗೆ ನಮ್ಮ ಕಲಿಕೆಯನ್ನು ಸೀಮಿತಗೊಳಿಸಬೇಕಾಗುತ್ತದೆ. ಕಲೆಯು ಕೆಲವೊಮ್ಮೆ ಪರಂಪರಾಗತವಾಗಿ ಕಲಿಕೆಯಿಂದ ಬಂದಿರುತ್ತದೆ. ಆದರೆ ಈ ಕಲಿಕೆಗೆ ಒಂದು ಶಿಸ್ತು ಬದ್ಧ ವ್ಯವಸ್ಥೆ ಅಥವಾ ಚೌಕಟ್ಟಿಗೆ ಒಳಗಾದರೆ ಅದು ಪರಿಪೂರ್ಣವಾಗಿ ಅರ್ಥವಂತಿಕೆಯನ್ನು ನೀಡುತ್ತದೆ. ಸಮೃದ್ಧ ಬೆಳವಣಿಗೆಗೆ ಇವೆಲ್ಲವೂ ಪೂರಕವಾಗಿರಲೇ

ಬೇಕಾಗುತ್ತದೆ. ಕೆಲವೊಮ್ಮೆ ಕಲಿಕೆಯು ಅನುಕರುಣೆಯಿಂದಲೇ ಬರುತ್ತದೆ. ನಾವು ನಿರಂತರವಾಗಿ ಒಬ್ಬರನ್ನೇ ಅನುಕರಣೆ ಮಾಡಿದರೆ ನಿಧಾನಗತಿಯಲ್ಲಿ ನಾವು ಅನುಕರಣೆಯನ್ನು ಕಲಿಕೆಯಿಂದ ಮೈಗೂಡಿಸಿಕೊಳ್ಳಬಹುದು. ಈ ದೃಷ್ಟಿಕೋನದಿಂದಲೂ ಕಲಿಕೆಯನ್ನು ರಕ್ತಗತವಾಗಿರಿಸಿಕೊಳ್ಳ ಬಹುದು.

ನಟಿಯರಿಗೆ ಅಜ್ಜಿ, ತಾಯಿ, ಅಕ್ಕ ಮತ್ತು ಚಿಕ್ಕಮ್ಮ ಹೀಗೆ ಕೌಟುಂಬಿಕ ಕಲಾವಿದರೊಂದಿಗಿನ ಒಡನಾಟವು ಕಲಿಕೆಗೆ ಪೂರಕವಾಗುತ್ತದೆ. ಕಲೆಯಲ್ಲಿ ಕಲಿಕೆಯನ್ನು ನಾವು ಯಾವಾಗಲೂ ಅನುಷ್ಠಾನದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಇಂದಿಗೂ ಕಲಾವಿದರು ಹಾಗೂ ಸಾಹಿತಿಗಳು ಅವರ ಕುಟುಂಬದಲ್ಲಿಯೇ ಅಂಥ ಪರಿಸರವಿದ್ದು ಈ ರೀತಿಯ ತಲೆಮಾರುಗಳನ್ನು ನಾವು ಇಂದಿಗೂ ಕಾಣುತ್ತೇವೆ. ತಾಯಿ, ತಂದೆ, ಅಣ್ಣ, ಅಕ್ಕ ಯಾರಾದರೂ ಕಲಾವಿದರಾಗಿದ್ದರೆ ಅವರ ಸಂಬಂಧಿಗಳು ಈ ಕ್ಷೇತ್ರದಲ್ಲಿರುತ್ತಾರೆ. ಆದ್ದರಿಂದ ಕಲಿಕೆಯು ಕೆಲವೊಮ್ಮೆ ಹುಟ್ಟಿಬಂದ ಪರಿಸರದಿಂದಲೂ ಬಂದಿರುತ್ತದೆ. ಇದಕ್ಕೆ ವೈರುಧ್ಯವಾಗಿ ಕೆಲವೊಬ್ಬರಿಗೆ ಹುಟ್ಟಿನಿಂದ ಯಾವ ಪರಿಸರದ ಸ್ಪರ್ಶವಿಲ್ಲದಿದ್ದರೆ ಕಲೆಯು ತಾನಾಗಿಯೇ ವ್ಯಕ್ತಿಗತವಾಗಿ ಅಂತರ್ಗತವಾಗಿ ಬಂದಿರುತ್ತದೆ. ಕೆಲವರು ಬಡತನದ ಅನಿವಾರ್ಯತೆಯಿಂದ, ಕೆಲವರು ದೇವದಾಸಿಯರಾಗಿ ಕಲೆಯ ಕ್ಷೇತ್ರಕ್ಕೆ ಕಾಲಿಟ್ಟಿರುತ್ತಾರೆ. ಅಂಥ ಎಷ್ಟೋಜನ ರಂಗನಟಿಯರು ಇಂದು ಕಲೆಯ ಉಜ್ವಲತೆಗೆ ಕಾರಣರಾಗಿದ್ದಾರೆ.

ಮರಿಯಮ್ಮನಹಳ್ಳಿಯ ರಂಗಭೂಮಿಯ ಎಲ್ಲ ಕಲಾವಿದೆಯರು ತಿಂಗಳುಗಟ್ಟಲೇ ತಾಲೀಮು ನಡೆಸುತ್ತ ರಂಗಭೂಮಿಯ ಎಲ್ಲ ಕಲಿಕೆಗಳನ್ನು ಕಲಿಯುತ್ತಾರೆ. ಹಿರಿಯ ರಂಗಕಲಾವಿದೆಯರು ಕಿರಿಯರಿಗೆ ಮಾರ್ಗ ದರ್ಶನ ಮಾಡುತ್ತಾರೆ. ಹೀಗಾಗಿ ಮರಿಯಮ್ಮನಹಳ್ಳಿಯ ಕಲಾವಿದೆಯರು ವಿಶೇಷವಾಗಿ ನಟನೆಯಲ್ಲಿ ರಾಜ್ಯ ಮಟ್ಟದವರೆಗೆ ಹೆಸರು ಮಾಡಿಕೊಂಡು ತಮ್ಮ ಅಭಿವ್ಯಕ್ತಿತನವನ್ನು ದೃಢೀಕರಿಸಿದ್ದಾರೆ. ಇಡೀ ರಾಜ್ಯದಲ್ಲಿಯೇ ಹೆಸರು ಪಡೆದಂಥ 'ನೀನಾಸಂ' ತಿರುಗಾಟ ಹಾಗೂ ಸಾಣೆಹಳ್ಳಿಯ ತಂಡದಲ್ಲಿದ್ದು ಹಲವಾರು ನಟ-ನಟಿಯರಿಗೆ ತರಬೇತಿಯನ್ನು ಇಂದಿಗೂ ನೀಡುತ್ತಿದ್ದಾರೆ. ಈ ಸಂಘದಲ್ಲಿರುವ ಕಲಾವಿದೆಯರು "ಮಹಿಳಾ ವೃತ್ತಿರಂಗ ಕಲಾವಿದೆಯರು." ಸಂಘಟನೆ ಹಾಗೂ ಲಲಿತಕಲಾ ರಂಗದ ನಟಿಯರು ರಾಜ್ಯ ಮಟ್ಟದ ರಂಗಕಲಾವಿದ ರಿದ್ದಾರೆ. ಅದರಲ್ಲೂ ಡಿ.ಎಂ.ತೋಟಯ್ಯಸ್ವಾಮಿ ಸಂಗೀತ ಮಾಸ್ತರ, ಮೈಲಾರಪ್ಪನಂಥ ಹಿರಿಯರು ಮರಿಯಮ್ಮನಹಳ್ಳಿ ರಂಗಕಲಾ ವಿದೆಯರಿಗೆ ತಂದೆ ಹಾಗೂ ಗುರು ಎರಡೂ ಆಗಿದ್ದಾರೆ. ನಾಟಕಕ್ಕೆ ನಿರ್ದೇಶನ ನೀಡುವುದು, ನಟಿಯರಿಗೆ ವಿಶೇಷ ರೀತಿಯ ಸಂಗೀತ, ಅಭಿಯನಕ್ಕೆ ನಿರ್ದೇಶಕ ಹಾಗೂ ಮಾರ್ಗದರ್ಶಕರೂ ಹೌದು. ಈ ರೀತಿಯ ಅನುಕೂಲತೆಗಳು ನಟಿಯರ ಕಲಿಕೆಗೆ ಪ್ರೇರಣೆಯನ್ನು ನೀಡುತ್ತವೆ.

ಜೀವನದಲ್ಲಿ ಕಲಿಕೆಗೆ ಅಂತ್ಯ ಎಂಬುದೇ ಇಲ್ಲ. ಯಾವುದೇ ಕಲೆ, ಸಾಹಿತ್ಯ, ಸಂಗೀತ, ಅಭಿನಯಕ್ಕೆ, ವಿಜ್ಞಾನಕ್ಕೆ ಕೊನೆ ಎಂಬುದು ಇಲ್ಲ. ಆದ್ದರಿಂದ ಕಲಿಕೆಯು ಯಾವಾಗಲೂ ಅನಂತವಾಗಿರುತ್ತದೆ. ರಂಗ ನಟಿಯರಿಗೆ ಈ ಕಲಿಕೆಯು ರಂಗಭೂಮಿ ಅವಧಿಯವರೆಗೆ ಅದು ಇದ್ದದ್ದೆ. ಆದರೆ ಈ ಕಲಿಕೆಯು ಕೂಡ

ಕೆಲವರಿಗೆ ಮಾತ್ರ ಆಸಕ್ತದಾಯಕವಾಗಿರುತ್ತದೆ. ಯಾಂತ್ರಿಕವಾಗಿ ಇಂದಿನ ಪ್ರಪಂಚದಲ್ಲಿ ರಂಗಭೂಮಿಗೆ ಎಷ್ಟೋ ನಟಿಯರು ಆರ್ಥಿಕ ದೃಷ್ಟಿಯಿಂದ ವ್ಯಾವಹಾರಿಕವಾಗಿ ಮಾತ್ರ ರಂಗಭೂಮಿಗೆ ಪ್ರವೇಶಿಸುವುದರಿಂದ ಇಲ್ಲಿ ಕಲಿಕೆಗೆ ಅಷ್ಟು ಮಹತ್ವವಿಲ್ಲದಾಗಿದೆ. ನಾನು ಸಂದರ್ಶನ ಮಾಡಿದಾಗ ಕೆಲವೊಂದಿಬ್ಬರು ನಟಿಯರು ಬರಿಯೇ ಹಾಸ್ಯ ಪಾತ್ರಗಳನ್ನು ಆರಿಸಿಕೊಂಡು ಬರೀ ಕುಣಿಯುವುದು ಅರ್ಥವಿಲ್ಲದ ದ್ವಂದ್ವಾರ್ಥದ ಶಬ್ದಗಳನ್ನು ಮಾತನಾಡುವುದು, ಮಾತು ತಪ್ಪಿದರೂ ಹಾಸ್ಯ ಪಾತ್ರದಲ್ಲಿ ಅದು ಮುಚ್ಚಿಕೊಂಡು ಹೋಗುತ್ತದೆ. ಈ ಎಲ್ಲ ದೃಷ್ಟಿಯಿಂದ ರಂಗಭೂಮಿಯಲ್ಲಿ ಅಭಿನಯ ಕಲಿಕೆಯು ಕುಂಠಿತವಾಗುತ್ತದೆ.

ಸ್ವಯಂ ಆಸಕ್ತಿಯಿಲ್ಲದ ಕಲಿಕೆ ಇಲ್ಲದೇ ನಟಿಯರು ಮಾತುಗಳನ್ನು ಕೈಯಲ್ಲಿ ಬರೆದುಕೊಂಡು ಹೋಗುವುದು. ತಮ್ಮ ಹಾವಭಾವ ವನಪು, ವಯ್ಯಾರದಿಂದ ಸಹ ನಟನೊಂದಿಗೆ close ಆಗಿ move ಆಗಿ ತಾವು ಸರಿಯಾಗಿ ಅಭಿನಯಿಸದಿದ್ದರೂ, ಮಾತು ಬಾರದಿದ್ದರೂ ಕುಣಿದು, ರಂಗದಲ್ಲಿ ಕುಪ್ಪಳಿಸಿ ಆ ಸನ್ನಿವೇಶವನ್ನು ಅಲ್ಲಿಗೆ ಮುಗಿಸಿ ಬಿಡುವುದು ಇತ್ತೀಚೆಗೆ ರಂಗನಟಿಯರ ಈ ರೀತಿಯ ವರ್ತನೆಯಿಂದ ರಂಗಭೂಮಿ ಕಲಿಕೆ ಪ್ರಗತಿಪರವಾಗಿಲ್ಲ. ಹಾಗೂ ನೈಜತೆಯಿಂದ ಕೂಡಿಲ್ಲ. ಅದು ವ್ಯಕ್ತಿಗತ ಆಸೆ, ಇಷ್ಟ, ಅನಿಷ್ಟದ ಮೇಲೆ ರಂಗನಟಿಯ ಅಭಿನಯ ನಿಂತಿರುತ್ತದೆ.

ಹಿಂದಿನವರಿಗೆ ಇದ್ದಷ್ಟು 'ರಂಗಭೂಮಿ' ಬಗ್ಗೆ ಅಭಿಮಾನ ಈಗಿನವರಿಗೆ ಇಲ್ಲದಾಗಿದೆ. ಎಲ್ಲವೂ ಯಾಂತ್ರಿಕ. ಎಲ್ಲವೂ ವ್ಯವಹಾರಿಕ. ಆದ್ದರಿಂದ ಕಲಿಕೆಯು ತಾನಾಗಿಯೇ ಸ್ವ-ಆಸಕ್ತಿಯಿಂದ ಬರಬೇಕು. ಅದು ಒತ್ತಡದಿಂದ, ಇನ್ನೊಬ್ಬರ ಹೇಳಿಕೆಯಿಂದ ಬರುವಂಥದ್ದಲ್ಲ. ಯಾವುದೂ ಹಗುರವಲ್ಲ ಹಾಗಂತ ಯಾವುದೂ ಭಾರವಲ್ಲ. ನಾವು ಮಾಡಿಕೊಂಡಂತೆ ಅದರ ಅನುಭವ ನಮಗಾಗುತ್ತದೆ. ಇವೆಲ್ಲದರ ಜೊತೆಗೆ ಅಭಿನಯ, ಕಲಿಕೆ, ರಂಗಭೂಮಿ, ಇವುಗಳ ಬಗ್ಗೆ, ಗೌರವ, ನಿಷ್ಠೆ ಪ್ರತಿಯೊಬ್ಬ ಪಾತ್ರಧಾರಿಗೂ ಇರಬೇಕಾಗುತ್ತದೆ. ರಂಗ ಸರಸ್ವತಿಯ ಮೆಚ್ಚುಗೆ ಪಡೆಯಬೇಕಾದರೆ ಹಲವಾರು ಅಭಿಜ್ಞಾನಗಳನ್ನು ನಾವು ದಾಟಿಕೊಂಡು ಹೋಗಬೇಕಾಗುತ್ತದೆ.

ಜೀವನದುದ್ದಕ್ಕೂ ಕಲಿಕೆಯು ಇದ್ದದ್ದೆ. ಅದು ಅನುಗಾಲವೂ ನಿರಂತರ. ಕಲಿಕೆ, ಕ್ರಿಯಾಶೀಲತೆಯಿಂದ ಕೂಡಿದ್ದರೆ ಮಾತ್ರ ಅದು ನಿಜವಾದ ಪ್ರಕ್ರಿಯೆ. ಯಾವುದೇ ಒಬ್ಬ ಸಾಧಕನಿಗೆ ಈ ಕಲಿಕೆ ಪೂರ್ವ ಪ್ರಮಾಣದಲ್ಲಿ ಕಂಡು ಬರುತ್ತದೆ. ಅಲ್ಪತೃಪ್ತಿಗಳಿಗೆ ಯಥಾರೀತಿ ತಥಾ ಜೀವನವಾಗಿರುತ್ತದೆ. ಆದ್ದರಿಂದ ಎಷ್ಟೋ ಜನ ರಂಗಭೂಮಿ ನಟಿಯರು ತಮ್ಮ ಆಸಕ್ತಿಯಿಂದ ಮುನ್ನಡೆಯುತ್ತಾರೆ. ಅಷ್ಟು ಚೆನ್ನಾಗಿ ಕಲಿಕೆಯನ್ನು ರೂಢಿಸಿಕೊಂಡವರು ಇಂದು ಬಳ್ಳಾರಿ ಜಿಲ್ಲೆಯ ರಂಗಭೂಮಿ ಕಲಾವಿದೆಯರಾದ ಮೇರು ನಟಿಯರೆನಿಸಿ ಕೊಂಡವರು ಆದವಾನಿ ಲಕ್ಷ್ಮೀದೇವಿ, ಡಿ.ಸಂಜೀವಮ್ಮ, ಡಿ.ಹನುಮಂತಮ್ಮ, ಬಳ್ಳಾರಿ ಲಲಿತಮ್ಮ, ಬಳ್ಳಾರಿ ಸುಜಾತಮ್ಮ, ಮೋಸಳ್ಳಿ ಪಾರ್ವತಮ್ಮ, ಕೊಟ್ಟೂರು ಕೋಮಲ, ಕೆ.ನಾಗರತ್ನಮ್ಮ, ಪಿ.ಪದ್ಮ, ಎಸ್.ರೇಣುಕಾ, ಸೋಗಿರತ್ನ, ಹೊಸಪೇಟೆ ಡಿ.ಸಣ್ಣಹನುಮಕ್ಕ, ಬೂದಾಳ ತಿರುಮಲ, ಎಸ್.ಸುಮತಿ ಮುಂತಾದ ನಟಿಯರು ಇಂದು

ಜ್ವಲಂತ ನಿದರ್ಶನ. ರಂಗಭೂಮಿ ಸೇವೆ ಮಾಡುತ್ತಲೇ, ಕಲಿಯುತ್ತಲೇ ಇಂದು ನಟಿಯರು ತಮ್ಮ ಜೀವನಾವರ್ತನೆ ಪೂರ್ಣಗೊಳಿಸುವುದೇ ನಟಿಯರ ವಾಂಛೆಯಾಗಿದೆ.

ತರಬೇತಿ : ತರಬೇತಿ ಇಲ್ಲದ ಶಿಕ್ಷಣ ಎಂದೂ ಪರಿಪೂರ್ಣವಲ್ಲ. ಒಬ್ಬ ಶಿಕ್ಷಕ ವೃತ್ತಿಯನ್ನು ಮಾಡಬೇಕಾದರೆ ತರಬೇತಿ ಪಡೆದವನು ಮಾತ್ರ ಶಿಕ್ಷಕನಾಗಬಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಒಂದಿಲ್ಲ ಒಂದು ರೀತಿಯಲ್ಲಿ ಎಲ್ಲರೂ ತರಬೇತಿಯನ್ನು ಪಡೆದಿರುತ್ತಾರೆ. ಉದಾ: ಸಂಗೀತಗಾರ, ವಿಜ್ಞಾನಿ, ಶಿಕ್ಷಕ, ರಾಜಕಾರಣಿ, ಸಾಹಿತಿ ಇವರೆಲ್ಲರು ನಿರ್ದಿಷ್ಟವಾಗಿ ಅಲ್ಲದಿದ್ದರೂ ಇನ್ನಾವುದೋ ದೃಷ್ಟಿಕೋನದಿಂದಲಾದರೂ ತರಬೇತಿಯನ್ನು ಹೊಂದಿರುತ್ತಾರೆ. ಅದೇ ರೀತಿ ಕಲಾವಿದ, ನಿರ್ದೇಶಕ, ನಟ-ನಟಿಯರು ಕೂಡ ತಮ್ಮ ಹಿರಿಯ ಪರಂಪರೆಯಿಂದ ತರಬೇತಿಯನ್ನು ಪಡೆದಿರುತ್ತಾರೆ. ಆದ್ದರಿಂದ ಪ್ರತಿಯೊಬ್ಬ ರಂಗನಟಿಯು ತಮ್ಮ ಹಿರಿಯ ಕಲಾವಿದೆಯರಿಂದ ರಂಗಭೂಮಿಯ ತರಬೇತಿಯನ್ನು ಪಡೆದಿರುತ್ತಾರೆ. ಹಾರ್ಮೋನಿಯಂ ಮಾಸ್ತರ, ದಿಲ್‌ರುಬಾ ಮಾಸ್ತರ, ತಬಲಾಜಿ ಇವರೆಲ್ಲರ ನಿರ್ದೇಶನ, ಸಲಹೆ, ಸೂಚನೆಗಳು ರಂಗ ನಟಿಯರಿಗೆ ಅವಶ್ಯಕವಾಗಿರುತ್ತವೆ. ಈ ಅನುಭವ ತರಬೇತಿಯ ಇನ್ನೊಂದು ರೂಪ.

ಒಂದು ಶಿಲೆ ಶಿಲ್ಪವಾಗಬೇಕಾದರೆ ಅದಕ್ಕೆ ಹಲವಾರು ಉಪಕರಣಗಳಾದ ಚಾಣ, ಸುತ್ತಿಗೆ, ಉಳಿ ಇವುಗಳ ಹೊಡೆತ ಬಿದ್ದನಂತರ ಶಿಲೆ ಶಿಲ್ಪವಾಗುತ್ತದೆ. ಅದರಂತೆ ಒಬ್ಬ ರಂಗನಟಿ ಮಿನುಗುತಾರೆಯಾಗಬೇಕಾದರೆ ತರಬೇತಿ ಎಂಬುದು ಅವಶ್ಯಕ.

ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ನೀನಾಸಂ ಹೆಗ್ಗೋಡಿನಲ್ಲಿ ರಂಗತರಬೇತಿ ಶಿಬಿರ ಏರ್ಪಡಿಸುತ್ತದೆ. ಜೊತೆಗೆ ಮೈಸೂರಿನ ರಂಗಾಯಣದಲ್ಲಿ ರಂಗಭೂಮಿಗೆ ಸಂಬಂಧಿಸಿದ ತರಬೇತಿಗಳು ಆಗಾಗ ನಡೆಯುತ್ತಿರುತ್ತವೆ. ಎಷ್ಟೋ ಕಲಾವಿದರು ನಿರ್ದೇಶಕರು ಖೈದಿಗಳಿಗೂ ಸಹ ನಾಟಕ ತರಬೇತಿಯನ್ನು ನೀಡಿ ಅವರ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸುತ್ತಾರೆ. ಮನುಷ್ಯ ತಪ್ಪು ಮಾಡುವುದು ಸಹಜ. ಆದರೆ ಆ ತಪ್ಪು ಪುನರಾವರ್ತನೆಯಾಗಬಾರದು. ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ತರಬೇತಿ ಅವಶ್ಯ. ಆದ್ದರಿಂದ ಖೈದಿಗಳೂ ಸಹಿತ ಮನುಷ್ಯರೇ ಎಂಬುದು ತಿಳಿದುದು ರಂಗಭೂಮಿ ತರಬೇತಿಯಿಂದ. ಒಬ್ಬ ನಟಿ ರಂಗಭೂಮಿಯಲ್ಲಿ ಸಾರ್ವಭೌಮತ್ವವನ್ನು ಪಡೆದಿದ್ದಾರೆಂದರೆ ಅವರು ತಮ್ಮ ಹಿನ್ನೆಲೆಗಳಿಂದ ತರಬೇತಿಯನ್ನು ಹೊಂದಿದವರೇ ಇರುತ್ತಾರೆ. ಎಷ್ಟೋ ನಟಿಯರು ವೃತ್ತಿ ನಾಟಕ ಕಂಪನಿಗಳಿಂದ ಹಲವಾರು ಅನುಭವ ಪಡೆದು ತಾಲೀಮ್‌ನಲ್ಲಿ ಮತ್ತೆ ಮತ್ತೆ ಅದನ್ನು ಅಭ್ಯಾಸ ಮಾಡಿ ನಾಟಕ ಪ್ರಯೋಗಿಸುತ್ತಾರೆ.

ತರಬೇತಿಯು ರಂಗನಟಿಯರ ಅಭಿನಯ ಸಾಮರ್ಥ್ಯವನ್ನು ಪ್ರಬುದ್ಧಗೊಳಿಸುವುದರಲ್ಲಿ ಸಂದೇಹವಿಲ್ಲ. ತರಬೇತಿಯನ್ನು ಪಡೆದು ಅಭಿನಯಿಸಿದ ಅಭಿನಯವು ಪ್ರೇಕ್ಷಕರ ಮನದಾಳದಲ್ಲಿ ಬಹುಕಾಲ ಉಳಿಯಬಲ್ಲದು. ಭಾವನೆಗಳ ಅಭಿವ್ಯಕ್ತತೆ, ಭಾವತನ್ಮಯತೆ ಮೊದಲಾದವುಗಳನ್ನು ತರಬೇತಿಯು ಉದ್ದೀಪನಗೊಳಿಸುತ್ತದೆ.

ತರಬೇತಿ ಇಲ್ಲದ ರಂಗನಟಿಯರ ಅಭಿನಯ ಪ್ರಖರವಾಗಿರುವುದಿಲ್ಲ. ಕಾರಣ ಅವರಲ್ಲಿ ತರಬೇತಿಯ ಕೊರತೆ ಎದ್ದು ಕಾಣುತ್ತಿರುತ್ತದೆ. ತರಬೇತಿ ಇಲ್ಲದ ನಟಿಯರೇ ಇಂದು ಹೆಚ್ಚಾಗಿ ರಂಗಭೂಮಿಯಲ್ಲಿದ್ದಾರೆ. ರಂಗಭೂಮಿಯ ಬೆಳವಣಿಗೆಗೆ ಇದೊಂದು ದೊಡ್ಡ ಆತಂಕವಾಗಿ ಪರಿಣಮಿಸಿದೆ. ಯಾರಿಗಾಗಿ ಯಾರನ್ನೂ ಹೋಲಿಸಬಾರದು. ಆದರೆ ಹೋಲಿಸದಿದ್ದರೂ ಅನುಕರಿಸುವುದು ನಮ್ಮೆಲ್ಲರ ಕರ್ತವ್ಯ. ಯಾವುದೇ ಕ್ಷೇತ್ರದ ದಿಗಂತಗಳನ್ನು ನಾವು ಅನುಕರಿಸಲೇಬೇಕು. ಇವರ ಮಾರ್ಗದರ್ಶನ ನಟಿಯರ ಸಾಧನೆಗೆ ಸಹಕಾರಿ.

ರಂಗಭೂಮಿಯ ಹಾಗೂ ರಂಗನಟಿಯರ ಸಫಲತೆ-ವಿಫಲತೆಗಳು, ಸೋಲು-ಗೆಲುವುಗಳ ಹಿನ್ನೆಲೆ, ತರಬೇತಿ ಎಂದೇ ಹೇಳಬಹುದು. ರಂಗಭೂಮಿಯು ಚಿರಕಾಲ ಉಳಿದು, ರಂಗನಟಿಯರ ಬಾಳು ಬೆಳಗಬೇಕಾದರೆ ಆ ಕ್ಷೇತ್ರಕ್ಕೆ ತರಬೇತಿ ಅವಶ್ಯಕ ಹಾಗೂ ಅನಿವಾರ್ಯ.

ಸಂಗೀತಗಾರರು, ಚಿತ್ರಕಲಾವಿದರು, ನಟ-ನಟಿಯರು ಹೀಗೆ ಪ್ರದರ್ಶಕ ಕಲೆಗಳ ಎಲ್ಲಾ ಪ್ರತಿಭೆಗಳು ಸಹಜವೆನ್ನುವಂತೆ ಈ ಊರಿನಲ್ಲಿ ಹುಟ್ಟಿಬಂದರೂ, ಇಲ್ಲಿನ ಮಹಿಳಾ ಕಲಾವಿದೆಯರು ಮಾತ್ರ ಹೊರಜಗತ್ತಿಗೆ ಪರಿಚಿತ. ಸಾಮಾಜಿಕ, ಆರ್ಥಿಕ ಹಿಂದುಳಿದಿರುವಿಕೆಯ ಪ್ರತಿಕೂಲ ಪರಿಸ್ಥಿತಿಯಲ್ಲೂ ಈ ಮಹಿಳಾ ಕಲಾವಿದೆಯರ ಸಾಧನೆ ಸೋಜಿಗ ಹುಟ್ಟಿಸುತ್ತವೆ. ಮರಿಯಮ್ಮನಹಳ್ಳಿ ಕಲಾವಿದರು ಲೋಕದ ಜನರ ಕಲೆಯ ಹಸಿವನ್ನು ತಣಿಸುವಾಗ ಇದೇ ಊರಿನಲ್ಲೆ ಒಂದು ಪ್ರಾಯೋಗಿಕ ನಾಟಕ ತಂಡ ಏಕೆ ಇರಬಾರದು ಎಂಬ ಪ್ರಶ್ನೆಗಳ ಪ್ರತಿಫಲವೇ ಲಲಿತ ಕಲಾರಂಗದ ಹುಟ್ಟಿಗೆ ಕಾರಣ. ಇದರ ರೂವಾರಿ ಮ.ಬ.ಸೋಮಣ್ಣರವರು.

೧೯೮೮ರಲ್ಲಿ ಹುಟ್ಟಿದ ತಂಡ ಆರಂಭದಲ್ಲಿ ಈ ಭಾಗದಲ್ಲಿ ಪ್ರಚಲಿತವಿದ್ದ ಕಂಪನಿ ಶೈಲಿಯ ನಾಟಕಗಳನ್ನು ಪ್ರಯೋಗಿಸಿದರೆ ಕ್ರಮೇಣವಾಗಿ ಎಲ್ಲಾ ಪ್ರಭಾವಗಳನ್ನು ಜೀರ್ಣಿಸಿಕೊಂಡು ನಿರಂತರ ಪ್ರಯೋಗಶೀಲತೆಯ ತಂಡವಾಗಿ ರಾಜ್ಯದ ರಂಗಾಸಕ್ತರ ಗಮನ ಸೆಳೆಯಿತು. ರಂಗ ತರಬೇತಿ, ಶಿಬಿರ, ನಾಟಕೋತ್ಸವ, ನಾಟಕ ಸ್ಪರ್ಧೆ ಸಂಗೀತಗೋಷ್ಠಿ, ಜಾನಪದ ಕಲಾ ಪ್ರಕಾರಗಳ ಪ್ರದರ್ಶನ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸಂಘಟಿಸಿ ತನ್ನ ಅನುಭವ ವಲಯವನ್ನು ವಿಸ್ತರಿಸಿಕೊಂಡಿತು. ಯಾವುದೇ ಮಡಿವಂತಿಕೆ ಇಲ್ಲದ ಲಲಿತ ಕಲಾರಂಗ, ನಗರ, ಪಟ್ಟಣ, ಹಳ್ಳಿಗಳ ಎಲ್ಲ ವರ್ಗದ ಪ್ರೇಕ್ಷಕರನ್ನು ತನ್ನ ಕಕ್ಷೆಗೆ ಸೆಳೆಯಿತು. ಇದೊಂದು ಹವ್ಯಾಸಿ ತಂಡವಾದರೂ ವರ್ಷಕ್ಕೆ ಒಂದೋ ಎರಡೋ ನಾಟಕಗಳ ಪ್ರದರ್ಶನದಿಂದ ಅಲ್ಪತೃಪ್ತವಾಗದೇ ಹತ್ತಾರು ಪ್ರಯೋಗಗಳನ್ನು ಪ್ರದರ್ಶಿಸಿತು. ಹಳ್ಳಿಯ ಹಬ್ಬ ಜಾತ್ರೆಗಳಲ್ಲಿ ನವೀನ ರೀತಿಯ ನಾಟಕಗಳನ್ನು ಪ್ರಯೋಗಗಳನ್ನು ಪ್ರದರ್ಶಿಸಿತು. ಹಳ್ಳಿಯ ಹಬ್ಬ ಜಾತ್ರೆಗಳಲ್ಲಿ ಹೊಸರೀತಿಯ ನಾಟಕಗಳನ್ನು ಪ್ರಯೋಗಿಸಿ ಸೈ ಎನಿಸಿಕೊಂಡಿತು.

ನಾಟಕ ಅಕಾಡೆಮಿಯು ನಡೆಸಿಕೊಟ್ಟ, ಮೊಟ್ಟ ಮೊದಲ 'ಮಹಿಳಾ ರಂಗತರಬೇತಿ ಶಿಬಿರ' ಈ ತಂಡದ ಆಶ್ರಯದಲ್ಲಿಯೇ ನಡೆಯಿತು ಎಂಬುದು ಇದರ ಮತ್ತೊಂದು ಹೆಗ್ಗಳಿಕೆ. ಆದರ್ಶಪ್ರೇಮ, ಗಂಡನ ಆಜ್ಞೆ,

ರೊಟ್ಟಿ ಋಣ, ಕಾಡು ಕುದುರೆ, ಊರು-ಕೇರಿ, ಬೆಳ್ಳಕ್ಕಿ ಹಿಂಡು ಬೆದರ್ಯಾವೋ ಮುಂತಾದ ನಾಟಕಗಳ ಎಲ್ಲಾ ಪ್ರಕಾರಗಳನ್ನು ಪ್ರಯೋಗಿಸಿತು ಎಂಬುದನ್ನು ಹೇಳಬಹುದಾಗಿದೆ (ಕಲಾಸಿರಿ, ಸ್ಮರಣ ಸಂಚಿಕೆ, ಪುಟ, ೨೪, ಮರಿಯಮ್ಮನಹಳ್ಳಿ).

ಈಗೀಗ ಲಲಿತಕಲಾರಂಗವು ಹಲವಾರು ಹೊಸ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಸರಕಾರ ಹಾಗೂ ಸ್ವಯಂಸೇವಾ ಸಂಸ್ಥೆಗಳ ಸಹಯೋಗದೊಂದಿಗೆ.

೧. ಅಕ್ಷರ ವಿಜಯ ಕಾರ್ಯಕ್ರಮ
೨. ಅರಣ್ಯ ಸಂರಕ್ಷಣೆ ಕಾರ್ಯಕ್ರಮ
೩. ಪರಿಸರ ಮಾಲಿನ್ಯ ನಿಯಂತ್ರಣ ಕಾರ್ಯಕ್ರಮ
೪. ಏಡ್ಸ್ ಜಾಗೃತಿ ಕಾರ್ಯಕ್ರಮ
೫. ಬಾಲ್ಯ ವಿವಾಹ ನಿವಾರಣೆ ಕಾರ್ಯಕ್ರಮ
೬. ತಾಯಿಯ ಎದೆಹಾಲಿನ ಮಹತ್ವದ ಕಾರ್ಯಕ್ರಮ
೭. ಪೌಷ್ಠಿಕ ಆಹಾರದ ಮಹತ್ವದ ಕಾರ್ಯಕ್ರಮ
೮. ಮಹಿಳಾ ಶಿಕ್ಷಣ ಕಾರ್ಯಕ್ರಮ

ಹೀಗೆ ಹಲವಾರು ರೀತಿಯ ಕಾರ್ಯಕ್ರಮಗಳನ್ನು ನಾಟಕ ರೂಪದಲ್ಲಿ ಹಮ್ಮಿಕೊಂಡು ಈ ನಿಟ್ಟಿನಲ್ಲಿ ಲಲಿತಕಲಾರಂಗವು ನಿರಂತರವಾಗಿ ಕ್ರಿಯಾಶೀಲವಾಗಿರುತ್ತದೆ.

೪.೨.೨. ಯೌವ್ವನ : ಮದುವೆ : ಮಕ್ಕಳು : ಯೌವ್ವನಾವಸ್ಥೆಯಲ್ಲಿ ಬದುಕು ಬಹಳ ಸುಂದರವಾಗಿ ಕಾಣುತ್ತದೆ. ಕನಸೆಲ್ಲಾ ಗರಿಗೆದರಿರುತ್ತವೆ. ಯೌವ್ವನ ಹೀಗೆಯೇ ಇರುತ್ತದೆ. ನಾವು ಅಂದುಕೊಂಡಂತೆ ಎಲ್ಲವೂ ನಡೆಯುತ್ತದೆ ಎಂಬುದೊಂದು ಭ್ರಮೆ. ಆಕಾಶದಲ್ಲಿ ಹಕ್ಕಿಗಳಂತೆ ಹಾರಾಡಬೇಕು ಕಲ್ಪನೆಯಂತೆ ಎಲ್ಲವೂ ಹೀಗೆ ಇರುವುದೊಂದು ಹುಚ್ಚು ಕಲ್ಪನೆ. ಸಹನಟನೆಂದೂ ಸಂಗಾತಿಯಾಗಲಾರ. ಸಹಪ್ರಯಾಣಿಕರೆಲ್ಲರೂ ಕಷ್ಟ-ಸುಖಗಳನ್ನು ಹಂಚಿಕೊಳ್ಳುವುದಿಲ್ಲ. ಅವರು ಆಗಾಗ ಬರುವ ಸನ್ನಿವೇಶಗಳ ಪಾತ್ರಧಾರಿಗಳು. ಅವರೆಂದೂ ನಟಿಯರ ಬಾಳಿಗೆ ಆಸರೆಯಾಗಲಾರರು. ಕಲಾವಿದೆಯರು ಯೌವ್ವನ ಭರದಲ್ಲಿ ಭ್ರಮಾಲೋಕದಲ್ಲಿ ವಿಹರಿಸುವುದಕ್ಕಿಂತ ಮುಂಚಿತವಾಗಿ ಮುನ್ನೆಚ್ಚರಿಕೆಯಿಂದ ಇರಬೇಕಾಗುತ್ತದೆ. ಹಲವು ಎಚ್ಚರಿಕೆಯಿಂದ ನಟಿಯರಿದ್ದರೆ ಯಾವುದೇ ಕ್ಷೇತ್ರದಲ್ಲಿ ಹೆಸರುಗಳಿಸಿ, ನಾಡಿನ ಸಾಂಸ್ಕೃತಿಕತೆಯನ್ನು ಮೆರೆಯಬಹುದು.

'ಕಾಲಾಯ ತಸ್ಮೈ ನಮಃ' ಕಾಲವು ಎಲ್ಲವನ್ನು ನಿರ್ಧರಿಸುತ್ತದೆ. ಕಾಲಕ್ಕೆ ತಕ್ಕಂತೆ ನಡೆಯುವುದೇ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಅದರಲ್ಲಿ ರಂಗಭೂಮಿ ನಟಿಯರು ಈ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಯೌವ್ವನದ ಭರದಲ್ಲಿ ಎಲ್ಲ ಸುಂದರವಾಗಿ ಕಾಣುತ್ತದೆ. ಆ ಕನಸಂತೆ ವಾಸ್ತವದಲ್ಲಿ ಎಂದೂ ಇರುವುದಿಲ್ಲ. ವಾಸ್ತವವೇ ತುಂಬಾ ಕಟುವಾಗಿರುತ್ತದೆ. ಅದಕ್ಕಾಗಿ ಎಷ್ಟೋ ನಟಿಯರಿಂದು ದುರಂತ ಸಾವಿಗೀಡಾಗಿದ್ದಾರೆ. ಕೆಲವರು ಮಾನಸಿಕ ಅಸ್ವಸ್ಥ ರಾಗಿದ್ದಾರೆ. ಇನ್ನೂ ಕೆಲವರು ತಾವು ನಟಿಯರು ಎನ್ನುವುದನ್ನೇ ಮರೆತು ಕಂಗಾ ಲಾಗಿದ್ದಾರೆ.

ಬದುಕು ತುಂಬಾ ವಿಚಿತ್ರವಾದದ್ದು. ಯಾವ ನಿರೀಕ್ಷೆಯಿಲ್ಲದೆ ಕೆಲವೊಮ್ಮೆ ಏನೇನೋ ಆಗಿಬಿಡುತ್ತದೆ. ಆಯಾಯ ಘಟನೆಗೆ ತಕ್ಕಂತೆ ಸಮಾಜದಲ್ಲಿ ಬದುಕುವುದು ರಂಗನಟಿಯರ ಅನಿವಾರ್ಯತೆಯಾಗಿದೆ. ಜೀವನದಲ್ಲಿ ಮುಂದಿನ ಬದುಕು ಯಾವುದೂ ಹೇಳಿ ಕೇಳಿ ಬರುವುದಿಲ್ಲ. ಅವು ನಿರೀಕ್ಷೆ, ಕಲ್ಪನೆ, ಎಲ್ಲವನ್ನು ಮೀರಿ ಬರುತ್ತವೆ. ಬಂದಿರುವ ಸಂದರ್ಭಗಳನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಿ ನಟಿಯರು ಜೀವನದಲ್ಲಿ ಮುಂದಿನ ಹೆಜ್ಜೆ ಇಡಬೇಕು. ಇಲ್ಲದಿದ್ದರೆ ಬಾಳೆಲ್ಲ ಬರೀ ಗೋಳು ನೋವಿನ ಸಂತೆಯಾಗಿ ಮಾರ್ಪಟ್ಟರೂ ಆಶ್ಚರ್ಯವೇನಿಲ್ಲ.

ತಾರುಣ್ಯದಲ್ಲಿ ನಟಿಯರಿಗಿದ್ದ ವರ್ಚಸ್ಸು : ಆ ಮೂಲಕ ರಂಗಭೂಮಿಯಲ್ಲಿ ಪಡೆದುಕೊಂಡ ಕೀರ್ತಿ : ಬಳ್ಳಾರಿಯ ಗಡಿಭಾಗದಲ್ಲಿ ಒಂದು ಕಾಲದಲ್ಲಿ ಹಾಸ್ಯ ಪಾತ್ರಕ್ಕೆ ಆದವಾನಿ ವೀಣಾ ಬರುತ್ತಾಳೆಂದರೆ ನವಯುವಕರೆಲ್ಲಾ ಶಿಳ್ಳೆ ಹೊಡೆದು ಚಪ್ಪಾಳೆ ತಟ್ಟುತ್ತಿದ್ದರು. ಆದವಾನಿ ವೀಣಾ ಬರ್ತಾಳೆ ಎಂದರೆ ನಾಟಕ ನಡೆಯುವ ಹಳ್ಳಿಗೆ ಗ್ರಾಮೀಣ ಪ್ರೇಕ್ಷಕರು ಇಪ್ಪತ್ತೈದು, ಮೂವತ್ತು ಸೈಕಲ್‌ಗಳಲ್ಲಿ ಇಬ್ಬಿಬ್ಬರು ಕುಳಿತುಕೊಂಡು ನಾಟಕ ನೋಡಲು ಹೋಗುತ್ತಿದ್ದರು. ಅದು ತಾವು ಹಾರ್ಮೋನಿಯಂ ಮಾಸ್ತರ ಹಿಂದುಗಡೆಯೇ ಅಂದರೆ ಪ್ರೇಕ್ಷಕರ ಮುಂದಿನ ಸಾಲಿನಲ್ಲಿಯೇ ಕುಳಿತು ನಟಿಯರ ಮಾತನ್ನು, ಹಾಸ್ಯವನ್ನು ನೋಡಿ ಮನೋರಂಜನೆಯನ್ನು ಹಂಚಿಕೊಳ್ಳುತ್ತಿದ್ದರು. 'ರಕ್ತರಾತ್ರಿ' ನಾಟಕದಲ್ಲಿ ವೀಣಾ ಆದವಾನಿ ಮದಹಂಸಿ ಪಾತ್ರಕ್ಕೆ ಹೇಳಿ ಮಾಡಿಸಿದ ಮೈಕಟ್ಟು ಹಾಗೂ ನೋಡುಗರ ಮನಕೇಂದ್ರೀಕೃತವಾಗುವಂಥ ದೈಹಿಕ ಅಂಗಸೌಷ್ಠವ. ಪಡ್ಡೆ ಹುಡುಗರ ಮೈ ಜುಂ ಎನ್ನುವಂಥ ನಡುಗೆ. ದೇವಲೋಕದ ಅಪ್ಸರೆಯೇ ಈಕೆ ಎಂಬಂಥ ಸೌಂದರ್ಯ ಹಾಗೂ ನಟನಾಕೌಶಲ್ಯದಿಂದ ಎಂಥವರಿಗೂ ಮೋಡಿ ಮಾಡುವ ಹಾಸ್ಯ ನಟಿ ಆದವಾನಿ ವೀಣಾ. ತಾರುಣ್ಯದಲ್ಲಿರುವಾಗಲೇ ಆಕೆ ವರ್ಚಸ್ಸಿಗೆ ಬಂದು ಆ ಮೂಲಕ ವೀಣಾ ಬಳ್ಳಾರಿ, ರಾಯಚೂರು ಪ್ರದೇಶಗಳಲ್ಲಿ ಹೆಸರುವಾಸಿ ನಟಿ ಎನಿಸಿದ್ದರು.

ಒಂದು ಕಾಲದಲ್ಲಿ ಬಳ್ಳಾರಿಯ ಸುತ್ತಮುತ್ತಲೂ ಯಳ್ಳಾರ್ತಿ ಚಾಮುಂಡೇಶ್ವರಿ ಬರ್ತಾಳೆ ಅಂದರೆ, ಆ ಕಾಲದಲ್ಲಿನ ಯುವ ವರ್ಗವು ಹುಚ್ಚೆದ್ದು ಕುಣಿಯುತ್ತಿತ್ತು. ಶಿಳ್ಳೆ ಹೊಡೆಯುವುದು ಮತ್ತೆ Once more ಹೇಳುವುದು, ಎಲ್ಲರೂ ಎದ್ದೆದ್ದು ನೋಡುವುದು ಕುಣಿದು ಕುಪ್ಪಳಿಸುವುದು ಸಾಮಾನ್ಯವಾಗಿತ್ತು. ಬಳ್ಳಾರಿ

ಸುತ್ತಮುತ್ತ ಗಡಿಭಾಗದಲ್ಲಿ ಯುವಕರ 'ಕನಸಿನ ಕನ್ಯೆ'ಯಾಗಿದ್ದರು ಚಾಮುಂಡೇಶ್ವರಿ. ನಾಯಕಿ ಹಾಗೂ ಹಾಸ್ಯ ಪಾತ್ರ ಈ ಎರಡರಲ್ಲಿಯೂ ಹೆಚ್ಚಾಗಿ ಮಿಂಚಿರುವ ಚಾಮುಂಡೇಶ್ವರಿಯು ಹಲವಾರು ಸಾಮಾಜಿಕ ನಾಟಕಗಳಲ್ಲಿಯೇ ತನ್ನ ವರ್ಚಸ್ಸನ್ನು ಬೀರಿದವರು. ಚಿಂದೋಡಿ ಲೀಲಾ ಕಂಪನಿ, ಜಿ.ಆರ್. ಅರಸಿಣಗೋಡಿ ಕಂಪನಿ, ಗುಡಗೇರಿ ಬಸವರಾಜರ ಕಂಪನಿಯಲ್ಲಿ ನಾಟಕಗಳನ್ನು ಮಾಡಿರುವ ಅನುಭವವಿರುವ ಚಾಮುಂಡಿಯವರು ಸಿನಿಮಾದವರಾದ ಸುಧೀರ, ಶ್ರೀನಾಥ, ವಜ್ರಮುನಿ ಮುಂತಾದವರು ಕರೆದರೂ ಹೋಗಲಿಲ್ಲ ಎಂದೆನ್ನುತ್ತಾರೆ. ಆಶಾಲತಾ, ಗೌರಿಗೆದ್ದಳು, ಕರ್ತವ್ಯದ ಕಾಣಿಕೆ, ಮಧುಮಗಳು, ಮಗಳಾಗಿ ಬಂದಳು ಸೊಸೆಯಾಗಿ ನಿಂತಳು. ಕಲಿತಕಳ್ಳ, ಸರ್ಪ ಸಾಮ್ರಾಜ್ಯ, ಅಣ್ಣತಂಗಿ, ಹಸಿರುಬಳೆ (ಪಾರ್ವತಿ ಪಾತ್ರ), ರೈತನಾಗಲಿಲ್ಲ ಸರಕಾರ ಉಳಿಯಲಿಲ್ಲ. ಈ ಎಲ್ಲಾ ಸಾಮಾಜಿಕ ನಾಟಕಗಳಲ್ಲಿ ನಾಯಕಿ ಹಾಗೂ ಹಾಸ್ಯಪಾತ್ರಗಳನ್ನು ಮಾಡಿದ್ದಾರೆ. ಬಳ್ಳಾರಿ ಆಂಧ್ರ ಗಡಿಭಾಗಗಳಲ್ಲಿ ಯಳ್ಳಾರ್ತಿ ಚಾಮುಂಡೇಶ್ವರಿ ಬರ್ತಾಳೆ ಎಂದರೆ ಎಷ್ಟೋ ಯುವಕರು ನಾಟಕ ಆಡುವ ಊರುಗಳಿಗೆ ಸೈಕಲ್, ಮೋಟಾರ್‌ಬೈಕ್, ಬಸ್ಸುಗಳಲ್ಲಿ ಕೇಕೆ ಹಾಕುತ್ತಾ ಮುಂದಿನ ಸೀಟುಗಳನ್ನು ಮುಂಗಡ ಮಾಡಿ ಬಿಡುತ್ತಿದ್ದರು.

ಚಾಮುಂಡಿಯವರು ನೃತ್ಯದಲ್ಲಿ ತುಂಬಾ ಹೆಸರು ಮಾಡಿದ್ದು ಗಾಯನ, ನೃತ್ಯ, ಎರಡರಲ್ಲೂ ಹೆಸರು ಗಳಿಸಿದ್ದಾರೆ. ಇತ್ತೀಚೆಗೆ 'ಶಶಿರೇಖ ಪರಿಣಯ' ಬಯಲಾಟದಿಂದಲೇ ಸಂಪೂರ್ಣವಾಗಿ ಬಯಲಾಟ ಕ್ಷೇತ್ರಕ್ಕೆ ನಾನು ಸೀಮಿತವಾಗಿರುವೆ ಎಂದು ಅವರು ಹೇಳುತ್ತಾರೆ. ಈಗೆಲ್ಲಾ ಬಯಲಾಟದ ವರ್ಚಸ್ಸು ಹೆಚ್ಚಾಗಿ ೩೦೦೦/- ಸಂಭಾವನೆಯನ್ನು ನಾನು ತೆಗೆದುಕೊಳ್ಳುತ್ತಿರುವೆ ಎನ್ನುತ್ತಾರೆ.

ಯೌವ್ವನದಲ್ಲಿ ವರ್ಚಸ್ಸು ಹೆಚ್ಚಾಗಿ ವರ್ಷದಲ್ಲಿ ಆರು ತಿಂಗಳು ದುಡಿದು ಇನ್ನಾರು ತಿಂಗಳು ಸಂಪೂರ್ಣವಾಗಿ ನಾವು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತೇವೆ. ಕಲಾವಿದೆಯ ದುಡಿಮೆ ಒಂದು ರೀತಿಯಲ್ಲಿ ಅರೆಉದ್ಯೋಗವಿದ್ದಂತೆ. ಆರು ತಿಂಗಳು ದುಡಿಯುವುದು, ಇನ್ನಾರು ತಿಂಗಳು ತಾಳಿಕೊಂಡು ಊಟವನ್ನು ಮಾಡುವುದು. ಹೀಗೆ ಈ ಭಾಗದಲ್ಲಿ ಎಲ್ಲಾ ನಟಿಯರು ಸಂಭಾವನೆಯಿಂದ ಬಯಲಾಟವನ್ನೇ ಆರಿಸಿಕೊಂಡು ಆ ಮೂಲಕ ತಮ್ಮದೇ ಆದ ವರ್ಚಸ್ಸನ್ನು ಸಾಧಿಸಿದ್ದಾರೆ. ಇವರಂತೆ, ಅಂಬುಜಮ್ಮ, ಸುಜಾತಮ್ಮ, ಉಷಾರಾಣಿ, ರಂಗವೇಣಿ ಮುಂತಾದ ನಟಿಯರು ಇದ್ದಾರೆ.

ವೃತ್ತಿ ಗೌರವವನ್ನು ಇಟ್ಟುಕೊಂಡು ಎಷ್ಟೋ ನಟಿಯರು ರಂಗಭೂಮಿಗೆ ಕಾಲಿರಿಸಿರುತ್ತಾರೆ. ರಂಗಜೀವನ ಒಬ್ಬೊಬ್ಬರನ್ನು ಒಂದೊಂದು ರೀತಿಯಲ್ಲಿ ಪಳಗಿಸಿ ಬಿಡುತ್ತವೆ. ಈ ಸಮಯವನ್ನು ಸದುಪಯೋಗ ಪಡಿಸಿಕೊಂಡವರು ಹೆಸರು ಪಡೆದ ನಟಿಯರಾಗಿದ್ದಾರೆ. ಆದರೆ ಈ ಸಮಯವನ್ನು ವ್ಯರ್ಥವಾಗಿ ಕಳೆದು ಯಾವ ನೆಲೆ ಇಲ್ಲದೆ ಬಾಳನ್ನು ಹಾಳು ಮಾಡಿಕೊಂಡು ದುರಂತ ನಟಿಯರು ಹಾಗೂ ಧೃತಿಗೆಟ್ಟ ನಟಿಯರು ಇದ್ದಾರೆ. ಅಲ್ಲದೆ ಸೋಮಾರಿಗಳಾಗಿ ಯಾವೊಂದು ಕಷ್ಟವನ್ನು ಅನುಭವಿಸದೇ ಅಥವಾ ಕಷ್ಟಪಟ್ಟರೂ ಅದರಿಂದ

ಪ್ರತಿಫಲದೊರೆಯದೇ ಇರುವವರೂ ಇದ್ದಾರೆ. ಯೌವ್ವನಾವಸ್ಥೆಯಲ್ಲಿ ನಟಿಯರು ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರೆ ಖ್ಯಾತಿ ಹಾಗೂ ಹಣವನ್ನು ಗಳಿಸಲು ಸಾಧ್ಯವಾಗುತ್ತದೆ. ಉದಾ: ಕೆ.ವರಲಕ್ಷ್ಮಿ, ಸುಜಾತಮ್ಮ, ಲಲಿತಮ್ಮ, ಸುಭದ್ರಮ್ಮ, ಪಿ.ಪದ್ಮ, ಎನ್.ಯಶೋಧ, ನಾಗರತ್ನಮ್ಮ, ಡಿ.ಸಂಜೀವಮ್ಮ ಡಿ.ಹನುಮಂತಮ್ಮ, ಸೋಗಿರತ್ನ ಮುಂತಾದವರು.

ಆದರೆ ನಟಿಯರು ಈ ವೇಳೆಯಲ್ಲಿ ಉರಿಯಬಾರದು ಮೆರೆಯಬೇಕು. ಇವರು ಮೆರೆದು ಮೈಮರೆಯಬೇಕು. ಈ ಪರಿಯ ಪಾತ್ರ ಪರಕಾಯ ಪ್ರವೇಶದಿಂದ ನೈಪುಣ್ಯತೆ ಗಟ್ಟಿಗೊಳ್ಳುತ್ತಾ ಹೋದಾಗಲೆಲ್ಲಾ ಕಲಾ ಸಾಧನೆ ಸುಭದ್ರವಾಗಿ ಬರಬಲ್ಲದು. ನಟಿಯು ಆಯಾ ಪಾತ್ರಕ್ಕೆ ಜೀವವನ್ನು ತುಂಬಬೇಕು. ಅಲ್ಲದೆ ಅರ್ಥವನ್ನು ಆ ಪಾತ್ರ ಪಡೆಯುವಂತಿರಬೇಕು. ಒಬ್ಬ ಕಲಾವಿದೆಗೆ ಪ್ರತಿಯೊಂದು ನಾಟಕ ಒಂದೊಂದು ಸವಾಲೇ. ಎಲ್ಲಾ ನಾಟಕಗಳು ಹೊಸ ಅನುಭವಗಳೇ. ಹೊಸ ಜನರು, ಹೊಸ ಪರಿಸರ ಪ್ರತಿಯೊಬ್ಬ ಕಲಾವಿದೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

ಈ ಯೌವ್ವನಾವಸ್ಥೆಯಲ್ಲಿ ಬದುಕು ಬಹಳ ಸುಂದರವಾಗಿ ಕಾಣುತ್ತದೆ. ಕನಸೆಲ್ಲಾ ನನಸಾಗುತ್ತದೆ. ಯೌವ್ವನ ಹೀಗೆ ಇರುತ್ತದೆ. ನಾವು ಅಂದುಕೊಂಡಂತೆ ಎಲ್ಲವೂ ನಡೆಯುತ್ತದೆ ಎಂಬುದೊಂದು ಭ್ರಮೆ. ಈ ಭ್ರಮಾಲೋಕದಲ್ಲಿ ವಿಹರಿಸಿದರೆ ಕೆಡಕಾಗುತ್ತದೆ. ಕಲಾವಿದೆಯು ಎಲ್ಲಾ ರೀತಿಯಿಂದ ಮುನ್ನೆಚ್ಚರಿಕೆಯಿಂದ ಇರಬೇಕಾಗುತ್ತದೆ. ಹಲವು ಎಚ್ಚರಿಕೆಯಿಂದ ನಟಿಯರು ನಡೆದರೆ ಅಲ್ಲಿ ಸಾರ್ಥಕ ಬದುಕಾಗುವುದರಲ್ಲಿ ಎರಡು ಮಾತಿಲ್ಲ. ರಂಗದ ಮೇಲೆ ಬಣ್ಣ ಬಣ್ಣದ ಬದುಕನ್ನು ಕಂಡ ನಟಿಯರು ತಮ್ಮ ವಾಸ್ತವ ಬದುಕನ್ನು ಅನೇಕ ದುರಂತಗಳಲ್ಲಿ ಕಂಡುಕೊಂಡವರಿದ್ದಾರೆ. ವಾಸ್ತವ ಮರೆತು ಕೆಲವೇ ಕ್ಷಣ ರಂಗದ ಮೇಲೆ ಆನಂದವಾಗಿರುತ್ತಾರೆ. ಇದು ಇವರ ಕನಸಿನ ಲೋಕ.

ಬದುಕನ್ನು ಸಾರ್ಥಕಪಡಿಸಿಕೊಳ್ಳಲು ಹುಟ್ಟಿದ ಪ್ರತಿಯೊಂದು ಜೀವಿಯೂ ಹೆಣಗುತ್ತದೆ. ಅದರಂತೆ ರಂಗ ನಟಿಯರು ಜೀವನದ ಈ ಹಂತದಲ್ಲಿ ಹಲವು ಪ್ರಯತ್ನ ಪಟ್ಟು ಗೆದ್ದವರೂ ಇದ್ದಾರೆ. ಅಲ್ಲದೆ ಈ ನಿಟ್ಟಿನ ಪ್ರಯತ್ನದಲ್ಲಿ ಗೆಲ್ಲಲು ಆಗದೇ ಸೋತು ಸುಣ್ಣವಾಗಿದ್ದಾರೆ. ಹಾಲು ಇದ್ದಾಗ ಹಬ್ಬ ಮಾಡುವವರೇ ಹಲವು ನಟಿಯರು. ಎಲ್ಲವನ್ನು ಪೂರ್ವಾಪರಯೋಚನೆ ಮಾಡಿಯೇ ನಿರ್ಧಾರ ಕೈಗೊಂಡರೆ ಅವರ ಬದುಕು ಸಾರ್ಥಕ ಹೊಂದುತ್ತದೆ.

ಬಿ.ಸುಮತೆಮ್ಮನ ಮಾತಿನಲ್ಲಿ ಹೇಳುವುದಾದರೆ "ವಯಸ್ಸು ಇದ್ದಾಗ ಉರಿದು ಬಿಟ್ವಿ, ಈಗ ಸುಮ್ಮನೆ ಕುಂತಗಂಬೀವಿ ಏನು ಮಾಡೋದು. ಭೀಮಸಪಾತ್ರ ಮಾಡಿದರೆ ಇಡೀ ರಂಗಭೂಮಿಯೇ ರಂಗೇರಿ ಕಳೆಗಟ್ಟು ತ್ತಿತ್ತು. ನನ್ನ ದೇಹದಾರ್ಢ್ಯತೆ, ಪಟ್ಟುಗಳಿಗೆ ಎಂಥಹ ಪ್ರೇಕ್ಷಕನು ಅಬ್ಬಾ ಎಂದು ಬಿಡುತ್ತಿದ್ದ.

(ಮರಿಯಮ್ಮನಹಳ್ಳಿ ಕ್ಷೇತ್ರಕಾರ್ಯ, ೨೦೦೨ ಅಕ್ಟೋಬರ್‌ನಲ್ಲಿ ಸಂದರ್ಶನ). ಅಂದರೆ ಯೌವ್ವನದಲ್ಲಿ ರಂಗಭೂಮಿಯಲ್ಲಿ ಮೆರೆದವಳು ನಾನು ಈಗ ವಯಸ್ಸಾಗಿ ಸುಮ್ಮನೆ ಕುಳಿತಿದ್ದೇನೆ ಎಂದು ನಮಗೆ ಹೇಳಿದರು. ಆ ವಯಸ್ಸು ಹಾಗಿತ್ತು. ಪಾತ್ರಗಳು ಹಾಗೆಯೇ ಇದ್ದವು. ಆ ಪಾತ್ರಗಳಿಗೆ ನಾವು ಕೊಟ್ಟಿರುವ ಜೀವಂತಿಕೆ ಎಲ್ಲ ಪ್ರೇಕ್ಷಕರ ಹೃದಯಗೆದ್ದು ನಮ್ಮನ್ನೆಲ್ಲಾ ಮೈಮರೆಸುತ್ತಿದ್ದವು. ಪ್ರೇಕ್ಷಕರ ಮನವನ್ನು ರಂಜಿಸುತ್ತಿದ್ದವು.

ಬಳ್ಳಾರಿ ಜಿಲ್ಲೆಯಲ್ಲಿ ಅಲ್ಲದೆ ಇಡೀ ಕರ್ನಾಟಕದಲ್ಲಿ ಹೆಸರುವಾಸಿ 'ರಂಗನಟಿ, ಗಾನಕೋಗಿಲೆ' ಎನಿಸಿರುವ ಸುಭದ್ರಮ್ಮ ಮನ್ಸೂರ್‌ರವರು ತಮ್ಮ ವರ್ಚಸ್ಸಿನಿಂದ ಇಡೀ ರಂಗಭೂಮಿಯನ್ನು ರಣರಂಗವನ್ನಾಗಿ ಮಾರ್ಪಡಿಸಿ ಬಿಡುತ್ತಾರೆ. "ಮಹಾಭಾರತದ ಸ್ತ್ರೀ ಪಾತ್ರಗಳಲ್ಲಿ ಅತ್ಯಂತ ಗಮನಾರ್ಹವಾದ ಪಾತ್ರ ದ್ರೌಪದಿ. ಸ್ತ್ರೀತ್ವದ ಎಲ್ಲ ಶ್ರೇಷ್ಠ ಗುಣಗಳಿಂದ ಅಲಂಕೃತಳಾದ ಮಹಾವ್ಯಕ್ತಿ ಈಕೆ. ಈ ಪಾತ್ರದ ಎಲ್ಲಾ ಗುಣಗಳನ್ನು, ಸ್ವಭಾವಗಳನ್ನು, ಆಲೋಚನೆಗಳನ್ನು ಹೊರಹಾಕುವ ಸುಭದ್ರಮ್ಮ ಸುಭದ್ರಮ್ಮನಾಗಿರದೆ ಸಂಪೂರ್ಣ ಪಾತ್ರವಾಗಿ ಆಕರ್ಷಿಸುತ್ತಾರೆ. ಅಭಿನಯದ ಪ್ರತಿಯೊಂದು ಸಂದರ್ಭವನ್ನು ಸೂಕ್ಷ್ಮವಾಗಿ ವೀಕ್ಷಿಸಿದಾಗ ಅಭಿನಯವನ್ನು ಅದೆಷ್ಟು ಕರಗತ ಮಾಡಿಕೊಂಡಿದ್ದಾರೆ ಎನಿಸುತ್ತದೆ. ಅವಮಾನಿತಳಾದ ದ್ರೌಪದಿ ಪ್ರತಿಜ್ಞೆ ಮಾಡುವ ಛಲ, ರಣರಂಗದಲ್ಲಿ ಬೆಂಕಿಕಾರುವ ಮಹಿಳೆಯಾಗಿ ಕಾಣುವ ಸಂದರ್ಭ ಅದ್ಭುತವೆನಿಸುತ್ತದೆ. ಅಲ್ಲಿಯ ರೋಷದ ನುಡಿಗಳನ್ನು ಪ್ರತೀಕಾರದ ಭಾವನೆಗಳನ್ನು ವ್ಯಕ್ತಪಡಿಸುವ ರೀತಿ ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ಸಿಟ್ಟು, ರೋಷ ಕಣ್ಣಲ್ಲಿಯೇ ತುಂಬಿ ತುಳುಕುತ್ತಿರುತ್ತದೆ. ಶೃಂಗಾರ ಸಾಗರವೇ ಪುಟಿದೆದ್ದು ಬರುವ ಚೆಲುವೆಯಾಗಿದ್ದ ದ್ರೌಪದಿ ರಣರಂಗದಲ್ಲಿ ಕೂದಲು ಹರವಿ ಕೊಂಡು ಚಾಮುಂಡಿಯಾಗಿ ಕಾಣಿಸಿ ಕೊಂಡಾಗ ಅದೇ ದ್ರೌಪದಿಯೇ ಇವಳು ಎಂದು ಆಶ್ಚರ್ಯವಾಗುತ್ತದೆ. ಮಾತುಗಳಲ್ಲಿಯ ಏರಿಳಿತ, ಅದಕ್ಕೆ ತಕ್ಕ ಅಭಿನಯ ಎಲ್ಲವೂ ಸುಭದ್ರಮ್ಮನವರ ಪ್ರೌಢಿಮೆಯನ್ನು ಸಾರುತ್ತದೆ. ಈ ಪಾತ್ರದಿಂದಲೇ ಅವರ ಅಭಿನಯದ ಸಾಮರ್ಥ್ಯ ಸಾರ್ಥಕಗೊಳ್ಳುತ್ತದೆ" (ಲೇ: ಗವೀಶ್ ಹಿರೇಮಠ, ರಂಗಕುಸುಮಗಳು, ಪುಟ, ೨೫, ೨೬).

ಈ ರೀತಿ ತಮ್ಮ ಅಭಿನಯ ವರ್ಚಸ್ಸಿನಿಂದ ಸುಭದ್ರಮ್ಮ ಅಂದರೆ 'ರಕ್ತರಾತ್ರಿ', 'ರಕ್ತರಾತ್ರಿ' ಎಂದರೆ ಸುಭದ್ರಮ್ಮ ಎಂಬಂತೆ ಮನೆಮಾತಾಗಿದ್ದಾರೆ. ಇವರ ಅಮೋಘ ಕಂಠವು ಇವರ ಜನಪ್ರಿಯತೆಗೆ ಇನ್ನೊಂದು ಸಾಕ್ಷಿ. ಒಬ್ಬ ನಟಿಯು ತನ್ನ ತಾರುಣ್ಯಾವಸ್ಥೆಯಲ್ಲಿ ಪಡೆದುಕೊಂಡ ಕೀರ್ತಿ ಅವರ ವೃತ್ತಿ ವರ್ಚಸ್ಸನ್ನು ಹೆಚ್ಚಿಸುತ್ತವೆ. ಯಾವುದೇ ನಟಿಯರಿಗಿಲ್ಲದ ಅಭಿನಯ ತಂತ್ರವನ್ನು ಸುಭದ್ರಮ್ಮ ಅಳವಡಿಸಿಕೊಂಡು ತನ್ನ ವೃತ್ತಿಯಲ್ಲಿ ಕಿರಿಯರಿಗೆ ಹಿರಿಯಕ್ಕನಾಗಿ, ಹಿರಿಯರಿಗೆ ತಂಗಿಯಾಗಿ, ಸಹಕಲಾವಿದರಿಗೆ ಗುರುವಾಗಿ ರಂಗಭೂಮಿಯ ಎಲ್ಲರಿಗೂ ಮಾರ್ಗದರ್ಶಿನಿಯಾಗಿ ಇಂದಿಗೂ ಎಡೆಬಿಡದೆ ತಮ್ಮ ವೃತ್ತಿಯನ್ನು ನಿರಂತರವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ನಾನು ಚಿಕ್ಕವಳಿರುವಾಗ ನೋಡಿರುವ ಪಾತ್ರ ಇದು. ಸಿಟ್ಟಿಗೆದ್ದು ರಣರಂಗದಲ್ಲಿ "ಪಾಪ್ಯ... ನಾನು ಚಾಂಡಾಲಿ... ಬಾ... ಕಾಳ ರಾಹುವೇ ಬಾ...ಕೇಡಿನ ಕೇತುವೇ ಬಾ... ಅಮಂಗಳದ ಅವಂಗಳನೇ ಬಾ... ಎಲ್ಲವನ್ನು ನುಂಗಿ ನೀರು ಕುಡಿಯುವ ಶನಿಯೇ ಬಾ.. ನೀವೆಲ್ಲರೂ ಬನ್ನಿ... ನನ್ನೀ... ಬರಿದಾದೆದೆಯ ತುಂಬಿ..." (ಲೇ. ಕುಂ.ವೀರಭದ್ರಪ್ಪ, ಸುಭದ್ರಮ್ಮ ಮನ್ಸೂರು, ಪುಟ, ೧೧). ಈ ಮಾತನ್ನು ಸ್ವತಃ ನಾನು ಬಾಲ್ಯದಲ್ಲಿ ಕೇಳಿರುವ ಮಾತು. ಅಲ್ಲದೆ ಅವಮಾನಿತಳಾದ ದ್ರೌಪತಿಯನ್ನು ರಕ್ತರಾತ್ರಿಯಲ್ಲಿ ನೋಡಿರುವ ದೃಶ್ಯ. ಇಂಥಹ ಪಾತ್ರದಿಂದ ಸುಭದ್ರಮ್ಮ ಪ್ರೇಕ್ಷಕರನ್ನು ದಂಗು ಬಡಿಸಿ, ಮೂಕವಿಸ್ಮಿತರನ್ನಾಗಿಸಿ ಬಿಡುತ್ತಾರೆ. ಇಂಥಹ ಅಭಿನಯದಿಂದ ಅವರ ವರ್ಚಸ್ಸು ಬೆಳೆದು ಕನ್ನಡ ರಂಗಭೂಮಿಯ ಪ್ರಬುದ್ಧ ನಟಿ ಎನಿಸಿದ್ದಾರೆ ಸುಭದ್ರಮ್ಮ ಮನ್ಸೂರು.

ಇತ್ತೀಚೆಗೆ ಮರಿಯಮ್ಮನಹಳ್ಳಿಯ ಕೆ.ನಾಗರತ್ನಮ್ಮ ಕರ್ನಾಟಕದ ತುಂಬೆಲ್ಲಾ ಹೆಸರುವಾಸಿ ನಟಿ. ಗ್ರಾಮೀಣ ಹಾಗೂ ಹವ್ಯಾಸಿ ತಂಡದೊಂದಿಗೆ ಪೌರಾಣಿಕ ಹಾಗೂ ಹವ್ಯಾಸಿ ಸೃಜನ ಶೀಲ ನಾಟಕಗಳೆರಡರಲ್ಲೂ ಪರಿಣಿತೆ ಹಾಗೂ ಸ್ವಂತಿಕೆ ಅಭಿನಯದಿಂದ ವರ್ಚಸ್ಸು ಬೆಳೆಸಿಕೊಂಡಿರುವ ವಿನಯಶೀಲೆ. "ಶೀಲಾವತಿಯ ಪಾತ್ರ ಹಾಕಿದ್ದ ನಾಗರತ್ನ ಎಂಥೆಂಥ ಕಳ್ಳರು. ಸುಳ್ಳರು, ಮಳ್ಳರ ಕೈಯಾಗಿಂದ ಪಾರಾಗಿ ಅಡವಿ, ಅರಣ್ಯ, ಅರಮನಿ, ಸಹಮನಿ, ಅಂತ ತಿರಗ್ಯಾಡಿ ಖರೇನ ಪೂರಾ ಶೀಲವತಿಯಾಗಿ ಯಾರ್‍ಯಾರ ಕೈಗೂ ಸಿಗಲಿಲ್ಲ ಖರೆ. ಅದರ ಕಡೀಕ ನಾಟಕ ನೋಡಿದ ಪ್ರತಿಯೊಬ್ಬರ ಮನಸ್ಸಿನ್ಯಾಗ ಸಿಕ್ಕು ಬಿದ್ದಿದ್ದರನ್ನೋದು ಅವರಿಗೂ ತಿಳಿದಿರಬೇಕು. ೨೦ ವರ್ಷಗಳ ಕಾಲ ನಾಗರತ್ನ ಪಡೆದ ವೃತ್ತಿ ಅನುಭವ, ಹವ್ಯಾಸಿ ಶಿಬಿರ ತಂಡಗಳಿಂದ ಕಲಿತ ಪ್ರಯೋಗಶೀಲತೆಗಳನ್ನು ಸಮ್ಮಿಶ್ರ ಪಾಕಮಾಡಿ ಸರ್ವರಿಗೂ ಕಾಡಿಸಿದ ನಾಗರತ್ನರ ಅಭಿನಯ ಭಾಳ ಬೆಲೆಯುಳ್ಳದ್ದು (ಸಿದ್ದಲಿಂಗ ಪಟ್ಟಣಶೆಟ್ಟಿ, ಮರಿಯಮ್ಮನಹಳ್ಳಿ ರಂಗಸಿರಿ, ಪುಟ, ೧೦೧). ಈ ರೀತಿಯಾಗಿ ಕಲೆಯನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡು ಕೀರ್ತಿಯನ್ನು ಮೆರೆದವರು ಮರಿಯಮ್ಮನ ಹಳ್ಳಿ ಕೆ.ನಾಗರತ್ನ.

"ರಾಜ್ಯದ ಪ್ರಖ್ಯಾತ ರಂಗನಟಿ ಮರಿಯಮ್ಮನಹಳ್ಳಿಯ ನಾಗರತ್ನಮ್ಮನವರು ಸಿಂಗಾರಿಯ ಪಾತ್ರವನ್ನು ಅತ್ಯಂತ ಆಕರ್ಷಕವಾಗಿ ಅಭಿನಯಿಸಿದರು. ವೃತ್ತಿ ಮತ್ತು ಹವ್ಯಾಸಿ ಎರಡರಲ್ಲೂ ಸುಧೀರ್ಘ ಅನುಭವ ಇರುವ ಅವರು ತಮ್ಮ ಪರಿಣಿತ ಅಭಿನಯದಿಂದ ಪಾತ್ರಕ್ಕೆ ಜೀವ ತುಂಬಿದರು" (ಲೇ: ಕಾಳಿಂಗಮೂರ್ತಿ, ಮರಿಯಮ್ಮನಹಳ್ಳಿ ರಂಗಸಿರಿ, ಪುಟ, ೧೦೨). ಸಿಂಗಾರಿಯ ಪಾತ್ರವನ್ನು ಅತ್ಯಂತ ಆಕರ್ಷಕವಾಗಿ ಅಭಿನಯಿಸಿ ಇಡೀ ವೃತ್ತಿರಂಗಭೂಮಿಯ ಖ್ಯಾತಿಯನ್ನು ಪ್ರತಿಬಿಂಬಿಸಿದ್ದಾರೆ.

ಇದೂ ಅಲ್ಲದೆ 'ರಕ್ತರಾತ್ರಿ' ನಾಟಕದಲ್ಲಿ ಉತ್ತರೆಯ ಪಾತ್ರ. ಆ ಪಾತ್ರ ಜ್ಞಾಪಿಸಿಕೊಂಡರೆ ಇಡೀ ಮಹಾಭಾರತದ ಕಥೆಯೇ ಸುಳಿದು ಹೋಗುತ್ತದೆ. ಅದರಲ್ಲಿಯ ಇವರ ಅಭಿನಯ ಎಲ್ಲಿಯೂ ತೂಕ ತಪ್ಪದು. ಪಾತ್ರದ ವ್ಯಕ್ತಿತ್ವ ಉಳಿಸಿಕೊಂಡು ಹೋಗುವಲ್ಲಿ ಈ ಕಲಾವಿದೆ ಯಶಸ್ವಿಯಾಗಿದ್ದಾರೆ. ಅವರ ನೃತ್ಯ, ಸಂಗಿತ, ಅಭಿನಯ ಎಲ್ಲವೂ ರಂಗಭೂಮಿಗೆ ಸಾರ್ಥಕತೆ ತಂದುಕೊಟ್ಟಿವೆ (ಲೇ. ಗವೀಶ್ ಹಿರೇಮಠ, ರಂಗಕುಸುಮಗಳು, ಪುಟ, ೧೨೫, ೧೨೬).

ಹೀಗೆ ಕೆ.ನಾಗರತ್ನಮ್ಮ ನೋಡುಗರ ಮನಸೂರೆ ಗೊಂಡಿದ್ದಾರೆ. ಕೇಳುಗರ ಗಾಯನಕ್ಕೆ ತಲೆದೂಗಿದ್ದಾರೆ. ಇಂಥಹ ಪ್ರತಿಭೆಗಳು ಬಳ್ಳಾರಿ ಜಿಲ್ಲೆಯಲ್ಲಿ ತನ್ನದೇ ಆದ ವರ್ಚಸ್ಸನ್ನು ಮೂಡಿಸಿಕೊಂಡು ಯಾವುದೇ ಕಲಾಕಾರ್ಯಕ್ರಮವಿದ್ದರೂ ಅವುಗಳನ್ನು ತಮ್ಮ ಸಂಭಾಷಣೆಯಿಂದ ಯಶಸ್ವಿಗೊಳಿಸಿದ್ದಾರೆ. ಅಂದರೆ ಇಲ್ಲಿ ನಾಗರತ್ನಮ್ಮ ಎಂಥಹ ಪಾತ್ರಕ್ಕಾದರು ಸೈ. ಸೃಜನ ನಾಟಕಕಾರ ಸಾಹಿತ್ಯವಾಗಲೀ, ಸಾಮಾಜಿಕ ನಾಟಕವಾಗಲೀ, ಪೌರಾಣಿಕ ನಾಟಕವಾಗಲೀ ಅವುಗಳನ್ನು ಸುಲಲಿತವಾಗಿ ನಿರ್ವಹಿಸುವ ಚಾಕಚಕ್ಯತೆ ಅವರಲ್ಲಿದೆ. ಅಂತಹ ವರ್ಚಸ್ಸನ್ನು ಅವರು ಮೊದಲಿನಿಂದಲೂ ಬೆಳೆಸಿಕೊಂಡು ಬಂದಿದ್ದಾರೆ. ಯಾವೊಂದು ಕಥಾಹಂದರವನ್ನು ತಮ್ಮಲ್ಲಿಯೇ ನಡೆದಿದೆ ಎಂಬಂತೆ ಅಭಿನಯಿಸುವ ನಟನಾ ಕೌಶಲ್ಯವಿರುವ ನಟಿ ಕೆ.ನಾಗರತ್ನಮ್ಮ. ಅಂಥಹ ವರ್ಚಸ್ಸನ್ನು ಕ್ರಮೇಣವಾಗಿ ಪಡೆದುಕೊಂಡು ಬಳ್ಳಾರಿ ಜಿಲ್ಲೆಯಲ್ಲಿಯೇ ಹೆಸರುವಾಸಿ ನಟಿ ಎನಿಸಿದ್ದಾರೆ.

ಯೌವ್ವನದಲ್ಲಿ ವರ್ಚಸಿದ್ದರೂ ದೈಹಿಕ ವಿಕಾರಗಳಿಂದ ಜೀವನವನ್ನು ಒಂದೆಡೆ ನೆಲೆ ನಿಲ್ಲಿಸದೇ ಬೀದಿಪಾಲಾದವರು : ಕೆಲವು ನಟಿಯರು ದೈಹಿಕವಾಗಿ ಸುಂದರರಾಗದಿದ್ದರೂ ಯೌವ್ವನದಲ್ಲಿ ತಮ್ಮ ನಟನಾ ಕೌಶಲ್ಯದಿಂದ ಪಾತ್ರಕ್ಕೆ ತಕ್ಕಂತೆ ಅಭಿನಯವನ್ನು ನೀಡಿ ಒಂದು ವರ್ಚಸ್ಸನ್ನು ಬೆಳೆಸಿಕೊಂಡು ಬಂದಿದ್ದಾರೆ. ಜೊತೆಗೆ ಯೌವ್ವನ ಸ್ಥಿರವಾಗಿರುವುದಿಲ್ಲವೆಂದು ಸಹಜವಾಗಿ ಒಪ್ಪಿಕೊಂಡ ಪುರುಷನನ್ನು ನಂಬಿ ಸಂಸಾರ ಮಾಡಬೇಕೆಂದುಕೊಂಡು ಕೆಲವಾರು ದಿನಗಳಾದ ಮೇಲೆ ಆ ನಟಿಯನ್ನು ಬಿಟ್ಟು ಪುರುಷನು ಹೋಗಿರುವುದು. ನಂತರದ ದಿನಗಳಲ್ಲಿ ನಟಿಯು ಈ ಕಡೆಗೆ ರಂಗಭೂಮಿಯಲ್ಲಿ ಮುಂದುವರಿಯದೇ ಆ ಕಡೆ ನೆಚ್ಚಿಕೊಂಡ ಪುರುಷನ ಜೊತೆಯಾಗಿರದೇ ಅತಂತ್ರ ಸ್ಥಿತಿ ಉಂಟಾಗಿ ಬೀದಿಪಾಲಾದ ಎಷ್ಟೋ ನಟಿಯರಿಂದು ನಮ್ಮ ದಾಖಲೆಗೆ ಸಿಗುತ್ತಾರೆ.

ಹೊಟ್ಟೆ ಕೆಟ್ಟದೆನ್ನುವಂತೆ, ಬಡತನದಿಂದ ಹೀನಸ್ಥಿತಿಗೆ ಒಳಗಾದ ನಟಿಯರಿಂದು ಯಾವ ಸದೃಢ ನೆಲೆನಿಲ್ಲದೆ ಹಾದಿ ಬೀದಿಯ ಜೀವನಕ್ಕೆ ಒಳಗಾಗಿದ್ದಾರೆ. ಪ್ರತಿಯೊಬ್ಬ ನಟಿಯನ್ನು ನೇರವಾಗಿ ನಾನು ಸಂದರ್ಶಿಸಿದಾಗ ಹಲವಾರು ನಟಿಯರ ಸಮಸ್ಯೆಗಳು ಒಂದು ಮುಖದಿಂದ ಉಂಟಾಗಿ ಬೇರೆ ಬೇರೆ ರೀತಿಗಳಲ್ಲಿ ತನ್ನ ಅಸ್ತಿತ್ವವನ್ನು ಪಡೆದುಕೊಂಡು ಸಮಾಜದಲ್ಲಿ ನಟಿಯರಿಗೆ ಯಾವುದೇ ಮಾನ್ಯತೆಯಿಲ್ಲದೆ ತನ್ನತನವನ್ನು ಕಳೆದುಕೊಂಡು ನಟಿಯರು ತೊಳಲಾಡುವಂತ ಹೀನಸ್ಥಿತಿ ಎಷ್ಟೋ ನಟಿಯರಿಗಿಂದು ಒದಗಿದೆ. ಯಾವುದೇ ರೀತಿಯಲ್ಲಿ ಸತ್‌ಚಾರಿತ್ರ್ಯದ ವ್ಯವಸ್ಥೆಯಲ್ಲಿ ಇರಲು ಬಿಡದೇ ಅವರನ್ನು ವ್ಯವಸ್ಥೆಯಿಂದ ದೂರವಿಟ್ಟು ಉನ್ನತವರ್ಗಗಳ ಹುನ್ನಾರ ಶತಮಾನಗಳಿಂದಲೂ ನಡೆದುಕೊಂಡು ಬಂದಿದೆ. ಎಲ್ಲರೂ ಇಂದು ವ್ಯವಸ್ಥೆಯ ಒಂದು ಭಾಗವೇ. ಅದರಲ್ಲಿ ಎಲ್ಲರೂ ಸರಿಸಮಾನರೇ. ಆದರೆ ಜಾತಿ, ಮತ, ಕಲೆ, ಲಿಂಗ ಹೀಗೆ ಹಲವಾರು ರೀತಿಯ ತಾರತಮ್ಯಗಳಿಂದಲೂ ನಟಿಯರು ಶೋಷಿತರಾಗಿದ್ದಾರೆ. ಹೆಣ್ಣು ಶೋಷಣೆ ಅಲ್ಲದೇ ರಂಗಭೂಮಿಯಲ್ಲಿ ಹಲವಾರು ಶೋಷಣೆಗಳು ಪ್ರಚಲಿತ ಸಮಸ್ಯೆಗಳಲ್ಲಿ ಇದೊಂದು ಗಂಭೀರ ಸಮಸ್ಯೆಯಾಗಿದೆ.

ಯೌವ್ವನವನ್ನು ಕಂಡು ಪುರುಷಶಾಹಿಗಳು ನಂಬಿಸಿ ಮೋಸ ಮಾಡಿದವರು : ನಟಿಯರನ್ನು ಯೌವ್ವನಾವಸ್ಥೆಯಲ್ಲಿ ಪುರುಷಶಾಹಿಗಳು ನಂಬಿಸಿ, ಅವರೊಂದಿಗೆ ಸಹಜೀವನವನ್ನು ಮಾಡಿ ನಂತರದ ದಿನಗಳಲ್ಲಿ ಅವರಿಗೇ ಅಪವಾದವನ್ನು ಹೊರಿಸಿ ಅಥವಾ ದೌರ್ಜನ್ಯವನ್ನು ಮಾಡಿ ಅವರನ್ನು ಪಶುವಿನಂತೆ ಕಂಡು ಅವರ ಮನೆಯಲ್ಲಿಯೇ ಕಾಲಕಳೆದು ನಂತರ ಆಕೆಯನ್ನು ನೀನು ಯಾರೋ ಗೊತ್ತೆ ಇಲ್ಲ. ನೀನು ಕೆಳವರ್ಗದವಳು, ನಾಟಕದವಳು, ಅನೈತಿಕತೆ ಇರುವವಳು ಎಂದು ಆಪಾದಿಸಿ ಆಕೆಯನ್ನು ತ್ಯಜಿಸುವುದು, ನಟಿಯರ ಜೀವನದಲ್ಲಿ ಸರ್ವೇಸಾಮಾನ್ಯ ವಿಷಯ. ಈ ಪ್ರಪಂಚದಲ್ಲಿ ಇಂದು ನಂಬಿಕೆಯೇ ಹೊರಟು ಹೋಗಿದೆ. ಆದ್ದರಿಂದ ಎಷ್ಟೋ ನಟಿಯರಿಂದು ನಂಬಿ ಮೋಸ ಹೋದವರೇ ಹೆಚ್ಚಾಗಿದ್ದಾರೆ. ಏಕೆಂದರೆ ಪುರುಷಶಾಹಿಗಳದ್ದು ಹೇಳಿಕೊಳ್ಳಲಾರದಷ್ಟು ಮುಖವಾಡಗಳು. ಯಾವ ಯಾವ ಸಮಯದಲ್ಲಿ ಹೇಗೆ ವರ್ತಿಸುತ್ತಾರೋ ಯಾರೂ ಅರಿಯರು. ತಮ್ಮದಲ್ಲದ ಈ ಜೀವನವೆಂದುಕೊಂಡು ಎಷ್ಟು ರೀತಿಯಲ್ಲಿ ಶೋಷಣೆ ಮಾಡಲು ಸಾಧ್ಯವೋ ಅಷ್ಟೆಲ್ಲಾ ಅಸ್ತ್ರಗಳನ್ನು ಉಪಯೋಗಿಸಿ ಈ ಪುರುಷಶಾಹಿಗಳು ವರ್ತಿಸುತ್ತಾರೆ.

ಸಮಾಜದಲ್ಲಿ ನೈತಿಕವಾಗಿ ಯಾವ ಆಸರೆಯೇ ಇಲ್ಲದಾಗ ಬಂದಿರುವ ಇವರನ್ನು ನಂಬಿಸಿ ತಾನು ಸಾಯುವವರೆಗೂ ನಿನ್ನ ಕೈಬಿಡುವುದಿಲ್ಲವೆಂದು ನಾಲ್ಕಾರು ವರ್ಷವಾಗಿರುವುದಿಲ್ಲ ಆಗಲೇ ಅವರ ಸಂಬಂಧಗಳಲ್ಲಿ ಬಿರುಕು ಬಿಟ್ಟಿರುತ್ತದೆ. ಹೌದು ಜೋರುಮಾಡಿ ಕೇಳಲು ನೀನು ಯಾವ ಜಾತಿ, ಕುಲದವಳು ನೈತಿಕವಾಗಿ ಕೇಳಲು ನಿನಗೆ ಯಾವ ಅಧಿಕಾರವಿದೆ. ನಿನ್ನದೆಷ್ಟೋ ಅಷ್ಟು ನೋಡಿಕೋ. ಇಲ್ಲದಿದ್ದರೆ ನಿನ್ನ ಜತೆಗೆ ಇರಲು ಆಗುವುದಿಲ್ಲ. ನನಗೆ ಏನು ಕೈಬೀಸಿದ ಕೈಲಾಸವೇ ನಿನ್ನದೇನೋ ಅಷ್ಟು ನೋಡಿಕೋ ಎಂದು ಶೋಷಣೆಯ ಹಲವಾರು ರೀತಿಯಲ್ಲಿ ಒತ್ತಡಮಾಡಿ ರಂಗನಟಿಯರನ್ನು ಪಶುಗಳಂತೆ ಕಂಡು ಅವರಿಗೆ ಒಂದು ವ್ಯಕ್ತಿತ್ವ ಇಲ್ಲವೆಂಬಂತೆ ಮಾಡಿಬಿಡುತ್ತಾರೆ.

ಪುರುಷರಲ್ಲಿ ಸಹಕಲಾವಿದರು, ಜೀವನವನ್ನು ಕೊಡುತ್ತೇನೆ, ಸಾಯುವವರೆಗೂ ಜತೆಗೆ ಇರುತ್ತೇನೆ ಎಂದು ಕೊಂಡಿರುವವರು, ನಿನ್ನ ಬಿಟ್ಟು ಇನ್ನೊಬ್ಬ ಹೆಣ್ಣುಮಕ್ಕಳು ನನ್ನ ಸಹೋದರಿಯರೆಂದು ಹೀಗೆ ಹಲವಾರು ಬಣ್ಣದ ಮಾತುಗಳನ್ನು ಮಾತನಾಡಿ ಯೌವ್ವನವನ್ನು ಕಂಡು ಒಂದು ದಿನ, ಮೂರು ದಿನ, ಎಂಟುದಿನ, ತಿಂಗಳು, ಮೂರು ತಿಂಗಳು, ಆರು ತಿಂಗಳು ನಾಲ್ಕಾರು ವರ್ಷ ಈ ಎಲ್ಲಾ ದಿನಗಳಲ್ಲಿ ಸಹಜೀವನ ನಡೆಸಿ ನಂತರ ಕಣ್ಣಿಗೆ ಕಂಡರೂ ಇವರು ನನಗೆ ಗೊತ್ತೇ ಇಲ್ಲ ಎಂಬಂತೆ ಇದ್ದು ಬಿಡುವ ದ್ರೋಹಿ ಪುರುಷಶಾಹಿಗಳು ಎಷ್ಟೋ ನಮ್ಮ ಜೀವನದಲ್ಲಿ ಬಂದು ಹೋಗಿದ್ದಾರೆ (ರಂಗನಟಿಯರು) ಎಂದು ತಮ್ಮ ಆತ್ಮಕಥೆಯನ್ನು ನಮ್ಮೊಂದಿಗೆ ನಿವೇದಿಸಿ ಕೊಂಡರು (ಕೂಡ್ಲಿಗಿ ಕ್ಷೇತ್ರಕಾರ್ಯ, ಸಂದರ್ಶನ, ೨೦೦೨).

ಈಗ ಒಂದೆರಡು ತಿಂಗಳು ಜತೆಯಲ್ಲಿಯೇ ಇದ್ದು ಎರಡು, ಮೂರು ವರ್ಷ ಪತ್ತೆಯಿಲ್ಲದಂತೆ ಹೋಗಿ ಒಂದು ದಿನ ಇದ್ದಕ್ಕಿದ್ದಂತೆ ದಿಢೀರನೇ ಬಂದು ನಟಿಯರಿಗೆ ನಾನು ಬಂದಿರುವೆನೆಂದು ಅಸ್ತಿತ್ವ ತೋರಿಸಲು

ಹೆಣಗಾಡುವುದು, ಇಲ್ಲವೆ ಶೋಷಣೆ ಮಾಡುವುದು, ಜಗಳವಾಡುವುದು, ಹೊಡೆಯುವುದು ಹೀಗೆ ಯಾವ ರೀತಿಯಲ್ಲಿ ಎಷ್ಟೆಷ್ಟು ರೀತಿಯಲ್ಲಿ ಮೋಸಮಾಡಲು ಸಾಧ್ಯವೋ ಅಷ್ಟೆಲ್ಲಾ ರೀತಿಯಲ್ಲಿ ಹಿಂಸೆಯನ್ನು ಮಾಡುವುದು.

ಇಂದಿನ ಪುರುಷರ ಪೈಶಾಚಿಕ ವರ್ತನೆಗಳಲ್ಲಿ ಹೆಣ್ಣು ಆಸರೆ ಇಲ್ಲದ ಬಳ್ಳಿ. ಆದರೆ ಆಸರೆ ಕೊಡುವವರೇ ನಿರಾಶೆ ಮಾಡಿದರೆ ಅದಕ್ಕೆ ಏನೆನ್ನಬೇಕು. ಅಂಥದರಲ್ಲಿ ರಂಗನಟಿಯರಿಗೆ ಆಸರೆ ಎಲ್ಲಿ ಎನ್ನುವುದು ಮರಿಯಮ್ಮನಹಳ್ಳಿ ರಂಗಕಲಾವಿದೆ ಕೆ.ನಾಗರತ್ನಮ್ಮನವರ ಪ್ರಶ್ನೆ. "ಅಗ್ನಿಸಾಕ್ಷಿಯಾಗಿ ಗಂಡನಿಂದ ತಾಳಿಕಟ್ಟಿಸಿಕೊಂಡವಳು ಮನೆಯಲ್ಲಿ ಹೇಗಾದರು ಇರಲಿ ಸಮಾಜದ ಕಣ್ಣಿಗೆ ಅವಳು ಧರ್ಮಪತ್ನಿ. ದೇವದಾಸಿಯರಿಗೆ ಇತ್ತೀಚಿನ ಸಮಾಜ 'ಸೂಳೆಯಪಟ್ಟ' ಕಟ್ಟುತ್ತಿದೆ. ನಮ್ಮ ಹಿರಿಯರ ಕಾಲದಲ್ಲಿ ಅಂದರೆ ನಾವು ಸಣ್ಣವರಿದ್ದಾಗ ದೇವದಾಸಿಯನ್ನು ಅಷ್ಟೊಂದು ತುಚ್ಛವಾಗಿ ಕಾಣುತ್ತಿರಲಿಲ್ಲ. ಅವರಿಗೆ ಹೆಚ್ಚಿನ ಮರ್ಯಾದೆ ಇರುತ್ತಿತ್ತು. ಕೆಲವು ದೇವದಾಸಿಯರು ಸಂಪೂರ್ಣವಾಗಿ ಒಬ್ಬ ವ್ಯಕ್ತಿಗೆ ಜೀವನ ಸಮರ್ಪಿಸಿಕೊಂಡರೂ ಸಮಾಜದಲ್ಲಿ ಆಕೆ ಉಪಪತ್ನಿಯೇ ಸರಿ.

ಯೌವ್ವನದ ಭರದಲ್ಲಿ ಹಲವಾರು ರಂಗನಟಿಯರು ದಿಟ್ಟ ಹೆಜ್ಜೆಯನ್ನು ಇಟ್ಟುಕೊಂಡು, ಜೀವನವನ್ನು ಯಶಸ್ವಿಯಾಗಿಸಿಕೊಂಡಿದ್ದಾರೆ. ಇನ್ನು ಕೆಲವರು ಸಾಮಾಜಿಕ ಸಂದರ್ಭಗಳಲ್ಲಿ ಸಿಕ್ಕು ವಿಲವಿಲ ಒದ್ದಾಡಿ, ಅಲ್ಲದ ಮಾತುಗಳಿಗೆ ಬಲಿಪಶುಗಳಾಗಿ ನಟಿಯರು ತಮ್ಮ ಜೀವ ಹಿಂಡಿಕೊಂಡವರೇ ಹೆಚ್ಚಾಗಿದ್ದಾರೆ. ಯೌವ್ವನವು ಎಲ್ಲರಿಗೂ ಒಳ್ಳೆಯ ರೀತಿಯಲ್ಲಿ ಪ್ರಭಾವ ಬೀರಿಲ್ಲ. ಕೆಲವರಿಗೆ ಯಶಸ್ಸು ಕೊಟ್ಟಿದ್ದರೆ, ಇನ್ನು ಕೆಲವರಿಗೆ ಜೀವನಕೊಟ್ಟಿದೆ. ಇನ್ನು ಕೆಲವರಿಗೆ ಯೌವ್ವನ ದುರಂತಕ್ಕೆ, ಯೌವ್ವನ ವಿನಾಶಕ್ಕೆ ಕಾರಣವಾಗಿದೆ.

ಯೌವ್ವನವನ್ನು ಕಂಡು ಪುರುಷಶಾಹಿಗಳು ಸಂಸಾರ ಮಾಡಿರುವುದು : ಯೌವ್ವನವನ್ನು ಕಂಡ ಪುರುಷ ಆ ಹೆಣ್ಣು ಯಾವ ಜಾತಿ, ಕುಲ, ವರ್ಗ, ವೃತ್ತಿಯವಳು ಎಂದು ನೋಡುವುದೇ ಇಲ್ಲ. ಒಟ್ಟಿನಲ್ಲಿ ಆಕೆ ಬೇಕು. ಆಕೆಯ ಯೌವ್ವನಬೇಕು. ಆಕೆ ಬೇಕು ಅಷ್ಟೇ ಎಂದು ಆಸೆಪಟ್ಟು ಆಕೆ ಹಿಂದೆಯೇ ಬಿದ್ದು, ಆಕೆಗೆ ಕನಸಿನ ಅರಮನೆಯನ್ನು ಕಟ್ಟಿ ಆಕೆ ಕಲ್ಪನಾಲೋಕದಲ್ಲಿ ವಿಹರಿಸುವಂತೆ ಮಾಡಿ, ಎಷ್ಟೋ ರಂಗನಟಿಯರೊಂದಿಗೆ ಪುರುಷಶಾಹಿಗಳು ಸಂಸಾರವನ್ನು ಹೂಡಿ, ಅಲ್ಲಿಯೇ ಇದ್ದು ಆಕೆಗೆ ಶೋಷಣೆಯನ್ನು ಮಾಡುವುದು.

ಆಕೆಯೇ ತನ್ನ ಜೀವನಕ್ಕೆ ಖರ್ಚುಕೊಡಬೇಕು. ಇಲ್ಲದಿದ್ದರೆ ಆತನ ಹೆಂಡತಿ ಮಕ್ಕಳನ್ನು ಈ ನಟಿಯರೇ ನೋಡಿ ಕೊಳ್ಳಬೇಕು. ಸಂಸಾರ ಮಾಡಿ ಪುರುಷ 'ಗಂಡ' ನೆನೆಸಿಕೊಳ್ಳುತ್ತಾನೆ. ಆದರೆ ಆ ವ್ಯಕ್ತಿ ದುಡಿಯುವ ಸಂಸಾರದ ಹೊಣೆಯನ್ನು ಹೊರುವ ಗಂಡನೆನಿಸಿಕೊಳ್ಳುವುದಿಲ್ಲ. ಒಂದು ಸಂಸಾರವನ್ನೇ ಮುನ್ನಡೆಸಿಕೊಂಡು ಹೋಗುವುದು ಕಷ್ಟವಾಗಿರುವಾಗ ಎರಡೆರಡು ಸಂಸಾರದ ಭಾರವನ್ನು ಹೊರುವುದು ಸಾಮಾನ್ಯ ಮಾತೆ ಅಲ್ಲ. ಹೀಗಿರುವಾಗ ಪುರುಷರು ಯಾರ ಮೇಲೆ ದಬ್ಬಾಳಿಕೆ ಮಾಡಿದರೆ ನಡೆಯುತ್ತದೆಯೋ ಅವರನ್ನೇ ಪಶುಗಳಂತೆ ನೋಡಿಕೊಳ್ಳುತ್ತಾರೆ.

ಸಂಸಾರವನ್ನು ಮಾಡಿದ ಮೇಲೆ ಇವರೇ ನನ್ನ ಪತಿ ದೈವ ದೇವರೆಂದು ನಂಬಿ, ನಮ್ಮ ಯಜಮಾನರೆಂದು ನಟಿಯರು ಹೆಮ್ಮೆ ಪಟ್ಟುಕೊಂಡರೆ ಪುರುಷರು ಮಾತ್ರ ಈಕೆಯನ್ನು ಉಪ ಪತ್ನಿ ಎಂದೇ ಪರಿಗಣಿಸುತ್ತಾರೆ. ಸಮಾಜದಲ್ಲಿ ಈಕೆ ಏನೇ ತ್ಯಾಗ ಮಾಡಿದರೂ ಆಕೆ ಎಂದೂ ಧರ್ಮಪತ್ನಿಯಾಗಲು ಸಾಧ್ಯವಿಲ್ಲ. ಒಂದು ಕೆಳವರ್ಗದಿಂದ ಬಂದಿರುವ ಈಕೆಗೆ ಜಾತಿ, ಕುಲ, ಸಂಪ್ರದಾಯಗಳೇ ಹೀನಳನ್ನಾಗಿಸುತ್ತವೆ. ಸಂಬಂಧಗಳು ಮೌಲ್ಯಾಧಾರಿತವಾಗಿದ್ದರೂ ಇವರನ್ನು ನೋಡುವ ಸಮಾಜ ಮೌಲ್ಯಾಧಾರಿತ ಅಂಶಗಳನ್ನು ರೂಢಿಸಿಕೊಂಡಿಲ್ಲ. ಆದ್ದರಿಂದ ಇವರೇನೇ ತ್ಯಾಗಿಯಾಗಿ ಒಳ್ಳೆಯ ಸುಸಂಸ್ಕೃತ ಅಂಶಗಳನ್ನು ಅಳವಡಿಸಿಕೊಂಡಿದ್ದರೂ ಆಕೆ ಉಪಪತ್ನಿಯಾಗಿಯೇ ಇರಬೇಕು. ಉನ್ನತವರ್ಗದವರೆಂದೂ ಈ ರೀತಿ ವ್ಯವಸ್ಥೆ, ಅವಕಾಶವನ್ನು ಮಾಡಿಕೊಡುವುದಿಲ್ಲ. ಎಲ್ಲಿ ಹರಿಯಬೇಕಾದ ನೀರು ಅಲ್ಲಿಯೇ ಹರಿಯಬೇಕೆನ್ನುತ್ತಾರೆ ವಿನಃ ಎಲ್ಲರು 'ವಂದೇ ಮಾತರಂ' ಎಂಬ ಅಂಶವನ್ನು ಈ ವ್ಯವಸ್ಥೆಯು ಅಳವಡಿಸಿಕೊಳ್ಳಲು ಮನಸ್ಸುಗಳು ಒಪ್ಪಲಾರವು.

ಸಂಸಾರವೆಂಬುದು ಸಾಮಾನ್ಯ ಮಾತಲ್ಲ. ಇದು ಸಮುದ್ರವಿದ್ದಂತೆ. ಸಾಯುವವರೆಗೂ ಜಂಜಾಟವಿದ್ದದ್ದೇ. ಸ್ವೀಕರಿಸುವಾಗ ಅಡ್ಡಿ ಆತಂಕಗಳು ಬರುವುದು. ಆದರೆ ಅದರ ಪರಿಣಾಮ ನಂತರದಲ್ಲಿ ಗೊತ್ತಾಗುತ್ತದೆ. ಉನ್ನತವರ್ಗದ ಪುರುಷರ ಈ ನಿಲುವು ಯಾವಾಗಲು ಅದು ಸ್ಥಿರವಾಗಿರುವುದಿಲ್ಲ. ಅದು ಕೆಲವೊಮ್ಮೆ ಬದಲಾವಣೆಯಲ್ಲಿ ನಟಿಯರ ಕೌಟುಂಬಿಕ ಜೀವನಕ್ಕೆ ಭಂಗ ಉಂಟಾಗುತ್ತದೆ. ಆಗ ಇವರಿಗೆ ಆಸರೆಯಾಗಿ ಯಾರೂ ಸಿಗುವುದಿಲ್ಲ. ಎಷ್ಟೋ ರಂಗನಟಿಯರು ಹೀಗೆ. ನಂಬಿಕೊಂಡು ತಾಳಿಕಟ್ಟಿಸಿಕೊಂಡಿರುವ ರಂಗನಟಿಯರು ತಮ್ಮ ಸಂಗಾತಿಯು ವಿಧಿವಶರಾದಾಗ ಮಾಂಗಲ್ಯ, ಕುಂಕುಮ ತೆಗೆದಿದ್ದಾರೆ (ಆಚರಣೆಯ ಪ್ರಕಾರ ಅವರು ಕುಂಕುಮ, ಮಾಂಗಲ್ಯ ತೆಗೆಯುವಂತಿಲ್ಲ). ಇಂಥ ತ್ಯಾಗ ಮಾಡಿದರೂ ಯಾರೂ ಇವರಿಗೆ ಗೌರವವನ್ನು ನೀಡುವುದಿಲ್ಲ. ಇದು ನಮ್ಮ ಸಮಾಜದ ದುರಂತ ಹಾಗೂ ಇತಿಹಾಸದ ವ್ಯಂಗ್ಯವೆಂದರೂ ತಪ್ಪಿಲ್ಲ. ಸಂಸಾರ ಮಾಡಿರುವವರ ಜೊತೆ ಕೈಗೊಂಬೆಯಾಗಿ, ಸೇವಕಿಯಂತೆ ನಟಿಯರ ಜೀವನವನ್ನು ಸಾಗಿಸಿದ್ದಾರೆ.

ಬರವಣಿಗೆಯಲ್ಲಿ, ವೇದಿಕೆಯ ಮೇಲೆ ಮಾನವೀಯತೆಯನ್ನು ಮಾತನಾಡುವ, ಬರೆಯುವ ಈ ಸಮಾಜದ ಜನರು ಇಂಥ ವಿಷಯದಲ್ಲಿ ಏಕೆ ಈ ರೀತಿಯಾಗಿ ಮೈದಳೆಯುತ್ತಾರೋ ಅರ್ಥವಾಗುತ್ತಿಲ್ಲ. ಎಲ್ಲರೂ ಒಂದೆ ಎಲ್ಲರೂ ಸರಿಸಮಾನರು ಎನ್ನುವ ನಾವುಗಳು ಈ ದೇವದಾಸಿಯರಿಗೆ, ಈ ರಂಗ ಕಲಾವಿದೆಯರಿಗೆ ಏಕೆ? ಸಾಮಾಜಿಕ ನ್ಯಾಯವನ್ನು ದೊರಕಿಸಲು ಆಗುತ್ತಿಲ್ಲ ಎಂಬುದೊಂದೇ ಜ್ವಲಂತ ಸಮಸ್ಯೆಯಾಗಿ ನನ್ನನ್ನು ಕಾಡುತ್ತಿದೆ. ಅಲ್ಲದೆ ಸಾಮಾಜಿಕ ಹಿತಚಿಂತಕರನ್ನು ಜೀವಪರ ಕಾಳಜಿ ಇರುವ ಎಲ್ಲ ಮಹೋನ್ನತ ಬುದ್ಧಿಜೀವಿಗಳು ಇವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿದರೆ ಅವರ ವ್ಯಕ್ತಿತ್ವಗಳು ಸಾರ್ಥಕವಾಗಲು ಸಾಧ್ಯ. ಅದು ಇಡೀ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳು ಆಗಬೇಕು. ನಂತರ ವ್ಯವಸ್ಥೆಯು ಒಡೆದು ಕಟ್ಟಿದರೆ ಮಾನವೀಯತೆ ಮೊಳಗಲು ಸಾಧ್ಯ. ನಟಿಯರಿಗೆ ನಂಬಿಸಿ, ಅವರ ಸಂಪತ್ತನ್ನು ದೋಚಿಕೊಂಡು, ಮೋಸ ಮಾಡಿ, 'use and throw' ಎಂಬಂತೆ ಪುರುಷರು ರಂಗನಟಿಯರೊಂದಿಗೆ ಸಹಜೀವನಮಾಡಿ ಸಂಸಾರ ಮಾಡಿ ಇವರಿಗೆ ವ್ಯಕ್ತಿತ್ವವನ್ನೇ ಇಲ್ಲವಾಗಿಸಿ ಆಸರೆ ಇಲ್ಲದ ಬಳ್ಳಿಗಳನ್ನಾಗಿಸುತ್ತಾರೆ.

ರಂಗಭೂಮಿಯಿಂದ ದುಡಿದಿರುವ ಹಣವನ್ನು ಸಾವಿರ, ಲಕ್ಷಗಟ್ಟಲೇ ನಟಿಯಿಂದ ತೆಗೆದುಕೊಂಡು ಅವರಿಗೆ ಮೋಸಮಾಡಿ ಆಕೆಯನ್ನು ಕೈಬಿಟ್ಟಿದ್ದಾರೆ. ಮನೆಕಟ್ಟಿಸಿ ಕೊಡುತ್ತೇನೆಂದು ಹಣವನ್ನು, ಸಂಪತ್ತನ್ನು, ಆಕೆಯ ವ್ಯಕ್ತಿತ್ವವನ್ನೇ ದೋಚಿದ್ದಾರೆ. ರಕ್ಷಿಸುವವರೇ ಭಕ್ಷಿಸುವವರಾದರೆ, ಕಾಯುವವರೇ, ಕೊಲ್ಲುವವರಾದರೆ ಆ ಜೀವ ಎಲ್ಲಿಗೆ ಹೋಗಬೇಕು.

ಸಮಾಜದಲ್ಲಿ ನಟಿ ಎಂದೂ ಮೌಲ್ಯಾಧಾರಿತ ಜೀವನವನ್ನು ನಡೆಸಲು ಸಾಧ್ಯವಿಲ್ಲ. ನಟಿ, ಆಕೆ ನಟಿ. ಆಕೆ ಧರ್ಮಪತ್ನಿ, ತಾಯಿ, ತಂಗಿ, ಸಹೋದರಿ ಪೂಜ್ಯನೀಯಳು ಆಗಲು ಸಾಧ್ಯವಿಲ್ಲವೇನೋ. ಎಲ್ಲ ವ್ಯವಸ್ಥೆ ಅನುಕೂಲ ಸಿಂಧು. ತನ್ನನ್ನು ಸಂರಕ್ಷಿಸಲು ಹೆಣಗಾಡಲು ಪ್ರಯತ್ನಿಸುವ ಜೀವಕ್ಕೆ ಮತ್ತೆ ಮತ್ತೆ ಪೆಟ್ಟು ನೀಡಿದರೆ, ಎಲ್ಲ ವರ್ತನೆಗಳು ಗಾಯದ ಮೇಲೆ ಬರೆ ಇಟ್ಟಂತೆ ಮಾಡುತ್ತಾರೆ. ಎರಡು ಸಂಸಾರ ಜತೆಗೆ ಇದ್ದು ನಟಿಯರು ಪುರುಷರ ಮನೆಯಲ್ಲಿ ಸೆಗಣಿ, ಕಸ, ಮುಸುರೆ ಮಾಡಿ, ಅವರ ಅಡುಗೆ ಮನೆ, ದೇವರುಗಳಿಗೆ ನಿಷೇಧವಿದ್ದು ಅವರ ಮನೆಯಲ್ಲಿ ಆಳಿನಂತೆ ಜೀವನ ನಡೆಸಿ ನಟಿಯರು ತಮ್ಮ ಜೀವನ ಸಾರ್ಥಕಪಡಿಸಿ ಕೊಂಡಿದ್ದಾರೆ.

ಇಡೀ ವ್ಯವಸ್ಥೆ ನಟಿಯರನ್ನು ಗೌರವಿಸುವ ಮನೋಧರ್ಮ ರೂಢಿಸಿಕೊಂಡರೆ ಈ ಬಿಸಿ ವಾತಾವರಣದಲ್ಲಿ ನಟಿಯರೆಲ್ಲರೂ ಸರಾಗವಾಗಿ ಉಸಿರಾಡಲು ಸಾಧ್ಯ. ಅದು ಬಿಟ್ಟು ಹೀಗೆ ಹಿಂಸೆ ಮಾಡಿ, ಜೀವನವನ್ನು, ಜೀವವನ್ನು ತೇದಿರುವ ನಟಿಯರಿಗೆ ಪತಿ ಎನಿಸಿಕೊಂಡಿರುವವನ ಆಸ್ತಿಯಲ್ಲಿ ಆಕೆ ಭಾಗಿಯಾಗಲು ಸಾಧ್ಯವಿಲ್ಲ. ಕಾನೂನಿನಿಂದ ನಟಿಯರಿಗೆ ಅಧಿಕಾರವಿಲ್ಲ. ಸಾಮಾಜಿಕವಾಗಿ ಆಕೆಗೆ ಪತಿಯಿಂದ ಏನನ್ನು ಬಯಸಬಾರದು. ಒಂದು ವೇಳೆ ಬಯಸಿದ್ದೆ ಆದರೆ ಆಕೆ ತನ್ನಲ್ಲಿರುವುದನ್ನು ಮಾತ್ರ ಕೊಡಬೇಕು. ಆಕೆಯು ಸಂಸಾರ ಮಾಡಿರುವವ ರಿಂದ ನಟಿ ಸಂಸಾರ ಮಾಡಿರುವ ಪುರುಷರ ಮನೆಯಲ್ಲಿ ಆಳಾಗಿದ್ದು ಜೀವನ ಸಾಗಿಸಿದ್ದಾರೆ. ಏನನ್ನು ಬಯಸಬಾರದು. ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ ಆಕೆಯು ಏನನ್ನು ಕೇಳಲು ಅರ್ಹಳಲ್ಲ. ಆಕೆ ಕೇಳಲಾರದೆ ಹುಟ್ಟಿಕೊಂಡು ಬಂದಿದ್ದಾರೆ. ಆಕೆ ಸ್ವೀಕರಿಸಲು ಅನರ್ಹಳೇ ಸರಿ. ನಟಿಗೆ ಕೇಳುವ ಅಧಿಕಾರವಿಲ್ಲ. ಆದರೆ ಆಕೆ ಕೊಡುವ ಕೆಲಸವನ್ನೇ ಮಾಡಬೇಕು. ನೋಡುಗರ ನೋಟಕ್ಕೆ ಮಾತ್ರ ಸಂಸಾರ ಹೊಣೆಯು ಸಂಪೂರ್ಣವಾಗಿ ನಟಿಯರ ಮೇಲೆಯೇ ನಿಂತಿರುತ್ತದೆ.

ಯೌವ್ವನವನ್ನು ತೋರಿಸಿ ಪುರುಷರ ಸಂಪತ್ತನ್ನು ದೋಚಿರುವುದು : ಇನ್ನೊಂದು ಕಡೆ ನಟಿಯರು ತಮ್ಮ ಯೌವ್ವನವನ್ನು ತೋರಿಸಿ ಪುರುಷರ ಸಂಪತ್ತನ್ನೇ ದೋಚಿಕೊಂಡು ಬಿಟ್ಟಿದ್ದಾರೆ. ಅವರ ಸಂಸಾರವನ್ನು ನಟಿಯರು ಬೀದಿಪಾಲಾಗಿಸಿದ್ದಾರೆ. ಮಹಾನ್ ಘಟಾನು ಘಟಿಗಳೆನಿಸಿಕೊಂಡಿರುವ ಪುರುಷ ಶಾಹಿಗಳು ಅವರ ಮನೆಯಲ್ಲಿದ್ದು, ಮಧ್ಯ ವ್ಯಸನಿಗಳಾಗಿ ಆಕೆ ಹೇಳಿದಂತೆ ಕೇಳಿ ತಮ್ಮ ಅಸ್ತಿತ್ವವನ್ನು ತಾವೇ ಕಳೆದುಕೊಂಡು ಕೊನೆಗೆ ಅವರ ಮನೆಯಲ್ಲಿ ಸೇವಕರಂತೆ ವಾಸಿಸಿದ್ದಾರೆ. ಪ್ರೀತಿಗೆ ಮನ ಸೋಲದ ಮನಸ್ಸುಗಳು ಈ ಪ್ರಪಂಚದಲ್ಲಿ ಇಲ್ಲ. ಆದರೆ ಮನಸೋತಿರುವ ವ್ಯಕ್ತಿತ್ವಗಳಿಗೆ ಮೋಸಮಾಡಿ ಅವರನ್ನೆ ಹಳ್ಳಕ್ಕೆ ತಳ್ಳಿರುವುದು ವೈಚಿತ್ರ್ಯ.

ಅಥವಾ ದುಷ್ಪಗುಣ ಎಂದೇ ಹೇಳಬೇಕಾಗುತ್ತದೆ. ನಟಿಯರಿಗೆ ಈ ರೀತಿಯ ಆರ್ಥಿಕ ಸಬಲತೆ ಬಂದಾಗ ರಂಗಭೂಮಿಯ ಸೇವೆಯನ್ನು ನಿಲ್ಲಿಸಿ ಬಿಟ್ಟಿರುವ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ.

ತಾವು ಪ್ರಭುತ್ವವನ್ನು ಸ್ಥಾಪಿಸಿ ಮೆರೆದು ನಟಿಯಾಗಿರುವ ಹಲವರು ಇದ್ದಾರೆ. ಅವರ ಸಂಸಾರಕ್ಕೆ ಹುಳಿ ಹಿಂಡಿ. ಅವರ ಹಣವನ್ನು ದೋಚಿ ತಮ್ಮ ಜೀವನ ಒಂದೇ ಸರಿಯಾಗಿ ರೂಪಿಸಿಕೊಂಡು ಪುರುಷರ ಜೀವನವನ್ನು ನಡೆಸಿಕೊಂಡ ನಟಿಯರು ಈ ವ್ಯವಸ್ಥೆಯಲ್ಲಿದ್ದಾರೆ. ಒಂದು ವ್ಯವಸ್ಥೆಯಲ್ಲಿ ಹಲವಾರು ವ್ಯಕ್ತಿತ್ವಗಳಿರುವ ಜನರು ಎಲ್ಲೆಡೆ ಸಿಗುತ್ತಾರೆ.

ಒಟ್ಟಿನಲ್ಲಿ ಪುರುಷರ ಸಂಪತ್ತು ದೋಚಿ ತಾವೊಂದೇ ಚೆನ್ನಾಗಿ ಜೀವಿಸುವ ನಟಿಯರ ಸಂಖ್ಯೆ ತುಂಬಾ ವಿರಳ. ಆದರೆ, ಪುರುಷರಿಂದ ಮೋಸ ಹೋಗಿ ತಮ್ಮ ಸಂಪತ್ತು, ವ್ಯಕ್ತಿತ್ವವನ್ನೇ ಅವರ ಕೈಗಿಟ್ಟು, ಸಂಕಟದಲ್ಲಿರುವ ನಟಿಯರೇ ಹೆಚ್ಚಾಗಿದ್ದಾರೆ. ಸ್ತ್ರೀ ಶೋಷಣೆಯ ಪ್ರಮಾಣವು ಹೆಚ್ಚಾಗಿರುವುದೇ ವಿನಃ ಪುರುಷ ಶೋಷಣೆಯ ಪ್ರಭಾವವಿರುವುದು ತುಂಬಾ ಕಡಿಮೆ. ಆದರೆ ಹುಟ್ಟಿನಿಂದ ದಬ್ಬಾಳಿಕೆಯನ್ನು ರಕ್ತಗತ ಮಾಡಿಕೊಂಡಿರುವ ಪುರುಷರು ಶೋಷಣೆಗೆ ಒಳಗಾಗಿರುವುದು ತೀರಾ ವಿರಳ. ಆದರೆ ಸಂಪೂರ್ಣವಾಗಿ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ನಟಿಯರ ಶೋಷಣೆಯೇ ಹೆಚ್ಚಾಗಿದ್ದು, ಅವರ ಸೇವೆಗೆ ತಕ್ಕಂತಹ ಪ್ರತಿಫಲ ಈ ಸಮಾಜದಿಂದ ದೊರೆಯದೇ ಇರುವುದು ವಿಷಾದನೀಯವೇ ಸರಿ.

ಮದುವೆ

ಭಾರತೀಯ ಸಮಾಜದಲ್ಲಿ ವೈವಾಹಿಕ ಸಂಬಂಧಗಳು ಧರ್ಮದ, ಮತದ, ಕುಲದ ಆಧಾರದ ಮೇಲೆ ನಡೆಯುತ್ತಾ ಬಂದವು. ನಾಗರೀಕತೆಯ ಮುಂಚಿನ ದಿನಗಳಲ್ಲಿ ಸಹಜವಾದ ಜೀವನವಾಗಿದ್ದು, ವೃತ್ತಿಯಿಂದ, ಶ್ರೇಣೀಕರಣ ವ್ಯವಸ್ಥೆ ಬಂದು ಮದುವೆಯು ಹಲವಾರು ಕಟ್ಟುಪಾಡುಗಳಿಂದ ನಿರ್ಮಿತವಾಯಿತು. ಆಯಾ ಕಾಲ, ಧರ್ಮ, ಕುಲ, ವರ್ಗದೊಂದಿಗೆ ಮಾತ್ರ ಹೆಣ್ಣು ಗಂಡಿನ ಕೊಡುಕೊಳ್ಳುವಿಕೆಯಾಗಿ ಮಾರ್ಪಟ್ಟು ಅವುಗಳಿಗೆ ಹೆಣ್ಣಿನ ಬಗ್ಗೆ ಗಂಡಿನ ಬದ್ಧತೆ, ಸಮಾಜದ ಬಗ್ಗೆ ಕುಟುಂಬದ ಬದ್ಧತೆ ಹೀಗೆ ಹಲವಾರು ನಿಟ್ಟಿನಲ್ಲಿ ನಿಯಮಗಳನ್ನು ಮಾಡಿಕೊಂಡು ಅವರವರ ಸ್ವಾತಂತ್ರ್ಯವು ಎಷ್ಟು ಎಂಬುದನ್ನು ವ್ಯವಸ್ಥೆಯೇ ನಿರ್ಮಿಸುತ್ತಾ ಬಂದಿತು.

ಸತಿ-ಪತಿಗಳು ಕಾಯಾ, ವಾಚಾ, ಮನಸಾ ಜೀವನ ಅಂತ್ಯದವರೆಗೂ ಒಂದಾಗಿರಬೇಕೆಂದು ಆಗಿದೆ. ಹಿಂದೂ ಧರ್ಮ ಸೂತ್ರಕಾರನಾದ ಮನುವಿನ ತಿಳುವಳಿಕೆಯಂತೆ 'ಸ್ತ್ರೀ ಪುರುಷರು ಸತಿ-ಪತಿಯರಾಗಲು ಸಮಾಜದಿಂದ ಪಡೆದ ಮನ್ನಣೆಯೇ ವಿವಾಹ'. ವಿವಾಹ ಶಬ್ದವು 'ವಿ' ಮತ್ತು 'ವಾಹ' ಶಬ್ದಗಳಿಂದ ಸಂಲಗ್ನವಾಗಿದೆ. 'ವಿ' ಎಂದರೆ ಹೊತ್ತುಕೊಂಡು ಹೋಗು ಎಂದು (ಲೇ: ಸುಜಾತ ಅಕ್ಕಿ, ಸುರಿಗಿ ಸುತ್ತಾಲೆ, ಪುಟ, ೧೨). ಹೀಗೆ

ಮದುವೆ ಪುರುಷನು ಹೆಂಡತಿಯನ್ನು ಹೊತ್ತುಕೊಂಡು ಪಲ್ಲಕ್ಕಿಯಲ್ಲಿ ಕರೆದುಕೊಂಡು ಹೋಗುವ ಕಾಲದ ಈ ಪದವು ಭಾರತೀಯ ಸಂಸ್ಕೃತಿಯಲ್ಲಿ ಮದುವೆ ನಾಗರೀಕತೆಯ ಕುರುಹೂ ಆಗಿದೆ.

"ಸಾಮಾಜಿಕ ಕಾಮಜೀವನದ ಸುವ್ಯವಸ್ಥೆ, ವಂಶಾಭಿವೃದ್ಧಿ ಸಂಸ್ಕೃತಿಯ ಪೋಷಣೆ ಹೀಗೆ ಸ್ತ್ರೀ ಪುರುಷರ ಜೀವನ ಪೋಷಕ ಅತ್ಯವಶ್ಯಕವಾಗಿದೆ. ವಿವಾಹವೆಂಬುದು ಒಂದು ಪುಟ್ಟ ಕುಟುಂಬ ರಚನೆಯ ಬುನಾದಿ ಹಾಗೂ ಕುಟುಂಬ ವ್ಯವಸ್ಥೆಯ ಸುಸಂಸ್ಕೃತ ಸಮೂಹದ ಪೂರಕ ಅಂಶಗಳಾಗಿವೆ. ಎಲ್ಲ ಕಾಲದ ವರ್ಗದವರಿಗೂ ಸಾರ್ವತ್ರಿಕವಾದ ಘಟ್ಟವೇ ಈ ಮದುವೆ. ಒಂದಲ್ಲ ಒಂದು ರೀತಿಯಿಂದಲೂ ಸಮಾಜದವರಿಂದ ಅನುಕರಿಸಲ್ಪಟ್ಟಿದೆ. ಇದು ಮಾನವನ ಧಾರ್ಮಿಕ ವ್ಯವಸ್ಥೆ ತಲೆ ಎತ್ತುವ ಮೊದಲೇ ಪ್ರಚಲಿತವಾದ ಪದ್ಧತಿ ಎಂದು ಕಂಡು ಬರುತ್ತವೆ. ಜನರ ಬಾಲ್ಯ, ಯೌವ್ವನ, ಮುಪ್ಪುಗಳಂತೆ ವಿವಾಹವು ಮನುಷ್ಯನ ಜೀವನಕ್ಕೆ ಅನಿವಾರ್ಯವಾಗಿ ಒಗ್ಗಿಕೊಂಡ ಅಂಗವೆಂದು ಸಮಾಜದಲ್ಲಿ ಸ್ವೀಕೃತವಾಗಿದೆ (ಲೇ: ಸುಜಾತ ಅಕ್ಕಿ, ಸುರಿಗಿ ಸುವ್ವಾಲೆ, ಪುಟ, ೧೨). ಹೀಗೆ ಮದುವೆಯು ಸಮಾಜದಿಂದ ಅನುಕರಿಸಿದಲ್ಲಿ ಧರ್ಮಾನುಸಾರ ಅದು ತನ್ನ ಅಸ್ತಿತ್ವ ಪಡೆದ ಮಾನವನ ಘಟ್ಟವಾಗಿದೆ.

ಮನುಜನ ಬದುಕಲ್ಲಿ 'ಮದುವೆ' ಎಂಬುದು ಒಂದು ಘಟ್ಟ. ಅನಾದಿಕಾಲದಿಂದಲೂ ಅಂದರೆ ಆದಿ ಮಾನವನಾಗಿದ್ದಾಗಿಂದಲೂ ಮಾನವ ತನ್ನ ಪ್ರಕೃತಿ ಸಹಜ ಲೈಂಗಿಕಾಸಕ್ತಿಗಳಿಗಾಗಿ ಮತ್ತು ವಂಶಾಭಿವೃದ್ಧಿಗಾಗಿ ಈ ವಿವಾಹ ಸಂಪ್ರದಾಯವನ್ನು ರೂಢಿಸಿ ಬುದ್ಧಿಜೀವಿಯಾದಂದಿನಿಂದಲೂ ತನ್ನ ಜೀವನದಲ್ಲಿ ಹಲವಾರು ರೂಪಾಂತರಗಳನ್ನು ತನ್ನಲ್ಲಿ ರೂಢಿಸಿಕೊಂಡಿದ್ದಾರೆ. ಮದುವೆ ಗಂಡು ಹೆಣ್ಣಿನ ಮಿಲನಕ್ಕೆ ಒಂದು ಪೂರ್ವ ನಿಯೋಜಿತ ಕಟ್ಟುಪಾಡು. ಈ ಬಂಧನಕ್ಕೆ ಹಲವಾರು ವಿಧಿ, ವಿಧಾನ, ಪದ್ಧತಿ, ರೂಢಿ, ಸಂಪ್ರದಾಯ ಕಟ್ಟುಪಾಡುಗಳನ್ನು ಶಿಷ್ಟವಾಗಿ ರೂಪಿಸಿರುವುದಕ್ಕಿಂತ ಮಿಗಿಲಾಗಿ ನಮ್ಮ ಜನಪದರು ಮದುವೆ ವ್ಯವಸ್ಥೆ ಮಾಡಿದ್ದಾರೆ (ಲೇ: ಸುಜಾತ ಅಕ್ಕಿ, ಸುರಿಗಿ ಸುವ್ವಾಲೆ, ಪುಟ, ೯).

ಭಾರತೀಯ ಸಂಸ್ಕೃತಿಯಲ್ಲಿ ಹಲವಾರು ಧರ್ಮಗಳು, ಬುಡಕಟ್ಟು ಜನಾಂಗಗಳಿದ್ದರೂ ಅವು ಆಚರಣೆಗಳಲ್ಲಿ ತಮ್ಮದೇ ಆದ ವೈವಿಧ್ಯತೆಯನ್ನು ಪಡೆದುಕೊಂಡಿವೆ. ಯಾವ ಧರ್ಮ ಗ್ರಂಥಗಳು ಮಾನವೀಯತೆ ಬಿಟ್ಟು ಏನನ್ನೂ ಹೇಳುವುದಿಲ್ಲ. ಹೇಳುವ ವಿಧಾನದಲ್ಲಿ ಬೇರೆ ಬೇರೆಯಾಗಿರಬಹುದು. ಆದರೆ ಗುರಿ ಒಂದೇ. ಧಾರ್ಮಿಕ ಆಚರಣೆಯೊಂದಿಗೆ ಪ್ರಕೃತಿ ಸಹಜವಾದ ಆಸಕ್ತಿಯೊಂದಿಗೆ ಮಾನವನು ಎಲ್ಲವನ್ನು ಸಂಪ್ರದಾಯಗಳ ಮೂಲಕ ಅದನ್ನು ರೂಢಿಗೆ ತಂದಿದ್ದಾರೆ. ಅದು ಎಲ್ಲ ಜನಾಂಗಗಳಲ್ಲಿಯೂ ಅಸ್ತಿತ್ವದಲ್ಲಿ ಇದೆ. 'ವಿವಾಹ' ರೂಢಿಯಿರದ ಜನಾಂಗ ಎಲ್ಲಿಯೂ ಇಲ್ಲ. ಅದು ಒಂದು ಪರಿಪೂರ್ಣವಾದ ಹಂತ. ಈ ಹಂತದಿಂದಲೂ ಹಲವಾರು ರೀತಿಯ ಬದಲಾವಣೆಗಳು ಮಾನವನಲ್ಲಿ ಆಗುವುದು ಸಹಜ. ಆಸೆ, ಆಕಾಂಕ್ಷೆ, ವಂಶಾಭಿವೃದ್ಧಿ ಈ ಎಲ್ಲವೂ ವಿವಾಹದ ಹಂತ. ಮಾನವನ ಬಾಳಿಗೆ ಹೊಸತನವನ್ನು ನೀಡುತ್ತದೆ.

ಪ್ರತಿಯೊಂದು ಜನಾಂಗದ ಮನೋಧರ್ಮವನ್ನು ಅನುಸರಿಸಿ ಆಯಾ ಸಂಸ್ಕೃತಿಯ ನೆಲೆಯನ್ನು ಅವಲಂಬಿಸಿ ವೈವಾಹಿಕ ಪದ್ಧತಿಗಳು ಮೂಡಿ ಬರುತ್ತವೆ. ಮೂಲಭೂತವಾದ ಅಗತ್ಯಗಳ ಬಗ್ಗೆ ವೈವಿಧ್ಯತೆ ಇರದು ಅಸ್ಪಷ್ಟತೆಯೂ ಇರದು. ಸಂಪ್ರದಾಯಗಳು ಮೂಡಿ ಬಂದಿದ್ದರೂ ಗೌಣವಾದ ಪದ್ಧತಿಗಳಲ್ಲಿ ವಿಪುಲವಾದ ಮತ್ತು ಸ್ವಾರಸ್ಯಕರವಾದ ವೈವಿಧ್ಯಗಳಿವೆ. ದೇಶಾಚಾರ. ಕಾಲಾಚಾರ, ವರ್ಣವ್ಯವಸ್ಥೆ, ವೃತ್ತಿ ವೈವಿಧ್ಯ ಇವೆಲ್ಲವೂ ಮದುವೆಯ ಪದ್ಧತಿಗಳಲ್ಲಿ ಸೇರಿ ಬರುತ್ತವೆ. ಸರ್ವ ಸಾಧಾರಣವಾದ ಒಂದೇ ವಿವರವೆಂದರೆ ವಿವಾಹದ ಧಾರ್ಮಿಕ ಸ್ವರೂಪ. ಇದರಿಂದಾಗಿ ಮದುವೆಯ ಪದ್ಧತಿಗಳಲ್ಲಿ ಸಂಕೇತ ಪ್ರಮುಖವಾಗಿ ಇರುತ್ತವೆ (ಲೇ: ಸುಜಾತ ಅಕ್ಕಿ, ಸುರಿಗಿ ಸುವ್ವಾಲೆ, ಪುಟ, ೧೧). ಈ ರೀತಿ 'ಮದುವೆ' ಬೆಳೆದುಕೊಂಡು ಬಂದ ಪರಂಪರೆ. ಆದರೆ ರಂಗನಟಿಯರ ಜೀವನದಲ್ಲಿ ಅದು ಬೇರೆ ರೂಪಾಂತರ ಪಡೆದು ರಂಗನಟಿಯರಿಗೆ ಇದೊಂದು ವಿಚಿತ್ರ ಅನುಭವ. ಇವರನ್ನು ಮದುವೆಯಾಗಲು ಮುಂದೆ ಯಾರೂ ಹೆಚ್ಚು ಕಡಿಮೆ ಬರಲಾರರು. ಬಂದರೂ ಒಂದು ವೇಳೆ ಪೈಶಾಚಿಕ ವರ್ತನೆಗಳಿಂದ ಕೂಡಿರುವ ಪುರುಷರೇ ನಾಟಕ ಮಾಡಿ ಮೋಹಪಾಶಕ್ಕೆ ನಟಿಯರನ್ನು ಬಲಿತೆಗೆದುಕೊಂಡು ನಟಿಯರನ್ನು ಪಶುಗಳಂತೆ ನೋಡುವ ಮನಸ್ಥಿತಿಯ ಪುರುಷರೇ ಇವರಿಗೆ ಹೆಚ್ಚಾಗಿ ಸಂಗಾತಿಗಳಾಗಿ ಸಿಗುತ್ತಾರೆ. ನಟಿಯನ್ನು ಬ್ಲಾಕ್‌ಮೇಲ್ ಮಾಡಲೋ ಅಥವಾ ಆಕೆಯ ಹಣವನ್ನು ನಿರೀಕ್ಷಿಸಿ ಕೊಂಡು ನಾನು ನಿನ್ನ ಯಜಮಾನ ನಿನಗೆ ಒಳ್ಳೆಯ ಸ್ಥಾನ ಗೌರವ ನೀಡುತ್ತೇನೆಂದು ಪ್ರೇಮಿಸಿ, ಮೋಹಿಸಿ, ಹಳ್ಳಕ್ಕೆ ದಬ್ಬುವ ಮಹಾನ್ ಘಟಾನುಘಟಿ ಪುರುಷವರ್ಗವೇ ನಮ್ಮ ಸಮಾಜದಲ್ಲಿ ತಲೆ ಎತ್ತಿ ನಿಂತಿರುತ್ತದೆ. ಹೆಣ್ಣು ಏನೇ ಆದರೂ ಅವಳು ಕುಲೀನಳಾಗಿ ಇಂತಹ ಮನೋಧರ್ಮ ಸಮಾಜದೊಂದಿಗೆ ಇದ್ದಾಗ, ಅದು ಶ್ರೇಣೀಕರಣದಲ್ಲಿ ತೀರ ಕೆಳಹಂತದ ಹೆಣ್ಣುಮಕ್ಕಳ ಸ್ಥಿತಿ ಶೋಚನೀಯ.

ಸೌಜನ್ಯಕ್ಕೆ ಪ್ರತೀಕವಾದ ಕೆಲವು ಹೆಣ್ಣುಮಕ್ಕಳು ಈ ಪುರುಷಪ್ರಧಾನ ಮೌಲ್ಯಗಳ ನಡುವೆ ಪುಟಿದೆದ್ದು ಶೋಷಣೆಯನ್ನು ಪ್ರತಿಭಟಿಸಿ ಬಾಳ್ವೆ ಮಾಡಿಕೊಂಡವರಿದ್ದಾರೆ. ಎಲ್ಲದಕ್ಕೂ ಒಂದು ಮಿತಿ ಇರಬೇಕು. ಈ ಒತ್ತಡ-ಹೇರಿಕೆಗಳಿಗೂ ಒಂದು ಮಿತಿ ಇರುತ್ತದೆ. ಅದು ಮೀರಿದಾಗ ಎಲ್ಲರ ಮನದಾಳದ ಚೇತನಾಶಕ್ತಿ ಸುಮ್ಮನಿರಲು ಬಿಡುವುದಿಲ್ಲ. ಇಂಥ ಒತ್ತಡಕ್ಕೆ ಸಿಲುಕಿರುವ ನಟಿ ದುರಂತನಟಿಯಾಗಿ ಇಲ್ಲವೆ ಶೋಷಣೆವಿರುದ್ಧ ಸೆಟೆದುನಿಂತು ಎಲ್ಲವನ್ನು ತೆಕ್ಕೆಗೆ ತೆಗೆದುಕೊಂಡು ವೈರುಧ್ಯವಾಗಿ ನಿಂತು ಜೀವನದಲ್ಲಿ ಏನೇ ಕಷ್ಟಬಂದರೂ ಪ್ರವಾಹದ ವಿರುದ್ಧ ಈಜಿ ದಡಮುಟ್ಟಿದವರೂ ಬಹಳ ಜನ ಇದ್ದಾರೆ. ಸಂಸಾರವೆಂಬುದು ಒಂದು ಸಾಗರ. ಈ ಸಮುದ್ರದಲ್ಲಿ ಮುತ್ತುಗಳು ಸಿಗಲು ಕೊನೆಯವರೆಗೂ ನಟಿಯರು ಹೆಣಗಲೇ ಬೇಕು. ಇದರಲ್ಲಿ ಗೆದ್ದವರು ಕೆಲವರು, ಬಿದ್ದವರೇ ಹೆಚ್ಚು. ಪೂರ್ತಿ ಪ್ರಪಾತಕ್ಕೆ ಬಿದ್ದವರು ಇನ್ನೂ ಕೆಲವರು, ಸಾವರಿಸಿಕೊಂಡು ತೆವಳುತ್ತಾ ತೆವಳುತ್ತಾ ಸಾಗಿ ಬಂದವರು ಇನ್ನೂ ಕೆಲವರು. ಏಳಲೂ ಆಗದೇ ಬೀಳಲೂ ಆಗದೇ ಅರ್ಧಕ್ಕೆ ನಿಂತುಕೊಂಡು ಜೀವನ ನಿರ್ವಹಿಸಿದ ನಟಿಯರೇ ಹಲವರು.

ರಂಗನಟಿಯರ ವೈವಾಹಿಕ ಬದುಕಿನಲ್ಲಿ ವಿಧಿಯಾಟವೆಂಬಂತೆ ವ್ಯತಿರಿಕ್ತ ಸಂಸಾರಗಳೇ ಹೆಚ್ಚು. ಅದರಲ್ಲಿ ಕೆಲವೊಂದಿಬ್ಬರಿಗೆ ಒಳ್ಳೆಯ ಪತಿ ಸಿಕ್ಕು ಅವರ ಜೀವನವೂ ಪಾವನವಾಗಿದೆ. ಆದರೆ ಬಹುತೇಕ ರಂಗನಟಿಯರ ಬದುಕು ಊಹಿಸಲಸದಳ. ಅಂಥವರನ್ನು ಪ್ರತ್ಯಕ್ಷ ಸಂದರ್ಶನ ಮಾಡಿದಾಗ ಅವರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ನಾವು ಎಷ್ಟೋ ಸಲ ಪ್ರಯತ್ನಿಸಿದ್ದೇವೆ ನಮ್ಮ ಬದುಕನ್ನು ಅರ್ಥಪೂರ್ಣಗೊಳಿಸಿ ಕೊಳ್ಳಬೇಕೆಂದು ನಮ್ಮ ಸಮಾಜವು ನಮ್ಮನ್ನು ಹಳ್ಳಕ್ಕೆ ದೂಡಿದೆ ಎಂದು ದುಃಖಿಸಿ ಹೇಳುತ್ತಾರೆ.

ಬದುಕಿನಲ್ಲಿ ನಮಗೆ ಯಾವುದೇ ಭದ್ರತೆ ಇಲ್ಲದೆ ಹಾಗೆಯೇ ಸಾಗಿಕೊಂಡು ಬಂದಿದ್ದೇವೆ. ನಾವು ನಮ್ಮ ಮಕ್ಕಳು ಬೀದಿಪಾಲು ಆಗಬಾರದು. ಆದ್ದರಿಂದ ಸರಕಾರ ನಮಗೇನೂ ಸಹಾಯ ಮಾಡದಿದ್ದರೂ ನಮ್ಮ ಮಕ್ಕಳಿಗಾದರೂ ನೌಕರಿಯನ್ನು ಕೊಟ್ಟರೆ ನಮ್ಮ ಬಾಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಸಮಾಜದಿಂದಲೂ ನಾವು ಕೀಳು. ಸರಕಾರವೂ ಕೂಡ ನಮಗೆ ಈ ವ್ಯವಸ್ಥೆಯಲ್ಲಿ ಕೀಳು ಮಾಡಬಾರದಲ್ಲ. ಸರ್ಕಾರ ನಮಗೆ ಮಾನವೀಯ ದೃಷ್ಟಿಯಿಂದ ಕರುಣೆ ತೋರಿದರೆ ಸಾಕು (ಟಿ.ಬಸಮ್ಮ, ಭಾರತಿ ಕೂಡ್ಲಿಗಿ, ಕ್ಷೇತ್ರಕಾರ್ಯಕ್ಕೆ ಹೋದಾಗ ಸಂದರ್ಶನ, ೨೦೦೧).

ಹಲವಾರು ಇಂಥ ಕ್ಲಿಷ್ಟ ಸಮಸ್ಯೆಗೆ ಮದುವೆ ಅಥವಾ ಸಂಗಾತಿಗಳು ರಂಗನಟಿಯರನ್ನು ಹಳ್ಳಕ್ಕೆ ದೂಡಿ ಬಿಟ್ಟಿರುತ್ತಾರೆ. ಆದ್ದರಿಂದ ಇವರಿಗೆ ಬೇರೆ ರೀತಿಯ ಪರಿಹಾರದ ಹಾದಿ ಎಂದರೆ ಸರಕಾರದಿಂದಲೇ ರಂಗನಟಿ ಯರಿಗೆ ಆರ್ಥಿಕ ಭದ್ರತೆ ಒದಗಬೇಕು. ಅಂದಾಗ ಮಾತ್ರ ಅವರೂ ಎಲ್ಲರಂತೆ ಸಮಾಜದಲ್ಲಿ ತಲೆ ಎತ್ತಿ ಬದುಕಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ವ್ಯವಸ್ಥೆಯದು ಒಂದು ತಪ್ಪಾದರೆ, ಸರಕಾರದ್ದು ಮತ್ತೊಂದು ತಪ್ಪಾಗುತ್ತದೆ. ಸರಕಾರ ನಿರ್ಲಕ್ಷ್ಯ ಧೋರಣೆಯನ್ನು ತಳೆದರೆ ರಂಗನಟಿಯರ ಬಾಳಿಗೆ ಗಾಯದ ಮೇಲೊಂದು ಬರೆಹಾಕಿದಂತಾಗುತ್ತದೆ.

ರಂಗಭೂಮಿಯ ಸಂಶೋಧಕ ಗವೀಶ ಹಿರೇಮಠರು ಹೇಳುವಂತೆ, "ಹೊಸಪೇಟೆ ಸರಸ್ವತಮ್ಮ ತಮ್ಮ ಸ್ವಂತ ಪ್ರಯತ್ನ, ಪರಿಶ್ರಮ, ಶ್ರದ್ಧೆಯಿಂದ ಬೆಳೆದು ನಿಂತಿದ್ದಾರೆ. ಇವರ ಬದುಕನ್ನು ನಾನು ಬಹು ಹತ್ತಿರದಿಂದ ನೋಡಿದ್ದೇನೆ. ಪತಿ ಅಮೀರಸಾಬ ಉತ್ತಮ ಕಲಾವಿದರಿದ್ದಂತೆಯೇ ಕುಡಿತದ ದೌರ್ಬಲ್ಯಕ್ಕೆ ಒಳಗಾದರು. ನಿತ್ಯ ಕುಡಿದು ಮನೆಗೆ ಬಂದಾಗ ಸರಸ್ವತಮ್ಮ ಚಿಕ್ಕಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಉಪವಾಸ-ವನವಾಸ ಕಳೆದ ಪ್ರಸಂಗಗಳು ಸಾಕಷ್ಟು. ಅಮೀರಸಾಬರು ಪ್ರತಿದಿನ ಜಗಳ ಮಾಡದೇ ಇರುತ್ತಿರಲಿಲ್ಲ. ಏನೇ ದುಃಖ ಬರಲಿ ಅದನ್ನು ಸಹಿಸಿಕೊಳ್ಳುವ, ತಾವೇ ನಿವಾರಣೆ ಮಾಡಿಕೊಳ್ಳುವ ಸರಸ್ವತಮ್ಮನವರ ಮನಸ್ಸಿನ ಸ್ಥಿತಿಯನ್ನು ಮಾತ್ರ ಮೆಚ್ಚಬೇಕು. ಈ ಸಣ್ಣ ಪುಟ್ಟ ಪ್ರಸಂಗಗಳು ಸಹಜವೆಂದು ತಿಳಿದು ಅವರು ಅವುಗಳ ಬಗೆಗೆ ಗಂಭೀರವಾಗದೇ ಉದಾಸೀನರಾಗುತ್ತಿದ್ದರು. ಕುಡಿತದಲ್ಲಿಯೇ ಅಮೀರಸಾಬ ಕೊನೆಯ ಉಸಿರು ಎಳೆದಾಗ ಮಕ್ಕಳೆಲ್ಲರನ್ನು ಕಟ್ಟಿಕೊಂಡು ಕಷ್ಟದ ದಿನಗಳಲ್ಲಿಯೂ ಅವರಿಗೆ ಓದಿಸಿ ಬೆಳೆಸಿದ ಸಾಹಸ ಇವರದು" (ಲೇ: ಗವೀಶ ಹಿರೇಮಠ, ರಂಗಕುಸುಮಗಳು, ಪುಟ, ೮೬).

ಹೀಗೆ ಕಷ್ಟಗಳನ್ನು ಎದುರಿಸಿದ ಸರಸ್ವತಮ್ಮ ತಮ್ಮ ಹಿರಿಯ ಮಗಳನ್ನು ಪಿ.ಯು.ಸಿ.ವರೆಗೆ ಓದಿಸಿ 'ಎಳೆಗರುಂ ಎತ್ತಾಗದೇ ಲೋಕದೋಳ್' ಎಂಬಂತೆ ಹುಬ್ಬಳ್ಳಿಯಲ್ಲಿ ಉತ್ತಮ ಕಲಾವಿದೆಯನ್ನಾಗಿ ಮಾಡಿದ್ದಾರೆ. ಕಷ್ಟದ ಬದುಕಿಗೆ ಬೆನ್ನುತಿರುಗಿಸಿದವರೇ ಹೆಚ್ಚು. ಆದರೆ ಸರಸ್ವತಮ್ಮ ಕಷ್ಟದ ಬದುಕಿಗೆ ಮುಖಮಾಡಿ ನಿಂತು ಮೇಲೆದ್ದ ಮೇರುನಟಿಯಾಗಿ ರಂಗಭೂಮಿಯಲ್ಲಿ ಬಾಡಲಾರದ ರಂಗಕುಸುಮವಾಗಿದ್ದಾರೆ.

ಮರಿಯಮ್ಮನ ಹಳ್ಳಿಯ ಕೆ. ನಾಗರತ್ನಮ್ಮ ಹೇಳುವಂತೆ. ಬಾಳು ಬೆಳಗಿದ ಸತಿ, ಪತಿ ಸಂಸಾರದ ಕಣ್ಣು. ಸೌಭಾಗ್ಯಲಕ್ಷ್ಮಿ ಸ್ತ್ರೀರತ್ನ, ಗಂಡನ ಮನೆ, ಧರ್ಮದೇವತೆ, ಪ್ರೇಮಬಂಧನ, ಗಂಡನ ಆಜ್ಞೆ, ಇಂತಹ ಹೆಸರಿನ ನೂರಾರು ನಾಟಕಗಳಲ್ಲಿ ನಾನು ನಟನೆ ಮಾಡಿದ್ದೇನೆ. ಸಂಸಾರ ಸುಖಸಾಗರವಾಗಲಿ ಎಂಬ ಉದ್ದೇಶ ಹೊತ್ತ ನಾಟಕಗಳಿವೆ. ಇಂಥ ನಾಟಕಗಳಲ್ಲಿ ಪಾತ್ರವಹಿಸುವ ಮಹಿಳೆಯರ ಸಂಸಾರವೆಲ್ಲ ಸುಖಮಯವಾಗಿ ಹೇ? ಸಂಸಾರದ ಸುಖವನ್ನೇ ಕಂಡರಿಯದ, ವಿರಾಗಿನಿಯಾಗಿ ಬದುಕಿದ್ದರೂ ಕೆಲವರು ಕಾಣುವ ಕಣ್ಣು ಅವಕ್ಕೆ ವಿರೋಧವಾಗಿರುತ್ತವೆ. ಕಲಾವಿದೆಯರನ್ನು ಮದುವೆಯಾಗುವ ಆದರ್ಶ ಹೊತ್ತವರೂ ಸಹ ನಂತರದಲ್ಲಿ ಮನೆಯವರ ಒತ್ತಡಗಳಿಗೆ ಹೆದರಿ ಮತ್ತು ಮರು ಮದುವೆಯಾದ ಪ್ರಸಂಗಗಳೂ ಇವೆ. ಕೆಲವರು ಮತ್ತೆ ಮರು ಮದುವೆಯಾಗದಿರಬಹುದು. ಆದರೆ ಕಲಾವಿದೆಯ ಮುಂದಿನ ಜೀವನ ಅರಳದ ಹಾಗೆ ತುಳಿದವರಿದ್ದಾರೆ.

ಕಲಾವಿದೆಯರಿಗೆ ಮದುವೆಯಾಗಿರುವ ಸಂಗಾತಿಗಳೇ ಸಿಗುವುದು ಹೆಚ್ಚು. ಇವರ ಕಲಾಜೀವನಕ್ಕೆ ಅಡ್ಡಿ ಪಡಿಸದೆ ಪ್ರೀತಿಯಿಂದ ಕಂಡರೆ ಸಾಕು. ಕಲಾವಿದರು ಅಲ್ಪತೃಪ್ತರು. ಅಷ್ಟರಿಂದಲೂ ವಂಚಿತರಾದವರೇ ಹೆಚ್ಚು. ಅರ್ಥಮಾಡಿಕೊಂಡು ಸಹಕರಿಸುವ ವ್ಯಕ್ತಿಗಳೇ ಸಿಗದಿದ್ದಾಗ ಕಲಾವಿದರಾದರೂ ಏನು ಮಾಡಬೇಕು. ಅವರ ಬದುಕಿನ ಅನೇಕ ಗೊಂದಲಗಳ ವಿಧಿಯಾಟವೇ ಕಾರಣವಾಗಿರುತ್ತದೆ. ಸದಾ ಮುಳ್ಳಿನ ಮೇಲೆ ನಿಂತ ಜೀವನ ನಮ್ಮ ಕಲಾವಿದೆಯರದು (ನಿರೂ: ಗುಡಿಹಳ್ಳಿ ನಾಗರಾಜ, ಮರಿಯಮ್ಮನಹಳ್ಳಿ ರಂಗಸಿರಿ, ಪುಟ, ೯೧).

ನಟಿಯರ ಸಂಗಾತಿಗಳು ಸಹಕರಿಸದವರೇ ಹೆಚ್ಚಾಗಿ ಸಿಗುತ್ತಾರೆ. ಹೀಗಿದ್ದಾಗ ಪುರುಷ ಪ್ರಧಾನ ಸಮಾಜದಲ್ಲಿ ರಂಗನಟಿಯರ ಪಾಡನ್ನು ಕೇಳುವವರ್‍ಯಾರು? ಶ್ರೇಣೀಕರಣದಲ್ಲಿ ಕೆಳಗಿದ್ದು ಸಮಾಜದಲ್ಲಿ ಕೆಳಸ್ಥಾನ ಪಡೆದಿರುವ ಜಾತಿಯವರಲ್ಲಿ ಅದು ಹೆಣ್ಣು ಮಕ್ಕಳ ಸ್ಥಾನಕ್ಕೆ ಬೆಲೆ ಕೊಡುವವರ್‍ಯಾರು? ಕೊಟ್ಟರೂ ಅದು ರಂಗದ ಮೇಲೆ ವೇದಿಕೆಯಲ್ಲಿಯ ಕೆಲವು ಕ್ಷಣಗಳೇ ಇವರಿಗೆ ಸಂತಸದ ಹಬ್ಬಗಳು. ಈ ವೇದಿಕೆಗಳು ನಿರಂತರವಾಗಿರುವುದಿಲ್ಲ. ಅವು ಜೀವನವನ್ನು ಕೊಡುವುದಿಲ್ಲ. ರಂಗವೇ ಬೇರೆ ಜೀವನವೇ ಬೇರೆ. ಆದ್ದರಿಂದ ಇಂದಿನ ನಮ್ಮ ರಂಗ ನಟಿಯರ ಬದುಕು ನಿಕೃಷ್ಟವಾಗಿ ಸಾಗಿದೆ.

ಅಂತರ್‌ಜಾತಿಯ ವೈವಾಹಿಕ ಸಂಬಂಧಗಳು : ನಟಿಯರು ಹೆಚ್ಚಾಗಿ ಅಂತರ ಜಾತೀಯ ವೈವಾಹಿಕ ಸಂಬಂಧಗಳನ್ನೇ ಮಾಡಿಕೊಂಡಿದ್ದಾರೆ. ಹೆಚ್ಚಾಗಿ ನಟಿಯರು ಕೆಳವರ್ಗದಿಂದ ಬಂದವರಾಗಿದ್ದು, ಇವರನ್ನು ವರಿಸಿರುವ ಕೆಲ ಪುರುಷರು ಉನ್ನತ ವರ್ಗದವರಾಗಿದ್ದಾರೆ. ಇವರ ಪತಿಯ ಜೊತೆಗಷ್ಟೇ ಇವರ ಸಂಬಂಧ

ವಿರುತ್ತದೆಯೇ ವಿನಃ ಪತಿಯಮನೆಯಲ್ಲಿ ಎಲ್ಲ ಪರಿಸರದೊಂದಿಗೆ ಸಂಬಂಧವೇ ಇರುವುದಿಲ್ಲ. ಕೆಲವೊಮ್ಮೆ ನಟಿಯರನ್ನು ಮದುವೆ ಮಾಡಿಕೊಂಡಿರುವ ಪುರುಷರು ತಮ್ಮ ಮನೆಯನ್ನು ಬಿಟ್ಟು ನಟಿಯರೊಂದಿಗೆ ಜೀವನ ಸಾಗಿಸಿದವರಿದ್ದಾರೆ.

ಇಂದು ಅಂತರ್‌ಜಾತೀಯ ವಿವಾಹಗಳು ಸಮಾಜದಲ್ಲಿ ಆಗೊಂದು, ಈಗೊಂದು ನಡೆಯುತ್ತಿದ್ದರೂ ಅವುಗಳ ವ್ಯವಸ್ಥೆಯಲ್ಲಿ ಮಾನ್ಯತೆ ಕಡಿಮೆ. ಒಂದು ವೇಳೆ ಇಬ್ಬರಲ್ಲಿ ಒಬ್ಬರಿಗೆ ಆರ್ಥಿಕ ಭದ್ರತೆ ಇದ್ದರೆ ಅವರ ಜೀವನಕ್ಕೆ ತೊಂದರೆ ಕಡಿಮೆ. ಆದರೆ ಇಬ್ಬರೂ ನಿರುದ್ಯೋಗಿಗಳು ಮದುವೆ ಮಾಡಿಕೊಂಡಿದ್ದರೆ ಇಬ್ಬರ ಮನೆಯಲ್ಲಿ ಅವರನ್ನು ಸ್ವೀಕರಿಸದಿದ್ದರೆ ಪರಿಸ್ಥಿತಿಯು ಗಂಭೀರವಾಗಿರುತ್ತದೆ. ಆದರೆ ಕಾನೂನಿನ ಮನ್ನಣೆಯೊಂದೇ ಇರುವುದರಿಂದ ಸಮಾಜದಲ್ಲಿ ಅಂತರ್‌ಜಾತೀಯ ಮದುವೆ ಮಾಡಲು ಸಂಪ್ರದಾಯಸ್ಥರ ಮನಸ್ಸುಗಳು ಒಪ್ಪಲಾರವು. ಆದ್ದರಿಂದ ಅಂತರ್ ಜಾತೀಯ ಮದುವೆಗಳು ಮುರಿದು ಬೀಳುವ ಸಾಧ್ಯತೆಗಳೇ ಹೆಚ್ಚಾಗಿರುತ್ತವೆ. ಕೆಲವೊಮ್ಮೆ ಅಂತರ್ ಜಾತೀಯ ಮದುವೆಗಳು ಯಶಸ್ವಿಯಾಗಿದ್ದರೂ ಮಕ್ಕಳಾಗಿ ಅವರು ದೊಡ್ಡವರಾದ ಮೇಲೆ ಅವರ ವಿರೋಧವನ್ನು ಅವರ ಮಾತನ್ನು ಕೇಳಿಸಿಕೊಳ್ಳುವ ಅನಿವಾರ್ಯತೆ ತಂದೆ ತಾಯಿಗಳಿಗಿರುತ್ತದೆ. ನಮ್ಮ ವ್ಯವಸ್ಥೆಯು ಅಷ್ಟು ಸುಲಭವಾಗಿ ಏನನ್ನು ಬಿಟ್ಟುಕೊಡುವುದಿಲ್ಲ. ಅದೇನೇ ಇದ್ದರೂ ಮಾನವೀಯತೆಯಾಗಿದ್ದರೂ ಮೌಲ್ಯಗಳಿಗೆ ಮಾತ್ರ ಪೆಟ್ಟು ಬೀಳಬಾರದು. ಮೌಲ್ಯಗಳಿಗೆ ಪೆಟ್ಟುಬಿದ್ದರೆ ಅಲ್ಲಿ ವ್ಯವಸ್ಥೆ ಬಿರುಕು ಬಿಟ್ಟಂತೆ. ಭಾರತೀಯ ಸಂಪ್ರದಾಯಗಳು ೨೧ನೇ ಶತಮಾನದಲ್ಲಿದ್ದರೂ ಸಮಾಜದ ಸಂಪ್ರದಾಯಗಳು ತುಂಬಾ ಕಟ್ಟುಬದ್ಧವಾಗಿವೆ. ಆದ್ದರಿಂದ ವೈವಾಹಿಕ ಅಂತರ್‌ಜಾತೀಯ ಸಂಬಂಧಗಳು ಕೆಲವೊಂದನ್ನು ಬಿಟ್ಟರೆ ಹಲವಾರು ಕಡೆ ಅವು ಮುರಿದುಬಿದ್ದಿವೆ. ತಮ್ಮ ಮೌಲ್ಯವನ್ನು ಕಳೆದುಕೊಂಡಿವೆ. ಕಾರಣ ಮಾನವ ಸಮಾಜವನ್ನು ಬಿಟ್ಟು ಬದುಕಲಾರ. ಸಮಾಜದ ಒಳಗೆ ಇರುವುದರಿಂದ ಸಮಾಜ ಮಾಡಿರುವ ನಿಯಮಗಳನ್ನು ಅಪ್ರತ್ಯಕ್ಷವಾಗಿ ಆ ವ್ಯಕ್ತಿಗಳು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆ ಇಲ್ಲಿದೆ.

ಕಲಾಸಕ್ತರೊಂದಿಗೆ ಮದುವೆಯಾದದ್ದು

ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ನಟಿಯರು ಕಲಾಸಕ್ತರೊಂದಿಗೆ ಮದುವೆಯಾಗಿದ್ದು, ಕಲಾಸಕ್ತರಲ್ಲಿ ಕೆಲವರು ನಟಿಯರಿಗೆ ಪ್ರೋತ್ಸಾಹವನ್ನು ನೀಡಿ ಇನ್ನೂ ಕೆಲವರು ಅವರಿಗೆ ಪ್ರೋತ್ಸಾಹಿಸದೇ ಅವರನ್ನು ದುಡಿಯುವ ಯಂತ್ರವನ್ನಾಗಿಸಿಕೊಂಡು ನಟಿಯರನ್ನು ಬಳಸಿಕೊಂಡಿರುವ ಉದಾಹರಣೆಗಳು ಹಲವಾರು ಇವೆ. ಕಲಾಸಕ್ತರು ರಂಗಭೂಮಿಯಲ್ಲಿ ಏನನ್ನಾದರೂ ಸಾಧಿಸಬೇಕು. ಹೊಸರೀತಿಯ ಪರಂಪರೆಯನ್ನು ಕಟ್ಟಬೇಕೆಂದು ನಟಿಯರನ್ನೇ ಜೀವನ ಸಂಗಾತಿಗಳನ್ನಾಗಿಸಿಕೊಂಡಿದ್ದಾರೆ.

ಬಳ್ಳಾರಿ ಲಲಿತಮ್ಮ, ಯಳ್ಳಾರ್ತಿ ಚಾಮುಂಡೇಶ್ವರಿ, ಕೆ.ನಾಗರತ್ನಮ್ಮ, ನಾಗರತ್ನಮ್ಮ ಹೊಸಮನಿ ಕೊಟ್ಟೂರು, ಹೊಸಪೇಟೆ ಸರಸ್ವತಮ್ಮ, ಮನ್ನೂರು ಸುಭದ್ರಮ್ಮ, ಬಿ.ಶಿವಕುಮಾರಿ, ಬಳ್ಳಾರಿ ಸುಜಾತಮ್ಮ ಮುಂತಾದವರು ಕಲಾಸಕ್ತರನ್ನೇ ಮದುವೆಯಾಗಿ ರಂಗಜೀವನವನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ.

ಹೀಗೆ ನಟಿಯರು ಕಲಾಸಕ್ತರನ್ನು ಮದುವೆ ಮಾಡಿಕೊಂಡು ಅವರು ಕಟ್ಟಿರುವ ನಾಟಕ ಕಂಪನಿಗಳಲ್ಲಿ ನಾಯಕಿ ಪಾತ್ರವನ್ನು ಮಾಡಿ ಕಲಾವಿದರಿಗೆ ಉಪಪತ್ನಿಯರಾಗಿದ್ದುಕೊಂಡು ವೃತ್ತಿಕಂಪನಿಗಳನ್ನು ಮುನ್ನಡೆಸಿದವರೆಷ್ಟೋ ರಂಗನಟಿಯರಿದ್ದಾರೆ. ನಟಿಯರು ತಂಡಗಳನ್ನು ಹಾಗೂ ಮಂಡಳಿಗಳನ್ನು ಯಶಸ್ವಿ ಯಾಗಿ ನಡೆಸಿಕೊಂಡು ಸಹ ನಟರನ್ನು ಕುಟುಂಬದ ಸದಸ್ಯರಂತೆ ಕಂಡು ಕಂಪನಿ ಎಂದರೆ ಒಂದು ಅವಿಭಕ್ತ ಕುಟುಂಬವೆಂಬಂತೆಯೂ ವರ್ತಿಸುವವರಿದ್ದಾರೆ. ಕೆಲವರು ಕಂಪನಿಯನ್ನು ಬದಲಾಯಿಸಿ, ಸಂಗಾತಿಗಳನ್ನು ಬದಲಾಯಿಸಿ ಕಂಪನಿಗಳು ಮುಚ್ಚಿಕೊಂಡು ಹೋಗುವಂತೆಯೂ ಮಾಡಿದ್ದಾರೆ. ಇನ್ನೂ ಕೆಲವೊಮ್ಮೆ ಕಲಾಸಕ್ತರಾದ, ನಟರೂ ಆದ ಕಂಪನಿ ಮಾಲೀಕರು ಇಬ್ಬರು, ಮೂವರು ರಂಗ ನಟಿಯರನ್ನೇ ಉಪಪತ್ನಿ ಯರನ್ನಾಗಿ ಸ್ವೀಕರಿಸುತ್ತಿದ್ದರು. ಎಷ್ಟೋ ನಟಿಯರು ತಾವು ಕಲಾವಿದೆಯರಾಗಿದ್ದುಕೊಂಡೇ ಅವರಿಗೆ, ಅವರ ಕಂಪನಿಗೆ ಚ್ಯುತಿಬಾರದ ರೀತಿಯಲ್ಲಿ ಜೀವನ ಸಾಗಿಸಿರುವ ಹಲವಾರು ರಂಗನಟಿಯರ ಉದಾಹರಣೆಗಳಿವೆ.

ಹಿರಣ್ಣಯ್ಯನವರು ಹನ್ನೆರಡು ವರ್ಷ ಕಂಪನಿ ನಡೆಸಿದರು. ಎಲ್ಲ ರೀತಿಯ ಕಷ್ಟನಷ್ಟಗಳಲ್ಲಿ ನೋವು ನಲಿವುಗಳಲ್ಲಿ ಲಲಿತಮ್ಮನವರು ಅವರಿಗೆ ಆಸರೆಯಾಗಿದ್ದರು. ೧೯೫೩ರ ಮಾರ್ಚ್‌ನಲ್ಲಿ ಕಂಪನಿ ಮಡಿಕೇರಿಯಲ್ಲಿ ಕ್ಯಾಂಪ್ ಮಾಡಿದ್ದಾಗ ಹಿರಣ್ಣಯ್ಯ ನಿಧನರಾದರು. ಲಲಿತಮ್ಮನವರು ಈ ಅನಿರೀಕ್ಷಿತ ಆಘಾತದಿಂದ ಕೂಡಲೇ ಚೇತರಿಸಿಕೊಂಡು ಮುಂದೆ ಎರಡುವರ್ಷ ಕಂಪನಿ ನಡೆಸಿದರು. ಇಷ್ಟೊತ್ತಿಗಾಗಲೇ ಹಿರಣ್ಣಯ್ಯನವರ ಮಗ ನರಸಿಂಹಮೂರ್ತಿ (ಮಾ.ಹಿರಣ್ಣಯ್ಯ) ಪ್ರಬುದ್ಧ ನಟರೆನಿಸಿದ್ದರು. ತಂದೆಯ ಪಾತ್ರಗಳನ್ನು ಅವರು ಮಾಡುತ್ತಾ ಲಲಿತಮ್ಮನವರಿಗೆ ಬೆಂಬಲವಾಗಿ ನಿಂತು ಮಿತ್ರಮಂಡಳಿಯ ನಿರ್ವಹಣೆ ಮಾಡಿದರು. ನರಸಿಂಹಮೂರ್ತಿಯವರ ಲಗ್ನವಾದ ಮೇಲೆ ಲಲಿತಮ್ಮನವರು ಕಂಪನಿಯನ್ನು ಸಂಪೂರ್ಣವಾಗಿ ಅವರಿಗೇ ವಹಿಸಿಕೊಟ್ಟು ನಿವೃತ್ತಿಯನ್ನು ಅಪೇಕ್ಷಿಸಿ ಬಳ್ಳಾರಿಗೆ ಬಂದರು (ಲೇ: ಬಸವರಾಜ ಮಲಶೆಟ್ಟಿ, ಸುಧಾ ಪತ್ರಿಕೆ, ೮ ಫೆಬ್ರವರಿ, ೨೦೦೧, ಪುಟ, ೬೩).

ಹೀಗೆ ಲಲಿತಮ್ಮ ಕಲಾಸಕ್ತರನ್ನು ಕಲಾವಿದರನ್ನು ಮದುವೆಯಾಗಿ ಅವರಿಗೆ ನೆರಳಾಗಿ, ಆಸರೆಯಾಗಿ ಅವರ ಕಂಪನಿಯಲ್ಲಿ ದುಡಿದು ನಟಜೀವನದ ಸಾರ್ಥಕತೆಯನ್ನು ಪಡೆದುಕೊಂಡವರು. ಚಿಕ್ಕವರಿದ್ದಾಗ ಆಕಸ್ಮಿಕವಾಗಿ ಕೆ.ಹಿರಣ್ಣಯ್ಯನವರು ಮದ್ರಾಸಿಗೆ ಬಂದಾಗ ಭೇಟಿಯಾಗಿದ್ದರು. 'ಸದಾರಮೆ' ನಾಟಕದ ಸಿದ್ಧತೆಗೆ ತೊಡಗಿರುವಾಗ ನಾಟಕದಲ್ಲಿ ಅಭಿನಯಿಸುವ ಅನುಭವವಿಲ್ಲದ ಲಲಿತಮ್ಮನವರಿಗೆ ಒಂದು ರೀತಿಯ ಅಳುಕು, ಹಿಂಜರಿಕೆ. ಹಿರಣ್ಣಯ್ಯನವರು ಧೈರ್ಯ ತುಂಬಿದರು. ತೆಲುಗು ಲಿಪಿಯಲ್ಲಿ ಕನ್ನಡ ಸಂಭಾಷಣೆಗಳನ್ನು ಬರೆದುಕೊಂಡು, ಲಲಿತಮ್ಮ ಬಾಯಿಪಾಠ ಮಾಡಿದರು.

ಖ್ಯಾತ ರಂಗಭೂಮಿ ನಟಿ ಸುಭದ್ರಮ್ಮನವರನ್ನು ಲಿಂಗರಾಜ ಮನ್ಸೂರ ಕಲಾವಿದರು ೧೯೫೧ ರಲ್ಲಿ ಮದುವೆಯಾದರು. ಲಿಂಗರಾಜರು ಸುಭದ್ರಮ್ಮರಿಗೆ ಸರ್ವಸ್ವವೂ ಆಗಿದ್ದರು. ಈ ಕಲಾದಂಪತಿಗಳು ಪ್ರಪಂಚದ ಎಲ್ಲಾ ಆಗು ಹೋಗುಗಳನ್ನು ಅರಿತು ಪರಸ್ಪರರಲ್ಲಿ ನಂಬಿಕೆ, ವಿಶ್ವಾಸ, ಗೌರವ ಪ್ರೀತಿಯನ್ನಿಟ್ಟು, ರಂಗ

ಭೂಮಿಯ ಸೇವೆಯನ್ನು ಮಾಡಿದರು. ಸಂಪೂರ್ಣವಾಗಿ ರಂಗ ಬದುಕಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡು ಎಲ್ಲ ರೀತಿಯ ಸಹಕಾರದೊಂದಿಗೆ ಮೌಲ್ಯಾಧಾರಿತ ಜೀವನವನ್ನು ಮನ್ಸೂರು ಸುಭದ್ರಮ್ಮ ಮಾಡಿದರು. ಯಾವ ಕಿಂಚಿತ್ ವಿಷಯಗಳಿಗೆ ತಲೆಕೊಡದೇ ತಮ್ಮದೇ ಆದ ನಿರಾತಂಕ ಜೀವನ ನಡೆಸಿದವರು ಈ ದಂಪತಿಗಳು. ''ಲಿಂಗರಾಜರಂತೂ ಅವರ ಪಾಲಿಗೆ ಆಲ್ ಇನ್ ಒನ್ ಆಗಿಬಿಟ್ಟಿದ್ದರು. ಗಂಡ, ತಂದೆ, ಗುರು, ಗೆಳೆಯ, ತಾಯಿ, ಹಾಯಿದೋಣಿ, ಒಂದು ಸುಂದರ ಕನಸು, ರಕ್ಷಕಭಟ ಹೀಗೆ ಎಲ್ಲ... ಅವರ ಹೆಜ್ಜೆ ಗುರುತಲ್ಲಿ ಹೆಜ್ಜೆ ಇಟ್ಟು ಅವರ ನೆರಳಲ್ಲಿ ದೇಹವನ್ನು ಹುದುಗಿಸಿಟ್ಟು ನಡೆಯುತ್ತಿದ್ದರು. ''ಸುಭದ್ರಮ್ಮ ನಂಥ ಹೆಂಡತಿ ಪಡೀಲಿಕ್ಕೆ ಲಿಂಗರಾಜ ಏನು ಪುಣ್ಯಮಾಡಿದ್ರೋ'' ಅವರಿವರು ಅನ್ನುತ್ತಿದ್ದ ಮಾತು. ''ಲಿಂಗರಾಜ ರಂಥ ಗಂಡನನ್ನು ಪಡಿಯಲಿಕ್ಕೆ ನಾನು ಏಳು ಜನುಮಗಳ ಕಾಲ ತಪಸ್ಸು ಮಾಡಿರಬಹುದು'' ಸುಭದ್ರಮ್ಮ ದಿನನಿತ್ಯ ಒಮ್ಮೆಯಾದರೂ ಅಂದುಕೊಳ್ಳುತ್ತಿದ್ದುದುಂಟು (ಲೇ: ಕು. ವೀರಭದ್ರಪ್ಪ, ಸುಭದ್ರಮ್ಮ ಮನ್ಸೂರು, ಪುಟ, ೩೯).

ಹೀಗೆ ಸುಭದ್ರಮ್ಮ ಕಲಾವಿದರನ್ನು ಮದುವೆಯಾಗಿ ರಂಗಭೂಮಿಯ ಜೀವನವನ್ನು ನಡೆಸಿದವರು. ಕಲಾವಿದೆಗೆ ಕಲಾವಿದನೇ ಆಸರೆ ಎಂಬಂತಿದ್ದವರು. ಇವರ ದಾಂಪತ್ಯ ಅಷ್ಟು ಸುಮಧುರವಾಗಿತ್ತು ಎಂದು ಸುಭದ್ರಮ್ಮ ನೆನೆದು ಕಣ್ಣಂಚಿನಲ್ಲಿ ನೀರನ್ನು ತರುತ್ತಾರೆ.

ಕೆ.ನಾಗರತ್ನಮ್ಮ ಮರಿಯಮ್ಮನಹಳ್ಳಿ ಇವರೂ ಕಲಾಸಕ್ತರನ್ನು ಮದುವೆಯಾಗಿರುವುದೇ ನನ್ನ ಪುಣ್ಯ, ಅವರ ಪ್ರೋತ್ಸಾಹ ಸಹಕಾರದಿಂದಲೇ ನಾನಿಂದು ಇಂಥಹ ಮೇಲ್ಮಟ್ಟಕ್ಕೆ ಬಂದಿದ್ದೇನೆ. ಎಷ್ಟೋ ರಂಗನಟಿಯರಿಗೆ ಇಂಥಹ ಸಂಗಾತಿಗಳು ದೊರೆತಿಲ್ಲ. ಆದರೆ ನನಗೆ ಆದಷ್ಟುಮಟ್ಟಿಗೆ ಪ್ರೋತ್ಸಾಹಿಸುವ ಮುಂದೆ ತರುವ ಸಂಗಾತಿ ಸಿಕ್ಕು ನನ್ನ ಜೀವನ ಪಾವನವಾಗಿದೆ ಎನ್ನುತ್ತಾರೆ ನಾಗರತ್ನಮ್ಮ.

ಕೌಟುಂಬಿಕ ಜೀವನ ಚನ್ನಾಗಿದ್ದರೆ ನಮ್ಮ ಬದುಕು ಉತ್ತಮವಾಗಿರುತ್ತದೆ. ಕೌಟುಂಬಿಕ ವಾತಾವರಣವೇ ಸುಗಮವಾಗಿಲ್ಲದಿದ್ದರೆ ನಮ್ಮ ಪಾಡು ತುಂಬಾ ಕೆಟ್ಟದ್ದಾಗಿ ಪರಿಣಮಿಸುವುದು. ಆದ್ದರಿಂದ ಹೆಜ್ಜೆ, ಹೆಜ್ಜೆಗೂ ಸಂಗಾತಿಗಳ ಸಹಕಾರವಿದ್ದರೆ ನಮಗೆ ನಿಜಬದುಕು ಸುಂದರವಾಗಿರುತ್ತದೆ. ದಾಂಪತ್ಯ ಸರಿಯಾಗಿರದಿದ್ದರೆ ನಟಿಯ ಜೀವನ ಊಹಿಸಲೂ ಸಾಧ್ಯವಿಲ್ಲ. ಪ್ರತಿಯೊಂದು ಹಂತದಲ್ಲಿ ಹೆಣ್ಣಿಗೆ ಗಂಡಿನ ಆಸರೆಬೇಕು. ಆದರೆ ಆ ಗಂಡಿನ ಆಸರೆ ಸಿಗದಿದ್ದರೆ ಪರಿಣಾಮವು ಎಂದೂ ಸುಮಧುರವಾಗಿರಲು ಸಾಧ್ಯವಾಗುವುದೇ ಇಲ್ಲ.

ಯಳ್ಳಾರ್ತಿ ಚಾಮುಂಡೇಶ್ವರಿ ಪತಿ ಹಾರ್ಮೋನಿಯಂ ಮಾಸ್ತರು. ಅವರೇ ಸಂಪೂರ್ಣವಾಗಿ ಹೆಂಡತಿಗೆ ಆಸರೆ. ಅವರಿಗೆ ಮೂರುಮಕ್ಕಳು ತುಂಬಿದ ಕುಟುಂಬ. ನೋಡಲು ಬಲುಸೊಗಸು. ಉನ್ನತ ಜಾತಿ, ವರ್ಗದವ ರಾಗಿದ್ದರೂ ಪತಿ-ಪತ್ನಿಗಳಿಗೆ ಕಲಾಸೇವೆಯನ್ನು ಮಾಡಬೇಕೆಂಬ ಅದಮ್ಯ ಬಯಕೆ. ಯಾವ ನಿಟ್ಟಿನಿಂದಾದರೂ

ಗಂಡನ ಸಹಕಾರ ಹೆಣ್ಣಿಗೆ ಇದ್ದರೆ ಮಾತ್ರ ಅವಳು ಮುಂದೆ ಬರಲು ಸಾಧ್ಯ, ಆದ್ದರಿಂದ ಹೆಜ್ಜೆ, ಹೆಜ್ಜೆಗೂ ನಮ್ಮ ಸ್ವಾಮಿಯವರು ನನಗೆ ಸಹಕರಿಸುತ್ತಾರೆ ಎನ್ನುತ್ತಾರೆ ಚಾಮುಂಡೇಶ್ವರಿ. ತಂದೆ ಕಲಾವಿದರು ತಮಗೂ ಆಸಕ್ತಿಯಿದ್ದು ರಂಗಬದುಕಿಗೆ ಬಂದಿರುವುದು. ನನ್ನ ಕ್ಷೇತ್ರಕ್ಕೆ ತಕ್ಕಂತಹ ಪತಿಯನ್ನೇ ದೇವರು ಒದಗಿಸಿ ಕೊಟ್ಟಿರುವನು ಎಂದು ತಮ್ಮ ಭಾವನೆಗಳನ್ನು ನಮ್ಮೊಂದಿಗೆ ಹಂಚಿಕೊಂಡರು ಚಾಮುಂಡೇಶ್ವರಿ. ಯಾವುದೇ ಗ್ರಾಮಕ್ಕೆ ತೆರಳಿದರೂ ಜೊತೆಯಾಗಿಯೇ ಹೋಗಿ ಅಲ್ಲಿ ಜೊತೆಯಲ್ಲಿಯೇ ಇದ್ದು ನಾಟಕವನ್ನು ಮುಗಿಸಿಕೊಂಡ ನಂತರ ಸಂಭಾವನೆಯನ್ನು ಪಡೆದುಕೊಂಡು ಮರಳಿ ನಮ್ಮ ಗೂಡಿಗೆ ಸೇರುತ್ತೇವೆ ಎನ್ನುತ್ತಾರೆ ಚಾಮುಂಡೇಶ್ವರಿ. ಒಬ್ಬ ರಂಗನಟಿಗೆ ಹುಟ್ಟು, ಯಾವ ಪರಿಸರ ಬೇಕಿತ್ತೊ, ಯಾವ ಕುಟುಂಬದ ವಾತಾವರಣ ಆಕೆಗೆ ಇರಬೇಕಾಗಿತ್ತೋ ಅದೆಲ್ಲವೂ ನನಗೆ ಒದಗಿ ಬಂದಿದೆ. ಅದರಲ್ಲಿ ನಾನು ಪುಣ್ಯವಂತೆ. ನಮ್ಮದೇ ಆದ ಒಂದು ಕಲಾಕುಟುಂಬದಲ್ಲಿ ಜೀವಿಸುತ್ತಾ ಸಂತಸದಿಂದಿದ್ದೇವೆ. ನನಗೆ ಕಲಾವಿದ ನಲ್ಲದೆ ಬೇರೆ ಕ್ಷೇತ್ರದ ವ್ಯಕ್ತಿ ನನ್ನ ಪತಿಯಾಗಿದ್ದರೆ, ಜೀವನವೆಷ್ಟು ಜಟಿಲವಾಗಿರುತ್ತಿತ್ತೋ ಯಾರು ಅರಿಯರು. ಆದರೆ ನನ್ನದೊಂದು ಪುಣ್ಯ ಇಂಥಹ ಪತಿಯು ಸಹಕಾರ, ಪ್ರೋತ್ಸಾಹ ರಕ್ಷಣೆ ಸಿಕ್ಕಿರುವುದು ನಾನು ಹಿಂದಿನ ಜನ್ಮದಲ್ಲಿ ಮಾಡಿರುವ ಪುಣ್ಯವೇನೋ ಎಂದು ಆನಂದ ಬಾಷ್ಪಸುರಿಸುತ್ತಾರೆ. ಉನ್ನತ ಕುಲದಲ್ಲಿ ಹುಟ್ಟಿ ಸಮಾಜದಲ್ಲಿ ಕೀಳಾಗಿ ಕಾಣುವ ಈ ಕ್ಷೇತ್ರದಲ್ಲಿ ಯಶಸ್ಸು ಕಾಣುವುದೆಂದರೆ ಅದು ಸಾಮಾನ್ಯ ಮಾತೇ. ಅಲ್ಲವೇ ಅಲ್ಲ. ಅದು ಕ್ರೌರ್ಯವಂತ ಪುರುಷಶಾಹಿಯಲ್ಲಿದ್ದು ಜೀವಿಸುತ್ತಿರುವುದು ನನ್ನ ಪತಿಯು ಕಲಾವಂತ ರಾದ್ದರಿಂದ ವಿಶಾಲ ಮನೋಭಾವದವರಾದ್ದರಿಂದ ಇಂಥ ಸೌಭಾಗ್ಯ ನನಗೆ ಒದಗಿಬಂದಿದೆ ಎನ್ನುತ್ತಾರೆ.

ಹೊಸಪೇಟೆ ಸರಸ್ವತಮ್ಮ ಅವರ ಪತಿ ಅಮೀರಸಾಬ ಉತ್ತಮಕಲಾವಿದರು. ಆದರೆ ಅವರು ಕುಡಿತದ ದೌರ್ಬಲ್ಯಕ್ಕೆ ಬಲಿಯಾದ ವ್ಯಕ್ತಿಯಾಗಿದ್ದರು. ''ಸರಸ್ವತಮ್ಮನವರು ತಮ್ಮ ಸ್ವಂತ ಪ್ರಯತ್ನ, ಪರಿಶ್ರಮ, ಶ್ರದ್ಧೆಯಿಂದ ಬೆಳೆದು ನಿಂತಿದ್ದಾರೆ. ಇವರ ಬದುಕನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಪತಿ ಅಮೀರಸಾಬ ಉತ್ತಮ ಕಲಾವಿದರಿದ್ದಂತೆಯೇ ಕುಡಿತದ ದೌರ್ಬಲ್ಯಕ್ಕೆ ಒಳಗಾದರು. ನಿತ್ಯ ಕುಡಿದು ಮನೆಗೆ ಬಂದಾಗ ಸರಸ್ವತಮ್ಮ ಚಿಕ್ಕ ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಉಪವಾಸ-ವನವಾಸ ಕಳೆದ ಪ್ರಸಂಗಗಳು ಸಾಕಷ್ಟು. ಅಮೀರಸಾಬರು ಪ್ರತಿದಿನ ಜಗಳ ಮಾಡದೇ ಇರುತ್ತಿರಲಿಲ್ಲ. ಏನೇ ದುಃಖ ಬರಲಿ ಅದನ್ನು ಸಹಿಸಿಕೊಳ್ಳುವ ತಾವೇ ನಿವಾರಣೆ ಮಾಡಿಕೊಳ್ಳುವ ಸರಸ್ವತಮ್ಮನವರ ಮನಸ್ಸಿನ ಸ್ಥಿತಿಯನ್ನು ಮಾತ್ರ ಮೆಚ್ಚಬೇಕು. ಈ ಸಣ್ಣ ಪುಟ್ಟ ಪ್ರಸಂಗಗಳು ಸಹಜವೆಂದು ತಿಳಿದು ಅವರು ಅವುಗಳ ಬಗೆಗೆ ಗಂಭೀರವಾಗದೆ, ಉದಾಸೀನರಾಗಿರುತ್ತಿದ್ದರು. ಕುಡಿತದಲ್ಲಿಯೇ ಅಮೀರಸಾಬ ಕೊನೆಯ ಉಸಿರು ಎಳೆದಾಗ ಮಕ್ಕಳೆಲ್ಲರನ್ನು ಕಟ್ಟಿಕೊಂಡು ಕಷ್ಟದ ದಿನಗಳಲ್ಲಿಯೂ ಅವರಿಗೆ ಓದಿಸಿ ಬೆಳೆಸಿದ ಸಾಹಸ ಇವರದು'' (ಲೇ: ಗವೀಶ ಹಿರೇಮಠ, ರಂಗಕುಸುಮಗಳು, ಪುಟ, ೪೭).

ಹೀಗೆ ಕಲಾವಿದೆಯ ಬದುಕು ತುಂಬಾ ದುಸ್ತರ. ಯಾವ ಕಾಲದಲ್ಲಿ ಯಾವ ಘಳಿಗೆಯಲ್ಲಿ ಏನಾಗುತ್ತೋ. ಸರಸ್ವತಮ್ಮನವರಿಗೆ ಕಲಾವಿದ ಪತಿಯು ಸಿಕ್ಕರೂ ಸಹಿತ ಅವರ ಬದುಕಿಗೆ ಆಸರೆಯಾಗಿರಲಿಲ್ಲ. ಹಲವಾರು ದೌರ್ಬಲ್ಯಕ್ಕೆ ಒಳಗಾಗಿ ಕುಟುಂಬವನ್ನು ಹೀನ ಸ್ಥಿತಿಗೆ ತಂದಿದ್ದರು. ಆದ್ದರಿಂದ ಕಲಾವಿದನೇ ಸಿಗಲಿ, ಕಲಾವಿದ ಅಲ್ಲದಿರಲಿ ಆ ವ್ಯಕ್ತಿ ಸತಿಯ ಆಸರೆಗೆ ವರವಾಗಿರಬೇಕು. ಎಷ್ಟೋ ಕಲಾವಿದೆಯ ಬದುಕು ತುಂಬಾ ವೈರುಧ್ಯ ವಾಗಿರುತ್ತದೆ. ನಟಿಯರು ವಯಸ್ಸಾದ ಮೇಲೆ ಅವರ ದೈನಂದಿನ ಸ್ಥಿತಿ ತುಂಬಾ ಚಿಂತಾಜನಕ. ಜೊತೆಗೆ ಯಾವುದೇ ರಂಗನಟಿಯನ್ನು ನಾವು ನೇರವಾಗಿಯೇ ಸಂದರ್ಶನ ನೀಡಿದಾಗ ಅವರು ಹೇಳುವ ಪುರುಷ ಮೌಲ್ಯಗಳು ಇನ್ನೂ ವಿಚಿತ್ರ. ಇಂಥದರಲ್ಲಿ ಬದುಕಿ ಮತ್ತೆ ಸರಸ್ವತಮ್ಮ ತಮ್ಮ ಮಗಳನ್ನೇ ಉತ್ತಮ ಹವ್ಯಾಸಿ ಕಲಾವಿದೆಯನ್ನಾಗಿ ಮಾಡಿರುವುದು ಆಕೆಗೆ ರಂಗಭೂಮಿಯ ಬಗ್ಗೆ ಇರುವ ಕಾಳಜಿಯನ್ನು ಪ್ರತಿನಿಧಿಸುತ್ತದೆ ಎಂದೆನ್ನಬಹುದು.

ಕೂಡ್ಲಿಗಿಯ ಬಿ.ಶಿವಕುಮಾರಿಯು ತನ್ನ ರಂಗಭೂಮಿಯ ನಟಿ ಬದುಕಿಗೆ ಆಧಾರವಾಗಿರುವ ಪತಿಸಿಕ್ಕಿದ್ದು ನನ್ನೆಲ್ಲಾ ಶ್ರೇಯಸ್ಸು ಅವರಿಗೇ ಸಲ್ಲಬೇಕು ಎನ್ನುತ್ತಾರೆ. ಬಾಲ್ಯದಲ್ಲಿ ಕಂಡುಂಡ ಪರಿಸರದಲ್ಲಿ ಬೆಳೆದ ನಾವಿಬ್ಬ ರಿಂದು ಅರ್ಥಪೂರ್ಣ ಸಂಸಾರವನ್ನು ನಿಭಾಯಿಸಿಕೊಂಡಿದ್ದೇವೆ. ಪ್ರತಿಯೊಂದು ಹಳ್ಳಿಗೆ ಹೋಗಿಬರಲು ನನಗೆ ಸಹಕಲಾವಿದೆಯರೂ ಸಂಗೀತಗಾರರೂ ಇದ್ದು, ನನಗೆ ಈ ಕ್ಷೇತ್ರದಲ್ಲಿ ಈ ಪರಿಸರದಲ್ಲಿ ಅಂಥ ಒಳ್ಳೆಯವರೇ ಸಿಕ್ಕಿದ್ದು ಯಾವುದೇ ರೀತಿಯ ತೊಂದರೆದಾಯಕ ವೃತ್ತಿ ಎಂದು ನನಗೆ ಅನಿಸಿಯೇ ಇಲ್ಲ. ಪತಿಯ ಸಹಕಾರವಿರುವು ದರಿಂದ ಈ ಕ್ಷೇತ್ರದಲ್ಲಿ ನಾನು ಇನ್ನೂ ಹೆಚ್ಚು ಹೆಸರನ್ನು ಮಾಡಿ ನನ್ನದೇ ಆಗಿರುವ ಒಂದು ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಿಕೊಳ್ಳಬೇಕೆಂಬ ಆಸೆ ನನ್ನಲ್ಲಿದೆ. ಆದ್ದರಿಂದ ಆ ರೀತಿಯ ಪ್ರಯತ್ನಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲರ ಸಹಕಾರವನ್ನು ಬಯಸುತ್ತೇನೆ ಎನ್ನುತ್ತಾರೆ.

ಹೀಗೆ ಹಲವಾರು ರಂಗಕಲಾವಿದೆಯರು ತಮ್ಮ ಜೀವನದಲ್ಲಿ ಏರಿಳಿತಗಳೇನೆ ಇದ್ದರೂ ಅವುಗಳನ್ನೆಲ್ಲಾ ಮೆಟ್ಟಿನಿಂತು ಇಂದು ಕಲಾವಿದೆಯರೆನಿಸಿದ್ದಾರೆ. ರಂಗಭೂಮಿಯ ಸೇವೆಯನ್ನು ಮಾಡುವುದೆಂದರೆ ಅಷ್ಟು ಸಾಮಾನ್ಯ ಮಾತೇನಲ್ಲ. ಪುರುಷ ಮೌಲ್ಯದ ವ್ಯವಸ್ಥೆಯಲ್ಲಿದ್ದುಕೊಂಡು ಆ ಪರಿಸರದಲ್ಲಿಯೇ ಬೆಳೆದು ತಮ್ಮ ಈ ಸೇವೆಯನ್ನು ದಾಖಲಿಸಬೇಕೆಂದರೆ ಅದು ಸಾಹಸದ ಮಾತೇ ಸರಿ.

ಕಲಾಸಕ್ತರಾಗಿರುವ ಸಂಗಾತಿಗಳು ಪ್ರೋತ್ಸಾಹನೀಡಲಿ ಅಥವಾ ಪ್ರೋತ್ಸಾಹ ನೀಡದಿರಲಿ ತಮ್ಮ ಪಾಡಿಗೆ ತಾವು ಅಂಟಿಕೊಂಡಿರುವ ವೃತ್ತಿಗೆ ಯಾವುದೇ ರೀತಿಯಲ್ಲಿ ಮೋಸ ಮಾಡದೇ ತಮ್ಮ ಕುಟುಂಬದ ನಿರ್ವಹಣೆಯನ್ನು ಮಾಡಿಕೊಂಡು ಬಂದಿದ್ದಾರೆ. ಎಷ್ಟೋ ವರ್ಷಗಳ ಇತಿಹಾಸದಲ್ಲಿ ಸ್ತ್ರೀ ರಂಗಭೂಮಿಗೆ ಬಂದು ಆಕೆ ಪಡೆದಿರುವ ಅಸ್ತಿತ್ವವನ್ನು ನೋಡಿದರೆ ಅದಕ್ಕೆ ಕೆಲವು ಪುರುಷವರ್ಗಗಳ ಪ್ರೋತ್ಸಾಹದಿಂದಲೇ ನಟಿಯರು ರಂಗಬದುಕಿಗೆ ನೇರವಾಗಿ ದಿಟ್ಟವಾಗಿ ಕಾಲಿರಿಸಿದ್ದಾರೆ. ಮೌಲ್ಯಾಧಾರಿತವಾದ ಒಂದು ವ್ಯವಸ್ಥೆ

ಯಾವಾಗಲೂ ಇದನ್ನು ಗಣಿಸುತ್ತಲೇ ಬಂದಿದೆ. ಆದ್ದರಿಂದ ರಂಗನಟಿಯರು ಯಾವಾಗಲೂ ಇತಿಹಾಸದಲ್ಲಿ ಅವರು ರಾಣಿಯರೇ. ನೈಜ ಬದುಕು ಏನೇ ಆಗಿದ್ದರೂ ರಂಗಬದುಕಲ್ಲಿ ಅವರು ಕಲಾವಂತಿಕೆ ಮೆರೆದು ರಾಣಿಯರಾಗಿ ಇತಿಹಾಸದಲ್ಲಿ ತಮ್ಮ ಜೀವಂತಿಕೆಯನ್ನು ಮೆರೆದಿದ್ದಾರೆ.

ಸಮಾಜದ ಇತರೆ ಜನರೊಂದಿಗೆ ಮದುವೆಯಾಗಲು ಇವರಿಗೆ ಇದ್ದ ಸಾಮಾಜಿಕ ಬದ್ಧತೆಗಳು : ಹಲವಾರು ಇವೆ. ರಂಗನಟಿಯರು ಹೆಚ್ಚಾಗಿ ದೇವದಾಸಿ ಸಂಪ್ರದಾಯದಿಂದ ಬಂದದ್ದು. ಜೊತೆಗೆ ಆರ್ಥಿಕವಾಗಿ ಬಲಹೀನರಾದ್ದರಿಂದ ಉನ್ನತ ವರ್ಗಗಳ ಹುನ್ನಾರಗಳು ಹಲವಾರು ಇವೆ. ಉನ್ನತ ವರ್ಗದವರು ಇವರನ್ನು ಮದುವೆಯಾಗಿದ್ದರೂ ಅವರಿಗೆ ಈ ನಟಿಯರು ಉಪಪತ್ನಿಯರೇ. ಯಾವ ಉನ್ನತವರ್ಗದ ವ್ಯಕ್ತಿ ಇವರನ್ನು ತಮ್ಮ ಧರ್ಮಪತ್ನಿಯನ್ನಾಗಿ ಸ್ವೀಕರಿಸಿರಲಿಲ್ಲ.

ಜಾತಿ : ಸಾಮಾಜಿಕ ಬದ್ಧತೆ ಈ ನಟಿಯರು ಜಾತಿಯಿಂದ ಕೀಳಾಗಿರುವುದರಿಂದ ಇವರು ಉನ್ನತ ವರ್ಗದವರೊಂದಿಗೆ ಮದುವೆಯಾಗಲು ಸಾಧ್ಯವಿಲ್ಲ. ಇದೊಂದು ಸಾಮಾಜಿಕ ಬದ್ಧತೆ. ಆದ್ದರಿಂದ ಇವರನ್ನು ಉನ್ನತ ವರ್ಗದವರು ಮದುವೆಯಾದರೆ ಉಪಪತ್ನಿಯರಾಗಿರಬೇಕು. ಅವರಲ್ಲಿಗೆ ಇವರನ್ನು ಕರೆದೊಯ್ಯುವುದಿಲ್ಲ. ಅವರೇ ತಮ್ಮ ಸಮಾಜ ಒಪ್ಪಿತ ಕುಟುಂಬ ಚನ್ನಾಗಿದ್ದು ಇವರನ್ನು ಮದುವೆಯಾಗಿರುವ ಅನಿವಾರ್ಯತೆಯಿಂದ ಇವರನ್ನು ಕಾಟಾಚಾರಕ್ಕೆ ವಿಚಾರಿಸಿಕೊಂಡು ಹೋಗಲು ಬರುತ್ತಾರೆ. ಜಾತಿಯಿಂದ ಕೀಳು ಜಾತಿಯಲ್ಲಿರುವುದರಿಂದ ನಟಿಯರು ಸಹಜವಾಗಿ ಕೆಳವರ್ಗಕ್ಕೆ ಸೇರಿಬಿಡುತ್ತಾರೆ. ಅಲ್ಲದೆ ಇವರು ಹಲವಾರು ಮೌಢ್ಯ ಸಂಪ್ರದಾಯಗಳಿಂದ ಸಮಾಜದ ಯಾವುದೇ ಅನಿಷ್ಟ ಬದ್ಧತೆಗೆ ಈ ಹೆಣ್ಣುಮಕ್ಕಳು ಒಳಗಾಗಿ ಎಷ್ಟೇ ಇವರು ಚನ್ನಾಗಿದ್ದರೂ "ಬಾವಿಯೊಳಗಿರುವ ಕಪ್ಪೆ ನೀರು ಕುಡಿದಿಲ್ಲವೆಂದು ಹೇಗೆ ಹೇಳಲು ಸಾಧ್ಯ"ವೆಂದು ನಟಿಯರನ್ನು ಇನ್ನೂ ಹಳ್ಳಕ್ಕೆ ನೂಕಿ ಬಿಡುತ್ತಾರೆ.

ಕೆಳಗಿನ ಜಾತಿಯಲ್ಲಿರುವುದರಿಂದ ಸಹಜವಾಗಿ ಅವರು ಕೆಳವರ್ಗಕ್ಕೆ ಬರುತ್ತಾರೆ. ಸಮಾಜದಲ್ಲಿ ಉನ್ನತವರ್ಗದವರು ಏನೇ ಮಾಡಿರಲಿ ಅದು ತಮ್ಮ ಸ್ವಾರ್ಥಕ್ಕಾಗಿ ಮಾತ್ರ. ಈ ಜಾತಿವರ್ಗದವರು ಎಷ್ಟೇ ಸುಂದರಿಯರಾಗಿದ್ದರೂ ಅವರು ಇವರ ಕೈಗೊಂಬೆಗಳಾಗಿರಬೇಕು. ಅವರಿಗೆ ಇವರು ಮನರಂಜನೆ ನೀಡಿದರೂ ಅವರು ಖಾಸಗಿ ಬದುಕಿನಲ್ಲಿ ಸುಖವಾಗಿ ಇರಲು ಅವರನ್ನು ಬಿಡುವುದಿಲ್ಲ.

೧. ಜಾತಿ ೨. ವರ್ಗ ೩. ಆರ್ಥಿಕತೆ ೪. ವೃತ್ತಿ ೫. ಸಂಪ್ರದಾಯ

ಈ ಎಲ್ಲಾ ಅಂಶಗಳು ನಟಿಯರನ್ನು ಕೆಲವು ಸಾಮಾಜಿಕ ಬದ್ಧತೆಗೆ ಒಳಗಾಗುವಂತೆ ಮಾಡಿಬಿಡುತ್ತವೆ. ಆದ್ದರಿಂದ ಈ ಅಂಶಗಳೇ ಅವರನ್ನು ಕೆಳಗು ಇರುವಂತೆ ಮಾಡುತ್ತವೆ. ನಾವು ಎಷ್ಟೇ ಪ್ರಯತ್ನ ಪಟ್ಟರು ಅಂಬೇಡ್ಕರ ಹೇಳುವಂತೆ "ಭಾರತದಲ್ಲಿ ಈ ಜಾತಿ ಎಂಬ ಮೊಸಳೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ". ಇದು ಅವರ ಅನುಭವದ ನುಡಿ.

ಆರ್ಥಿಕ ಬಲಹೀನತೆ ಸಾಮಾಜಿಕ ಬದ್ಧತೆ : ಕೆಳವರ್ಗದ ಜನರು ಕೂಲಿಕಾರರಾಗಿದ್ದು, ಅವಿದ್ಯಾವಂತರಾದ್ದರಿಂದ ಅವರಿಗೆ ಯಾವುದೇ ಸಾಮಾಜಿಕ ಬದ್ಧತೆ ಇವರನ್ನು 'ಒಳಗು' ಮಾಡಿಕೊಂಡಿಲ್ಲ. ಇವರ ಕಲೆ ಎಲ್ಲರ ದೇವರ ಮನೆಯವರೆಗೂ ಬರಬೇಕು. ಆದರೆ ಇವರು ಮಾತ್ರ ಕೆಳಗಡೆಯೇ ಇರಬೇಕು. ಇವರೊಂದಿಗೆ ಕೌಟುಂಬಿಕ ಜೀವನ ಉನ್ನತ ವರ್ಗದವರು ಮಾಡುತ್ತಾರೆ. ಆದರೆ ಸಾಮಾಜಿಕ ಮನ್ನಣೆಯು ಕೌಟುಂಬಿಕ ಜೀವನದಲ್ಲಿ ಅದು ಏನೇ ಇದ್ದರೂ ಕೆಳಗೆ ಮೇಲೆಂದೂ ಆಗಲು ಸಾಧ್ಯವಿಲ್ಲ. ಇಂಥ ಜಾತಿ, ಕುಲದಲ್ಲಿ ಅಧಿಕ ಮಸ್ಥಿತಿಯಲ್ಲಿರುವ ನಟಿಯರನ್ನು ಯಾರು ಉನ್ನತ ವರ್ಗದವರು ಮದುವೆಯಾಗುತ್ತಾರೆ. ಒಂದು ವೇಳೆ ಬೇರೆ ಜಾತಿಯಲ್ಲಿ ಇವರು ಮದುವೆಯಾಗಿದ್ದರೂ, ಆ ಪುರುಷರೆಂದೂ ಇವರಿಗೆ ಸಾಮಾಜಿಕ ಗೌರವ ಮನ್ನಣೆಯನ್ನು ಕೊಡುವುದಿಲ್ಲ. ಒಂದು ವೇಳೆ ಆ ಪುರುಷರು ಕೊಟ್ಟರೂ ಈ ಪುರುಷ ಪ್ರಧಾನ, ಜಾತಿ ಪ್ರಧಾನ ವ್ಯವಸ್ಥೆ ಎಂದೂ ಕೊಡುವುದಿಲ್ಲ.

ವೃತ್ತಿಯಿಂದಲೂ ಸಾಮಾಜಿಕ ಬದ್ಧತೆ : ಹೇಳಿ ಕೇಳಿ ದೇವದಾಸಿಯರೇ ಈ ವೃತ್ತಿಗೆ ಬಂದಿರುತ್ತಾರೆ. ಹೇಳಿಕೇಳಿ ಪಾತರದವರಾಗಲೀ ಕೆಳವರ್ಗದ ಮಹಿಳೆಯರೇ ರಂಗಭೂಮಿಗೆ ಕಾಲಿಟ್ಟಿರುವುದರಿಂದ ಇವರನ್ನು ಯಾವ ಉನ್ನತ ವರ್ಗದ ಪುರುಷರು ಮದುವೆಯಾಗಲು ಇಚ್ಛಿಸುವುದಿಲ್ಲ. ಅವರ ಮನೆಯಲ್ಲಿ ಈ ವೃತ್ತಿ ಮಾಡುವುದರಿಂದ ಅದೆಷ್ಟೋ ದೂರದಲ್ಲಿ ನಮ್ಮ ಸಮಾಜ ಇವರನ್ನು ಇಟ್ಟಿದೆ. ಅಂದಮೇಲೆ ಉನ್ನತ ವರ್ಗದವರು ಹೇಗೆ ಇವರನ್ನು ತಮ್ಮ ಮನೆಗೆ ಸೇರಿಸಿಕೊಳ್ಳುತ್ತಾರೆ ಎಂಬುದೊಂದು ಯಕ್ಷ ಪ್ರಶ್ನೆಯಾಗಿದೆ.

ಸಾಮಾಜಿಕವಾಗಿ ನಟಿಯರು ಹಲವಾರು ಬದ್ಧತೆಗೆ ಒಳಗಾಗಿರುವುದರಿಂದ ಇವರನ್ನು ಯಾವ ಉನ್ನತವರ್ಗದ ಪುರುಷರು ಮದುವೆಯಾಗುವುದಿಲ್ಲ. ಒಂದು ವೇಳೆ ಮದುವೆಯಾದರೂ ಅವರಿಗೆ ಇವರು ಉಪಪತ್ನಿಯರು. ಪುರುಷ ತಮ್ಮ ಮನೆಗೆ, ಮನೆಯ ವಾತಾವರಣಕ್ಕೆ ಇವರನ್ನು ಎಂದೂ ಸೇರಿಸಿಕೊಳ್ಳುವುದಿಲ್ಲ. ಕೆಲ ಪುರುಷರು ಮದುವೆಯಾಗಿದ್ದರು ಅವರು ಇವರ ಮನೆಗೇ ಬಂದು ಜೀವಿಸಿಬಿಡುತ್ತಾರೆ. ಅದು ದುಡಿಯದವರಾಗಿ ಸಂಪೂರ್ಣವಾಗಿ ತಮ್ಮ ಜೀವನವನ್ನು ಇವರಿಗೇ ಬಿಟ್ಟು ಮಧ್ಯವ್ಯಸನಿಗಳಾಗಿ ಆರ್ಥಿಕವಾಗಿ ನಟಿಯ ಮೇಲೆ ಅವಲಂಬಿತರಾಗಿರುವ ಅದೆಷ್ಟೋ ಪುರುಷರಿಂದು ಅವರ ಮನೆಗಳಲ್ಲಿಯೇ ವಾಸಿಸುತ್ತಿದ್ದಾರೆ.

ಒಟ್ಟಿನಲ್ಲಿ ರಂಗನಟಿಯ ಬದುಕು ವೇದಿಕೆಯಲ್ಲಿ ಒಂದೇ ಕಳೆ. ವೇದಿಕೆಯಿಂದ ಇಳಿದಾಕ್ಷಣವೇ ಇದು ಕಳಾಹೀನ. ಅಂದರೆ ಇವರಿಗೆ ಉನ್ನತ ವರ್ಗದವರೊಂದಿಗೆ ವೈವಾಹಿಕ ಬದುಕನ್ನು ಮಾಡುವಂತಿಲ್ಲ. ಇದಕ್ಕೆಲ್ಲಾ ಈ ಅಂಶಗಳೇ ಕಾರಣವಾಗಿದ್ದು ವ್ಯವಸ್ಥೆ ಸಂಪೂರ್ಣವಾಗಿ ಪಲ್ಲಟಗೊಂಡರೆ ಮಾತ್ರ ಈ ರಂಗನಟಿಯರು ಈ ಬಿಗಿ ವಾತಾವರಣದಲ್ಲಿ ಸರಾಗವಾಗಿ ಉಸಿರಾಡಲು ಸಾಧ್ಯವಾಗುತ್ತದೆ.

ಈವರೆಗೂ ಮದುವೆಯಾಗಿ ಉಳಿದಿರುವ ಅದೆಷ್ಟೋ ರಂಗನಟಿಯರು ಹಾಗೂ ಮದುವೆಯಾಗಿದು ನಂಬಿಕೊಂಡಿರುವ ಪುರುಷ ಕೈಕೊಟ್ಟಿರುವ ಇಂಥಹ ಸಂದರ್ಭದಲ್ಲಿ ನಟಿಯರು, ರಂಗಭೂಮಿಯಲ್ಲಿ

ವಯಸ್ಸಾದಂತೆ ಅವರ ವರ್ಚಸ್ಸು ಕಡಿಮೆಯಾಗಿ ಆರ್ಥಿಕ ಭದ್ರತೆ ಇಲ್ಲದಿರುವಾಗ ಅನಿವಾರ್ಯವಾಗಿ ಅವರು ಉಪಜೀವನಕ್ಕೆ ಇನ್ನೊಂದು ಹಾದಿಯನ್ನು ತುಳಿದಿರುವ ರಂಗನಟಿಯರೇ ಹೆಚ್ಚಾಗಿದ್ದಾರೆ.

ನಟಿಯರು ವರ್ಷದಲ್ಲಿ ಕೆಲವಾರು ತಿಂಗಳು ಮಾತ್ರ ರಂಗವೃತ್ತಿಯನ್ನು ಮಾಡುತ್ತಿದ್ದರೂ ತಮ್ಮ ಬಿಡುವಿನ ವೇಳೆಯಲ್ಲಿ ಇವರು ಸಾಮಾಜಿಕ ವೃತ್ತಿಗೆ ಅಂಟಿಕೊಂಡಿದ್ದಾರೆ. ದೈಹಿಕ ಸುಖವನ್ನು ನೀಡಿ ಅದರಿಂದ ಸಂಭಾವನೆಯನ್ನು ಪಡೆದು ತಮ್ಮ ಜೀವನ ನಿರ್ವಹಣೆಯನ್ನು ನಡೆಸುತ್ತಿದ್ದಾರೆ. ಹೆಸರಿಗೆ ಇವರು ರಂಗನಟಿಯರಾಗಿದ್ದರೂ, ಸಾಮಾಜಿಕವಾಗಿ ವೇಶ್ಯೆಯರಾಗಿದ್ದಾರೆ. ಇನ್ನು ಕೆಲವರು ಮದುವೆಯನ್ನು ಮಾಡಿಕೊಂಡಾಗಲಿ ಅಥವಾ ಒಬ್ಬ ವ್ಯಕ್ತಿಯನ್ನು ಸಂಗಾತಿಯಾಗಿ ಪಡೆದುಕೊಂಡು ಕೌಟುಂಬಿಕ ನೆಲೆಯಲ್ಲಿ ಸುಭದ್ರತೆಯ ಜೀವನವನ್ನು ನಡೆಸುತ್ತಿದ್ದಾರೆ. ಇವರುಗಳಲ್ಲಿ ಸಾಮಾಜಿಕವಾಗಿ ಅವರ ತಾಯಂದಿರು ಹೆಚ್ಚಾಗಿ ದೇವದಾಸಿ ಸಂಪ್ರದಾಯ ಹಾಗೂ ಮುತ್ತು ಕಟ್ಟಿಸಿಕೊಳ್ಳುವಿಕೆಯಂತಹ ಸಂಪ್ರದ್ರಾಯಗಳಿರುವುದು ಕಂಡು ಬರುತ್ತದೆ.

ಈ ಕಾರಣಕ್ಕಾಗಿಯೇ ಇಲ್ಲಿರುವ ಅನೇಕ ರಂಗನಟಿಯರು ಆ ಸಂಪ್ರದಾಯವನ್ನು ಒಪ್ಪಿಕೊಳ್ಳುತ್ತಲೇ 'ರಂಗವೃತ್ತಿ ಯನ್ನು ಅವಲಂಬಿಸಿದ್ದಾರೆ. ಈ ರಂಗನಟಿಯರು ಮುಂದೆ ತಮ್ಮ ಮಕ್ಕಳಿಗೆ ಈ ಸಂಪ್ರದಾಯವನ್ನು ಮುಂದುವರಿಸಲು ಇಚ್ಛಿಸುವುದಿಲ್ಲ (ಕೂಡ್ಲಿಗಿ ತಾಲೂಕಿನ ಕ್ಷೇತ್ರಕಾರ್ಯ ಅವಧಿಯಲ್ಲಿ ಎಲ್ಲ ರಂಗನಟಿಯರ ಅಭಿಪ್ರಾಯ ಇದಾಗಿತ್ತು). ಇವರು ತಮ್ಮ ವೃತ್ತಿಯನ್ನು ಕನಿಷ್ಠವೆಂದು ಪರಿಗಣಿಸಿದ್ದಾರೆ. ಈ ಕಾರಣದಿಂದ ಇದನ್ನು ವಂಶಪಾರಂಪರ್ಯವಾಗಿ ಬೆಳೆಸಲು ನಿರಾಕರಿಸುತ್ತಾರೆ. ಇಲ್ಲಿಯೇ ಸಾಮಾಜಿಕ ಮತ್ತು ರಂಗವೃತ್ತಿಯ ನಡುವೆ ಇರುವ ವೈರುಧ್ಯವನ್ನು ಗುರುತಿಸಬಹುದು.

ರಂಗನಟಿಯರೂ ವೈವಾಹಿಕ ಸಂಬಂಧದಿಂದ ಸಾಮಾಜಿಕ ಬದುಕನ್ನು ಕಂಡುಕೊಂಡಿದ್ದಾರೆ. ಕೆಲವು ನಟಿಯರು ತಮ್ಮ ಮನೆತನದ ವೇಶ್ಯಾ ಪದ್ಧತಿಯ ಪರಂಪರೆಯನ್ನು ಮುಂದುವರೆಸಿ ಪುರುಷರೊಂದಿಗೆ ವೈವಾಹಿಕ ಸಂಬಂಧವಿಲ್ಲದೇ ಜೀವಿಸುತ್ತಿದ್ದಾರೆ. ಇಂಥವರು ಹಲವಾರು ಬದುಕಿನ ಜಂಜಡಗಳಿಗೆ ಒಳಗಾಗಿದ್ದಾರೆ.

ಇನ್ನಾವುದೇ ಕಾರಣಕ್ಕಾಗಿ ಈ ನಟಿಯರು ಇಂಥಹ ಸಾಮಾಜಿಕ ವೃತ್ತಿಗೆ ಒಳಪಟ್ಟಿರುವಾಗ ಸಮಾಜ ಇವರನ್ನು ತುಂಬಾ ಕ್ರೌರ್ಯವಾಗಿ ಕಂಡು ಬಿಡುತ್ತದೆ. ವೇಶ್ಯೆ, ಸೂಳೆ, ಬಸವಿ, ದೇವದಾಸಿ, ನರ್ತಕಿ ಎಂದು ತೀರಾ ಕೀಳಾಗಿಕಂಡು ತನ್ನದೇ ಆಗಿರುವ ಪಶುವಿನಂತೆ ಇವರನ್ನು ನಡೆಸಿಕೊಂಡು ಎಲ್ಲ ದಬ್ಬಾಳಿಕೆಯನ್ನು ಇವರಿಗೆ ಮಾಡಿ ನಂತರದ ದಿನಗಳಲ್ಲಿ ವ್ಯವಸ್ಥೆಯಿಂದ ಸಂಪೂರ್ಣವಾಗಿ ಇವರನ್ನು ಹೊರಗಿಟ್ಟಿರುತ್ತಾರೆ.

ಈ ವೃತ್ತಿಯನ್ನು ಮಾಡುವಾಗ ಇವರು ತೀರಾ ಕಷ್ಟವನ್ನು ಪಡುತ್ತಾರೆ. ನೆಚ್ಚಿಕೊಂಡವನು ಕೈಕೊಟ್ಟಿರುವಾಗ ಅವನು ಯಾವುದೇ ರೀತಿಯಲ್ಲಿ ಈಕೆಗೆ ಸಹಕರಿಸದೇ ಇದ್ದ ಸಂದರ್ಭದಲ್ಲಿ ಇವರು ನಿಜಜೀವನದಲ್ಲಿ ಅಸ್ತಿತ್ವವಿಲ್ಲದ ಜೀವಿಗಳಾಗಿ ಬದುಕುತ್ತಿದ್ದಾರೆ. ಯಾವ ಹೆಣ್ಣೂ ತನಗೆ ಈ ವೃತ್ತಿಯೇ ಬೇಕೆಂದು ಬರುವುದಿಲ್ಲ.

ಪರಿಸ್ಥಿತಿಗಳು ನಟಿಯರನ್ನು ಒತ್ತಡದಿಂದ ಈ ವೃತ್ತಿಗೆ ಇಳಿಸಿ ಬಿಟ್ಟಿರುತ್ತವೆ. ಆದ್ದರಿಂದ ನಟಿ ಇಲ್ಲಿ ಸೂಳೆಗಾರಿಕೆ ಮಾಡುತ್ತಿರುತ್ತಾಳೆ. ಅಂದರೆ ಆಕೆ ಬರೀ ದೇಹಕ್ಕೆ ಜೀವವಿರುವ ಒಂದು ಪಶುವಾಗಿ ಮಾರ್ಪಾಟುಗೊಳ್ಳುತ್ತಾಳೆ. ಆಕೆ ಇರುವುದು ಇನ್ನೊಬ್ಬರ ಸುಖಕ್ಕಾಗಿಯೇ ವಿನಃ ಈಕೆಯ ಸುಖದ ಬಗ್ಗೆ ಯಾರೂ ಕಾಳಜಿಯನ್ನು ವಹಿಸುವುದಿಲ್ಲ. ಜೀವನಾವಶ್ಯಕ ವಸ್ತುಗಳಾದ ಆಹಾರ, ಬಟ್ಟೆ, ವಸತಿಗೂ ನಮ್ಮ ನಟಿಯರು ಇನ್ನೊಬ್ಬರ ಕಾಲಕೆಳಗಡೆ ಇರಬೇಕು.

ರಂಗಭೂಮಿಯಲ್ಲಿ ಆಕೆ ಏನೇ ಸೇವೆಯನ್ನು ಮಾಡಿದರೂ ಕೂಡ ಸಮಾಜದ ದೃಷ್ಟಿಯಲ್ಲಿ ಆಕೆ ಸೂಳೆಯೇ ಸರಿ. ದಿನನಿತ್ಯದ ಆಹಾರ ಸಿಗದೇ ಇದ್ದಾಗ ಇಂದು ಎಷ್ಟೋ ನಟಿಯರು ಮಧ್ಯವ್ಯಸನಿಗಳಾಗಿದ್ದಾರೆ. ಇವರು ತಮ್ಮ ಕಷ್ಟವನ್ನು ಮರೆಯಲೆಂದೇ ಇಂದು, ನಸಪುಡಿ, ಸಾರಾಯಿ, ವಿಸ್ಕಿ, ಹೆಂಡ ಮುಂತಾದವುಗಳನ್ನೆಲ್ಲಾ ಸೇವಿಸಿ ನಿರ್ಲಕ್ಷತೆಯ ಜೀವನವನ್ನು ನಡೆಸುತ್ತಿದ್ದಾರೆ.

ಕೆಲವು ನಟಿಯರು ನಿದ್ದೆಗೆಟ್ಟು ಅಥವಾ ನಿದ್ರೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಹಾಗೂ ಬಡತನದಿಂದ ಹಾಗೂ ಬೀದಿಪಾಲಾಗಿರುವುದರಿಂದ, ಯಾವುದೇ ಅಸ್ತಿತ್ವವಿಲ್ಲದೆ ವಿಲವಿಲನೆ ಒದ್ದಾಡುತ್ತಿದ್ದಾರೆ. "ಎಲ್ಲಾ ದೇವದಾಸಿಯರು ರಂಗನಟಿಯರಲ್ಲ, ಎಲ್ಲಾ ರಂಗನಟಿಯರು ದೇವದಾಸಿಯರಲ್ಲ" ಆದ್ದರಿಂದ ಇಂದಿನ ನಮ್ಮ ಸಮಾಜದಲ್ಲಿ ಇಂಥ ನಟಿಯರ ಜೀವನಕ್ಕೆ ಭದ್ರತೆಯನ್ನು ಒದಗಿಸಬೇಕು. ಆದರೆ ಈ ಮಾನವೀಯತೆ ಇಲ್ಲದ ಸಮಾಜವು ಅದೆಷ್ಟೋ ಜೀವಿಗಳನ್ನು ಹೀನ ದೃಷ್ಟಿಯಿಂದ ನೋಡಿಕೊಂಡಿವೆ.

ಇಂಥ ಕ್ರೌರ್ಯದ ನಡುವೆ, ಮೇಲು, ಕೀಳು, ತಾರತಮ್ಯದ ಹೆಸರಿನಲ್ಲಿ ಎಲ್ಲಾ ರೀತಿಯಿಂದಲೂ ರಂಗನಟಿಯರು ಸಮಾಜದ ದಬ್ಬಾಳಿಕೆಗೆ ಒಳಗಾಗಿದ್ದಾರೆ. ಇನ್ನು ಕೆಲವು ನಟಿಯರು ಈ ಅನಿಷ್ಟ ಸಂಪ್ರದಾಯದಿಂದ ದೂರವಿದ್ದು ಕೂಲಿ, ನಾಲಿ, ಮಾಡಿಯಾದರು ಬಡತನದ ಪರಿಸ್ಥಿತಿಗೆ ಒಳಗಾಗಿದ್ದಾರೆ. ನಟಿಯ ಈ ದೈನಂದಿನ ಬದುಕು ತುಂಬಾ ವಿಚಿತ್ರ. ಆದರೂ ಕ್ರೌರ್ಯದಿಂದ ಜೀವಿಸುತ್ತಿರುವುದಂತೂ ಸಂಪೂರ್ಣ ಸತ್ಯ. ಆದ್ದರಿಂದ ನಟಿಯರು ಈ ಎಲ್ಲಾ ಬಲಹೀನತೆಯಿಂದ ಬದುಕುತ್ತಿದ್ದು ತಮ್ಮದೇ ಆದ ಯಾವ ನೆಲೆ ಇಲ್ಲದ ಅತಂತ್ರ ಸ್ಥಿತಿಯಲ್ಲಿ ಇದ್ದಾರೆ. ಈ ವೃತ್ತಿ ಯಿಂದ ನಟಿಯರು ಬಲಿಪಶುಗಳಾಗಿ ಕ್ರೌರ್ಯವನ್ನು ಅನುಭವಿಸುತ್ತಾ ಹೀನವೃತ್ತಿಯಿಂದ ಅನುಭವಿಸಲಾರದ ಸೇವಾ ಹಿಂಸೆಗಳನ್ನೆಲ್ಲಾ ಅನುಭವಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ನಟಿಯರು ಜೀವನವನ್ನು ಕಂಡುಕೊಂಡು ಇದ್ದಷ್ಟೇ ಕಾಲು ಚಾಚಿಕೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ತಮ್ಮ ಅಸ್ತಿತ್ವವನ್ನು ಮೆರೆದಿದ್ದಾರೆ.

೪. ೨. ೨. ಮಕ್ಕಳು : ಬಳ್ಳಾರಿ ಜಿಲ್ಲೆಯ ರಂಗನಟಿಯ ಮಕ್ಕಳಿಂದು ಹಲವಾರು ಕ್ಷೇತ್ರಗಳಿಗೆ ತೆರಳಿದ್ದಾರೆ. ತಮ್ಮದೇ ಆದ ವೃತ್ತಿಯನ್ನು ಕಲಿಸದೇ ನಟಿಯರು ಎಷ್ಟೇ ಕಷ್ಟಬಂದರೂ ಅವರನ್ನು ವಿದ್ಯಾವಂತರನ್ನಾಗಿಸಿದ್ದಾರೆ. ಇನ್ನು ಕೆಲವರಿಗೆ ಸರಕಾರಿ ನೌಕರಿ ದೊರೆತು ತಮ್ಮ ಮಗ ಮಗಳೊಂದಿಗೆ ಹಾಯಾಗಿ ಇದ್ದಾರೆ. ಇನ್ನು

ಕೆಲವರು ಮಾಷಾಸನ ಪಡೆಯುತ್ತ ದುಡಿಯುವ ಮಕ್ಕಳೊಂದಿಗೆ ನೆಮ್ಮದಿಯಿಂದ ಬದುಕುತ್ತಿದ್ದಾರೆ. ನಟಿಯರ ಮಕ್ಕಳಿಗೆ ತಂದೆ, ತಾಯಿ, ಗುರು ಎಲ್ಲರೂ ಇವರೇ ಆಗಿ ಅವರ ಜೀವಿತಾವಧಿಗೆ ಏನೇ ತೊಂದರೆ ಬಂದರೂ ಅವನ್ನು ಧೈರ್ಯದಿಂದ ಎದುರಿಸಿ ಮುನ್ನುಗ್ಗಿ ತಮ್ಮ ಅಸ್ತಿತ್ವವನ್ನು ಮೆರೆದಿದ್ದಾರೆ. ಕೆಲವರು ಸರಕಾರಿ ನೌಕರಸ್ಥರಾಗಿದ್ದಾರೆ. ಇನ್ನು ಕೆಲವರು ಆರ್ಕೆಸ್ಟ್ರಾವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಒಟ್ಟಿನಲ್ಲಿ ಈ ಮದುವೆ, ಮಕ್ಕಳು, ವೃದ್ಧಾಪ್ಯ ಈ ಎಲ್ಲಾ ಹಂತಗಳಲ್ಲಿ ನಟಿಯರಿಂದು ನೆಮ್ಮದಿಯಿಂದ ಬದುಕಲು ಸಾಧ್ಯವಾಗಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕೆಲವು ನಟಿಯರು ಶಿಕ್ಷಕಿ ಮಗಳೊಂದಿಗೆ, ಗುಮಾಸ್ತ ಮಗಳೊಂದಿಗೆ, ದುಡಿಯುವ ಮಗನೊಂದಿಗೆ ನೆಮ್ಮದಿಯನ್ನು ಕಂಡುಕೊಂಡಿದ್ದಾರೆ. ಇನ್ನೊಂದು ರೀತಿಯಲ್ಲಿ ರಂಗನಟಿಯರು ಮಕ್ಕಳಿಂದ ದೂರವಾಗಿದ್ದಾರೆ. ಕಾರಣ ಇವರು ನಟಿಯರಾಗಿರುವುದೇ ದೊಡ್ಡ ಶಾಪ. ಮುಪ್ಪಿನಲ್ಲಿ ಮಕ್ಕಳಿಂದ ದೂರವಾಗಿದ್ದು ಬೀದಿ ಪಾಲಾಗಿರುವ ಎಷ್ಟೋ ನಟಿಯರು ನಮ್ಮ ದಾಖಲಾತಿಗೆ ಸಿಗುತ್ತಾರೆ. ಅದ್ದರಿಂದ ನಟಿಯರು ತಮ್ಮ ಮಕ್ಕಳ ದೃಷ್ಟಿಯಿಂದ ಕೆಲವರು ಪುಣ್ಯವಂತರಾಗಿದ್ದಾರೆ. ಇದೆಲ್ಲಾ ಅವರವರು ಪಡೆದುಕೊಂಡಿರುವ ಪ್ರಯತ್ನ, ಶ್ರಮ, ಜಾಣ್ಮೆ, ದಕ್ಷತೆ ಈ ಎಲ್ಲಾ ಅಂಶಗಳು ಕೂಡ ರಂಗನಟಿಯರ ಜೀವನವನ್ನು ಬದಲಾಯಿಸಲು ಪ್ರಯತ್ನಿಸುತ್ತವೆ. ಆದ್ದರಿಂದ ನಟಿಯರ ಮಕ್ಕಳೆಲ್ಲರು ಒಳ್ಳೆಯ ಸ್ಥಾನದಲ್ಲಿಲ್ಲ. ಕಾರಣ ತಾಯಿಯ ಮಾತನ್ನು ವಯಸ್ಸಿಗೆ ಬಂದ ಮಗ ಕೇಳುವುದೇ ಇಲ್ಲ. ಆದ್ದರಿಂದ ಅವರು ಕಳಕಳಿಯಿಂದ ಜೀವನವನ್ನು ಮಾಡದೇ ತಾಯಿ ಎಂಬುದನ್ನೇ ಮರೆತು ಬಿಟ್ಟಿದ್ದಾರೆ. ಮಕ್ಕಳ ಭವಿಷ್ಯಕ್ಕಾಗಿ ಕೂಲಿನಾಲಿ ಮಾಡಿ ಬೇರೆಯವರ ಮನೆಯ ಮುಸುರೆಯನ್ನು ತಿಕ್ಕಿ ಹೆಣಗಿದವರು ಈ ರಂಗನಟಿಯರು (ಉದಾ: ಸೆರೆಗಾರ ಗಂಗಮ್ಮ ಮುಂತಾದವರು).

ವಯಸ್ಸಿಗೆ ಬಂದಿರುವ ಗಂಡು ಮಕ್ಕಳು, ಮಧ್ಯವ್ಯಸನಕ್ಕೆ ಬಲಿಯಾಗಿ ತಮ್ಮ ಜೀವಿತ ಭವಿಷ್ಯವನ್ನು ಹಾಳುಮಾಡಿ ಕೊಂಡಿದ್ದಾರೆ. ಯಾವ ತಾಯಿಗೂ ಮಕ್ಕಳಲ್ಲಿ ಭಿನ್ನ ಭೇದವಿರುವುದಿಲ್ಲ. ಎಲ್ಲರೂ ಸುಖವಾಗಿರಲೆಂದೇ ತಂದೆ ತಾಯಿಗಳು ಬಯಸುತ್ತಾರೆ. ಆದರೆ ಸನ್ಮಾರ್ಗ ಹಿಡಿಯುವುದು ಬಿಡುವುದು ಆ ಮಕ್ಕಳಿಗೇ ಬಿಟ್ಟಿದ್ದು. ತಂದೆ ತಾಯಿ ಈ ನಟಿಯರೇ ಆಗಿರುವುದರಿಂದ ಅವರ ಭವಿಷ್ಯಕ್ಕಾಗಿ ಎಷ್ಟೋ ಕಷ್ಟಗಳನ್ನು ಅನುಭವಿಸಿದ್ದಾರೆ. ಅದನ್ನು ಅರಿತುಕೊಳ್ಳುವುದು ಆ ಮಕ್ಕಳಿಗೆ ಬಿಟ್ಟಿದ್ದು. ನಟಿಯರಿಂದು ತಮ್ಮ ನಿವೃತ್ತಿಯಿಂದ ಮಕ್ಕಳು, ಮೊಮ್ಮಕ್ಕಳೊಂದಿಗೆ ಸಂತಸದಿಂದಿದ್ದು ತಮ್ಮ ರಂಗಭೂಮಿಯ ಬದುಕನ್ನು ಮೆಲುಕು ಹಾಕುತ್ತಾ ಕಾಲಹರಣ ಮಾಡುತ್ತಿದ್ದಾರೆ.

೪.೨.೩. ವೃದ್ಧಾಪ್ಯ : ಮಾನವನ ಜೀವನದಲ್ಲಿ ವೃದ್ಧಾಪ್ಯವೂ ಒಂದು ಹಂತ. ಈ ಹಂತದಲ್ಲಿ ಮನುಷ್ಯನಿಗೆ ಶಾಂತಿ, ಸುಖ, ನೆಮ್ಮದಿ, ಸಹಕಾರದ ಜೀವನಬೇಕು. ಆದರೆ ಈ ಸಮಯದಲ್ಲೂ ಕಷ್ಟಪಡಬೇಕೆಂದರೆ ಎಲ್ಲವೂ ವಿಧಿಯ ಕೈವಾಡ. 'ಯೋಗಿ ಪಡೆದದ್ದು ಯೋಗಿಗೆ, ಜೋಗಿ ಪಡೆದದ್ದು ಜೋಗಿಗೆ' ಎನ್ನುವಂತೆ

ಎಲ್ಲವನ್ನು ಪಡೆಯಲು ಒಂದು ಯೋಗಬೇಕು. ಅದು ನಮ್ಮ ಹುಟ್ಟಿನಿಂದಲೇ ಬಂದಿದ್ದರೆ ಸರಿ ಇಲ್ಲದಿದ್ದರೆ ಜೀವನವೇ ಕಷ್ಟದಾಯಕ ವಾಗಿ ಬಿಡುತ್ತದೆ.

ನಟಿಯರು ನಲವತ್ತೈದು ವಯಸ್ಸು ದಾಟಿದ ಮೇಲೆಯೂ ರಂಗಭೂಮಿಯ ಸೇವೆಯನ್ನು ಮಾಡುತ್ತಿದ್ದಾರೆ. ಅಂಥವರು ಕೆಲವೇ ಕೆಲವರು ಮಾತ್ರ ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೂ ಕೆಲವರನ್ನು ನಮ್ಮ ಹವ್ಯಾಸಿ ಕಲಾವಿದರು ವಯಸ್ಸಾದ ಮೇಲೆ ಕರೆಯುವುದೇ ಅವರು ಎಲ್ಲರ ನಿರ್ಲಕ್ಷತೆಗೆ ಒಳಗಾಗಿ ರಂಗಭೂಮಿಯಿಂದ ದೂರವಾಗಿ ಬಿಡುತ್ತಾರೆ.

ಮಾಸಾಶನದ ದಿನಗಳು ಹತ್ತಿರ ಬರುತ್ತಿದ್ದರೂ ಕೆಲ ನಟಿಯರು ಮಾತ್ರ ತಮ್ಮ ನಟನಾ ವರ್ಚಸ್ಸನ್ನು ಕಳೆದುಕೊಂಡೇ ಇಲ್ಲ. ಈಗಲೂ ಅವರು ರಂಗಭೂಮಿಯಲ್ಲಿ ಪ್ರಬುದ್ಧ ನಟಿಯರೆನಿಸಿಕೊಂಡು ಹೆಸರುವಾಸಿ ಯಾಗಿದ್ದಾರೆ. ಅವರಿಗೆ ವಯಸ್ಸಾಗಲೀ, ವೃದ್ಧಾಪ್ಯವಾಗಲಿ ಸಮಸ್ಯೆಯಾಗಿ ಕಂಡು ಬಂದೇ ಇಲ್ಲ.

ಸುಭದ್ರಮ್ಮ ಮನ್ಸೂರು : ಇಂದಿಗೂ ಗ್ರಾಮೀಣ ರಂಗಭೂಮಿಯಲ್ಲಿ ರಕ್ತರಾತ್ರಿಯ ದ್ರೌಪತಿಯಾಗಿ, 'ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿ ಮಲ್ಲಮ್ಮನಾಗಿ ಪ್ರೇಕ್ಷಕರನ್ನು ದ್ವಾಪರ ಯುಗಕ್ಕೂ, ದೇವಲೋಕಕ್ಕೂ ಕರೆದೊಯ್ಯುವ ಮೂಲಕ ತಮ್ಮ ಅದ್ಭುತ ಪ್ರತಿಭೆಯಿಂದ ಗಾಯನದಿಂದ ನೋಡುಗರನ್ನು ಮೂಕವಿಸ್ಮಿತ ರನ್ನಾಗಿಸುತ್ತಾರೆ.

ಕೆ.ನಾಗರತ್ನಮ್ಮ : 'ಶೀಲಾವತಿ' ನಾಟಕದಲ್ಲಿ ಶೀಲಾವತಿಯಾಗಿ, ರಕ್ತರಾತ್ರಿಯಲ್ಲಿ ಉತ್ತರೆಯಾಗಿ ರಂಗಭೂಮಿಯಲ್ಲಿ ಅಸಾಧಾರಣ ಪ್ರತಿಭೆಯನ್ನು ಮೆರೆಯುತ್ತಾರೆ. ಈ ಪಾತ್ರಕ್ಕೆ ಪ್ರೇಕ್ಷಕರು ಇವರನ್ನೇ ಕರೆಯು ತ್ತಾರೆ ವಿನಃ ಈ ಸ್ಥಾನದಲ್ಲಿ ಬೇರೆ ನಟಿಯರನ್ನು ಊಹಿಸಿಕೊಳ್ಳುವುದಿಲ್ಲ ಕೂಡ.

ಕೆ.ವರಲಕ್ಷ್ಮಿ : ಹಲವಾರು ಸಾಮಾಜಿಕ ಹಾಗೂ ಪೌರಾಣಿಕ ನಾಟಕಗಳಲ್ಲೂ ನಾಯಕಿ, ಹಾಸ್ಯ ಪಾತ್ರಗಳನ್ನು ಮಾಡಿ ಬಳ್ಳಾರಿ ಜಿಲ್ಲೆ ಹಾಗೂ ಆಂಧ್ರದಲ್ಲಿ ಹೆಸರುವಾಸಿ ನಟಿ ಎನಿಸಿದ್ದಾರೆ. ಆಂಧ್ರದಲ್ಲಿ ವರಲಕ್ಷ್ಮಿ ಬಂದರೆ ನಾಟಕ ನೋಡಲು ಹಲವಾರು ಪ್ರೇಕ್ಷಕರು ಇಂದಿಗೂ ಬರುತ್ತಾರೆ.

ಪಿ.ಪದ್ಮ : 'ಭಾನುಮತಿ' ಪಾತ್ರವನ್ನು ರಕ್ತರಾತ್ರಿ ನಾಟಕದಲ್ಲಿ ಇವರೇ ಮಾಡಬೇಕು. ಸಂಗ್ಯಾ-ಬಾಳ್ಯದಲ್ಲಿ ಇವರೇ ಗಂಗೆಯಾಗಬೇಕು, ಇಲ್ಲದಿದ್ದರೆ ರಂಗಭೂಮಿಯು ರಂಗೇರುವುದೇ ಇಲ್ಲ. ವಯಸ್ಸಾದರೂ ಕೂಡ ನಟನೆಯ ಉತ್ಸುಕತೆಗೆ ವಯಸ್ಸಾಗಿರುವುದಿಲ್ಲ ಎಂದು ಈ ಮೇಲಿನ ನಟಿಯರು ಸಾಬೀತುಪಡಿಸುತ್ತಾರೆ.

ನಲವತ್ತೈದು ವಯಸ್ಸು ದಾಟಿದ ನಟಿಯರ ಅನುಭವ : ಮಾನವನಿಗೆ ಒಂದೊಂದು ಕಾಲಘಟ್ಟ ಒಂದೊಂದು ರೀತಿಯ ಅನುಭವವನ್ನು ನೀಡುತ್ತದೆ. ಮನುಷ್ಯ ಬರಬರುತ್ತ ಪಕ್ವವಾಗುತ್ತಾ ಬರುತ್ತಾನೆ. ಎಷ್ಟೋ ಜನರಿಗೆ ವಯಸ್ಸು ಇದ್ದಾಗ ಕಷ್ಟಬಂದು ಮುಪ್ಪಿನ ಕಾಲದಲ್ಲಿ ಅವರು ಸುಖವಾಗಿರುತ್ತಾರೆ. ಇನ್ನೂ ಕೆಲವರು ಯೌವನದಲ್ಲಿ ಸುಖವಾಗಿದ್ದು ಮುಪ್ಪಿನಲ್ಲಿ ಕಷ್ಟಪಡುತ್ತಾರೆ. ಹೀಗೆ ಮನುಷ್ಯನಿಗೆ ಕಷ್ಟಗಳು ಹಗಲು

[illegible]

ಪ್ರಸ್ತುತದಲ್ಲಿ ನಲವತ್ತೈದು ವಯಸ್ಸು ದಾಟಿದ ರಂಗನಟಿಯರು

ಮರಿಯಮ್ಮನಹಳ್ಳಿ

ನಟಿಯರು	ವಯಸ್ಸು	ಊರು
ಜಿ.ಹನುಮಂತಮ್ಮ	೬೦	ಮರಿಯಮ್ಮನಹಳ್ಳಿ
ಮಣಿಗಾರ ಹನುಮಂತಮ್ಮ	೬೮	"
ನಂದಿಹಳ್ಳಿ ರಾಮಕ್ಕ	೫೮	"
ತಿರುಮಲ	೬೦	"
ಹೆಚ್.ಶಾಂತಮ್ಮ	೬೦	"
ಸೆರೆಗಾರ ಗಂಗಮ್ಮ	೬೫	"
ವಿ.ಶೈಲಶ್ರೀ	೫೮	"
ಸೆರೆಗಾರ ಸುವರ್ಣಮ್ಮ	೬೫	"
ತಳವಾರ ಹನುಮಂತಮ್ಮ	೬೫	"
ಕಟಗಿ ಕನಕಮ್ಮ	೬೦	"
ಕೆ.ನಾಗರತ್ನಮ್ಮ	೫೦	"
ಗಂಟಿ ಹನುಮಂತಮ್ಮ	೫೫	"
ಎಸ್. ರೇಣುಕಾ	೪೫	"
ಸೆರೆಗಾರ ಶ್ಯಾಮಲ	೪೫	"
ಎಸ್.ಸುಮತೆಮ್ಮ	೬೦	"
ಎಸ್.ಶ್ಯಾಮಲ	೫೫	"
ಬಿ.ಶಾರದ	೪೫	"
ಕೂಡ್ಲಿಗಿ ನಾಗವೇಣಿ	೪೫	"
ಹನುಮಂತಮ್ಮ	೪೮	"
ಶಾಂತಮ್ಮ	೫೫	"
ಗಂಟಿ ಹುಲಿಗೆಮ್ಮ	೬೫	"
ಶ್ಯಾಮಲಾ	೫೫	"
ಸಾವಿತ್ರಿ	೫೮	"
ಕನಕವ್ವ	೬೮	"

ಬಳ್ಳಾರಿ

ನಟಿಯರು	ವಯಸ್ಸು	ಊರು
ಅಂಜಿನಮ್ಮ	೫೫	ಬಳ್ಳಾರಿ
ಸುಜಾತಮ್ಮ	೭೦	"
ಮೀನಳ್ಳಿ ಪಾರ್ವತಮ್ಮ	೬೦	"
ಬಿ.ಉಷಾರಾಣಿ	೫೫	"
ಮನ್ನೂರು ಸುಭದ್ರಮ್ಮ	೫೮	"
ಭವಾನಿ ದೇವಿ	೬೦	"

ಹೊಸಪೇಟೆ

ನಟಿಯರು	ವಯಸ್ಸು	ಊರು
ಜಯಮ್ಮ	೬೦	ಹೊಸಪೇಟೆ
ಸರಸ್ವತಿ	೬೫	''
ಶಾಂತಮ್ಮ	೪೫	''
ಮಧುರಾ	೫೫	''
ಮಂಗಳಾ	೪೫	''

ಬಾಚಿಗೊಂಡನಹಳ್ಳಿ

ನಟಿಯರು	ವಯಸ್ಸು	ಊರು
ಸಾವಿತ್ರಮ್ಮ	೬೦	ಬಾಚಿಗೊಂಡನಹಳ್ಳಿ
ಕೊಟ್ರಬಸಮ್ಮ	೫೫	''

ಕಂಪ್ಲಿ

ನಟಿಯರು	ವಯಸ್ಸು	ಊರು
ವಾಸಂತಿ	೬೫	ಕಂಪ್ಲಿ
ಪಾರ್ವತಮ್ಮ	೬೦	''
ಈರಮ್ಮ	೬೫	''

ಕೂಡ್ಲಿಗಿ

ನಟಿಯರು	ವಯಸ್ಸು	ಊರು
ಸಣ್ಣ ಮುದ್ದಮ್ಮ	೬೦	ಕೂಡ್ಲಿಗಿ
ದೊಡ್ಡ ಮುದ್ದಮ್ಮ	೬೫	"
ಓಬಮ್ಮ	೬೦	"
ಟಿ.ಭಾರತಿ	೪೫	"
ಪಿ.ಪದ್ಮ	೫೦	"
ಕಮಲಮ್ಮ	೪೫	"
ಕೆ.ದುಶೀಲ	೪೫	"
ಸೊಲ್ಲಮ್ಮ	೫೦	"
ಲಕ್ಷ್ಮಿ	೪೫	"
ವೆಂಕಮ್ಮ	೫೦	"
ಕಮಲಮ್ಮ	೫೫	"
ರತ್ನಮ್ಮ	೪೫	"
ದುರುಗಮ್ಮ	೬೫	"

ವಿರೂಪಾಪುರ (ಕೂಡ್ಲಿಗಿ ತಾಲೂಕು)

ನಟಿಯರು	ವಯಸ್ಸು	ಊರು
ಎಸ್.ಅಂಜಿನಮ್ಮ	೪೫	ವಿರೂಪಾಪುರ
ಕೆ.ನಾಗರತ್ನ	೪೫	ಚೌಡಾಪುರ
ಎಸ್.ನಾಗವೇಣಿ	೪೮	ವಿರೂಪಾಪುರ
ಬಿ.ಶಾರದಾ	೪೭	"
ಬಿ.ಲಕ್ಷ್ಮಿದೇವಿ	೪೫	"
ಬಿ.ನಾಗಮ್ಮ	೪೮	"
ಬಿ.ಹಂಪಮ್ಮ	೫೦	"
ಬಿ.ಭರಮಮ್ಮ	೫೫	"
ಕರಿಬಸಮ್ಮ	೬೦	"

ಹಗರಿಬೊಮ್ಮನಹಳ್ಳಿ

ನಟಿಯರು	ವಯಸ್ಸು	ಊರು
ಬೆಳ್ಳಕ್ಕಿ ಚೌಡಮ್ಮ	೬೦	ಚಿಂತರಪಳ್ಳಿ
ಹೆಚ್.ಸರೋಜ	೫೮	ಹಗರಿಬೊಮ್ಮನಹಳ್ಳಿ
ಬಿ.ಸುಜಾತಮ್ಮ	೫೫	ವಟಮನಹಳ್ಳಿ
ಬಿ.ಗಂಗಮ್ಮ	೪೫	ವಟಮನಹಳ್ಳಿ
ಬಿ.ನಾಗಮ್ಮ	೪೫	ತಳಕಲ್ಲು
ಬಿ.ಗಂಗಮ್ಮ	೬೦	ಕೋಗಳಿ

ಕಪ್ಪಗಲ್

ನಟಿಯರು	ವಯಸ್ಸು	ಊರು
ಹನುಮಂತಮ್ಮ	೬೦	ಕಪ್ಪಗಲ್
ಪದ್ಮಮ್ಮ	೫೫	ಕಪ್ಪಗಲ್

ಹಡಗಲಿ

ನಟಿಯರು	ವಯಸ್ಸು	ಊರು
ಬಿ.ಗಂಗಮ್ಮ	೫೮	ಸೋಗಿ
ಕಮಲಮ್ಮ	೫೮	ಹಡಗಲಿ
ಭಾಗ್ಯ	೬೦	ಹೊಳಗುಂದಿ
ಕಸ್ತೂರಿ	೫೫	ತಿಮ್ಲಾಪುರ

ರಾತ್ರಿಗಳಿದ್ದಂತೆ. ಬಂದು ಬಂದು ಹೋಗುತ್ತಿರುತ್ತದೆ. ಎಲ್ಲರ ಜೀವನದ ಪರಿ ಒಂದೇ ಆಗಿದ್ದರೂ ಆದರೆ ಅವುಗಳ ರೀತಿ ಅಂದರೆ ಬದುಕಿನ ರೀತಿ ಬೇರೆ ಬೇರೆಯಾಗಿರುತ್ತದೆ. ಬದುಕೆಂಬುದು ಹಲವು ವೈವಿಧ್ಯಗಳ ಒಂದು ಸಂಗಮ. ಕಷ್ಟ-ಸುಖಗಳನ್ನು ಹೊಂದಿರುವುದೇ ಬದುಕು. ಅವುಗಳನ್ನೆಲ್ಲಾ ಮೆಟ್ಟಿನಿಂತು ಬದುಕುವುದೇ ಮಾನವ ಧರ್ಮದ ಹೊಣೆಯಾಗಿರುತ್ತದೆ. ಹಾಗೆಯೇ ಬದುಕಿದವರು ಇಂದಿಗೂ ಬದುಕುತ್ತಿರುವವರು ನಮ್ಮ ಬಳ್ಳಾರಿ ಜಿಲ್ಲೆಯ ರಂಗನಟಿಯರು.

ಹಗರಿಬೊಮ್ಮನಹಳ್ಳಿ ತಾಲೂಕಿನ ಚಿಂತರಪಳ್ಳಿ ಗ್ರಾಮದ ಬೆಳ್ಳಕ್ಕಿ ಚೌಡಮ್ಮರ ಅನುಭವದ ಮಾತು 'ನಾನು ಮೊದಲು ರಂಗಭೂಮಿಗೆ ಸೇರಿದ್ದು ಸ್ವ ಆಸಕ್ತಿಯಿಂದ. ಎಲುವತ್ತಿ ವೀರಣ್ಣ, ಏಣಗಿ ಕಾಸಿಂಸಾಬ್ ಇವರೆಲ್ಲರ ಜೊತೆಗೆ ಗ್ರಾಮೀಣ ರಂಗಭೂಮಿಯ ಹಲವಾರು ಕಡೆಗಳಲ್ಲಿ ಹೋಗಿ ಅಭಿನಯಿಸಿ ಬಂದಿದ್ದೇನೆ. ಆಗಿನ ಕಾಲಕ್ಕೆ ರಂಗಭೂಮಿ ಸೇವೆಯು ನನಗೆ ತೃಪ್ತಿಯನ್ನು ತಂದಿದೆ. ನನ್ನ ಮಗ ಈಗ ಸರಕಾರಿ ನೌಕರಿ ಮಾಡುತ್ತಿದ್ದಾನೆ. ನಾನು ಈ ಮುಪ್ಪಿನ ಕಾಲದಲ್ಲಿ ಮಗ, ಸೊಸೆ, ಮಕ್ಕಳು, ಮೊಮ್ಮಕ್ಕಳೊಂದಿಗೆ ಸುಖವಾಗಿದ್ದೇನೆ. ಆಗ ನಾವು ರಂಗಭೂಮಿಗೆ ಸೇರಲೇ ಬೇಕೆಂದು ಬಂದವರಲ್ಲ. ಮನೆಯಲ್ಲಿ ಆ ಪರಂಪರೆಯಿಂದಲೂ ಹಾಗೂ ಸ್ವ ಇಚ್ಚೆಯಿಂದಲು ಸೇರಿದ್ದೆ. ರಂಗಬದುಕು ನನಗೆ ಸಂಪೂರ್ಣವಾಗಿ ತೃಪ್ತಿ ನೀಡಿದೆ' ಎನ್ನುತ್ತಾರೆ (೫ ಮೇ ೨೦೦೩, ಕ್ಷೇತ್ರಕಾರ್ಯ).

ಬಳ್ಳಾರಿಗೆ ಹೋದಾಗ, ಸುಜಾತಮ್ಮ ಭೇಟಿಯಾಗಿ ಅನುಭವವನ್ನು ಹಂಚಿಕೊಂಡಾಗ, 'ವಯಸ್ಸಾದ ನಂತರ ಯಾರೂ ರಂಗಕ್ಕೆ ನಮ್ಮನ್ನು ಆಹ್ವಾನಿಸುವುದಿಲ್ಲವಾದರು ನಾವು ಪರಂಪರೆಯನ್ನು ಉಳಿಸಿಕೊಂಡು ಹೋಗಬೇಕೆನ್ನುವವರು. ನಮ್ಮದೇ ಆದ ಒಂದು ತಂಡವನ್ನು ಕಟ್ಟಿದರೆ ಒಬ್ಬ ನಟಿಗಾಗಲೀ, ಕಲಾವಿದೆಯರಿಗಾಗಲೀ ಯಾವತ್ತು ಬೆಲೆ ಇದ್ದೇ ಇರುತ್ತದೆ. ಆದರೆ ನಮಗೆ ನಾವೇ ವಯಸ್ಸು ಮುಗಿದಿದೆ ಎಂಬ ಕೀಳರಿಮೆ ಮನೋಭಾವವನ್ನು ಬೆಳೆಸಿಕೊಳ್ಳಬಾರದು' ಎಂಬ ಸಂದೇಶವನ್ನು ಇಂದಿನ ರಂಗನಟಿಯರಿಗೆ ಸುಜಾತಮ್ಮ ಹೇಳುತ್ತಾರೆ (ಸಂದರ್ಶನ, ೨೦೦೧ ಸೆಪ್ಟೆಂಬರ್ ೫, ಬಳ್ಳಾರಿ).

'ಮೀನಳ್ಳಿ ಪಾರ್ವತಮ್ಮ ಎಂಬ ನಟಿಯು ಕೂಡ ರಂಗಭೂಮಿ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ರಂಗಭೂಮಿಗೆ ನಾವು ಏನನ್ನು ಕೊಟ್ಟಿದ್ದೇವೆ ಎಂಬುದು ಮುಖ್ಯ ಎಂಬ ವಿಶಾಲ ಮನೋಭಾವವನ್ನು ತಳೆಯುತ್ತಾರೆ' (ಸಂದರ್ಶನ, ೨೦೦೧ ಸೆಪ್ಟೆಂಬರ್ ೫, ಬಳ್ಳಾರಿ). ಹೀಗೆ ಸಂದರ್ಶನದಲ್ಲಿ ಹಲವಾರು ನಟಿಯರು ತಮ್ಮ ಜೀವನಾನು ಭವದ ಅಭಿಪ್ರಾಯಗಳನ್ನು ಹಂಚಿಕೊಂಡರು.

ಜಿ.ಆಂಜಿನಮ್ಮ ಬಳ್ಳಾರಿ ಇವರು ಮೊದಮೊದಲು ನಾನು ಸಾಮಾಜಿಕ ನಾಟಕಗಳನ್ನು ಮಾಡುತ್ತಿದ್ದೆ. ಆದರೆ ಈಗೀಗ ಅಂದರೆ ನಲವತ್ತೈದು ದಾಟಿದ ಮೇಲೆ ಬಯಲಾಟಗಳಿಗೆ ಹೋಗುವುದು ರೂಢಿಸಿಕೊಂಡಿದ್ದೇನೆ. ನಮ್ಮಲ್ಲಿನ ಯುವಕರು ಯಾವಾಗಲು ಹದಿನಾರರ ಹುಡಿಗಿಯನ್ನೇ ಬಯಸುತ್ತಾರೆ. ಆದರೆ ನಮಗೆ ವಯಸ್ಸು ಯೌವನ ಸ್ಥಿರವಾಗಿರುವುದಿಲ್ಲ ಅಲ್ಲವೆ? ಎಂದು ನಗುತ್ತಾ ಹೇಳುತ್ತಾರೆ (ಸಂದರ್ಶನ, ೨೦೦೨ ನವೆಂಬರ್ ೧೦, ವಿರೂಪಾಪುರ).

ಬಿ.ಗಂಗಮ್ಮ ಸೋಗಿ ಇವರ ಮಾತಿನ ಪ್ರಕಾರ "ರಂಗಭೂಮಿಯು ಏನಿದ್ದರೂ ವಯಸ್ಸು ಇದ್ದಾಗ ಮಾತ್ರ. ನಂತರದ ದಿನಗಳನ್ನು ಪ್ರತಿನಿತ್ಯ ಎಣಿಸುತ್ತಾ ಬಡತನದ ಬೇಗೆಯಲ್ಲಿ ಕೂಲಿನಾಲಿ ಮಾಡುತ್ತಾ, ಯಾವಾಗ ಮಾಸಾಶನ ಬರುತ್ತದೆಯೋ ಎಂದು ಕಾಯುವ ಕೆಲಸವೇ ನಮ್ಮದಾಗಿದೆ. ಎಲ್ಲದಕ್ಕೂ ನಾವು

ಪಡೆದುಕೊಂಡು ಬಂದಿರಬೇಕು'' ಎಂದು ತಲೆಯ ಮೇಲೆ ಕೈಯಿಟ್ಟುಕೊಳ್ಳುತ್ತಾರೆ (ಸೋಗಿ, ೨೦೦೨ ಡಿಸೆಂಬರ್, ಸಂದರ್ಶನ ಸಂದರ್ಭ).

ಏಣಗಿಯ ನೀಲಮ್ಮರ ಅಭಿಪ್ರಾಯದಲ್ಲಿ ''ಹಲವಾರು ಕಂಪನಿಗಳಲ್ಲಿದ್ದು ಅನುಭವ ಪಡೆದಿರುವ ನಾನು ಮೊದಲು ನಾಯಕಿ ಪಾತ್ರವನ್ನು ಮಾಡುತ್ತಿದ್ದೆ, ಆದರೆ ಈಗ ನಿರ್ದೇಶನವನ್ನು ಆರಿಸಿಕೊಂಡು 'ಬಡವ ಬದುಕಲೇಬೇಕು' ಎಂಬ ನಾಟಕ ಬರೆದು ನಿರ್ದೇಶಿಸಿದ್ದೇನೆ. ನಲವತ್ತೈದು ದಾಟಿದರೇನು ಐವತ್ತು ಆದರೇನು ಜೀವನದ ಅಂತ್ಯ ಕಾಲದವರೆಗೂ ರಂಗಭೂಮಿ ಸೇವೆಯನ್ನು ಮಾಡುವುದೇ ನನ್ನ ಬಾಳಿನ ಧ್ಯೇಯವಾಗಿದೆ'' ಎನ್ನುತ್ತಾರೆ (ಏಣಗಿ ೨೦೦೩, ಮೇ, ಸಂದರ್ಶನ ಸಂದರ್ಭ).

ಹೊಸಪೇಟೆ ಮಧುರಾ ಅವರ ಪ್ರಕಾರ ''ನಮ್ಮ ಕಾಲದಲ್ಲಿ ಪ್ರೇಕ್ಷಕರು ಸೌಂದರ್ಯವನ್ನೇನೂ ನೋಡುತ್ತಿರಲಿಲ್ಲ. ಯಾವ ನಟಿ ಯಾವ ಪಾತ್ರಕ್ಕೆ ಸರಿಹೊಂದುತ್ತಾಳೆ, ಹೆಚ್ಚು ಅನುಭವವಿರುವ ನಟಿಯರಿಗೆ ಆಮಂತ್ರಣವನ್ನು ಕೊಟ್ಟು ಹೋಗುತ್ತಿದ್ದರು. ಆದರೆ ಈಗಿನ ಗ್ರಾಮೀಣ ರಂಗಭೂಮಿಯ ಹವ್ಯಾಸಿ ಕಲಾವಿದರಿಗೆ ನಟಿಯು ಹದಿನೆಂಟು ವರ್ಷದವಳೇ ಆಗಿರಬೇಕು. ತೆಳ್ಳಗೆ, ಬೆಳ್ಳಗೆ ಬಳುಕುತ್ತಿರಬೇಕು. ಅವಳಿಗೆ ಮಾತನಾಡಲು ಬಂದರೇನು? ಬಿಟ್ಟರೇನು? ಅವರ ಜೊತೆ ಕ್ಯಾಸೆಟ್‌ಗೆ ತಕ್ಕಂತೆ ಅರ್ಧ ಲಂಗವನ್ನು ಹಾಕಿಕೊಂಡು ಸರಿಯಾದ ಶಿಸ್ತು ಇಲ್ಲದೆ ಕುಣಿದು ಕುಪ್ಪಳಿಸಿ ಅವರ ಕೈ ಹಿಡಿದು ಮೈತಾಕುವಂತೆ ಡ್ಯಾನ್ಸ್ ಮಾಡಿದರೆ ಆಕೆಯನ್ನೇ ಪ್ರತೀ ವರ್ಷ ಕರೆದುಬಿಡುತ್ತಾರೆ'' ಎಂದು ಬೇಸರದಿಂದ ಮಧುರಾ ಅವರು ಹೇಳುತ್ತಾರೆ (ಸಂದರ್ಶನ, ೨೦೦೨ ಸೆಪ್ಟೆಂಬರ್ ೫).

ಮೊದಲು ರಂಗಭೂಮಿಯಲ್ಲಿ ''ರಾಣಿಯರಾಗಿ, ಅಧಿಕಾರಿಗಳಾಗಿ ಮೆರೆಯುತ್ತೇವೆ. ಬದುಕಿನ ನೋವು ದುಃಖಗಳನ್ನು ಹತ್ತಿಕ್ಕಿಕೊಂಡು ನಗುತ್ತೇವೆ, ನಗಿಸುತ್ತೇವೆ. ನಮ್ಮ ಬದುಕಿನ ಒಂದೊಂದು ಘಟನೆ ಒಂದೊಂದು ಪ್ರಸಂಗವು ನೋವೆನಿಸುತ್ತದೆ. ಅಂಥದರಲ್ಲಿ ಮುಪ್ಪು ಬಂದಾಗ ನಾವು ಇನ್ನೂ ಕಡೆಗಣಿಸಲ್ಪಡುತ್ತೇವೆ. ಆದ್ದರಿಂದ ಈ ಜೀವನದಲ್ಲಿ ಎಲ್ಲಕ್ಕೂ ಬೆಲೆ ಇದೆ. ಆದರೆ ನಮ್ಮಂಥ ರಂಗನಟಿಯರ ಬೆಲೆಯ ಪ್ರಶ್ನೆಯನ್ನು ಎತ್ತುವವರಾರು?'' ಎಂದು ನಮ್ಮನ್ನೇ ಪ್ರಶ್ನಿಸುತ್ತಾರೆ (ಎನ್.ಸುಮತಿ, ಡಿಸೆಂಬರ್ ೧೨, ೨೦೦೨, ಮರಿಯಮ್ಮನಹಳ್ಳಿ, ಸಂದರ್ಶನ).

'ಬಣ್ಣಕ್ಕೂ ಬಡತನಕ್ಕೂ ಬಿಡದ ನಂಟು' ಕಲಾವಿದರಾದ ನಾವು ಬಡತನ ನಮ್ಮ ಬೆನ್ನ ಹಿಂದೆಯೇ ಇರುತ್ತದೆ. ಅದಕ್ಕೆ ಕಾರಣ ಹಲವಾರು. ವಯಸ್ಸಾದಂತೆ ನಮ್ಮ ಬದುಕಿನ ಬಣ್ಣವು ಕ್ರಮೇಣವಾಗಿ ಮಾಸಿ ಹೋಗುತ್ತದೆ. ವೃದ್ಧಾಪ್ಯದ ನೋವು ಊಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮಾನಸಿಕವಾಗಿ ನಮಗೆ ಗೊಂದಲ ಆಗಿ ಮನನೋಯಿಸಿಕೊಳ್ಳುತ್ತಾ ಜೀವನವನ್ನು ಸಾಗಿಸುವುದೇ ನಮ್ಮ ದಿನಚರಿಯಾಗಿದೆ ಎನ್ನುತ್ತಾರೆ (ಮರಿಯಮ್ಮನಹಳ್ಳಿ ಎಚ್.ಶಾಂತಮ್ಮ, ೨೦೦೨ ಡಿಸೆಂಬರ್ ೧೨, ಮರಿಯಮ್ಮನಹಳ್ಳಿ).

ನಟಿಯರಿಗೆ ವಯಸ್ಸಾದಂತೆ ಯಾವ ಪ್ರೇಕ್ಷಕರು ಅವರನ್ನು ನೋಡಲು ಇಚ್ಛಿಸುವುದಿಲ್ಲ. ನಮಗೂ ವಯಸ್ಸಾದಂತೆ ಪಾತ್ರ ಮಾಡಲು ಆಗುವುದಿಲ್ಲ. ಅದರ ಅರಿವು ನಮಗಿದೆ. ಆದರೆ ಈ ವೃದ್ಧಾಪ್ಯದಲ್ಲಿ ನೆಮ್ಮದಿಯಿಂದ ಜೀವನವನ್ನು ನಡೆಸಲು ನಮಗೆ ಸರಕಾರದಿಂದ ಹೆಚ್ಚು ಆರ್ಥಿಕ ಭದ್ರತೆ ಸಿಕ್ಕರೆ ಕೊನೆಯ ಉಸಿರನ್ನಾದರೂ ನೆಮ್ಮದಿಯಿಂದ ಬಿಡಬಹುದು ಎನ್ನುತ್ತಾರೆ. ಹಲವಾರು ರಂಗನಟಿಯರು ಪುರುಷ ಪ್ರಧಾನ ಸಮಾಜದಲ್ಲಿ ಎಷ್ಟೋ ಜನರು ಇನ್ನೂ ಶೋಷಿತ ನೆಲೆಯಲ್ಲಿ ಬದುಕುತ್ತಿದ್ದೇವೆ. ಇದಕ್ಕೆ ಸರಿಯಾದ ಮಾರ್ಗ ವನ್ನು ಹುಡುಕುವವರೇ ಸಿಗುತ್ತಿಲ್ಲ. ಎಲ್ಲಿ ನೋಡಿದರಲ್ಲಿ ತಾರತಮ್ಯದ ಬದುಕು ನಮ್ಮನ್ನು ಆವರಿಸಿಬಿಟ್ಟಿದೆ. ಪ್ರತಿಯೊಬ್ಬ ರಂಗನಟಿಯೂ ಕೂಡ ಈ ವಿಷಯದಲ್ಲಿ ಜಾಗ್ರತೆಯನ್ನು ಹೊಂದಬೇಕು. ನಮಗಾಗಿಯೇ ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲಿಕ್ಕೆ ನಾವು ಸಂಘಟಕರಾಗಬೇಕು ಅಂದಾಗ ಮಾತ್ರ ನಮ್ಮ ಬದುಕಿಗೆ ಒಂದು ಅರ್ಥ ಒದಗಿ ನಮ್ಮ ರಂಗಭೂಮಿಯ ಸೇವೆಯು ಸಾರ್ಥಕವಾಗುವುದು ಎನ್ನುವುದರಲ್ಲಿ ಎರಡು ಮಾತಿಲ್ಲ. ಮಾನವನ ಜೀವನದಲ್ಲಿ ವೃದ್ಧಾಪ್ಯವು ಒಂದು ಹಂತ. ಈ ಹಂತದಲ್ಲಿ ಮನುಷ್ಯನಿಗೆ ಶಾಂತಿ, ನೆಮ್ಮದಿ, ಸಹಕಾರದ ಜೀವನ ಬೇಕು. ಆದರೆ ಈ ಸಮಯದಲ್ಲು ಕಷ್ಟ ಪಡಬೇಕೆಂದರೆ ಎಲ್ಲವೂ ವಿಧಿಯ ಕೈವಾಡ. "ಯೋಗಿ ಪಡೆದದ್ದು ಯೋಗಿಗೆ ಅಂತೆ ಜೋಗಿ ಪಡೆದದ್ದು ಜೋಗಿಗೆ ಅಂತೆ" ಎಲ್ಲವನ್ನು ಪಡೆಯಲು ಒಂದು ಯೋಗ ಬೇಕು. ಅದು ನಮ್ಮ ಹುಟ್ಟಿನಿಂದಲೇ ಬಂದಿದ್ದರೆ ಅದು ಸಂತಸ ಇಲ್ಲದಿದ್ದರೆ ಜೀವನವೇ ದುಃಖಮಯವಾಗಿ ಬಿಡುತ್ತದೆ.

ವಯಸ್ಸು ಇದ್ದಾಗ ಎಲ್ಲರೂ ನಾಟಕಕ್ಕೆ ಕರೆಯುತ್ತಾರೆ. ಯೌವನ ಹೋದನಂತರ ಯಾರು ನಮ್ಮನ್ನು ತಿರುಗಿ ನೋಡುವುದಿಲ್ಲ. 'ಎಲ್ಲಾ ಹವ್ಯಾಸಿ ಕಲಾವಿದರಿಗೆ ತೆಳ್ಳಗೆ, ಬೆಳ್ಳಗೆ ಇರಬೇಕು. ಇನ್ನೂ ೧೬ ವರ್ಷದ ಹುಡುಗಿಯೇ ಆಗಿರಬೇಕು ಎಂಬ ಆಕಾಂಕ್ಷೆ. ಸ್ವಲ್ಪ ದಪ್ಪವಾದರೆ ೩೦-೩೫ ವರ್ಷವಾದರೆ ನಮ್ಮನ್ನು ಯಾರು ನಾಟಕಕ್ಕೆ ಕರೆಯುವುದಿಲ್ಲ. ಆದ್ದರಿಂದ ನಾವು ಬಯಲಾಟಕ್ಕೆ ಹೋಗುತ್ತೇವೆ' (ಕೆ. ದುಶೀಲ, ಕೂಡ್ಲಿಗಿ, ನವೆಂಬರ್ ೨೦೦೧, ಸಂದರ್ಶನ).

ವಯಸ್ಸು ಇದ್ದರೆ ಬೆಲೆ. ತೆಳ್ಳಗೆ, ಬೆಳ್ಳಗೆ ಇದ್ದರೆ ಅವರಿಗೆ ಸಂಭಾವನೆ ಹೆಚ್ಚು. ದೇವರು ಹುಟ್ಟಿಸಿದಂತೆ ನಾವು ಇದ್ದೇವೆ ಅದನ್ನು ಮಾಡಿಕೊಳ್ಳಲು ನಮ್ಮ ಕೈಲಿಲ್ಲ. ಆ ರೀತಿ ಮಾಡಿಕೊಳ್ಳುವಂತಿದ್ದರೆ ಎಂದೋ ಮಾಡಿಕೊಂಡು ಬಿಡುತ್ತಿದ್ದೆವು ಎನ್ನುತ್ತಾರೆ ಹಲವು ರಂಗನಟಿಯರು. ಹೆಚ್ಚು ಕಡಿಮೆ ೩೫ ದಾಟಿತು ಎಂದರೆ ಎಲ್ಲರೂ ಬಯಲಾಟವೇ ಇಲ್ಲದಿದ್ದರೆ ನಿವೃತ್ತಿ. ಕೂಲಿನಾಲಿ ಮಾಡಿಯಾದರೂ ರಂಗನಟಿಯರು ವೃದ್ಧಾಪ್ಯದಲ್ಲಿ ಬದುಕುತ್ತಿದ್ದಾರೆ. ಉದಾ: ಸೆರೆಗಾರ ಗಂಗಮ್ಮ ಎಂಬ ನಟಿಯು ಈಗ ತನ್ನ ವೃತ್ತಿ ಕೂಲಿ, ಪ್ರತಿದಿನವೂ ಕೂಲಿ ಮಾಡಿಯೇ ಆಕೆ ವೃದ್ಧಾಪ್ಯದಲ್ಲಿ ಮಕ್ಕಳು, ಮೊಮ್ಮಕ್ಕಳೊಂದಿಗೆ ಬದುಕುತ್ತಿದ್ದಾಳೆ. ಇಂಥ ಉದಾಹರಣೆಗಳು ನಮಗೆ ಬೇಕಾದಷ್ಟು ಸಿಗುತ್ತವೆ (ಮರಿಯಮ್ಮನಹಳ್ಳಿ, ಜನವರಿ ೨೦೦೭ ರಲ್ಲಿ ಕ್ಷೇತ್ರ ಕಾರ್ಯದ ಸಂದರ್ಭ).

ಹಲವಾರು ರಂಗನಟಿಯರ ವೃದ್ಧಾಪ್ಯ ಬರಿಯ ನೋವನ್ನು ನೀಡಿದೆ, ಕೆಲವರು ನಾವು ಪಡೆದಿರುವುದೇ ಇಷ್ಟು ಎಂದು ಮನಸ್ಸುಗಟ್ಟಿಮಾಡಿ ಕೈಚೆಲ್ಲಿ ಕುಳಿತಿದ್ದಾರೆ.

ತಾರುಣ್ಯ ಇರುವವರೆಗೆ ಮಾತ್ರ ರಂಗಜೀವನ, ನಾಯಕಿ ಪಟ್ಟ. ವಯಸ್ಸಾದಂತೆ ಸಂಬಳದಲ್ಲಿ ಕಡಿತ ಹೆಚ್ಚುತ್ತದೆ. ಹೀಗಾಗಿ ಮುಪ್ಪಿನಲ್ಲಿ ಕಲಾವಿದೆಯರು ಕಷ್ಟದಲ್ಲಿ ಕಾಲಕಳೆಯಬೇಕಾಗುತ್ತದೆ. ಬಳ್ಳಾರಿ ಜಿಲ್ಲೆಯ ಬಹುಪಾಲು ರಂಗನಟಿಯರು ಮಾಷಾಸನ ಪಡೆಯುತ್ತಿದ್ದಾರೆ. ಕೆಲವರು ದುರ್ದೈವಿ ನಟಿಯರು ಪಡೆದಿಲ್ಲ. ಮಕ್ಕಳ ಆರೈಕೆಯಲ್ಲಿ ಕೆಲವರು ಸುಖವಾಗಿದ್ದರೆ, ಇನ್ನೂ ಕೆಲವರು ಕೂಳಿಲ್ಲದೆ, ನೀರಿಲ್ಲದೆ ಬದುಕುತ್ತಿದ್ದಾರೆ. ಕೆಲವು ನಟಿಯರು ಕೆಟ್ಟ ಚಟಗಳಿಗೆ ಬಲಿಯಾಗಿ ನೋವು ಅನುಭವಿಸುವ ರೋಗಿಗಳಾಗಿದ್ದಾರೆ. ಓ.ಸಿ, ಕುಡಿತಕ್ಕೆ ಬಲಿಯಾಗಿ ತಮ್ಮ ಹಿಂದಿನ ರಂಗಜೀವನವನ್ನೇ ಮರೆತಿದ್ದಾರೆ.

"ಸರಕಾರಿ ನೌಕರರಾದರೆ ಸೇವಾವಧಿ, ವಯಸ್ಸು, ಅನುಭವ ಹೆಚ್ಚಾದಂತೆ ಅವರ ಸಂಬಳ, ಭತ್ಯೆ ಇತ್ಯಾದಿಗಳು ಹೆಚ್ಚಾಗುತ್ತವೆ. ಕಲಾವಿದರ ವಯಸ್ಸು ಹೆಚ್ಚಾದಂತೆ ಬೇಡಿಕೆ ತಗ್ಗುತ್ತವೆ. ಸಂಭಾವನೆ ಕಡಿಮೆಯಾಗುತ್ತ ಕ್ರಮೇಣ ನಿಂತೇ ಹೋಗುತ್ತದೆ. ನಂತರ ಅವರ ಗತಿ? ಅವರನ್ನು ನೋಡುವವರಾರು? ಸರ್ಕಾರವೇ? ಸಾರ್ವಜನಿಕರೇ? ಸಂಘ ಸಂಸ್ಥೆಗಳೇ ಈ ಎಲ್ಲಾ ಪ್ರಶ್ನೆಗಳಿಗೆಲ್ಲಾ ಉತ್ತರ ಇಲ್ಲ. ಇದು ಬರಿ ಇಳಿಗಾಲದ ಸಮಸ್ಯೆಯಲ್ಲ. ಪ್ರತಿಭೆಯ ಫಲ ಕೊಡುತ್ತಿರುವಾಗಲೂ ಬಡತನದಲ್ಲಿ ನರಳಿದ ಕಲಾವಿದರ ಸಂಖ್ಯೆ ಕಡಿಮೆ ಏನಿಲ್ಲ" (ನಿರೂ: ಗುಡಿಹಳ್ಳಿ ನಾಗರಾಜ, ಮರಿಯಮ್ಮನಹಳ್ಳಿ ರಂಗಸಿರಿ, (ಕೆ. ನಾಗರತ್ನ ಆತ್ಮ ಚರಿತ್ರೆ) ಪುಟ, ೮೨).

ಕಲಾವಿದೆಯರಿಗೆ ವಯಸ್ಸು ಹೆಚ್ಚಾದಂತೆ ಅನುಕೂಲತೆಗಳು ಕಡಿಮೆಯಾಗುತ್ತವೆ. ಸಂಭಾವನೆಯೂ ಕಡಿಮೆ ಯಾಗುತ್ತದೆ. ಈ ಸಮಾಜದಲ್ಲಿ ಎಲ್ಲರಿಗೂ ಒಂದು ನ್ಯಾಯವಿದ್ದರೆ ಈ ಸಮಾಜದಲ್ಲಿ ನಟಿಯರಿಗೆ, ಕಲಾವಿದರಿಗೆ ಬೇರೊಂದು ನ್ಯಾಯ. ಈ ಎಲ್ಲ ಸಮಸ್ಯೆಗೆ ಎಂದು ಸರಕಾರ ಪರಿಹಾರವನ್ನು ನೀಡುತ್ತದೆಯೇ ಅಂದು ಕಲಾವಿದರೆಲ್ಲರೂ ವೃದ್ಧಾಪ್ಯದಲ್ಲಿ ನೆಮ್ಮದಿಯಿಂದ ಜೀವಿಸಲು ಸಾಧ್ಯ. ಎಲ್ಲರಿಗೂ ದಾರಿದೀಪವಾಗುವ ಸರಕಾರ ಇವರ ಕಡೆ ಯಾಕೆ ನಿರ್ಲಕ್ಷ್ಯ ತೋರಿದೆಯೋ ತಿಳಿಯುತ್ತಿಲ್ಲ. ಕೆಲವು ನಟಿಯರು ಮಾಷಾಸನ ಪಡೆಯುತ್ತಿದ್ದರೂ ಅವರಿಗೆ 'ಅವರ ಬಡಜೀವನಕ್ಕೆ ಏನು ಸಾಲುತ್ತಿಲ್ಲ ಇದಕ್ಕೆ ಪರ್ಯಾಯ ವ್ಯವಸ್ಥೆಯಾದರೆ ರಂಗನಟಿಯರು ಕೊನೆಯಗಳಿಗೆಗಾದರು ನೆಮ್ಮದಿಯಿಂದ ಉಸಿರಾಡಲು ಸಾಧ್ಯವಾಗುತ್ತದೆ ಎಂಬ ಮಾತಿನಲ್ಲಿ ಸಂಪೂರ್ಣವಾಗಿ ಅರ್ಥತುಂಬಿದೆ."

ರಂಗನಟಿಯರು ಸಮಾಜದಲ್ಲಿ ತಾವು ಒಂದಾಗಿ ಬಾಳಬೇಕು ತಮಗೂ ಎಲ್ಲರೂ ಬೆಲೆಯನ್ನು ಕೊಡುತ್ತಾರೆ. ಇನ್ನಿತರ ಮಹಿಳೆಯರಂತೆ ನಾವು ಒಬ್ಬರು ಅವರಂತೆ ನಾವು ಎಂದು ತಿಳಿದು ರಂಗನಟಿಯರು ಯಾವುದಾದರು ಕೌಟುಂಬಿಕ ಸಭೆ, ಸಮಾರಂಭಗಳಿಗೆ ಅಥವಾ ಮದುವೆ ಮುಂಜಿಗಳಿಗೆ ಇವರು ಹೋದರೆ ಇವರನ್ನು ಹೀನ ದೃಷ್ಟಿಯಿಂದ ನಮ್ಮ ಸಮಾಜ ಕಂಡಿದೆ ಎಂದು ಅವರೇ ಸಂದರ್ಶನದಲ್ಲಿ ಹೇಳುತ್ತಾರೆ.

೨. ರಂಗನಟಿಯರ ಮಾನಸಿಕ ಸ್ಥಿತಿ

ಬಡತನದ ಬೇಗೆಯಲ್ಲಿ ಬದುಕನ್ನು ಸಾಗಿಸಿಕೊಂಡು ನಡೆಯುತ್ತಿರುವ ರಂಗನಟಿಯರು ಯಾವಾಗಲೂ ಮಾನಸಿಕವಾಗಿ, ತೊಳಲಾಟದಲ್ಲಿಯೇ ಇರುತ್ತಾರೆ. ಕಥಾ ನಾಯಕಿಯಾಗಿ ಬಡತನ ಪಾತ್ರದಲ್ಲಿ ಅಥವಾ ಹೆಣ್ಣನ್ನು ತುಚ್ಛವಾಗಿ ಕಾಣುವ ದೃಶ್ಯಗಳಲ್ಲಿ ಆ ಪಾತ್ರಕ್ಕೆ ಜೀವಂತಿಕೆಯನ್ನು ತುಂಬಿ ವಾಸ್ತವದಲ್ಲಿ ತಾವು ಅನುಭವಿಸಿರುವ ನೋವುಗಳೇ ಅವರ ಮುಂದೆ ಬಂದು ಆ ಪಾತ್ರದಲ್ಲಿ ತಲ್ಲೀನಳಾಗಿ ನಿಜವಾಗಿ ಅವರು ಅತ್ತು ಬಿಡುತ್ತಾರೆ. ನಟನೆಯಾದರೂ ಕೆಲವು ಹಳ್ಳಿಯ ಹವ್ಯಾಸಿ ಕಲಾವಿದರು ನಟಿಯರಿಗೆ ಲೈಂಗಿಕ ಹಿಂಸೆ ಕೊಡುವುದು ಅನಿವಾರ್ಯವಾಗಿ ಅವರು ಮಾಡಿದ್ದನ್ನು ಸ್ವೀಕರಿಸಿ ಶೋಷಣೆಯಾಗಿದ್ದರೂ ಹೇಳಿಕೊಳ್ಳದೇ ಮಾನಸಿಕ ಹಿಂಸೆ ಅನುಭವಿಸುತ್ತಾರೆ. ಅವಕಾಶ ಸಿಕ್ಕಿದೆ ಎಂದು ಹಗಲೆಲ್ಲಾ ಕುಣಿಸುವುದು ಹಾಗೂ ಡಬಲ್ ಮೀನಿಂಗ್ ಮಾತುಗಳನ್ನು ಮಾತನಾಡುವುದು ರೇಪ ಸೀನ್ ಇದ್ದರೆ ಅದನ್ನು ಅತೀ ಎಂಬಂತೆ ವರ್ತಿಸುವುದು ಈ ಎಲ್ಲವುಗಳು ರಂಗನಟಿಯರನ್ನು ಮಾನಸಿಕವಾಗಿ ಅಸ್ವಸ್ಥಳಾಗುವಂತೆ ಮಾಡುತ್ತವೆ.

ಒಟ್ಟಿನಲ್ಲಿ ಈ ರಂಗನಟಿಯರ ಬಗೆಗೆ ನಾವು ಹಲವಾರು ರೀತಿಯಲ್ಲಿ ಸಂಶೋಧನೆ ನಡೆಸಬೇಕಾಗಿದೆ. ಬೇರೆಯವರ ಮನರಂಜನೆಗೆ ಅವರು ಕೊಡುಗೆ ನೀಡಿ ತಾವು ಅತ್ತು ಅದು ಆ ರೀತಿ ಇಲ್ಲವೆಂಬಂತೆ ಬಾಳುತ್ತಿರುವ ರಂಗನಟಿಯರು ಸಮಾಜದ ಅವಿಭಾಜ್ಯವಾಗಿ ಇವರ ಜೀವನ ಬೇರೆಯವರಿಗೆ ಆದರ್ಶವೆ ಸರಿ ಎನ್ನಬಹುದಾಗಿದೆ.

ಇಂದು ಯಾವುದೇ ಮನರಂಜನಾ ವೇದಿಕೆ ಬಯಸುವುದು ಹದಿಹರೆಯದವರನ್ನೇ. ಇದು ಇಂದಿನ ವ್ಯಾಪಾರೀ ನಿಯಮದ ಧೋರಣೆಯಾಗಿದೆ. ತೀರಾ ವಯಸ್ಸಾದವರನ್ನು ನಾವು ನಾಟಕವಾಡಿಸಲು ಸಾಧ್ಯವಿಲ್ಲ. ಇಲ್ಲಿ ಪ್ರತಿಯೊಂದೂ ಕಾಲಧರ್ಮದ ನಿಯಮಕ್ಕೆ ಒಳಗೊಳ್ಳಲೇಬೇಕು. ನಾವು ಕಾಲಧರ್ಮಕ್ಕೆ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕೇ ವಿನಃ ಮನೋಧರ್ಮಕ್ಕೆ ತಕ್ಕಂತೆ ಕಾಲಧರ್ಮ ಎಂದೂ ಬದಲಾಗುವುದಿಲ್ಲ.

ನಟಿಯರ ಕಾಲದಲ್ಲಿ ಅವರ ವಯಸ್ಸಿಗೆ ತಕ್ಕಂತೆ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಆಯಾಮಗಳಲ್ಲಿ ಅವರ ಕಾಲದ ಮನೋಧರ್ಮಗಳು ಬೇರೆ ಬೇರೆ ರೀತಿಯಲ್ಲಿವೆ. ಅವುಗಳನ್ನು ಇಲ್ಲಿ ನೋಡೋಣ.

ಡಿ.ಹನುಮಂತಮ್ಮ ಮತ್ತು ಸಂಜೀವಮ್ಮ : ನಾರಾಯಣದೇವರ ಕೆರೆಯು ಹೊಸಪೇಟೆ ತಾಲೂಕಿನ ಒಂದು ಗ್ರಾಮ. ಇವರ ಹುಟ್ಟು ಬೆಳವಣಿಗೆ ಈ ಗ್ರಾಮದಲ್ಲಿಯೆ ಆಯಿತು. ಈ ಗ್ರಾಮವು ತುಂಗಭದ್ರ ಮುಳುಗಡೆ ಹಳ್ಳಿ, ಮುಳುಗಿ ಈ ಊರಿನವರೆಲ್ಲ ವಲಸೆ ಹೋಗಿ, ಬಹುಪಾಲು ನಾರಾಯಣದೇವರಕೆರೆಯವರು ಮರಿಯಮ್ಮನಹಳ್ಳಿಯಲ್ಲಿದ್ದಾರೆ. ಖ್ಯಾತ ರಂಗಭೂಮಿ ಕಲಾವಿದ ಡಿ. ದುರ್ಗಾದಾಸ್ ಈ ಇಬ್ಬರು ಅಕ್ಕಂದಿರರ

ತಮ್ಮ. ಇಂದಿನ ಪ್ರಬುದ್ಧ ನಟ. ನಾಟಕ ಅಕಾಡೆಮಿಯ ಸದಸ್ಯೆ ಡಿ.ಸಣ್ಣಹನುಮಕ್ಕ ದುರ್ಗಾದಾಸರ ಮಗಳು ಹಾಗೂ ಈ ಸಹೋದರಿಯರ ಸೋದರ ಸೊಸೆ. ಕಲೆಯು ಈ ಕುಟುಂಬದಲ್ಲಿಯೇ ಪಸರಿಸಿದ್ದು ನಾಡಿನಾದ್ಯಂತ ಇವರ ಕುಟುಂಬದ ಕೀರ್ತಿ ವೃತ್ತಿರಂಗಭೂಮಿಯಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ.

ಇಡೀ ಕುಟುಂಬವೇ ವೃತ್ತಿರಂಗಭೂಮಿಯಲ್ಲಿ ಕೆಲಸ ಮಾಡಿದ್ದರಿಂದ ಅದರ ಅನುಭವ ವಿಶೇಷವಾಗಿಯೇ ಇತ್ತು. ಒಂದು ಕಾಲದಲ್ಲಿ ಈ ಇಬ್ಬರೂ ರಂಗಸಹೋದರಿಯರು ವೇದಿಕೆಗಳಲ್ಲಿ ರಾಣಿಯರಾಗಿ ಮೆರೆದವರಾಗಿದ್ದರು. ಗಾಯನ, ನಾಟ್ಯ, ಸಂಭಾಷಣೆಯಲ್ಲಿ ಹನುಮಂತಮ್ಮನನ್ನು ಮೀರಿಸುವವರೇ ಇರಲಿಲ್ಲ. ಗರೂಡ ಕಂಪನಿಯನ್ನು ಬಿಟ್ಟು ಹೋಗಿದ್ದ ಗಂಗೂಬಾಯಿ ಗುಳೇದಗುಡ್ಡ ಇವರ ಸ್ಥಾನವನ್ನು ಹನುಮಂತಮ್ಮ ತುಂಬುವಲ್ಲಿ ಯಶಸ್ವಿಯಾದರು. ವೃತ್ತಿರಂಗಭೂಮಿ ರಾಣಿಯರು ಎಂಬ ಕಿರೀಟ ಇವರ ಪಾಲಿಗೆ ದಕ್ಕಿತ್ತು.

ನಟಿಯರ ಕುಟುಂಬವೂ ಕೂಡ ಶಿಸ್ತು, ಸಂಯಮ, ಚಟುವಟಿಕೆಯಿಂದ ಕೂಡಿದ್ದು, ಒಂದು ಕಂಪನಿ ಎಂದರೆ ಅವಿಭಕ್ತ ಕುಟುಂಬ ಎಂಬಂಥ ವಾತಾವರಣ ಕಂಪನಿಗಳಲ್ಲಿರುತ್ತಿತ್ತು. ಗರುಡರ ಸದಾಶಿವರಾಯರ ಕಂಪನಿಯು ಉತ್ತರ ಕರ್ನಾಟಕದಲ್ಲೆಲ್ಲಾ ಹೆಸರುವಾಸಿಯಾಗಿದ್ದು, ಈ ನಟಿಯರ ಕಾಲವು ಸುವರ್ಣಯುಗವಾಗಿತ್ತು. ವಿಶ್ವಮಂಡಳಿ ಕಂಪನಿಯನ್ನು ಕಟ್ಟಿ ವೃತ್ತಿರಂಗಭೂಮಿಯನ್ನು ನಟಿಯರು ಮೆರೆಸಿದ್ದರು. ಇವರ ಕಾಲಾವಧಿಯಲ್ಲಿ ನಟಿಯರಿಗೆ, ಅಂದಿನ ದಿನಗಳಲ್ಲಿ ರಂಗಭೂಮಿಯ ಕಲಾವಿದರಿಗೆ ಹೆಚ್ಚಿನ ಗೌರವವಿದ್ದು, ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಇವರಿಗೆ ಹೆಚ್ಚಿನ ಮನ್ನಣೆ ಇತ್ತು. ಸಾಂಸ್ಕೃತಿಕವಾಗಿ ಅವರು ಇತಿಹಾಸದಲ್ಲಿ ತಮ್ಮದೇ ಆದ ಅನನ್ಯತೆಯನ್ನು ಪಡೆದುಕೊಂಡಿದ್ದರು. ಆರ್ಥಿಕವಾಗಿ ಇವರಿಗೆ ಕಂಪನಿಗಳು ಮೋಸ ಮಾಡಿರಲಿಲ್ಲ. ವೃತ್ತಿಕಂಪನಿಗಳ ಆಶ್ರಯದಲ್ಲಿದ್ದರಿಂದ ಇವರಿಗೆ ಹಣಕಾಸಿನ ಸಮಸ್ಯೆ ದೊಡ್ಡದಾಗಿ ಕಂಡುಬರಲಿಲ್ಲ. ಕುಟುಂಬದಲ್ಲಿ ಹಿರಿಯರಿಗೆ ಗೌರವಾನ್ವಿತ ಸ್ಥಾನವನ್ನು ಕೊಟ್ಟಿರುವುದರಿಂದ ವೃದ್ಧಾಪ್ಯದಲ್ಲಿ ಹೆಚ್ಚಿನ ಕಷ್ಟಗಳು ಅವರಿಗೆ ಕಂಡು ಬರಲಿಲ್ಲ ಎಂದು ಹೇಳುತ್ತಾರೆ. ಅವರ ಸಹೋದರ ಡಿ.ದುರ್ಗಾದಾಸ (ಸಂದರ್ಶನ, ೨೦೦೧ ಸೆಪ್ಟೆಂಬರ್, ಮರಿಯಮ್ಮನಹಳ್ಳಿ).

ಇವರ ಕಾಲದಲ್ಲಿ ಆರ್ಥಿಕವಾಗಿ ವೈಪರಿತ್ಯ ಉಂಟಾಗಿದ್ದರೂ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಕೌಟುಂಬಿಕವಾಗಿ ಇವರಿಗೆ ತನ್ನದೇ ಆದ ಸ್ಥಾನವನ್ನು ಅಂದಿನ ದಿನಮಾನಗಳು ನೀಡಿದ್ದವು.

ಬಳ್ಳಾರಿ ಲಲಿತಮ್ಮ : ಬಳ್ಳಾರಿ ಲಲಿತಮ್ಮ ಸಾಂಸ್ಕೃತಿಕವಾಗಿ ಇಡೀ ಬಳ್ಳಾರಿಯನ್ನೇ ಪ್ರತಿನಿಧಿಸಿದ ವ್ಯಕ್ತಿತ್ವ ಈಕೆಯದು. ನೃತ್ಯ ಹಾಗೂ ಸಂಗೀತದಲ್ಲಿ ಹೆಸರು ವಾಸಿ ನಟಿ. ಲಲಿತಮ್ಮ ಪಾತ್ರವಹಿಸುವರೆಂದರೆ ಆಸಕ್ತ ಯುವಕರು 'ಮುಂದಿನ ಇಪ್ಪತ್ತು ಸೀಟುಗಳನ್ನು ಮುಂಗಡವಾಗಿ ಟಿಕೆಟು (ರಿಜರವೇಶನ) ಮಾಡಿಸಿ ಬಿಡುತ್ತಿದ್ದರಂತೆ. ಆಗಿನ ಕಾಲದಲ್ಲಿ 'ದೇವದಾಸಿ' ನಾಟಕ ಲಲಿತಮ್ಮರ ಅತ್ಯಂತ ಯಶಸ್ವಿ ನಾಟಕ', ಸದಾರಮೆ ಹೀಗೆ ಹಲವಾರು ನಾಟಕಗಳಲ್ಲಿ ಯಶಸ್ವಿಯಾಗಿದ್ದರು. ಯಾವುದೇ ಒಬ್ಬ ನಟಿಯ ಹೆಸರಿರುವುದು ಕೇಳಿಯೇ

ಕಾಲಮಾನದಲ್ಲಿ ಮಾತ್ರ. ನಂತರದ ದಿನಗಳಲ್ಲಿ ಆಕೆಗೆ ವಯಸ್ಸಾಗಿ ಬಿಡುತ್ತದೆ. ವಯಸ್ಸಾದವರನ್ನು ರಂಗದ ಮೇಲೆ ತರಲು ಸಾಧ್ಯವಿಲ್ಲ. ಆದ್ದರಿಂದ ವಯೋಗುಣಕ್ಕೆ ತಕ್ಕಂತೆ ಆಯಾಕಾಲದಲ್ಲಿ ನಟಿಯರು ಅವರದೇ ಆದ ಸಾಂಸ್ಕೃತಿಕ ಪರಿಸರದಲ್ಲಿ ಹೆಸರನ್ನು ಮಾಡಿಕೊಂಡಿದ್ದಾರೆ.

Commercial ಆಗಿ ನಟಿಯರು ಹೆಸರು ಪಡೆದು ಆ ದಿನಗಳಲ್ಲಿ ಅವರ ಬೇಡಿಕೆ ಹೆಚ್ಚಾಗಿರುತ್ತದೆ. ಕ್ರಮೇಣವಾಗಿ ಅವರಿಗೆ ವಯಸ್ಸಾದ ಮೇಲೆ ಅವರ Trend ಸಂಪೂರ್ಣವಾಗಿ ನಿಂತು ಹೋಗಿಬಿಡುತ್ತದೆ. ಇವರಲ್ಲಿ ತಾರುಣ್ಯ ಇರುವವರೆಗೆ ಮಾತ್ರ ರಂಗಜೀವನ, ನಾಯಕಿ ಪಟ್ಟ, ವಯಸ್ಸಾದಂತೆ ಸಂಬಳದಲ್ಲಿ ಕಡಿತ ಹೆಚ್ಚುತ್ತದೆ. ಹೀಗಾಗಿ ಮುಪ್ಪಿನಲ್ಲಿ ಕಲಾವಿದೆಯರು ಕಷ್ಟದಲ್ಲಿ ಕಾಲ ಕಳೆಯಬೇಕಾಗುತ್ತದೆ. ನಟಿಯರಿಗೆ ತನ್ನದೇ ಆದ ನಿರ್ದಿಷ್ಟ ಕಾಲಾವಧಿ ಇದ್ದು ಆ ಕಾಲದಲ್ಲಿ ತಮ್ಮ ಅನನ್ಯತೆಯನ್ನು ಸಾಮಾಜಿಕವಾಗಿ, ಸಾಂಸ್ಕೃತಿಕ ವಾಗಿ, ಕೌಟುಂಬಿಕ ನೆಲೆಯಲ್ಲಿ ಪಡೆದು ಕೊಳ್ಳಲು ಸಾಧ್ಯವಾಗುತ್ತದೆ. "ಕಾಲವೆ ಎಲ್ಲವನ್ನು ನಿರ್ಧರಿಸುತ್ತದೆ" ಎಂಬ ಮಾತಿನಂತೆ ಕಾಲವೇ ನಟಿಯರನ್ನು ಮೇಲಕ್ಕೆತ್ತೋದು ಹೆಸರುಗಳಿಸಲು ನಿರ್ದಿಷ್ಟ ಅವಧಿ ಇರುತ್ತದೆ. ಆ ಅವಧಿಯಲ್ಲಿಯೇ ಅವರು ಹೆಸರು ಪಡೆದರೆ ಮಾತ್ರ ಸರಿ, ಇಲ್ಲದಿದ್ದರೆ ಎಲ್ಲ ರಂಗನಟಿಯರಂತೆ ಇವರು ಒಬ್ಬರಾಗುತ್ತಾರೆ.

ಕೊಟ್ಟೂರು ಕಮಲಮ್ಮ : ಆಗಿನ ಕಾಲದಲ್ಲಿ ಅಂದರೆ ಸುಮಾರು ೧೯೩೪ರ ಸುಮಾರಿನಲ್ಲಿ ರಂಗನಟಿಯರೆಂದರೆ ಘನಗಾಂಭೀರ್ಯದ ವಾತಾವರಣವಿತ್ತು. ಹಳ್ಳಿಗಳಲ್ಲಿ ಇವರನ್ನು ಗೌರವದಿಂದ ಕಾಣುತ್ತಿದ್ದರು. ಅಂದಿನ ವ್ಯವಸ್ಥೆಯು ಇಷ್ಟು ಕೀಳುಮಟ್ಟದ್ದಾಗಿರಲಿಲ್ಲ. ನಾನು ನಾಟ್ಯರಾಣಿ, ಗಾನಕೋಗಿಲೆ ಎಂದು ಹೇಳಲಾಗಿದೆ. ಎಲುವತ್ತಿ ವೀರಣ್ಣ, ಎಲೆವಾಳ ಸಿದ್ದಯ್ಯ, ಏಣಗಿ ಖಾಸಿಂಸಾಬ್ ಮುಂತಾದ ಸಂಗೀತಗಾರರು, ಕಲಾವಿದೆಯರೆಲ್ಲರ ಪರಿಚಯವಿದ್ದು ನಮ್ಮ ಪ್ರತಿಭೆಗೆ ಅವರೆಲ್ಲಾ ಚಪ್ಪಾಳೆ ತಟ್ಟಿ ಶಹಭಾಸಗಿರಿ ಕೊಡುತ್ತಿದ್ದರು. ಪೌರಾಣಿಕ ನಾಟಕದಲ್ಲಿಯ ಲಯ ತಾಳಕ್ಕೆ ತಕ್ಕಂತಹ ಹಾಡುಗಳನ್ನು ಹಾಡಿ, ಪ್ರೇಕ್ಷಕರ ಮನವನ್ನು ರಂಜಿಸುತ್ತಿದ್ದೆನು. ಅಂದಿನ ಯುವಕರು ಇಂದಿನ ಯುವಕರಂತೆ ಪೂರ್ತಿ ಕೆಟ್ಟದ್ದಾಗಿ ವರ್ತಿಸು ತ್ತಿರಲಿಲ್ಲ. ಬದಲಾಗಿ ಗೌರವಿಸುತ್ತಿದ್ದರು. ವೃತ್ತಿಕಂಪನಿಗಳಲ್ಲಿ ಕೆಲವಾರು ಕಂಪನಿಗಳಲ್ಲಿ ನಾಟಕದ ಅನುಭವ ಪಡೆದುಕೊಂಡು ನಂತರದ ದಿನಗಳಲ್ಲಿ ಹವ್ಯಾಸಿ ಕಲಾವಿದರೊಂದಿಗೆ ಗ್ರಾಮೀಣ ರಂಗಭೂಮಿಗೆ ಹೋಗಲು ಪ್ರಾರಂಭಿಸಿದೆನು. ಆಗಿನ ಕಾಲದಲ್ಲಿಯ ಎಲ್ಲಾ ವಿಧದ ವಾತಾವರಣಗಳು ಚೆನ್ನಾಗಿದ್ದವು ಹಾಗೂ ಮೌಲ್ಯಾಧಾರಿತವಾಗಿದ್ದವು. ಆದರೆ ಈಗಿನ ಕಾಲಕ್ಕೆ ನಾವು ಹೋಲಿಕೆ ಮಾಡಿಕೊಳ್ಳಲು ನಮ್ಮ ಮನಸ್ಸು ಒಪ್ಪುವುದಿಲ್ಲ ಎನ್ನುತ್ತಾರೆ.

ನಾವೆಂದೂ ಕಲಾವಿದರು ಕೀಳಾಗಿ ಇನ್ನೊಬ್ಬರ ಹತ್ತಿರ ನಾಲ್ಕು ಮಾತುಗಳನ್ನು ಅನಿಸಿಕೊಂಡೇ ಇಲ್ಲ. ಯಾವತ್ತೂ ಗೌರವವನ್ನು ಕಾಪಾಡಿಕೊಂಡು ನಂತರ ಈ ಕೂಲಿ ನಾಲಿಯನ್ನು ಮಾಡಿ ನನ್ನ ಮಗಳ ಭವಿಷ್ಯಕ್ಕಾಗಿ

ಹಗಲಿರುಳು ದುಡಿದೆ. ಈಗ ಮಗಳು ನೌಕರಿಯನ್ನು ಮಾಡುತ್ತಿದ್ದಾಳೆ. ನೆಮ್ಮದಿಯಿಂದ ಮಾಷಾಸನವನ್ನು ತೆಗೆದುಕೊಂಡು ಹಗರಿ ಬೊಮ್ಮನಹಳ್ಳಿಯಲ್ಲಿ ಮಗಳೊಂದಿಗೆ ಜೀವಿಸುತ್ತಿದ್ದೇನೆ ಎನ್ನುತ್ತಾರೆ ಕಮಲಮ್ಮ. ಇವರ ಮಗಳು ಕೂಡ ತಾಯಿಯ ವೃತ್ತಿಯನ್ನು ಗೌರವಿಸಿ ಈಗ ನಮ್ಮ ತಾಯಿ ನೆಮ್ಮದಿಯಿಂದ ಜೀವಿಸುತ್ತಿದ್ದಾರೆ. ಅವರ ಕಲೆಗೆ ಬೆಲೆ ಇದೆ. ಅವರಿಗೂ ಬೆಲೆ ಇದೆ. ಇಂದಿನ ಕಲಾವಿದರಿಗೆ ಮಾತ್ರ ನಮ್ಮ ಸಮಾಜ ಬೆಲೆಯನ್ನು ನೀಡುತ್ತಿಲ್ಲ ಎನ್ನುತ್ತಾರೆ.

ನಾಗರತ್ನಮ್ಮ ಹೊಸಮನಿ : 'ಶ್ರೀ ಶಾರದ ಸಂಗೀತ ನಾಟಕ ಮಂಡಳಿ'ಯ ಅನರ್ಘ್ಯರತ್ನ, ಎಪ್ಪತ್ತರ ಅಂಚಿನಲ್ಲಿರುವ ನಾಗರತ್ನಮ್ಮ ಸಾಗಿ ಬಂದ ಬದುಕು, ಕಲಾವಿದೆಯರಿಗೆ ಮಾರ್ಗದರ್ಶಿಗಳು. ಉತ್ತಮ ಕಲೆಯಿಂದ ಉತ್ತಮ ಬದುಕಿನಿಂದ ಗೌರವಾನ್ವಿತ ನಟಿ. ಸ್ವಾತಂತ್ರ್ಯ ಪೂರ್ವದಲ್ಲಿ ಇವರ ನಾಟಕಗಳು ಸಿಂಧೂರ ಲಕ್ಷ್ಮಣ, ರಾಜದ್ರೋಹ, ಬ್ಲಾಕ್ ಮಾರ್ಕೆಟ್, 'ಪಾರಣ ಪಾಪಾ' ಜನರಲ್ಲಿ ಸ್ವಾತಂತ್ರ್ಯದ ಪ್ರಜ್ಞೆ ಮೂಡಿಸಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿದ್ದ ಕಥಾವಸ್ತುವಿಗಿಂತ ಕಲಾವಿದೆಯ ಮಾತುಗಳು ಅಭಿನಯ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು.

ನಾಗರತ್ನಮ್ಮನವರ ತ್ಯಾಗದ ಬದುಕು ಮರೆಯಲಾಗದು. ನಾಟಕದ ಸನ್ನಿವೇಶದಲ್ಲಿಯೇ ಆಗಿನಕಾಲದಲ್ಲಿ ಸಾವಿರಾರು ರೂಪಾಯಿ ಬೆಲೆಬಾಳುವ ಸೀರೆಯನ್ನು, ಮೈತುಂಬ ಬಂಗಾರದ ಆಭರಣ ಹಾಕಿಕೊಳ್ಳುತ್ತಿದ್ದರು. ಕಂಪನಿಯ ಅಳಿವು-ಉಳಿವಿಗಾಗಿ ಅವರಿಗೆ ಸ್ವತಃ ಪರೀಕ್ಷೆ ಒದಗಿದವು. ಎಷ್ಟೋ ಸಲ ಸಾಲಗಾರರು ಬಂದಾಗ ನಾಗರತ್ನಮ್ಮ ಅವರ ಮಾತುಗಳನ್ನು ಕೇಳದೆ ತಮ್ಮಲಿದ್ದ ಹಣವನ್ನು ಕೊಟ್ಟು ಬಿಡುತ್ತಿದ್ದರು. ಅವರು ಬದುಕಿನಲ್ಲಿ ಕಷ್ಟ ನೋವು ಅನುಭವಿಸಿದ್ದಾರೆ. ಕಂಪನಿಗಾಗಿ, ಅವರ ಉಳಿವಿಗಾಗಿ, ಕಂಪನಿ ಬದುಕಿ ಹತ್ತಾರು ಕಲಾವಿದರು ಬದುಕಬೇಕೆಂಬುದೇ ಅವರ ಆಸೆಯಾಗಿತ್ತು.

೧೯೪೭ರಲ್ಲಿ ಹಣಗಿ ಚೆನ್ನಪ್ಪ ಎಂಬುವವರು ಇವರನ್ನು ಗೋಕಾಕ ಬಸವಣ್ಣಪ್ಪನವರ 'ಶಾರದ ಸಂಗೀತ ನಾಟಕ ಮಂಡಳಿಗೆ ಕರೆದುಕೊಂಡು ಬಂದು ಪರಿಚಯಿಸಿದರು. ನಾಡಿನ ಪ್ರಸಿದ್ಧ ಕಂಪನಿ ಆದ್ದರಿಂದ ಅಲ್ಲಿ ಪ್ರವೇಶ ದೊರೆಯುವುದೇ ಕಷ್ಟವಿತ್ತು. ಸುಂದರ ಆಕರ್ಷಕ ಬಾಲಕಿ ಮಾಲಿಕರಿಗೂ ಒಪ್ಪಿಗೆಯಾಯಿತು. ಪ್ರಾರಂಭದಲ್ಲಿಯೇ ಪಾತ್ರಗಳು ಯಶಸ್ವಿಯಾಗುವುದನ್ನು ನೋಡಿ ಬಸವಣ್ಣನವರು ನಾಗರತ್ನಮ್ಮನ ಪ್ರತಿಭೆ ಗುರುತಿಸಿ ತಮ್ಮ ಕಂಪನಿಯ ನಿರಂತರ ಕಲಾವಿದೆಯಾಗಬೇಕೆಂದು ಇಚ್ಛಿಸಿ ಹದಿಮೂರು ಹದಿನಾಲ್ಕರ ಹರೆಯದಲ್ಲಿಯೇ ಕಲಾ ಪತ್ನಿಯನ್ನಾಗಿ ಸ್ವೀಕರಿಸಿದರು. ಬಸವಣ್ಣನವರು ನಿರ್ದೇಶಕರಾಗಿ, ಗುರುಗಳಾಗಿ, ಪತಿಯಾಗಿ ನಾಗರತ್ನಮ್ಮ ಹೊಸಮನಿಯವರ ಕಲಾ ಬದುಕಿಗೆ ಬೆಳಗಿದವರು.

ಬಿ.ಶಿವಕುಮಾರಿ : ಇಂದಿನ ಹೊಸ ತಲೆಮಾರಿನ ನಟಿಯರಲ್ಲಿ ಬಿ.ಶಿವಕುಮಾರಿ ಒಬ್ಬರು. ನಾಗರತ್ನಮ್ಮನ ನಂತರದ ಕಾಲದಲ್ಲಿ ಇವರು ಬರುತ್ತಾರೆ. ಸಾಮಾಜಿಕ ನಾಟಕಗಳಲ್ಲಿ ಹೆಚ್ಚಾಗಿ ಪಾತ್ರವನ್ನು ಆಡುತ್ತಿದ್ದು,

ಹಲವಾರು ಗ್ರಾಮಗಳಿಗೆ ಇಂದಿಗೂ ಹೋಗುತ್ತಿದ್ದಾರೆ. ಇವರು ಪೌರಾಣಿಕ ಹಾಗೂ ಸೃಜನಶೀಲ ನಾಟಕಗಳನ್ನು ಮಾಡದೇ ಬರೀ ಸಾಮಾಜಿಕ ನಾಟಕಗಳನ್ನು ಮಾಡುತ್ತ ಇಂದಿಗೂ ರಂಗಭೂಮಿಯ ಸೇವೆಯನ್ನು ಮಾಡುತ್ತಿದ್ದಾರೆ. ತಮ್ಮ ದೈನಂದಿನ ಬದುಕಲ್ಲಿ ಹಲವಾರು ಸಾಮಸ್ಯೆಗಳು ಇದ್ದರು ಕೂಡ ರಂಗಜೀವನಕ್ಕೆ ಒಗ್ಗಿಕೊಂಡು ಇದನ್ನೇ ಸಾಧನೆ ಮಾಡಬೇಕೆಂದು ಸೇವೆ ಸಲ್ಲಿಸುತ್ತಿದ್ದಾರೆ. ಶಿವಕುಮಾರಿ ಚಿಕ್ಕಮ್ಮ ಹಾಗು ಅಜ್ಜಿ ದುರುಗಮ್ಮ ರಂಗನಟಿಯರೇ ಈ ಪರಂಪರೆಯಿಂದ ಬಂದಿದ್ದು. ಆಯಾ ಕಾಲದಲ್ಲಿ ಸಾಂಸ್ಕೃತಿಕ ಪರಿಸರದಲ್ಲಿ ಪ್ರೌಢಶಾಲಾ ಹಂತದಲ್ಲಿಯೇ ಇದ್ದಾಗ ಹಲವಾರು ನಾಟಕಗಳಿಗೆ ಹೋಗಿ ಬಂದು ನಾಟಕವನ್ನು ಆಡಿದ್ದಾರೆ. ಇತ್ತೀಚಿಗೆ ಇವುಗಳನ್ನು ಶಿಸ್ತುಬದ್ಧ ನಿಯಮಿತ ಜೀವನವನ್ನು ಮಾಡಿ ರಂಗದ ಬದುಕನ್ನು ನಡೆಸುತ್ತಿದ್ದಾರೆ. ಪೌರಾಣಿಕ ನಾಟಕಗಳಲ್ಲಿ ಪಳಗದೇ ತಮ್ಮದೇ ಅಸ್ತಿತ್ವವನ್ನು ಮೆರೆದಿದ್ದಾಳೆ. ಈಗಿನ ಇವರ ಆರ್ಥಿಕ ಪರಿಸ್ಥಿತಿಯು ಸುಧಾರಿಸಿಕೊಂಡು ತಮ್ಮ ಮಗನೊಂದಿಗೆ ಸುಖದಿಂದ ಜೀವಿಸುತ್ತಿದ್ದಾರೆ. ಇವರಂತೆ ಕೂಡ್ಲಿಗಿಯಲ್ಲಿರುವ ರಂಗನಟಿಯರೆಲ್ಲ ನೆಮ್ಮದಿಯಿಂದ ಬದುಕುತ್ತಿಲ್ಲ. ಕಾರಣ ಇವರಿಗೆ ಒದಗಿದಂತೆ ಅವರೆಲ್ಲರಿಗೂ ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಪರಿಸ್ಥಿತಿಗಳು ಒದಗಿಬಂದಿಲ್ಲ. ಅಂಥದರಲ್ಲಿ ಇಂದಿನ ತಲೆಮಾರಿನ ನಟಿಯರಿಗೆ ಹಿಂದೆ ಇರುವಷ್ಟು ಗೌರವ, ಮನ್ನಣೆ ಒದಗಿಬಂದಿಲ್ಲ.

ಆಯಾ ಕಾಲದಲ್ಲಿ ಪ್ರೇಕ್ಷಕರ ಮನೋಧರ್ಮವು ಹಲವಾರು ರೀತಿಯಲ್ಲಿಯೇ ಇತ್ತು. ಒಂದು ಕಾಲದಲ್ಲಿ

೧. ನಾಟಕಕ್ಕಾಗಿ ಪ್ರೇಕ್ಷಕರು ಆಗಮಿಸುತ್ತಿದ್ದರು.

೨. ರಂಗಸಜ್ಜಿಕೆಗಳಿಗೆ ಪ್ರೇಕ್ಷಕರು ಆಗಮಿಸುತ್ತಿದ್ದರು.

೩. ಸಂಭಾಷಣೆಗೆ ಪ್ರೇಕ್ಷಕರು ಆಗಮಿಸುತ್ತಿದ್ದರು.

೪. ನಟಿಯರಿಗಾಗಿ ಪ್ರೇಕ್ಷಕರು ಆಗಮಿಸುತ್ತಿದ್ದರು.

ಹೀಗೆ ಹಲವಾರು ರೀತಿಯಲ್ಲಿ ನಟಿಯರು ಆಯಾಕಾಲದ ಮನೋಧರ್ಮಕ್ಕೆ ತಕ್ಕಂತೆ ಜೀವಿಸಿ ತಮ್ಮ ದಾಖಲೆಯನ್ನು ಮಾಡಿ ರಂಗಭೂಮಿಯಲ್ಲಿ ತಮ್ಮ ಅನನ್ಯತೆಯನ್ನು ಪ್ರತಿನಿಧಿಸಿದ್ದಾರೆ.

೪.೨.೪. ಮಕ್ಕಳ ಭವಿಷ್ಯ : ನಟಿಯರ ಜೀವನವೇ ದುಸ್ತರವಾಗಿರುವಾಗ ಮಕ್ಕಳನ್ನು ಹೊತ್ತು, ಹೆತ್ತು, ಸಾಕಿ ಸಲಹುವ ಜವಾಬ್ದಾರಿ ಬೇರೆ. ಪತಿಯಾದವರು ಅಮವಾಸೆಗೊಮ್ಮೆ ಅಥವಾ ಹುಣ್ಣಿಮೆಗೊಮ್ಮೆ ಬರುವ ಅತಿಥಿ. ಅವರಿಗೆ ಇವರು ಯಾವ ಒತ್ತಡ ತರಬಾರದು. ಅಂದರೆ ಅವರು ಇವರನ್ನು ತಿರುಗಿಕೂಡ ನೋಡುವುದಿಲ್ಲ. ಏಕೆಂದರೆ ನಮ್ಮ ಸಮಾಜದಲ್ಲಿ ಹೆಣ್ಣುಗಳಿಗೆ ಈಕೆ ಇಲ್ಲದಿದ್ದರೇನಂತೆ ಇನ್ನೊಬ್ಬಳು ಸಿಕ್ಕೇ ಸಿಗುತ್ತಾಳೆ. (ಈ ಪದ್ಧತಿ ಅನಾದಿಕಾಲದಿಂದಲು ಬೆಳೆದು ಬಂದಿರುವುದರಿಂದ) ಆಳೋಳಿಗೆ ಅರವತ್ತು ಮಂದಿ. ಗಂಡು ಸತ್ತು ಹೂವನ್ನಾದರೂ ಮುಡಿಯಬಹುದು. ಈ ಗಾದೆ ಮಾತುಗಳು ಇಂಥ ಸಮಾಜದಿಂದಲೇ ಹುಟ್ಟಿಕೊಂಡು

ಬಂದಿವೆ. ಇಂಥ ಕಟಿಬದ್ಧ ವ್ಯವಸ್ಥೆಯಲ್ಲಿ 'ನಟ' ತನ್ನ ಮಕ್ಕಳನ್ನು ತಾನೇ ಪೋಷಿಸಬೇಕು. ಇವರ ಸಂಗಾತಿ ಪೋಷಿಸುವುದಿರಲಿ ಆ ಮಗುವನ್ನು ಎತ್ತಿಕೊಳ್ಳಲು ಅವರು ಹಿಂದೇಟು ಹಾಕುತ್ತಾರೆ. ರಂಗಭೂಮಿಯಲ್ಲಿ ಬಣ್ಣಹಚ್ಚಿಕೊಂಡು ಪಾತ್ರ ಮಾಡಿದ ಮೇಲೆ ಬಂದು ಹಾಲು ಕೊಡುವುದು, ಮಗು ಆಕಸ್ಮಿಕ ಸತ್ತಾಗ ಬುಕ್ ಮಾಡಿದ ಪ್ರಕಾರ ಮಗು ತೀರಿತು ಎನ್ನುವ ದುಃಖದಲ್ಲಿದ್ದರೂ ಪಾತ್ರ ಮಾಡಿ ರಂಗದಲ್ಲಿ ನಗುವುದು ಕುಣಿದಾಡುವುದು ಹೀಗೆ ಎಲ್ಲ ವೈಪರೀತ್ಯ ಬದುಕಲ್ಲಿ ರಂಗನಟಿಯರು ಗೃಹಸ್ಥ ಜೀವನ ಸಾಗಿಸುತ್ತಿದ್ದಾರೆ.

ರಂಗನಟಿಯರ ಮಕ್ಕಳಿಗೆ ತಂದೆ ತಾಯಿ ಎಲ್ಲ ನಟಿಯೇ. ಹೆಣ್ಣಾಗಿ ಗಂಡಾಗಿ ಈ ಮಕ್ಕಳನ್ನು ಪೋಷಿಸಬೇಕು. ಅವುಗಳ ಮುಂದಿನ ಭವಿಷ್ಯಕ್ಕಾಗಿ ಚಿಂತಿಸಬೇಕು. ಇಡೀ ಮನೆಯ ಎಲ್ಲ ಹೊಣೆಗಾರಿಕೆಯನ್ನು ತಾನೇ ಹೊತ್ತುಕೊಳ್ಳಬೇಕು. ಅವರ ಪೋಷಣೆ-ಪಾಲನೆ, ವಿದ್ಯಾಭ್ಯಾಸ, ಮದುವೆ-ಮುಂಜಿ, ನೌಕರಿ (ದುಡಿಮೆ) ಈ ಎಲ್ಲದರ ವೆಚ್ಚಕ್ಕಾಗಿ ಇವರು ಹಗಲಿರುಳು ಹೆಣಗಾಡಬೇಕು. ಒಟ್ಟಿನಲ್ಲಿ ಹೆಣ್ಣಾಗಿ ಅದು ರಂಗನಟಿಯಾಗಿ ಬಾಳುವುದು ಇದರಲ್ಲಿ ಮುನ್ನಡೆಯುವವರಿಗೆ ಎಂಟು ಎದೆಗಳೇ ಇರಬೇಕಾಗುತ್ತದೆ ಎಂಬುದು ಕೆಲವು ರಂಗನಟಿಯರ ಅಭಿಮತ.

ಮಕ್ಕಳ ವಿಷಯದಲ್ಲಿ ಬಳ್ಳಾರಿ ಜಿಲ್ಲೆಯ ಖ್ಯಾತರಂಗ ಕಲಾವಿದೆ ರಂಗಕೋಗಿಲೆಯಾದ ಮನ್ಸೂರು ಸುಭದ್ರಮ್ಮ ಮನನೊಂದು ನುಡಿಯುತ್ತಾರೆ. ನಮ್ಮ ರಂಗಬದುಕಿನಿಂದ ಬೇಸತ್ತು, ಮಕ್ಕಳು ಚೆನ್ನಾಗಿರಲಿ ಎಂದು ಮದುವೆ ಮಾಡಿಕೊಟ್ಟರೆ ಆ ಮಕ್ಕಳು ಯಾವುದೋ ಸಮಸ್ಯೆಯಿಂದ ದುರಂತ ಸಾವಿಗೆ ಈಡಾದರು. ಈಗ ಅನಿಸುತ್ತದೆ ಅವರನ್ನು 'ರಂಗಕಲಾವಿದೆ'ಯರನ್ನಾಗಿ ಮಾಡಿದ್ದರೆ ಅವರು ಬದುಕಿ ಎಲ್ಲರಂತೆ ಜೀವಿಸುತ್ತಿದ್ದರೋ ಏನೋ. ನನ್ನಂತೆ ಅವರ ಬಾಳು ಆಗಬಾರದು ನಾನು ಕಷ್ಟ ಪಟ್ಟಿರುವುದೇ ಸಾಕು ನಮ್ಮ ಮಕ್ಕಳಿಗೆ ಕಷ್ಟ ಬೇಡವೆಂದರೆ ದೇವರು ಅವರಿಗೆ ನೆಮ್ಮದಿಯ ಜೀವನವನ್ನು ದಯಪಾಲಿಸಲಿಲ್ಲ ಎಂದು ದುಃಖಿತರಾಗಿ ನುಡಿಯುತ್ತಾರೆ.

ಹಲವಾರು ರಂಗನಟಿಯರ ಜೀವನಾನುಭವ ಏನೇ ಇರಲಿ ಎಷ್ಟೇ ಕಷ್ಟ ಬಂದಿರಲಿ ಆದರೆ ರಂಗದ ಮೇಲೆ ನಾವು ನೆಮ್ಮದಿಯಿಂದ ಇದ್ದು ಭಾವಪರವಶವಾಗಿ ಬಿಡುತ್ತೇವೆ. ಸುಭದ್ರಮ್ಮ ಮನ್ಸೂರವರು ಕಷ್ಟ ಹಾಗೂ ಖ್ಯಾತಿ ಯಾವಾಗಲೂ ಅಂಟಿಕೊಂಡೇ ಇರುತ್ತದೆ. ಅಂಥ ಜೀವನವನ್ನು ಕಂಡವರೇ ಸುಭದ್ರಮ್ಮ ಮನ್ಸೂರವರು. ಆದರೆ ಮಕ್ಕಳ ವಿಷಯದಲ್ಲಿ ಅವರಿಗೆ ವಿಧಿಯ ಪರಿಪೂರ್ಣ ಹಿಡಿತದಿಂದ ಅವರಿಗೆ ತಪ್ಪಿಸಿಕೊಳ್ಳಲು ಆಗಿಲ್ಲ 'ತಾನೊಂದು ಬಗೆದರೆ ದೈವವೊಂದು ಬಗೆದಂತೆ' ಎನ್ನುವರು ಸುಭದ್ರಮ್ಮ.

ಯಾವೊಬ್ಬ ನಟಿಯೂ ತಮ್ಮ ಮಗಳನ್ನು ರಂಗಭೂಮಿಗೆ ಕಳಿಸಲಾರೆ ಎನ್ನುತ್ತಾರೆ. ನಮ್ಮ ಹುಡುಗರನ್ನು ಕಳುಹಿಸುವುದಿಲ್ಲ ಎನ್ನುತ್ತಾರೆ. ತಾವು ಕಷ್ಟ ಪಡುವುದು ಸಾಕು, ನಮ್ಮ ಮಕ್ಕಳಿಗೆ ಈ ಸ್ಥಿತಿ ಬೇಡ ಮಕ್ಕಳಿಗೆ ಓದಿಸುತ್ತೇವೆ, ದುಡಿಮೆಗೆ ಹಚ್ಚುತ್ತೇವೆ, ಅವರಿಗೆ ಮದುವೆಯನ್ನು ಮಾಡಿ ನೆಮ್ಮದಿಯಿಂದ ಇರಲು ಬಿಡುತ್ತೇವೆ.

ಈ ಹಿಂಸೆ, ನೋವು, ತಹತಹಿಕೆ ಆರ್ಭಟ ಪುರುಷಶಾಹಿಯ ಶೋಷಣೆ ಎಲ್ಲೆಲ್ಲೂ ಗೊಂದಲ. ಸಮಾಜದ ಕ್ರೌರ್ಯ ಯಾವ ಹುತ್ತದಲ್ಲಿ ಯಾವ ಹಾವೋ ಎಂಬಂಥ ಸಂದರ್ಭ. ಇವೆಲ್ಲವನ್ನು ನೋಡಿದಾಗ ನಮಗೆ ಮರುಕವೆನಿಸುತ್ತದೆ. ಆದ್ದರಿಂದ ಮಕ್ಕಳ ಭವಿಷ್ಯ, ವ್ಯಾಸಂಗ ಹಾಗೂ ನೌಕರಿ ಅಥವಾ ದುಡಿಮೆ ಈ ಕ್ಷೇತ್ರಬಿಟ್ಟು ಯಾವುದಾದರೇನಂತೆ. ಕೂಲಿ ಮಾಡಿದರೂ ಸರಿಯೇ ಅದಕ್ಕೆ ಬೆಲೆಯುಂಟು. ಈ ರಂಗವೃತ್ತಿ ಕಾಯಕಕ್ಕೆ ಬೆಲೆ ಉಂಟೆ? ಎಂದು ಪ್ರಶ್ನಿಸುತ್ತಾರೆ ಹಲವಾರು ರಂಗನಟಿಯರು.

ಸ್ವತಃ ನಾಗರತ್ನಮ್ಮರನ್ನು ಕೇಳಿದಾಗ ನಮ್ಮ ಮಕ್ಕಳಿಗೆ ಸರಕಾರದಿಂದ ಆರ್ಥಿಕ ಭದ್ರತೆ ಸಿಕ್ಕರೆ ಖಂಡಿತ ನನ್ನ ಮಗಳನ್ನು ರಂಗಭೂಮಿಗೆ ಕಳುಹಿಸುತ್ತೇನೆ ಎನ್ನುತ್ತಾರೆ. ಇವೆಲ್ಲ ಸಂದಿಗ್ಧತೆ ಇದ್ದಾಗಲೂ ನೋಗಿರತ್ನ ಇನ್ನು ರಂಗಭೂಮಿಯಲ್ಲಿ ಹೊಸ ಪ್ರಯೋಗ, ಹೊಸ ವ್ಯವಸ್ಥೆ ಬಂದರೆ ಖಂಡಿತ ನಮ್ಮ ಮಕ್ಕಳನ್ನು ರಂಗಭೂಮಿಗೆ ಕಳುಹಿಸುತ್ತೇನೆ ಎನ್ನುತ್ತಾರೆ.

ಈ ನಿಟ್ಟಿನಲ್ಲಿ ನೋಡಿದಾಗ ಎಲ್ಲರ ಅಳಲು ಒಂದೇ. ಆರ್ಥಿಕ ಭದ್ರತೆಯನ್ನು ಸರಕಾರ ಮಾಡಿದರೆ ರಂಗನಟಿಯ ಪರಂಪರೆಯು ಮುಂದುವರಿಯುವ ಸಾಧ್ಯತೆ ಉಂಟಾಗುತ್ತದೆ.

ಅಧ್ಯಾಯ ೫

ರಂಗ ನಟಿಯರು : ಸಾಮಾಜಿಕ ಆರ್ಥಿಕ ಪರಿಸರ

ಅಧ್ಯಾಯ ೫

ರಂಗ ನಟಿಯರು : ಸಾಮಾಜಿಕ ಆರ್ಥಿಕ ಪರಿಸರ

ರಂಗನಟಿಯರು ಸಾಮಾಜಿಕವಾಗಿ, ಆರ್ಥಿಕವಾಗಿ ತುಂಬಾ ಹೀನ ಸ್ಥಿತಿಯಲ್ಲಿದ್ದಾರೆ. ನಟಿಯರಾಗುವವರ ಗೋಳಂತೂ ಯಮಗೋಳೇ ಸರಿ. ಸಾಮಾಜಿಕವಾಗಿ ನಟಿಯರಿಗೆ ಯಾವುದೇ ಮಾನ್ಯತೆಯಿಲ್ಲ. ಈ ನಮ್ಮ ಸಮಾಜದಲ್ಲಿ 'ನಾಟಕ ಕೀಳು' ಎಂಬ ಭಾವನೆಯು ಇರುವುದರಿಂದ ಸಾಮಾಜಿಕವಾಗಿ ನಟಿಯರಿಗೆ ಮಾನ್ಯತೆಯನ್ನು ನೀಡುವುದಿಲ್ಲ. ತಾವು ನೋಡಿ ಆನಂದಿಸುತ್ತಾರೆ. ಆದರೆ ಅವರ ಖಾಸಗಿ ಜೀವನದ ಬಗ್ಗೆ ಎಲ್ಲರೂ ತಾತ್ಸಾರ ಮನೋಭಾವನೆಯನ್ನು ತಳೆಯುತ್ತಾರೆ.

ರಾಜಮಹಾರಾಜರ ಆಳ್ವಿಕೆಯ ಕಾಲದಲ್ಲಿ ಅವರ ಆಸ್ಥಾನಗಳಲ್ಲಿ ಮನೋರಂಜನೆಗಾಗಿ ನೃತ್ಯ, ನಾಟಕ ಪ್ರದರ್ಶನಗಳಲ್ಲಿ ಪ್ರತಿಭಾವಂತೆಯರಾದ ಕಲಾವಿದೆಯರಿಗೆ ಅವಕಾಶಗಳು ಸಿಗುತ್ತಿದ್ದವು. ಆದರೆ ಇವರ್‍ಯಾರು ಗೌರವಸ್ಥರೆಂದು ಕರೆಯಲ್ಪಡುವ ಕುಲದ ಸ್ತ್ರೀಯರಾಗಿರಲಿಲ್ಲ. ಇಂಥ ಅಭಿನಯ ಪ್ರದರ್ಶನದ ಅವಕಾಶಗಳು ಅವರಿಗೆ ಕೊಡುವ ಮನ್ನಣೆ ಅದು ಆಗಿರಲಿಲ್ಲ. ಬದಲಾಗಿ ಅವರ ಕುಲಕಸುಬಿನ ಒಂದು ಭಾಗ ಮಾತ್ರವಾಗಿತ್ತು. ಅವರು ವೇಶ್ಯೆಯರೆಂದೋ, ದೇವದಾಸಿಯರೆಂದೋ ಕರೆಯಲ್ಪಡುವ ಶೋಷಿತ ಸ್ತ್ರೀಯರಾಗಿರುತ್ತಿದ್ದು, ಅವರ ವಿಶಿಷ್ಟ ಕಲಾ ಪ್ರತಿಭೆಯನ್ನು, ಸಾಮರ್ಥ್ಯವನ್ನು ಗುರುತಿಸುವ, ಗೌರವಿಸುವ ಪದ್ಧತಿ ಸಮಾಜದಲ್ಲಿ ಇರಲಿಲ್ಲ. ಅವರೂ ಕೂಡ ತಮ್ಮ ಕೆಲಸವನ್ನು ದೇವರೇ ನಿರ್ಮಿಸಿ ಕೊಟ್ಟಿದ್ದಾನೆಂದು ಭಕ್ತಿಯಿಂದಲೋ, ಕರ್ತವ್ಯದ ಮೇಲಿನ ನಿಷ್ಠೆಯಿಂದಲೋ ಅಥವಾ ಪ್ರಭುಗಳು ನೀಡುವ ಹಣದಾಸೆಯಿಂದಲೋ ಮಾಡುತ್ತಿದ್ದರಲ್ಲದೆ, ತಮ್ಮಲ್ಲಿರುವ ಕಲೆಯ ಒಳಗಿನ ಅರಿವು, ಆತ್ಮವಿಶ್ವಾಸಗಳು ಅವರಿಗಿರುತ್ತಿರಲಿಲ್ಲ.

"ಅಂದಿನ ಸಮಾಜವೇ ಹಾಗಿತ್ತು. ಮಹಿಳೆಯರ ಬಗ್ಗೆ ಎಲ್ಲರಲ್ಲೂ ಸಂಕುಚಿತ ಭಾವನೆಯಿತ್ತು. ಒಂದೋ ಆಕೆ ಮನೆಯೊಳಗೆ ಕುಳಿತು ಗೃಹಕೃತ್ಯ-ಮಕ್ಕಳು ಮನೆಮಂದಿಯ ದೈನಂದಿನ ಅವಶ್ಯಕತೆಗಳನ್ನು ಪೂರೈಸುವವಳೂ, ಗೌರವಾನ್ವಿತಳೂ ಆದ ಗೃಹಲಕ್ಷ್ಮಿಯಾಗಿರಬೇಕು. ಇಲ್ಲವೇ ಹೊರ ಜಗತ್ತಿನೊಂದಿಗೆ ವ್ಯವಹರಿಸುವ ಮರ್ಯಾದೆ ಬಿಟ್ಟವಳಾಗಿರಬೇಕು ಎಂಬ ಎರಡೇ ಆಯ್ಕೆಗಳು ಆಕೆಗಿದ್ದವು. ಇವೆರಡರ ನಡುವೆ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ಆಕೆಗಿರಲಿಲ್ಲ. ಆಕೆಯ ಸ್ಥಾನವು ಕುಲದ ಪ್ರಾಮುಖ್ಯತೆಯ ಮೇಲೆ ನಿರ್ಧರಿತವಾಗುತ್ತಿತ್ತು" (ಲೇ. ಪಾರ್ವತಿ ಜಿ. ಐತಾಳ್, ರಂಗಭೂಮಿ ಮತ್ತು ಹೆಣ್ಣು, ಬದಲಾಗಬೇಕಾದ

ಸಮಾಜ, ನಾನೊಂದ ಕನಸ ಕಂಡೆ, ಪುಟ, ೧೨). ಹೀಗೆ ನಟಿಯರ ಸಾಮಾಜಿಕ ಪರಿಸರವಿದ್ದು, ಇಂದಿನ ಬದಲಾಗುತ್ತಿರುವ ಸಮಾಜ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಜತೆಜತೆಗೇ ಮಹಿಳೆಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಯಶಸ್ವಿಯಾಗಿರುವರು. ಅನೇಕ ವೈಚಾರಿಕ ಪ್ರಗತಿಯನ್ನು ಸಾಧಿಸಿದ್ದಾರೆ. ಬದುಕಿನ ರೀತಿ ನೀತಿಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಸಮಾಜದಲ್ಲಿ ಒಬ್ಬ ವ್ಯಕ್ತಿಯಾಗಿ ತನ್ನ ಕರ್ತೃತ್ವಶಕ್ತಿ, ಪ್ರತಿಭೆ, ಸಾಧನೆಗಳ ಮೂಲಕ ಮಹಿಳೆ ಪ್ರಯತ್ನಿಸಿದ್ದಾಳೆ. ವಿದ್ಯಾವಂತೆಯಾಗಿ ವಿವಿಧ ಕ್ಷೇತ್ರಗಳಲ್ಲಿ ವಿವಿಧ ಸ್ಥಾನಗಳಲ್ಲಿ ನಿಂತು ಕಾರ್ಯನಿರ್ವಹಿಸಿದ್ದಾಳೆ. ವಿಜ್ಞಾನಿ, ವಕೀಲೆ, ಲೇಖಕಿ, ಕಲಾವಿದೆಯಾಗಿ ತನ್ನ ಸಾಮರ್ಥ್ಯತೋರಿ ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಸ್ತ್ರೀ ಪ್ರಗತಿ ಹಂತದಲ್ಲಿದ್ದಾಳೆ.

ಮಹಿಳೆ ಇಷ್ಟು ಸಾಧನೆಗೈದಿದ್ದರೂ ಕೂಡ ಆಕೆ ಸಮಸ್ಯೆಯಿಂದ ಹೊರಬಂದಿಲ್ಲ. ಹೊರನೋಟಕ್ಕೆ ಯಶಸ್ಸು ಸಾಧಿಸಿದಂತೆ ಕಂಡರೂ ಸಮಾಜದಲ್ಲಿ ಆಕೆಯ ಬಗ್ಗೆ ಇರುವ ಕೀಳರಿಮೆ, ಕುರುಡು ನಂಬಿಕೆಗಳು, ಅಸಮಾನ ಪೂರ್ವಾಗ್ರಹಗಳು. ಅರ್ಥಹೀನ ಸಂಪ್ರದಾಯ, ಸಂಕುಚಿತ ಮನೋಭಾವದಿಂದ ಆರ್ಥಿಕವಾಗಿ ಸ್ವತಂತ್ರಳಾಗಲು ಆಕೆಯನ್ನು ಮುಂದೆ ಬಿಡುತ್ತಿಲ್ಲ, ಹಿಂದೆ ಎಳೆಯುವವರೇ ಹೆಚ್ಚಾಗಿದ್ದಾರೆ. ದೊಡ್ಡ ದೊಡ್ಡ ನಗರಗಳಲ್ಲಿ ಮೇಲು, ಮಧ್ಯಮವರ್ಗ ಹಾಗೂ ಉನ್ನತ ವಲಯಗಳಿಗೆ ಸೇರಿದ ಹೆಣ್ಣುಮಕ್ಕಳು ಇದರಿಂದ ತಪ್ಪಿಸಿಕೊಳ್ಳಬಹುದು. ಆದರೆ ಹಳ್ಳಿಗಳಲ್ಲಿ ಮತ್ತು ಸಣ್ಣ, ಸಣ್ಣ ಪೇಟೆ-ಪಟ್ಟಣಗಳಲ್ಲಿ ನಾಟಕದಲ್ಲಿ ನಟಿಸುವ ಹೆಣ್ಣುಮಕ್ಕಳ ನಡತೆಯ ಬಗೆಗಿನ ಊಹಾಪೋಹಗಳು, ಸಂಶಯ-ಸಂದೇಹಗಳು, ಸರ್ವೇಸಾಮಾನ್ಯ. ಇದಕ್ಕೆ ಪೂರಕವಾಗಿಯೋ ಎಂಬಂತೆ ನಾಟಕದಲ್ಲಿ ಭಾಗವಹಿಸುವ ಗಂಡಸರೂ ಸಹ ತಮ್ಮ ತಂಡದಲ್ಲಿರುವ ಹೆಣ್ಣುಮಕ್ಕಳ ಜೊತೆ ಅಶ್ಲೀಲವಾಗಿ ವ್ಯವಹರಿಸುತ್ತಾರೆ. ಅವರು ಕೂಡ ಸಮಾಜದ ಒಂದು ಭಾಗವಾಗಿರುವುದರಿಂದ ಎಲ್ಲಾ ಬಿಟ್ಟ ಹೆಣ್ಣು ಮಕ್ಕಳು ಮಾತ್ರ ನಾಟಕಕ್ಕೆ ಬರುತ್ತಾರೆಂಬ ಭಾವನೆಯನ್ನು ಅವರು ಬೆಳೆಸಿಕೊಂಡಿರುತ್ತಾರೆ. ಇಂಥಹ ಸಾಮಾಜಿಕ ಪರಿಸರದಲ್ಲಿ ನಮ್ಮ ನಟಿಯರಿಂದು ತೊಳಲಾಡುತ್ತಿದ್ದಾರೆ.

ಆರ್ಥಿಕವಾಗಿ ಬಲಹೀನರಾಗಿರುವ ನಟಿಯರನ್ನು ಇತರರು ಕೀಳಾಗಿ ನೋಡುವುದು, ನಟಿಯರ ಮನೆಯು ಅವರ ದುಡಿಮೆಯಿಂದ ನಿಂತಿರುವುದು. ಇವರ ಕುಟುಂಬಗಳಿಗೆ ಇವರೇ ಆಧಾರ. ಇವರ ತಾಯಿಗೆ ಹೆಣ್ಣು ಇವರೇ ಗಂಡು ನಟಿಯರೇ ಮಕ್ಕಳಿಗೆ ರಂಗನಟಿ. ತಂದೆ -ತಾಯಿ ಎರಡೂ ಈಕೆಯೇ. ಹೀಗೆ ನಟಿಯರು ಸಮಾಜದ ದೃಷ್ಟಿಯಿಂದ ಕೀಳಾಗಿ, ಹೀನರಾಗಿ, ಆರ್ಥಿಕ ದೃಷ್ಟಿಯಿಂದ ಬಲಹೀನರಾಗಿದ್ದು ಇಡೀ ವ್ಯವಸ್ಥೆಯಲ್ಲಿ ಗಾಳಕ್ಕೆ ಸಿಕ್ಕಿರುವ ಮೀನಿನಂತೆ ತೊಳಲಾಡುತ್ತಿರುವುದು ನಮ್ಮ ನಟಿಯರ ದೈನಂದಿನ ಪರಿಸ್ಥಿತಿಯಾಗಿದೆ.

ಹಣಕ್ಕಾಗಿ ಬಣ್ಣ ಹಚ್ಚಿರುವ, ಹಣಕ್ಕಾಗಿ ದೇಹವನ್ನು ಮಾರಿಕೊಂಡಿರುವ, ಹಣಕ್ಕಾಗಿ ಸೂತ್ರದ ಬೊಂಬೆಯಂತೆ ನಮ್ಮ ನಟಿಯರು ವ್ಯವಸ್ಥೆಯ ಕೈಗೊಂಬೆಯಾಗಿದ್ದಾರೆ. ವ್ಯವಹಾರಿಕ ದೃಷ್ಟಿಯಿಂದ ಇಂದಿನ ಪ್ರಪಂಚ ಇರುವುದರಿಂದ ನಟಿಯರು ಹೊಟ್ಟೆಯ ಪಾಡಿಗಾಗಿ ಸುಲಭೋಪಾಯದ ಮಾರ್ಗವೆಂದು ಈ ರಂಗಭೂಮಿಯನ್ನು ನಂಬಿಕೊಂಡಿದ್ದಾರೆ.

ಇಂದು ನಟಿಯರು ವೃದ್ಧಾಪ್ಯದಲ್ಲಿ ಮಾಸಾಶನವನ್ನು ಕಾಯ್ದುಕೊಳ್ಳುತ್ತಾ ತಿಂಗಳ ೧ನೇ ತಾರೀಖು ಯಾವಾಗ ಬರುತ್ತದೆಯೋ ಎಂದು ಹಗಲು ರಾತ್ರಿ ಕಣ್ಣುಬಿಟ್ಟು ನೋಡುತ್ತಾ, ಪ್ರಾಯವನ್ನು ವ್ಯಯಮಾಡಿಕೊಳ್ಳುವುದೊಂದೇ ಅವರ ಮಾರ್ಗವಾಗಿದೆ. ಸರಕಾರದಿಂದ ಯಾವ ನಟಿಗೂ ಆರ್ಥಿಕ ಭದ್ರತೆ ಒದಗಿಸಿಲ್ಲ. ಅವರು ಕೊಡುವ ಮಾಶಾಸನ ಅವರ ಜೀವನಕ್ಕೆ ಸಾಕಾಗುತ್ತಿಲ್ಲ. ಇಂದಿನ ಏರುತ್ತಿರುವ ಬೆಲೆ ಏರಿಕೆಯ ದುಬಾರಿ ಜೀವನದಲ್ಲಿ ಅವರು ಕಂದಿ ಸೊರಗುತ್ತಿದ್ದಾರೆ.

ವಯಸ್ಸು ಇದ್ದಾಗ ಬೇಡಿಕೆ, ನಾಯಕಿಪಟ್ಟ. ವಯಸ್ಸಾದಂತೆ ಸಂಭಾವನೆ ಕಡಿಮೆ, ಬೇಡಿಕೆ ಕಡಿಮೆ. ಕ್ರಮೇಣವಾಗಿ ಹಂತ ಹಂತವಾಗಿ ಬೆಲೆಯೂ ಕಡಿಮೆಯಾಗುತ್ತದೆ. ಯಾವುದೇ ಒಬ್ಬ ವ್ಯಕ್ತಿಗೆ ಆರ್ಥಿಕವಾಗಿ ಅವರು ಬಲವಾಗಿದ್ದರೆ ಮಾತ್ರ ಅವರು ಹೇಳಿದಂತೆ ಎಲ್ಲವೂ ನಡೆಯುತ್ತದೆ. ಆರ್ಥಿಕವಾಗಿ ಹೀನರಾದಾಗ ನಮ್ಮ ಸಮಾಜದಲ್ಲಿ ಕೀಳಾಗಿರುವುದು ಸಹಜ ಎನ್ನುತ್ತಾರೆ. ಹಲವರು ರಂಗನಟಿಯರು ಸಾಮಾಜಿಕ ಭದ್ರತೆಗೆ ಈ ಕ್ಷೇತ್ರವನ್ನು ಆರಿಸಿಕೊಂಡಿದ್ದು, ಈ ಕ್ಷೇತ್ರವೇ ಅಲುಗಾಡಿದರೆ ನಮ್ಮ ಪಾಡು ಏನು? ಎಂದು ಸಂದರ್ಶನದಲ್ಲಿ ನಮ್ಮನ್ನೇ ಪ್ರಶ್ನಿಸುತ್ತಾರೆ.

ಒಟ್ಟಿನಲ್ಲಿ ನಟಿಯ ದೈನಂದಿನ ಆರ್ಥಿಕ ಸಾಮಾಜಿಕ ಪರಿಸರ ಉತ್ತಮವಾಗಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ನಟಿಯರೊಂದೇ ಈ ಕ್ಷೇತ್ರದಲ್ಲಿ ನಮಗೆ ನೆಮ್ಮದಿ ದೊರೆತಿದೆ ಎನ್ನುತ್ತಾರೆ. ಇನ್ನುಳಿದ ಇವರ ಸಹಕಲಾವಿದೆಯರ ಪರಿಸ್ಥಿತಿಯು ತುಂಬಾ ಚಿಂತಾಜನಕವಾಗಿದೆ ಎಂಬ ಮಾತಿನಲ್ಲಿ ಲಾಸೇನೂ ಇಲ್ಲ ಎನ್ನಬಹುದಾಗಿದೆ.

೫.೧. ರಂಗ ಪ್ರವೇಶದ ನೆಲೆಗಳು

ನಟಿಯರು ಸಾಮಾಜಿಕ ಮನ್ವಂತರದಲ್ಲಿ ಕೀಳುದರ್ಜೆಯಲ್ಲಿ ಹುಟ್ಟಿರುತ್ತಾರೆ. ಇಲ್ಲವೆ ಕೆಲವರು ಆರ್ಥಿಕ ಬಲಹೀನತೆಯಿಂದಲೂ ಅನಿವಾರ್ಯವಾಗಿ ರಂಗನಟಿಯರಾಗಿರುತ್ತಾರೆ. ಆದರೆ ಬಹುತೇಕವಾಗಿ ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿ ಸಂಪ್ರದಾಯ ಇರುವ ಜನಾಂಗಗಳಲ್ಲಿಯೇ ಹೆಚ್ಚಾಗಿ ರಂಗನಟಿಯರು ಸಿಗುತ್ತಾರೆ. ಸಂಪೂರ್ಣವಾಗಿ ಅವರೇ ಇವರು ಎಂದು ಹೇಳಲಾಗುವುದಿಲ್ಲ. ಆದ್ದರಿಂದ "ಎಲ್ಲಾ ರಂಗನಟಿಯರು ದೇವದಾಸಿಯರಲ್ಲ, ಎಲ್ಲಾ ದೇವದಾಸಿಯರೂ ರಂಗನಟಿಯರಲ್ಲ." ಆದ್ದರಿಂದ ಬೇರೆ, ಬೇರೆ ಜಾತಿ

ಜನಾಂಗಗಳಿಂದಲೂ ರಂಗನಟಿಯರು ರಂಗಭೂಮಿಕೆಗೆ ಬಂದಿದ್ದಾರೆ. ಇದಕ್ಕೆ ಹಲವಾರು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳು ಇವೆ.

೧. ಸ್ವಯಂ ಸ್ಫೂರ್ತಿ ಹಾಗೂ ಆಸಕ್ತಿಯಿಂದ

೨. ಆರ್ಥಿಕವಾಗಿ ಯಾವ ಕ್ಷೇತ್ರವೂ ಸಿಗದೇ ಇರುವ ಸಂದರ್ಭ

೩. ವಂಶಪರಂಪರೆಯಾಗಿ ಬಂದ ನಟಿಯರು

೪. ಅವರಲ್ಲಿ ದೇವದಾಸಿ ಸಂಪ್ರದಾಯ ಇರುವುದರಿಂದ

೫. ಅನಾಥ ಹೆಣ್ಣುಮಕ್ಕಳು ಅನಿವಾರ್ಯವಾಗಿ ಈ ಕ್ಷೇತ್ರಕ್ಕೆ ಬಂದಿರುವುದು

ಈ ಎಲ್ಲಾ ಕಾರಣಗಳಿಂದಲೂ ನಟಿಯರು ರಂಗಭೂಮಿಕೆಗೆ ಬಂದಿದ್ದಾರೆ. ಹಾಗೆಯೇ ಪೋಷಣೆಯಲ್ಲಿ ಅನಾಥ ಹೆಣ್ಣು ಮಕ್ಕಳು ಬೆಳೆದಾಗ ಪೋಷಕರು ಹೇಳಿದಂತೆ ಕೇಳಲು ಅನಿವಾರ್ಯವಾಗಿ ನಟಿಯರಾಗಿ ಅವರ ಹಿಡಿತದಲ್ಲಿಯೇ ಎಷ್ಟೋ ವರ್ಷಗಳ ಕಾಲ ಬೆಳೆದು ನಂತರ ಅವರಿಂದ ಬಿಡುಗಡೆ ಪಡೆದಿದ್ದಾರೆ. ಈ ತೆರನಾಗಿ ಹಲವಾರು ರಂಗನಟಿಯರು ಹುಟ್ಟಿನಿಂದ ಅಥವಾ ಬಾಲ್ಯದಲ್ಲಿಯೇ ಯಾವುದೋ ಕಾರಣಕ್ಕಾಗಿ ನಟಿಯರಾಗಿ ರಂಗಬದುಕಿಗೆ ಕಾಲಿಟ್ಟಿದ್ದಾರೆ.

ಶ್ರೀಮಂತರ ಮನೆಯಲ್ಲಿ ಆಳಾಗಿದ್ದು, ನಂತರದ ದಿನಗಳಲ್ಲಿ ಅವರಿಂದ ಬಿಡುಗಡೆ ಹೊಂದಿ ತಾವೇ ಆರ್ಥಿಕವಾಗಿ ಸ್ವತಂತ್ರರಾಗಿ, ತಮ್ಮ ಕಾಲಮೇಲೆ ತಾವು ನಿಲ್ಲಲು ರಂಗಭೂಮಿಕೆಯನ್ನು ಆಧಾರವಾಗಿ ಆರಿಸಿ ಕೊಂಡವರೂ ಇದ್ದಾರೆ. ಕೆಲವು ನಟಿಯರಿಗಂತೂ ಜೀವನ ಬಹಳ ನಿಕೃಷ್ಟವಾಗಿ ಕಂಡಿದೆ. ಇನ್ನು ಕೆಲವರಿಗೆ ಎಲ್ಲವನ್ನು ತಾವು ಬಯಸದಿದ್ದರೂ ತಾನಾಗಿಯೇ ಅದೃಷ್ಟ ಈ ನಟಿಯರನ್ನು ಹುಡುಕಿಕೊಂಡು ಬಂದಿದೆ. ಈ ಎಲ್ಲ ವೈರುಧ್ಯಗಳು ರಂಗನಟಿಯರ ಬದುಕಿನಲ್ಲಿ ತಾಳ ಹಾಕಿವೆ. ಕಾಲಕ್ಕೆ ತಕ್ಕಂತೆ ಕುಣಿಯುವುದು, ನಟಿಯರ ಬದುಕನ್ನು ಹತ್ತಿರದಿಂದ ನೋಡಿದವರಿಗೇ ಗೊತ್ತು. ಅವರ ದೈನಂದಿನ ದುಃಸ್ಥಿತಿ ಎನ್ನುತ್ತಾರೆ ಹಲವಾರು ರಂಗಾಸಕ್ತರು, ರಂಗಪೋಷಕರು.

೧. ಸ್ವಯಂ ಸ್ಫೂರ್ತಿ ಹಾಗೂ ಆಸಕ್ತಿ : ಯಾವ ಒಬ್ಬ ನಟಿಯೂ ನಾನು ನಟಿಯಾಗಬೇಕು, ಪ್ರತಿಭೆಯನ್ನು ತೋರಿಸಬೇಕು, ಕಲಾಬದುಕನ್ನು ಬದುಕಬೇಕು, ರಂಗಭೂಮಿಯ ಪರಂಪರೆಯನ್ನು ಬೆಳೆಸಬೇಕೆಂದು ಸ್ವಯಂ ಆಸಕ್ತಿಯಿಂದ ಬಂದಿಲ್ಲ. ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂದವರು ನಟಿಯರೆಂದರೆ ಬಳ್ಳಾರಿ ಲಲಿತಮ್ಮ, ಬಳ್ಳಾರಿ ಸುಜಾತಮ್ಮ, ಯಳ್ಳೂರ್ತಿ ಚಾಮುಂಡೇಶ್ವರಿ, ಸೋಗಿರತ್ನ ಮುಂತಾದವರು.

೨. ಆರ್ಥಿಕವಾಗಿ ಯಾವ ಕ್ಷೇತ್ರವೂ ಸಿಗದೇ ಇರುವ ಸಂದರ್ಭ : ಆರ್ಥಿಕವಾಗಿ ಯಾವ ಕ್ಷೇತ್ರದಲ್ಲಿಯೂ ನೆಲೆ ಸಿಗದೇ ಇದ್ದಾಗ ಅನಿವಾರ್ಯವಾಗಿ ಬಡತನದ ಬೇಗೆಯನ್ನು ತಾಳಲಾರದೆ, ಶ್ರೀಮಂತ ಮನೆಗಳಲ್ಲಿ,

ಮುಸುರೆ ತೊಳೆಯಲಾರದೆ, ಶ್ರೀಮಂತರ ದಬ್ಬಾಳಿಕೆಯನ್ನು ಎದುರಿಸಲಾರದೇ ನಟಿಯರು ರಂಗವೃತ್ತಿಯನ್ನು ತಮ್ಮ ಜೀವನ ವೃತ್ತಿಯನ್ನಾಗಿ ಮಾಡಿಕೊಂಡರು. ಎಲ್ಲಿಯೂ ನೆಲೆ ಸಿಗದೇ ಇದ್ದಾಗ ಹೆಣ್ಣು ಏನು ಮಾಡಿದರೂ ತಪ್ಪು. ದುಡಿಯುವ ಮಹಿಳೆಯಾಗಿಯಾದರೂ ಬದುಕಲು ಅಂದರೆ ಮುಳುಗುವಾಗ ಹುಲ್ಲುಕಡ್ಡಿಯನ್ನಾದರೂ ಹಿಡಿಯಲೇಬೇಕೆಂಬಂತೆ ಹಲವಾರು ನಟಿಯರು ಬಡತನದಿಂದಲೇ ಈ ಕ್ಷೇತ್ರವನ್ನು ಆರಿಸಿಕೊಂಡಿದ್ದಾರೆ. ಉದಾ : ಡ್ಯಾನ್ಸರ್ ಜ್ಯೋತಿ ಬಳ್ಳಾರಿ, ಸುಧಾ, ಮಮತಾ (ಇವರು ಬೆಂಗಳೂರಿನ ಕಡೆಯವರು), ಅನುರಾಧ ಮೈಸೂರು, ಹೊಸಪೇಟೆ ಸರಸ್ವತಮ್ಮ ಮುಂತಾದ ನಟಿಯರು ಬಡತನದಿಂದಲೇ ರಂಗಭೂಮಿಗೆ ಬಂದಿದ್ದಾರೆ.

೬. **ವಂಶಪರಂಪರೆಯಾಗಿ ಬಂದ ನಟಿಯರು :** ಪ್ರತಿಯೊಬ್ಬ ರಂಗನಟಿಯರಿಗೆ ತಮ್ಮದೇ ಆದ ಒಂದು ನಟಿಯರ ಪರಂಪರೆ ಇದೆ. ಆ ದೃಷ್ಟಿಯಿಂದ ಹಲವಾರು ನಟಿಯರು ಬಾಲ್ಯದಿಂದಲೇ ಗಾಯನ ನೃತ್ಯವನ್ನು ಕಲಿತು ರಂಗನಟಿಯರಾಗಿದ್ದಾರೆ.

ದೇವದಾಸಿ ಸಂಪ್ರದಾಯ : ಬಳ್ಳಾರಿ ಜಿಲ್ಲೆಯಲ್ಲಿ ವಿಜಯನಗರ ಆಳ್ವಿಕೆಯಿಂದಲೂ ಈ ದೇವದಾಸಿ ಪದ್ಧತಿಯು ನಮ್ಮ ಪರಂಪರೆಯೊಂದಿಗೆ ಮುಂದುವರೆದುಕೊಂಡು ಬಂದಿದೆ. ಆದರೆ ಇಂದು ಈ ವ್ಯವಸ್ಥೆ ಸಂಪೂರ್ಣವಾಗಿ ಹೋಗಿಲ್ಲ. ಅಂಥವರ ಬೀದಿಗಳು ಇಂದಿಗೂ ಅಸ್ತಿತ್ವದಲ್ಲಿವೆ. ನಮ್ಮ ವ್ಯವಸ್ಥೆಯಲ್ಲಿ ನಾಯಕ ಜಾತಿಯಲ್ಲಿ ಈ ಸಂಪ್ರದಾಯ ಇರುವುದರಿಂದಲೇ ಹೆಚ್ಚಾಗಿ ಹೆಣ್ಣು ಮಕ್ಕಳು ಕಲಾಸಕ್ತಿಯಿಂದ ರಂಗಬದುಕಿಗೆ ಶರಣಾಗಿದ್ದಾರೆ. ಈ ಜಾತಿಯ ಪ್ರತಿಯೊಬ್ಬರ ಮನೆಯಲ್ಲಿ ಪರಂಪರೆಯಾಗಿ ಮುನ್ನಡೆದುಕೊಂಡು ಬಂದಿದೆ. ಆದ್ದರಿಂದ ಈ ಸಂಪ್ರದಾಯ ಇರುವ ಮನೆಯವರೇ ಬಳ್ಳಾರಿ ಜಿಲ್ಲೆಯ ರಂಗಭೂಮಿಗೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ಬಳ್ಳಾರಿ : ಬಳ್ಳಾರಿ ಲಲಿತಮ್ಮ ಪಾತರದವರ ಮನೆತನದವರಾದ್ದರಿಂದ ಇವರ ಸಹೋದರಿ ರತ್ನಮಾಲಾ ಈ ಇಬ್ಬರು ಸಂಗೀತ ನೃತ್ಯವನ್ನು ಕಲಿತುಕೊಂಡು ಯಾವ ಅಳುಕಿಲ್ಲದೆ ರಂಗಭೂಮಿಗೆ ಬಂದಿದ್ದಾರೆ.

ಸುಜಾತಮ್ಮ ಬಳ್ಳಾರಿ : ಸ್ವತಃ ಬಯಲಾಟದ ತಂಡವನ್ನು ಕಟ್ಟಿ ಈ ಸಂಪ್ರದಾಯದಿಂದಲೇ ಕಲಾವಂತೆಯಾಗಿ ರಂಗಭೂಮಿಯಲ್ಲಿ ತಮ್ಮ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಮುನ್ನೂರು ಸುಭದ್ರಮ್ಮ : ಪಾತರದವರ ಮನೆತನದವರಾಗಿದ್ದು, ಪರಂಪರೆಯಿಂದ ಬಂದಿರುವ ಸಂಗೀತದಿಂದ ಇಂದು ರಂಗಕೋಗಿಲೆ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಮೀನಳ್ಳಿ ಪಾರ್ವತಮ್ಮ : ದೇವದಾಸಿ ಮನೆತನದಿಂದ ಬಂದು, ಕಲಾವಂತೆಯಾಗಿ ಬಳ್ಳಾರಿ ಜಿಲ್ಲೆಯ ರಂಗಭೂಮಿಗೆ ತಮ್ಮ ಕೊಡುಗೆಯನ್ನು ಸಲ್ಲಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ನಟಿಯರ ಪರಂಪರೆ

ನಟಿಯರ ಹೆಸರು	ಸಂಬಂಧ	ನಟನಾ ಪರಂಪರೆ	ವೃತ್ತಿ
ಪಿ.ಪದ್ಮ	ಚಿಕ್ಕಮ್ಮ	ಲಕ್ಷ್ಮಿ	ರಂಗಭೂಮಿ ನಟಿ
ಜಿ.ಶಿವಕುಮಾರಿ	ಚಿಕ್ಕಮ್ಮ ಅಜ್ಜಿ (ತಾಯಿಯ ತಾಯಿ)	ನಾಗರತ್ನ ದುರುಗಮ್ಮ	ರಂಗಭೂಮಿ ನಟಿಯರು
ಡಿ.ಸಣ್ಣಹನುಮಕ್ಕ	ದೊಡ್ಡಪ್ಪ ತಂದೆ ಸೋದರ ಅತ್ತೆಯರು	ಡಿ.ಹನುಮಂತಪ್ಪ ಡಿ.ದುರ್ಗಾದಾಸ್ ಡಿ.ಸಂಜೀವಮ್ಮ ಡಿ.ಹನುಮಂತಮ್ಮ	ರಂಗಭೂಮಿ ನಟ ರಂಗಭೂಮಿ ನಟ ರಂಗಭೂಮಿ ನಟಿಯರು
ಜಿ.ಶಾರದ	ತಾಯಿ	ತಿರುಮಲ ಬೂದಾಳು	ರಂಗಭೂಮಿ ನಟಿ
ಎಸ್.ರೇಣುಕಾ	ತಾಯಿ ಅಕ್ಕ	ಸುವರ್ಣಮ್ಮ ಎಸ್.ಶ್ಯಾಮಲ	ರಂಗಭೂಮಿ ನಟಿಯರು
ಯಳ್ಳಾರ್ತಿ ಚಾಮುಂಡೇಶ್ವರಿ	ತಂದೆ	ಎಚ್.ಎಂ.ವೀರಭದ್ರಯ್ಯ	ಹಾರ್ಮೋನಿಯಂ ಮಾಸ್ತರ
ಮಂಗಳಾ ಹೊಸಪೇಟೆ	ಅಕ್ಕ	ಮಧುರಾ ಹೊಸಪೇಟೆ	ರಂಗಭೂಮಿ ನಟಿ
ಸುಭದ್ರಮ್ಮ ಮನ್ಸೂರ್	ತಾಯಿ ತಂದೆ	ಭಾಗ್ಯಮ್ಮ ಜ್ವಾಲಾಪತಿ	ಸಂಗೀತ ವಿದೂಷಿ ಪಿಟೀಲು ವಾದಕರು
ಬಳ್ಳಾರಿ ಲಲಿತಮ್ಮ (ಸಿನಿಮಾ ನಟಿ)	ತಂದೆ ಅಕ್ಕ ತಂಗಿ	ತಿಮ್ಮಪ್ಪ ವೆಂಕಮ್ಮ ರತ್ನಮಾಲಾ	ಪಿಟೀಲು ವಾದಕರು ನೃತ್ಯ ಹಾಡುಗಾರಿಕೆಯಲ್ಲಿ ಪರಿಣತಳು ರಂಗಭೂಮಿ ನಟಿ
ಸರಸ್ವತಮ್ಮ ಹೊಸಪೇಟೆ	ತಂದೆ ಮಗಳು	ಹನುಮಂತಪ್ಪ ಕಲಾವಿದೆ	ದೊಡ್ಡಾಟದ ಕಲಾವಿದ ಹವ್ಯಾಸಿ ರಂಗಕಲಾವಿದೆ
ನಾಗರತ್ನಮ್ಮ ಹೊಸಮನಿ	ಗಂಡು ಮಕ್ಕಳು ಮಗಳು/ಅಳಿಯ	ನಟರಾಜ, ಜಯರಾಜ ಶಶಿಕಲಾ/ಶಶಿಕಲಾ ಪತಿ ಕೊಟ್ರೇಶ್	ರಂಗಭೂಮಿ ಕಲಾವಿದರು ಪ್ರಸಿದ್ಧ ರಂಗ ಕಲಾವಿದರು

ಕೆ.ವರಲಕ್ಷ್ಮಿ : ಪಾತರದವರ ಮನೆತನದವರಾಗಿದ್ದು, ಈ ಹಿನ್ನೆಲೆಯಿಂದಲೇ ಅವರು ರಂಗಭೂಮಿಗೆ ಬಂದು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ಭವಾನಿ ಬಳ್ಳಾರಿ : ಇವರೂ ದೇವದಾಸಿ ಸಂಪ್ರದಾಯದಿಂದಲೇ ರಂಗಭೂಮಿಗೆ ಬಂದಿದ್ದಾರೆ.

ಮರಿಯಮ್ಮನಹಳ್ಳಿ : ನಾರಾಯಣದೇವರ ಕೆರೆಯ ಡಿ.ಸಂಜೀವಮ್ಮ ಡಿ.ಹನುಮಂತಮ್ಮ, ಬಾರಿಕರ ನಿಂಗಮ್ಮ, ತಳವಾರ ಹನುಮಂತಮ್ಮ, ಬಿ.ಲಿಂಗಮ್ಮ, ಮಣಿಗಾರ ಹನುಮಂತಮ್ಮ, ಸೆರೆಗಾರ ಸುವರ್ಣಮ್ಮ, ಸೆರೆಗಾರ ಗಂಗಮ್ಮ, ಜೋಗಿ ಬಸಮ್ಮ, ಸುಮತೆಮ್ಮ, ನಂದಿಹಳ್ಳಿ ರಾಮಕ್ಕ, ಎಂ. ಅಂಬುಜಾ, ತಿಮ್ಮವ್ವ, ತಿರುಮಲ ಬೂದಾಳು, ಶಾರದ, ಕನಕವ್ವ, ಅರಸಿಕೆರೆ ಯಲ್ಲಮ್ಮ, ಪಾರ್ವತಿ, ಚಿಕ್ಕಾಡಿ ಗಂಗಮ್ಮ, ಆರ್.ನಾಗವೇಣಿ, ಕೂಡ್ಲಿಗಿ ನಾಗವೇಣಿ, ಎಸ್.ಯಶೋಧ, ಸೆರೆಗಾರ ಶ್ಯಾಮಲ, ಗಂಟಿ ಹುಲಿಗೆಮ್ಮ, ಗಂಟಿ ಹನುಮಂತಮ್ಮ, ಕಡಗಿ ಕನಕಮ್ಮ, ಮಗಲಿ ಬಸಮ್ಮ, ಶಾಂತಮ್ಮ, ಪದ್ಮಾವತಿ, ಚಂದ್ರಕಲಾ, ಕಾಳಿಗಂಗಮ್ಮ, ಶಾಂತಮ್ಮ, ಶೈಲಶ್ರೀ, ಶ್ಯಾಮಲಾ, ಸಾವಿತ್ರಿ, ಮಂಗಳಾ, ಶಾರದಾ, ಕಲಾವತಿ, ಎನ್.ರೇಣುಕಾ, ಎಸ್.ರೇಣುಕಾ ಮುಂತಾದವ ಮರಿಯಮ್ಮನಹಳ್ಳಿ ರಂಗನಟಿಯರು ದೇವದಾಸಿ ಸಂಪ್ರದಾಯದಿಂದಲೇ ರಂಗಭೂಮಿಗೆ ಬಂದಿದ್ದಾರೆ. (ಸ್ವತಃ ಕಲಾವಿದೆಯರೇ ಈ ಅಭಿಪ್ರಾಯವನ್ನು ತಿಳಿಸಿರುತ್ತಾರೆ).

ವಿರೂಪಾಪುರ : ಎಸ್.ಅಂಜಿನಮ್ಮ, ಕಾರಿ ಬಸಮ್ಮ, ಹಟ್ಟಿಮಾರಮ್ಮ, ವಿಜಯಲಕ್ಷ್ಮಿ, ಬಿ.ಓಬಮ್ಮ, ಕೆ.ನಾಗರತ್ನ, ಎಸ್.ನಾಗವೇಣಿ, ಬಿ.ಶಾರದ, ಬಿ.ಲಕ್ಷ್ಮಿದೇವಿ, ಜೆ. ಗಂಗಮ್ಮ, ಬಿ.ನಾಗಮ್ಮ, ಬಿ.ಹಂಪಮ್ಮ, ಬಿ.ಭರಮಮ್ಮ.

ಹಗರಿಬೊಮ್ಮನಹಳ್ಳಿ : ಬೆಳ್ಳಕ್ಕಿ ಚೌಡಮ್ಮ, ಕೊಟ್ಟೂರು ಎಸ್.ಕಮಲ, ವಟಮನಹಳ್ಳಿ ಗಂಗಮ್ಮ, ವಟಮನಹಳ್ಳಿ ಸುಜಾತಮ್ಮ, ಮಾಳಗಿ ಹನುಮಂತಮ್ಮ, ದಶಮಾಪುರ, ಬಂಡ್ರಿ ಸಿದ್ದಮ್ಮ.

ಹಡಗಲಿ : ಸೋಗಿರತ್ನ, ಜೆ.ಗಂಗಮ್ಮ, ಮಂಜುಳಾ.

ಕೂಡ್ಲಿಗಿ : ಸಣ್ಣ ಮುದ್ದಮ್ಮ, ದೊಡ್ಡ ಮುದ್ದಮ್ಮ, ಟಿ.ಭಾರತಿ, ಅಂಜಲಿ, ಪದ್ಮ ಎಂ.ಮಂಜುಳಾ, ಗೀತಾ, ಕಮಲಮ್ಮ, ಬಿ.ಶಿವಕುಮಾರಿ, ಜ್ಯೂ.ಶಿವಕುಮಾರಿ, ಪಿ.ಪದ್ಮ, ಕೆ.ದುಶೀಲ, ಸೊಲ್ಲಮ್ಮ, ಓಬಮ್ಮ, ವನಿತ, ಕವಿತ, ಅಂಜಲಮ್ಮ, ವೆಂಕಮ್ಮ, ಕಮಲಮ್ಮ, ರತ್ನಮ್ಮ, ದುರುಗಮ್ಮ, ಶಿವಕುಮಾರಿ, ಜ್ಯೋತಿ, ಗೀತಾ, ಸಣ್ಣ ವೆಂಕಮ್ಮ, ಸಾವಿತ್ರಿ, ಜ್ಯೂ. ಪದ್ಮ, ರಂಗವೇಣಿ, ರೇಣುಕಾ.

ದೇವದಾಸಿ ಬದುಕಿಗೆ ತಮ್ಮನ್ನು ತಾವು ಅರ್ಪಿಸಿಕೊಂಡರೆ ಮಾತ್ರ ಕಲಾವಿದೆಯರಾಗಿ ಮುಂದುವರೆಯಬಲ್ಲ ಸಾಧ್ಯವಿರುವ ಹಳ್ಳಿಗಾಡಿನ ಸಮಾಜದಲ್ಲಿ ಹೆಣ್ಣುಗಳು ತೆರಬೇಕಾದ ಬೆಲೆ ತಮ್ಮ ವೈಯುಕ್ತಿಕ ಸುಖ ಸಿಕ್ಕಷ್ಟೇ

ಸುಖವನ್ನು ಜೋಪಾನ ಮಾಡಿ ತಮ್ಮ ದುಡಿಮೆಯನ್ನೇ ನೆಚ್ಚಿ ಬದುಕಬೇಕಾದ ಅನಿವಾರ್ಯತೆ. ಆದರೆ ಇಂಥ ದೇವದಾಸಿಯರಿಗೆ ಸಮಾಜ 'ನಡತೆಗೆಟ್ಟವಳು' ಎಂಬ ಪಟ್ಟ ಕಟ್ಟುತ್ತದೆ (ಲೇ. ಸುಜಾತ ಕುಮುಟಾ ಮಹಿಳೆ ಮತ್ತು ರಂಗಭೂಮಿ, ಪುಟ, ೮೫). ಇವರೆಲ್ಲರೂ ಬಳ್ಳಾರಿ ಜಿಲ್ಲೆವರು. ದೇವದಾಸಿ ಸಂಪ್ರದಾಯದಿಂದಲೇ ರಂಗಭೂಮಿಗೆ ಬಂದಿದ್ದಾರೆ. ಹೀಗೆ ನಟಿಯರಿಗೆ ರಂಗಪ್ರವೇಶದ ಹಲವಾರು ನೆಲೆಗಳು ಹಿಂದೆ ಇದ್ದು ಈಗ ಸಾಮಾಜಿಕವಾಗಿ ಹಲವಾರು ಬದಲಾವಣೆಗಳು ಉಂಟಾಗಿ ಈ ಸಂಪ್ರದಾಯವನ್ನು ಸರಕಾರ ಕಾನೂನಿನ ಮೂಲಕವೇ ತೊಡೆದು ಹಾಕಿದ್ದು ಸಂಪೂರ್ಣವಾಗಿ ಈ ಸಂಪ್ರದಾಯ ಪ್ರಸ್ತುತದಲ್ಲಿ ಬದಲಾವಣೆಯಾಗಿ ಸಮಾಜದಲ್ಲಿ ಹಲವಾರು ವೈಚಾರಿಕ ಬೆಳವಣಿಗೆಗಳು ಉಂಟಾಗಿ ಮಾನವೀಯ ದೃಷ್ಟಿಕೋನದ ನೆಲೆ ಎಲ್ಲೆಲ್ಲೂ ಪಸರಿಸಿದೆ.

೫.೨. ಜಾತಿವಾರು ನೆಲೆಗಳು

ಭಾರತೀಯ ಶ್ರೇಣೀಕರಣ ವ್ಯವಸ್ಥೆಯಲ್ಲಿ ಹಲವಾರು ರೀತಿಯ ಹೆಸರುಗಳನ್ನಾಗಿ ಮಾಡಿ ಜಾತಿ ಎಂಬ ಹೆಸರಿನಲ್ಲಿ ಶ್ರೇಣೀಕರಣವನ್ನು ಮಾಡಲಾಗಿದೆ. ಅಂಥಹದರಲ್ಲಿ ಕೆಳವರ್ಗದವರೆನಿಸಿಕೊಂಡು ಹಲವಾರು ದೌರ್ಜನ್ಯ, ಕೀಳರಿಮೆಗೆ ಒಳಗಾಗಿ ದಾಸ್ಯದಿಂದ ನರಳುತ್ತಾ ಉನ್ನತವರ್ಗದವರ ಗೊಂಬೆಗಳಾಗಿ, ಶೋಷಣೆಗೆ ಒಳಗಾಗಿಯಾದರೂ ತಮ್ಮ ಕಲಾಸೇವೆಯನ್ನು ಮಾಡುತ್ತಿದ್ದಾರೆ. ಸಂಗೀತ, ನೃತ್ಯ ಸೇವೆಗಳು ಈ ಜಾತಿಗಳಿಂದಲೇ ಸೃಷ್ಟಿಯಾದವು. ಕಲೆಯು ಮೂಲ ಸೆಲೆಯನ್ನು ಹೊಂದಿದ್ದು ಬುಡಕಟ್ಟು, ಆದಿವಾಸಿ, ಕೆಳವರ್ಗದ ಜನಗಳಲ್ಲಿಯೇ. ಆದ್ದರಿಂದ ಇವರೇ ಕಲಾ ಪರಂಪರೆ, ಜಾನಪದ ಪರಂಪರೆಯ ವಾರಸುದಾರರಾದರು. ಅದರಲ್ಲಿ ಇವರ ಜಾತಿಯ ಮಹಿಳೆಯರೇ ಸಂಪೂರ್ಣವಾಗಿ ಪರಂಪರೆ ವಾರಸುದಾರಳಾಗಿರುವಳು.

'ನಟುವರು' ವರ್ಗದಿಂದ ಬಂದಿರುವ ಈ ನಟಿಯರು ಭರತನ ನಾಟ್ಯಶಾಸ್ತ್ರದಲ್ಲಿ ಬ್ರಹ್ಮನು ಭರತನಿಗೆ ನೀಡಿರುವ ೯ ಜನ ಸ್ತ್ರೀಯರ ವಂಶಾವಳಿಗಳೇ 'ನಟುವರು'. ಕುಟುಂಬ ಸೃಷ್ಟಿಯಾಗಿ, ರಾಜಾಸ್ಥಾನದಲ್ಲಿ ನೃತ್ಯ, ಸಂಗೀತಕ್ಕೆ ಮೀಸಲಾದವರು. ಕ್ರಮೇಣವಾಗಿ ಅವರು ಕಲಾವಂತರು, ಪಾತರದವರು, ಗಂಗೆಮತಸ್ಥರು ಹೀಗೆ ಹಲವು ಕುಟುಂಬ ವರ್ಗಗಳು ಇಲ್ಲಿ ಸೃಷ್ಟಿಯಾದವು. ಈ ಕುಟುಂಬಗಳಲ್ಲಿಯೇ ನರ್ತಕಿ, ಗಾಯಕಿಯರೇ ದೇವದಾಸಿಯರಾಗಿ, ನಂತರ ಇವರೇ ರಂಗದ ಮೇಲೆ ಬಂದರು.

ಈ ಜಾತಿಯಲ್ಲಿನ ಹೆಣ್ಣುಮಕ್ಕಳು ರಂಗಭೂಮಿಗೆ ಬರಲು ಸಮಾಜದಿಂದ ಯಾವ ನಿಯಮ, ಕಟ್ಟಳೆ, ಸಂಪ್ರದಾಯ ಇರದೇ ಇರುವ ಕಾರಣ ಹಾಗೂ ಸಹಜವಾಗಿ ಪುರುಷರೊಂದಿಗೆ ಬೆರೆಯುವುದರಿಂದ ಇವರೇ ಹೆಚ್ಚಾಗಿ ಯಾವ ಅಂಜಿಕೆ ಅಳುಕಿಲ್ಲದೆ ದಿಟ್ಟವಾಗಿ ರಂಗಭೂಮಿಯನ್ನು ಆಕ್ರಮಿಸಿಕೊಂಡರು. ನಂತರ ಇವರ ಹೆಣ್ಣುಮಕ್ಕಳೇ ದೊಡ್ಡ, ದೊಡ್ಡ ಕಂಪನಿಗಳನ್ನು ಕಟ್ಟಿಕೊಂಡರು. ಧೈರ್ಯದಿಂದಲೇ ರಂಗಭೂಮಿಯ ಸೇವೆಗೈದರು. ಇವರಲ್ಲದೇ ಇಡೀ ಕರ್ನಾಟಕದಲ್ಲಿ ಮುಸ್ಲಿಂ ಮಹಿಳೆಯರು, ಪಾತರದವರು, ದೇವದಾಸಿಯರಾದ

ಗಂಗೆ ಮತಸ್ಥರೇ ಹೆಚ್ಚಾಗಿ ಈ ವರ್ಗದವರೇ ರಂಗಭೂಮಿಗೆ ಬಂದರು. ಈ ಸೇವೆಗಳಿಂದಲೇ ಕೆಲವು ಕುಟುಂಬಗಳು ಈ ಜಾತಿಗೆ ಸೇರುವಂತಾಯಿತು (ಜಾತಿವಾರು ನಟಿಯರ ಪಟ್ಟಿ, ಪುಟ, ೪೬).

ಕೂಡ್ಲಿಗಿ ವಿರೂಪಾಪುರ ನಾಯಕ ಜಾತಿಗೆ ಸೇರಿರುವ ರಂಗನಟಿಯರು : ನಾಗವೇಣಿ, ಜಯಮ್ಮ ಕೂಡ್ಲಿಗಿ ಕಮಲವಿರುಪಾಪುರ, ಹಟ್ಟಿಮಾರಮ್ಮ, ಎ.ಅಂಜಿನಮ್ಮ, ನಾಗರತ್ನ, ಬಳ್ಳಾರಿ ಸುಜಾತಮ್ಮ, ಬಿ.ಅಂಬುಜಮ್ಮ, ನಾಗವೇಣಿ, ಉಷಾರಾಣಿ, ರಂಗವೇಣಿ, ಮೀನಳ್ಳಿ ಪಾರ್ವತಮ್ಮ, ಭವಾನಿ, ಡಿ.ಸಂಜೀವಮ್ಮ, ಡಿ.ಹನುಮಂತಮ್ಮ, ಬಾರಿಕರ ನಿಂಗಮ್ಮ, ತಳವಾರ ಹನುಮಂತಮ್ಮ, ಬಿ.ಲಿಂಗಮ್ಮ, ಮಣೆಗಾರ ಹನುಮಂತಮ್ಮ, ಸೆರೆಗಾರ ಸುವರ್ಣಮ್ಮ, ಸೆರೆಗಾರ ಗಂಗಮ್ಮ, ಜ್ಯೋಗಿ ಬಸಮ್ಮ, ಸುಮತೆಮ್ಮ, ನಂದಿಹಳ್ಳಿ ರಾಮಕ್ಕ, ಎಂ.ಅಂಬುಜಾ, ತಿಮ್ಮವ್ವ, ಬೂದಾಳು ಶಾರದ, ಕನಕವ್ವ, ಅರಿಸಿಕೆರೆ ಯಲ್ಲಮ್ಮ, ಪಾರ್ವತಿ, ರೇಣುಕಾ, ಚಿಕ್ಕಡಿ ಗಂಗಮ್ಮ, ಆರ್.ನಾಗವೇಣಿ, ಕೂಡ್ಲಿಗಿ ನಾಗವೇಣಿ, ಎನ್.ಯಶೋಧ, ಸೆರೆಗಾರ ಶ್ಯಾಮಲ, ಗಂಟಿ ಹುಲಿಗೆಮ್ಮ, ಗಂಟಿ ಹನುಮಂತಮ್ಮ ಕಟಗಿ, ಕನಕಮ್ಮ, ಮುಗಲಿ ಬಸಮ್ಮ, ಶಾಂತಮ್ಮ, ಪದ್ಮಾವತಿ, ಚಂದ್ರಕಲಾ, ಕಾಳಿಗಂಗಮ್ಮ, ಶಾಂತಮ್ಮ, ಶೈಲಶ್ರೀ, ಶ್ಯಾಮಲಾ, ಸಾವಿತ್ರಿ, ಮಂಗಳಾ, ಶಾರದ, ಕಲಾವತಿ, ಎನ್.ರೇಣುಕಾ, ಎಸ್.ರೇಣುಕಾ, ಕರಿಬಸಮ್ಮ, ಹಟ್ಟಿಮಾರಮ್ಮ, ವಿಜಯಲಕ್ಷ್ಮಿ, ಭಾಗ್ಯಶ್ರೀ.

ಹಗರಿಬೊಮ್ಮನಹಳ್ಳಿ : ಬೆಳ್ಳಕ್ಕಿ ಚೌಡಮ್ಮ, ಕೊಟ್ಟೂರು ಎಸ್.ಕಮಲ, ವಟಮನಹಳ್ಳಿ ಗಂಗಮ್ಮ, ವಟಮನಹಳ್ಳಿ ಸುಜಾತಮ್ಮ, ಮೊಗಳಗಿ ಹನುಮಂತಮ್ಮ, ವಶಿಮಾಪುರ ಬಂಡ್ರಿ ಸಿದ್ದಮ್ಮ, ಸೋಗಿರತ್ನ, ಜೆ.ಗಂಗಮ್ಮ, ಮಂಜುಳಾ.

ಕೂಡ್ಲಿಗಿ : ಸಣ್ಣಮುದ್ದಮ್ಮ, ದೊಡ್ಡಮುದ್ದಮ್ಮ, ಟಿ.ಭಾರತಿ, ಅಂಜಲಿ, ಪದ್ಮ, ಮಂಜುಳಾ, ಗೀತಾ, ಕಮಲಮ್ಮ, ಬಿ.ಶಿವಕುಮಾರಿ, ಶಿವಕುಮಾರಿ, ಪಿ.ಪದ್ಮ, ಕೆ.ದುಶೀಲ, ಸೊಲ್ಲಮ್ಮ, ಓಬಮ್ಮ, ವನಿತ, ಕವಿತ, ಅಂಜಿಲಮ್ಮ, ವೆಂಕಮ್ಮ, ಕಮಲಮ್ಮ, ರತ್ನಮ್ಮ, ದುರುಗಮ್ಮ, ಸಬ್‌ಜ್ಯೂನಿಯರ್ ಶಿವಕುಮಾರಿ, ಜ್ಯೋತಿ, ಗೀತಾ, ಸಣ್ಣ ವೆಂಕಮ್ಮ, ಸಾವಿತ್ರಿ, ಜ್ಯೂ ಪದ್ಮ, ರಂಗವೇಣಿ, ರೇಣುಕಾ.

ಬಳ್ಳಾರಿ : ಬಿ. ಅಂಬುಜಮ್ಮ, ಸುಜಾತಮ್ಮ, ಮೀನಳ್ಳಿ ಪಾರ್ವತಮ್ಮ, ಬಿ.ಉಷಾರಾಣಿ, ಬಿ.ನಾಗಮ್ಮ, ಬಿ.ರಂಗವೇಣಿ, ಭವಾನಿದೇವಿ.

ಹೊಸಪೇಟೆ : ಜಯಮ್ಮ, ಸರಸ್ವತಿ, ಶಾಂತಮ್ಮ, ಮಧುರಾ, ಮಂಗಳಾ.

ಕಂಪಲಿ : ವಾಸಂತಿ, ಪಾರ್ವತಮ್ಮ, ಈಶಮ್ಮ.

ಹಡಗಲಿ : ಸೋಗಿ ರತ್ನಮ್ಮ, ಉತ್ತಂಗಿ ಬಂಡ್ರಿ ಸಿದ್ದಮ್ಮ, ಜೆ. ಗಂಗಮ್ಮ.

ಒಂದು ಕಡೆ ನಮ್ಮ ವ್ಯವಸ್ಥೆಯು ಯಾರನ್ನು ಕೀಳು, ಯಾರು ಮುಟ್ಟಲು ಅರ್ಹತೆ ಇರದವರು, ಯಾರು ನಮ್ಮ ಧಾರ್ಮಿಕ ಕಾರ್ಯಗಳಲ್ಲಿ ಇರಬಾರದು ಎನ್ನುತ್ತದೆಯೋ ಅದೇ ವ್ಯವಸ್ಥೆಯು ಇನ್ನೊಂದು ಕಡೆಗೆ ಈ

[illegible]

ಜಾತಿವಾರು ನಟಿಯರ ಪಟ್ಟಿ

ನಾಯಕರು	ಮಾದಿಗರು	ಲಿಂಗಾಯತರು	ಬ್ರಾಹ್ಮಣ	ಕುರುಬ	ಶೆಟ್ಟಬಣಜಿಗರು (ಪಾತರದವರು)
ಸುಜಾತಮ್ಮ ಬಳ್ಳಾರಿ	ನರಸಮ್ಮಬಾಯಿ (ಗೊಂಬೆಯಾಟದ ಸೂತ್ರಧಾರಳು) ಕಪ್ಪಗಲ್	ಯಳ್ಳಾರ್ತಿ ಚಾಮುಂಡೇಶ್ವರಿ ಬಳ್ಳಾರಿ	ಅನುರಾಧ ಮರಿಯಮ್ಮನಹಳ್ಳಿ	ಏಣಗಿ ನೀಲಮ್ಮ	ಬಳ್ಳಾರಿ ಲಲಿತಮ್ಮ
ಮೀನಳ್ಳಿ ಪಾರ್ವತಮ್ಮ ಬಳ್ಳಾರಿ	ಕಮಲಮ್ಮ (ಚೆನ್ನದಾಸರು) ಹಡಗಲಿ	ಕೊಟ್ರಬಸಮ್ಮ ಬಾಚಿಗೊಂಡನಹಳ್ಳಿ	ಸುಧಾ ಬಳ್ಳಾರಿ		ಭವಾನಿ
ಜಯಮ್ಮ ಕೂಡ್ಲಿಗಿ	ಸೊಲ್ಲಪ್ಪ ಸೊನ್ನ	ಸಾವಿತ್ರಮ್ಮ ಬಾಚಿಗೊಂಡನಹಳ್ಳಿ	ಜ್ಯೋತಿ ಬಳ್ಳಾರಿ		ಸುಭದ್ರಮ್ಮ ಮನ್ನೂರು
ಕೆ.ನಾಗರತ್ನ	ದುರುಗಪ್ಪ ಸೊನ್ನ				ಕೆ.ವರಲಕ್ಷ್ಮಿ
ಪಿ.ಪದ್ಮ ಕೂಡ್ಲಿಗಿ	ಹನುಮಂತಮ್ಮ ಕಪ್ಪಗಲ್ ಬಳ್ಳಾರಿ				
ಎಸ್.ರೇಣುಕಾ	ಪದ್ಮಮ್ಮ ಕಪ್ಪಗಲ್ ಬಳ್ಳಾರಿ				
ಎಸ್.ಯಶೋಧ					
ತಳವಾರ ಹನುಮಂತಮ್ಮ					
ಜಿ.ಹನುಮಂತಮ್ಮ					
ಸುವರ್ಣಮ್ಮ					
ಶಾರದ					
ಸುಮತೆಮ್ಮ					
ಎಸ್.ಸುಮತಿ					
ಚಾರಿಕರ ಲಿಂಗಮ್ಮ					
ಪೆರೆಗಾರ ಗಂಗಮ್ಮ					

ಕಟ್ಟಳೆ, ಸಂಪ್ರದಾಯಗಳನ್ನೇ 'ಅನುಕೂಲಸಿಂಧು' ಎಂಬಂತೆ ಆ ಜಾತಿಯವರನ್ನೇ ಪುರಸ್ಕರಿಸುತ್ತದೆ. ಇದಕ್ಕೆ ಏನೆನ್ನಬೇಕು. "ಮೂಡಲಪಾಯ ರಂಗಭೂಮಿ ಹವ್ಯಾಸಿ ಕಲಾವಿದರಿಂದಲೇ ಹುಟ್ಟಿ ಬೆಳೆದು ಬದುಕಿರುವಂಥ ದೆಂಬುದು ಸರ್ವಸಾಮಾನ್ಯ ಗ್ರಹಿಕೆ. ಆದರೆ ಬಳ್ಳಾರಿ ಜಿಲ್ಲೆಯ ಕಪ್ಪಗಲ್ಲಿನ ಹರಿಜನರ ಗುಂಪಿನವರು ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದರೆಂದರೆ ಬಹಳ ಜನರಿಗೆ ಆಶ್ಚರ್ಯವೆನಿಸಬಹುದು. ಬರೀ ನಾಲ್ಕೈದು ಜನರಿಂದ ಈ ಕಂಪನಿ ನಡೆಯುತ್ತಿತ್ತಂತೆ. ವಿಚಿತ್ರವೆಂದರೆ ಹೆಣ್ಣುಮಗಳೊಬ್ಬಳು ಸೂತ್ರಧಾರಳಾಗಿದ್ದಳು. ಇವರು ಬಳ್ಳಾರಿ ಜಿಲ್ಲೆಯ ಹೊರಗೂ ಹೋಗಿ ಆಟವಾಡಿ ಬಂದುದುಂಟು. ಈಗ ಈ ಕಂಪನಿ ನಾಮಾವಶೇಷವಾಗಿದೆ."

ಹಿಂದೊಮ್ಮೆ ಈ ಕಂಪನಿ ಹಾನಗಲ್ಲಿಗೆ ಬಂದು ಆಟವಾಡಿತ್ತು. ಆಗ ಸ್ತ್ರೀ ಸೂತ್ರಧಾರಿಣಿಯ ಹೆಸರು ನರಸೂಬಾಯಿ ಎಂದೂ, ಹಾನಗಲ್ಲಿನ ಬಯಲಾಟದ ಸೂತ್ರಧಾರ ಶ್ರೀ ಕರೆಪ್ಪನವರು ಹೇಳುತ್ತಾರೆ (ಲೇ: ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ಸಂಶೋಧನಾ ಮಹಾಪ್ರಬಂಧ, ಪುಟ, ೮೯).

ಕಲೆ, ಸಂಸ್ಕೃತಿಯು ಉಳಿದು ಬೆಳೆದುಕೊಂಡು ಬಂದಿರುವುದು ಕೆಳಜಾತಿಯವರಿಂದಲೇ ಎನ್ನಬಹುದು. ಮಾದಿಗರು ಎಂದರೆ 'ಅಸ್ಪೃಶ್ಯರು' ಮುಟ್ಟಿಸಿಕೊಳ್ಳಲು ಅನರ್ಹರು. ವೃತ್ತಿಯಲ್ಲಿ ಅವರು ಚಪ್ಪಲಿಯನ್ನು ಹೊಲಿಯುವವರು. ತ್ಯಾಜ್ಯವನ್ನು ಹೊತ್ತುಕೊಂಡು ಹೋಗುವವರೆಂದು ಮಾಡಿದ ಇದೇ ವ್ಯವಸ್ಥೆಯು, ಅವರ ಕೈಯಿಂದ, ಅವರ ವ್ಯಕ್ತಿತ್ವದಿಂದ ಬಂದಿರುವ ಕಲೆಯನ್ನು ನೋಡಿ ಆನಂದಿಸುತ್ತದೆ.

ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸದಿರುಪ ಗಂಗೆಮತಸ್ಥರು, ದೇವರ ಮುಂದೆ ಪಲ್ಲಕ್ಕಿ, ಅಕ್ಕ-ಪಕ್ಕ ಚಾಮರವನ್ನು ಬೀಸಲು ಈ ಮಹಿಳೆಯರು ಬೇಕು. ಉನ್ನತ ವರ್ಗದವರ ಮಂಗಲ ಸೂತ್ರವನ್ನು ಪೋಷಿಸಲು ಗಂಗಾಮತಸ್ಥ ಮಹಿಳೆಯರೇ ಬೇಕು. ಆದರೆ ಅವರು ಧಾರ್ಮಿಕ, ಸಾಮಾಜಿಕ, ಉನ್ನತವರ್ಗದವರ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ಈ ಎಲ್ಲಾ ವ್ಯವಸ್ಥೆಗಳು ನಮ್ಮ ಇತಿಹಾಸದ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ.

ಕಲೆ ಇರುವ ಮಹಿಳೆ ಯಾವ ಜಾತಿಯವರಾದರೇನು? ಆಕೆಗೆ ಯಾವುದೇ ಆಕ್ಷೇಪಣೆಗಳಿಲ್ಲ. ಅಂಥಹ ಸ್ತ್ರೀಯ ಜೊತೆ ಉನ್ನತ ವರ್ಗದವರೆನಿಸಿಕೊಂಡ ಪುರುಷಶಾಹಿಯು ಯಾವುದೇ ನಿರ್ಬಂಧವಿಲ್ಲದೆ ಅವರೊಂದಿಗೆ ಬೆರೆತು ಪಾತ್ರವನ್ನು ಮಾಡುತ್ತಾರೆ. ಪಾತ್ರವು ಮುಗಿದ ಮೇಲೆ ಅವರು ಅಸ್ಪೃಶ್ಯರು ಇವರು ಉನ್ನತ ಜಾತಿಯವರು. ಇದು ವ್ಯವಸ್ಥೆಯ ದೈನಂದಿನ ಚಟುವಟಿಕೆ.

ಅಂದಿನ ಸಾಮಾಜಿಕ ಪರಿಸರದಲ್ಲಿ ಮೇಲುವರ್ಗದವರು ಕಲೆ ಇರುವ ಮಹಿಳೆಯರಿಗೆ ಆದ್ಯತೆ ನೀಡಿ ಅವರನ್ನು ಕರೆಯಿಸಿ ಅವರೊಂದಿಗೆ ಪಾತ್ರ ಮಾಡಿರುವ ಹಲವಾರು ಉದಾಹರಣೆಗಳು ನಮ್ಮ ಬಳ್ಳಾರಿ ಜಿಲ್ಲೆಯ ರಂಗಭೂಮಿ ಇತಿಹಾಸದಲ್ಲಿದೆ.

ಈ ಎಲ್ಲಾ ನಟಿಯರು ನಮ್ಮ ವ್ಯವಸ್ಥೆಯಲ್ಲಿ ಮಾದಿಗರು (ಚೆನ್ನದಾಸರು) ಎನಿಸಿಕೊಂಡ ಜಾತಿಯಿಂದ ಬಂದವರು. ಅಂದಿನ ಸಾಮಾಜಿಕ ಪರಿಸರದಲ್ಲಿ ಮೇಲುವರ್ಗದ ಪುರುಷರು ಈ ನಟಿಯರೊಂದಿಗೆ ಯಾವುದೇ ನಿರ್ಬಂಧವಿಲ್ಲದೆ ಬೆರೆತು ಪಾತ್ರವನ್ನು ಮಾಡಿದ್ದಾರೆ. ಅಂದರೆ ಬಣ್ಣ ಹಚ್ಚಿಕೊಂಡ ನಟಿಗೆ ಯಾವ ಜಾತಿಯ ಅಥವಾ ಅಸ್ಪೃಶ್ಯತೆ ಇಲ್ಲವೆಂದೋ ಮತ್ತು ಕಲೆ ಇರುವ ನಟಿಗೆ ಜಾತಿ ಪಟ್ಟಿ ಇಲ್ಲವೆಂದೋ ತಿಳಿಯದು. ಒಟ್ಟಿನಲ್ಲಿ ಉನ್ನತ ಜಾತಿಯ ಪುರುಷಶಾಹಿಗಳು ಏನೇ ಮಾಡಿದರೂ ಅದು ಮಂಜೂರೇ ಸರಿ ಎನಿಸಿದೆ. ಅಂದರೆ ಆಳ್ವಿಕೆ ನಡೆಸುವವರೇ ತಪ್ಪು ಮಾಡಿದರೂ ಅದು ಸರಿಯಾಗಿರುತ್ತದೆ. ಕಾನೂನನ್ನು, ಸಂಪ್ರದಾಯವನ್ನು ಮಾಡುವವರೇ ಸಂಪ್ರದಾಯವನ್ನು ಮುರಿಯುತ್ತಾರೆ.

ಕ್ರ.ಸಂ.	ರಂಗಭೂಮಿ ಕ್ಷೇತ್ರ	ಪಾತ್ರ	ಕಲಾವಿದೆಯರ ಹೆಸರು	ಕಲಾವಿದೆಯರ ಸ್ಥಳ
೧.	ಮೂಡಲಪಾಯ	ಸೂತ್ರಧಾರಿಣಿ	ನರಸೂಬಾಯಿ	ಕಪ್ಪಗಲ್
೨.	ಸಾಮಾಜಿಕ ನಾಟಕ	ನಟಿ	ಕಮಲಮ್ಮ	ಹಡಗಲಿ
೩.	ಬಯಲಾಟ	ನಟಿ	ಸೊಲ್ಲವ್ವ	ಹಗರಿಬೊಮ್ಮನಹಳ್ಳಿ (ಸೊನ್ನ)
೪.	ಬಯಲಾಟ	ನಟಿ	ದುರುಗವ್ವ	ಹಗರಿಬೊಮ್ಮನಹಳ್ಳಿ (ಸೊನ್ನ)
೫.	ಬಯಲಾಟ	ನಟಿ	ಹನುಮಂತಮ್ಮ	ಬಳ್ಳಾರಿ (ಕಪ್ಪಗಲ್)
೬.	ಬಯಲಾಟ	ನಟಿ	ಪದ್ಮಮ್ಮ	ಬಳ್ಳಾರಿ (ಕಪ್ಪಗಲ್)

ಅಂದಿನ ಪರಿಸರದಲ್ಲಿ ಉನ್ನತ ಜಾತಿ ಹವ್ಯಾಸಿ ಕಲಾವಿದರು ಮಾದಿಗ ಜಾತಿಯ ಮಹಿಳಾ ಕಲಾವಿದರ ಮನೆಗೆ ಹೋಗಿ ಆಮಂತ್ರಣ ನೀಡಿ ಅವರನ್ನು ಕರೆಯಿಸಿ ಅವರಿಗೆ ಊಟದ ವ್ಯವಸ್ಥೆಯನ್ನು ಅದೇ ಜಾತಿಯವರಿಂದ ಮಾಡಿಸಿ, ನಾಟಕ ಮುಗಿದಾದ ಮೇಲೆ ಅವರಿಗೆ ಸಂಭಾವನೆ ನೀಡಿ ಕಳುಹಿಸುತ್ತಿದ್ದರು. ಅಂದರೆ ತಮ್ಮ ಸಂತೋಷಕ್ಕೆ ಕೆಳವರ್ಗದ ಹೆಣ್ಣುಗಳನ್ನು ತಮಗೆ ಹೇಗೆ ಬೇಕೋ ಹಾಗೆ ಬಳಸಿಕೊಂಡಿರುವುದು ಇದರಿಂದ ತಿಳಿದು ಬರುತ್ತದೆ.

ಇಂಥ ಪರಿಸರದಲ್ಲಿ ಇನ್ನೂ ವಿಶೇಷವೆಂದರೆ ಮೇಲ್ಜಾತಿಯ ಸ್ತ್ರೀಯರು ರಂಗಭೂಮಿಗೆ ಬಂದಿದ್ದಾರೆ. ಅದಕ್ಕೆ ಹಲವಾರು ಕಾರಣಗಳು ಇವೆ. ಸ್ವಯಂ ಆಸಕ್ತಿಯಿಂದ, ಮನೆಯ ಸಂಗೀತ ಪರಂಪರೆಯಿಂದಲೂ ಮೇಲ್ಜಾತಿಯ ಹೆಣ್ಣುಮಕ್ಕಳು ರಂಗಭೂಮಿಗೆ ಬಂದಿದ್ದಾರೆ. ಉದಾ: ಕೊಟ್ರಬಸಮ್ಮ, ಸಾವಿತ್ರಮ್ಮ, ಬಾಚಿಗೊಂಡನಹಳ್ಳಿ ಲಿಂಗಾಯತರು (ಇಬ್ಬರೂ ಸಹೋದರಿಯರು) ಯಳ್ಳಾರ್ತಿ ಚಾಮುಂಡೇಶ್ವರಿ, ಅನುರಾಧ ಮೈಸೂರು, ಸುಧಾ, ಜ್ಯೋತಿ ಬಳ್ಳಾರಿ (ಬ್ರಾಹ್ಮಣರು) ಏಣಗಿ ನೀಲಮ್ಮ (ಕುರುಬರು) ಬಳ್ಳಾರಿಯಲ್ಲಿ ಈ ಮೇಲ್ಜಾತಿಯ ಹೆಣ್ಣುಮಕ್ಕಳೂ ರಂಗಭೂಮಿಗೆ ಬಂದಿರುವುದು ಇನ್ನೂ ವಿಶೇಷ. ಅದು ಸ್ವಆಸಕ್ತಿ ಒಂದಾದರೆ ಬಳ್ಳಾರಿ ಜಿಲ್ಲೆಯ ಯಳ್ಳಾರ್ತಿಯಲ್ಲಿ ಜಾತಿಯಲ್ಲಿ ಮೇಲುಜಾತಿ ಎನಿಸಿಕೊಂಡ ಐನೋರು ಮಠದ ಮನೆತನದವರೇ ರಂಗಭೂಮಿಯ ಸೇವೆಯನ್ನು ಇಂದಿಗೂ ಮಾಡುತ್ತಿದ್ದಾರೆ. ಆದ್ದರಿಂದ ಕಲಾಬದುಕು ಯಾವ ಜಾತಿ, ಲಿಂಗ, ಕುಲ, ಮತ, ವರ್ಣವನ್ನು ಅದು ಬೇಡುವುದಿಲ್ಲ. ಬದಲಾಗಿ ರಂಗದೇವತೆ ಪೂಜೆ ಅಂದರೆ ಕಲಾರಾಧನೆ ಯಾವ ಕಲಾವಿದರಾದರೇನಂತೆ ಇಂದು ಕಲಾ ಬದುಕಲ್ಲಿ ಉನ್ನತ ವರ್ಗದವರು ಕಡಿಮೆ ಇದ್ದು, ಕೆಳಜಾತಿಯವರು ಹೆಚ್ಚಾಗಿ ಕಲೆಯನ್ನು ಅಂತರ್ಗತಮಾಡಿಕೊಂಡಿದ್ದಾರೆ ಎಂದೆನ್ನಬಹುದಾಗಿದೆ.

೫.೩. ವರ್ಗವಾರು ನೆಲೆಗಳು

ಆರ್ಥಿಕವಾಗಿ ಸದೃಢರಾಗಿದ್ದ ಬ್ರಾಹ್ಮಣ, ಲಿಂಗಾಯತ ಸಮುದಾಯಗಳು ಈ ರಂಗಕ್ಕೆ ಬರಲು ಕೆಲವು ಕಾರಣಗಳು ಇಲ್ಲದಿಲ್ಲ.

೧. ಕಲಾ ಆಸಕ್ತಿ ಹಾಗೂ ಸ್ವಯಂ ಪ್ರೇರಣೆ

೨. ರಂಗಬದುಕು ಸುಂದರವಾಗಿರಬಹುದೆಂದು

೩. ಬಡತನದ ಬೇಗೆಯಿಂದ (ಆರ್ಥಿಕವಾಗಿ ನೆಲೆ ಇಲ್ಲದಿದ್ದಾಗ)

೪. ತಮ್ಮ ಮನೆಯಲ್ಲಿ ಪರಂಪರೆ ಹಾಗೂ ಪ್ರೋತ್ಸಾಹದಿಂದ

೧. **ಕಲಾಸಕ್ತಿಯಿಂದ ಬಂದಿರುವುದು :** ಈ ಎಲ್ಲಾ ಅಂಶಗಳಿಂದಲೂ ಉನ್ನತವರ್ಗದ ರಂಗನಟಿಯರು ರಂಗಭೂಮಿಗೆ ಬಂದಿದ್ದಾರೆ. ರಂಗಬದುಕನ್ನು ಸ್ವೀಕರಿಸಿ ಅನುಭವಿಸಿದ ಮೇಲೆ ಇವರೇ ಕಲೆ, ಅಭಿನಯವೆಂದು ಬರುವ ಹದಿಹರೆಯದ ಕಲಾವಿದೆಯರಿಗೆ ಅವರದೇ ಆದ ಸಂದೇಶ ''ನೀವು ಬರೀ ಕನಸುಗಳನ್ನು ಹೊತ್ತು ಕೊಂಡು ಬರಬೇಡಿ. ಹಾಗೆ ಬಂದರೆ ಖಂಡಿತ ನಿಮಗಿಲ್ಲಿ ನಿರಾಸೆ. ನಿಮ್ಮ ಮುಂದೋಡುವ ಮಾಯಾಮೃಗದ ಬೆನ್ನು ಹತ್ತಬೇಡಿ. ನಿಮಗೆ ರಂಗಭೂಮಿ ಬಹು ಆಕರ್ಷಕವಾಗಿ ಕಂಡಿರಬೇಕು. ನಿಮಗೆ ಕಾಣುವ ರಂಗುರಂಗಿನ ಬೆಳಕು-ಹೊಳಪು ಸ್ಥಿರವಾಗಿ ನಿಮ್ಮ ನಿಮ್ಮ ಬದುಕಿನಲ್ಲಿ ನಿಲ್ಲವು, ನಿಜವಾಗಿಯೂ ರಂಗಭೂಮಿ ಸೇವೆ ಮಾಡುವ ಆಸಕ್ತಿ ಇದ್ದರೆ ಧೈರ್ಯದಿಂದ ಕಾಲಿರಿಸಿ. ಇಲ್ಲಿ ವಿಧಿ ಕ್ರೂರವಾಗಿರುತ್ತದೆ. ಅದನ್ನು ಸಹಿಸುವ ತಾಳ್ಮೆಯ ಶಕ್ತಿ ನಿಮಗಿದ್ದರೆ ಬನ್ನಿ'' (ಕೆ.ಸರೋಜಮ್ಮ ಇಳಕಲ್ಲ, ಲೇ. ಗವೀಶ ಹಿರೇಮಠ, ಅಂತರಂಗ, ೨೫ ಎಪ್ರಿಲ್ ೨೦೦೩). ಹೀಗೆ ರಂಗ ಬದುಕಿನಲ್ಲಿ ವಿಧಿ ಕೆಲವೊಂದಿಬ್ಬರಿಗೆ ಮಾತ್ರ ಸಂತಸದ ಜೀವನವನ್ನು ಕೊಟ್ಟಿರಬಹುದು. ಆದರೆ ಎಲ್ಲಾ ನಟಿಯರಿಗೆ ಬಣ್ಣದ ಬದುಕಿನಷ್ಟು ವಾಸ್ತವದ ಬದುಕು ಸುಂದರವಾಗಿ ರುವುದಿಲ್ಲ.ಅದು ಕನಸು ಕಾಣುವುದೊಂದೇ ಸತ್ಯ. ಆದ್ದರಿಂದ ಎಲ್ಲಾ ನಟಿಯರ ಅಳಲು ಒಂದೇ ಯಾವ ನೆಮ್ಮದಿ ನಮಗೆ ಇಲ್ಲಿಂದ ದೊರೆತಿಲ್ಲ. ಆದ್ದರಿಂದ ನಾವು ನಮ್ಮ ಕುಟುಂಬದ ಹುಟ್ಟುವ ಮಕ್ಕಳಿಗೆ ಹೇಳಿ ಸಾಯಬೇಕು. ಎಂದಿಗೂ, ಯಾವ ಕಾಲಕ್ಕೂ ನೀವು ಕೂಲಿ ಮಾಡಿದರೂ ಚಿಂತೆ ಇಲ್ಲ. ಆದರೆ ಎಂದಿಗೂ ನಮ್ಮ ಮನೆಯ ಹೆಣ್ಣು ಮಕ್ಕಳನ್ನು ರಂಗಭೂಮಿಗೆ ಬಿಡಬೇಡಿರಿ ಎಂದು ಹೇಳುತ್ತೇವೆ ಎನ್ನುತ್ತಾರೆ (ವಿರೂಪಾಪುರ, ಕ್ಷೇತ್ರಕಾರ್ಯ ಸಂದರ್ಶನ, ೨೦೦೨ ನವೆಂಬರ್).

೨. ಕೆಳ ಮಧ್ಯಮ ಜಾತಿಯಲ್ಲಿ ಆರ್ಥಿಕ ಭದ್ರತೆ ಇದ್ದರೂ ಹಲವಾರು ನಟಿಯರು ಕಲಾಸಕ್ತಿಯಿಂದ, ಸ್ವಯಂ ಪ್ರೇರಣೆಯಿಂದ ಬಂದಿದ್ದಾರೆ. ಕಲಾ ಆಸಕ್ತಿಯು ಯಾವ ವರ್ಗ ಕಾಲ, ಜಾತಿಗಳನ್ನು ಕೇಳುವುದಿಲ್ಲ.

ಆರ್ಥಿಕವಾಗಿ ಯಾವುದೇ ನೆಲೆಯು ಸಿಗದೇ ಇದ್ದಾಗ ಬ್ರಾಹ್ಮಣ, ಲಿಂಗಾಯತರೂ ರಂಗಭೂಮಿಗೆ ಬಂದಿದ್ದಾರೆ. ಅಂದರೆ ಮೇಲ್ಜಾತಿಯವರು. ಮೇಲುವರ್ಗದವರೂ ಆರಿಸಿಕೊಂಡಿರುವ ಕ್ಷೇತ್ರ ರಂಗಭೂಮಿ. ಅಂದರೆ ಮೇಲ್ಜಾತಿಯವರಾದರೇನು? ಕೆಳಜಾತಿ ಮಧ್ಯಮವರ್ಗದವರಾದರೇನು? ಆರ್ಥಿಕವಾಗಿ ಸ್ತ್ರೀಯರಿಗೆ ಯಾವುದೇ ನೆಲೆಯು ದೊರೆಯದಿದ್ದಾಗ ಎಲ್ಲರೂ ಆರಿಸಿಕೊಂಡಿರುವುದು ಈ ರಂಗಬದುಕನ್ನು. ಅದರಿಂದ ಎಷ್ಟೋ ಶ್ರೀಮಂತ ಮನೆತನದ ಹೆಣ್ಣುಗಳು ಗಂಡ ಬಿಟ್ಟಾಗ, ಹದಿಹರೆಯದಲ್ಲಿ ತಪ್ಪುದಾರಿ ತುಳಿದಾಗ, ಅಥವಾ ಇನ್ನಾವುದೋ ಹೊಟ್ಟೆಪಾಡಿಗೋಸ್ಕರ ನಾವು ಈ ಕ್ಷೇತ್ರವನ್ನು ಆರಿಸಿಕೊಂಡಿದ್ದೇವೆ ಎನ್ನುತ್ತಾರೆ. ಅನುರಾಧ ಮೈಸೂರು ಮರಿಯಮ್ಮನಹಳ್ಳಿಯವರು ''ನಾವು ಮೊದಲು ಮೈಸೂರಿನಲ್ಲಿದ್ದಾಗ ನಮ್ಮ ತಂದೆ ತೀರಿಹೋದ ಮೇಲೆ ನಮಗೆ ಯಾವುದೇ ಮಡಿಮೆಯ ನೆಲೆ ಸಿಗದೇ ಇದ್ದಾಗ ಸಿನಿಮಾ ಸೇರಲು ಕಾಶೀನಾಥರ ಹತ್ತಿರ ಹೋಗಿದ್ದೆವು. ಅವರು ಅನುಭವ ಬೇಕು ಎಂದರು. ಅದಕ್ಕೆ ನಮಗೆ ಪರಿಚಯವಿರುವವರು ಗುಡಿಗೇರಿ ಕಂಪನಿಗೆ ಸೇರಿಸಿದರು. ನಂತರ ಬಳ್ಳಾರಿ ಜಿಲ್ಲೆಯ ಮರಿಯಮ್ಮನಹಳ್ಳಿಗೆ ಹೋದರೆ ಅಲ್ಲಿ ನಾಟಕ ಮಾಡಿ ಜೀವನ ಸಾಗಿಸಬಹುದು ಎಂದು ಕೆಲವರು ಸಲಹೆಕೊಟ್ಟರು ಅದರಂತೆ ನಾವಿಲ್ಲಿಗೆ ಬಂದೆವು ಎನ್ನುತ್ತಾರೆ''.

ಒಟ್ಟಿನಲ್ಲಿ ರಂಗಭೂಮಿಗೆ ಬಂದಿರುವವರು ಜೀವನದಲ್ಲಿ ಜಿಗುಪ್ಸೆ ಹೊಂದಿ ಕಷ್ಟ ಅನುಭವಿಸಿಯೇ ಬಂದಿರುತ್ತಾರೆ. ಇಲ್ಲದಿದ್ದರೆ ಮೇಲುವರ್ಗದವರಾದರೇನು? ಕೆಳವರ್ಗದವರಾದರೇನು? ಉನ್ನತ, ಮಧ್ಯಮ, ಕೆಳಜಾತಿ ಯವರಾದರೇನು? ಬಡತನ ತುಂಬಾ ಕೆಟ್ಟದ್ದು ಹೊಟ್ಟೆ ಏನನ್ನಾದರೂ ಕಲಿಸುತ್ತದೆಯಂತೆ. ''ಹಸಿದ ವರಿಗೆ ಚಂದ್ರ ರೊಟ್ಟಿಯಂತೆ ಕಾಣುತ್ತಾನಂತೆ.'' ಬಡತನದವರಿಗೆ ಸುಲಭೋಪಾಯ ಮಾರ್ಗವೆಂದರೆ ಕಲಾ ಬದುಕು. ಆದ್ದರಿಂದ ಕೌಟುಂಬಿಕ ನೆಲೆಗಳು, ವರ್ಗವಾರು ನೆಲೆಗಳು, ಜಾತಿವಾರು ನೆಲೆಗಳು ಹಲವಾರು ಹಿನ್ನೆಲೆ ಕಾರಣಗಳಿಂದ ರಂಗನಟಿಯರು ರಂಗಭೂಮಿಗೆ ಬಂದಿದ್ದು, ತಮ್ಮದೇ ಆದ ಅಭಿನಯಕೌಶಲ್ಯ ಬದುಕನ್ನು ಮೆರೆದು ಕನ್ನಡ ರಂಗಭೂಮಿ ಪರಂಪರೆ ಬಳ್ಳಾರಿ ಜಿಲ್ಲೆಯ ರಂಗಭೂಮಿಯ ಪರಂಪರೆಯನ್ನು ಉಜ್ವಲವಾಗಿಸಲು ಕಾರಣಕರ್ತರಾಗಿದ್ದಾರೆ.

೫.೪. ರಂಗ ನಟಿಯರು : ಸಮಾಜದ ದೃಷ್ಟಿ

'ನಟುವರು' ವರ್ಗದಿಂದ ಬಂದ ನಟಿಯರು ತಮ್ಮ ನಟನಾ ಕೌಶಲ್ಯದಿಂದ ರಂಗಭೂಮಿಯಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸುತ್ತಾ ಬಂದರು. ಎಷ್ಟೋ ರಂಗನಟಿಯರು ತಮ್ಮ ಸ್ವಸಾಮರ್ಥ್ಯದಿಂದ ಕಂಪನಿಗಳನ್ನು ಕಟ್ಟಿ ಮುನ್ನೆಡೆಸಿ ರಂಗಭೂಮಿ ಪರಂಪರೆಯನ್ನು ಉಜ್ವಲಗೊಳಿಸಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಕಟ್ಟಿದ ಸಮಾಜದ ನೆಲೆಯಲ್ಲಿ ಇಂದಿಗೂ ಆ ಸಮಾಜದ ಕನಸು ಕನಸಾಗಿಯೇ ಉಳಿದಿದೆಯೇ ಹೊರತು ನನಸಾಗಲು ಸಾಧ್ಯವಿಲ್ಲವಾಗಿದೆ.

ನಟಿಯರು ಹೆಚ್ಚಾಗಿ ಸಮಾಜದ ಸ್ತರದಲ್ಲಿ ನೋಡಿದಾಗ ಕೆಳವರ್ಗದಿಂದಲೇ ಬಂದವರಾಗಿದ್ದಾರೆ. ಭಾರತೀಯ ಸಾಮಾಜಿಕ ಬದುಕಿನಲ್ಲಿ ಜಾತಿ ಪಿಡುಗಿಗೆ ಬಲಿಯಾಗಿ ದಲಿತತನದ ನೋವು ನಮ್ಮಲ್ಲಿನ್ನೂ ಹೋಗಿಯೇ ಇಲ್ಲ. ಇಂಥ ಸಂದರ್ಭದಲ್ಲಿ ಜಾತಿಯಿಂದ ಕೆಳಗಾದವರನ್ನು ನೀತಿಯಿಂದಲೂ ಕಡೆಗಣಿಸಲಾಗಿದೆ. ಇಂಥ ಪರಂಪರೆಯಲ್ಲಿ ಬಂದಿರುವ ನಮ್ಮ ರಂಗನಟಿಯರಿಗೆ ಸಾಮಾಜಿಕವಾಗಿ ಯಾವುದೇ ಸ್ಥಾನಮಾನಗಳಿಲ್ಲ. ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ಅವರ ಪ್ರವೇಶ ನಿಷಿದ್ಧ. ಯಾರೂ ಅವರಿಗೆ ಗೌರವವನ್ನು ಕೊಡುವುದಿಲ್ಲ. ಹೀನಾಯವಾಗಿ ಕಾಣುತ್ತಾರೆ. ಯಾರೂ ತಾವಾಗಿಯೇ ಬಂದು ನಮಗೆ ಬೆಲೆಯನ್ನು ಕೊಡಿರಿ ಎನ್ನುವುದಿಲ್ಲ, ಕೇಳುವುದಿಲ್ಲ. ತಾನಾಗಿಯೇ ಅದು ಬೆಳೆದುಕೊಂಡು ಬಂದಿರಬೇಕು. ಆದ್ದರಿಂದ ನಟಿಯರನ್ನು ಕ್ಷೇತ್ರಕಾರ್ಯ ಮಾಡುವಾಗ ಪ್ರತಿಯೊಬ್ಬರನ್ನು ಸಂದರ್ಶಿಸಿದಾಗ ಅವರ ಉತ್ತರ ಮಾತ್ರ ನೀರಸವಾಗಿತ್ತು. ಯಾವ ಸಮಾಜ? ಎಲ್ಲಿಯ ಸಮಾಜ? ಯಾವ ಸಾಮಾಜಿಕ ಗೌರವ? ಅಲ್ಲರೀ ಈ ಗೌರವ ಎಂದರೆ ಏನು? ಗೌರವಾನ್ವಿತರು ನಮ್ಮನ್ನೆಲ್ಲಾ ಒಳ್ಳೆಯ ದೃಷ್ಟಿಕೋನದಿಂದ ನೋಡುವುದೇ ಇಲ್ಲ. ಹೀಗಿದ್ದ ಮೇಲೆ ನಾವು ಎಂದು ಈ ಸಾಮಾಜಿಕ ಮನ್ನಣೆ ಪಡೆಯಬೇಕು ಎಂಬುದೇ ಯಕ್ಷಪ್ರಶ್ನೆಯಾಗಿದೆ. ನಮ್ಮದು ಬೀದಿಯ ಬದುಕು. ಸಾಮಾಜಿಕವಾಗಿ ಒಂದು ನಿಟ್ಟಿನಲ್ಲಿಯೂ ನಾವು ಸರಿಯಾದ ವ್ಯವಸ್ಥೆಯಲ್ಲಿದ್ದೇವೆ ಎಂಬುದಂತೂ ಸುಳ್ಳು. ಇಂಥ ವ್ಯವಸ್ಥೆ ಬದಲಾಗಬೇಕಾದರೆ ಮತ್ತೆ ಮತ್ತೆ ಸಾಮಾಜಿಕ ಕ್ರಾಂತಿ ನಡೆಯಲೇಬೇಕು.

ಇತಿಹಾಸವನ್ನು ನಾವು ಯಾವಾಗಲೂ ಒಡೆದು ಕಟ್ಟಬೇಕು. ಸಾಮಾಜಿಕ ಕ್ರಾಂತಿಯ ಫಲವಾಗಿ ಸರ್ವೋದಯದ ಮೂಲ ತತ್ವವು ಅನುಷ್ಠಾನಕ್ಕೆ ಬರಲು ಸಾಧ್ಯವಾಗುತ್ತದೆ. ಆದ್ದರಿಂದ ಸಾಮಾಜಿಕ ಹೊಣೆ ಗಾರಿಕೆಯಲ್ಲಿ ರಂಗನಟಿಯರು ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಬಂದು ತಮ್ಮ ಪಾತ್ರಕ್ಕೆ ಜೀವಂತಿಕೆಯನ್ನು ತುಂಬಿ ಅಭಿನಯಿಸಿ ಪಾತ್ರವನ್ನು ನೈಜವಾಗಿ ಅಭಿನಯಿಸುತ್ತಾರೆ. ತಮ್ಮ ಮನದಲ್ಲಿ ನೋವಿದ್ದರೂ ಎಲ್ಲರ ಮನವನ್ನು ರಂಜಿಸುತ್ತಾ ರಂಗದ ಮೇಲೆ ತಾವು ನಕ್ಕು ಪ್ರೇಕ್ಷಕರನ್ನು ನಗಿಸುತ್ತಾರೆ. ರಂಗನಟಿಯರು ನೆನಪಿಗೆ ಬರುವುದು ಇಂಥ ಸಂದರ್ಭದಲ್ಲಿ ಮಾತ್ರ. ಆದರೆ ನಿಜಜೀವನದಲ್ಲಿ ಅವರ ಪಾಡು ಪಡಿಪಾಟ್ಲು ದೈನಂದಿನ ಬದುಕು ದುಸ್ತರ. ಈ ಬಾಳನ್ನು ಅನುಭವಿಸುತ್ತಿರುವ ರಂಗನಟಿಯರು ಸಮಾಜದಲ್ಲಿ ತಮಗೇನು ಎನ್ನುವು ದೊಂದು ದೊಡ್ಡ ಪ್ರಶ್ನೆ. ನಟಿಯರ ದೃಷ್ಟಿಯಲ್ಲಿ ಸಮಾಜ ತಮಗೆ ಅರಿವಿಲ್ಲದೆ ಇರಬಹುದು. ಆದರೆ ನಮಗೆ ಸಮಾಜದ ಆಳದ ಅರಿವು ನಮಗೆ ಇಲ್ಲವಾಗಿದೆ. ಸಮಾಜದಲ್ಲಿ ಉನ್ನತ ವರ್ಗದವರು ಸಂಪೂರ್ಣ ವಾಗಿ ನಮ್ಮನ್ನು ಕಡೆಗಣಿಸಿದ್ದಾರೆ. ಕೀಳು ಎಂದು ನಮ್ಮನ್ನು ದೂರವೇ ಇಟ್ಟಿದ್ದಾರೆ. ಎಲ್ಲರ ಸಂತೋಷಕ್ಕೆ ನಾವು ಬೇಕು. ಆದರೆ ನಮ್ಮ ಸಂತಸದ ನಿಲುವಿನ ಬಗ್ಗೆ ಯಾರೂ ಕಿಂಚಿತ್ತೂ ಯೋಚಿಸುವುದೇ ಇಲ್ಲ. ಸಂಪೂರ್ಣವಾಗಿ ಸಮಾಜ ನಮ್ಮನ್ನು ನಿರ್ಲಕ್ಷಕ್ಕೆ ಒಳಪಡಿಸಿದೆ.

ನಮ್ಮ ಐತಿಹಾಸಿಕತೆಯಲ್ಲಿ ಹಾಗೂ ಜನಪದ ಕಥೆಗಳನ್ನು ಗಮನಿಸಿದಾಗ ಮೊದ ಮೊದಲು ದೇವದಾಸಿ ಯರಿಗೆ ಹಾಗೂ ಸೂಳೆಯರಿಗೆ ನಮ್ಮ ಸಮಾಜದಲ್ಲಿ ಗೌರವಾನ್ವಿತ ದೃಷ್ಟಿ ಇದ್ದುದು ಕಂಡುಬರುತ್ತದೆ.

ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಹಾಗೂ ಇತ್ತೀಚಿನ ಸಂದರ್ಭಗಳಲ್ಲಿ ಹಲವಾರು ರೀತಿಯಲ್ಲಿ ನಮ್ಮ ಸಮಾಜವು ಸಂಘರ್ಷಕ್ಕೆ ಬಳಪಟ್ಟಿತು. ಜಮೀನ್ದಾರಿ ಹಾಗೂ ರೈತವಾರಿ ಪದ್ಧತಿಗಳು ನಾಶವಾದಂತೆ ಇನ್ನಿತರ ನಮ್ಮ ಸಾಮಾಜಿಕ ಪದ್ಧತಿಗಳಲ್ಲಿಯೂ ಬದಲಾವಣೆ ಅನಿವಾರ್ಯವಾಯಿತು. ಅದರಂತೆ ಗೌರವಾನ್ವಿತವಾಗಿ ಸೂಳೆತನ ಒಂದು ಕಾಯಕವೆಂದು ಮಾಡಿಕೊಂಡು ಬಂದಿರುವುದು ೧೨ನೇ ಶತಮಾನದ "ಸೂಳೆ ಸಂಕವ್ವ" ಎಂಬ ಮಹಿಳೆಯೆ ನಿದರ್ಶನ ನಮಗೆ ಕಂಡು ಬರುತ್ತದೆ. ಮೊದಲು ಹೀಗಿದ್ದು ಜನಸಂಖ್ಯೆ ಹೆಚ್ಚಾದಂತೆ ಬಡತನದಿಂದಲೂ ಎಷ್ಟೋ ಜನ ರಂಗನಟಿಯರು ಸಾಮಾಜಿಕವಾಗಿ ಸೂಳೆಗಾರಿಕೆಯನ್ನು ನಡೆಸುತ್ತಿದ್ದಾರೆ. ಆದ್ದರಿಂದ ಇಂದು ಸಮಾಜವು ಅವರನ್ನು ಕೆಳದೃಷ್ಟಿಯಿಂದ ಕಂಡಿದ್ದು, ಬರೀ ದೈಹಿಕ ಸುಖಕ್ಕಾಗಿ ಅವರನ್ನು ಬಳಸಿಕೊಂಡು ನಂತರದಲ್ಲಿ ಅವರನ್ನು ಹೀನದೃಷ್ಟಿಯಿಂದ ನೋಡುವುದು ಇಂದಿನ ಕೀಳು ಮನೋಭಾವದ ಜನರೊಂದಿಗೆ ತಪ್ಪಿತಸ್ಥರಾಗಿ ನೋವು ಅಳುಕುಗಳೊಂದಿಗೆ ಬಾಳುವುದು ಅವರ ಅನಿವಾರ್ಯತೆಯಾಗಿದೆ. ಇನ್ನು ಕೆಲವು ರಂಗನಟಿಯರಿಗೆ ಕೆಲ ಪುರುಷರು ಪತ್ನಿಯ ಸ್ಥಾನವನ್ನು ಕೊಟ್ಟು ಅವರನ್ನು ತಮ್ಮ ಧರ್ಮಪತ್ನಿಯರಂತೆ ಗೌರವಿಸುತ್ತಿದ್ದಾರೆ. ಆದರೆ ಇಂಥವರು ಬರೀ ಬೆರಳೆಣಿಕೆಯಷ್ಟು ಮಾತ್ರ.

ಯಾರು ಕೀಳು, ಯಾರು ಮೇಲು, ಯಾರು ಹೆಚ್ಚು, ಯಾರು ಕಡಿಮೆ ಈ ಅಸಮಾನತೆಯಿಂದ ಕೂಡಿರುವುದೇ ಸಮಾಜ. ಅದರಲ್ಲಿ ಸಮಾಜ ಎಂದರೆ ಯಾವುದು? ನಮ್ಮ ನಿಮ್ಮೆಲ್ಲರನ್ನು ಬಳಗೊಂಡಿರುವುದೇ ಸಮಾಜ. ಆದ್ದರಿಂದ ಯಾರನ್ನು ಹೊರತುಪಡಿಸಿ ಈ ಸಮಾಜವಿಲ್ಲ. ಎಲ್ಲರನ್ನು ಎಲ್ಲವನ್ನು ಬಳಗೊಂಡಿರು ವುದೇ ಸಮಾಜ. ನಾವು ಎಂದೂ ಒಂಟಿಯಲ್ಲ, ನಾವೆಲ್ಲರೂ ಸಮಾಜದ ಒಂದು ಭಾಗ. ಈ ಸಮಾಜಕ್ಕೆ ನಾವು ಏನನ್ನು ನೀಡುತ್ತೇವೆಯೋ ಅದನ್ನು ಅದು ಸಹಜವಾಗಿ ಸ್ವೀಕರಿಸುತ್ತದೆ. ನಾವು ಕೊಡುವುದನ್ನೇ ಏನು... ಏಕೆ... ಎಂದು ಪ್ರಶ್ನಿಸಿದರೂ ಅದು ಮತ್ತೆ ತಾನಾಗಿಯೇ ಸ್ವೀಕರಿಸಲ್ಪಡುತ್ತದೆ.

೫.೫. ರಂಗನಟಿಯರು : ಸಾಂಸ್ಕೃತಿಕ ದೃಷ್ಟಿ

ದೇಶದ ಸಾಂಸ್ಕೃತಿಕತೆಯನ್ನೇ ಎತ್ತಿ ಹಿಡಿಯುವುದರಲ್ಲಿ ಮಹಿಳೆಯ ಪಾತ್ರ ಗಣನೀಯವಾದುದು. ಹಾಗೆಯೇ ಇಡೀ ರಂಗಭೂಮಿಯ ಕೇಂದ್ರಬಿಂದು ಎಂದರೆ ಮಹಿಳೆಯೇ. ಒಂದು ಕಾಲದಲ್ಲಿ ಮಹಿಳೆಯು ಸಾರ್ವಜನಿಕ ವಾಗಿ ಓಡಾಡುವಂತಿಲ್ಲ. ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಮಾತ್ರ ತಮ್ಮ ಅನನ್ಯತೆಯನ್ನು ತೋರಿಸು ತ್ತಿದ್ದರು. ಆದರೆ ಮಹಿಳೆ ಕ್ರಮೇಣವಾಗಿ ನೋಡುಗಳಾಗಿ, ಸಂಗೀತ, ನಾಟ್ಯ, ಸಾಹಿತ್ಯ, ನಂತರ ರಾಜಕೀಯವಾಗಿ ಭಾಗವಹಿಸಿ ಇದೀಗ ಇಡೀ ದೇಶದ ಸಾಂಸ್ಕೃತಿಕತೆಯ ಪ್ರತೀಕವಾಗಿದ್ದಾಳೆ. ಪುರುಷರು ಎಷ್ಟೇ ಜಾಗರೂಕವಾಗಿ ಸ್ತ್ರೀ ಪಾತ್ರವನ್ನು ನಿರ್ವಹಿಸಿದರೂ ಅವರು ಪುರುಷರೇ. ಯಾರು ಯಾವುದು ಪಾತ್ರ ಮಾಡಿದರೆ ಲಕ್ಷಣವೋ ಅವರೇ ಅದನ್ನು ಮಾಡಿದರೆ ಅದು ಮನಸ್ಸಿಗೆ ಒಪ್ಪತಕ್ಕದ್ದು. ಒಂದು ಸಂಸ್ಕೃತಿ ಪರಂಪರೆಗಳನ್ನು ಉಳಿಸಿ ಬೆಳೆಸುವವರು ಮಹಿಳೆಯರೇ. ಅದಕ್ಕೆ ನಮ್ಮ ಜನಪದ ಸಂಸ್ಕೃತಿ, ಬುಡಕಟ್ಟುಗಳಲ್ಲಿ ಹಲವಾರು ನಿದರ್ಶನಗಳು ಕಂಡುಬರುತ್ತವೆ.

ಕನ್ನಡ ನಾಡಿನಲ್ಲಿ ಮರಾಠಿಗಳ ಪ್ರಭಾವದಿಂದ ರಂಗಭೂಮಿಯು ಹೆಚ್ಚು ಪ್ರಗತಿಯನ್ನು ಕಂಡುಕೊಂಡಿತು. ಮರಾಠಿ ರಂಗಭೂಮಿ ಪ್ರೇರಕವಾಗಿ ಹುಟ್ಟಿಕೊಂಡಿರುವ ನಮ್ಮ ನಾಟಕ ಕಂಪನಿಗಳು ಮೊದ ಮೊದಲು ಸ್ತ್ರೀಯ ರನ್ನು ರಂಗಭೂಮಿಗೆ ಕರೆತರಲು ಹೆದರುತ್ತಿದ್ದವು. ನಂತರದ ದಿನಗಳಲ್ಲಿ ಕೆಲವು ಹೆಣ್ಣು ಮಕ್ಕಳು ವೇದಿಕೆಗೆ ದಿಟ್ಟವಾಗಿ ನಿಂತರು. ಇನ್ನು ಕೆಲ ಮಹಿಳೆಯರು ಧೈರ್ಯದಿಂದ ಸ್ವತಃ ಕಂಪನಿಗಳನ್ನು ಕಟ್ಟಿದರು. ನಮ್ಮ ವೃತ್ತಿ ರಂಗಭೂಮಿಯ ಕಂಪನಿಗಳು ರಂಗನಟಿಯರನ್ನು ಕಂಡಿದ್ದು ಕಲಾನಿಷ್ಠವಾಗಿ. ಆಗ ಗೌರವ ಪೂರ್ಣವ್ಯವಸ್ಥೆ ಇದ್ದು, ಬಹುತೇಕ ನಟಿಯರು ದೊಡ್ಡ ದೊಡ್ಡ ಕಂಪನಿಯಲ್ಲಿ ಸೇವೆಯನ್ನು ಸಲ್ಲಿಸಿ ತಾವು ಕಂಪನಿಯನ್ನು ಕಟ್ಟಿ ಕನ್ನಡ ನಾಡಿನ ಮಹಿಳೆಯ ಘನತೆಯನ್ನು ಮೆರೆದಿದ್ದಾರೆ.

ಗ್ರಾಮೀಣ ರಂಗಭೂಮಿಯಲ್ಲಿ ನಟಿಯರು ಇತ್ತೀಚೆಗೆ ಹವ್ಯಾಸಿ ಕಲಾವಿದರೊಂದಿಗೆ, ಬಯಲಾಟ ಹಾಗೂ ಸಾಮಾಜಿಕ ನಾಟಕಗಳಲ್ಲಿ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಇಂಥ ಬೆಳವಣಿಗೆಯು ಕಲಾನಿಷ್ಠತೆಯಿಂದ, ಅಭಿಮಾನದಿಂದ ನಟಿಯರು ಪ್ರೌಢರಾಗಿದ್ದಾರೆ. ಇಂಥಹ ಪ್ರಬುದ್ಧತೆಯು ಬೆಳೆದಿದ್ದು ಇತ್ತೀಚೆಗೆ. ಸಮೂಹತೆ ಯಿಂದ ಹಾಗೂ ನಟಿಯ ಪ್ರವೇಶದ ತೀವ್ರತೆಯಿಂದ ಇಡೀ ರಂಗಭೂಮಿಯು ಹಲವಾರು ರೀತಿಯಲ್ಲಿ ಸೃಜನವಾಗಿದ್ದು, ಹೊಸ ರೀತಿಯ ಚಟುವಟಿಕೆಯು ಪ್ರಾರಂಭವಾಗಿ ಉಜ್ವಲ ಪರಂಪರೆಯನ್ನು ನಟಿಯರು ಮುಂದುವರಿಸುತ್ತಿದ್ದಾರೆ.

ಸಮಾಜದಲ್ಲಿರುವ ಅವ್ಯವಸ್ಥೆ, ಮೂಢತೆಯಿಂದ ನಟಿಯರು ಕೀಳರಿಮೆಯಿಂದ ಬಾಳುವಂಥ ಪರಿಸ್ಥಿತಿ ಯಾಗಿದೆ. ಈ ಪರಿಸ್ಥಿತಿಯು ಇಂದಿಗೂ ವ್ಯತಿರಿಕ್ತವಾಗಿಲ್ಲ. ಆದರೆ ಈಚೆಗೆ ಸಮೂಹ ಮಾಧ್ಯಮಗಳು ಇವರನ್ನು ಅಭಿಮಾನದಿಂದ Expose ಮಾಡುತ್ತಿರುವುದು ಒಂದು ಸಂಸ್ಕೃತಿಯ ಭಾಗವಾಗಿ. ಆದ್ದರಿಂದ ರಂಗನಟಿಯರಿಗೆ ಒಂದು ಕಡೆ ಅವಮಾನ ಇನ್ನೊಂದೆಡೆ ಸನ್ಮಾನ ಈ ಎರಡರಲ್ಲಿ ಯಾವುದಕ್ಕೂ ಧೃತಿಗೆಡದೆ ರಂಗನಟಿಯರು ಸಾಂಸ್ಕೃತಿಕತೆಯ ಪ್ರತಿಬಿಂಬವಾಗಿದ್ದಾರೆ.

ಇಡೀ ಕರ್ನಾಟಕದಲ್ಲಿ ಇತ್ತೀಚಿಗೆ ಆರ್.ನಾಗರತ್ನಮ್ಮ ಮೈಸೂರು, ಚಿಂದೋಡಿ ಲೀಲಾ, ಕೆ.ನಾಗರತ್ನಮ್ಮ, ಡಿ.ಸಣ್ಣಹನುಮಕ್ಕ, ಸುಭದ್ರಮ್ಮ ಮನ್ಸೂರು ಮುಂತಾದ ಪ್ರಬುದ್ಧ ನಟಿಯರು ತಮ್ಮ ಕಲಾ ಪ್ರತಿಭೆಯಿಂದ ಆಗಾಗ ಸಮೂಹ ಮಾಧ್ಯಮಗಳಲ್ಲಿ Expose ಆಗುತ್ತಿದ್ದಾರೆ. ಮೊದ ಮೊದಲು ರಂಗನಟಿಯರು ತಂಡಕಟ್ಟಿ, ಎಷ್ಟೋ ವರ್ಷಗಳವರೆಗೆ ಹೋರಾಟ ನಡೆಸಿ, ರಂಗಭೂಮಿಯ ಕಲಾಸೇವೆ ಗೈಯುತ್ತಿರುವುದು ಕಂಡು ಬಂದಿದ್ದರೂ, ಸಾಂಸ್ಕೃತಿಕ ವಾಗಿ ಅವರನ್ನು ಗುರುತಿಸಿರಲಿಲ್ಲ. ಅವರೆಲ್ಲರು ಎಲೆ ಮರೆಯ ಕಾಯಿಯಂತೆ ತಮ್ಮ ಪಾಡಿಗೆ ತಾವು ಕಲಾಸೇವೆಯನ್ನು ಮಾಡಿ ಇತಿಹಾಸದ ಭಾಗವಾಗಿದ್ದಾರೆ. ಅವರನ್ನು ಮೊದಮೊದಲು ಕಲಾನಿಷ್ಠವಾಗಿ ಕಂಡಿದ್ದರೂ ಸಾಂಸ್ಕೃತಿಕ ನಿಷ್ಠವಾಗಿ ಏನೂ ಗುರುತಿಸಿರಲಿಲ್ಲ ಹಾಗೂ ಅವರನ್ನು ಅಭಿಮಾನ ದಿಂದ ಗೌರವಿಸುತ್ತಿದ್ದುದು ತೀರಾ ವಿರಳವೇ ಸರಿ. ಡಿ.ಸಂಜಿವಮ್ಮನ ರಾಣಿಪಾತ್ರಕ್ಕೆ ಮೈಸೂರು ಅರಸರು

ಪೀತಾಂಬರ ಸೀರೆ ಕೊಟ್ಟು ಗೌರವಿಸಿದ್ದರು. ಮೈಸೂರು ಸಂಸ್ಥಾನದ ಒಡೆಯರು ಹೆಚ್ಚು ಸಾಂಸ್ಕೃತಿಕತೆಗೆ ಮಹತ್ವ ಹಾಗೂ ಪುರಸ್ಕಾರವನ್ನು ನೀಡುತ್ತಿದ್ದರು. ಹಾಗಾಗಿ ಕಲೆ, ಸಂಸ್ಕೃತಿ, ಸಾಹಿತ್ಯವು ಹೆಚ್ಚು ಪ್ರಗತಿಯನ್ನು ಕಂಡಿತು. ಇದಕ್ಕಿಂತ ಪೂರ್ವದಲ್ಲಿ ವಿಜಯನಗರ ಆಳ್ವಿಕೆಯಲ್ಲಿ ಎಷ್ಟೋ ಜನ ಮಹಿಳಾ ಕಲಾವಿದೆಯರಿದ್ದರು. ಅವರಿಗೆ ರಾಜರು ಸಾಸ್ಕೃತಿಕವಾಗಿ ಮನ್ನಣೆಯನ್ನು ನೀಡುತ್ತಿದ್ದರು. ನಟಿಯರಿಗೆ ಪ್ರಶಸ್ತಿ, ಪುರಸ್ಕಾರ, ಆಶ್ರಯವನ್ನು ನೀಡಿ ಗೌರವಿಸುತ್ತಿದ್ದರು. ಅಂದರೆ ಅವರ ಸ್ಥಾನ-ಮಾನಗಳಿಗೆ ಧಕ್ಕೆ ಇರುತ್ತಿರಲಿಲ್ಲ. ಸಮಾಜ ದಲ್ಲಿ ಒಂದು ಮೌಲ್ಯಾಧಾರಿತ ಸ್ಥಾನವನ್ನು ರಾಜಪ್ರಭುತ್ವಗಳು ಕೊಟ್ಟು ಗೌರವಿಸುತ್ತಿದ್ದರು. ಕಲಾರಸಿಕರಾಗಿರುವ ರಾಜರಿಗೆ ತಮ್ಮ ಪ್ರಭುತ್ವದ ಪ್ರಭಾವದಿಂದ ಇತಿಹಾಸ ಕಟ್ಟಬೇಕಾಗಿದ್ದುದರಿಂದ ಆರೋಗ್ಯಕರವಾದ ಸ್ಪರ್ಧೆ ಇದ್ದು, ಅವರಿಗಿಂತ ಇವರು ಇವರಿಗಿಂತ ಅವರು ಮೇಲು ಎಂಬಂತೆ ಸಾಂಸ್ಕೃತಿಕತೆಯನ್ನು ಎತ್ತಿ ಹಿಡಿ ಯುತ್ತಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಕಲಾವಿದೆಯರ ಪ್ರತಿನಿಧಿಯಾಗಿ ಕೆ.ನಾಗರತ್ನಮ್ಮ ಹಾಗೂ ಡಿ.ಸಣ್ಣಹನುಮಕ್ಕ ಆಯ್ಕೆಯಾಗಿದ್ದಾರೆ. ಇರ್ವರೂ ಬಳ್ಳಾರಿ ಜಿಲ್ಲೆಯವರು ಹಾಗೂ ಮರಿಯಮ್ಮನಹಳ್ಳಿಯವರು. ಆದ್ದರಿಂದಲೇ ಮರಿಯಮ್ಮನ ಹಳ್ಳಿಯು ಕಲಾವಿದರ ತವರೂರಾಗಿರುವುದು. ಇಂಥ ಪ್ರತಿಭೆಗಳೇ ಪ್ರತೀಕವಾಗಿವೆ. ಸಂಸ್ಕೃತಿನಿಷ್ಠ ನಟಿಯರು ಅದನ್ನು ಕಾಪಾಡಿಕೊಂಡು ಬಂದಿದ್ದಾರೆ. ಹಾಗೆಯೇ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ. ಮರಿಯಮ್ಮನಹಳ್ಳಿಯ ಪ್ರಥಮ ಕಲಾ ಸಹೋದರಿಯರಾದ ಡಿ.ಸಂಜೀವಮ್ಮ, ಡಿ.ಹನುಮಂತಮ್ಮ ಸಹೋದರರ ಮಗಳೇ ಡಿ.ಸಣ್ಣಹನುಮಕ್ಕ. ಕನ್ನಡ ರಂಗಭೂಮಿ ಮೇರುನಟ ಡಿ.ದುರ್ಗಾದಾಸ್. ಸಣ್ಣ ಹನುಮಕ್ಕರ ಕುಟುಂಬವೇ ಒಂದು ಕಲಾವಿದರ ಕುಟುಂಬ. ಹಾಗಾಗಿ ಕನ್ನಡ ವೃತ್ತಿರಂಗಭೂಮಿಯಲ್ಲಿ ಇವರ ಪಾತ್ರ ಚಿರಸ್ಥಾಯಿಯಾಗಿ ಉಳಿದಿದೆ.

ತಂದೆಯ ಪ್ರೋತ್ಸಾಹದಿಂದ ಮುಂದೆ ಬಂದಿರುವ ಕೆ.ನಾಗರತ್ನಮ್ಮ ಇಂದು ಪ್ರಭುದ್ಧಪೂರ್ಣ ನಟಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಯಾವ ಕಂಪನಿಗಳ ಅನುಭವವಿಲ್ಲದಿದ್ದರೂ ಶಾಲಾ ಹಂತದಲ್ಲಿಯೇ ಊರಿನ ಪರಿಸರ ದೊಂದಿಗೆ ಬೆರೆತುಕೊಂಡು ತಾವೊಬ್ಬ ಕಲಾಪೂರ್ಣೆಯಾಗಿ ರಂಗಭೂಮಿಯಲ್ಲಿ ಬೆಳೆದಿದ್ದಾರೆ. ಅಕಾಡೆಮಿಯ ಸದಸ್ಯೆಯಾಗಿರುವ ಸಾವಿತ್ರಮ್ಮ, ದೇಜಗೌ ಹಾಗೂ ರಾಜ್ಯೋತ್ಸವ ಮುಂತಾದ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

೦೧. ಕೆರೆ ನಿರ್ಮಾಣದ ವ್ಯವಸ್ಥೆಯನ್ನು ಕಾರ್ಯಕ್ರಮ ಮೂಲಕ ಹೇಳುವುದು.

೦೨. ಅರಣ್ಯ ಸಂರಕ್ಷಣೆಯ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಸಾಮಾನ್ಯರಿಗೆ ಮಾಹಿತಿ ನೀಡುವುದು.

೦೩. ರಂಗಭೂಮಿಯ ಬೆಳವಣಿಗೆ ಅಥವಾ ವಿಚಾರಗೋಷ್ಠಿ, ಸಮಾರಂಭಗಳನ್ನು ನಡೆಸಿಕೊಡುವುದು.

೦೪. ರಂಗಭೂಮಿಯ ಪ್ರಾತಿನಿಧ್ಯದ ಬಗ್ಗೆ ಮಾತನಾಡುವುದು.

೦೫. ಆರೋಗ್ಯ ಕಾರ್ಯಕ್ರಮಗಳನ್ನು ನಡೆಸಿಕೊಡುವುದು.

೦೬. ಪೌಷ್ಠಿಕ ಆಹಾರ ಮತ್ತು ಅದರ ಮಹತ್ವವನ್ನು ವಿವರಿಸುವುದು.

೦೭. ಹಂಪೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದು.

೦೮. ಪರಿಸರ ಸಂರಕ್ಷಣೆ ಹಾಗೂ ಪರಿಸರ ಮಾಲಿನ್ಯದ ಬಗ್ಗೆ ಪರಿಚಯಿಸುವುದು, ಮಾಲಿನ್ಯ ನಿಯಂತ್ರಣದ ಬಗ್ಗೆ ವಿವರಿಸುವುದು.

೦೯. ಲಲಿತ ಕಲಾರಂಗದಲ್ಲಿ ಸಕ್ರೀಯವಾಗಿ ಭಾಗವಹಿಸಿ ಅಲ್ಲಿಯ ಕಾರ್ಯಕ್ರಮಗಳನ್ನು ಯಥಾವತ್ತಾಗಿ ನಿಷ್ಠೆಯಿಂದ ನಿರ್ವಹಿಸುವುದು.

೧೦. ನಟಿಯರು ರಂಗದ ಸಂಘ, ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಿರುವುದು.

ಡಿ.ಸಣ್ಣಹನುಮಕ್ಕ ನೀನಾಸಂ ತಿರುಗಾಟದೊಂದಿಗೆ ಅನುಭವ ಪಡೆದು, ನೀನಾಸಂ ತಂಡದೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು, ಈಗ ಕ್ರಿಯಾಶೀಲ, ಸೃಜನಶೀಲ ನಾಟಕಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆ. ಪರಂಪರೆಯಿಂದ ಬಂದಂಥ ಕಲೆಯು ಇವರನ್ನು ಪ್ರಗತಿಪರ ನಟಿಯನ್ನಾಗಿ ರೂಪಿಸಿದೆ. ಹೊಸಪೇಟೆಯ ಪಿ.ಅಬ್ದುಲ್ ಅವರ ಭಾವೈಕ್ಯತೆ ವೇದಿಕೆಯೊಂದಿಗೆ ಸಂಪರ್ಕ ಇಟ್ಟುಕೊಂಡು ಇಂದು ವೇದಿಕೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ಇವರು ಪಾಲ್ಗೊಳ್ಳುತ್ತಾರೆ.

ಒಟ್ಟಿನಲ್ಲಿ ನಟಿಯರು ಇಂದು ಸಾಂಸ್ಕೃತಿಕವಾಗಿ ಭಿನ್ನತೆಯಿಂದ ಕಾಣುತ್ತಾರೆ. ಅಂದು ಇದ್ದಂಥ ವ್ಯವಸ್ಥೆ ಇಂದಿಲ್ಲ. ಇವರನ್ನು ಅಭಿಮಾನದಿಂದ Expose ಮಾಡುತ್ತಿವೆ. ಇವರೆಲ್ಲರಿಂದ ಸಂಸ್ಕೃತಿಯ ಒಂದು ಭಾಗ. ನಟಿಯರು ರಂಗಭೂಮಿಯಲ್ಲಿ ಪ್ರವೇಶ, ಪಾತ್ರದಂತೆ ನಟಿಸಿ, ಕೌಶಲ್ಯ, ಗಾಯನ, ನೃತ್ಯ, ಪಾತ್ರಕ್ಕೊಪ್ಪುವ ಪ್ರಬುದ್ಧತೆ, ಸ್ವತಃ ನಟಿಯರೇ ಮುಂದೆ ಬಂದು ಕಂಪನಿಕಟ್ಟಿ ಮುನ್ನಡೆಸಿದ್ದು ಜೀವನದಲ್ಲಿ ಹೋರಾಟದಿಂದ ಅನನ್ಯತೆಯನ್ನು ಕಾಪಾಡಿಕೊಂಡಿದ್ದು, ಹಾಸ್ಯ, ಗಂಭೀರ, ಖಳನಾಯಕಿ, ಸ್ವತಃ ಮಹಿಳೆಯರೇ ಪುರುಷ ಪಾತ್ರದಲ್ಲಿ ಮಿಂಚಿದ್ದು, ಇಂದು ಅಕಾಡೆಮಿ ಸದಸ್ಯೆಯರಾಗಿ ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದುಕೊಂಡು ರಂಗಭೂಮಿಯ ಉಜ್ವಲಪರಂಪರೆಗೆ ದ್ಯೋತಕವಾಗಿರುವುದು. ನಮ್ಮ ರಂಗನಟಿಯರು ಸಾಂಸ್ಕೃತಿಕವಾಗಿ ಮೆರೆದಿದ್ದಾರೆ. ಸಾಂಸ್ಕೃತಿಕತೆಯ ಕಂಪನ್ನು ಇಡೀ ಕರ್ನಾಟಕದಲ್ಲೆಲ್ಲಾ ಪಸರಿಸಿದ್ದಾರೆ. ಸಮೂಹ ಮಾಧ್ಯಮದ ಮೂಲಕ ನಟಿಯರು ಹೆಸರು ಪಡೆದು ರಂಗನಟಿಯರು ಸಾಂಸ್ಕೃತಿಕತೆಯ ವಾರಸುದಾರರಾಗಿದ್ದಾರೆ.

೫.೬. ರಂಗನಟಿಯರು : ಆರ್ಥಿಕ ನೆಲೆಗಳು

ಕೆಲವೊಂದಿಷ್ಟು ನಟಿಯರನ್ನು ಬಿಟ್ಟರೆ ಯಾವ ರಂಗನಟಿಯರ ಆರ್ಥಿಕ ಪರಿಸ್ಥಿತಿ ಸುಧಾರಣೆಯಲ್ಲಿಲ್ಲ. ಹಾಗೂ ಉತ್ತಮವಾಗಿಯಂತೂ ಇಲ್ಲವೇ ಇಲ್ಲ. "ಈ ನಟಿಯರಿಗೆ ಮನೆ ಇಲ್ಲ, ನೆಲೆಯಿಲ್ಲ, ಸಮಾಜದಲ್ಲಿ

ಬೆಲೆಯೂ ಇಲ್ಲ." ನಟಿಯರ ದೈನಂದಿನ ಬದುಕು ತುಂಬಾ ದುಸ್ತರವಾಗಿದೆ. ಕೆಲ ನಟಿಯರು ಸರಕಾರದ ಆಶ್ರಯ ಮನೆಗಳಲ್ಲಿ ವಾಸಿಸುತ್ತಿದ್ದು, ಇನ್ನೂ ಕೆಲ ನಟಿಯರು ತಮ್ಮ ಹಿರಿಯರು ಮಾಡಿರುವ ಮನೆ, ಗುಡಿಸಲು ಹಾಗೂ ತಗಡಿನ ಚಾವಣಿ ಹೊಂದಿರುವ ಚಿಕ್ಕ ಚಿಕ್ಕ ಮನೆಗಳಲ್ಲಿ ಅವರು ವಾಸಿಸುತ್ತಿದ್ದಾರೆ. ನಾಟಕಗಳಲ್ಲಿ ಒಂದೇ ಅವರು ಒಳ್ಳೆಯ ಬಟ್ಟೆಗಳನ್ನು ತೊಟ್ಟು, ನಾಟಕಗಳಿಗಾಗಿಯೇ ಇರುವ ಆಭರಣಗಳನ್ನು ತಾವು ಇಟ್ಟುಕೊಂಡಿರುತ್ತಾರೆ. ಆದರೆ ದೈನಂದಿನ ಉಪಜೀವನಕ್ಕೆ ಅವರು ಬೇರೆದಾರಿಯನ್ನು ಕಂಡು ಕೊಂಡಿರುವುದು ಅನಿವಾರ್ಯತೆಯನ್ನು ತೋರಿಸುತ್ತದೆ.

ನಾಟಕಗಳಿಂದ ಬಂದ ಸಂಭಾವನೆಯನ್ನೇ ಬಳಸಿ ನಾಟಕದ ಬಟ್ಟೆ, ಅಲಂಕಾರಿಕ ಆಭರಣ ಹಾಗೂ ಮೇಕಪ್ ಸಾಮಾನುಗಳನ್ನು ಕೊಂಡುಕೊಂಡು ಆ ಸಂಭಾವನೆಯಿಂದ ನಿತ್ಯ ಜೀವನದ ನಿರ್ವಹಣೆಯೂ ಕಷ್ಟದಾಯಕ ವಾಗಿದೆ ಎನ್ನುತ್ತಾರೆ. ಈ ರಂಗಭೂಮಿ ಕಲಾವಿದೆಯರು ಮೊದ ಮೊದಲು ೫ ಹಾಗೂ ೧೦, ೨೫ ರೂಪಾಯಿ ಗಳಿಗೆ ರಂಗಭೂಮಿಯ ಸೇವೆಯನ್ನು ಮಾಡಿದ್ದಾರೆ. ವೃತ್ತಿಕಂಪನಿಗಳನ್ನು ಬಿಟ್ಟು ಬಂದ ಮೇಲೆ ಸ್ವತಃ ಸುಭದ್ರಮ್ಮನವರಿಗೆ ರಕ್ತರಾತ್ರಿ ನಾಟಕದಲ್ಲಿ ದ್ರೌಪತಿ ಪಾತ್ರಕ್ಕೆ ೫೦ ರೂ. ಸಂಬಳವನ್ನು ನೀಡಿದ್ದು, ಸುಭದ್ರಮ್ಮನವರಿಗೆ ಪರಮಾನಂದವಾಯಿತೆಂದು ಅವರೇ ಹೇಳುತ್ತಾರೆ. ಈ ಸಂದರ್ಭವನ್ನು ಕಂಡ ಸುಭದ್ರಮ್ಮ ಗ್ರಾಮೀಣ ರಂಗಭೂಮಿಯ ಹವ್ಯಾಸಿಕಲಾವಿದರೊಂದಿಗೆ ಪಾತ್ರಗಳನ್ನು ಮಾಡಲು ಆರಂಭಿಸಿದರು. ಪ್ರಾರಂಭದಲ್ಲಿ ಈ ಹಂತದಲ್ಲಿರುವ ಸಂಭಾವನೆಯು ಸುಭದ್ರಮ್ಮನವರ ವರ್ಚಸ್ಸಿಗೆ ತಕ್ಕಂತೆ ಬೇಡಿಕೆ ಹೆಚ್ಚಾಗಿ, ಸಂಭಾವನೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಬಂದಿತು. ಈ ಧೈರ್ಯವೇ ಸುಭದ್ರಮ್ಮ ತಮ್ಮ ಜೀವನದಲ್ಲಿ ಗಟ್ಟಿಯಾಗಲು, ನೆಲೆಗೊಳ್ಳಲು ಸಾಧ್ಯವಾಯಿತು. ಇಡೀ ಬಳ್ಳಾರಿ ಜಿಲ್ಲೆಯಲ್ಲದೇ ರಾಯಚೂರು, ಧಾರವಾಡ, ದಾಂಡೇಲಿ, ಶಿಗ್ಗಾಂವ, ಹಾವೇರಿ, ಬೆಂಗಳೂರು ಮುಂತಾದ ಕಡೆಯಲ್ಲಿ ರಕ್ತರಾತ್ರಿಯ 'ದ್ರೌಪತಿ'ಯಾಗಿ, ಹೇಮರೆಡ್ಡಿ 'ಮಲ್ಲಮ್ಮ'ನಾಗಿ ನಾಡಿನಾದ್ಯಂತ ಮೇರು ನಟಿ ಎನಿಸಿದ್ದಾರೆ. ನಟಿಯರ ವರ್ಚಸ್ಸಿಗೆ ತಕ್ಕಂತೆ ಸಂಭಾವನೆ ಹೆಚ್ಚಾಗುತ್ತದೆ ಎನ್ನುವುದಕ್ಕೆ ಸುಭದ್ರಮ್ಮನವರೇ ಪ್ರತೀಕ. ನಮ್ಮ ಜಿಲ್ಲೆಯಲ್ಲಿ ಆಗಲಿ, ಹೊರ ಜಿಲ್ಲೆಯಲ್ಲಾಗಲೀ ಎಂತಹ ಕುಗ್ರಾಮಕ್ಕೂ ಕರೆದರೂ ತಾವು ಬೇಸರಿಸಿಕೊಳ್ಳದೇ ಗ್ರಾಮೀಣ ರಂಗಭೂಮಿಗೆ ತೆರಳುತ್ತಾರೆ.

ಈ ರೀತಿಯ ಸಂಭಾವನೆಯನ್ನು ಈಗ ನಟಿಯರು ಪಡೆಯುತ್ತಿದ್ದಾರೆ. ಮೊದಮೊದಲು ಕೆಲವು ನಟಿಯರು ಕಡಿಮೆ ಸಂಭಾವನೆಯನ್ನು ಪಡೆದು, ಇತ್ತೀಚೆಗೆ ಹೆಚ್ಚಿನ ಸಂಬಳವನ್ನು ಪಡೆಯುತ್ತಿದ್ದಾರೆ. ಇದಕ್ಕೆ ಅವರ ವರ್ಚಸ್ಸು, ನಾಟಕದ ಬೇರೆ ಕ್ಷೇತ್ರಗಳ ಆಯ್ಕೆಯೂ ನಟಿಯರ ಸಂಭಾವನೆಯನ್ನು ಹೆಚ್ಚಿಸಿದೆ.

ಬಳ್ಳಾರಿಯಲ್ಲಿ ಸುಭದ್ರಮ್ಮನನ್ನು ಬಿಟ್ಟರೆ ಇನ್ನುಳಿದ ರಂಗನಟಿಯರೆಲ್ಲರೂ ಬಯಲಾಟವನ್ನು ಆಯ್ಕೆ ಮಾಡಿ ಕೊಂಡಿದ್ದು ಆ ಕ್ಷೇತ್ರದಲ್ಲಿಯೇ ಸೇವೆಯನ್ನು ಮಾಡುತ್ತಿದ್ದಾರೆ.

ಹೀಗೆ ರಂಗನಟಿಯರಿಗೆ ಸಾಮಾಜಿಕ ನಾಟಕಗಳಲ್ಲಿ ಕಡಿಮೆ ಸಂಭಾವನೆ ಕೊಡುತ್ತಾರೆ. ಬಯಲಾಟಗಳಲ್ಲಿ ಸಂಭಾವನೆಯು ಹೆಚ್ಚಾಗಿರುತ್ತದೆ. ಆದ್ದರಿಂದ ಹಲವಾರು ರಂಗನಟಿಯರು ನಾವೇ ಸಂಭಾವನೆ ದೃಷ್ಟಿಯಿಂದ ಬಯಲಾಟವನ್ನೇ ಆಡುತ್ತೇವೆ ಎನ್ನುತ್ತಾರೆ.

ಸಾಮಾಜಿಕ ನಾಟಕ ಕಡಿಮೆ ಬಯಲಾಟಕ್ಕೆ ಹೆಚ್ಚು ಸಂಭಾವನೆ. ವರ್ಷದಲ್ಲಿ ನಾವು ಆರು ತಿಂಗಳು ದುಡಿದುಕೊಂಡು ಇನ್ನಾರು ತಿಂಗಳು ಆರಾಮವಾಗಿ ಇರುತ್ತೇವೆ.

ರಂಗನಟಿಯರ ಸಂಭಾವನೆ

ರಂಗನಟಿಯರ ಹೆಸರು	ಹಿಂದೆ ನೀಡುತ್ತಿದ್ದ ಸಂಭಾವನೆ	ಪ್ರಸ್ತುತದಲ್ಲಿ ನೀಡುವ ಸಂಭಾವನೆ
ಬಳ್ಳಾರಿ ಸುಜಾತಮ್ಮ	೨೫/-	೩೦೦೦/- (ಸ್ವತಃ ಕಂಪನಿ ಮಾಲಿಕರು)
ಬಳ್ಳಾರಿ ಲಲಿತಮ್ಮ	೪೦೦/-	(ಸ್ವತಃ ಕಂಪನಿ ಮಾಲಿಕರು)
ಕೆ.ವರಲಕ್ಷ್ಮಿ	೫೦೦/-	೩೦೦೦/-
ಜ್ಯೋತಿ ಬಳ್ಳಾರಿ	೫೦೦/-ಕರ್ನಾಟಕದಲ್ಲಿ	೨೦೦೦/- (ಆಂಧ್ರದಲ್ಲಿ)
ಸುಭದ್ರಮ್ಮ ಮನ್ಸೂರು	೮೦/-	೨೦೦೦/-
ಕೆ.ನಾಗರತ್ನ	೭೦/-	೧೫೦೦/-
ಪಿ.ಪದ್ಮ	೫೦೦/-	೧೫೦೦/-
ಯಳ್ಳಾರ್ತಿ ಚಾಮುಂಡೇಶ್ವರಿ	೫೦೦/-	೩೦೦೦/-
ಎ.ಅಂಜಿನಮ್ಮ	೩೦೦/-	೨೦೦೦/-
ಎನ್.ಸುಮತಿ	೨೫/-	೧೫೦೦/-
ಸೋಗಿರತ್ನ	೬೦/-	೪೦೦೦/-
ಬಿ.ಶಿವಕುಮಾರಿ	೩೦೦/-	೨೦೦೦/-
ಕೆ.ದುಶೀಲ	೨೦೦/-	೧೫೦೦/-
ಟಿ.ಭಾರತಿ (ಬಸಮ್ಮ)	೩೦೦/-	೧೫೦೦/-
ಏಣಗಿ ನೀಲಮ್ಮ	೨೦೦/-	೧೦೦೦/-
ಬೆಳ್ಳಕ್ಕಿ ಚೌಡಮ್ಮ	೨೫/-	೧೦೦೦/-
ಕೊಟ್ಟೂರು ಕಮಲಮ್ಮ	೨೫/-	೧೫೦೦/-
ಬಿ.ಅಂಜಿಜಮ್ಮ	೨೦೦/-	೩೦೦೦/-
ಜಯಮ್ಮ ಕೂಡ್ಲಿಗಿ	೫೦೦/-	೩೦೦೦/-

ಆದರೆ ದುಡಿಯುವ ಆರು ತಿಂಗಳು ತುಂಬಾ ಕಷ್ಟ. ನಿದ್ರೆಗೆಟ್ಟು, ಸರಿಯಾದ ಊಟವಿಲ್ಲದೆ ಪ್ರಯಾಣ ಮಾಡಿ ಕುಡಿಯುವ ನೀರಿನಿಂದ ನಾವು ಅನಾರೋಗ್ಯಕ್ಕೆ ತುತ್ತಾಗುತ್ತೇವೆ. ಎಷ್ಟೇ ಕಷ್ಟವಾದರೂ ನಾವು ಬಯಲಾಟಕ್ಕೆ ಹೋಗುವುದನ್ನು ಬಿಡುವುದಿಲ್ಲ ಎನ್ನುತ್ತಾರೆ. ಯಳ್ಳಾರ್ತಿ ಚಾಮುಂಡೇಶ್ವರಿ ಇನ್ನೂ ಮುಂದುವರೆದು ಸಾಮಾಜಿಕ ನಾಟಕಗಳಲ್ಲಿ ಕುಣಿಯಬೇಕು. ಆದರೆ ಬಯಲಾಟದಲ್ಲಿ ಕಂಠ ಸರಿಯಾಗಿದ್ದರೆ ಸಾಕು, ನಿಂತಲ್ಲೇ ಹಾವ ಭಾವ ಮಾಡುತ್ತ ಮಾತನ್ನು ಸರಿಯಾಗಿ ಹೇಳಿ ಹಾಡಿಬಿಟ್ಟರೆ ಬಯಲಾಟದ ಜನರು ನಮ್ಮನ್ನು ಬಿಡುವುದೇ

ರಂಗನಟಿಯರು	ಸಾಮಾಜಿಕ ನಾಟಕದಲ್ಲಿ ಸಂಭಾವನೆ (ಪ್ರಾರಂಭದಲ್ಲಿ)	ಬಯಲಾಟದಲ್ಲಿ ಸಂಭಾವನೆ (ಪ್ರಸ್ತುತ)
ಬಿ.ಅಂಬುಜಮ್ಮ	೧೫೦ - ೧೦೦೦	೩೦೦೦
ಯಳ್ಳಾರ್ತಿ ಚೌಮುಂಡೇಶ್ವರಿ	೫೦೦ - ೧೫೦೦	೩೦೦೦
ಬಿ.ನಾಗಮ್ಮ	೫೦೦ - ೮೦೦	೧೦೦೦
ಮೀನಳ್ಳಿ ಪಾರ್ವತಮ್ಮ	೧೫೦ - ೮೦೦	೨೦೦೦
ಜಯಮ್ಮ ಕೂಡ್ಲಿಗಿ	೨೦೦ - ೧೫೦೦	೩೦೦೦
ಎ.ಅಂಜಿನಮ್ಮ	೧೫೦ - ೧೫೦೦	೩೦೦೦
ಬಿ.ಉಷಾರಾಣಿ	೩೦೦ - ೧೦೦೦	೨೦೦೦
ರಂಗವೇಣಿ ಬಳ್ಳಾರಿ	೪೦೦ - ೮೦೦	೧೨೦೦
ಕಮಲಾ ಕೂಡ್ಲಿಗಿ	೩೦೦ - ೧೫೦೦	೨೦೦೦
ನಾಗರತ್ನ ವಿರುಪಾಪುರ	೩೦೦ - ೧೦೦೦	೨೦೦೦

ಇಲ್ಲ ಎನ್ನುತ್ತಾರೆ. ಇಂದಿನ ವ್ಯಾವಹಾರಿಕ ದೃಷ್ಟಿಯಿಂದ ಇದು ಸರಿಯಾಗಿದೆ. ಅವರಿಗೆ ಇಲ್ಲಿ ಸೇವೆಗಿಂತ ಹಸಿವು, ಆರ್ಥಿಕ ಭದ್ರತೆಯೇ ಮುಖ್ಯವಾಗಿರುವುದರಿಂದ ಆಸಕ್ತಿಗಿಂತ ಹಣವೇ ಮುಖ್ಯವಾಗಿ ಎಲ್ಲರು ಯಾವ ಸೃಜನವನ್ನು ಬೆಳೆಸಿಕೊಳ್ಳದೇ ಅವೇ ನಾಲ್ಕಾರು ನಾಟಕಗಳಾದ ಪ್ರಮೀಳಾ ದರ್ಬಾರ, ಮಂಡೋದರಿ, ಪಾಂಡು ವಿಜಯ, ದುಶ್ಯಾಸನ ಕಥೆ, ಕುರುಕ್ಷೇತ್ರ, ಲವಕುಶ ಕಾಳಗ, ಗಿರಿಜಾ ಕಲ್ಯಾಣ, ಪಾರ್ಥ ವಿಜಯ, ಅಕ್ಷಯಾಂಬರ, ರತಿ ಕಲ್ಯಾಣ ಮುಂತಾದವುಗಳನ್ನು ಹೆಚ್ಚು ಆಡುತ್ತಾರೆ. ಇಲ್ಲಿ ವ್ಯಾವಹಾರಿಕ ದೃಷ್ಟಿಕೋನವಿರುವುದರಿಂದಲೇ ಅವರು ಸಾಮಾಜಿಕ ನಾಟಕಗಳಿಗೆ ಹೋಗದೇ ಬಯಲಾಟಗಳನ್ನೇ ಆರಿಸಿಕೊಂಡು, ಅವುಗಳಿಗೆ ಸಂಪೂರ್ಣವಾಗಿ ಒಗ್ಗಿಕೊಂಡಿದ್ದಾರೆ. ಆದರೆ ಸಂಪೂರ್ಣವಾಗಿ ಸಾಮಾಜಿಕ ನಾಟಕಗಳಿಗೆ ಹೋಗುವುದನ್ನು ಬಿಟ್ಟಿದ್ದಾರೆ. ಬಳ್ಳಾರಿ, ವಿರುಪಾಪುರ, ಕೂಡ್ಲಿಗಿ ಈ ಊರುಗಳಲ್ಲಿ ಹೆಚ್ಚಾಗಿ ಕೆಲವೊಂದಿಬ್ಬರನ್ನು ಬಿಟ್ಟರೆ ಎಲ್ಲರೂ ಬಯಲಾಟಗಳಿಗೆ ಪಾತ್ರ ಮಾಡಲು ಸಂಭಾವನೆ ಉದ್ದೇಶದಿಂದಲೇ ಹೋಗುತ್ತಿದ್ದಾರೆ.

[illegible]

[illegible]	[illegible]	[illegible]

[illegible]

(ಅಂಕಪಟ್ಟಿಯಲ್ಲಿರುವ ನಟಿಯರೆಲ್ಲರ ಉದ್ದೇಶ ಒಂದೇ ಆಗಿದೆ) ಆದರೆ ಮರಿಯಮ್ಮನಹಳ್ಳಿ ಕಲಾವಿದೆಯರೆಲ್ಲರೂ ಸಾಮಾಜಿಕ, ಸೃಜನ ನಾಟಕಗಳನ್ನು ಮಾಡುತ್ತಿದ್ದಾರೆ. ಆದರೆ ಅವರು ಹೆಚ್ಚಾಗಿ ಸಂಭಾವನೆಯಿಂದ ಬಯಲಾಟಗಳಿಗೆ ಹೋಗುವುದಿಲ್ಲ ಎನ್ನುತ್ತಾರೆ. ಈ ಪರಿಸ್ಥಿತಿಗೆ ಕಾರಣವನ್ನು ಮನ್ನೂರು ಸುಭದ್ರಮ್ಮ ಹಾಗೂ ನಾಗರತ್ನಮ್ಮನವರನ್ನು ಕೇಳಿದಾಗ, "ಅವರು ಬಳ್ಳಾರಿಯ ಸುತ್ತಮುತ್ತ ಬಯಲಾಟವನ್ನು ಆಡುವ ಗ್ರಾಮೀಣ ಹವ್ಯಾಸಿ ಕಲಾವಿದರಿರುವುದರಿಂದ ಅವರೆಲ್ಲರೂ ನೀರಾವರಿ ಜನಗಳು ಆದ್ದರಿಂದ ಅವರು ಬೇಕಾದಷ್ಟು ಖರ್ಚನ್ನು ಮಾಡಿಬಿಡುತ್ತಾರೆ. ಆದ್ದರಿಂದ ಅವರಿಗೆ ಸಂಭಾವನೆ ಹೆಚ್ಚು" ಎನ್ನುತ್ತಾರೆ. ಈ ಎಲ್ಲ ದೃಷ್ಟಿಯಿಂದ ನೋಡಿದಾಗ ಹೊರಗಿನ ಯಾವುದೇ ಭದ್ರತೆ ಇಲ್ಲದಾಗ, ನಟಿಯರು ಈ ಕ್ಷೇತ್ರವನ್ನು ಆರಿಸಿಕೊಂಡಿದ್ದು, ಅವರ ಮನೆಯ ಪರಿಸ್ಥಿತಿ ಸುಧಾರಿಸಿ ದೈನಂದಿನ ಜೀವನಕ್ಕೆ ಯಾವುದೇ ತೊಂದರೆ ಇಲ್ಲದೆ ಸುಗಮವಾಗಿ ಸಾಗಿ ನೆಮ್ಮದಿಯಿಂದ ಜೀವಿಸುತ್ತಿದ್ದೇವೆ ಎನ್ನುತ್ತಾರೆ ಬಿ.ಅಂಬುಜಮ್ಮ (ಬಳ್ಳಾರಿ, ಕ್ಷೇತ್ರಕಾರ್ಯ ಸಂದರ್ಶನ, ೨ ಜನವರಿ ೨೦೦೨).

ಸಾಮಾಜಿಕ ವೃತ್ತಿ ಮತ್ತು ರಂಗ ವೃತ್ತಿ : ನಟಿಯರು ಹೆಚ್ಚಾಗಿ ವರ್ಷದಲ್ಲಿ ಕೆಲವಾರು ತಿಂಗಳು ರಂಗವೃತ್ತಿಯನ್ನು ಮಾಡುತ್ತಿದ್ದರೂ ತಮ್ಮ ಬಿಡುವಿನ ವೇಳೆಯಲ್ಲಿ ಇವರು ಸಾಮಾಜಿಕ ವೃತ್ತಿಗೆ ಅಂಟಿಕೊಂಡಿ ದ್ದಾರೆ. ದೈಹಿಕ ಸುಖವನ್ನು ನೀಡಿ ಅದರಿಂದ ಸಂಭಾವನೆಯನ್ನು ಪಡೆದು ತಮ್ಮ ಜೀವನ ನಿರ್ವಹಿಸುತ್ತಿದ್ದಾರೆ.

ಹೆಸರಿಗೆ ಇವರು ರಂಗನಟಿಯರಾಗಿದ್ದರೂ, ಸಾಮಾಜಿಕವಾಗಿ ವೇಶ್ಯೆಯರಾಗಿದ್ದಾರೆ. ಇನ್ನೂ ಕೆಲವರು ಮದುವೆಯನ್ನು ಮಾಡಿಕೊಂಡು ಅಥವಾ ಒಬ್ಬ ವ್ಯಕ್ತಿಯನ್ನು ಸಂಗಾತಿಯಾಗಿ ಪಡೆದು, ಕೌಟುಂಬಿಕ ನೆಲೆಯಲ್ಲಿ ಸುಭದ್ರತೆಯ ಜೀವನವನ್ನು ನಡೆಸುತ್ತಿದ್ದಾರೆ. ಸಾಮಾಜಿಕವಾಗಿ ಅವರ ತಾಯಂದಿರು ಹೆಚ್ಚಾಗಿ ದೇವದಾಸಿ ಸಂಪ್ರದಾಯ ಹಾಗೂ ಮುತ್ತು ಕಟ್ಟಿಸಿಕೊಳ್ಳುವಿಕೆಯಂಥಹ ಮೂಢ ಸಂಪ್ರದಾಯಗಳಿರುವುದರಿಂದ, ಈ ಕಾರಣಕ್ಕಾಗಿಯೆ ಇಲ್ಲಿರುವ ಅನೇಕ ರಂಗನಟಿಯರು ಈ ಸಂಪ್ರದಾಯ ಒಪ್ಪಿಕೊಳ್ಳುತ್ತಲೇ ರಂಗವೃತ್ತಿಯನ್ನು ಅವಲಂಬಿಸಿದ್ದಾರೆ. ಈ ರಂಗನಟಿಯರು ಮುಂದೆ ತಮ್ಮ ಮಕ್ಕಳಿಗೆ ಈ ಸಂಪ್ರದಾಯವನ್ನು ಮುಂದುವರಿಸಲು ಇಚ್ಛಿಸುವುದಿಲ್ಲ (ಕೂಡ್ಲಿಗಿ ತಾಲೂಕಿನಲ್ಲಿ ಕ್ಷೇತ್ರಕಾರ್ಯ ಸಂದರ್ಶನ. ಎಲ್ಲಾ ರಂಗನಟಿಯರ ಅಭಿಪ್ರಾಯ ಇದಾಗಿತ್ತು). ನಟಿಯರು ತಮ್ಮ ವೃತ್ತಿಯನ್ನು ಕನಿಷ್ಠವೆಂದು ಪರಿಗಣಿಸಿದ್ದಾರೆ. ಈ ಕಾರಣದಿಂದ ಇದನ್ನು ವಂಶಪಾರಂಪರ್ಯವಾಗಿ ಬೆಳೆಸಲು ನಿರಾಕರಿಸುತ್ತಾರೆ.

ಇಲ್ಲಿಯೇ ಸಾಮಾಜಿಕ ಮತ್ತು ರಂಗವೃತ್ತಿಯ ನಡುವೆ ಇವರಿಗಿರುವ ವೈರಾಗ್ಯವನ್ನು ಗುರುತಿಸಬಹುದು. ಈ ಬಗೆಯ ಆರ್ಥಿಕ ನೆಲೆಯಲ್ಲಿ ರಂಗನಟಿಯರಿಂದು ಬಾಳುತ್ತಿರುವುದು ಸಮಾಜದ ಅಮಾನವೀಯತೆಯ ಕುರುಹು ಆಗಿದೆ.

ಬಯಲಾಟದ ಕಂಪನಿಯನ್ನು ಕಟ್ಟಿಕೊಂಡಿರುವ ಬಳ್ಳಾರಿ ಸುಜಾತಮ್ಮ ಈ ಹಿನ್ನೆಲೆಯಿಂದಲೇ ಅವರು ಬಯಲಾಟವನ್ನು ವರ್ಗ ಪ್ರಮಾಣದ ಸೇವೆಯಲ್ಲಿ ನಿರತರಾಗಿದ್ದಾರೆ. ಆಂಧ್ರಗಡಿ ಭಾಗಗಳಲ್ಲಿರುವ ಜನರು ರಂಗಭೂಮಿಯ ಆಸಕ್ತಿಯಿಂದ ಪ್ರತಿವರ್ಷ ಹಬ್ಬ ಹುಣ್ಣಿಮೆ ಹರಿದಿನಗಳಲ್ಲಿ ನಾಟಕವನ್ನು ಅಥವಾ ಬಯಲಾಟವನ್ನು ಆಡಲೇಬೇಕು. ವರ್ಷದಲ್ಲಿ ಅವರು ಬಣ್ಣವನ್ನು ಹಚ್ಚಿಕೊಳ್ಳಬೇಕು. ಕಲೆಯ ಹುಟ್ಟಿರುವ ಕಲಾವಿದ ರಾಜನಾಗಿ, ಕೂಲಿಂಗ್ ಗ್ಲಾಸ್ ಹಾಕಿಕೊಂಡು ಸಿಗರೇಟು ಸೇದುತ್ತಾ ತನ್ನದೇ ಆದ ಗತ್ತಿನಲ್ಲಿ ಬಣ್ಣ ಹಚ್ಚಿ ವೇದಿಕೆಯ ಮೇಲೆ ಮೆರೆಯುವುದೆಂದರೆ ಹಬ್ಬವನ್ನೇ ಅವರು ಆಗ ಆಚರಿಸಿದಂತಾಗುವುದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇಂಥ ನಟಿಯನ್ನು ಕರೆಸುವುದು ಆಕೆಯನ್ನು, ತಮ್ಮ ತೊಡೆಯಮೇಲೆ ಕೂಡಿಸಿಕೊಳ್ಳುವುದು, ಹಾ. ಪ. ಕನಕಾಂಗಿ, ಹಾ. ಪ. ಪ್ರಾಣಕಾಂತೆ, ಪ್ರಾಣವಲ್ಲಭೇ ಹೀಗೆ ರಾಣಿಯನ್ನು ಸಂಬೋಧಿಸಿ ತಮ್ಮ ಕಲೆಯ ನಟನಾ ಅಭಿವ್ಯಕ್ತಿಯನ್ನು ವೇದಿಕೆಯಲ್ಲಿ ಬಿಂಬಿಸಿ ತಮ್ಮ ಪಾತ್ರದ ಅನನ್ಯತೆಯನ್ನು ಗುರುತಿಸಿಕೊಳ್ಳುತ್ತಾರೆ.

ಪ್ರತಿವರ್ಷ ಹವ್ಯಾಸಿ ಕಲಾವಿದರು ನಟಿಯರಿಗೆ ಬೇಡಿಕೆಗೆ ತಕ್ಕಂತೆ, ವರ್ಚಸ್ಸಿಗೆ ತಕ್ಕಂತೆ ಸಂಭಾವನೆ ಹೆಚ್ಚಿಸಿ ನಾಟಕವನ್ನು ಆಡುತ್ತಾರೆ. ಈ ಎಲ್ಲಾ ಕಾರಣಗಳಿಂದ ಇಂದು ವಿರುಪಾಪುರ, ಕೂಡ್ಲಿಗಿ ಹಾಗೂ ಬಳ್ಳಾರಿಯ ನಟಿಯರು ಬಯಲಾಟದಲ್ಲಿ ಪಾತ್ರವಹಿಸಲು ಮುಂದಾಗಿದ್ದಾರೆ. ಇಂಥ ಸಮಯದಲ್ಲೂ ಕೆಲವು ನಟಿಯರು ಸಾಮಾಜಿಕ, ಪೌರಾಣಿಕ ನಾಟಕಗಳನ್ನೇ ಮಾಡುತ್ತಾ ಯಾವ ಅತೀ ಆಸೆ, ವ್ಯಾಮೋಹಕ್ಕೆ ಒಳಗಾಗದೇ ತಮ್ಮದೇ ಆದ ದಾಟಿಯಲ್ಲಿ ವೃತ್ತಿನಿರತರಾಗಿದ್ದಾರೆ. ಸಂಭಾವನೆಯನ್ನು ಹಲವಾರು ದೃಷ್ಟಿಯಿಂದ ನೋಡಲಾಗಿದ್ದು ಅವರ ನಟನಾತಂತ್ರತೆಯ ಕೌಶಲ್ಯತೆ, ಗಾಯನ ಹೀಗೆ ಹಲವಾರು ನಿಟ್ಟಿನಿಂದ ನಟಿಯರು ವರ್ಚಸ್ಸನ್ನು ಮೂಡಿಸಿಕೊಂಡು ತಮ್ಮ ನಟನೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

೫.೨. ರಂಗನಟಿಯರು : ಶೋಷಿತ ನೆಲೆಗಳು

ಭಾರತೀಯ ಸಮಾಜವು ಪುರುಷ ಪ್ರಭುತ್ವದ ಸಮಾಜ. ಪೂರ್ವಕಾಲದಿಂದಲೂ ಹೆಣ್ಣನ್ನು ಪಶುವನ್ನಾಗಿ ಬಳಸಿಕೊಂಡಿರುವುದೇ ಹೆಚ್ಚು. ಈ ವ್ಯವಸ್ಥೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಯು ಕಂಡುಬಂದರೂ ಪೂರ್ತಿಯಾಗಿ ಇಂದು ಹೆಣ್ಣು ಸ್ವತಂತ್ರವಾಗಿಲ್ಲ. ಸ್ವತಂತ್ರವಾಗಿರಲು ಈ ಸಮಾಜ ಎಂದೂ ಬಿಡುವುದಿಲ್ಲ. ಆದ್ದರಿಂದಲೇ ಗಾಂಧೀಜಿ "ಮಧ್ಯರಾತ್ರಿಯಲ್ಲಿ ಎಂದು ನಮ್ಮ ಭಾರತೀಯ ಮಹಿಳೆಯು ಸ್ವತಂತ್ರವಾಗಿ ಓಡಾಡುತ್ತಾಳೋ ಅಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಂತೆ" ಎಂದಿದ್ದಾರೆ. ಹೆಣ್ಣಿಗೆ ಶೋಷಣೆ ಒಂದು ಮಗ್ಗುಲಲ್ಲಿ ಅಲ್ಲ, ಹಲವಾರು ನೆಲೆಯಿಂದಲೂ, ಹಲವಾರು ಸಂದರ್ಭದಿಂದಲೂ. ಅಂದರೆ ಜೀವನದ ಪ್ರತಿಯೊಂದು ಕ್ಷಣ ಆಕೆ ಶೋಷಣೆಯಿಂದಲೇ ಬದುಕುವ ಅನಿವಾರ್ಯ. ಅಮಾನವೀಯ ಪ್ರಸಂಗವೇ ಇಂದು ಭಾರತೀಯ ವ್ಯವಸ್ಥೆಯಲ್ಲಿ ದೈನಂದಿನ ಸ್ಥಿತಿಯಾಗಿದೆ.

ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಗ ಹೀಗೆ ಹೆಣ್ಣು ಹಂತ ಹಂತವಾಗಿ ಶೋಷಣೆಗೊಳಗಾಗುತ್ತಿದ್ದಾಳೆ. ಮೈತ್ರೇಯಿ, ಗಾರ್ಗಿಯಂಥ ಮೇಧಾವಿ ಮಹಿಳಾ ಪಂಡಿತರು, ಧಾರ್ಮಿಕ ವೈಚಾರಿಕ ಮಹಿಳೆ ಅಕ್ಕಮಹಾದೇವಿ, ಶರಣರೂ, ಸ್ವಾತಂತ್ರ್ಯ ಹೋರಾಟದ ಕಿತ್ತೂರು ಚನ್ನಮ್ಮ, ಅಬ್ಬಕ್ಕ, ಝಾನ್ಸಿರಾಣಿ ಲಕ್ಷ್ಮಿಬಾಯಿ, ಪರಿಸರ ಪ್ರೇಮಿ ಗೌರಾದೇವಿ, ಸಾಲುಮರದ ತಿಮ್ಮಕ್ಕ, ಹೋರಾಟಗಾರ್ತಿ ಕಿರಣ್‌ಬೇಡಿ, ರಾಜಕಾರಿಣಿ ಇಂಧಿರಾ ಗಾಂಧಿ ಹೀಗೆ ಹಲವಾರು ಸ್ತ್ರೀ ಧೀಮಂತ ಚೇತನಗಳು ಬದುಕಿ, ಬಾಳಿ ಬೆಳಗಿದರೂ, ಹುಟ್ಟಿ ಬಂದಿದ್ದರೂ ವ್ಯವಸ್ಥೆ ಕಿಂಚಿತ್ ಬದಲಾಗಿಲ್ಲ. ಇಂದಿನ ಜಾಗತೀಕರಣ, ಉದಾರೀಕರಣದಲ್ಲಿ ಹೆಣ್ಣು 'Trade mark' ಆಗಿದ್ದಾಳೆ.

"ಕಲೆಯ ಗಂಧವನ್ನರಿಯದ ಶ್ರೀಮಂತರು, ಪುಢಾರಿಗಳು ಸ್ಫುರದ್ರೂಪಿ ಕಲಾವಿದೆಯನ್ನು ಓಡಿಸಿಕೊಂಡು ಬಂದು ಅವರಿಗಾಗಿ ಕಂಪನಿ ಕಟ್ಟಲು ಮುಂದಾದರು. ಮಂಡಳಿ ಉನ್ಮಾದ ಮತ್ತು ಭೋಗದಿ ಸಾಧನೆ ಎಂದು ಪರಿಗಣಿಸಿದವರು ಇಬ್ಬರು ಮೂವರು ಕಲಾವಿದೆಯರನ್ನು ಉಪಪತ್ನಿಯರನ್ನಾಗಿಯೋ, ಪ್ರೇಯಸಿಯರನ್ನಾಗಿಯೋ ಇಟ್ಟುಕೊಳ್ಳತೊಡಗಿದರು. ಬಣ್ಣದ ಮೈಯಲ್ಲಿ ರಾಣಿಯರಾಗಿ ಅಭಿನಯಿಸುತ್ತಿದ್ದವರ ನಿಜಜೀವನ ಅಷ್ಟೇ ಕ್ರೂರವಾಗಿಯೂ ಪರಿಣಮಿಸುತ್ತಿತ್ತು. ಮಾಲಿಕರು ಕಲಾವಿದರು ತಮ್ಮ ಹೆಂಡತಿ ಮಕ್ಕಳನ್ನು ಬೇರೆ ಊರುಗಳಲ್ಲಿ ಬಿಟ್ಟು, ಬಂದಿರುವುದರಿಂದ, ಮಂಡಳಿಯಲ್ಲಿ ಗಂಡು ಹೆಣ್ಣುಗಳೆಲ್ಲಾ ಒಟ್ಟಾಗಿ ಇರುವುದರಿಂದ ಮನಸ್ಸುಗಳು ಒಂದಾಗುವುದು ಸಹಜ. ಆದರೆ ಇಂಥ ಸಂಬಂಧಗಳು ಸ್ತ್ರೀಯರ ಜೀವನಕ್ಕೆ ಆಧಾರವಾಗುತ್ತಿದ್ದವೆಂದು ಹೇಳುವಂತಿಲ್ಲ. ಮಂಡಳಿ ನಿಂತರೆ ಕಲಾವಿದ ಸಂಘವನ್ನು ಬದಲಾಯಿಸಿದರೆ ಉಪಪತ್ನಿಯರು ನಿರಾಶ್ರಿತರಾಗುತ್ತಿದ್ದರು. ಕಲಾವಿದರು ಮಂಡಳಿ ಬದಲಿಸಿದಷ್ಟೇ ಸುಲಭವಾಗಿ ಕಲಾವಿದೆ ಪತ್ನಿಯರನ್ನು ಬದಲಾಯಿಸುತ್ತಾರೆ. ಕಾಯ್ದೆಬದ್ಧ ಮದುವೆಯಾಗದ ಕಾರಣ ಮುಂದೆ ಇವರೆಲ್ಲಾ ಬೀದಿ ಪಾಲಾಗಬೇಕಾಗುತ್ತದೆ. ತಾರುಣ್ಯ ಇರುವವರೆಗೆ ಮಾತ್ರ ರಂಗಜೀವನ, ನಾಯಕಿಪಟ್ಟ ವಯಸ್ಸಾದಂತೆ ಸಂಬಳದಲ್ಲಿ ಕಡಿತ ಹೆಚ್ಚುತ್ತದೆ. ಹೀಗಾಗಿ ಮುಪ್ಪಿನಲ್ಲಿ ಕಲಾವಿದೆಯರು ಕಷ್ಟದಲ್ಲಿ ಕಾಲ ಕಳೆಯಬೇಕಾಗುತ್ತದೆ (ಲೇ: ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕ ವೃತ್ತಿರಂಗಭೂಮಿ ನಡೆದು ಬಂದದಾರಿ ಪುಟ, ೪೩). ಹೀಗೆ ರಂಗನಟಿಯರ ಶೋಷಣೆಗೆ ಹಲವಾರು ಕಾರಣಗಳಿವೆ. ನಟಿ (ಹೆಣ್ಣಿಗೆ) ಅಸ್ತಿತ್ವವಿಲ್ಲದಿದ್ದಾಗ ಅವಳು ಬದುಕಿರುವುದೇ ಒಂದು ತಪ್ಪಾಗಿ ವ್ಯವಸ್ಥೆಯಲ್ಲಿ ಕಂಡು ಬರುತ್ತದೆ.

೧. **ವೃತ್ತಿಯಿಂದ ಶೋಷಣೆ :** ರಂಗನಟಿ ವೃತ್ತಿಯನ್ನಾಗಿ ಮಾಡಿಕೊಂಡು ಹಳ್ಳಿಯ ಕಲಾವಿದರೊಂದಿಗೆ ಪಾತ್ರಮಾಡಲು ಬರುವಾಗ ಹಲವಾರು ಶೋಷಣೆಗೆ ಒಳಗಾಗಬೇಕಾಗಿದೆ. ಹಳ್ಳಿಯ ಜನರು ನಟಿಯರನ್ನು ನಾಟಕಕ್ಕೆ ಕರೆಸಿದ್ದಾರೆ ಎನ್ನುವುದಿಲ್ಲ. ಬದಲಾಗಿ ಸೂಳೆಯರನ್ನು ಕರೆಸಿದ್ದಾರೆ ಎನ್ನುತ್ತಾರೆ. ಆಕೆ ಸೂಳೆಯಾದರೇನು ಬಿಟ್ಟರೇನು? ಆಕೆ ಸೂಳೆಯೇ ಎಂಬಂತೆ ಜನರು ಇವರನ್ನು ಕಾಣುತ್ತಾರೆ. ಜನರು ನಾಟಕದವರೆಂದರೆ ಕೀಳು. ಇವರನ್ನು ಉನ್ನತ ವರ್ಗ, ಶ್ರೇಣಿಯವರು ಎಂದು ಯಾರು ಕರೆಯುವುದಿಲ್ಲ. ಹಾಗೂ ಗೌರವಿಸುವುದಿಲ್ಲ

[illegible]

ಕೂಡ. ಇವರಿಗೆ ವೃತ್ತಿಯಿಂದ ನೆಮ್ಮದಿ ಎನ್ನುವುದು ಸಿಕ್ಕೇ ಇಲ್ಲ ಎನ್ನುತ್ತಾರೆ ಕೊಟ್ಟೂರು ಕೋಮಲ. ಅದಕ್ಕಾಗಿ ನನ್ನ ಮಗಳನ್ನು ನಾನು ಹಾಡು ಹೇಳಿಸಲಿಲ್ಲ, ನಾಟ್ಯ ಮಾಡಿಸಲಿಲ್ಲ. ನನ್ನ ಬಾಳೇ ಮಗಳಿಗೆ ಬೇಡವೆಂದು ನನ್ನ ವೃತ್ತಿಯಿಂದ ಮಗಳನ್ನು ಬಹಳ ದೂರವಿಟ್ಟು ಬೆಳೆಸಿದೆ, ಓದಿಸಿದೆ. ಒಂದು ನೌಕರಿ ಮಾಡುತ್ತಾ ಮಗಳು ಗಂಡ ಮಕ್ಕಳೊಂದಿಗೆ ಸಮಾಜದಲ್ಲಿ ಗೌರವಾನ್ವಿತಳಾಗಿ, ಸುಖವಾಗಿ ನೆಮ್ಮದಿಯಿಂದ ಬದುಕುತ್ತಿದ್ದಾಳೆ ಎಂದು ದುಃಖವನ್ನು ತೋಡಿಕೊಳ್ಳುತ್ತಾರೆ. ಎಲ್ಲ ರಂಗನಟಿಯರ ಅಳಲು ಒಂದೇ. ನಮ್ಮ ಪರಿಸ್ಥಿತಿ ಎಂದಿಗೂ ನಮ್ಮ ಮಕ್ಕಳಿಗೆ ಬರಬಾರದು. ನಾವು ಅನುಭವಿಸಿರುವುದು ಸಾಕು ನಮ್ಮ ಮಕ್ಕಳು ಇದನ್ನು ಅನುಭವಿಸಬಾರದು ಅವರಿಗೆಂದೂ ಇಂಥ ಸ್ಥಿತಿ ಬರಬಾರದು. ಅವರು ನಮ್ಮಂತೆ ಕುಬ್ಜರಾಗಿ, ಕೀಳರಿಮೆಯಿಂದ ಬಾಳುವುದು ಬೇಡ. ಅವರು ಎಲ್ಲರಂತೆ ತಲೆ ಎತ್ತಿ ಬದುಕಬೇಕೆಂದು ಯಾವ ನಟಿಯರು ನಮ್ಮ ಮಕ್ಕಳನ್ನು ರಂಗಭೂಮಿಗೆ ಕಳುಹಿಸುತ್ತೇವೆ ಎನ್ನುವುದಿಲ್ಲ. ಬದಲಾಗಿ ಮದುವೆ ಮಾಡಿಕೊಟ್ಟಿದ್ದೇವೆ ಎನ್ನುತ್ತಾರೆ.

ಬದುಕು ನಾವಂದುಕೊಂಡಂತೆ ನಡೆಯುವುದಿಲ್ಲ. ಎಲ್ಲದಕ್ಕೂ ನಾವು ಸಿದ್ಧರಾಗಿಯೇ ಇರಬೇಕು. ಅಂಥ ಧೈರ್ಯ ನಮ್ಮ ಮಕ್ಕಳಿಗೆ ಎಲ್ಲಿ ಬರಬೇಕು. ರಂಗನಟಿಯರೆಂದರೆ ಒಂದು ಕಾಲದಲ್ಲಿ ಗೌರವ, ಮನ್ನಣೆಗಳಿದ್ದವು. ಆದರೆ ಇಂದು ನಟಿಯರ ಸ್ಥಿತಿ ತೀರಾ ಹೀನಾಯವಾಗಿದೆ. ಅವರು ಒಳ್ಳೆಯವರಿದ್ದರೂ ಹಾಗೆಂದು ಯಾರೂ ಪರಿಗಣಿಸುವುದಿಲ್ಲ. ಬಾವಿಯೊಳಗಿನ ಕಪ್ಪೆ ನೀರು ಕುಡಿದಿಲ್ಲ ಎಂದು ಹೇಗೆ ಹೇಳಲು ಸಾಧ್ಯ ಎನ್ನುತ್ತಾರೆ. ಮರಿಯಮ್ಮನಹಳ್ಳಿಯ ಎಸ್.ರೇಣುಕಾ. ಇಂಥಹ ಅನುಭವಗಳೇ ನಟಿಯರಿಗೆ ಹಲವಾರು ಪಾಠಗಳನ್ನು ಕಲಿಸಿವೆ. ಈ ವೃತ್ತಿ ಮಾಡುವುದರಿಂದ ನಟಿಯರಿಂದು ಶೋಷಣೆಗೆ ಒಳಗಾಗಿದ್ದಾರೆ.

ಮದುವೆಯಾಗಿ ಒಬ್ಬನ ಜೊತೆ ಕೂಲಿಮಾಡಿದರೂ ಚಿಂತೆಯಿಲ್ಲ. ಇಂಥ ಪರಿಸ್ಥಿತಿ ಯಾವ ಹೆಣ್ಣಿಗೂ ಬೇಡ ಎನ್ನುತ್ತಾರೆ ಕೂಡ್ಲಿಗಿಯ ಕೆ.ಸುಶೀಲ. ಇನ್ನೊಬ್ಬ ಜ್ಯೂ.ಶಿವಕುಮಾರಿ ಎಂಬ ನಟಿಯು "ನಾವು ಕ್ಷೇತ್ರ ಕಾರ್ಯಕ್ಕೆ ಹೋದಾಗ ನಿಮ್ಮಂಥವರು ನಮ್ಮ ಮನೆಗೆ ಬರುವುದೇ ಅಪರೂಪ, ನೀವು ನಮ್ಮ ಮನೆಗೆ ಬಂದಿರುವುದೇ ನಮ್ಮ ಭಾಗ್ಯ" ಎಂದುಕೊಂಡಿದ್ದೇವೆ ಎಂದು ತಮ್ಮ ವೃತ್ತಿಯ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಈ ವೃತ್ತಿ ಯಾವೊಬ್ಬ ಹೆಣ್ಣುಮಗಳಿಗೆ ನೆಮ್ಮದಿಕೊಟ್ಟಿದೆಯೋ ಆ ದೇವರೇ ಬಲ್ಲ. ಎಲ್ಲವೂ ವಿಧಿಯ ಕೈವಾಡ ನಮ್ಮ ಕೈಯಲ್ಲಿ ಏನಿದೆ ಎನ್ನುತ್ತಾರೆ ಕೂಡ್ಲಿಗಿ ಗೀತಾ.

ವಿರುಪಾಪುರ ಕಮಲ ಇವರು ನಾವಾಗಿಯೇ ಈ ವೃತ್ತಿಗೆ ಬರಲಿಲ್ಲ. ಪರಿಸ್ಥಿತಿಯು ಈ ವೃತ್ತಿಗೆ ನಮ್ಮನ್ನು ಇಳಿಸಿತು. ಆದರೆ ಕೆಲವರು ಸ್ವ ಆಸಕ್ತಿಯಿಂದ ಬಂದಿದ್ದರೂ ಅವರಿಗೆ ಈ ವೃತ್ತಿ ಒಂದಲ್ಲ ಒಂದು ವೇಳೆ ಜೀವನಾಗಿರುತ್ತದೆ. ಪರಿಸ್ಥಿತಿಯು ಹೀಗಿರುವಾಗ ಹೊಂದಿಕೊಳ್ಳುವ ಅನಿವಾರ್ಯತೆ ನಮ್ಮ ನಟಿಯರದಾಗಿದೆ. ಒಂದು ರೀತಿಯಲ್ಲಿ ನಾವೊಂದು ಬಲಿಪಶುಗಳಾಗಿದ್ದೇವೆ ಎನ್ನುತ್ತಾರೆ ಪುರಸಭೆ ಅಧ್ಯಕ್ಷೆ ಕೂಡ್ಲಿಗಿ ಜಯಮ್ಮ.

ಯಾರಿಗೆ ಮಾರ್ಯದೆ ಬೇಡ ಹೇಳಿ, ಎಲ್ಲರೂ ಮರ್ಯಾದೆಗಾಗಿ ಹೆಣಗಾಡುವವರೇ. ಆದರೆ ಪರಿಸ್ಥಿತಿಗಳು ನಮಸ್ನು ಪ್ರಪಾತಕ್ಕೆ ತಳ್ಳಿವೆ. ಇಂಥ ತಿಳುವಳಿಕೆ ನಮಗಿದಿದ್ದರೆ ನಮ್ಮ ವೃತ್ತಿಯನ್ನೇ ನಾವು ಅನುಸರಿಸುತ್ತಿರಲಿಲ್ಲ. ಬದಲಾಗಿ ಮೌಲ್ಯಾಧಾರಿತ ಎಂದು ಈ ಸಮಾಜದಲ್ಲಿ ಹೇಳುವ ವ್ಯವಸ್ಥೆಯನ್ನೇ ಕಟ್ಟಿಕೊಂಡು ಬಿಡುತ್ತಿದ್ದೆವು (ಎ.ಅಂಜಿನಮ್ಮ, ಕ್ಷೇತ್ರಕಾರ್ಯ ಸಂದರ್ಶನ, ವಿರುಪಾಪುರ, ೫ ಏಪ್ರಿಲ್ ೨೦೦೩). ಅಂದರೆ ಇವರಿಗೆ ವೃತ್ತಿ ಬಗ್ಗೆಯೇ ಒಂದು ರೀತಿಯಲ್ಲಿ ಬೇಸರ ನಿರ್ಲಿಪ್ತತೆ ಉಂಟಾಗಿದೆ. ಇದಕ್ಕೆ ಹಲವಾರು ರೀತಿಯ ಸಾಮಾಜಿಕ, ರಾಜಕೀಯ, ನೈತಿಕ ಕಾರಣಗಳೂ ಇವೆ.

ರಂಗನಟಿಯರ ಮಕ್ಕಳು ಇಂದು ನಾವು ನಟಿಯರ ಮಕ್ಕಳೆಂದೂ ಹೊರಗಡೆ, ಸ್ನೇಹಿತರ ಜೊತೆಗೆ ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಅಥವಾ ರಂಗನಟಿಯ ಅಣ್ಣ, ತಮ್ಮ, ತಂದೆ ಎಂದು ಹೇಳಿಕೊಳ್ಳಲು ಪುರುಷಶಾಹಿಗಳು ಒಪ್ಪುವುದೇ ಇಲ್ಲ. ಇನ್ನೂ ವಿಶೇಷವೆಂದರೆ 'ನಟಿ' ಇದ್ದಾರೆ. ನಾಟಕಗಳಿಗೆ ಆಮಂತ್ರಣ ನೀಡಲು Phone ಮಾಡಿದರೆ ಅಥವಾ ಮನೆಗೆ ಬಂದರೆ ಒಳಗಡೆ ಅವರು ಇದ್ದು ಇಲ್ಲ ಎನ್ನುವ ಗಂಡುಮಕ್ಕಳು ಇದ್ದಾರೆ. ಇಂಥ ಶೋಷಣೆಯನ್ನು ರಂಗನಟಿ ತಾಯಿಯಾಗಿ ಅನುಭವಿಸುತ್ತಿದ್ದಾರೆ. ಎಷ್ಟೋ ಮಕ್ಕಳು ತಮಗೆ ತಿಳುವಳಿಕೆ ಬಂದ ಮೇಲೆ ತಮ್ಮ ತಾಯಿ ಪಾತ್ರ ಮಾಡಿಸುವುದನ್ನು ಬಿಡಿಸಿದ್ದಾರೆ. ಎಷ್ಟೋ ಗಂಡಂದಿರು ಹೆಂಡತಿ ನಟಿಯನ್ನಾಗಿ ಮಾಡಿಕೊಂಡು ಆಕೆಗೆ ನಿರ್ಬಂಧ ಹಾಕಿ, ಕಲೆಗೆ ಪ್ರೋತ್ಸಾಹ ನೀಡದೇ ಕಲೆಯನ್ನು ಚಿವುಟಿ ಹಾಕಿದವರೂ ಇದ್ದಾರೆ.

ಹೀಗೆ ನಟಿಯರು ವೃತ್ತಿಯಿಂದ ಹಲವಾರು ರೀತಿಯಲ್ಲಿ ಶೋಷಣೆಗೆ ಒಳಗಾಗಿದ್ದಾರೆ, ಇಂದೂ ಒಳಗಾಗುತ್ತಿದ್ದಾರೆ, ಮುಂದೆಯೂ ಒಳಗಾಗುತ್ತಿರುವುದನ್ನು ನಾವು ಕಾಣಬಹುದು. ಆದರೆ ಇವೆಲ್ಲಕ್ಕೆ ತಿಲಾಂಜಲಿಯನ್ನು ನೀಡಬೇಕಾದರೆ ಸಂಪೂರ್ಣವಾಗಿ ವ್ಯವಸ್ಥೆಯನ್ನು ಒಡೆದು ಕಟ್ಟಬೇಕು. ಅಂದರೆ ಪ್ರತಿಯೊಬ್ಬ ರಂಗನಟಿ ವಿದ್ಯಾವಂತರಾಗಬೇಕು. ಎಲ್ಲರೂ ವೈಚಾರಿಕವಾಗಿ ಚಿಂತನೆ ಮಾಡಬೇಕು. ಎಲ್ಲರೂ ವಿಶಾಲದೃಷ್ಟಿಯಿಂದ ನೋಡಬೇಕು. ನೋಡುವ ದೃಷ್ಟಿಯಲ್ಲಿ ಒಳ್ಳೆಯತನವು ಅಡಗಿರಬೇಕು ಅಂದಾಗ ಮಾತ್ರ ಮೌಲ್ಯಾಧಾರಿತ ವ್ಯವಸ್ಥೆ ಉಂಟಾಗುತ್ತದೆ. ಅಂದರೆ ಅಲ್ಪಮಟ್ಟಿಗಾದರೂ ರಂಗನಟಿಯರು ಶೋಷಣೆಯಿಂದ ಕಳಚಿಕೊಂಡು, ಸುಗಮವಾಗಿ ಉಸಿರಾಡಲು ಸಾಧ್ಯವಾಗುತ್ತದೆ.

೨. ವೃತ್ತಿಯಲ್ಲಿ ಶೋಷಣೆ : ರಂಗ ವೃತ್ತಿಯಲ್ಲಿ ಹಿರಿಯ ನಟಿಯರು ಕಿರಿಯ ನಟಿಯರನ್ನು, ಕಿರಿಯ ನಟಿಯರು ಹಿರಿಯರನ್ನು ಶೋಷಣೆ ಮಾಡುವುದು, ಏನೇನೋ ಆಡಿಕೊಳ್ಳುವುದು, ತಮ್ಮದೇ ಹೆಚ್ಚುಗಾರಿಕೆಯನ್ನು ತೋರಿಸುವುದು, ಪ್ರತಿಷ್ಠೆಯನ್ನು ತೋರಿಸಿಕೊಳ್ಳುವುದು, ಸೊಕ್ಕು, ಅಹಂಕಾರ, ಗರ್ವದಿಂದ ಹೆಸರು, ವರ್ಚಸ್ಸಿನಿಂದ ನಟಿಯರು ಮೆರೆಯುವುದು. ಹೀಗೆ ಒಂದು ಕ್ಷೇತ್ರವೆಂದ ಮೇಲೆ ಅಲ್ಲಿ ದೋಷಗಳು ಇದ್ದದೆ. ಕೆಲವು ಅಲ್ಪ ಪ್ರಮಾಣದಲ್ಲಿದ್ದರೆ ಇನ್ನು ಕೆಲವು ಹೆಚ್ಚು ಪ್ರಮಾಣದಲ್ಲಿ ಕಾಣಸಿಗುತ್ತವೆ.

ಕಂಪನಿ ಮಾಲಿಕರು ನಟಿಯರನ್ನು ಉಪಪತ್ನಿಯರನ್ನಾಗಿ ಸ್ವೀಕರಿಸಿ ಶೋಷಿಸುವುದು, ಅಥವಾ ಉಪಪತ್ನಿಯರನ್ನು ಬದಲಾಯಿಸುವುದು ಹೀಗೆ ಹಲವಾರು ನೆಲೆಗಳಲ್ಲಿ ವೃತ್ತಿಯಲ್ಲಿ ಶೋಷಿಸಲ್ಪಡುತ್ತಾರೆ. ತಾರುಣ್ಯ ಇರುವವರೆಗೂ ಎಲ್ಲರೂ ಪ್ರೀತಿಸುತ್ತಾರೆ. ತಾರುಣ್ಯ ಹೋದ ಮೇಲೆ ನಟಿಯರು ನಿಕೃಷ್ಟವಾಗಿ ಬದುಕುತ್ತಿದ್ದಾರೆ. ಗ್ರಾಮೀಣ ಹವ್ಯಾಸಿ ರಂಗಭೂಮಿಯ ಕಲಾವಿದರೊಂದಿಗೆ ಪಾತ್ರ ಮಾಡುವ ನಟಿಯರು ಸಂಗೀತ ಮಾಸ್ತರ, ತಬಲಾಜಿಗಳು, ಸಹನಟರು ಹೀಗೆ ಎಲ್ಲರೂ ನಟಿಯರನ್ನು ಶೋಷಿಸುವವರೇ. ಆದರೆ ಇದಕ್ಕೆ ವೈರುಧ್ಯವಾಗಿ ದಣಾಯಕನಕೆರೆ ಡಿ.ಎಂ.ತೋಟಯ್ಯಸ್ವಾಮಿಯವರು ಎಲ್ಲ ರಂಗನಟಿಯರಿಗೆ ತಂದೆಯಂತೆಯೇ ಇದ್ದಾರೆ. ಗುರುವಾಗಿ, ತಂದೆಯಾಗಿ ಹಳ್ಳಿಗಳಿಗೆ ಹೋದಲೆಲ್ಲಾ ಅವರನ್ನು ಸುರಕ್ಷಿತವಾಗಿ ಕರೆದುಕೊಂಡು ಊರಿಗೆ ಮರಳುತ್ತಾರೆ ಎಂದು ಮರಿಯಮ್ಮಹಳ್ಳಿಯ ಎಲ್ಲ ರಂಗಕಲಾವಿದೆಯರು ಅಭಿಪ್ರಾಯ ಪಡುತ್ತಾರೆ.

ಸಂಗೀತ ಮಾಸ್ತರ ತಮಗೆ ಇಷ್ಟವಾಗದ ನಟಿ ಇದ್ದರೆ, ಹಾರ್ಮೋನಿಯಂ ಬಾರಿಸುವುದರಲ್ಲಿಯೇ ಬೇರೆ ಪೇಟಿ, ಬೇರೆ ನಾದ ಬರುವಂತೆ ಬಾರಿಸಿ ಅವರ ಅಪಹಾಸ್ಯಕ್ಕೆ ಗುರಿಯಾಗುವಂತೆ ಮಾಡುವುದು. ತಬಲಾ ಹಾಡಿಗೆ ಹೊಂದಿಕೆಯಾಗದ ರೀತಿಯಲ್ಲಿ ತಬಲಾ ಬಾರಿಸುವುದು. ಹೀಗೆ ನಾವು ಶೋಷಣೆಯನ್ನು ಒಂದು ರೀತಿಯಲ್ಲಿ ಅಳೆಯಲು ಬರು ವುದಿಲ್ಲ. ಅದು ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ನಟಿಯರು ಹೊಂದಾಣಿಕೆಯಿಂದ, ಸೌಹಾರ್ದತೆಯಿಂದ ಏನೇ ತೊಂದರೆ ಬಂದರೂ ಕಲೆಗೆ ಯಾವ ಅಡ್ಡಿ ಆತಂಕ ಬಂದರೂ ಅದನ್ನು ನಿವಾರಿಸಿಕೊಂಡು ಮುನ್ನಡೆಯಬೇಕಾಗಿರುವುದು ಅವರ ಆದ್ಯ ಕರ್ತವ್ಯವಾಗಿದೆ. ಒಂದು ವೃತ್ತಿಯಲ್ಲಿ ಲಾಭ ಮತ್ತು ನಷ್ಟಗಳು ಇದ್ದದ್ದೆ. ಉಪಯೋಗ ದುರುಪಯೋಗಗಳು ಎಲ್ಲ ಕ್ಷೇತ್ರಗಳಲ್ಲಿ ಕಂಡುಬರುತ್ತವೆ. ಆದರೆ ಅವುಗಳನ್ನೆಲ್ಲಾ ಹಿಮ್ಮೆಟ್ಟಿ ಹೋಗುವುದು, ಮುನ್ನಡೆಯುವುದು ರಂಗನಟಿಯ ಕರ್ತವ್ಯವಾಗಿದೆ.

ಗ್ರಾಮೀಣ ಹವ್ಯಾಸಿ ಕಲಾವಿದರು ಪ್ರತಿವರ್ಷ ಹಬ್ಬ, ಜಾತ್ರೆಗಳಲ್ಲಿ ನಾಟಕವಾಡುವಾಗ ಆಮಂತ್ರಣ ನೀಡಿ ನಟಿಯ ರನ್ನು ಬುಕ್ ಮಾಡಿ ಒಂದು ವಯಸ್ಸಿನ ನವಯುವಕರು, ಸಹನಟಿಯರನ್ನು ಅನವಶ್ಯಕವಾಗಿ ಮುಟ್ಟುವುದು. ಆಕೆಯನ್ನು ಹೊಡೆಯುವುದು, ಬಡಿಯುವುದು, ಹೀಯಾಳಿಸುವುದು, ಅಸಹ್ಯ ಮಾಡುವುದು, ರೇಪ್‌ಸೀನ್ ಇದ್ದರೆ ಅತೀ ಎಂಬಂತೆ ವರ್ತಿಸುವುದು. ಇಲ್ಲದಿದ್ದರೆ ಅವರೇನು ಪುಗಸಟ್ಟೆ ಪಾತ್ರ ನಿರ್ವಹಿಸುತ್ತಾರೇನು? ಹಣ ಕೊಟ್ಟಿದ್ದೇವೆ, ಊಟ ಹಾಕಿದ್ದೇವೆ, ನಾವು ದುಡ್ಡು ಏತಕ್ಕಾಗಿ ಕೊಟ್ಟಿದ್ದೇವೆ, ಅವರು ಕುಣಿಯಲು. ನನ್ನ ಜೊತೆ ಕುಣಿಯಲೇಬೇಕೆಂದು ಹಟ ಮಾಡುವುದು Once more ಎಂದು ಪದೇ ಪದೇ ಹೇಳಿ ಕುಣಿಸುವುದು ಇವೆಲ್ಲ ಅತೀಯಾದರೆ ಅದು ಶೋಷಣೆಯಲ್ಲದೆ ಮತ್ತಿನ್ನೇನು? ನೀವು ಹೇಳಿ? ಎಂದು ನಮ್ಮನ್ನು ನಟಿಮಣಿಯರು ಪ್ರಶ್ನಿಸುತ್ತಾರೆ.

ಸಿನಿಮಾ ಪ್ರಪಂಚದ ಬಗೆಗಿನ ಪ್ರೇಕ್ಷಕರ ಹುಚ್ಚು ಗುರುತಿಸಿ ಕೆಲ ಮಾಲಿಕರು ಸಿನಿಮಾ ನಟಿಯರನ್ನು ಕರೆಯಿಸಿ, ಆದಾಯ ಹೆಚ್ಚಿಸಲು ಯತ್ನಿಸಿದರು. ಅಲ್ಲದೆ ಕಲಾತ್ಮಕ ಮೌಲ್ಯಗಳ ಬಗ್ಗೆ ಚಿಂತಿಸದೆ ಲೈಂಗಿಕ

ವಿಕಾರದ ಅಂಗಚೇಷ್ಟೆಗಳು ಸಂಭಾಷಣೆಗಳನ್ನು ನಾಟಕದಲ್ಲಿ ಅಳವಡಿಸತೊಡಗಿದರು. ಹೆಸರಿಗೊಂದು ನಾಟಕವನ್ನಿಟ್ಟುಕೊಂಡು ದೃಶ್ಯ ದೃಶ್ಯಕ್ಕೂ ಕ್ಲಬ್ ಡ್ಯಾನ್ಸ್, ಕ್ಯಾಬರೆ ಡ್ಯಾನ್ಸ್‌ಗಳನ್ನು ತುರುಕಲಾಯಿತು. ಅಂಗಾಂಗಗಳನ್ನು ಪ್ರದರ್ಶಿಸುವ ಉದ್ರೇಕಕಾರಿ ಡ್ಯಾನ್ಸುಗಳನ್ನು ಮಾಡಬಲ್ಲ ನರ್ತಕಿಗೆ ನಾಯಕಿಗಿಂತ ಹೆಚ್ಚು ಮನ್ನಣೆ ದೊರೆಯಿತು. ನಾಟಕ ಕನ್ನಡವಾದರೂ ಹಿಂದಿ ಚಿತ್ರಗೀತೆಗಳ, ಕವ್ವಾಲಿಯ ತುಣುಕುಗಳನ್ನು ಸೇರಿಸಲು ಹಿಂಜರಿಯಲಿಲ್ಲ. ನಾಟಕದ ಮಧ್ಯಂತರದಲ್ಲಿ ಚಿತ್ರಗೀತೆಗಳನ್ನು ಚನ್ನಾಗಿ ಹಾಡಬಲ್ಲ ನಟಿ ರಂಗಕ್ಕೆ ಬಂದು ಐದಾರು ಜನಪ್ರಿಯ ಗೀತೆಗಳನ್ನು ಹಾಡಿ ರಂಜಿಸುವ ಹೊಸ ಪದ್ಧತಿ ಜಾರಿಗೆ ಬಂದಿತು. ಯಾವುದೇ ನಾಟಕ ವಿದ್ದರೂ ಕೆಲವೊಂದು ಸಂಭಾಷಣೆಗಳು ಸಾಮಾನ್ಯವಾದವು. ಹಾಸ್ಯ ಪಾತ್ರಗಳಂತೂ ಕಥೆಯ ಚೌಕಟ್ಟನ್ನು ಮೀರಿ ತನ್ನದೇ ಖಾಯಂ ಡೈಲಾಗ್‌ಗಳನ್ನು ಪುನರುಚ್ಚರಿಸುತ್ತ ಪ್ರೇಕ್ಷಕರನ್ನು ನಗಿಸಲು ಮುಂದಾದವು. "ಉಬ್ಬಿದ್ದಲ್ಲಿ ಕೈಯಿಟ್ಟು, ತಗ್ಗಿದ್ದಲ್ಲಿ ಕೋಲೂರಿ ನಡೆಯುವುದು", ನಡುರಾತ್ರಿನಲ್ಲಿ ಬಿಡುವ ಕೆಲಸ, ಕಬ್ಬಿಗೆ ನೀರುಣಿಸುವುದು. ಇಷ್ಟಲ್ಲದೆ ಕ್ಯಾಂಪ್ ಮಾಡಿದ ಊರು ನಗರವಾಗಿದ್ದರೆ ಅಲ್ಲಿ ವೇಶ್ಯೆಯರಿದ್ದ ಕೇರಿಯ (ಓಣಿಯ) ಹೆಸರನ್ನೆತ್ತಿ, ಪದೇ ಪದೇ ಉಚ್ಚರಿಸುವ ಮಾತುಗಳು ಕೇಳಿ ಬರುವುದು ನಡೆಯಿತು. ಒಬ್ಬ ನಟಿ ಬೇರೊಂದು ನಾಟ್ಯ ಸಂಘಕ್ಕೆ ಬಂದಾಗ ಮೊದಲಿನ ಸಂಘದ ದೋಷಗಳನ್ನೆತ್ತಿ ಅಪಹಾಸ್ಯ ಮಾಡುವುದು. ಅಲ್ಲದೆ ತಮ್ಮ ವೈಯುಕ್ತಿಕ ಸಮಸ್ಯೆ, ಬೋರ್ಡಿಂಗ್ ವ್ಯವಸ್ಥೆ ಇವುಗಳನ್ನೆಲ್ಲಾ ಸಂಭಾಷಣೆಯಲ್ಲಿ ಹೊಸೆದು ಪ್ರೇಕ್ಷಕರನ್ನು ನಗಿಸಲು ಪ್ರಯತ್ನಿಸತೊಡಗಿದರು. ವಿಲನ್ ಪಾತ್ರಗಳು ಹಿಂದಿ ಶಾಹಿರಿಗಳನ್ನು ಉಚ್ಚರಿಸಿ ರಸಿಕತೆಯ ಪ್ರಸಂಗಗಳಿಗೆ ರಂಗುತರಲು ತೋಡಗಿದರು. "ಧರ್ಮದೌರ್ಜನ್ಯ" ನಾಟಕದ ಒಂದು ಸನ್ನಿವೇಶ, ಹಾಸ್ಯ ಸ್ತ್ರೀ ಪಾತ್ರ ದೇವರ ಗುಡಿಗೆ ಬಂದು ತೀರ್ಥಪ್ರಸಾದ ಮಾಡಿಸುವ ಕಾಲಕ್ಕೆ ಗುಡಿಯ ಪೂಜಾರಿ ಬಾಳೆ ಹಣ್ಣಿನ ತುದಿಹಿಡಿದು ಪ್ರೇಕ್ಷಕರು ನೋಡಿ ನಗುತ್ತಿದ್ದಂತೆ ಜಿಗಿಯುತ್ತಾ ಬಂದು ಅವಳ ಕೈಗೆ ಕೊಡುತ್ತಾನೆ. ಹೀಗೆ ಲೈಂಗಿಕ ವಿಕಾರಗಳನ್ನು ಪ್ರದರ್ಶಿಸುವ ಸನ್ನಿವೇಶಗಳಿಂದ ಪ್ರೇಕ್ಷಕರು ಕೇಕೆ ಹಾಕುತ್ತಾ ಅವುಗಳ ಗುಟ್ಟಾದ ಅರ್ಥಗಳನ್ನು ಸವಿದು ಆನಂದಿಸತೊಡಗಿದರು. ಹೀಗೆ ಜನರ ಕೀಳು ಅಭಿರುಚಿ ಕೆಣಕಲು ನಿರತವಾದಾಗ ಬುದ್ಧಿಜೀವಿಗಳ ಕಟುಟೀಕೆಗೆ ಗುರಿಯಾಗಬೇಕಾಯಿತು. ಮಾಲಿಕರು ತಮ್ಮ ನಿಲುವು ಸಮರ್ಥಿಸಿಕೊಳ್ಳಲು ತಮ್ಮನ್ನು ಬದುಕಿಸುವ ಜನರೇ ಬೇರೆ. ಅವರೇ ನಮ್ಮ ಪಾಲಿನ ದೇವರು. ಅವರು ಬಯಸಿದಂತೆ ನಾಟಕ ವಾಡುತ್ತೇವೆ. ಎಂದು ಹೇಳಿ ಇನ್ನಷ್ಟು ಅಧೋಗತಿಗಿಳಿಯ ತೊಡಗಿದರು (ಲೇ: ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕ ವೃತ್ತಿರಂಗಭೂಮಿ, ಪುಟ, ೪೩,೪೪). ವೃತ್ತಿರಂಗಭೂಮಿಯಲ್ಲಿ ಈ ರೀತಿಯ ಶೋಷಣೆ ಇಂದಿಗೂ ನಡೆಯುತ್ತಿದೆ.

೩. **ಸಮಾಜದಿಂದ ಶೋಷಣೆ :** ರಂಗನಟಿಯರು ಸಮಾಜದಲ್ಲಿ ಕೆಳವರ್ಗದಿಂದ ಬಂದಿದ್ದು, ಆರ್ಥಿಕವಾಗಿ ಬಲಹೀನರಾಗಿ ಜಾತಿ ಶ್ರೇಣೀಕರಣದಲ್ಲಿ ಕೆಳಗಾಗಿ ಅನ್ನಬಾರದ ಮಾತುಗಳನ್ನು ಎಲ್ಲರಿಂದಲೂ ಸ್ವೀಕರಿಸಿ, ತನ್ನ ಅಸ್ತಿತ್ವವನ್ನು ಪಡೆದುಕೊಂಡಿರುವುದು ಸಾಹಸವೇ ಸರಿ. ಉನ್ನತ ವರ್ಗದವರ ದೌರ್ಜನ್ಯ, ಶ್ರೀಮಂತರ ದೌರ್ಜನ್ಯ, ಶ್ರೇಣೀಕರಣದಲ್ಲಿ ಮೇಲಿರುವವರ ದೌರ್ಜನ್ಯ ಇವರೆಲ್ಲರಿಂದಲೂ ಸೂಳೆ, ಬಸವಿ, ನಾಟಕದವಳು,

ಕೀಳು, ಮಾನ್ಯತೆ ಇಲ್ಲದವರು ಹೀಗೆ ಅನೇಕ ಮೂದಲಿಕೆಗೆ ಆಹಾರವಾಗಿದ್ದಾರೆ. ಈ ರಂಗನಟಿಯರಿಗೆ ನಮ್ಮ ಸಮಾಜದ ಎಂಥಹ ವ್ಯವಸ್ಥೆ ಇದೆ ಎಂದರೆ ಧಾರ್ಮಿಕ ಕಾರ್ಯಗಳಲ್ಲಿ, ಮದುವೆ-ಮುಂಜಿಗಳಲ್ಲಿ, ದೇವರಿಗೆ ಚೌರಬೀಸಲು ಗಂಗಿಮಕ್ಕಳು ಬೇಕು. ಉನ್ನತವರ್ಗದವರು ಮದುವೆಗಳನ್ನು ಮಾಡಿದರೆ ಅವರ ಮಂಗಲಸೂತ್ರವನ್ನು ಪೋಣಿಸಲು ಗಂಗಿಮಕ್ಕಳು ಬೇಕು. ಆದರೆ ಅವರ ಸಮಾನರಂತೆ ಕಾಣಲು ಮಾತ್ರ ಆಗುವುದಿಲ್ಲ. ಅವರನ್ನು ಗೌರವಿಸುವುದಿಲ್ಲ. ಅಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ರಂಗನಟಿಯರನ್ನು ನಮ್ಮ ಸಮಾಜ ಕಾಣುತ್ತದೆ.

೪. **ಸಾಂಸ್ಕೃತಿಕವಾಗಿ ಶೋಷಣೆ :** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸರಕಾರ ಲಲಿತಕಲಾರಂಗದವರಿಗೆ ಆಹ್ವಾನ ನೀಡಿ ಅವರು ಕಾರ್ಯಕ್ರಮವನ್ನು ನಡೆಸುವಂತೆ ಕೇಳುತ್ತಾರೆ. ಹಂಪಿ ಉತ್ಸವದಲ್ಲಿ ನಟಿಯರು ಭಾಗವಹಿಸುವಂತೆ ಆಹ್ವಾನ ನೀಡುತ್ತಾರೆ. ಅದಕ್ಕೆ ತಕ್ಕಷ್ಟು ಸಂಭಾವನೆಯನ್ನು ನೀಡುತ್ತಾರೆ ನಿಜ. ಆದರೆ ಇವರಿಗೆ ಯಾವುದೇ ರೀತಿಯ ಅನನ್ಯತೆ ಇಲ್ಲ. ಗುಡಿಕಟ್ಟುವವರು ಇವರು, ಆದರೆ ಗುಡಿಯನ್ನು ಪ್ರವೇಶಿಸುವವರೇ ಬೇರೆ ಎಂಬಂತೆ ಕಾರ್ಯಕ್ರಮ ನಡೆಸುವವರು ಇವರೇ ಆದರೆ ಪ್ರಾಧಾನ್ಯತೆ ಮಾತ್ರ ಇವರದಲ್ಲ.

೫. **ರಂಗನಟಿಯರು ಪುರುಷಶಾಹಿಯನ್ನು ಶೋಷಣೆ ಮಾಡಿರುವುದು :** ರಂಗನಟಿಯರು ಸಂಪ್ರದಾಯಗಳಿಂದ ದೇವದಾಸಿಯರಾಗಿ ಹಾಗೂ ಪ್ರೇಮವಿವಾಹವನ್ನು ಮಾಡಿಕೊಂಡು ಪುರುಷ ಶಾಹಿಗಳನ್ನು ತಿಪ್ಪಿ ತಿರುಕರನ್ನಾಗಿಯೂ ಮಾಡಿದ್ದಾರೆ. ಪುರುಷ ಘಟಾನುಘಟಿಗಳು ಇವರು ಹೇಳುವಂತೆ ಕೇಳುವ ದಾಸರಾಗಿದ್ದಾರೆ. ಆಸ್ತಿಯನ್ನು ಬರೆದುಕೊಟ್ಟು ಹಳ್ಳಹಿಡಿದ ಪುರುಷರಿದ್ದಾರೆ. ಬೆಳ್ಳಿ ಬಂಗಾರವನ್ನೇ ರಂಗನಟಿಯರು ದೋಚಿದ್ದಾರೆ. ವೃತ್ತಿ ರಂಗಭೂಮಿಯಲ್ಲಿ ನಟಿಯರಿಂದಲೇ ಕಂಪನಿಗಳು ಮುಂದುವರಿದಿವೆ. ಎಷ್ಟೋ ನಟಿಯರಿಂದ ಕಂಪನಿ ಹಾಳಾಗಿವೆ, ಕಂಪನಿಗಳು ಹೆಸರು ಗಳಿಸಿವೆ. ಕಂಪನಿಗಳು ಹೇಳಹೆಸರಿಲ್ಲದಂತೆ ಆಗಿವೆ. ಕೆಲವರು ನಟಿಯರು ಬಂದಾಗ ಹೆಣ್ಣಿಗಾಗಿ ಜಗಳವಾಡಿಕೊಂಡು ಕಂಪನಿಗಳನ್ನು ಹಾಳುಗೆಡವಿದ್ದಾರೆ. ಹೆಸರಿರುವ ನಟಿಯರು ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ಹಾರಿ ತಮಗೆ ಹೇಗೆ ತಿಳಿಯುತ್ತದೆಯೋ ಹಾಗೆ ಆಟವಾಡಿದ್ದಾರೆ. ಇನ್ನು ಕೆಲಪುರುಷರು ನಟಿಯರನ್ನು ಕಂಪನಿಗೆ ಸೇರಿಸಿಕೊಂಡರೆ ಕಂಪನಿಗಳು ಹಾಳಾಗುತ್ತವೆಂದು ನಟಿಯರನ್ನು ಸೇರಿಸಿಕೊಳ್ಳದೇ ಕಂಪನಿ ನಡೆಸಿದ ಪುರುಷರೂ ಇದ್ದಾರೆ. ಆದ್ದರಿಂದ ರಂಗನಟಿಯರೂ ಪುರುಷಶಾಹಿಯನ್ನು ಶೋಷಿಸಿದ್ದಾರೆ ಇಲ್ಲವೆಂದಲ್ಲ. ಆದರೆ ಅಂಥವರ ಸಂಖ್ಯೆ ತೀರಾ ವಿರಳವಾಗಿ ಸಿಗುತ್ತದೆ.

ಒಟ್ಟಿನಲ್ಲಿ ರಂಗನಟಿಯರು ಹಲವಾರು ರೀತಿಯಲ್ಲಿ ಶೋಷಿಸುತ್ತಿದ್ದಾರೆ. ಆದರೆ ನಟಿಯರು ಬಹುತೇಕವಾಗಿ ಶೋಷಣೆ ಮಾಡಿರುವುದು ತುಂಬಾ ಕಡಿಮೆ. ಶೋಷಣೆಗೆ ಒಳಗಾಗಿರುವ ರಂಗನಟಿಯರೇ ಹೆಚ್ಚಾಗಿದ್ದಾರೆ. ಇನ್ನು ರಂಗಭೂಮಿಯಲ್ಲಿದ್ದು ಅಲ್ಪಮಟ್ಟಿಗೆ ಬದಲಾಗಿದೆ ಇಲ್ಲವೆಂದಲ್ಲ. ಆದರೆ ಎಲ್ಲಾ ನಟಿಯರು ಸುಶಿಕ್ಷಿತರಾದರೆ ಮಾತ್ರ ಅವರು ಶೋಷಣೆಯಿಂದ ದೂರವಿರಲು ಸಾಧ್ಯವಾಗುತ್ತದೆ.

೫.೮. ರಂಗನಟಿಯರು : ರಾಜಕೀಯ ಪ್ರಾತಿನಿಧ್ಯ

ಮಹಿಳೆಯು ರಾಜಕಾರಣ ಪ್ರವೇಶಿಸುವುದು ಹೊಸದೇನಲ್ಲ. ಇತಿಹಾಸ ಹುಟ್ಟಿದಂದಿನಿಂದ ಮಹಿಳೆ ರಾಜಕೀಯ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತಾ ಬಂದಿದ್ದಾಳೆ. ನಮ್ಮ ಸ್ವಾತಂತ್ರ್ಯ ಹೋರಾಟಗಳಲ್ಲಿ ಹಲವಾರು ಶ್ರೀಮಂತ ಮಹಿಳೆಯರು ಪಾಲ್ಗೊಂಡಿದ್ದಾರೆ. ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ ಹಿಂದೆ ಬಿದ್ದಿಲ್ಲ ಎಂಬ ಮಾತನ್ನು ದೃಢಪಡಿಸಿದ್ದಾರೆ. ಸ್ವಾತಂತ್ರ್ಯಾ ನಂತರ ಹದಿನೆಂಟು ವರ್ಷಗಳ ಕಾಲ ಭಾರತದ ರಾಜಕೀಯ ಚುಕ್ಕಾಣಿ ಹಿಡಿದ ಶ್ರೀಮತಿ ಇಂದಿರಾಗಾಂಧಿ ನಿರಾಳವಾಗಿ ಆಳ್ವಿಕೆ ನಡೆಸಿದ ಇತಿಹಾಸ ನಮ್ಮ ಮುಂದಿದೆ. ಮೊದಮೊದಲ ಹಾಗೂ ಇತ್ತೀಚೆಗಷ್ಟೇ ಉನ್ನತ ವರ್ಗದ ಮಹಿಳೆಯರೇ ರಾಜಕೀಯ ಪ್ರವೇಶಿಸಿರುವುದು. ಆದರೆ ನಮ್ಮ ಸರಕಾರ ಕಾನೂನಿನಲ್ಲಿ "ಮೀಸಲಾತಿ" ತಿದ್ದುಪಡಿಯಾದಂದಿನಿಂದ ಇಂದು ಸಾಮಾನ್ಯವರ್ಗದ ಮಹಿಳೆಯರು ರಾಜಕೀಯ ಪ್ರವೇಶಿಸುತ್ತಿದ್ದಾರೆ.

ಈ ರೀತಿಯ ನಿಯಮದಂತೆ ಇಂದು ರಂಗನಟಿಯರೂ ಕೂಡ ರಾಜಕೀಯ ಕ್ಷೇತ್ರಕ್ಕೆ ದಾಪುಗಾಲಿರಿಸಿದ್ದಾರೆ. ಬಳ್ಳಾರಿಯ ರಂಗನಟಿಯರೂ ಈ ಕ್ಷೇತ್ರದಲ್ಲಿ ಹಿಂದೆ ಬಿದ್ದಿಲ್ಲ. ದೇಶದ ರಾಜಕೀಯ ಕ್ಷೇತ್ರಗಳಲ್ಲಿ ಬಳ್ಳಾರಿ ಜಿಲ್ಲೆಯೇ ಪ್ರತಿಷ್ಠಿತ ಕ್ಷೇತ್ರ ಎನ್ನಬಹುದು. ಏಕೆಂದರೆ ಈಗ ನಾಲ್ಕೈದು ವರ್ಷಗಳ ಕೆಳಗೆ ಸುಷ್ಮಸ್ವರಾಜ್ ಮತ್ತು ಸೋನಿಯಾ ಗಾಂಧಿಯವರು ಜಿದ್ದಾಜಿದ್ದಿ ನಡೆಸಿ, ಇಡೀ ವಿಶ್ವವೇ ಬಳ್ಳಾರಿ ಜಿಲ್ಲೆಯನ್ನು ನೋಡುವಂತೆ ಮಾಡಿದವರು ಈ ದಿಗ್ಗಜ ಮಹಿಳೆಯರೇ. ಆದ್ದರಿಂದ ಬಳ್ಳಾರಿ ಜಿಲ್ಲೆ ರಾಜಕೀಯ ಕ್ಷೇತ್ರದಲ್ಲಿ ಪ್ರತಿಷ್ಠಿತ ಕ್ಷೇತ್ರವೆಂದು ರೂಪುಗೊಂಡಿದೆ.

ಹೆಸರಾಂತ ಶ್ರೇಷ್ಠನಟಿ ಎನಿಸಿಕೊಂಡಿರುವ ಕೆ.ನಾಗರತ್ನಮ್ಮ ಗ್ರಾಮಪಂಚಾಯತಿಯಲ್ಲಿ ಮೊದಲೇ ದುಡಿದು ಅನುಭವ ಇದ್ದದ್ದರಿಂದ ೧೯೯೫ ರಲ್ಲಿ ಬಂದ ತಾಲೂಕ ಪಂಚಾಯತಿ ಚುನಾವಣೆಯಲ್ಲಿ ಪರಿಶಿಷ್ಟ ಬುಡಕಟ್ಟಿನ ಮಹಿಳೆಗೆ ಮೀಸಲಿದ್ದದ್ದರಿಂದ ಮನೆಯವರ ವಿರೋಧವಿದ್ದರೂ ಜನರ ಒತ್ತಾಯದ ಮೇರೆಗೆ ಸುಭದ್ರಮ್ಮ ಮನ್ಸೂರು ಅವರ ಆದೇಶದ ಮೇರೆಗೆ ಈ ಚುನಾವಣೆಯಲ್ಲಿ ಸ್ಪರ್ಧಿಸಿ ತಾಲೂಕು ಪಂಚಾಯತಿಯ ಸದಸ್ಯರಾದರು. ಹಾಗೂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಲ್ಲಿ ಬದಲಾವಣೆ ಇದ್ದುದರಿಂದ ೭-೧೨-೧೯೯೮ರ ರಂದು ತಾಲೂಕು ಪಂಚಾಯಿತಿಯ ಉಪಾಧ್ಯಕ್ಷರ ಸ್ಥಾನವೂ ಲಭಿಸಿತು. ಈ ರೀತಿಯಾಗಿ ರಂಗನಟಿಯೂ ಯಶಸ್ವೀ ರಾಜಕಾರಣಿಯಾಗಬಲ್ಲರೂ ಎಂಬುದನ್ನು ನಾಗರತ್ನಮ್ಮ ಅಧಿಕಾರವಹಿಸಿಕೊಂಡು ಸಾರ್ವಜನಿಕರ ಸೇವೆಯನ್ನು ಮಾಡಿದ್ದಾರೆ. ಅವರ ಮಾತಿನಲ್ಲಿ ಗಮನಿಸುವುದಾದರೆ ನಾನು ತಾಲೂಕು ಪಂಚಾಯಿತಿಯ ಉಪಾಧ್ಯಕ್ಷೆಯಾಗಿ ಅಧಿಕಾರವಹಿಸಿಕೊಂಡೆ ಜವಾಬ್ದಾರಿ ಮತ್ತಷ್ಟು ಹೆಚ್ಚಾಯಿತು. ಈ ಮೊದಲು ಸದಸ್ಯೆಯಾಗಿದ್ದಾಗ ನಮ್ಮ ಹಳ್ಳಿಯ ಕೆಲಸಗಳಿಗಷ್ಟೇ ಹೆಚ್ಚಿನ ಗಮನವಿರುತ್ತಿತ್ತು. ಈಗ ಇಡೀ ತಾಲೂಕಿನ ಸಮಸ್ಯೆಗಳಲ್ಲಿ ಪಾಲ್ಗೊಳ್ಳಬೇಕಾಯ್ತು. ಅದಕ್ಕೆ ಹೆಚ್ಚಿನ ಸಮಯವೂ ಬೇಕು. ಈ ಎಲ್ಲಾ ಕೆಲಸಗಳ ನಡುವೆಯೂ ನಾನು

ನಾಟಕಗಳಲ್ಲಿ ಅಭಿನಯಿಸುವುದನ್ನು ನಿಲ್ಲಿಸಲಿಲ್ಲ. ರಾಜಕೀಯದಿಂದ ನಾಟಕಗಳಿಗೆ ತೊಂದರೆಯೇನೂ ಆಗಲಿಲ್ಲ. ಅದು ನನ್ನ ಸುದೈವ. ರಾತ್ರಿ ನಿದ್ದೆಗೆಟ್ಟರೆ ಬೆಳಿಗ್ಗೆ ಆಫೀಸಿನಲ್ಲಿರುವುದು ಸ್ವಲ್ಪ ಕಷ್ಟವಾಗುತ್ತಿತ್ತು. ರಾತ್ರಿ ನಿದ್ದೆಗೆಟ್ಟು ನಾಟಕ ಮಾಡಿ, ಪುನಃ ಬೆಳಿಗ್ಗೆ ಬೇರೆ ಬೇರೆ ಊರುಗಳಿಗೆ ಹೋಗಿ ನಾಟಕ ಮಾಡುವುದು ರೂಢಿಯಾಗಿತ್ತು. ಹಾಗಾಗಿ ಕಷ್ಟವೆನಿಸಲಿಲ್ಲ. ವೃತ್ತಿ ಮತ್ತು ರಾಜಕೀಯ ಎರಡನ್ನು ನಾನು ನಿಭಾಯಿಸಿಕೊಂಡು ಹೋಗುತ್ತಿದ್ದೆ. ರಂಗಭೂಮಿಯ ಮೂಲಕ ಅನೇಕ ಕ್ಷೇತ್ರಗಳಲ್ಲಿ ನನಗೆ ಪರಿಚಿತರಿದ್ದರು. ನನ್ನೊಂದಿಗೆ ಅಭಿನಯಿಸಿದ ಅಥವಾ ನನ್ನ ಅಭಿನಯ ನೋಡಿ ಮೆಚ್ಚಿಕೊಂಡ ಅಭಿಮಾನಿಗಳು ಸರ್ಕಾರಿ ಕಚೇರಿಗಳಲ್ಲಿ ನೌಕರಿಯಲ್ಲಿದ್ದರು, ಅಧಿಕಾರಿಗಳಾಗಿದ್ದರು. ಅವರು ನನ್ನ ತಾಲೂಕು ಪಂಚಾಯಿತಿಯ ಕೆಲಸಗಳಲ್ಲಿ ಸಹಕಾರ ನೀಡುತ್ತಿದ್ದರು (ನಿರೂ: ಗುಡಿಹಳ್ಳಿ ನಾಗರಾಜ, ಕೆ.ನಾಗರತ್ನಮ್ಮ ಆತ್ಮಚರಿತ್ರೆ, ಮರಿಯಮ್ಮನಹಳ್ಳಿ ರಂಗಸಿರಿ, ಪುಟ, ೮೭).

ನಾಗರತ್ನಮ್ಮ ೧೯೯೮ರಲ್ಲಿ ನಾಟಕ ಅಕಾಡೆಮಿ ಸದಸ್ಯೆಯಾಗಿಯೂ ನೇಮಕಗೊಂಡರು. ತಮ್ಮ ಬಾಳ ಸಂಗಾತಿಯಾದ ಗುಡಿಹಳ್ಳಿ ನಾಗರಾಜರ ಸಹಕಾರದ ಮೇರೆಗೆ ಈ ಎಲ್ಲಾ ಕ್ಷೇತ್ರಗಳಲ್ಲಿ ನಾನು ಕೆಲಸ ಮಾಡಲು ಸಹಾಯವಾಗಿದೆ. ಈ ನಿಟ್ಟಿನಲ್ಲಿ ನಾನು ಅವರನ್ನು ಸ್ಮರಿಸಿಕೊಂಡೇ ಇಂದಿಗೂ ಮುನ್ನಡೆಯುತ್ತಿದ್ದೇನೆ ಎಂದು ಸ್ವಂತಃ ಕೆ.ನಾಗರತ್ನಮ್ಮ ಅವರೇ ತಮ್ಮ ರಂಗಕ್ಷೇತ್ರ, ರಾಜಕೀಯ ಕ್ಷೇತ್ರ ಈ ಎರಡೂ ಹೆಸರು ಮಾಡಲು ಗುಡಿಹಳ್ಳಿ ಅವರೇ ಕಾರಣ ಎಂದು ಹೇಳುತ್ತಾರೆ (ಮರಿಯಮ್ಮನಹಳ್ಳಿ, ಕ್ಷೇತ್ರಕಾರ್ಯದ ಸಂದರ್ಶನ, ಜುಲೈ ೨೮, ೨೦೦೨). ಈ ರೀತಿಯಲ್ಲಿ ಅವರ ರಂಗಬದುಕು, ರಾಜಕೀಯ ಬದುಕನ್ನು ನಮ್ಮ ಮುಂದೆ ಬಾಳಿನ ಬುತ್ತಿಯ ಕಹಿ ಸಿಹಿ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಕೂಡ್ಲಿಗಿ ತಾಲೂಕಿನ ವಿರುಪಾಪುರ ಗ್ರಾಮದ ಜೆ.ಗಂಗಮ್ಮ ವಿರುಪಾಪುರ ಗ್ರಾಮ ಪಂಚಾಯಿತಿಯ ಸದಸ್ಯರು ಆಗಿದ್ದಾರೆ. ತೀರಾ ಹಿಂದುಳಿದ ಊರಾದ ವಿರುಪಾಪುರ ರಾಷ್ಟ್ರೀಯ ಹೆದ್ದಾರಿ ಬೆಂಗಳೂರಿನ ಹಾದಿಯಲ್ಲಿರುವ ಒಂದು ಚಿಕ್ಕಗ್ರಾಮ. ೨೦೦ ಮನೆಗಳಿರುವ ಈ ಊರಲ್ಲಿ ಹೆಚ್ಚಾಗಿ ನಾಯಕ ಜನಾಂಗದವರಿದ್ದು, ಆ ಜನಾಂಗದ ಹೆಚ್ಚು ಕಡಿಮೆ ಎಲ್ಲರೂ ರಂಗಭೂಮಿಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅಜ್ಜಿ-ಮೊಮ್ಮಗಳ ಪರಂಪರೆಯಂತೆ ನಟಿಯರ ಪರಂಪರೆ ಈ ಊರಿನಲ್ಲಿ ಇದೆ. ಈ ಗ್ರಾಮದ ಜೆ.ಗಂಗಮ್ಮ ಎಂಬ ನಟಿಯು ೧೦ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿಕೊಂಡಿದ್ದು, ಇಂತಹ ವಾತಾವರಣದಲ್ಲಿ ರಾಜಕೀಯ ಪ್ರವೇಶಿಸಿ ಗ್ರಾಮಪಂಚಾಯತಿ ಸದಸ್ಯೆಯೂ ಆಗಿ ರಂಗ ಬದುಕು, ರಾಜಕೀಯ ಬದುಕು ಎರಡರಲ್ಲೂ ಯಶಸ್ಸನ್ನು ಸಾಧಿಸಿದ್ದಾರೆ.

ಕೂಡ್ಲಿಗಿ ತಾಲೂಕಿನಲ್ಲಿ ಪ್ರಸ್ತುತ ಸಂದರ್ಭದಲ್ಲಿ 'ಪುರಸಭೆ-ನಗರಸಭೆ'ಯಲ್ಲಿ ಅಧ್ಯಕ್ಷರಾಗಿ ಒಬ್ಬ ರಂಗನಟಿ ಆಯ್ಕೆಯಾಗಿದ್ದಾರೆ. ರಂಗಬದುಕನ್ನು ಹಾಗೂ ರಾಜಕೀಯ ಎರಡರಲ್ಲೂ ಅವರು ನಿಷ್ಠೆಯಿಂದ ಸೇವೆಯನ್ನು ಗೈಯುತ್ತಿದ್ದಾರೆ. ಈ ಮೂರು ಉದಾಹರಣೆಗಳನ್ನು ನಾವು ನೋಡಿದಾಗ ರಂಗನಟಿಯರು ಭವಿಷ್ಯದಲ್ಲಿ ಮುಂದೊಂದು ದಿನ ಹೊಸ ಇತಿಹಾಸವನ್ನು ನಿರ್ಮಿಸಬಲ್ಲರು ಎಂಬಂತೆ ಕಾಣುತ್ತದೆ.

ವ್ಯವಸ್ಥೆಯಲ್ಲಿ ಒಂದುಕಡೆ ರಂಗನಟಿಯರ ಬಗ್ಗೆ ಆತಂಕ ವ್ಯಕ್ತಪಡಿಸಬಹುದಾದರೂ, ಇನ್ನೊಂದೆಡೆ ರಂಗಭೂಮಿ ಇನ್ನೂ ಏನನ್ನೂ ಕಳೆದುಕೊಂಡಿಲ್ಲ ಅದು ನಿಧಾನಗತಿಯಲ್ಲಿ ನಮಗೆ ಅರಿವಾಗದ ರೀತಿಯಲ್ಲಿ ಪ್ರಗತಿಪಥದತ್ತ ಮುನ್ನಡೆಯುತ್ತಿದೆ ಎಂದು ಅನಿಸುತ್ತದೆ. ಈ ಎಲ್ಲಾ ಬೆಳವಣಿಗೆಗೆ ಸಮಾಜದ, ಸರಕಾರದ 'ಮಾನವೀಯ' ನಿಲುವುಗಳೇ ನಟಿಯರ ಬದುಕಿಗೆ ಒಂದು ಅರ್ಥ ಬಂದಿದೆ. ಈ ಧೈರ್ಯದಿಂದಲೇ ಇಂದು ರಂಗನಟಿಯರು ತಮ್ಮ ಗಟ್ಟಿಯಾದ ದಿಟ್ಟ ನಿಲುವಿನ ದಿಟ್ಟ ಹೆಜ್ಜೆಯನ್ನು ಇಡುತ್ತಾರೆ. ಬೆಳವಣಿಗೆಯ ಹಾದಿಯಲ್ಲಿ ಇವರೂ ಸಾಧನೆಯ ಪಥದಲ್ಲಿ ನಿಧಾನಗತಿಯಲ್ಲೆ ಮುನ್ನಡೆ ಸಾಧಿಸುತ್ತಿದ್ದಾರೆ.

ರಾಜಕಾರಣವೆಂಬುದು ಅತ್ಯಂತ ವೈಯಕ್ತಿಕ ನೆಲೆಯಲ್ಲಿ ಅಭಿವ್ಯಕ್ತವಾಗುವ ಸಂಗತಿ. ಈ ರೀತಿ ಅಭಿವ್ಯಕ್ತಗೊಂಡಿರುವ ಈ ಕ್ಷೇತ್ರಕ್ಕೆ ಕಾಲಿಟ್ಟು ಯಶಸ್ವೀ ರಾಜಕಾರಣಿಯಾಗಿ ರಂಗನಟಿಯರು ಹೆಸರಾಗಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಗಳೂ ಸಮಾನರೇ. ಆದ್ದರಿಂದ ಈ ರೀತಿಯ ಸಮಾನತೆಯಲ್ಲಿ ತಮ್ಮ ಹಕ್ಕನ್ನು ರಂಗನಟಿಯರು ಚಲಾಯಿಸಿದ್ದಾರೆ.

೫.೯. ರಂಗ ಜೀವನ - ಜೀವನ ರಂಗ

ನಟಿಯರ ಬದುಕಿನಲ್ಲಿ 'ರಂಗ' ಹಲವಾರು ರೀತಿಯಲ್ಲಿ ಅವರಿಗೆ ಮನ್ವಂತರವನ್ನು ಒದಗಿಸಿಕೊಟ್ಟಿದೆ. ಕೆಲವು ನಟಿಯರು ನಿರೀಕ್ಷೆ ಮೀರಿ ಮುನ್ನಡೆದರೆ, ಇನ್ನೂ ಕೆಲವರು ಅರ್ಧಕ್ಕೆ ತಮ್ಮ ವೃತ್ತಿಗೆ ವಿದಾಯ ಹೇಳಿದ್ದಾರೆ. ವೃತ್ತಿಧರ್ಮಕ್ಕೆ ಮೋಸಮಾಡದೇ ಏನೇ ಕಷ್ಟಬಂದರೂ 'ನಟಿ'ಯರು ಸರಾಗವಾಗಿ ಜೀವನ ನಡೆಸಿಕೊಂಡು ಬರುತ್ತಿದ್ದಾರೆ. ಕೆಲವು ನಟಿಯರು ರಂಗಭೂಮಿ ಸಂಪೂರ್ಣವಾಗಿ ನಮಗೆ ತೃಪ್ತಿ ನೀಡಿದೆ ಎಂದು ಹೇಳುತ್ತಾರೆ. ನಟಿಯರಿಗೆ 'ರಂಗಜೀವನ -ಜೀವನರಂಗ' ಎರಡರಲ್ಲೂ ಯಶಸ್ವಿಯಾಗಬೇಕಾದರೆ ಅದು ಅದೃಷ್ಟವೆ ಸರಿ ಎನ್ನುತ್ತಾರೆ ಹಲವು ಕಲಾವಿದೆಯರು.

ಕರ್ನಾಟಕದ ರಂಗ ಇತಿಹಾಸದಲ್ಲಿ ಕಲಾವಿದೆಯರ ಬೆಳವಣಿಗೆ ಇತ್ತೀಚೆಗೆ ಆದರೂ ಅವರ ಸಾಧನೆ ಏನೂ ಕಡಿಮೆ ಇಲ್ಲ. ಪುರುಷರಿಗೆ ಸರಿಸಮಾನರಾಗೇ ನಿಲ್ಲುವಂಥ ಸಾಮರ್ಥ್ಯ, ಎದೆಗಾರಿಕೆ, ಪ್ರೌಢತೆ, ಚಾತುರ್ಯತೆ ಎಲ್ಲವನ್ನು ಸ್ತ್ರೀಯರು ಬಹುಬೇಗನೇ ಪಡೆದಿದ್ದಾರೆ ಎನ್ನಬಹುದು. ಮಹಿಳೆಯ ಚಾಕಚಕ್ಯತೆ ಪುರುಷರಿಗಿಂತಲೂ ಒಂದು ಹೆಜ್ಜೆ ಮುಂದಿದೆ. ಆದರೆ ಆ ವ್ಯಕ್ತಿತ್ವಕ್ಕೆ ತಕ್ಕಂತ ಪರಿಸರ ಸ್ತ್ರೀ ಕಲಾವಿದೆಯರಿಗೆ ನಿರ್ಮಾಣವಾಗಿರಬೇಕು. ಅಂದಾಗ ಮಾತ್ರ ಅವರು ಇನ್ನೂ 'ರಂಗದೇವತೆ'ಯ ಸೇವೆ ಮಾಡಿ, ಕಲಾ ಆರಾಧಕರಾಗಿ, ಕಲಾಸರಸ್ವತಿಯನ್ನು ಉನ್ನತ ಮಟ್ಟಕ್ಕೆ ಏರಿಸಲು ಸಾಧ್ಯವಾಗುತ್ತದೆ.

'ರಂಗ ಜೀವನ-ಜೀವನ ರಂಗ' ಎರಡರ ಭೂಮಿಕೆಯಲ್ಲಿ ಸ್ತ್ರೀ ಕೇಂದ್ರ ಬಿಂದು. ಹಾಗೆಯೇ ಪುರುಷರೂ ಕೂಡ ಕೇಂದ್ರ ಬಿಂದುವೇ. ಇಬ್ಬರ ಸಹಕಾರದ ಮನೋಭಾವವು ಹೊಂದಾಣಿಕೆಯಾದರೆ ಅಲ್ಲಿ 'ರಂಗ ಜೀವನ-ಜೀವನ ರಂಗ' ಅಸ್ತಿತ್ವದಲ್ಲಿ ಇರಲು ಸಾಧ್ಯವಾಗುತ್ತದೆ. ಇವು ಜೀವಂತಿಕೆಯನ್ನು ಪಡೆಯಲು ಸಾಧ್ಯವಾಗುತ್ತದೆ.

ಯಾವ ನಟಿಯನ್ನು ಇನ್ನೊಬ್ಬ ನಟಿಯರಿಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ. ಆ 'ನಟಿ'ಗೆ ಆಕೆಯೇ ಸಾಟಿ. ಅವರಿಗೆ ಅವರೇ ಸಮರ್ಥ ನಟಿ. ಹೀಗಿದ್ದರೆ, ಹಾಗಿದ್ದರೆ ಎನ್ನುವುದಕ್ಕಿಂತ ಅವರಿಗೆ ಅವರೇ ಸರಿ ಎನ್ನುವುದೇ ಪ್ರಕೃತಿ ನ್ಯಾಯ. ಏಕೆಂದರೆ ಕೆಲವರು ಯಶಸ್ವೀ ಆಗಿದ್ದಾರೆ. ಇನ್ನೂ ಕೆಲವು ನಟಿಯರು ಪ್ರತಿಭೆ ಇದ್ದರೂ ಅವರಿಗೆ ಹೆಸರು ಬಂದಿಲ್ಲ, ಅದಕ್ಕೆ ಅವರದೇ ಆದ ಸಂದರ್ಭ ಸಮಯಕ್ಕೆ ತಕ್ಕಂತೆ ಹೊಂದಿಕೊಳ್ಳುವುದು

ಬಳ್ಳಾರಿ ಜಿಲ್ಲೆಯಲ್ಲಿ ರಾಜಕೀಯ ಪ್ರಾತಿನಿಧ್ಯ ಹೊಂದಿರುವ ರಂಗನಟಿಯರು

ಕ್ರ.ಸಂ.	ರಂಗನಟಿಯ ಹೆಸರು	ರಾಜಕೀಯ ಹುದ್ದೆ	ಊರು	ತಾಲೂಕು
೧.	ಬಿ.ಜಯಮ್ಮ	ಪುರಸಭೆ ಅಧ್ಯಕ್ಷರು	ಕೂಡ್ಲಿಗಿ	ಕೂಡ್ಲಿಗಿ
೨.	ಕೆ.ನಾಗರತ್ನಮ್ಮ	ಗ್ರಾ.ಪ. ಸದಸ್ಯೆ, ತಾ.ಪ.ಸದಸ್ಯೆ ತಾ. ಪಂಚಾಯತಿ ಮಾಜಿ ಅಧ್ಯಕ್ಷರು	ಮರಿಯಮ್ಮನಹಳ್ಳಿ	ಹೊಸಪೇಟೆ
೩.	ಜೆ.ಗಂಗಮ್ಮ	ಗ್ರಾ.ಪಂಚಾಯತಿ ಸದಸ್ಯರು	ವಿರೂಪಾಪುರ	ಕೂಡ್ಲಿಗಿ

ಅನಿವಾರ್ಯವಾಗಿರುವಾಗ ಯಾರು ಶ್ರೇಷ್ಠ? ಯಾರು ಕನಿಷ್ಠ? ಎಂದು ಎಣಿಸಲು ಇಲ್ಲಿಯ ಪ್ರಯತ್ನವಲ್ಲ. ಆಯಾ ನಟಿಯರ ಪ್ರತಿಭೆಯ ಧೀಮಂತಿಕೆಯನ್ನು ಪ್ರತಿಬಿಂಬಿಸುವುದೇ ಸಂಶೋಧನೆಯ ಮೂಲ ತಿರುಳಾಗಿದೆ.

ಹೊಸಪೇಟೆ ಸರಸ್ವತಮ್ಮನವರ ಜೀವನಾನುಭವ ಅವರ ಮಾತಿನಲ್ಲಿ "ನಾಟಕದಲ್ಲಿ ನಾವು ಆಡಬೇಕಾದ ಮಾತು ತಪ್ಪಿದರೆ ಅವುಗಳನ್ನು ಹೇಳಿಕೊಡುವುದಕ್ಕೆ ಜನರು ಸೈಡ್‌ವಿಂಗ್ಸ್‌ನಲ್ಲಿ ನಿಂತಿರುತ್ತಾರೆ. ಆದರೆ ಜೀವನದಲ್ಲಿ ನಾವು ಆಡಬೇಕಾದ ಮಾತುಗಳು ತಪ್ಪಿದರೆ ಹೇಳಲು ಯಾರೂ ಇರುವುದಿಲ್ಲ. ನಮ್ಮ ಅನುಭವವೇ ನಮಗೆ ಹೇಳಿಕೊಡಬೇಕಲ್ಲವೇ" ಈ ಮಾತು ಬಹು ಮಾರ್ಮಿಕವಾದದ್ದು. ಹಾಗೆಯೇ ಮುಂದೆ ಹೋಗಿ "ಜೀವನವು ಒಂದು ದೊಡ್ಡ ಕಾರ್ಯಾಗಾರವಾಗಿದೆ. ಇನ್ನೊಬ್ಬರು ಮಾಡುವುದನ್ನು ನೋಡುತ್ತಾ ಸ್ವತಃ ನಾವು ಅದನ್ನು ಪ್ರತ್ಯಕ್ಷ ಮಾಡುತ್ತಾ ನಮ್ಮ ಪರಿಸ್ಥಿತಿ ಹಾಗೂ ಪರಿಸರಗಳಿಗೆ ತಕ್ಕಂತೆ ಅದನ್ನು ಸರಿಪಡಿಸಿಕೊಳ್ಳುತ್ತಾ ನಾವು ಕೈಕೊಂಡ ಕೆಲಸದಲ್ಲಿ ಸಫಲತೆ ತಂದುಕೊಳ್ಳಬೇಕು (ಲೇ: ಗವೀಶ್ ಹಿರೇಮಠ, ರಂಗ ಕುಸುಮಗಳು, ಪುಟ, ೮೭). ಈ ಮಾತನ್ನು ಸರಸ್ವತಮ್ಮ ಅರಿತು, ಹೋರಾಟದ ಬದುಕನ್ನೇ ಹೆಚ್ಚು ಪ್ರೀತಿಸುತ್ತಾರೆ. ಹಾಗೂ ತಮ್ಮ ಜೀವನಾನುಭವವನ್ನು ಹಂಚಿಕೊಳ್ಳುತ್ತಾರೆ. ನಾಟಕ ರಂಗ ಜೀವನ ರಂಗ ಎರಡೂ ರಂಗನಟಿಯರಿಗೆ ವಿಶೇಷವಾದ ಅನುಭವಗಳನ್ನು ನೀಡುತ್ತದೆ.

ಮೈಸೂರಿನ ಮಹಿಳಾ ತಂಡದ ನಾಯಕಿ ಆರ್.ನಾಗರತ್ನಮ್ಮ, ಇವರು ನಾಟಕ ಕಂಪನಿ ನಡೆಸುವಾಗ ಮತ್ತು ವೈಯುಕ್ತಿಕ ಜೀವನದಲ್ಲಿ ಎದುರಾದ ಹಲವು ಸವಾಲುಗಳನ್ನು ಆತ್ಮವಿಶ್ವಾಸದಿಂದ ಧೃತಿಗೆಡದೇ

ಎದುರಿಸಿದ್ದನ್ನು ನಿರಾಶವಾಗಿ ವಿವರಿಸಿದ್ದಾರೆ. ನಾಟಕ ಕಂಪನಿಗಳೊಡನೆ ಊರಿಂದೂರಿಗೆ ಅಲೆಯುವಾಗ ಅನುಭವಿಸಿದ ಹಲವಾರು ನೋವು-ನಲಿವು, ಪಟ್ಟ ಪರಿಪಾಟಲುಗಳನ್ನು ನಗುವಿನಿಂದಲೇ ಹಂಚಿಕೊಂಡವರು.

ನಾಟಕದವರನ್ನು ಜನ ನಿಕೃಷ್ಟವಾಗಿ ನೋಡುತ್ತಿದ್ದರು. ಅದರಲ್ಲೂ ಹೆಣ್ಣು ಮಕ್ಕಳು ನಾಟಕದಲ್ಲಿ ಪಾತ್ರ ಮಾಡುತ್ತಾರೆಂದರೆ ಕೀಳು ದೃಷ್ಟಿಯಿಂದ ಕಾಣುತ್ತಿದ್ದ ದಿನಗಳವು. ಹೆಣ್ಣು ಮಕ್ಕಳು ರಂಗಭೂಮಿಗೆ ಬರಲು ಹಿಂಜರಿಯುತ್ತಿದ್ದ ದಿನಗಳಲ್ಲಿ ನಾಯಕಿ ಪಾತ್ರ ಮಾಡಲು ಚಿಕ್ಕವಳಿದ್ದ ಕಾರಣ ನನ್ನನ್ನು ಆಯ್ಕೆ ಮಾಡಿದರು. ಹಿರಿಯ ರಂಗಭೂಮಿ ಕಲಾವಿದರ ಮಾರ್ಗದರ್ಶನದಿಂದ ಕಲಾವಿದೆಯಾಗಿ ಬೆಳೆಯಲು ಸಾಧ್ಯವಾಯಿತು ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ. 'ಧರ್ಮರತ್ನಾಕರ' ನಾಟಕದ ರಿಹರ್ಸಲ್ ಸಂದರ್ಭದಲ್ಲಿಯೇ ಮಗು ಅನಾರೋಗ್ಯದಿಂದ ತೀರಿಕೊಂಡ ಮರುದಿನವೇ ಬಣ್ಣ ಹಚ್ಚಬೇಕಾದ ಹಾಗೂ ತಮ್ಮ ಪತಿಯ ಅಗಲಿಕೆಯ ನೋವಿನಲ್ಲಿಯೂ ರಂಗದ ಮೇಲೆ ಕಾಣಿಸಿಕೊಂಡ ಹೃದಯ ಕಲಕುವ ಘಟನೆಗಳ ನೆನಪುಗಳನ್ನು ಬಿಚ್ಚಿಟ್ಟರು. ಸಿನಿಮಾಗಳಲ್ಲಿಯೂ ನಟಿಸಿರುವ ನನಗೆ ರಂಗಭೂಮಿಯ ಬಗೆಗೆ ಹೆಚ್ಚು ಒಲವು. ರಂಗಭೂಮಿ ನನಗೆ ಬದುಕು ನೀಡಿದೆ. ಅದಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ ಎಂದು ಹೇಳಿದರು (ಮನೆಯಂಗಳ ಮಾತುಕತೆ' ಕಾರ್ಯಕ್ರಮದಲ್ಲಿ ಸಂವಾದ ಸಚಿವೆ ರಾಣಿ ಸತೀಶ್ ಉಪಸ್ಥಿತರಿದ್ದರು, ಪ್ರಜಾವಾಣಿ, ಜುಲೈ ೨೦, ಭಾನುವಾರ ೨೦೦೩).

ಆರ್.ನಾಗರತ್ನಮ್ಮ ರಂಗ ಜೀವನ-ಜೀವನ ರಂಗದ ಏಳು ಬೀಳುಗಳನ್ನು, ಜೀವನ ತಮಗೆ ತಂದಿರುವ ತೃಪ್ತಿಯನ್ನು, ರಂಗಭೂಮಿ ತನಗೆ ನೀಡಿದ ಬದುಕನ್ನು ಸ್ಮರಿಸಿಕೊಳ್ಳುತ್ತಾರೆ. ಎಲ್ಲಾ ರಂಗ ನಟಿಯರ ಬದುಕು ವಿಶಿಷ್ಟತೆಯಿಂದ ಕೂಡಿದೆ. ಕಲೆಯು ಎಲ್ಲರನ್ನು ಕೈ ಬೀಸಿ ಕರೆಯುತ್ತದೆ. ಆದರೆ 'ಕಲಾದೇವಿ'ಯು ಒಲಿಯುವುದು ಕೆಲವು ಪ್ರತಿಭೆಗಳಿಗೆ ಮಾತ್ರ. ಪ್ರತಿಭೆಗೆ ಪುರಸ್ಕಾರಬೇಕು. ಆದರೆ ಅದಿಲ್ಲದಿದ್ದರೂ ಪ್ರತಿಭೆಯನ್ನು ಯಾರು ತಡೆಹಿಡಿಯಲಾರರು. ಅಂಥ ಪ್ರತಿಭಾವಂತ ಕಲಾವಿದೆಯರು ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಮಿನುಗು ತಾರೆಗಳಾಗಿ ಇಂದಿಗೂ ರಂಗಭೂಮಿ ಸೇವೆ ಮಾಡುತ್ತಿದ್ದಾರೆ.

"ರಂಗಭೂಮಿಯಲ್ಲಿ ಇದುವರೆಗೆ ದೀರ್ಘ ಸೇವೆ ಸಲ್ಲಿಸಿದರೂ ಅವರಿನ್ನೂ ಉತ್ಸಾಹ ಕಳೆದುಕೊಂಡಿಲ್ಲ. ಕಷ್ಟ, ಕಾರ್ಪಣ್ಯಗಳಲ್ಲಿ ಬೆಂದರೂ ನಿರಾಶೆಗೊಂಡಿಲ್ಲ. ಅವರ ಜೀವನದ ಸುಖ-ಸಂತಸದ ರಹಸ್ಯ ಇವೇ ಆಗಿವೆ. ಅವರ ಬದುಕು ಅವರ ಸೇವೆ ಜೇನ್ನೊಣದಂತೆ. ಪ್ರತಿಯೊಬ್ಬ ಮನುಷ್ಯನೂ ಜೇನ್ನೊಣವನ್ನು ಅನುಸರಿಸಬೇಕೆಂದು ಹೇಳುವ ಮಾತಿನಲ್ಲಿ ಅರ್ಥವಿದೆ. ಜೇನ್ನೊಣವು ಹಗಲಿರುಳು ಶ್ರಮಪಡುತ್ತದೆ. ಅದರ ಫಲವು ಇನ್ನೊಬ್ಬರಿಗೆ ಪ್ರಯೋಜನವಾಗುತ್ತದೆ. ಹಾಗೆಯೇ ಮನುಷ್ಯನ ಬದುಕಾಗಬೇಕು" ಅಂಥ ಬದುಕು ಸುಭದ್ರಮ್ಮನವರದು (ಲೇ: ಗವೀಶ್ ಹಿರೇಮಠ, ರಂಗ ಕುಸುಮಗಳು, ಪುಟ, ೨೪). ಸುಭದ್ರಮ್ಮನವರು ಮಾನವನ ಜೀವನವನ್ನು ಗಂಧದ ಕೊರಡಿಗೆ ಹೋಲಿಸಿದ್ದಾರೆ. ಗಂಧವು ತಾನು ಬೆಂದು ಇನ್ನೊಬ್ಬರಿಗೆ

ಸುವಾಸನೆಯನ್ನು ಕೊಡುತ್ತದೆ. ಜೇನ್ನೊಣ ಕಷ್ಟಪಟ್ಟು ಇನ್ನೊಬ್ಬರಿಗೆ ಜೇನುಕೊಟ್ಟಂತೆ. ಕಷ್ಟ ತನಗೆ ಬಂದರೆ ತಾನು ಇನ್ನೊಬ್ಬರಿಗೆ ಸುಖ ಕೊಡಬೇಕೆನ್ನುತ್ತಾರೆ ಸುಭದ್ರಮ್ಮ ಮನ್ಸೂರು. ರಂಗ ಜೀವನದಲ್ಲಿ ದ್ರೌಪತಿಯಾಗಿ ಕಷ್ಟ ಅನುಭವಿಸುವ, ಹೇಮರೆಡ್ಡಿ ಮಲ್ಲಮ್ಮನಾಗಿ ಪ್ರೇಕ್ಷಕರ ಮನಮುಟ್ಟುವಂತೆ ಅಭಿನಯಿಸುತ್ತಾರೆ. ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿ ದ್ರೌಪದಿಯಾಗಿ ಕುಹಕ ನಗೆಯಾಡುವಾಗ ತಮ್ಮನ್ನು ತಾವೇ ಮರೆತು ಬಿಡುತ್ತಾರೆ.

ಕೆ.ನಾಗರತ್ನಮ್ಮ ಇವರು ನಾನು ಜನರ ಮೆಚ್ಚಿನ ರಂಗಕಲಾವಿದೆಯಾದೆ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಹಳ್ಳಿಗಾಡಿನ ಜನ ನೀಡಿದ ಗೌರವ, ಮುದೇನೂರು ಸಂಗಣ್ಣನವರಂಥ ಹಿರಿಯ ಜೀವಿಗಳ ಒಡನಾಟ, ಇವರ ಶೀಲಾವತಿ ನಾಟಕ ಶೀಲಾವತಿ ಪಾತ್ರ ನನಗೆ ನಾಡಿನಲ್ಲಿ ಹೆಚ್ಚು ಖ್ಯಾತಿ ತಂದು ಕೊಟ್ಟಿತು. ಮೈಲಾರಪ್ಪನವರ ಪ್ರೋತ್ಸಾಹ, ನಾಡಿನ ರಂಗತಜ್ಞರ ಸಹವಾಸ, ಲಲಿತ ಕಲಾರಂಗದ ಮೂಲಕ ದೊರೆತ ಸಂಪರ್ಕ, ಮನೆಯ ವಾತಾವರಣ ನನ್ನನ್ನು ನಾನು ಕಂಡುಕೊಳ್ಳಲು ಸಹಕರಿಸಿದವು. ಇಂದು ನಾನು ಎದೆತಟ್ಟಿ ಹೆಮ್ಮೆಯಿಂದ ಹೇಳಿಕೊಳ್ಳಬಯಸುತ್ತೇನೆ. "ನಾನೊಬ್ಬ ರಂಗಕಲಾವಿದೆ" ಎಂದು. ಇದೇ ಅದೃಷ್ಟ ನನ್ನ ಸಹೋದ್ಯೋಗಿಗಳಿಗೆ ಎಷ್ಟೋ ಜನರಿಗೆ ಇತ್ತು ಎಂಬುದನ್ನು ನೋಡಿದಾಗ ಪ್ರೇಕ್ಷಕರನ್ನು ನಗಿಸಿ, ತಮ್ಮ ಬಾಳು ದುರಂತವಾಗಿದ್ದರೂ ಅದು ಆ ರೀತಿ ಇಲ್ಲಎಂಬಂತೆ ಬಾಳುತ್ತಿರುವ ರಂಗನಟಿಯರು ಸಮಾಜದ ಅವಿಭಾಜ್ಯ ಅಂಗವಾಗಿದ್ದಾರೆ. ತಮ್ಮ ಜೀವನವನ್ನು ಸಾಮಾನ್ಯ ವರ್ಗದ ಜನರಿಗಲ್ಲದೆ, ಬುದ್ಧಿಜೀವಿಗಳಿಗೂ ಆದರ್ಶವೇ ಆಗಿದ್ದಾರೆ ಎಂಬ ಮಾತು ಸಂಪೂರ್ಣವಾದ ಸತ್ಯಾಂಶದಿಂದ ಕೂಡಿದೆ ಎನ್ನಬಹುದಾಗಿದೆ.

ಗ್ರಾಮೀಣ ಕಲಾವಿದರು: ರಂಗನಟಿಯರು : ಇಂದಿಗೂ ಗ್ರಾಮೀಣ ಜನತೆಯ ಆತ್ಮೀಯತೆ ಕಡಿಮೆಯಾಗಿಲ್ಲ. ಸೌಹಾರ್ದತೆ, ಶಾಂತಿ, ಆತ್ಮೀಯತೆ, ವಿಶ್ವಾಸಗಳಿಂದ ಬದುಕುತ್ತಿದ್ದಾರೆ. ಗ್ರಾಮೀಣ ಕಲಾವಿದರು ತಾವು ನಾಟಕವನ್ನು ಕಟ್ಟುವಾಗ ಹಾರ್ಮೋನಿಯಂ ಹಾಗೂ ನಾಟಕದ ಪುಸ್ತಕವನ್ನು ಪೂಜಿಸಿ, ತಾಲೀಮು ಪ್ರಾರಂಭಿಸುತ್ತಾರೆ. ತಾಲೀಮು ಇದ್ದಾಗ ಒಂದೆರಡು ಬಾರೀ ನಟಿಯರು Practiceಗೆ ಬರುತ್ತಾರೆ. ಹೀಗೆ ಬರುವ ಕ್ರಮಕ್ಕೆ "ಗೆಜ್ಜೆಪೂಜೆ" ನಾಟಕ ಎಂದೂ ಕರೆಯುತ್ತಾರೆ. 'ರಂಗ ತಾಲೀಮು' ನಾಟಕ ಮೊದಮೊದಲು ಪ್ರಚಲಿತದಲ್ಲಿ ಇದ್ದವು. ಆಗ ನಾಟಕಕ್ಕೆ ಬರುವಾಗ ಎಷ್ಟೋ ಸಹ ಕಲಾವಿದರು ಆ ದಿನಗಳಲ್ಲಿ ಕೆಲಸವನ್ನು ಬಿಟ್ಟು ವಾಹನದ ಅನುಕೂಲ ಇರದಿದ್ದಾಗ ತಾವೇ ಬಂಡಿಕಟ್ಟಿಕೊಂಡು ಬಂದು ನಟಿಯರನ್ನು ತಮ್ಮ ಊರಿಗೆ ಕರೆದುಕೊಂಡು ಹೋಗುತ್ತಾರೆ. ಪಾತ್ರದಲ್ಲಿ ತಂಗಿಯಾದವರಿಗೆ ಅಥವಾ ಪತ್ನಿಯಾದವರಿಗೆ ಗೌರವಿಸಿ ಅವರಿಗೆ ಉಡಿಯಕ್ಕಿ ಹಾಕಿ ರವಿಕೆಯನ್ನು ಕೊಟ್ಟು ಊಟ ಮಾಡಿಸಿ ಮನೆಯ ಮಗಳಂತೆ ನೋಡಿಕೊಳ್ಳುತ್ತಾರೆ.

ಇದೊಂದು ಮೋಜಿನ ಪ್ರಸಂಗ. ಸರೋಜ ನಾನು ಒಂದೇ ಹಳ್ಳಿಯ ನಾಟಕಕ್ಕೆ ಹೋಗಬೇಕಿತ್ತು. ಆ ಊರಿಗೆ ಹೋಗಬೇಕಾದರೆ ಬಸ್ ನಿಲ್ದಾಣದಿಂದ ೫ ಮೈಲಿ ದೂರ ಬಂಡಿಯಲ್ಲಿ ಹೋಗಬೇಕಾಗಿತ್ತು. ಬಸ್

ಇಳಿದು ನೋಡುತ್ತೇವೆ ಎರಡು ಬಂಡಿಗಳು ನಮಗಾಗಿ ಸಿದ್ಧವಾಗಿವೆ. ನಮಗೋ ಆಶ್ಚರ್ಯ. ಕೇವಲ ಇಬ್ಬರನ್ನು ಕರೆದೊಯ್ಯಲು ಎರಡು ಬಂಡಿಗಳು! ನನ್ನ ಜೊತೆ ಪಾತ್ರ ಮಾಡಿದ ವ್ಯಕ್ತಿಯ ಬಂಡಿಯಲ್ಲಿ ನಾನು, ಅವಳ ಜೊತೆ ಪಾತ್ರ ಮಾಡಿದವರ ಬಂಡಿಯಲ್ಲಿ ಅವಳು ಹೋಗಬೇಕಾಗಿತ್ತು. ನಮಗೆ ತುಂಬಾ ಗಾಬರಿಯಾಗಿತ್ತು. 'ಏನೇ ನಾಗರತ್ನ ಇವರು ನಾಟಕ ಮುಗಿದ ಮೇಲೆ ನಮ್ಮನ್ನು ಊರಿಗೆ ಕಳಿಸುತ್ತಾರೋ ಇಲ್ಲಾ ತಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುತ್ತಾರೋ' ಎಂದು ನನ್ನ ಗೆಳತಿ ಗಾಬರಿಯ ನಡುವೆ ತಮಾಷೆ ಮಾಡಿದಳು. ಅವಳೊಂದು ಬಂಡಿಯಲ್ಲಿ ನಾನೊಂದು ಬಂಡಿಯಲ್ಲಿ ಪ್ರತ್ಯೇಕವಾಗಿ ಹೋದೆವು. ಅಲ್ಲಿಯ ನಾಟಕದ ಮಾಸ್ತರರು ನಮಗೆ ಚಿರಪರಿಚಿತರು. ಇಲ್ಲಿಯ ಪದ್ಧತಿಯೇ ಹಾಗೆ. ಜನರು ತುಂಬಾ ಒಳ್ಳೆಯವರು ನೀವೇನು ಭಯಪಡುವ ಕಾರಣವಿಲ್ಲ ಎಂದು ಮಾಸ್ತರು ಹೇಳಿದಾಗಲೇ ನಮ್ಮ ಎದೆಬಡಿತ ಕಡಿಮೆಯಾದದ್ದು. ನಂತರ ಅಲ್ಲಿ ಯಾವ ಅಪಾಯವೂ ನಮಗೆ ಕಾದಿರಲಿಲ್ಲ'' (ಮರಿಯಮ್ಮನಹಳ್ಳಿ, ರಂಗಸಿರಿ, ನಿರೂ: ಗುಡಿಹಳ್ಳಿ ನಾಗರಾಜ, ಕೆ.ನಾಗರತ್ನ ಆತ್ಮಚರಿತ್ರೆ, ಪುಟ, ೧೪). ಈ ರೀತಿಯಾಗಿ ಗ್ರಾಮೀಣ ರಂಗಭೂಮಿಯ ಕಲಾವಿದರ ಬಾಂಧವ್ಯದ ಬೆಸುಗೆ ಅಷ್ಟು ಸುಮಧುರವಾಗಿರುತ್ತದೆ. ಬಿಸಿಲು, ಮಳೆ, ಗಾಳಿ, ಪ್ರವಾಹ ಹೀಗೆ ಎಲ್ಲವನ್ನು ಅನುಭವಿಸಿ, ಆನಂದಿಸಿ, ಅಭಿವ್ಯಕ್ತಿಸಿ ವೃತ್ತಿಧರ್ಮಕ್ಕೆ ಒಂದು ಅರ್ಥವಂತಿಕೆಯನ್ನು ತಂದು ಕೊಟ್ಟಿದ್ದಾರೆ ಕೆ. ನಾಗರತ್ನ.

ಇನ್ನೂ ವಿಶೇಷವೆಂದರೆ ಸುಭದ್ರಮ್ಮ ಮನ್ಸೂರು ಹಾಗೂ ಕೆ. ನಾಗರತ್ನಮ್ಮರ ಅಭಿಪ್ರಾಯದಂತೆ ''ಉಳ್ಳಾಗಡ್ಡಿ, ಅಲಸಂದಿ, ಮೆಣಸಿನಕಾಯಿ, ಹೆಸರು, ಮಡಿಕೆ, ಹುಣಸೆಹಣ್ಣು ಹೀಗೆ ಹಳ್ಳಿಯಲ್ಲಿ ಕಡಿಮೆ ದರದಲ್ಲಿ ಸಿಕ್ಕರೆ ಇಲ್ಲವೆ ಹವ್ಯಾಸಿ ಕಲಾವಿದರು ಹಾಗೆಯೇ ಅಭಿಮಾನದಿಂದ ಕೊಟ್ಟರೆ ಅವುಗಳನ್ನು ತೆಗೆದು ಕೊಂಡು ಬರುತ್ತಿದ್ದೆವು. ಕೆಲವು ಕಲಾವಿದರು ಎಷ್ಟು ಬೇಕಾದರೂ ತೆಗೆದುಕೊಂಡು ಹೋಗಿ ಅಮ್ಮ ನಮಗೆ ನೀವು 'Free' ಆಗಿ ನಾಟಕ ಆಡಿಹೋಗಿರಿ ಎನ್ನುತ್ತಿದ್ದರು. ಅವರವರ ಜೊತೆ ಪಾತ್ರಧಾರಿಗಳ ಊಟ, ತಿಂಡಿ, ಖರ್ಚುಗಳನ್ನೆಲ್ಲಾ ಬರಿಸುತ್ತಿದ್ದರು. ಒಂದು ದಿನ ಒಬ್ಬರ ಮನೆಯಲ್ಲಿ ಊಟ ಮಾಡಿದರೆ ಇನ್ನೊಂದು ದಿನ ಇನ್ನೊಬ್ಬರ ಮನೆಯಲ್ಲಿ ಹೀಗೆ ಗ್ರಾಮೀಣ ಕಲಾವಿದರ ಆತಿಥ್ಯವನ್ನು ಸ್ವೀಕರಿಸಿದ್ದೆವು ಎಂದು ಸಂತಸವನ್ನು ಹಂಚಿಕೊಳ್ಳುತ್ತಾರೆ.

ತಮಾಷೆಯ ವಿಷಯ ಇನ್ನು ಹೆಚ್ಚು ಹೆಚ್ಚು ಮನದಾಳದಲ್ಲಿ ಉಳಿದಿವೆ ಎನ್ನುತ್ತಾರೆ ಕೆ. ನಾಗರತ್ನಮ್ಮ. ''ಲಂಬಾಣಿ ಹವ್ಯಾಸಿಕಲಾವಿದ ಜತೆ ಪಾತ್ರಧಾರಿ ಕೆ.ನಾಗರತ್ನ. ನಾಟಕದ ದೃಶ್ಯ ಈ ಕಲಾವಿದನೊಂದಿಗೆ ನಾಗರತ್ನಮ್ಮನ ಮದುವೆ. ಮದುವೆ ಮಾಡಿಕೊಂಡಿರುವ ಕಲಾವಿದನಿಗೆ ಅವರ ಜನಾಂಗದವರೆಲ್ಲಾ ಹಣವನ್ನು ಆಯರ್ ಮಾಡಿದರು. ನಾಗರತ್ನಮ್ಮ ಮದುಮಗಳು ಆಕೆಗೂ ಅವರೆಲ್ಲರೂ ಆಯರ್ ಮಾಡಿದಾಗ ಆ ಹಣ ೩೦೦-೪೦೦ ರೂಪಾಯಿ ಆಗಿತ್ತಂತೆ. ಅದು ನಾಗರತ್ನಮ್ಮಗೆ ಖುಷಿಯೋ ಖುಷಿ. ಈ ವಿಷಯವನ್ನು

ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಮಗೆ ಹೇಳಿದರು (ಮರಿಯಮ್ಮನಹಳ್ಳಿ ಕ್ಷೇತ್ರಕಾರ್ಯ, ದಿನಾಂಕ ೧೨-೧೨-೨೦೦೨).

ಹವ್ಯಾಸಿ ಕಲಾವಿದರ ಅತೀಯಾದ ಆತ್ಮೀಯತೆ, ಪ್ರೀತಿ, ವಿಶ್ವಾಸವು ಹೇಳಲಸದಳ. "ನಮಗೆ ನಮ್ಮದೇ ಆದ ಕೌಟುಂಬಿಕ ಜೀವನ, ಸದಾ ನೆರಳಾಗಿರುವ ಸಂಗಾತಿ ಇಂತಹ ವಿಷಯಗಳಲ್ಲಿ ನೊಂದಿರುವ ನಮಗೆ ಹಳ್ಳಿ ಜನರಿಂದ ಸಿಗುವ ಮೆಚ್ಚುಗೆ, ಸಾರ್ವಜನಿಕ ಜೀವನದಲ್ಲಿ ದೊರೆಯುವ ಆತ್ಮೀಯ ಸಂಬಂಧಗಳು ನಮ್ಮನ್ನು ಅವಲಂಬಿಸಿದೆ. ಸೋದರ ಸಂಬಂಧಗಳ ಹೊಣೆ ನಮ್ಮ ಭಾವುಕ ಜಗತ್ತಿನ ತೃಷೆಯನ್ನು ಸ್ವಲ್ಪ ಮಟ್ಟಿಗೆ ತಣಿಸಿದವು" ಎಂದು ನಾಗರತ್ನಮ್ಮ ಹೃದಯತುಂಬಿ ಹೇಳುತ್ತಾರೆ (ನಿರೂ: ಗುಡಿಹಳ್ಳಿ ನಾಗರಾಜ, ಮರಿಯಮ್ಮನಹಳ್ಳಿ ರಂಗಸಿರಿ, (ಕೆ.ನಾಗರತ್ನಮ್ಮನ ಆತ್ಮಚರಿತ್ರೆ) ಪುಟ, ೪೧).

ಇಂಥ ಹೃದಯಪೂರ್ವ ಅಭಿಮಾನ ಎಲ್ಲ ಕಲಾವಿದೆಯರ ಮನದಾಳದಲ್ಲಿ ಇಂದಿಗೂ ಅವು ಮನೆಮಾಡಿ ನಿಂತಿವೆ. ದ್ರೌಪತಿಯಾದ ನಾಗರತ್ನಮ್ಮ ಬಳ್ಳಾರಿ ಆಂಧ್ರಗಡಿ ಭಾಗಗಳಲ್ಲಿ ಹೋದಾಗ ದ್ರೌಪತಿ ಪಾತ್ರಕ್ಕೆ ಕೂಲಿಂಗ್ ಗ್ಲಾಸ್ ಹಾಕಿಸಿ, ವಾಚು ಕಟ್ಟಿಸಿ ಅಭಿನಯಿಸಿದ್ದು ಮುಗ್ಧ ಜನರ ನಿಷ್ಕಲ್ಮಷ ಹೃದಯಗಳ ಪ್ರೀತಿ, ಇವೆಲ್ಲ ಆತ್ಮೀಯತೆಯ ಪ್ರತೀಕ ಎಂದೇ ಹೇಳಬೇಕು.

"ಬಳ್ಳಾರಿಯ ಹತ್ತಿರ ಕಪ್ಪಗಲ್‌ಗೆ ಹೋದಾಗಲೂ ಕೂಡ ನಾಟಕವಾದ ಮಾರನೆಯ ದಿವಸ ನನಗೂ ಹಾಗೂ ಮತ್ತೊಬ್ಬ ಸಹ ಕಲಾವಿದೆ ರೇಣುಕಾಗೂ ಸೀರೆ ಉಡಿಸಿ, ಉಡಿತುಂಬಿಸಿ ಕಳುಹಿಸಿಕೊಟ್ಟರು. ಆ ಊರಿಗೆ ಯಾವ ಕಲಾವಿದೆಯರೇ ಹೋಗಲಿ ಅವರನ್ನು ಇದೇ ರೀತಿ ಗೌರವಿಸಿ ಕಳಿಸುವುದೊಂದು ಪದ್ಧತಿ" (ನಿರೂ: ಗುಡಿಹಳ್ಳಿ ನಾಗರಾಜ, ಮರಿಯಮ್ಮನಹಳ್ಳಿ ರಂಗಸಿರಿ, (ಕೆ.ನಾಗರತ್ನಮ್ಮ ಆತ್ಮಚರಿತ್ರೆ) ಪುಟ, ೪೪).

ಖ್ಯಾತ ಕಲಾವಿದೆ ರಂಗ ಸಾಮ್ರಾಜ್ಞೆ ಮನ್ನೂರು ಸುಭದ್ರಮ್ಮನವರಿಗೂ ಇಂಥ ಜೀವನಾನುಭವ ಬಹಳಷ್ಟು ನಡೆದಿವೆ ಎಂದು ಸಂತಸದಿಂದ ನಮ್ಮೊಂದಿಗೆ ಹಂಚಿಕೊಂಡರು. ಹಳ್ಳಿಗಾಡಿಗೆ ನಡೆದುಕೊಂಡು ಹೋಗುವುದು, ಸೈಕಲ್ ಮೋಟರ್ ಪಟೆ ಪಟೆ ಗಾಡಿ ಮೇಲೆ, ಸೈಕಲ್ ಬಂಡಿ ಹೀಗೆ ಕಷ್ಟಪಟ್ಟು ಎಲ್ಲ ಹಳ್ಳಿಗಳಿಗೂ ಹೋಗಿ ಯಾರಿಗೂ ಕೈಕೊಡದೇ (ಸರಿಯಾದ ಸಮಯಕ್ಕೆ ಹಾಜರಾಗಿ) ರಂಗದೇವಿಯ ಕಲಾಸೇವೆಯನ್ನು ನಾಲ್ಕು ದಶಕಗಳಷ್ಟು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ರಂಗಕೋಗಿಲೆ ಸುಭದ್ರಮ್ಮ ಮನ್ನೂರು ಗ್ರಾಮೀಣ ರಂಗಭೂಮಿಯಲ್ಲಿ ಹಳ್ಳಿಗಾಡಿನ ಜನರ ಮುಗ್ಧತೆ ಹಾಗೂ ಒರಟುತನ ನಟಿಯರಿಗೆ ಒಮ್ಮೊಮ್ಮೆ ಯಾತನೆಯನ್ನು ಕೊಟ್ಟರೆ ಒಮ್ಮೊಮ್ಮೆ ಸಂತೋಷವನ್ನು ನೀಡಿವೆ. ಇನ್ನೊಂದು ವಿಶೇಷವೆಂದರೆ ಗ್ರಾಮೀಣ ಪ್ರೇಕ್ಷಕರು ತಮ್ಮ ಒತ್ತಾಯದ ಮೇರೆಗೆ ಕಲಾವಿದರು ಇಂಥ ಬಟ್ಟೆಯನ್ನೇ ಹಾಕಿಕೊಳ್ಳಬೇಕು. ಅಂದರೆ ಸಾಮಾಜಿಕ ನಾಟಕಗಳಲ್ಲಿ ಹೊಳಪುಳ್ಳ ಬಟ್ಟೆಯನ್ನು ಹಾಕಿಕೊಳ್ಳುವುದಿಲ್ಲ. ಆದರೆ ಮುಗ್ಧತೆಯ ಮನಸ್ಸುಗಳಿಗೆ ಇವರ

ವ್ಯತ್ಯಾಸವೇ ಗೊತ್ತಾಗುವುದಿಲ್ಲ. ಆಗ ನಾಟಕವು ಸಾಮಾಜಿಕವಾದರೂ ಪೌರಾಣಿಕ ವೇಷಭೂಷಣವನ್ನು ಹಾಕಿದ ಪ್ರಸಂಗವನ್ನು ಕೆ.ನಾಗರತ್ನಮ್ಮ ತಮ್ಮ ಆತ್ಮಕಥೆಯಲ್ಲಿ ಬರೆಯುತ್ತಾರೆ. ಇನ್ನು ಕೆಲವು ಧರ್ಮಸಂಕಟ, ಪ್ರಾಣ ಸಂಕಟದ ಸಂದರ್ಭಗಳನ್ನು ವಿವರಿಸುತ್ತಾರೆ. ಬಾಗಳಿಯ ಜಾತ್ರೆಯಲ್ಲಿ ಗೋಣಿಬಸವೇಶ್ವರ ನಾಟಕಕ್ಕೆ ಪಾರ್ವತಿಯಾದ ಇವರು ಪರಮೇಶ್ವರ ಪಾತ್ರಾಧಾರಿಯು ನಿಜವಾದ ನಾಗರಹಾವನ್ನೇ ಕೂರಳಲ್ಲಿ ಧರಿಸಿದ್ದು. ಇವರಿಗೆ ಕೂಡಲು ಭಯವಾಗಿ ಮಾತನಾಡಿದ ಹಾಗೆಲ್ಲಾ ಹಾವು ತಮ್ಮ ಕಡೆಗೆ ಹೆಡೆ ಎತ್ತಿ ನೋಡುವುದು ಹಿಂದಕ್ಕೆ ಸರಿಯಬೇಕೆಂದರೆ ಅಟ್ಟ ಚಿಕ್ಕದಿರುವುದು. ಇಂಥ ಪ್ರಾಣ ಸಂಕಟದ ವಿಷಯ ಈಗ ನೆನೆಸಿಕೊಂಡರೆ ನಗು ಬರುತ್ತೆ ಎನ್ನುತ್ತಾರೆ. ಪಾತ್ರಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ಪಾತ್ರಾಧಾರಿ ಪ್ರವೇಶಮಾಡದೇ ಇದ್ದಾಗ ಇನ್ನೊಂದು ಸೃಷ್ಟಿಸಿ ಮಾತನಾಡಿ ಅಲ್ಲಿಯ ಸಂಕಷ್ಟದಿಂದ ಪಾರಾಗಿ ಪ್ರೇಕ್ಷಕರ ಚಪ್ಪಾಳೇ ಗಿಟ್ಟಿಸಿದ್ದು, ಸಿಂಧನೂರು ತಾಲೂಕು ಜವಳಗೇರಿಯಲ್ಲಿ ಬಸಣ್ಣ ಎಂಬ ಹಾರ್ಮೋನಿಯಂ ಮಾಸ್ತರ, ರಾಯಚೂರು ಜಿಲ್ಲೆಯ ಹಳ್ಳಿಯೊಂದರಲ್ಲಿ 'ವೀರ ಅಭಿಮನ್ಯು' ನಾಟಕ ಕಲಿಸಿದ್ದು, ನಾಟಕ ಆರಂಭವಾಗುವಾಗ ಅತಿಥಿಗಳು ಬರಲು ತಡವಾದ್ದರಿಂದ ಸುಸ್ತಾಗಿರುವ ಮಾಸ್ತರ ಕಾರಲ್ಲಿ ಹೋಗಿ ವಿಶ್ರಾಂತಿ ತೆಗೆದುಕೊಳ್ಳುವಾಗ ನಿದ್ದೆಹತ್ತಿ ಮಲಗಿದ್ದು ಕಾರಿನ ಡ್ರೈವರ್ ಡೋರ್‌ಲಾಕ್ ಮಾಡಿದ್ದು, ಮೈಕಿನಲ್ಲಿ ಮಾಸ್ತರನನ್ನು ಒದರಿದರೂ ಬರದೇ ಇದ್ದುದು, ಬೇರೊಬ್ಬರಿಂದ ನಾಟಕ ಆರಂಭಿಸಿ ನಂತರ ಮಧ್ಯರಾತ್ರಿಯಲ್ಲಿ ಕಾರಿನ ಡ್ರೈವರ್ ಅತಿಥಿಗಳನ್ನು ಕಳುಹಿಸಿಲು ಕಾರಿನ ಡೋರ್ ಓಪನ್ ಮಾಡಿದಾಗ ಒಳಗಡೇ ಧರ್ಮ ಸಂಕಟದಿಂದ ಒದ್ದಾಡುತ್ತಿರುವ ಬಸಣ್ಣ ಮಾಸ್ತರ ಚಂಗನೆ ಹಾರಿ ಬಂದು ವೇದಿಕೆ ಮೇಲೆ ಪ್ರೇಕ್ಷಕರ, ಕಲಾವಿದರ ಕ್ಷಮೆ ಕೋರಿ ಎಲ್ಲರನ್ನು ನಗಿಸಿದ್ದು. ಇವೆಲ್ಲವೂ ಕಲಾವಿದರ ಜೀವನಾನುಭವ, ಅಮೋಘ ಪ್ರಸಂಗಗಳು. ಇಂಥ ಪ್ರಸಂಗಗಳು ಪ್ರತಿಯೊಬ್ಬ ನಟಿಯರ ಜೀವನ ದಲ್ಲೂ ನಡೆದಿರುತ್ತವೆ. ಅವನ್ನು ನೆನೆಸಿಕೊಂಡಾಗ ಮನಸ್ಸಿಗೆ ಸಂತಸವಾಗಿ ಮತ್ತೆ ಮತ್ತೆ ಅವರವರ ಮನದಲ್ಲಿ ಘಟನೆಯನ್ನು ಮೆಲುಕು ಹಾಕುವಂತೆ ಮಾಡುತ್ತವೆ.

ಇಂದು ಕಲಾವಿದರನ್ನು ಕಾಣುವ ರೀತಿಯನ್ನು ಕಂಡರೆ ಮರುಕವೆನಿಸುತ್ತದೆ. ವೃತ್ತಿರಂಗ ಕಲಾವಿದೆಯನ್ನು ಕಾಣುವ ರೀತಿಯಂತೂ ಶೋಚನೀಯ. ಅದು ವೃತ್ತಿ ರಂಗಕಲಾವಿದೆಯರೆಂದರೆ, ಮನೆಯಲ್ಲಿ ಜಗಳ ಮಾಡಿ ಕೊಂಡು, ಓಡಿಹೋಗಿ ಅಲ್ಲಿ ಇಲ್ಲಿ ಇದ್ದು ಕಂಪನಿ ಸೇರಿ ಹೊಟ್ಟೆ ತುಂಬಿಕೊಳ್ಳುವವರು. ಇಲ್ಲದಿದ್ದರೆ ಬದುಕಿನ ದಾರಿಯು ತೋಚದಿದ್ದಾಗ ಇಲ್ಲಿ ಬಂದುಸೇರಿದವರು. ಎಲ್ಲಿಯೂ ಸಲ್ಲದವರು ಇಲ್ಲಿ ಸಲ್ಲುವವ ರೆಂಬಂತೆ. ಒಂದು ವೇಳೆ ಹಾಗೆಯೇ ಸೇರಿದವರೆಂದೇ ತಿಳಿಯೋಣ. ಅದೇ ರೀತಿ ಬಂದು ಸೇರಿದವರು ಕ್ರಮೇಣ ಶ್ರದ್ಧೆಯಿಂದ, ಶ್ರಮದಿಂದ ದುಡಿಯುತ್ತ, ದುಡಿಯುತ್ತ ಪ್ರಗತಿಯನ್ನು ಸಾಧಿಸುತ್ತ ತಮ್ಮನ್ನೇ ತಾವು ಕಲಾ ಬದುಕಿಗೆ ಅರ್ಪಿಸಿಕೊಂಡಿದ್ದಾರೆ. ಇಂದಿಗೂ ಇನ್ನೂ ಸಮರ್ಪಿಸಿಕೊಳ್ಳುತ್ತಿದ್ದಾರೆ. ಇಂಥವರ ಬಗ್ಗೆ ನಾವು ಗೌರವಿಸಲರಿಯದಿದ್ದರೆ ಹೇಗೆ? ಅದು ಬುದ್ಧಿಜೀವಿಗಳೆನಿಸಿಕೊಂಡವರು ಕಾಣುವ ಸ್ಥಿತಿ ಎಂಥದು. ತಾವೂ ರಂಗಭೂಮಿಯಲ್ಲಿ ಹೆಚ್ಚು ಪ್ರಗತಿ ಅಭಿವೃದ್ಧಿಯನ್ನು ಸಾಧಿಸಿದವರು ಸಹ ಕಲಾವಿದರನ್ನು ನೋಡುವ ದೃಷ್ಟಿ,

ಎಂಥದ್ದು? ಕೊಡುವ ಗೌರವವಾದರೂ ಎಷ್ಟು? ಕೆಲವರಂತೂ ಇವರನ್ನು ಕಲಾವಿದರೇ ಅಲ್ಲವೆಂದು, ಹೇಳಿದ್ದನ್ನು ಕೇಳುವಾಗ ನಮ್ಮ ಕಣ್ಣುಗಳೇ ನಂಬಲಾರದಂಥ ದುಃಸ್ಥಿತಿಯಾಗಿ ಮುಂದುವರಿದವರು ಮಾತನಾಡುತ್ತಾರೆ.

ಇಷ್ಟೆಲ್ಲಾ ನೋವುಗಳ ನಡುವೆ ರಂಗಭೂಮಿಯನ್ನು ನಂಬಿ ಅದಕ್ಕಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡು ದುಡಿಯುತ್ತಿದ್ದಾರೆ. 'ನಿಜ' ಬದುಕಿನಲ್ಲಿ ಹೊಟ್ಟೆಬಟ್ಟೆಗಿಲ್ಲದಿದ್ದರೂ ರಂಗದ ಮೇಲೆ ಅರಸರಾಗಿ, ರಾಣಿಯರಾಗಿ, ಅಧಿಕಾರಿಗಳಾಗಿ ಮೆರೆಯುತ್ತಾರೆ. ಬದುಕಿನ ನೋವು, ದುಃಖಗಳನ್ನು ಹತ್ತಿಕ್ಕಿಕೊಂಡು ನಗುತ್ತಾರೆ, ನಗಿಸುತ್ತಾರೆ. ಇವರ ಬದುಕಿನ ಒಂದೊಂದು ಘಟನೆ, ಒಂದೊಂದು ಪ್ರಸಂಗ ಕೇಳಿದರೆ ನೋವೆನಿಸುತ್ತದೆ. "ಕರ್ಮವೇ ಇಹಪರ ಸಾಧನವು" ಎನ್ನುವ ಕವಿವಾಣಿಯಂತೆ ದುಡಿಯುವುದೊಂದೇ ಇವರ ಬದುಕಾಗಿದೆ. ಬಡತನ ಇವರನ್ನು ಬಿಡುತ್ತಿಲ್ಲೋ ಇವರು ಬಡತನವನ್ನು ಬಿಡುತ್ತಿಲ್ಲೋ ತಿಳಿಯದು ಅಂಥ ಬಾಂಧವ್ಯ. ಕೆಲವರ ಪ್ರಸಂಗಗಳಂತೂ ತೀರಾ ದುಃಖದಾಯಕ. ಹೆರಿಗೆಯಾದ ಮಾರನೆಯ ದಿನ ಬಣ್ಣ ಹಚ್ಚಿದ್ದು, ಮಕ್ಕಳ ಔಷಧಕ್ಕೆ ದುಡ್ಡಿಲ್ಲದೆ ಕೊನೆಯುಸಿರೆಳೆದದ್ದು, ಎಷ್ಟೋ ಸಲ ಮಕ್ಕಳಿಗೆ ಚುರುಮುರಿ ತಿನಿಸಿ, ನೀರು ಕುಡಿಸಿ ಮಲಗಿಸಿದ್ದು, ಕೇಳಿದರೆ ಕರುಳು ಚುರ್ರೆನ್ನುತ್ತದೆ. ಇಂತಹ ಪ್ರಸಂಗಗಳು ಬಹುಪಾಲು ಕಲಾವಿದರ ಬದುಕಿನಲ್ಲಿವೆ (ಲೇ: ಗವೀಶ್ ಹಿರೇಮಠ, ರಂಗಕುಸುಮಗಳು, ಪುಟ, ೯-೧೦).

ಕಲಾವಿದೆಯರಿಗೆ ಬಣ್ಣದ ಬದುಕು ಚೆಂದವಾಗಿದ್ದರೂ ಅದರ ಹಿಂದಿನ ನೋವು ಅಪಾರ. ಆದ್ದರಿಂದ ಸರೋಜಮ್ಮ ಕಂದ ಕರೂರ ಇಳಕಲ್ಲ ಇವರು ಕಲಾವಿದೆಯರಿಗೆ ನೀಡುವ ಸಂದೇಶವೆಂದರೆ "ನೀವು ಬರೀ ಕನಸುಗಳನ್ನು ಹೊತ್ತುಕೊಂಡು ಬರಬೇಡಿ. ಹಾಗೆ ಬಂದರೆ ಖಂಡಿತ ನಿಮಗಿಲ್ಲಿ ನಿರಾಸೆ. ನಿಮ್ಮ ಮುಂದೋಡುವ ಮಾಯಾಮೃಗದ ಬೆನ್ನು ಹತ್ತಬೇಡಿ. ನಿಮಗೆ ರಂಗಭೂಮಿ ಬಹು ಆಕರ್ಷಕವಾಗಿ ಕಂಡಿರಬೇಕು. ನಿಮಗೆ ಕಾಣುವ ರಂಗುರಂಗಿನ ಬೆಳಕು, ಹೊಳಪು ಸ್ಥಿರವಾಗಿ ನಿಮ್ಮ ಬದುಕಿನಲ್ಲಿ ನಿಲ್ಲವು ನಿಜವಾಗಿಯೂ ರಂಗಭೂಮಿ ಸೇವೆಮಾಡುವ ಆಸಕ್ತಿ ಇದ್ದರೆ ಧೈರ್ಯದಿಂದ ಕಾಲಿರಿಸಿ. ಇಲ್ಲಿ ವಿಧಿ ಕ್ರೂರವಾಗಿರುತ್ತದೆ. ಅದನ್ನು ಸಹಿಸುವ ತಾಳ್ಮೆಯ ಶಕ್ತಿ ನಿಮಗಿದ್ದರೆ ಬನ್ನಿ" ಈ ಎಲ್ಲ ಮಾತುಗಳು ಉಪದೇಶವಾಗಿರದೆ ಅನುಭವದ, ಅನುಭವಿಸಿದ ಮಾತುಗಳಾಗಿವೆ (ಲೇ: ಗವೀಶ್ ಹಿರೇಮಠ, ವಿಜಯ ಕರ್ನಾಟಕ ಪತ್ರಿಕೆ, ೨೫ ಎಪ್ರಿಲ್ ೨೦೦೩).

ರಂಗ ಬದುಕು ಯಾವೊಬ್ಬ ನಟಿಗೆ ನೆಮ್ಮದಿ ನೀಡಿದೆಯೋ ಗೊತ್ತಿಲ್ಲ. ರಂಗಜೀವನ ಬರೀ ವೇದಿಕೆಯಲ್ಲಿ ನಡೆದಿರುವ ಘಟನೆಗಳನ್ನೇ ಮೆಲುಕು ಹಾಕುತ್ತಾ ಜೀವನ ಸಾಗಿಸುವುದೊಂದೇ ಕಲಾವಿದೆಯರಿಗೆ ಮಾರ್ಗವಾಗಿದೆ. ಅದನ್ನು ಬಿಟ್ಟರೆ ವಿಧಿಯಿಲ್ಲ. ರಂಗ ಜೀವನದಲ್ಲಿ ಕಾಲೇಜು ಕನ್ಯೆಯಾಗಿ, ಶ್ರೀಮಂತರ ಹೆಂಡತಿಯಾಗಿ, ಮಗಳಾಗಿ, ಹಾಸ್ಯನಟಿಯಾಗಿ ಹೀಗೆ ನಾಯಕಿ, ಹಾಸ್ಯನಟಿ, ಖಳನಾಯಕಿಯಾಗಿ, ಕೆಲಸದಾಳಾಗಿ ರಂಗ ಜೀವನದ ಹಲವು ಹಂತಗಳ ಪಾತ್ರಧಾರಿಗಳಾಗಿ, ರಂಗ ಜೀವನದಲ್ಲಿ ಕುಣಿದಿದ್ದಾರೆ, ನಲಿದಿದ್ದಾರೆ, ಹಾಡಿದ್ದಾರೆ, ಅತ್ತಿದ್ದಾರೆ, ನಕ್ಕಿದ್ದಾರೆ. ಎಲ್ಲಾ ಸಂದರ್ಭಗಳಿಗೆ ತಕ್ಕಂತೆ ಹೆಜ್ಜೆ ಹಾಕಿದ್ದಾರೆ ಈ ಕಲಾವಿದೆಯರು.

ಹಾಕಿದ ಹೆಜ್ಜೆಗಳಲ್ಲಿ ಕೆಲವರ ನಾದ ಕೇಳಿದೆ, ಕೆಲವರ ನಾದವು ಅಲ್ಲಿಯೇ ಲೀನವಾಗಿ ಹೋಗಿದೆ. ಕಾಲವು ಕೆಲವರನ್ನು ಕೇಳುವಂತೆ ಮಾಡಿದೆ, ಕೆಲವರನ್ನು ಅಳುವಂತೆ, ಇನ್ನು ಕೆಲವರನ್ನು ನಗುವಂತೆ, ಹೀಗೆ ಆಯಾ ಕಲಾಜೀವಿಗಳ ಜೀವಂತಿಕೆಯನ್ನು ಕಲಾರಾಧಕರಾದ ಕಲಾವಂತಿಕೆಯರು ನಗುವ, ಅಳುವವೇದನೆ ಪಡುವ ಪಾತ್ರಗಳಾಗಿ ಆಯಾಯ ಪಾತ್ರಗಳು ಆಯಾಯ ಕಾಲಘಟ್ಟಗಳಲ್ಲಿ ಇಷ್ಟವಿದ್ದರೇನಂತೆ, ಬಿಟ್ಟರೇನಂತೆ ಅಲ್ಲಿಯ ವ್ಯವಸ್ಥೆಗೆ ತಕ್ಕಂತೆ, ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿದವರಿದ್ದಾರೆ. ಹೆಜ್ಜೆ ಹಾಕುವಾಗ ಸೋತು ಸುಣ್ಣವಾದವರು ಹಾಗೆಯೇ ನಿಂತವರು ಕುಣಿಯಲಾರದೆ, ನಲಿಯಲಾರದೆ ಸ್ತಂಭಿಭೂತವಾದ ನಟಿಯರಿಗೇನೂ ಕೊರತೆಯಿಲ್ಲ ಎಂದೇ ಹೇಳಬೇಕಾಗುತ್ತದೆ.

ನಟಿಯರು ಹಿಂದಿನ ಪರಂಪರೆಯನ್ನು ಗಮನಿಸಿ ಚಾರಿತ್ರ್ಯ ಶುದ್ಧಿ, ಕಲೆಯಬಗ್ಗೆ ನಿಷ್ಠೆ, ಸಂಸ್ಕೃತಿ-ಗೌರವ ಗಳನ್ನು ತಮ್ಮದಾಗಿಸಿಕೊಂಡು, ವೃತ್ತಿಧರ್ಮಕ್ಕೆ ಮೋಸಮಾಡದೆ ನಿರಂತರವಾಗಿ ಇವುಗಳನ್ನು ರೂಢಿಸಿಕೊಂಡು ಮುನ್ನಡೆದರೆ ಕಲಾವಿದರು ಯಶಸ್ಸು ಪಡೆಯುವುದರಲ್ಲಿ ಎರಡು ಮಾತಿಲ್ಲ. ಇದು ಅವರವರ ಕಲಾಬದುಕು ಅಪಾರ ಪ್ರಯತ್ನಕ್ಕೆ ತಕ್ಕಂತೆ, ತಮ್ಮ ಅಭಿನಯದಿಂದ ಜನರನ್ನು ಮಂತ್ರಮುಗ್ಧರನ್ನಾಗಿಸಿ, ರಂಗಭೂಮಿಯ ರಂಗಚರಿತ್ರೆಯಲ್ಲಿ ಘನತೆಯನ್ನು ಮೆರೆದ ನಟಿಯರು ಬಳ್ಳಾರಿ ಜಿಲ್ಲೆಯಲ್ಲಿದ್ದಾರೆ.

ಸುಭದ್ರಮ್ಮ ಮನ್ಸೂರರು ಬಳ್ಳಾರಿಯ ಶ್ರೀ ಜ್ವಾಲಾಪತಿ, ಶ್ರೀಮತಿ ಎ.ಭಾಗ್ಯಮ್ಮ ಕಲಾ ದಂಪತಿಗಳಲ್ಲಿ ಎರಡನೆಯ ಮಗಳಾಗಿ ೧೯೩೦ರಲ್ಲಿ ಹುಟ್ಟಿದರು. ಮೂರು ಜನ ಸಹೋದರರನ್ನು, ಇಬ್ಬರು ಸಹೋದರಿ ಯರನ್ನು ಪಡೆದಿದ್ದಾರೆ. ತಂದೆ ಹಾರ್ಮೋನಿಯಂ ವಾದ್ಯ ಹಾಗೂ ಸಂಗೀತಗಾರರು. ತಾಯಿ ಸಂಗೀತಗಾರ ಳಾಗಿದ್ದಳು. ೬ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಬಹಳ ಬೇಗನೇ ಕಲೆಯ ಬದುಕಿಗೆ ಶರಣಾದವರು. ಹಿಂದೆ ವೃತ್ತಿರಂಗ ನಾಟಕಗಳಲ್ಲಿ ಹಾಡುಗಾರಿಕೆಗೆ ಹೆಚ್ಚು ಪ್ರಾಧಾನ್ಯತೆಯಿದ್ದುದರಿಂದ ಕಂಪನಿಗಳು ಬಾಲ್ಯ ದಲ್ಲಿಯೇ ಸುಭದ್ರಮ್ಮನವರನ್ನು ಆಹ್ವಾನಿಸಿದವು. ಸುಭದ್ರಮ್ಮನವರಿಗೂ ಸಂಗೀತದಲ್ಲಿ ಏನನ್ನಾದರೂ ಸಾಧಿಸಬೇಕೆಂದು, ರಂಗಭೂಮಿ ಕ್ಷೇತ್ರವನ್ನು ಸುಭದ್ರಮ್ಮ ಆರಿಸಿಕೊಂಡರು.

“ಅಭಿನಯ ಹಾಗೂ ಹಾಡುಗಾರಿಕೆಯಿಂದ ಜನಪ್ರಿಯವಾಗಿರುವ ಸುಭದ್ರಮ್ಮ ಮನ್ಸೂರು ಸಾವಿರಾರು ಹೃದಯಗಳನ್ನು ಅರಳಿಸಿದವರು. ರಂಗಭೂಮಿಗಾಗಿ, ಸಂಗೀತಕ್ಕಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡವರು. ಸುಮಧುರ ಕಂಠದಿಂದ ಭಕ್ತಿಗೀತೆಗಳನ್ನು, ವಚನಗಳನ್ನು ಹಾಡಿ ಸಂಗೀತಪ್ರಿಯರಿಗೆ ರಸದೌತಣ ನೀಡಿದವರು. ಮಧುರ ಕಂಠದ ವಚನಗಳನ್ನು ಕೇಳಿದಾಗ ಮನ-ಹೃದಯ ಪಾವನಗೊಳ್ಳುತ್ತವೆ. ವಚನದ ತುಂಬ ತುಂಬಿರುವ ಆತ್ಮಚೈತನ್ಯ, ಸತ್ಯ, ಸೂಕ್ಷ್ಮ ಧ್ವನಿಗಳು ಬೆಳಕಿನ ಕಿರಣಗಳಾಗಿ ಹರಡುತ್ತವೆ. ಮನಸ್ಸು ಕೇಳುತ್ತ ಕೇಳುತ್ತ ಸುಖಸ್ಥಾಯಿಯಲ್ಲಿ ನಿಲ್ಲುತ್ತದೆ. ಅದೊಂದು ಅಪೂರ್ವ ಅನುಭವ.

ಸುಭದ್ರಮ್ಮನವರ ಅಭಿನಯವು ರಂಗಭೂಮಿಯಲ್ಲಿ ಬಹು ಗೌರವದ ಸ್ಥಾನಪಡೆದಿದೆ. ರಂಗಭೂಮಿಯ ಮೇಲಿನ ಅಭಿನಯದಲ್ಲಿಯ ಅವರ ಶ್ರಮ, ಶ್ರದ್ಧೆ ಅವರಿಗೆ ಶ್ರೇಷ್ಠತೆಯನ್ನು ತಂದುಕೊಟ್ಟಿವೆ. ಅಭಿನಯದ

ಅಂಶಗಳನ್ನೊಳಗೊಂಡ ಈ ಕಲಾವಿದೆ ನಾಯಕಿಯ ಎಲ್ಲಾ ಲಕ್ಷಣವನ್ನು ಪಡೆದಿದ್ದಾರೆ. ಎತ್ತರದ ಸದೃಢ ಮೈಕಟ್ಟು, ದುಂಡು ಮುಖ, ನೀಳಕೇಶರಾಶಿ, ಮಾತನಾಡುವ ಕಪ್ಪು ಕಣ್ಣುಗಳು ಎಲ್ಲವೂ ಆಕರ್ಷಕ. ಯಾವ ಪಾತ್ರದಲ್ಲಿಯೇ ಪ್ರವೇಶಿಸಲಿ ಜನಮನ ಸೆಳೆಯುತ್ತಾರೆ. ಪಾತ್ರವನ್ನು ಸಂಪೂರ್ಣ ಅರಗಿಸಿಕೊಂಡು ಅಭಿನಯಿಸುವ ಅವರ ಅಭಿನಯ ಪ್ರೌಢತೆಯನ್ನು ತೋರಿಸುತ್ತವೆ (ಲೇ: ಗವೀಶ್ ಹಿರೇಮಠ, ರಂಗಕುಸುಮಗಳು, ಪುಟ, ೨೩).

ನಲವತ್ತು ದಶಕಗಳಕಾಲ ಸುಭದ್ರಮ್ಮ ಕಲೆಯ ಸೇವೆಯನ್ನು ಜೀವನದ ಉಸಿರನ್ನಾಗಿಸಿಕೊಂಡಿದ್ದಾರೆ. ಸಮಗ್ರ ಆಸಕ್ತಿ, ಶ್ರಮದಲ್ಲಿ ದಕ್ಷತೆ, ಗುರಿಮುಟ್ಟಿಯೇ ತೀರಬೇಕೆಂಬ ಮಹತ್ವಾಕಾಂಕ್ಷೆ, ಜೊತೆಗೆ ಅವರು ವೃತ್ತಿರಂಗಭೂಮಿ ಹಾಗೂ ಪತಿ ಲಿಂಗರಾಜ ಮನ್ನೂರು ಅವರಿಂದ ಪಡೆದುಕೊಂಡಿರುವಂಥಹ 'ರಂಗ ಸಂಸ್ಕಾರ' ಸುಭದ್ರಮ್ಮನವರನ್ನು ರಂಗಭೂಮಿಯ 'ಕಲಾಸಾಮ್ರಾಜ್ಞೆ' ಯಾಗುವಂತೆ ಮಾಡಿದೆ.

ತಮ್ಮ ಅಪಾರ ಪ್ರತಿಭೆಯಿಂದ ವಿಶಿಷ್ಟಕಲೆಯನ್ನು ಮೈಗೂಡಿಸಿಕೊಂಡಿರುವ ಇವರು ಕಲೆಯಲ್ಲಿ ಯಾರನ್ನು ಅನುಕರಿಸಿಲ್ಲ. ಕೆಲವರ ಪ್ರಭಾವವನ್ನು ಮನದಲ್ಲಿ ಮೂಡಿಸಿಕೊಂಡಿರಬಹುದು. ಯಾರ ಅನುಕರುಣೆಯಿಲ್ಲದೆ ಕಲೆಯಲ್ಲಿ ನೈಜತೆ, ಸ್ವಂತಿಕೆ ಇದೆ. ಹೀಗೆ ತನ್ನತನವನ್ನು ಮೆರೆದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿ ಬಳ್ಳಾರಿ ಜಿಲ್ಲೆಯ ರಂಗಚರಿತ್ರೆಯಲ್ಲಿ ಮಿನುಗು ನಕ್ಷತ್ರವಾಗಿದ್ದಾರೆ.

ಸುಭದ್ರಮ್ಮನವರ ವಿಶೇಷವಾದ ಪಾತ್ರ 'ರಕ್ತರಾತ್ರಿ' ನಾಟಕದಲ್ಲಿ ದ್ರೌಪತಿ. ಉತ್ತರ ಕರ್ನಾಟಕದ ಪ್ರತಿ ಹಳ್ಳಿಯಲ್ಲಿಯೂ ಸುಭದ್ರಮ್ಮ ಮಿಂಚಿದ್ದಾರೆ. ಇದರೊಂದಿಗೆ ಚಿರಪರಿಚಿತರೂ ಆಗಿದ್ದಾರೆ. 'ದ್ರೌಪತಿ' ಪಾತ್ರವನ್ನು ಇವರಿಗಿಂತ ಮಿಗಿಲಾಗಿ ಮಾಡುವ ಇನ್ನೊಬ್ಬ ನಟಿಯೇ ಇಲ್ಲ. ಎಂದರೆ ಖಂಡಿತ ಉತ್ಪ್ರೇಕ್ಷೆಯಾಗಲಾರದು. ಪ್ರಸಿದ್ಧ ಕಲಾವಿದರಾಗಿ ಹೋದ ಎಲಿವಾಳ ಸಿದ್ಧಯ್ಯನವರು ಅಶ್ವತ್ಥಾಮರಾಗಿ, ಸುಭದ್ರಮ್ಮ ದ್ರೌಪತಿಯಾಗಿ ರಂಗ ವೇದಿಕೆಗೆ ಬಂದರೆ ರಂಗಭೂಮಿ ರಂಗೇರುತ್ತಿತ್ತು. ಕಣ್ಣು ಮಿಟುಕಿಸದೇ ಪ್ರೇಕ್ಷಕರು ಬಾಯಿ ತೆರೆದುಕೊಂಡು ಅಬ್ಬಬ್ಬಾ ಎಂದು ಶಹಬಾಸ್‌ಗಿರಿ ಹೇಳುತ್ತಾರೆ. ಚಪ್ಪಾಳೆ ಗಿಟ್ಟಿಸಿ ಸೀಟಿ ಹೊಡೆಯುತ್ತಾರೆ. ಪ್ರೇಕ್ಷಕರನ್ನು ಸುಭದ್ರಮ್ಮ ಮಹಾಭಾರತಕಾಲಕ್ಕೆ ಕೊಂಡೊಯ್ಯುತ್ತಾರೆ.

ಮಹಾಭಾರತದ ಕೇಂದ್ರ ಪಾತ್ರವಾಗಿರುವ ದ್ರೌಪತಿ ಪಾತ್ರ ನಿರ್ವಹಿಸವ ಸ್ತ್ರೀತ್ವದ ಎಲ್ಲ ಗುಣ ಲಕ್ಷಣಗಳನ್ನು ಹೊಂದಿದ್ದಾರೆ. ಈ ಪಾತ್ರದ ಎಲ್ಲಾ ಸ್ವಭಾವ, ಗುಣ, ಆಲೋಚನೆಯನ್ನು ಬಿಂಬಿಸುವ ಸುಭದ್ರಮ್ಮ ಸಂಪೂರ್ಣವಾಗಿ ಆಕರ್ಷಿಸಲ್ಪಡುತ್ತಾರೆ. ಅಭಿನಯದ ಪ್ರತಿಯೊಂದು ಹಂತವನ್ನು ಸೂಕ್ಷ್ಮವಾಗಿ ವೀಕ್ಷಿಸಿದಾಗ ಅದೆಷ್ಟು ಆಳವಾಗಿ ಅಭಿನಯವನ್ನು ರಕ್ತಗತಮಾಡಿಕೊಂಡಿದ್ದಾರೆ ಎಂದು ಅನಿಸುತ್ತದೆ.

"ಅವಮಾನಿತಳಾದ ದ್ರೌಪದಿ ಪ್ರತಿಜ್ಞೆ ಮಾಡುವ ಛಲ, ರಣರಂಗದಲ್ಲಿ ಬೆಂಕಿಕಾರುವ ಮಹಿಳೆಯಾಗಿ ಕಾಣುವ ಸಂದರ್ಭ ಅದ್ಭುತವೆನಿಸುತ್ತವೆ. ಅಲ್ಲಿಯ ರೋಷದ ನುಡಿಗಳನ್ನು ಪ್ರತೀಕಾರದ ಭಾವನೆಗಳನ್ನು

ವ್ಯಕ್ತಪಡಿಸುವ ರೀತಿ ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ಸಿಟ್ಟು, ರೋಷ ಕಣ್ಣಲ್ಲಿಯೇ ತುಂಬಿ ತುಳುಕುತ್ತಿರುತ್ತದೆ. ಶೃಂಗಾರ ಸಾಗರವೇ ಪುಟಿದೆದ್ದು ಬರುವ ಚಲುವೆಯಾಗಿದ್ದ ದ್ರೌಪದಿ ರಣರಂಗದಲ್ಲಿ ಕೂದಲು ಚಲ್‌ಹೊಡೆದು (ಹರವಿಕೊಂಡು) ಚಾಮುಂಡಿಯಾಗಿ ಕಾಣಿಸಿಕೊಂಡಾಗ ಅದೇ ದ್ರೌಪದಿಯೇ ಇವಳು ಎಂದು ಆಶ್ಚರ್ಯವಾಗುತ್ತದೆ. ಮಾತುಗಳಲ್ಲಿಯ ಏರಿಳಿತ, ಅದಕ್ಕೆ ತಕ್ಕ ಅಭಿನಯ ಎಲ್ಲವೂ ಸುಭದ್ರಮ್ಮನವರ ಪ್ರೌಢಿಮೆಯನ್ನು ಸಾರುತ್ತವೆ. ಈ ಪಾತ್ರದಿಂದಲೇ ಅವರ ಅಭಿನಯ ಸಾಮರ್ಥ್ಯ ಸಾರ್ಥಕಗೊಳ್ಳುತ್ತದೆ" (ಲೇ: ಗವೀಶ್ ಹಿರೇಮಠ, ರಂಗಕುಸುಮಗಳು, ಪುಟ, ೨೬).

ಇನ್ನೂ ಹೆಚ್ಚು ಜನಪ್ರಿಯತೆಗಳಿಸಿರುವ ಶ್ರೀ ನಲವಡಿ ಶ್ರೀಕಂಠ ಶಾಸ್ತ್ರಿಗಳು 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿ ಮಲ್ಲಮ್ಮ ಪಾತ್ರ. ಮಲ್ಲಮ್ಮನ ಭಾವನೆಗಳನ್ನು, ಭಕ್ತಿಯನ್ನು, ಅತ್ತೆ ಮಾವರಿಗೆ ಕೊಡುವ ಗೌರವ, ಪತಿಯೇ ಸರ್ವಸ್ವ ಎಂದು ಎಂಥ ತ್ಯಾಗಕ್ಕೂ ಸಿದ್ಧ ಎನ್ನುವ ಭಾವನೆಗಳನ್ನು ವ್ಯಕ್ತಪಡಿಸುತ್ತಿರುವಾಗ ಪ್ರತ್ಯಕ್ಷವಾಗಿ ಸಾಕ್ಷಾತ್ ಮಲ್ಲಮ್ಮನೇ ಎದುರು ಬಂದು ಮುಂದೆ ನಿಂತಂತೆ ಆಗುತ್ತದೆ. ಈ ಪಾತ್ರ ಎಷ್ಟೋ ಹೆಣ್ಣುಮಕ್ಕಳ ಮನಮಿಡಿವ ಪಾತ್ರವಾಗಿದೆ. ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಕಲಾವತಿಪಾತ್ರ ತುಂಬಾ ನೈಜತೆಯಿಂದ ಕೂಡಿದ್ದು, ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯಸಂಘದಲ್ಲಿ ಬಹುಪ್ರಸಿದ್ಧಿಯನ್ನು ಹೊಂದಿದೆ. ಹಿರಣ್ಣಯ್ಯನವರ ಕಂಪನಿಯಲ್ಲಿ ಲಂಚಾವತಾರ, ದೇವದಾಸಿ, ಹೆಣ್ಣಿನ ಹರಾಜ, ಬಿಕನಾಸಿ, ಕಾಪಿವಿಲಾಸ ಮುಂತಾದ ಕ್ರಾಂತಿಕಾರಿ ವಿಚಾರಗಳ ನಾಟಕಗಳಲ್ಲಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ್ದಾರೆ.

ಸುಭದ್ರಮ್ಮ ಇದ್ದರೆ ಗಲ್ಲಾಪೆಟ್ಟಿಗೆಗೆ ಯಾವ ಕಂಪನಿಗೂ ಹಾನಿಯಾಗದ ಭರವಸೆಯ ನಟಿ ಸುಭದ್ರಮ್ಮ ಮನ್ಸೂರ್. ಬಳ್ಳಾರಿ ಜಿಲ್ಲೆಯಲ್ಲಿ ರಕ್ತರಾತ್ರಿ ನಾಟಕಕ್ಕೆ

ದ್ರೌಪದಿ	-	ಮನ್ಸೂರು ಸುಭದ್ರಮ್ಮ ಬಳ್ಳಾರಿ
ಶಕುನಿ	-	ಎಲುವತ್ತಿ ವೀರಣ್ಣ
ಅಭಿಮನ್ಯು	-	ಎಲಿವಾಳ ಸಿದ್ದಯ್ಯ
ಅರ್ಜುನ	-	ಕೋಗಳಿ ಪಂಪಣ್ಣ
ಭಾನುಮತಿ	-	ಪಿ.ಪದ್ಮ ಕೂಡ್ಲಿಗಿ
ಉತ್ತರೆ	-	ಕೆ.ನಾಗರತ್ನ
ಮದಹಂಸಿ	-	ಎಸ್.ರೇಣುಕಾ

ಈ ರೀತಿಯಾಗಿ ಎಲ್ಲಾ ನಟ-ನಟಿ ಸಾರ್ವಭೌಮರು ರಂಗಭೂಮಿಗೆ ಬಂದರೆಂದರೆ ನೋಡಲು ಕಣ್ಣುಗಳು ಸಾಲವು. ನಟನಾ ಪ್ರೌಢತೆ ಮೆಚ್ಚುವಂತೆ ಪ್ರೇಕ್ಷಕರ ಮನಕ್ಕೆ ಮುದ ನೀಡುವಂತೆ ಕಲಾ ಆರಾಧಕರು ನಟಿಸಿ

ಬಳ್ಳಾರಿ ಜಿಲ್ಲೆಯ ರಂಗಭೂಮಿಯನ್ನು ಉತ್ತುಂಗಕ್ಕೆ ಏರಿಸಿದ್ದಾರೆ. ಇವರೊಂದಿಗೆ ಎಷ್ಟೋ ತಂಡ ಮಾಡಿಕೊಂಡು ಸ್ಪರ್ಧೆಗಳಲ್ಲಿ ಭಾಗವಹಿಸಿ ಅಭಿನಯಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ.

ಸುಭದ್ರಮ್ಮನವರನ್ನು ಹೊಗಳದ ಪತ್ರಿಕೆಗಳೇ ಇಲ್ಲ. ಇಡೀ ಕರ್ನಾಟಕದ ಎಲ್ಲಾ ಪತ್ರಿಕೆಗಳು ಇವರ ಪ್ರೌಢ ಅಭಿನಯವನ್ನು ನಟನೆಯ ಚಾತುರ್ಯದ ಸೈಜತೆಯನ್ನು ಇವರು ಪಡೆದಿರುವ ರಂಗ ಸಂಸ್ಕಾರವನ್ನು, ಮೆಚ್ಚಿ, ಹೊಗಳಿ ಎಪ್ಪತ್ತರ ದಶಕದ ಈಚಿನ ದಿನಗಳನ್ನು "ಸುಭದ್ರಮ್ಮನ ಯುಗ" ಎಂದೇ ರಂಗತಜ್ಞರು ಶ್ಲಾಘಿಸುತ್ತಾರೆ. ಇವರ ಅಕ್ಕಮಹಾದೇವಿಯ ವಚನವಾದ ಬೆಟ್ಟದಾ ಮೇಲೊಂದು ಮನೆಯಮಾಡಿ ಹಾಗೂ ಮಲ್ಲಿನಾಥ ಧ್ಯಾನ ವಚನ ಗಾಯನವನ್ನು ಆಸ್ವಾದಿಸಿದ ಪ್ರೇಕ್ಷಕರು ಇವರನ್ನು 'ರಂಗಕೋಗಿಲೆ' ಎಂದೇ ಕರೆಯುತ್ತಾರೆ. ನಾಡಿನ ಎಲ್ಲಾ ಆಕಾಶವಾಣಿ ಕೇಂದ್ರಗಳಲ್ಲಿ ಇವರ ವಚನಗಳು ಆಗಾಗ ಬಿತ್ತರಗೊಳ್ಳುತ್ತಿರುತ್ತವೆ.

ಕೂಡ್ಲಿಗಿಯ ಪಿ.ಪದ್ಮ, ರಾಮಚಂದ್ರಪ್ಪ, ಹನುಮಂತಮ್ಮರಿಗೆ ೯ನೇ ಮಗುವಾಗಿ ಜನಿಸಿದ್ದಾರೆ. ಸಾಮಾನ್ಯ ಕೃಷಿಕ ಕುಟುಂಬದಲ್ಲಿ ಹುಟ್ಟಿ, ೭ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಪರಂಪರಾಗತವಾಗಿ ಬಂದಿರುವ ರಂಗ ಕಲಾವಿದೆಯಾದರು. ಇವರ ತಾಯಿಯ ತಂಗಿ ಚಿಕ್ಕಮ್ಮ ಲಕ್ಷ್ಮಿ ಎಂಬ ನಟಿಯ ಪ್ರೇರಣೆಯಿಂದ ರಂಗಭೂಮಿಗೆ ಕಾಲಿಟ್ಟಿದ್ದಾರೆ. ತಮ್ಮ ೧೦ ನೇ ವರ್ಷದ ಬಾಲ್ಯದಲ್ಲಿಯೇ ಪದ್ಮರು ರಂಗಭೂಮಿಗೆ ಕಾಲಿಟ್ಟಿದ್ದಾರೆ. ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ಜಾನಪದ ಈ ಎಲ್ಲಾ ನಾಟಕಗಳಲ್ಲಿ ಪಾತ್ರಮಾಡಿ ರಂಗಸೇವೆ ಗೈದಿದ್ದಾರೆ.

ಆರಂಭದಲ್ಲಿ ಪದ್ಮ ದಾಸಿಯ ಪಾತ್ರ ಮಾಡುತ್ತಿದ್ದು ನಂತರದ ದಿನಗಳಲ್ಲಿ ಭಾನುಮತಿ ಹಾಗೂ ರಾಣಿಯ ಪಾತ್ರಗಳನ್ನೇ ಹೆಚ್ಚಾಗಿ ಮಾಡುತ್ತಾ ಬಂದಿದ್ದಾರೆ. ಜಾನಪದ ನಾಟಕಗಳಾದ ಜೋಕುಮಾರ ಸ್ವಾಮಿ, ಸೂರ್ಯಶಿಕಾರಿ, ಸಂಗ್ಯಾ-ಬಾಳ್ಯಾ ನಾಟಕಗಳಲ್ಲಿ ಪ್ರೌಢ ಅಭಿನಯ ನೀಡುತ್ತಿದ್ದು, ಸಂಗ್ಯಾ-ಬಾಳ್ಯಾದ 'ಗಂಗಿ' ಪಾತ್ರಕ್ಕೆ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಹಾರ್ಮೋನಿಯಂ ಮಾಸ್ತರರಾದ ನೀಲಕಂಠಚಾರ್ಯರಲ್ಲಿ ರಂಗಶಿಕ್ಷಣ ಪಡೆದು ನಲವತ್ತು ದಶಕಗಳ ಕಾಲ ನಿರಂತರವಾಗಿ ಪಿ.ಪದ್ಮ ರಂಗಭೂಮಿ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ನಾಟಕ ಅಕಾಡೆಮಿಯಿಂದ ೧೯೯೮ ರ ಗೌರವ ಪ್ರಶಸ್ತಿ ದೊರೆತಿದೆ. ೨೦೦೩ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಜೊತೆಗೆ ಹಲವಾರು ಸಂಘ-ಸಂಸ್ಥೆಗಳಿಂದಲೂ ಪ್ರಶಸ್ತಿ ದೊರೆತಿದೆ.

ಗ್ರಾಮೀಣ ರಂಗಭೂಮಿಯಲ್ಲಿಯೇ ಮೊದಲಿಂದ ಸೇವೆ ಸಲ್ಲಿಸಿರುವ ಪದ್ಮ ಚಲನಚಿತ್ರಕ್ಕೂ ಕಾಲಿಡಬೇಕೆಂಬ ಉತ್ಕಟ ಇಚ್ಛೆ ಇತ್ತು. ಆದರೆ ನಮ್ಮಂಥವರಿಗೆ ಯಾರು ಅವಕಾಶವನ್ನು ಕೊಡುತ್ತಾರೆ. ತೀರ ಹಿಂದುಳಿದ ಪ್ರದೇಶದಲ್ಲಿ ಹುಟ್ಟಿರುವ ನಾವು ಅವಕಾಶದಿಂದ ವಂಚಿತರು. ನಮಗೆ ಮೈಸೂರು, ಬೆಂಗಳೂರು ಸಂಪರ್ಕ ಕಡಿಮೆ. ನನಗೆ ರಂಗ ಬದುಕೇ ಹೆಚ್ಚು ತೃಪ್ತಿಯನ್ನು ತಂದಿದೆ ಎಂದು ಹೇಳುತ್ತಾರೆ. ಬಳ್ಳಾರಿ ಜಿಲ್ಲೆಯ ಈ ಭಾಗದ ಎಲ್ಲಾ ಗ್ರಾಮಗಳೂ ನಮಗೆ ಚಿರಪರಿಚಿತ. ರಂಗ ಬದುಕು ನನ್ನ ಕಲಾಭಿನಯಕ್ಕೆ ಹೆಚ್ಚು ಪುಷ್ಟಿಯನ್ನು ನೀಡಿದೆ. ಜೀವನ ರಂಗದಲ್ಲಿಯೂ ನಾವು ಸಂತೃಪ್ತರು, ರಂಗಜೀವನದಲ್ಲೂ ನಾವು ಸಂತೃಪ್ತರೇ. ಸಾವಿರಾರು

ನಾಟಕಗಳನ್ನು ಆಡಿರುವ ನಾನು ಒಂದೊಂದು ಪಾತ್ರದಿಂದಲೂ ಒಂದೊಂದು ಕಲಿಕೆಯನ್ನು ರೂಢಿಸಿ ಕೊಂಡಿದ್ದೇನೆ. ಹೀಗೆ ನಿರಂತರ ಕಲಿಕೆಯಿಂದ ಇಂದು ರಂಗದೇವಿ ಆರಾಧಕಳಾಗಿದ್ದೇನೆ ಎಂದು ಹೇಳಿಕೊಳ್ಳುವಲ್ಲಿ ಹೆಮ್ಮೆ ಎನಿಸುತ್ತದೆ ಎಂದು ನುಡಿಯುತ್ತಾರೆ ಕೂಡ್ಲಿಗಿ ಪಿ.ಪದ್ಮ (ಕ್ಷೇತ್ರಕಾರ್ಯ, ಕೂಡ್ಲಿಗಿ, ೨೦೦೨ ಅಕ್ಟೋಬರ್ ೫).

ಮರಿಯಮ್ಮನಹಳ್ಳಿಯ ಎಸ್.ರೇಣುಕಾ ಅಮೋಘ ಅಭಿನೇತ್ರಿ. ಈಕೆ ಸಾಮಾಜಿಕ ನಾಟಕಗಳಲ್ಲಿಯೇ ಹೆಚ್ಚು ಹೆಚ್ಚು ಪಾತ್ರ ಮಾಡಿದ್ದು ಇತ್ತೀಚಿನ ದಿನಗಳಲ್ಲಿ ಪಾತ್ರ ಮಾಡುವುದನ್ನೇ ಬಿಟ್ಟಿದ್ದಾರೆ. ರೇಣುಕಾಳ ಅಭಿನಯ, ಪ್ರೌಢತೆ, ಸಾಮಾಜಿಕ ಕಳಕಳಿ, ಪ್ರೇಕ್ಷಕರ ಮನಸೂರೆಗೊಳ್ಳುವ ಸಾಧ್ಯಿ ಮಾತ್ರ. ಹಾಗೇ ಹಾಸ್ಯ ಪಾತ್ರವನ್ನು ಮಾಡುತ್ತಾರೆ. ಎಲ್ಲಾ ಪಾತ್ರಗಳಿಗೆ ರೇಣುಕಾ ನೈಜ ಅಭಿನಯವನ್ನು ನೀಡುತ್ತಿದ್ದರು. ಕೆಲವು ನಟಿಯರು ಒಂದು ಪಾತ್ರಕ್ಕೆ ಸೀಮಿತವಾದರೆ ರೇಣುಕಾ ಹಾಗಲ್ಲ ಯಾವ ಪಾತ್ರ ಕೊಟ್ಟರೂ ರೇಣುಕಾ ಅದರಲ್ಲಿ ಲೀನವಾಗಿ ಬಿಡುತ್ತಿದ್ದಳು. ಕಲಾದೇವಿ ರೇಣುಕಾಳಲ್ಲಿ ಪರಕಾಯ ಪ್ರವೇಶ ಮಾಡುತ್ತಿದ್ದಳು ಎಂದರೂ ತಪ್ಪಿಲ್ಲ.

ಖ್ಯಾತ ಸಂಗೀತಗಾರರು ಹಾರ್ಮೋನಿಯಂ ಮಾಸ್ತರರಾದ ಡಣಾಯಕನಕೆರೆಯ ಡಿ.ಎಂ.ತೋಟಯ್ಯ ಸ್ವಾಮಿಗಳು ಮರಿಯಮ್ಮನಹಳ್ಳಿ, ಕೂಡ್ಲಿಗಿ ನಟಿಯರಿಗೆ ಒಂದು ರೀತಿಯಲ್ಲಿ ರಂಗಭೂಮಿಯಲ್ಲಿ ಹೆಣ್ಣು ಮಕ್ಕಳ ತಂದೆ ಎಂದರೂ ತಪ್ಪಿಲ್ಲ ಎನ್ನುತ್ತಾರೆ ಎಸ್.ರೇಣುಕಾ. ಈ ಭಾಗದ ಹಿರಿಯ ನಟಿಯರಿಂದ ಹಿಡಿದು ಕಿರಿಯ ನಟಿಯರವರೆಗೂ ತೋಟಯ್ಯ ಸ್ವಾಮಿಗಳು ತಂದೆಯೇ. ಬೇರೆ ಊರಿಗೆ ನಟಿಯರನ್ನು ಕರೆದುಕೊಂಡು ಅವರನ್ನು ಜೋಕಿನಿಂದಲೇ ಕರೆದುಕೊಂಡು ಬರುವ ಹೊಣೆಗಾರಿಕೆ ಸಂಗೀತ ಮಾಸ್ತರಿಗೆ ಸೇರಿದ್ದು. ಡಿ.ಎಂ.ತೋಟಯ್ಯಸ್ವಾಮಿಗಳ ಹೇಳಿಕೆಯಂತೆ ಎಸ್.ರೇಣುಕಾರಂಥ ಶ್ರೇಷ್ಠ ನಟಿಯನ್ನು ನಾನು ಕಂಡಿಲ್ಲ. ಆಕೆಯ ಮನೋಭಾವ, ಅಭಿನಯ, ಮಾತು, ನಡೆ, ನುಡಿ, ಹಾವ, ಭಾವ, Body language ಆಂಗಿಕ ಭಾಷೆಯನ್ನು ಚನ್ನಾಗಿ ಅಭಿನಯಿಸುತ್ತಿದ್ದಳು. ಆಕೆಯ ಅಭಿನಯ ಎಷ್ಟು ವರ್ಣಿಸಿದರೂ ಕಡಿಮೆಯೇ. ಅದನ್ನು ನೋಡಿಯೇ ಆಸ್ವಾದಿಸಿ ಅನುಭವಿಸಬೇಕೆಂದು ಸ್ವಾಮಿಗಳು ನುಡಿಯುತ್ತಾರೆ. ಆದರೆ ಈಗ ಅನಾರೋಗ್ಯದಿಂದ ಇವರು ರಂಗಭೂಮಿಯನ್ನು ಬಿಟ್ಟಿರುವುದು ವಿಷಾದನೀಯ ಎಂದೂ ಹೇಳುತ್ತಾರೆ. ರಂಗಜೀವನ ರೇಣುಕಾಳಿಗೆ ಹೆಚ್ಚು ಖ್ಯಾತಿಯನ್ನು, ಹೆಸರನ್ನು ತಂದುಕೊಟ್ಟಿದೆ. ರೇಣುಕಾ ಜೀವನರಂಗ ವ್ಯತಿರಿಕ್ತವಾದರೂ ರಂಗಜೀವನ ಯಶಸ್ಸಿನ ಮೆಟ್ಟಿಲನ್ನು ಏರಿದೆ.

ಕೂಡ್ಲಿಗಿಯ ಬಿ.ಶಿವಕುಮಾರಿ ಬಳ್ಳಾರಿ ಜಿಲ್ಲೆಯ ರಂಗ ಚರಿತ್ರೆಯಲ್ಲಿ ಹೊಸ ತಲೆಮಾರಿನ ಬೆಳವಣಿಗೆಯ ನಟಿ. ತಾಯಿ ಶಾರದಮ್ಮ ಕೃಷಿಕ ಕುಟುಂಬದಲ್ಲಿ ಜನಿಸಿದ ಈಕೆ ೧೦ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದು, ಅಜ್ಜಿ (ತಾಯಿಯ ತಾಯಿ) ದುರುಗಮ್ಮ ಎಂಬ ರಂಗನಟಿಯ ಪ್ರೇರಣೆಯಿಂದ ಶಿವಕುಮಾರಿ ರಂಗಭೂಮಿಗೆ ಬಂದಿದ್ದಾರೆ. ಪರಂಪರಾಗತವಾಗಿ ಬಂದಿರುವ ಕಲೆ ಇವರನ್ನು ಕೈಬೀಸಿಕರೆದಿದೆ. ಪೌರಾಣಿಕ ನಾಟಕಗಳನ್ನು ಮಾಡಿದ್ದರೂ, ಸಾಮಾಜಿಕ ನಾಟಕವೇ ಇವರಿಗೆ ಹೆಸರನ್ನು ತಂದಿದೆ. 'ಕೆಟ್ಟಮೇಲೆ ಬುದ್ಧಿ ಬಂತು' ನಾಟಕದಲ್ಲಿ

'ಸುನೀತ' ಹುಚ್ಚಿಯ ಪಾತ್ರ ಕೂಡ್ಲಿಗಿ ಭಾಗದಲ್ಲೆಲ್ಲಾ ಹೆಸರು ಪಡೆದಿದೆ. ರಂಗಜೀವನ ನನಗೆ ಹೆಚ್ಚು ತೃಪ್ತಿಯನ್ನು ತಂದಿದೆ. ತೊಂದರೆಗಳು ಸಾಮಾನ್ಯವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಇದ್ದದ್ದೆ ಅದನ್ನು ಮೀರಿ ನಡೆದಾಗ ಯಶಸ್ಸು ಸಿಕ್ಕೇ ಸಿಗುತ್ತದೆ ಎನ್ನುತ್ತಾರೆ ಬಿ. ಶಿವಕುಮಾರಿ.

ಲೆಕ್ಕವಿಲ್ಲದಷ್ಟು ನಾಟಕಗಳನ್ನು ಆಡಿ ಆಂಧ್ರ ಹಾಗೂ ಬಳ್ಳಾರಿ, ರಾಯಚೂರು, ಸಿಂಧನೂರು ಈ ಭಾಗದಲ್ಲೆಲ್ಲಾ ಹೋಗಿ ನಾಟಕಗಳನ್ನು ಅಭಿನಯಿಸಿ ಬಂದಿದ್ದಾರೆ. ಹಲವಾರು ಸಂಘ, ಸಂಸ್ಥೆಗಳಿಂದ ಪ್ರಶಸ್ತಿಯನ್ನು ಪಡೆದ ಇವರು ೨೦೦೨ ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದ್ದಾರೆ. ರಂಗಭೂಮಿ ಕ್ಷೇತ್ರವನ್ನು ಸ್ವ ಇಚ್ಛೆಯಿಂದ ನಾನು ಆರಿಸಿಕೊಂಡಿರುವೆನು. ಈ ಕ್ಷೇತ್ರದಲ್ಲಿ ಇನ್ನು ಹೆಚ್ಚು ಹೆಚ್ಚು ದುಡಿಯಬೇಕು. ಜೊತೆಗೆ ಹೊಸರೀತಿಯ ಪ್ರಯೋಗಗಳನ್ನು ರಂಗಭೂಮಿಯಲ್ಲಿ ಹುಟ್ಟುಹಾಕಬೇಕು. ನಟನೆ ಎನ್ನುವುದು ಒಂದು ದಿನದ ಕಲಿಕೆಯಲ್ಲ. ಅದು ನಿರಂತರವಾಗಿ ನಿಧಾನವಾಗಿ ಅಂತರ್ಗತ ಮಾಡಿಕೊಳ್ಳುವ ಪ್ರಕ್ರಿಯೆ. ಆದ್ದರಿಂದ ಈ ಕ್ಷೇತ್ರದಲ್ಲಿ ಕಲಾವಿದ ಎಷ್ಟು ಕಲಿತನೆಂದಲ್ಲ. ಯಾವ ಮಟ್ಟದಲ್ಲಿ ಕಲೆಗೆ ತನ್ನ ಪಾತ್ರದಿಂದ, ಅರ್ಥವಂತಿಕೆ ಯನ್ನು ನೀಡಿದ್ದಾನೆ ಎಂಬುದು ಮುಖ್ಯ ಎಂದು ಹೇಳುತ್ತಾರೆ.

ರಂಗಭೂಮಿಯಲ್ಲಿ ಹಲವಾರು ಬದಲಾವಣೆಗಳು ನಡೆಯಬೇಕಿದೆ. ಹವ್ಯಾಸಿ ಕಲಾವಿದರ ಭೌದ್ಧಿಕ ಮಟ್ಟ ಬೆಳೆಯಬೇಕಿದೆ. ನಾಟಕಕಾರರು ಕವಿಗಳು ಸೃಜನಶೀಲ ಸಾಹಿತ್ಯದೊಂದಿಗೆ, ಅಶ್ಲೀಲ ಮಾತು, ಪದಗಳನ್ನು ಬಿಟ್ಟು, (ಡಬಲ್ ಮೀನಿಂಗ್) ಒಳ್ಳೆಯ ಸಾಹಿತ್ಯ, ಒಳ್ಳೆಯ ಮಾತುಗಳನ್ನು ಕವಿ ಬರೆದಾಗ ನಮಗೆ ಹೆಚ್ಚು ಸಂತೋಷವಾಗುತ್ತದೆ. ಆದರೆ ನಾಟಕಕಾರರೇ ಪುಸ್ತಕದಲ್ಲಿ ಏನೇನೋ ಬರೆದಾಗ ಹೆಣ್ಣು ಮಕ್ಕಳಾದ ನಾವು ನಮ್ಮನ್ನು ಹೇಗೆ ಸಮರ್ಥಿಸಿಕೊಳ್ಳಬೇಕೋ ತಿಳಿಯದಾಗುತ್ತದೆ. ಪ್ರಜ್ಞಾವಂತ ನಾಟಕ ರಚನಾಕಾರರು ಹೆಚ್ಚು ಹೆಚ್ಚು ಬರವಣಿಗೆಗೆ ಇಳಿದರೆ ರಂಗಜೀವನವು ನಮಗೆ ಸಾರ್ಥಕತೆಯನ್ನು ತಂದುಕೊಡುತ್ತದೆ ಎಂದು ಹೇಳುತ್ತಾರೆ. ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಲಂಕೇಶ, ಚಂದ್ರಶೇಖರ ಪಾಟೀಲ್ ಹೀಗೆ ಪ್ರಜ್ಞಾವಂತ ಕವಿಗಳು ಸಾಹಿತಿಗಳು ಈ ನಿಟ್ಟಿನಲ್ಲಿ ಆಲೋಚಿಸಿ ಹೊಸ ರೀತಿಯ ನಾಟಕಗಳನ್ನು ಬರೆದರೆ ಮಾತ್ರ ರಂಗನಟಿಯರು ಈ ಕ್ಷೇತ್ರಕ್ಕೆ ಬಂದಿರುವುದು ಹೆಚ್ಚು ಸ್ತುತ್ಯಾರ್ಹ.

ಬಳ್ಳಾರಿ ಜಿಲ್ಲೆಯ ರಂಗಚರಿತ್ರೆಯಲ್ಲಿ ನಟಿಯರು ತಮ್ಮದೇ ಸ್ಥಾನ ಪಡೆದುಕೊಂಡು, ಹಲವು ದಾಖಲೆಗಳನ್ನು ನಿರ್ಮಿಸಿದ್ದಾರೆ. ಜೀವನ ರಂಗ-ರಂಗ ಜೀವನ ಎರಡರಲ್ಲಿ ಏಳು-ಬೀಳು ಸ್ವಾಭಾವಿಕ. ಇಂಥದರಲ್ಲಿ ಗೆದ್ದು, ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ರಂಗಭೂಮಿಕೆಯ ಕುಟುಂಬದಲ್ಲಿ ಅಣ್ಣ, ತಮ್ಮ, ತಂದೆ, ತಾಯಿ, ಅಕ್ಕ, ತಂಗಿ, ಅತ್ತೆ, ಮಾವ ಹೀಗೆ ಕೌಟುಂಬಿಕ ವಾತಾವರಣವನ್ನು ನಟಿಯರು ಸೃಷ್ಟಿಸಿಕೊಂಡಿದ್ದಾರೆ. ಸಮಾಜ ಎಲ್ಲವನ್ನು ಒಳಗೊಂಡಿದ್ದು, ಅದರಲ್ಲಿ ಒಳ್ಳೆಯದು ಕೆಟ್ಟದ್ದು ಇದ್ದದ್ದೇ. ಅದರಲ್ಲಿ ಕೆಟ್ಟದ್ದನ್ನು ಒಳ್ಳೆಯವನ್ನಾಗಿ ರಂಗನಟಿಯರು ರೂಪಿಸಿಕೊಂಡು ಮೌಲ್ಯಾಧಾರಿತ ಅಂಶಗಳನ್ನು ಅಳವಡಿಸಿಕೊಂಡು ಜೀವನಕ್ಕೆ ಅರ್ಥವನ್ನು ಕಂಡುಕೊಂಡಿದ್ದಾರೆ.

ಒಬ್ಬ ರಂಗನಟಿಯ ಜೀವನಕ್ಕಿಂತ ಇನ್ನೊಬ್ಬ ರಂಗನಟಿಯ ಜೀವನ ಯಾವ ವ್ಯತ್ಯಾಸವನ್ನು ಹೊಂದಿರುವುದಿಲ್ಲ. ಎಲ್ಲವೂ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ವಿಲ ವಿಲ ಒದ್ದಾಡಿ ಪುರುಷ ಮೌಲ್ಯಾಧಾರಿತ ವ್ಯವಸ್ಥೆಯಲ್ಲಿ, ಬೆಂದು, ಬೇಗುದಿ ಜೀವನ ಅನುಭವಿಸಿ ನೋವುಗಳ ಸರಮಾಲೆಯಲ್ಲಿಯೇ ಬದುಕುತ್ತಿದ್ದಾರೆ. ಬರೀ ನೋವು ಅವಮಾನವನ್ನು ತಾಳಲಾರದೇ ದುರಂತ ನಟಿಯರಾಗಿ ಎಷ್ಟೋ ನಟಿಯರು ಸಾವಿಗೆ ಶರಣಾಗಿದ್ದಾರೆ, ನೋವಿನ ಪ್ರಪಾತಕ್ಕೆ ಬಿದ್ದಿದ್ದಾರೆ. ಇವೆಲ್ಲವನ್ನು ಮೆಟ್ಟಿನಿಂತು ಬದುಕಿನ ಸಾರ್ಥತೆಯನ್ನು ಹಲವಾರು ನಟಿಯರು ಸಾಧಿಸಿ ತೋರಿಸಿದ್ದಾರೆ.

ರಂಗ ಜೀವನದಲ್ಲಿ ಬಳ್ಳಾರಿ ಲಕ್ಷ್ಮಮ್ಮ, ಲಲಿತಾ, ಸುಜಾತಮ್ಮ, ಮೀನಳ್ಳಿ ಪಾರ್ವತಮ್ಮ, ಕಲಾವತಿ, ವರಲಕ್ಷ್ಮಿ, ಚಾಮುಂಡೇಶ್ವರಿ, ಅಂಬುಜಮ್ಮ, ಮಸ್ಸೂರು ಸುಭದ್ರಮ್ಮ, ಪಿ.ಪದ್ಮ, ಕೆ.ನಾಗರತ್ನ, ಎನ್.ಯಶೋಧಾ, ಡಿ.ಸಣ್ಣಹನುಮಕ್ಕ, ಎಸ್.ರೇಣುಕಾ, ಸೋಗಿರತ್ನ, ಜೆ.ಮುಂಜುಳಾ ಸೋಗಿ, ಸುಮತಿ, ಶಾರದಾ, ಗಂಗಾ ಕಂಪಲಿ, ಈರಮ್ಮ, ಪಾರ್ವತಮ್ಮ, ವಾಸಂತಿ ಕಂಪಲಿ, ಸಣ್ಣ ಮುದ್ದಮ್ಮ, ಹೊಸಪೇಟೆ ಸರಸ್ವತಮ್ಮ, ಎ.ಅಂಜಿನಮ್ಮ ಇನ್ನು ಮುಂತಾದ ಹಲವಾರು ರಂಗ ನಟಿಯರು ರಂಗ ಜೀವನ-ಜೀವನ ರಂಗ ಈ ಎರಡೂ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸಿ ಕಲಾಬದುಕಿಗೆ ಒಂದು ಅರ್ಥವಂತಿಕೆ ಕೊಟ್ಟು ಯಾವುದನ್ನು ಹೆಚ್ಚಾಗಿ ನಿರೀಕ್ಷಿಸದೇ ಮೊದಲು ವೃತ್ತಿರಂಗ ಭೂಮಿಯಲ್ಲಿ ಸೇವೆ ಮಾಡಿ ನಂತರದ ದಿನಗಳಲ್ಲಿ ಗ್ರಾಮೀಣ ರಂಗಭೂಮಿಯಲ್ಲಿ ಸಂಪೂರ್ಣವಾಗಿ ಸೇವೆಯನ್ನು ಸಲ್ಲಿಸಿ ತಮ್ಮನ್ನು ಕಲಾ ಸರಸ್ವತಿಗೆ ಸಮರ್ಪಣೆ ಮಾಡಿಕೊಂಡಿದ್ದಾರೆ.

೫.೧೦. ದುರಂತ ನಟಿಯರು

೧೯೩೦ರ ಸುಮಾರಿಗೆ ಮರಿಯಮ್ಮನಹಳ್ಳಿಯ ರಂಗನಟಿಯರಲ್ಲಿ ಎಸ್.ರೇಣುಕಾ, ಕೆ.ನಾಗರತ್ನಮ್ಮ, ಎನ್.ಯಶೋಧ, ಶಾರದ ಈ ಸಮಕಾಲೀನ ರಂಗನಟಿಯರಲ್ಲಿ ಪಾರ್ವತಿ ಮತ್ತು ಎನ್.ಯಶೋಧ ಈರ್ವರೂ ಕೂಡ ಕಲಾಸೇವೆ ಮಾಡುತ್ತಿದ್ದರು. ಜೀವನವೆಂಬುದು ಹಲವು ಸಂಘರ್ಷಗಳ ಸಂಗಮ. ಎಲ್ಲವೂ ಮುಖಾಮುಖಿಯಾಗಲೇ ಬೇಕಾಗುತ್ತದೆ. ಸಂಕಷ್ಟ ಹಾಗೂ ದುಃಖದ ಎದುರುಗಡೆ ಸಾಹಸ, ಧೈರ್ಯ, ಆತ್ಮಸ್ಥೈರ್ಯ, ಆತ್ಮವಿಶ್ವಾಸ ಇವು ಬೇಕೇ ಬೇಕಾಗುತ್ತದೆ. ಆದರೆ ಎಷ್ಟೋ ಜನರಿಗೆ ಇವುಗಳ ಕೊರತೆ ಇದ್ದದ್ದೆ. ಸಹಜವಾಗಿ ಸಮಾಜದಲ್ಲಿ ಗೌರವಾನ್ವಿತರಾಗಿರುವವರೇ ಕೆಲವೊಮ್ಮೆ ಸೋತು ಶರಣಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ, ರಂಗಭೂಮಿಗೆ ಕಾಲಿಟ್ಟು ಹಲವಾರು ನೋವು, ಕಷ್ಟ, ಅವಮಾನಗಳನ್ನು ಅನುಭವಿಸಿದ ರಂಗನಟಿಯರು ದುರಂತಕ್ಕೀಡಾಗುವುದು ತಪ್ಪೇ ಆದರೂ ಬದುಕಿನ ಕ್ರಮ ಅವರಿಗೆ ಹಲವಾರು ರೀತಿಯಲ್ಲಿ ದುರಂತಕ್ಕೀಡು ಮಾಡಿರುವುದು ತುಂಬಾ ಅನಿವಾರ್ಯವಾಗಿದೆ.

ಯಾವುದೇ ರೀತಿಯಲ್ಲಿ ಸಾಮಾಜಿಕ ಭದ್ರತೆ ಇಲ್ಲದೆ ಆರ್ಥಿಕವಾಗಿ ಬಲಹೀನರಾದ ರಂಗನಟಿಯರ ಬಾಳು ಗೋಳು ಸರಿಯೇ. ಸಾಮಾಜಿಕ ಸ್ಥಿತ್ಯಂತರ ಬದುಕಿನಲ್ಲಿ ಕೆಳವರ್ಗದಲ್ಲಿ ಹುಟ್ಟಿ ಬೆಳೆದು ಬಡತನದ ನಿವಾರಣೆಗೋಸ್ಕರ ಈ ಕ್ಷೇತ್ರಕ್ಕೆ ವೃತ್ತಿ ನಟಿಯರು ಬದುಕಿನಲ್ಲಿ ಭವಣೆಯನ್ನು ಅನುಭವಿಸಿ, ಅನುಭವಿಸಿ ಕೊನೆಗೆ ಸಾವಿನಲ್ಲಿಯೇ ತೃಪ್ತಿಗೊಳ್ಳುತ್ತಾರೆ. ಕಾಲಿಗೆ ಗೆಜ್ಜೆಕಟ್ಟಿಕೊಂಡು ದೊಡ್ಡದೊಡ್ಡ ಶಹರಗಳ ಪ್ರತಿಷ್ಠಿತರ ಮುಂದೆ ನರ್ತಿಸುವ, ಹಾಡುವ, ಶಾಸ್ತ್ರೀಯ ಕಲಾವಿದರನ್ನು ಈ ಸಮಾಜ ಗೌರವಿಸುತ್ತದೆ. ಹೊಟ್ಟೆ ತುಂಬಾ ಸಂಭಾವನೆ ನೀಡುತ್ತದೆ. ಆದರೆ ಅದೇ ಪರಿಸ್ಥಿತಿಯು ರಂಗಕಲಾವಿದೆಯರಿಗೆ ಯಾಕಿಲ್ಲ ಜೊತೆಗೆ ಜಾನಪದ ಕಲಾವಿದರಿಗೂ ಏಕಿಲ್ಲ? ಏನೆಲ್ಲಾ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿದ ಹಿರಿಯ ಕಲಾವಿದೆಯರ ಗಟ್ಟಿತನ ವನ್ನು ನಾವು ಮೆಚ್ಚಬೇಕಾಗಿದೆ. ಕೆಲವೊಮ್ಮೆ ಅಲ್ಪರ ಮಾತುಗಳಿಗೆ ನಟಿಯರು ಬಲಿಪಶುಗಳಾಗಿ ದುರಂತ ಸಾವಿಗೀಡಾಗುತ್ತಾರೆ. ಇಂದಿಗೂ ಕೂಡ ನಾಟಕಗಳಲ್ಲಿ ನಟಿಸುತ್ತಿದ್ದೇನೆ ಎಂದು ಹೇಳಿಕೊಳ್ಳಲು ಹಿಂಜರಿಯುತ್ತಿದ್ದಾರೆ.

ಇಂಥ ಸಂದರ್ಭದಲ್ಲಿ ನಟಿಯರು ಜೀವನದಲ್ಲಿ ಜಿಗುಪ್ಸೆ ಹೊಂದಿ ಮರಿಯಮ್ಮನಹಳ್ಳಿಯ ಎನ್.ಯಶೋಧ ಉತ್ಕಟವಾದ ಅಭಿನಯ ಹಾಗೂ ವ್ಯಕ್ತಿತ್ವ ಹೊಂದಿದ್ದ ಈಕೆ ನಿಗೂಢವಾಗಿ ವಿಷ ಕುಡಿದು ಸತ್ತಳು. ಇದು ರಂಗಭೂಮಿಗೆ ತುಂಬಲಾರದ ನಷ್ಟವಾಗಿದೆ. ಬಸ್‌ಕಂಡಕ್ಟರ್ ನಾಟಕದಲ್ಲಿ ಹಾಸ್ಯ ಪಾತ್ರ ಮಾಡಿ ರಂಗದ ಮೇಲೆ ನಲಿದಾಡುತ್ತಾ ಎಲ್ಲರ ಮನವನ್ನು ರಂಜಿಸುತ್ತಿದ್ದರು. ನಡೆಯುವಾಗ ಹಾವಭಾವ ದಿಂದಲೂ ವನಪು-ವಯ್ಯಾರದಿಂದಲೂ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದಳು. ಯಾವಾಗಲೂ ಏನೇ ಕಷ್ಟ ಬಂದರೂ ಇನ್ನೊಬ್ಬರಿಗೆ ಧೈರ್ಯವನ್ನು ತುಂಬುತ್ತಾ ನಕ್ಕು ನಲಿದು ಉತ್ಸಾಹದ ಚಿಲುಮೆಯಾದ ಯಶೋಧ ಒಂದು ದಿನ ಇದ್ದಕ್ಕಿದ್ದಂತೆ ಯಾವುದೇ ಸುಳಿವು ನೀಡದೇ ಊರಿನ ಎಲ್ಲಾ ದೇವಸ್ಥಾನಗಳಿಗೆ ಹೋಗಿ ಬಂದು ವಿಷಕುಡಿದು ಸತ್ತರು. ಕಾರಣಗಳು ವೈಯಕ್ತಿಕವಾಗಿ ಏನಿತ್ತೋ ಯಾರು ಬಲ್ಲರು.

ಎ.ಪಾರ್ವತಿ ಎಂಬ ನಟಿಯೂ ಕೂಡ ದುರಂತಸಾವಿಗೆ ಈಡಾದರು. ಭಾರತದ ಸಾಂಸ್ಕೃತಿಕ ಪರಿಸರದಲ್ಲಿ ಹೆಚ್ಚಾಗಿ ಪುರುಷ ಪ್ರಾಧಾನ್ಯತೆಯನ್ನು ಹೊಂದಿರುವಂಥಹದು. ಆದ್ದರಿಂದ ರಂಗಭೂಮಿಗೆ ನಟಿಯರ ಪ್ರವೇಶ ಇತ್ತೀಚೆಗೆ ಆದರೂ ಕೂಡ ಪರಿಸ್ಥಿತಿಯಲ್ಲಿ ತುಂಬಾ ಗೊಂದಲವಿದೆ. ರಂಗಭೂಮಿ ನಟಿಯರಲ್ಲಿ ಕೆಲವೊಬ್ಬರು ಮಾತ್ರ ಯಶಸ್ವಿಯಾಗುತ್ತಾರೆ. ಇನ್ನು ಕೆಲವರು ಹೊಟ್ಟೆ ಪಾಡಿಗೋಸ್ಕರ ಈ ವೃತ್ತಿಯನ್ನು ಆರಿಸಿಕೊಂಡವರೇ ಬಹಳ. "ಹೊಟ್ಟೆ ಏನನ್ನಾದರೂ ಕಲಿಸುತ್ತದೆಯಂತೆ" ಹಲವು ರಂಗನಟಿಯರಿಗೆ ಹೊಟ್ಟೆಯು ಕಲೆಯನ್ನು ಕಲಿಸಿದೆ. ಜೀವನ ನಿರ್ವಹಣೆಗೆ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕಪ್ಪಗಲ್, ಬಳ್ಳಾರಿ, ಮರಿಯಮ್ಮನಹಳ್ಳಿ, ಕೂಡ್ಲಿಗಿ, ವಿರೂಪಾಪುರ ಈ ಎಲ್ಲಾ ಊರುಗಳಲ್ಲಿ ಎಷ್ಟೋಜನ ರಂಗಕಲಾವಿದೆಯರು ಇದ್ದಾರೆ. ಇಂದಿಗೂ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಂಥವರಲ್ಲಿ ದುರಂತ ನಟಿಯರು ತಮ್ಮ ಜೀವನವನ್ನು ಕಲೆಗಾಗಿ ಅರ್ಪಿಸಿ ದುರಂತ ಸಾವಿಗೆ ಈಡಾಗಿದ್ದಾರೆ.

ನಾಗರತ್ನಮ್ಮ ಹೊಸಮನಿ ಅವರ ಬಗ್ಗೆ ಬರೆಯುವಾಗ ವಿಶೇಷ ಗೌರವ ಹಾಗೂ ಆಸಕ್ತಿಯು ಮೂಡುತ್ತದೆ. ಸುಮಾರು ಎಪ್ಪತ್ತು ವರ್ಷಗಳ ದೀರ್ಘಕಾಲ ಸೇವೆ ಸಲ್ಲಿಸಿದ 'ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ'ಯ ಅನರ್ಘ್ಯರತ್ನ. ಎಪ್ಪತ್ತರ ಅಂಚಿನಲ್ಲಿರುವ ನಾಗರತ್ನಮ್ಮ ಸಾಗಿ ಬಂದ ಬದುಕು ಕಲಾವಿದೆಯರಿಗೆ ಮಾರ್ಗ ದರ್ಶಕ. ಉತ್ತಮ ಕಲೆಯಿಂದ, ಉತ್ತಮ ಬದುಕಿನಿಂದ ಗೌರವಾನ್ವಿತ ನಟಿ. ಈಗ ಮಾತ್ರ ದುರಂತ ನಟಿ.

ಒಂದು ಕಾಲದಲ್ಲಿ ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಮನೆಮಾತು ನಾಗರತ್ನಮ್ಮನವರು. ಅರ್ಧ ಶತಮಾನದ ರಂಗಸೇವೆಯಲ್ಲಿ ಅವರು ಅಭಿನಯಿಸಿದ ಪಾತ್ರಗಳಿಗೆ ಲೆಕ್ಕವಿಲ್ಲ. ರಾಮಾಯಣ, ಅಕ್ಷಯಾಂಬರ, ಉಷಾ ಸ್ವಯಂವರ, ಶಿವಜಲಂಧರ, ಮಾತಂಗಕನ್ಯ, ರಾಜದ್ರೋಹ, ಶಾಂತಕುಮಾರಿ, ಹರಿಶ್ಚಂದ್ರ, ಲಂಕಾದಹನ, ಪಠಾಣ ಪಾಪಾ, ಧರ್ಮಯಜ್ಞ, ಕುರುಕ್ಷೇತ್ರ, ಕಿರಾತಾರ್ಜುನ, ಜಗಜ್ಯೋತಿ ಬಸವೇಶ್ವರ, ಹೇಮರೆಡ್ಡಿ ಮಲ್ಲಮ್ಮ, ರೂಪವತಿ, ಕುಲವತಿ, ಮಾನವತಿ, ಗುಳಗಿ ಗುಂಡಮ್ಮ, ಸುಖದ ಸುಪ್ಪತ್ತಿಗೆ, ಇವು ಅವರ ಅಭಿನಯದ ಪ್ರಮುಖ ನಾಟಕಗಳು. ತಾಯಿಯಾಗಿ, ತಂಗಿಯಾಗಿ, ಅತ್ತೆಯಾಗಿ, ಸೊಸೆಯಾಗಿ, ವಿಭಿನ್ನ ಪಾತ್ರಗಳಿಂದ ರಂಗದ ಮೇಲೆ ಕಂಡಿದ್ದಾರೆ. ಯಾವ ಪಾತ್ರದಲ್ಲಿ ನೋಡಿದರೂ ಅಭಿನಯದ ಸೋಲಿಲ್ಲ. ಚಿತ್ರಾಂಗದದಲ್ಲಿ ಚಿತ್ರಾಂಗದ, ದಕ್ಷಯಜ್ಞದಲ್ಲಿ ದ್ರಾಕ್ಷಾಯಿಣಿ, ರೂಪವತಿಯಲ್ಲಿ ರೂಪವತಿ, ಕಿತ್ತೂರ ಚನ್ನಮ್ಮನ ನಾಟಕದಲ್ಲಿ ಚನ್ನಮ್ಮ ಈ ಪಾತ್ರಗಳು ಸಾವಿರ ಸಾವಿರ ಜನರ ಕಣ್ಣೆದುರು ಇನ್ನೂ ಜೀವಂತವಾಗಿವೆ. ಶಾರದಾ ಸಂಗೀತ ನಾಟಕ ಮಂಡಳಿ ಕಂಪನಿಯ ಮಾಲಿಕರಾದ ಬಸವಣ್ಣೆಪ್ಪನವರು ಅವರ ಅಂದಕ್ಕೆ ಮನಸೋತೇ ಪತ್ನಿಯಾಗಿ ಸ್ವೀಕರಿಸಿರಬೇಕು. ನಾಗರತ್ನಮ್ಮ, ಅಂಬುಜಮ್ಮ ಕಂಪನಿಯ ಕಣ್ಣುಗಳು. ಇವರಿಬ್ಬರೂ ಬಸವಣ್ಣೆಪ್ಪನವರ ಕಲಾ ಪತ್ನಿಯರಾಗಿ ಕಂಪನಿಯ ಇತಿಹಾಸದಲ್ಲಿ ಉಳಿದು ಬಂದವರು. ಇಬ್ಬರೂ ಅಸಾಮಾನ್ಯ ಕಲಾವಿದೆಯರಾಗಿದ್ದರೂ ಒಬ್ಬರಿಗೊಬ್ಬರು ಪ್ರತಿಭೆಯ ಬಗ್ಗೆ ಗೌರವ ಹೊಂದಿದ್ದರು.

ನಾಗರತ್ನಮ್ಮನವರನ್ನು ಭಕ್ತಿಯ ಪಾತ್ರದಲ್ಲಿ ನೋಡಿದವರು ಶೌರ್ಯದ ರುದ್ರಾವತಾರದಲ್ಲಿ ನೋಡಿದರೆ ಅದೇ ಕಲಾವಿದೆಯೇ ಎನ್ನುವ ಸಂಶಯ ಪ್ರೇಕ್ಷಕರಿಗೆ. ಶೃಂಗಾರ ಪಾತ್ರಗಳಲ್ಲಂತೂ ರೂಪ ಅಭಿನಯ ಹುಚ್ಚು ಹಿಡಿಸುತ್ತಿದ್ದವು. ಇವರ ಹಾಸ್ಯ ಪಾತ್ರ ಜನಪ್ರೀತಿಗೆ ಒಂದು ಉದಾಹರಣೆ. ಆಗಿನ ದಿನಗಳಲ್ಲಿ (೧೯೬೪) 'ಬೆಳ್ಳಿ ಚುಕ್ಕಿ' ನಾಟಕ ದಾವಣಗೆರೆಯಲ್ಲಿ ಸತತ ಎಂಟು ತಿಂಗಳು ಪ್ರಯೋಗಗೊಂಡಿದ್ದು!.

ಸ್ವಾತಂತ್ರ ಪೂರ್ವದಲ್ಲಿ ಇವರ ನಾಟಕಗಳು ಸಿಂಧೂರ ಲಕ್ಷ್ಮಣ, ರಾಜದ್ರೋಹ, ಬ್ಲಾಕ್ ಮಾರ್ಕೆಟ್, ಪಠಾಣ ಪಾಪಾ ಜನರಲ್ಲಿ ಸ್ವಾತಂತ್ರ್ಯದ ಪ್ರಜ್ಞೆ ಮೂಡಿಸಿ ಸ್ವಾತಂತ್ರ ಸಂಗ್ರಾಮದಲ್ಲಿ ಧುಮುಕುವಂತೆ ಮಾಡಿದ್ದು ಕಥಾವಸ್ತುಗಿಂತ ಕಲಾವಿದೆಯ ಮಾತುಗಳು ಅಭಿನಯ ಕಾರಣವೆಂದರೆ ಅತಿಶಯೋಕ್ತಿಯಾಗದು.

ಇಂಥ ಪ್ರತಿಭಾಸ್ವಿತೆ ಇಂದು ಬುದ್ಧಿ ಭ್ರಮಣಗೊಂಡು ಒಂದೆಡೆ ನಿಲ್ಲದೇ ಊರೂರು ಅಲೆಯುತ್ತಿದ್ದಾರೆ. ಏನೇನೋ ಮಾತನಾಡುತ್ತ ಸ್ಮಿಮಿತ ಕಳೆದುಕೊಳ್ಳುತ್ತಿದ್ದಾರೆ. ಅದಕ್ಕೆ ಸಂಘ-ಸಂಸ್ಥೆಗಳು ಅಕಾಡೆಮಿ ಹಾಗೂ

ಸರಕಾರವೂ ಕಾರಣವಾದೀತು. ಈ ಕಲಾವಿದೆ ಜನಮನ ಸೂರೆಗೊಂಡಿದ್ದರೂ ಆ ಕಾಲದಲ್ಲಿ ಬಹು ದೊಡ್ಡ ಕೀರ್ತಿ ಗಳಿಸಿದ್ದರೂ ಅನೇಕ ವಿದ್ವಾಂಸರು ರಂಗತಜ್ಞರು ಅಭಿನಯಕ್ಕೆ ಮಾರು ಹೋಗಿದ್ದರೂ ಯಾವ ಮಾಧ್ಯಮ ಗಳೂ ಇವರನ್ನು ಕುರಿತು ಮಾತನಾಡಿಲ್ಲ. ಯಾವ ಅಕಾಡೆಮಿಗಳೂ ಪ್ರಶಸ್ತಿ ನೀಡಲಿಲ್ಲ. ಸರಕಾರ ಎಲ್ಲಿಯೂ ಇವರ ಹೆಸರನ್ನು ಪ್ರಕಟಿಸಲಿಲ್ಲ. ತಮಗಿಂತ ಚಿಕ್ಕವರಿಗೆ, ಅಭಿನಯ ಸಂಗೀತದ ಪ್ರಜ್ಞೆ ಇಲ್ಲದವರಿಗೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಬಂದಾಗ ಬಹಳಷ್ಟು ನೊಂದ ಇವರು ಜಿಗುಪ್ಸೆಗೊಂಡರು. ಪತಿ ಅಗಲಿದ ಮೇಲೆ ಕಂಪನಿ ನಿಂತು ಆರ್ಥಿಕ ಪರಿಸ್ಥಿತಿ ಗಂಭೀರವಾದ ಮೇಲೆ ಬಹಳಷ್ಟು ಆಘಾತವಾಯಿತು. ಅಂದಿನಿಂದ ಮಾನಸಿಕ ಸ್ಥಿಮಿತ ಕಳೆದುಹೋಯಿತು. ಒಂದೊಂದು ಸಲ ಜಾಗರೂಕತೆಯಿಂದ ಮಾತನಾಡಿದ್ದರೂ ಲೌಕಿಕದೆದುರು ಚಿತ್ತ ಭ್ರಮಿಳೆ. ಈ ವರ್ಷ ನಾಟಕ ಅಕಾಡೆಮಿ ಈ ಕಲಾವಿದೆಗೆ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಅವರು ಈ ಗೌರವವನ್ನು ಪ್ರಶಸ್ತಿಯನ್ನು ಯಾವ ರೀತಿ ಸ್ವೀಕರಿಸುವರೋ ಹೇಳಲಾಗದು. ಅಕಾಡೆಮಿ ಸರಕಾರ ಯಾವುದೇ ಪ್ರಶಸ್ತಿ ನೀಡಿದಾಗ ಅದನ್ನು ಅನುಭವಿಸಿ ಆನಂದಿಸುವ ಸಂದರ್ಭ ಆ ವ್ಯಕ್ತಿಗೆ ಬರಬೇಕು. ಆಗಲೇ ಅದಕ್ಕೊಂದು ಬೆಲೆ. ದುರ್ದೈವದ ಸಂಗತಿ ಎಂದರೆ ಕಲಾವಿದರು, ಸಾಹಿತಿಗಳು ಸತ್ತ ಮೇಲೆಯೇ ಅವರ ಸೇವೆ, ಕೃತಿ ಅಮೋಘವಾಗಿ ಕಾಣುತ್ತವೆ!

ನಾಗರತ್ನಮ್ಮನವರ ತ್ಯಾಗದ ಬದುಕು ಮರೆಯಲಾಗದು. ನಾಟಕದ ಸನ್ನಿವೇಶದಲ್ಲಿಯೇ ಆಗಿನ ಕಾಲದಲ್ಲಿ ಸಾವಿರಾರು ರೂಪಾಯಿ ಬೆಲೆ ಬಾಳುವ ಸೀರೆಯುಟ್ಟು, ಮೈತುಂಬ ಬಂಗಾರದ ಆಭರಣ ಹಾಕಿಕೊಳ್ಳುತ್ತಿದ್ದರು. ಕಂಪನಿಯ ಉಳಿವಿಗಾಗಿ ಎಲ್ಲವನ್ನು ಸಮರ್ಪಣೆಯ ಭಾವದಲ್ಲಿ ಅರ್ಪಿಸಿದರು. ಕಂಪನಿಯ ಅಳಿವು ಉಳಿವಿಗಾಗಿ ಅವರಿಗೆ ಸತ್ವ ಪರೀಕ್ಷೆ ಒದಗಿಬಂದವು. ಎಷ್ಟೋ ಸಲ ಸಾಲಗಾರರು ಬಂದಾಗ ನಾಗರತ್ನಮ್ಮ ಅವರ ಮಾತುಗಳನ್ನು ಕೇಳದೇ ತಮ್ಮಲ್ಲಿದ್ದ ಹಣವನ್ನು ಕೊಟ್ಟು ಬಿಡುತ್ತಿದ್ದರು. ಅವರು ಬದುಕಿನಲ್ಲಿ ಕಷ್ಟ, ನೋವು ಅನುಭವಿಸಿದ್ದರೆ ಅದು ಕಂಪನಿಗಾಗಿಯೇ ಅದರ ಉಳಿವಿಗಾಗಿಯೇ. ಕಂಪನಿ ಬದುಕಿ ಹತ್ತಾರು ಕಲಾವಿದರು ಬದುಕಬೇಕೆಂಬುದೇ ಅವರ ಆಸೆಯಾಗಿತ್ತು. ಕಷ್ಟಗಳು, ಸಮಸ್ಯೆಗಳು ಬರಬರುತ್ತಾ ಹೆಚ್ಚುತ್ತಲೇ ಹೋಗಿ ಸಹಿಸಲೂ ಸಾಧ್ಯವಾಗದಂತಾದಾಗ ಬುದ್ಧಿ ಭ್ರಮಣಗೊಂಡಿತು. ಈಗ ಊರೂರು ತಿರುಗುವುದೇ ದಾರಿಯಾಗಿದೆ.

ನಾಗರತ್ನಮ್ಮನ ಹುಟ್ಟು ಕೂಡ ವಿಚಿತ್ರ. ತಂದೆ-ತಾಯಿ ಯಾರು ಗೊತ್ತಿಲ್ಲ. ಬಳ್ಳಾರಿ ಜಿಲ್ಲೆಯ ಕೊಟ್ಟೂರು ಈ ಕಲಾವಿದೆಯ ಜನ್ಮಸ್ಥಳ. ಅಲ್ಲಿಯ ಹುಲಿಗೆಮ್ಮ ಎನ್ನುವ ಸಾಮಾನ್ಯ ಮನೆತನದ ಮಹಿಳೆ ಇವರನ್ನು ಬೆಳೆಸಿ ಜೋಪಾನ ಮಾಡಿದರು. ಅಕ್ಷರ ಅಭ್ಯಾಸ ಮಾತ್ರ ಓದು. ಸಾಕು ತಾಯಿಗೆ ಇವರನ್ನು ಜೋಪಾನ ಮಾಡಿ ಮದುವೆ ಮಾಡುವ ಭಾರ ಹೊರಲು ಸಾಧ್ಯವಿಲ್ಲವೆಂದಾಗ ೧೯೪೫ ರಲ್ಲಿ ಜಯಲಕ್ಷ್ಮಿ ನಾಟ್ಯಸಂಘ ಕಂಚಿಕೇರಿ ದಾವಣಗೇರಿ ಕ್ಯಾಂಪಿನಲ್ಲಿ ಬಿಟ್ಟುಹೋದರು. ಹತ್ತು ವರ್ಷದ ಬಾಲಕಿ ನೂರಾರು ಕನಸುಗಳನ್ನು ಹೊತ್ತು ರಂಗದ ಮೇಲೆ ಕಾಲಿರಿಸಿದಳು. ರಂಗದೇವಿ ಈ ಅನಾಥ ಬಾಲಕಿಗೆ ಆಶ್ರಯ ನೀಡಿ ಕೃಪೆ ದೋರಿದಳು. ರಾಮಾಯಣ ನಾಟಕದಲ್ಲಿ ಅಂಗದನ ಪಾತ್ರದಿಂದ ಬಣ್ಣ ಹಚ್ಚಿ ಬಾಲ ಪಾತ್ರಗಳಿಂದ ರಂಗಭೂಮಿಯ ಸೇವೆ ಪ್ರಾರಂಭಗೊಂಡಿತು.

೧೯೪೭ ರಲ್ಲಿ ಹೆಣಗಿ ಚನ್ನಪ್ಪ ಎಂಬುವವರು ಇವರನ್ನು ಗೋಕಾಕ ಬಸವಣ್ಣಪ್ಪನವರ 'ಶಾರದಾ ಸಂಗೀತ ನಾಟಕ ಮಂಡಳಿ'ಗೆ ಕರೆದುಕೊಂಡು ಬಂದು ಪರಿಚಯಿಸಿದರು. ನಾಡಿನ ಪ್ರಸಿದ್ಧ ಕಂಪನಿ ಅದಾಗಿದ್ದರಿಂದ ಅಲ್ಲಿ ಪ್ರವೇಶ ದೊರೆಯುವುದೇ ಕಷ್ಟವಿತ್ತು. ಸುಂದರ ಆಕರ್ಷಕ ಬಾಲಕಿ ಮಾಲಿಕರಿಗೂ ಒಪ್ಪಿಗೆಯಾಯಿತು. ಪ್ರಾರಂಭದಲ್ಲಿಯೆ ಪಾತ್ರಗಳು ಯಶಸ್ವಿಯಾಗುವುದನ್ನು ನೋಡಿ ಬಸವಣ್ಣನವರು ನಾಗರತ್ನಮ್ಮನ ಪ್ರತಿಭೆ ಗುರುತಿಸಿ ತಮ್ಮ ಕಂಪನಿಯ ನಿರಂತರ ಕಲಾವಿದೆಯಾಗಬೇಕೆಂದು ಇಚ್ಛಿಸಿ ಹದಿಮೂರು ಹದಿನಾಲ್ಕರ ಹರೆಯದಲ್ಲಿಯೇ ಕಲಾ ಪತ್ನಿಯನ್ನಾಗಿ ಸ್ವೀಕರಿಸಿದರು. ಬಸವಣ್ಣಪ್ಪನವರು ನಿರ್ದೇಶಕರಾಗಿ, ಗುರುಗಳಾಗಿ, ಪತಿಯಾಗಿ ಕಲೆಗೆ, ಬದುಕಿಗೆ ಬೆಳಕಾದರು.

ನಾಗರತ್ನಮ್ಮನವರಿಗೆ ನಾಲ್ಕು ಜನ ಮಕ್ಕಳು. ಇಬ್ಬರು ಹೆಣ್ಣುಮಕ್ಕಳು, ಇಬ್ಬರು ಗಂಡು ಮಕ್ಕಳು. ಹೆಣ್ಣುಮಕ್ಕಳು ರಂಗಭೂಮಿಗೆ ಬರಲಿಲ್ಲ. ಗಂಡುಮಕ್ಕಳು ನಟರಾಜ, ಜಯರಾಜ ರಂಗಭೂಮಿಯಲ್ಲಿ ದುಡಿದು ಇದೀಗ ಬದುಕುವುದಕ್ಕಾಗಿ ಬೇರೆ ದಾರಿ ಹುಡುಕಿಕೊಂಡಿದ್ದಾರೆ. ಹಿರಿಯ ಮಗಳು ಶಶಿಕಲಾ ಅವರ ಪತಿ ಕೊಟ್ರೇಶಿ ಪ್ರಸಿದ್ಧ ರಂಗಕಲಾವಿದರು. ನಾಗರತ್ನಮ್ಮನವರಿಗೆ ಇವರೇ ಆಶ್ರಯ ನೀಡಿದ್ದಾರೆ. ಇನ್ನೊಬ್ಬ ಮಗಳು ಭಾಗ್ಯಶ್ರೀ.

ಅಂದು ನೂರಾರು ಜನರ ಬದುಕು ಕಲೆಗೆ ಕಾರಣರಾಗಿದ್ದ ಬಸವಣ್ಣೆಪ್ಪನವರ ಕಲಾಪತ್ನಿ ನಾಗರತ್ನಮ್ಮ ಇಂದು ಮಾಷಾಸನಕ್ಕಾಗಿ ಸರಕಾರಿ ಕಚೇರಿಗಳೆದುರು ಅಲೆಯುತ್ತಿದ್ದಾರೆ. ವೈಭವದ ದಿನಗಳಲ್ಲಿ ನೋಡಿದ ಅಂದಿನ ನಾಗರತ್ನಮ್ಮ ಇಂದು ಜೀವನೋಪಾಯಕ್ಕೂ ಕಷ್ಟಪಡುವ ನಾಗರತ್ನಮ್ಮ ಅಜಗಜಾಂತರ. ಕಾಲ ಚಕ್ರದ ವೇಗದಲ್ಲಿ ಬದಲಾವಣೆಗಳನ್ನು ಯಾರು ನಿರೀಕ್ಷಿಸಲು ಸಾಧ್ಯ. ಅವರ ಬಗ್ಗೆ ಜ್ಞಾಪಿಸಿಕೊಳ್ಳುತ್ತಿದ್ದಂತೆ ಆ ವೈಭವದ ದಿನಗಳ ಚಿತ್ರಗಳು ಸಾಲು ಸಾಲಾಗಿ ಕಣ್ಣೆದುರಿಗೆ ಬರುತ್ತವೆ. ಕ್ರಮೇಣವಾಗಿ ಆ ಚಿತ್ರಗಳು ಮಸು ಮಸುಕಾಗಿ ಕಣ್ಣೆದುರು ಕತ್ತಲು ಮಾತ್ರ ಉಳಿಯುತ್ತಿದೆ.

ಅಂದು ರಂಗಭೂಮಿಯ ಮಹಾರಾಣಿ ಇಂದು ಮಾನಸಿಕವಾಗಿ ಅಸ್ವಸ್ಥೆ. ಅಂದು ರಾಣಿ ಪಾತ್ರಕ್ಕೆ ನಿಜವಾದ ರೇಶ್ಮೆ ಸೀರೆ, ಬಂಗಾರದ ಒಡವೆಗಳನ್ನೇ ಧರಿಸುತ್ತಿದ್ದವರು ಇಂದು ಮಾಷಾಸನಕ್ಕಾಗಿ ಕಚೇರಿಗಳಿಗೆ ಅಲೆಯುವ ಸಂತೃಪ್ತೆ. ಅವರ ಈ ದುಃಸ್ಥಿತಿಗೆ ಕಾರಣ ಯಾರು...? ಇಂಥ ಹಲವಾರು ದುರಂತ ನಟಿಯರ ಜೀವನ ಹೀಗೆಯೇ ಸಾಗುತ್ತಿರುವುದು ವಿಪರ್ಯಾಸದ ಸಂಗತಿ.

ಜೆ.ಮಂಜುಳಾ ಎಂಬ ಅಸಾಧಾರಣ ಪ್ರತಿಭೆ ಹಡಗಲಿ ತಾಲೂಕಿನ ಸೋಗಿ ಎಂಬ ಗ್ರಾಮದಲ್ಲಿದ್ದವಳು. ಈಕೆ ಈಗಿನ ರಂಗಭೂಮಿಯಲ್ಲಿ ವಿಶಿಷ್ಟವಾಗಿ ಬೆಳೆದು ಹೆಸರು ಮಾಡುವಂಥಹ ಅಭಿವ್ಯಕ್ತಿಯನ್ನು ಹೊಂದಿದ್ದಳು. ದೈವವಶಾತ್ ವಿಧಿ ತನ್ನ ಮಡಿಲಿಗೇರಿಸಿತು. 'ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ' ಎಂಬಂತೆ ಎಷ್ಟೋ ಸುಪ್ತ ಪ್ರತಿಭೆಗಳು ಈಗಿನ ಸಮಾಜಗಳಲ್ಲಿ ಹೊರಗಡೆ ಬಂದು ಅರಳದೇ ಕಮರಿಹೋಗಿರುವಂಥ ಅಭಿವ್ಯಕ್ತಿಗಳೇ ಹೆಚ್ಚಾಗಿವೆ.

'ಕಲೆ' ಎಂಬುದು ಎಲ್ಲರಲ್ಲೂ ಕಂಡು ಬರುವುದಿಲ್ಲ. ಅದು ದೈವದತ್ತವಾಗಿ ಕೆಲವರಲ್ಲಿ ಮಾತ್ರ ಅಡಗಿರುತ್ತದೆ. ಅಂಥ ಕಲೆ ಇರುವವರು ತಮ್ಮ ಪ್ರತಿಭೆಯಿಂದ ಮುಂದೆ ಬರಬೇಕೆಂದರೆ ಹಲವಾರು ಸಮಸ್ಯೆಗಳು. ಈ ಸಮಸ್ಯೆಗಳ ಎಳೆಯನ್ನು ಬಿಡಿಸಿಕೊಳ್ಳಬೇಕಾದರೆ ಎಷ್ಟೋ ಕಲಾವಿದೆಯರ ಜೀವನ ಅದರಲ್ಲಿ ಮುಗಿದು ಹೋಗಿ ಬಿಡುತ್ತದೆ. ಕಲೆಯ ಹುಟ್ಟು ಹಲವರಲ್ಲಿ ಇದ್ದರೂ ಅದು ಪ್ರಜ್ವಲಿಸಬೇಕಾದರೆ ಅಂತಹ ಸಂದರ್ಭಗಳು ಎಲ್ಲ ನಟಿಯರಲ್ಲಿ ಒದಗಿಬರುವುದಿಲ್ಲ. ಅದು ಕೆಲವೊಬ್ಬರಲ್ಲಿ ಮಾತ್ರ. ಆದ್ದರಿಂದ ಅಂತಹ ನಟಿಯರು ಮಾತ್ರ ಬೆಳಕಿಗೆ ಬಂದು ಹೆಸರು ಮಾಡಿಕೊಂಡಿದ್ದಾರೆ.

ಶಾಂತ ಎಂಬ ನಟಿಯೂ ಕೂಡ ಇಂಥಹ ದುರಂತಕ್ಕೆ ಈಡಾಗಿದ್ದಾಳೆ. ವಿಷಕುಡಿದು ಸತ್ತಳು. ಮನುಷ್ಯ ಸಂದರ್ಭಗಳ ಶಿಶುವಾಗಿರುತ್ತಾನೆ. ಆದ್ದರಿಂದ ಯಾವ ವ್ಯಕ್ತಿಗೆ ಎಂತಹ ಸಂದರ್ಭಗಳು ಕಂಡು ಕೂಡಿ ಬರುತ್ತವೆಯೋ ಗೊತ್ತಿಲ್ಲ. ಆಯಾ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಮುನ್ನಡೆಯ ಬೇಕಾದರೆ ಹಲವಾರು ವೈರುಧ್ಯಗಳು ಬರುವುದು ಸಹಜ. ಇವನ್ನು ಮೀರಿ ನಡೆಯಬೇಕಾದರೆ ರಂಗನಟಿಯರು ಮನೋಧರ್ಮದ ದಾಷ್ಟ್ಯವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಆದರೆ ಆತ್ಮಸ್ಥೈರ್ಯ ಎಲ್ಲರಲ್ಲೂ ಒಂದೇ ಇರುವುದಿಲ್ಲ. ಅದರಲ್ಲೂ ಕೆಲವು ರಂಗನಟಿಯರು ವಿಶೇಷವಾಗಿ ರೂಢಿಸಿಕೊಂಡು ತಮ್ಮ ಕಲಾವಂತಿಕೆಯನ್ನು ಮೆರೆದವರೂ ಇದ್ದಾರೆ.

ಕಲಾಜೀವನಕ್ಕೆ ವಿದಾಯ ಹೇಳುವವರೇ ಹಲವರು. ರಂಗಭೂಮಿಯ ಸೇವೆಯನ್ನು ಕೊನೆಯವರೆಗೂ ಮಾಡುವವರು ತುಂಬಾ ಕಡಿಮೆಯೇ. ವಯಸ್ಸು ಇರುವವರೆಗೂ ದುಡಿದುಕೊಂಡು ನಂತರ ನಿವೃತ್ತಿ ಜೀವನ ನಡೆಸುತ್ತಾರೆ. ಕೆಲವು "ನಟಿಯರಂತೂ ಎಲ್ಲರೂ ಈಗ ವಯಸ್ಸನ್ನು ಕೇಳುತ್ತಾರೆ. ತೆಳ್ಳಗೆ, ಬೆಳ್ಳಗೆ ಇರಬೇಕು. ಹದಿನಾರರ ಹುಡುಗಿಯರೇ ಬೇಕು ಎಂದೆನ್ನುತ್ತಾರಂತೆ" (ಕೆ.ದುಶೀಲ, ಕೂಡ್ಲಿಗಿ, ಕ್ಷೇತ್ರಕಾರ್ಯ ಸಂದರ್ಶನ ಸಂದರ್ಭ). ನಟಿಯರಿಗೆ ೩೦-೩೫ ವರ್ಷವಾದ ಮೇಲೆ ಸಹಜವಾಗಿ ದೇಹ ದಪ್ಪವಾಗುತ್ತದೆ. ದಪ್ಪಗಿರುವ ನಟಿಯರನ್ನು ಯಾರೂ ಬೇಕೆನ್ನುವುದಿಲ್ಲ. ಸಹಜವಾಗಿ ವಯಸ್ಸಾದ ಮೇಲೆ ನಮ್ಮ ಬೇಡಿಕೆ ಕಡಿಮೆಯಾಗುತ್ತದೆ. ನಮಗೆ ರಂಗಭೂಮಿ ಆಸಕ್ತಿಯೂ ಕಡಿಮೆಯಾಗಿ ಬಿಡುತ್ತದೆ.

ಈ ಕ್ಷೇತ್ರಕ್ಕೆ ಕಾಲಿಟ್ಟಿರುವ ಎಷ್ಟೋ ರಂಗನಟಿಯರಿಗೆ ಹಲವಾರು ರೋಗ ರುಜಿನಗಳು ಬಂದಿದ್ದು ಸರಿಯಾದ ಶುಶ್ರೂಷೆಯಿಲ್ಲದೆ, ಹಣಕಾಸಿನ ಕೊರತೆಯಿಂದಾಗಿ ಎಷ್ಟೋ ನಟಿಯರು ರೋಗರುಜಿನಗಳಿಗೆ ಬಲಿಯಾಗಿದ್ದಾರೆ. ಸಾಮಾಜಿಕ ಭದ್ರತೆಯಿಲ್ಲ, ಆರ್ಥಿಕ ಭದ್ರತೆಯಂತೂ ಮೊದಲೇ ಇಲ್ಲ. ಅಂಥದರಲ್ಲಿ ದೊಡ್ಡ ದೊಡ್ಡ ರೋಗಗಳು ಬಂದು ಬಿಟ್ಟರೆ, ಅವರಿಗೆ ಶುಶ್ರೂಷೆ ಮಾಡುವವರು ಯಾರು? ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಆದ್ದರಿಂದ "ರಂಗನಟಿಯರ ಬಾಳು ಬರೀ ಗೋಳು" ಜೀವನದಲ್ಲಿ ನೋವು ಅನುಭವಿಸಿದ್ದು, ಅಲ್ಲದೆ ನಾಟಕಗಳಲ್ಲಿ ದುಃಖದ ಪಾತ್ರಬಂದರೆ ನಿಜಜೀವನದ ನೋವೇ ಅವರಕ್ಕೆ, ಮುಂದೆ ಬಂದು ತಾವು ನಿಜಜೀವನದಲ್ಲಿ ಇದ್ದಂತೆ ನೋವೇ ಅನುಭವಿಸಿದಂತೆ ಹೇಳುತ್ತಾರೆ. ಪ್ರತಿಯೊಂದು

ಕ್ಷೇತ್ರದಲ್ಲಿ ಮುಂದೆ ಬರುವವರು ಕೆಲವೊಬ್ಬರು ಮಾತ್ರ. ಅಂಥದರಲ್ಲಿ ಎಲ್ಲ ರಂಗನಟಿಯರು ಹೆಚ್ಚಾಗಿ ಪ್ರಸಿದ್ಧಿಗೆ ಬರಬೇಕೆಂದರೆ ಹಲವಾರು ಒಳ್ಳೆಯ ಸಂದರ್ಭಗಳು ಅವರಿಗಾಗಿಯೇ ಕೂಡಿಕೊಂಡು ಬಂದಾಗ ಮಾತ್ರ. ಆದರೆ ಅಂಥ ಸಂದರ್ಭ ಹೆಚ್ಚು ರಂಗನಟಿಯರಿಗೆ ನಮ್ಮ ಸಮಾಜದಲ್ಲಿ ಒದಗಿ ಬರಲು ಸಾಧ್ಯವಿಲ್ಲ ದಂಥ ಪರಿಸ್ಥಿತಿ ಇರುವುದರಿಂದ ಹಲವು ರಂಗನಟಿಯರ ಜೀವನ ದುರಂತಮಯವಾಗಿದೆ.

ರಂಗಭೂಮಿಗೆ ಕಾಲಿಟ್ಟವರಿಗೆ ತಲೆ ಹಾಗೂ ಕಲೆ ಎರಡೂ ಇರುವುದರ ಜೊತೆಗೆ ಅದೃಷ್ಟ ಅವರಿಗೆ ಕೂಡಿ ಕೊಂಡು ಬಂದಿರಬೇಕು. ಅಂದಾಗ ಅವರು ಬದುಕಿನಲ್ಲಿ ಒಂದು ನೆಲೆಯನ್ನು ಕಂಡುಕೊಂಡು ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸಾಧ್ಯವಾಗುತ್ತದೆ. ಒಂದು ಪ್ರತಿಭೆ ಸಮರ್ಪಕವಾಗಿ ಅಭಿವ್ಯಕ್ತವಾಗುವುದು ಪೂರಕವಾಗುವ ಸಂದರ್ಭಗಳು ಒದಗಿ ಬಂದಾಗ ಮಾತ್ರ. ಹಲವಾರು ಪರಂಪರೆ, ಉನ್ನತವಾದ ಸಂಸ್ಕೃತಿ, ಸಂಪ್ರದಾಯ, ಕಟಿಬದ್ಧವಾದ ಸಮಾಜ, ಪುರುಷ ಪ್ರಧಾನ ವ್ಯವಸ್ಥೆ ಇಂಥದರಲ್ಲಿ ಒಬ್ಬ ರಂಗನಟಿ ಅನಕ್ಷರಸ್ಥೆಯಾಗಿ, ತರಬೇತಿ ಇಲ್ಲದ, ಆರ್ಥಿಕ ಭದ್ರತೆಯೇ ಇಲ್ಲದ ಕುಟುಂಬದ ಹಿನ್ನೆಲೆಗಳಿಂದ ಬಂದಿರುವ ನಮ್ಮ ರಂಗನಟಿ ಯರು ಯಶಸ್ಸನ್ನು ಪಡೆಯುವುದು ಬಹುದುಸ್ತರ. ಬಡತನದ ಬೇಗೆಯಿಂದ ಬಳಲುತ್ತಿರುವ ಕೆಳವರ್ಗದಲ್ಲಿ ಪುರುಷ ಮೌಲ್ಯಗಳೊಂದಿಗೆ ಬದುಕಿ ಬವಣೆಗಳನ್ನೆಲ್ಲಾ ಅನುಭವಿಸಿ ವೈಯುಕ್ತಿಕತೆಗಳನ್ನು ಬದಿಗೊತ್ತಿ ಸಾಮೂಹಿಕ ಹಿತದೃಷ್ಟಿಯಿಂದ ಬದುಕಿದ ಎಷ್ಟೋ ರಂಗನಟಿಯರ ಜೀವನ ಹೀನಾಯವಾಗಿದೆ. ಮನುಷ್ಯ ಸಂದರ್ಭಗಳ ಕೂಸು. ಸಂದರ್ಭಗಳು ಒದಗಿ ಬಂದಂತೆ ಬಾಳುವುದು ಅನಿವಾರ್ಯವಾಗುತ್ತದೆ.

ಇತಿಹಾಸವನ್ನು ನಾವು ಅವಲೋಕಿಸಿದಾಗ ಮಹಿಳೆ ರಂಗಭೂಮಿಗೆ ಕಾಲಿಟ್ಟಿದ್ದು ತೀರ ಇತ್ತೀಚೆಗೆ. ಹೆಣ್ಣು ನಾಟಕವನ್ನು ನೋಡುವುದು ನಿಷಿದ್ಧವಾಗಿರತಕ್ಕಂಥ ಕಾಲದಲ್ಲಿ ರಂಗಭೂಮಿಗೆ ಕಾಲಿಟ್ಟವರು ತೀರಾ ವಿರಳ. ಎಷ್ಟೋ ಜನರಿಗೆ ತಮ್ಮ ಪತ್ನಿ ನಾಟಕ ನೋಡುವುದು, ತಾಲೀಮಿಗೆ ಹೋಗುವುದು ರಂಗಭೂಮಿಯಲ್ಲಿ ನಟಿಸುವುದು ಅಥವಾ ಪರ ಪುರುಷರೊಂದಿಗೆ ಮಾತನಾಡುವುದು ಸಲ್ಲದ ವಿಷಯ. ಇಂಥವುಗಳೆಲ್ಲವನ್ನು ಮೆಟ್ಟಿನಿಂತು ಕಲೆಗಾಗಿ ಜೀವನವನ್ನು ಮುಡುಪಿಟ್ಟು ಹೆಸರು ಮಾಡಿಕೊಂಡವರು ನಮ್ಮ ಜಿಲ್ಲೆಯಲ್ಲಿ ಹಲವಾರು ಮೇರು ಪರ್ವತವಾಗಿದ್ದಾರೆ.

ರಂಗನಟಿಯರನ್ನು ಮೆಚ್ಚಿ ಮದುವೆಯಾಗಿ ನಂತರ ಅವರನ್ನು ರಂಗಭೂಮಿಯಿಂದ ದೂರವಿಟ್ಟು ಕಲೆಯನ್ನು ತಿರಸ್ಕರಿಸಿದವರು ಅಧಿಕ ಸಂಖ್ಯೆಯಲ್ಲಿದ್ದಾರೆ. ವೈವಾಹಿಕ ಜೀವನ ಸುಖಮಯವಾಗಿದ್ದಾಗ ರಂಗನಟಿಯರು ಮತ್ತೆ ಈ ಕ್ಷೇತ್ರಕ್ಕೆ ತಿರುಗಿ ಬಂದಿಲ್ಲ. ಅವರಿಟ್ಟ ಹೆಜ್ಜೆಗಳ ಗುರುತು ಮಾತ್ರ ರಂಗಭೂಮಿಯಲ್ಲಿ ಇಂದಿಗೂ ಉಳಿದುಕೊಂಡು ಬಂದಿವೆ. ಇದಕ್ಕೆ ವ್ಯತಿರಿಕ್ತವಾಗಿ ವೈವಾಹಿಕ ಜೀವನದ ನಂತರವೂ ಕಲೆಯನ್ನು ಆರಾಧಿಸಿ ರಂಗಭೂಮಿಯನ್ನು ಪ್ರೋತ್ಸಾಹಿಸಿದವರೂ ಇದ್ದಾರೆ. ಆದರೆ ಅವರ ಸಂಖ್ಯೆ ಅತೀ ವಿರಳವೆಂದೇ ಹೇಳಬೇಕು.

'ಬದುಕು ಜಟಕಾ ಬಂಡಿ ವಿಧಿ ಅದರ ಸಾರಥಿ' ಡಿ.ವಿ.ಜಿಯವರ ಈ ವಾಣಿಗೆ ರಂಗನಟಿಯರ ಬದುಕು ಹೊರತಲ್ಲ. ಜೀವನವೆಂಬ ರಂಗಭೂಮಿಯಲ್ಲಿ ಪಾತ್ರಧಾರಿಗಳು ನಾವೆಲ್ಲಾ. ಸೂತ್ರಧಾರ ಆ ದೇವರು. ಅವನು ಆಡಿಸಿದಂತೆ ಆಡುವುದು ನಮ್ಮಗಳ ಹೊಣೆ. ಅಂತೆಯೇ ರಂಗನಟಿಯರ ಬದುಕು ಕೂಡ. ಕೆಲವು ರಂಗನಟಿಯರ ಜೀವನದ ಅಂತ್ಯ ದುರಂತವಾದರೂ ಇನ್ನೂ ಕೆಲವರ ಜೀವನ ಸುಗಮವಾಗಿದೆ. ವೈರುಧ್ಯದ ಸಂದರ್ಭಗಳನ್ನು ಮೆಟ್ಟಿ ನಿಂತು ಬದುಕಿದವರೂ ಇದ್ದಾರೆ. ಈ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ರಂಗಭೂಮಿಯನ್ನು ತಾರಕಕ್ಕೇರಿಸಿದವರೂ ಇದ್ದಾರೆ. "You sea the ocean not the wave" ಪ್ರಶಾಂತವಾದ ಸಮುದ್ರವನ್ನು ನೋಡಬೇಕೇ ವಿನಃ ಏರುಪೇರಾದ ಅಲೆಗಳನ್ನು ನೋಡ ಬಾರದು. ಜೀವನದಲ್ಲಿ ಏನೇ ಕಷ್ಟಬಂದರೂ ಸೌಮ್ಯದಿಂದ ರಂಗನಟಿಯರು ವರ್ತಿಸಿದಾಗ ಅವರ ಬದುಕಿಗೊಂದು ಅರ್ಥ, ನೆಲೆ, ಬೆಲೆ ಇವುಗಳು ಸಿಗಲು ಸಾಧ್ಯ. ಸಮಸ್ಯೆಗಳನ್ನು ಸವಾಲುಗಳನ್ನಾಗಿ ಸ್ವೀಕರಿಸಿ ಸತತ ಹೋರಾಟ ನಡೆಸಿ ಜೀವನವನ್ನು ಸುಖಮಯವನ್ನಾಗಿ ಮಾಡಿಕೊಂಡಲ್ಲಿ ರಂಗ ನಟಿಯರ ಜೀವನದಲ್ಲಿ 'ದುರಂತ' ಎಂಬ ಅಂಕಪರದೆಗೆ ನಾಂದಿಹಾಡಲು ಸಾಧ್ಯ ಅಲ್ಲವೆ?

೫.೧೧. ವೃತ್ತಿಸ್ವರೂಪ

ಮಾನವನು ಜೀವನ ನಿರ್ವಹಣೆಗೆ, ಆರ್ಥಿಕ ಭದ್ರತೆಗೆ ಒಂದು ವೃತ್ತಿಯನ್ನು ಅವಲಂಬಿಸಲೇ ಬೇಕು. ನಾಗರೀಕತೆ ಬೆಳೆದಂತೆ ಆರ್ಥಿಕ ಚಟುವಟಿಕೆಗಳು ಬೆಳವಣಿಗೆಗೆ ಬಂದಂತೆಲ್ಲಾ ಪ್ರತಿಯೊಬ್ಬರೂ ದುಡಿದು ಬದುಕಬೇಕಾಗಿರುವ ಅನಿವಾರ್ಯತೆ ತೀರಾ ಹೆಚ್ಚಾಗಿದೆ. ವೈಜ್ಞಾನಿಕತೆ, ತಾಂತ್ರಿಕತೆ, ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ವೈವಿಧ್ಯತೆಯ ಪ್ರಗತಿಯು ಇಂದು ಮಾನವನು ಉತ್ತುಂಗಸ್ಥಿತಿಗೆ ಏರುವಂತೆ ಮಾಡಿದೆ. 'ಕಾಯಕವೇ ಕೈಲಾಸ' ಎನ್ನುವ ಬಸವತತ್ವ ಆಧಾರದಿಂದ ೧೨ನೇ ಶತಮಾನದಲ್ಲಿ ವೃತ್ತಿಧರ್ಮದ ಬಗ್ಗೆ ಹೆಚ್ಚು ಪ್ರಚಲಿತತೆ ಉಂಟಾಯಿತು. ಜನಸಾಮಾನ್ಯರೆಲ್ಲರೂ ಆಯಾ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ನಿರಂತರವಾಗಿ ದುಡಿದು ಕ್ರಿಯಾಶೀಲತೆಯಲ್ಲಿ ಇಂದು ಪ್ರತಿಯೊಬ್ಬರೂ ತಮ್ಮದೇ ಆದ ಜೀವನ ನಿರ್ವಹಣೆಗೆ ವೃತ್ತಿಯನ್ನು ಅವಲಂಬಿಸಿದ್ದಾರೆ.

ವೃತ್ತಿನಿರತರಾಗಿರುವುದರಿಂದ ಸಮಯದ ಅರಿವೇ ತಿಳಿಯದಾಗಿದೆ. ಈಗೀಗಂತೂ ಪ್ರತಿಯೊಬ್ಬರೂ ಯಾಂತ್ರಿಕ ಮಾನವರಾಗಿಬಿಟ್ಟಿದ್ದಾರೆ. ನಿರಂತರವಾಗಿ ಮನುಷ್ಯ ಯಂತ್ರಗಳಂತೆ ಕೆಲಸವನ್ನು ಮಾಡುತ್ತಲೇ ಇರುತ್ತಾನೆ. ವೈಜ್ಞಾನಿಕವಾಗಿ ಮನುಷ್ಯ ಉಚ್ಛ್ರಾಯ ಸ್ಥಿತಿಗೆ ಬಂದಂತೆಲ್ಲಾ ದಿನದ ಇಪ್ಪತ್ನಾಲ್ಕು ಗಂಟೆಗಳೂ ಕೂಡ ಕೆಲಸಕ್ಕೆ ಕಡಿಮೆ ಎನಿಸಿಬಿಡುತ್ತದೆ. ಆದ್ದರಿಂದ ಎಲ್ಲರಿಗೂ ಸಮಯದ ಕೊರತೆ ತುಂಬಾ ಹೆಚ್ಚಾಗಿದೆ. ಈ ಕೊರತೆಯನ್ನು ತುಂಬಿಕೊಳ್ಳಬೇಕಾದರೆ, ಅಷ್ಟರಲ್ಲಿಯೇ ಅವರು ಆ ಕೆಲಸವನ್ನು ಮಾಡಿಯೇ ತೀರಬೇಕು. ವೃತ್ತಿಧರ್ಮಕ್ಕೆ ಮೋಸ ಮಾಡದವರು ಮೊದಲು ಕರ್ತವ್ಯದಲ್ಲಿ ಪ್ರಜ್ಞಾವಂತಿಕೆ ಇರಬೇಕು. ಕರ್ತವ್ಯ ನಿಷ್ಠರಾದ

[illegible]

[illegible]

[illegible]

[illegible]

[illegible]

ವರಿಗೆ ಗೆಲುವು ಯಾವಾಗಲೂ ಸಿದ್ಧವಾಗಿಯೇ ಇರುತ್ತದೆ. ಇದು ಕರ್ತವ್ಯದ ಗುರಿ ಹಾಗೂ ಶ್ರೇಷ್ಠತೆ. ದೇಶ ಭಕ್ತರು, ಸೈನಿಕರು, ಸರಕಾರಿ ನೌಕರರು ಸಂಬಂಧಿಗಳ ಕರೆಗಿಂತಲೂ ಕರ್ತವ್ಯದ ಕರೆಗೆ ಎಲ್ಲರೂ ಓಗೊಟ್ಟಿದ್ದಾರೆ. ಕರ್ತವ್ಯ ಮೊದಲು ನಂತರ ಎಲ್ಲಾ. ವೃತ್ತಿಗೆ ಯಾವ ಅಡೆತಡೆಯು ಉಂಟಾಗದಂತೆ ನೋಡಿಕೊಳ್ಳುವವನೇ ಪರಮಭಕ್ತ. ದುಡಿಮೆ ಹಾಗೂ ಉಲ್ಲಾಸದ ಹಾದಿಗಳನ್ನು ನಾವು ಸುಗಮ ಗೊಳಿಸಿಕೊಳ್ಳಬೇಕು ಅಂದಾಗಲೇ ಪ್ರತಿಯೊಬ್ಬರು 'ಜೀವನ ಸಂಸ್ಕಾರ'ವನ್ನು ಹುಟ್ಟಿನ ಅರ್ಥವನ್ನು ಸಾರ್ಥಕಗೊಳಿಸಿ ದಂತಾಗುತ್ತದೆ.

ಈ ಎಲ್ಲಾ ವೃತ್ತಿಗಳಲ್ಲಿ ರಂಗವೃತ್ತಿಯೂ ಒಂದು. ರಂಗಭೂಮಿಯ ಬೆಳವಣಿಗೆಯಾದಂತೆಲ್ಲಾ, ರಂಗಭೂಮಿಗೆ ಮಹಿಳೆ ಪ್ರವೇಶಿಸಿ ಶತಮಾನ ಕಳೆಯುತ್ತಾ ಬರುತ್ತಿದೆ. ಈಗೀಗ ರಂಗಭೂಮಿಗೆ ನಟಿಯರು ಅಮೇಚೂರ್ ಕಲಾವಿದರೊಂದಿಗೆ ಪಾತ್ರ ಮಾಡುತ್ತಾ ಇದ್ದದ್ದನ್ನೇ ಒಂದು ವೃತ್ತಿ ದುಡಿಮೆಯನ್ನಾಗಿ ಮಾಡಿ ಕೊಂಡಿದ್ದಾರೆ. ಈ ವೃತ್ತಿಯಿಂದಲೇ ಅವರು ಇಡೀ ಮನೆಯನ್ನು ಬಡತನದಿಂದ ಮುಕ್ತ ಕುಟುಂಬಗಳನ್ನಾಗಿ ಮಾಡಿದ್ದಾರೆ. ಕುಟುಂಬ ಪರಿಸರದಲ್ಲಿ ಸೌಹಾರ್ದಯುತ ಬದುಕನ್ನು ಕಾಣಲು ಇದರಿಂದ ಸಾಧ್ಯವಾಗಿದೆ ಎನ್ನುತ್ತಾರೆ ಕೆಲವು ರಂಗನಟಿಯರು. ಹೀಗಿದ್ದ ಮೇಲೆ ಈ ವೃತ್ತಿಯ ಸ್ವರೂಪ ಎಂಥಹದು ಎಂದು ನೋಡೋಣ.

೧. **ನಾಟಕ ಪಾತ್ರ :** ಬಳ್ಳಾರಿ ಜಿಲ್ಲೆಯಲ್ಲಿ ಬರುವ ಎಲ್ಲಾ ರಂಗನಟಿಯರು ಒಂದೊಂದು ನಾಟಕಕ್ಕೆ ಒಂದೊಂದು ಪಾತ್ರಕ್ಕೆ ಅವರು ಸೀಮಿತವಾಗಿ ಬಿಟ್ಟಿದ್ದಾರೆ. ಆದ್ದರಿಂದ ಇಂಥ ಪಾತ್ರಕ್ಕೆ ಇಂಥವರನ್ನೇ ಕರೆಯಬೇಕು, ಗ್ರಾಮೀಣ ರಂಗಭೂಮಿಯಲ್ಲಿ ಪ್ರೇಕ್ಷಕರ ಅಪೇಕ್ಷೆಗೆ ತಕ್ಕಂತೆ ಕಲಾವಿದನು ಇರುತ್ತಾನೆ. ಈ ಕಾರಣದಿಂದ ಸಾಮಾಜಿಕ, ಪೌರಾಣಿಕ, ನಾಟಕಗಳಲ್ಲಿ "ಅವರವರದೇ ಆದ ಪಾತ್ರವನ್ನು ಸಂಪೂರ್ಣವಾಗಿ ಅವರೇ ಮಾಡಿದರೆ ಸರಿ" ನಾಟಕವನ್ನು ನೋಡಲು ಬಹುಜನರು ಬರುತ್ತಾರೆ ಎಂಬ ನಂಬಿಕೆ ಇದೆ. ಆ ನಂಬಿಕೆಯೂ ಕೂಡ ಸತ್ಯವಾಗಿದೆ.

ರಕ್ತರಾತ್ರಿ ನಾಟಕ

ದ್ರೌಪದಿ	-	ಸುಭದ್ರಮ್ಮ ಮನ್ನೂರು
ಉತ್ತರೆ	-	ಕೆ.ನಾಗರತ್ನಮ್ಮ
ಭಾನುಮತಿ	-	ಪಿ.ಪದ್ಮ
ಮದಹಂಸಿ	-	ಆದವಾನಿ ವೀಣಾ ಮತ್ತು ಎಸ್.ರೇಣುಕಾ

ಒಂದು ಕಾಲದಲ್ಲಿ ಅಂದರೆ ಎಪ್ಪತ್ತರ ದಶಕದಿಂದ ಈಚೆಗೆ ಪಾತ್ರಕ್ಕೆ ಇವರೆ 'ಬ್ರಾಂಡ್' ಆಗಿ ಬಿಟ್ಟಿದ್ದರು. ಇವರಲ್ಲಿ ಬೇರೆ ಬೇರೆ ಪಾತ್ರಮಾಡಿದರೆ ಪ್ರೇಕ್ಷಕರಿಗೆ ಅದು ಹಿಡಿಸುವುದೇ ಇಲ್ಲ. ಉಪಪಾಂಡವರನ್ನು

ಕಳೆದುಕೊಂಡ ದ್ರೌಪತಿ ದುಃಖ ಹಾಗೂ ಆವೇಶದಲ್ಲಿ ಅಶ್ವತ್ಥಾಮನೊಂದಿಗೆ ಯುದ್ಧಮಾಡುವ ಸುಭದ್ರಮ್ಮರ ವ್ಯಂಗ್ಯ ಹಾಗೂ ಕುಹಕನಗೆ, ಓ ಅಮೋಘ ಪ್ರತಿಭೆ. ತನ್ನ ಹೆತ್ತಮಕ್ಕಳು ನತದೃಷ್ಟರಾಗಿ ಅಶ್ವತ್ಥಾಮನಿಗೆ ಬಲಿಯಾದಾಗ ಯಾವ ತಾಯಿಯ ಒಡಲಿಗೆ ಕಿಚ್ಚು ಹತ್ತದೇ ಇರುವುದಿಲ್ಲ. ಅಂತಹದರಲ್ಲಿ ಶ್ರೇಷ್ಠನಟಿ ಸುಭದ್ರಮ್ಮ ಅವರ ಪ್ರೌಢ ಅಭಿನಯ, ರಾಜಗಾಂಭೀರ್ಯದಿಂದ, ಅರಳು ಹುರಿದಂತೆ ಮಾತನಾಡಿ ಇಡೀ ರಂಗಭೂಮಿಯಲ್ಲಿ "Pindrop scilence" ಆಗಿ ರಂಗಭೂಮಿ ಕೇಂದ್ರಬಿಂದುವಾಗಿ ರಂಗವೇ ರಂಗೇರುವಂತೆ ಅಟ್ಟಹಾಸದಲ್ಲಿ ಕುಹಕನಗೆಯನ್ನು ನಗುವ ಸುಭದ್ರಮ್ಮನನ್ನು ನೋಡಿದರೆ ದೇವರು ಈ ವ್ಯಕ್ತಿತ್ವವನ್ನು ಹೇಗೆ ರೂಢಿಸಿದ ಎಂಬ ಮಾತು ಪ್ರೇಕ್ಷಕನ ಮನದಲ್ಲಿ ಬರದೇ ಇರದು.

ದುಂಡು ಮುಖದ, ನೀಳಕೇಶರಾಶಿ, ದೃಢವಾದ ಆಕರ್ಷಕ ಮೈಕಟ್ಟು, ಸೌಂದರ್ಯವನ್ನು ಪಡೆದಿರುವ ಸುಭದ್ರಮ್ಮ ಶ್ರೇಷ್ಠತೆಯ ಅಭಿನೇತ್ರಿಯೇ ಸರಿ. ಸಮರ್ಥವಾದ ನಾಯಕಿಯ ಎಲ್ಲ ಗುಣ ಲಕ್ಷಣಗಳನ್ನು ಪಡೆದಿರುವಂಥ ನಟಿ. ಪ್ರತಿಯೊಂದಕ್ಕೂ, ತಾಳ್ಮೆ, ಗಾಂಭೀರ್ಯ, ಸಹಕಾರ, ಸದಾ ಉತ್ಸಾಹಿ, ಹಿತವಾಗಿ ಮಾತನಾಡುವ ಅರಳು ಹುರಿದಂತೆ ಮಾತನಾಡಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ. ಸ್ಪಷ್ಟವಾದ ಭಾಷೆ, ನಿಖರವಾದ ಶೈಲಿ, ದಿಗ್ಮೂಢನಾದ ಪ್ರೇಕ್ಷಕ ಸೀದಾ ದ್ವಾಪರಯುಗಕ್ಕೆ ಹೋಗಿಬಿಡುತ್ತಾನೆ. ಹಸ್ತಿನಾವತಿಯ ದ್ರೌಪತಿ ಈಕೆಯೇ ಅನಿಸಿಬಿಡಬೇಕು. ಅಷ್ಟರ ಮಟ್ಟಿಗೆ ಪ್ರಭಾವವನ್ನು ಬೀರಿ ಪ್ರೇಕ್ಷಕರ ಮನದಾಳದಲ್ಲಿ ಸುಭದ್ರಮ್ಮ ಸುಭದ್ರವಾದ ಸ್ಥಾನವನ್ನು ಗಳಿಸಿ ಬಿಟ್ಟಿದ್ದಾರೆ. ಇವರನ್ನು ಬಿಟ್ಟು ದ್ರೌಪತಿ ಪಾತ್ರಕ್ಕೆ ಪ್ರೇಕ್ಷಕರು ಇನ್ನೊಬ್ಬರನ್ನುಊಹಿಸಿಕೊಳ್ಳಲೂ ಇಷ್ಟಪಡುವುದಿಲ್ಲ. ಅಷ್ಟರ ಮಟ್ಟಿಗೆ ನೈಜತೆ, ರಾಜಗಾಂಭೀರ್ಯ, ನಟನಾ ತಂತ್ರ, ದ್ರೌಪತಿಯ ಆ ನಗು, ಪ್ರಿಯ ಸಹೋದರ ಕೃಷ್ಣನೊಂದಿಗೆ ಮಾತನಾಡುವ ರೀತಿ, ಭೇ ಭೇ ಅದೆಂತಹ ಅಮೋಘ ಪ್ರತಿಭೆ.

ಈ ಉಜ್ವಲ ತಾರೆಯ ಈ ಪಾತ್ರ ನೋಡಿದವರಿಗೆ ಸುಭದ್ರಮ್ಮಗೆ ಸುಭದ್ರಮ್ಮನೇ ಸಾಟಿಯಾಗಿ ಬಿಡುತ್ತಾರೆ. ಹೋಲಿಕೆಗೆ ಯಾರು ಸಿಗುವುದೇ ಇಲ್ಲ. ಇವೆಲ್ಲವುಗಳೊಂದಿಗೆ ದೇವರೇ ಇವರಿಗೆ ವರಪ್ರಸಾದವಾಗಿ ನೀಡಿರುವ ಕಂಠ ಚಿಕ್ಕಂದಿನಿಂದಲೂ ರೂಢಿಸಿಕೊಂಡು ಬಂದಿರುವ ಇವರಿಗೆ ನಾಟಕ ರಂಗದಲ್ಲಿ ಇಂದು ಉಚ್ಚಸ್ಥಾನವನ್ನು ಕೊಡಲಾಗಿದೆ. ಅಕಾಡೆಮಿ ಪ್ರಕಟಿಸಿದ 'ಇಂದಿನ ರಂಗಕಲಾವಿದರು' ಗ್ರಂಥದಲ್ಲಿ ಲೇಖಕರು ಇವರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಹೆಸರಾಂತ ನಾಟಕಗಳಲ್ಲಿ ಈಕೆಯದು ನಾಯಕಿಯ ಪಾತ್ರ. ಪಾತ್ರಗಳಲ್ಲಿ ತನ್ಮಯವಾಗಿ ಪ್ರೇಕ್ಷಕರ ಅಂತರಂಗ ವನ್ನು ಮನಸೂರೆಗೊಳ್ಳುತ್ತಿದ್ದ ಕಲಾವಿದೆ ಈಕೆ. ಅತ್ಯುತ್ತಮ ಹಾಡುಗಾರಿಕೆ ಬಲ್ಲ ಈಕೆ, ಹಿರಣ್ಣಯ್ಯ ಮಿತ್ರಮಂಡಲಿಯ 'ಲಂಚಾವತಾರ' ನಾಟಕದಲ್ಲಿ ಸೀತೆಯಾಗಿ ಅಕ್ಕನವರ ವಚನವನ್ನು ಹಾಡುತ್ತಿದ್ದುದು ಅತ್ಯಂತ ಜನಪ್ರಿಯವಾಗಿತ್ತು. ಬಹುಭಾಷಾ ಪ್ರವೀಣೆ ಸುಭದ್ರಮ್ಮನವರು ಮುಂದೆ ಕಂಪನಿಗಳನ್ನು ಬಿಟ್ಟರು.

ಆಹ್ವಾನವಿದ್ದಾಗ ಅಭಿನಯಿಸಿ ಬರತೊಡ ಗಿದರು. ಸುಭದ್ರಮ್ಮ ಇದ್ದರೆ ಗಲ್ಲಾ ಪೆಟ್ಟಿಗೆಗೆ, ಯಾವ ಕಂಪನಿಗೂ ಹಾನಿಯಿಲ್ಲ. ಅಂತಹ ಭರವಸೆಯ ಕಲಾವಿದೆ ಈಕೆ" (ಲೇ: ಗವೀಶ್ ಹಿರೇಮಠ, ಪುಟ, ೨೭).

ಈ ಅಂಶಗಳು ಸುಭದ್ರಮ್ಮನವರ ಅಭಿನಯ ಹಾಗೂ ಹಾಡುಗಾರಿಕೆಯ ಧೀಮಂತ ಪ್ರತಿಭೆಯನ್ನೇ ಒತ್ತಿ ಹೇಳುತ್ತವೆ. ಸುಭದ್ರಮ್ಮ ವೃತ್ತಿರಂಗಕಲಾವಿದೆಯಾಗಿ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ತಮ್ಮ ಕಲಾಪ್ರತಿಭೆಯಿಂದ ದಿನದಿನಕ್ಕೆ ಬೆಳೆಯುತ್ತ ನಾಡಿನ ಕೀರ್ತಿಯನ್ನು ಬೆಳೆಗಿಸಿದ್ದಾರೆ. ಆದ್ದರಿಂದ ಸುಭದ್ರಮ್ಮ ರಂಗಭೂಮಿ ಸೂಪರ್‌ಸ್ಟಾರ್ ಆಗಿ ಬಳ್ಳಾರಿ ಜಿಲ್ಲೆಯ ರಂಗಭೂಮಿ ಬೆಳವಣಿಗೆಗೆ ಕಾರಣರಾಗಿದ್ದಾರೆ. ದೈವದತ್ತವಾದ ಧ್ವನಿಮಾಧುರ್ಯ ಕಂಠ ಮಾಧುರ್ಯದಿಂದ ಬಳ್ಳಾರಿ ಜಿಲ್ಲೆಯ 'ರಂಗ ಕೋಗಿಲೆ' ಎಂದು ಹೆಸರು ಪಡೆದಿದ್ದಾರೆ. ರಂಗಭೂಮಿಯ ಅಭಿವೃದ್ಧಿಗೆ ಶ್ರಮಿಸುತ್ತಿರುವ ಇವರು ನಾಟಕದಲ್ಲಿ ತಮ್ಮ ಪಾತ್ರವನ್ನು ಬಹುಪಾಲು ಜಾಗರೂಕತೆಯಿಂದ ಸುಭದ್ರವಾಗಿ ಪಾತ್ರವನ್ನು ನಿರ್ವಹಿಸಿಕೊಳ್ಳುತ್ತಾ ಬಂದಿದ್ದು ರಂಗಭೂಮಿಯ ಇವರ ಸೇವೆ ಅಮೋಘ ಅವಿಸ್ಮರಣೀಯ ಎಂದರೆ ಉತ್ಪ್ರೇಕ್ಷೆ ಯಾಗಲಾರದು.

ಬಳ್ಳಾರಿ ಜಿಲ್ಲೆಯ ಇನ್ನೊಬ್ಬ ಧೀಮಂತೆ ಪಾತ್ರ 'ಶೀಲಾವತಿ' ನಾಟಕದ ಮರಿಯಮ್ಮನಹಳ್ಳಿ ಕೆ.ನಾಗರತ್ನ ಅವರು. ಮುದೇನೂರು ಸಂಗಣ್ಣ ವಿರಚಿತ ಶೀಲಾವತಿ ಈ ಪಾತ್ರಕ್ಕೆ ನಾಗರತ್ನರಿಗೆ ನಾಗರತ್ನರೇ ಸಾಟಿ ಎನಿಸುತ್ತಾರೆ. ಅವರ ಕಳೆಕಟ್ಟುವ ಈ ಪಾತ್ರ ನಟನಾ ಚತುರತೆ ಎಂಥವರನ್ನು ದಿಗ್ಮೂಢರನ್ನಾಗಿಸಿ ಬಿಡುತ್ತದೆ. ನಾಗರತ್ನಮ್ಮನವರ ಈ ಪಾತ್ರವು ಶ್ರೇಷ್ಠನಟರ ಸಾಲಿಗೆ ನಿಲ್ಲುತ್ತದೆ. ಬುದ್ಧಿವಂತಿಕೆ ಹಾಗೂ ನಟನಾ ಸಾಮರ್ಥ್ಯವು ಪ್ರೇಕ್ಷಕರನ್ನು ದಂಗುಬಡಿ ಯುವಂತೆ ಮಾಡಿದೆ. ಶೀಲಾವತಿ ಪಾತ್ರಕ್ಕೆ ಶೀಲಾವತಿಯೇ ಸಾಟಿಯಾಗಬಲ್ಲಳಲ್ಲದೇ ಬೇರೆ ಪಾತ್ರದ ಹೋಲಿಕೆಗೆ ಯಾರೂ ಸಾಟಿಗಳಾಗಲಾರರು.

ಹಾಗೆಯೇ 'ರಕ್ತರಾತ್ರಿ' ನಾಟಕದ 'ಉತ್ತರೆ' ಪಾತ್ರ ಬಳ್ಳಾರಿ ಆಸುಪಾಸಿನ ಜಿಲ್ಲೆಯಲ್ಲೆಲ್ಲಾ ಹೆಸರುವಾಸಿ ಯಾಗಿದೆ. ಇನ್ನೊಂದು ವಿಶೇಷವೆಂದರೆ ನಾಟಕದ ಈ ಪಾತ್ರಗಳನ್ನು ಇಂಥವರೇ ಮಾಡಬೇಕು ಎಂದು ಜನಮನದಲ್ಲಿಯೇ ನಿರ್ಧಾರವಾಗಿ ಬಿಟ್ಟಿದೆ. ಆದ್ದರಿಂದ ಆಯಾ ಪಾತ್ರಕ್ಕೆ ಆ ನಟಿಯರನ್ನೇ ಆ ಪಾತ್ರ ನಿರ್ವಹಿಸಲು ಬುಕ್ ಮಾಡಿ ಬರುತ್ತಾರೆ. ಸಾವಿರಾರು ಪ್ರಯೋಗ ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಆಗಿ ಸಂಪೂರ್ಣ ಯಶಸ್ವೀ ನಾಟಕ ಎಂಬ ಹೆಸರು 'ರಕ್ತರಾತ್ರಿ' ನಾಟಕಕ್ಕೆ ಸಲ್ಲುತ್ತದೆ ಎಂದೆನ್ನಬಹುದು.

ವಿಧವೆಯಾದ ಅಭಿಮನ್ಯುವಿನ ಪತ್ನಿ ಉತ್ತರೆ ಶೋಕ ಸಾಗರದಲ್ಲಿ ಮುಳುಗಿ, ಅತ್ತೆ ದ್ರೌಪತಿಯ ಸಾಂತ್ವನದ ಮಾತುಗಳ ಹಿತದಿಂದ ದುಃಖದಲ್ಲಿಯೇ ಜೀವನ ಸವೆಸುವ ಉತ್ತರೆ ನಿಜಕ್ಕೂ ಉತ್ತರೆ. ಆ ಧ್ವನಿ, ಮಾತಿನ ಸಹಜತೆ, ನೈಜತೆ, ಅಭಿನಯ ಪ್ರೇಕ್ಷಕರ ಮನಮಿಡಿಯುವ ಪಾತ್ರ. ಉತ್ತರೆ ಪಾತ್ರ ಬಳ್ಳಾರಿ ಜಿಲ್ಲೆಯ ಪ್ರೇಕ್ಷಕರ ಮನದಾಳದಲ್ಲಿ ಅಚ್ಚ ಅಳಿಯದೆ ಉಳಿದಿದ್ದಾರೆ ಎಂದರೂ ತಪ್ಪಿಲ್ಲ.

ಕೂಡ್ಲಿಗಿಯ ಪಿ. ಪದ್ಮ ಭಾನುಮತಿ ರಾಣಿಯ ಪಾತ್ರಕ್ಕೆ ಹೇಳಿಮಾಡಿಸಿದ ಮೈಕಟ್ಟು, ಆಕರ್ಷಕ ಕಣ್ಣುಗಳು, ಮಾತಿನ ಚಾಕಚಕ್ಯತೆ "ಸರ್ರನೇ ತಿರುಗಿ ನೋಡುವ ಹೊರಳಿನಿಂತು ನೋಡುವ" ಅಭಿನಯ, ಹಂಸ ನಡಿಗೆ, ಎಂತಹವರನ್ನಾದರೂ ಮನ ಸೂರೆಗೊಳ್ಳುವ ನಟನಾ ಜಾಣ್ಮೆ 'ಅಂತಃಪುರದ ರಾಣಿಗೆ ರಾಣಿಯೇ ಸಾಟಿ" ಹಾಗೂ ಸಮರ್ಥಳು. ಹಿಂದೆ ಮಾಡಿರುವ ನಾಟಕಗಳಲ್ಲಿಯ ಫೋಟೋಗಳೇ ಇದಕ್ಕೆ ಸಾಕ್ಷಿಯಾಗಿವೆ. ಹಸ್ತಿನಾವತಿಯ ರಾಣಿ ಭಾನುಮತಿಯೇ ಈಕೆ ಎಂಬಂತೆ ನಮಗೆ ಭಾಸವಾಗುತ್ತದೆ. ಆ ನಟನೆ ಆ ಮಾತು ಆ ವ್ಯಕ್ತಿತ್ವವನ್ನು ನೋಡಿದರೆ ಹಸ್ತಿನಾವತಿಯ ರಾಣಿ ಹಿಂದಿನ ಜನ್ಮದಲ್ಲಿ ಈಕೆಯೇ ಇರಬೇಕು ಎಂದೆನಿಸುತ್ತದೆ. ಛಲದಂಕ ಮಲ್ಲ ಪತಿ "ಛಲವನೆ ಮೆರೆವಂ" ಎಂಬ ದಾರ್ಷ್ಟ್ಯದ ಮನುಷ್ಯ ಅಂಥವನ ಪ್ರಿಯಪತ್ನಿಯೇ ಈಕೆ. ವಿಶೇಷವೆಂದರೆ ಖಳನಾಯಕರ ಹೆಂಡತಿಯರೇ ವಿಶೇಷವಾಗಿ ಅವರ ಮಾನವೀಯ ಮೌಲ್ಯಗಳಿಂದ ಆಕರ್ಷಿತರಾಗುತ್ತಾರೆ. ಅಂಥ ಆಕರ್ಷಕ ಪಾತ್ರ ಪಿ.ಪದ್ಮ ಅವರದು. ಕುರು ವಂಶದ ಕ್ರೌರ್ಯ ಒಂದೆಡೆಯಾದರೆ ಕುರುವಂಶದ ಆದರ್ಶ ಇನ್ನೊಂದೆಡೆ ಇದೆ ಎಂಬುದು ಪಿ.ಪದ್ಮ ಅವರ ಪಾತ್ರ, ವ್ಯಕ್ತಿತ್ವದಿಂದ ನಮ್ಮ ಅರಿವಿಗೆ ಬರುತ್ತದೆ.

'ಸಂಗ್ಯಾ-ಬಾಳ್ಯಾ' ನಾಟಕ ಕರ್ನಾಟಕದ ತುಂಬೆಲ್ಲಾ ಹೆಸರುವಾಸಿಯಾದ ಜಾನಪದ ನಾಟಕ. ಚಂದ್ರಶೇಖರ ಕಂಬಾರ ವಿರಚಿತ ನಾಟಕದ ಕಥಾವಸ್ತು ವಿಶೇಷ ರೀತಿಯದು. ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕ ಗಂಗಾ ಧರ್ಮ ಸಂಕಟದಲ್ಲಿ ವಿಲ ವಿಲ ಒದ್ದಾಡಿ ನೈಜ ಅಭಿನಯ ನೀಡುವ ತಂತ್ರಗಾರಿಕೆಯ ಅಭಿನೇತ್ರಿ ಕೂಡ್ಲಿಗಿ ಪಿ.ಪದ್ಮ. ಈ ಪಾತ್ರ ಬಳ್ಳಾರಿ ಜಿಲ್ಲೆ ಹಾಗೂ ಬೇರೆ ಭಾಗಗಳಲ್ಲಿ ಹೆಸರನ್ನು ಮಾಡಿದೆ. ನಾಟಕದ ಪ್ರತಿಯೊಂದು ಪ್ರವೇಶ, ಸನ್ನಿವೇಶ ಮುಖ್ಯ. ಆ ಸನ್ನಿವೇಶಗಳಲ್ಲಿ ಇವರ ಬುದ್ಧಿವಂತಿಕೆ ಪಾತ್ರಗಳೇ ಇವರಿಗೆ ಹೆಚ್ಚು ಹೆಸರನ್ನು ತಂದಿವೆ.

ಸೋಗಿರತ್ನ ಬಳ್ಳಾರಿ ಜಿಲ್ಲೆಯ ರಂಗಭೂಮಿ ಕಲಾಸಕ್ತರೆಲ್ಲರೂ ಅಭಿಮಾನದಿಂದ ಹೇಳುವ ಹೆಸರು. ಚಿಕ್ಕಂದಿನಿಂದಲೇ ರಂಗ ಬದುಕಿಗೆ ಕಾಲಿಟ್ಟ ಇವರು, ಹಲವಾರು ಪ್ರದರ್ಶನದೊಂದಿಗೆ ಹೆಸರುವಾಸಿ ಕಲಾವಿದೆಯಾಗಿದ್ದಾರೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಭರದಲ್ಲಿ ಬಯಲಾಟ-ದೊಡ್ಡಾಟಗಳೇ ಇಂದು ಅಪರೂಪವಾದ ದಿನಮಾನದಲ್ಲಿ ಮಹಿಳೆಯೊಬ್ಬಳು ಬಯಲಾಟದ ತಂಡಕಟ್ಟಿಕೊಂಡು ಸುತ್ತಲಿನ ನೂರಾರು ಗ್ರಾಮಗಳಲ್ಲಿ ಸಂಚರಿಸಿ ಉತ್ತಮ ಕಲಾ ಪ್ರದರ್ಶನಕ್ಕೆ ಸಾರ್ವಜನಿಕರಿಂದ ಪ್ರಶಂಸೆಯನ್ನು ಪಡೆದಿರುವುದು ಸಾಮಾನ್ಯ ಮಾತೇನೂ ಅಲ್ಲ. ಒಬ್ಬ ಮಹಿಳೆ ಬಯಲಾಟದ ತಂಡವನ್ನು ಕಟ್ಟಿ ಬೆಳೆಸಿ ಅದು ಸುತ್ತಮುತ್ತಲಿನ ನಟಿಯರನ್ನು ಒಗ್ಗೂಡಿಸಿ ನಾಟಕ ಪ್ರದರ್ಶನ ಕೊಡುವುದರ ಜೊತೆಗೆ ಸಂಗ್ಯಾ-ಬಾಳ್ಯಾದ ಗಂಗಿ ಪಾತ್ರದಿಂದ ಸೋಗಿರತ್ನ ಪ್ರಸಿದ್ಧಿ ಜೊತೆಗೆ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಪಾತ್ರಗಳಿಗೆ ತನ್ನ ಪ್ರತಿಭೆಯ ಕಲೆಯಿಂದ ಪಾತ್ರಕ್ಕೆ ಜೀವ ಕಳೆಗಟ್ಟುತ್ತಾರೆ. ಹಾಸ್ಯ ಹಾಗೂ ಖಳನಾಯಕ ಪಾತ್ರ ಅಂದರೆ ರತ್ನ-ನ. ನಾಯಕಿ, ಖಳನಾಯಕಿ, ಹಾಸ್ಯ ಹೀಗೆ ಗಂಭೀರ ಹಾಗೂ ಹಾಸ್ಯ ಪಾತ್ರಕ್ಕೆ ರತ್ನಾ ಸೋಗಿ ಹೆಸರುವಾಸಿ.

ಜೊತೆಗೆ ಚನ್ನಪ್ಪ ಚೆನ್ನೇಗೌಡದಂಥ ನವೀನ ಮಾದರಿಯ ನಾಟಕದಲ್ಲಿ ಅಭಿನಯಿಸಿ ಶ್ರೇಷ್ಠನಟಿ ಎಂಬ ಹೆಸರನ್ನು ರತ್ನಾ ಸೋಗಿ ಪಡೆದಿದ್ದಾರೆ.

ಬಳ್ಳಾರಿಯ ವೃತ್ತಿ ರಂಗಭೂಮಿಯ ಹೆಸರುವಾಸಿ ನಟಿ ಎ. ವರಲಕ್ಷ್ಮಿ ಸಾಮಾಜಿಕ, ಪೌರಾಣಿಕ ಹಾಗೂ ಜಾನಪದ ನಾಟಕಗಳಲ್ಲಿ ವೈವಿಧ್ಯದ ಪಾತ್ರಗಳನ್ನು ಮಾಡಿದ್ದಾರೆ. ವರಲಕ್ಷ್ಮಿಯವರ ಅಭಿನಯ ವಿಶಿಷ್ಟವಾದದ್ದು. ಕುರುಗೋಡು ಹಾಗೂ ಬಳ್ಳಾರಿಯ ಸುತ್ತಮುತ್ತ ಪ್ರತಿಯೊಂದು ಹಳ್ಳಿಗೂ ಹೋಗಿ ಪಾತ್ರ, ಅಭಿನಯ ಮಾಡಿದ್ದಾರೆ. ವರಲಕ್ಷ್ಮಿ ಒಂದು ಪಾತ್ರಕ್ಕೆ ಸೀಮಿತವಾಗದೇ ವಿವಿಧ ಪಾತ್ರಗಳಲ್ಲಿ ಮಿಂಚಿದ್ದಾರೆ. ಎಲ್ಲ ರೀತಿಯ ಪಾತ್ರಗಳ ಸಾಮರ್ಥ್ಯಕ್ಕೆ ಹೆಸರುವಾಸಿ ಯಾಗಿದ್ದಾರೆ.

ಕೂಡ್ಲಿಗಿಯ ಬಿ. ಶಿವಕುಮಾರಿ ಬಳ್ಳಾರಿ ಜಿಲ್ಲೆಯ ಇತ್ತೀಚಿನ ಪ್ರಬುದ್ಧ ನಟಿ ಎನಿಸಿದ್ದಾರೆ. ಕೆಟ್ಟಮೇಲೆ ಬುದ್ಧಿ ಬಂತು ನಾಟಕದ "ಸುನೀತ" ಹುಚ್ಚಿಯ ಪಾತ್ರಕ್ಕೆ ಹೆಸರುವಾಸಿ ನಟಿ. ಹೆಚ್ಚಾಗಿ ಸಾಮಾಜಿಕ ನಾಟಕ ಗಳಲ್ಲಿಯೇ ಹೆಚ್ಚು ಪಾತ್ರ ಮಾಡುವ ಶಿವಕುಮಾರಿ ಸಾಧ್ವಿ ಪಾತ್ರಕ್ಕೆ ಹೆಚ್ಚು ಹೆಸರುವಾಸಿ. ಈ ಪಾತ್ರ ಬಳ್ಳಾರಿ ಜಿಲ್ಲೆಯಲ್ಲಿ ಪ್ರಖ್ಯಾತಿ. ಈ ನಾಟಕವನ್ನು ನೋಡಿದ ಪ್ರೇಕ್ಷಕರಿಗೆ ನಿಜವಾದ ಹುಚ್ಚಿಯೇ ಅನಿಸಬೇಕು ಹಾಗೆ ಪಾತ್ರವನ್ನು ನಿರ್ವಹಿಸುತ್ತಾರೆ.

ರಂಗನಟಿಯರು ನಾಟಕದ ಪಾತ್ರಗಳಿಗೆ ಅದು ಕೆಲವಕ್ಕೆ ಸೀಮಿತವಾದವರು. ಹಾಗೂ ಕೆಲವರು ವೈವಿಧ್ಯತೆಯಿಂದ ಕೂಡಿರುವ ಪಾತ್ರಗಳನ್ನು ನಿರ್ವಹಿಸುತ್ತಾರೆ. ಪೌರಾಣಿಕ ನಾಟಕಗಳು, ಸಾಮಾಜಿಕ, ಜಾನಪದ ವಿಶಿಷ್ಟ ಪಾತ್ರಗಳನ್ನು ಹಲವಾರು ನಾಟಕಗಳ ಪ್ರಕಾರಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೇ ಹೆಸರುವಾಸಿ ಯಾಗಿದ್ದಾರೆ. ರಂಗಭೂಮಿಯ ಹೊಸ, ಹೊಸ ಪ್ರಯೋಗಗಳು ನಡೆಯುತ್ತಿದ್ದು, ನಟಿಯರು ಜೀವನದ ಪಾತ್ರದೊಂದಿಗೆ ನಾಟಕದ ಆಯಾ ಪಾತ್ರಗಳನ್ನು ನಿರ್ವಹಿಸುವುದರಲ್ಲಿ ಸಂಪೂರ್ಣವಾಗಿ ಲೀನವಾಗುತ್ತಾರೆ. ನಟಿಯು ಪಾತ್ರದ ಗುಣಾವಗುಣಗಳನ್ನು ಆ ಕ್ಷಣದಲ್ಲಿಯೇ ಸೃಷ್ಟಿ ಮಾಡಿಕೊಂಡು, ಆಶು ಕವಿಯಾಗಿ 'spot' ಮಾತುಗಳನ್ನು ಆಡುತ್ತಾರೆ. ಆ ಕ್ಷಣದಲ್ಲಿ ಏನು, ಯಾವ ಪಾತ್ರ, ಆ ಪಾತ್ರದ ಮಾತು, ರೀತಿ, ನೀತಿ, ನಡಾವಳಿ ಹೀಗೆ ಆಯಾ ಸಂದರ್ಭದಲ್ಲಿಯೇ ಸೃಷ್ಟಿಮಾಡಿಕೊಂಡು ಅದನ್ನು ಪ್ರಯೋಗಿಸುವ ಬುದ್ಧಿವಂತಿಕೆ ಯನ್ನು ರೂಢಿಸಿಕೊಂಡಿದ್ದಾರೆ. ಇದು ಸಾಮಾನ್ಯ ಜನರಿಗೆ ಬರುವುದಿಲ್ಲ. ಆದ್ದರಿಂದ ಎಲ್ಲ ರಂಗನಟಿಯರು ಇಂಥಹ ಪಾತ್ರಗಳನ್ನು ನಿರ್ವಹಿಸಲು ಸಾಧ್ಯವಿಲ್ಲವೆನ್ನಬಹುದು.

ಯಾವ ಯಾವ ನಟಿಯು ಯಾವ ರೀತಿಯ ಅಭಿನಯ ಗುಣಗಳಿರಬೇಕೆಂಬುದನ್ನು ಇಲ್ಲಿ ನೋಡೋಣ.

ಗಂಭೀರ ನಟಿಯ ಗುಣಗಳು

೦೧. ಮುಖದ ಭಾವದಲ್ಲಿ ಗಂಭೀರತೆ ತೋರಿಸಬೇಕು.

೦೨. ಯಾವ ಮಾತನಾಡಬೇಕು? ಎಷ್ಟು ಮಾತನಾಡಬೇಕು, ಮಾತಿನ ಏರಿಳಿತಗಳು ಯಾವ ರೀತಿಯಲ್ಲಿ ಯಾವ ಪ್ರಮಾಣದಲ್ಲಿ ಇರಬೇಕು.

೦೩. ಅಳುವಾಗ ಹೇಗೆ ಮುಖಭಾವವಿರಬೇಕು? ದುಃಖದಲ್ಲಿ ಹೇಗೆ ತಲ್ಲೀನರಾಗಬೇಕು.

೦೪. ಮಾತಿನ ರೀತಿ ಸ್ಪಷ್ಟವಾಗಿರಬೇಕು. ಮಾತುಗಳನ್ನು ನುಂಗಬಾರದು, ತೊದಲು ನುಡಿಯಬಾರದು, ಭಾಷೆಯಲ್ಲಿ ಸಂಪೂರ್ಣ ಹಿಡಿತವಿರಬೇಕು.

೦೫. ಸಂಗೀತದಲ್ಲಿ ನಟಿಗೆ ಜ್ಞಾನವಿದ್ದು, ಸಮಯಕ್ಕೆ ತಕ್ಕಂತೆ ಹಾಡುಗಾರಿಕೆ ಇರಬೇಕು.

೦೬. Body language ಬಗ್ಗೆ ಸಂಪೂರ್ಣ ಮಾಹಿತಿ ಇರಬೇಕು.

೦೭. ಕಣ್ಣುಗಳಲ್ಲಿಯೇ ಭಾವನೆಗಳನ್ನು ವ್ಯಕ್ತಪಡಿಸುವಂತಿರಬೇಕು.

೦೮. ನಮ್ಮ ಚಲನವಲನ, ಗಾಂಭೀರ್ಯ, ನಡುಗೆ, ಕೈಯ ಕಾಲಿನ ಹಾವ ಭಾವ.

೦೯. ಎಲ್ಲಿ ನಿಲ್ಲಬೇಕು, ಹೇಗೆ ನಿಲ್ಲಬೇಕು, ಮೈಕಿನ ಹತ್ತಿರ ಹಿಂದೆ, ಮುಂದೆ ಯಾವಾಗ ಹತ್ತಿರ ಹೋಗಬೇಕು.

೧೦. ಸಹ ನಟರೊಂದಿಗೆ ಹೇಗೆ ವರ್ತಿಸಬೇಕು. ಹೇಗೆ ಡ್ಯಾನ್ಸ್ ಮಾಡಬೇಕು. ಯಾವ ಯಾವ ವಿಧಾನಗಳಲ್ಲಿ ಮಾಡಬೇಕು.

೧೧. ನಟಿಗೆ ಮೂಲತಃವಾಗಿ ಸಮಯ ಪ್ರಜ್ಞೆ ಇರಬೇಕು.

೧೨. ನಟಿಯ ದೇಹ ಸೌಂದರ್ಯಕ್ಕಿಂತ ವೇಷಭೂಷಣ ಹಾಗೂ ನಟನಾ ಕೌಶಲ ಆಕರ್ಷಕವಾಗಿದ್ದರೆ ಅಲ್ಲಿ ನಟನೆಯು ಪರಿಪೂರ್ಣತೆಯನ್ನು ಪಡೆಯಲು ಸಾಧ್ಯವಾಗುತ್ತದೆ.

ಖಳನಾಯಕಿಯ ಗುಣಗಳು

೦೧. ಖಳನಾಯಕಿಯ ಧ್ವನಿ ಗಡುಸಾಗಿರಬೇಕು.

೦೨. ನಡುಗೆಯಲ್ಲಿ ದಾಷ್ಟ್ಯವನ್ನು ತೋರಿಸುವಂತಿರಬೇಕು.

೦೩. ವೇದಿಕೆಯಲ್ಲಿ ಗರ್ವಸೊಕ್ಕುಗಳಿಂದ ಮೆರೆಯಬೇಕು.

೦೪. ಹಗಲೆಲ್ಲಾ ಜೋರಾಗಿ ವ್ಯಂಗ್ಯವಾಗಿ ಕುಹಕನಗೆ ಬೀರುತ್ತಿರಬೇಕು.

೦೫. ಬಿದ್ದರೂ ಮೀಸೆಮಣ್ಣಾಗಿಲ್ಲ ಎನ್ನುವ ಮನೋಭಾವ ಪ್ರತಿಹಂತದಲ್ಲಿರಬೇಕು.

೦೬. ದಶದಿಕ್ಕುಗಳು ನನ್ನನ್ನೇ ನೋಡುತ್ತಿವೆ ಎಂಬಂತಿರಬೇಕು.

೦೭. ಖಳನಾಯಕಿ ಪಾತ್ರ ಪ್ರೇಕ್ಷಕರನ್ನು ನಿದ್ರೆಯಿಂದ ಬಡಿದೆಬ್ಬಿಸಿ ಮನದಲ್ಲಿ ಹೆದರಿಕೆಯನ್ನು ಮೂಡಿಸುವಂತಿರಬೇಕು.

೦೮. ಇಡೀ ವ್ಯಕ್ತಿತ್ವವೇ ಕುತಂತ್ರದಿಂದ ಕೂಡಿರಬೇಕು.

೦೯. ಮುಖದಭಾವ, ಕಣ್ಣುಗಳ ಬೀರುನೋಟ ಪ್ರಪಂಚವೇ ನನ್ನ ನೋಡಿದರೆ ಹೆದರುವಂತಿದೆ ಎಂಬ ವ್ಯಕ್ತಿತ್ವ ಮನದಲ್ಲಿ ಮೂಡಿಸಿಕೊಳ್ಳಬೇಕು.

೧೦. ರಾಕ್ಷಸೀ ಗುಣ ಪ್ರತಿನಿಧಿಸುವಂತಿರಬೇಕು.

೧೧. ಮಾತಿನ ಮಧ್ಯ ವ್ಯಂಗ್ಯವಾಗಿ ನಗುತ್ತಾ ಪ್ರಪಂಚವೇ ನನ್ನ ಕಾಲಡಿಗಿದೆ ಎಂಬಂತಿರಬೇಕು.

೧೨. ಯಾವಾಗ ಹೆಚ್ಚು ಮಾತನಾಡಬೇಕು? ಯಾವಾಗ ಕೆಳಸ್ವರದಲ್ಲಿ ಮಾತಾಡಬೇಕು? ಹೀಗೆ ಸಮಯಕ್ಕೆ ತಕ್ಕಂತೆ ನಟಿಯು ತನ್ನ ಚಾಕಚಕ್ಯತೆಯನ್ನು ನಟನಾಸಾಮರ್ಥ್ಯದಲ್ಲಿ ಪ್ರತಿಬಿಂಬಿಸುವಂತಿರಬೇಕು.

ಹಾಸ್ಯ ನಟಿಯ ಗುಣಗಳು

೦೧. ರಂಗವೇದಿಕೆಯಲ್ಲಿ ಹಾಸ್ಯನಟಿ ಜಿಂಕೆ ಮರಿಯಂತೆ ಜಂಗನೆ ಜಿಗಿದು, ಕುಣಿದು ಕುಪ್ಪಳಿಸಬೇಕು.

೦೨. ತೆಳ್ಳಗೆ ಬೆಳ್ಳಗೆ ತಳುಕು ಬಳುಕುವಂತಿರಬೇಕು.

೦೩. ವೇಷಭೂಷಣ ಫ್ಯಾಶನ್ ಇದ್ದು, ನಟಿ ಆಕರ್ಷಕವಾಗಿರಬೇಕು.

೦೪. ಧ್ವನಿ ಚನ್ನಾಗಿದ್ದು, ನಟಿಗೆ ಹಾಡುಗೊತ್ತಿರಬೇಕು.

೦೫. ನಾಟ್ಯದಲ್ಲಿ ಹಾಸ್ಯನಟಿ ಹೆಚ್ಚು ಪರಿಣತಿ ಹೊಂದಿರಬೇಕು.

೦೬. ಈಕೆಯ ಮಾತುಗಳು ಸಹನಟನಿಗೆ ಪಾತ್ರಕ್ಕೆ ಪ್ರೇರಕವಾಗಿರಬೇಕು.

೦೭. ಪ್ರೇಕ್ಷಕರ ಮನಸೂರೆಗೊಂಡು ಹಾಸ್ಯನಟಿ ರಂಗಕ್ಕೆ ಬಂದಳು ಎಂದಾಕ್ಷಣ ಎಲ್ಲರೂ ಬಾಯಿತೆರೆದುಕೊಂಡಿರುವವರು ಮುಚ್ಚಿರಲೇಬಾರದು ಹಗಲೆಲ್ಲಾ ಅವರು ಜೋರಾಗಿ ಬಿದ್ದು ಬಿದ್ದು ನಗುತ್ತಿರಬೇಕು.

೦೮. ಹಲವಾರು ನೋವುಗಳನ್ನು ಮರೆಸಿ ಪ್ರೇಕ್ಷಕರು ನಗೆಗಡಲ್ಲಲ್ಲಿ ತೇಲುವಂತೆ ಮಾಡುವ ಗುಣವನ್ನು, ಹಾಸ್ಯ ನಟಿ ಬೆಳೆಸಿಕೊಂಡು ಬರುವಂತಿರಬೇಕು.

ನಾಟಕಗಳಲ್ಲಿ ನಟಿಯರು ಪಾತ್ರದ ದೃಷ್ಟಿಯಿಂದ ನಟನೆಯ ಛಾಪು, ಆ ವ್ಯಕ್ತಿತ್ವ, ಧೀಮಂತಿಕೆ ಹೀಗೆ ಎಲ್ಲಾ ಅಭಿನಯ ಚಾತುರ್ಯವನ್ನು ಪ್ರತಿಬಿಂಬಿಸುತ್ತಾರೆ. ಹೊಸ ರೀತಿಯ ಚಿಂತನಾಶೀಲ ಪಾತ್ರಗಳನ್ನು ಅಷ್ಟೇ ಹಳೆಯದಾದ ಪೌರಾಣಿಕ, ಐತಿಹಾಸಿಕ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಶ್ರೇಷ್ಠ ನಟಿಯರು ಬಳ್ಳಾರಿ ಜಿಲ್ಲೆಯಲ್ಲಿದ್ದಾರೆ.

ನಟಿಯರು ತಾವು ತಾವಾಗಲೇ ಇನ್ನೊಬ್ಬರಾಗುವುದು ಆ ಪಾತ್ರವನ್ನು ಕಲ್ಪನೆಯಲ್ಲಿ ಮೂಡಿಸಿಕೊಂಡು ಆ ಕ್ಷಣದಲ್ಲಿಯೇ ಸೃಷ್ಟಿ ಮಾಡಿಕೊಂಡು ಪಾತ್ರವನ್ನು ನಿರ್ವಹಿಸುವುದು ಜನ ಸಾಮಾನ್ಯರಿಗೆ ಅದು ಲಭಿಸುವುದೇ ಇಲ್ಲ. ಅದಕ್ಕೆ ಅವರದೇ ಆದ ಬುದ್ಧಿವಂತಿಕೆ, ಚಾಕಚಕ್ಯತೆ, ನಟನಾ ತಂತ್ರ, ಅಭಿನಯ ಸಾಮರ್ಥ್ಯ ಇವೆಲ್ಲವೂ ಆ ನಟಿಗೆ ಬಂದಿರಬೇಕು. ನಾಟಕದ ಪಾತ್ರಗಳು ಬರೀ ಹಾಗೇ ಹೀಗೆ ಇರಬೇಕು ಎಂದು ನಿರ್ದೇಶನವನ್ನು ಮಾಡಬಹುದು ಆದರೆ ಅದನ್ನು ವೇದಿಕೆಯ ಮೇಲೆ ಪ್ರೇಕ್ಷಕರ ಎದುರಿಗೆ ಧೈರ್ಯದಿಂದ ಸಾವಿರಾರು ಕಣ್ಣುಗಳನ್ನು ಎದುರಿಸಬೇಕೆಂದರೆ ಅದು ಸಾಮಾನ್ಯರಿಗೆ ಸಾಧ್ಯವೇ ಇಲ್ಲ.

ನಾಟಕದ ಪಾತ್ರಗಳಲ್ಲಿ ಮಾತನಾಡುವ ರೀತಿ ನೀತಿ ಹಾಗೂ ಸ್ವಲ್ಪ ಮಾತು ತಪ್ಪಿದರೂ ಅಲ್ಲಿ ಅಸಹ್ಯವಾಗುವುದು ನಟಿಯರಿಗೆ. ಆದ್ದರಿಂದ ನಟಿಯರು ಎಲ್ಲ ರೀತಿಯಿಂದ ಮೈಯೆಲ್ಲಾ ಕಣ್ಣಾಗಿ ಇರಬೇಕು. ಪ್ರತಿಯೊಬ್ಬ ನಟಿಯ ಗುಣಾವಗುಣಗಳನ್ನು ಎಲ್ಲರೂ ಲೆಕ್ಕಹಾಕುತ್ತಾರೆ. ಜೊತೆಗೆ ಅವರ ನಟನಾ ಸಾಮಥ್ಯ ಪಾತ್ರದ ದೃಷ್ಟಿಯಿಂದ, ಪ್ರೇಕ್ಷಕರ ದೃಷ್ಟಿಯಿಂದ ಎಲ್ಲ ಮೌಲ್ಯವಾಗಿಬಿಡುತ್ತವೆ. ನಾವು ಸಮಾಜದೊಂದಿಗೆ ಇದ್ದು, ನಿರಂತರವಾಗಿ, ನಮ್ಮ ಕರ್ತವ್ಯವನ್ನು ಮಾಡುತ್ತಾ ಇದ್ದರೆ, ಅದನ್ನು ಸಮಾಜ ಇನ್ನೊಂದು ರೀತಿಯಲ್ಲಿ ಗಣಿಸುತ್ತಲೇ ಇರುತ್ತದೆ. ಈ ಸಮಾಜದಲ್ಲಿ ಯಾವುದೂ ಗೌಣವಲ್ಲ. ಅದು ಒಂದಲ್ಲ ಒಂದು ರೀತಿಯಿಂದ ಗಣನೆಗೆ ಬಂದೇ ಬರುತ್ತದೆ. ಹಾಗೆ ರಂಗನಟಿಯರು ರಂಗ ಚರಿತ್ರೆಯಲ್ಲಿ ಅಲ್ಲದೆ ಇತಿಹಾಸದಲ್ಲಿ ಇವರು ಗಣನೆಗೆ ಬಂದವರು. ಜೊತೆಗೆ ಅವರು ತಮ್ಮದೇ ಆದ ಸ್ಥಿರಸ್ಥಾಯಿಯಾದ ಸ್ಥಾನವನ್ನು ಪಡೆದಿದ್ದಾರೆ. ರಂಗ ಬದುಕಲ್ಲಿ ಇವರ ಪಾತ್ರಗಳು ಮೂರು ರೀತಿಯಲ್ಲಿ ನಿರ್ವಹಿಸಬೇಕಾಗುತ್ತದೆ.

೧. ಜೀವನ ಬದುಕು

೨. ರಂಗ ವೇದಿಕೆಯ ಬದುಕು

೩. ರಂಗ ನಟಿಯ ಬದುಕು

ಈ ಎಲ್ಲಾ ಬದುಕಲ್ಲಿಯ ಪಾತ್ರದ ಜೊತೆಗೆ ಎಲ್ಲ ನಟಿಯರು ತಮ್ಮ ಯೋಗ್ಯತೆಗೆ ತಕ್ಕಂತೆ ಪಾತ್ರಕ್ಕೆ ಜೀವಂತಿಕೆ ಯನ್ನು ಕೊಟ್ಟು ಯಶಸ್ವೀ ನಟಿಯರೆನಿಸಿದ್ದಾರೆ.

೨. ನಟಿಯರಿಗೆ ಆಮಂತ್ರಣ (ಬುಕ್ ಮಾಡೋದು) : ಗ್ರಾಮೀಣ ರಂಗಭೂಮಿಯ ಕಲಾವಿದರು ರಂಗ ನಟಿಯರಿಗೆ 'ಆಮಂತ್ರಣ', 'ವೀಳ್ಯೆ' ಕೊಡಲು ಹೋಗುತ್ತಾರೆ. ಇದನ್ನು ಬುಕ್ ಮಾಡೋದು ಎಂದೂ

ಕರೆಯುತ್ತಾರೆ. ಗ್ರಾಮೀಣ ರಂಗಭೂಮಿಯ ಕಲಾವಿದರು ಹಬ್ಬ, ಜಾತ್ರೆ, ಹುಣ್ಣಿಮೆಗಳಲ್ಲಿ ನಾಟಕಗಳನ್ನು ಆಡುತ್ತಾರೆ. ಈ ನಾಟಕದ ಸ್ತ್ರೀ ಪಾತ್ರಕ್ಕೆ ನಟಿಯರನ್ನು ಬುಕ್ ಮಾಡಲು ಹೋಗುತ್ತಾರೆ. ಅವರಿಗೆ ಎಲೆ, ಅಡಿಕೆ, ವೀಳ್ಯೆಯನ್ನು ಕೊಟ್ಟು, ಮುಂಗಡ ಹಣವನ್ನು ನೀಡಿ, ದಿನಾಂಕವನ್ನು ನಿಗಧಿ ಮಾಡಿಕೊಂಡು ಬರುತ್ತಾರೆ. ನಟಿಯರು ಆ ದಿನಗಳಲ್ಲಿ ಏನೇ ಕಷ್ಟದ ಸಂದರ್ಭಗಳು ಬಂದರೂ ಅವರು ತಪ್ಪಿಸದೇ ವೃತ್ತಿಗೆ ದ್ರೋಹ ಬಗೆಯದೇ ನಿಷ್ಠೆಯಿಂದ ತಮ್ಮ ಕಾಯಕವನ್ನು ನಟಿಯರು ಮಾಡುತ್ತಾರೆ. ಕರ್ತವ್ಯದ ಕರೆ ಮೊದಲು, ನಂತರ ಸೆಂಟಿಮೆಂಟ್ಸ್ ಎಲ್ಲ. ವೃತ್ತಿಧರ್ಮಕ್ಕೆ ಮೋಸಮಾಡಿ ಕೊಳ್ಳುವವರು ಎಂದೂ ಉದ್ಧಾರವಾಗುವುದಿಲ್ಲ. ಆದ್ದರಿಂದ ಜೀವನ ಅರಿವು ಬಾಳಿನಹರವನ್ನು ವಿವೇಚಿಸುವ ವ್ಯಕ್ತಿಗಳು ಎಂದೂ ದುಡುಕುವುದಿಲ್ಲ. ಒಂದು ವೇಳೆ ದುಡಿಕಿದರೂ ನಂತರದಲ್ಲಿ ಎಚ್ಚರಗೊಳ್ಳುತ್ತಾರೆ. ಕಾಣದೇ ಕಲ್ಲು ಎಡವಬಹುದು. ಇನ್ನು ಕಂಡೂ ಕಂಡು ಕಲ್ಲೆಡವುದು ಸಾಧ್ಯವಿಲ್ಲದ ಮಾತು. ಅರಿವು ಬಂದಾಗಲೇ ಎಲ್ಲರೂ ಸಿದ್ಧಿಯನ್ನು ಪಡೆದೇ ತೀರುತ್ತಾರೆ. ಆದ್ದರಿಂದ ವೃತ್ತಿ ಎಂದು ಗೌರವಿಸುವ ನಟಿಯರು ಹವ್ಯಾಸಿ ಕಲಾವಿದರ ಆಮಂತ್ರಣ ಸ್ವೀಕರಿಸಿ, ಅವರು ಹೇಳಿದ ಸಮಯಕ್ಕೆ ಸರಿಯಾಗಿ ಆ ಹಳ್ಳಿಗಳಿಗೆ ಹೋಗುತ್ತಾರೆ.

ನಾಯಕಿ, ಖಳನಾಯಕಿ, ಹಾಸ್ಯನಟಿಯರಿಗೆ ಬೇರೆ ಬೇರೆ ರೀತಿಯ ಸಂಭಾವನೆ ಇರುತ್ತದೆ. ಆ ಪ್ರಕಾರವಾಗಿ ಅವರು ಮುಂಗಡ ಹಣ ನೀಡಿ, ನಟಿಯರನ್ನು ಬುಕ್ ಮಾಡಿ ಬರುತ್ತಾರೆ. ನಾಟಕ ನಾಳೆ ಇದೆ ಎಂದಾಗ, ಒಂದು ದಿನ ಮುಂಚಿತವಾಗಿ ಆ ಊರಿಗೆ ಹೋಗಿ ಸಹಕಲಾವಿದರೊಂದಿಗೆ ಸಂಭಾಷಣೆಯನ್ನು Practice ಮಾಡುತ್ತಾರೆ. ಹವ್ಯಾಸಿಕಲಾವಿದರಿಗೆ, ಮಾತು, ನಟನೆ, ಹಾವ ಭಾವ ಯಾವ ಯಾವ ಸಂದರ್ಭದಲ್ಲಿ ಅವರು ಹೇಗೆ ನಡೆದುಕೊಳ್ಳಬೇಕು, ಮಾತಿನ ಏರಿಳಿತ, ನಗುವುದು, ಅಳುವುದು, ಸಂತಾಪ ವ್ಯಕ್ತ ಪಡಿಸುವುದು ಹೀಗೆ ಹಲವು ಸಂದರ್ಭಗಳಲ್ಲಿ ತಮ್ಮನ್ನು ತಾವೇ ತಿದ್ದಿಕೊಂಡು ನಂತರ ಹವ್ಯಾಸಿ ಕಲಾವಿದರಿಗೆ 'ರಂಗ ನಟಿಯರು' ಮಾರ್ಗದರ್ಶನ ಮಾಡುತ್ತಾರೆ. ಸಹಜವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಬೇರೆಡೆಗೆ ಎಷ್ಟು ಹಣ ಮುಂಗಡ ಕೊಡುತ್ತಾರೆ ಅದೇ ಪ್ರಕಾರವೇ ರಂಗನಟಿಯರಿಗೆ ಹಣವನ್ನು ಕೊಟ್ಟು ಅಂದರೆ ಒಂದು ತಿಂಗಳು ಮುಂಚಿತವಾಗಿಯೇ ಹವ್ಯಾಸಿ ಕಲಾವಿದರು ನಟಿಯರಲ್ಲಿಗೆ ಹೋಗಿ, ಅವರ ಫೋಟೋ ಹಾಗೂ ಅವರ ರಂಗದ ಹೆಸರನ್ನು ಬರೆದುಕೊಂಡು ಬಂದು hand billನಲ್ಲಿ ಅವರ ಫೋಟೋ ಹಾಗೂ ಹೆಸರು, ಊರನ್ನು ಅಚ್ಚು ಹಾಕಿಸುತ್ತಾರೆ. ನಾಟಕದ ಅಹ್ವಾನ ಪತ್ರಿಕೆಯಲ್ಲಿ ನಾಟಕದ ಹೆಸರು, ನಾಟಕ ರಚನಾಕಾರರು, ಕಲಾವಿದರ ಸಂಘದ ಹೆಸರು, ಊರು, ಪಾತ್ರಧಾರಿಗಳು, ಸ್ತ್ರೀ ಪಾತ್ರಧಾರಿಗಳು, ಹಾರ್ಮೋನಿಯಂ ಮಾಸ್ತರ, ರಂಗ ಸಜ್ಜಿಕೆ, ಮ್ಯಾನೇಜರ್ ಹೆಸರು, ಟಿಕೇಟಿನ ದರ, ತಬಲ, ಕ್ಯಾಸಿಯೋ ವ್ಯವಸ್ಥಾಪಕರು, ವಿಶೇಷ ಸೂಚನೆ- "once more" ಎಂದಲ್ಲಿ ಹಾಡುವುದು, ಕುಣಿಯುವುದು ಕಲಾವಿದರಿಗೆ ಬಿಟ್ಟಿದ್ದು. ಎಲ್ಲವೂ ಕಂಪನಿಯ ರೂಲ್ಸ್‌ಗೆ ಒಳಪಟ್ಟಿರುತ್ತದೆ ಎಂದು ಹಾಕಿರುತ್ತಾರೆ.

೩. ರಂಗ ತಾಲೀಮು : ರಂಗಭೂಮಿಯ ಅಭಿನಯಕ್ಕಿಂತ ಮುಂಚಿತವಾಗಿ ಹವ್ಯಾಸಿಕಲಾವಿದರು ಹಿಂದೆ ಒಂದು ತಿಂಗಳು ಈಗೀಗ ೧೫ ದಿನ ಅಥವಾ ಕನಿಷ್ಠ ಏಂಟುದಿನವಾದರೂ ತಾಲೀಮು ನಡೆಸುತ್ತಾರೆ. ಹೊಲ ಗದ್ದೆಗಳಲ್ಲಿ ಹಗಲಿರಳೂ ಕೂಲಿ ಮಾಡಿ, ಇಲ್ಲ ವ್ಯಾಪಾರ ಮಾಡಿ ರಾತ್ರಿ ಊಟವಾದ ಮೇಲೆ ಹವ್ಯಾಸಿ ಕಲಾವಿದರೆಲ್ಲರೂ ಒಂದೆಡೆ ''ತಾಲೀಮು ಮನೆ''ಯಲ್ಲಿ ಸೇರುತ್ತಾರೆ. ರಾತ್ರಿ ಎರಡು ಮೂರು ತಾಸುಗಟ್ಟಲೇ ಮಾತು ಗಳನ್ನು ಕಲಿಯುತ್ತಾರೆ. ನಟಿಯರು ಅದೇ ನಾಟಕ ಪ್ರತಿವರ್ಷ ಆಡುವಾಗ ಒಂದು ಸಲ ಕಲಿತವರಿಗೆ ಪ್ರತಿವರ್ಷ ಕಲಾವಿದೆಯರಿಗೆ Practice ಬೇಕಾಗುವುದಿಲ್ಲ.

ಅಲ್ಲಿಯ ಅಥವಾ ಆ ಭಾಗದ ಸಂಗೀತ ಮಾಸ್ತರರ ನಿರ್ದೇಶನದಲ್ಲಿ ಹವ್ಯಾಸಿ ಕಲಾವಿದರು ನಾಟಕವನ್ನು ಕಟ್ಟುತ್ತಾರೆ. ಈ ನಾಟಕಕ್ಕೆ ಹವ್ಯಾಸಿ ಕಲಾವಿದರು ಊರಿನ ಹಿರಿಯರು, ರಾಜಕಾರಣಿಗಳ ಸಹಾಯ ಪಡೆದು ಅವರ ನೇತೃತ್ವದಲ್ಲಿಯೇ ನಾಟಕದ ಪ್ರಯೋಗ ನಡೆಯುತ್ತದೆ. ಹಿಂದೆ ಹೆಚ್ಚಾಗಿ 'ಬಯಲಾಟ'ಗಳಿಗೆ 'ಗೆಜ್ಜೆ ಪೂಜೆ' ನಾಟಕ ಎಂದು ಕರೆಯುತ್ತಿದ್ದರು. ಈ ಗೆಜ್ಜೆ ಪೂಜೆ ನಾಟಕಗಳೆಂದರೆ ನಟಿಯರು ಮೂರು ದಿನ ಮುಂಚಿತವಾಗಿ ನಾಟಕವಿರುವ ಊರುಗಳಿಗೆ ಹೋಗಿ ಅಲ್ಲಿಯೇ ಇದ್ದು ''ರಂಗ ತಾಲೀಮು'' ನಡೆಸಿ ನಾಲ್ಕನೇ ದಿನದಲ್ಲಿ ನಾಟಕ ಮುಗಿಸಿಕೊಂಡು ಬರುತ್ತಾರೆ. ಬುಕ್ ಮಾಡುವಾಗಲೇ ನಟಿಯರಿಗೆ ನಾಟಕದ ಪುಸ್ತಕ ಕೊಟ್ಟಿರುತ್ತಾರೆ. ಈ ನಟಿಯರಿಗೆ ಉಳಿದುಕೊಳ್ಳಲು ಒಂದು ಮನೆ, ಊಟ, ವಸತಿ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟಿರುತ್ತಾರೆ. ಎಲ್ಲಾ ವ್ಯವಸ್ಥೆ ಸರಿಯಾಗಿ ಮಾಡಿ ಗೌರವದಿಂದಲೇ ಅವರನ್ನು ಊರಿಗೆ ಮರಳಿ ಕಳಿಸುತ್ತಾರೆ. ಗ್ರಾಮೀಣ ಕಲಾವಿದರ ಅತಿಯಾದ ಆತ್ಮೀಯತೆ ಮಾನವೀಯ ಗುಣಗಳಿಂದಲೇ ಹವ್ಯಾಸಿ ಕಲಾವಿದರು ಹೆಸರುವಾಸಿಯಾಗಿದ್ದಾರೆ. ಆದ್ದರಿಂದಲೇ ಪ್ರತೀವರ್ಷ ಯಾವ ಅಡೆತಡೆ ಇಲ್ಲದೆ ಇಂದಿಗೂ ಗ್ರಾಮೀಣ ರಂಗಭೂಮಿ ಜೀವಂತಿಕೆಯನ್ನು ಪಡೆದಿದೆ ಎಂದು ನಟಿಯರು ಹಾಗೂ ಹಲವು ರಂಗತಜ್ಞರು, ಕಲಾಭಿಮಾನಿ ಗಳು ಅಭಿಮಾನದಿಂದಲೇ ಈ ಮಾತನ್ನು ವ್ಯಕ್ತಪಡಿಸುತ್ತಾರೆ.

ಈ ರಂಗತಾಲೀಮಿನಲ್ಲಿ ಸಂಗೀತ ಮಾಸ್ತರ ಹಾಗೂ ಸಹಕಲಾವಿದರ ಮಾರ್ಗದರ್ಶನದಿಂದಲೇ ನಾಟಕವು ನಡೆಯುತ್ತಿರುತ್ತದೆ. ಈಗೀಗ 'ಹಿನ್ನೆಲೆ ಗಾಯನ' ಬಂದಿರುವುದರಿಂದ ಜೊತೆಗೆ ಎಲ್ಲವೂ ಯಾಂತ್ರಿಕಮಯವಾಗಿ ರುವುದರಿಂದ, ಗೆಜ್ಜೆ ಪೂಜೆ ನಾಟಕಗಳು ಕಡಿಮೆಯಾಗಿವೆ. ಈಗಿನದೆಲ್ಲಾ ದಿಢೀರ್ ನಿರ್ಧಾರ ಹಾಗೆ ದಿಢೀರ್ ನಾಟಕಗಳೇ ಹೆಚ್ಚಾಗಿವೆ. ಆದ್ದರಿಂದ ಯಾವುದೇ Practice ಇಲ್ಲದೆ ಎಲ್ಲವನ್ನು ತಪ್ಪಾಗಲಿ, ಒಪ್ಪಾಗಲಿ ವೇದಿಕೆಯ ಮೇಲೆಯೇ ಮಾಡಿ ನಟನೆಯನ್ನು ಅಭಿವ್ಯಕ್ತಪಡಿಸುತ್ತಾರೆ. ಈಗಿನ ಕಲಾವಿದರು ನಾವು ಯಾರಿಗೇನು ಕಡಿಮೆ? ಅವರಿಗಿಂತ ನಾವು ಇವರಿಗಿಂತ ನಾವು ಎಂದು ಮುನ್ನುಗ್ಗುವ ಕಲಾವಿದರೇ ಇರುವಾಗ ಎಲ್ಲವೂ ದಿಢೀರನೇ ನಡೆದು ಹೋಗಿಬಿಡುತ್ತವೆ. ಹಾಗೆಯೇ ಇಂದಿನ ರಂಗಭೂಮಿಯು ಕೂಡ, ದಿಢೀರ್ ಪ್ರಯೋಗವಾಗಿ ಬಿಡುತ್ತವೆ.

೪. **ವೇಷಭೂಷಣ :** ಹವ್ಯಾಸಿ ಕಲಾವಿದರ ಮನೆಯವರು ತಮ್ಮ ಪಿತಾಂಬರ ಸೀರೆಗಳನ್ನು ನಟಿಯರಿಗೆ, ತಮ್ಮ ಗಂಡರಿಗೆ ಕೊಡುತ್ತಾರೆ. ಅವುಗಳನ್ನೇ ನಟಿಯರು (ಇಷ್ಟವಿದ್ದರೆ) ಉಟ್ಟುಕೊಂಡು ಇಲ್ಲವೆ ಕೆಲವು ಸ್ತ್ರೀ ಪಾತ್ರಧಾರಿ ಪುರುಷರಿಗೆ ಉಡಿಸಿ, ತಮ್ಮ ಮೇಕಪ್ಪನ್ನು ತಾವೇ ಮಾಡಿಕೊಂಡು ಇಲ್ಲದಿದ್ದರೆ ಸಹನಟಿಯರೊಂದಿಗೆ ಸಹಕಾರ ಮನೋಭಾವದಿಂದ ಅವರಿಗೆ ಇವರು, ಇವರಿಗೆ ಅವರು ಸಹಕರಿಸುತ್ತಾ ಚಿಕ್ಕ ನಟಿಯರೊಂದಿಗೆ ಬೆರೆತು ನೇಪಥ್ಯದಲ್ಲಿ ಒಂದೇ ಕುಟುಂಬದವರಂತೆ ಇದ್ದು ಬಿಡುತ್ತಾರೆ. ಪಾತ್ರಧಾರಿಗಳಲ್ಲಿ ಬಡವ, ಬಲ್ಲಿದ, ಹಾಸ್ಯ ಪಾತ್ರ, ವಿಲನ್, ಆಳು, ರೌಡಿ ಹೀಗೆ ಎಲ್ಲಾ ಆಯಾ ಪಾತ್ರಗಳಿಗೆ ತಕ್ಕಂತೆ ಧರಿಸಿ, ಅಲಂಕರಿಸಿಕೊಂಡು ವೇದಿಕೆಯಲ್ಲಿ ಮೆರೆಯುತ್ತಾರೆ. "ಪಾತ್ರಗಳಿಗೆ ವಿರುದ್ಧವಾಗಿ ಡ್ರೆಸ್ ಇರಬಾರದು. ಪಾತ್ರಕ್ಕೆ ಪೂರಕವಾಗಿ ವೇಷಭೂಷಣವಿರಬೇಕು". ಇದು ನಾಟಕರಂಗದ ಒಂದು ನಿಯಮ. ಈ ನಿಯಮಕ್ಕೆ ವಿರುದ್ಧವಾಗಿಯೂ ಕೆಲವರು ಡ್ರೆಸ್ ಧರಿಸುತ್ತಾರೆ. ಅದು ತಪ್ಪು "ಯಾರು ಏನು ಮಾಡಬೇಕೋ ಅದನ್ನೇ ಅವರು ಮಾಡಿದರೆ ಚಂದ" ಅದು ಬಿಟ್ಟು "ರಾಣಿ" ಸೇವಕಿಯಾಗಲಾರಳು, ಸೇವಕಿ ರಾಣಿಯಾಗಲಾರಳು. ಪಾತ್ರಕ್ಕೆ ತಕ್ಕಂತೆ ವೇಷಭೂಷಣಗಳಿದ್ದರೆ ಅದು ಸೊಗಸು. ಆಗ ನಾಟಕವು ಸಾರ್ಥತೆಯನ್ನು ಪಡೆದು ರಂಗದಲ್ಲಿ ಯಶಸ್ವೀ ನಾಟಕವಾಗುತ್ತದೆ.

೫. **ಸಂಭಾವನೆ :** "ಕಾಂಚಾಣಂ ಕಾರ್ಯ ಸಿದ್ಧಿ" ಹಣವಿದ್ದರೆ ಎಲ್ಲವೂ ನಡೆಯಲು ಸಾಧ್ಯ. ಹಾಗೂ ಕಾರ್ಯ ಕ್ರಿಯಾಶೀಲ ವಾಗಿ ಇರಲು ಸಾಧ್ಯ. ಇಡೀ ಪ್ರಪಂಚದ ಎಲ್ಲಾ ಚಟುವಟಿಕೆಗಳು ಹಣದಿಂದಲೇ, ಹಣದ ಮಹತ್ವದಿಂದಲೇ ಮುನ್ನಡೆ ಯುತ್ತವೆ. ರಂಗನಟಿಯರು ರಂಗಭೂಮಿಯಲ್ಲಿ ನಟಿಯಾಗಿ ವೃತ್ತಿ ಎಂದು ಸ್ವೀಕರಿಸಿದ ಮೇಲೆ, ಅದರ ಪ್ರತಿಫಲ ದಿಂದಲೇ ನಟಿಯರ ಕೌಟುಂಬಿಕ ಜೀವನ ನಡೆಯುತ್ತಿರುತ್ತದೆ. ದುಡಿಮೆಗೆ ನಾವು ತಕ್ಕದಾದ ಸಂಭಾವನೆಯನ್ನು ಅವರಿಗೆ ನೀಡಲೇಬೇಕು. ದುಡಿತವೇ ದುಡ್ಡಿನ ತಾಯಿ ಅಲ್ಲವೆ ?

ರಂಗನಟಿಯರಲ್ಲಿ ಸಂಭಾವನೆ

ನಾಯಕಿ	-	೫೦೦-೧೦೦೦-೧೫೦೦
ವಿಲನ್	-	೪೦೦-೮೦೦-೧೦೦೦
ಹಾಸ್ಯ	-	೩೦೦-೬೦೦-೮೦೦
ಸೇವಕಿ	-	೨೦೦-೩೦೦-೪೦೦

ಹೀಗೆ "ಪಾತ್ರಕ್ಕೆ ತಕ್ಕಂತೆ ಅಭಿನಯ, ಅಭಿನಯಕ್ಕೆ ತಕ್ಕಂತೆ ಸಂಭಾವನೆ" ಈ ಪದ್ಧತಿಯು ಮೊದಲಿನಿಂದಲೂ ನಿರಂತರವಾಗಿ ನಡೆದುಕೊಂಡು ಬಂದಿರುವ ಪ್ರಕ್ರಿಯೆಯಾಗಿದೆ. ಈ ರೀತಿಯ ಅಭಿನಯದಿಂದಲೇ ಸಂಭಾವನೆಯು ಹೆಚ್ಚಾಗುತ್ತಲೇ ನಡೆದಿದೆ. ಬಳ್ಳಾರಿ ಹಾಗೂ ವಿರೂಪಾಪೂರ, ಕೂಡ್ಲಿಗಿಗಳಲ್ಲಿ ನಟಿಯರು ಹೆಚ್ಚಾಗಿ ಈಗ ಬಯಲಾಟಕ್ಕೆ ಹೋಗುತ್ತಿದ್ದು, ಬಯಲಾಟದ ನಟಿಯರು ೨೦೦೦ ದಿಂದ ೩೦೦೦/- ವರೆಗೆ

ಸಂಭಾವನೆಯನ್ನು ತೆಗೆದುಕೊಳ್ಳುತ್ತೇವೆ ಎಂದು ಯಳ್ಳಾರ್ತಿಯ ಚಾಮುಂಡೇಶ್ವರಿ ನುಡಿಯುತ್ತಾರೆ. ಸಾಮಾಜಿಕ ನಾಟಕಗಳಲ್ಲಿ ಸ್ತ್ರೀ ಪಾತ್ರಧಾರಿ (ನಟಿಯರಿಗೆ) ಸಂಭಾವನೆ ಕಡಿಮೆ ಇದೆ. ಪೌರಾಣಿಕ ನಾಟಕ ಬಯಲಾಟಗಳಿಗೆ ಹೆಚ್ಚು ಸಂಭಾವನೆ ಇದ್ದುದರಿಂದ ನಾನು ಸಂಪೂರ್ಣವಾಗಿ ಸಾಮಾಜಿಕ ನಾಟಕಗಳಿಗೆ ಹೋಗುವುದನ್ನು ನಿಲ್ಲಿಸಿದ್ದೇನೆ. ಈ ಬಯಲಾಟಗಳು ಹಾಗೂ ಪೌರಾಣಿಕ ನಾಟಕಗಳು ವರ್ಷದಲ್ಲಿ ಕನಿಷ್ಠ ಐದು ತಿಂಗಳಾದರೂ ನಡೆಯುತ್ತವೆ. ಆಗ ನಮಗೆ ನಿದ್ರೆಗೆಟ್ಟು ಹೋಗುವ ಅನಿವಾರ್ಯತೆ ಇದ್ದರೂ ನಾವು ಈ ಐದು ಆರು ತಿಂಗಳು ಕಷ್ಟಪಟ್ಟು ದುಡಿದುಕೊಂಡರೆ ವರ್ಷಪೂರ್ತಿ ನಾವು ಕುಳಿತು ಆರಾಮಾಗಿ ಊಟ ಮಾಡಬಹುದೆಂದು ಹಾರ್ಮೋನಿಯಂ ಮಾಸ್ತರ ಅವರ ಪತಿ ಚನ್ನವೀರಸ್ವಾಮಿಯವರು ನುಡಿಯುತ್ತಾರೆ. ಅವರು ಸತಿ-ಪತಿಗಳೊಂದಾಗಿ ರಂಗ ಸೇವೆ ಮಾಡುತ್ತಿದ್ದು, ಸತಿ ಪತಿಯೊಂದಾದ ಭಕ್ತಿ, ರಂಗಸೇವೆ ಹಿತವಾಗಿರುವುದು ಬಳ್ಳಾರಿಯ ಆಸುಪಾಸಿನ ಪ್ರೇಕ್ಷಕರಿಗೆ ಈ ಮಾತು ಇಲ್ಲಿ ಉತ್ಪ್ರೇಕ್ಷೆಯಾಗಲಾರದು.

ಬಳ್ಳಾರಿ ಜಿಲ್ಲೆಯಲ್ಲಿ ಸುಭದ್ರಮ್ಮ ಮನ್ಸೂರು, ಕೆ.ನಾಗರತ್ನಮ್ಮ, ಕಮಲವ್ವ, ಕೂಡ್ಲಿಗಿ ಪಿ.ಪದ್ಮ ಎಸ್.ರೇಣುಕಾ, ಎಸ್.ಯಶೋಧ, ಬಳ್ಳಾರಿ ವರಲಕ್ಷ್ಮಿ, ಬಿ.ಶಿವಕುಮಾರಿ, ಚಾಮುಂಡೇಶ್ವರಿ, ಅಂಬುಜಮ್ಮ, ಗೀತಾ ಕೂಡ್ಲಿಗಿ, ಬಿ.ಜಯಮ್ಮ, ಬಿ.ಅಂಜಿನಮ್ಮ ಇನ್ನು ಮುಂತಾದ ನಟಿಯರು ರಂಗಭೂಮಿಯಲ್ಲಿ ಹೆಚ್ಚು ಸಂಭಾವನೆ ಪಡೆಯುವಂಥ ನಟಿಯರಾಗಿದ್ದಾರೆ.

ನಾಟಕ ಮತ್ತು ನಟಿಯರು

ನಟಿ ಅಥಾವ ನಟ ಈರ್ವರು 'ನಟುವರು' ಎಂಬ ಮೂಲದಿಂದ ಬಂದವರು. ಈ ನಟುವರದು ಮೊದ ಮೊದಲು ಒಂದು ಕುಟುಂಬವೇ ಆಗಿತ್ತು. ಭರತನ ನಾಟ್ಯಶಾಸ್ತ್ರದಲ್ಲಿಯೂ ಈ ನಟುವರು ಬರುತ್ತಾರೆ. ಕಲಾವಿದರ ಕುಟುಂಬವೇ 'ನಟುವರ' ಕುಟುಂಬವಾಗಿತ್ತು. ಈ ಕಲಾವಿದರಿಗೆ ರಾಜಾಶ್ರಯವಿತ್ತು. ಇವರು ಮೊದ ಮೊದಲು ನೃತ್ಯನಾಟಕಗಳನ್ನು ಮಾಡುತ್ತಿದ್ದರು. ಅಲ್ಲದೆ ನಾಟಕಗಳನ್ನು ತಾವೇ ತಯಾರಿ ಮಾಡುತ್ತಿದ್ದರು. ಇದು ಒಂದು ರೀತಿಯಲ್ಲಿ ನಾಟಕ ಕಂಪನಿಯ ಕುಟಂಬವೇ ಆಗಿದ್ದು, ರಾಜನು ಹೇಳಿದಾಗ ಅರಮನೆಯಲ್ಲಿ ನಾಟಕ, ನೃತ್ಯ ಮಾಡುತ್ತಿದ್ದರು. ಇಡೀ ಕುಟುಂಬದವರೇ ನಾಟಕ ಮಾಡುತ್ತಿದ್ದು, ಮುಖ್ಯಸ್ಥನೇ ಸಾಮಾನ್ಯವಾಗಿ ಸೂತ್ರಧಾರ ಅವನ ಹಂಡತಿ ಮುಖ್ಯ ನಾಯಕಿ ಪಾತ್ರ ಮಾಡುತ್ತಿದ್ದು, ಇನ್ನುಳಿದ ಹೆಣ್ಣು ಪಾತ್ರವನ್ನು ತಮ್ಮ ಕುಟುಂಬದವರೇ ಮಾಡುತ್ತಿದ್ದರು. ಇದು ನಾಟಕ ನಡೆದುಕೊಂಡು ಬಂದ ಪರಂಪರೆಯಾಗಿದೆ.

ನಾಟಕ - ನೃತ್ಯ ವಿಶೇಷ

ಒಂದೆ 'ನಾಟಕ'ವು ಈಗಿನ ನಾಟಕದಂತೆ ಇರದೇ ತೀರ ಭಿನ್ನವಾಗಿಯೇ ಇತ್ತು. ನೃತ್ಯವನ್ನೇ ಹಿಂದಿನವರು ನಾಟಕವೆಂದು ಕರೆದಿರುವರು. ಅಲ್ಲದೆ ಪರ್ಯಾಯವಾಗಿ 'ನಾಟ್ಯ' ಎಂದೂ ಹೇಳಿದ್ದಾರೆ. ಅಂದಿನ

ನಾಟಕಗಳನ್ನು ನೃತ್ಯನಾಟಕಗಳೆಂದು ಕರೆಯಬಹುದು. ಅವು ಇಂದಿನಂತೆ ಸಂಭಾಷಣಾ ಪ್ರಧಾನ ನಾಟಕಗಳು ಅಲ್ಲ. ಕನ್ನಡ ಕಾವ್ಯ-ಶಾಸನಗಳಲ್ಲಿ ದೊರೆಯುವ ಬಹಳಷ್ಟು ಉಲ್ಲೇಖಗಳು ಈ ಅಭಿಪ್ರಾಯಗಳನ್ನು ಸ್ಪಷ್ಟಗೊಳಿಸಿವೆ. ಅವುಗಳನ್ನು ಇಲ್ಲಿ ನಾವು ಒಂದೊಂದಾಗಿ ಪರಿಶೀಲಿಸಬಹುದಾಗಿದೆ.

ವಡ್ಡಾರಾಧನೆಯಲ್ಲಿ "...ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಂ... ಕೂಡಿ ಭೋಗೋಪಭೋಗ ಸುಖಂಗಳನನುಭವಿಸುತ್ತ ಮಿರೆಯಿರೆ ...." ಎಂಬ ಹೇಳಿಕೆ ಇದೆ. ಇಲ್ಲಿಯ ನಾಟಕಗಳಿಗೆ ಸಂಪಾದಕರಾದ ಡಿ. ಎಲ್. ಎನ್ ಅವರು ನೃತ್ಯಗಳೆಂದು ಅರ್ಥ ಹೇಳಿದ್ದಾರೆ. ಪಂಪನ ಆದಿ ಪುರಾಣದಲ್ಲಿ ಇಂದ್ರನ ನಾಟ್ಯದ ವರ್ಣನೆಯಿದೆ. ಇದು ಜೈನ ಪುರಾಣ ಕಾವ್ಯಗಳಲ್ಲಿರುವ ಸಾಮಾನ್ಯ ಅಂಶ. ಪಂಪನು ಈ ಸಂದರ್ಭದಲ್ಲಿ ನಾಟಕ, ನಾಟ್ಯ, ನೃತ್ಯ ಈ ಮೂರೂ ಪದಗಳನ್ನು ಸಮಾನಾರ್ಥದಲ್ಲಿ ಬಳಸಿರುವುದನ್ನು ಗಮನಿಸಬೇಕು. ನೃತ್ಯದ ವಿವರಣೆಯ ಆರಂಭ ಹೀಗಿದೆ-

"ತಾನುಂ (ಇಂದ) ಆನಂದ ನಾಟಕ ಮನೆ ಆಡಲ್ ಬಗೆದು ಕೃತಾನುಕರಣಮೆ ನಾಟಕಮಪ್ಪುದರಿಂ ಭಗವಜ್ಜ ನ್ಮಾಭಿಷೇಕ ಸಂಬಂಧಿಯಾಗೆ ತನ್ನ ಪೂಸತೆಸಮೆಯ ಸಮವಕಾರ ರೂಪಕ ಮುಮಂ ದಶಾವತಾರ ಸಂದರ್ಭಂಗಳಪ್ಪ ಶೇಷಾಶೇಷ ರೂಪಕಂಗಳುಮಂ ಸುರಾಸುರ ಸಭೆಗಂನಾಭಿರಾಜಾದಿ ಮನುಜ ಸಭೆಗಂಮೆರೆಯಲೆಂದು ಶುದ್ಧ ಚಿತ್ರವೆಂಬ ಪೂರ್ವರಂಗ ಪ್ರಸಂಗದೊಳ್ ಜರ್ಜರ ಪೂಜಾ ಮಂಗಳ ಪದೋಚ್ಚಾರಣ ಪುಷ್ಪಾಂಜಲಿ ವಿಕ್ಷೇಪಣಾದಿ ನಾಂಧೀ ವಿಧಿಯಂ ನಿರ್ವರ್ತಿಸಿ ದೃಶ್ಯ ಶ್ರವ್ಯ ದೃಢಸೂತ್ರಾದಿ ಪ್ರಯೋಗಂಗಳೊಂ ನಾನಾವಿಧ ವಾದ್ಯಂಗಳೊಳಂ ಆಂಗಿಕಾಭಿನ ಯಂಗಳೊಳಂ ಎಸೆಯೆ ಮಷವನ್ ಅಷವಿಘಾತರ್ಧಂ ಉದ್ಧತಾಭಿನಯ ಪ್ರಾಯಯಂ ಆರಭಟೀ ವೃತ್ತಿಯುಕ್ತಮಂ ಅಪ್ಪ ತಾಂಡವಮನ್ ಆಡಲುದ್ಯೋಗಗಂಗೆಯ್ದು ಮಂಗಳಾಳಂಕಾರಾಳಂಕೃತನಾಗಿ ನಾಟ್ಯ ವೇದಾವತಾರಮನೆ ಪೋಲ್ತು ರಂಗಂಬೊಕ್ಕು."

ಇದು ನಾಟ್ಯಶಾಸ್ತ್ರದ ಚೌಕಟ್ಟಿನಲ್ಲಿ ನಡೆಯುವ ನೃತ್ಯ ಪ್ರಸಂಗವೆಂಬುದು ಸ್ಪಷ್ಟವಿದೆ. ಇಂದ್ರನು ತನ್ನ ಸುರ ಸ್ತ್ರೀಯರೊಂದಿಗೆ ನೃತ್ಯವನ್ನಾಡಿದುದನ್ನು ಕವಿ ಮುಂದಿನ ಹತ್ತು ಪದ್ಯಗಳಲ್ಲಿ ವರ್ಣಿಸಿ "ಅಂತು ಪುರಂದರನ್ ಆನಂದ ನೃತ್ಯಾವಸಾನದೊಳ್" ಎಂದು ಈ ನೃತ್ಯ ಪ್ರಸಂಗದ ವರ್ಣನೆ ಮುಗಿಸುತ್ತಾನೆ. ಪಂಪನ ಇನ್ನೊಂದು ಉದಾಹರಣೆಯೂ ಮೇಲಿನ ಅರ್ಥವನ್ನು ಸ್ಪಷ್ಟೀಕರಿಸುತ್ತದೆ. ಆದಿ ಪುರಾಣದ ನೀಲಾಂಜನೆಯ ನೃತ್ಯ ಪ್ರಸಂಗ ಸುಪ್ರಸಿದ್ಧವಾದುದು. (ಅದರ ರಸವಿಮರ್ಶೆ ಇಲ್ಲಿ ಅಪ್ರಸ್ತುತ) ನೃತ್ಯ ಮಾಡುತ್ತಿದ್ದಂತೆಯೆ ಅವಳ ಅವಸಾನವಾಗುತ್ತದೆ.

ರಸಭಂಗವಾಗಬಾರದೆಂದು ಇಂದ್ರನು ನೀಲಾಂಜನೆಯ ಪ್ರತಿರೂಪ ನಿರ್ಮಿಸಿ ನೃತ್ಯಕ್ಕೆ ತೊಡಗಿಸುತ್ತಾನೆ. ಯಾರ ಗಮನಕ್ಕೂ ಬಾರದ ಈ ಸೂಕ್ಷ್ಮ ಬದಲಾವಣೆ ಪುರುದೇವನಿಗೊಬ್ಬನಿಗೆ ಇದು ತಿಳಿಯುತ್ತದೆ. ಆಗ ಅವನು

ಕೋಟಿ ತೆರದಿಂದ ಮೆಸೆವೀ

ನಾಟಕಮನೆ ತೋರಿ ಮಾಣ್ದಳಿಲ್ಲಳ್ ಬಗೆಯೊಳ್

ನಾಟುವಿನಮಮರಿ ಸಂಸ್ಕೃತಿ

ನಾಟಕಮುಮನೆನಗೆ ನೆರವು ತೋರಿದಳೀಗಳ್

ಎಂದು ತನ್ನಲ್ಲಿಯೇ ಅಂದುಕೊಳ್ಳುತ್ತಾನೆ. ನೀಲಾಂಜನೆ ತೋರಿದ್ದು ನೃತ್ಯವನ್ನಾದರೂ ಅದಕ್ಕೆ ಬದಲಾಗಿ ಇಲ್ಲಿ 'ನಾಟಕ' ಎಂಬ ಪದವನ್ನು ಗಮನಿಸಿದಾಗ ನೃತ್ಯ ನಾಟಕ ಪದಗಳ ಸಮಾನಾರ್ಥದ ಸ್ಪಷ್ಟ ಅರಿವು ಮೂಡುತ್ತದೆ. ಪಂಪನ ಕಾಲಕ್ಕಾಗಲೇ ರೂಢಿಗೆ ಬಂದಿದ್ದ ಈ ಸಮಾನಾರ್ಥದ ಬಳಕೆ ಪರಂಪರೆಯಾಗಿ ಮುಂದುವರೆದಿರುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಇಂದ್ರನ ನೃತ್ಯ ಪ್ರಸಂಗದ ವರ್ಣನೆಯ ಸಂದರ್ಭದಲ್ಲಿ ನೃತ್ಯಕ್ಕೆ ಬದಲಾಗಿ 'ನಾಟಕ'ವನ್ನು ಬಳಸಿರುವುದಕ್ಕೆ ಇನ್ನೆರಡು ಉಲ್ಲೇಖಗಳನಿಲ್ಲಿ ಗಮನಿಸಬಹುದಾಗಿದೆ.

೧. "ಧೃತಿ ಲಲಿತ ರಸ ಸಮಾಶ್ರಯಂಗಳಾಗಿ ತೋರುವಾರಭಟ ಕೃಶಿಕಿ ವೃತ್ತಿಗಳೊಳ್ ತಾಂಡವಲಾಸ್ಯ ಪ್ರಭೇದ ಮೆಸೆವಿದ್ರಮೆಂಬ ನಾಟಕಮನಾಡಿ".

೨. ಪದಪದದುಗ್ಗಡಯಿಂದಗ್ಗಳ ಮಾಗಿ ರಂಜಿಸುವ ವಿಕಟ ನಾಟಕಮಂ ಭರತಶಾಸ್ತ್ರ ಸಮಾಲಕ್ಷಿತ ನಿರತಿಶಯ ಲಕ್ಷಣಕ್ಕಿದೇ ಪರಮ ಸೀಮಾಲಕ್ಷ್ಯಮೆಂಬಂತೆಡ್ಡಮಾಗೆ".

ನಾಟಕ ನೃತ್ಯರೂಪಕ

ನಾಟಕವು ನೃತ್ಯ ಪ್ರದರ್ಶನವೆಂಬುದನ್ನು ಮೇಲಿನ ಉದಾಹರಣೆಗಳು ಸ್ಪಷ್ಟಪಡಿಸಿವೆ. ಅದು ನೃತ್ಯಕಲೆಯ ಒಂದು ಪ್ರಕಾರವಾದ ನೃತ್ಯರೂಪಕವಾಗಿತ್ತೆಂದು ನಿಖರವಾಗಿ ತಿಳಿಸುವ ಕೆಲವು ಉಲ್ಲೇಖಗಳಿವೆ. ಸ್ಥೂಲವಾಗಿ ನೃತ್ಯ ಮತ್ತು ನಾಟಕಗಳು ಒಂದೇ ಎಂಬ ತಿಳುವಳಿಕೆ ಇದ್ದಿತ್ತಾದರೂ ಅವುಗಳ ಮಧ್ಯೆ ಸ್ಪಷ್ಟವಾದ ಅಂತರವಿದ್ದಿತೆಂಬುದು ನೇಮಿಚಂದ್ರನ ಲೀಲಾವತಿಯಲ್ಲಿ ಉಕ್ತವಾಗಿದೆ. "ನೃತ್ಯ ವಿನೋರ್ಮೆ.... ನಾಟಕ ವಿನೋರ್ಮೆ" ಕುಮಾರನು ವಿರಹ ತಾಪವನ್ನು ಮರೆಯಲು ಪ್ರಯತ್ನಿಸಿದನಂತೆ. ಇಲ್ಲಿಯ ನಾಟಕದ ಅರ್ಥ ನೃತ್ಯಕ್ಕಿಂತ ಭಿನ್ನವಾದ ನೃತ್ಯರೂಪಕ ಎಂದಾಗುತ್ತದೆ. ನೃತ್ಯ ರೂಪಕದಲ್ಲಿ ಬರೀ ನೃತ್ಯವಿರದೆ ಯಾವುದಾದರೊಂದು ಕಥಾ ಸಂದರ್ಭವೋ, ಸನ್ನಿವೇಶವೋ ಒಂದೆರಡು ಮುಖ್ಯ ಪಾತ್ರಗಳ ಮೂಲಕ ನೃತ್ಯದ್ವಾರಾ ಅಭಿನಯಿಸಲ್ಪಡುತ್ತದೆ ಇದಕ್ಕೆ Theme Dance ಎಂದು ಹೆಸರು. ಅರಮನೆಗಳಲ್ಲಿ ಅದು ಬಹಳಷ್ಟು ಪ್ರದರ್ಶಿಸಲ್ಪಡುತ್ತಿತ್ತು. ಇದೊಂದು ಶ್ರೀಮಂತ ಕಲೆಯಾದುದರಿಂದ ರಾಣಿಯರು ಕೂಡ ಇದರಲ್ಲಿ ಭಾಗವಹಿಸುತ್ತಿದ್ದರು. ವಿಷ್ಣುವರ್ಧನನ ರಾಣಿ ಶಾಂತಲೆ ಸುಪ್ರಸಿದ್ಧ ನೃತ್ಯಗಾರ್ತಿಯೆಂಬುದು ಸರ್ವವಿದಿತ. ಆರನೇ ವಿಕ್ರಮಾದಿತ್ಯನ ಅನೇಕ ರಾಣಿಯರು ಸಕಲಕಲಾ ಪ್ರವೀಣೆಯರೂ, ಅಭಿನಯ ಸರಸ್ವತಿಯರೂ,

ಆಗಿದ್ದರೆಂದು ಶಾಸನವೊಂದರಿಂದ ತಿಳಿದುಬರುತ್ತದೆ. ಮಹಾರಾಣಿಯರು ನಾಟಕಗಳನ್ನು ಅಂದರೆ ನೃತ್ಯರೂಪಕಗಳನ್ನು ಅಭಿನಯಿಸಿದ ಕೆಲವು ಉದಾಹರಣೆಗಳನ್ನಿಲ್ಲಿ ನೊಡಬಹುದಾಗಿದೆ.

"ಮಹಾದೇವಿಯಂ ರೂಪಾದೇವಿಯು ವೆಂಬರಿರ್ವರ ರನೆಯರುಂ ವಿನೋದಾರ್ಥದಿಂ ನೇತೆಯಲಂ ರಾಮನುಮಾಗಿ ಕೃತಕ ನಾಟಕಮನಾಡಿ ಬಳಲ್ದು ಕೃತಕ ಪುರುಷಾಕಾರ ಚಿಹ್ನಂಗಳಂ ಕಳೆಯಲ್ ಮರೆದು ಅರಸನ ಸಿರಿಮಂಚದೊಳ್ ಗಾಢಲಿಂಗನಗೈದು ಮರೆದೊರಗಿರ್ದರ್".

ಎಂಬುದು ಪಂಚತಂತ್ರದ ಉದಾಹರಣೆ. ರಂಗ ಮಹಾಮಂಡಲೇಶ್ವರರ ಗಂಗ ಪೆರ್ಮಾಡಿಯ ಪತ್ನಿ ಬಾಚಲಾ ದೇವಿಯು ತನ್ನ ಗಂಡನ ಸಾಹಸ ಪರಾಕ್ರಮಗಳನ್ನು ನಾಟಕವಾಗಿ ಮಾಡಿ ನರ್ತಿಸಿದ ಸೂಚನೆ ಶಾಸನವೊಂದರಲ್ಲಿ ಉಕ್ತವಾಗಿದೆ.

ನಾಟಕ-ನಟಿ

ನೃತ್ಯಕಲೆಯ ಒಂದು ಪ್ರಕಾರವಾಗಿ 'ನಾಟಕ' ರೂಢಿಯಲ್ಲಿದ್ದುದರಿಂದ ಅಂಥ ನಾಟಕದ ನಟಿ ಅಂದರೆ ನೃತ್ಯಗಾತಿ ಎಂದೇ ಅರ್ಥವಲ್ಲದೆ ಇಂದಿನ ಅಭಿಜಾತ ನಾಟಕಗಳಲ್ಲಿ ಪಾತ್ರವಹಿಸುವಂಥವಳು ಎಂಬ ಅರ್ಥವಲ್ಲ. ನೃತ್ಯಗಾತಿಯರನ್ನು 'ನಾಟಕದ ನಟಿ'ಯರೆಂದು ಕರೆಯಲಾಗುತ್ತಿತ್ತು.

ನಾಗಚಂದ್ರನು "..... ಸರ್ವಾಂಗ ಸುಂದರಿ ವಿದ್ಯಾನಟಿ ನಾಟಕಂ ನಲಿಗೆ ಮತ್ಕಾವ್ಯಸ್ಥಲೀ ರಂಗದೊಳ್" ಎಂದು ವಿದ್ಯಾನಟಿಯ ನಾಟಕವನ್ನು ಹಾರೈಸಿದ್ದಾನೆ. ಇಲ್ಲಿ ವಿದ್ಯಾನಟಿಯ ನಾಟಕವೆಂದರೆ ನೃತ್ಯವೆಂದೇ ಅರ್ಥ. ಭೀಮಕವಿಯು ನಟಿಯೊಬ್ಬಳು ನಾಟಕಕ್ಕಳವಟ್ಟು ನಿಂತ ರೀತಿಯನ್ನು ಹೇಳುವ ಸಂದರ್ಭದಲ್ಲಿ

ಇಟ್ಟಜಡೆ ಬೊಲ್ಲೆಹವಮರ್ದಿರೆ

ತೊಟ್ಟಕಂಡುಕಮಂದುಕೂಲವ

ನುಟ್ಟು ಚಲ್ಲಣಮಂ ರಚಿಸಿ ಮಣಿಖಚಿತದ ಸಿಂಜನಿಯ

ಕಟ್ಟಿಕೊಂಡು ಬೆಡಂಗಡರೆ ನೆರೆ

ದಿಟ್ಟೆ ನೀನೀ ನಾಟಕಕ್ಕಳ

ವಟ್ಟು ರೀತಿಯೊಳೊಪ್ಪಿ ಸೋವಲದೇವಿ ನಡೆತಾರಾ

ಎಂದು ವರ್ಣಿಸಿದ್ದಾನೆ. ಸೋವಲದೇವಿ ಶಿವಾಲಯದಲ್ಲಿ ನೃತ್ಯಸೇವೆ ಸಲ್ಲಿಸಲು ಬಂದಂಥವಳು. ನೃತ್ಯದ ವೇಷಭೂಷಣ ಧರಿಸಿ ನಾಟಕಕ್ಕಳವಟ್ಟು ನಿಂತುದು, ನೃತ್ಯ ನಟಿಯೇ ನಾಟಕದ ನಟಿ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಈ ನಾಟಕದ ನಟಿ ನೃತ್ಯಸೇವೆ ಸಲ್ಲಿಸಿದುದನ್ನು ಕವಿ ಮುಂದಿನ ಪದ್ಯದಲ್ಲಿ ಹೇಳಿದ್ದಾನೆ (ನೋ: ಡಾ.ಬಸವರಾಜ ಮಲಶೆಟ್ಟಿ, ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ, ಪುಟ, ೧೧ ರಿಂದ ೧೩).

ಇದೇ ವರ್ಗದ ನಟಿಯರೇ, ಈ ಸಮುದಾಯದವರೇ ಮುಂದೆ ದೇವದಾಸಿಯರಾದರು. ನೃತ್ಯ, ಸಂಗೀತ, ನಾಟಕ ಇದಕ್ಕಾಗಿ ಇವರು ಮೀಸಲಾದರು. ಇದು ಒಂದು ಹಂತದ ಉಪವರ್ಗವೆಂದು ಹೇಳಬಹುದು. ಈ ದೇವದಾಸಿಯರು ಸಾಮಾನ್ಯವಾಗಿ ದೊಡ್ಡ ನಗರಗಳಲ್ಲಿ ಇರುತ್ತಿದ್ದರು. ಮುಂದೆ ಇವರಲ್ಲಿ ಬೇರೆ ಬೇರೆಯಾಗಿ ದೇವದಾಸಿಯರು, ಗಣಿಕೆಯರು, ಪಾತರದವರು, ನಾಯಕಸಾನಿಯರು, ಕಲಾವಂತರು ಎಂಬ ಹೆಸರನ್ನು ಪಡೆಯಿತು. ಇವರು ಮೊದ ಮೊದಲು ನಗರ ಪಟ್ಟಣಗಳಲ್ಲಿ ಉಳಿದುಕೊಂಡು ಬಂದರು. ಕ್ರಮೇಣ ರಾಜಾಶ್ರಯತಪ್ಪಿದ ಮೇಲೆ ಮತ್ತು ದೇವಾಲಯಗಳ ಆಶ್ರಯ ವ್ಯವಸ್ಥೆ ಬದಲಾವಣೆಯಾದ ಮೇಲೆ ಉಪಜೀವನಕ್ಕಾಗಿ ಬೇರೆ ಹಾದಿಯನ್ನು ಹುಡುಕಿಕೊಳ್ಳಬೇಕಾಯಿತು. ಆಗ ಇವರೇ ನಾಟಕಕ್ಕೆ ಬಂದರು. ಇದು ನಡೆದಿದ್ದು ೧೯ನೇ ಶತಮಾನದ ಉತ್ತರಾರ್ಧದಲ್ಲಿ. ಅಷ್ಟರಹೊತ್ತಿಗೆ ಸಂಪೂರ್ಣವಾಗಿ ರಾಜಾಶ್ರಯ ಕ್ಷೀಣವಾಗಿ ಇಲ್ಲಿ ಈ ಪ್ರಕ್ರಿಯೆ ಶುರುವಾಯಿತು. ಮುಂದೆ ವೃತ್ತಿ ರಂಗಭೂಮಿಯನ್ನು ನಟಿಯರು ಆಶ್ರಯಿಸಿಕೊಂಡರು.

ಅಷ್ಟರ ಹೊತ್ತಿಗೆ ಆಧುನಿಕ ರಂಗಭೂಮಿ ಕಣ್ಣು ತೆರೆದಿತ್ತು. ಈ ನಾಟಕ ಪ್ರದರ್ಶನಕ್ಕೆ ಹೆಚ್ಚಿನ ಅವಕಾಶ ಒದಗಿ ಬಂತು. ಆಗ ನಾಟಕವು ಸಾರ್ವತ್ರಿಕವಾಯಿತು. ಅಲ್ಲಲ್ಲಿ ಕಂಪನಿಗಳು ಹುಟ್ಟಿಕೊಂಡವು ಕಂಪನಿಗಳ ಉದ್ದೇಶ ಮನರಂಜನೆ. ಲಾಭಾಂಶ ತಮ್ಮ ಪ್ರದರ್ಶನ ಆಕರ್ಷಕವಾಗಿರಬೇಕು ನಾಟಕಗಳ ಪ್ರಯೋಗ ಆಕರ್ಷಕ ವಾಗಿ ಮೂಡುವುದಕ್ಕಾಗಿ ಮಹಿಳೆಯರನ್ನು ನಟಿಯರನ್ನಾಗಿ ತೆಗೆದುಕೊಂಡರು. ಆರಂಭದಲ್ಲಿ ನಾಟಕಗಳಲ್ಲಿ ಸ್ತ್ರೀ ಪಾತ್ರವನ್ನು ಪುರುಷರೇ ಮಾಡುತ್ತಿದ್ದರು. ನಿಧಾನವಾಗಿ ನಟಿಯರ ಪ್ರವೇಶವಾಯಿತು. ೧೯೬೦ ರಿಂದ ಸಂಪೂರ್ಣವಾಗಿ ಸ್ತ್ರೀಯರನ್ನೇ ನಾಟಕಕ್ಕೆ ತೆಗೆದುಕೊಂಡರು ಮಹಿಳೆಯರು ಆ ಕ್ಷೇತ್ರವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಬಿಟ್ಟರು.

ಈ ನಾಟಕಕ್ಕೆ ಬಂದವರು ಯಾರು ಎಂದರೆ ಹೆಚ್ಚು ಸುಶಿಕ್ಷಿತರು ನಗರದಲ್ಲಿದ್ದು ಸಂಗೀತ, ನೃತ್ಯ ಕಲಿತವರು ತರಬೇತಿ ಪಡೆದುಕೊಂಡವರೇ ನಾಟಕಕ್ಕೆ ಸೇರಿಕೊಂಡವರು. ನಂತರ ಇವರೇ ಚಲನಚಿತ್ರಕ್ಕೂ ಸೇರಿಕೊಂಡು. ಇವರೇ ಯಾಕೆ ಬಂದರು ಅಂದರೆ ನಮ್ಮ ಸಮಾಜದಲ್ಲಿ ಸ್ತ್ರೀಯರಿಗೆ ಇರುವ ನಿರ್ಬಂಧ, ಕೌಟುಂಬಿಕ ಮಹಿಳೆಯರು ಇವರಷ್ಟು ಮುಕ್ತವಾಗಿ ಬರಲಾಗದು ಆ ಸ್ವಾತಂತ್ರ್ಯ ಅವರಿಗಿರಲಿಲ್ಲ. ಆದರೆ ಈ ವರ್ಗದ ಸ್ತ್ರೀಯರು ಮುಕ್ತವಾಗಿ ಪುರುಷರ ಜೊತೆ ಬೆರೆಯುವುದರಿಂದ ಇವರೇ ನಾಟಕಕ್ಕೆ ಸೇರಿಕೊಂಡರು. ನಾಟಕ ಹಾಗೂ ಸಿನೇಮಾಗಳು ತಂದುಕೊಡುವಂತಹ ಆದಾಯ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಜನಪ್ರಿಯತೆ ತಂದುಕೊಡುವುದರಿಂದ ಹೆಚ್ಚು ಹೆಚ್ಚು ಜನರನ್ನು ಈ ಕಡೆಗೆ ಆಕರ್ಷಿಸಿತು. ಹೀಗಾಗಿ ನಟಿಯರು ಧಾರಾಳವಾಗಿ ಈ ಕ್ಷೇತ್ರಕ್ಕೆ ನುಗ್ಗಿದರು.

ಇಂದಿನ ಸಾಮಾಜಿಕ ನಾಟಕಗಳಲ್ಲಿ ಮಹಿಳೆಯರೇ ಸೂತ್ರಧಾರಿಗಳು. ಹಳ್ಳಿಯ ಹವ್ಯಾಸಿ ಕಲಾವಿದರು ನಟಿಯರಿಲ್ಲದೆ ನಾಟಕವಾಡಲಾರರು. ಇಡೀ ನಾಟಕದ ಮೂಲ ಆಕರ್ಷಣೆ ಈ ರಂಗನಟಿಯರದೇ ಆಗಿದೆ.

ಆದ್ದರಿಂದ ಹವ್ಯಾಸಿ ಗ್ರಾಮೀಣ ಕಲಾವಿದರು ಹಬ್ಬ, ಜಾತ್ರೆ, ಹುಣ್ಣಿಮೆಗಳಲ್ಲಿ ಹಿಂದೆ ಅಂದರೆ ಈಗ ಹತ್ತು ಹದಿನೈದು ವರ್ಷಗಳ ಹಿಂದೆ "ರಂಗತಾಲೀಮು" ಎಂದೂ ಹಾಗೂ ಗೆಜ್ಜೆಪೂಜೆ ನಾಟಕವೆಂದು ಒಂದು ತಿಂಗಳು ಮುಂಚಿತವಾಗಿ ರಂಗ ತಾಲೀಮನ್ನು ಪೆಟಿಗೆ ಮಾಸ್ತರ ಪೂಜೆಯೊಂದಿಗೆ ಹಳ್ಳಿಗಳಲ್ಲಿ ಗೋಧೂಳಿ ಸಮಯದಲ್ಲಿ ಆರಂಭಿಸುತ್ತಿದ್ದರು. ಈ ಸಮಯದಲ್ಲಿ ನಟಿಯರು ಆ ಊರಿಗೆ ನಾಟಕದ ರಂಗತಾಲೀಮಿಗೆ ಎರಡು ಮೂರುಸಲ ಭೇಟಿಕೊಡುತ್ತಿದ್ದರು. ನಂತರ ನಾಟಕದ ಒಂದು ದಿನದ ಪೂರ್ವದಲ್ಲಿ ಒಂದು ಪ್ರಾಕ್ಟಿಸ್ ಮಾಡುತ್ತಿದ್ದರು. ನಂತರ ನಾಟಕ ಮುಗಿದ ಮೇಲೆ ಸಂಭಾವನೆಯನ್ನು ತೆಗೆದುಕೊಂಡು ಊರಿಗೆ ಹೋಗುತ್ತಿದ್ದರು. ಆಯಾ ಪಾತ್ರಧಾರಿಗಳು ತಮ್ಮ ಪಾತ್ರಗಳಲ್ಲಿ ಜೀವಂತಿಕೆಯನ್ನು ತುಂಬಲು ನಟಿಯ ಪಾತ್ರ ಅವಶ್ಯನೀಯ. ಏನೂ ತರಬೇತಿ ಪಡೆಯದೇ ತಮಗೆ ತಾವೇ ಗುರುಗಳಾಗಿ ಅರಿವಿನ ಮೂಲಕ ಅಭಿನಯವನ್ನು ಕಲಿತುಕೊಂಡು ಮುಂದೆ ಬಂದವರೇ ಹೆಚ್ಚಾಗಿದ್ದಾರೆ. ಅಲ್ಲದೆ ಗ್ರಾಮೀಣ ಹವ್ಯಾಸಿ ಕಲಾವಿದರೊಂದಿಗೆ ಹೊಂದಿಕೊಂಡು ಅವರನ್ನು ತಿದ್ದಿ, ತೀಡಿ ನವ್ಯತೆಯ ರೂಪದಲ್ಲಿ ಪಾತ್ರಕ್ಕೆ ಹೊಂದಿಕೊಳ್ಳುವ ಪರಿಪಕ್ವತೆಯನ್ನು ರಂಗನಟಿಯರು ಗ್ರಾಮೀಣ ಹವ್ಯಾಸಿ ಕಲಾವಿದರಿಗೆ ಕಲಿಸುತ್ತಿದ್ದರು. ಜೊತೆಗೆ ಒಂದು ತಂಡ ಎಂದ ಮೇಲೆ ತಾವೆಲ್ಲಾ ಒಂದೇ ಕುಟುಂಬ ವರ್ಗದವರು ಎಂಬ ಭಾವನೆಯಿಂದ ಎಲ್ಲರೊಂದಿಗೆ ನಟಿಯರು ಸರಾಗವಾಗಿ ಹೊಂದಿಕೊಂಡು ಅಲ್ಲಿ ಕೌಟುಂಬಿಕ ವಾತಾವರಣವನ್ನು ಸೃಷ್ಟಿಸಿ ಬಿಡುತ್ತಿದ್ದರು. ನಟಿ ಹಾಗೂ ನಟರು ನಾಟಕದ ಎರಡು ಅಂಗಗಳು. ಇವರು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸಿದಾಗ ನಾಟಕವು ಯಶಸ್ವಿ ಆಗಲು ಸಾಧ್ಯ ವಾಗುತ್ತದೆ. ಹಿಂದಿನ ರಾಜಾಶ್ರಯದ ಸೂತ್ರಧಾರನ ಹೆಂಡತಿ 'ನಟಿ' ಆಕೆಯಿಂದ ಹಿಡಿದು ಜನಪದ, ವೃತ್ತಿ, ಹವ್ಯಾಸಿ ಈ ಎಲ್ಲ ರಂಗನಟಿಯವರೆಗೂ ನಟಿಯ ಮಹತ್ವ, ಅರ್ಥ, ಪಾತ್ರವಂತಿಕೆ ಗಣನೀಯ.

ನಟಿಯರು ಇಂದು ಹಲವಾರು ರೀತಿಯಲ್ಲಿ ಬೆಳೆದು ಮೇರುಪರ್ವತ ಎನಿಸಿಕೊಂಡಿದ್ದಾರೆ. ನಾಟಕ ಪ್ರಯೋಗ ಯಾವೊಬ್ಬ ವ್ಯಕ್ತಿಯನ್ನು ಆಧರಿಸಿ ಸಂಗೀತಗಾರ, ನಟ-ನಟಿ, ನಿರ್ದೇಶಕರಿಂದ ನಡೆಯದೇ ಇಡೀ ನಾಟಕತಂಡದ ಪರಿಶ್ರಮದಿಂದ ನಡೆಯುವ ಕ್ರಿಯೆಯಾಗಿದೆ. ಇದು ನಟ ಅಥವಾ ನಟಿ ಮತ್ತು ಪ್ರೇಕ್ಷಕ ಇವರಿಬ್ಬರ ನಡುವಿನ ಒಂದು ಅವಿನಾಭಾವ ಸಂಬಂಧವನ್ನು ಏರ್ಪಡಿಸುತ್ತದೆ.

'ಕಾವ್ಯೇಷು ನಾಟಕಂ ರಮ್ಯ', ಕಾವ್ಯಗಳಲ್ಲೆಲ್ಲ ನಾಟಕವೇ ಏಕೆ ರಮ್ಯ? ನವರಸಗಳಿಂದ ಕೂಡಿದ ನಾಟಕಗಳು ನಿಜವಾಗಿಯೂ ಇವು ರಮ್ಯವೇ. ಸಂಗೀತ, ನೃತ್ಯ, ಸಾಹಿತ್ಯಗಳಿಂದ ಕೂಡಿದ ಅಭಿನಯ ಭಾವನೆಗಳ ಸಮೂಹವೇ ನಾಟಕದ ತಿರುಳು. ಆದ್ದರಿಂದ ಸಾಹಿತ್ಯದ ಇತರ ಪ್ರಕಾರಗಳಿಗಿಂತ ಹಳತೆನ್ನಬಹುದಾದ (ನಟನೆಯ ಕಲೆ) ಮನುಷ್ಯನ ಸಂಸ್ಕೃತಿಯೊಂದಿಗೆ ಬೆಸೆದುಕೊಂಡು ಬಂದಿರಬೇಕು. ಮನುಷ್ಯನ ಬೌದ್ಧಿಕ ಬೆಳವಣಿಗೆಯೊಂದಿಗೆ ಬೆಳೆಯುತ್ತಾ ಬಂದು ನಂತರ ಜನಪದ ರಂಗ ಪ್ರಕಾರಕ್ಕೆ ತಳಹದಿಯಾಗಿರಬೇಕು.

ಉತ್ತರ ಕರ್ನಾಟಕದಲ್ಲಿ ಮರಾಠಿ ರಂಗಭೂಮಿಯ ಪ್ರಭಾವದಿಂದ ರಂಗಭೂಮಿ ಹೆಚ್ಚು ಹೆಚ್ಚು ಬಳಕೆಗೆ ಬಂದಿತು. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿಯೂ ರಂಗಭೂಮಿಯು ಹೆಚ್ಚು ಹೆಚ್ಚು ಬಳಕೆಗೆ ಪ್ರಚಾರಕ್ಕೆ ಬಂದು ಶಿಖರದ ಉತ್ತುಂಗ ದಲ್ಲಿ ರಂಗಭೂಮಿಯು ಬೆಳೆದು ಬಂದಿದೆ.

[illegible]

[illegible]

[illegible]

ಬಳ್ಳಾರಿ ಜಿಲ್ಲೆಯಲ್ಲಿ ಆಡುವ ನಾಟಕಗಳು

ಪೌರಾಣಿಕ	ರಕ್ತರಾತ್ರಿ	ವೀರಾಭಿಮನ್ಯು
	ಚಿತ್ರಾಂಗದಾ	ಕುರುಕ್ಷೇತ್ರ
	ಪ್ರಮೀಳಾ ದರ್ಬಾರು	
	ಶರೀಫ ಶಿವಯೋಗಿ	ರಾಮಾಂಜನೇಯ ಯುದ್ಧ
	ಹೇಮರೆಡ್ಡಿ ಮಲ್ಲಮ್ಮ	ಅಕ್ಷಯಾಂಬರ, ಸತ್ಯ ಹರಿಶ್ಚಂದ್ರ
	ಉಷಾ ಸ್ವಯಂವರ	ಲವಕುಶ ಕಾಳಗ
	ಶಿವಜಲಂಧರ	ಭಕ್ತ ಸುಧನ್ವ
	ಮಾತಂಗ ಕನ್ಯಾ	ರಕ್ತತರ್ಪಣ
	ಇಂದ್ರಜಿತು ಕಾಳಗ	ಕುಮುಧ್ವತಿ
	ಸೀತಾ ಸ್ವಯಂವರ	ಗಾನಯೋಗಿ ಪಂಚಾಕ್ಷರಿ
	ಭಕ್ತಪುಂಡಲೀಕ	ಶಶಿರೇಖ ಪರಿಣಯ
	ರೇಣುಕಾ ಮಹಾತ್ಮೆ	ಪಾಂಡು ವಿಜಯ
	ರಾಜದ್ರೋಹ	ದುಶ್ಯಾಸನ ಕಥೆ
	ನೆಲ್ಲೂರು ನಂಬೆಕ್ಕ	ಗಿರಿಜಾ ಕಲ್ಯಾಣ
	ಶಾಂತಕುಮಾರಿ	ಭಕ್ತ ಮಾರ್ಕಂಡೇಯ
	ಲಂಕಾದಹನ	ಪಾರ್ಥ ವಿಜಯ
	ಪಠಾಣ ಪಾಪ	ರತಿ ಕಲ್ಯಾಣ
	ಧರ್ಮಯಜ್ಞ	ಶ್ರೀಕೃಷ್ಣ ಪಾರಿಜಾತ
	ಕಿರಾತಾರ್ಜುನ	ಉತ್ತರ ಕನಕಾಂಗಿ
	ಜಗಜ್ಯೋತಿ ಬಸವೇಶ್ವರ	ಸುಂದ್ರೋಪ ಸುಂದರ
	ರಾಮಾಯಣ	ದ್ರುಪದ ಕನ್ಯಾ

ಈ ಎಲ್ಲಾ ಪೌರಾಣಿಕ ನಾಟಕಗಳು ಇಂದಿಗೂ ಬಳ್ಳಾರಿ ಜಿಲ್ಲೆ ಎಲ್ಲಾ ಭಾಗಗಳಲ್ಲಿ ಪ್ರಯೋಗವಾಗುತ್ತವೆ.

ಜಾನಪದ	ಸಂಗ್ಯಾ-ಬಾಳ್ಯಾ	ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ
	ಜೋಕುಮಾರ ಸ್ವಾಮಿ	ಶೀಲಾವತಿ

ಐತಿಹಾಸಿಕ	ಟಿಪ್ಪು ಸುಲ್ತಾನ	ಕಿತ್ತೂರರಾಣಿ ಚನ್ನಮ್ಮ
	ಸಂಗೊಳ್ಳಿ ರಾಯಣ್ಣ	ಸಿಂಧೂರ ಲಕ್ಷ್ಮಣ
	ಸೂರ್ಯಶಿಕಾರಿ	ಬಾಜೀರಾವ್ ಪೇಶ್ವೆ

ಸಾಮಾಜಿಕ	ಆಶಾಲತಾ	ಗೌರಿಗೆದ್ದಳು
	ಅಣ್ಣ ತಂಗಿ	ಹಸಿರು ಬಳೆ
	ಮಗಳು ಬಂದಳು ಸೊಸೆ ನಿಂತಳು	
	ಕರ್ತವ್ಯದ ಕಾಣಿಕೆ	ಮಧುಮಗಳು
	ಕಲಿತ ಕಳ್ಳ	ಸರ್ಪ ಸಾಮ್ರಾಜ್ಯ
	ರೈತ ನಗಲಿಲ್ಲ ಸರ್ಕಾರ ಉಳಿಯಲಿಲ್ಲ	
	ಚಿನ್ನದಗೊಂಬೆ	ತಾಯಿ ಕರಳು
	ಕೆಟ್ಟ ಮೇಲೆ ಬುದ್ಧಿ ಬಂತು	
	ತಾಳಿಯಿಲ್ಲದೆ ತಾಯಿಯಾದೆ	ಸುನೀತ ಸೂಳೆಯಲ್ಲ ಅರ್ಥಾತ್ ತಾಳಿಯಿಲ್ಲದೆ ತಾಯಿಯಾದೆ
	ದೇವರಿಗೆ ನೌಕರಿ ಸಿಗಲಿಲ್ಲ	
	ಯಾರು ದೊಡ್ಡವರು	ಬಂಜೆ ತೊಟ್ಟಿಲು
	ಗೌಡ್ರುಗದ್ಲ	ಸತೀ ಸೂಳೆ
	ಸೇಡಿನ ಸರ್ಪ	ಗಂಡನ ಆಜ್ಞೆ , ಕಣ್ಣಿಟ್ಟ ಹೆಣ್ಣು
	ಆದರ್ಶಪ್ರೇಮ	ಗುಳಿಗಿ ಗುಂಡಮ್ಮ
	ಗರತಿ ಹೆಣ್ಣಿಗೆ ಗರ್ವದ ಗಂಡ	ಋಣಮುಕ್ತ ರೂಪವತಿ
	ಬಸ್ ಕಂಡಕ್ಟರ್, ಕುಲವತಿ	ಭಲೇ ಮಗಳು ಮಾನವತಿ
	ಸರ್ಪಸಾಮ್ರಾಜ್ಯ	ಸುಖದ ಸುಪ್ಪತ್ತಿಗೆ
	ಕುಡುಕ ಕಟ್ಟಿದ ತಾಳಿ	ತಾಳಿ ತಕರಾರು
	ರಕ್ತ ಕಣ್ಣೀರು	ಕಾಳಿಂಗ ಸರ್ಪ
	ಹೂ ಬಾಡಿತು ಮನನೊಂದಿತು	ಕಣ್ಣಿದ್ದರೂ ಬುದ್ಧಿ ಬೇಕು
	ಕಲಿತ ಕಳ್ಳನಲ್ಲ	ಹೂವಿನ ಅಂಗಡಿ
	ವಿಷಸರ್ಪ	ತುಂಬಿದ ಕೊಡ
	ಮನ ಮೆಚ್ಚಿದ ಮಡದಿ	ಬಡತನ ಭೂತ
	ದಸರಾ ಬಸ್ ಹಮಾಲ್	
	ಕಂಕಣ ಭಾಗ್ಯ	ಗಂಡನ ಮನೆ
	ಧರ್ಮ ದೇವತೆ	ದೀಪಾವಳಿ

ಹೀಗೆ ಮುಂತಾದ ಸಾಮಾಜಿಕ ನಾಟಕಗಳನ್ನು ಬಳ್ಳಾರಿ ಜಿಲ್ಲೆಯ ಕಲಾವಿದರು ಪ್ರತೀ ವರ್ಷ ಹಬ್ಬ ಹರಿದಿನಗಳಲ್ಲಿ ಆಡಿ ಪ್ರೇಕ್ಷಕರ ಮನರಂಜಿಸಿ ತಮ್ಮದೇ ಅನನ್ಯತೆಯನ್ನು ಮೆರೆದವರಿದ್ದಾರೆ.

ಈ ಎಲ್ಲಾ ನಾಟಕಗಳ ಲೇಖಕರು ಬಳ್ಳಾರಿ ಹಾಗೂ ಆಸುಪಾಸಿನ ಜಿಲ್ಲೆಯವರೇ ಇದ್ದಾರೆ. ಕಂದಗಲ್ಲ ಹನುಮಂತರಾಯ, ಬಿ.ವಿ.ಈಶ, ಎಂ.ಪಿ.ಪ್ರಕಾಶ, ಮುದೇನೂರು ಸಂಗಣ್ಣ, ಕೆ.ಶ್ರೀನಿವಾಸರಾವ್, ಡಿ.ಗೋಪಾಲಾಚಾರ್ಯ, ಹೆಚ್.ಹನುಮಂತಗೌಡ, ತೋರಣಗಲ್ ರಾಜಾರಾವ್, ಟಿ.ರಾಘವ, ಜೋಳದರಾಶಿ ದೊಡ್ಡನಗೌಡ, ಕೃಷ್ಣಮಾಚಾರಿ, ನಾಗೇಶಶಾಸ್ತ್ರಿಗಳು, ಚಂದ್ರಯ್ಯ, ಪರಮೇಶ್ವರಪ್ಪ, ಮೆಹಬೂಬ್, ಕನಕಗಿರಿ ವಾದಿರಾಜ, ಭರಮಲಿಂಗಪ್ಪ, ಸೋಮ, ಬಡಿಗೇರ, ಕೋಚೆ, ದೇಶಿ, ಸೊಪ್ಪಿಮಠ, ತೆಲಿಗಿ ಬಸವರಾಜ, ಮಹಾಂತೇಶ ಶಾಸ್ತ್ರೀ, ಹಿರೇಮಠ, ವೀರಭದ್ರಯ್ಯ ಹಿರೇಮಠ, ಚಿಂತ್ರಪಳ್ಳಿ ಶೇಷಾದ್ರಿ, ಬಿ.ಎಂ.ಮರಳಸಿದ್ದಯ್ಯ, ಎನ್.ಎಂ.ರವಿಕುಮಾರ, ಡಾ.ರಾಜಶೇಖರ ನೀರಮಾನ್ವಿ, ಎನ್.ಎಂ.ಕೊಟ್ರೇಶ್, ಎಸ್.ಎಸ್.ಹಿರೇಮಠ, ಕುಂ.ವೀ. ಕಥೆಗಳೂ ನಾಟಕಗಳಾಗಿವೆ.

ಉತ್ತರ ಕರ್ನಾಟಕದಲ್ಲಿ ಜನತೆಯ ಅಭಿರುಚಿ ಪ್ರೋತ್ಸಾಹಗಳಿಂದಾಗಿ ಉದಯಗೊಂಡಿರುವ ವೃತ್ತಿರಂಗ ಭೂಮಿ ಕರ್ನಾಟಕದ ಇತರ ವೃತ್ತಿರಂಗಭೂಮಿಗಳ ಉದಯಕ್ಕೆ ಮೂಲವಾಗಿದೆ. ಇಂಥ ವೃತ್ತಿರಂಗಭೂಮಿಗಳು ಒಮ್ಮೆ ವೈಭವೋಪೇತ ಸ್ಥಿತಿಯನ್ನು ತಲುಪಿ ನಂತರ ಹಲವಾರು ಬಿಕ್ಕಟ್ಟುಗಳನ್ನು ಎದುರಿಸಲಾರದೆ ಸೊರಗಿ ಕೃಶವಾದುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಹಲವಾರು ರೀತಿಯ ಕಾರಣಗಳು ನಮ್ಮ ಮುಂದೆ ಇವೆ. ವಸ್ತುಗಳ ಬೆಲೆಯೇರಿಕೆಯಿಂದಾಗಿ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತ ವೃತ್ತಿರಂಗಭೂಮಿಯ ಕಂಪನಿಗಳು ತನ್ನ ಕಂಪನಿಯ ಕುಟುಂಬಗಳನ್ನು ಸಾಕಲಾರದ ಅತೀ ಬಡತನದ ರೇಖೆಯ ಕೆಳಗಿನ ಬದುಕನ್ನೇ ಬದುಕಬೇಕಾದಂಥ ಸ್ಥಿತಿಯಿಂದ ಕಂಪನಿಗಳನ್ನು ಮುಚ್ಚಿಕೊಂಡು ರಂಗಭೂಮಿಯ ಸಹವಾಸದಿಂದ ದೂರವೇ ಉಳಿಯಬೇಕಾಯಿತು. ಇಂಥ ಕಂಪನಿಗಳಿಗೆ ಅಪವಾದವಾಗಿ ಒಂದೋ ಎರಡೋ ಸುಸ್ಥಿತಿಯ ಕಂಪನಿಗಳಿದ್ದರೆ ಅದಕ್ಕೆ ಕಾರಣ ಮನರಂಜನೆಗೆ ಪರ್ಯಾಯವಾಗಿ ಮಾಧ್ಯಮಗಳು ಹುಟ್ಟುವ ಪೂರ್ವದಲ್ಲಿ ಸಾಕಷ್ಟು ದುಡಿದು ಆರ್ಥಿಕ ಬಲವನ್ನು ಹೊಂದಿದ್ದು, ಆ ಆರ್ಥಿಕ ಬೆಂಬಲದ ಮೇಲೆ ಮಾಲಿಕನ ವ್ಯವಹಾರಿಕ ಜಾಣತನದಿಂದ ಉಳಿದುಕೊಂಡು ಬಂದಿರುವ ಸಾಧ್ಯತೆಗಳೇ ಇಲ್ಲಿ ಹೆಚ್ಚಾಗಿವೆ. ಇವುಗಳ ಹೊರತಾಗಿ ಹುಟ್ಟಿದ ಸಣ್ಣ ಪುಟ್ಟ ಕಂಪನಿಗಳು ಬೇರೆ ದುಡಿಮೆಯನ್ನೇ ಅರಿಯದೆ ನಾಟಕಗಳೆನ್ನೇ ತಮ್ಮ ಜೀವನ ನಿರ್ವಹಣೆಯ ಸಾಧನವಾಗಿಸಿ ಕೊಂಡವರು. ದುರ್‌ದೈವದಿಂದ ಸಾಧಾರಣವಾಗಿ ಕಂಪನಿಗಳನ್ನು ನಡೆಸಿಕೊಂಡು ಹೋಗುವವರ ಕಂಪನಿಗಳೂ ಇನ್ನೂ ಜೀವಂತವಾಗಿವೆ (ಲೇ: ಆರ್.ಭರಮಲಿಂಗಪ್ಪ ಮಾಸ್ತರ, ಕನ್ನಡ ರಂಗಭೂಮಿ ಎದುರಿಸುತ್ತಿರುವ ಬಿಕ್ಕಟ್ಟುಗಳು, 'ಕಲಾಸಿರಿ' ಸ್ಮರಣ ಸಂಚಿಕೆ, ಪುಟ, ೨೧).

ಇಂದಿಗೂ ಬರೀ ಹೆಸರನ್ನು ಹೇಳಲು ರಂಗ ತಂಡಗಳು ಜೀವಂತವಾಗಿ ಉಳಿದಿವೆ ಎಂದರೂ ತಪ್ಪಿಲ್ಲ. ವೃತ್ತಿ ರಂಗಭೂಮಿ ಪಾಡು ಇದಾಗಿದ್ದು, ಇನ್ನು ಹವ್ಯಾಸಿ ರಂಗಭೂಮಿಯುಪಾಡು ಬೇರೆಯೇ ಆಗಿದೆ. ಹವ್ಯಾಸಿ

ರಂಗಭೂಮಿಯು ಬುದ್ಧಿಜೀವಿಗಳ ಹಿಡಿತದಲ್ಲಿದ್ದು ಹೊಸರಂಗ ಪ್ರಯೋಗ ಹೊಸ ಹೊಸ ಅಲೆಯ ನಾಟಕಗಳಿಗೆ ಮಾತ್ರ ಕೆಲವು ತಂಡಗಳು ಸೀಮಿತವಾಗಿವೆ ಎಂಬಂತೆಯೂ ಇವೆ. ಆದ್ದರಿಂದ ಬಳ್ಳಾರಿ ಜಿಲ್ಲೆಯಲ್ಲಿ ನಾಟಕ ಕಂಪನಿಗಳು ನಾಟಕ ತಂಡಗಳು ಹೆಚ್ಚು ಹೆಚ್ಚು ಕ್ರಿಯಾಶೀಲವಾಗುವಂತೆ ಆರ್ಥಿಕ ಬೆಂಬಲದ ಜೊತೆಗೆ ಹೊಸರೀತಿಯ ನಾಟಕ ಶಾಲೆಗಳನ್ನು ಸರ್ಕಾರವು ಪ್ರಾರಂಭಿಸಿದರೆ ನಾಟಕ ಪರಂಪರೆಯು ಉಜ್ವಲವಾಗಿ ಬೆಳೆಯುವುದರಲ್ಲಿ ಸಂದೇಹವೇ ಇಲ್ಲ.

ಮಹಿಳಾ ತಂಡ : ಬಾಲ್ಯದಲ್ಲಿ ಮೈಲಾರಪ್ಪನವರ ನೇತೃತ್ವದಲ್ಲಿ ಮಾಡಿದ ನಂತರ ೧೯೭೮ ರಲ್ಲಿ ಬಳ್ಳಾರಿಯಲ್ಲಿ ಮಹಿಳೆಯರೆಲ್ಲರೂ ಒಟ್ಟುಗೂಡಿ ಅಭಿನಯಿಸಿದ ಪ್ರಥಮ ನಾಟಕ 'ರಕ್ತರಾತ್ರಿ'. ತಬಲವಾದಕ ಹನುಮಂತಪ್ಪ ಎಂಬುವವರೇ ಈ ನಾಟಕದ ಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದವರು. ಹನುಮಂತಪ್ಪನವರ ಪತ್ನಿ ಸುಜಾತಮ್ಮ ಬಯಲಾಟದ ಕಲಾವಿದೆ.

ಸುಜಾತಮ್ಮ	-	ಅಶ್ವತ್ಥಾಮ
ಸುಭದ್ರಮ್ಮ	-	ಶ್ರೀಕೃಷ್ಣ
ಕೆ.ನಾಗರತ್ನ	-	ಅರ್ಜುನ
ಆದವಾನಿ ರಂಗಮ್ಮ	-	ಕರ್ಣ
ಬಳ್ಳಾರಿ ವರಲಕ್ಷ್ಮಿ	-	ಧರ್ಮರಾಯ
ಕೂಡ್ಲಿಗಿ ಮುದ್ದಮ್ಮ	-	ಶಕುನಿ
ವಿರುಪಾಪುರ ಅಂಜಿನಮ್ಮ	-	ಧುರ್ಯೋಧನ
ಎಸ್.ರೇಣುಕಾ	-	ಶಂಬದತ್ತ
ಬಿ.ಸುಮತೆಮ್ಮ	-	ಭೀಮ
ಆದವಾನಿ ವೀಣಾ	-	ನವಲಿಪಕ್ಕ

ಹೀಗೆ ಎಲ್ಲ ಪಾತ್ರಗಳನ್ನು ಮಹಿಳೆಯೆ ಮಾಡಲು ಅಣಿಯಾದರು. ಈ ನಾಟಕದ ನಿರ್ದೇಶಕರು ತೊಗಲು ಗೊಂಬೆ ಯಾಟದ ಹೆಸರುವಾಸಿ ಬೆಳಗಲ್ ವೀರಣ್ಣನವರು. ಹಾರ್ಮೋನಿಯಂ ನುಡಿಸಿದವರು ಕಲಾವಿದ ಕರೂರು ತಿಮ್ಮಪ್ಪನವರು. ರಾಗ ಸಂಯೋಜನೆ ಮಾಡಿದ ಖ್ಯಾತ ಕಲಾವಿದ ಕಂಪ್ಲಿಯ ವಾದಿರಾಜರು. ಈ ನಾಟಕದ ಯಶಸ್ಸಿಗೆ ಕಾರಣ ಇವರೆಲ್ಲರು. ಮಹಿಳಾ ಕಲಾವಿದರೇ ಸೇರಿಕೊಂಡು ಅಭಿನಯಿಸಿದ ಈ ನಾಟಕಕ್ಕೆ ಪ್ರೇಕ್ಷಕರಿಂದ ಒಳ್ಳೆಯ ಪ್ರತಿಕ್ರಿಯೆಯೆ ಲಭಿಸಿದೆ. ಕೆಲವು ದಿನಗಳಲ್ಲಿಯೇ ಕಂಪ್ಲಿಯ ವಾದಿರಾಜ ಬರೆದು

ನಿರ್ದೇಶಿಸಿದ 'ಶ್ರೀ ಕೃಷ್ಣ ತುಲಾಭಾರ' ನಾಟಕವನ್ನು ಕೂಡ ಮಹಿಳಾ ಕಲಾವಿದೆಯರೆಲ್ಲರೂ ಸೇರಿಕೊಂಡು ಅಭಿನಯಿಸಿದರು. ಈ ನಾಟಕಕ್ಕೆ ಶಾಂತಾ ಕುಲಕರ್ಣಿ ಆಕಾಶವಾಣಿ ಕಲಾವಿದೆ ಅವರ ಹಿನ್ನೆಲೆ ಸಂಗೀತ ಹೆಚ್ಚು ಕಳೆಗುಂದಲು ಕಾರಣವಾಯಿತು. ಹಂಪಿ, ಕಂಪ್ಲಿ, ಸಿರಿಗೆರೆ ಹೀಗೆ ನಾನಾ ಕಡೆಗಳಲ್ಲಿ ಈ ನಾಟಕವು ಪ್ರಯೋಗ ವನ್ನು ಕಂಡಿದೆ.

ಈ ರೀತಿಯಲ್ಲಿ ಪ್ರಯೋಗವನ್ನು ಕಂಡ ಮಹಿಳಾ ತಂಡ ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಳ್ಳಲಿಲ್ಲ. ಅದು ನಿರಂತರವಾಗಿ ಕ್ರಿಯಾಶೀಲವಾಗುತ್ತಲೇ ಬಂದಿತು.

''ಮುಂದೆ ಕೆಲವು ದಿನಗಳ ನಂತರ ಮಹಿಳೆಯರೆಲ್ಲರೂ ಸೇರಿ ''ಮಹಿಳಾ ವೃತ್ತಿರಂಗ ಕಲಾವಿದರ ಸಂಘ'' ಎಂದು ಮಾಡಿಕೊಂಡು ಚಿಂತ್ರಪಳ್ಳಿಯ ಶೇಷಾದ್ರಿ ಗವಾಯಿಗಳ ನಿರ್ದೇಶನದಲ್ಲಿ 'ರೊಚ್ಚಿಗೆದ್ದ ರೈತ' ಎಂಬ ನಾಟಕವನ್ನು ಅಭಿನಯಿಸಿದೆವು. ಈ ನಾಟಕದಲ್ಲಿ... ಪುಡಾರಿ ಶಾಸಕ ವೀರಭದ್ರಪ್ಪನ ಪಾತ್ರ. ಹೊಸಪೇಟೆಯ ನಗರಸಭಾ ಕಲಾಮಂದಿರದಲ್ಲಿ ಸತತವಾಗಿ ಒಂದು ತಿಂಗಳು ಈ ನಾಟಕ ಅಭಿನಯಿಸಿದೆವು. ಎಲ್ಲಾ ಮಹಿಳೆಯರೇ ಇದ್ದುದರಿಂದ ಇದೊಂದು ಹೊಸರೀತಿಯ ಅನುಭವವಾಯಿತು. ಆದರೆ ಮೊದ ಮೊದಲು ಚನ್ನಾಗಿ ನಡೆಯಿತು. ಅನಂತರ ಕಲೆಕ್ಷನ್ ಸಾಕಾಗಲಿಲ್ಲ. ಕೊನೆಯ ನಾಲ್ಕು ಪ್ರಯೋಗಕ್ಕೆ ಸಿನಿಮಾ ತಾರೆ ಉಮಾಶ್ರೀ ಅವರನ್ನು ಕರೆಸಿದೆವು. ಆಗ ಸ್ವಲ್ಪ ನಷ್ಟ ಭರಿಸಲು ಸಾಧ್ಯವಾಯ್ತು. ಮುಂದೆ ''ಎಷ್ಟು ನಗ್ತಿರೊ ನಗು'' ಎಂಬ ನಾಟಕವನ್ನು ಕೆಲವು ದಿನಗಳು ಅಭಿನಯಿಸಿದೆವು. ಈ ನಾಟಕ ಮಾಡಿದಾಗ ಬಳ್ಳಾರಿಯ ವಿಜಯಶ್ರೀ, ಸಾವಿತ್ರಿ, ಪ್ರೇಮಾ ಕೂಡ ಪಾತ್ರಗಳನ್ನು ನಿರ್ವಹಿಸಿದರು'' (ನಿರೂ: ಗುಡ್ಡಿಹಳ್ಳಿ ನಾಗರಾಜ, ''ಮರಿಯಮ್ಮನಹಳ್ಳಿ ರಂಗಸಿರಿ'' ಕೆ.ನಾಗರತ್ನಮ್ಮನವರ ಆತ್ಮ ಚರಿತ್ರೆ, ಪುಟ, ೩೦).

ಈ ಎಲ್ಲಾ ಪ್ರಯೋಗಗಳಲ್ಲದೆ, ಬಳ್ಳಾರಿಯಲ್ಲಿ ವೃತ್ತಿರಂಗ ಕಲಾವಿದರ ಸಂಘ ಅಸ್ತಿತ್ವಕ್ಕೆ ಬಂದಿತು. ಹೊಸಪೇಟೆ ತಾಲೂಕಿಗೆ ನಾಗರತ್ನ ನಿರ್ದೇಶಕಿಯಾದರೂ ನಂತರದ ನಾಲ್ಕೈದು ವರ್ಷ ಸಂಘಟನೆಯು ಹೆಚ್ಚು ಉತ್ಸಾಹದಿಂದ ಕಾರ್ಯ ಪ್ರವೃತ್ತವಾದವು.

ನಾಟಕ ಕಂಪನಿಗಳು : ಪ್ರತಿಯೊಂದು ಹಳ್ಳಿಯಲ್ಲಿ ಹವ್ಯಾಸಿ ನಾಟಕ ಸಂಘಗಳಿವೆ. ಬಳ್ಳಾರಿ ಜಿಲ್ಲೆಯ ನಾಟಕ ಕಂಪನಿಗಳು ಕೂಡ್ಲಿಗಿ ತಾಲೂಕಿನ ಮಠದ ಮರುಳು ಸಿದ್ದಯ್ಯನವರ ನಾಟಕ ಸಂಸ್ಥೆ, ಕೊಟ್ಟೂರಿನ ಸರಸ್ವತಿ ನಾಟಕ ಸಭಾ, ಬಳ್ಳಾರಿಯ ಜೋಳದರಾಶಿ ಕಂಪನಿ, ಹಕ್ಕಂಡಿ ವೀರಪ್ಪನವರ ವಿಶ್ವರಂಜನಿ ನಾಟ್ಯ ಮಂಡಳಿ ಇಡೀ ಜಿಲ್ಲೆಯ ಹೆಸರಾಂತ ಕಲಾವಿದ ಮರಿಯಮ್ಮನಹಳ್ಳಿಯ ಡಿ.ದುರ್ಗಾದಾಸರ ಅಕ್ಕ ಸಂಜೀವಮ್ಮ ಹುಬ್ಬಳ್ಳಿಯಲ್ಲಿ ವಿಶ್ವಕರ್ನಾಟಕ ನಾಟಕ ಮಂಡಳಿ ಕಟ್ಟಿ, ಬಹಳಷ್ಟು ಕಡೆ ಪ್ರದರ್ಶನ ನೀಡಿ ಹೆಸರು ಮಾಡಿದ್ದರು. ಈ ಕಂಪನಿಯ ನಾಟಕಗಳನ್ನು ನೋಡಲು ಗುಬ್ಬಿ ವೀರಣ್ಣ ಮತ್ತು ಜಯಮ್ಮ ಬರುತ್ತಿದ್ದರೆಂದು ಸ್ವತಃ ದುರ್ಗಾದಾಸರೇ ಹೇಳುತ್ತಿದ್ದರು. ಈ ಕಂಪನಿಯು ಹೆಚ್ಚಾಗಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರದರ್ಶನಗೊಳ್ಳಲಿಲ್ಲ.

ಅಲ್ಲದೇ ಈ ಜಿಲ್ಲೆಯಲ್ಲಿ ಹಡಗಲಿ ತಾಲೂಕಿನ ಒಂದು ಸಣ್ಣ ಗ್ರಾಮದಲ್ಲಿ ಬಯಲಾಟದ ತಂಡವನ್ನು ಕಟ್ಟಿ ಬೆಳೆಸಿದ ಕೀರ್ತಿ ಸೋಗಿ ರತ್ನಮ್ಮನವರಿಗೆ ಸಲ್ಲುತ್ತದೆ.

ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಅದು ಬಯಲಾಟದಲ್ಲಿ ಸ್ತ್ರೀ ಪಾತ್ರಗಳನ್ನು ಪುರುಷರೇ ಅಭಿನಯಿಸುವ ಸಂದರ್ಭದಲ್ಲಿ ಮಹಿಳೆಯೊಬ್ಬಳು ಬಯಲಾಟದ ತಂಡವನ್ನು ಕಟ್ಟಿ, ಎಲ್ಲಾ ಪಾತ್ರಗಳನ್ನು ಮಹಿಳೆಯರೇ ನಿರ್ವಹಿಸಿದ್ದು ನಿಜಕ್ಕೂ ಒಂದು ದಾಖಲೆಯೇ ಎನ್ನಬಹುದು. ಅದುವೇ ವೀರೇಶ್ವರ ಜಾನಪದ ದೊಡ್ಡಾಟ ಸಂಘ ಸೋಗಿ. ಪುರುಷರಿಲ್ಲದೆ ಮಹಿಳೆಯರದೇ ಆದ ಶ್ರೀ ಜಗದಂಬಾ ಜಾನಪದ ಕಲಾತಂಡ ಸೋಗಿ ಇದರಲ್ಲಿ ಎಲ್ಲರೂ ಮಹಿಳೆಯರೇ ಇದ್ದಾರೆ. ಬಿ.ರತ್ನಮ್ಮ ಇವರೇ ಈ ತಂಡದ ನಾಯಕಿ. ಇವರು ಬಹುತೇಕವಾಗಿ ಪಾತ್ರಗಳನ್ನು ಮಹಿಳೆಯರೇ ಅಭಿನಯಿಸುವಂತೆ ಮಾಡಿದ್ದು ಒಂದು ರೋಚಕ ಅನುಭವ ಎನ್ನುತ್ತಾರೆ. ಸೋಗಿ ಗ್ರಾಮದ ಸುತ್ತಲಿನ ಪರಿಸರದ ಹತ್ತಾರು ಗ್ರಾಮದ ಆಸಕ್ತ ಮಹಿಳೆಯರನ್ನು ಒಂದೆಡೆ ಸೇರಿಸಿ ಅವರಿಗೆಲ್ಲಾ ಬಯಲಾಟದ ಗತ್ತು, ಹೆಜ್ಜೆ, ಮಾತಿನ ಸರಣಿ ಕುರಿತು ಅಗತ್ಯದ ತರಬೇತಿ ನೀಡಿ ಪ್ರಮೀಳಾ ದರ್ಬಾರ ಬಯಲಾಟವನ್ನು ಪ್ರದರ್ಶಿಸಿ ಇವರು ಜನ ಮನ್ನಣೆ ಗಳಿಸಿದ್ದಾರೆ.

ರಂಗಭೂಮಿಯಲ್ಲಿ ವಿಶೇಷ ಅನುಭವ ನೀಡುವ ಇವರು 'ಸೋಗಿರತ್ನ' ಎಂದೇ ಹೆಸರು ವಾಸಿಯಾಗಿದ್ದಾರೆ. ರಂಗಗೀತೆ, ದಾಸರ ಪದಗಳು ಸುಂದರವಾಗಿ ಹಾಡುತ್ತಾರೆ. ಜೊತೆಗೆ ನಾಟಕದ ನಿರ್ದೇಶಕ ಪರಿಣತಿ ಹೊಂದಿ ಕೆಲವು ನಾಟಕಗಳು ಇವರ ನಿರ್ದೇಶದಲ್ಲಿಯೆ ಪ್ರಯೋಗಗೊಳ್ಳುತ್ತಿವೆ. ಕಂದಗಲ್ಲು ಹನುಮಂತರಾಯರು, ಮಹಾಂತೇಶ ಶಾಸ್ತ್ರಿಗಳು, ಸಾಳುಂಕೆ, ಭಸ್ಮ, ಎಚ್.ಎನ್.ಹೂಗಾರ, ಮಾಂಡ್ರೆ, ನಲ್ವಡಿ ಶ್ರೀಕಂಠಶಾಸ್ತ್ರಿಗಳು ಹೀಗೆ ಹೆಸರಾಂತ ಕವಿಗಳ ಅಪರೂಪದ ನಾಟಕದಲ್ಲಿ ಕಾಣಿಸಿಕೊಂಡ ರತ್ನ ಮಲ್ಲಮ್ಮ, ಗಂಗಾ ಪಾತ್ರದಲ್ಲಿ ಹೆಸರು ಮಾಡಿದ್ದಾರೆ. ಇವರ ನಾಟಕ ಕಂಪನಿ ಇತ್ತೀಚಿನದಾದರೂ ಪುರುಷರೊಂದಿಗಿನ ತಂಡದಿಂದ ಪ್ರೇರೇಪಿತರಾಗಿ ಈ ತಂಡ ಕಟ್ಟಿದ್ದೇನೆ ಎಂದು ಸೋಗಿ ರತ್ನ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ತಂಡದವರೇ ಆದ ರತ್ನ ಬಹುತೇಕ ಗ್ರಾಮಾಂತರ ಪ್ರದೇಶದಲ್ಲಿ ವೃತ್ತಿ ಹವ್ಯಾಸಿ ನಾಟಕಗಳಲ್ಲಿ ನಟಿಸಿ ಇತ್ತೀಚಿಗೆ ಬುದ್ಧಿಜೀವಿಗಳೊಂದಿಗೆ ಹೊಸ ಅಲೆಯ ನಾಟಕದ ಪಾತ್ರವನ್ನೂ ನಿರ್ವಹಿಸಿದ್ದಾರೆ. ಮೈಸೂರು ದಸರಾದಲ್ಲಿ ಸಂಗ್ಯಾ-ಬಾಳ್ಯಾ ನಾಟಕದಲ್ಲಿ ಗಂಗಿ ಪಾತ್ರ ಹೊಸ ಖ್ಯಾತಿಯನ್ನು ತಂದಿದೆ.

ಮರಿಯಮ್ಮನಹಳ್ಳಿಯು ಕಲಾವಿದರಿಗೆ ತವರೂರು. ಬಹುತೇಕ ವೃತ್ತಿ ಹವ್ಯಾಸಿ ಕಲಾವಿದರು ಈ ಊರಿನವರೇ. ಈ ಕಲಾವಿದರು ರಾಜ್ಯ ಮಟ್ಟದ ಎಲ್ಲ ರಂಗವೇದಿಕೆಯಲ್ಲಿ ಹೆಸರು ಮಾಡಿದ್ದಾರೆ. ಇವರೆಲ್ಲರ ಅಭಿಲಾಷೆಯೇ 'ಲಲಿತ ಕಲಾರಂಗ'ದ ಜೀವಂತಿಕೆಗೆ ಕಾರಣವಾಗಿದೆ. ಸಂಗೀತಗಾರರು, ಚಿತ್ರ ಕಲಾವಿದರು, ನಟ-ನಟಿಯರು, ಹೀಗೆ ಪ್ರದರ್ಶಕ ಕಲೆಗಳ ಎಲ್ಲಾ ಪ್ರತಿಭೆಗಳು ಸಹಜವೆನ್ನುವಂತೆ ಈ ಊರಿನಲ್ಲಿ ಹುಟ್ಟಿಬಂದರೂ ಇಲ್ಲಿನ ಮಹಿಳಾ ಕಲಾವಿದೆಯರು ಹೊರಜಗತ್ತಿಗೆ ಚಿರಪರಿಚಿತರಾಗಿದ್ದಾರೆ. ಇಂಥಹ ಕ್ರಿಯಾಶೀಲರ

ಪರಿಸ್ಥಿತಿಯಲ್ಲೂ, ಕಲೆಯನ್ನು ಜೀವಂತವಾಗಿರಲು ಈ ಮಹಿಳಾ ಕಲಾವಿದರ ಸಾಧನೆಯೇ ಕಾರಣವಾಗಿದೆ. ಈರ್ವರ ಸಾಧನೆಯ ಪ್ರತಿಫಲವೇ ಲಲಿತಕಲಾರಂಗದ ಹುಟ್ಟಿಗೆ ಕಾರಣ. ಇದರ ರೂವಾರಿಯೇ ಮ.ಬ.ಸೋಮಣ್ಣನವರು.

೧೯೮೪ರಲ್ಲಿ ಹುಟ್ಟಿದ ಲಲಿತಕಲಾ ರಂಗ ಮೊದಲು ಈ ಭಾಗದಲ್ಲಿ ಪ್ರಚಲಿತವಿದ್ದ ಕಂಪನಿ ಶೈಲಿಯ ನಾಟಕಗಳನ್ನು ಪ್ರಯೋಗಿಸಿದರೂ ನಂತರದಿನಗಳಲ್ಲಿ ನಿರಂತರ ಪ್ರಯೋಗ ಶೀಲತೆಯ ತಂಡವಾಗಿ ರಾಜ್ಯದ ರಂಗಾಸಕ್ತರ ಗಮನವನ್ನು ಸೆಳೆಯಿತು. ರಂಗ ತರಬೇತಿ, ಶಿಬಿರ, ನಾಟಕೋತ್ಸವ, ನಾಟಕ ಸ್ಪರ್ಧೆ ಸಂಗೀತ ಗೋಷ್ಠಿ, ಜಾನಪದ ಕಲಾಪ್ರಕಾರಗಳ ಪ್ರದರ್ಶನ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸಂಘಟಿಸಿ ತನ್ನ ಅನುಭವ ಜನ್ಯ ವಲಯವನ್ನು ವಿಸ್ತರಿಸಿ ಕೊಂಡಿದೆ. ನಾಟಕ ಅಕಾಡೆಮಿಯು ನಡೆಸಿಕೊಟ್ಟ ಮೊಟ್ಟ ಮೊದಲ ಮಹಿಳಾ ರಂಗ ತರಬೇತಿ ಶಿಬಿರ ಈ ತಂಡದ ಆಶ್ರಯದಲ್ಲಿ ನಡೆಯಿತು ಎಂಬುದು ಇದರ ಇನ್ನೊಂದು ಹೆಗ್ಗಳಿಕೆ. ಈ ಲಲಿತಕಲಾ ತಂಡವು ಆದರ್ಶಪ್ರೇಮ, ಗಂಡನ ಆಜ್ಞೆ, ರೊಟ್ಟಿ ಋಣ, ಕಾಡು ಕುದುರೆ, ಊರು-ಕೇರಿ, ಬೆಳ್ಳಕ್ಕಿ ಹಿಂಡು ಬೆದರ್ಯಾವೋ ಮುಂತಾದ ನಾಟಕಗಳೇ ಅಲ್ಲದೇ ಎಲ್ಲಾ ಪ್ರಕಾರಗಳನ್ನು ಪ್ರಯೋಗಿಸಿದೆ.

ಹೀಗೆ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೆ ಬರುವ ಕಲಾವಿದರು ಇಲ್ಲಿಯೂ ಅಲ್ಲದೆ ಬೇರೆ ರಾಜ್ಯಗಳಿಗೂ ಹೋಗಿ ಅಲ್ಲಿ ತಮ್ಮ ಕಲೆಯನ್ನು ಮೆರೆದಿದ್ದಾರೆ. ಅಲ್ಲದೆ ನಾಟಕ ಕಂಪನಿಯನ್ನು ಕಟ್ಟಿ ಅವುಗಳನ್ನು ಪ್ರಯೋಗಿಸಿ ತಮ್ಮ ದಾಖಲೆಯನ್ನು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಇಂದಿನ ಸಾಮಾಜಿಕ ಸಂದರ್ಭಗಳೂ ಭಿನ್ನವಾಗಿಲ್ಲ. ನಿರ್ಬಂಧ ಕಟ್ಟಳೆ ಇನ್ನೂ ಒತ್ತಡ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಇಂದಿನ ದೂರದರ್ಶನ ಹಾವಳಿ ನವೀನೀಕರಣ, ಬದಲಾಗಿರುವ ನಮ್ಮ ಸಾಮಾಜಿಕ ಸ್ಥಿತ್ಯಂತರಗಳು ಸ್ತ್ರೀಯರು ಹೆಚ್ಚು ಅಧ್ಯಯನ ಮಾಡಿದರೂ, ಸರಕಾರ ಕಾನೂನಿನ ಮೂಲಕ ಸಮಾನತೆ ನೀಡಿದರೂ ಸ್ತ್ರೀ ಸ್ವಾತಂತ್ರ್ಯಕ್ಕೆ ಇನ್ನೂ ಹಲವಾರು ಅಡ್ಡಿ ಆತಂಕಗಳು ಹೆಚ್ಚು ಹೆಚ್ಚು ಬೇರು ಬಿಟ್ಟಿವೆ. ಇಂಥ ವ್ಯವಸ್ಥೆಯಲ್ಲಿಯೂ ಮಹಿಳೆಯರು ಮುಂದೆ ಬಂದು ತಮ್ಮ ಕಲೆಯ ಜೀವಂತಿಕೆಗೆ ಆಧಾರವಾಗಿ ಮುನ್ನಡೆದು ತಮ್ಮ ವೃತ್ತಿಯನ್ನೇ ಕಲೆಗೆ ಮೀಸಲಿಟ್ಟು ರಂಗಭೂಮಿಗಾಗಿ ದುಡಿದು ಜೀವನ ಸಾಗಿಸಿದವರು ಇಡೀ ಕರ್ನಾಟಕದಲ್ಲಿಯೇ ಹೆಚ್ಚು ರಂಗನಟಿಯರು ಇದ್ದಾರೆ. ಇವರು ಕರ್ತವ್ಯನಿಷ್ಠರಾಗಿ ತಮ್ಮ ಸೇವೆಯನ್ನು ರಂಗಭೂಮಿಗೆ ಮೀಸಲಿಟ್ಟು ತಂಡಗಳನ್ನು, ಕಂಪನಿಗಳನ್ನು ಕಟ್ಟಿ ರಾಜ್ಯಮಟ್ಟದಲ್ಲಿ ಬಳ್ಳಾರಿ ಜಿಲ್ಲೆಯ ರಂಗಭೂಮಿಯನ್ನು ಎತ್ತರಕ್ಕೆ ಏರಿಸಿದ್ದಾರೆ.

ಅಧ್ಯಾಯ ೬

ರಂಗನಟಿಯರ ವೈವಿಧ್ಯತೆ

ಅಧ್ಯಾಯ ೬

ರಂಗನಟಿಯರ ವೈವಿಧ್ಯತೆ

ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ವೈವಿಧ್ಯತೆಗಳಿಂದ ರಂಗನಟಿಯರು ಕೂಡಿದ್ದಾರೆ. ವಿಜಯನಗರ ಸಾಮ್ರಾಜ್ಯದಿಂದ ರಂಗನಟಿಯರು ರಂಗಭೂಮಿಯನ್ನು ಪ್ರವೇಶಿಸಿದ್ದು ಇಂದಿನವರೆಗೂ ತಮ್ಮ ವೈವಿಧ್ಯತೆಯಿಂದ ರಂಗಭೂಮಿ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಇದರಲ್ಲಿ ಹಲವಾರು ಪ್ರತಿಭಾವಂತರೂ ಇದ್ದಾರೆ. ಜನಪದ, ವೃತ್ತಿ, ಹವ್ಯಾಸಿ, ಆಧುನಿಕ ಹಾಗೂ ದುರಂತ ಈ ಎಲ್ಲಾ ವೈವಿಧ್ಯತೆಗಳಲ್ಲಿ ರಂಗನಟಿಯರು ಬೆಳೆದುಬಂದಿದ್ದಾರೆ. ಬಳ್ಳಾರಿ ರಂಗಭೂಮಿ ಚರಿತ್ರೆಯಲ್ಲಿ ಈ ಎಲ್ಲಾ ಕ್ಷೇತ್ರಗಳಲ್ಲಿ ನಟಿಯರು ತಮ್ಮದೇ ಆದ ಅಭಿನಯದ ಛಾಪನ್ನು ಮೂಡಿಸಿದ್ದಾರೆ.

ಆಧುನಿಕತೆ ಬೆಳೆದಂತೆಲ್ಲಾ ಜನಪದ ರಂಗಭೂಮಿ ನಶಿಸದೇ ಪರ್ಯಾಯವಾಗಿ ಮರುಹುಟ್ಟನ್ನು ಕಂಡುಕೊಂಡಿದೆ. ಈ ನಿಟ್ಟಿನಲ್ಲಿ ಜನಪದ ವೃತ್ತಿ ಹಾಗೂ ಹವ್ಯಾಸಿ, ಆಧುನಿಕ ಈ ಎಲ್ಲಾ ಕ್ಷೇತ್ರಗಳಲ್ಲಿ ಬಳ್ಳಾರಿ ಜಿಲ್ಲೆಯ ನಟಿಯರೆಂದೇ ಇಡೀ ಕರ್ನಾಟಕದಲ್ಲೆಲ್ಲಾ ಹೆಸರುವಾಸಿಯಾಗಿದ್ದಾರೆ. ಅವರೆಂದರೆ ಡಿ.ಸಂಜೀವಮ್ಮ, ಡಿ.ಹನುಮಂತಮ್ಮ, ಬಳ್ಳಾರಿ ಲಲಿತಮ್ಮ, ಬಳ್ಳಾರಿ ಸುಜಾತಮ್ಮ, ಭವಾನಿ, ಕೆ.ವರಲಕ್ಷ್ಮಿ, ಕಪ್ಪಗಲ್ ಹನುಮಂತಮ್ಮ, ಡಿ.ನರಸೂಬಾಯಿ (ಸೂತ್ರದಾರಳು) ಚಾಮುಂಡೇಶ್ವರಿ ಯಳ್ಳಾರ್ತಿ, ಬಿ.ಜಯಮ್ಮ, ಸುಭದ್ರಮ್ಮ ಮನ್ಸೂರು, ಕೆ.ನಾಗರತ್ನಮ್ಮ, ಪಿ.ಪದ್ಮ, ರತ್ನ ಸೋಗಿ, ಬಿ.ಶಿವಕುಮಾರಿ, ಡಿ.ಸಣ್ಣಹನುಮಕ್ಕ ಮರಿಯಮ್ಮನಹಳ್ಳಿ ಈ ಎಲ್ಲಾ ರಂಗನಟಿಯರು ಬಳ್ಳಾರಿ ಜಿಲ್ಲೆಯಲ್ಲಿರುವ ವೈವಿಧ್ಯತೆಗಳಿಂದ ಕೂಡಿದ ರಂಗನಟಿಯರು.

೬.೧. ಜನಪದ ರಂಗ ಕಲಾವಿದೆಯರು

ಮಹಿಳೆ ರಂಗದ ಮೇಲೆ ಕಾಣಿಸಿಕೊಂಡಿದ್ದು ಮೊಟ್ಟ ಮೊದಲು ದಾಸರಾಟದಲ್ಲಿ ಮಾತ್ರ. ಮುಂದೆ ಶ್ರೀಕೃಷ್ಣ ಪಾರಿಜಾತ, ಸಂಗ್ಯಾ-ಬಾಳ್ಯಾ, ರಾಧಾನಾಟ ಮುಂತಾದ ಜನಪದ ರಂಗ ಪ್ರಕಾರಗಳು ಪ್ರಚಾರಕ್ಕೆ ಬಂದಾಗ ಅವುಗಳ ಸ್ತ್ರೀ ಪಾತ್ರಗಳಿಗೆ ದಾಸರ ಹೆಣ್ಣುಮಕ್ಕಳನ್ನು ಬಳಸಿಕೊಳ್ಳುವ ವಿಚಾರ ಮಾಡಿತು. ಅದು ಕಾರ್ಯಗತವೂ ಆಯಿತು.

ನಮ್ಮ ಪ್ರಾಚೀನ ಜನಪದ ರಂಗ ಪ್ರಕಾರಗಳ ಸ್ವರೂಪದ ಬಗ್ಗೆ ನಮಗೆ ಸ್ಪಷ್ಟ ಚಿತ್ರ ಲಭ್ಯವಿಲ್ಲ. ಪಗರಣವೇ ಅಂದಿನ ಪ್ರಮುಖ ಮತ್ತು ಜನಪ್ರಿಯ ರಂಗ ಪ್ರಕಾರವಾಗಿತ್ತೆಂದು ಭಾವಿಸಬಹುದು. ಈ ಪಗರಣ ಇಂದಿನ ಇತರ ರಂಗ ಪ್ರಕಾರಗಳಂತೆ ಶಿಸ್ತಿಗೆ ಒಳಪಟ್ಟ ಪ್ರಯೋಗವಾಗಿರಲಿಲ್ಲ. ಯಾವುದೇ ಒಂದು ಸಾಮಾಜಿಕ ಪೌರಾಣಿಕ ಪ್ರಸಂಗವನ್ನು ಆಶು ಸಂಭಾಷಣೆ ಮತ್ತು ಆಶು ಹಾಡುಗಳ ಮೂಲಕ ಬೀದಿಯಲ್ಲಿ ಪ್ರಯೋಗಿಸುವ ಲಘು ಪ್ರಸಂಗವಾಗಿತ್ತು. ಇಂಥ ಪ್ರಸಂಗಗಳಲ್ಲಿ ಸ್ತ್ರಿ ಪಾತ್ರಗಳು ಇದ್ದಿರಲೇಬೇಕಲ್ಲವೇ ಅವುಗಳನ್ನು ಯಾರು ವಹಿಸುತ್ತಿದ್ದರು? ಸ್ತ್ರೀ ಪಾತ್ರಗಳನ್ನು ಪುರುಷರೇ ವಹಿಸುತ್ತಿದ್ದರು. ಮೂರು ದಿನದ ಪಗರಣದ ಸ್ತ್ರೀ ಪಾತ್ರಕ್ಕಾಗಿ ಗಡ್ಡ ಮೀಸೆ ಬೋಳಿಸಿಕೊಂಡುದರ ಪ್ರಸ್ತಾಪ ನಯಸೇನನ ಧರ್ಮಾಮೃತದಲ್ಲಿದೆ. ಹೀಗೆ ಸ್ತ್ರೀ ಪಾತ್ರಗಳನ್ನು ಪುರುಷರು ವಹಿಸುವ ಪರಂಪರೆ ಕಳೆದ ಶತಮಾನದವರೆಗೆ ಮುಂದುವರೆದುಕೊಂಡು ಬಂದಿತು. ಸ್ತ್ರೀ ಸಾಮಾಜಿಕ ಚಟುವಟಿಕೆಗಳಲ್ಲಿ ಸಾಂಸ್ಕೃತಿಕ ಸಂದರ್ಭಗಳಲ್ಲಿ ಮುಕ್ತವಾಗಿ ಪಾಲ್ಗೊಳ್ಳಲು ಸಾಧ್ಯವಾಗುವಂತಹ ನಿರ್ಬಂಧ ಗಳು ಇದ್ದುದೇ ಇದಕ್ಕೆ ಕಾರಣವಾಗಿದೆ. ಕಳೆದ ಶತಮಾನದಲ್ಲಿ ಹೊಸ ಜನಪದ ರಂಗ ಪ್ರಕಾರಗಳು ಹುಟ್ಟಿ ಕೊಂಡವು. ಅವುಗಳ ಸ್ವರೂಪ ಮತ್ತು ಆಕಾರಗಳು ಸ್ತ್ರೀ ಪಾತ್ರಕ್ಕೆ ಸ್ತ್ರೀಯರನ್ನೇ ಆಪೇಕ್ಷಿಸಿದವು. ಬದಲಾದ ಸಾಮಾಜಿಕ ಪರಿಸರ ಮತ್ತು ಅನಿವಾರ್ಯತೆಗಳಿಂದಾಗಿ ಮಹಿಳೆಯರು ಜನಪದ ರಂಗಭೂಮಿಗೆ ಪ್ರವೇಶಿಸ ಬೇಕಾಯಿತು. ಇಂಥ ಸಂದರ್ಭಕ್ಕೆ ದಾಸರಾಟ ಕಾರಣವಾದುದನ್ನು ನಾವು ಮರೆಯಕೂಡದು.

ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ದಾಸ ಜನಾಂಗವು ನಮ್ಮ ರಂಗಭೂಮಿಗೆ ನೀಡಿರುವ ಕೊಡುಗೆ ಅಪೂರ್ವವಾದುದು. ದಾಸರು ಸಾಮಾನ್ಯವಾಗಿ ಅಲೆಮಾರಿಗಳು. ಊರಿಂದೂರಿಗೆ ಸಂಚರಿಸುತ್ತ ಅಲ್ಲಲ್ಲಿ ವಸತಿ ಹೂಡಿ ರಾತ್ರಿ ಹೊತ್ತು ಗ್ರಾಮಸ್ಥರ ಮನರಂಜನೆಗಾಗಿ ಆಟ ಆಡುತ್ತಿದ್ದರು. ಇದಕ್ಕೆ ದಾಸರಾಟ ಎಂದು ಹೆಸರು. ಇದು ನಿರ್ದಿಷ್ಟ ಚೌಕಟ್ಟಿಗೊಳಪಟ್ಟಂಥದ್ದಲ್ಲ. ಕಥೆ ಹಾಡು ಮಾತುಗಳಲ್ಲಿ ಕ್ರಮಬದ್ಧತೆ ಇಲ್ಲದ್ದು ಒಟ್ಟಾರೆ ಇದೊಂದು ಮೋಜಿನ ಕಾಲಯಾಪನ ಆದ್ದರಿಂದಲೇ 'ದಾಸರಾಟ ಆಟವಲ್ಲ ದ್ವಾಸಿ ಊಟ ಊಟವಲ್ಲ' ಎಂಬ ಗಾದೆ ಮಾತು ರೂಢಿಗೆ ಬಂದಿತು. ದಾಸರಾಟದಲ್ಲಿ ದಾಸರ ಹೆಣ್ಣು ಮಕ್ಕಳು ಪಾತ್ರವಹಿಸುತ್ತಿದ್ದರು. ಅವರು ಸಾಮಾನ್ಯವಾಗಿ ಚಲುವೆಯರು, ಹಾಡು ಮಾತುಗಾರಿಕೆ ಬಲ್ಲವರು. ಇಂಥವರ ಆಕರ್ಷಣೆ ಯಿಂದಾಗಿ ದಾಸರಾಟಕ್ಕೆ ಕಳೆ ಬಂದಿತ್ತು. ನಮ್ಮ ಗ್ರಾಮೀಣ ಸಮುದಾಯದ ಮಟ್ಟಿಗೆ ಹೇಳುವುದಾದರೆ ಸ್ತ್ರೀ ರಂಗದ ಮೇಲೆ ಕಾಣಿಸಿಕೊಂಡದ್ದು ಮೊಟ್ಟ ಮೊದಲು ದಾಸರಾಟದಲ್ಲಿ ಮಾತ್ರ. ಮುಂದೆ ಈ ಪ್ರದೇಶದಲ್ಲಿ ಶ್ರೀ ಕೃಷ್ಣ ಪಾರಿಜಾತ, ಸಂಗ್ಯಾ-ಬಾಳ್ಯಾ, ರಾಧಾನಾಟ ಮುಂತಾದ ಜನಪದ ರಂಗ ಪ್ರಕಾರಗಳು ಪ್ರಚಾರಕ್ಕೆ ಬಂದಾಗ ಅವುಗಳ ಸ್ತ್ರೀ ಪಾತ್ರಗಳಿಗೆ ದಾಸರ ಹೆಣ್ಣುಮಕ್ಕಳನ್ನು ಬಳಸಿಕೊಳ್ಳುವ ವಿಚಾರ ಮಾಡಿತು. ಅದು ಕಾರ್ಯಗತವೂ ಆಯಿತು. ಹೀಗೆ ಪ್ರಥಮ ಬಾರಿಗೆ ದಾಸರ ಹೆಣ್ಣುಮಕ್ಕಳು ಜನಪದ ರಂಗಭೂಮಿ ಪ್ರವೇಶಿಸಿ ಅದಕ್ಕೆ ಹೊಸ ಆಯಾಮ ಕಲ್ಪಿಸಿ ಕೊಟ್ಟರು. ಬಯಲಾಟಗಳ ಹಂತ ದಾಟಿ ಕಂಪನಿ ನಾಟಕಗಳು ನಮ್ಮ ಹಳ್ಳಿಗಳನ್ನು ಆವರಿಸಿದಾಗ ಅಂಥ ನಾಟಕಗಳಲ್ಲಿ ಈ ಹೆಣ್ಣು ಮಕ್ಕಳು ಪಾತ್ರ ಮಾಡತೊಡಗಿದರು. ಇಂದು ಇಂಥವರ ದೊಡ್ಡ ಪಡೆಯೇ ಇದೆ.

ಶ್ರೀ ಕೃಷ್ಣಪಾರಿಜಾತ ಉತ್ತರ ಕರ್ನಾಟಕದ ಒಂದು ಜನಪ್ರಿಯ ಜನಪದ ರಂಗ ಪ್ರಕಾರವಾಗಿದೆ. ಇದನ್ನು ಬೆಳಗಾವಿ ಜಿಲ್ಲೆಯ ಕುಲಗೋಡ ತಮ್ಮಣ್ಣನು ಕಳೆದ ಶತಮಾನದ ಉತ್ತರಾರ್ಧದಲ್ಲಿ ರಂಗಭೂಮಿಗೆ ತಂದನು. ತನ್ನ ಮೊದಲ ಪ್ರಯತ್ನದಲ್ಲಿಯೇ ಅವನು ಸ್ತ್ರೀ ಪಾತ್ರಕ್ಕೆ ಸ್ತ್ರೀಯರನ್ನು ಆಯ್ಕೆಮಾಡಿಕೊಂಡದ್ದು ಚಾರಿತ್ರಿಕ ಅಂಶವಾಗಿದೆ. ಅವನೊಂದಿಗೆ ಹಗಲೆಣೆಯಾಗಿ ದುಡಿದು ಶ್ರೀಕೃಷ್ಣಪಾರಿಜಾತವನ್ನು ಉತ್ತರ ಕರ್ನಾಟಕದ ಮೂಲೆ ಮೂಲೆಗೂ ಪಸರಿಸಿದ ಕೀರ್ತಿ ಕೌಜಲಗಿ ನಿಂಗಮ್ಮನೆಂಬ ಕಲಾವಿದೆಗೆ ಸಲ್ಲುತ್ತದೆ. ನಿಂಗಮ್ಮ ಒಳ್ಳೆಯ ಹಾಡುಗಾರ್ತಿ. ಅಭಿನಯ ಚತುರೆ. ಅವಳ ಸತ್ಯಭಾಮ ಮತ್ತು ಕೊರವಂಜಿ ಪಾತ್ರಗಳು ರಂಗಚರಿತ್ರೆಯಲ್ಲಿ ಅಚ್ಚಳಿಯದ ಗುರುತು ಮೂಡಿಸಿವೆ.

ಈ ಶತಮಾನದ ಆರಂಭದ ದಶಕಗಳನ್ನು ನಿಂಗಮ್ಮನ ದಶಕಗಳೆಂದು ಕರೆಯಬಹುದಾಗಿದೆ. ಅಷ್ಟೊತ್ತಿಗೆ ಅನೇಕ ಪಾರಿಜಾತ ಕಂಪನಿಗಳು ಹುಟ್ಟಿಕೊಂಡಿದ್ದವು. ಆದರೆ ಅವು ಯಾವುವೂ ನಿಂಗಮ್ಮನ ಮೇಳದ ಮುಂದೆ ಉಜ್ವಲಗೊಳ್ಳಲಿಲ್ಲ. ನಿಂಗಮ್ಮನ ಪಾರಿಜಾತ ಕಂಪನಿ ಕಲಾವಿದರ ತರಬೇತಿ ಕೇಂದ್ರವಾಗಿತ್ತು. ಪಾರಿಜಾತದ ಹೆಸರಾಂತ ಕಲಾವಿದರಲ್ಲಿ ಬಹಳಷ್ಟು ಜನರು ನಿಂಗಮ್ಮನ ಗರಡಿಯಲ್ಲಿ ತಯಾರಾದವರು. ನವಲಗಟ್ಟಿ ಸಾಂವಕ್ಕ, ಚಂದ್ರವ್ವ ಮುಂತಾದ ಧೀಮಂತ ಕಲಾವಿದೆಯರನ್ನು ಪಾರಿಜಾತ ಪ್ರಪಂಚಕ್ಕೆ ನೀಡಿದ ನಿಂಗಮ್ಮ ಒಂದು ಪರಂಪರೆಯನ್ನು ಸ್ಥಾಪಿಸಿ ಬೆಳೆಸಿದರು. ಇಂದು ಪಾರಿಜಾತದಲ್ಲಿ ಸ್ತ್ರೀ ಪಾತ್ರಗಳನ್ನು ಸ್ತ್ರೀಯರೆ ವಹಿಸುತ್ತಾರೆ.

ಇತ್ತೀಚಿಗೆ ಬಳ್ಳಾರಿಯಲ್ಲಿ ಸ್ತ್ರೀ ಪಾತ್ರಗಳನ್ನು ಸ್ತ್ರೀಯರೆ ನಿರ್ವಹಿಸುವ ಪರಂಪರೆ ಬೆಳೆದು ಬಂದಿದೆ. ದೊಡ್ಡಾಟದ ಚಿಕ್ಕ ಪುಟ್ಟ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರೂ ಮುಖ್ಯ ಪಾತ್ರಗಳಿಗೆ ಮಾತ್ರ ಹೆಣ್ಣು ಮಕ್ಕಳನ್ನು ಕರೆತರುತ್ತಾರೆ. ಈ ಕಲಾವಿದೆಯರು ಹಾಡುಗಾರಿಕೆಯಲ್ಲಿ ಪರಿಣತರು. ಅಭಿನಯದ ಕಡೆಗೆ ಗಮನವಿಲ್ಲ, ಕುಣಿತ ಬರುವುದೇ ಇಲ್ಲ. ಇವರಿದ್ದರೆ ಮಾತ್ರ ದೊಡ್ಡಾಟ ಕಳೆಗಟ್ಟುತ್ತದೆ ಎಂಬ ನಂಬಿಕೆ ದೃಢವಾಗಿದೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಮರಿಯಮ್ಮನಹಳ್ಳಿಗಳು ಈ ಸ್ತ್ರೀ ಕಲಾವಿದೆಯರ ಕೇಂದ್ರಗಳಾಗಿವೆ. ಇವರು ಬಳ್ಳಾರಿ ಜಿಲ್ಲೆಯಲ್ಲಿ ಅಷ್ಟೆ ಅಲ್ಲ ಪಕ್ಕದ ರಾಯಚೂರು ಜಿಲ್ಲೆಗೂ ಪಾದ ಬೆಳೆಸಿದ್ದಾರೆ (ಸಂ: ಎಚ್.ಎಲ್.ನಾಗೇಗೌಡ, ಮಡಲಕ್ಕಿ, ಕರ್ನಾಟಕ ಜನಪದ ಟ್ರಸ್ಟ್, ಬೆಂಗಳೂರು, ೧೯೯೨).

ಹೀಗೆ ಇಡೀ ಕರ್ನಾಟಕದಲ್ಲೆಲ್ಲಾ ಮಹಿಳೆಯರು ಜನಪದ ರಂಗಭೂಮಿ ದೊಡ್ಡಾಟದಿಂದಲೇ ಪ್ರವೇಶಮಾಡಿ ನಂತರದ ದಿನಗಳಲ್ಲಿ ವೃತ್ತಿರಂಗ ಕಂಪನಿಗಳಲ್ಲಿ ಹಾಗೂ ಹವ್ಯಾಸಿ ಕಲಾವಿದರ ಗ್ರಾಮೀಣ ರಂಗಭೂಮಿಗಳಲ್ಲಿ ಮಹಿಳೆಯರಿಂದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷವಾಗಿ ವೃತ್ತಿರಂಗ ಭೂಮಿಯಲ್ಲಿ ಇರುವ ನಟಿಯರೇ ಮೊದಮೊದಲು ಸಾಮಾಜಿಕ ನಾಟಕಗಳನ್ನೇ ಮಾಡುತ್ತಿದ್ದು, ನಂತರದ ದಿನಗಳಲ್ಲಿ ಅಂದರೆ ವಯಸ್ಸಾದಂತೆ ದೊಡ್ಡಾಟಗಳಿಗೆ ಪಾತ್ರ ಮಾಡಲು ಹೋಗುತ್ತಿದ್ದಾರೆ. ಕಾರಣ ಬಳ್ಳಾರಿ

ಆಂಧ್ರ ಗಡಿಭಾಗದಲ್ಲಿಯ ಜನರು, ಶಿರಗುಪ್ಪಾ ಕಡೆಯ ಹವ್ಯಾಸಿ ಕಲಾವಿದರು ನಟಿಯರಿಗೆ ಸಾಮಾಜಿಕ ನಾಟಕಗಳಲ್ಲಿ ಹೆಚ್ಚು ಸಂಭಾವನೆ ಕೊಡುವ ಕಾರಣದಿಂದಲೂ ಬಳ್ಳಾರಿ, ವಿರೂಪಾಪುರ, ಕೂಡ್ಲಿಗಿ, ಹೊಸಪೇಟೆ, ಕುಡುತಿನಿಗಳಲ್ಲಿ ನಟಿಯರು ದೊಡ್ಡಾಟಗಳಲ್ಲಿ ಪಾತ್ರವಹಿಸುತ್ತಿದ್ದಾರೆ. ವಿಶೇಷವಾಗಿ ಸುಜಾತಮ್ಮ ಎಂಬ ನಟಿಯು ಈಗ ೬೫ ವರ್ಷದ ತರುಣಿ, ಬಯಲಾಟದ ಹೆಸರನ್ನು ಎತ್ತಿದರೆ ಸಾಕು, ತಕ್ಷಣಕ್ಕೆ ಪಾತ್ರ ಕಟ್ಟಿಬಿಡುವ ಉತ್ಸಾಹ ತೋರುತ್ತಾರೆ. ಬಯಲಾಟ (ದೊಡ್ಡಾಟ) ಆಡುವ ಜಿಲ್ಲೆಗಳ ಪೈಕಿ ಎರಡು ಮೂರು ಜಿಲ್ಲೆಗಳಲ್ಲಿ ಮಾತ್ರ ಸ್ತ್ರೀಯರು ಪಾತ್ರ ಕಟ್ಟುತ್ತಾರೆ. ಸ್ತ್ರೀ ಪಾತ್ರ ಕುಣಿಯುವುದು ಕೆಲವೇ ಸ್ಥಳಗಳಲ್ಲಿ ಆದರೂ ಅಪರೂಪಕ್ಕೆ ಆದರೆ ಹಾಡುಗಾರಿಕೆ ಹಾಗು ಅಭಿನಯವನ್ನಷ್ಟೇ ಜೀವಾಳ ಮಾಡಿಕೊಂಡಿರುವ ಬಳ್ಳಾರಿಯ ಸುಜಾತಮ್ಮ ತಮ್ಮ ೧೨ ನೇ ವಯಸ್ಸಿನಿಂದಲೇ ಬಯಲಾಟ ಕಲಾವಿದೆಯಾಗಿ ಕರ್ನಾಟಕ ಹಾಗೂ ಆಂಧ್ರದ ಮೂರ್‍ನಾಲ್ಕು ಜಿಲ್ಲೆಗಳಲ್ಲಿ ಲೆಕ್ಕವಿಲ್ಲದಷ್ಟು ಆಟಗಳಲ್ಲಿ ಪಾತ್ರ ಮಾಡಿದ್ದಾರೆ. ಇವರ ಕಲಾಸೇವೆ ಗುರುತಿಸಿ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯು ೧೯೭೭ರಲ್ಲಿ ಪ್ರಶಸ್ತಿಯನ್ನು ಕೊಟ್ಟಿದೆ. ಪೌರಾಣಿಕ ನಾಟಕಗಳಲ್ಲೂ ಆಗಾಗ ಪಾತ್ರ ಮಾಡಿ ಸೈ ಎನಿಸಿಕೊಂಡ ಇವರು ಇತ್ತೀಚಿಗೆ ವೃತ್ತಿ ನಟಿಯರನ್ನು ಸೇರಿಸಿ, ತಾವೇ ನಿರ್ದೇಶಿಸಿ 'ಅಶ್ವತ್ಥಾಮನ' ಪಾತ್ರವನ್ನು ಮಾಡಿ ರಕ್ತರಾತ್ರಿ ನಾಟಕವನ್ನು ಯಶಸ್ವಿಗೊಳಿಸಿದ್ದಾರೆ. ವಿಶೇಷ ಅನುಭವ ಕೇಳಿದಾಗ ಆಂಧ್ರದ ಕಡೆ ಗಾಂಧಾರಿಪಾತ್ರ ಮಾಡಲು ಕರೆಸಿದಾಗಲೂ "ದುಡ್ಡು ಸುರಿದು ಕರೆಸಿದ್ದೀವಿ, ಡಾನ್ಸ್ ಮಾಡು" ಎಂದು ಒತ್ತಾಯಿಸುವುದನ್ನು ನೋವಿನಿಂದ, ಮುಜುಗರದಿಂದ ಹೇಳುತ್ತಾರೆ. ಬಯಲಾಟದಲ್ಲಿ ಹೊಸದೇನನ್ನಾದರೂ ಮಾಡಲು ಈ ಇಳಿವಯಸ್ಸಿನಲ್ಲೂ ಹಾತೊರೆಯುವ ಇವರನ್ನು ತಂಡಗಳು ಸರಿಯಾಗಿ ಬಳಸಿಕೊಳ್ಳಬೇಕಷ್ಟೇ (ಕೆ.ಮಹಾಬಲೇಶ್ವರ, ನಾನೊಂದ ಕನಸಕಂಡೆ, ಪುಟ ೬೫).

ಬಳ್ಳಾರಿ ಜಿಲ್ಲೆಯಲ್ಲಿ ವೃತ್ತಿರಂಗಭೂಮಿಗೆ ಎಷ್ಟು ಮಹತ್ವವಿದೆಯೋ ಜನಪದ ರಂಗಭೂಮಿಗೂ ಅಷ್ಟೇ ಮಹತ್ವವಿದೆ. ಆದ್ದರಿಂದ ಬಯಲಾಟಗಳಲ್ಲಿ ಇಂದಿಗೂ ಸ್ತ್ರೀಯರೇ ಪಾತ್ರ ಮಾಡುತ್ತಿದ್ದು, ಅದರಲ್ಲಿ ತಂಡಗಳನ್ನು ಕಟ್ಟಿಕೊಂಡು, ಅಸ್ಪೃಶ್ಯರೆನಿಸಿಕೊಂಡ ಹರಿಜನರು ಕೂಡ (ಕಪ್ಪಗಲ್ ಮಾದಿಗರು) ದಾಸರಾಟದಲ್ಲಿ ನಟಿಸುತ್ತಿದ್ದರು. ನರಸೂಬಾಯಿ ಎಂಬ ನಟಿಯೇ ಸೂತ್ರಧಾರಿಯಾಗಿದ್ದಳು. "ಮೂಡಲಪಾಯ ರಂಗಭೂಮಿ ಹವ್ಯಾಸಿ ಕಲಾವಿದರಿಂದಲೇ ಹುಟ್ಟಿ ಬೆಳೆದು ಬದುಕಿರುವಂಥದೆಂಬುದು ಸರ್ವಸಾಮಾನ್ಯ ಗ್ರಹಿಕೆ. ಆದರೆ, ಬಳ್ಳಾರಿ ಜಿಲ್ಲೆಯ ಕಪ್ಪಗಲ್ಲಿನ ಹರಿಜನರ ಗುಂಪಿನವರು ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದರೆಂದರೆ ಬಹಳ ಜನರಿಗೆ ಆಶ್ಚರ್ಯವೆನಿಸಬಹುದು. ಬರೀ ನಾಲ್ಕೈದು ಜನರಿಂದ ಈ ಕಂಪನಿ ನಡೆಯುತ್ತಿತ್ತಂತೆ. ವಿಚಿತ್ರವೆಂದರೆ ಹೆಣ್ಣು ಮಗಳೊಬ್ಬಳು 'ಸೂತ್ರಧಾರ'ಳಾಗಿದ್ದಳು. ಇವರು ಬಳ್ಳಾರಿ ಜಿಲ್ಲೆಯ ಹೊರಗೂ ಹೋಗಿ ಆಟವಾಡಿ ಬಂದುದುಂಟು. ಈಗ ಈ ಕಂಪನಿ ನಾಮಾವಶೇಷವಾಗಿದೆ. ಹಿಂದೊಮ್ಮೆ ಈ ಕಂಪನಿ ಹಾನಗಲ್ಲಿಗೆ ಬಂದು ಆಟವಾಡಿತ್ತೆಂದೂ, ಆ ಸ್ತ್ರೀ ಸೂತ್ರಧಾರಿಣಿಯ ಹೆಸರು 'ನರಸೂಬಾಯಿ' ಎಂದೂ ಹಾನಗಲ್ಲಿನ ಬಯಲಾಟದ ಸೂತ್ರಧಾರ ಶ್ರೀ ಕರೆಪ್ಪನವರು ಹೇಳುತ್ತಾರೆ (ಲೇ: ಡಾ.ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ಪುಟ, ೮೯).

ಈ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಜನಪದ ದೊಡ್ಡಾಟಗಳಲ್ಲಿ ಮಹಿಳೆಯರು ಪಾತ್ರವಹಿಸುತ್ತಿದ್ದು, ನಂತರದ ದಿನಗಳಲ್ಲಿ ಈಗೀಗ ಹೆಚ್ಚಾಗಿ ನಟಿಯರು ಬಳ್ಳಾರಿ ಜಿಲ್ಲೆಯಲ್ಲಿ ಜನಪದ ರಂಗಭೂಮಿಗೆ ಕೊಡುಗೆಯನ್ನು ನೀಡಿದ್ದಾರೆ. ಇಡೀ ಕರ್ನಾಟಕದಲ್ಲಿ ಕೌಜಲಗಿ ನಿಂಗವ್ವನಿಂದ ಈ ಪರಂಪರೆಯು ಪ್ರಾರಂಭವಾಗಿ ವೃತ್ತಿರಂಗಭೂಮಿಯಲ್ಲಿ ಎಷ್ಟೋ ನಟಿಯರು ಸೇವೆಯನ್ನು ಸಲ್ಲಿಸಿದ್ದು ಈಗೀಗ ಬಳ್ಳಾರಿ ಜಿಲ್ಲೆಯಲ್ಲಿ ಹವ್ಯಾಸಿ ಕಲಾವಿದೆಯರ ಸಂಖ್ಯೆ ಹೆಚ್ಚುತ್ತಿರುವುದು ಸಂತಸದ ಸಂಗತಿಯಾದರೂ ವೃತ್ತಿರಂಗಭೂಮಿಯಲ್ಲಿ ದೊಡ್ಡಾಟಗಳಲ್ಲಿ ಈ ನಟಿಯರ ಸಂಖ್ಯೆಯು ಕ್ರಮೇಣವಾಗಿ ಕ್ಷೀಣಿಸುತ್ತಿದೆ. ಅವರ ಭವಿತವ್ಯದ ದೃಷ್ಟಿಯಿಂದ ನೋಡಿದಾಗ, ಇಂದು ನಟಿಯರ ಮುಂದಿನ ಸ್ಥಿತಿಗತಿ ಏನು? ನಟಿಯ ಭವಿತವ್ಯವೇನೂ ಈ ರಂಗ ಪರಂಪರೆಯು ಮುಂದುವರಿಯಲು ಇರಬೇಕಾದ ಸಾಧಕ ಭಾದಕಗಳೇನು? ಈ ಎಲ್ಲಾ ಪ್ರಶ್ನೆಗೆ ಇಂದು ಸರಕಾರ, ಸರಕಾರೇತರ ಸಂಘ-ಸಂಸ್ಥೆಗಳು, ಕಲಾವಿದ-ಕಲಾವಿದೆಯರೂ, ರಂಗಾಸಕ್ತರು, ಬುದ್ಧಿಜೀವಿಗಳು ಯೋಚಿಸಬೇಕಾಗಿರುವುದು ಇಂದಿನ ಬಳ್ಳಾರಿ ಜಿಲ್ಲೆಯ ರಂಗಭೂಮಿಯ ಅನಿವಾರ್ಯತೆಯಾಗಿದೆ.

೬.೨. ವೃತ್ತಿ ರಂಗಕಲಾವಿದೆಯರು

ರಂಗಭೂಮಿ ನಾಡಿನ ಸಾಂಸ್ಕೃತಿಕ ಜೀವನದ ಅತಿ ಮುಖ್ಯವಾದ ಅಂಗ. ಆದರೆ ಅದು ಮೂಲ ನೆಲೆಯೊಂದರಿಂದ ಸ್ವಯಂಪೂರ್ಣವಾಗಿ ಮೈದಳೆಯುವುದು ಅಸಾಧ್ಯ. ಈ ಹಿನ್ನೆಲೆಯಿಂದ ನಾಡಿನ ರಂಗಭೂಮಿ ಇತಿಹಾಸವನ್ನು ಅವಲೋಕಿಸುವಾಗ, ಪರದೇಶಗಳ ಹಾಗೂ ಪಕ್ಕದ ರಾಜ್ಯಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸಂಬಂಧ ಕುರಿತು ಅವಲೋಕಿಸುವುದು ಸರ್ವವಿದಿತ. ಆಂಗ್ಲ ಸಂಸ್ಕೃತಿಯ ಪ್ರಭಾವ ಪ್ರೇರಣೆಗಳಿಂದ ಹದಿನೆಂಟನೆಯ ಶತಮಾನದ ಕೊನೆಯ ವೇಳೆಗೆ ಬಂಗಾಳದಲ್ಲಿ ಪಾಶ್ಚಾತ್ಯ ರೀತಿಯ ರಂಗಚಟುವಟಿಕೆಗಳು ಹುಟ್ಟಿಕೊಂಡವು. ನಾಟಕದ ಕಥಾವಸ್ತು, ಪಾತ್ರ, ರಂಗಸಜ್ಜಿಕೆ, ಪ್ರದರ್ಶನದಲ್ಲಿ ತಂತ್ರ ಹಾಗೂ ನವೀನತೆ ತೋರಿದ ರಂಗಭೂಮಿ ಮನರಂಜನೆಯ ಹೊಸ ಭರವಸೆಯಾಗಿ ಎಲ್ಲೆಡೆಗೂ ಪಸರಿಸತೊಡಗಿತು. ಮುಂಬೈವಾಸಿಗಳು, ವ್ಯವಹಾರಸ್ಥರು, ಪಾರ್ಸಿಜನರು ಇದರ ಜನಪ್ರಿಯತೆಯನ್ನು ತಿಳಿದುಕೊಂಡು ಇದನ್ನು ಒಂದು ರೀತಿಯ ಲಾಭದಾಯಕ ಉದ್ದಿಮೆಯನ್ನಾಗಿ ಮಾಡುವ ಪ್ರಯತ್ನಕ್ಕೆ ಕೈ ಹಾಕಿದರು. ಇದರ ಪರಿಣಾಮವೇ ವೃತ್ತಿ ರಂಗಭೂಮಿಯ ಉದಯವಾಯಿತು. ಮೊದ ಮೊದಲು ಜನಾಶ್ರಯದಲ್ಲಿ ಬೆಳೆದು ಬಂದ ಜನಪದ ರಂಗಭೂಮಿಗಳೆಂಬ ಎರಡು ವಿಶೇಷ ರಂಗಪ್ರವಾಹಗಳು ಪ್ರಾಚೀನ ಕಾಲದಿಂದಲೂ ನಡೆದು ಬಂದಿದ್ದು ತಮ್ಮದೇ ಆದ ಪ್ರೇಕ್ಷಕ ವರ್ಗವನ್ನು ತಯಾರಿಸಿಕೊಂಡಿದ್ದವು. ಈ ಸಂದರ್ಭದಲ್ಲಿ ಹುಟ್ಟಿಕೊಂಡ ವೃತ್ತಿರಂಗಭೂಮಿಯು ಆಧುನಿಕ ರಂಗಭೂಮಿಯ ಕೊಡುಗೆಯಾಗಿ ವ್ಯವಹಾರಿಕ ಪ್ರಪಂಚದ ಎಲ್ಲಾ ಒತ್ತಾಸೆಯಾಗಿ ಮಧ್ಯಮ ಜನವರ್ಗದ ಮನರಂಜನೆಯ ಮಾಧ್ಯಮವಾಗಿ ಮೈದೋರಿತು. ಈ ಕಲೆ ಮೂಲತಃ ಜನಪದ ಹಾಗೂ ಆಸ್ಥಾನ ರಂಗಭೂಮಿಗಳೆರಡರ ಜನಪ್ರಿಯ ಅಂಶಗಳನ್ನು ಅಂತರ್ಗರ್ಭಿಸಿಕೊಂಡು ಬೆಳವಣಿಗೆಯನ್ನು ಹೊಂದಿದೆ ಎನ್ನಬಹುದು. ಪ್ರೇಕ್ಷಕನ ಹಲವಾರು ಅಭಿರುಚಿಗಳಿಗನುಗುಣವಾಗಿ ರಂಗಭೂಮಿ ಮನ್ವಂತರ

ಹೊಂದಿ, ಏಳುತ್ತಾ ಬೀಳುತ್ತಾ ಐದು ದಶಕಗಳ ಕಾಲ ವೈಭವವಾಗಿ ಬೆಳೆದು ಬಂದದ್ದು ಇತಿಹಾಸ. ಕರ್ನಾಟಕದಲ್ಲಿ ಮರಾಠಿ ನಾಟಕಗಳಿಂದ "ಎಲ್ಲಿ ನೋಡಲು ಮರಾಠಿಯರ ನಾಟಕಮಯಂ ತಾನಾಯ್ತು ಕರ್ನಾಟಕಂ" ಆಗಿ ಕನ್ನಡ ರಂಗಭೂಮಿ ಸಂಪೂರ್ಣವಾಗಿ ಅಸ್ತಿತ್ವಪಡೆದಿದೆ.

ವೃತ್ತಿ ರಂಗನಟಿಯರಿಗೆ ಯಶಸ್ಸು ಒಂದೇ ಮೆಟ್ಟಿಲಿಗೆ ಬರುವುದಿಲ್ಲ. ಅದಕ್ಕೆ ಭಗೀರಥ ಪ್ರಯತ್ನ ಮಾಡಬೇಕು. ಸಾಧನೆಯ ಹಾದಿಯಲ್ಲಿ ಹಲವಾರು ಮುಳ್ಳುಗಳು ಇವೆ. ಇವನ್ನು ತುಳಿದು ಬಿದ್ದು ಎದ್ದು ಮನೆಯ ಸಾಧನೆಯ ಹಾದಿಯಲ್ಲಿ ಹೆಜ್ಜೆ ಇಡಬೇಕೆಂದರೆ ಅವಕ್ಕೆ ಎಂಟೆದೆಯೇ ಬೇಕು. ಸಾಧಿಸುವ ಮನಸ್ಸುಳ್ಳ ಜೀವಿಗಳಿಗೆ ಯಾವತ್ತೂ ಸಮಸ್ಯೆಗಳು ಸಮಸ್ಯೆಗಳೇ ಅಲ್ಲ. ಪ್ರಯತ್ನ ನಿರಂತರವಾಗಿ ಇರಲೇಬೇಕು. ಅಂದಾಗ ಅದು ತಾನಾಗಿಯೇ ಕ್ರಮೇಣ ಲಭಿಸುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಯಶಸ್ಸು ಸಿಗುವುದು ತುಂಬಾ ತಡವಾಗಿ ಆದ್ದರಿಂದ ಅಲ್ಲಿವರೆಗೂ ಸಾಧಕ ತಡೆದುಕೊಳ್ಳಬೇಕು. ದುಡುಕು ಕೆಡುಕಿಗೆ ಮೂಲವಂತೆ. ಜೀವನದಲ್ಲಿ ಯಾವುದೇ ನಿರ್ಧಾರಕ್ಕೂ ನಾವು ದುಡುಕಬಾರದು. ಅವಸರದಿಂದ ಯಾವ ನಿರ್ಧಾರವನ್ನು ಕೈಗೊಳ್ಳಬಾರದು. ರಂಗನಟಿಯರು ತಾವು ಯಶಸ್ಸು ಪಡೆಯಬೇಕೆಂದರೆ ಅದರ ಹಿಂದಿನ ಶ್ರಮ ಎಷ್ಟೋ. ಶ್ರಮಕ್ಕೆ ತಕ್ಕಂತೆ ಪ್ರತಿಫಲ ದೇವರು ಕೊಟ್ಟೇ ಕೊಡುತ್ತಾನೆ. ಅದಕ್ಕೆ ತಾಳಿಕೊಳ್ಳುವ ಮನೋಭಾವವನ್ನು ನಾವು ಬೆಳೆಸಿಕೊಳ್ಳಬೇಕು.

ರಂಗಭೂಮಿಯ ಆಟದಲ್ಲಿ ಹಾಗೂ ಜೀವನದಾಟದಲ್ಲಿ ಹಲವಾರು ಪಾತ್ರಗಳು ವೈವಿಧ್ಯಮಯವಾಗಿ ರುತ್ತವೆ. ಅವು ಆಯಾ ಸಮಯ ಸಂದರ್ಭಕ್ಕೆ ತಕ್ಕಂತೆ ಪಾತ್ರಧಾರಿಯಾಗಲೇಬೇಕು. ನಿರ್ಧಾರಿತ ಪಾತ್ರವನ್ನು ನಾವು ಸಂಪೂರ್ಣವಾಗಿ ಅದಕ್ಕೆ ಜೀವಂತಿಕೆ ಕೊಟ್ಟಿರುವಂತೆ ನಿರ್ವಹಿಸಬೇಕು. ಅದು ಅನಿವಾರ್ಯ ಹಾಗೂ ಸಹಜ ಕೂಡ. ಪಾತ್ರಕ್ಕೆ ತಕ್ಕಂತೆ ನಯ, ವಿನಯ, ಸಾಧ್ಯತೆ, ಗಂಭೀರ, ಹಾಸ್ಯ, ರಾಜ ಹಾಸ್ಯ, ಖಳ ನಾಯಕಿ ಹೀಗೆ ವೈವಿಧ್ಯತೆಯ ಪಾತ್ರವನ್ನು ನಿರ್ವಹಿಸುವ ರಂಗನಟಿಯರು ತಮ್ಮ ಶ್ರೇಯೋಭಿವೃದ್ಧಿಗೆ ಹಲವಾರು ರೀತಿಯಲ್ಲಿ ಪ್ರಯತ್ನಿಸಿದವರೇ. ಆದರೆ ಯಶಸ್ಸು ಸಿಕ್ಕಿರುವುದು ಕೆಲವೊಬ್ಬರಿಗೆ ಮಾತ್ರ.

ರಂಗನಟಿಯರು ನಾಟಕ ಆಡಲಿಕ್ಕೆ ಹಳ್ಳಿಗಳಿಗೆ ೧೦-೧೫ ಕಿ.ಮೀ. ಹಿಂದೆ ನಡೆಯುತ್ತಾ ಇಲ್ಲವೆ ಬಂಡಿಗಳಲ್ಲಿ ಪಟಪಟಿಗಾಡಿ, ಬಸ್ಸು, ಸರಿಯಾದ ಸಮಯಕ್ಕೆ ಬರದೇ ಇರುವುದು. ರಾತ್ರಿ ನಿದ್ರೆಗೆಡುವುದು, ಕರೆಂಟ್ ಹೋಗಿರುವುದು ಅಮೇಚೂರ್ ಕಲಾವಿದರು ಸರಿಯಾಗಿ ಸಂಭಾವನೆಯನ್ನು ಕೊಡದೇ ಇರುವುದು. ಕಲಾವಿದರ ವಿಚಿತ್ರ ವರ್ತನೆಗಳು, ಲೈಂಗಿಕ ಕಿರುಕುಳ, ತಮ್ಮ ಸಂಸಾರ ಜೀವನದ ಹಲವಾರು ಚಿಂತೆಗಳು ಇಂಥ ವಿಷಮ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಬಣ್ಣ ಹಚ್ಚಿರುವುದು, ಕರ್ತವ್ಯದ ಕರೆ ಮೊದಲು, ಸೆಂಟಿಮೆಂಟ್ಸೆಲ್ಲಾ ಆಮೇಲೆ. ಕಲಾವಿದ ಮೊದಲು ವೃತ್ತಿಗೆ ಕರ್ತವ್ಯಕ್ಕೆ ಹೆಚ್ಚು ಆದ್ಯತೆಯನ್ನು ನೀಡಬೇಕು. ಅಂದಾಗಲೇ ಅವರು ಪಟ್ಟಂತ ಶ್ರಮಕ್ಕೆ ತಕ್ಕಂತೆ ಪ್ರತಿಫಲ ದೊರೆತೇ ದೊರೆಯುತ್ತದೆ.

ಅಂಥ ಪ್ರತಿಫಲವನ್ನು ಪಡೆದವರೇ ಇಂದು ದಿಗ್ಗಜಗಳಾಗಿದ್ದಾರೆ. ಆದರೆ ಈಗೀಗ ರಂಗಭೂಮಿಯು "ಭದ್ರವಿಲ್ಲದ ಬುನಾದಿ ಇದ್ದಂತೆ". ಬುನಾದಿ ಇಲ್ಲದ ಮನೆಯು ಹೇಗೆ ಅಭದ್ರವೋ ಹಾಗೆ ಇಂದಿನ ರಂಗ ಭೂಮಿ ಅಭದ್ರತೆಯಿಂದ ಕೂಡಿದೆ. ಆದ್ದರಿಂದ ರಂಗಭೂಮಿ ತನ್ನ ಮೂಲ ಸ್ವರೂಪವನ್ನೇ ಪಡೆದುಕೊಂಡಿರಬೇಕು. ರಂಗಸಜ್ಜಿಕೆ, ಶಿಸ್ತು, ಸಂಸ್ಕಾರ, ಸಾಕ್ಷಾತ್ಕಾರ, ಕ್ರಿಯಾಶೀಲತೆ ವೃತ್ತಿಗೌರವ ಹೀಗೆ ಇವೆಲ್ಲವುಗಳ ಸಮ್ಮಿಲನವಾಗಿ ಅವು ರೂಪುಗೊಂಡರೆ 'ರಂಗಭೂಮಿ' ಪುನಶ್ಚೇತನ ಪಡೆದಂತಾಗುತ್ತದೆ. ರಂಗಭೂಮಿಯನ್ನು ನಾವು ಪುನರ್‌ವಿಮರ್ಶಿಸಿ, ಒಡೆದು ಕಟ್ಟುವಂಥ ವ್ಯವಸ್ಥೆ ಅಲ್ಲಿ ನಡೆಯಬೇಕಿದೆ. ಅಂದಾಗ ಮಾತ್ರ ರಂಗಭೂಮಿ ಮೂಲ ಸ್ವರೂಪವನ್ನು ಪಡೆಯುತ್ತದೆ. ರಂಗಚಟುವಟಿಕೆಗಳು ಈ ನಿಟ್ಟಿನಲ್ಲಿ ನಿರಂತರವಾಗಿ ಸಾಗಿದರೆ ನಟಿಯರ ರಂಗಜೀವನ ಸಾರ್ಥಕವೆನಿಸಿಕೊಳ್ಳುತ್ತದೆ.

ಯಶಸ್ಸು ಯಾರೊಬ್ಬರ ಪಾಲಿನದೂ ಅಲ್ಲ. ಅದು ಒಬ್ಬರಿಗೆ ಒಮ್ಮೆ ಬಂದರೆ ಇನ್ನೊಬ್ಬರಿಗೆ ನಂತರದಲ್ಲಿ ಬಂದೇ ಬರುತ್ತದೆ. ಅಧಿಕಾರ, ಅಂತಸ್ತು, ಪ್ರಶಸ್ತಿ, ಪುರಸ್ಕಾರಗಳು ಈ ಒಬ್ಬರದ್ದಾಗಿದ್ದರೆ, ನಂತರದ ದಿನಗಳಲ್ಲಿ ಅದು ಇನ್ನೊಬ್ಬರ ಪಾಲು ಆಗಿಯೇತೀರುತ್ತದೆ. ಹಾಗಿರುವಾಗ ಪ್ರತಿಯೊಬ್ಬ ಕಲಾವಿದನು ಯಶಸ್ಸು ನಾನು ಪಡೆದುಕೊಂಡಿದ್ದೇನೆ ಎಂಬ ನೆಮ್ಮದಿಯನ್ನು ಪಡೆದುಕೊಳ್ಳಬೇಕು. ಮೊದಲು ವೃತ್ತಿಧರ್ಮದಲ್ಲಿ ನೆಮ್ಮದಿ ಪಡೆದುಕೊಂಡರೆ ಮಾತ್ರ ಜೀವನದಲ್ಲಿಯೂ ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತದೆ.

ಇವರೆಲ್ಲರೂ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ, ಕೆಲವರು ಹಾಸ್ಯ, ಖಳನಾಯಕಿ ಹೀಗೆ ಅವರ ವ್ಯಕ್ತಿತ್ವಕ್ಕೆ ತಕ್ಕಂತ ಪಾತ್ರಗಳು ಸಿಕ್ಕಾಗ ಅವನ್ನೇ ನಾವು ಸಮರ್ಥವಾಗಿ ಪೂರೈಸಬೇಕು ಎಂಬುದು ನಟಿಯರ ಅಭಿಮತ. ಆದ್ದರಿಂದ ಖಳನಾಯಕಿಯು ನಾಯಕಿಯಾಗಲಾರಳು. ಹಾಸ್ಯನಟಿ ಖಳನಾಯಕಿಯಾಗಲಾರರು. ಅವರವರ ಅಭಿನಯ ನಡೆ -ನುಡಿ ಹಾವಭಾವಕ್ಕೆ ತಕ್ಕಂತೆ ನಾಟಕದ ಪಾತ್ರದ ರೂಪರೇಷೆಗಳು ಬದಲಾಗುತ್ತಿರುತ್ತವೆ. ಆದ್ದರಿಂದ, ಪಾತ್ರಕ್ಕೆ ತಕ್ಕಂತೆ ನಾವೇ ರೂಪರೇಷಗಳನ್ನು ಸೃಷ್ಟಿ ಮಾಡಿಕೊಳ್ಳಬೇಕಾಗುತ್ತದೆ. ಒಬ್ಬ ನಟಿ ಯಶಸ್ವೀ ನಟಿಯಾಗಬೇಕಾದರೆ ಆಕೆಯ ಹಿಂದಿನ ಶ್ರಮದ ಅರಿವು ಎಲ್ಲರಿಗೂ ಇರಬೇಕು. ಶ್ರಮವಿಲ್ಲದೆ ಯಾವ ದುಡಿಮೆ, ಹೆಸರು, ಸಾರ್ಥಕತೆ ಉಂಟಾಗಲು ಸಾಧ್ಯವಿಲ್ಲ. ಶ್ರಮವು ನಿಷ್ಠೆಯಿಂದ ಇದ್ದರೆ ಅದಕ್ಕೆ ಯಶಸ್ಸು ಖಂಡಿತ. ಉದಾಹರಣೆಗೆ ನಾವು ರಂಗಭೂಮಿಯ ಇತಿಹಾಸವನ್ನು ನೋಡಿದಾಗ ಎಷ್ಟೋ ನಟ, ನಟಿಯರು ಶ್ರಮದಿಂದಲೇ ಈ ಸೂಪರ್‌ಸ್ಟಾರ್ ಆಗಿರೋದು. ಇಂದು ಚಲನಚಿತ್ರದಲ್ಲಿ ನಟಸಾರ್ವಭೌಮರಾಗಿರುವ ಡಾ. ರಾಜಕುಮಾರವರು ರಂಗಭೂಮಿಯಲ್ಲಿ ಕೆಳಗಿನಿಂದ ಮೇಲಿನವರೆಗೂ ಕೆಲಸವನ್ನು ನಿಷ್ಠೆಯಿಂದ ಮಾಡಿದ್ದಾರೆ. ಇವರ ಕಾಯಕ ನಿಷ್ಠೆ ಇನ್ನೊಬ್ಬರಿಗೆ ಆದರ್ಶವೇ ಸರಿ.

ಮರಳಿ ಯತ್ನವ ಮಾಡಿ ಭಗೀರಥ ಸುರಗಂಗೆಯನ್ನು ತಂದಂತೆ, ನಮ್ಮ ಪ್ರಯತ್ನ ಮಾತ್ರ ನಿರಂತರವಾಗಿ ಸಾಗಿದರೆ ಮಾತ್ರ ಯಶಸ್ಸು ಶತಸಿದ್ಧ. ಅಭಿನಯ, ಹಾವ, ಭಾವ, ನಡೆ, ನುಡಿ, 'Body language' ಅಂಗ

ಭಾಷೆ ಇವುಗಳಲ್ಲಿ ಹೆಚ್ಚು ಪರಿಣಿತಿಯು ತಮಗೆ ತಾವೇ ಅರಿವನ್ನು ಮೂಡಿಸಿಕೊಳ್ಳಬೇಕು. ಅಂದಾಗ ಮಾತ್ರ ನಾನು ಎಲ್ಲಿ ತಪ್ಪು ಮಾಡಿದ್ದೇನೆ ಎಂಬ ತಿಳುವಳಿಕೆ ನಮಗೇ ಬರುತ್ತದೆ. ಆಗ ಕಲಿಕೆಯಲ್ಲಿಯ ತಪ್ಪುಗಳನ್ನು ತಿದ್ದಿಕೊಳ್ಳಲು ಸಾಧ್ಯ. ಬಳ್ಳಾರಿ ಜಿಲ್ಲೆಯ ರಂಗನಟಿಯರು ಯಾವೊಂದು ರಂಗಶಾಲೆಯಲ್ಲಿ ಕಲಿಯದೇ ತರಬೇತಿ ಪಡೆಯದೇ ಸ್ವಸಾಮರ್ಥ್ಯದಿಂದಲೇ ನಟನಾ ಪ್ರಜ್ಞೆಯನ್ನು ಮೂಡಿಸಿಕೊಂಡು ನೋಡುತ್ತಾ ನೋಡುತ್ತಾ ಅಭಿನಯ ಕಲಿತು ಹಾಡುತ್ತಾ ಹಾಡುತ್ತಾ ಸಂಗೀತವನ್ನು ಕಲಿತು 'practice makes man perfect' ಎಂಬಂತೆ, ನಟಿಸಿಯೆ perfect ಆಗಿದ್ದಾರೆ. ವೃತ್ತಿಕಂಪನಿ ಹಾಗೂ ಅಮೇಚೂರ್ ಎರಡರಲ್ಲೂ ಪಳಗಿ, ವೃತ್ತಿಕಂಪನಿಯ ಪ್ರೇರಣೆಯಿಂದಲೇ ರಂಗಭೂಮಿಯನ್ನು ಉಜ್ವಲಗೊಳಿಸಿದ್ದಾರೆ. ಇಂಥ ಕಲಿಕೆಯಿಂದ ಇಂದು ಈ ಮಟ್ಟದಲ್ಲಿ ಹೆಸರು, ಕೀರ್ತಿ, ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದ್ದಾರೆ. ಇವರೆಲ್ಲರೂ ಇಂದು ರಂಗಭೂಮಿ ಯಲ್ಲಿ ಯಶಸ್ವೀ ವೃತ್ತಿ ನಟಿಯರೆನಿಸಿದ್ದಾರೆ. ಉಜ್ವಲ ಪರಂಪರೆಯಾಗಿ ಬೆಳೆದುಕೊಂಡು ಬಂದಿದೆ.

"೧೮೭೦ ರಿಂದ ೧೯೦೦ ಈ ಸಮಯದಲ್ಲಿ ವೃತ್ತಿರಂಗಭೂಮಿಯ ಪ್ರಾಯೋಗಿಕ ಘಟ್ಟ. ಈ ಅವಧಿ ಯಲ್ಲಿಯ ನಾಟಕ ಮಂಡಳಿಗಳು ನಿಜವಾದ ಅರ್ಥದಲ್ಲಿ ವೃತ್ತಿರಂಗ ಸಂಸ್ಥೆಗಳಾಗಿರಲಿಲ್ಲ. ಸಂಘಟನೆ, ಸಂಚಾರ, ಕಟ್ಟಿದ ರಂಗಮಂದಿರದಲ್ಲಿ ಪ್ರದರ್ಶನ ಮತ್ತು ಟಿಕೆಟ್ ಪಡೆಯುವ ವ್ಯವಸ್ಥೆಗಳನ್ನು ಅನುಸರಿಸಿದ್ದರಿಂದ ಮಾತ್ರ ಇವಕ್ಕೆ ವೃತ್ತಿ ಸಂಸ್ಥೆಗಳೆನ್ನಬೇಕು. ರಂಗದ ಅಂತರಂಗ ಆಧುನಿಕತೆಯಿಂದ ಪರಿಷ್ಕಾರಗೊಂಡಿರಲಿಲ್ಲ. ಐತಿಹಾಸಿಕವಾಗಿ ವತ್ತಿರಂಗಭೂಮಿಯ ಅಸ್ತಿತ್ವಕ್ಕಾಗಿ ರಂಗವು ಸಜ್ಜುಗೊಳ್ಳುತ್ತಿದ್ದುದರಿಂದ ಇದನ್ನು ಕರ್ನಾಟಕ ವೃತ್ತಿರಂಗದ ಮೊದಲ ಅಧ್ಯಾಯವೆಂದು ಈ ಹಂತದ ಸಾಧನೆಯನ್ನು ಪರಿಗಣಿಸಲೇಬೇಕು (ಲೆ: ರಾಮಕೃಷ್ಣ ಮರಾಠೆ, 'ಉತ್ತರಕರ್ನಾಟಕ ವೃತ್ತಿರಂಗಭೂಮಿ, ಇಳಾ ಪ್ರಕಾಶನ, ಬೆಂಗಳೂರು-೧೮).

ಅರವತ್ತರ ದಶಕದಿಂದ ವೃತ್ತಿನಟಿಯರ ಸಂಖ್ಯೆ ಹೆಚ್ಚಾಗಿದ್ದರೂ ಕೂಡ ಈಗೀಗ ಬಳ್ಳಾರಿ ಜಿಲ್ಲೆಯಲ್ಲಿ ವೃತ್ತಿ ನಟಿಯರ ಹೊಸ ಪರಂಪರೆ ಇನ್ನೂ ಬಂದಿಲ್ಲ. ಹಳೇ ತಲೆಮಾರಿನ ನಟಿಯರೇ ಹದಿನಾರರ ಕನ್ಯೆಯಾಗಿ ನಾಟಕಗಳನ್ನು ಇಂದು ಮಾಡುತ್ತಿದ್ದಾರೆ. ಇಡೀ ರಾಜ್ಯಾದ್ಯಂತ ಬಳ್ಳಾರಿ ಜಿಲ್ಲೆಯ ರಂಗನಟಿಯರ ಕೊಡುಗೆ ವೃತ್ತಿಕಂಪನಿಯಿಂದ ವೃತ್ತಿ ರಂಗಭೂಮಿಯಲ್ಲಿ, ಹವ್ಯಾಸಿ ಗ್ರಾಮೀಣ ರಂಗಭೂಮಿಯಲ್ಲಿ ಹೆಚ್ಚು ಸೇವೆಯನ್ನು ಮಾಡುತ್ತಿದ್ದರೂ, ನಾಡಿನಾದ್ಯಂತ ಹೆಸರನ್ನು ಪಡೆದರೂ ಯಾವುದೇ ಆರ್ಥಿಕ ಭದ್ರತೆ ಇಲ್ಲದ ಕಾರಣದಿಂದ ನಟಿಯರು ವೃತ್ತಿರಂಗಭೂಮಿಗೆ ಪ್ರವೇಶ ಮಾಡುವುದಿಲ್ಲ. ಈಗ ವೃತ್ತಿರಂಗಭೂಮಿಯು ಕೊರತೆಯನ್ನು ಅನುಭವಿಸುತ್ತಿದೆ.

ಈ ಎಲ್ಲಾ ಕಾರಣದಿಂದ ಇಂದು ನಟಿಯರು ಉಪಸ್ಥಿತರಿದ್ದರೂ ಇನ್ನು ಎರಡು ದಶಕಗಳ ನಂತರದ ದಿನಗಳಲ್ಲಿ ಸಂಪೂರ್ಣ ರಂಗಭೂಮಿ ಕೊರತೆಯಿಂದ ಬಳಲುತ್ತಿರುವುದಂತೂ ನೂರಕ್ಕೆ ನೂರರಷ್ಟು ಸತ್ಯ. ಆದ್ದರಿಂದ ಸುಭದ್ರಮ್ಮ, ಮನ್ಸೂರು, ಕೆ.ನಾಗರತ್ನ, ಪಿ.ಪದ್ಮ, ವರಲಕ್ಷ್ಮಿ, ಬಿ.ಶಿವಕುಮಾರಿ ಮುಂತಾದ

ನಟಿಯರನ್ನು ಸಂದರ್ಶಿಸಿದಾಗ ಸರಕಾರ ಆರ್ಥಿಕ ಭದ್ರತೆ ಒದಗಿಸಿದರೆ ಮಾತ್ರ ಮುಂದೆ ನಾವು ನಟಿ ಪರಂಪರೆಯನ್ನು ನಿರೀಕ್ಷಿಸಬಹುದೆಂದು ಅಭಿಪ್ರಾಯ ಪಡುತ್ತಾರೆ.

೬.೩. ಹವ್ಯಾಸಿ ರಂಗಕಲಾವಿದೆಯರು

ಕಲೆಯು ಮಾನವನ ಹುಟ್ಟಿನಂದಿನಿಂದ ಬೆಳೆದುಕೊಂಡು ಬಂದಿದ್ದರೂ, ಅದು ಯಾವುದನ್ನೂ ಬದುಕಿನ ಅಂತರ್ಯದೊಳಗೆ ಸೇರಿಕೊಂಡಿತ್ತು. ಮಾನವನ ಜ್ಞಾನ ವಿಕಾಸವಾದಂತೆಲ್ಲ ಕಲೆ ಒಂದು ಹೊಸರೂಪವನ್ನು ಪಡೆದುಕೊಂಡಿತು. ಮಾನವನು ಗುಹೆಯಿಂದಲೇ ಚಿತ್ರಕಲೆಯನ್ನು, ಪ್ರಾಣಿಗಳನ್ನು ಅನುಕರಿಸುವುದರಿಂದ ನಟನೆಯನ್ನು ರೂಢಿಸಿಕೊಂಡು ಅಂತರ್ಗತಮಾಡಿಕೊಂಡು ಬಂದಿದ್ದಾನೆ. ನಿಜವಾದ ಕಲೆ ಯಾವ ಒಂದು ಕಟ್ಟು, ಕಟ್ಟಳೆಗೂ, ನಿರ್ಬಂಧಕ್ಕೂ ಒಳಗಾಗಿ ಹೊರಬರುವುದಿಲ್ಲ. ಅದು ಸಹಜವಾಗಿ ಆವಿರ್ಭವಿಸಿದ ಮೇಲೆ ಮಾನವ ಅದನ್ನು ಸಂರಕ್ಷಿಸಿಕೊಂಡು ಬರಲು ಅದಕ್ಕೆ ಒಂದು ಚೌಕಟ್ಟನ್ನು ಹಾಕುತ್ತಾರೆ. ಇದರಿಂದಲೇ ಕಲೆ ಒಂದು ಸ್ಪಷ್ಟರೂಪವನ್ನು ಪಡೆದುಕೊಳ್ಳುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಹವ್ಯಾಸಿ ಕಲಾವಿದರು, ಕಲಾವಿದೆಯರು ಇದ್ದಾರೆ. ಕಲಾವಿದರು ಗ್ರಾಮೀಣ ನೆಲೆಗಳಲ್ಲಿಯೇ ಹೆಚ್ಚಾಗಿದ್ದಾರೆ. ಇವರೇ ವೃತ್ತಿರಂಗಭೂಮಿಯಲ್ಲಿ ಜೀವನವನ್ನೇ, ಅಂದರೆ ರಂಗವೃತ್ತಿಯನ್ನೇ ಜೀವನ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ ಹವ್ಯಾಸಿಕಲಾವಿದರು ಇದ್ದಂತೆ ಹವ್ಯಾಸಿಕಲಾವಿದೆಯರ ಪ್ರಮಾಣ ತುಂಬಾ ಕಡಿಮೆಯೇ. ಹವ್ಯಾಸಿಕಲಾವಿದರು ಊರಿಗೊಂದು ನಾಟ್ಯಸಂಘವನ್ನು ಕಟ್ಟಿಕೊಂಡು ಹಬ್ಬ, ಜಾತ್ರೆ, ಹುಣ್ಣಿಮೆಗಳಲ್ಲಿ ಬಯಲಾಟ ಹಾಗೂ ಸಾಮಾಜಿಕ ನಾಟಕಗಳನ್ನು ಆಡುತ್ತಾರೆ. ಆದರೆ ಇವರು ಯಾವುದೇ ತರಬೇತಿಯನ್ನು ಹೊಂದದೆ ಆಸಕ್ತಿಯಿಂದ ನಾಟಕ ಆಡುವ ಹವ್ಯಾಸವನ್ನು ರೂಢಿಸಿಕೊಂಡಿದ್ದಾರೆ. ಇವರು ವೃತ್ತಿನಟಿಯರನ್ನು ಕರೆಯಿಸಿಕೊಂಡು ನಾಟಕ ಆಡಿದರೆ ಮುಗೀತು ಮತ್ತೆ ಮುಂದಿನ ವರ್ಷವೇ ಈ ಹವ್ಯಾಸಿಕಲಾವಿದೆಯರು ನೆನಪಾಗುವುದು. ನಮ್ಮಲ್ಲಿ ಹವ್ಯಾಸಿ ಕಲಾವಿದೆಯರೂ ಇದ್ದಾರೆ. ಆದರೆ ಅವರ ಸಂಖ್ಯೆ ಮಾತ್ರ ಕೈಬೆರಳೆಣಿಕೆಯಷ್ಟು. ಅದರಲ್ಲೂ ಮರಿಯಮ್ಮನಹಳ್ಳಿಯ ಧೀಮಂತ ಕಲಾವಿದ ಹಾಗೂ ಕಲಾವಿದರ ಕುಟುಂಬದಿಂದ ಬಂದಿರುವ ಡಿ.ಹನುಮಕ್ಕ ದುರ್ಗಾದಾಸರ ಮಗಳು ಕಲಾ ಕುಟುಂಬದಲ್ಲಿ ಹುಟ್ಟಿ ಬೆಳೆದು ಕಲೆಯನ್ನು ಕುಟುಂಬದವರಿಂದಲೇ ತರಬೇತಿಯನ್ನು ಪಡೆದು ಹೆಚ್ಚು ವ್ಯಾಸಂಗ ಮಾಡದ ನಟಿ ಡಿ.ಹನುಮಕ್ಕ ಪ್ರಸ್ತುತದಲ್ಲಿ ನಾಟಕ ಅಕಾಡೆಮಿ ಸದಸ್ಯೆ. ಹಾಗೂ ನೀನಾಸಂ ತಿರುಗಾಟದಲ್ಲಿ ಸೇರಿಕೊಂಡು ಅಲ್ಲಿಯೇ ತರಬೇತಿ ಪಡೆದು, ಈಗ ಪ್ರಖ್ಯಾತ ಹವ್ಯಾಸಿ ನಟಿ ಎನಿಸಿದ್ದಾರೆ. ಜಯಂತ ಕಾಯ್ಕಿಣಿಯವರ "ಜತೆಗಿರುವನು ಚಂದಿರ" ನಾಟಕದಲ್ಲಿ ಅಮೋಘವಾದ ನಾಯಕಿ ಪಾತ್ರವನ್ನು ಅಭಿನಯಿಸಿ ತಮ್ಮ ಕಲಾ ಸಾಮರ್ಥ್ಯವನ್ನು ತೋರಿಸಿದ್ದಾರೆ. ಹಾಗೆಯೇ ಹವ್ಯಾಸಿ ತಂಡ ಹೊಸಪೇಟೆ ಸಿ.ಅಬ್ದುಲ್ಲಾ ಅವರ ಅಕ್ಕನ

ಮಗಳು ಸಹನಾ 'ಅಕ್ಕ' ಬೀದಿನಾಟಕದಲ್ಲಿ ಬಹುಸುಂದರವಾಗಿ ಅಭಿನಯಿಸುತ್ತಾರೆ. ಸಹನಾಳ ಅಭಿನಯ ಸಹಜತೆ, ನೈಜತೆಯು ನೋಡುಗರ ಮನತಟ್ಟುವಂತೆ ಇರುತ್ತದೆ.

ಕರ್ನಾಟಕದ ಆಧುನಿಕ ರಂಗಭೂಮಿಯಲ್ಲಿ 'ನೀನಾಸಂ' ತಿರುಗಾಟದಲ್ಲಿ ಅನುಭವ ಪಡೆದುಕೊಂಡ ಹವ್ಯಾಸಿ ಕಲಾವಿದರು ಇಂದು ಭಾರತದಲ್ಲಿ ಅಲ್ಲದೆ ವಿದೇಶಗಳಿಗೂ ಹೋಗಿ ಅಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಬಂದಿದ್ದಾರೆ. ಇದೂ ಅಲ್ಲದೆ ತುಮಕೂರು ಸ್ವಾಮಿಗಳ 'ಶಿವಸಂಚಾರ' ತಂಡದವರ ಕಲಾಸೇವೆ ಇಡೀ ಕರ್ನಾಟಕ ರಂಗಭೂಮಿಗೆ ನೀಡಿರುವ ಅಮೋಘ ಕೊಡುಗೆಯಾಗಿದೆ. ಈ ಪ್ರಯೋಗವು ಆಧುನಿಕ ರಂಗಭೂಮಿಯ ವಿಶಿಷ್ಟ ಕೊಡುಗೆಗಳಾಗಿವೆ.

ಈ ರಂಗಭೂಮಿಕೆಯಲ್ಲಿ ಹವ್ಯಾಸಿ ಕಲಾವಿದೆಯರೂ ತಮ್ಮ ಸೇವೆ ಸಲ್ಲಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಕೈಬೆರಳೆಣಿಕೆಯಷ್ಟು ಹವ್ಯಾಸಿರಂಗನಟಿಯರಿದ್ದಾರೆ. ಅವರೆಂದರೆ, ಡಿ.ಸಣ್ಣಹನುಮಕ್ಕ, ಪಿ.ಸಹನಾ. ಇಂದಿಗೂ ಹವ್ಯಾಸಿ ರಂಗಭೂಮಿಯಲ್ಲಿ ವೃತ್ತಿರಂಗಭೂಮಿಯ ನಟಿಯರೇ ತಮ್ಮ ಅಭಿನಯವನ್ನು ತರಬೇತಿ ಮೂಲಕ ನೀಡುತ್ತಿದ್ದಾರೆ. ಜೊತೆಗೆ ಮರಿಯಮ್ಮನಹಳ್ಳಿಯ ವೃತ್ತಿರಂಗಕಲಾವಿದೆಯರೆಲ್ಲರೂ 'ಲಲಿತ ಕಲಾರಂಗ' ಎಂಬ ಸಂಘಟನೆಯೊಂದಿಗೆ ಹಲವು ರಂಗತರಬೇತಿ, ಪ್ರದರ್ಶನ, ಪ್ರಯೋಗ, ಸಭೆ, ಸಮಾರಂಭ ಗಳನ್ನು ಏರ್ಪಡಿಸುತ್ತಾರೆ.

ವೃತ್ತಿರಂಗಭೂಮಿಯವರೇ ಹವ್ಯಾಸಿ ರಂಗಕಲಾವಿದೆಯರಾಗಿ, ಕಲಾಪೋಷಕರೂ ಆಗಿ ತಮ್ಮ ಕಲಾಪ್ರತಿಭೆ ಗಳನ್ನು ಪ್ರತಿಬಿಂಬಿಸುತ್ತಿದ್ದಾರೆ. ಇತ್ತೀಚೆಗೆ ಹವ್ಯಾಸಿ ರಂಗಕಲಾವಿದೆಯರ ಸಂಖ್ಯೆ ಹೆಚ್ಚುತ್ತಲೇ ಇದೆ. ರಂಗಕರ್ಮಿಗಳ ಮಕ್ಕಳು, ಶಿಕ್ಷಕ, ಉಪನ್ಯಾಸಕರು, ರಂಗಾಸಕ್ತರ ಮಕ್ಕಳೆಲ್ಲರೂ ಈಗ ಹವ್ಯಾಸಿ ಕಲಾವಿದ ರಾಗಿದ್ದಾರೆ. ವೃತ್ತಿನಟಿಯರ ಸಂಖ್ಯೆ ಕ್ರಮೇಣ ಕಡಿಮೆಯಾಗಿ ಹವ್ಯಾಸಿ ವಿದ್ಯಾವಂತ ನಟಿಯರೇ ಹೆಚ್ಚಾಗಿದ್ದಾರೆ.

"ಹಿಂದೊಮ್ಮೆ ಸಂಪೂರ್ಣ ಮಹಿಳಾ ರಂಗಘಟಕವನ್ನು ಆರಂಭಿಸುವ ತಯಾರಿಯಲ್ಲಿದ್ದಾಗ ಆಗಿನ ನಾಟಕ ಅಕಾಡೆಮಿಯ ಸದಸ್ಯರೊಬ್ಬರು ಬಂದು ಪ್ರಥಮ ಮಹಿಳಾ ಶಿಬಿರ ಮಾಡಿಸಲು ಸಹಕರಿಸುವುದಾಗಿ ಹೇಳಿದರು. ಅದನ್ನು ಹೊಸಪೇಟೆಯಲ್ಲಿ ಮಾಡಿ ಎಂದು ಒಮ್ಮೆ, ಬಳ್ಳಾರಿಯಲ್ಲಿ ಮಾಡೋಣವೆಂದು ಮತ್ತೊಮ್ಮೆ, ಹಡಗಲಿಯಲ್ಲೋ, ನಜೀರನಗರದಲ್ಲೋ ಮಾಡಿಸಲು 'ಒತ್ತಡ' ಬಂದಿದೆ ಎಂದು ಮಗದೊಮ್ಮೆ ಹೇಳಿ ಕೊನೆಗೆ ನಮ್ಮ ಸಂಘದ 'ಆರಂಭಿಕ' ಸಹಕಾರ ಮಾತ್ರ ಪಡೆದು ಮರಿಯಮ್ಮನಹಳ್ಳಿಯಲ್ಲಿ ಶಿಬಿರ ಏರ್ಪಡಿಸಿದರು. ಈಗ ಮತ್ತೆ ನಮ್ಮ ಮಹಿಳಾರಂಗ ಘಟಕವನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ. ಆದರೆ ಎಂದಿಗೂ ಹವ್ಯಾಸಿ ನಟಿಯರಿಗೆ ಸಂಬಂಧಿಸಿ ಬರುವ ತೊಂದರೆಗಳು ಒಂದೇ ಥರದ್ದಾಗಿರುತ್ತದೆ. ಅಂದರೆ ಬಾಲ ನಟಿಯರಾಗಿ ಮಕ್ಕಳ ಶಿಬಿರದಲ್ಲಿ ಪಾಲ್ಗೊಳ್ಳುವ ಹುಡುಗರಿಬ್ಬರು ಕಾಲೇಜು ಮೆಟ್ಟಿಲೇರುತ್ತಿದ್ದಂತೆ ಕಣ್ಮರೆಯಾಗುತ್ತಾರೆ. ಮುಂದೆ ಅವರ ಓದೋ, ಉದ್ಯೋಗವೋ, ಮದುವೆಯೋ ಇನ್ನಿತರೇ ಕಾರಣಗಳಿಂದ

ಭಾಗವಹಿಸುವಿಕೆ ಕಡಿಮೆಯಾಗುತ್ತದೆ. ಕೆಲವೇ ಗೃಹಿಣಿಯರು ಪಾಲ್ಗೊಳ್ಳುತ್ತಾರಾದರೂ ತಮ್ಮ ಸಂಸಾರದ ಜವಾಬ್ದಾರಿಗಳಿಂದಾಗಿ ಪೂರ್ಣ ತೊಡಗಿಸಿಕೊಳ್ಳಲಾಗದೆ ಅಸಹಾಯಕತೆ ಅವರನ್ನು ಕಾಡುತ್ತದೆ. ಗೃಹಿಣಿಯರು, ವಿದ್ಯಾರ್ಥಿನಿಯರು ತೊಡಗಿಸಿಕೊಳ್ಳಲು ಇರುವ ಮತ್ತೊಂದು ದೊಡ್ಡ ತೊಂದರೆ ಎಂದರೆ ಹವ್ಯಾಸಿಗಳ ರಂಗೇತರ 'ಚಟುವಟಿಕೆ'ಗಳು ವೃತ್ತಿ ನಟಿಯರು ಅನಿವಾರ್ಯವಾಗಿ ಇಂಥ ಕಿರಿಕಿರಿಗಳನ್ನು ಪ್ರತಿರೋಧಿಸುವ ಅಥವಾ ತಡೆದುಕೊಳ್ಳುವ ಶಕ್ತಿ ಪಡೆದಿರುತ್ತಾರೆ. ಆದರೆ ಹವ್ಯಾಸಕ್ಕಾಗಿ ಬರುವ ಹೆಂಗಳೆಯರು ಅಸಹ್ಯಪಟ್ಟೋ, ಅವಮಾನ ಪಟ್ಟೋ ತಮ್ಮ ಮನೆಮಂದಿಯ ಕೆಂಗಣ್ಣಿಗೆ ಗುರಿಯಾಗಿ ದೂರವಾಗಿ ಬಿಡುವ ಹಲವಾರು ಘಟನೆಗಳನ್ನು ನೋಡಿದ್ದೇನೆ. ಆದ್ದರಿಂದಲೇ ನಮ್ಮ ತಂಡದಲ್ಲಿ ಮೊದಲಿನಿಂದಲೂ ಇಂಥ ವಿಷಯಗಳಲ್ಲಿ ಅತಿ ಮಡಿವಂತಿಕೆ ಎಂದು ಮೂಗು ಮುರಿಯಬಹುದಾದಷ್ಟು ಕಟ್ಟು ನಿಟ್ಟು ಪಾಲಿಸುತ್ತಿದ್ದೇವೆ (ಈ ಕಾರಣಕ್ಕೆ ನಟರ ಟೀಕೆಗೂ ಒಳಗಾಗಿದ್ದೇವೆ). ಇನ್ನೂ ಆಹ್ವಾನಿತ, ತರಬೇತಿ ಹೊಂದಿದ, ಅರೆವೃತ್ತಿ ತಂಡಗಳಲ್ಲಿನ ಗಂಡು ಹೆಣ್ಣುಗಳ ಸಹಜ ನಡವಳಿಕೆ ನಮ್ಮಂಥ ತಂಡಗಳ ಮಹಿಳೆಯರಿಗೆ ದಿಗ್ಭ್ರಾಂತಿಯನ್ನು, ಮುಜುಗರವನ್ನು ಉಂಟು ಮಾಡಿದ್ದುಂಟು. ಇದಕ್ಕೆ ಸಂಬಂಧಿಸಿದಂತೆ ಒಂದು ಆಶ್ಚರ್ಯಕರ ಸಂಗತಿ ಎಂದರೆ ಶಾಲಾ ಕಾಲೇಜು ಗ್ಯಾದರಿಂಗ್‌ಗಳಲ್ಲಿ ತಮ್ಮ ಮನೆಯ ಹುಡುಗಿಯರು ಸಿನಿಮಾ-ಟೀವಿಯ ಕುಣಿತಗಳನ್ನು ಅದೇ ಮಾದರಿಯ ವಿಕೃತ ಉಡುಪುಗಳಲ್ಲಿ ಹಸಿ ಹಸಿಯಾಗಿ ಕುಣಿದಾಗ ಪ್ರೋತ್ಸಾಹಿಸುವ ತಂದೆ ತಾಯಂದಿರು ನಾಟಕ ಎಂದಾಕ್ಷಣ ಹಿಂದೇಟುಹಾಕುವುದೇಕೆಂಬುದು ಯೋಚಿಸಬೇಕಾದ ವಿಷಯ. ಅಂತೂ ಇಂಥ ಧೋರಣೆ ನಮ್ಮಂಥವರಿಗೆ ನುಂಗಲಾರದ ತುತ್ತು. ಹವ್ಯಾಸಿ ರಂಗಭೂಮಿಗೆ ಕುತ್ತು (ಲೇ: ಕೆ.ಮಹಾಬಲೇಶ್ವರ, ನಾನೊಂದ ಕನಸಕಂಡೆ, ಪುಟ, ೨೦).

ಹೀಗೆ ಹವ್ಯಾಸಿ ಕಲಾವಿದೆಯರು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗುತ್ತಿದ್ದಾರೆ. ತಾವು ಯಾವುದೇ ಸರಕಾರಿ ಅಥವಾ ಖಾಸಗಿ ನೌಕರಿಗಳನ್ನು ಮಾಡುತ್ತ ತಮ್ಮ ಅಭಿನಯ ಕೌಶಲ್ಯದಿಂದ ರಂಗಭೂಮಿಯಲ್ಲಿ ಈಗಲೂ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಬಯಲಾಟ ಹಾಗೂ ಸಾಮಾಜಿಕ ನಾಟಕದಲ್ಲಿ ಸ್ತ್ರೀಯರು ಪಾತ್ರವನ್ನು ಇಂದಿಗೂ ಮಾಡುತ್ತಲಿದ್ದರೂ ಹೊಸ ಪರಂಪರೆಯು ವೃತ್ತಿರಂಗಭೂಮಿಯಲ್ಲಿ ಈಗೀಗ ಕಾಣಿಸುತ್ತಿಲ್ಲ. (ಕಾರಣ ಸ್ವತಃ ನಟಿಯರೇ-ನಮ್ಮ ಮಕ್ಕಳನ್ನು ರಂಗಭೂಮಿಗೆ ಕಳುಹಿಸುವುದಿಲ್ಲ ಎನ್ನುತ್ತಾರೆ) ಆದ್ದರಿಂದ ಬಳ್ಳಾರಿ ಜಿಲ್ಲೆಯಲ್ಲಿ ವೃತ್ತಿರಂಗ ನಟಿಯರ ಸಂಖ್ಯೆ ಈಗೀಗ ಅಂದರೆ ಹೊಸ ತಲೆಮಾರಿನ ಜನರು ಬರದೇ ಇರುವುದು ವಿಷಾದನೀಯ. ಆದರೆ ಇದಕ್ಕೆ ಪ್ರತಿಯಾಗಿ, ಹವ್ಯಾಸಿ ರಂಗಭೂಮಿಗೆ ವಿದ್ಯಾವಂತ ಕಲಾವಿದೆಯರು ಬರುತ್ತಿರುವುದು ಸಂತಸದ ಸಂಗತಿ.

ಒಟ್ಟಿನಲ್ಲಿ ರಂಗಭೂಮಿಯಲ್ಲಿ ಹೊಸ ರಂಗಪರಂಪರೆಯು ಸೃಷ್ಟಿಯಾಗಿ ಹವ್ಯಾಸಿ ಕಲಾವಿದೆಯರ ಸಂಖ್ಯೆ ಹೆಚ್ಚಾಗಿ ಅದರಲ್ಲೂ ವಿದ್ಯಾವಂತ ತಂಡಗಳೇ ಇಪ್ಪತ್ತು ವರ್ಷಗಳಿಂದಲೂ ಕೆಲಸವನ್ನು ಮಾಡುತ್ತಾ ಬಂದಿದ್ದು ಬಳ್ಳಾರಿ ಜಿಲ್ಲೆಯಲ್ಲಿ ಈ ಹೊಸದೊಂದು ಹವ್ಯಾಸಿಗಳ ಪರಂಪರೆಯು ಹುಟ್ಟಿ ರಂಗಭೂಮಿಗೆ ತನ್ನದೇ

ಆದ ಕೊಡುಗೆಯನ್ನು ನೀಡಿ ಹವ್ಯಾಸಿ ಕಲಾವಿದೆಯರಿಗೆ ಬಳ್ಳಾರಿ ಜಿಲ್ಲೆಯ ತಂಡಗಳು ನಾಂದಿ ಹಾಡುತ್ತಿವೆ ಎಂದರೂ ತಪ್ಪಿಲ್ಲ.

'ನಾವು' ಸಾಂಸ್ಕೃತಿಕ ಸಂಘಟನೆ ಆರಂಭಗೊಂಡು ಈಗ ೨೦ ವರ್ಷ. ನಾಟಕ ಚಟುವಟಿಕೆಯೇ ನಮ್ಮ ಮುಖ್ಯಗುರಿ. ಆದರೂ ಇತರ ಸಾಂಸ್ಕೃತಿಕ ಚಟುವಟಿಕೆಗಳೂ ಸೇರಿದಂತೆ ೧೨೦ಕ್ಕೂ ಹೆಚ್ಚು ಕಾರ್ಯಕ್ರಮ ಕೊಟ್ಟಿದ್ದೇವೆ. ಇವೆಲ್ಲವುಗಳ ಹಿಂದೆ ಗಂಡಸರಾದ ನಮ್ಮ ಜೊತೆ ಸಮಸಮವಾಗಿ ಹಾಗೂ ಕೆಲವೊಮ್ಮೆ ಇನ್ನೂ ಹೆಚ್ಚಾಗಿ ಕೈಂಕರ್ಯ ಸಲ್ಲಿಸಿದವರು ಮಹಿಳೆಯರು. ಅನೇಕ ವರ್ಷ ಮಹಿಳೆಯರೆ (ಶ್ರೀಮತಿ ಯಶೋಧರಾ ಶಿವರಾಜ್) ನಮ್ಮ ಅಧ್ಯಕ್ಷರಾಗಿದ್ದರು. ಈಗ ಮತ್ತೆ ಮತ್ತೊಬ್ಬ ಮಹಿಳೆ ಅಧ್ಯಕ್ಷರಾಗುತ್ತಿದ್ದಾರೆ. ಇವರುಗಳ ಪ್ರೇರಣೆ ಪ್ರಯತ್ನಗಳಿಂದಲೇ 'ನಾವು'ಗೆ ನಟಿಯರಾಗಿ ಹಾಗೂ ಕೇವಲ ಸಂಘಟಕರಾಗಿ ಜೀವ ತುಂಬಿದವರು ಶ್ರೀಮತಿಯರಾದ ಸೌಭಾಗ್ಯ, ರಾಜಲಕ್ಷ್ಮಿ, ಗೌರಮ್ಮ, ಗಂಗಾಧರ, ಎಚ್.ಎನ್. ಗೀತಾ, ರೂಪಾ, ಇಂದಿರಾ, ರತ್ನಮ್ಮ, ವಿಜಯಕುಮಾರ, ಸಂಧ್ಯಾ, ರೇಖಾ, ನಾಗಮಣಿ, ಸುವರ್ಣ, ಪ್ರತಿಭಾ, ಬನಶಂಕರಿ, ಶಾಲಿನಿ, ಜಾನಕಿ, ಉಷಾ ಮುಂತಾದವರು (ಲೇ: ಕೆ.ಮಹಾಬಲೇಶ್ವರ, ನಾನೊಂದ ಕನಸಕಂಡೆ, ಪುಟ, ೨೯). ಈ ರೀತಿಯಾಗಿ ನಾವು ಸಾಂಸ್ಕೃತಿಕ ಸಂಘಟನೆಯಿಂದ ಹಾಗೂ ಹೊಸಪೇಟೆಯ ಭಾವೈಕ್ಯತಾ ವೇದಿಕೆ, ಟಿ.ಬಿ. ಡ್ಯಾಂನ ಕನ್ನಡ ಕಲಾಸಂಘ, ಹಡಗಲಿಯ ರಂಗಭಾರತಿ, ಮರಿಯಮ್ಮನಹಳ್ಳಿಯ ಲಲಿತಕಲಾರಂಗ ಮುಂತಾದ ಸಂಘಟನೆಯಿಂದ ಹವ್ಯಾಸಿ ಕಲಾವಿದೆಯರು ಹೆಚ್ಚಾಗಿ ರಂಗಭೂಮಿಯಲ್ಲಿ ಇಂದು ಸೇವೆ ಸಲ್ಲಿಸುತ್ತಿದ್ದಾರೆ.

ಸಂಘದ ಆರಂಭಕ್ಕೇನೆ 'ಕೊಡೆಗಳು' ನಾಟಕವನ್ನು ಮಹಿಳೆಯರಿಂದಲೇ ಮಾಡಿಸುವ ಪ್ರಯೋಗ ಮಾಡಿದೆವು. ನಂತರ 'ಅಪ್ಪ' ನಾಟಕ ಆರಿಸಿಕೊಂಡಾಗ ತಾಯಿ (ವೇಶ್ಯೆ) ಪಾತ್ರಮಾಡಲು ವೃತ್ತಿ ನಟಿಯನ್ನೇ ಆಹ್ವಾನಿಸೋಣವೇ ಎಂದು ಮುಜುಗರ ಪಡುತ್ತಿದ್ದಾಗ, ನನ್ನ ಬಾಲ್ಯ ಗೆಳೆಯನ ಮಡದಿಯೂ ದೂರವಾಣಿ ಇಲಾಖೆಯ ಉದ್ಯೋಗಿಯೂ ಆದ ಕಲ್ಯಾಣಿಯವರು ತಾವೇ ಆ ಪಾತ್ರ ಮಾಡುವುದಾಗಿ ಹಠತೊಟ್ಟು ಮಾಡಿ, ಬಹುಮಾನವನ್ನು ಗಿಟ್ಟಿಸಿದರು. ಆಗಿನಿಂದ ಇಂದಿನವರೆಗೆ ಹೊಸಪೇಟೆಯ ಸುತ್ತಮುತ್ತಲ ತಂಡಗಳಲ್ಲಷ್ಟೇ ಅಲ್ಲ, ಹೂವಿನ ಹಡಗಲಿಯ ಎಂ.ಪಿ.ಪ್ರಕಾಶರ ತಂಡಕ್ಕೂ ಹೋಗಿ 'ಸೂರ್ಯಶಿಕಾರಿ'ಯಲ್ಲಿ (ರಜೆ, ಪುಟ್ಟ ಮಗುವಿನ ತೊಂದರೆ ನಡುವೆಯೂ) ಆಗಮಿಸಿ ಬಂದರು. ಈಗ ಅವರ ಮಗಳನ್ನು ಗಂಡು ಹುಡುಗರನ್ನು ರಂಗಭೂಮಿಯಲ್ಲಿ ತೊಡಗಿಸಿರುವುದು ಅಭಿನಂದಿಸಬೇಕಾದ ವಿಷಯ (ಲೇ: ಕೆ. ಮಹಾಬಲೇಶ್ವರ, ನಾನೊಂದ ಕನಸಕಂಡೆ). ಹೀಗೆ ಬಳ್ಳಾರಿ ಜಿಲ್ಲೆಯಲ್ಲಿ ಹವ್ಯಾಸಿ ಕಲಾವಿದೆಯರು ದಿಟ್ಟರಾಗಿ ರಂಗಭೂಮಿಗೆ ಕಾಲಿಟ್ಟಿದ್ದಾರೆ. ಹೊಸ ಪರಂಪರೆ ಎಂಬಂತೆ ಹವ್ಯಾಸಿ ಕಲಾವಿದೆಯರು ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೬.೪. ಆಧುನಿಕ ರಂಗ ಕಲಾವಿದೆಯರು

ಕರ್ನಾಟಕ ವೃತ್ತಿರಂಗಭೂಮಿಯ ಆರಂಭದ ಚಟುವಟಿಕೆಗಳು ಶುರುವಾದದ್ದು ಕೂಡ ಉತ್ತರ ಕರ್ನಾಟಕದಲ್ಲಿಯೇ. ಇದಕ್ಕೆ ಮುಖ್ಯ ಪ್ರೇರಣೆ ಒದಗಿದ್ದುದು ಮರಾಠಿ ನಾಟಕ ಕಂಪನಿಗಳಿಂದ. ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಮರಾಠಿ ಕಂಪನಿಗಳು ಸಂಚರಿಸುತ್ತ ಸಮೀಪದ ಉತ್ತರ ಕರ್ನಾಟಕಕ್ಕೆ ಕಾಲಿಟ್ಟವು. ಬೆಳಗಾವಿ, ಹುಬ್ಬಳ್ಳಿ ನಗರಗಳಲ್ಲಿ ಕ್ಯಾಂಪ್ ಮಾಡಿ ಅವು ನಾಟಕಗಳನ್ನಾಡಿದವು. ಇಲ್ಲಿಯ ಜನ ಅವುಗಳ ಹೊಸತನಕ್ಕೆ ಮಾರುಹೋದರು. ಮಧುರಸಂಗೀತ, ಸುಧಾರಿತ ನಾಟಕಗಳೆಂದು ನಗರದ ಮಧ್ಯಮ ವರ್ಗದ ಜನ ಮರಾಠಿ ನಾಟಕಗಳನ್ನು ಕೊಂಡಾಡತೊಡಗಿದರು. ಇಂಥ ನಾಟಕಗಳು ನಟರು ಕನ್ನಡದಲ್ಲಿ ಇಲ್ಲ ಎಂಬ ಕೊರಗು ಕೇಳಿಬರುವಂತಾಯಿತು. ಮರಾಠಿ ನಾಟಕಗಳಿಂದ ಉದ್ಭವಿಸಿದ ಈ ಪರಿಸ್ಥಿತಿಯು ಭಾಷಾಭಿಮಾನಿಗಳನ್ನು ಬಡಿದೆಬ್ಬಿಸಿತು. ಗದುಗಿನ ಶಾಂತಕವಿಗಳು ಕಿತ್ತೂರಿನ ಶ್ರೀನಿವಾಸ ಕವಿಗಳು ಹೊಸ ನಾಟಕಗಳ ರಚನೆಗೆ ತೊಡಗಿದರು. ಸುತ್ತ ಮುತ್ತಲಿನ ಬಯಲಾಟದ ಕಥೆಗಳಿಗೆ ನಾಟಕಗಳ ರೂಪ ಕೊಟ್ಟರು. ಅವರ ಎದುರಿಗಿದ್ದ ಮಧ್ಯಮವರ್ಗದ ಜನರ ಕೌಟುಂಬಿಕ ಸಮಸ್ಯೆಗಳು ಸಮಕಾಲೀನ ಅಂಶಗಳು ನಾಟಕಗಳಲ್ಲಿ ಸೇರಿಕೊಂಡವು. ಹಲಸಿನ ಕಂಪನಿ (೧೮೬೯) ಗರುಡನ ಕೃತಪುರ ನಾಟಕ ಮಂಡಳಿ(೧೮೭೨)ಗಳು ಕನ್ನಡ ದಲ್ಲಿಯೂ ಹೊಸನಾಟಕಗಳಿವೆ ಎಂಬುದನ್ನು ಪ್ರದರ್ಶಿಸಿ ತೋರಿಸಿದವು.

ಆರಂಭದ ಈ ಕಂಪನಿಗಳು ವೃತ್ತಿಯ ಶಿಸ್ತನ್ನು ಅಳವಡಿಸಿಕೊಳ್ಳುವ ಮೊದಲ ಪ್ರಯತ್ನವು ಕೊಣ್ಣೂರು ಕಂಪನಿಯಲ್ಲಿ ನಡೆಯಿತು. ಇಂಗ್ಲೀಷ್ ಅಧಿಕಾರಿಗಳ ಸಹವಾಸ, ಮರಾಠಿ ನಾಟಕಗಳ ಸಂಪರ್ಕವಿದ್ದ ಶಿವಮೂರ್ತಿ ಸ್ವಾಮಿ ಕಣಬರಗಿಮಠರು ೧೮೯೯ರಲ್ಲಿ ಈ ಕಂಪನಿಯನ್ನು ಹುಟ್ಟು ಹಾಕಿದರು. ಪೆಂಡಿರನ್ನು ಕರೆಯಿಸಿ ಪರದೆಗಳನ್ನು ಬಳಸಿದರು. ನಟರಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡಿದರು. ಕ್ರಮೇಣ ವಿದ್ಯುದ್ದೀಪಗಳನ್ನು, ಟ್ರಾನ್ಸ್‌ಫರ್ ಸೀನರಿಗಳನ್ನು ಅಳವಡಿಸಿದರು. ಸ್ತ್ರೀ ಪಾತ್ರಕ್ಕಾಗಿ ಸ್ತ್ರೀಯರನ್ನು ರಂಗದ ಮೇಲೆ ತಂದರು. ಈ ಕಂಪನಿಯನ್ನು ಪ್ರವೇಶಿಸಿದ ಎಲ್ಲೂಬಾಯಿ ಗುಳೇದಗುಡ್ಡ ವೃತ್ತಿರಂಗಭೂಮಿಯ ಮೊದಲ ನಟಿ ಎನಿಸಿದಳು. ಹೀಗೆ ಕೊಣ್ಣೂರು ಕಂಪನಿ ವೃತ್ತಿಯ ಶಿಸ್ತಿನಿಂದ ಸುಸಜ್ಜಿತವಾಗಿ ಸಂಚರಿಸಿತು. ಉತ್ತರ ಕರ್ನಾಟಕ ವೃತ್ತಿ ರಂಗಭೂಮಿಗೆ ಮಾದರಿ ಎನಿಸಿತು. ಗುಬ್ಬಿವೀರಣ್ಣನವರು ಈ ಕಂಪನಿಯ ಸಾಧನೆಯನ್ನು ಅಭಿಮಾನದಿಂದ ಸ್ಮರಿಸಿದ್ದುಂಟು. ಈ ಕಂಪನಿ ನಿಂತಮೇಲೆ ಕಂಪನಿಯಲ್ಲಿದ್ದ ಕಲಾವಿದರಿಂದ ಹಲವಾರು ಕಂಪನಿಗಳು ಹುಟ್ಟಿ ಕೊಂಡವು.

ಶಿರಟ್ಟಿ ವೆಂಕೋಬರಾಯರ ಕಂಪನಿ, ಜಟ್ಟಿಪ್ಪನವರ ಹಲಗೇರಿ ಕಂಪನಿ, ವಾಮನರಾವ ಮಾಸ್ತರರ ಕಂಪನಿ, ಗರುಡರ ಕಂಪನಿ, ಹೊಸಮನಿಯವರ ಗೋಕಾಕ್ ಕಂಪನಿ, ದತ್ತಂಭಟ್ಟರ ಜಮಖಂಡಿ ಕಂಪನಿ, ಏಣ್ಗಿ ಬಾಳಪ್ಪನವರ ಕಲಾ ವೈಭವ ಕಂಪನಿ, ಭೀಮಪ್ಪ ಹೂಗಾರರ ಅಥಣಿ ಕಂಪನಿ, ವಾಲಿ ಚನ್ನಪ್ಪನವರ ಸಂಪಗಾವಿ

[illegible]

ಕಂಪನಿ, ಅಭಿಗೇರಿ ಕಂಪನಿ, ವಾಣಿವಿಲಾಸ ಕಂಪನಿ ಇವೆಲ್ಲವು ವೃತ್ತಿರಂಗಭೂಮಿಗೆ ವೈಭವದ ಪರಂಪರೆಯನ್ನು ತಂದುಕೊಟ್ಟವು. ಸೀನರಿಗಳಿಗೆ, ಸಂಗೀತಕ್ಕೆ, ಹಾಸ್ಯಕ್ಕೆ ಹೀಗೆ ಒಂದೊಂದು ರೀತಿಯ ವೈಶಿಷ್ಟ್ಯಗಳಿಗೆ ಒಂದೊಂದು ಕಂಪನಿಗಳು ಆದ್ಯತೆ ನೀಡಿ ಪ್ರೇಕ್ಷಕರನ್ನು ಆಕರ್ಷಿಸಲು ಮುಂದಾದವು. ಸ್ವಾತಂತ್ರ್ಯ ಪೂರ್ವದ ಸನ್ನಿವೇಶದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಮತ್ತು ಸಮಾಜ ಸುಧಾರಣೆಗೆ ಪ್ರೇರಕವಾಗುವಂಥ ನೀತಿಯ ಪಾಠ ಕೊಡುವಂಥ ನಾಟಕಗಳನ್ನು ಕಂಪನಿಗಳು ಪ್ರದರ್ಶಿಸಿದವು. ಜನರಲ್ಲಿ ಜಾಗೃತಿ ಮೂಡಿಸಿದವು. ಕಂದಗಲ್ಲರ ಅಕ್ಷಯಾಂಬರ, ಚಿಕ್ಕೋಡಿ ಶಿವಲಿಂಗ ಸ್ವಾಮಿಗಳ 'ಕಿತ್ತೂರ ಚನ್ನಮ್ಮ' ನಾಟಕಗಳನ್ನು ನೋಡಿದ ಜನ ಸ್ವಾತಂತ್ರ ಚಳುವಳಿಗೆ ಸ್ಫೂರ್ತಿಯನ್ನು ಪಡೆದಿದ್ದು ರೋಮಾಂಚಕಾರಿ ಇತಿಹಾಸ.

ಸಂಗೀತ ನಾಟಕಗಳಿಂದ ರಂಗ ಸಂಗೀತ ಪರಂಪರೆ, ಅಭಿಜಾತನಟರಿಂದ ನಟನೆ ಪರಂಪರೆ ನಿರ್ಮಿಸಿದ ಶ್ರೇಯಸ್ಸು ವೃತ್ತಿರಂಗಭೂಮಿಯದು. ಸ್ವಾತಂತ್ರ್ಯೋತ್ತರದ ಸನ್ನಿವೇಶದಲ್ಲಿ ವೃತ್ತಿರಂಗಭೂಮಿಯು ಸಿನೇಮಾದ ಹಾವಳಿಯಿಂದ ಶ್ರೀರಂಗ-ಕೈಲಾಸಂರ ನಾಟಕಗಳಿಂದ ಪ್ರೇಕ್ಷಕರ ಸಮಸ್ಯೆಯನ್ನು ಎದುರಿಸುವಂತಾಯಿತು. ಇಂಗ್ಲೆಂಡಿಗೆ ಹೋಗಿ ಬಂದಿದ್ದ ಕೈಲಾಸಂ, ಶ್ರೀರಂಗರ ರಂಗಭೂಮಿಯ ಪರಿಕಲ್ಪನೆಗಳಿಂದ ಸಮಕಾಲೀನ ವಸ್ತುಗಳನ್ನಾಧರಿಸಿದ ನಾಟಕಗಳಿಂದ ನಾಡಿನುದ್ದಕ್ಕೂ ಹವ್ಯಾಸಿ ರಂಗಭೂಮಿಯ ಹೊಸ ಅಲೆಯು ಎದ್ದಿತು. ಶ್ರೀರಂಗರೇ ಮುಂದಾಗಿ ಧಾರವಾಡದಲ್ಲಿ ರಂಗತಂಡವನ್ನು ಕಟ್ಟಿದರು. ಅವರ ನಾಟಕಗಳ ಪ್ರಭಾವದಿಂದ ಬಿಜಾಪುರ, ಬಾಗಲಕೋಟೆ, ಬೆಳಗಾವಿಗಳಲ್ಲಿ ಕೆಲವು ರಂಗತಂಡಗಳು ಹುಟ್ಟಿಕೊಂಡವು. ಶ್ರೀರಂಗರ ನಾಟಕಗಳ ನಂತರ ಈ ತಂಡಗಳು ಜಿ.ಬಿ.ಜೋಶಿ, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಪಾಟೀಲ್, ಚಂದ್ರಕಾಂತ ಕುಸನೂರರ ನಾಟಕಗಳಿಂದ ಮತ್ತೆ ಉತ್ಸಾಹ ಪಡೆದುಕೊಂಡವು. ಇತ್ತೀಚೆಗೆ ನೀನಾಸಂ ನಾಟಕಗಳು, ಅಕಾಡೆಮಿಯ ನಾಟಕೋತ್ಸವಗಳು, ಸ್ಥಳೀಯ ಕೆಲವು ಪ್ರಯೋಗಗಳಿಂದ ಹವ್ಯಾಸಿ ರಂಗಭೂಮಿ ತನ್ನ ಅಸ್ತಿತ್ವವನ್ನು ಪ್ರದರ್ಶಿಸುತ್ತಿದೆ. ರಂಗಭೂಮಿಯತ್ತ ಪ್ರೇಕ್ಷಕರನ್ನು ಆಕರ್ಷಿಸಲು ಇಷ್ಟು ಪ್ರಯತ್ನಗಳು ಸಾಲವು. ಕಂಪನಿ ನಾಟಕಗಳಿರಲಿ, ಹವ್ಯಾಸಿ ನಾಟಕಗಳಿರಲಿ ಎಲ್ಲರೂ ಅದನ್ನು ಪ್ರೀತಿ ಯಿಂದ ನೋಡುವ ವಾತಾವರಣ ನಿರ್ಮಾಣವಾಗಬೇಕಾಗಿದೆ.

ಆಧುನಿಕ ರಂಗಭೂಮಿಯಲ್ಲಿ ಹೆಚ್ಚು ಹೆಚ್ಚು ತಂತ್ರಜ್ಞಾನವನ್ನು ಬಳಸಿಕೊಂಡಂತೆಲ್ಲಾ ಕಲೆಯು ಮೂಲೆಗುಂಪಾಗುತ್ತದೆ ಎಂಬ ಮಾತು ಕೇಳಿಬರುತ್ತದೆ. ರಂಗಭೂಮಿ ನೋಡಲು ರಂಗಸಜ್ಜಿಕೆ, ರಂಗಪರಿಕರಗಳು, ನೇಪಥ್ಯದಲ್ಲಿ ಅನುಕೂಲ, ಸೀನರಿಗಳು, ವಿದ್ಯುತ್‌ದೀಪಗಳ ವ್ಯವಸ್ಥೆ ಈ ಎಲ್ಲಾ ಅನುಕೂಲತೆಗಳು ಹೆಚ್ಚಾಗಿ ಬಂದು ನೋಡಲು ರಂಗಭೂಮಿ ಬಹಳ ಸುಂದರವಾಗಿ ಕಂಡುಬರುತ್ತದೆ. ಆದರೆ ಇವುಗಳ ವಿಜೃಂಭಣೆ ಅಲಂಕಾರಗಳೇ ಹೆಚ್ಚಾಗಿರುವುದರಿಂದ ಕಲೆ ಇಲ್ಲಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಎಂಬಂತೆ ಭಾಸವಾಗುವುದೂ ಉಂಟು. ಪಾತ್ರ ಅಭಿನಯಕ್ಕೆ ತಕ್ಕಂತೆ ಕೌಶಲ್ಯತೆ, ವಿನಯವಂತಿಕೆ, ಜಾಣ್ಮೆ, ಸಂದರ್ಭಕ್ಕೆ ತಕ್ಕಂತೆ ಚಾಣಾಕ್ಷತನ ಎಲ್ಲವುಗಳು ಒಗ್ಗೂಡಿದಾಗ ಮಾತ್ರ ಕಲಾವಂತಿಕೆಗೆ ಹೆಚ್ಚು ಹೆಚ್ಚು ಮೆರಗು ಬರಲು

ಸಾಧ್ಯವಾಗುತ್ತದೆ. ರಂಗನಟಿಯರು ಹೆಚ್ಚು ಹೆಚ್ಚು ತಮ್ಮ ಅಭಿನಯ ಕೌಶಲ್ಯವನ್ನು ಅಭಿವ್ಯಕ್ತಿಸಿ ಒಳ್ಳೆಯ ಅವಕಾಶಗಳಿದ್ದರೂ ಆರ್ಭಟದ ಸಂಗೀತ ಹಾಗೂ ವಾದ್ಯಗಳ ಹಲವು ಧ್ವನಿಗಳಲ್ಲಿ ಇವರ ಕಲೆ ಬರಿಯೇ ಶೋಕೇಸಿನ ಬೊಂಬೆಯಂತೆ ಕಾಣುತ್ತದೆ.

ರಂಗನಟಿಯರು ಮತ್ತು ಕಮರ್ಷಿಯಲ್ : ಈ 'ವ್ಯವಹಾರಿಕ ದೃಷ್ಟಿಕೋನ' ಎನ್ನುವುದು ವಿಶ್ವದ ಎಲ್ಲಾ ವ್ಯವಸ್ಥೆಯಲ್ಲಿ ತನ್ನ ಅನನ್ಯತೆಯನ್ನು ತೋರಿಸುತ್ತಾ ಬಂದಿದೆ. ಮೊದ ಮೊದಲು ಯಾವ ನಾಗರೀಕನಿಗೂ ಅಷ್ಟರ ಮಟ್ಟಿಗೆ ವ್ಯವಹಾರಿಕತೆ ಮನೋಭಾವನೆಯು ಉಂಟಾಗಿರಲಿಲ್ಲ. ಇತ್ತೀಚೆಗೆ ಇದರ ಪ್ರಭಾವ ಎಲ್ಲೆಡೆಯೂ ಮೂಡುತ್ತಿದೆ. ಅಂತಹದರಲ್ಲಿ ರಂಗನಟಿಯರು ಈ ವ್ಯವಸ್ಥೆಗೆ ಒಳಗಾಗಿದ್ದಾರೆ. ಎಲ್ಲದಕ್ಕೂ 'ಹಣ'ವೇ ಮೂಲ. 'money makes many things ಹಾಗೆಯೇ money is a good servent and bad master ಆದ್ದರಿಂದ, ಹಣ ನಮಗೆ ಬೇಕು. ಹಣವಿಲ್ಲದೆ ನಾವು ಏನನ್ನು ಪಡೆಯಲಾರೆವು. ಆದರೆ ಹಣವೇ ಎಲ್ಲದೂ ಅಲ್ಲ. ಹಣಬೇಕು ಎಷ್ಟೋ ಅಷ್ಟು. ಆದ್ದರಿಂದ ಮಾನವತೆ ಮುಖ್ಯ ಮಾನವಧರ್ಮವೇ ಎಲ್ಲದಕ್ಕೂ ಮೂಲ ಹಾಗೂ ಮೌಲ್ಯಾಧಾರಿತವಾದುದು.

ಆಧುನಿಕತೆಯ ಮೋಹಕ್ಕೆ ಸಿಲುಕದೇ ಇರುವವರು ಯಾರೂ ಇಲ್ಲ. ಆದ್ದರಿಂದ ರಂಗನಟಿಯರು ಇದಕ್ಕೆ ಹೊರತಾಗಿಲ್ಲ. ಜಾಗತೀಕರಣ ಹಾಗೂ ಉದಾರೀಕರಣದ ವ್ಯವಸ್ಥೆಯಲ್ಲಿ ಕಲೆಗಳೆಲ್ಲವೂ ಮಣ್ಣುಗೂಡುತ್ತಿವೆ. ಕಲೆ, ಸಾಹಿತ್ಯ, ಸಂಗೀತವೆನ್ನುವುದು ಕೇವಲ ಆಸಕ್ತರಿಗೆ ಮಾತ್ರ. ಈಗೀಗ ಜೀವನೋತ್ಸಾಹ ಕೂಡ ಕಡಿಮೆಯಾಗುತ್ತಿದೆ. ನಾನು ನನ್ನದೆನ್ನುವ ಅಹಮಿಕೆ ಆಂತರಿಕ ಬಾಹ್ಯತೆಯಲ್ಲಿ ಅನಂತರವಾದ ಸ್ಥಿತ್ಯಂತರ. ಈ ರೀತಿಯ ಬದಲಾವಣೆಗಳು ಎಲ್ಲೆಲ್ಲೂ ಮನೆಮಾಡಿಕೊಂಡಿದ್ದು ಜಡವ್ಯವಸ್ಥೆಯ ಮೌಢ್ಯತೆ ಎಲ್ಲೆಲ್ಲೂ ತುಂಬಿಕೊಂಡಿದೆ.

ಹೆಚ್ಚಾಗಿ ರಂಗನಟಿಯರು ಮನೆಯ ಆರ್ಥಿಕ ಪರಿಸ್ಥಿತಿಯ ಸಲುವಾಗಿ ಈ ಕ್ಷೇತ್ರವನ್ನು ಪ್ರವೇಶಿಸಿದ್ದರಿಂದ, ಇವರೂ ಕೂಡ ವ್ಯವಹಾರಿಕವಾಗಿಯೇ ಕಲಾಸೇವೆಯನ್ನು ಮಾಡಿದ್ದಾರೆ. ಪಾತ್ರಕ್ಕೆ ತಕ್ಕಂತೆ ಅಭಿನಯ ಹಾಗೂ ಆಸಕ್ತಿಗಳಿದ್ದರೂ ವ್ಯವಹಾರಿಕ ದೃಷ್ಟಿಕೋನದಿಂದ ನಾಟಕದಲ್ಲಿ ಪಾತ್ರವಹಿಸುತ್ತಿದ್ದಾರೆ. ಕೆಲವು ಹಾಸ್ಯನಟಿಯರಂತೂ ನಾಟಕದಲ್ಲಿ ಮಾತೇ ಬೇರೆ ಇವರು ಆಡುವ ಮಾತೇ ಬೇರೆಯಾಗಿರುತ್ತದೆ. ಅದಕ್ಕೆ ಪುರುಷ ಪಾತ್ರಧಾರಿಗಳೂ ಕೂಡ ಅವಾಚ್ಯ ಶಬ್ದಗಳನ್ನು ಬಳಸಿದಾಗ ನಟಿಯರು ತಮ್ಮ ಪಾತ್ರ ಪ್ರೇಕ್ಷಕರೆದುರು ಘನತೆ ತಪ್ಪುವದೆಂಬ ಭಯದಿಂದ ತಾವು ಅವರಿಗೇನು ಕಡಿಮೆ ಎಂಬಂತೆ ಅವರ ಪ್ರಶ್ನೆಗೆ ತಕ್ಕಂತೆ ಮರು ಉತ್ತರ ನೀಡಿ ಪ್ರೇಕ್ಷಕರು ನಗೆಗಡಲಿನಲ್ಲಿರುವಂತೆ ಪ್ರಯತ್ನಿಸುತ್ತಾರೆ. ಪಾತ್ರಕ್ಕೆ ಜೀವತುಂಬುವಂತೆ ಹೆಚ್ಚು ಹೆಚ್ಚು ಪ್ರಯತ್ನ ಪೂರ್ವಕವಾಗಿ ಶ್ರಮಿಸಿ ಕೆಲವು ನಟಿಯರು ರಂಗಭೂಮಿಯು ರಂಗೇರುವಂತೆ ಮಾಡುತ್ತಾರೆ. ಹಾಗೆಯೇ ಪಾತ್ರಕ್ಕೆ ತಕ್ಕಂತಹ ವೇಷಭೂಷಣ ಮಾಡಿಕೊಂಡು ಪ್ರೇಕ್ಷಕರ ಮನವನ್ನು ರಂಜಿಸುತ್ತಾರೆ. ಇನ್ನು ಕೆಲವು ವಿಪರ್ಯಾಸಗಳೆಂದರೆ ನಾಟಕ ಸಂಗೀತಗಾರರಾದ ಡಿ.ಎಂ.ತೋಟಯ್ಯ ಸ್ವಾಮಿಗಳು ಪ್ರಶ್ನಿಸುವಂತೆ.

ರಾಮು : ಅಡವಿಗೆ ಹೋದ ರಾಮ ಗಡ್ಡಮೀಸೆಗಳು ಹದಿನಾಲ್ಕು ವರ್ಷ ಬೆಳೆದಿರುತ್ತವೆ. ಆದರೆ ನಾಟಕದಲ್ಲಿಯ ರಾಮನು ಶೇವಿಂಗ್ ಮಾಡಿಸಿಕೊಂಡಿರುತ್ತಾನೆ. ಏಕೆ?

ದ್ರೌಪತಿ : ಉಪ ಪಾಂಡವರನ್ನು ಕಳೆದುಕೊಂಡ ದ್ರೌಪತಿಗೆ ಚಿನ್ನಾಭರಣವೇಕೆ? ಆಗ ಆಕೆಯು ಸಹಜವಾದ ವೇಷಭೂಷಣವನ್ನೇ ಹಾಕಿಕೊಳ್ಳಬೇಕು.

ಈ ರೀತಿಯ ವಿಪರ್ಯಾಸಗಳು ಘಟಿಸುತ್ತವೆ. ಆದ್ದರಿಂದ ನಟನೆಯಲ್ಲೂ, ನಟನಾ ಸಾಮರ್ಥ್ಯದಲ್ಲಿಯೂ ಮೂಲಪಾವ ಅರಿವು ತಿಳುವಳಿಕೆ ಮನುಷ್ಯನಲ್ಲಿರಬೇಕು. ಆದರೆ ಪಾತ್ರಕ್ಕೆ ತಕ್ಕಂತೆ, ವೇಷಭೂಷಣ, ಪಾತ್ರಕ್ಕೆ ತಕ್ಕಂತೆ ಮಾತು, ಅಭಿನಯ ಪ್ರೌಢತೆ, ಸಾಮರ್ಥ್ಯ ನಟನೆಗಾರಿಕೆ ಇರಬೇಕಾಗುತ್ತದೆ. "ನಾಟಕದಲ್ಲಿ ನಾಟಕೀಯತೆ ಇದೆಯೇ ಹೊರತು ಅಭಿನಯಕ್ಕಾಗಿ ಅಲ್ಲ." ಅಭಿನಯವನ್ನು ಒಳ್ಳೆಯ ರೀತಿಯಿಂದ ರೂಢಿಸಿಕೊಂಡು ಪ್ರೇಕ್ಷಕರ ಮನಮೆಚ್ಚುವಂತೆ ಅಭಿನಯಿಸಿದಾಗ ಮಾತ್ರ ಪ್ರೇಕ್ಷಕರ ಮನಸೂರೆಗೊಂಡ ನಟಿಯು ಯಾವಾಗಲೂ ಪ್ರೇಕ್ಷಕರ ಮನಗೆದ್ದು ಅಚ್ಚ ಅಳಿಯದೆ ಸ್ಮೃತಿ ಪಟಲದಲ್ಲಿ 'ನಟಿ' ನೆಲೆಸಿರುತ್ತಾಳೆ. ಯಾವಾಗಲೂ ನಾಟಕದಲ್ಲಿನ ಪಾತ್ರ ನೈಜತೆಯಿಂದ ಕೂಡಿರಬೇಕು. ಅದು ಬಿಟ್ಟು ನಾಟಕದಲ್ಲಿ ಇನ್ನೊಂದು ನಾಟಕವಾಡುವ ಜನರೇ ಹೆಚ್ಚು ಇದ್ದಾರೆ. ಇಂದಿನ ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಹಲವಾರು ರೀತಿಯ ವ್ಯತ್ಯಾಸಗಳನ್ನು ನಾವು ಕಾಣುತ್ತೇವೆ. ಅಂತಹದರಲ್ಲಿ ಪಾತ್ರಕ್ಕೂ, ಅಭಿನಯಕ್ಕೂ, ನೃತ್ಯಕ್ಕೂ ಎಲ್ಲವೂ ಬದಲಾವಣೆಗಳನ್ನು ಪಡೆದುಕೊಂಡು ಬಂದಿವೆ. ರಂಗಭೂಮಿಯಲ್ಲಿಯೂ ಹಲವಾರು ಬದಲಾವಣೆಗಳು ಬಂದಿದ್ದು ಪರಿಸ್ಥಿತಿಗನುಸಾರವಾಗಿ ಇಲ್ಲಿ ಅವುಗಳನ್ನೆಲ್ಲಾ ಅಂತರ್ಗತ ಮಾಡಿಕೊಳ್ಳುವ ಅನಿವಾರ್ಯತೆ ನಮ್ಮದಾಗಬೇಕಾಗಿದೆ.

ತಂತ್ರಜ್ಞಾನ ಮತ್ತು ನಟಿಯರು : ಹಿನ್ನೆಲೆ ಗಾಯನದಿಂದ ಜನರಿಗೆ ಹೆಚ್ಚಿನ ಸಂತೋಷ ಹಾಗೂ ಮನರಂಜನೆ ದೊರೆತಿದೆ. ಆದರೆ ಪಾತ್ರಕ್ಕೆ ಜೀವಂತಿಕೆಯ ಸ್ವ ಅನುಭವ ಬರುವುದಿಲ್ಲ. ಅಲ್ಲಿ ಗಾಯನಕ್ಕೂ, ಅಭಿನಯಕ್ಕೂ ವ್ಯತ್ಯಾಸ ಉಂಟಾಗುತ್ತದೆ. ಹಾಗೆಯೇ ಭಾವನೆಗಳೂ ಕೂಡ ಕಡಿಮೆಯಾಗುತ್ತವೆ. ಭಾವನಾಲೋಕದ ಆಳಕ್ಕೆ ಇಳಿಯಲು ಸಾಧ್ಯವಾಗುವುದಿಲ್ಲ. ಡಿ.ಎಂ.ತೋಟಯ್ಯ ಸ್ವಾಮಿಗಳ ಪ್ರಕಾರ "ಅಂದಿನ ಸಂಗೀತ ಬಟ್ಟೆ ಉಟ್ಟುಕೊಂಡಂತೆ, ಇಂದಿನ ಸಂಗೀತ ಬಟ್ಟೆ ಬಿಚ್ಚಿದಂತೆ ಇದೆ" ಎಂದೆನ್ನುತ್ತಾರೆ.

ಆಗಿನ ವ್ಯವಸ್ಥೆಗಿಂತ ಈಗಿನ ತಂತ್ರಜ್ಞಾನದ ವ್ಯವಸ್ಥೆ ಹೆಚ್ಚು ಪ್ರಗತಿಪರವಾಗಿದೆ. ಆದರೆ ಗೌರವ ಮಾತ್ರ ಕಡಿಮೆಯಾಗಿದೆ. ಆತ್ಮೀಯತೆ ಇಲ್ಲ, ಭಾವನೆಗಳು ಕೀಳಾಗಿವೆ. ಎಲ್ಲೆಲ್ಲೂ ವ್ಯವಹಾರಿಕ ದೃಷ್ಟಿಕೋನದಿಂದ ಮಾನಸಿಕವಾಗಿ ನಾವು ರಂಗಭೂಮಿಯಲ್ಲಿ ನಮಗೆ ಕುಬ್ಜತೆ ಉಂಟಾಗಿದೆ.

ಉಪಕರಣಗಳು : ಇಂದು ಧ್ವನಿಗಿಂತ ಸಂಗೀತ ಉಪಕರಣಗಳ ಧ್ವನಿಯೇ ಹೆಚ್ಚು ಉಪಯೋಗವನ್ನು ಪಡೆದುಕೊಂಡಿವೆ. ಹಿಂದೆ ಸಂಗೀತದಲ್ಲಿ ಹೆಚ್ಚು ಮಗ್ನರಾಗಿ ಸಂಗೀತ ಅಭ್ಯಾಸ ಮಾಡಿದವರು ಮಾತ್ರ

ನಾಟಕಗಳಲ್ಲಿ ಹಾಡುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಧ್ವನಿಯು ಇಂಪಾಗಿದ್ದರೇನು? ಬಿಟ್ಟರೇನು? ಇನ್ನಿತರ ಉಪಕರಣಗಳ ಧ್ವನಿಯೇ ಹೆಚ್ಚಾಗಿ ಧ್ವನಿವರ್ಧಕಗಳಲ್ಲಿ ಕೇಳುವುದರಿಂದ ಹಾಡುವವರ ಧ್ವನಿಯು ಇಂಪಾಗಿದ್ದರೇನು ಬಿಟ್ಟರೇನು ಹಾಗೆಯೇ ಅದು ನಡೆದುಕೊಂಡು ಹೋಗುತ್ತದೆ. ಆದರೆ ಹಿಂದಿನವರಿಗೆ ಈ ರೀತಿಯ ವ್ಯವಸ್ಥೆ ಇರಲಿಲ್ಲ. ಹಾಡುಗಾರಿಕೆಯಲ್ಲಿ ಪ್ರವೀಣರಾಗಿ, ಸಂಗೀತ ವಿದ್ವಾಂಸರು ಮಾತ್ರ ಹಾಡುತ್ತಿದ್ದರು. ಗತ್ತು, ಲಯಗಾರಿಕೆ, ಮೂಲ ಸಂಗೀತಕ್ಕೆ ಯಾವುದೇ ರೀತಿಯ ಧಕ್ಕೆ ಉಂಟಾಗದಂತೆ ಹಾಡುತ್ತಿದ್ದರು.

ಭಾವತನ್ಮಯತೆ ಇದ್ದು ಭಾವಾವೇಶಕ್ಕೆ ಒಳಗಾಗಿ ಹಾಡುತ್ತಿದ್ದರು. ಆದರೆ ಇಂದಿನ ನಾಟಕಗಳು ಕೊರಗಿ ಹೋಗಿವೆ, ನೈಜತೆಮೀರಿದೆ. ಜನರಿಗೆ ಮನೋರಂಜನೆ ಒದಗುವುದು ಹೆಚ್ಚಾಗಿ ಹಿನ್ನೆಲೆ ಗಾಯನದಿಂದ. ಆದರೆ ನಟಿಯು ತನ್ಮಯಳಾಗಿ ಹಾಡಿ ಕುಣಿಯುವುದು ಬೇರೆ ಬೇರೆ, ಹಾಕಿರುವ ಕ್ಯಾಸೆಟ್ಟಿಗೆ ತಕ್ಕಂತೆ ನೃತ್ಯ ಮಾಡುವುದು ಬೇರೆಯಾಗುತ್ತದೆ. ಇಲ್ಲಿ ನೈಜತೆಯು ಕಂಡು ಬರುವುದಿಲ್ಲ. ಬರೀ ಅಸಹಜವಾದ ಅಭಿನಯವೇ ಹೆಚ್ಚಾಗಿ ಕಂಡು ಬರುತ್ತದೆ.

ಪ್ರೇಕ್ಷಕರು ಕಲಾವಿದರ ಕೂಸುಗಳು : ಪ್ರೇಕ್ಷಕರು ಕಲಾವಿದರ ಕೈ ಕೂಸುಗಳು. ಏಕೆಂದರೆ ನಾವು ಏನನ್ನು ಕೊಡುತ್ತೇವೋ ಅದನ್ನು ಪ್ರೇಕ್ಷಕ ಸಹಜವಾಗಿ ಸ್ವೀಕರಿಸುತ್ತಾನೆ. ಆದ್ದರಿಂದ ನಾವು ಕೊಡುವಾಗ ಮೌಲ್ಯಯುತ ವಾದುದನ್ನು ಕೊಡಬೇಕು. ಸತ್ವಯುತವಾದುದನ್ನು ಜನರಿಗೆ ಕೊಟ್ಟಾಗ ಅದಕ್ಕೊಂದು ಅರ್ಥವಿರುತ್ತದೆ. ''ಅರ್ಥವಿಲ್ಲದ ಹಾಡು ಸಾವಿರಿದ್ದರೂ ವ್ಯರ್ಥ'' ಎನ್ನುವ ಹಾಗೆ ವ್ಯರ್ಥತೆಗೆ ನಾವು ಅವಕಾಶ ವನ್ನು ಕೊಡದೆ ಸದುಪಯೋಗಕ್ಕೆ ನಾವು ಹೆಚ್ಚು ಮನ್ನಣೆ ನೀಡಬೇಕು.

ನಾಟಕಕಾರ : ನಾಟಕ ರಚನಾಕಾರರು ಸಮಾಜದಲ್ಲಿ ಆಗುವ ಅನ್ಯಾಯದ ವಿರುದ್ಧ ನಾಟಕ ರಚಿಸಿದರೆ, ಅದು ಸಮಾಜಕ್ಕೆ ನಾವು ನೀಡುವ ಕೊಡುಗೆ. ನಾವು ಏನನ್ನು ಕೊಡುತ್ತೇವೆಯೋ ಅದನ್ನು ಪ್ರೇಕ್ಷಕ ಸ್ವೀಕರಿಸುತ್ತಾನೆ. ಪೌರಾಣಿಕ ಹಾಗೂ ಐತಿಹಾಸಿಕ, ಜಾನಪದ ನಾಟಕಗಳನ್ನು ಒಳ್ಳೆಯವೇ ಮೌಲ್ಯಾಧಾರಿತವಾಗಿರುವವೇ ಇವೆ. ಆದರೆ ಇತ್ತೀಚೆಗೆ ಸಾಮಾಜಿಕ ನಾಟಕಗಳನ್ನು ಕೆಲವು ಸಾಹಿತಿಗಳು ತೀರ ಕುಬ್ಜತೆಯಿಂದ ಬರೆದಿರುತ್ತಾರೆ. ಏಕೆಂದರೆ ಕೆಲವು ಪಾತ್ರಧಾರಿಗಳು ಒತ್ತಾಯದಿಂದ ನಟಿಯರನ್ನು ರಂಗದಲ್ಲಿಯೇ ಎತ್ತಿಕೊಂಡಾಗ ನಟಿಯಾದ ಮಹಿಳೆಯು ಪ್ರತಿಭಟಿಸಿದಾಗ ಆಗ ಪಾತ್ರಧಾರಿ ವ್ಯಕ್ತಿಯು ಬನ್ನಿ ನೋಡಿ ಆ ಪುಸ್ತಕದಲ್ಲಿ ಎತ್ತಿಕೊಂಡು ಹೋಗಬೇಕು ಎಂದು ಬರೆದಿದ್ದಾರೆ ಎಂದು ತೋರಿಸುವನು. ಆದ್ದರಿಂದ ಸಾಹಿತಿಗಳು ಕೊಡುವ ಸಾಹಿತ್ಯ ಮೌಲ್ಯಾಧಾರಿತವಾಗಿದ್ದರೆ ಈ ಪ್ರಶ್ನೆಯೇ ಬರುವುದಿಲ್ಲ. ಅಶ್ಲೀಲತೆ ಭಾಷೆ ಇರುವುದು, ಎರಡು ಅರ್ಥ ಬರುವ ಒಂದು ಪದವನ್ನು ಬಳಸುವುದು. ಇವೆಲ್ಲ ವ್ಯಂಗ್ಯತೆಗೆ, ಅಸಹ್ಯಕ್ಕೆ ಎಡೆ ಮಾಡಿಕೊಡುತ್ತವೆ. ಆದ್ದರಿಂದ ನಾವು ಒಳ್ಳೆಯದನ್ನು ಕೊಟ್ಟರೆ ಅದು ಒಳ್ಳೆಯ ಪರಿಣಾಮವಿರುತ್ತದೆ. ಕೆಟ್ಟದ್ದನ್ನು ನಾವು ಕೊಟ್ಟರೆ ಅದು ಸಮಾಜಕ್ಕೆ ಕೆಟ್ಟದನ್ನೇ ಕೊಡುತ್ತದೆ. ಪ್ರೇಕ್ಷಕರು ಕಲಾವಿದರ ಕೈ ಕೂಸುಗಳು ನಾವು ಏನನ್ನು ಕೊಡುತ್ತೇವೆಯೋ

ಅದನ್ನು ಅವರು ಸ್ವೀಕರಿಸುತ್ತಾರೆ. ಆದ್ದರಿಂದ ನಾವು ಸಮಾಜಕ್ಕೆ ಕೊಡುವುದನ್ನು ಒಳ್ಳೆಯದನ್ನು ಕೊಟ್ಟರೆ ಅದು ಒಳ್ಳೆಯ ಪರಿಣಾಮವನ್ನು ಸಮಾಜಕ್ಕೆ ಕೊಡುವುದರಲ್ಲಿ ಎರಡು ಮಾತಿಲ್ಲ.

ಕಾವ್ಯೇಷು ನಾಟಕಂ ರಮ್ಯಂ, ಕಾವ್ಯಗಳನ್ನೊಳಗೊಂಡ ನಾಟಕ ಸಾಹಿತ್ಯವೇ ರಮ್ಯವಾಗಿರುತ್ತದೆ. ಹೆಚ್ಚಾಗಿ ಹವ್ಯಾಸಿ ರಂಗಕಲಾವಿದರು ನಾಟಕ ಆಡುತ್ತಿರುವಾಗ ಸಾಹಿತ್ಯವನ್ನು ಮೀರಿ ಮಾತನಾಡುತ್ತಾರೆ. ಕಾರಣವಿಷ್ಟೇ. ಹವ್ಯಾಸಿಗಳಿಗೆ ಬೇಕಾಗಿರುವುದು ಕ್ಷಣಿಕ ಸುಖ, ತಾತ್ಕಾಲಿಕ ಮಜ ಹಾಗೂ ನಾವು ಸಾಮಾಜಿಕ ಹೊಣೆಯನ್ನು ಹೊತ್ತು ರಂಗಭೂಮಿಯನ್ನು ಬೆಳೆಸುತ್ತೇವೆ ಎನ್ನುವ ಯಾವ ಮನೋಭಾವ ಹವ್ಯಾಸಿಕಲಾವಿದರಲ್ಲಿ ಇರುವುದಿಲ್ಲ. ಅವರು ವರ್ಷದ ಹಬ್ಬ ಜಾತ್ರೆಗಳಲ್ಲಿ ಆಡುವ ನಾಟಕಗಳು ಅವರು ಸಂತಸದಿಂದ ಆ ಕ್ಷಣಗಳನ್ನು ಸಂಭ್ರಮವಾಗಿ ಕಳೆಯಬೇಕು ಅಷ್ಟೇ ಅದು ಬಿಟ್ಟು ಯಾವ ಮೌಲ್ಯಗಳ ಬಗ್ಗೆ ಈ ಹವ್ಯಾಸಿ ಕಲಾವಿದರು ಯೋಚಿಸದೇ ಇರುವುದು ಈ ರಂಗಭೂಮಿಯ ಕೊರತೆಯಾಗಿದೆ.

ಯಾವುದೇ ಒಂದು ನಾಟಕದ ಯಶಸ್ಸಿನ ಮೂಲ ಅದರ ಸಾಹಿತ್ಯ. ಪುಷ್ಟಿಕರವಾದ ಹಾಗೂ ಮೌಲ್ಯಾಧಾರಿತ ಸಾಹಿತ್ಯವು ನಾಟಕಗಳನ್ನು ಯಶಸ್ವಿಗೊಳಿಸುವುದರಲ್ಲಿ ಸಂದೇಹವಿಲ್ಲ. ಸಾಹಿತ್ಯಿಕವಾಗಿ ಅಂದಿನ ಹಾಗೂ ಇಂದಿನ ರಂಗಸಾಹಿತ್ಯವನ್ನು ಅವಲೋಕಿಸಿದಾಗ ಇವೆರೆಡರ ನಡುವೆ ಅಜಗಜಾಂತರ ವ್ಯತ್ಯಾಸವುಂಟು. ಹಿಂದಿನ ಕಾಲದ ಸಾಮಾಜಿಕ ಹಾಗೂ ಪೌರಾಣಿಕ ನಾಟಕಗಳು ಸಾಹಿತ್ಯಿಕವಾಗಿ ಶ್ರೀಮಂತವಾಗಿದ್ದವು. ಅಶ್ಲೀಲ ಹಾಗೂ ದ್ವಂದ್ವಾರ್ಥಗಳ ಸಂಭಾಷಣೆಯಿಂದ ಮುಕ್ತವಾಗಿದ್ದು ಅಂತರಂಗದ ಕದವನ್ನು ತೆರೆಸುತ್ತಿದ್ದವು. ಸಂಭಾಷಣೆಯು ವೀಕ್ಷಕರಲ್ಲಿ ವೈಚಾರಿಕ ಅಲೆಗಳನ್ನು ಪುಟಿದೆಬ್ಬಿಸುತ್ತಿತ್ತು. ಆದರೆ ಆ ರೀತಿಯ ಸಾಹಿತ್ಯವನ್ನು ನಾವು ಆಧುನಿಕ ರಂಗಸಾಹಿತ್ಯದಲ್ಲಿ ಕಾಣುವುದು ದುಸ್ತರ ಹಾಗೂ ದುರ್ಲಭ. ಆಧುನಿಕ ರಂಗಸಾಹಿತ್ಯವು ಕಳಪೆ, ಅರ್ಥಹೀನ ಹಾಗೂ ಅಶ್ಲೀಲ ಸಂಭಾಷಣೆಗಳಿಂದ ರಾರಾಜಿಸುತ್ತಿದ್ದು ಸುಲಭವಾಗಿ ಹಣದೋಚುವ ಸಾಧನವಾಗಿ ಪರಿಣಮಿಸಿದೆ. ಅಶ್ಲೀಲ ಸಂಭಾಷಣೆಗಳ ಬಗ್ಗೆ ರಂಗನಟಿಯರನ್ನು ವಿಚಾರಿಸಿದಾಗ ಅವರು ಮೊದಲು ಹಳಿಯುವುದು ನಾಟಕ ರಚನಾಕಾರರನ್ನು. ಸತ್ವವಿಲ್ಲದ ಸಂಭಾಷಣೆಗಳು ಸಾಹಿತ್ಯರೂಪದಲ್ಲಿ ಬರುವುದರಿಂದ ಅದರಂತೆಯೇ ಮಾತನಾಡುವುದು ನಮಗೆ ಅನಿವಾರ್ಯ ಎಂಬುದು ಹತ್ತಾರು ರಂಗನಟಿಯರ ಅಭಿಪ್ರಾಯವಾಗಿದೆ. ಮೌಲ್ಯಾಧಾರಿತ ಸಂಭಾಷಣೆಯನ್ನು ಒಳಗೊಂಡಂಥ ನಾಟಕಗಳನ್ನು ನಾವು ಇಂದು ಕಾಣುವುದು ವಿರಳ.

ಆಧುನಿಕ ರಂಗ ಸಾಹಿತ್ಯವು ದಿನದಿಂದ ದಿನಕ್ಕೆ ಮೌಲ್ಯವನ್ನು ಕಳೆದುಕೊಳ್ಳುತ್ತಿರುವುದರ ಹಿನ್ನೆಲೆಯನ್ನು ನಾವಿಲ್ಲಿ ಅವಲೋಕಿಸಲೇ ಬೇಕಾಗಿದೆ. ಜನರ ಆಸೆ ಅಭಿರುಚಿಗಳು ಪೀಳಿಗೆಯಿಂದ ಪೀಳಿಗೆಗೆ ಬದಲಾದುದು ಅವರ ವೈಚಾರಿಕ ಮಟ್ಟ, ಅವರ ಬದುಕಿನ ಹಾದಿ ಮೊದಲಾದವುಗಳು ರಂಗಸಾಹಿತ್ಯದ ವೈಭವವನ್ನು ಕೆಳಗಿಳಿಸಿದವು.

ಉತ್ಕೃಷ್ಟ ಮಟ್ಟದ ಸಾಹಿತ್ಯವನ್ನು ಒಳಗೊಂಡ ನಾಟಕಗಳು ಅಲ್ಲೊಂದು ಇಲ್ಲೊಂದು ಕಂಡು ಬಂದರೂ ಅವುಗಳನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಇಂದಿನ ಪ್ರೇಕ್ಷಕರು ವಿಫಲರಾಗುತ್ತಿದ್ದಾರೆ. Old is gold ಎನ್ನುವ ನಾಣ್ಣುಡಿಯಂತೆ ಹಳೆಯ ರಂಗ ಸಾಹಿತ್ಯವೇ ಬಹುಕಾಲ ದೇದೀಪ್ಯಮಾನವಾಗಿ ಬೆಳಗಬಲ್ಲದು. ಜನತೆಗೆ ನಾವು ಎಂಥ ಸಾಹಿತ್ಯವನ್ನು ಕೊಡಬೇಕು? ಏನನ್ನು ಕೊಟ್ಟಿದ್ದೇವೆ ಆ ಮೂಲಕ ಸಾಧಿಸಿರುವ ಸಾಮಾಜಿಕ ಪ್ರಗತಿ ಎಷ್ಟು? ಮುಂದೇನು ಮಾಡಬೇಕಾಗಿದೆ? ಎಂತಹ ಸಾಹಿತ್ಯದಿಂದ ವೈಚಾರಿಕ ನೆಲೆಗಟ್ಟಿನ ತುತ್ತತುದಿಯನ್ನೇರಲು ಸಾಧ್ಯ ಮುಂತಾದ ಪ್ರಶ್ನೆಗಳಿಗೆ ಇಂದಿನ ನಾಟಕ ರಚನಾಕಾರರು ಆತ್ಮಾವಲೋಕನ ಮಾಡಿಕೊಳ್ಳುತ್ತಾ ಉತ್ತರ ಹುಡುಕಬೇಕಾಗಿದೆ. ಈ ನಿಟ್ಟಿನಲ್ಲಿ ಅವರು ಪ್ರಯತ್ನಿಸಿದ್ದೇ ಆದರೆ ಖಂಡಿತ ಉತ್ತಮ ಸಾಹಿತ್ಯದ ರಚನೆ ಸಾಧ್ಯ.

ಕವಿಗಳು : ಕವಿಗಳೂ ಕೂಡ ಒಳ್ಳೆಯ ಗೀತೆಗಳನ್ನು ರಚಿಸಬೇಕು ಅದು ಬಿಟ್ಟು ಕೈಮುಗಿತೀನಿ ಪ್ರೀತ್ಸೆ, ಕಾಲಿಗೆ ಬೀಳುತ್ತೇನೆ ಪ್ರೀತ್ಸೆ ಎಂದು ಹಾಡುಗಳನ್ನು ಬರೆದರೆ ಒಳ್ಳೆಯ ಸಾಹಿತ್ಯ ರಚನೆಯಾಗುವುದಿಲ್ಲ. ಸಂಗೀತಕ್ಕೆ ಒತ್ತುಕೊಡುವ ಗೀತೆಗಳನ್ನು ನಾವು ರಚಿಸಿದರೆ ಅದನ್ನು ಪ್ರೇಕ್ಷಕ ಆಸ್ವಾದಿಸಿ ಆನಂದಿಸುತ್ತಾನೆ. ಅದು ಒಳ್ಳೆಯ ರೀತಿಯ ಮನರಂಜನೆಯಾಗಿದ್ದರೆ ಅಲ್ಲಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿದಂತಾಗುತ್ತದೆ. ಆದ್ದರಿಂದ ಹಿಂದೆ ಗೀತೆಗಳನ್ನು ರಚಿಸುವ ಸಾಹಿತಿಗಳು ಮೌಲ್ಯಯುತ ಹಾಗೂ ಮಾಧುರ್ಯದಿಂದ ಕೂಡಿದ್ದವು ಎಂಬುದಕ್ಕೆ ಅವನ್ನು ಇಂದಿಗೂ ಕೂಡ ಮತ್ತೆ ಮತ್ತೆ ಕೇಳಬೇಕೆಂಬ ಬಯಕೆಯು ನಮ್ಮಲ್ಲಿ ಉಂಟಾಗುತ್ತದೆ. ಆದರೆ ಈಗಿನ ಹಾಡುಗಳು ಸ್ಮೃತಿಯಲ್ಲಿ ಕೆಲವೇ ದಿನಗಳಿದ್ದು ಅವು ನಮ್ಮ ಸ್ಮೃತಿಪಟಲದಿಂದ ಮಾಯವಾಗಿ ಬಿಡುತ್ತವೆ.

ಕಲಾವಿದರು : ನಟ ಹಾಗೂ ನಟಿಯರು ತಾವು ಮಾಡುವ ಅಭಿನಯದಿಂದ ಪ್ರೇಕ್ಷಕರ ಮನವನ್ನು ಸೂರೆಗೊಳ್ಳಬೇಕು. ಅದು ಬಿಟ್ಟು, ನಾವು ಬಿಟ್ಟು ಹಾಕು, ಬಿಟ್‌ಹಾಕು ಎಂಬ ಹಾಡಿನಂತೆ ದೇಹದ ಅಂಗಾಂಗ ಪ್ರದರ್ಶಿಸುವುದು ನಮ್ಮ ಪರಂಪರೆಯ ಲಕ್ಷಣವಲ್ಲ ಎಂಬುದು ಇಲ್ಲಿಯ ಅಭಿಮತ. ಯಾವುದೇ ನಟಿ ಇಂಥ ಡ್ರೆಸ್ಸನ್ನು ಹಾಕಿಕೊ ಎಂದಾಗ ಅಲ್ಲಿರುವ ನಟಿಯರು ನಾವು ಈ ಬಟ್ಟೆಯನ್ನು ತೊಡುವುದಿಲ್ಲ ಎಂದು ಪ್ರತಿಭಟಿಸಿದ್ದರೆ, ಯಾವ ಪ್ರೇಕ್ಷಕನೂ ಇಂಥಹದೇ ಉಟ್ಟುಕೊಳ್ಳಿ ಎಂದು ಹೇಳುವುದಿಲ್ಲ. ಕಲಾವಿದರು ಬಿಚ್ಚಿ ಕುಣಿದರೆ ಅವರಿಗೆ ನೋಡಲು ಬಂದಿರುವುದೇನು? ಆದ್ದರಿಂದ ಪ್ರೇಕ್ಷಕರು ನಮ್ಮ ಕೈಗೂಸುಗಳು. ನಮ್ಮ ಪ್ರದರ್ಶನಕ್ಕೆ ತಕ್ಕಂತೆ ಅವರು ಪ್ರತಿಕ್ರಿಯೆ ನೀಡುತ್ತಾರೆ. ನಾವು ಕಲಿಸಿದಂತೆ ಅವರು ಕಲಿಯುತ್ತಾರೆ. ಪ್ರತಿಯೊಂದು ಮಗುವಿಗೂ ನಾವು ಸಂಸ್ಕೃತೀಕರಣಗೊಳಿಸಿದಂತೆ ಪ್ರತಿಯೊಬ್ಬ ಪ್ರೇಕ್ಷಕನನ್ನು ತಿದ್ದುವುದು ಕಲಾವಿದರು, ಸಾಹಿತಿಗಳು, ನಾಟಕಕಾರರು, ಸಂಗೀತಗಾರರು ಆದ ನಮ್ಮ ಕೈಯಲ್ಲಿ ಅವರು ಇರುತ್ತಾರೆ.

ಸಂಗೀತಗಾರ : ಹಿಂದಿನ ಸಂಗೀತಗಾರರಿಗೂ ಈಗಿನ ಕಾಲದ ಸಂಗೀತಗಾರರಿಗೂ ಬಹಳ ವ್ಯತ್ಯಾಸವಿದೆ. ಸಂಗೀತ ಪ್ರೇಕ್ಷಕ ಆಸ್ವಾದನೆಗೆ ತಕ್ಕಂತೆ ಇರುವ ಸಂಗೀತದ ಮಾಧುರ್ಯ ಎಲ್ಲರ ಮನವನ್ನು ರಂಜಿಸುತ್ತವೆ.

ಆದರೆ ಈಗಿನ ಸಂಗೀತ ಹೆಚ್ಚು ಮಾಧುರ್ಯದಿಂದ ಕೂಡಿರದೇ ಬರೀ ಉಪಕರಣಗಳ ಧ್ವನಿಯೇ ಹೆಚ್ಚಾಗಿ ಕೇಳುತ್ತಿದ್ದು ಅಶ್ಲೀಲ ಸಾಹಿತ್ಯದಿಂದ ಇಡೀ ವ್ಯವಸ್ಥೆಯೇ ಜಿಡ್ಡು ಹಿಡಿದು ಹೋಗಿದೆ. ಆದ್ದರಿಂದ ತೋಟಯ್ಯ ನವರು 'ಹಿಂದಿನ ಸಂಗೀತ ಬಟ್ಟೆ ಉಟ್ಟುಕೊಂಡಂತೆ ಈಗಿನ ಸಂಗೀತ ಬಟ್ಟೆ ಬಿಚ್ಚಿದಂತೆ' ಎಂದು ಹೇಳುತ್ತಾರೆ. ನಾವು ಕೊಡುವ ಸಂಗೀತ ಮನಸ್ಸಿಗೆ ಮುದವನ್ನು ನೀಡಬೇಕು. ಕೇಳುಗನು ತನ್ನ ನೋವನ್ನು ಮರೆತು ಅವನು ಯಾವಾಗಲೂ ಪ್ರಫುಲ್ಲನಾಗಿರಬೇಕು. ಸಂಗೀತಕ್ಕೆ ಯಾರು ತಾನೇ ಮನಸೋಲುವುದಿಲ್ಲ. ಸಂಗೀತದಿಂದ ಗಿಡ ಮರಗಳೂ ತಲೆದೂಗುತ್ತವೆ. ಸಂಗೀತದಿಂದಲೇ ಎಷ್ಟೋ ಜೀವಿಗಳು ಇಂದು ಬದುಕುತ್ತವೆ. ಮಾನಸಿಕ ಸ್ವಾಸ್ಥ್ಯವನ್ನು ನಾವು ಕಾಪಾಡಬೇಕೆಂದರೆ ಸಂಗೀತಕ್ಕೆ ನಾವು ಮೊರೆಹೋಗುತ್ತೇವೆ. ಸಂಗೀತ ಯಾವಾಗಲು ಮಾನಸಿಕ ದೃಢತೆ ಹಾಗೂ ನೆಮ್ಮದಿಯನ್ನು ಕಾಪಾಡುತ್ತದೆ. ಆದ್ದರಿಂದ ಒಬ್ಬ ಒಳ್ಳೆಯ ಸಂಗೀತಗಾರನು ಸುಮಧುರವಾದ ಒಂದು ಗೀತೆಯನ್ನು ಹಾಡಿದರೆ ಪ್ರೇಕ್ಷಕರೆಲ್ಲರು ಅದಕ್ಕೆ ತಲೆ ಬಾಗಿ ತಾವು ಅದರಲ್ಲಿ ಲೀನ ವಾಗುತ್ತಾರೆ.

ಸಂಗೀತದ ಆ ಗತ್ತು, ಲಯಗಾರಿಕೆ, ಸಂಗೀತದ ಮೋಡಿಗೆ ಸಿಲುಕದವರೇ ಇಲ್ಲ. ಸಂಗೀತದ ಆಳಕ್ಕೆ ನಾವು ಇಳಿದರೆ ಅದರಿಂದ ಹೊರಬರಲು ಸಾಧ್ಯವೇ ಇಲ್ಲ. ಸಂಗೀತಗಾರ ರಂಗಭೂಮಿಯಲ್ಲಿ ನಾಟಕದ ಅಭಿನಯಕ್ಕೆ ತಕ್ಕಂತೆ ಸಂಗೀತವನ್ನು ಅಳವಡಿಸಬೇಕು. ಅದು ಬಿಟ್ಟು ಅಶ್ಲೀಲ ಸಾಹಿತ್ಯದೊಂದಿಗೆ ಅನಗತ್ಯ ಧ್ವನಿಗಳನ್ನು ಉದ್ಘೋಷಿಸುವುದರಿಂದ ಮೂಲ ಸಂಗೀತಕ್ಕೆ ಅಲ್ಲಿ ಧಕ್ಕೆ ಉಂಟಾಗುತ್ತದೆ. ಆದ್ದರಿಂದ ಸಂಗೀತ ಒಂದು ಶಿಸ್ತನ್ನು ಹಾಗೆಯೇ ರೂಢಿಸಿಕೊಂಡರೆ ಮಾತ್ರ ಅದು ನಿಜವಾದ ಸಂಗೀತವೆನಿಸುತ್ತದೆ. ಅನವಶ್ಯಕ ಕುಣಿಸುವುದು ನಟಿ ಮನಸ್ಸಿಗೆ ಬೇಸರವಾಗುವಂತೆ ವ್ಯಂಗ್ಯವಾಗಿ ಇಲ್ಲದ ಮಾತುಗಳನ್ನು, ಇಲ್ಲದ ಸಂಗೀತವನ್ನು ಹಾಡಿಸಿ ತಮ್ಮ ಮನಬಂದಂತೆ ಇಂದಿನ ಪುರುಷ ಪಾತ್ರಧಾರಿಗಳು ವರ್ತಿಸುತ್ತಾರೆ. ಆದ್ದರಿಂದ ಈ ಎಲ್ಲ ಅವ್ಯವಸ್ಥೆಗೆ ಕಲಾವಿದ, ಸಂಗೀತಗಾರರು ಸಾಹಿತಿಗಳೇ ಕಾರಣವಾಗಿದ್ದು ಆ ತಪ್ಪು ಇಂದು ಇವರು ತಿದ್ದಿಕೊಳ್ಳ ಬೇಕಾಗಿದೆ.

ರಂಗ-ಸಂಗೀತ : ರಂಗಭೂಮಿಯಲ್ಲಿ ಸಂಗೀತಕ್ಕೆ ಎಷ್ಟು ಪ್ರಾಧಾನ್ಯ ನೀಡಬೇಕು, ಶಾಸ್ತ್ರೀಯವಾಗಿ ಸಂಗೀತ ಕಲಿತವರು ತಾವು ಕಲಿತದ್ದನ್ನೆಲ್ಲಾ ರಂಗದಲ್ಲಿ ಹಾಡಿದರೆ ಅವರು ಒಳ್ಳೆಯ ಗಾಯಕ/ಗಾಯಕಿಯರೆನಿಸಿ ಕೊಳ್ಳಬಹುದೇ ಹೊರತು ಒಳ್ಳೆಯ ನಟ/ನಟಿಯರೆನಿಸಿಕೊಳ್ಳುವುದಿಲ್ಲ. ಪ್ರೇಕ್ಷಕರಿಗೆ ನಾಟಕ ಬೇಕೇ ಹೊರತು ಶಾಸ್ತ್ರೀಯ ಸಂಗೀತ ನೃತ್ಯಗಳಲ್ಲ. ಒಳ್ಳೆಯ ಸಂಗೀತ ಕೇಳಬೇಕೆನ್ನುವವರು ಒಳ್ಳೆಯ ನೃತ್ಯ ನೋಡಬೇಕೆನ್ನು ವವರು ಅವುಗಳಿಗೆ ಮೀಸಲಾದ ಕಾರ್ಯಕ್ರಮಗಳಿಗೆ ಹೋಗಲು ಅವಕಾಶವಿರುತ್ತದೆ. ಆದ್ದರಿಂದ ನಾಟಕದ ವಸ್ತುವಿಗೆ ಪೂರಕವಾಗುವಷ್ಟು ಮಾತ್ರ ಸಂಗೀತ ನೃತ್ಯಗಳನ್ನು ಅಳವಡಿಸಬೇಕಾಗುತ್ತದೆ ಎಂದರೆ ನಾಟಕದಲ್ಲಿ ಸಂಗೀತಕ್ಕಿರುವುದು Functional value. ಕಂಪನಿ ನಾಟಕಗಳಲ್ಲಿ ಸಂಗೀತಕ್ಕೆ ಪ್ರಾಧಾನ್ಯವಿತ್ತು. ಆದರೆ ಒಬ್ಬ ನಟಿಯು ಹಾಡುಗಾರಿಕೆ ಚೆನ್ನಾಗಿದೆ ಎನ್ನುವ ಕಾರಣಕ್ಕೆ ಮಾಲೀಕರು ಯಾರನ್ನು ಕಂಪನಿಗೆ ಸೇರಿಸಿಕೊಳ್ಳುತ್ತಿರಲಿಲ್ಲ.

ಆಕೆಗೆ ಅಭಿನಯ ಸಾಮರ್ಥ್ಯವೂ ಇದೆ ಎನಿಸಿದಾಗ ಮಾತ್ರ ಕಂಪನಿಯಲ್ಲಿ ಪ್ರವೇಶ ದೊರಕುತ್ತಿತ್ತು. ಮಳವಳ್ಳಿ ಸುಂದರಮ್ಮ, ಬಿ.ಜಯಮ್ಮ ಮೊದಲಾದವರು ಒಳ್ಳೆಯ ನಟಿಯರೂ ಆಗಿದ್ದರು. ಜೊತೆಗೆ ಅವರು ಒಳ್ಳೆಯ ಗಾಯಕಿಯರೂ ಆಗಿರುತ್ತಿದ್ದರು.

ಒನ್ಸ್ ಮೋರ್ : ಕೆಲವು ಸಂದರ್ಭಗಳಲ್ಲಿ ಗಾಯನ ಔಚಿತ್ಯ ಮೀರುತ್ತಿದ್ದುದುಂಟು. ಅದರಲ್ಲಿಯೂ ಒಬ್ಬ ನಟ/ ನಟಿ ಒಂದು ಹಾಡು ಹಾಡಿದಾಗ 'ಒನ್ಸ್ ಮೋರ್' ಬೇಡಿಕೆ ಬಂದಾಗ ಮತ್ತೆ ಮತ್ತೆ ಆ ನಟ/ನಟಿ ಹಾಡಿದ್ದನ್ನೇ ಎರಡು ಮೂರು ಬಾರಿ ಹಾಡಬೇಕಾಗುತ್ತದೆ. ಇದರಿಂದ ನಾಟಕದ ಓಟ ಕುಂಠಿತವಾಗುತ್ತಿದ್ದುದರ ಜೊತೆಗೆ ರಸಭಂಗವಾಗುತ್ತಿತ್ತು. ಆದರೆ ಆಗಿನ ಪ್ರೇಕ್ಷಕರಿಗೆ ಇಂತಹ ಭಾವನೆ ಇರಲಿಲ್ಲ. ಆನಂದಿಸುವುದೊಂದೇ ಅವರ ಪರಮಗುರಿಯಾಗಿತ್ತು. ಯಾರೋ 'ಒನ್ಸ್ ಮೋರ್' ಎಂದರೆ ಬೇರೆ ಯಾರಿಗೂ ಕಿರಿಕಿರಿಯಾಗು ತ್ತಿರಲಿಲ್ಲ. ಒಂದು ರೀತಿಯಲ್ಲಿ ಎಲ್ಲರೂ ಸಮಾನಮನಸ್ಕರು. ಆ ಕಾಲದಲ್ಲಿ ಮಾಲೀಕರ ನಿರ್ಧಾರವೇ ಅಂತಿಮವಾಗಿತ್ತಲ್ಲವೆ? ಪ್ರೇಕ್ಷಕರನ್ನು ರಂಜಿಸುವುದಕ್ಕಾಗಿಯೇ ತಾವಿರುವುದು ಎನ್ನುವ ಭಾವನೆ ಅವರಿಗಿತ್ತು. ಆದ್ದರಿಂದ ಒನ್ಸ್ ಮೋರ್ ಎಂದಾಗ ಮತ್ತೆ ಹಾಡಕೂಡದು ಎಂದು ನಿರ್ಬಂಧ ಹೇರುವ ಸ್ಥಿತಿಯಲ್ಲಿ ಅವರಿರಲಿಲ್ಲ.

ಇಲ್ಲಿ ಒಂದು ತಮಾಷೆಯಿದೆ. ಅನೇಕ ಕಂಪನಿಗಳಲ್ಲಿ ಮಾಲಿಕನ ಹೆಂಡತಿ ಅಥವಾ ಪ್ರೇಯಸಿ ನಾಯಕಿಯಾಗಿರುತ್ತಿದ್ದಳು. ನಾಯಕಿಯ ಹಾಡಿಗೆ 'ಒನ್ಸ್ ಮೋರ್' ಬೇಡಿಕೆ ಬಂದರೆ ಮಾಲೀಕನಿಗೆ ಖುಷಿ ಯಲ್ಲವೆ? ಪ್ರೇಕ್ಷಕರ ಒನ್ಸ್ ಮೋರ್ ಬೇಡಿಕೆಗೆ ನಾಯಕಿ ಮನ್ನಣೆಕೊಟ್ಟ ಮೇಲೆ ಬೇರೆಯವರಿಗೆ ಒನ್ಸ್ ಮೋರ್ ಒತ್ತಾಯ ಬಂದಾಗ ಅವರೂ ಮತ್ತೆ ಹಾಡುವುದು ನ್ಯಾಯವಲ್ಲವೆ? ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಾಕಬಾರದಲ್ಲ. ಈ ಒನ್ಸ್ ಮೋರ್‌ಗಳು ನಟ/ನಟಿಯರ ಜನಪ್ರಿಯತೆಯ ಮಾನದಂಡಗಳೂ ಆಗಿದ್ದವು. ಪ್ರೇಕ್ಷಕರ ಮತ್ತು ರಂಗದ ನಡುವೆ ಸಂಪರ್ಕ ಕಲ್ಪಿಸುತ್ತಿದ್ದುದೂ ಈ ಒನ್ಸ್ ಮೋರ್ ಎನ್ನುವುದನ್ನು ಗಮನಿಸಬೇಕು (ಕನ್ನಡ ರಂಗಭೂಮಿ, ಲೇ: ಬಿ.ವಿ.ವೈಕುಂಠರಾಜು, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ವಿದ್ಯಾರಣ್ಯ, ಪುಟ, ೧೪-೧೫). ನಾಟಕಕ್ಕೆ ಮೊದಲು ಸಂಗೀತ ಬರುವ ನಟಿಯರನ್ನೇ ಪಾತ್ರಕ್ಕೆ ಕರೆಯಿಸುತ್ತಿದ್ದರು. ಹಿನ್ನೆಲೆಗಾಯನಕ್ಕಾಗಿ ತಂತ್ರಜ್ಞಾನದಿಂದಾಗಿ ಸಂಗೀತ ಬರದೇ ಇರುವ ನಟಿಯರು ರಂಗಭೂಮಿಗೆ ಪ್ರವೇಶ ಮಾಡಿದರು. ೧೯೭೦ರಲ್ಲಿ ಮೊದಲು ಧ್ವನಿವರ್ಧಕಗಳ ಪ್ರವೇಶವಾಯಿತು. ಡಿ. ಎಂ. ತೋಟಯ್ಯಸ್ವಾಮಿ "ನಾನು ಸುಮಾರು ಸಾವಿರದ ಹನ್ನೆರಡುನೂರು ನಾಟಕಗಳನ್ನು ಆಡಿಸಿದ್ದೇನೆ. ಎಪ್ಪತ್ತರ ದಶಕದಲ್ಲಿ ಮೊದಲು 'ದಿಲ್‌ರುಬಾ' ತಂತಿವಾದ್ಯವಿತ್ತು. (ಡಿ.ಎಂ.ಕಲ್ಲಯ್ಯನವರು) ನನ್ನ ತಂದೆಯವರೇ ಸಂಗೀತಗಾರರು ಆದ್ದರಿಂದ ನನಗೆ ಮನೆಯಲ್ಲಿಯೇ ಸಂಗೀತ ಅಭ್ಯಾಸವು ಉಂಟಾಯಿತು.

ಹಿನ್ನಲೆ ಗಾಯನ ಬಂದಿರುವುದರಿಂದ ರಂಗ ನಟಿಯರ ಅಳಲು ಏನೆಂದರೆ ನಾವು ಹಿಂದೆ ಎಲ್ಲಾ ನಾವೇ ಹಾಡುತ್ತಾ ಕುಣಿದು ಅಭಿನಯವನ್ನು ಮಾಡುತ್ತಿದ್ದೆವು. ಆದರೆ ಈಗ ಹಿನ್ನೆಲೆಗಾಯನ ಹಾಡುವುದಕ್ಕೂ ನಾವು ಅವರ ಜೊತೆಗೆ ಕುಣಿಯಲು ಇಲ್ಲಿ ಅಂತರ ಉಂಟಾಗುತ್ತದೆ. ಇಲ್ಲಿ ಭಾವನೆಗಳು ಬರುವುದೇ ಇಲ್ಲ. ಹಾಡಿದರೆ ನಮಗೆ ಹಾಡಿನೊಂದಿಗೆ ತಾನಾಗಿಯೇ ನಮಗೆ ಭಾವನೆಗಳು ಇಲ್ಲಿ ಹುಟ್ಟುತ್ತವೆ. ಆಗ ನಾವು ಸಹಜವಾಗಿ ಅಭಿನಯವನ್ನು ಮಾಡುತ್ತೇವೆ. ಅದು ಬಿಟ್ಟು ಹಾಡು ಒಂದು ನಮ್ಮ ಅಭಿನಯ ಇನ್ನೊಂದು ಹೀಗೆ ಆದಾಗ ನಮಗೆ ಗೊಂದಲವುಂಟಾಗಿ ಅಭಿನಯಿಸಲು ನಮಗೆ ಆಗುವುದೇ ಇಲ್ಲ.

ಹಿಂದಿನ ರಂಗಭೂಮಿ ಹಾಗೂ ಇಂದಿನ ರಂಗಭೂಮಿ ಇವೆರಡನ್ನು ನಾವು ನೋಡಿದಾಗ ಇಂದಿನ ರಂಗಭೂಮಿ ಹಿಂದಿನ ರಂಗಭೂಮಿಗಿಂತಲೂ ಹೆಚ್ಚು ಸುಂದರ ಅನುಕೂಲ. ಆದರೆ ಇಲ್ಲಿ ಮನುಷ್ಯ ಮೂಲತಃ ಅನುಕೂಲಗಳು ಹೆಚ್ಚಾದಂತೆ ಅವನು ಸೋಮಾರಿಯಾಗುತ್ತಾನೆ. ಕಲೆಯಲ್ಲಿ ನೈಜತೆ ಕಂಡು ಬರುವುದಿಲ್ಲ. ಬರೀ ನಾಟಕೀಯತೆಯೇ ಎಲ್ಲೆಲ್ಲೂ ಕಂಡುಬರುತ್ತದೆ. ಆದ್ದರಿಂದ ಸಹಜವಾದ ಅಭಿನಯಕ್ಕೆ ಸಹಜವಾದ ರಂಗಭೂಮಿ ಇದ್ದರೆ ಕಲೆಗೆ ಒಂದು ಮೌಲ್ಯತೆ ಕಂಡುಬರಲು ಸಾಧ್ಯವಾಗುತ್ತದೆ. ಇಂದಿನ ರಂಗಭೂಮಿಯಲ್ಲಿ ಅನುಕೂಲತೆ ಹೆಚ್ಚಾದಂತೆ ಸಹಜತೆಯು ದೂರವಾಗುತ್ತದೆ. ನಾವು ಉನ್ನತ ಮಟ್ಟದಲ್ಲಿ ಮೌಲ್ಯಗಳನ್ನು ಕಾಪಾಡಿಕೊಂಡು ಕಲೆಗೆ ಪ್ರೋತ್ಸಾಹಿಸಿದಾಗ ಮಾತ್ರ ಅಲ್ಲಿ ಕಲಾಭಿನಯ ಹೆಚ್ಚು ಮೆರಗನ್ನು ಪಡೆಯಲು ಸಾಧ್ಯವಾಗುತ್ತದೆ. ಕಥಾವಸ್ತುಗಿಂತ ಕಲಾವಿದೆಯ ಮಾತುಗಳು ಅಭಿನಯಕ್ಕೆ ಕಾರಣವೆಂದರೆ ಅದು ಅತಿಶಯೋಕ್ತಿ ಯಾಗಲಾರದು. ಹಲವು ರಂಗ ಕಲಾವಿದೆಯರು ಚಪ್ಪಾಳೆಗಿಟ್ಟಿಸಿಕೊಳ್ಳುವುದೇ ಅವರ ಮಾತು ಹಾಗೂ ಅಭಿನಯದಿಂದ. ಆದರೆ ಆಧುನಿಕ ರಂಗನಟಿಯರು (ನಾನು ಕ್ಷೇತ್ರಕಾರ್ಯ ಮಾಡಿದ (೨೦-೨-೨೦೦೩) ಕೂಡ್ಲಿಗಿ ಬಿ.ಶಿವಕುಮಾರಿ, ಎಂ. ಮಂಜುಳ ಇವರ ಅಭಿಪ್ರಾಯದಂತೆ) ಈಗಿನ ನಟಿಯರು ಸರಿಯಾಗಿ ಮಾತುಗಳನ್ನು ಕಲಿಯುವುದಿಲ್ಲ. ಕೈಯಲ್ಲಿ ಬರೆದುಕೊಂಡು ಹೋಗುತ್ತಾರೆ. ತಮ್ಮ ಕರ್ತವ್ಯ ಹಾಗೂ ಕಲೆಯ ಬಗ್ಗೆ ಅವರಿಗೆ ನಿಷ್ಠೆಯೂ ಇಲ್ಲ. ಮಾತು ತಪ್ಪಲು ಬರೀ ಕುಣಿಯುವುದು ಹಾಗೂ ಪಾತ್ರಾಧಾರಿಯ ಜೊತೆಗೆ close ಆಗಿ move ಆಗುವುದು. ಆಗ ಇಡೀ ನಾಟಕವನ್ನೇ ತಿರುವು ಮುರುವು ಮಾಡಿ ರಂಗಭೂಮಿಯನ್ನು ಅದ್ವಾನ ಮಾಡುವುದು ನಮ್ಮ ನಟಿಯರ ಬದುಕಾಗಿದೆ.

ಈಗೀಗ ಬರೀ ಎಲ್ಲೆಲ್ಲೂ ವ್ಯವಹಾರಿಕ ದೃಷ್ಟಿಕೋನ ತುಂಬಿರುವಾಗ ಜೀವನದಲ್ಲಿ ನಾಟಕ ಮಾಡುತ್ತಿರುವಾಗ ಇನ್ನೂ ನಾಟಕದಲ್ಲಿ ನಾಟಕವಾಡುವುದು ಯಾವ ದೊಡ್ಡ ಮಹಾ. ಎಲ್ಲಾ ಯಾಂತ್ರೀಕರಣದಿಂದ ತುಂಬಿಹೋಗಿದೆ. ಈ ಜಗತ್ತು ದೈನಂದಿನ ಬದುಕೇ ಯಾಂತ್ರಿಕ. ಎಲ್ಲ ಅಸಹಜ ನಡೆನುಡಿ. ಎಲ್ಲವೂ ವಿಪರ್ಯಾಸ ಹಾಗೂ ವೈಚಿತ್ರ್ಯದಿಂದ ತುಂಬಿಹೋಗಿವೆ. ಭ್ರಮನಿರಸ ಬದುಕಿನಲ್ಲಿ ಎಲ್ಲವೂ ಅಸ್ಪಷ್ಟ. ನಾವು ಅಂದುಕೊಳ್ಳುವುದೇ ಒಂದು ಆದರೆ ಆಗುವುದೇ ಮತ್ತೊಂದು. ರಂಗಭೂಮಿಯಲ್ಲಿ ಚಟುವಟಿಕೆಯಿಂದ ಇರುವುದು ಪ್ರತಿಯೊಬ್ಬ ಕಲೆಗಾರರ ಕರ್ತವ್ಯ. ಆದರೆ ಕಲೆಯನ್ನು ಈಗಿನ ಕಲಾವಿದರು ಕೊಲೆಮಾಡಿದ್ದಾರೆ.

ಕಲೆಗಾಗಿಯೇ ಬದುಕು ಇದೆಯೇ ವಿನಃ ಬದುಕಿಗಾಗಿ ಕಲೆ ಇಲ್ಲ. ಹಲವಾರು ನಟಿಯರು ಕಲೆಗಾಗಿ ತಮ್ಮ ಜೀವನವಿಡೀ ವ್ಯಯಮಾಡಿ ತ್ಯಾಗಿಯಾಗಿ ಬದುಕಿದರೂ ಯಾರೂ ನಟಿಯರನ್ನು ಗೌರವಿಸಿ ಮನ್ನಣೆ ನೀಡುವುದಿಲ್ಲ. ಆದ್ದರಿಂದ ಆಧುನಿಕ ರಂಗಭೂಮಿಯ ಅನುಭವದ ನಟಿಯರು ಹೇಳುವಂತೆ ಹಿಂದೆ ಇದ್ದ ಹಾಗೆ ಇಂದು ನಟಿಯರಿಗೆ ಬೆಲೆ ಇಲ್ಲ. ಬರಿಯೇ ಡಬಲ್ ಮೀನಿಂಗ್ ಮಾತನ್ನು ಹೇಳಿ ಅಸಂಬದ್ಧ ಸಂದರ್ಭಗಳನ್ನು ಸೃಷ್ಟಿಸಿ ಅಶ್ಲೀಲವಾದ ಮಾತು ಕೇಳಿ ನಟಿಯರ ಕಿವಿಯು ಗಟ್ಟಿಯಾಗಿಹೋಗಿದೆ ಎನ್ನುತ್ತಾರೆ ಹಲವರು ನಟಿಯರು.

ನಾಟಕಗಳ ಹಾಡು ಮತ್ತು ಸಂಗೀತ

೧. ಪ್ರಾಚೀನ

೨. ಆಧುನಿಕ ಸ್ಥಿತ್ಯಂತರ

೩. ಪ್ರೇಕ್ಷಕರ ಅಭಿರುಚಿಯ ಬದಲಾವಣೆ

೪. ನಟಿಯರ ಬದಲಾದ ಮನೋಭಾವ

೫. ಕಂಪನಿ ನಾಟಕ ಥಿಯೇಟರನ ಆಧುನಿಕತೆ

ಪಾತ್ರಧಾರಿಯು ನಾಟಕ ಮುಗಿದ ಮೇಲೆ ಅದೇ ವೇಷದಲ್ಲಿ ದೇವಸ್ಥಾನಕ್ಕೆ ಹೋಗಿ ನಂತರ ಮನೆಗೆ ಬಂದಾಗ ಪಾತ್ರಧಾರಿಗೆ (ನಿವಾಳಿ ಆರತಿ, ದೃಷ್ಟಿ ಆರತಿ) ಆರತಿಗಳನ್ನು ಬೆಳಗಿ ಮನೆಯ ಒಳಗೆ ಕರೆದುಕೊಳ್ಳುತ್ತಿದ್ದರು. ಅಂದರೆ ಆಗಿನ ಕಾಲದಲ್ಲಿ ಸುಖ ಹಾಗು ಕಷ್ಟಗಳನ್ನು ಒಬ್ಬರಿಗಾದರೂ ಎಲ್ಲರೂ ಅದನ್ನು ಹಂಚಿಕೊಳ್ಳುತ್ತಿದ್ದರು. ಹಾಗಾಗಿ ಇಡೀ ಮನೆಯವರೆಲ್ಲರೂ ನಾಟಕ ಮಾಡಲು ಬಂದವರಿಗೆ ನಾಟಕಗಳನ್ನು ಆಡುವವರಿಗೆ ಸಂತೋಷದಿಂದಲೇ ಪ್ರೋತ್ಸಾಹ ನೀಡುತ್ತಿದ್ದರು.

ಮನೆಯಲ್ಲಿ ಹೆಣ್ಣು ಮಕ್ಕಳು ನನ್ನ ಗಂಡ ಪಾತ್ರ ಮಾಡಿದ್ದಾನೆ. ನನ್ನ ಮಗ ನಾಟಕ ಕಟ್ಟಿದ್ದಾನೆ, ನನ್ನಣ್ಣ ನಾಟಕ ಆಡುತ್ತಾನೆ. ನನ್ನ ತಮ್ಮ, ಕಕ್ಕ, ದೊಡ್ಡಪ್ಪ, ಮಾವ ಹೀಗೆ ಸಂಬಂಧಿಕರೆಲ್ಲರೂ ನಾಟಕಗಳನ್ನು ನೋಡಲು ಬಂದು ಸಂತಸವನ್ನು ಹಂಚಿಕೊಳ್ಳುತ್ತಿದ್ದರು. ಈಗೀಗ ಕೌಟುಂಬಿಕ ಜೀವನವು ತಮ್ಮ ಎಲ್ಲೆಯನ್ನು ಮೀರಿವೆ. ಪ್ರತಿಯೊಬ್ಬ ವ್ಯಕ್ತಿಯ ದೃಷ್ಟಿಕೋನವು ಸಂಪೂರ್ಣವಾಗಿ ಸ್ವಾರ್ಥ ಹಾಗೂ ವ್ಯವಹಾರಿಕದಿಂದ ತುಂಬಿದೆ. ಎಲ್ಲರಿಗೂ 'ನಾನು' ಎನ್ನುವ ಅಹಮಿಕೆ ಬಂದು ಬಂಧುತ್ವದ ಸೊಲ್ಲು ಪೂರ್ಣವಾಗಿ ಅಡಗಿದೆ. ನಮ್ಮ ಕೌಟುಂಬಿಕ ವ್ಯವಸ್ಥೆಗಳು ಛಿದ್ರಛಿದ್ರವಾಗಿವೆ. ಮೇಲುನೋಟಕ್ಕೆ ಒಂದು, ಮನಸ್ಸಿನಲ್ಲಿ ಇರೋದೇ ಇನ್ನೊಂದು. ಪ್ರತಿಯೊಬ್ಬ ರೈತನು ವರ್ಷಪೂರ್ತಿ ದುಡಿದು ಈ ಜಾತ್ರೆ ಉತ್ಸವಗಳಲ್ಲಿ ಸಂತಸದಿಂದ ಎರಡುದಿನ ಕಳೆಯಲು ತನ್ನೆಲ್ಲಾ ನೋವುಗಳನ್ನು ಮರೆಯಲು 'ರಂಗಭೂಮಿ'ಗೆ ಮೊರೆ ಹೋಗುತ್ತಾನೆ. ಆದ್ದರಿಂದ ತನ್ನ

ಲ್ಲಿರುವ ಕಲೆ, ಸಾಹಿತ್ಯವನ್ನು ನಾಟಕ ಮಾಧ್ಯಮದ ಮೂಲಕ ಅಭಿವ್ಯಕ್ತಿಸುತ್ತಾನೆ. ಆದರೆ ಇಂದಿನ ಸಂದರ್ಭದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಗಳು ಕಡಿಮೆಯಾಗಿ ಏಕಕುಟುಂಬವಿರುವುದರಿಂದ ರಂಗಭೂಮಿಗೆ ಇದರ ಹೊಡೆತ ಉಂಟಾಗಿದೆ. ನಾಟಕಗಳು ಈಗೀಗ ತುಂಬಾ ಕಡಿಮೆಯಾಗಿವೆ. ಎಲ್ಲರಿಗೂ ದುಡಿತ, ಹಣ, ಅವ್ಯವಹಾರ ಅಥವಾ ಯಾವುದೇ ಮೂಲಕವಾಗಲೀ ಹಣ ನಮಗೆ ಬೇಕು ಎನ್ನುವ ದೃಷ್ಟಿಯಿಂದ ಕಲೆ, ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಹಾಡು, ಕುಣಿತ, ಹಬ್ಬ ಇಂಥಹ ಸರ್ವತೋಮುಖ ಬೆಳವಣಿಗೆಗಳು ಸಂಪೂರ್ಣವಾಗಿ ನಾಶವಾಗಿವೆ ಎನ್ನಬಹುದು.

ಆಧುನಿಕ ಮಾಧ್ಯಮಗಳ ಪ್ರಭಾವ : ಇತ್ತೀಚೆಗೆ ವಿಜ್ಞಾನ ಬೆಳೆದಂತೆ ತಂತ್ರಜ್ಞಾನದ ಬೇಡಿಕೆ ಹೆಚ್ಚಾಗಿದೆ. ವೈಜ್ಞಾನಿಕವಾಗಿ ಸಿನೇಮಾ, ದೂರದರ್ಶನಗಳ ಪ್ರಭಾವದಿಂದ ರಂಗಭೂಮಿಗೆ ಕೊಡಲಿ ಪೆಟ್ಟನ್ನು ಕೊಟ್ಟಂತಾಗಿದೆ. ಹಾಗೆಯೇ ಸಮಯಕ್ಕೆ ಮನ್ನಣೆ ನೀಡುವವರು ಐದು ಆರು ತಾಸುಗಟ್ಟಲೇ ಯಾರು ಸಿನೇಮಾ ನೋಡುತ್ತಾರೆ. ಆದ್ದರಿಂದ, ಕೇವಲ ಮೂರುತಾಸುಗಳಲ್ಲಿ ಸಿನೇಮಾ ಮಂದಿರದಲ್ಲಿ ಕಾಲಕಳೆದರಾಯ್ತು ಈ ಹಳ್ಳಿ ಜನ ಆಡುವ ನಾಟಕಗಳನ್ನು ಯಾರುನೋಡುತ್ತಾರೆ ಎಂದು ಹೀಯಾಳಿಸಿ ಸಿನೇಮಾ ನೋಡುವವರೇ ಹೆಚ್ಚಾಗಿದ್ದಾರೆ. ಹೊಸ ಹೊಸ ರೀತಿಯ ಸಂಗೀತದ ಮೋಡಿಗೆ ಮಾರು ಹೋದವರು ರಂಗಭೂಮಿಯ ಕಡೆಗೆ ಹೆಜ್ಜೆಯನ್ನು ಹಾಕುವುದೇ ಇಲ್ಲ.

ದೂರದರ್ಶನ : ಪ್ರತಿಯೊಬ್ಬರ ಮನೆಗೆ ದೂರದರ್ಶನ ಪ್ರವೇಶವಾಗಿ ರಂಗಭೂಮಿಯ ಬೆಳವಣಿಗೆಯಲ್ಲಿ ಹಲವಾರು ರೀತಿಯಲ್ಲಿ ಸ್ಥಿತ್ಯಂತರಗಳು ಉಂಟಾಗಿವೆ. ದೂರದರ್ಶನ ಪ್ರಭಾವವು ಇಡೀ ಮನೆಯವರಿಗೆಲ್ಲಾ ಸಮಯ ಕಳೆಯಲು ಅನುಕೂಲವಾಗಿದೆ. ಆದ್ದರಿಂದ ರಂಗಭೂಮಿಗೆ ಪ್ರೇಕ್ಷಕರು ಕಡಿಮೆಯಾಗಿದ್ದಾರೆ. ದೂರದರ್ಶನ ಬಂದಾಗಿನಿಂದ ನಾಟಕಗಳು ಕಡಿಮೆಯಾಗಿ ವೃತ್ತಿರಂಗಭೂಮಿ ನಟಿಯರಿಗೆ ಇದರಿಂದ ತೊಂದರೆ ಯಾಗಿದ್ದು ಗ್ರಾಮೀಣ ಪ್ರದೇಶಗಳಲ್ಲಿ ನಾಟಕಗಳೂ ಕಡಿಮೆಯಾಗಿವೆ.

ವಿ.ಸಿ.ಪಿ. : ವಿ.ಸಿ.ಪಿ.ಯಿಂದಲೂ ನಾಟಕಕ್ಕೆ ತೊಂದರೆಯಾಗಿದೆ. ತಮಗೆ ಬೇಕಾದ ಸಿನೇಮಾ ನಾಟಕಗಳನ್ನು ಕ್ಯಾಸೆಟ್ಟುಗಳ ಮೂಲಕ ಹಾಕಿಕೊಂಡು ನೋಡುತ್ತಾರೆ. ನಾಟಕಕ್ಕೆ ಹೋಗಬೇಕು ರಂಗಭೂಮಿಗೆ ಹೋಗಬೇಕೆಂಬ ನಿಯಮವೇನೂ ಇಲ್ಲ. ಹಾಗಾಗಿ ದೂರದರ್ಶನದಲ್ಲಿ ನಾಟಕಗಳು ಹಾಗೂ ಹಲವಾರು ರೀತಿಯ ಕಾರ್ಯಕ್ರಮಗಳು ಬಿತ್ತರಗೊಳ್ಳುವುದರಿಂದ ನಾಟಕಗಳಿಗೆ ಪ್ರೇಕ್ಷಕರು ತುಂಬಾ ಕಡಿಮೆಯಾಗಿದ್ದಾರೆ. ಪ್ರೇಕ್ಷಕರು ಹಾಗೂ ರಂಗಭೂಮಿ ಆಸಕ್ತರು ಈ ಎಲ್ಲಾ ಕಾರಣಗಳಿಂದಲೂ ಕಡಿಮೆಯಾಗಿದ್ದಾರೆ. ಆಧುನಿಕ ಮಾಧ್ಯಮಗಳ ಪ್ರಭಾವದಿಂದ ರಂಗಭೂಮಿ ಬೇಡಿಕೆಯೂ ಕಡಿಮೆಯಾಗಿದೆ. ಈ ಸಂಘರ್ಷದ ನೆಲೆಯಲ್ಲಿ ರಂಗಭೂಮಿಯು ತನ್ನ ಅಸ್ತಿತ್ವಕ್ಕಾಗಿ ಹವಣಿಸುತ್ತಿದೆ. ಇವುಗಳ ಹೆಚ್ಚು ಪ್ರಭಾವದ ನಿಲುವಿನಲ್ಲಿ ರಂಗಭೂಮಿಯ ಬೆಳವಣಿಗೆ ಸ್ವಲ್ಪ ಮಟ್ಟಿಗೆ ಕುಂಠಿತವಾಗಿದೆ.

ಬಳ್ಳಾರಿ ಜಿಲ್ಲೆಯ ರಂಗನಟಿಯರ ವೈವಿಧ್ಯತೆ

ಜನಪದ ರಂಗಕಲಾವಿದೆಯರು	ತಾಲೂಕು	ಊರು
ಸುಜಾತಮ್ಮ	ಬಳ್ಳಾರಿ	ಬಳ್ಳಾರಿ
ಮೀನಳ್ಳಿ ಪಾರ್ವತಮ್ಮ	ಬಳ್ಳಾರಿ	ಬಳ್ಳಾರಿ
ಎಂ. ಅಂಬುಜಮ್ಮ	ಬಳ್ಳಾರಿ	ಬಳ್ಳಾರಿ
ಬಿ. ಉಷಾರಾಣಿ	ಬಳ್ಳಾರಿ	ಬಳ್ಳಾರಿ
ರಂಗವೇಣಿ	ಬಳ್ಳಾರಿ	ಬಳ್ಳಾರಿ
ಪಾರ್ವತಮ್ಮ	ಬಳ್ಳಾರಿ	ಬಳ್ಳಾರಿ
ಬಿ. ನಾಗಮ್ಮ	ಬಳ್ಳಾರಿ	ಬಳ್ಳಾರಿ
ಚಾಮುಂಡೇಶ್ವರಿ	ಬಳ್ಳಾರಿ	ಬಳ್ಳಾರಿ
ಹುಳೇಬೀಡು ರಂಗನಾಯಕಮ್ಮ	ಬಳ್ಳಾರಿ	ಬಳ್ಳಾರಿ
ಹರಿಜನ ಹನುಮಂತಮ್ಮ	ಬಳ್ಳಾರಿ	ಕಪ್ಪಗಲ್
ಹರಿಜನ ಪದ್ಮಮ್ಮ	ಬಳ್ಳಾರಿ	ಕಪ್ಪಗಲ್
ಗಂಗಮ್ಮ	ಬಳ್ಳಾರಿ	ಕುಡಿತಿನಿ
ಪದ್ಮಮ್ಮ	ಬಳ್ಳಾರಿ	ಕುಡಿತಿನಿ
ಜೆ. ಗಂಗಮ್ಮ	ಕೂಡ್ಲಿಗಿ	ವಿರೂಪಾಪುರ
ಎಸ್. ಅಂಜಿನಮ್ಮ	ಕೂಡ್ಲಿಗಿ	ವಿರೂಪಾಪುರ
ನಾಗರತ್ನಮ್ಮ	ಕೂಡ್ಲಿಗಿ	ವಿರೂಪಾಪುರ
ತಳವಾರ ಹಂಪಮ್ಮ	ಕೂಡ್ಲಿಗಿ	ವಿರೂಪಾಪುರ
ಕೆ. ನಾಗರತ್ನ	ಕೂಡ್ಲಿಗಿ	ವಿರೂಪಾಪುರ
ಬಿ. ಲಕ್ಷ್ಮೀದೇವಿ	ಕೂಡ್ಲಿಗಿ	ವಿರೂಪಾಪುರ
ಬಿ. ಕರಿಬಸಮ್ಮ	ಕೂಡ್ಲಿಗಿ	ವಿರೂಪಾಪುರ
ಹಟ್ಟಿ ಮಾರಮ್ಮ	ಕೂಡ್ಲಿಗಿ	ವಿರೂಪಾಪುರ
ಬಿ. ಭಾಗ್ಯಶ್ರೀ	ಕೂಡ್ಲಿಗಿ	ವಿರೂಪಾಪುರ

ಜನಪದ ರಂಗಕಲಾವಿದೆಯರು	ತಾಲೂಕು	ಊರು
ದೊಂಬರ ಯಲ್ಲಮ್ಮ	ಕೂಡ್ಲಿಗಿ	ವಿರೂಪಾಪುರ
ಕಾನಬೆಟ್ಟ ಈರಮ್ಮ	ಕೂಡ್ಲಿಗಿ	ವಿರೂಪಾಪುರ
ಕೆರೆ ಮದ್ದಮ್ಮ	ಕೂಡ್ಲಿಗಿ	ವಿರೂಪಾಪುರ
ಹುಲಿ ಸಿದ್ದಪ್ಪನವರ ಚೌಡಮ್ಮ	ಕೂಡ್ಲಿಗಿ	ವಿರೂಪಾಪುರ
ಎಸ್. ನಾಗವೇಣಿ	ಕೂಡ್ಲಿಗಿ	ವಿರೂಪಾಪುರ
ವಿಜಯಲಕ್ಷ್ಮಿದೇವಿ	ಕೂಡ್ಲಿಗಿ	ವಿರೂಪಾಪುರ
ಬಿ. ಶಾರದಮ್ಮ	ಕೂಡ್ಲಿಗಿ	ವಿರೂಪಾಪುರ
ಕರಿ ಬಸಮ್ಮ	ಕೂಡ್ಲಿಗಿ	ವಿರೂಪಾಪುರ
ಚೌಡಮ್ಮ	ಕೂಡ್ಲಿಗಿ	ಅಮ್ಮನಕೇರಿ
ಗಂಗಮ್ಮ	ಕೂಡ್ಲಿಗಿ	ಚೌಡಾಪುರ
ಮೇದಾರ ಚೌಡಮ್ಮ	ಕೂಡ್ಲಿಗಿ	ಸಿರಬಿ
ಬಿ. ಗಂಗಮ್ಮ	ಹ.ಬೊ.ಹಳ್ಳಿ	ವಟಮನಹಳ್ಳಿ
ಬಿ. ಸುಜಾತಮ್ಮ	ಹ.ಬೊ.ಹಳ್ಳಿ	ವಟಮನಹಳ್ಳಿ

ವೃತ್ತಿ ರಂಗಕಲಾವಿದೆಯರು	ತಾಲೂಕು	ಊರು
ಲಲಿತಮ್ಮ	ಬಳ್ಳಾರಿ	ಆಮಿದ್ಯಾಲ
ಮನ್ನೂರು ಸುಭದ್ರಮ್ಮ	ಬಳ್ಳಾರಿ	ಬಳ್ಳಾರಿ
ಆದವಾನಿ ಲಕ್ಷ್ಮಮ್ಮ	ಬಳ್ಳಾರಿ	ಆದವಾನಿ
ಭವಾನಿ	ಬಳ್ಳಾರಿ	ಬಳ್ಳಾರಿ
ಸರೋಜ	ಬಳ್ಳಾರಿ	ಬಳ್ಳಾರಿ
ಸುಶೀಲಾ	ಬಳ್ಳಾರಿ	ಬಳ್ಳಾರಿ
ಮಮತಾ	ಬಳ್ಳಾರಿ	ಬಳ್ಳಾರಿ
ವೀಣಾ	ಬಳ್ಳಾರಿ	ಆದವಾನಿ
ಚಾಮುಂಡೇಶ್ವರಿ	ಬಳ್ಳಾರಿ	ಯಳ್ಪಾರ್ತಿ
ಎ. ವರಲಕ್ಷ್ಮಿ	ಬಳ್ಳಾರಿ	ಬಳ್ಳಾರಿ

ವೃತ್ತಿ ರಂಗಕಲಾವಿದೆಯರು	ತಾಲೂಕು	ಊರು
ರತ್ನಾಬಾಯಿ	ಬಳ್ಳಾರಿ	ಬಳ್ಳಾರಿ
ಜ್ಯೋತಿ	ಬಳ್ಳಾರಿ	ಬಳ್ಳಾರಿ
ಭಾಗ್ಯ ಮೈಸೂರು	ಬಳ್ಳಾರಿ	ಬಳ್ಳಾರಿ
ಸುಧಾ ಮೈಸೂರು	ಬಳ್ಳಾರಿ	ಬಳ್ಳಾರಿ
ಭಾಗ್ಯಮ್ಮ	ಹಡಗಲಿ	ಹಡಗಲಿ
ಕಮಲವ್ವ	ಹಡಗಲಿ	ಹಡಗಲಿ
ರತ್ನಮ್ಮ	ಹಡಗಲಿ	ಸೋಗಿ
ಜೆ. ಗಂಗಮ್ಮ	ಹಡಗಲಿ	ಸೋಗಿ
ಜೆ. ಮಂಜುಳಾ	ಹಡಗಲಿ	ಸೋಗಿ
ಬಂಡ್ರಿ ಸಿದ್ದಮ್ಮ	ಹಡಗಲಿ	ಉತ್ತಂಗಿ
ಕಸ್ತೂರಿ	ಹಡಗಲಿ	ಹೊಳಗುಂದಿ
ತಿಪ್ಪಾಪುರ ಶಾಂತ	ಹಡಗಲಿ	ತಿಪ್ಪಾಪುರ
ಬಿ. ನಾಗಮ್ಮ	ಹಡಗಲಿ	ತಳಕಲ್ಲು
ದೇವಕವ್ವಾ	ಹೊಸಪೇಟೆ	ಹೊಸಪೇಟೆ
ಮಧುರಾ	ಹೊಸಪೇಟೆ	ಹೊಸಪೇಟೆ
ಮಂಗಳಾ	ಹೊಸಪೇಟೆ	ಹೊಸಪೇಟೆ
ಸರಸ್ವತಮ್ಮ	ಹೊಸಪೇಟೆ	ಹೊಸಪೇಟೆ
ಎ. ಅಂಬುಜಾ	ಹೊಸಪೇಟೆ	ಹೊಸಪೇಟೆ
ಭೀಮವ್ವಾ	ಹೊಸಪೇಟೆ	ಹೊಸಪೇಟೆ
ಪಾರ್ವತಮ್ಮ	ಹೊಸಪೇಟೆ	ಕಂಪ್ಲಿ
ವಾಸಂತಿ	ಹೊಸಪೇಟೆ	ಕಂಪ್ಲಿ
ನಾಗೇನಳ್ಳಿ ಈರಮ್ಮ	ಹೊಸಪೇಟೆ	ಕಂಪ್ಲಿ
ಡಿ. ಸಂಜೀವಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಡಿ. ಹನುಮಂತಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ

ವೃತ್ತಿ ರಂಗಕಲಾವಿದೆಯರು	ತಾಲೂಕು	ಊರು
ಬಾರಿಕರ ನಿಂಗಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ತಳವಾರ ಹನುಮಂತಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಬಿ. ಲಿಂಗಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಮಣಿಗಾರ ಹನುಮಂತಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಸೆರೆಗಾರ ಸುವರ್ಣಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಜೋಗಿ ಬಸಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಸುಮತೆಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಸೆರೆಗಾರ ಗಂಗಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ನಂದಿಹಳ್ಳಿ ರಾಮಕ್ಕ	ಹೊಸಪೇಟೆ	ಮರಿಯಮ್ಮನಹಳ್ಳಿ
ಎಂ. ಅಂಬುಜಾ	ಹೊಸಪೇಟೆ	ಮರಿಯಮ್ಮನಹಳ್ಳಿ
ತಿಮ್ಮಪ್ಪ ಬೂದಾಳು	ಹೊಸಪೇಟೆ	ಮರಿಯಮ್ಮನಹಳ್ಳಿ
ಶಾರದ	ಹೊಸಪೇಟೆ	ಮರಿಯಮ್ಮನಹಳ್ಳಿ
ಕನಕವ್ವ	ಹೊಸಪೇಟೆ	ಮರಿಯಮ್ಮನಹಳ್ಳಿ
ಅರಸಿಕೆರೆ ಯಲ್ಲವ್ವ	ಹೊಸಪೇಟೆ	ಮರಿಯಮ್ಮನಹಳ್ಳಿ
ಪಾರ್ವತಿ	ಹೊಸಪೇಟೆ	ಮರಿಯಮ್ಮನಹಳ್ಳಿ
ರೇಣುಕಾ	ಹೊಸಪೇಟೆ	ಮರಿಯಮ್ಮನಹಳ್ಳಿ
ಚಿಕ್ಕಾಡಿ ಗಂಗಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಆರ್. ನಾಗವೇಣಿ	ಹೊಸಪೇಟೆ	ಮರಿಯಮ್ಮನಹಳ್ಳಿ
ಕೂಡ್ಲಿಗಿ ನಾಗವೇಣಿ	ಹೊಸಪೇಟೆ	ಮರಿಯಮ್ಮನಹಳ್ಳಿ
ಎಸ್. ಯಶೋಧ	ಹೊಸಪೇಟೆ	ಮರಿಯಮ್ಮನಹಳ್ಳಿ
ಸೆರೆಗಾರ ಶ್ಯಾಮಲ	ಹೊಸಪೇಟೆ	ಮರಿಯಮ್ಮನಹಳ್ಳಿ
ಅನುರಾಧ ಮೈಸೂರು	ಹೊಸಪೇಟೆ	ಮರಿಯಮ್ಮನಹಳ್ಳಿ
ಗಂಟಿ ಹುಲಿಗೆಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಗಂಟಿ ಹನುಮಂತಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ

ವೃತ್ತಿ ರಂಗಕಲಾವಿದೆಯರು	ತಾಲೂಕು	ಊರು
ಶಾಂತಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಪದ್ಮಾವತಿ	ಹೊಸಪೇಟೆ	ಮರಿಯಮ್ಮನಹಳ್ಳಿ
ಚಂದ್ರಕಲಾ	ಹೊಸಪೇಟೆ	ಮರಿಯಮ್ಮನಹಳ್ಳಿ
ಕಾಳಿ ಗಂಗಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಶೈಲಶ್ರೀ	ಹೊಸಪೇಟೆ	ಮರಿಯಮ್ಮನಹಳ್ಳಿ
ಶಾಂತಮ್ಮ	ಹೊಸಪೇಟೆ	ಮರಿಯಮ್ಮನಹಳ್ಳಿ
ಶ್ಯಾಮಲ	ಹೊಸಪೇಟೆ	ಮರಿಯಮ್ಮನಹಳ್ಳಿ
ಸಾವಿತ್ರಿ	ಹೊಸಪೇಟೆ	ಮರಿಯಮ್ಮನಹಳ್ಳಿ
ಮಂಗಳಾ	ಹೊಸಪೇಟೆ	ಮರಿಯಮ್ಮನಹಳ್ಳಿ
ಶಾರದ	ಹೊಸಪೇಟೆ	ಮರಿಯಮ್ಮನಹಳ್ಳಿ
ಕಲಾವತಿ	ಹೊಸಪೇಟೆ	ಮರಿಯಮ್ಮನಹಳ್ಳಿ
ಎನ್.ರೇಣುಕಾ	ಹೊಸಪೇಟೆ	ಮರಿಯಮ್ಮನಹಳ್ಳಿ
ಎಸ್.ರೇಣುಕಾ	ಹೊಸಪೇಟೆ	ಮರಿಯಮ್ಮನಹಳ್ಳಿ
ಕೆ.ನಾಗರತ್ನ	ಹೊಸಪೇಟೆ	ಮರಿಯಮ್ಮನಹಳ್ಳಿ
ಅಂಜಿನಾಬಾಯಿ	ಹೊಸಪೇಟೆ	ಮರಿಯಮ್ಮನಹಳ್ಳಿ

ಹವ್ಯಾಸಿ ರಂಗಕಲಾವಿದೆಯರು	ತಾಲೂಕು	ಊರು
ಡಿ. ಸಣ್ಣ ಹನುಮಕ್ಕ	ಹೊಸಪೇಟೆ	ಮರಿಯಮ್ಮನಹಳ್ಳಿ
ಪಿ. ಸಹನಾ	ಹೊಸಪೇಟೆ	ಮರಿಯಮ್ಮನಹಳ್ಳಿ
ಲಲಿತಾ	ಹೊಸಪೇಟೆ	ಮರಿಯಮ್ಮನಹಳ್ಳಿ
ಯಶೋಧರಾ ಶಿವರಾಜ್	ಬಳ್ಳಾರಿ	ಬಳ್ಳಾರಿ
ಕಲ್ಯಾಣಿ	ಹೊಸಪೇಟೆ	ಹೊಸಪೇಟೆ
ಸೌಭಾಗ್ಯ	ಬಳ್ಳಾರಿ	ಬಳ್ಳಾರಿ
ರಾಜಲಕ್ಷ್ಮಿ	ಬಳ್ಳಾರಿ	ಬಳ್ಳಾರಿ

ಹವ್ಯಾಸಿ ರಂಗಕಲಾವಿದೆಯರು	ತಾಲೂಕು	ಊರು
ಗೌರಮ್ಮ ಗಂಗಾಧರ	ಬಳ್ಳಾರಿ	ಬಳ್ಳಾರಿ
ಎಚ್.ಎನ್.ಗೀತಾ	ಬಳ್ಳಾರಿ	ಬಳ್ಳಾರಿ
ರೂಪಾ	ಬಳ್ಳಾರಿ	ಬಳ್ಳಾರಿ
ಇಂದಿರಾ	ಬಳ್ಳಾರಿ	ಬಳ್ಳಾರಿ
ರತ್ನಮ್ಮ ವಿಜಯಕುಮಾರ	ಬಳ್ಳಾರಿ	ಬಳ್ಳಾರಿ
ಸಂಧ್ಯಾ	ಬಳ್ಳಾರಿ	ಬಳ್ಳಾರಿ
ರೇಖಾ	ಬಳ್ಳಾರಿ	ಬಳ್ಳಾರಿ
ನಾಗಮಣಿ	ಬಳ್ಳಾರಿ	ಬಳ್ಳಾರಿ
ಸುವರ್ಣ	ಬಳ್ಳಾರಿ	ಬಳ್ಳಾರಿ
ಪ್ರತಿಭಾ	ಬಳ್ಳಾರಿ	ಬಳ್ಳಾರಿ
ಬನಶಂಕರಿ	ಬಳ್ಳಾರಿ	ಬಳ್ಳಾರಿ
ಶಾಲಿನಿ	ಬಳ್ಳಾರಿ	ಬಳ್ಳಾರಿ
ಮಧುಶಾಲಿನಿ	ಬಳ್ಳಾರಿ	ಬಳ್ಳಾರಿ
ಜಾನಕಿ	ಬಳ್ಳಾರಿ	ಬಳ್ಳಾರಿ
ಉಷಾ	ಬಳ್ಳಾರಿ	ಬಳ್ಳಾರಿ

ಅಧ್ಯಾಯ ೭

ರಂಗನಟಿಯರ ಭವಿತವ್ಯ

ಅಧ್ಯಾಯ ೭

ರಂಗನಟಿಯರ ಭವಿತವ್ಯ

ರಂಗಭೂಮಿಯು ಇಂದು ನವೀನ ಸವಾಲುಗಳನ್ನು ಸ್ವೀಕರಿಸುವ ಮೂಲಕ ಆಧುನಿಕ ಜಗತ್ತಿನ ಎಲ್ಲ ಆಶೋತ್ತರಗಳಿಗೆ ಪ್ರತಿಕ್ರಿಯಿಸಬೇಕಾಗಿದೆ. ಹಿಂದಿನ ರಂಗಭೂಮಿಯ ಭೂಮಿಕೆಯನ್ನು ತನ್ನೊಳಗಿರಿಸಿಕೊಂಡು, ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಬದುಕಿಗೆ ತಕ್ಕಂತೆ ತನ್ನ ಪ್ರಯೋಗ, ತಂತ್ರ, ರಂಗ, ನಟಿಯರು, ನಟರು, ಸಾಹಿತ್ಯ, ನಾಟಕದ ಆಯ್ಕೆ ಹೀಗೆ ಹಲವಾರು ಚಿಂತನೆಗಳ ಹಾದಿಯಲ್ಲಿ ನಡೆಯಬೇಕಾಗಿದೆ. ಪ್ರಾಚೀನ ರಂಗ ವ್ಯವಸ್ಥೆಯ ಸೈದ್ಧಾಂತಿಕ ಅಂಶಗಳನ್ನೆಲ್ಲಾ ಇಂದು ಅಳವಡಿಸಲಾಗದಿದ್ದರೂ, ಆ ನೆರಳಲ್ಲಿಯೇ ಹೊಸ ಬದುಕಿನ ಆಯಾಮಗಳನ್ನು ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಈಗಾಗಲೇ ನಮ್ಮ ರಂಗಭೂಮಿಯು ಈ ಬಗೆಯ ಧೋರಣೆಗಳನ್ನು ಬಹುತೇಕ ರೂಢಿಸಿಕೊಂಡಿದೆ. ಜೊತೆಗೆ ರಂಗನಟಿಯರ ವಿಷಯದಲ್ಲೂ ಈ ಧೋರಣೆಯು ಅತ್ಯಂತ ದೊಡ್ಡ ಸವಾಲಾಗಿ ಉಳಿದುಕೊಂಡಿದೆಯೆನ್ನಬಹುದು.

ಮೂಲತಃ ನಾಟಕ ರಚನಾಕಾರರಿಗೆ ಪ್ರಜ್ಞಾವಂತಿಕೆ ಇರಬೇಕು. ಭಾಷೆ, ಬರವಣಿಗೆ, ಸ್ತ್ರೀ ಜೀವಪರ ಧೋರಣೆ, ಜೀವಪರ ಕಾಳಜಿ, ಮಾನವೀಯತೆ ಇಡೀ ನಾಟಕ ಹೊಸ ಸಮಾಜದ ಕಡೆಗೆ ಹೆಜ್ಜೆ ಹಾಕುವಂತಿದ್ದರೆ ರಂಗಭೂಮಿಯ ಹೊಸ ದಿಗಂತದ ಕಲ್ಪನೆ ಸಾರ್ಥಕವಾಗುತ್ತದೆ. ಆದ್ದರಿಂದ

೧. ನಾಟಕ ರಚನೆಯಲ್ಲಿ ಸ್ತ್ರೀಯರನ್ನು ಸಾಮಾಜಿಕ ಅನಿವಾರ್ಯತೆಗೆ ತಕ್ಕಂತೆ ಬಿಂಬಿಸುವುದು.

೨. ರಂಗತಂತ್ರಗಳೇನೇ ಇದ್ದರೂ ಸ್ತ್ರೀಯರಿಗೆ ಹೆಚ್ಚಿನ ಆಸಕ್ತಿ ತೋರಿಸುವ ಅಂಶಗಳು ಇರಬೇಕು.

೩. ಸಾಮಾಜಿಕ ನಾಟಕಗಳಲ್ಲಿ ಅಶ್ಲೀಲ ಶಬ್ದಗಳ ಬಳಕೆ ಇರಲೇಬಾರದು.

೪. ಸನ್ನಿವೇಶ ಸಂದರ್ಭಗಳು ಒಂದು ಮಿತಿಗೆ ಒಳಪಟ್ಟಿರಬೇಕು.

೫. ಪ್ರಗತಿಪರ ಧೋರಣೆಯ ನಾಟಕಗಳಿದ್ದು ಅವು ಸಮಾಜ ಕೇಂದ್ರಿತವಾಗಿ ಸ್ತ್ರೀ ಜೀವಪರ ಧೋರಣೆಯಲ್ಲಿ ನಾಟಕ ರಚನೆಯಾಗಿರಬೇಕು.

೬. ನಾಟಕವು ಮೌಲ್ಯಾಧಾರಿತ ಅಂಶಗಳಿಂದ ಕೂಡಿರಬೇಕು.

೭. ಪುರುಷ ಪೈಶಾಚಿಕ ವರ್ತನೆಯನ್ನು ತಿದ್ದುವ ಮೂಲಕ ನಾಟಕವು ಸಮಾನತೆಯನ್ನು ಪ್ರತಿನಿಧಿಸಿ, ಮಾನವೀಯ ಅಂಶಗಳಿಂದ, ಮೌಲ್ಯಾಧಾರಿತ ವ್ಯವಸ್ಥೆಗೆ ಒತ್ತುಕೊಡುವ ನಾಟಕಗಳಿರಬೇಕು.

೮. ನಾಟಕಗಳು ಪ್ರಸ್ತುತ ಜೀವನದ ಸಮಸ್ಯೆಗಳಿಗೆ ಪರಿಹಾರ ಸೂಚಿಸುವಂತಿರಬೇಕಾಗುವುದು.

ಹವ್ಯಾಸಿ ರಂಗಕಲಾವಿದರು ಹೆಚ್ಚಾಗಿ ಮೌಲ್ಯಾಧಾರಿತ ನಾಟಕಗಳನ್ನೇ ಪ್ರಯೋಗಿಸಿದರೆ ಅದರಿಂದ ಅವರ ನಾಟಕದ ಸಂದೇಶ ಸಮಾಜದ ಎಲ್ಲ ವರ್ಗದವರಿಗೆ ಮುಟ್ಟಿದರೆ ಹವ್ಯಾಸಿಗರ ಶ್ರಮ ಸಾರ್ಥಕಗೊಳ್ಳುತ್ತದೆ. ಗ್ರಾಮೀಣ ರಂಗಭೂಮಿಯಲ್ಲಿ ಇಂಥ ನಾಟಕಗಳನ್ನು ಪದೇ ಪದೇ ಪ್ರಯೋಗಿಸಿದರೆ, ಕ್ರಮೇಣ ನಾಟಕದ ಪ್ರಭಾವದಿಂದ ಸಮಾಜದಲ್ಲಿ ನವೀನರೀತಿಯ ಮಾನವೀಯ ಧೋರಣೆಗಳು ಹುಟ್ಟಿಕೊಂಡು ಅಲ್ಲಿ ಬದಲಾವಣೆ ಆಗುವುದು ಖಂಡಿತ ಸಾಧ್ಯ. ರಂಗ ತಂತ್ರಗಳು ಸ್ತ್ರೀಗೆ ಹೆಚ್ಚಿನ ಆದ್ಯತೆ ನೀಡುವಂತಿದ್ದರೆ ಇಂಥಹ ನಾಟಕಗಳು ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಿದಂತಾಗುತ್ತದೆ. ಆದ್ದರಿಂದ ಇಂದು ವೃತ್ತಿರಂಗಭೂಮಿಯ ನಟಿಯರು ಹಾಗೂ ಹವ್ಯಾಸಿ ರಂಗಕಲಾವಿದೆಯರು ಸದ್ಯದ ಪರಿಸ್ಥಿತಿಯಲ್ಲಿ ತಮ್ಮ ಶ್ರೇಷ್ಠತೆಯ ವ್ಯಸನದಲ್ಲಿ ತೊಳಲಾಡುತ್ತಿದ್ದಾರೆ. ಎರಡರಲ್ಲೂ ಗುಣಾತ್ಮಕ ಅಂಶಗಳಿರುವ ಹಾಗೆಯೇ ಅಭಾಸ ಮತ್ತು ಅತಿರೇಕಗಳಿವೆ. ಕಾರಣ ಇಂದು ರಂಗಭೂಮಿ, ನಾಟಕಕಾರರು, ನಟಿಯರು, ನಟರು ಮುಕ್ತವಾಗಿ ಎಲ್ಲ ವರ್ಗದ ಜನರ ನಾಡಿಮಿಡಿತಕ್ಕನುಗುಣವಾಗಿ ಸ್ಪಂದಿಸಬೇಕಾದರೆ, ಜನಸಾಮಾನ್ಯರಲ್ಲಿ ಗಣನೀಯ ಮಹತ್ವವಾಗಿರುವ ರಂಗಭೂಮಿ ಹಾಗೂ ರಂಗನಟಿಯರ ಭವಿಷ್ಯವನ್ನು ಕುರಿತು ಯೋಚಿಸುವಾಗಲಂತೂ ಆದಷ್ಟು ಮಟ್ಟಿಗೆ ತುರ್ತು ಪರಿಷ್ಕಾರ ಬೇಕೆನಿಸುತ್ತದೆ.

ಇಂದು ಎಲ್ಲಾ ರಂಗನಟಿಯರು ಯಾವುದೇ ಆಮಿಷಗಳಿಗೆ ಬಲಿಬೀಳದೆ ನಿಚ್ಚಳವಾದ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ನಿಂತು ಕೆಲಸ ನಿರ್ವಹಿಸಬೇಕಾಗಿದೆ. ಈ ಹೊಣೆಗಾರಿಕೆ ನಟಿಯರದಾಗಿದೆ. ಇಂದಿನ ಅತಿರೇಕಗಳನ್ನು ಹಾಗೆಯೇ ಸಹಿಸಿಕೊಳ್ಳುತ್ತ ಹೋಗುವ ಮನೋಧರ್ಮ, ಇಂದಿನ ಬದಲಾಗುತ್ತಿರುವ ಸನ್ನಿವೇಶದಲ್ಲಿ ಹಾಗೆ ಉಳಿಯಲು ಸಾಧ್ಯವಿಲ್ಲ. ಕ್ರಮೇಣ ಜಿಜ್ಞಾಸೆಯ ಪರಿಕಲ್ಪನೆ ಪಸರಿಸುತ್ತ ಹೋಗಿ ರಂಗಭೂಮಿಯ ಭವಿಷ್ಯದ ಮೇಲೆ ಸಾಕಷ್ಟು ಆಘಾತವನ್ನುಂಟು ಮಾಡುವುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಇಂದು ವೃತ್ತಿ ರಂಗಭೂಮಿಯು ಸಕಾಲದಲ್ಲಿ ಎಚ್ಚೆತ್ತುಕೊಂಡು ಗುಣಾತ್ಮಕವಾದ ಇನ್ನು ನವೀನ ಅವಿಷ್ಕಾರಗಳಿಗೆ ಮೈಯೊಡ್ಡುವುದು ತುಂಬಾ ಅವಶ್ಯಕವೆನಿಸುತ್ತದೆ. ಇಂದು ರಂಗನಟಿಯರ ಭವಿತವ್ಯದ ಬಗ್ಗೆ ಚಿಂತಿಸುವವರು ಈಗಾಗಲೇ ಬೆಳೆದು ನಿಂತಿರುವ ಪೂರ್ವಗ್ರಹಿಕೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಮನೋಭಾವ ಸಂಪೂರ್ಣ ತೊಲಗಿಸಬೇಕಾಗಿದೆ.

ವಿಷಾದದ ಸಂಗತಿ ಎಂದರೆ, ಹೆಚ್ಚಾಗಿ ರಂಗಚಟುವಟಿಕೆಗಳು ನಗರ ಕೇಂದ್ರಿತವಾಗಿಯೇ ಬೆಳೆದು ದೇಶದ ಬಹುಪಾಲು ಜನತೆಗೂ ಅವು ದೊರಕದೇ ಉಳಿದಿವೆ. ಅಂದಾಗ ಅಂಥ ಜನರ ಅಭಿರುಚಿಯನ್ನು ಅವಹೇಳನ

ಮಾಡುತ್ತ ಒಮ್ಮೆಲೇ ಅವರಿಗೆ ಸಂಸ್ಕೃತಿಯ ಪಾಠವನ್ನು ಕಲಿಸಹೊರಡುವುದು ನ್ಯಾಯ ಸಮ್ಮತವೆನಿಸಲಾರದು. ಈವರೆಗಿನ ನಗರ ಕೇಂದ್ರಿತ ಮನೋಧರ್ಮವನ್ನು ವಿಸ್ತರಿಸಿಕೊಳ್ಳುತ್ತ ಅಲ್ಲಿಯ ಜನರ ಅಭಿರುಚಿಯ ಮಟ್ಟವನ್ನು ಎತ್ತರಿಸುವ ಕೆಲಸದಲ್ಲೇ ಸಾಕಷ್ಟು ಪರಿಶ್ರಮ ಪಡಬೇಕಾಗುವುದರ ಜರೂರಿ ಇದೆ (ಲೇ: ವಿರುಪಾಕ್ಷನಾಯಕ, ರಂಗತೋರಣ, ಆಗಸ್ಟ್, ೨೦೦೨, ಪುಟ. ೭). ಪ್ರೇಕ್ಷಕರು ಒಳ್ಳೆಯದನ್ನು ಆಸ್ವಾದಿಸುವ ಮನೋಧರ್ಮವನ್ನು ಅದಕ್ಕೆ ಬೇಕಾಗುವ ಪರಿಸರವನ್ನು ನಿರ್ಮಿಸಿದಾಗ ಪ್ರೇಕ್ಷಕರು ರಂಗಭೂಮಿಯ ಹಾಗೂ ಸಮಾಜದ ಒಳಿತು ಕೆಡಕುಗಳನ್ನು ವಿಮರ್ಶಿಸುವ ಶಕ್ತಿಯು ಬರುತ್ತದೆ. ಈ ನಿಟ್ಟಿನಲ್ಲಿ ರಂಗಾಸಕ್ತರು, ನಟ, ನಟಿ, ಸಹಕಲಾವಿದರು ರಂಗಕರ್ಮಿಗಳು ಹತಾಶರಾಗದೇ ಒಂದು ಸಾಮಾಜಿಕ ಬದ್ಧತೆ ಎಂಬಂತೆ ಕಾರ್ಯ ನಿರ್ವಹಿಸಬಲ್ಲವರಿಗೆ ಈ ಪ್ರಗತಿಪರ ಧೋರಣೆಗಳು ಜಾರಿಯಲ್ಲಿರಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬ ನಟಿಯರೂ ತಮ್ಮ ಕರ್ತವ್ಯ ವೃತ್ತಿಯ ಬಗ್ಗೆ ಅವರಿಗೆ ಅರಿವಿರಬೇಕು. ಇದರ ಜೊತೆಗೆ ಸಾಮಾಜಿಕ ಕಳಕಳಿಯೂ ಇರಬೇಕಾಗುತ್ತದೆ. ಗ್ರಾಮೀಣ ಮಟ್ಟದಲ್ಲಿ ಹೆಚ್ಚು ಪ್ರಯೋಗಗಳನ್ನು ಮಾಡಿದರೆ ರಂಗನಟಿಯರ ಜೀವಿತ, ಭವಿತವ್ಯದ ಹಲವು ಕಾರ್ಯಗಳನ್ನು ಪ್ರಗತಿಯಲ್ಲಿ ಕೊಂಡೊಯ್ಯಲು ಸಾಧ್ಯ ವಾಗುತ್ತದೆ. ಇವೆಲ್ಲ ಸಾಮಾನ್ಯ ಕೆಲಸವೇನಲ್ಲ. ಇದಕ್ಕೆ ವಿಶೇಷವಾದ ಸಂಯಮಬೇಕು. ಜೊತೆಗೆ ಆಳವಾದ ಬೇರು ಬಿಟ್ಟಿರುವ ಒಂದು ಅಭಿರುಚಿಯ ಮಟ್ಟವನ್ನು ಹೊರಗೆಡುವಾಗ ಪರ್ಯಾಯವಾದ ಇನ್ನೊಂದು ಶ್ರೇಷ್ಠ ಮಟ್ಟದ ಅಭಿರುಚಿಯನ್ನು ಅಲ್ಲಿ ಬೀರಬೇಕಾಗುತ್ತದೆ. ಈ ಕೆಲಸವನ್ನು ಮಾಡುವಾಗ ಅದು ಯಾಕೆ? ಹೇಗೆ? ಶ್ರೇಷ್ಠ ಎಂಬುದನ್ನು ತಯಾರಿಸುವ, ತೋರಿಸುವ ಪರಿಶ್ರಮ ಬೇಕಾಗುತ್ತದೆ. ಈ ಎಲ್ಲ ಕೆಲಸಗಳು ಸರಿಯಾಗಿ ನಡೆಯ ಬೇಕಾದರೆ ರಂಗನಟಿಯರ ಜೀವನಕ್ಕೆ ಭದ್ರತೆ ಬೇಕು. ಅತಂತ್ರತೆಯ ನೆರಳಲ್ಲೇ ಕೆಲಸ ಮಾಡುವ ಸ್ಥಿತಿ ಇದ್ದರೆ ಯಾವುದೇ ಕ್ಷೇತ್ರದಲ್ಲೂ ವ್ಯಕ್ತಿಗಳು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ. ಅಂದಮೇಲೆ ರಂಗ ನಟಿಯರೇನೂ ಇದಕ್ಕೆ ಹೊರತಾಗುವುದಿಲ್ಲ.

ರಂಗಭೂಮಿ ಯಾವ ಯಾವ ಭಾಗದಲ್ಲಿ ರಂಗಾಸಕ್ತಿಯು ಕುಂಠಿತವಾಗಿದೆಯೇ ಅಲ್ಲಲ್ಲಿ ರಂಗಭೂಮಿ ಕ್ರಿಯಾಶೀಲವಾಗಲು ಸರಕಾರ ಅಕಾಡೆಮಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಆದ್ಯತೆಯನ್ನು ನೀಡಿ ಎಲ್ಲೆಲ್ಲೂ ರಂಗೋದಯವಾಗಿ, ಮರುಹುಟ್ಟನ್ನು ಪಡೆಯಿತೆಂಬಂತೆ ರಂಗಭೂಮಿಯನ್ನು ಹೊಡೆದು ಕಟ್ಟುವಂಥ ಕೆಲಸ ಮಾಡಬೇಕು. ಸರಕಾರ ಅಕಾಡೆಮಿಗಳನ್ನು ಆಶ್ರಯಿಸಬೇಕಾಗುತ್ತದೆ. ಆದರೆ ಈ ಸಾಮಾಜಿಕ ಸಂಸ್ಥೆಗಳು ರಂಗಭೂಮಿಯ ಅಸಹಾಯಕ ಸ್ಥಿತಿಯನ್ನೇ ಬಂಡವಾಳ ಮಾಡಿಕೊಂಡು ಅದನ್ನು ಶೋಷಿಸಬಾರದು. ಅಂದರೆ ಸರಕಾರ ಹಾಗೂ ಅಕಾಡೆಮಿಗಳು ರಂಗಕರ್ಮಿಗಳಿಗೆ ನೀಡುವ ಸಹಾಯ ಸಹಕಾರಗಳು ಕೇವಲ ಸಾಂಸ್ಕೃತಿಕ ದೃಷ್ಟಿಯುಳ್ಳವರಾಗಿರಬೇಕೇ ವಿನಃ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವವರು ಅಲ್ಲಿರಬಾರದು. ರಂಗಚಟು ವಟಿಕೆಗಳು ಸ್ವಾಯತ್ತವಾಗಿ ಬೆಳೆಯುವುದಕ್ಕೆ ಆಸ್ಪದ ಮಾಡಿಕೊಡಬೇಕು. ಇದು ಸಾಧ್ಯವಾದಾಗ ಮಾತ್ರ ರಂಗಭೂಮಿಯಿಂದ ನಾವು ಒಳ್ಳೆಯದನ್ನು ನಿರೀಕ್ಷಿಸಲು ಸಾಧ್ಯ.

ಪ್ರತಿಯೊಬ್ಬರೂ ರಂಗಭೂಮಿಗೆ ಗೌರವಸ್ಥಾನವನ್ನು ನೀಡುವಂತೆ, ರಂಗಭೂಮಿ ಕಲೆ ಆರಾಧನೆ ಎಂದರೆ ಅದು ಒಂದು ದೇವಸ್ಥಾನ ಎಂಬಂತೆ ಭಾಸವಾದರೆ ಅಲ್ಲಿ ರಂಗಭೂಮಿಯ ಬಗ್ಗೆ ಗೌರವ ಮೂಡುತ್ತದೆ. ಇಂದಿನ ಸಮೂಹ ಮಾಧ್ಯಮಗಳ ಭರಾಟೆಯಲ್ಲಿ ರಂಗಭೂಮಿಯು ಸೊರಗುತ್ತಿದೆ ಎಂಬ ಮಾತು ಅಲ್ಲಲ್ಲಿ ಕೇಳಿಬರುತ್ತಿದೆ. ಆದರೆ ವಾಸ್ತವವಾಗಿ ರಂಗಭೂಮಿ ಮತ್ತು ಟಿ.ವಿ. ಒಂದಕ್ಕೊಂದು ಪೂರಕವಾಗಿ ಬೆಳೆದು ಬಂದಿದ್ದು ಕಾಣುತ್ತದೆಯೇ ಹೊರತು, ಒಂದನ್ನು ಬಿಟ್ಟು ಇನ್ನೊಂದು ಬೆಳೆದುದು ಎಂದೂ ಕಾಣುವುದಿಲ್ಲ. ಕಾಲ, ಅನಿವಾರ್ಯತೆ, ಬುದ್ಧಿವಂತಿಕೆ, ಸಂಶೋಧನೆ ಇವುಗಳನ್ನು ಒಳಗೊಂಡು ಮನರಂಜನೆಯ ಅಭಿವ್ಯಕ್ತಿಯ ಮಾಧ್ಯಮಗಳು ಬೇರೆಯೇ ಆದವು. ಪ್ರಥಮ ಬಾರಿಗೆ "ಕರ್ನಾಟಕಕ್ಕೆ ಟೆಲಿವಿಷನ್ ಇತ್ತೀಚಿಗೆ ಎಂಬಂತೆಯೇ ಬಂತು. ಬಂದ ಪ್ರತಿಯೊಂದು ಸ್ಥಳದಲ್ಲೂ ಟಿ.ವಿ ರಂಗಭೂಮಿ ಪ್ರೇಕ್ಷಕರನ್ನು ಕಸಿದುಕೊಂಡು ಬಿಟ್ಟಿತು ಎಂಬ ಗುಲ್ಲನ್ನು ಎಬ್ಬಿಸಿಯೇ ಎಬ್ಬಸಿದ್ದಾರೆ ರಂಗಭೂಮಿ ಪಂಡಿತರು. ಆದರೆ ಅದಕ್ಕೆ ಯಾವ ಪುರಾವೆಯೂ ಇಲ್ಲ. ಇತಿಹಾಸ ಇದನ್ನು ಸ್ಪಷ್ಟೀಕರಿಸುವುದಿಲ್ಲ. ೧೮೭೫ ರಲ್ಲೇ ಬೆಳಕಿಗೆ ಬಂದ ಟೆಲಿವಿಷನ್ ಇಂಗ್ಲೆಂಡಿನಲ್ಲಿ ೧೯೩೬ ರಿಂದ ಬಿ.ಬಿ.ಸಿ. ಮನೋರಂಜನೆಗೆಂದು ಕಾರ್ಯಕ್ರಮವನ್ನು ಪ್ರಾರಂಭಿಸಿತು. ಹೀಗಾಗಿಯೂ ಇಂಗ್ಲೆಂಡಿನ ರಂಗಭೂಮಿ ಹೇಗೆ ಜೀವಂತವಾಗಿದೆ ಎಂದು ಗಮನಿಸಿದಾಗ ನನ್ನ ಮಾತು ಸ್ಪಷ್ಟವಾಗುತ್ತದೆ. ಆದರೆ ಒಂದು ಅಭಿವ್ಯಕ್ತಿಯ ಮಾಧ್ಯಮದಿಂದ ಇನ್ನೊಂದು ಅಭಿವ್ಯಕ್ತಿಯ ಮಾಧ್ಯಮಕ್ಕೆ ತೊಂದರೆಯಾಯಿತು ಎನ್ನುವ ಕೂಗು ಆರಂಭದ ಅವಸ್ಥೆಯಲ್ಲಿರುವುದು ಸಹಜವೇ. ಇದು ಒಂದು ಮನುಷ್ಯ ಸಹಜವಾದ ಕುತೂಹಲ ಪ್ರವೃತ್ತಿಯ ಉತ್ಪತ್ತಿ. ಹೊಸದನ್ನು ಕಂಡಾಗ, ಹೊಸ ಬಗೆಯ ವಸ್ತು ವಿನ್ಯಾಸಗಳನ್ನು ನೋಡಿದಾಗ ನಾವೆಲ್ಲರೂ ಆಕರ್ಷಿತರಾಗುತ್ತೇವೆ. ಈಗ ಪ್ರಾಯಶಃ ಟಿ.ವಿ. ಹೊಸದಾಗಿ ಬಂದಾಗ ಇರುವುದು ಅಂತಹ ಸ್ಥಗಿತ ಸ್ಥಿತಿ (ರಂಗ ಪ್ರತಿಸ್ಪಂದನ; ಲೇ: ಡಾ. ಜಯಪ್ರಕಾಶ ಮಾವಿನಕುಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ).

ಹೀಗಾಗಿ ರಂಗಭೂಮಿಯು ಸಮೂಹ ಮಾಧ್ಯಮದಿಂದ ಪೂರಕವಾಗಿ ಬೆಳೆಯುತ್ತಿದೆ ಮಾರಕವಾಗಿಲ್ಲ. ಆದ್ದರಿಂದ ಜನಸಾಮಾನ್ಯರಿಗೆ 'ರಂಗಭೂಮಿ' ಎಂದರೆ ಗೌರವ ಮೂಡಿ ಸಮಾಜದಲ್ಲಿ ಎಲ್ಲ ರೀತಿಯ ಬದಲಾವಣೆಗೆ ಇದು ಒಂದು 'ವೇದಿಕೆ' ಎಂಬ ತಿಳುವಳಿಕೆ ಅರಿವು ಜನಸಾಮಾನ್ಯರಿಗೆ ತಿಳಿಯಬೇಕು. ನಗರ ರಂಗಭೂಮಿ ಪ್ರೇಕ್ಷಕರನ್ನು ಕೈ ಬಿಟ್ಟು, ಗ್ರಾಮೀಣ ರಂಗಭೂಮಿ ಅಥವಾ ಜಾನಪದ ರಂಗಭೂಮಿ ಹಾಗೆ ಮಾಡದೇ ಇರುವುದರಿಂದ ಅದನ್ನು ಇನ್ನೂ ಜೀವಂತಿಕೆಯಿಂದ ನೋಡಲು ಸಾಧ್ಯವಾಗಿದೆ. ಪ್ರೇಕ್ಷಕರ ಆಲೋಚನಾ ಶಕ್ತಿಯನ್ನು ಎಲ್ಲ ಸಂದರ್ಭಗಳಿಗೂ ಒರೆಗೆ ಹಚ್ಚಿ ನೋಡಿದಾಗ ಜಾನಪದ ರಂಗಭೂಮಿ ಇರೋದರಿಂದ ಪ್ರೇಕ್ಷಕರು ಅದರೊಂದಿಗೆ ಹೆಜ್ಜೆ ಹಾಕಲು ಸಾಧ್ಯ. ರಂಗಭೂಮಿಯಲ್ಲಿ ಪಾತ್ರಧಾರಿಯೇ ಬಹಳ ಮುಖ್ಯ. ಆತನ ಮೈಕಟ್ಟು, ಸೌಂದರ್ಯ ಹೇಗೆ ಮುಖ್ಯವೋ ಹಾಗೆ ಆತನ ಧ್ವನಿ ಸಹ ಅಷ್ಟೇ ಮುಖ್ಯವಾಗಿ ರುತ್ತದೆ. ಹೀಗಾಗಿ ಸಮೂಹ ಮಾಧ್ಯಮಗಳಿಂದ ರಂಗಭೂಮಿ ಹೊಸದಿಂಗತದ ಪ್ರಗತಿಗೆ ನಾಂದಿಯಾಗುತ್ತದೆ. ಭಾರತೀಯ ಸಂದರ್ಭದಲ್ಲಿ ಹೆಚ್ಚು ಹೆಚ್ಚು ನಟಿಯರನ್ನು ನಾವು ರಂಗಭೂಮಿಗೆ ತರಬಹುದಾಗಿದೆ. ನಟಿಯರ

ತಂಡಗಳನ್ನು ಹೊಸ ರೀತಿಯ ಆವಿಷ್ಕಾರದೊಂದಿಗೆ ತರಬೇತಿಯನ್ನು ನೀಡಿ ಪರಿಷ್ಕರಿಸಿದರೆ ನಟಿಯರ ಭವಿಷತ್ತು ಮೇಲ್ಮಟ್ಟದಲ್ಲಿರಲು ಸಾಧ್ಯವಾಗುತ್ತದೆ.

ಯಾವ ನಾಟಕಕಾರನೇ ಆಗಲಿ ಒಂದು ಸಾಮಾಜಿಕ ಸಂದರ್ಭವನ್ನು ಇಟ್ಟುಕೊಂಡು ಬರೆಯಬೇಕು. ಹೀಗೆ ಬರೆದರೆ ಮಾತ್ರ ರಚನಾಕಾರ ಸಮಾಜದ ನಾಡಿಗಳಿಗೆ ಸ್ಪಂದಿಸುತ್ತಾನೆ. ಆದ್ದರಿಂದ ಕಲಾಕೃತಿ ಸಾಮಾಜಿಕ ಪ್ರಜ್ಞೆಯನ್ನು ಮೂಲತಃ ಒಳಗೊಂಡಿರಬೇಕು. ಇಲ್ಲದಿದ್ದರೆ ಅದು ಅರ್ಥಹೀನ ಎನಿಸುತ್ತದೆ ಎಂಬ ಕಾಳಜಿಯ ಅಡಿಯಲ್ಲೇ ಸಾಮಾಜಿಕ ಪ್ರಜ್ಞೆ ಎಂಬುದರ ಅರ್ಥವ್ಯಾಪ್ತಿಯ ಬಗೆಗೆ ಸಂದೇಹಗಳೇ ಸಾಕಷ್ಟು ಇವೆ. ಯಾವ ನಾಟಕಕಾರನೇ ಆಗಲಿ ತಾನೊಬ್ಬ ಸ್ವಯಂಭೂವಿನಂತೆ ನಾಟಕವನ್ನು ಸ್ವತಃ ಸೃಷ್ಟಿಸಲು ಸಾಧ್ಯವಿಲ್ಲ. ಕಾರಣ ಬರೆಯಬೇಕೆಂದು ಬಯಸುವ ವ್ಯಕ್ತಿ ಮನಸ್ಸಿನ ಎಲ್ಲ ಕಿಟಕಿಗಳನ್ನು ತೆರೆದು ಎಲ್ಲಾ ರೀತಿಯ ಜೀವನದ ಸಂವೇದನೆಗಳಿಗೂ ತೆರೆದಿಟ್ಟು ಕೊಳ್ಳಬೇಕಾಗುತ್ತದೆ. ಏಕೆಂದರೆ 'ಪ್ರಜ್ಞೆ' ಎನ್ನುವ ಪದ ಕಾಲಾತೀತ. ಶೂನ್ಯ ದಲ್ಲಿಯೇ ಅಸ್ಪಷ್ಟ ಅವಕಾಶದಲ್ಲಿ ಸೃಷ್ಟಿ ಆಗುವಂಥದ್ದಲ್ಲ.

ಒಬ್ಬ ನಾಟಕ ರಚನಾಕಾರನೂ ಒಬ್ಬ ಸಮಾಜಿ ಜೀವಿ ಅಲ್ಲವೇ? ಆದ್ದರಿಂದ ಸಮಾಜದ ಆಗು ಹೋಗುಗಳ ನಾಡಿಯನ್ನು ಮೊದಲು ಅವಲೋಕಿಸುವುದು ಅವನ ಕರ್ತವ್ಯಕೂಡ. ಇಲ್ಲದಿದ್ದರೆ ಅಂಥ ಕಲಾಸೃಷ್ಟಿಯ ಔಚಿತ್ಯವೇ ಒಂದು ಸವಾಲಾಗಿ ನಿಲ್ಲುವುದು. ಈ ರೀತಿಯಾಗಿ ಸಾಹಿತ್ಯ ಸೃಷ್ಟಿಯಲ್ಲಿ ಗೊಂದಲ ಇದ್ದೇ ಇದೆ. ಆದ್ದರಿಂದ ಪಂಪ ಜನರಿಗಾಗಿ ಕಾವ್ಯವನ್ನು ಬರೆದೆನೆಂದು ಹೇಳಿರುವುದು ಒಂದು ಕಡೆಯಾದರೆ ಮಧುರಚನ್ನ ತಾನು ಪಂಡಿತರಿಗಾಗಿ ಕಾವ್ಯವನ್ನು ಬರೆದಿರುವೆನೆಂದು ಹೇಳಿದನು. ಈ ರೀತಿಯ ಎಷ್ಟೋ ಕ್ಲಿಷ್ಟ ಸಮಸ್ಯೆಗಳು ಒಬ್ಬ ನಾಟಕಕಾರ ಇಡೀ ಸಮಾಜವನ್ನು ಸೃಷ್ಟಿಸಬೇಕಾಗುತ್ತದೆ. ಒಂದು ನಾಡಿನ ಜನತೆಯ ಆಶೋತ್ತರಗಳ ಮುಖವಾಣಿಯಾಗಿ ರಚನಾಕಾರ ನಿಲ್ಲಬೇಕಾಗುತ್ತದೆ. ನಾಡಿನ ಶಿಕ್ಷಕನಾಗಿ ನಾಟಕಕಾರ ಕಾಣಿಸಿಕೊಳ್ಳ ಬೇಕಾಗುತ್ತದೆ.

ಸಾಮಾಜಿಕ ಪ್ರಜ್ಞೆಯುಳ್ಳ ನಾಟಕಕಾರ ತನ್ನ ಸಮಾಜದ ಹೆಣ್ಣು, ಹಸಿವೆ, ಅವಿದ್ಯೆ, ಬಡತನ, ಸ್ತ್ರೀಶೋಷಣೆ ಅಸ್ಪೃಶ್ಯತೆ, ಪುರೋಹಿಶಾಹಿ, ಪುರುಷರ ಪೈಶಾಚಿಕ ವರ್ತನೆಗಳನ್ನು ತೀವ್ರವಾಗಿ ಪ್ರತಿಭಟಿಸಿ, ನಾಟಕಕಾರನ ಜೀವನದ ಸಿದ್ಧಾಂತದ ಕುರುಹು ಆಗಿರಲು ಸಾಧ್ಯ. ಆದರೆ ನಾಟಕ ರಚನಾಕಾರ ಅತೀ ಎಚ್ಚರದಿಂದ ತನ್ನ ಕಲಾತ್ಮಕತೆಗೆ ಧಕ್ಕೆ ತರದೇ ಇರುವ ರೀತಿಯಲ್ಲಿ ಮಾಡಬೇಕು. ಕಾರಣ ನಮ್ಮ ಸಮಾಜದ ಸ್ವಭಾವವೆ ವಿಚಿತ್ರ ವಾದದ್ದು. ಇದರಲ್ಲಿ ಪಕ್ಕಾ ಪೈಶಾಚಿಕ ಪ್ರವೃತ್ತಿಗಳು, ಹೇಡಿತನಗಳು ಸೇರಿಕೊಂಡಿವೆ. ಸಮಾಜದಲ್ಲಿ ರಾಕ್ಷಸ ಪ್ರವೃತ್ತಿ ಹೆಚ್ಚಿದೆ. ರಾಘವಾಂಕ ಜನ ಬದುಕಲೆಂದು ಕಾವ್ಯವನ್ನು ಬರೆದೆನೆಂದು ಹೇಳುತ್ತಾನೆ. ಆದ್ದರಿಂದ ನಾಟಕಕಾರನ ಆರ್ತತೆಯು ಒಂದು ಸಾರ್ವಕಾಲಿಕ ಸತ್ಯದ ತಳಹದಿಯ ಮೇಲೆ ಶುದ್ಧ ಜೀವನವನ್ನು ಜನರ ಬದುಕಿನ ಕಡೆಗಿರಬೇಕು. ಹೆಣ್ಣುದನಿ, ಜೀವಪರಘೋರಣೆಯ ಕಳಕಳಿ ನಾಟಕದಲ್ಲಿ ಮೂಡಿ ಬರಬೇಕು.

ಈ ರೀತಿಯಲ್ಲಿ ಸಮಾಜವಿದ್ದರೆ ರಂಗನಟಿಯರು ಯಾವ ಹಂಗೂ ಇಲ್ಲದೆ ನಿರಾಳವಾಗಿ ರಂಗಭೂಮಿಗೆ ತಮ್ಮ ಕಲಾಸೇವೆ ಮಾಡಲು ನಿರ್ಭಯವಾಗಿ ಬರುತ್ತಾರೆ. ನೊಂದವರ ನುಡಿ ನಾಟಕದಲ್ಲಿ ಸಮಾಜದಲ್ಲಿ ನಡೆಯುವ ಅನ್ಯಾಯ, ಅತ್ಯಾಚಾರ, ಅನೈತಿಕತೆ, ಅಸಮಾನತೆ, ಕ್ರೌರ್ಯ ಇವೆಲ್ಲವನ್ನು ನಾಟಕಕಾರ ಪ್ರತಿಬಿಂಬಿಸಿ ಈ ರೀತಿಯ ಅಪರಾಧಿಗಳಿಗೆ ಅಂತ್ಯದಲ್ಲಿ ಯಾವ ಪರಿಸ್ಥಿತಿ ಉಟಾಗುತ್ತದೆ ಎಂಬುದನ್ನು ಬಿಂಬಿಸಿ, ಇಂಥ ಸ್ಥಿತಿಗಳು ಉಂಟಾಗದಂತೆ ಹಾಗೂ ಇಂಥ ಸಮಸ್ಯೆಗಳು ಸೃಷ್ಟಿಯಾಗದಂತೆ ನೋಡಿಕೊಳ್ಳುವ ಹೊಣೆ ಒಬ್ಬ ಕ್ರಿಯಾಶೀಲ ಬರಹಗಾರ ಹಾಗೂ ವೈಚಾರಿಕ ನಾಟಕ ರಚನಾಕಾರರಲ್ಲಿದ್ದಾಗ ಮಾತ್ರ ಸಮಾಜದ ಬದಲಾವಣೆ ಹಾಗೂ ಪ್ರಗತಿ ಸಾಧ್ಯವಾಗುತ್ತದೆ.

ನಟಿಯರಿಗೆ ರಂಗಭೂಮಿ ಎಂದರೆ ಕಾಲಕಳೆಯಲು ಹರಟೆಹೊಡೆಯಲು ಒಂದು ನಿಮಿತ್ತವಾಗಿರದೇ ಬುದ್ಧಿ, ಮನಸ್ಸು, ಇಡೀ ಮಾನವನ ವ್ಯಕ್ತಿತ್ವವನ್ನು ಒಳಗೊಂಡಿರುವ ಒಂದು ಕ್ರಿಯೆ ಎಂದು ಸಾರ್ವಜನಿಕರಿಗೆ ಅನಿಸಬೇಕು. ಪ್ರತಿಯೊಬ್ಬರಿಗೂ 'ರಂಗಭೂಮಿ' ಹತ್ತಿರವಾಗಿರಬೇಕು. 'ನಾಟಕ ಕೀಳು' ಎಂಬ ಭಾವನೆ ಮೊದಲು ನಮ್ಮ ಮನಸ್ಸಿನಿಂದ ಹೊರ ಹಾಕಬೇಕು. ರಂಗಭೂಮಿ ಎಂದರೆ ಕಾವ್ಯ, ಗದ್ಯಗಳಂತೆ, ಸಂಗೀತದಂತೆ, 'ಜನತೆಯ ಸಾಂಸ್ಕೃತಿಕ ವಿಕಾಸದ ಚಿಹ್ನೆ' ಎಂಬ ಮನೋಭಾವವನ್ನು ಪ್ರತಿಯೊಬ್ಬರು ತಳೆದರೆ ನಟಿಯರ ಭವಿಷ್ಯತ್ತಿಗೆ ಒಂದು ಸೋಪಾನವಾದಂತಾಗುತ್ತದೆ. ನಮ್ಮ ರಾಷ್ಟ್ರಾಧ್ಯಕ್ಷರಾಗಿದ್ದ ಡಾ. ರಾಧಾಕೃಷ್ಣನ್ ಅವರ ಅಭಿಪ್ರಾಯದಂತೆ ''ಒಂದು ಸಂಸತ್ತಿನ ಕಾನೂನುಗಳಿಂದಾಗಲೀ, ಸಂವಿಧಾನದ ವಿಧಿಗಳಿಂದಾಗಲಿ ಸಮಾಜದ ದೋಷಗಳನ್ನು ತಿದ್ದಲಾಗುವುದಿಲ್ಲ. ಆದರೆ ನನಗೆ ಗೊತ್ತು ಇದನ್ನು ಅನೇಕ ನಾಟಕಕಾರರು, ನಟರು ಮಾಡಿ ದೇಶವನ್ನು ಎತ್ತರಕ್ಕೆ ಒಯ್ದಿದ್ದಾರೆ, ಹೀಗೆ ಒಂದು ಯುಗದ ಎಚ್ಚರವನ್ನು ನಾಟಕ ಬರಿಸಬಲ್ಲದು'' (ರಂಗ ಸ್ಪಂದನ, ಲೇ: ಜಯಪ್ರಕಾಶ ಮಾವಿನಕುಳಿ, ಪ್ರಾಂಶುಪಾಲರು ಮತ್ತು ರಂಗಭೂಮಿ, ಪುಟ, ೧೨೫) ಯಾವ ಮಾಧ್ಯಮಕ್ಕೂ ಇಲ್ಲದ ದಿವ್ಯಶಕ್ತಿ ರಂಗಭೂಮಿಗಿದೆ ಎಂಬ ಸತ್ಯ ಸಮಾಜದ ಓರೆ ಕೊರೆಗಳನ್ನು ನಾಟಕವು ರಂಗಭೂಮಿಯಿಂದ ಅರಿವು ಮೂಡಿಸುತ್ತದೆಯೇ ವಿನಃ ಯಾವ ಕಾನೂನು ಕಟ್ಟಳೆಗಳಿಂದ ಬದಲಾವಣೆ ಸಾಧ್ಯವಿಲ್ಲ. ಏಕೆಂದರೆ ಒಬ್ಬ ನಾಗರೀಕನಿಗೆ ಕಾನೂನು, ಸೂಕ್ಷ್ಮಪ್ರಜ್ಞೆಯ ಸ್ವಅರಿವನ್ನು ಮೂಡಿಸಿಲ್ಲ. ಆದರೆ ರಂಗಭೂಮಿಯು ಈ ರೀತಿಯ ಸಾಮಾಜಿಕ ಅರಿವನ್ನು ಸ್ವಯಂ ಪ್ರತಿಭೆಯಿಂದ ಬಿಂಬಿಸುತ್ತದೆ.

ಈ ರೀತಿಯಲ್ಲಿ ಒಟ್ಟಾರೆಯಾಗಿ ರಂಗಭೂಮಿಯು ಸಾಮಾಜಿಕ ಪ್ರಜ್ಞೆ ಹಾಗೂ ರಂಗಪ್ರಜ್ಞೆಯನ್ನು ಈ ನಾಟಕಗಳಿಂದ ಮಾತ್ರ ಮೂಡಿಸಲು ಸಾಧ್ಯವಾಗಿ ರಂಗನಟಿಯರು ಇಂದಿನ ಸಾಮಾಜಿಕ ಅನಿವಾರ್ಯತೆಯಾಗಿ ಪ್ರತಿಬಿಂಬಿತವಾಗಬೇಕು. ನಾಟಕದ ಕೇಂದ್ರ ಸ್ತ್ರೀ ಕೇಂದ್ರಿತವಾಗಿರಬೇಕು. ನಾಟಕಗಳು ರಂಗನಟಿಯರ ಸಾಮಾಜಿಕ ಜೀವನದಲ್ಲಿ ಸ್ತ್ರೀಯರ ಸ್ಥಾನವನ್ನು, ಶಿಕ್ಷಣ, ಉದ್ಯೋಗ, ಶೋಷಣೆ ಹೀಗೆ ಹತ್ತು ಹಲವಾರು ಮಗ್ಗಲುಗಳಲ್ಲಿ ರಂಗಭೂಮಿಯಲ್ಲಿ ನಾಟಕಕಾರ ಪ್ರಜ್ಞಾವಂತಿಕೆಯಿಂದ ನಾಟಕ ರಚಿಸಿ ಅದನ್ನು ಪ್ರಯೋಗಿಸಿದರೆ ಅದರಿಂದ ಸಾಮಾಜಿಕ ಅರಿವು ಜಾಗೃತಿ ಮೂಡಿ ಹೊಸ ಸಮಾಜವು ಉದಯವಾಗುವುದರಲ್ಲಿ ಯಾವ ಅನುಮಾನವಿಲ್ಲ.

ರಂಗ ಶಿಕ್ಷಣ

ಅಧ್ಯಯನದ ಶಿಸ್ತಿಗೆ ರಂಗಶಿಕ್ಷಣವನ್ನು ಅಳವಡಿಸಬೇಕು. ಪ್ರಾಥಮಿಕ ಹಂತದಿಂದಲೇ ಪಠ್ಯಕ್ರಮದಲ್ಲಿ ರಂಗಚಟುವಟಿಕೆಗಳು ಆರಂಭವಾದರೆ, ವಿಶ್ವವಿದ್ಯಾಲಯದ ಮಟ್ಟದವರೆಗೂ ನಾಟಕ ವಿಷಯ ವಿಭಾಗಗಳನ್ನು ಪ್ರಾರಂಭಿಸಿದರೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಈ ಶಿಕ್ಷಣವನ್ನು ಪಡೆಯಲು ಅನುವು ಮಾಡಿ ಕೊಟ್ಟಂತಾಗುತ್ತದೆ. ಈ ಶಿಕ್ಷಣದಿಂದ ಪ್ರತಿಯೊಬ್ಬ ರಂಗ ನಟಿಯರಿಗೆ ಪ್ರಾರಂಭಿಕ ಹಂತದಲ್ಲಿಯೇ ಲಭಿಸಿದರೆ ಅವರು ಅನುಕೂಲತೆಯಿಂದ ತಮ್ಮ ವೃತ್ತಿಯಲ್ಲಿ ಹೆಚ್ಚು ಹೊಸ ಚಿಂತನಾಶೀಲ ಅಭಿನಯವನ್ನು ಅಳವಡಿಸಿಕೊಂಡು ಮುಂದೆ ಪ್ರಬುದ್ಧ ನಟಿಯರಾಗಲು ಸಾಧ್ಯವಾಗುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಇಂಥ ಸಂಸ್ಥೆಗಳು ಇನ್ನೂ ಹುಟ್ಟಿಕೊಂಡಿಲ್ಲ. ಇದಕ್ಕೆ ಪರ್ಯಾಯವಾಗಿ ಲಲಿತ ಕಲಾರಂಗ ಮರಿಯಮ್ಮನಹಳ್ಳಿ, ಹಡಗಲಿಯ ರಂಗಭಾರತಿ, ಬಸರಕೋಡಿನ ರಂಗೋದಯ ಇಂಥ ಸಂಸ್ಥೆಗಳು ಈಗೀಗ ಕ್ರಿಯಾಶೀಲವಾಗಿ ಮಹಿಳಾ ತರಬೇತಿ ಶಿಬಿರ, ಉಪನ್ಯಾಸಗೋಷ್ಠಿಗಳು, ಈ ತಂಡಗಳಿಂದ ನಾಟಕ ಪ್ರಯೋಗಗಳು ಹಾಗೂ ಸಂಗೀತ ಪಾಠ ಶಾಲೆಗಳು ಆರಂಭವಾಗಿವೆ. ಆದರೆ ನಾಟಕ ಶಾಲೆಗಳು ಎಲ್ಲಿಯೂ ಆರಂಭವಾಗಿಲ್ಲ. ಪ್ರಾಥಮಿಕ ಹಂತದಲ್ಲಿ ನಾಟಕಗಳು ಆರಂಭವಾದರೆ ಇಂಥ ಪರಿಸರದಲ್ಲಿ ಮಕ್ಕಳು ಬೌದ್ಧಿಕವಾಗಿ ಮಾನಸಿಕವಾಗಿ, ಚತುರತೆ ಹಾಗೂ ಸ್ವಂತಿಕೆಗಳಿಂದ ಬೆಳೆಯಲು ಸಹಕಾರಿಯಾಗುತ್ತದೆ.

೧. ಮಕ್ಕಳಿಗೆ ಕಲೆಯು ಇಂದ್ರೀಯ ಹಾಗೂ ಮನಸ್ಸಿಗೆ ಒಂದು ಅಭಿವ್ಯಕ್ತಿಯನ್ನು ಕೊಟ್ಟಂತಾಗುತ್ತದೆ.

೨. ರಂಗಭೂಮಿಯು ಮಕ್ಕಳ ಪ್ರತಿಭೆಯನ್ನು ಹೊರಹಾಕಲು ಇದೊಂದು ಮಾಧ್ಯಮವಾಗುತ್ತದೆ.

೩. ಮಕ್ಕಳಿಗೆ ಹೊಸ ಆಲೋಚನೆ, ಉದ್ವೇಗಗಳನ್ನು ಹೊರಹಾಕಲು ಸಹಕಾರಿಯಾಗುವುದು.

೪. ಮಕ್ಕಳಲ್ಲಿ ಕೋಪ, ತಾಪ, ದ್ವೇಷಗಳನ್ನು ಹೊರಹಾಕಿ ಸಜ್ಜನರನ್ನಾಗಿ ರಂಗಭೂಮಿಯು ಮಾರ್ಪಡಿಸುತ್ತದೆ.

೫. ಮಕ್ಕಳಿಗೆ ತಮ್ಮ ಮನಸ್ಸಿಗೆ ದುಃಖ, ನೋವು, ಸಂಕಟ, ಆಕ್ರಮಣಕಾರಿ ಪ್ರವೃತ್ತಿಗಳನ್ನು ರಂಗಭೂಮಿಯಿಂದ ಹೊರಹಾಕಲು ಸಾಧ್ಯವಾಗುತ್ತದೆ.

೬. ಜೀವನದ ಪ್ರತಿಯೊಂದು ಹಂತಗಳಲ್ಲಿ ಸಮಸ್ಯೆಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸಬೇಕು ಅವುಗಳನ್ನು ಹೇಗೆ ಎದುರಿಸಬೇಕು ಎಂಬ ಅರಿವು ಪ್ರಾರಂಭದಲ್ಲಿಯೇ ಮೂಡುತ್ತದೆ.

ರಂಗಶಿಕ್ಷಣದ ಮುಖೇನ ರಂಗನಟಿಯರ ಭವಿಷ್ಯವು ಉಜ್ವಲವಾಗಲು ಸಾಧ್ಯವಾಗುತ್ತದೆ. ಮಾನವ ಯಾವುದೇ ಒಂದು ವೃತ್ತಿಯನ್ನು ಮಾಡಬೇಕೆಂದರೆ, ಆ ವೃತ್ತಿಯಿಂದ ಒಂದು ಶಿಕ್ಷಣ ತರಬೇತಿಯನ್ನು ಪಡೆದರೆ ಮಾತ್ರ ಸಮರ್ಥವಾಗಿ ವೃತ್ತಿಯನ್ನು ಯಶಸ್ವಿಯಾಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ

ನಟಿಯರಿಗೆ ರಂಗಶಿಕ್ಷಣವನ್ನು ನೀಡಿದರೆ ಅವರು ತಮ್ಮ ಅಭಿನಯದಲ್ಲಿ ಪ್ರಬುದ್ಧತೆಯನ್ನು ಮೆರೆಯಲು ಸಾಧ್ಯವಾಗುತ್ತದೆ. ಕಾರಣ ರಂಗಶಾಲೆಗಳಿಂದ ರಂಗಶಿಕ್ಷಣವನ್ನು ನಟಿಯರಿಗೆ ಕೊಡಿಸಬೇಕು. ಸಾಕಷ್ಟು ಅನುಭವ ವಿರುವವರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಿಕೊಂಡು, ಆ ನಿರ್ದೇಶಕರ ಮೂಲಕ ನಟಿಯರಿಗೆ ರಂಗಶಿಕ್ಷಣ ನೀಡಿದರೆ ರಂಗನಟಿಯರ ಜೀವನ ಉನ್ನತ ಮಟ್ಟದಲ್ಲಿರಲು ಸಾಧ್ಯವಾಗುತ್ತದೆ.

ರಂಗಸೂತ್ರಗಳು

ಎಲ್ಲ ಶಿಕ್ಷಣಕ್ಕೂ ಒಂದು ಮಿತಿ ಹಾಗೂ ಚೌಕಟ್ಟು ಇರುವಂತೆ, ರಂಗಶಿಕ್ಷಣಕ್ಕೂ ಹಲವಾರು ಸೂತ್ರಗಳಿವೆ. ಆ ರಂಗಸೂತ್ರಗಳನ್ನು ನಟಿಯರು ತಮ್ಮ ಅಭಿನಯಗಳಲ್ಲಿ ಅಳವಡಿಸಿಕೊಂಡರೆ ಅಭಿನಯ ಹೆಚ್ಚು ಹೆಚ್ಚು ಪ್ರೌಢವಾಗಲು ಸಾಧ್ಯವಾಗುತ್ತದೆ. ನಟಿಯರು ಒಂದು ಶಿಸ್ತುಬದ್ಧ ವ್ಯವಸ್ಥೆಗೆ ಒಳಪಟ್ಟಂತಾಗುವುದು.

೧. **ನಾಟಕವನ್ನು ಆಯ್ಕೆ ಮಾಡುವುದು :** ಯಾವ ನಾಟಕವನ್ನು ಪ್ರಯೋಗಕ್ಕೆ ಆಯ್ಕೆ ಮಾಡಿಕೊಳ್ಳಬೇಕು ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ರಾಜಕೀಯ, ಅಸಂಗತ ಈ ರೀತಿಯಲ್ಲಿ ಯಾವ ನಾಟಕಗಳನ್ನು ಪ್ರಯೋಗಿಸಬೇಕು. ಪ್ರೇಕ್ಷಕರು ಯಾವುದನ್ನು ಸ್ವೀಕರಿಸಬಲ್ಲರೆಂಬುದನ್ನು ಗಮನಿಸಿ ನಾಟಕಗಳನ್ನು ಪ್ರಯೋಗಿಸ ಬೇಕು. ನಟಿಯರಿಗೆ ಹೆಚ್ಚು ಒತ್ತುಕೊಡುವ ನಾಟಕಗಳನ್ನು ಪ್ರಯೋಗಿಸಿ, ಆ ಮೂಲಕ ಸಮಾಜದಲ್ಲಿ ಸ್ತ್ರೀಪರ ಧೋರಣೆಗಳು ಜಾರಿಯಲ್ಲಿ ಬಂದು ನೈತಿಕ ಮಟ್ಟವನ್ನು ಎತ್ತರಿಸಬಹುದಾಗಿದೆ. ಸಾಮಾಜಿಕ ಅನಿಷ್ಟ ಗಳಲ್ಲಿ ಒಂದಾದ ಅಸಮಾನತೆ, ಅಸ್ಪೃಶ್ಯತೆ, ಅನೈತಿಕತೆ ಹೀಗಿರುವ ಹಲವಾರು ಸಮಸ್ಯೆಗಳಿಗೆ ನಾಟಕ ಮಾಧ್ಯಮವು ಒಂದು ವೇದಿಕೆಯಾಗಬೇಕು. ಸ್ತ್ರೀ ಧೋರಣೆಗಳು ಕೃತಿಯಲ್ಲಿ ಬಂದು ಅವುಗಳನ್ನು ಅಳವಡಿಸಿ ಕೊಂಡರೆ ಎಷ್ಟೋ ಸ್ತ್ರೀ ಜೀವಗಳಿಗೆ ಇವು ಪ್ರೇರಕ ಶಕ್ತಿಯಾಗುತ್ತವೆ. ಎಷ್ಟೋ ನಟಿಯರು ''ರಂಗವನ್ನು ಹತ್ತಿದ ಕ್ಷಣದಿಂದ ಹಗಲಿನಲ್ಲಿ ಸಮಾಜದ ಕೀಳು ದೃಷ್ಟಿಯಿಂದ ಮೈಮನ ಮುದುರಿಕೊಂಡು, ಕೀಳರಿಮೆಯೂ ಜೊತೆಗೆ ಬೆಳೆದು ಬಂದಿರುತ್ತದೆ.'' ಈ ರೀತಿಯ 'ಕೀಳರಿಮೆ' ಮನೋಭಾವ ಹೋಗಿ ವಿಶಾಲ ಮನಸ್ಸು, ವಿಶಾಲದೃಷ್ಟಿಕೋನ ಬೆಳೆಯಲು ನಟಿಯರಿಗೆ ರಂಗ ಮಾಧ್ಯಮವು ಪ್ರಚೋದಕ ಶಕ್ತಿಯಾಗಬೇಕು. ನಟಿಯರಿಂದ ಒಳ್ಳೆಯ ವೈಚಾರಿಕ ಗುಣಮಟ್ಟದ ನಾಟಕಗಳನ್ನು ಪ್ರಯೋಗಿಸುವುದರಿಂದ ಸಮಾಜದ ಎಲ್ಲ ಕೀಳರಿಮೆಗಳನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ. ಇದರಿಂದ ನಟಿಯರ ಮನೋಭಾವವನ್ನು ಉತ್ತುಂಗಕ್ಕೆ ಏರಿಸಲು ಸಾಧ್ಯವಾಗುತ್ತದೆ.

೨. **ಪಾತ್ರಗಳ ಹಂಚಿಕೆ :** ನಟಿಯರಿಗೆ ಇದು ಬಹು ಮುಖ್ಯವಾದ ಘಟ್ಟ. ಇಲ್ಲಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಅಸಂಗತ, ರಾಜಕೀಯ ಯಾವ ರೀತಿಯ ನಾಟಕಗಳಲ್ಲಿ ಯಾರು, ಹೇಗೆ, ಯಾವ ಪಾತ್ರವನ್ನು ಯಾರು ಮಾಡಿದರೆ ಸರಿಯಾಗುತ್ತದೆ. ಯಾರು ಯಾವ ಪಾತ್ರಕ್ಕೆ ಹೊಂದಿಕೊಳ್ಳುತ್ತಾರೆ. ಯಾರು ಯಾವ ಪಾತ್ರಕ್ಕೆ ಸಮರ್ಥರು ಎಂಬುದನ್ನು ನಿರ್ದೇಶಕರು ಗಮನಿಸಿ, ಆಲೋಚಿಸಿ ಅವರಿಗೆ ಆ ಪಾತ್ರ ಕೊಡುತ್ತಾರೆ.

ಕೆಲವು ನಟಿಯರು ಸಾಮಾಜಿಕ ನಾಟಕಕ್ಕೆ, ಇನ್ನೂ ಕೆಲವು ನಟಿಯರು ಪೌರಾಣಿಕ ನಾಟಕಗಳಿಗೆ ಸೀಮಿತವಾಗಿರುತ್ತಾರೆ. ಸಾಮಾಜಿಕಗಳಲ್ಲಿ ಸಾಧ್ವಿಪಾತ್ರ, ಹಾಸ್ಯಪಾತ್ರ, ಗಂಭೀರಪಾತ್ರ ಈ ಎಲ್ಲವುಗಳಲ್ಲಿ ಆಯಾಪಾತ್ರ ಮಾಡುವವರು ಅವರೇ ಮಾಡಿದರೆ ಸರಿ. ಹಾಸ್ಯ ಪಾತ್ರ ಮಾಡುವವರು ಗಂಭೀರ ಪಾತ್ರ ಮಾಡಲಾರರು. ಗಂಭೀರ ಪಾತ್ರ ಮಾಡುವವರು ಹಾಸ್ಯ, ಖಳನಾಯಕಿ ಪಾತ್ರಗಳನ್ನು ಮಾಡಲಾರರು. ಆದ್ದರಿಂದ ಯಾವುದೇ ನಟಿಯರು ಒಂದೇ ಪಾತ್ರದಲ್ಲಿ ಸತತವಾಗಿ ಪ್ರಯೋಗಿಸಿ ಹೆಸರು ಮಾಡಿದ್ದರೆ, ಅದೇ ಪಾತ್ರವನ್ನು ಪದೇ ಪದೇ ಮಾಡಿದಂತೆಲ್ಲಾ ಅದೇ ಪಾತ್ರದಲ್ಲಿ ಲೀನವಾಗಿ ಪ್ರತಿ ಪ್ರಯೋಗವು ಒಂದೊಂದು ಹೊಸತಿರುವನ್ನು ಕೊಡುತ್ತದೆ. ಆ ಹೊಸ ತಿರುವಿನ ಪ್ರಕಾರ ಇದೇ ಪಾತ್ರ ಹೆಚ್ಚು ಹೆಚ್ಚು ಪ್ರೌಢ ಅಭಿನಯ ಕಲಾ ಘನತೆಯನ್ನು ಪಡೆದುಕೊಳ್ಳುತ್ತದೆ. ಪಾತ್ರಗಳು ಅದೇ ರೀತಿಯಲ್ಲಿ ಗಾಂಭೀರ್ಯವನ್ನು ಪ್ರತಿನಿಧಿಸುವಂತಿರಬೇಕು.

ಉದಾ : **ರಕ್ತರಾತ್ರಿ**	ದ್ರೌಪತಿ	-	ಸುಭದ್ರಮ್ಮ ಮನ್ಸೂರು
	ಭಾನುಮತಿ	-	ಪಿ. ಪದ್ಮ ಕೂಡ್ಲಿಗಿ
	ಉತ್ತರೆ	-	ಕೆ. ನಾಗರತ್ನ
	ಮದಹಂಸಿ	-	ಆದವಾನಿ ವೀಣಾ, ಎಸ್.ರೇಣುಕಾ

ಇಡೀ ಬಳ್ಳಾರಿ ಜಿಲ್ಲೆಯಲ್ಲಿ ರಕ್ತರಾತ್ರಿ ನಾಟಕಕ್ಕೆ ಇವರೇ ಪಾತ್ರಮಾಡಬೇಕು. ಅದು ಆಯಾ ಪಾತ್ರಕ್ಕೆ ಅವರೇ ಸರಿ, ಅವರೇ ಸಮರ್ಥರು. ದ್ರೌಪತಿ ಪಾತ್ರಕ್ಕೆ ಆದವಾನಿ ವೀಣಾನನ್ನು ಸೇರಿಸಲು ಸಾಧ್ಯವಿಲ್ಲ. ಸುಭದ್ರಮ್ಮನವರನ್ನು ಉತ್ತರೆ ಪಾತ್ರಕ್ಕೆ ನೇಮಿಸಲು ಆಗುವುದಿಲ್ಲ. ಹೀಗೆ ಆಯಾ ಪಾತ್ರಕ್ಕೆ ಅವರೇ ಶ್ರೇಷ್ಠ ಹಾಗೂ ಸಮರ್ಥ. ಪಾತ್ರಗಳು ಹಂಚಿಕೆಯಾಗುವಾಗ ಧ್ವನಿಪರೀಕ್ಷೆ, ಸಂಭಾಷಣೆಯಲ್ಲಿ ಉಚ್ಚಾರಣೆ, ದೈಹಿಕ ನಿಲವು ಹೀಗೆ ಎಲ್ಲವನ್ನು ಪರೀಕ್ಷಿಸಿದ ನಂತರ ಆಯಾ ಪಾತ್ರಕ್ಕೆ ಅವರೇ ಸರಿಯಾಗಿ ಸಮರ್ಥರೆನ್ನಬಹುದು.

ನಾಟಕ ಸಾಹಿತ್ಯ : ನಾಟಕ ಪ್ರಯೋಗ ಆಗುವುದಕ್ಕಿಂತ ಮೊದಲು ಅದು ಸಾಹಿತ್ಯ ಕೃತಿ ಮಾತ್ರ. ಅದು ರಂಗಕೃತಿಯಾಗುವುದು ಪ್ರಯೋಗವಾದ ಮೇಲೆ. ನಾಟಕ ಸಾಹಿತ್ಯಗಳು ಹಲವಾರು ಕ್ಷೇತ್ರವನ್ನು ಒಳಗೊಂಡು ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ರಾಜಕೀಯ, ಅಸಂಗತ ಹೀಗೆ ಹಲವಾರು ಸಾಹಿತ್ಯರೂಪದ ನಾಟಕಗಳು ಪ್ರಯೋಗಗೊಂಡು ನಟಿಯರು ಹೆಚ್ಚು ಹೆಚ್ಚು ಸ್ತ್ರೀ ಜೀವಪರ ಕೇಂದ್ರಿತ ನಾಟಕಗಳನ್ನು ಹೆಚ್ಚು ಪ್ರಯೋಗಿಸುವುದರಿಂದ, ಮಹಿಳೆಯರಿಗೆ ಯಾವ ಕೀಳರಿಮೆ ಮನೋಭಾವನೆಯೂ ಇರದೇ ಸಹಜವಾಗಿ ಎಲ್ಲರಲ್ಲೂ ಒಂದಾಗಿ ಸಮಾನತೆಯಿಂದ ಬಾಳುವ ಮನೋಧರ್ಮವನ್ನು ಸಮಾಜದಲ್ಲಿ ರೂಢಿಸುವ ವ್ಯವಸ್ಥೆಯಾಗುತ್ತದೆ.

ನಟಿಯರಿಗೆ ಹೊಸರೀತಿಯ ಕಥಾವಸ್ತುವನ್ನು ನಾಟಕ ಸಾಹಿತ್ಯದಲ್ಲಿ ಅಳವಡಿಸಬೇಕು. ಪೌರಾಣಿಕ ಕಥಾವಸ್ತುವನ್ನು ತೆಗೆದುಕೊಂಡು ಹೊಸ ಆವರಣಕ್ಕೆ ಹೊಂದುವಂತೆ ಅದನ್ನು ನಾಟಕಕಾರ ಪುನಾ ರಚಿಸಬಹುದು.

ಆದರೆ ಅದಕ್ಕೊಂದು ಪ್ರಮುಖ ಪ್ರಸ್ತುತತೆ ಇರುತ್ತದೆ. ಉದಾ: ಗಿರೀಶ್ ಕಾರ್ನಾಡ್ ಯಯಾತಿ ನಾಟಕದಲ್ಲಿ ಕಾರ್ನಾಡ್ ಹೊಸದರ್ಶನವನ್ನು ನೀಡಿದ್ದಾರೆ. ಶ್ರೀರಂಗರ ಸಂಜೀವಿನಿ, ದೇವಯಾನಿ, ಶರ್ಮಿಷ್ಠೆಯರ ಪ್ರೇಮ ಕಥೆಗೆ ಹೊಸ ಅರ್ಥ ಇದೆ. ಕಥಾವಸ್ತುಗಳು ನಾಟಕಕ್ಕೆ ಹೊಸ ಆಯಾಮವನ್ನು ನೀಡುವಂತಿರಬೇಕು. ನಟಿಯರ ಭವಿಷ್ಯತ್ತಿಗೆ ಸೋಪಾನವಾಗುವಂತ ಕಥೆಗಳು ನಾಟಕ ರೂಪದಲ್ಲಿ ಬರುವಂತಿದ್ದರೆ, ಸಂಪೂರ್ಣವಾಗಿ ಅಲ್ಲದಿದ್ದರೂ ನಟಿಯರ ಜೀವನಕ್ಕೆ ಅಲ್ಪಮಟ್ಟಿಗೆ ಸಹಕಾರಿಯಾದಂತಾಗುತ್ತದೆ. ಉದಾಹರಣೆಗೆ ಮೊದಲು ಬಳ್ಳಾರಿ ಜಿಲ್ಲೆಯ ನಟಿಯರು ವೃತ್ತಿಕಂಪನಿಗಳಲ್ಲಿ ಇದ್ದು, ನಂತರದ ದಿನಗಳಲ್ಲಿ ಕೆಲವರು ಸ್ವತಃ ಕಂಪನಿಕಟ್ಟಿ ಕೊಂಡು ಹೇಗೆ ಜೀವನವನ್ನು ಸಾಗಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ, ರಂಗಜೀವನದಲ್ಲಿ ಹೊಸ ಸಂಸ್ಕಾರ ವೆಂಬಂತೆ ನೀನಾಸಂ ತಿರುಗಾಟದ ಪ್ರಭಾವದಿಂದ ಧೀಮಂತ ನಟ ಡಿ.ದುರ್ಗಾದಾಸರ ಮಗಳು ಡಿ.ಹನುಮಕ್ಕ ವೃತ್ತಿಕಂಪನಿಯಲ್ಲೂ ಅಲ್ಲದೆ, ಗ್ರಾಮೀಣ ರಂಗಭೂಮಿಯಲ್ಲಿ ಇರದೇ ನೀನಾಸಂ ತಿರುಗಾಟದೊಂದಿಗೆ ತಮ್ಮ ವೃತ್ತಿಯನ್ನು ಮುಂದುವರಿಸಿ ಇಡೀ ಕರ್ನಾಟಕದಲ್ಲೆಲ್ಲಾ ಓಡಾಡಿ ಇತರ ರಾಜ್ಯಗಳಲ್ಲಿ ನಾಟಕೋತ್ಸವದೊಂದಿಗೆ ಭಾಗವಹಿಸಿ. ಈಗ ಶ್ರೇಷ್ಠನಟಿ ಎಂಬ ಮಟ್ಟಕ್ಕೆ ಬಂದಿದ್ದು, ನಾಟಕ ಅಕಾಡೆಮಿಯ ಸದಸ್ಯೆಯೂ ಆಗಿದ್ದಾರೆ. ಹೊಸ ಕಥಾವಸ್ತುವಿನ ನಾಟಕಗಳು, ಹೊಸ ಹೊಸ ಅನುಭವಸ್ಥ ರಂಗಕರ್ಮಿಗಳೊಂದಿಗೆ ಹೊಸ ಚಿಂತನಾಶೀಲದ ಕಥೆಗಳನ್ನು ನಾಟಕರೂಪ ಪ್ರದರ್ಶಿಸಿ ಹೆಸರು ಮಾಡಿದ್ದಾರೆ. ಆದ್ದರಿಂದ ನಾಟಕ ಸಾಹಿತ್ಯ ರಂಗನಟಿಯರ ಬಾಳಿಗೆ ಅದು ಪ್ರೇರಕವಾಗಬೇಕು. ಸಾಹಿತ್ಯವು ಪ್ರತಿಯೊಬ್ಬರ ಬಾಳಿಗೆ ಬೆಳಕು ಚೆಲ್ಲುವಂತಿರಬೇಕು. ಚಿಂತನಾರ್ಹ ನಾಟಕ ಸಾಹಿತ್ಯವೇ ಇಂದು ಕನ್ನಡ ರಂಗಭೂಮಿಯಲ್ಲಿ ಜ್ಞಾನಪೀಠವನ್ನು ಪಡೆಯಲು ಸಾಧ್ಯವಾಗಿದೆ.

ಕಟಿಬದ್ಧ ವ್ಯವಸ್ಥೆಯಲ್ಲಿಯ ಸಾಹಿತ್ಯವನ್ನು ನಾವು ಪದೇ ಪದೇ ಪ್ರಯೋಗಕ್ಕೆ ತರುತ್ತಿದ್ದರೆ, ನಟಿಯರೂ ಕೂಡ ಇನ್ನೂ ಕೀಳರಿಮೆಗಳನ್ನೇ ಈ ಪುರುಷಪ್ರಧಾನ ವ್ಯವಸ್ಥೆಯಲ್ಲಿ ರೂಢಿಸಿಕೊಂಡು ಮುದುಡಿಕೊಂಡೇ ಸುಪ್ತಮನಸ್ಸಿನಲ್ಲಿ ಭಯದಿಂದಲೇ ಜೀವನವನ್ನು ಸಾಗಿಸುತ್ತಿರುವರು. ಆದ್ದರಿಂದ ಕನ್ನಡ ರಂಗಭೂಮಿಯಲ್ಲಿ ನೀನಾಸಂ, ರಂಗಾಯಣಗಳು, ನಟ, ನಟಿಯರಿಗೆ ಉತ್ತೇಜಿತ ಕೇಂದ್ರಗಳಾಗಿವೆ. ನೀನಾಸಂ ತಿರುಗಾಟದ ಪ್ರಭಾವದಿಂದಲೇ ಹಲವಾರು ಕಲಾವಿದರು ತಮ್ಮ ಭವಿಷ್ಯವನ್ನು ಉಜ್ವಲ ರೀತಿಯಲ್ಲಿ ರೂಪಿಸಿಕೊಂಡಿದ್ದಾರೆ. ಅಂಥ ಬದಲಾವಣೆಯು ನಮ್ಮ ಬಳ್ಳಾರಿ ಜಿಲ್ಲೆಯ ರಂಗ ನಟಿಯರಲ್ಲಿ ಆಗಬೇಕು. ನಟಿಯರೂ ಕೂಡ ಹೆಚ್ಚು ಹೊಸ ಸಾಹಿತ್ಯವನ್ನು ಓದಬೇಕು. ಈ ರೀತಿಯ ಅಧ್ಯಯನ ಮಾಡಿದರೆ ಅವರಿಗೂ ಕೂಡ ಓದಿದಂತೆಲ್ಲಾ ಪ್ರಜ್ಞಾವಂತಿಕೆ ಬರುತ್ತದೆ. ಈ ಪ್ರಜ್ಞಾವಂತಿಕೆಯಿಂದ ಅವರಿಗೆ ಜೀವನದಲ್ಲಿ ಏನೇ ಜಟಿಲ ಸಮಸ್ಯೆಗಳು ಬಂದರೂ ಅವುಗಳನ್ನು ಧೈರ್ಯದಿಂದಲೇ ಎದುರಿಸಿ ಮುನ್ನಡೆಯುತ್ತಾರೆ. ಇಂಥ ಅಧ್ಯಯನವು ಓದುವುದರಿಂದ ಹಾಗೂ ರಂಗಶಿಕ್ಷಣದ ಮೂಲಕ ಪ್ರಾಥಮಿಕ ಹಂತದಲ್ಲಿಯೇ ಕಲೆಯನ್ನು ಪಠ್ಯದೊಂದಿಗೆ ಬೋಧಿಸಿದರೆ ನಟಿಯರ ಸುಪ್ತಮನಸ್ಸಿನ ಕಲೆ ಆವಿರ್ಭಾಸುತ್ತದೆ. ಇದರಿಂದ ನಟಿಯರಿಗೆ ಚಿಕ್ಕಂದಿನಿಂದ ಅರಿವು ಮೂಡಿ

ಅವರ ನೈತಿಕ ಹಾಗೂ ಬೌದ್ಧಿಕ ಮಟ್ಟವು ಎತ್ತರವಾಗುತ್ತದೆ. ಈ ಬದಲಾವಣೆಯು ನಾಟಕ ಸಾಹಿತ್ಯದ ಪ್ರಭಾವದಿಂದ ಮಾತ್ರ ಸಾಧ್ಯವಾಗುತ್ತದೆ.

"ಇವತ್ತು 'ನಾಟಕ' ಎನ್ನುವುದಕ್ಕೆ ಎರಡು ಅರ್ಥಗಳಿವೆ ಸಾಹಿತ್ಯ ಕೃತಿ ಮತ್ತು ರಂಗ ನಿರ್ಮಿತಿ. ಒಂದರ ಮಾಧ್ಯಮ ಭಾಷೆ, ಇನ್ನೊಂದರದ್ದು ಅಭಿನಯ, ಒಂದು ದೇಶಸ್ಥ ಇನ್ನೊಂದು ಕಾಲಸ್ಥ ಹೀಗಾಗಿ ಇವು ಬೇರೆ ಬೇರೆ. ಇವುಗಳ ವಿಮರ್ಶೆ ಬೇರೆ ಬೇರೆಯಾಗಿಯೇ ನಡೆಯಬೇಕು. ರಂಗನಿರ್ಮಿತಿಯಲ್ಲಿ ಒಂದೊಂದು ಪ್ರಯೋಗವೂ ಒಂದೊಂದು ಸ್ವತಂತ್ರಕೃತಿ". (ಲೇ: ಕೆ.ವಿ.ಸುಬ್ಬಣ್ಣ, ನಾಟಕ ಹಾಗೆಂದರೇನು? ಸಾಕ್ಷಿ ೧೪ ಜನವರಿ, ೧೯೭೨, ಪುಟ, ೧೧೯)

ಒಂದು ನಾಟಕ ಸಾಹಿತ್ಯವು ಕೃತಿಯಾಗಿ ಹೊರ ಬರುವುದಕ್ಕೂ ಅದು ಒಂದು ಪ್ರಯೋಗವಾಗುವುದಕ್ಕೂ ಅನೇಕ ವೈವಿಧ್ಯತೆಗಳನ್ನು ಅದು ಒಳಗೊಂಡಿರುತ್ತದೆ. ಒಂದು ವೇಳೆ ನಾಟಕ ಸಾಹಿತ್ಯ ಮೌಲ್ಯಗಳಿಂದ ದೂರ ಇದ್ದಾಗಲೂ ಒಂದು ಒಳ್ಳೆಯ ಪ್ರಯೋಗವಾಗುವ ಸಾಧ್ಯತೆ ಇರುತ್ತದೆ. ಸಾಮಾನ್ಯವಾಗಿ ಪ್ರೇಕ್ಷಕರು ನಾಟಕವನ್ನು ಓದುವುದಿರಲಿ ನಾಟಕ ಕೃತಿಯನ್ನು ಅವರು ಕೈಯಲ್ಲಿ ಹಿಡಿದು ನೋಡಿಯೇ ಇರುವುದಿಲ್ಲ. ನಾಟಕ ಸಾಹಿತ್ಯ ಕೃತಿ ಓದಿದಾಗ ಮೂಡುವ ಅನುಭವಕ್ಕೂ ನಾಟಕವಾಗಿ ರೂಪುಗೊಂಡು ಪ್ರದರ್ಶಿತವಾಗಿ ಮೂಡುವ ಅನುಭವಕ್ಕೂ ಅಗಾಧ ಅಂತರವಿರುತ್ತದೆ. ನಾಟಕವು ಪ್ರದರ್ಶನದ ಶಕ್ತಿಯ ಮೇಲೆ ಅವಲಂಬಿಸಿದೆ. ಕಾರಣ ಒಳ್ಳೆಯ ಸಾಹಿತ್ಯ ಕೃತಿಯನ್ನು ಕೆಟ್ಟದಾಗಿ ಪ್ರದರ್ಶಿಸುವುದಕ್ಕೂ ಹಾಗೂ ಕೆಟ್ಟ ಸಾಹಿತ್ಯ ಕೃತಿಯನ್ನು ಒಳ್ಳೆಯದಾಗಿ ಪ್ರಯೋಗಿಸುವುದಕ್ಕೂ ಹಲವಾರು ಸಾಧ್ಯತೆಗಳಿರುತ್ತದೆ. ಪರಿಣಾಮ ಬೀರುವ ದೃಷ್ಟಿಯಲ್ಲಿ ಸಾಹಿತ್ಯ ಕೃತಿಗೆ ಅಂತರ್ಮುಖತೆ ಇದ್ದರೆ ನಾಟಕಕ್ಕೆ ಯಾವಾಗಲೂ ಬಹಿರ್ಮುಖತೆಯೇ ಹೆಚ್ಚಾಗಿರುತ್ತದೆ. ಆದ್ದರಿಂದ ಎಲಿಯೆಟ್ ಹೇಳಿದ ಪ್ರಕಾರ "ನಾಟಕವನ್ನು ಅದರ ಪ್ರದರ್ಶನ ರೂಪು ನೋಡದೇ ಬರೇ ಸಾಹಿತ್ಯ ಕೃತಿಯಾಗಿ ನೋಡುವುದಾದರೆ ಅದು ಸಾಹಿತ್ಯ ಕೃತಿಯೇ ಅಲ್ಲ."

ಲೇಖಕರು ಜೀವನದ ವೈವಿಧ್ಯತೆಯನ್ನು ಸೃಷ್ಟಿಸಿಕೊಂಡು ಬರೆಯುವ ತನ್ನ ಸಾಹಿತ್ಯ ಕೃತಿಯ ತಳಭಾಗದಲ್ಲಿ ಒಂದು ಸಣ್ಣ ಕಥೆಯ ಹರವನ್ನು ಪೋಣಿಸಲೇ ಬೇಕಾಗುತ್ತದೆ. ಕೆಲವರು ಇದನ್ನು ಕಡೆಗಣಿಸಿದರೂ ಉಳಿದವರು ಇದನ್ನು ಪರಿಗಣಿಸುತ್ತಾರೆ. ನಮ್ಮ ಮನಸ್ಸಿನ ಭಾವನೆಗಳನ್ನು ಕಂಡುಂಡ ಅನುಭವವನ್ನು ಒಂದು ವಸ್ತುವಿನ ಮೂಲಕ ಅಥವಾ ಒಬ್ಬ ವ್ಯಕ್ತಿಯ ಮೂಲಕ ಪುನರ್‌ಸೃಷ್ಟಿಸಿ ನಿರ್ಲಿಪ್ತವಾಗಿ ಇದ್ದು ಬಿಡುವ ಕ್ರಿಯೆ ಸಾಹಿತ್ಯ ದ್ದಾಗುತ್ತದೆ.

"ಸಮಾಜದಲ್ಲಿ ಜನರು ಕಲೆಯನ್ನು ಪ್ರೀತಿಸುತ್ತಾರೆ, ಸ್ವೀಕರಿಸುತ್ತಾರೆ. ಆದರೆ ಕಲಾಕಾರರ ಖಾಸಗಿ ಜೀವನ ವನ್ನು ಸ್ವೀಕರಿಸುವುದಿಲ್ಲ" ಆದ್ದರಿಂದ ರಂಗನಟಿಯರ ಬದುಕು ರಂಗಭೂಮಿಯಲ್ಲಿ ಒಂದು ಪ್ರಶ್ನೆಯಾಗಿ ನಿಲ್ಲುತ್ತದೆ. ನಾಟಕ ಸಾಹಿತ್ಯವು ಸ್ತ್ರೀ ಕೇಂದ್ರೀತವಾಗಿದ್ದು, ಸ್ತ್ರೀ ಜೀವಪರ ಕಾಳಜಿಗೆ ಹೆಚ್ಚು ಮನ್ನಣೆ ಕೊಡುವ

ನಾಟಕಗಳಿದ್ದರೆ ಅದನ್ನು ನಟಿಸಿ ತೋರಿಸುವ ಕಲಾವಿದರೂ ಅದನ್ನು ನೋಡುವ ಜನರೂ ಸ್ವಲ್ಪ ಮಟ್ಟಿಗೆ ಅವರಿಗೆ ಅರಿವು ಮೂಡಿದಂತಾಗುತ್ತದೆ. ಯಾವ ಸಾಹಿತ್ಯ ಆ ಕಾಲಮಾನದ ಸ್ಥಿತಿಗತಿಗಳ ಪ್ರತಿಬಿಂಬವಾಗಿರುವುದೋ ಅದರಿಂದ ಆ ವ್ಯವಸ್ಥೆಯ ಲೋಪದೋಷಗಳನ್ನು ಎತ್ತಿ ಹಿಡಿದು ಬರೆಯುವ ನಾಟಕ ಸಾಹಿತ್ಯವು ಪ್ರಯೋಗಕ್ಕೆ ಬಂದರೆ, ಅಂಥ ಪ್ರಯೋಗಗಳನ್ನು ನಾವು ಮತ್ತೆ ಮತ್ತೇ ಪ್ರಯೋಗಿಸುವುದಾದರೆ ಪರಿಣಾಮವಾಗಿ ಸಮಾಜದಲ್ಲಿನ ಜನತೆ ಅಂದಿಗಾದರೂ ಎಚ್ಚೆತ್ತುಕೊಳ್ಳಬಹುದೇನೋ? ಎಂಬ ಪ್ರಶ್ನೆ ನನ್ನನ್ನು ಕಾಡುತ್ತದೆ.

ನಾನು ಕೂಡ್ಲಿಗಿ ತಾಲೂಕಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಹಲವಾರು ರಂಗನಟಿಯನ್ನು ಸಂದರ್ಶಿಸಿ ನಾಟಕ ಸಾಹಿತ್ಯದ ಬಗ್ಗೆ ತಮ್ಮ ಅಬಿಪ್ರಾಯವೇನು ಎಂದು ಕೇಳಿದಾಗ, ರಾಜ್ಯೋತ್ಸವ ಪ್ರಶಸ್ತಿ ವಿಜೇತೆ, ಬಿ.ಶಿವಕುಮಾರಿ ''ಮೊದಲು ಈ ನಾಟಕ ಕವಿಗಳನ್ನೇ ನಾವು ಹೊಡೆಯಬೇಕು'' ಎಂದು ಹೇಳುತ್ತಾರೆ. ಕಾರಣವನ್ನು ಕೇಳಿದರೆ, ನಾವು ಸಹ ನಟರೊಂದಿಗೆ ನಟಿಸುವಾಗ, ಸಹ ನಟರಿಗೆ ಏನೇಯಾದರೂ ಅತೀ ಎಂಬಂತೆ ಮಾಡಬೇಡಿರಿ ಎಂದು ಕೇಳಿಕೊಂಡಾಗ ನಮ್ಮ ಗ್ರಾಮೀಣ ರಂಗಭೂಮಿಯ ಹವ್ಯಾಸಿ ಕಲಾವಿದರು ನೋಡಿ ಪುಸ್ತಕದಲ್ಲಿ ಹಾಗೇ ಇದೆ ನಾವೇನು ಮಾಡಬೇಕು. ನಾವು ದುಡ್ಡು ಕೊಟ್ಟಿರುವುದು ಏತಕ್ಕಾಗಿ ಎಂದು ಮರು ಪ್ರಶ್ನೆ ಹಾಕಿದಾಗ ನಾವು ಏನೂ ಉತ್ತರಿಸದೇ ಮೌನಿಯಾಗಿ ಬಿಡುತ್ತೇವೆ ಎಂದು ದುಃಖದಿಂದ ಈ ರಂಗಕಲಾವಿದೆ ನುಡಿಯುತ್ತಾರೆ. (ನಾಟಕ ಸಾಹಿತ್ಯದಲ್ಲಿ ನಟಿಯಸೀರೆಯನ್ನು ಜೋರಾಗಿ ಸಹನಟ ಸೆಳೆಯಬೇಕು, ನಟಿಯು ನಟನಿಗೆ ಚಪ್ಪಲಿಯಿಂದಲೇ ಹೊಡೆಯಬೇಕು. ನಟಿಯ ಕೈ ಹಿಡಿದುಕೊಳ್ಳಲೇ ಬೇಕು ಹೀಗೆ) ನಾಟಕ ರಚನಾಕಾರರು ಬರೆದಿರುತ್ತಾರೆಂದು ವಿಷಾದದಿಂದ ನುಡಿಯುತ್ತಾರೆ. (ಕ್ಷೇತ್ರಕಾರ್ಯ ಸಂದರ್ಶನ, ಕೂಡ್ಲಿಗಿ ಮಾರ್ಚ್ ೧೮)

ಪ್ರಬುದ್ಧ ನಟಿ ಎಂದೇ ಹೆಸರಾಗಿರುವ ಪಿ.ಪದ್ಮ ಕೂಡ್ಲಿಗಿಯವರನ್ನು ಸಂದರ್ಶಿಸಿದಾಗ ''ಪೌರಾಣಿಕ, ಐತಿಹಾಸಿಕ ಹಾಗೂ ಜನಪದ ನಾಟಕಗಳೇನೋ ಒಂದು ಶಿಸ್ತುಬದ್ಧ ವ್ಯವಸ್ಥೆಯಲ್ಲಿದ್ದು. ೬೦-೭೦ತ್ತರ ದಶಕದ ನಾಟಕ ಸಾಹಿತ್ಯಗಳು ಸ್ವಲ್ಪ ಮಟ್ಟಿಗೆ ವಿಪುಲವಾಗಿ ಬಂದಿವೆ. ಅದು ಇತ್ತೀಚಿನ ನಾಟಕಗಳೇ ಈಗ ಮೌಲ್ಯವನ್ನು ಕಳೆದುಕೊಂಡು ಬಿಟ್ಟಿವೆ. ಈಗಿನ ನಟಿಯರೂ ಕಾಳಜಿಯಿಂದ ನಾಟಕದ ಪಾತ್ರವನ್ನು ನಿರ್ವಹಿಸುವುದಿಲ್ಲ. ಏನೋ ಕಾಟಾಚಾರ ಏಂಬಂತೆ ಮಾತ್ರ ನಿರ್ವಹಿಸುತ್ತಾರೆ. ರಂಗಭೂಮಿಯ ಬಗ್ಗೆ ಯಾರಿಗೂ ಶ್ರದ್ಧೆ ಇಲ್ಲದಾಗಿದೆ. ಬರೀ ದುಡ್ಡಿಗಾಗಿಯೇ ಎಂಬಂತೆ ಎಲ್ಲರೂ ವರ್ತಿಸುತ್ತಾರೆ ಎಂದು ನುಡಿಯುತ್ತಾರೆ. ಹಾಗೆಯೇ ಮುಂದುವರಿದು, ನಾಟಕ ರಚನೆಯು ಒಂದು ಶಿಸ್ತುಬದ್ಧವಾಗಿರಬೇಕು. ಮೌಲ್ಯಾಧಾರಿತ ಸಾಹಿತ್ಯವಾಗಬೇಕು. ಸ್ತ್ರೀಪರ ಧೋರಣೆ ಶೀಲಾವತಿಯಂಥ ನಾಟಕಗಳು ಹೆಚ್ಚು ಹೆಚ್ಚು ಪ್ರಯೋಗಕ್ಕೆ ಒಳಪಡಬೇಕು. ಆಗಮಾತ್ರ ರಂಗಭೂಮಿಯ ಧೋರಣೆಗಳು ಬದಲಾಗಬಹುದು'' ಎಂಬ ನಿಟ್ಟಿನಲ್ಲಿ ಪದ್ಮಾ ಆಲೋಚಿಸುತ್ತಾರೆ. ರಾಷ್ಟ್ರೀಯ ಭಾವೈಕ್ಯತೆಯ, ಸ್ವಾತಂತ್ರ್ಯ ಧೋರಣೆಯ, ವೀರತ್ವದ, ಸಾಂಸ್ಕೃತಿಕತೆಯನ್ನು ಎತ್ತಿಹಿಡಿಯುವ, ಸಮಾನತೆಯನ್ನು ಬಿಂಬಿಸುವ ಹೀಗೆ ಹಲವಾರು ಚಿಂತನಾರ್ಹ ಕಥಾವಸ್ತುಗಳು ನಾಟಕರೂಪದಲ್ಲಿ ಪ್ರಯೋಗಕ್ಕೆ ಬಂದರೆ

ರಂಗಭೂಮಿ ಚೈತನ್ಯದಿಂದಿರಲು ಸಾಧ್ಯ ಎಂದು ಪಿ. ಪದ್ಮ ಕೂಡ್ಲಿಗಿ ಅಭಿಪ್ರಾಯ ಪಡುತ್ತಾರೆ (ಕ್ಷೇತ್ರಕಾರ್ಯ ಸಂದರ್ಶನ ಕೂಡ್ಲಿಗಿ, ೨೦೦೧ ಅಕ್ಟೋಬರ್ ೩).

ಬಳ್ಳಾರಿಯ ಆಸುಪಾಸಿನ ಪ್ರದೇಶಗಳಲ್ಲಿ ಚಾಮುಂಡೇಶ್ವರಿ ನಾಟಕಕ್ಕೆ ಬರುತ್ತಾಳೆಂದರೆ, ವಯಸ್ಸಿನ ಯುವಕರೆಲ್ಲಾ ನಾಟಕ ನೋಡಲು 'ಕ್ಯೂ' ನಿಲ್ಲುತ್ತಿದ್ದರು. ಸಹ ನಟನೊಂದಿಗೆ ಅಭಿನಯಿಸಿ ಪ್ರೇಕ್ಷಕರ ಮನಗೆದ್ದು ಮೋಡಿಮಾಡಿ, ಹೆಸರು ಮಾಡಿರುವ ಚಾಮುಂಡಿ ಯಳ್ಳಾರ್ತಿ ಇವರು ಸಾಮಾಜಿಕ ನಾಟಕಗಳಲ್ಲಿ ಪಾತ್ರ ಮಾಡುವುದನ್ನು ಬಿಟ್ಟಿದ್ದೇನೆ. ಕಾರಣ ಆ ಸಾಹಿತ್ಯ, ಆ ಭಾಷೆ, ಅಸಂಬದ್ಧ ಸಂದರ್ಭಗಳಿಗೆ ಬೇಸತ್ತು ಈಗ ಸಂಪೂರ್ಣವಾಗಿ ಬಯಲಾಟಗಳನ್ನೇ ನಾನು ಅಭಿನಯಿಸಲು ಹೋಗುತ್ತೇನೆ ಎಂದು ದೃಢ ನಿರ್ಧಾರದಿಂದಲೇ ನುಡಿಯುತ್ತಾರೆ (ಕ್ಷೇತ್ರಕಾರ್ಯ ಸಂದರ್ಶನ, ಬಳ್ಳಾರಿ ೨೦೦೧ ಮೇ). ಆದ್ದರಿಂದ, ನಾಟಕಕಾರರಲ್ಲಿ ಪ್ರಜ್ಞಾವಂತಿಕೆ ಇರಬೇಕು. ಪ್ರಜ್ಞಾವಂತ ಸಾಹಿತಿಗಳು ಹೆಚ್ಚು ಹೆಚ್ಚು ನಾಟಕಗಳನ್ನು ಬರೆದು, ಅವುಗಳನ್ನು ಪ್ರಯೋಗಕ್ಕೆ ಅಳವಡಿಸಬೇಕು. ಸೃಜನ ಶೀಲ ಬರಹಗಾರರು ಈ ನಿಟ್ಟಿನಲ್ಲಿ ಕ್ರಿಯಾಶೀಲವಾದರೆ ಮಾತ್ರ ರಂಗಭೂಮಿಯು ಪ್ರಖರತೆಯು ಸೃಜನದ ಮುಖೇನ ಮೌಲ್ಯಾಧಾರಿತ ನಾಟಕ ಕೃತಿಗಳು ಹೊರಹೊಮ್ಮಲು ಸಾಧ್ಯವಾಗುತ್ತದೆ. ಭಾಷಾ ಪ್ರಖರತೆ ಸಾಹಿತ್ಯ ಸೃಷ್ಟಿಗೆ ಪಾಂಡಿತ್ಯಪೂರ್ಣ ಬರವಣಿಗೆಯಾಗುತ್ತದೆ. ಆದ್ದರಿಂದ ನಾಟಕ ಸಾಹಿತ್ಯ ಸ್ತ್ರೀ ಧೋರಣೆಯ ಮುಖೇನ ಕೃತಿಗಳು ಹೆಚ್ಚು ಹೆಚ್ಚು ಹೊರಬಂದಾಗ ಅಂಥ ಪ್ರಯೋಗಗಳೆಲ್ಲಾ ಗ್ರಾಮೀಣ ರಂಗಭೂಮಿಯಲ್ಲಿ ಪ್ರಯೋಗಿಸಿದಾಗ ಅಲ್ಪ ಮಟ್ಟಿಗೆ ನಾವು ಪ್ರತಿಯೊಬ್ಬ ಪ್ರೇಕ್ಷಕನ ಮನಮುಟ್ಟಲು ಸಾಧ್ಯವಾಗುತ್ತದೆ.

ಜನಪದ, ಪೌರಾಣಿಕ ಹಾಗೂ ಐತಿಹಾಸಿಕ ಕಥಾವಸ್ತುಗಳನ್ನು ಸೃಜನ ಬರಹಗಾರರಾದ ಗಿರೀಶ್ ಕಾರ್ನಾಡ್, ಕುವೆಂಪು, ಚಂದ್ರಶೇಖರ ಕಂಬಾರ, ಯು. ಆರ್. ಅನಂತಮೂರ್ತಿ, ಚಂದ್ರಶೇಖರ ಪಾಟೀಲ್, ಜಯಪ್ರಕಾಶ ಮಾವಿನಕುಳಿ, ಗೊ.ರು ಚನ್ನಬಸಪ್ಪ ಮುಂತಾದ ಲೇಖಕರ ಸಾಹಿತ್ಯವು ಹೆಚ್ಚು ಹೆಚ್ಚು ರಂಗ ಪ್ರಯೋಗಗೊಳಿಸಿದರೆ ಅಂಥ ಪ್ರಯೋಗಗಳಿಂದ ಸಾಮಾನ್ಯರಲ್ಲಿ ನಾವು ಸೂಪ್ತ ಪ್ರಜ್ಞೆಯ ಅರಿವನ್ನು ಮೂಡಿಸಲು ಸಾಧ್ಯವಾಗುತ್ತದೆ. ಇಂಥ ಸಾಹಿತ್ಯದ ಬೆಳವಣಿಗೆಯು ರಂಗಭೂಮಿಯಲ್ಲಿ ನಡೆದಿರುವುದರಿಂದಲೇ 'ಜ್ಞಾನಪೀಠದ ಗರಿ'ಯು ಕನ್ನಡ ರಂಗಭೂಮಿಗೆ ಒದಗಿದೆ.

'ಯಯಾತಿ'ಯಂಥ ಪೌರಾಣಿಕ ನಾಟಕ ಆಧುನಿಕ ಮನಸ್ಸಿಗೆ ಪ್ರೇರಕವಾಗಿ ಸೃಜನದಿಂದ ಕೂಡಿದೆ. ನಾಗಮಂಡಲ, ಸಂಗ್ಯಾ-ಬಾಳ್ಯಾ, ಟಿಪ್ಪುಸುಲ್ತಾನ, ಈಗೀಗ ರಂಗಾಯಣದಿಂದ, ನೀನಾಸಂ ಸಂಸ್ಥೆಯಿಂದ, ಶಿವ ಸಂಚಾರದಿಂದ, ಹಡಗಲಿಯ ರಂಗಭಾರತಿ, ಬಸರಕೋಡಿನ ರಂಗೋದಯ ತಂಡದಿಂದ ಹಲವಾರು ನಾಟಕ ಪ್ರಯೋಗಗಳು ಕರ್ನಾಟಕದಲ್ಲೆಲ್ಲಾ ಪ್ರಯೋಗ ನಡೆಸಿ, ರಂಗಭೂಮಿಯ ಪ್ರಖರತೆಗೆ ಶ್ರಮಿಸುತ್ತಿವೆ.

ಒಂದು ಕಥೆಯ ಆಳ ಹರವನ್ನು ನೋಡುವ ರಂಗ ನಟಿಯರು ಅದರಿಂದ ತಮ್ಮ ಜೀವನಕ್ಕೆ ಉಪಯೋಗಗೊಳ್ಳುವ ಹಾಗೂ ಅದರಿಂದ ಸಮಾಜಕ್ಕೆ ಆಗುವ ಪರಿಣಾಮವನ್ನೆಲ್ಲಾ ಗಮನಿಸಿ ಇಂಥ ಪರಿಸರಗಳಲ್ಲಿ ನಟಿಯರು ಮೌಲ್ಯಾಧಾರಿತ ಸಾಹಿತ್ಯದ ಕಡೆಗೆ ಒಲವು ಮೂಡಿಸಿದರೆ ರಂಗಭೂಮಿ ಎಂದರೆ ಅದ್ದೊಂದು ದೇವಾಲಯ, ಅಥವಾ ಜ್ಞಾನದೇಗುಲ ಎಂಬ ಅರಿವು ಸಾಮಾನ್ಯರಲ್ಲಿ ಮೂಡುತ್ತದೆ. ಆದ್ದರಿಂದ ಸಾಮಾಜಿಕ ನಾಟಕಗಳೂ ಸಮಾಜದಲ್ಲಿ ಆಗುತ್ತಿರುವ ಅನ್ಯಾಯ ಆಕ್ರಮಗಳನ್ನು ಹೊಡೆದೋಡಿಸುವ, ಪ್ರತಿಭಟಿಸುವಂಥ ನಾಟಕಗಳು ನಮ್ಮಲ್ಲಿ ಮೂಡಿ ಬರಬೇಕು ಅಂದಾಗ ಮಾತ್ರ ರಂಗಪರಂಪರೆ ಉನ್ನತ ಮಟ್ಟದಲ್ಲಿರಲು ಸಾಧ್ಯವಾಗುತ್ತದೆ. ಸೃಜನಶೀಲ ಬರವಣಿಗೆಯು ನಾಟಕ ಸಾಹಿತ್ಯದಲ್ಲಿ ಹೆಚ್ಚು ಹೆಚ್ಚು ಕೃತಿಗಳು ಬಂದಾಗ ಅಂಥ ಸಂಕ್ರಮಣದ ಸ್ಥಿತಿಗೆ ರಂಗಭೂಮಿ ಒಳಗೊಂಡಾಗ, ಇಡೀ 'ಸಾಂಸ್ಕೃತಿಕ ವಲಯದ' ಬದಲಾವಣೆಯನ್ನು ನಾವು ನವೀನ ರೀತಿಯಲ್ಲಿ ಕಾಣಲು ಸಾಧ್ಯವಾಗುತ್ತದೆ. ಇಂಥ ಮನ್ವಂತರಗಳು ಉಂಟಾಗಿ ನಮ್ಮ ಸಾಮಾಜಿಕ ಬದುಕಿನಲ್ಲಿ ವಿಶಾಲತೆ, ಶಾಂತಿ, ಸಹನೆ, ವೈಚಾರಿಕ, ನೆಮ್ಮದಿ ಹಾಗೂ ಸೃಜನತೆಯನ್ನು ಕಾಣುವ ದಿನಗಳು ಮುಂದಿನ ದಿನಮಾನಗಳಲ್ಲಿ ದೂರ ಉಳಿದಿಲ್ಲ ಎಂದೇ ಹೇಳಬಹುದು.

ನಾಟಕ ರಚನಾಕಾರ : ಯಾವ ನಾಟಕಕಾರನೇ ಆಗಿರಲಿ ಅವನು ಒಂದು ಸಾಮಾಜಿಕ ಸಂದರ್ಭದಲ್ಲಿ ನಾಟಕವನ್ನು ರಚಿಸಬೇಕು ಆ ರೀತಿ ಬರೆದರೆ ಮಾತ್ರ ನಾಟಕಕಾರ ಸಮಾಜದ ನಾಡಿಮಿಡಿತಕ್ಕೆ ಸ್ಪಂದಿಸುತ್ತಾನೆ ಎಂದೆನ್ನ ಬಹುದು. ಆದ ಕಾರಣ ಒಂದು ಕಲಾಕೃತಿ ಸಾಮಾಜಿಕ ಪ್ರಜ್ಞೆಯನ್ನು ಮೂಲತಃ ಒಳಗೂಂಡಿರಬೇಕು. ಇಲ್ಲದಿದ್ದರೆ ಅದು ಅರ್ಥಹೀನವಾಗುತ್ತದೆ ಎಂಬ ಕಳಕಳಿಯ ಅಡಿಯಲ್ಲೇ ಸಾಮಾಜಿಕ ಅರಿವು ಎಂಬುದರ ಅರ್ಥವ್ಯಾಪ್ತಿಯ ಬಗ್ಗೇನೆ ಸಾಕಷ್ಟು ಸಂದೇಶಗಳು ಇವೆ. ಕೆಲವರು ತಮ್ಮ ಸಾಹಿತ್ಯದಲ್ಲಿ ಇದನ್ನು ಬಳಸಿ ಸ್ವಾತಂತ್ರ್ಯದ ನಂತರ ಅನುಸರಿಸಿದ ಸಮಾಜವಾದದ ರೀತಿಯೇ ಆಗಿ ಒಂದು ತಮಾಷೆಯಾಗಿ ಇದು ಪರಿಣಮಿಸಿದೆ.

ಒಬ್ಬ ನಾಟಕಕಾರ ತಾನು ಸ್ವಯಂಭೂವಿನಂತೆ ನಾಟಕವನ್ನು ಸೃಷ್ಟಿಸಲು ಸಾಧ್ಯವೇ ಇಲ್ಲ. ಕಾರಣ ಬರೆಯಬೇಕೆಂದು ಬಯಸುವ ವ್ಯಕ್ತಿ ಮನಸ್ಸಿನ ಎಲ್ಲ ಕಿಟಕಿಗಳನ್ನು ಎಲ್ಲ ತೆರನಾದ ಬದುಕಿನ ಸೂಕ್ಷ್ಮಸಂವೇದನೆಗಳಿಗೂ ತೆರೆದಿಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ಪ್ರಜ್ಞೆ ಎನ್ನುವುದು ಕಾಲಾತೀತ. ಶೂನ್ಯದಲ್ಲಿಯೂ ಅದು ಅಸ್ಪಷ್ಟವೇ ಸರಿ. ಅವಕಾಶದಲ್ಲಿಯೂ ಅದು ಸೃಷ್ಟಿ ಆಗುವಂಥದ್ದಲ್ಲ. ಒಬ್ಬ ನಾಟಕಕಾರನೂ ಸಮಾಜಜೀವಿಯು ಆದ್ದರಿಂದ ಸಮಾಜದ ಎಲ್ಲ ಆಗು ಹೋಗುಗಳ ನಾಡಿಯನ್ನು ಮೊದಲು ಗಮನಿಸಬೇಕಾದ್ದು ಆತನ ಕರ್ತವ್ಯ ಕೂಡ. ಒಂದು ವೇಳೆ ಅದು ಇಲ್ಲದಿದ್ದರೆ ಅಂಥ ಕಲಾ ಸೃಷ್ಟಿಯ ಔಚಿತ್ಯವೇ ಎದುರಾಗಿ ನಿಲ್ಲು ತ್ತದೆ. ಈ ಸಾಹಿತ್ಯ ಸೃಷ್ಟಿ ಹಿಂದಿನಿಂದಲೂ ಜಟಿಲತೆಯಿಂದ ಕೂಡಿದೆ. ಪಂಪನು ಜನರಿಗಾಗಿಯೇ ಕಾವ್ಯ ಬರೆದರೆ, ರಾಘವಾಂಕ ಜನ ಬದುಕಲೆಂದೇ ಕಾವ್ಯಬರೆದಿದ್ದಾನೆಂದರೆ, ಮಧುರ ಚೆನ್ನರು ಪಂಡಿತರಿಗಾಗಿಯೇ ಕಾವ್ಯ ಬರೆದೆನೆಂದು ಹೇಳಿದ್ದಾರೆ. ಒಬ್ಬೊಬ್ಬ ಕವಿಯ ದೃಷ್ಟಿಕೋನ ಒಂದೊಂದು ತೆರನಾಗಿರುತ್ತದೆ. ಆದ್ದರಿಂದ ಬರ್ನಾಡ್ ಷಾ ಹೇಳಿದಂತೆ "ಕೆಟ್ಟ ಕವಿತೆಯನ್ನು ಬರೆಯಬಹುದು ಆದರೆ ಕೆಟ್ಟನಾಟಕವನ್ನಲ್ಲ".

ಇಂಥ ಜಟಿಲ ಸಮಸ್ಯೆಗಳಿಂದ ನಾಟಕಕಾರ ಇಡೀ ಸಮಾಜವನ್ನೇ ಸೃಷ್ಟಿಸಬೇಕಾಗುತ್ತದೆ. ಒಂದು ನಾಡಿನ ಜನರ ಮನಸ್ಸಿನ ಆಶೋತ್ತರಗಳ ಮುಖವಾಣಿಯಾಗಿ ಆತ ನಿಲ್ಲಬೇಕಾಗುತ್ತದೆ. ನಾಡಿನ ಗುರುವಾಗಿ ನಾಟಕಕಾರ ಕಾಣಬೇಕಾಗುತ್ತದೆ. ಹಾಗಿದ್ದರೆ ಮಾತ್ರ ಕೃತಿಗೆ ಕಾಲದ ಸ್ಪಂದನೆ ಇರುತ್ತದೆ. ಆ ಕಾಲದ ಸ್ಪಂದನೆ ಹೇಗೆ ಬಂದಿದೆ ಎನ್ನುವುದಕ್ಕಿಂತ ಆ ಕಾಲ ಆ ಕೃತಿಯಲ್ಲಿ ಹೇಗೆ ಪ್ರತಿನಿಧಿತವಾಗಿದೆ ಎಂಬುದೇ ಇಲ್ಲಿ ಅತೀ ಮುಖ್ಯವಾದ ಮಾತಾಗುತ್ತದೆ. ಯಾವ ಕೃತಿಯೇ ಆಗಿರಲಿ ಆ ಕಾಲಮಾನದ ಒಟ್ಟು ಜನತೆಯ ಕಳಕಳಿಯ ಕೆಚ್ಚು, ವೀರ ಮನೋಭಾವ, ಸಾಂಸ್ಕೃತಿಕತೆ, ನಿರ್ಲಕ್ಷತೆ, ಉತ್ಸುಕತೆ, ಸ್ವಾಭಿಮಾನದ ಔದಾರ್ಯ, ಸಾಹಸ, ಗಟ್ಟಿತನದ ಪ್ರವೃತ್ತಿಗಳು ತುಂಬಿ ತುಳುಕುತ್ತಿರಬೇಕಾಗುವುದು. ಒಟ್ಟಿನಲ್ಲಿ ಆ ಯುಗದ ಪ್ರತಿನಿಧಿಯಾಗಬೇಕಾಗುತ್ತದೆ.

ಸ್ತ್ರೀಯನ್ನು ಕೇಂದ್ರವಾಗಿಟ್ಟುಕೊಂಡು ಒಬ್ಬ ನಾಟಕಕಾರ ಸಾಮಾಜಿಕ ಪ್ರಜ್ಞೆಯುಳ್ಳವನಾಗಿದ್ದು, ಸಮಾಜದ ಹೆಣ್ಣು, ಹಸಿವೆ, ಅವಿದ್ಯೆ, ಶೋಷಣೆ, ಬಡತನ, ಪುರೋಹಿತಶಾಹಿ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ ತೀವ್ರತೆಯಿಂದ ಭಾವನಾತ್ಮಕವಾಗಿ ಕಳಕಳಿಯಿಂದ ಒಂದು ಆರೋಗ್ಯವಂತ ಜೀವನಕ್ಕಾಗಿ ಹಾತೊರೆಯ ತೊಡಗಿದಾಗ ಅದು ನಾಟಕಕಾರನ ಜೀವನದ ಸಿದ್ಧಾಂತದ ಕುರುಹು ಆಗಿರಲು ಸಾಧ್ಯ. ಇದನ್ನು ರಚನಾಕಾರ ಅತೀ ಎಚ್ಚರಿಕೆಯಿಂದ ತನ್ನ ಕಲಾತ್ಮಕತೆಗೆ ಧಕ್ಕೆ ತರದ ರೀತಿಯಲ್ಲಿ ಬರೆಯಬೇಕು. ಏಕೆಂದರೆ ನಮ್ಮ ಸಮಾಜದ ಸ್ವಭಾವ ತೀರ ವಿಚಿತ್ರವಾದದ್ದೇ. ಇದರಲ್ಲಿ ಪೂರ್ತಿಯಾಗಿ ರಾಕ್ಷಸ ಪ್ರವೃತ್ತಿಗಳು ಮತ್ತು ಹೇಡಿತನಗಳು ಸಂಪೂರ್ಣವಾಗಿ ನೆಲದ ಮಣ್ಣಿನಲ್ಲಿಯೇ ಸೇರಿಕೊಂಡಿವೆ. ಧರ್ಮ, ಭಾಷೆ, ಸಾಹಿತ್ಯ, ಜೀವನ, ರಾಜಕೀಯ ಹೀಗೆ ಹಲವು ಕ್ಷೇತ್ರಗಳಲ್ಲಿ ಬಂಡೆದ್ದು ಬಿರುಗಾಳಿಯ ಅಬ್ಬರವನ್ನು ನುಂಗಿ ಡೇಗುವ ರಕ್ಕಸತನ ಗುಣ ಸಮಾಜಕ್ಕಿದೆ. ನಾಟಕಕಾರನ ಆರ್ತನಾದ ಒಂದು ಸಾರ್ವಕಾಲಿಕ ಸತ್ಯದ ಬುನಾದಿಯ ಮೇಲೆ ಪರಿಶುದ್ಧ ಜೀವನವನ್ನು ಜನ ಬದುಕಬೇಕೆಂಬುದರ ಕಡೆಗೇ ಇರಬೇಕು. ಜನತೆಯ ಜೀವನವು ಎತ್ತರಗೊಳ್ಳಲಿ ಎಂಬ ಸೈದ್ಧಾಂತಿಕ ಕಳಕಳಿಯು ನಾಟಕದಲ್ಲಿ ವ್ಯಕ್ತವಾಗಿರಬೇಕು.

"ನಿಜವಾದ ಮಾತೆಂದರೆ ಯಾವುದೇ ನಾಟಕಕಾರ ಕಾರ್ಯಕ್ಕೆ ತಕ್ಕಂತೆ ಹೊಸ ರೂಪಗಳನ್ನು ಕೈಗೂಡಿಸಿಕೊಂಡು ಕೃತಿ ರಚಿಸಿದಾಗ ಮಾತ್ರ ಅದು ಗಟ್ಟಿಯಾಗಿ ಉಳಿಯುತ್ತದೆ. ಪ್ರತಿಷ್ಠಿತ ವರ್ಗ, ಶೋಷಿತ ವರ್ಗ, ಶ್ರೀಮಂತರು, ದಲಿತರು, ಪುರೋಹಿತರು, ಶೂದ್ರರು ಎಂದು ಇಡೀ ಪ್ರಪಂಚವನ್ನೇ ಎರಡು ಗುಂಪುಗಳನ್ನಾಗಿ ವಿಭಜಿಸಿ ಇವಕ್ಕೆಲ್ಲಾ ಪರಿಹಾರ ನೀಡುವ ಪಂಡಿತ ನಾಟಕಕಾರ ಎಂಬುದು ನನ್ನ ಅರ್ಥವಲ್ಲ. ಆದರೆ ಈ ಪ್ರಜ್ಞೆ ಆತನ ನಾಟಕಗಳಲ್ಲಿ ಸೂಕ್ಷ್ಮಾತಿ ಸೂಕ್ಷ್ಮವಾಗಿ, ಆತನ ಪ್ರತಿಭೆಯ ಅವಿಭಾಜ್ಯ ಅಂಗವಾಗಿರಬೇಕು. ಯಾಕೆಂದರೆ ಇತರೆ ಸಾಹಿತ್ಯಕ ಕೃತಿಯಂತೆ ನಾಟಕ ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ನಾಟಕಕಾರನೂ ಆ ಸಮಾಜದ ಒಂದು ಅನಿವಾರ್ಯ ಅಂಗವಾಗಿರುವುದರಿಂದ ಮತ್ತು ತನ್ನ ನಾಟಕದ ಮೂಲಕ ಸಮಾಜದೊಂದಿಗೆ ವ್ಯವಹರಿಸುವುದರಿಂದ ಆ ಸಮಾಜದ ಬಗ್ಗೆ ಸಮಕಾಲೀನ ಪ್ರಜ್ಞೆಯನ್ನು ಆತ

ಹೊಂದಿರಲೇಬೇಕಾಗುತ್ತದೆ. (ಲೇ: ಜಯಪ್ರಕಾಶ ಮಾವಿನಕುಳಿ, ರಂಗಭೂಮಿ ಮತ್ತು ಸಮಾಜದ ಸ್ಥಿತಿಗತಿ, ಪುಟ, ೨೯)

ಒಟ್ಟಿನಲ್ಲಿ ನಾಟಕಕಾರನು ಅತೀ ಎಚ್ಚರಿಕೆಯಿಂದ ತನ್ನ ಕಲಾವಂತಿಕೆಯನ್ನು ಕಾಪಾಡಿಕೊಂಡು, ಜೀವನಾನುಭವದ ಒಳನೋಟದೊಂದಿಗೆ ಮೆದುಳು ಮತ್ತು ಹೃದಯಗಳು ಒಟ್ಟೊಟ್ಟಿಗೆ ಕೆಲಸವನ್ನು ಮಾಡಬೇಕಾಗುತ್ತದೆ. ಅಂದಾಗ ಮಾತ್ರ ನಾಟಕ ಸಂಪೂರ್ಣವಾಗಿ ಸಾರ್ಥಕತೆಯನ್ನು ಪಡೆದುಕೊಳ್ಳಲು ಸಾಧ್ಯವಾಗಿ ಸ್ತ್ರೀ ನಿಲುವಿನ ಹಂತಗಳು ಮೇಲೇರಿ ಸಮಾನತೆ ಎಲ್ಲೆಲ್ಲೂ ಬಿಂಬಿಸಲು ಸಾಧ್ಯವಾಗುತ್ತದೆ.

ರಂಗ ವ್ಯವಸ್ಥೆ

ಬದಲಾವಣೆಯೆಂಬುದು ಆಯಾಕಾಲದ ಸಾಮಾಜಿಕ ಪರಿಸರವನ್ನು ಅವಲಂಬಿಸಿರುತ್ತದೆ. ಯಾವುದೇ ಸಮಾಜ ತನ್ನ ಸಾಂಪ್ರದಾಯಿಕ ವ್ಯವಸ್ಥೆಯನ್ನು ಯಥಾವತ್ ದಾರಿಯಲ್ಲಿಡಲು ಸಾಧ್ಯವಿಲ್ಲ. ಕಾಲದ ಅನಿವಾರ್ಯತೆಗೆ ಒಗ್ಗಿಕೊಂಡು ಮುಂದುವರೆಯುವ ಈ ಅಂಶಗಳು, ಸಂಪ್ರದಾಯ ಎಂಬುದನ್ನು ಅಥವಾ ಪ್ರಾಚೀನ ಎಂಬುದನ್ನು ಒಂದು ಸಾಂಕೇತಿಕ ಪ್ರತಿಮೆಯಾಗಿ ಮುಂದುವರೆಸಬಹುದು. ಅದೇ ರೀತಿಯಾಗಿ ರಂಗ ವ್ಯವಸ್ಥೆಯು ಹಲವಾರು ರೀತಿಯ ಸ್ಥಿತ್ಯಂತರಗಳಿಗೆ ಒಳಗಾಗಿದೆ. ಸಂಪೂರ್ಣ ಪಾಶ್ಚಾತ್ತೀಕರಿಸುವ ರಂಗ ಶೈಲಿ, ದೇಶೀಯ ನೆಲೆಯನ್ನು, ಪುನರ್ ಮೌಲೀಕರಣ, ಪುನರ್‌ನವೀಕರಣ ಹೊಂದಬೇಕಾಗಿದೆ. ಆ ಮೂಲಕ ಈ ಕೆಳಗಿನ ಐದು ಅಂಶಗಳಲ್ಲಿ ಕೆಲವು ದೇಶೀಯ ಸಾಧ್ಯತೆಗಳನ್ನು ಹೀಗೆ ಕಂಡುಕೊಳ್ಳಬಹುದು.

೧. ಕಲಾವಿದರು (ನಟ-ನಟಿ) : ನಟಿ ಸ್ಪಷ್ಟವಾಗಿ ಮಾತನಾಡಬೇಕಾದರೆ ಆಕೆಗೆ ಸಾಮಾನ್ಯವಾಗಿ ಭಾಷಾಜ್ಞಾನ ಇರಬೇಕು. ವಾಕ್ಯ ಎಲ್ಲಿ ನಿಲ್ಲಿಸಬೇಕು, ಯಾವ ಶಬ್ಧಕ್ಕೆ ಒತ್ತು ಕೊಡಬೇಕು ಎಂಬುದು ಬಹುಮುಖ್ಯ. ಅನೇಕ ವೃತ್ತಿ ನಟಿಯರು ಧ್ವನಿಯಲ್ಲಿ ಪರಿಶುದ್ಧತೆಯನ್ನು ಬೆಳೆಸಿಕೊಳ್ಳುವುದಿಲ್ಲ. ಅನೇಕ ವೃತ್ತಿ ನಟಿಯರು ಕರ್ಕಶವಾಗಿ ಮೂಗಿನಲ್ಲಿ ಮಾತನಾಡುವುದು, ಕೂಗುವುದರಿಂದ ಸಂಭಾಷಣೆಯ ಮಾಧುರ್ಯ ಹೋಗುತ್ತದೆ. ಕೆಲವು ಸಲ ವಾಕ್ಯದ ಮೊದಲ ಅಥವಾ ಕೊನೆಯ ಅಕ್ಷರವನ್ನು ನುಂಗಿ ಬಿಡುವವರೇ ಹೆಚ್ಚು. ಅಲ್ಪಪ್ರಾಣ, ಮಹಾಪ್ರಾಣದ ಬಗ್ಗೆ ನಿಗಾ, ಅಲ್ಪವಿರಾಮ-ಪೂರ್ಣವಿರಾಮ ಬಗ್ಗೆ ಕಾಳಜಿ, ಏಕತಾನತೆ ಆಗುವ ಬಗ್ಗೆ ಎಚ್ಚರ, ಸ್ವರ ವಿಸ್ತಾರ, ಉಚ್ಚ ಸ್ವರದ ಹಿಡಿತ ಇದ್ದಾಗ ನಮ್ಮ ಪ್ರತಿಕ್ರಿಯೆಗಳನ್ನು, ಅನುಭವಗಳನ್ನು ಶರೀರದ ಜೊತೆಗೆ ಶಾರೀರದಿಂದಲೂ ಹೊರ ಹೊಮ್ಮಬಹುದು. ಒಬ್ಬ ನಟಿಯು ಅಭಿವ್ಯಕ್ತಿಸುವ ಭಾವನೆಗಳು ಸ್ಪಷ್ಟವಾಗಿ ನಿರೂಪಿಸಲ್ಪಡದಿದ್ದರೆ ಇಡೀ ನಾಟಕ ವಿಫಲವಾಗಿ ಬಿಡುತ್ತದೆ.

ನಟಿಯರು ಪ್ರೇಮ, ಶೋಕ, ಭಯ, ಹರ್ಷ, ಜಿಗುಪ್ಸೆ, ರೋಷ, ಅಸೂಯೆ, ಮತ್ಸರ ಮುಂತಾದವುಗಳನ್ನು ಎಲ್ಲ ಪ್ರೇಕ್ಷಕರಿಗೆ ಮುಖಭಾವದಿಂದ ತೋರಿಸಲು ಸಾಧ್ಯವಾಗುವುದಿಲ್ಲ. ಇದೆಲ್ಲವನ್ನೂ ನಟಿ ತನ್ನ ಸ್ವರದಲ್ಲಿ

ತಿಳಿಸುವ ಪ್ರತಿಭೆಯನ್ನು ತೋರಬೇಕು. ಏಕೆಂದರೆ ರಂಗಭೂಮಿಯನ್ನು ಪ್ರವೇಶಿಸಿದೊಡನೆ ಆಕೆ ಬೇರೊಬ್ಬ ವ್ಯಕ್ತಿಯೇ ಆಗುತ್ತಾಳೆ. ಆಕೆ ಅನುಭವಿಸುವ ಭಾವನೆಗಳು, ಮಾಡುವ ವಿಚಾರಗಳು, ಆಡುವ ಶಬ್ದಗಳು, ಆಕೆ ವಹಿಸುವ ಪಾತ್ರದ್ದಾದುದರಿಂದ ಅವು ರಂಗಭೂಮಿಯಲ್ಲಿರುವವರೆಗೆ ತನ್ನದೇ ತಾನೇ ಹೇಳುತ್ತೇನೆ ಎಂದು ತಿಳಿದಾಗ ಮಾತ್ರ ಪಾತ್ರಕ್ಕೆ ಹೊಳಪು ಬಂದು ಪಾತ್ರಧಾರಿಯು ಮಿನುಗುತಾರೆ ಯಾಗುತ್ತಾಳೆ.

ಪ್ರತಿಯೊಬ್ಬ ನಟಿಯೂ ನಟಿಸುವಾಗ ತನ್ನ ಪಾತ್ರದಲ್ಲಿ ಮಾನಸಿಕವಾಗಿಯೂ, ಬೌದ್ಧಿಕವಾಗಿಯೂ ತನ್ನನ್ನು ಒಳಗು ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ಮಾಡಿಕೊಳ್ಳುವಾಗ ಅಭಿನಯಕ್ಕಾಗಿ ಒಂದು ಕಡೆ ಸೃಜನಶೀಲತೆಗಾಗಿ ಸ್ವಾತಂತ್ರ್ಯವನ್ನು, ನಾಟಕದ ಕೇಂದ್ರ ಆಶಯವನ್ನು ಮೀರಬಾರದುದಕ್ಕಾಗಿ ಹಿಡಿತವನ್ನು ಹೊಂದಿರಬೇಕಾಗುತ್ತದೆ. ಖ್ಯಾತ ಬರಹಗಾರ ಎಲಿಯಟ್ ಹೇಳಿದ ಪ್ರಕಾರ ತನ್ನ ವಿಭಿನ್ನತೆಯಿಂದ ನಟ ಕೌಶಲ್ಯದಿಂದ ವರ್ತಿಸಿದರೂ ನಾಟಕದ ಕೇಂದ್ರ ಆಶಯಕ್ಕೆ ವಿಭಿನ್ನವಾಗಬಾರದು.

ಇದರ ಅಗತ್ಯೆ ಏಕೆ ಎಂದರೆ ನಾಟಕ ಒಂದು ಪರಿಪೂರ್ಣ ಕಲೆ ಆಗಿರುವುದರಿಂದ, ಇಲ್ಲದಿದ್ದರೆ ಪ್ರತಿಯೊಬ್ಬ ನಟಿಯ ನಟನೆಯ ಮೂಲ ಸಂಬಂಧವನ್ನು ಕಡಿದು ಹೋಗಿ ನಾಟಕ ವೈರುಧ್ಯದ ಕಲಸು ಮೇಲೋಗರಾಗಿ ಬಿಡುತ್ತದೆ. ಕಾರಣ ನಾಟಕದಲ್ಲಿ ನಟಿ ಕಲೆಗೆ ಬದ್ಧವಾಗಬೇಕು ಹೊರತು ತನ್ನ ಜೀವನದ ಒಟ್ಟು ಅನುಭವಕ್ಕಲ್ಲ. ಈ ರೀತಿಯಾಗಿ ನಾಟಕದ ಕ್ರಿಯೆಗೂ ಮತ್ತು ಸಾಹಿತ್ಯ ಕೃತಿಯ ಕ್ರಿಯೆಗೂ ಇರುವ ಮೂಲ ವ್ಯತ್ಯಾಸ ಈ ರೀತಿ ಯದು.

ಬಳ್ಳಾರಿ ಜಿಲ್ಲೆಯಲ್ಲಿ ಇಂಥ ಒಟ್ಟು ಅನುಭವಗಳನ್ನು ಒಳಗೊಂಡು ಕ್ರಿಯಾಶೀಲರಾಗಿರುವ ಹಲವಾರು ನಟಿಯರು ಆಗಿಹೋಗಿದ್ದಾರೆ. ಹಾಗೂ ಇನ್ನೂ ರಂಗಭೂಮಿಯಲ್ಲಿ ಮಿನುಗುತಾರೆಗಳಾಗಿ ಮೆರೆಯುತ್ತಿದ್ದಾರೆ. ಕೆ.ವರಲಕ್ಷ್ಮಿ, ಸುಜಾತಮ್ಮ, ಪಾರ್ವತಮ್ಮ, ಕೊಟ್ಟೂರು ಎಸ್.ಕಮಲ, ನಾಗರತ್ನಮ್ಮ ಹೊಸಮನಿ, ಚಾಮುಂಡೇಶ್ವರಿ, ಸುಭದ್ರಮ್ಮ ಮನ್ಸೂರು, ಪಿ.ಪದ್ಮ ಕೂಡ್ಲಿಗಿ, ಕೆ.ನಾಗರತ್ನಮ್ಮ, ಸೋಗಿರತ್ನ, ಜೆ.ಮುಂಜುಳಾ ಸೋಗಿ, ಎನ್.ಯಶೋಧ, ಮುಂತಾದ ನಟಿಯರೆಲ್ಲ ನಟಿಸುವಾಗ ಪಾತ್ರದಲ್ಲಿ ಲೀನವಾಗಿ ತಮ್ಮ ಮಾತುಗಾರಿಕೆ ಎಲ್ಲವನ್ನು ಮೇಳೈಸಿಕೊಂಡು ನಟನಾ ವೃತ್ತಿಯಲ್ಲಿ ಮುನ್ನಡೆಯುತ್ತಿದ್ದಾರೆ.

ರಂಗಭೂಮಿಯಲ್ಲಿ ಪ್ರೇಕ್ಷಕ ಮತ್ತು ನಟಿಯರಿಗೆ ಮಾನಸಿಕ ಬಾಂಧವ್ಯವಿರುವುದರಿಂದ ನಟಿ ಅಭಿನಯಿಸು ವಾಗ ಪ್ರೇಕ್ಷಕರಿಂದ ಆಕೆ ಒಂದಿಷ್ಟು ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿಯೇ ಬಯಸುತ್ತಾಳೆ. ಇದು ಒಂದು ರೀತಿಯ ಕೊಡು-ಕೊಳ್ಳುವಿಕೆಯ ಕ್ರಿಯೆ. ಪಾತ್ರಧಾರಿ ನಗಿಸುವಾಗ ನಗಬೇಕೆಂತಲೋ, ದುಃಖ ತೋರುತ್ತಿರುವಾಗ ಮೌನದಿಂದ ಇರಬೇಕೆಂತಲೋ, ಹರ್ಷಗೊಂಡಾಗ ಚಪ್ಪಾಳೆ ತಟ್ಟಬೇಕೆಂತಲೋ ಆಕೆ ನಿರೀಕ್ಷಿಸಿ ಅಂಥ ಪ್ರತಿಕ್ರಿಯೆ ಕಾಣದಾದಾಗ ನಟನೆಯ ಮೇಲೆ ಎಲ್ಲೋ ಒಂದು ಕಡೆ ಪರಿಣಾಮವೂ ಬೀರುತ್ತದೆ. ಇದು ಕೆಲವೊಮ್ಮೆ ದುಷ್ಪರಿಣಾಮವೂ ಉಂಟಾಗಬಹುದು. ಈ ಕಾರಣದಿಂದಲೇ ಹಲವು ಬಾರಿ ವಿಪರೀತ ಅಭಿನಯಕ್ಕೆ ಕಾರಣ

ವಾಗಬಹುದು. ಆದ್ದರಿಂದ ನಟ-ಪ್ರೇಕ್ಷಕರ ನಡುವೆ ನಿರಂತರವಾಗಿ ಆರೋಗ್ಯಕರ ಬಾಂಧವ್ಯ ಬೆಳೆಯಲು ಸಾಧ್ಯವಾಗುತ್ತದೆ.

ಒಬ್ಬ ನಟಿಯು ಹಲವಾರು ಪಾತ್ರಗಳಲ್ಲಿ ಅಭಿನಯಿಸುತ್ತಿರುತ್ತಾಳೆ. ಹಾಸ್ಯ ಪಾತ್ರಧಾರಿಯಾಗಿದ್ದರೆ, ಯಾವಾಗಲೂ ನಗುಮೊಗದಿಂದ ಇರುವುದು ಎಲ್ಲರನ್ನು ನಗಿಸಿ ತಮಾಷೆಯಾಗಿ ಮಾತನಾಡುವುದು, ಸಹ ನಟನಿಗೆ ವ್ಯಂಗ್ಯವಾಗಿ, ಹಾಸ್ಯಮಯವಾಗಿ ಯಾರ ಮನಸ್ಸಿಗೂ ನೋವಾಗದ ಹಾಗೆ ಹಾಸ್ಯ ತೇಲಿ ಬರುವಂತೆ ನಟಿಸುವುದು ಹಾಸ್ಯ ನಟಿಯ ಕರ್ತವ್ಯವಾಗಿದೆ. ರಂಗದಲ್ಲಿ ಪಾತ್ರಕ್ಕೆ ತಕ್ಕಂತೆ ನಟಿಯು ಗುಣ ಸ್ವಭಾವವನ್ನು ಅಭಿವ್ಯಕ್ತಿಸಬೇಕಾಗುತ್ತದೆ.

ಸಾಧ್ವಿ ಪಾತ್ರದಲ್ಲಿ ನಟಿಯು ಗಂಭೀರತೆಯನ್ನು ಹಾಗೂ ದಿಟ್ಟತನವನ್ನು ಒಮ್ಮೊಮ್ಮೆ ಪ್ರದರ್ಶಿಸ ಬೇಕಾಗುತ್ತದೆ. ಏನೇ ಕಷ್ಟ ಬಂದರೂ ಅದನ್ನು ನಿಭಾಯಿಸಬಲ್ಲಳೆಂಬಂತೆ ಕಷ್ಟಗಳ ಸರಮಾಲೆಯನ್ನು ಎದುರಿಸು ವಂಥ ತಾಕತ್ತು ಆ ನಟಿಯಲ್ಲಿರುವಂತೆ ಕಷ್ಟ ಸಹಿಷ್ಣುಳಾಗಿ ಕೊನೆಗೆ ಜಯ ಲಭಿಸಿದಾಗ ಆಗುವ ಸಂತಸ ಕ್ಷಮೆಯಾಧರಿತ್ರಿಯಾಗಿ, ತ್ಯಾಗಿಯಾಗಿ, ಸಹನೆಯುಳ್ಳವಳಾಗಿ ಹೀಗೆ ಎಲ್ಲದರಲ್ಲೂ ಸಾಧ್ವಿಯಾಗಿ ಕೊನೆಗೆ ನಾಯಕಿಯಾಗುವುದು ಈ ಎಲ್ಲ ಗುಣಗಳನ್ನು ಮೇಳೈಸಿಕೊಳ್ಳುವ ಪಾತ್ರಧಾರಿಯಾಗಿ ನಟಿಯು ತನ್ನ ನಟನೆಯ ಕೌಶಲ್ಯದಿಂದ ಮೆರೆಯಬೇಕು.

ಖಳನಾಯಕಿಯಾದವಳು ನೋಡಲು ಸ್ವಲ್ಪ ಅಸಹ್ಯವಾಗಿ (ಖಳನಾಯಕಿ ಮೇಕಪ್) ಮಾಡಿಕೊಂಡು, ಆಕೆ ಬಂದಾಗ ಸಂಗೀತವು ಹೆದರಿಸುವ, ಜೋರಾಗಿ ಕೇಳುವ ಧ್ವನಿಯನ್ನು ವಾದಕರು ನುಡಿಸುವುದು ಸಂಗೀತ ವಾದನದಿಂದಲೇ ಆಕೆ ಖಳನಾಯಕಿ ಎಂದು ಪ್ರೇಕ್ಷಕರಿಗೆ ಅನಿಸಬೇಕು. ಆ ರೀತಿಯಲ್ಲಿ ತನ್ನ ಸೊಕ್ಕು, ದರ್ಪ, ಅಹಂಕಾರ, ಹಾವ, ಭಾವ ಈ ಎಲ್ಲಾ ಗುಣಗಳನ್ನು ಬಿಂಬಿಸಿ ನಟಿಯು ತನ್ನ ಪಾತ್ರದಿಂದ ಮೆರೆಯು ತ್ತಾಳೆ. ಸೇವಕಿ, ಸಹನಟಿ, ನೃತ್ಯಗಾರ್ತಿ ನಟಿಯರು ಆಯಾ ಸನ್ನಿವೇಶಕ್ಕೆ ತಕ್ಕಂತೆ ಅಭಿನಯಿಸುವುದು ಈ ಕಾರಣದಿಂದಲೇ ಪೋಲ್ಯಾಂಡಿನ ಗ್ರೊಟೋವಸ್ಕಿಯವರು ಹೇಳಿದ್ದು- ''ರಂಗಭೂಮಿಯ ಶಕ್ತಿ ಇರುವುದು ನಟಿ ಮತ್ತು ಪ್ರೇಕ್ಷಕ ಒಂದೇ ಗೃಹದಲ್ಲಿ ಜೀವಂತಿಕೆಯಿಂದಕೂಡಿದಾಗ'' ಮಾತ್ರ.

ನಟಿಯರು ಪಾತ್ರದ ಎಲ್ಲ ಅಂಶಗಳನ್ನೂ ಒಟ್ಟು ರೂಢಿಸಿಕೊಂಡು ಸನ್ನಿವೇಶಕ್ಕೆ ಒಳಪಟ್ಟು, ಪಾತ್ರಧಾರಿ ಯಂತೆ ವರ್ತಿಸಿ ಮುನ್ನಡೆದು, ನಟಿಯು ಪಾತ್ರಕ್ಕೆ ಜೀವಂತಿಕೆಯನ್ನು ತುಂಬಿ ರಂಗಭೂಮಿಯಲ್ಲಿ ಉಜ್ವಲ ಪರಂಪರೆಯ ಹೊಸ ಹುಟ್ಟನ್ನು ನಟಿಯರೇ ಬೆಳಕಿಗೆ ತರಬೇಕಾಗುತ್ತದೆ.

೨. ರಂಗಸಜ್ಜಿಕೆ : ನಮ್ಮ ಪೂರ್ವರು ಆಹಾರ್ಯದ ಅಂಗವಾಗಿ ಬರುವ ವೇಷಭೂಷಣ ಹಾಗೂ ರಂಗಸಜ್ಜಿಕೆಗೆ ಅದರ ಇತಿಮಿತಿಯನ್ನರಿತು ಕೊಟ್ಟ ಪ್ರಾಶಸ್ತ್ಯ ಗಮನಾರ್ಹವಾದದ್ದು. ಮೂಡಲಪಾಯ-ಪಡುವಲ ಪಾಯದಂಥ ಬಯಲಾಟಗಳಲ್ಲಿ ವೇಷಭೂಷಣಕ್ಕೆ ಮಿಗಿಲಾದ ಅವಕಾಶವಿದ್ದರೂ ರಂಗಸಜ್ಜಿಕೆಗೆ, ಅದರ ಆಕರ -ಪರಿಕರಗಳಿಗೆ ನಮ್ಮ ಜನಪದ ರಂಗಭೂಮಿ ಹೆಚ್ಚಿನ ಮಹತ್ವವನ್ನೇನೂ ಕೊಟ್ಟಿರಲಿಲ್ಲ. ಅದರಲ್ಲಿ ಸಣ್ಣಾಟಗಳಂತೂ ಈ ರಂಗಸಜ್ಜಿಕೆಯ ಜೊತೆಗೆ ವೇಷಭೂಷಣಕ್ಕೂ ಕೂಡ ಹೆಚ್ಚಿನ ಗಮನ ಕೊಡದೆಯೂ ನೃತ್ಯ, ಸಂಗೀತದ ಜೊತೆಗೆ ವಾಚಿಕಾಭಿನಯವನ್ನು ಮುಂದೆ ಮಾಡಿ ಒಂದು ನಾಟಕ ಮಾಡಬೇಕಾದ ಪರಿಣಾಮವನ್ನು ಉತ್ಕೃಷ್ಟವಾಗಿ ಬೀರುತ್ತಿದ್ದುದು ಗಮನಿಸಬೇಕಾದ ಅಂಶವಾಗಿದೆ. ಒಟ್ಟಿನಲ್ಲಿ ರಂಗಸಜ್ಜಿಕೆ, ಅದರ ಪರಿಕರಗಳು ಜನಪದ ರಂಗಭೂಮಿಯಲ್ಲಿ ತೀರ ಉಪೇಕ್ಷಣೀಯ ಅಂಶಗಳೆಂಬುದು ಈ ಸಂದರ್ಭದಲ್ಲಿ ಗಮನಾರ್ಹವಾದುದು (ಲೇ: ಬಸವರಾಜು ಜಗಜಂಪಿ, ಗರುಡ ಸದಾಶಿವರಾಯರು, ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ಪುಟ. ೧೬೧).

ಒಂದು ಕಾಲದಲ್ಲಿ ರಂಗಸಜ್ಜಿಕೆ ಎಂದರೆ 'ನಾಟಕ ಪ್ರದರ್ಶನ'ವೇ ಆಗಿತ್ತು. ಪಾರ್ಸಿ ಹಾಗೂ ಮರಾಠಿ ಮಂಡಳಿಗಳ ಪ್ರೇರಣೆ ಹಾಗೂ ಪ್ರಭಾವಗಳಿಗೊಳಗಾದ ನಮ್ಮ ವೃತ್ತಿ ಮಂಡಳಿಗಳು ರಂಗಸಜ್ಜಿಕೆಯ ನಾಟಕದ ವಸ್ತು, ಘಟನೆ. ಸನ್ನಿವೇಶಗಳು ಹೆಚ್ಚಿನ ವಾಸ್ತವವನ್ನು ಬಿಂಬಿಸಲು ಬಳಸಿಕೊಳ್ಳುವ ಬದಲು ಆಕರ್ಷಣೆಯ ಅಂಶವನ್ನಾಗಿ ಬಳಸಿಕೊಂಡುದೇ ಹೆಚ್ಚು. 'ಶನಿ ಪ್ರಭಾವ'ಕ್ಕೆ ತಿರುಗುಮಂಚವನ್ನು ಅಳವಡಿಸಿದ ಶಿರಹಟ್ಟಿ ವೆಂಕೋಬರಾಯರು ಹಾಗೂ ದಶಾವತಾರ, ಕುರುಕ್ಷೇತ್ರ, ನಾಟಕಗಳಿಗೆ ಭಾರೀ ಉಪಕರಣಗಳನ್ನು ಮಾಡಿಸಿದ ಗುಬ್ಬಿ ವೀರಣ್ಣನವರು ಅನುಸರಿಸಿದ ರಂಗತಂತ್ರಗಳು ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಯಶಸ್ವಿಯಾದವೆಂದೇ ಹೇಳಬೇಕು. ಆದರೆ ರಂಗಸಜ್ಜಿಕೆಯಲ್ಲಿಯ ವೈಭವ, ಅಟ್ಟಹಾಸ, ಬದಲಾವಣೆ, ಸುಧಾರಣೆ ಹಾಗೂ ಹೊಸ ಅಳವಡಿಸುವಿಕೆಗಳು ಕ್ರಮೇಣ ಜನರೆದುರು ಪ್ರದರ್ಶನಗೊಳ್ಳುತ್ತಾ ಹೋದಂತೆ ಅವು ಹಳತಾಗುತ್ತಾ ಹೋಗುವುದು ಸಹಜ.

ಶಿವಮೂರ್ತಿಸ್ವಾಮಿ ಕಣಬರಗಿಮಠರು ತಾವು ಬಂಡವಾಳ ಶಾಹಿಗಳಾದರೂ ಹಣವನ್ನು ಹೊಳೆಯಾಗಿ ಹರಿಸಿ ವೃತ್ತಿಕಂಪನಿಯನ್ನು ಒಳ್ಳೆಯ ವೈಭವದಿಂದ ನಡೆಸಿದರೂ ಧನಸಂಪಾದನೆಯೊಂದೇ ಅವರ ಉದ್ದೇಶವಾಗಿರಲಿಲ್ಲ. ಮರಾಠಿ ಮಂಡಳಿಗಳು ಪ್ರದರ್ಶಿಸುತ್ತಿದ್ದ ನಾಟಕಗಳ ಮೋಡಿಗೊಳಗಾಗಿದ್ದ ಕನ್ನಡಿಗರ ಲಕ್ಷ್ಯವನ್ನು, ಕನ್ನಡ ಮಂಡಳಿಗಳು ಪ್ರದರ್ಶಿಸುತ್ತಿದ್ದ ಕನ್ನಡ ನಾಟಕಗಳತ್ತ ಸೆಳೆಯುವುದು ಅವರ ಮುಖ್ಯ ಉದ್ದೇಶವಾಗಿತ್ತು ಎಂಬುದು ಬಹುಜನ ವೃತ್ತಿರಂಗಭೂಮಿಯ ಚರಿತ್ರೆಕಾರರ ಅಭಿಪ್ರಾಯವಾಗಿರುವುದು ಗಮನಾರ್ಹ ಸಂಗತಿಯಾಗಿದೆ.

ನಾಟಕಕ್ಕೆ ಸಂಬಂಧಪಟ್ಟಂತೆ ರಂಗಸಜ್ಜಿಕೆ ಅರ್ಥಪೂರ್ಣವಾಗಿರಬೇಕು. ನಾಟಕಕ್ಕೆ ಶಾಂತತೆಯಿಂದ ಕೂಡಿದ ಸೂಕ್ತವಾದ ಪರಿಸರವನ್ನು ಕಲ್ಪಿಸಬೇಕು. ಅಂದರೆ ಹಾಸ್ಯ ಹಾಗೂ ಗಂಭೀರ ನಾಟಕಗಳಿಗೆ ಮತ್ತು ಮೇಳಗಾನದ

ಅಪೇರಾ ಮಾದರಿಯ ನಾಟಕಗಳಿಗೆ ತಕ್ಕ ಪರಿಸರವನ್ನು ದೃಶ್ಯವು ಕಲ್ಪಿಸಬೇಕು. ಉದಾಹರಣೆಗೆ ಒಂದು ಕೊಠಡಿಯ ಸಜ್ಜು ಬಡ, ಮಧ್ಯಮ, ಶ್ರೀಮಂತರ ಅಂತಸ್ತಿಗೆ ತಕ್ಕ ಹಾಗಿರಬೇಕು. ರಂಗದ ಬೆಳಕು, ಸೀನರಿಗಳ ಬಣ್ಣ, ಪಾತ್ರಗಳ ಪ್ರಸಾಧನ, ಉಡುಗೆ-ತೊಡುಗೆ ಇವೆಲ್ಲವೂ ಪರಸ್ಪರ ಹೊಂದಿಕೊಳ್ಳುವಂತೆ ನಿರ್ದೇಶಕ ಹಾಗೂ ರಂಗತಜ್ಞರು ಸಮಾಲೋಚಿಸಿ ರಂಗವನ್ನು ಅಣಿಗೊಳಿಸಿದರೆ ರಂಗಸಜ್ಜಿಕೆಯಿಂದ ನಾಟಕ ಪ್ರಯೋಗಕ್ಕೆ ಅನುಕೂಲವಾಗುತ್ತದೆ.

ನಟ-ನಟಿಯರಿಗೆ ಹೊಸ ರೀತಿಯ ಪರಿಕರಗಳೇ ಈಗೀಗ ಅದು ಬೀದಿ ನಾಟಕಗಳಿಂದ ಹೆಚ್ಚು ಪ್ರಚಲಿತ ವಾಗಿವೆ. ಬೀದಿನಾಟಕಗಳಲ್ಲಿ ರಂಗಪರಿಕರಗಳು ಯಾವುವೂ ಇರುವುದಿಲ್ಲ. ಅಗತ್ಯ ಬಿದ್ದರೆ ನಟಿಯರು ದೈಹಿಕಚಲನೆಯಿಂದಲೇ ಸಾಂಕೇತಿಕವಾಗಿ ವಸ್ತುಗಳನ್ನು ಅಭಿವ್ಯಕ್ತಿಸುತ್ತಾರೆ. ಪೀಠೋಪಕರಣಗಳಾಗಿ ಸಹ ನಟರನ್ನು ಬಳಸಿಕೊಳ್ಳುತ್ತಾರೆ. ಬೆಳಕು ಕೂಡ ಹಗಲಿನಲ್ಲಿ ಸೂರ್ಯ, ರಾತ್ರಿ ಬೀದಿಲೈಟು, ಮುನಿಸಿಪಾಲಿಟಿ ಲಾಂದ್ರ, ಎಲೆಕ್ಟ್ರಿಕ್ ದೀಪದ ಬೆಳಕು. ನಟರು ಸಾಮಾನ್ಯ ಉಡುಪಿನಲ್ಲಿಯೇ ಅಭಿನಯಿಸುತ್ತಾರೆ. ಇಲ್ಲಿ ಪ್ರಸಾಧನದ ಅಗತ್ಯವೂ ಇಲ್ಲ.

ರಂಗಸಜ್ಜಿಕೆ ನಾಟಕ ತಂಡದ ಆರ್ಥಿಕ ಪರಿಸ್ಥಿತಿ ಹಾಗೂ ನಾಟಕಗಳ ಅಗತ್ಯಗಳಿಗೆ ಸಂಬಂಧಪಟ್ಟಂತೆ ಸರಳ ಸಾಧನಗಳನ್ನು ಉಪಯೋಗಿಸುತ್ತಿದ್ದಾರೆ. ರಂಗಕ್ಕೆ ಹೆಚ್ಚು ಆಡಂಬರವಿಲ್ಲದೆ ಈಗೀಗ ಪರಿಕರಗಳನ್ನು ಹಿತಮಿತವಾಗಿ ಬಳಸುತ್ತಿದ್ದಾರೆ. ಸೀನರಿಗಳನ್ನು ಅತ್ಯಂತ ಸುಲಭರೀತಿಯಲ್ಲಿ ಜೋಡಿಸಿಕೊಳ್ಳುವುದನ್ನು ಕಲಿತಿದ್ದಾರೆ. ಕೆಲವು ವಸ್ತುಗಳನ್ನು ಸಾಂಕೇತಿಕವಾಗಿ ನೀಲಿ ಪರದೆಯ ಹಿನ್ನಲೆಯಲ್ಲಿ ಚಿತ್ರಿತ ಆಕಾರ ಫಲಕಗಳಲ್ಲಿ ಕಾಣಿಸುವ ರಂಗಸಜ್ಜಿಕೆಯ ಕ್ರಮ ಬಳಕೆಯಲ್ಲಿದೆ. ಅಭಿನಯ ಕಾಲದಲ್ಲಿ ಬಾಗಿಲು, ಕುರ್ಚಿ ಮೊದಲಾದ ಪೀಠೋಪಕರಣಗಳನ್ನು ದೇಹ ಚಲನೆಯಿಂದ ಪಾತ್ರಗಳೇ ಸಾಂಕೇತಿಕವಾಗಿ ಸೃಷ್ಟಿಸಿಕೊಂಡು, ಪ್ರೇಕ್ಷಕರಲ್ಲಿ ಅವುಗಳಿಗೆ ತಕ್ಕ ಪ್ರತಿಕ್ರಿಯೆಯಾಗುವಂತೆ ವಿಲಾಸಿಗಳು ರಂಗತಂತ್ರಗಳನ್ನು ಪ್ರಯೋಗಿಸುತ್ತಿದ್ದಾರೆ.

ನೀನಾಸಂ ತಂಡದ ನಟಿಯರು, ಸಾಣೇಹಳ್ಳಿ ಶಿವಸಂಚಾರದ ನಟಿಯರು ರಂಗಾಯಣದ ರಂಗನಟಿಯರೆಲ್ಲಾ ಶಿಸ್ತುಬದ್ಧ ಸಜ್ಜಿಕೆ ಪರಿಕರಗಳಲ್ಲಿ ಹೆಚ್ಚು ಹೆಚ್ಚು ಪ್ರಯೋಗಾತ್ಮಕ ರೀತಿಯಲ್ಲಿ ರಂಗಪರಿಕರಗಳೊಂದಿಗೆ ನಾಟಕಗಳನ್ನು ಪ್ರಯೋಗಿಸುವಲ್ಲಿ ನಿಷ್ಣಾತರಾಗಿದ್ದಾರೆ. ವೃತ್ತಿ ನಟಿಯರು ಮಾತ್ರ ಇವುಗಳಿಗೆ ಹೆಚ್ಚು ಪ್ರಾಧಾನ್ಯತೆ ಯನ್ನು ನೀಡದೇ ತಮ್ಮ ಪಾತ್ರದ ಅಭಿವ್ಯಕ್ತಿಗಳ ಬಗ್ಗೆಯೇ ಕಾಳಜಿಯಿಂದ ಪಾತ್ರಗಳನ್ನು ನಿರ್ವಹಿಸುತ್ತಾರೆ. ಕಾರಣ ಅವರು ಹೆಚ್ಚಾಗಿ ಅಭಿನಯಿಸುವುದು ಗ್ರಾಮೀಣ ರಂಗಭೂಮಿಗಳಲ್ಲಿ ಮಾತ್ರ. ಹವ್ಯಾಸಿ ಕಲಾವಿದರೆ ರಂಗಸಜ್ಜಿಕೆಯನ್ನು ತಮ್ಮ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಬಳಸಿಕೊಂಡು ಪ್ರಯೋಗಿಸುತ್ತಾರೆ.

ಪ್ರೇಕ್ಷಕವರ್ಗದಲ್ಲಿ ಹಲವಾರು ಅಭಿಪ್ರಾಯಗಳಿರುವಂತೆ ರಂಗಸಜ್ಜಿಕೆಯನ್ನೇ ಗಮನದಲ್ಲಿಟ್ಟುಕೊಂಡು ನಾಟಕ ನೋಡಲು ಹೋಗುವ ಪ್ರೇಕ್ಷಕವರ್ಗವೊಂದು ಆಗ ಇತ್ತು. ಆದರೆ ಕೆಲವು ಶ್ರೀಮಂತ ಕಂಪನಿಗಳು

ವೈಭವಯುತ ರಂಗಸಜ್ಜಿಕೆ ಮತ್ತು ರಂಗಮಂದಿರದಿಂದ ಸಾಧಿಸುವುದನ್ನು ಅದಕ್ಕಿಂತಲೂ ಹೆಚ್ಚಾಗಿ ಒಬ್ಬ ಲೇಖಕರಾಗಿ ನಾಟಕದ ವಸ್ತು, ಸಾಹಿತ್ಯ ಶಕ್ತಿ ಹಾಗೂ ನಟರ-ನಟಿಯರ ಅಭಿನಯದ ಮೂಲಕ ಸಾಧಿಸಿ ತೋರಿಸುವುದೇ ಕೆಲವು ಕಂಪನಿ ಒಡೆಯರ ಅಭಿಪ್ರಾಯವಾಗಿದ್ದು, ಗರುಡ ಸದಾಶಿವರಾಯರ ಅಭಿಪ್ರಾಯವೂ ಅದೇ ಆಗಿತ್ತು.

ಇಂದಿನ ಆಧುನಿಕ ರಂಗಭೂಮಿಯು ಅನೇಕ ರೀತಿಯ ಹೊಸ ಪ್ರಯೋಗಗಳ ಆವಿಷ್ಕಾರವಾಗುತ್ತಾ ನಡೆದಿದೆ. ಹಿಂದೆ ಪ್ರೇಕ್ಷಕನಿಗೆ ಎಲ್ಲವನ್ನು ಪ್ರದರ್ಶಿಸಲೇ ಬೇಕಾಗಿತ್ತು. ಆದರೆ ಇಂದಿನ ಪ್ರೇಕ್ಷಕನಿಗೆ ಕಲ್ಪನೆಗೆ ಬರುವಂತೆ ಇಂದಿನ ಎಷ್ಟೋ ನವೀನ ರೀತಿಯ ನಾಟಕಗಳು ನಡೆಯುತ್ತಿವೆ. ಉದಾ: ನೀನಾಸಂ ತಂಡದ ಬೀದಿನಾಟಕಗಳು, ಶಿವಸಂಚಾರ ಸಾಣೇಹಳ್ಳಿ ತಂಡದ ನಾಟಕಗಳು, ಮೈಸೂರಿನ ರಂಗಾಯಣದ ನಾಟಕಗಳು, ಇತ್ತೀಚಿನ ದಿನಗಳಲ್ಲಿ ಪಾಶ್ಚತ್ಯರಂಗಭೂಮಿಗೆ ಒಳಗಾಗಿ ಅಲ್ಲಿನ ಪ್ರಭಾವಗಳೇ ಇಂದು ಇಲ್ಲಿನ ಪ್ರಯೋಗಗಳಾಗಿವೆ.

ನಟಿಯರನ್ನು ಕೇಂದ್ರವಾಗಿಟ್ಟುಕೊಂಡು ರಂಗ ಪರಿಕರಗಳನ್ನು ಆಧುನಿಕ ರಂಗಭೂಮಿಯು ಸಜ್ಜುಗೊಳಿಸಬೇಕಾಗಿದೆ. ಯಾವುದೂ ಅತೀ ಎನ್ನದಂತೆಯು ಹಾಗೂ ಯಾವುದೂ ಇಲ್ಲ ಎಂಬಂತೆಯೂ, ಅನಿಸಿಕೊಳ್ಳದೇ ಆ ರೀತಿಯಲ್ಲಿ ರಂಗಸಜ್ಜಿಕೆಯನ್ನು ಅಣಿಗೊಳಿಸಬೇಕಾಗಿದೆ. ಹಿಂದೆ ಕೆಲವು ವೃತ್ತಿರಂಗಭೂಮಿ ಯನ್ನು ಬಹು ಶ್ರೀಮಂತಿಕೆಯಿಂದ ಮೆರೆಯಿಸಿದ್ದವು. ಆದರೆ ಇಂದು ವೃತ್ತಿರಂಗಭೂಮಿ ಕಂಪನಿಗಳು ಕಡಿಮೆ ಇದ್ದು, ಗ್ರಾಮೀಣ ರಂಗಭೂಮಿಗೆ ಬರುವ ವೃತ್ತಿನಟಿಯರು ರಂಗಸಜ್ಜಿಕೆಯೊಂದಿಗೆ ಬಹು ವೈವಿಧ್ಯವಾಗಿ ರಂಗಭೂಮಿ ಬೆಳವಣಿಗೆಯಾಗಬೇಕೆಂದು ಹಲವಾರು ಹಿರಿಯ ರಂಗನಟಿಯರು ಹಾಗೂ ಇಂದಿನ ರಂಗನಟಿ ಯರು ಅಭಿಪ್ರಾಯ ಪಡುತ್ತಾರೆ.

ಬಯಲಾಟದ ಪ್ರಭಾವದಿಂದ ಐತಿಹಾಸಿಕ, ಪೌರಾಣಿಕ, ನಾಟಕಗಳಲ್ಲಿ ವೈಭವಯುತ ರಂಗಸಜ್ಜಿಕೆಗಳು ಇದ್ದರೂ ನಿಜವಾದ ಪ್ರೇಕ್ಷಕ ನಾಟಕ ಕಥಾವಸ್ತು, ಸಾಹಿತ್ಯ, ನಟ-ನಟಿಯರ ಅಭಿನಯತಂತ್ರ ಎಲ್ಲವನ್ನು ಒಳಗೊಂಡೇ ನಾಟಕ ಯಶಸ್ಸಿಗೆ ಬರುತ್ತದೆಯೇ ವಿನಃ ಬರಿಯೇ ಪರಿಕರಗಳಿಂದ ರಂಗಭೂಮಿಯನ್ನು ಅಲಂಕರಿಸಿದರೆ ಅದು ಒಂದು ಯಾತ್ರಾಸ್ಥಳವೇ ಆಗಿ ಬಿಡುವ ಸಂಭವವೂ ಉಂಟು. ಆದ್ದರಿಂದ ಅಗತ್ಯಕ್ಕೆ ತಕ್ಕಷ್ಟು ರಂಗಸಜ್ಜಿಕೆ ಮಾಡಿಕೊಂಡು ಒಳ್ಳೆಯ ಕಥಾವಸ್ತುವಿನೊಂದಿಗೆ ನಟ-ನಟಿಯರ ಪ್ರೌಢ ಹಾಗೂ ಪ್ರಬುದ್ಧ ಅಭಿನಯಗಳೇ ಪ್ರೇಕ್ಷಕರಲ್ಲಿ ನಿಲ್ಲಬಹುದೇ ವಿನಃ ಶ್ರೀಮಂತ ಪರಿಕರಗಳಿಂದ ನಾವು ಪ್ರೇಕ್ಷಕರನ್ನು ಆಕರ್ಷಿಸಲು ಅಲ್ಪ ಮಟ್ಟಿಗೆ ಸಾಧ್ಯವಾದರೂ, ಅಭಿನಯ ತಂತ್ರ, ಕಥಾವಸ್ತು, ಸಂಗೀತ, ಸಾಹಿತ್ಯಗಳೇ ನೋಡುಗರ ಮನದಲ್ಲಿ ಸ್ಥಿರವಾಗಿ ಬೇರೂರುತ್ತವೆ. ಆಗ ನಾಟಕ ಸಾರ್ಥಕತೆ ಪಡೆಯುತ್ತದೆ.

ರಂಗ ಸಂಗೀತ : ನಾಟಕದಲ್ಲಿ ಸಕಲ ಕಲೆಗಳ ಸಮಾವೇಶವಿರುವಂತೆ ವಿವಿಧ ಸಂಗೀತ ಪ್ರಕಾರಗಳೂ ಕೂಡಿರುತ್ತವೆ. ನಾಟಕಗಳು ಇಂದು ನರ್ತನದಿಂದ ಬಿಡುಗಡೆ ಹೊಂದಿದ್ದರೂ ಸಂಗೀತದಿಂದ ಸರಿದು ನಿಲ್ಲುವುದು ಅವುಗಳಿಗೆ ಅಸಾಧ್ಯವೆನಿಸಿದೆ. ಸಂಗೀತವು ರಂಗಪ್ರದರ್ಶನದ ಒಂದು ಮಾಧ್ಯಮ ಹಾಗೂ ಮಾರ್ಗ. ಸಂಗೀತ ಗಾರುಡಿ ವಿದ್ಯೆ. ರಂಗಭೂಮಿಯೊಂದಿಗೆ ಅದು ಹುಟ್ಟಿಕೊಂಡು, ಭಾರತದ ಜನಜೀವನ ದಲ್ಲಿಯೇ ಹಿರಿದಾದ ಪಾತ್ರವನ್ನು ಹೊಂದಿರುವ ಸಂಗೀತವು, ನಮ್ಮ ಕಲೆಗೂ ಸಂಸ್ಕೃತಿಗೂ ಮಹತ್ವವನ್ನು ತಂದುಕೊಟ್ಟಿದೆ. ಸಂಗೀತವಿಲ್ಲದಿದ್ದರೆ ರಂಗಪ್ರಪಂಚಕ್ಕೆ ದೊಡ್ಡ ಕೊರತೆಯಾಗಿ ಬಿಡುತ್ತಿತ್ತು.

ರಂಗಭೂಮಿಯಲ್ಲಿ ಸಂಗೀತವೇ ಪ್ರಧಾನವಲ್ಲ, ಅದೊಂದು ಸಾಧನ. ಹಿಂದೆ ಗೀತೆ ನಾಟಕಗಳೇ ಹೆಚ್ಚಾಗಿ ಪ್ರಯೋಗವಾಗುತ್ತಿದ್ದವು. ನಾಟಕಗಳೇ ಆಗಿನ ಕಾಲದಲ್ಲಿ ಸಂಗೀತ ಕಛೇರಿ ಆಗಿಬಿಡುತ್ತಿತ್ತು. ರಂಗಭೂಮಿಯಲ್ಲಿ ಮೊದಮೊದಲು ಸಂಗೀತ ಬರುವ ನಟಿಯರನ್ನೇ ನಾಟಕಕ್ಕೆ ಸೇರಿಸಿಕೊಳ್ಳುತ್ತಿದ್ದರು. ಇತ್ತೀಚಿನ ಬೆಳವಣಿಗೆಯಲ್ಲಿ ಹಿನ್ನೆಲೆ ಬಂದಿರುವುದರಿಂದ ಸಂಗೀತಕ್ಕೆ ಆದ್ಯತೆ ಕಡಿಮೆಯಾಗಿದೆ. ಪ್ರಾರಂಭದ ಹಂತದ ನಟಿಯರೆಲ್ಲಾ ಸಂಪೂರ್ಣವಾಗಿ ಸಂಗೀತವನ್ನು ಬಲ್ಲವರೇ ಆಗಿದ್ದರು. ತಾವೇ ಸ್ವತಃ ಹಾಡು, ಅಭಿನಯ, ನೃತ್ಯವನ್ನು ಮಾಡುತ್ತಿದ್ದರು. ಸಂಗೀತ ಪ್ರಧಾನ ನಾಟಕಗಳೇ ಇರುತ್ತಿದ್ದರಿಂದ ನಾಟಕ ಮಂಡಳಿಗಳ ಶಿರೋನಾಮೆಯಲ್ಲಿ 'ಸಂಗೀತ ನಾಟಕ ಮಂಡಳಿ' ಎಂದೂ ಕರಪತ್ರದಲ್ಲಿ 'ಸಮಗ್ರ ಸಂಗೀತ ನಾಟಕ' ಎಂದು ಸೇರಿಸುವುದು ಅನಿವಾರ್ಯವಾಗಿತ್ತು.

ಬಳ್ಳಾರಿ ಜಿಲ್ಲೆಯ ರಂಗನಟಿಯರಲ್ಲಿ ಡಿ.ಹನುಮಂತಮ್ಮ ಮರಿಯಮ್ಮನಹಳ್ಳಿ, ಬಳ್ಳಾರಿ ಲಲಿತ, ಕೊಟ್ಟೂರು ಎಸ್.ಕಮಲಮ್ಮ, ನಾಗರತ್ನಮ್ಮ ಹೊಸಮನಿ ಎಪ್ಪತ್ತರ ದಶಕದಿಂದ 'ರಂಗಕೋಗಿಲೆ' ಎಂದೇ ಹೆಸರು ವಾಸಿಯಾದ 'ಸುಭದ್ರಮ್ಮ ಮನ್ಸೂರು' ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಒಂದು ಯುಗ ಎಂದೇ ಸುಭದ್ರಮ್ಮನವರ ಕಾಲವನ್ನು ನಾವು ಪರಿಗಣಿಸಲೇಬೇಕು. ಬಯಲಾಟ ತಂಡದ ಸೋಗಿರತ್ನ ಮುಂತಾದ ರಂಗನಟಿಯರು ಗಾನ ಕೋಗಿಲೆ ಎಂದೇ ಹೆಸರಾಗಿದ್ದಾರೆ. ಹಿನ್ನೆಲೆಯಿಂದ ಅಭಿನಯ ಹಾಗೂ ಹಾಡುಗಾರಿಕೆ ಬೇರೆಯಾಗುತ್ತದೆ. ಆದರೆ ಸಂಗೀತದಿಂದ ಅಭಿನಯ ಜತೆಯಾಗಿ ಪಾತ್ರಧಾರಿಯು ಅಲ್ಲಿ ಪಾತ್ರದಲ್ಲಿ ಲೀನವಾದರೆ ನಂತರ ಅಭಿನಯವು ಸಹಜವಾಗಿಯೇ ಬರುತ್ತದೆ. ಆದ್ದರಿಂದ ಪಾತ್ರಧಾರಿಗಳು ಕಲೆಗೆ ಒಂದು ಅರ್ಥವಂತಿಕೆಯು ಬರುತ್ತಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ರಂಗನಟಿಯರು ಸಂಗೀತದಲ್ಲಿ ಹೆಚ್ಚು ಹೆಚ್ಚು ಸಾಧನೆಮಾಡಿದ್ದು, ರಂಗಭೂಮಿಯಲ್ಲಿ ಹೆಸರುವಾಸಿ ರಂಗಕಲಾವಿದೆಯರೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಸಂಗೀತ ಬರದೇ ಇರುವ ರಂಗನಟಿಯರೇ ಈಗ ಹೆಚ್ಚಾಗಿದ್ದಾರೆ.

ಧ್ವನಿ ಮತ್ತು ಬೆಳಕು : ರಂಗಭೂಮಿಯ ಉದಯಕಾಲದಲ್ಲಿ ನಟ, ನಟಿಯರು ಅಭಿನಯಿಸುವಾಗ, ಧ್ವನಿವರ್ಧಕಗಳ ಅನುಕೂಲತೆ ಇಲ್ಲದಿರುವಾಗ ಜೋರಾಗಿ ಕಿರುಚಬೇಕಾಗಿತ್ತು. ವಿಲನ್ ಪಾತ್ರಧಾರಿಗಳು ಅತಿಯಾಗಿ ಬೊಬ್ಬೆ ಹಾಕಬೇಕಾಗಿತ್ತು. ಏಕೆಂದರೆ ಆವರಣದಲ್ಲಿ ಹಿಂದೆ ಕುಳಿತ ಪ್ರೇಕ್ಷಕರಿಗೆ ಕೇಳುವ ಹಾಗೆ

ಮಾತನಾಡಬೇಕಾಗಿತ್ತು. ತಂತ್ರಜ್ಞಾನದಿಂದ ರಂಗಭೂಮಿಯಲ್ಲಿ ಧ್ವನಿವರ್ಧಕಗಳು ಬಳಕೆಗೆ ಬಂದು, ಹೆಚ್ಚು ಅನುಕೂಲವೇ ಆಗಿದೆ. ಬೆಳಕಿನಲ್ಲಿಯೂ ಹಲವಾರು ಮನ್ವಂತರಗಳು ಆವಿಷ್ಕಾರವಾಗಿದೆ. ಮಳವಳ್ಳಿ ಸುಂದರಮ್ಮನವರ 'ಹಾಂ ಪ್ರಿಯ ಪ್ರಶಾಂತ ಹೃದಯ' ಆಗಿನ ಕಾಲದಲ್ಲಿ ಈ ಧ್ವನಿಯು ಎಲ್ಲರ ಮನವನ್ನು ಮೆಚ್ಚುವಂತೆ ಮಾಡಿತ್ತು.

ಈ ಶತಮಾನದ ಆದಿಯಲ್ಲಿ ಅಸ್ತಿತ್ವದಲ್ಲಿದ್ದ ವಿಲಾಸಿ ನಾಟಕ ಸಂಸ್ಥೆಗಳು ನಾಟಕ ಪ್ರದರ್ಶನಗಳಲ್ಲಿ ಧ್ವನಿತಂತ್ರಕ್ಕೆ ಅಷ್ಟು ಗಮನ ಕೊಡಲಿಲ್ಲ. ನಿರ್ದೇಶಕರು ನಾಟಕಗಳಲ್ಲಿ ಯುಕ್ತವಾದ ಸೂಚನೆಗಳನ್ನು ಕೊಟ್ಟಾಗ ನಟರು ಆ ಸೂಚನೆಗಳನ್ನು ಅನುಸರಿಸುತ್ತಿದ್ದರು. ಅಳುವುದು, ನಗುವುದು, ಕೆಮ್ಮುವುದು, ನೇಪಥ್ಯದಲ್ಲಿ ಶಬ್ದ ಇವೇ ಮುಂತಾದವು.

ರಂಗಭೂಮಿಯಲ್ಲಿ ಮಾತು, ಸಂಗೀತ, ಹಿನ್ನೆಲೆಯಲ್ಲಿ ಮಾಡತಕ್ಕ ಆನುಷಂಗಿಕ ಶಬ್ದಗಳು ಎಲ್ಲವೂ ಧ್ವನಿಯ ವರ್ಗಕ್ಕೆ ಸೇರುತ್ತವೆ. ಮೈಕ್ರೋಫೋನ್, ಟೇಪ್ ರಿಕಾರ್ಡರ್ ಹಾಗೂ ಧ್ವನಿ ಸಂಗ್ರಹಣ ವಿದ್ಯುತ್ ಸಾಧನಗಳು ರೂಢಿಗೆ ಬರುವವರೆಗೆ ವಿಲಾಸಿ ತಂಡಗಳಿಗೆ ನಾಟಕದ ಸನ್ನಿವೇಶಗಳಿಗೆ ಸೂಕ್ತ ಶಬ್ದಗಳನ್ನು ಅಳವಡಿಸಲು ಅನುಕೂಲಗಳೇ ಇರಲಿಲ್ಲ. ಸುಮಾರು ೧೯೪೦ರ ನಂತರ ಧ್ವನಿವರ್ಧಕ ಯಂತ್ರಗಳು ಪ್ರಯೋಗಕ್ಕೆ ಬಂದ ಮೇಲೆ ಪಾತ್ರಗಳ ಸಂಭಾಷಣೆ ಮೈಕ್ ಯಂತ್ರದ ಮುಂದೆಯೇ ನಡೆಯಲು ಪ್ರಾರಂಭವಾಯಿತು. ಮೈಕ್ ಬಳಕೆಯಲ್ಲಿ ಪ್ರತಿಯೊಂದು ಯಂತ್ರವು ತನ್ನ ಸರದಿಯ ಮಾತುಗಳನ್ನು ಆಡಬೇಕಾದಾಗ ಮೈಕ್ ಮುಂದೆ ಬಂದು ನಿಂತು, ತನ್ನ ಮಾತು ಮುಗಿದ ಮೇಲೆ ಹಿಂದಕ್ಕೆ ಸರಿದು ಹೋಗಬೇಕಾದ ಅನಿವಾರ್ಯತೆಯಿಂದ ಪಾತ್ರಗಳ ಸ್ವಾಭಾವಿಕ ಚಲನೆ ಹಾಗೂ ಅಭಿನಯಗಳಿಗೆ ಅಡಚಣೆಯಾಗುತ್ತಿತ್ತು. ಇತ್ತೀಚಿನ ಕೆಲವು ಬದಲಾವಣೆಗಳಿಂದ ಪ್ರೇಕ್ಷಕರ ನೋಟಕ್ಕೆ ಬೀಳದಂತೆ ಮೈಕ್ ಸಾಧನಗಳನ್ನು ರಂಗದ ಮೇಲೆ ಹಾಗೂ ರಂಗದ ಇತರ ಸ್ಥಳಗಳಲ್ಲಿ ಜೋಡಿಸುವ ಕ್ರಮ ರೂಢಿಗೆ ಬಂದಿದೆ. ಪ್ರಸ್ತುತ ಧ್ವನಿ ಉತ್ಪಾದನೆಗೆ ವಿದ್ಯುಚ್ಛಕ್ತಿ ಬಹಳ ಸಹಕಾರಿಯಾಗಿವೆ. ಈ ಟೇಪ್‌ರಿಕಾರ್ಡ್ ಉಪಯೋಗಕ್ಕೆ ಬಂದ ಮೇಲೆ ನಾಟಕಕ್ಕೆ ಬೇಕಾದ ಧ್ವನಿಗಳನ್ನು ಹಾಗೂ ಶಬ್ದಗಳನ್ನು ಟೇಪ್‌ನಲ್ಲಿ ಸುತ್ತಿಕೊಂಡು ನಾಟಕ ಪ್ರದರ್ಶನದ ಮಧ್ಯೆ ಪ್ರಯೋಗಿಸಿ ಸನ್ನಿವೇಶಗಳಲ್ಲಿ ಬಳಸತಕ್ಕ ಪರಿಣಾಮವನ್ನು ತರಲು ಸಾಧ್ಯವಾಗಿದೆ. ಸಮುದ್ರದ ಅಲೆಗಳು, ಪ್ರಾಣಿ, ಪಕ್ಷಿಗಳ ಕೂಗು, ಬೀಕರ ಭಯಂಕರ ನಾದಗಳು, ಯಂತ್ರಗಳ ಶಬ್ದ ಇವೇ ಮೊದಲಾದ ಶಬ್ದಗಳನ್ನೆಲ್ಲಾ ಮುದ್ರಿಸಿಕೊಂಡು ನಾಟಕಗಳಲ್ಲಿ ಪ್ರಯೋಗಿಸಬಹುದಾಗಿದೆ. ಉದಾಹರಣೆಗೆ ಬೆಂಗಳೂರಿನ ಪ್ರಭಾತ್ ಕಲಾವಿದರು ಅಪೆರಾ ಮಾದರಿಯ ಬಹುಜನರನ್ನೊಳಗೊಂಡ ಸಿಂಡ್ರೆಲಾ ನಾಟಕದ ಪಾತ್ರಗಳ ಮಾತುಗಳು, ನೃತ್ಯ, ಸಂಗೀತ, ಇತರ ಧ್ವನಿ ಹಾಗು ಶಬ್ದಗಳನ್ನು ಧ್ವನಿ ಮುದ್ರಿಸಿಕೊಂಡು ಇಡೀ ನಾಟಕವನ್ನು ಟೇಪ್‌ರಿಕಾರ್ಡ್ ಉಪಯೋಗಿಸಿ ಪ್ರದರ್ಶಿಸಿದ್ದಾರೆ. ರಿಕಾರ್ಡ್ ಮಾಡಲ್ಪಟ್ಟ ಧ್ವನಿಯಂತ್ರಗಳಿಂದ ಬಂದಂಥ ಮಾತುಗಳಿಗೆ ತಕ್ಕಂತೆ ಪಾತ್ರಗಳು ತುಟಿಗಳನ್ನು ಅಲುಗಿಸಿ, ಅಭಿನಯಿಸಿ ಅಲ್ಲದೆ ಟೇಪ್‌ರಿಕಾರ್ಡ್ ಮಾಡಲ್ಪಟ್ಟ ನೃತ್ಯ, ಸಂಗೀತಕ್ಕೆ ತಕ್ಕ ಹಾಗೆ

ಕುಣಿದು ತಮ್ಮ ಪಾತ್ರಗಳನ್ನು ಸಮರ್ಥಿಸಿಕೊಳ್ಳಬೇಕಾಗಿದೆ. ಇಡೀ ನಾಟಕ ಧ್ವನಿ ಪ್ರಯೋಗಗಳಿಂದಲೇ ಮುನ್ನಡೆದು ಪಾತ್ರಗಳು ಅಭಿನಯಿಸುವಾಗ ನಟಿಯರು ಧ್ವನಿಯನ್ನು ಕಿವಿಗೊಟ್ಟು ಕೇಳಿ ಅಭಿನಯ, ನೃತ್ಯ, ಮಾತುಗಳನ್ನು ಜಾಗರೂಕವಾಗಿ ಜೋಡಿಸಿಕೊಳ್ಳಬೇಕಾಗುತ್ತದೆ.

ಧ್ವನಿತಂತ್ರವು ನಾಟಕದ ಬಹುಮುಖ್ಯವಾದ ಅಂಗವಾಗಿದ್ದು, ಧ್ವನಿಯೇ ಇಡೀ ನಾಟಕದ ಕೇಂದ್ರಬಿಂದು. ಸಾವಿರಾರು ಪ್ರೇಕ್ಷಕರಿಗೆ ಮಾತು, ಸಂಭಾಷಣೆ ತಲುಪಬೇಕಾದರೆ ಧ್ವನಿ ಮುಖ್ಯ ಅಂಗ. ನಟಿಯರಿಗೆ ಈಗೀಗ ಧ್ವನಿ ಸಹಾಯದಿಂದ ಹೆಚ್ಚು ಅನುಕೂಲವೇ ಆಗಿದ್ದು, ಹಿನ್ನೆಲೆಗೆ ತಕ್ಕಂತೆ ಕುಣಿಯುವುದು, ಅಭಿನಯಿಸುವುದು ತಮ್ಮ ತಂತ್ರಗಾರಿಕೆಯಿಂದ ಮಾತನಾಡಿ ಇಡೀ ಪ್ರೇಕ್ಷಕವರ್ಗವೇ ಮೋಡಿಗೆ ಸಿಲುಕುವಂತೆ ನಟಿಯರು ಮಾತನಾಡುತ್ತಾರೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯಲ್ಲಿ 'ರಂಗಕೋಗಿಲೆ' ಸುಭದ್ರಮ್ಮ ಮನ್ಸೂರವರು 'ರಕ್ತರಾತ್ರಿ' ನಾಟಕದಲ್ಲಿ ದ್ರೌಪತಿಯಾಗಿ, ಹಸ್ತಿನಾವತಿಯ ರಾಣಿಯಾಗಿ, ಯುಧೀಷ್ಟಿರ, ಶ್ರೀಕೃಷ್ಣ, ಅರ್ಜುನ, ಭೀಮರ ಜೊತೆಗೆ ಸನ್ನಿವೇಶಗಳಲ್ಲಿ ಅಭಿನಯಿಸುತ್ತಾ ಸಂಭಾಷಣೆಗೆ ಇಳಿದರೆ, ದ್ವಾಪರಯುಗಕ್ಕೆ ಅವರನ್ನು ತಮ್ಮ ಗಾಯನದಿಂದ ಕರೆದೊಯ್ದು ಕಲ್ಪನಾ ಲೋಕದಲ್ಲಿ ಅವರನ್ನು ವಿಹರಿಸುವಂತೆ ಮಾಡುತ್ತಾರೆ. ಕೂಡ್ಲಿಗಿಯ ಪಿ. ಪದ್ಮ ಭಾನುಮತಿಯ ಪಾತ್ರದಲ್ಲಿ ಮಾತನಾಡಿ ಪ್ರೇಕ್ಷಕರ ಮನ ಸೂರೆಗೊಂಡಿದ್ದಾರೆ. ಹೀಗೆ ಧ್ವನಿ ಇಡೀ ನಾಟಕದ ಕ್ರಿಯಾ ಬಿಂದುವಾಗಿ ಮಹತ್ವ ಪಡೆದಿದೆ.

ಇಡೀ ನಾಟಕವನ್ನು ಒಂದೇ ಸೆಟ್ಟಿಂಗ್‌ನಲ್ಲಿ ಪ್ರಯೋಗಿಸುವ ವಿಧಾನವನ್ನು ಬೆಳಕಿನ ಸಂಯೋಜನೆಯ ಮೂಲಕ ರೂಢಿಸಿಕೊಂಡಿದ್ದಾರೆ. ಸಾಮಾನ್ಯವಾಗಿ, ಪ್ರೇಕ್ಷಕರ ನೋಟಕ್ಕೆ ಅಗತ್ಯವಾದಷ್ಟು ಬೆಳಕು ರಂಗದ ಮೇಲಿರಬೇಕು. ರಂಗದ ಕೆಲವು ಭಾಗಗಳನ್ನು ಮಬ್ಬುಗೊಳಿಸುವ ಅಗತ್ಯವೂ ಸಹ ಇರುತ್ತದೆ. ಕೆಲವು ಸನ್ನಿವೇಶ ಗಳಿಗೆ ಮಸುಕು ಬೆಳಕು ಉಪಯುಕ್ತ. ಉದಾಹರಣೆಗೆ, ನಾಟಕಗಳಲ್ಲಿಯ ಕೊಲೆಯ ಸನ್ನಿವೇಶಕ್ಕೆ ಹಾಗೂ ರುದ್ರನಾಟಕಗಳಲ್ಲಿನ ಪ್ರೇತದರ್ಶನದಂಥ ಅತಿಮಾನುಷ ದೃಶ್ಯವನ್ನು ಮಬ್ಬಾದ ಬೆಳಕಿನಲ್ಲಿ ನಡೆಯುವಂತೆ ಮಾಡಿದರೆ ದೃಶ್ಯದ ಗಂಭೀರತೆ ಪರಿಣಾಮಕಾರಿಯಾಗುವುದು. ರಾತ್ರಿಯ ಸನ್ನಿವೇಶವನ್ನು ಮಸುಕು ಬೆಳಕಿನಿಂದ ತೋರಿಸುತ್ತಾರೆ.

ಬೆಳಕನ್ನು ವಿವಿಧ ಶೈಲಿಗಳಲ್ಲಿ ಬಳಸಿಕೊಳ್ಳುವ ಪದ್ಧತಿ ರೂಢಿಗೆ ಬಂದಿದೆ. ವಿದ್ಯುತ್ ಬೆಳಕು ಸ್ವಾಭಾವಿಕ ಬೆಳಕಿಗೆ ಸಮವಾಗಲಾರದು. ನೈಜ ಶೈಲಿಯಲ್ಲಿ ವಿದ್ಯುಚ್ಛಕ್ತಿಯ ಬೆಳಕನ್ನು ಉಪಯೋಗಿಸಿಕೊಳ್ಳುವಾಗ ಕಿಟಕಿ ಬಾಗಿಲುಗಳ ವ್ಯವಸ್ಥೆ ಇದ್ದೇ ವಿದ್ಯುತ್ತನ್ನು ಬಿಡಲಾಗುವುದು. ವಿಶಿಷ್ಟ ಬೆಳಕಿಗೆ ಪ್ರಯೋಗ ಶೈಲಿಗಳಿಗೆ ಉದ್ದೇಶ ಪೂರ್ವಕವಾಗಿಯೇ ದೀಪದ ಕಿರಣಗಳನ್ನು ಸ್ಪಾಟ್, ಫ್ಲೆಡ್ ವಿದ್ಯುತ್ ದೀಪಗಳಿಂದ ಬಿಡುತ್ತಾರೆ. ಅಲ್ಲದೆ ಸಾಮಾನ್ಯವಾಗಿ ನಾವು ದಿನನಿತ್ಯ ಕಾಣುವ ಬಣ್ಣಗಳಿಗೆ ಭಿನ್ನವಾದ ಗಾಢ ಬಣ್ಣಗಳ ಬೆಳಕನ್ನು ಸಹ ರಂಗದ

ಮೇಲೆ ಪ್ರಯೋಗಿಸುತ್ತಾರೆ. ನಾಟಕದ ಕೆಲವು ಸನ್ನಿವೇಶ ಹಾಗೂ ಪಾತ್ರಗಳ ಮನೋಭಾವಗಳನ್ನು ಅಭಿವ್ಯಕ್ತಿಸಲು ಸಹ ರಂಗದ ಬೆಳಕು ಬಹು ಉಪಯುಕ್ತ. ಉದಾ: ಒಂದು ದಾರುಣ ಸನ್ನಿವೇಶವನ್ನು ಕಲ್ಪಿಸಲು ಪ್ರಯೋಗಿಸುವ ಬೆಳಕಿನ ಮಂದ ಪ್ರಭೆಯನ್ನು ಹೋಗಲಾಡಿಸಿ, ದಾರುಣ ಸನ್ನಿವೇಶದ ತರುವಾಯ ಆಹ್ಲಾದಕರ ಸನ್ನಿವೇಶವನ್ನು ತೋರಿಸಲು ಹೆಚ್ಚು ಬೆಳಕನ್ನು ತಂದು ಚೆಲ್ಲಬಹುದು. ಇಲ್ಲದಿದ್ದರೆ ಮಬ್ಬು ಬಣ್ಣವನ್ನು ಗಾಢ ಬಣ್ಣಕ್ಕೆ ಪರಿವರ್ತಿಸಬಹುದು.

ಬೆಳಕು ರಂಗದ ಮೇಲೆ ಸೀನರಿಯ ಬಗ್ಗೆ ಪ್ರಭಾವ ಬೀರುತ್ತದೆ. ವಿಶಿಷ್ಟ ಬೆಳಕಿನ ತಂತ್ರಗಳಿಂದ ಇಡೀ ದೃಶ್ಯವನ್ನು ಬದಲಾಯಿಸಲು ಸಾಧ್ಯ. ಅಲ್ಲದೆ ಸೈಕ್ಲೋರಮ ಪರದೆಯ ಮೇಲೆ ಸೂರ್ಯೋದಯ, ಸೂರ್ಯಾಸ್ತ, ಮುಂತಾದ ದೃಶ್ಯಗಳನ್ನು ತೋರಿಸಲಾಗುವ ಸಂದರ್ಭದಲ್ಲಿ ಆ ಪರದೆಯ ಮುಂಭಾಗದಲ್ಲಿ ಸ್ಟ್ರಿಪ್ ಅಥವಾ ಫ್ಲಡ್ ದೀಪಗಳನ್ನು ಬಳಸಿದ್ದು, ವಿಲಾಸಿಗಳು ಸಾಮಾನ್ಯವಾಗಿ ದೃಶ್ಯ ಬದಲಾವಣೆಗೆ ಡಿಮ್ಮರ್ ಬಳಸುತ್ತಿದ್ದಾರೆ.

ಬೆಳಕೇ ಪ್ರೇಕ್ಷಕರಿಗೆ ವಿವಿಧ ರೀತಿಯ ಸಂದರ್ಭಗಳನ್ನು ಸೂಚಿಸುತ್ತದೆ. ಬೆಳಕಿನ ಮೂಲಕ ಹವಾಮಾನ, ಹಗಲು ರಾತ್ರಿಗಳನ್ನು ತೋರಿಸಬಹುದು. ಹಾಗೂ ರಂಗಸಜ್ಜಿನ ಅಂಗವಾಗಿ ಹಿಂಭಾಗದಲ್ಲಿ ಜೋಡಿಸಿರುವ ಕೊಠಡಿಗಳಲ್ಲಿ ದೀಪ ಉರಿಯುವಂತೆ ಮಾಡಿ ದೃಶ್ಯಕ್ಕೆ ವಾಸ್ತವಿಕತೆಯನ್ನು ಕಲ್ಪಿಸಬಹುದು. ಉದಾ: ೧೯೮೧ ರಲ್ಲಿ ನೈವೇಲಿಯ ಕನ್ನಡ ಸಂಘದವರು ಆಡಿದ ಬೇಟೆ ನಾಟಕದಲ್ಲಿ ಬೆಟ್ಟದ ಹಿನ್ನೆಲೆಯಲ್ಲಿ ಚಂದ್ರನ ಬೆಳಕನ್ನು ತೋರಿಸಲು, ಬೆಟ್ಟದ ಸಾಲುಗಳ ಸಜ್ಜಿನ ಹಿಂದೆ ಬಿಳಿಯ ಪರದೆಯನ್ನು ಕಟ್ಟಿ ಬಟ್ಟೆಯ ಮೇಲೆ ಹಿಂದಿನಿಂದ ಬೆಳಕನ್ನು ಬಿಡಲಾಗಿತ್ತು. ದೀವಟಿಗೆಗಳನ್ನು ಉಪಯೋಗಿಸಿ ಕಾಡು ಮತ್ತು ಆಶ್ರಮ ದೃಶ್ಯಗಳಿಗೆ ನೈಜತೆಯನ್ನು ತರಲಾಗಿತ್ತು.

ರಂಗದ ಮೇಲೆ ಪ್ರಯೋಗಿಸುವ ಪ್ರಕಾಶಮಾನವಾದ ಬೆಳಕು ಅದು ಕೇಂದ್ರೀಕೃತವಾಗಿರುವ ವಸ್ತುವಿನ ಪ್ರಾಮುಖ್ಯವನ್ನು ತೋರಿಸುತ್ತದೆ. ಮಂದವಾದ ಬೆಳಕು ವಸ್ತುವನ್ನು ಗೌಣಸ್ಥಾನಕ್ಕೆ ಇಳಿಸುತ್ತದೆ. ಬೆಳಕಿನ ಪ್ರಯೋಗ ಪಾತ್ರಗಳ ಅಭಿನಯಕ್ಕೆ ಹಾಗೂ ರಂಗದ ಮೇಲಣ ಚಲನೆಗೆ ಬಾಧಕವಾಗದಂತೆ ಇರಬೇಕು. ಬೆಳಕನ್ನು ಆರಿಸುವ ಹಾಗೂ ಹೊತ್ತಿಸುವ ಕ್ರಿಯೆ ಪ್ರೇಕ್ಷಕರ ಗಮನವನ್ನು ಸೆಳೆಯುವಂತಿದ್ದರೆ, ಅವರು ಚಂಚಲ ಚಿತ್ತರಾಗಿ ಅಭಿನಯದ ಕಡೆ ತಮ್ಮ ಗಮನವನ್ನು ಕೇಂದ್ರೀಕರಿಸಲಾರರು. ಆದ ಕಾರಣ ನಿರ್ದೇಶಕ ಬೆಳಕಿನ ತಜ್ಞರು ಹಾಗೂ ರಂಗತಜ್ಞರು ಒಟ್ಟೊಟ್ಟಿಗೆ ಸಮಾಲೋಚಿಸಿ ಬೆಳಕಿನ ಪ್ರಯೋಗದ ಬಗೆಗೆ ವ್ಯವಸ್ಥಿತ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ನಾಟಕವು ಪ್ರದರ್ಶನಗೊಳ್ಳುವ ಸಮಯದಲ್ಲಿ ಪ್ರೇಕ್ಷಕರ ಗಮನವೆಲ್ಲಾ ರಂಗದ ಮೇಲಿರುವುದರಿಂದ ಪ್ರೇಕ್ಷಕರಲ್ಲಿ ಆಗುವ ಪ್ರತಿಕ್ರಿಯೆ ರಂಗದಿಂದಲೇ ಉಂಟಾಗುತ್ತದೆ. ನಾಟಕದ ವೇಳೆಯಲ್ಲಿ ಪ್ರೇಕ್ಷಾಗೃಹವು ಕತ್ತಲಲ್ಲಿರುವುದರಿಂದ ಪ್ರೇಕ್ಷಕರಲ್ಲಿ ಪ್ರತಿಯೊಬ್ಬನೂ ನಾಟಕವನ್ನು ನೋಡುವ ಕ್ರಿಯೆಯಲ್ಲಿ ಆಗಂತಕನ ಸ್ಥಾನಕ್ಕೆ ಇಳಿಸಲ್ಪಟ್ಟು, ಪ್ರೇಕ್ಷಾಗೃಹದ ಇತರ ವ್ಯಕ್ತಿಗಳ ಇರವನ್ನು

ಗಮನಿಸಲಾರದಷ್ಟು ತಲ್ಲೀನತೆಯಿಂದ ತನ್ನ ನೋಟವನ್ನು ರಂಗದ ಮೇಲೆಯೇ ಇಳಿಸುತ್ತಾನೆ. ಆಗ ಅವನನ್ನು ನಾಟಕದ ಬಗ್ಗೆ ಪ್ರಚೋದಿಸುವುದು ರಂಗದ ಮೇಲೆ ಹತ್ತಿಕೊಳ್ಳುವ ದೀಪಗಳು, "ನಟರ ಮೇಲೆ ಬೀಳುವ ಪ್ರಕಾಶಮಾನವಾದ ಬೆಳಕಿನಿಂದ ಅವರ ಹಾವಭಾವಗಳನ್ನು ಪ್ರೇಕ್ಷಕರು ಗ್ರಹಿಸುತ್ತಾರೆ. ಬೆಳಕು ಆಧುನಿಕ ರಂಗಭೂಮಿಯಲ್ಲಿ ನಟನು ತನ್ನ ಪಾತ್ರವನ್ನು ಸಮರ್ಪಕವಾಗಿ ಅಭಿವ್ಯಕ್ತಿಸಲು ಸಹಾಯಕವಾಗಿದೆ (ಲೇ: ಡಾ. ಎಚ್.ಕೆ.ರಂಗನಾಥ, ಕನ್ನಡ ರಂಗಭೂಮಿ ವಿಕಾಸ, ಪುಟ. ೪೩೪). ಹೀಗೆ ಬೆಳಕು ಇಡೀ ರಂಗಭೂಮಿಯ ಚಟುವಟಿಕೆಯನ್ನು ಪ್ರದರ್ಶಿಸುವ ಕ್ರಿಯಾಸಾಧನವಾಗಿದೆ.

ಪರದೆಗಳು : ನಾಟಕ ಮಂಡಳಿಗಳು ಅಂಕದ ಪರದೆಗಾಗಿ ಗಜಾನನ, ಸರಸ್ವತಿ, ಲಕ್ಷ್ಮಿ ಮೊದಲಾದ ದೇವತೆಗಳ ಚಿತ್ರಗಳನ್ನು, ರವಿವರ್ಮನು ಚಿತ್ರಿಸಿದ ದೇವತೆಗಳ ಚಿತ್ರಗಳನ್ನು ರಂಗದ ಮುಂಭಾಗದಲ್ಲಿ ಶೋಭಿಸುವ ಅಂಕದ ಪರದೆಗೆ ಉಪಯೋಗಿಸಿಕೊಂಡವು. ವಾಸ್ತವವಾಗಿ ಅಂಕದ ಪರದೆ ನಾಟಕ ಮಂಡಲಿಯ ಗುರುತಾಗಿದ್ದಿತು. ಅಂಕದ ಪರದೆ ರಂಗಭೂಮಿಗೆ ಪವಿತ್ರವಾಗಿದ್ದು, ಇಳಿಬಿಟ್ಟಿರುತ್ತಿದ್ದ ಅದನ್ನು ನಾಟಕದ ಪ್ರಾರಂಭಕ್ಕೆ ಮುಂಚೆ ಪೂಜಿಸುತ್ತಿದ್ದರು. ನಾಟಕಾರಂಭದಲ್ಲಿ ಅಂಕದ ಪರದೆಯನ್ನು ಮೇಲೆತ್ತುವುದಕ್ಕೆ ಮುಂಚೆ ಸಾಮಾನ್ಯವಾಗಿ ಮೂರು ಸಲ ಗಂಟೆ ಬಾರಿಸುತ್ತಿದ್ದರು.

೧. ಮೊದಲ ಗಂಟೆಗೆ ವಾದ್ಯಗಾರರು ರಂಗಮಂಚದ ಮುಂದಿನ ವಾದ್ಯಗಾರರ ಸ್ಥಳದಲ್ಲಿ ತಮ್ಮ ತಮ್ಮ ವಾದ್ಯಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು.

೨. ಎರಡನೆಯ ಗಂಟೆಗೆ ರಂಗಪೂಜೆಯಾಗಿ ನಟರು ಸಿದ್ಧರಾಗಿದ್ದಾರೆಂಬ ಸೂಚನೆಯಾಗುತ್ತಿತ್ತು.

೩. ಮೂರನೆಯ ಗಂಟೆಗೆ ಅಂಕದ ಪರದೆ ಎದ್ದು ದೇವತಾ ಪ್ರಾರ್ಥನೆ (ನಾಂದಿ) ಆಗುತ್ತಿತ್ತು.

ನಾಟಕದ ಮಧ್ಯೆ ವಿರಾಮ ಕಾಲವಿದ್ದಾಗ ಅಂಕದ ಪರದೆಯು ಇಳಿಬಿಟ್ಟು, ನಾಟಕ ಮುಂದುವರಿಯುವಾಗ ತೆಗೆಯುತ್ತಿದ್ದರು. ಅಂಕದ ಪರದೆ ಕೊನೆಯ ಬಾರಿಗೆ ಬೀಳುತ್ತಿದ್ದುದು ನಾಟಕ ಮುಗಿದಾಗ. ನಾಟಕ ಪೂರ್ಣ ಗೊಂಡು ನಟ-ನಟಿಯರು ಮಂಗಳವನ್ನು ಹಾಡುವಾಗ ಅಂಕದ ಪರದೆ ಮೆಲ್ಲ ಮೆಲ್ಲನೆ ಇಳಿದು ಬರುತ್ತ ನೆಲವನ್ನು ಮುಟ್ಟುವುದೇ ಒಂದು ವೈಭವದ ನೋಟವಾಗಿರುತ್ತಿತ್ತು. ಆ ತರುವಾಯ ಅಂಕದ ಪರದೆ ಅಭಿನಯಿಸಿದ ನಟರನ್ನು ಪ್ರೇಕ್ಷಕರಿಂದ ಮರೆಮಾಡಿ ನಾಟಕ ಶಾಲೆಯಲ್ಲಿ ನಿರವತೆ ಆವರಿಸುತ್ತಿದ್ದಿತ್ತು. ನಾಟಕವನ್ನು ಪ್ರಾರಂಭಿಸುವ ಹಾಗೂ ಅದನ್ನು ಮುಕ್ತಾಯ ಮಾಡುವ ಗುರುತರ ಕಾರ್ಯ ಅಂಕದ ಪರದೆಯದಾಗಿದೆ.

ಸನ್ನಿವೇಶಗಳಿಗೆ ತಕ್ಕ ಪರದೆಗಳನ್ನು ಪರಿಕರಗಳಲ್ಲಿ ಮಂಡಳಿಗಳು ತಯಾರಿಸಿಕೊಳ್ಳುತ್ತಿದ್ದರು. ಹಾಸ್ಯ ಪಾತ್ರದ ಸನ್ನಿವೇಶ, ಬಡ ಅಥವಾ ಶ್ರೀಮಂತ ಮನೆತನದ ಸನ್ನಿವೇಶ, ಖಳನಾಯಕರ ಸಂಚಿನ ಸನ್ನಿವೇಶ ಇವುಗಳಲ್ಲಿ ಯಾವ ಯಾವ ಸನ್ನಿವೇಶಕ್ಕೆ ಯಾವ ತರದ ಪರದೆಗಳನ್ನು ಇಳಿ ಬಿಡಬೇಕು, ಆ ಪರದೆ ಯಾವ

ಸನ್ನಿವೇಶದ್ದು ಎಂದು ಪ್ರೇಕ್ಷಕರು ನೋಡಿದ ಕೂಡಲೇ ಊಹಿಸಬಹುದಾಗಿದೆ. ಈಗೀಗ ಪರಕರಗಳ ವ್ಯವಸ್ಥೆ ಬದಲಾಗಿ ಹೆಚ್ಚು ಕಡಿಮೆ ಆಂಗಿಕ ಅಭಿನಯದ ಮೂಲಕವೇ ಸನ್ನಿವೇಶ ಸೃಷ್ಟಿಸುವ ಕಲಾವಿದರ ಸಂಖ್ಯೆ ಆಧುನಿಕ ರಂಗಭೂಮಿಯಲ್ಲಿ ಹೆಚ್ಚಾಗುತ್ತಿದೆ.

ಈ ಎಲ್ಲಾ ವ್ಯವಸ್ಥೆಗಳನ್ನು ಪುನರ್ ಬದಲಾವಣೆ ಮಾಡುವ ಅನಿವಾರ್ಯತೆ ಇಂದಿನ ರಂಗಭೂಮಿಯದಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲಿ ಆವಿಷ್ಕಾರಗಳು ಉಂಟಾಗಿ ಎಲ್ಲ ರಂಗ ಪ್ರಯೋಗಗಳನ್ನು ಪಾಶ್ಚಾತ್ಯರ ಪ್ರಭಾವದಿಂದ ಪ್ರೇಕ್ಷಕರ ಮನೋಭಾವಗಳು ಕಾಲಮಾನದಲ್ಲಿ ಬದಲಾವಣೆಯನ್ನು ಪಡೆಯುತ್ತದೆ. ಆದ್ದರಿಂದ ರಂಗ ಸಜ್ಜಿಕೆ, ನೋಡುವ ಕಾಲ, ಕಲಾವಿದರ ಸಂಗೀತ ಗೋಷ್ಠಿಗಳಂತಿರುವ ನಾಟಕಗಳು, ಹೊಸ ರೀತಿಯ ಬೆಳಕಿನ ವ್ಯವಸ್ಥೆ, ದಿಗ್ಭ್ರಮೆಗೊಳ್ಳುವ ಕಲಾಕಾರನ ಪರದೆಯ ಚಿತ್ರಗಳು ಅತಿಯಾದ ಶ್ರೀಮಂತ ಕಂಪನಿಗಳು ವೃತ್ತಿರಂಗ ಭೂಮಿಯಲ್ಲಿ ವಿಶೇಷವಾದ ಮನ್ನಣೆಯನ್ನು, ಹೆಸರನ್ನು ಪಡೆದಿದ್ದವು. ಹಿಂದೆ ಎಷ್ಟೋ ಕಲಾವಿದರ ಧ್ವನಿಗಳು ಇಂದು ಧ್ವನಿಭಂಡಾರದಲ್ಲಿ ಇವೆ.

ತಂತ್ರಗಾರಿಕೆಯ ಉಪಯೋಗವನ್ನು ಮಾಡಿಕೊಂಡಂತೆಲ್ಲ ಹಲವು ಹೊಸ ಪ್ರಯೋಗಗಳು ಇಂದು ರಂಗಭೂಮಿಯಲ್ಲಿ ನಡೆದಿವೆ. ಶ್ರೀರಂಗರ ಪ್ರಕಾರ "ಪರಂಪರೆಯಿಂದ ನಡೆದು ಬಂದ ನೈಸರ್ಗಿಕ ಕಲೆಯನ್ನು ಬುದ್ಧಿಪೂರ್ವಕವಾಗಿ ಇಂದಿನ ಪರಿಸ್ಥಿತಿಗೆ ಹೊಂದಿಸಬಲ್ಲ ನಾಟಕಕಾರನಾಗಲಿ, ನಟನಾಗಲಿ ಹುಟ್ಟಿಬಂದರೆ ಕನ್ನಡ ರಂಗಭೂಮಿಯ ಭವಿಷ್ಯವು ಉಜ್ವಲವಾಗುವುದು ಖಂಡಿತ" ಎಂದು ಹೇಳುತ್ತಾರೆ.

ಇಂದು ನಮ್ಮ ರಂಗಭೂಮಿಯು ಕವಲುದಾರಿಯಲ್ಲಿದೆ. ಒಂದು ಕಡೆ ಅನುಕರಣೆಯ ಪರಂಪರೆಯ ವೃತ್ತಿರಂಗಭೂಮಿಯಾದರೆ, ಇನ್ನೊಂದು ಕಡೆ ಹೊಸತನವನ್ನು ಹಿಂಬಾಲಿಸಿದ ಹಲವು ಪ್ರಭಾವಗಳ ಹವ್ಯಾಸಿ ರಂಗಭೂಮಿ. ಬೇರೆ ಬೇರೆ ಕಾರಣಗಳಿಂದ ಎರಡಕ್ಕೂ ದುರವಸ್ಥೆ ಒದಗಿದೆ. ಇವೆರಡೂ ತಮ್ಮ ತಮ್ಮ ವಲಯಗಳಲ್ಲಿ ಮೈಕೊಡವಿಕೊಂಡು ಏಳುವ ಅಗತ್ಯ ಈಗ ಮೊದಲಿಗಿಂತಲೂ ಇಂದು ಹೆಚ್ಚಾಗಿದೆ. ಇಂದು ಸಂಪ್ರದಾಯದ ಫಲವಾಗಿ ನಾಟಕಕ್ಕೂ ಪ್ರೇಕ್ಷಕರಿಗೂ ನಡುವೆ ಇದ್ದ ಸಂಬಂಧ ಕಾಣೆಯಾಗಿರುವುದು ದುರ್ದೈವದ ಮಾತೇ ಸರಿ. ನಾವಿನ್ಯತೆಯನ್ನು ಪರಂಪರೆಯ ಭಾಗವನ್ನಾಗಿಸುವ ಮಹಾ ಪ್ರತಿಭೆಯ ಕೊರತೆ ನಮ್ಮನ್ನು ಈಗ ಕಾಡುತ್ತಿದ್ದು, ರಂಗಾಸಕ್ತರೆಲ್ಲರೂ ಇಂದು ಈ ದಿಕ್ಕಿನಲ್ಲಿ ಯೋಚಿಸುವಂತೆ ಮಾಡಿದೆ. ಆದ್ದರಿಂದ ನಟಿಯ ಮಹತ್ವವನ್ನು ಅರಿತು ಇಂದು ಅವರ ಭವಿಷ್ಯಕ್ಕಾಗಿ ಯೋಚಿಸುವಂತೆ ಮಾಡಿ ಅವರ ಸೇವೆಯ ಪರಂಪರೆ ಮುಂದುವರಿಯಲು ಹೆಚ್ಚು ಸಹಾಯಕವಾಗುವ ನಿಟ್ಟಿನಲ್ಲಿ ನಾವಿಂದು ಪ್ರಯತ್ನಿಸಬೇಕಾಗಿದೆ.

ರಂಗತಜ್ಞರು : ರಂಗಭೂಮಿಯ ಬಗ್ಗೆ ರಂಗತಜ್ಞ ಹೆಚ್ಚು ಕಾಳಜಿಯನ್ನು ಮಾಡಬೇಕು. ಹೊಸ ಹೊಸ ಸಂಶೋಧನೆಯನ್ನು ಮಾಡುತ್ತ ಅವುಗಳನ್ನು ಪ್ರಯೋಗ ಮಾಡಿ ಅವು ನಿರಂತರ ಕ್ರಿಯಾಶೀಲರೂಪದಲ್ಲಿ ಇರುವಂತೆ ಮಾಡಬೇಕಾಗುತ್ತದೆ. ರಂಗಶೋಧನೆಯನ್ನು ಮಾಡಿ ಮಾಹಿತಿರೂಪದಲ್ಲಿ ಬರೆದು ಅವುಗಳನ್ನು

ಬರೀ ಗ್ರಂಥಾಲಯದಲ್ಲಿಟ್ಟರೆ ಸಾಲದು ಅವು ನಿರಂತರ ಪ್ರಕ್ರಿಯೆ ರೂಪವನ್ನು ತಾಳಿದರೆ ಮಾತ್ರ ಅವು ಸಂಶೋಧನೆಯ ಸಾರ್ಥಕತೆಯನ್ನು ಪಡೆದುಕೊಂಡಂತಾಗುತ್ತದೆ.

ಗ್ರಾಮೀಣ ರಂಗಭೂಮಿಯಲ್ಲಿ ಹೆಚ್ಚು ಹೆಚ್ಚು ರಂಗತಜ್ಞರು ಬೆಳಕಿಗೆ ಬಂದರೆ, ಈ ನಿಟ್ಟಿನಲ್ಲಿ ರಂಗತಜ್ಞರ ಆಸಕ್ತಿಯು ಹೆಚ್ಚಾಗುತ್ತದೆ. ವೇದಿಕೆ ಅಥವಾ ರಂಗಭೂಮಿಕೆ ಎಂದರೆ ಅದು ಒಂದು ಕಾಲದ ಇತಿಹಾಸವನ್ನು ಪ್ರತಿನಿಧಿಸುವಂತಿರಬೇಕು. ಈ ಎಲ್ಲ ಅಂಶಗಳನ್ನು ಒಳಗೊಂಡು ರಂಗತಜ್ಞರು ಬಹುತೇಕ ಸಿನೇಮಾವನ್ನು ಅನುಸರಿಸುವುದನ್ನು ಬಿಟ್ಟು "ಸ್ವಯಂ ಪ್ರತಿಭೆಯನ್ನು ರಂಗತಜ್ಞರು ಮೆರೆಯಬೇಕು. ಈ ರೀತಿಯಲ್ಲಿ ರಂಗತಜ್ಞರ ಪ್ರಯೋಗಗಳು ಸಾಗಬೇಕಾಗುತ್ತದೆ. ರಂಗ ಇತಿಹಾಸವನ್ನು ಗಮನಿಸಿ ರಂಗಭೂಮಿಯ ಭವಿತವ್ಯದ ಬಗ್ಗೆ ಚಿಂತಿಸುತ್ತಾ ದೇಶ, ವಿದೇಶಗಳಲ್ಲಿಯ ಪ್ರಯೋಗಗಳನ್ನು ಗಮನಿಸುತ್ತಾ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಅದರಿಂದ ಹೊಸ ರೀತಿಯ ಆಲೋಚನೆಗಳಿಂದ ಆಧುನಿಕ ರಂಗಭೂಮಿಯನ್ನು ಕಟ್ಟಲು ಸಾಧ್ಯವಾಗುವುದು.

ಕೆಲವು ನಟಿಯರು ಕೂಡ ರಂಗತಜ್ಞರೇ ಇದ್ದಾರೆ. ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಮನ್ನೂರು ಸುಭದ್ರಮ್ಮ, ಕೆ.ನಾಗರತ್ನಮ್ಮ, ಪಿ.ಪದ್ಮ, ವರಲಕ್ಷ್ಮಿ, ಬಳ್ಳಾರಿ ಲಲಿತಮ್ಮ ಮುಂತಾದವರು ರಂಗತಜ್ಞೆಯರೇ ಆಗಿದ್ದಾರೆ. ಇತ್ತೀಚಿನ ಡಿ. ಹನುಮಂತಮ್ಮರ ಸೊಸೆ. ಡಿ.ಸಣ್ಣಹನುಮಕ್ಕ ಇತ್ತೀಚೆಗೆ ಬೆಳೆದಿರುವ ರಂಗನಟಿ ಹಾಗೂ ತಜ್ಞೆ ಕೂಡ. ನಾಟಕ ಅಕಾಡೆಮಿಯ ಸದಸ್ಯಳಾಗಿ ಎಷ್ಟೋ ನವೀನ ರೀತಿಯ ರಂಗಭೂಮಿಯಲ್ಲಿ ಹಲವಾರು ರಂಗಪ್ರಯೋಗಗಳನ್ನು ಅಭಿನಯಿಸಿ ರಂಗಭೂಮಿಯ ಮೇರುನಟಿ ಎನಿಸಿದ್ದಾರೆ. ಹೆಚ್ಚು ಅನುಭವವನ್ನು ನೀನಾಸಂ ತರಬೇತಿಯಲ್ಲಿ, ತಿರುಗಾಟದಲ್ಲಿ ಪಡೆದು ನಾಟಕ ಅಕಾಡೆಮಿಯ ಸದಸ್ಯಳಾಗಿ ಪ್ರಬುದ್ಧ ನಟಿ ಎನಿಸಿದ್ದಾರೆ.

ರಂಗಶಾಲೆ : ರಂಗಭೂಮಿಯು ಹೊಸದಿಗಂತದತ್ತ ಹೋದ ಹಾಗೆಲ್ಲಾ ಹೊಸ ಹೊಸ ರಂಗಪ್ರಯೋಗಗಳು ನಡೆದೇ ಇವೆ. ಅವು ಇಡೀ ವ್ಯವಸ್ಥೆಯಲ್ಲಿ ರಂಗಪ್ರಯೋಗಗಳು ಆವಿಷ್ಕಾರಗಳೊಂದಿಗೆ ನಡೆಯಬೇಕಾದರೆ ಗ್ರಾಮೀಣ ರಂಗದಲ್ಲಿ ಪ್ರಾಥಮಿಕ ಹಂತದಲ್ಲಿಯೇ ರಂಗಶಾಲೆಗಳು ಇರಬೇಕಾಗುತ್ತದೆ. ಶಿಕ್ಷಣದ ಪ್ರಥಮ ಹಂತದಲ್ಲಿಯೇ ರಂಗಚಟುವಟಿಕೆಯನ್ನು ಪಠ್ಯದೊಂದಿಗೆ ಆರಂಭಿಸಬೇಕು. ಪ್ರೌಢಶಾಲಾ ಹಂತದವರೆಗೂ ಮುಂದುವರಿಸಿ ನಂತರ 'ರಂಗಭೂಮಿ'ಯನ್ನು ಆಯ್ಕೆಯ ವಿಷಯವನ್ನಾಗಿ ಮಾಡಿ, ವಿಶ್ವವಿದ್ಯಾಲಯಗಳಲ್ಲಿ 'ನಾಟಕ ವಿಭಾಗ'ವನ್ನು ತೆರೆಯಬೇಕು.

ಈ ರೀತಿಯ ಎಲ್ಲ ಅನುಕೂಲತೆಗಳನ್ನು ಮಾಡಿದರೆ ನಮ್ಮ ಗ್ರಾಮೀಣ ರಂಗ ಚಟುವಟಿಕೆಯು ಕ್ರಿಯಾಶೀಲವಾಗಿ ಇರಲು ಸಾಧ್ಯವಾಗುತ್ತದೆ. ಪ್ರಸ್ತುತದಲ್ಲಿ ಇರುವ ರಂಗನಟಿಯರಿಗಾಗಲೀ ಇಲ್ಲವೇ ಅವರ ಬಾಳಿಗೆಗಾಗಲೀ ರಂಗಶಾಲೆಯ ಮುಖೇನ ಅವರ ಭವಿಷ್ಯಕ್ಕೆ ಒಂದು ಭದ್ರವಾದ ಬುನಾದಿಯನ್ನು ಹಾಕಿದಂತಾಗುತ್ತದೆ.

೧. ರಂಗ ಶಾಲೆಗಳು ಆರಂಭವಾದರೆ ರಂಗಭೂಮಿ ಕ್ರಿಯಾಶೀಲವಾಗಿರುತ್ತದೆ.

೨. ರಂಗನಟಿಯರಿಗೆ ಇಂಥ ಶಿಕ್ಷಣದ ಅನುಕೂಲತೆಯಿಂದ ಅವರು ರಾಷ್ಟ್ರೀಯ ಮಟ್ಟದಲ್ಲಿಯೂ ತಮ್ಮ ಕಲೆಯನ್ನು ಪ್ರದರ್ಶಿಸಲು ನಟಿಯರು ಸಮರ್ಥರಾಗುವರು.

೩. ವೃತ್ತಿ ಕಲಾವಿದೆಯರಿಗೂ ಹಾಗೂ ಗ್ರಾಮೀಣ ರಂಗಭೂಮಿಯ ಹವ್ಯಾಸಿ ಕಲಾವಿದರಿಗೂ ಹೊಸ ನಾಟಕ ಪ್ರಯೋಗಗಳ ಸಾಧ್ಯತೆ ಉಂಟಾಗುತ್ತದೆ.

೪. ಕೆಲವು ನಾಟಕಗಳ ವಿಮರ್ಶೆ ಹಾಗೂ ಪರಿಶೀಲನೆಯಿಂದ ರಂಗ ಪ್ರಯೋಗಗಳು ಒಂದು ಮಹತ್ವದ ಸ್ಥಾನವನ್ನು ಪಡೆಯುತ್ತವೆ.

೫. ರಂಗಶಾಲೆಗಳ ಆರಂಭದಿಂದ ಪ್ರಜ್ಞಾವಂತ ನಾಟಕ ರಚನಾಕಾರರ ಪರಂಪರೆಗೆ ಹೊಸ ಕಳೆ ಬಂದಂತಾಗುತ್ತದೆ.

೬. ಪ್ರಸ್ತುತದಲ್ಲಿ ಅನಾನುಕೂಲತೆಯಿಂದ ಇರುವ ರಂಗನಟಿಯರಿಗೆ ಹೊಸ ಆಯಾಮದ ದಾರಿ ಸುಗಮವಾಗುತ್ತದೆ.

೭. ಸಮಾಜದಲ್ಲಿ ಈಗ ಇರುವಂಥ ಮನೋಭಾವನೆ ತೊಲಗಿ ನಟನೆ ಅದು ಒಂದು ಕಲೆ, ವಿದ್ಯೆ ಎಂದು ಭಾವಿಸಿದರೆ ರಂಗಭೂಮಿಗೆ ಹೆಚ್ಚು ಮನ್ನಣೆಯನ್ನು ಕೊಟ್ಟಂತಾಗುವುದು.

೮. ಆಯಾ ಕ್ಷೇತ್ರದಲ್ಲಿರುವ ಆಸಕ್ತ ನಟಿಯರು ಅದನ್ನೇ ಆರಿಸಿಕೊಂಡು ಅದೇ ಕ್ಷೇತ್ರದಲ್ಲಿ ಮುನ್ನಡೆದು ಸಾಂಸ್ಕೃತಿಕತೆಯ ಮಟ್ಟವನ್ನು ವಿಭಿನ್ನ ರೀತಿಯಲ್ಲಿ ಬೆಳೆಸಲು ಸಾಧ್ಯವಾಗುವುದು.

೯. ನಾಟಕ ಕಲೆ ಕೀಳು ಎಂಬ ಮನೋಭಾವನೆಗೆ ಸಂಪೂರ್ಣವಾಗಿ ತಿಲಾಂಜಲಿ ಇಟ್ಟಂತಾಗುವುದು.

೧೦. ಕಲೆಯು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇರುತ್ತದೆ. ಅದು ಆರ್ವಿಭವಿಸಲು ನಟಿಯರಿಗೆ ಇಂಥ ಅವಕಾಶಗಳ ಅಗತ್ಯತೆಯ ಅನಿವಾರ್ಯತೆ ಇದೆ.

೧೧. ನಟಿಯರಿಗೆ ನಾಟಕಗಳ ಹಲವು ಪಾತ್ರಗಳ ಪ್ರಭಾವದಿಂದ ಪುರುಷರ ಪೈಶಾಚಿಕ ಗುಣಗಳ, ಸಮಾಜದಲ್ಲಿ ಸಮಾನತೆಯ ದೌರ್ಬಲ್ಯದ ಅರಿವು ಚಿಕ್ಕಂದಿನಿಂದಲೇ ಮೂಡಿ ರಂಗನಟಿಯರು ಪುರುಷರಿಂದ ಆದಷ್ಟು ಎಚ್ಚರಿಕೆಯಿಂದ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗಬಹುದು.

೧೨. ರಂಗಶಾಲೆಯ ಮುಖೇನ ಮಕ್ಕಳ ನೈತಿಕ ಹಾಗೂ ಬೌದ್ಧಿಕ ಮಟ್ಟವು ಎತ್ತರಗೊಳ್ಳಲು ಸಾಧ್ಯವಾಗುತ್ತದೆ.

೧೩. ವಿಶಾಲ ಮನೋಭಾವ ಹಾಗೂ ದೃಷ್ಟಿಕೋನದಲ್ಲಿ ಬದಲಾವಣೆ ಅಲ್ಪಮಟ್ಟಿಗಾದರೂ ಉಂಟಾಗುವ ಸಾಧ್ಯತೆಯನ್ನು ರಂಗಶಾಲೆಗಳು ರೂಪಿಸುತ್ತವೆ.

೧೪. ನಟಿಯರ ರಂಗ ಭವಿಷ್ಯ ಹಾಗೂ ಜೀವನದ ಭವಿಷ್ಯ ಎರಡಕ್ಕೂ ರಂಗಶಾಲೆಗಳು ಸಾಮಗ್ರಿಗಳ ಪೂರೈಕೆಯನ್ನು ಮಾಡುತ್ತದೆ.

೧೫. ಗ್ರಾಮೀಣ ಮಟ್ಟದಲ್ಲಿರುವ ನಟಿಯರ ಕಲೆಗೆ ಕಸುವು ನೀಡಿದಂತಾಗುವುದು.

೧೬. ರಂಗಭೂಮಿಯಲ್ಲಿ ಆಧುನಿಕತೆಯ ಪ್ರಭಾವದಿಂದ ಹೊಸರೀತಿಯ ಚಿಂತನೆಗಳಿಂದ ರಂಗ ನಿರ್ದೇಶಕರೂ, ತಜ್ಞರೂ ಈ ನಿಟ್ಟಿನಲ್ಲಿ ಬೆಳವಣಿಗೆಯಾಗಲು ಸಾಧ್ಯತೆ ಇದೆ.

೧೭. ರಂಗಭೂಮಿ ಸಮಾಜದ ಒಂದು ಅಂಗ. ಈ ನಿಟ್ಟಿನಲ್ಲಿ ಜನಸಾಮಾನ್ಯರ ಅರಿವು ಮೂಡಲು ಸಹಕಾರಿಯಾಗುತ್ತದೆ.

೧೮. ರಂಗಭೂಮಿಯ ಬೆಳವಣಿಗೆಯಿಂದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿದಂತಾಗುತ್ತದೆ.

೧೯. ಎಲ್ಲರೂ ಕಲೆಯನ್ನು ಪ್ರೀತಿಸುತ್ತಾರೆ. ಆದರೆ ಕಲಾವಿದರ ಜೀವನವನ್ನು ಯಾರೂ ಸ್ವೀಕರಿಸುವುದಿಲ್ಲ. ಆದ್ದರಿಂದ ಕಲಾವಿದರಿಗೆ ಈ ರಂಗಶಿಕ್ಷಣದ ಮೂಲಕ ಸಮಾಜದಲ್ಲಿ ಗೌರವ ಮೂಡಿ ಅವರೂ ಸಾಮಾಜಿಕ ಬದುಕಲ್ಲಿ ತಲೆ ಎತ್ತಿ ನಿಲ್ಲಲು ಅನುಕೂಲವಾಗುತ್ತದೆ.

೨೦. ನಟಿಯರಿಗೆ ಹೊಸ ಚಿಂತನೆಯೊಂದಿಗೆ ಕಲಾಸೇವೆಯನ್ನು ಮಾಡಲು ಒಂದು ಮೌಲ್ಯಾಧಾರಿತ ವ್ಯವಸ್ಥೆಯನ್ನು ರೂಪಿಸಿದಂತಾಗುತ್ತದೆ.

ಸರಕಾರವು ಈ ನಿಟ್ಟಿನಲ್ಲಿ ರಂಗ ಶಾಲೆಯನ್ನು ಆರಂಭಿಸಿದರೆ, ವೈಚಾರಿಕ ಚಿಂತನೆಗಳ ಮೂಲಕ ವ್ಯಕ್ತಿಗತ ಅಗತ್ಯತೆಗಳೇ ಹೆಚ್ಚಾಗಿ ಕಲೆ, ಸಾಹಿತ್ಯ, ಸಂಸ್ಕೃತಿಗಳು ಈ ಹಂತದಲ್ಲಿ ಬೆಳಕಿಗೆ ಬರಲು ಸಾಧ್ಯವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ರಂಗಶಾಲೆಗಳಿರದಿದ್ದರೂ ೬೦-೭೦ರ ದಶಕದಲ್ಲಿ ಡಿ.ಹನುಮಂತಮ್ಮ ಬಳ್ಳಾರಿ, ಲಲಿತಮ್ಮ, ಆದವಾನಿ ಲಕ್ಷ್ಮಿದೇವಿ, ಮನ್ನೂರು ಸುಭದ್ರಮ್ಮ, ಕೂಡ್ಲಿಗಿ ಪಿ.ಪದ್ಮ, ಕೆ.ನಾಗರತ್ನಮ್ಮ, ಬಿ.ಶಿವಕುಮಾರಿ, ಸೋಗಿ ರತ್ನ ಮುಂತಾದವರೆಲ್ಲರೂ ಯಾವುದೇ ರೀತಿಯ ರಂಗಶಾಲೆಯಲ್ಲಿ ಶಿಕ್ಷಣ ಪಡೆಯದೇ ಪರಂಪರೆಯಿಂದ ಬಂದಂಥ ಕಲೆಯನ್ನು ಶಾಸ್ತ್ರೀಯವಾಗಿ, ಶಿಸ್ತುಬದ್ಧ ಕಲಿಕೆ ಕಲಿಯದಿದ್ದರೂ ಮನೆಯಲ್ಲಿ ಹಿರಿಯರಿಂದ ಕಲಿತು ನಂತರ ಚಿಕ್ಕಂದಿನಿಂದ ನೋಡಿ, ಕೆಲ ಸಂಗೀತ ಮಾಸ್ತರ ಹತ್ತಿರ ಕಲಿತರೂ ಅವರಿಗೆ ಕಲಿಕೆಯ ದಾಹ ಕಡಿಮೆಯಾಗಿರಲಿಲ್ಲ. ಕಲಿಯುವವರ ಅಂತರಂಗದಲ್ಲಿ ಹಲವಾರು ಸವಾಲುಗಳೇ ಮುಂದಿನ ಅವರ ನಟನಾ ತಂತ್ರಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿದೆ.

ಕೆ. ನಾಗರತ್ನಮ್ಮ ಶಾಲಾ ಕಲಿಕೆಯ ಹಂತದಲ್ಲೇ ರಂಗಪ್ರಜ್ಞೆ ಮೂಡಿದ್ದು, ಅಲ್ಲಿ ಸರಿಯಾದ ಸೈದ್ಧಾಂತಿಕ ಅಗತ್ಯಗಳ ಕೊರತೆ ಇರುವುದರಿಂದ ನಟಿಯರ ಕಲಿಕೆಯ ತಹತಹಿಕೆ ಇದ್ದರೂ ರಂಗಶಾಲೆಯ ಲಭ್ಯತೆ ಇರಲಿಲ್ಲ.

ಮತ್ತೆ ಈಗ ಇತ್ತೀಚೆಗೆ ಕಲಿಯಲಿರುವವರ ಅಂತರಂಗ ಸವಾಲುಗಳಿಗೆ ಸರಿಯಾದ ಪ್ರತಿ ಸವಾಲುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ನಾವಿಂದು ಯೋಚಿಸಬೇಕಾಗಿದೆ. ಆ ಹಂತದಲ್ಲಿಯೇ ನಾಗರತ್ನಮ್ಮರಿಗೆ ರಂಗಶಾಲೆಯ ಅನುಕೂಲತೆ ಇದ್ದರೆ, ಇಂದು ಎಂದೋ ಹೆಸರುವಾಸಿ ಪ್ರಬುದ್ಧ ನಟಿ ಎನಿಸಿಕೊಳ್ಳುತ್ತಿದ್ದರು. ಅವರು ರಾಷ್ಟ್ರೀಯ ಮಟ್ಟದಲ್ಲಿ ರಂಗಶಾಲೆ ಕಟ್ಟಿ ಬಿಡುತ್ತಿದ್ದರೋ ಏನೋ. ಅಂಥ ಅನುಕೂಲತೆ ಕೊರತೆ ಇರುವುದರಿಂದ ಇಂದು ರಂಗಭೂಮಿ ಸೊರಗಿದೆ ಎನ್ನಬಹುದು.

ಮನ್ನೂರು ಸುಭದ್ರಮ್ಮ, ಬಳ್ಳಾರಿ ಲಲಿತಮ್ಮ ಇವರಿಗೆ ಆಗ ಸಂಗೀತದ ಶಿಕ್ಷಣ ಲಭ್ಯವಾಗಿತ್ತು. ನಾಟಕ ಕಂಪನಿಗಳನ್ನು ನೋಡಿ ಅದರಲ್ಲಿದ್ದು ಚಿಕ್ಕವರಿದ್ದಾಗಲೇ ಅಲ್ಲಿಯ ಪರಿಪಾಠಗಳ ಅರಿವು ಅವರಿಗಿದ್ದುದರಿಂದ, ಅಲ್ಪಮಟ್ಟಿಗಾದರೂ ರಂಗದ ಅನುಭವದಿಂದ ಅವರಿಂದು ಪಕ್ವವಾಗಿದ್ದಾರೆ. ಕನ್ನಡ ರಂಗಭೂಮಿ ಇತಿಹಾಸ ದಲ್ಲಿಯೇ ಸುಭದ್ರಮ್ಮ ಮನ್ನೂರ್ ಕಾಲವನ್ನು ಅದೊಂದು ಯುಗವೆಂದು ಪರಿಗಣಿಸಲೇಬೇಕು. ಈ ರೀತಿಯ ಬೆಳವಣಿಗೆಯ ಹಿಂದೆ ಹಲವು ವ್ಯಕ್ತಿಗಳ ಮಾರ್ಗದರ್ಶನ, ಸಹಾಯ ಹಾಗೂ ತರಬೇತಿಗಳೂ ಇವೆ. ಆದರೂ ಕೂಡ ಒಂದು ನಿಯಮಿತ ರಂಗಶಾಲೆ ಹಾಗೂ ವ್ಯವಸ್ಥಿತ ಪ್ರಗತಿಪರ ರಂಗತರಬೇತಿ ಶಿಬಿರಗಳು ಅವರಿಗೆ ಲಭ್ಯವಾಗಿಲ್ಲ. ಅದೇನೇ ಇದ್ದರೂ ಅವರು ಬಾಲ್ಯದಲ್ಲಿ ಪಡೆದುಕೊಂಡ ಸಂಗೀತ ಮತ್ತು ಅವರಿವರನ್ನು ನೋಡಿ ಸ್ವಆಸಕ್ತಿಯಿಂದ ಕಲಿತಿರುವುದನ್ನು ಬಿಟ್ಟರೆ ಇವರಿಗೆ ಯಾವ ರಂಗಶಾಲೆಗಳಲ್ಲಿ ಶಿಕ್ಷಣವನ್ನು ಅದರಲ್ಲೂ ನಾಟಕಶಾಸ್ತ್ರವನ್ನು ಅಧ್ಯಯನವನ್ನಾಗಿ ಯಾವ ರಂಗನಟಿಯರು ಬಳ್ಳಾರಿ ಜಿಲ್ಲೆಯಲ್ಲಿ ಕಲಿತಿಲ್ಲ. ಇನ್ನು ವಾಸ್ತವ ಸಂಗತಿ ಎಂದರೆ ಇನ್ನು ನಮ್ಮ ರಂಗಭೂಮಿಯು ಹೆಚ್ಚು ಶಿಸ್ತಿಗೆ ಒಳಪಡಬೇಕಿದೆ. ಗ್ರಾಮೀಣ ರಂಗಭೂಮಿಯವರೆಗೂ ಅಧ್ಯಯನವು ತಲುಪಬೇಕಾಗಿದೆ. ಅಂದರೆ ಸುಭದ್ರಮ್ಮರಿಗೆ ಸಂಗೀತವಿದ್ಯೆ ಬಾಲ್ಯ ದಲ್ಲಿಯೇ ಆರಂಭವಾಗಿರುವುದು ಅವರ ಭಾಗ್ಯವೇ ಸರಿ. ಅದರ ಮೂಲಕ ಇಂದು ಅವರ ನಟನಾ ಸಾಮರ್ಥ್ಯ ಅಭಿನಯ ತಂತ್ರಗಾರಿಕೆಯನ್ನು ರಕ್ತಗತ ಮಾಡಿಕೊಂಡರು. ಆ ವೇಳೆಯಲ್ಲಿ ಸುಭದ್ರಮ್ಮರಿಗೆ ಹೆಚ್ಚಿನ ಶೈಕ್ಷಣಿಕ ಅನುಕೂಲತೆಗಳು ಹಾಗೂ ಆರ್ಥಿಕ ಭದ್ರತೆ ಇದ್ದರೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆದು ರಂಗಭೂಮಿಯ ಮೇರುನಟಿಯಾಗಿ ಬೆಳೆಯಲು ಸಾಧ್ಯವಾಗುತ್ತಿತ್ತು ಎನ್ನಬಹುದು.

ಕೂಡ್ಲಿಗಿಯ ಪಿ. ಪದ್ಮ ಅವರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿಬೆಳೆದು ಪರಂಪರೆಯಿಂದ ಬಂದಿರುವ ರಂಗಭೂಮಿ ಸೇವೆಯನ್ನು ಮಾಡಿದ್ದಾರೆ. ಪ್ರೌಢಶಾಲಾ ಹಂತದವರೆಗೂ ವ್ಯಾಸಂಗಮಾಡಿದ್ದರೂ ಪದ್ಮ ನನಗೆ ಚಲನಚಿತ್ರಕ್ಕೆ ಹೋಗಬೇಕೆಂದು ಹೆಚ್ಚಿನ ಆಸಕ್ತಿಯೂ ಇತ್ತು. ಆದರೆ ನಮ್ಮ ಊರು ರಾಜಧಾನಿಗೆ ಬಹಳ ದೂರ. ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಎಲ್ಲ ರೀತಿಯಿಂದಲೂ ಅವಕಾಶಗಳು ನಮಗೂ ಇದ್ದರೆ, ರಂಗಶಿಕ್ಷಣದ ಅನುಕೂಲತೆ ನಮಗಿದ್ದರೆ ಚಲನಚಿತ್ರರಂಗದಲ್ಲಿಯೂ ನಾನು ಹೆಸರು ಮಾಡುತ್ತಿದ್ದೆ ಎಂದು ವಿಷಾದದಿಂದ ಹೇಳುತ್ತಾರೆ (ಕೂಡ್ಲಿಗಿ ಕ್ಷೇತ್ರಕಾರ್ಯ, ಸಂದರ್ಭ, ಪಿ.ಪದ್ಮ, ೨೦೦೨, ಅಕ್ಟೋಬರ್ ೩).

ಇನ್ನೂ ಕೆಲವು ರಂಗನಟಿಯರನ್ನು ಕೂಡ್ಲಿಗಿಯಲ್ಲಿ ಸಂದರ್ಶಿಸಿದಾಗ ಅವರ ಅಭಿಪ್ರಾಯ ತುಂಬಾ ನೀರಸವಾಗಿತ್ತು. ದೈನಂದಿನ ಬದುಕು ಬಡತನದ ಬೇಗೆಯಲ್ಲಿ ಬೇಯುತ್ತಿರುವಾಗ ಇನ್ನು ವ್ಯಾಸಂಗ, ರಂಗಶಿಕ್ಷಣದ ಮಾತು ದೂರವೇ ಸರಿ ಎನ್ನುತ್ತಾರೆ. ಕೂಡ್ಲಿಗಿಯ ಕೆ.ದುಶೀಲ ಎಷ್ಟೋ ಜನ ರಂಗನಟಿಯರು ವಾಸ್ತವದಲ್ಲಿ ಕಲ್ಪನೆಗಳೆಲ್ಲಾ ಕಲ್ಲಾಗಿ ಜೀವನವೇ ನೀರಸವಾಗಿದೆ. ಇಡೀ ಬಳ್ಳಾರಿ ಜಿಲ್ಲೆಯನ್ನೇ ನಾವು ಅವಲೋಕಿಸಿದಾಗ ಈ ಕ್ಷೇತ್ರದಲ್ಲಿ ಆಸಕ್ತಿಯಿಂದ ಬಂದು ಇದರಿಂದ ನಮಗೆ ನೆಮ್ಮದಿ ಸಿಕ್ಕಿದೆ ಎನ್ನುವ ನಟಿಯರು ತುಂಬಾ ವಿರಳ. ಅವಕಾಶವಂಚಿತರೂ ಹಾಗೂ ನಾವು ದುರಾದೃಷ್ಟವಂತರು ಎಂದು ಎಷ್ಟೋ ಜನ ನಟಿಯರು ವ್ಯಥೆಪಡುತ್ತಾರೆ. ಹೀಗೆ ನಟಿಯರಿಗೆ ಗ್ರಾಮೀಣ ನೆಲೆಗಳಲ್ಲಿ ಯಾವುದೇ ರಂಗ ಶಿಕ್ಷಣವಿಲ್ಲದೆ ಸ್ವ ಆಸಕ್ತಿಯಿಂದ ಹಾಗೂ ಪರಂಪರೆಯಾಗಿ ಬಂದಿರುವ ಕಲೆಯನ್ನು ಬಳ್ಳಾರಿ ಜಿಲ್ಲೆಯ ರಂಗನಟಿಯರು ರೂಢಿಸಿಕೊಂಡಿದ್ದಾರೆ ವಿನಃ ರಂಗ ಶಿಕ್ಷಣದ ಶಿಸ್ತುಬದ್ಧ ಅಧ್ಯಯನವನ್ನು ಯಾರೂ ಮಾಡಿಲ್ಲ.

ರಂಗ ತರಬೇತಿ ಹಾಗೂ ಶಿಬಿರ : ನಟಿಯರಿಗೆ ಬಳ್ಳಾರಿ ಜಿಲ್ಲೆಯಲ್ಲಿ ಯಾವುದೇ ಶಿಸ್ತುಬದ್ಧ ರಂಗತರಬೇತಿ ಶಿಬಿರಗಳು ಮೊದಲೆಲ್ಲಾ ನಡೆಯುತ್ತಿರಲಿಲ್ಲ. ಈಗೀಗ ಅಂದರೆ ಮರಿಯಮ್ಮನಹಳ್ಳಿಯ "ಲಲಿತ ಕಲಾರಂಗ" ಹಾಗೂ ಹಡಗಲಿಯ "ರಂಗಭಾರತಿ", ಬಸರಕೋಡಿನ "ರಂಗೋದಯ" ಹೊಸಪೇಟೆಯ "ಭಾವೈಕ್ಯತೆ", ಟಿ.ಬಿ.ಡ್ಯಾಂನ "ಕನ್ನಡ ಕಲಾ ಸಂಘ" ಮುಂತಾದ ಸಂಘಟನೆಗಳು ಇತ್ತೀಚೆಗೆ ರಂಗತರಬೇತಿ ಹಾಗೂ ಶಿಬಿರಗಳನ್ನು ಏರ್ಪಡಿಸುತ್ತಿವೆ.

ಮ.ಬ.ಸೋಮಣ್ಣ, ಡಾ.ಅಂಬಣ್ಣ ಇವರ ನೇತೃತ್ವದಲ್ಲಿ ಪ್ರಾರಂಭಗೊಂಡಿರುವ ಲಲಿತ ಕಲಾರಂಗವು ೧೯೮೮ರಲ್ಲಿ ಹುಟ್ಟಿತು. ಆರಂಭದ ದಿನಗಳಲ್ಲಿ ಈ ಭಾಗದಲ್ಲಿ ಪ್ರಚಲಿತವಿದ್ದ ಕಂಪನಿ ಶೈಲಿಯ ನಾಟಕಗಳನ್ನು ಪ್ರಯೋಗಿಸಿದರೂ ಕ್ರಮೇಣವಾಗಿ ಎಲ್ಲಾ ಪ್ರಭಾವಗಳನ್ನು ಜೀರ್ಣಿಸಿಕೊಂಡು ನಿರಂತರ ಪ್ರಯೋಗಶೀಲತೆಯ ತಂಡವಾಗಿ ರಾಜ್ಯ ರಂಗಾಸಕ್ತರ ಗಮನ ಸೆಳೆಯಿತು. ರಂಗ ತರಬೇತಿ ಶಿಬಿರ, ನಾಟಕೋತ್ಸವ, ನಾಟಕ ಸ್ಪರ್ಧೆ, ಸಂಗೀತಗೋಷ್ಠಿ, ಜಾನಪದ ಕಲಾಪ್ರಕಾರಗಳ ಪ್ರದರ್ಶನ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸಂಘಟಿಸಿ ತನ್ನ ಅನುಭವ ವಲಯವನ್ನು ವಿಸ್ತರಿಸಿಕೊಂಡಿತು. ಯಾವುದೇ ಮಡಿವಂತಿಕೆ ಇಲ್ಲದ ಲಲಿತಕಲಾರಂಗ ನಗರ, ಪಟ್ಟಣ, ಹಳ್ಳಿಗಳ ಎಲ್ಲ ವರ್ಗದ ಪ್ರೇಕ್ಷಕರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿತು. ಇದೊಂದು ಹವ್ಯಾಸಿ ತಂಡವಾಗಿದ್ದರೂ ಕೂಡ ವರ್ಷಕ್ಕೆ ಒಂದಾಗಲಿ, ಎರಡಾಗಲೀ ನಾಟಕಗಳ ಪ್ರದರ್ಶನದಿಂದ ಅಲ್ಪ ತೃಪ್ತರಾಗದೇ ಹಲವಾರು ಪ್ರಯೋಗಗಳನ್ನು ಪ್ರದರ್ಶಿಸಿತು. ಹಳ್ಳಿಯ ಹಬ್ಬ-ಜಾತ್ರೆಗಳಲ್ಲಿ ನವೀನ ರೀತಿಯ ನಾಟಕಗಳನ್ನು ಪ್ರಯೋಗಿಸಿ ಒಳ್ಳೆಯ ಹೆಸರನ್ನು ಪಡೆದಿದೆ. ನಾಟಕ ಅಕಾಡೆಮಿಯು ನಡೆಸಿಕೊಟ್ಟ, ಮೊಟ್ಟಮೊದಲ "ಮಹಿಳಾರಂಗ ತರಬೇತಿ ಶಿಬಿರ" ಈ ತಂಡದ ಆಶ್ರಯದಲ್ಲೇ ನಡೆಯಿತು ಎಂಬುದೇ ಈ ಲಲಿತ ಕಲಾರಂಗದ ವಿಶೇಷವಾದ ಹೆಗ್ಗಳಿಕೆ. ಆದರ್ಶಪ್ರೇಮ, ಗಂಡನ ಆಜ್ಞೆ, ರೊಟ್ಟಿಋಣ, ಕಾಡುಕುದುರೆ, ಊರು-ಕೇರಿ, ಬೆಳ್ಳಿ, ಒಂದು ಬೆದರ್ಪ್ಯೋ ಮುಂತಾದ ನಾಟಕಗಳನ್ನು ಈ ತಂಡ ಎಲ್ಲಾ ಪ್ರಕಾರದ ಪ್ರಯೋಗಗಳನ್ನು ನಡೆಸಿಕೊಟ್ಟಿದೆ.

ಲಲಿತ ಕಲಾರಂಗದ ಮೂಲಕ ಹಾಗೂ ಮರಿಯಮ್ಮನಹಳ್ಳಿಯ ಮೂಲಕ ಹಲವಾರು ಮಹಿಳಾ ರಂಗ ಚೇತನಗಳು ರಾಜ್ಯಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಡಿ.ಹನುಮಂತಮ್ಮ (ಖ್ಯಾತ ರಂಗಭೂಮಿ ಕಲಾವಿದ ದುರ್ಗಾದಾಸರ ಅಕ್ಕ) ಕೆ. ನಾಗರತ್ನಮ್ಮ ಹಾಗೂ ಡಿ.ಸಣ್ಣಹನುಮಕ್ಕ (ದುರ್ಗಾದಾಸರ ಮಗಳು) ಕೆ.ನಾಗರತ್ನ ನಾಟಕ ಅಕಾಡೆಮಿ ಸದಸ್ಯೆಯಾಗಿ, ರಾಜ್ಯೋತ್ಸವ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಇನ್ನೂ ಹಲವಾರು ಪ್ರಶಸ್ತಿ ಪಡೆದು ಜಾನಪದ ತಜ್ಞ ಮುದೇನೂರು ಸಂಗಣ್ಣ ವಿರಚಿತ 'ಶೀಲಾವತಿ'ಯ ನಾಟಕದಲ್ಲಿ ಶೀಲಾವತಿ ಪಾತ್ರ ರಾಜ್ಯದಲ್ಲೆಲ್ಲಾ ಹೆಸರು ಮಾಡಿದೆ.

ಸಣ್ಣ ಹನುಮಕ್ಕ ನೀನಾಸಂ ತಂಡಕ್ಕೆ ಸೇರಿ ತಿರುಗಾಟದಿಂದ ಅನುಭವ ಪಡೆದು ಈಗ ಪ್ರಬುದ್ಧ ನಟಿ ಎನಿಸಿದ್ದಾರೆ. ಈಗ ನಾಟಕ ಅಕಾಡೆಮಿಯ ಸದಸ್ಯೆಯೂ ಆಗಿ ಇಂದಿಗೂ ಕೂಡ ತುಂಬಾ ಉತ್ಸುಕತೆಯಿಂದ ರಂಗದ ಸೇವೆಯನ್ನು ಮಾಡುತ್ತಿದ್ದಾರೆ. ನವೀನರೀತಿಯ ನಾಟಕಗಳಲ್ಲಿಯೇ ಹೆಚ್ಚಾಗಿ ತೊಡಗಿಕೊಂಡು ಸೃಜನಶೀಲ ಸೂಕ್ಷ್ಮಸಂವೇದನೆಯ ನಾಟಕಗಳಲ್ಲಿಯೇ ಹೆಚ್ಚಾಗಿ ಪಾತ್ರವನ್ನು ನಿರ್ವಹಿಸುತ್ತಿದ್ದು ರಾಜ್ಯಾದ್ಯಂತ ಸಣ್ಣಹನುಮಕ್ಕ ಹೆಸರುವಾಸಿ ನಟಿ ಎನಿಸಿದ್ದಾರೆ. ಆದರೆ ಇವರು ಗ್ರಾಮೀಣ ರಂಗಭೂಮಿಯಲ್ಲಿ ಮಾಡು ವುದಿಲ್ಲ. ಅದೇನೇ ಇದ್ದರೂ ನೀನಾಸಂ ತಂಡದ ಜೊತೆಗೆ ಹಾಗೂ ಹೊಸಪೇಟೆಯ ಭಾವೈಕ್ಯತಾ ವೇದಿಕೆ ಜೊತೆಗೆ ಹೆಚ್ಚು ಸಂಪರ್ಕವಿಟ್ಟುಕೊಂಡು ಈ ಮೂಲಕ ರಂಗಭೂಮಿ ಸೇವೆಗೈಯುತ್ತಿದ್ದಾರೆ.

ಇಡೀ ಬಳ್ಳಾರಿ ಜಿಲ್ಲೆಯಲ್ಲಿಯೇ ಮರಿಯಮ್ಮನಹಳ್ಳಿಯ ಕಲಾವಿದರ ಕೊಡುಗೆ ಅಮೋಘವಾದುದು. ಆರಂಭದ ಹಂತದಿಂದ ಇಂದಿನವರೆಗೂ ದೊಡ್ಡ ಕಲಾವಿದರ ತಂಡಗಳೇ ಮರಿಯಮ್ಮನಹಳ್ಳಿಯಲ್ಲಿವೆ. ಅದಕ್ಕೆ ಮರಿಯಮ್ಮನಹಳ್ಳಿಯನ್ನು "ಕಲಾವಿದರ ತವರೂರು" ಎಂದು ಕರೆಯುತ್ತಾರೆ. ಆದ್ದರಿಂದ ಲಲಿತಕಲಾ ರಂಗದಂಥ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ. ಇತ್ತೀಚೆಗೆ ೨೦೦೨ ರಲ್ಲಿ ಸಂಗೀತ ಮಾಸ್ತರರಾದ ಡಣಾಯಕನ ಕೆರೆಯ ಡಿ.ಎಂ.ತೋಟಯ್ಯ ಸ್ವಾಮಿಗಳ ನೇತೃತ್ವದಲ್ಲಿ "ಸಂಗೀತ ಪಾಠಶಾಲೆ"ಯನ್ನು ತೆರೆಯಲಾಗಿದೆ. ಈ ನಿಟ್ಟಿನಲ್ಲಿ ಮರಿಯಮ್ಮನಹಳ್ಳಿಯ ಲಲಿತಕಲಾರಂಗವು ಪ್ರಗತಿ ಪಥದಲ್ಲಿ ಸಾಗುತ್ತಿದೆ. ನಾಟಕಗಳ ಪ್ರಯೋಗ, ರಂಗ ತರಬೇತಿ ಶಿಬಿರ, ರಂಗ ಶಿಬಿರ ಹಾಗೂ ಸಂಗೀತ ಪಾಠಶಾಲೆ ಹೀಗೆ ಹಲವಾರು ಕ್ರಿಯಾತ್ಮಕ ಕೆಲಸಗಳಲ್ಲಿ ಲಲಿತಕಲಾರಂಗವು ತೊಡಗಿರುತ್ತದೆ. ಆದರೆ ಎಷ್ಟೋ ಜನ ಹಿಂದಿನ ನಟಿಯರಿಗೆ ಯಾವ ಅವಕಾಶ ಹಾಗೂ ತರಬೇತಿ ಇರಲಿಲ್ಲ. ಆದರೆ ಇಂದು ತರಬೇತಿ ಮತ್ತು ಶಿಬಿರಗಳು ಅವಕಾಶಗಳು ಹೆಚ್ಚಾದರೆ ರಂಗಭೂಮಿಗೆ ನಟಿಯರ ಪ್ರವೇಶ ಇಂದು ಕಡಿಮೆಯಾಗಿದೆ.

ಹೂವಿನಹಡಗಲಿಯಲ್ಲಿ ಸಾಂಸ್ಕೃತಿಕ ವ್ಯಕ್ತಿ, ಶ್ರೇಷ್ಠರಾಜಕಾರಣಿ ಎನಿಸಿಕೊಂಡಿರುವ ಎಂ. ಪಿ. ಪ್ರಕಾಶ್ ನೇತೃತ್ವದಲ್ಲಿ 'ರಂಗ ಭಾರತಿ' ಸಂಸ್ಥೆಯನ್ನು ಹುಟ್ಟು ಹಾಕಿದರು. ಇಡೀ ರಾಜ್ಯವೇ ಬೆರಗುಗೊಳ್ಳುವಂತೆ ಪ್ರತೀ ವರ್ಷ ಆಟ, ನಾಟಕ, ಶಿಬಿರ, ಗೋಷ್ಠಿಗಳನ್ನು ನಿರ್ವಹಿಸಿ ಸಾಂಸ್ಕೃತಿಕತೆಯನ್ನು ಮೆರೆದಿದ್ದಾರೆ.

ಜಂಗಮದೆಡೆಗೆ, ಸಿಂಗಾರವ್ವ ಮತ್ತು ಅರಮನೆ, ನಾಗಮಂಡಲ, ಯಯಾತಿ, ಶರೀಫ, ಸೂರ್ಯ ಶಿಕಾರಿ, ಟಿಪ್ಪುಸುಲ್ತಾನ ಮುಂತಾದ ನಾಟಕಗಳನ್ನು ಪ್ರದರ್ಶಿಸಿ ಜನತೆಗೆ ಸೂಕ್ಷ್ಮ ಸಂವೇದನೆಯ ಮನೋಧರ್ಮವನ್ನು ಮೆರೆಸಿದ್ದಾರೆ. ಇಂಥ ಬೆಳವಣಿಗೆಗಳನ್ನೇ ಕಂಡ ಪ್ರಕಾಶರವರು ಈ ರೀತಿ ಹೇಳುತ್ತಾರೆ. "ಹವ್ಯಾಸಿಗಳ ಬೆಂಬಲ ದಿಂದಲೇ ಈ ಚಳುವಳಿ ಜನಪ್ರಿಯವಾಗಬೇಕಾದರೆ ಜನತೆಯ ನಿತ್ಯದ ಬದುಕಿನೊಡನೆ ಸ್ಪಂದಿಸಬೇಕು. ಪ್ರೇಕ್ಷಕವರ್ಗ ನಾಟಕದೊಡನೆ ತಾದ್ಯಾತ್ಮತೆ ಹೊಂದುವ ವೈಚಾರಿಕ ಸ್ಪಷ್ಟತೆಯ ನಾಟಕಗಳು ನಮಗೆ ಬೇಕು. ನಮ್ಮಲ್ಲಿ ನಾಟಕಗಳ ಕೊರತೆಯಿಲ್ಲ. ಅವುಗಳನ್ನು ಅರ್ಥಪೂರ್ಣವಾಗಿ ಪ್ರೇಕ್ಷಕರಿಗೆ ಮುಟ್ಟಿಸುವ ಸಂವೇದನಾ ಶೀಲ ನಿರ್ದೇಶಕರು ಅದನ್ನು ಸಾಧಿಸಲು ಕೈಗೂಡಿಸುವ ಸಮರ್ಥ ರಂಗತಂಡಗಳು ಬೇಕು. ಕನ್ನಡ ನಾಟಕ ಸಾಹಿತ್ಯಕ್ಕೆ ಸಿಂಹಪಾಲು ನೀಡಿರುವ ಕಾಣಿಕೆ ಉತ್ತರ ಕರ್ನಾಟಕದಲ್ಲೂ ಈ ರಂಗ ಚಟುವಟಿಕೆಗಳು ವ್ಯಾಪಕವಾಗಿ ಬೆಳೆಯುತ್ತಿರುವುದರ ಬಗ್ಗೆ ನನಗೆ ಸಂತಸವಿದೆ" (ನವನಾಡು, ಸಂಯುಕ್ತ ಕರ್ನಾಟಕ, ೧೩-೫-೧೯೮೫).

ಈ ರೀತಿಯ ಬೆಳವಣಿಗೆಯು ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿವೆ. ನಿರಂತರ ಕ್ರಿಯಾಶೀಲವಾಗಿ ಈ ಎರಡು ರಂಗತಂಡಗಳು ಚಟುವಟಿಕೆಯಿಂದ ಕೂಡಿದ್ದು, ಹೊಸ ಹೊಸ ರಂಗ ಪ್ರಯೋಗಗಳು ನಡಿಯುತ್ತಿವೆ. ಆದರೆ ಶಾಸ್ತ್ರೀಯವಾಗಿ ಎಲ್ಲೂ ನಾಟಕ ಶಾಲೆಗಳು ಆರಂಭವಾಗಿಲ್ಲ. ಹಾಗೂ ಎಲ್ಲೂ ತರಬೇತಿ ಶಿಬಿರಗಳ ನ್ನಾಗಲಿ ಶಿಕ್ಷಣದಲ್ಲಿ ನಾಟಕ ಶಾಸ್ತ್ರವನ್ನು ಅಳವಡಿಸುವುದಾಗಲಿ ನಡೆದಿಲ್ಲ. ವೃತ್ತಿಯಾಗಿ ನಟಿಯರು ಈ ಕ್ಷೇತ್ರವನ್ನು ಆರಿಸಿಕೊಂಡಿರುವುದು ಸ್ವ ಆಸಕ್ತಿ ಹಾಗೂ ಪರಂಪರೆಯಿಂದ ಬಂದಿರುವ ಕಲೆಯನ್ನು ಉಳಿಸಿ ಕೊಂಡು ಬೆಳೆಸುತ್ತಿದ್ದಾರಷ್ಟೇ. ಅದು ಕೂಡ ಸಂಘಟನೆಗಳು ಈ ರೀತಿಯ ಸೇವೆಯನ್ನು ಮಾಡಿವೆ. ಮುಂದೆಯೂ ಮಾಡುತ್ತದೆ. ಆದರೆ ಸರಕಾರದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಮೂಲಕ ಹೊಸರೀತಿಯಲ್ಲಿ ಕಲೆಗೆ ಪ್ರೋತ್ಸಾಹ ನೀಡುವಂಥ ಕಾನೂನುಗಳು, ಸಂಘ-ಸಂಸ್ಥೆಗಳು ಜಾರಿಗೆ ಬಂದರೆ ಕಲೆಗೆ ಪ್ರೋತ್ಸಾಹ ಸಿಕ್ಕು ಉನ್ನತ ಮಟ್ಟದಲ್ಲಿ ರಂಗಭೂಮಿ ಬೆಳೆಯಲು ಪ್ರೇರಕವಾಗುತ್ತದೆ.

ರಂಗ ತರಬೇತಿ ಹಾಗೂ ಶಿಬಿರಗಳನ್ನು ಪದೇ ಪದೇ ಏರ್ಪಡಿಸುವುದರಿಂದ ಎಲ್ಲರಿಗೂ ಅಂದರೆ ಜನ ಸಾಮಾನ್ಯರಿಗೆ "ಕಲಾವಿದರು ಕೀಳು" ಎಂಬ ಮನೋಭಾವವನ್ನು ತಳೆಯಲು ಸಾಧ್ಯವಿಲ್ಲ. ಈ ಚಟುವಟಿಕೆ ಯಿಂದ ಪ್ರತಿಯೊಬ್ಬ ರಂಗಾಸಕ್ತರು ಕ್ರಿಯಾಶೀಲರಾಗಿ ಸಮೂಹಗಳಿಂದ ಹೆಚ್ಚು ಸಂಪರ್ಕವಾಗಿ ಎಲ್ಲದರಲ್ಲೂ ಹೆಚ್ಚಾಗಿ ಪರಸ್ಪರ ಅರಿವು ಮೂಡಿ ಪ್ರಜ್ಞಾವಂತರಾಗಲು ಸಾಧ್ಯವಾಗುತ್ತದೆ.

ತರಬೇತಿ ಶಿಬಿರಗಳಲ್ಲಿ ಪಾಲ್ಗೊಂಡ ನಟ-ನಟಿಯರು ವೈಚಾರಿಕವಾಗಿ ಬೆಳೆದು ವಿಶಾಲದೃಷ್ಟಿಕೋನವನ್ನು ಹೊಂದಿ ಅವರ ರಂಗಜೀವನದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡು ಪ್ರಜ್ಞಾವಂತ, ಪ್ರಬುದ್ಧ ನಟ-ನಟಿಯರಾಗಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಕಲಾವಿದರಿಗೆ ಈ ಶಿಬಿರಗಳಿಂದ ವಿಶ್ವಪ್ರಜ್ಞೆ ಮೂಡಲು ಸಾಧ್ಯವಾಗುತ್ತವೆ. ಇಂಥ ಅನುಕೂಲತೆಯಿಂದ ನಟಿಯರ ಭವಿತವ್ಯ ಉಜ್ವಲವಾಗಲು ಸಾಧ್ಯ. ನಂತರದ

ದಿನಗಳಲ್ಲಿ ನಾವು ರಂಗನಟಿಯರ ಭವಿಷ್ಯವನ್ನು ಹಾಗೂ ರಂಗಪರಂಪರೆಯನ್ನು ಉಜ್ವಲವಾಗಿ ಬೆಳೆಸುವುದಕ್ಕೆ ಸಾಧ್ಯವಾಗುವುದು. ಪ್ರಜ್ಞಾವಂತ ನಟಿಯರಾಗಲು ಕಲೆಯಲ್ಲಿ ಬದಲಾವಣೆಯನ್ನು ಪಡೆದು ನಂತರ ಹೊಸ ಹೊಸ ರಂಗಾನುಭವ ಪಡೆದು ರಂಗಚಟುವಟಿಕೆಗಳನ್ನು ಪಡೆದು ಪ್ರಜ್ಞಾವಂತ ನಟಿಯರಾಗಲು ಸಾಧ್ಯ.

ರಂಗಕಲಾವಿದರೆಲ್ಲರೂ ನೈತಿಕ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಇನ್ನೊಂದೆಡೆ ಎದುರಿಸುತ್ತಿದ್ದಾರೆ.ಇಂಥ ಪರಿಸ್ಥಿತಿಗಳಲ್ಲಿ ಸಾಮಾಜಿಕ ಎಚ್ಚರವನ್ನು ಸಮಾಜದ ಎಲ್ಲ ಚಿಂತಕರು ಹೊಸ ರೀತಿಯ ಪ್ರಯೋಗಗಳನ್ನು ಮಾಡಿ ಅವರ ಪರಿಣಾಮದಿಂದ ಸಮಾಜದ ಬದಲಾವಣೆಯೊಂದಿಗೆ ಮುನ್ನಡೆಯಬೇಕು. ರಂಗಭೂಮಿಯೇ ಜಡವಾಗಿ ಬಿಟ್ಟರೆ, ರಂಗಭೂಮಿಗೆ ಬರುವವರು ಯಾರು? ಪ್ರತಿಯೊಬ್ಬ ರಂಗಕಲಾವಿದರು ಈ ನಿಟ್ಟಿನಲ್ಲಿ ಕಾಳಜಿಯನ್ನು ತೆಗೆದುಕೊಳ್ಳಬೇಕು. ಮೊದಲು ಸಮಾಜದಲ್ಲಿ ರಂಗಭೂಮಿಯ ಬಗ್ಗೆ ಗೌರವ ಮೂಡಬೇಕು. ಅದನ್ನು ಕಲಾವಿದರೆಲ್ಲರೂ ಪೂಜ್ಯನೀಯ ಸ್ಥಾನವೆಂಬಂತೆ ಭಾವಿಸಿದರೆ, ರಂಗಭೂಮಿಯ ಉಜ್ವಲ ಭವಿಷ್ಯಕ್ಕೆ ನಾಂದಿ ಹಾಡಿದಂತಾಗುತ್ತದೆ. ಇದರಿಂದ ವೈಚಾರಿಕ ಪ್ರಜ್ಞೆಯು ಪ್ರಯೋಗಗಳು ನಡೆದು ವಾಸ್ತವ ಜಗತ್ತನ್ನು ಹಲವಾರು ಕಟ್ಟುಮುಷ್ಟಿಗಳಿಂದ, ಮೌಢ್ಯತೆಗಳಿಂದ, ಕೀಳುರಿಮೆಗಳಿಂದ ಹೊಸ ಜಗತ್ತನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ.

ರಂಗನಟಿಯರ ಭವಿತವ್ಯದ ಬೆಳವಣಿಗೆ : ಬಳ್ಳಾರಿ ಜಿಲ್ಲೆಯು ವಿಜಯನಗರಕಾಲದಿಂದಲೂ ಸಾಂಸ್ಕೃತಿಕವಾಗಿ ಮೆರೆದ ಭೂಮಿ. ಒಂದು ಐತಿಹ್ಯದ ಪ್ರಕಾರ ಈ ಭೂಮಿ ವೀರಭೂಮಿ ಎಂದೂ ಕರೆಯುತ್ತಾರೆ. ಅರಸುಶಾಹಿ ಕಾಲದಿಂದಲೂ ಸಂಗೀತ, ಸಾಹಿತ್ಯ, ಕಲೆಗೆ ಮನ್ನಣೆ ಇತ್ತು. ರಾಜರ ಆಸ್ಥಾನದಲ್ಲಿ ಗೋಧೂಳಿ ಸಮಯಕ್ಕೆ ಸರಿಯಾಗಿ ಅರಮನೆಯ ಆವರಣದಲ್ಲಿ ಸಂಗೀತದ ನೀನಾದ ಎಲ್ಲೆಲ್ಲೂ ಕೇಳುತ್ತಿತ್ತು. ಅಲ್ಲಿ ನೃತ್ಯ ಪ್ರದರ್ಶನವನ್ನು ರಾಜರು ಆಸ್ವಾದಿಸುತ್ತಿದ್ದರು. ಈ ನೃತ್ಯಗಾರ್ತಿಯರೇ ಮುಂದೊಂದು ದಿನ ರಂಗನಟಿ, ಸೇವಕಿ, ದೇವದಾಸಿ, ಸಖಿ ಹೀಗೆ ನಾನಾರೀತಿಯಲ್ಲಿ ಪರಿವರ್ತನೆಗೊಂಡು ರಂಗನಟಿಯರಾಗಿದ್ದಾರೆ.

ದೇವದಾಸಿ ಪದ್ಧತಿಯೆಂಬುದು ವೈದಿಕರು ಸೃಷ್ಟಿಸಿದ ಒಂದು ಪ್ರಾಯೋಗಿಕ, ದೈಹಿಕ ನಿಲುವುಗಳ ಒಂದು ವ್ಯವಸ್ಥಿತ ಕೈವಾಡ. ಅದು ಎಂದಿಗೂ 'ಕಲಾ'ನೆಲೆಯಲ್ಲಿ ರೂಪುಗೊಂಡದ್ದಲ್ಲ. ಕ್ರಮೇಣ ರಾಜಶಾಹಿ, ವೈದಿಕ ಶಾಹಿಯ ದೈಹಿಕ ಹಿಂಸೆಗೆ ಪಕ್ಕಾದ ದೇವದಾಸಿಯರು ತಮ್ಮ ಜೀವನಕ್ಕೆ ದಾರಿಯಿಲ್ಲದಾಗ ಈ ಬಗೆಯ ಮನರಂಜನೆಯ ಗೊಂಬೆಯಾದದ್ದು ವ್ಯವಸ್ಥೆಯ ಪುರುಷಶಾಹಿ ಕಾರಣದಿಂದ. ಇದನ್ನು ನಾವು 'ಕಲಾಜನ್ಯ' ಎನ್ನಲಾಗದು. ಅದರ ವಿಸ್ತರಣೆಗೆ ಒಂದು ಅಂಶವಾಗಿ ಸೇರ್ಪಡೆಯಾದದ್ದು, ಇದರೊಂದಿಗೆ ಆಯಾ ಕಾಲದ ದೇವದಾಸಿಯರು purly ಒಂದು ದೈವದ ಆಚರಣೆಯ ಗೊಡ್ಡು ಸಂಪ್ರದಾಯಕ್ಕೆ ಬಲಿಯಾದವರು. ಇಂದಿಗೂ ಆ ವ್ಯವಸ್ಥೆಯಿರುವುದು ಅವರ ಸ್ವ ಆಸಕ್ತಿಯಿಂದಲ್ಲ. ಅವರನ್ನು ಸಮಾಜ ನೋಡುವ, ಬೆರೆಯುವ ಕೌಟುಂಬಿಕ ಬದ್ಧತೆಗಳ ಮಿತಿಯಿಂದಾಗಿ ಅನಿವಾರ್ಯವಾಗಿ ಹೆಣ್ಣು ಒಂದು ಕ್ರೌರ್ಯವಾಗಿಯೇ ಉಳಿದಿರುವುದು ಇಂದಿನ

ಆಧುನಿಕಯುಗದ ಒಂದು ವ್ಯಂಗ್ಯವೇ ಸರಿ. ಈ ಮುಖ್ಯ ಸಂಗತಿಗಳ ಮುಖೇನ ರಂಗನಟಿಯರನ್ನು ನಾವಿಂದು ಅವಲೋಕಿಸಿ ನೋಡಬೇಕಾಗುತ್ತದೆ.

ನೃತ್ಯಗಾರ್ತಿ
|
ಸಖಿ
|
ಸೇವಕಿ
|
ಸಂಗೀತಗಾರ್ತಿ
|
ದಾಸಿ
|
ದೇವದಾಸಿ
|
ರಂಗನಟಿ
|

ಈ ರೀತಿಯಾಗಿ ನಟಿಯರ ಅನನ್ಯತೆಯು ಬದಲಾಗುತ್ತಾ ಬಂದು ಈ ವ್ಯವಸ್ಥೆಯಲ್ಲಿ ನಿಂತಿದೆ. ಯಾವುದೇ ಒಂದು 'ಕಲೆ' ಉಪಜೀವನವಾಗುತ್ತಿದ್ದುದು ಕಳೆದ ಶತಮಾನದ ಒಂದು ಮುಖ್ಯಧಾರೆ. ಆದರೆ ಈ ಹೊತ್ತು ಈ ಉಪಕ್ರಮಗಳು ಇಲ್ಲವಾಗಿವೆ. ಯಾವುದೇ ಕಲೆ, ಕಸುಬು ಆರ್ಥಿಕ ನೆಲೆಯಲ್ಲಿ ತನ್ನನ್ನು ಸ್ಥಿರೀಕರಿಸಿ ಕೊಳ್ಳುವುದು ಇಂದಿನ ವ್ಯವಹಾರಿಕ ಜಗತ್ತಿನ ಮುಖ್ಯ ಅಂಶ. ಆದರೂ ರಂಗಭೂಮಿಗೆ ಬರುವ ನಟಿಯರನ್ನು ಆರ್ಥಿಕ ದೃಷ್ಟಿಯಿಂದ ನೋಡಿದರೆ ಅದಕ್ಕೆ ತಕ್ಕ ಪ್ರತಿಫಲ ಇಂದು ದೊರೆಯುವುದಿಲ್ಲ. ಆದರೆ ಅದೊಂದು ಮನೋಭಾವವೆಂದು ರಂಗವನ್ನು ಬೆಳೆಸುವುದಾದರೆ ಅದೊಂದು ತಾತ್ವಿಕ ಬದ್ಧತೆಯಾಗುತ್ತದೆ. ಕಾನೂನು ಎಂಬುದು ಭಾರತದಂಥ ದೇಶದಲ್ಲಿ ಕಲೆಗೆ ಸಂಬಂಧಿಸಿ ನಿರ್ಭಿಜೀಕರಣಗೊಂಡಿದೆ. ಆದ್ದರಿಂದ ನಾವು ಅದೊಂದು ತಾತ್ವಿಕವಾದ ಮನೋಭಾವ ಎಂದೇ ಬೆಳೆಸಬೇಕಾಗಿದೆ. ಅಂಥ ಅನಿವಾರ್ಯತೆ ಇರುವುದರಿಂದ ಇಂದು ರಂಗನಟಿಯರಿಗೆ ನಾವು ಭವಿತವ್ಯದ ದೃಷ್ಟಿಯಿಂದ ಹೇಳುವುದಾದರೆ ಆರ್ಥಿಕವಾಗಿ ಸರಕಾರದ ಭದ್ರತೆ ಇನ್ನೂ ಇಲ್ಲ. ಆದರೆ ನಟಿಯಾಗಿ ಅವರ ಶ್ರಮದಿಂದ ಬಂದಿರುವ ಹಣದಿಂದಲೇ ಇಂದು ಎಷ್ಟೋ ನಟಿಯರು ಜೀವನವನ್ನು ಸಾಗಿಸುತ್ತಿದ್ದಾರೆ. ಆದರೂ ಕೆಲವರ ಆರ್ಥಿಕ ಸ್ಥಿತಿಯು ಉತ್ತಮವಾಗಿದ್ದು ಇನ್ನು ಕೆಲವರ ಸ್ಥಿತಿ ಗಂಭೀರವಾಗಿದೆ. ಬಡತನದ ಬೇಗೆಯಲ್ಲಿ ಬಳ್ಳಾರಿ ಜಿಲ್ಲೆಯ ಬಹುಪಾಲು ರಂಗನಟಿಯರು ತೊಳಲಾಡುತ್ತಿದ್ದಾರೆ.

ರಂಗ ನಟಿಯರ ತೆರೆಯ ಮುಂದಿನ ಬದುಕು ಒಂದು ರೀತಿಯದಾದರೆ, ಅವರ ತೆರೆಯಮರೆಯ ಬದುಕೇ ಊಹಿಸಲಸದಳ. ರಂಗ ನಟಿಯರಿಗೆ ಕಾನೂನಿನ ಮೂಲಕ ಯಾವುದೇ ನಿರ್ದಿಷ್ಟವಾದ ಆದ್ಯತೆ ದೊರೆತಿಲ್ಲ. ಸಮಾಜದಲ್ಲಿ ಅವರೊಂದಿಗೆ ಮನೋರಂಜನೆಯನ್ನು ನೀಡುವ ಕಲಾವಿದೆಯರ ನೆನಪು ಬರುವುದು ಗ್ರಾಮೀಣ ಹವ್ಯಾಸಿ ಕಲಾವಿದರು ಹಬ್ಬ-ಹರಿದಿನ, ಜಾತ್ರೆಗಳಲ್ಲಿ ನಾಟಕವಾಡುವಾಗ ಮಾತ್ರ. ನಾಟಕ ಮುಗಿದಾದ ಮೇಲೆ ಅವರ ಜೀವನ, ಅವರ ದೈನಂದಿನ ಬದುಕು ಇವು ಯಾವುದರ ಬಗ್ಗೆಯೂ ಯಾರೂ ಚಿಂತಿಸುವುದಿಲ್ಲ. ಬದಲಾಗಿ ಅವರು ರಂಗಭೂಮಿಯ ಸಾಧನವಾಗಿ ಪರಿಗಣಿಸಲ್ಪಟ್ಟಿದ್ದಾರೆ. ರಂಗಭೂಮಿಯನ್ನು ಬೆಳೆಸುವುದಾದರೆ ಮೊದಲು ಅದಕ್ಕೆ ಕಾನೂನಿಗೆ ಒಳಪಟ್ಟೇ ಚಟುವಟಿಕೆಗಳು ಆರಂಭವಾಗಬೇಕು. ಇಂಥ ಸಂದರ್ಭವಿದ್ದರೆ ಅದಕ್ಕೆ ಕಾನೂನಿನ ಚೌಕಟ್ಟು ಒದಗಿ ಅಲ್ಲಿ ದೃಢವಾದ ಶಿಸ್ತುಬದ್ಧ ವ್ಯವಸ್ಥೆ ಕಂಡುಬರುತ್ತದೆ. ಉದಾ: ಇತ್ತೀಚೆಗೆ ಪ್ರಾರಂಭಗೊಂಡಿರುವ ಮೈಸೂರಿನ 'ರಂಗಾಯಣ' ಇಲ್ಲಿಯ ಎಲ್ಲ ಕಲಾವಿದರೂ ಈಗ ಸರಕಾರಿ ನೌಕರರಂತೆ ರಂಗಭೂಮಿಗಾಗಿ ದುಡಿಯುತ್ತಿದ್ದಾರೆ. ಜೊತೆಗೆ ಉಪಜೀವನಕ್ಕಾಗಿ ನಟಿಯರು ಇದನ್ನು ಅನುಕರಿಸದೇ ಇದೊಂದು ಹವ್ಯಾಸವಾಗಿ ಅವರು ಬೆಳೆಸಿಕೊಂಡರೆ ಅದು ತಾತ್ವಿಕ ಬದ್ಧತೆಯಾಗುತ್ತದೆ.

ಸಿನೇಮಾದಲ್ಲಿ ನಟಿಸುವ ನಟ-ನಟಿಯರಿಗೂ ರಂಗಭೂಮಿಯಲ್ಲಿ ನಟಿಸುವ ನಟ-ನಟಿಯರಿಗೂ ಹೆಚ್ಚು ಅಂತರವಿದೆ. ಸಿನೇಮಾದಲ್ಲಿರುವಂತೆ, ಪ್ರಚಾರ, ಸಂಭಾವನೆ, ಸುಖ, ರಂಗಭೂಮಿ ನಟ-ನಟಿಯರಿಗೆ ಸಿಗುವುದಿಲ್ಲ. ಹೆಚ್ಚೆಂದರೂ ಆ ಭಾಗದಲ್ಲಿ ಪ್ರಚಾರ ಸ್ವಲ್ಪಮಟ್ಟಿಗೆ ಸಿಗಬಹುದು. ಮಂಡಳಿಗಳು (ಸಂಘ, ಸಂಸ್ಥೆಗಳು) ಹೆಚ್ಚಾಗಿ ದಿವಾಳಿಯಾಗಿದ್ದು, ವರ್ಷಕ್ಕೆ ಒಂದೆರಡು ನಾಟಕಗಳನ್ನು ಮಾಡುವುದೇ ಭಗೀರಥ ಯತ್ನವಾಗಿರುವಾಗ, ಪಾತ್ರಧಾರಿಗೆ ಸಂಭಾವನೆಯನ್ನು ಕೊಡುವ ಮಾತು ಇರಲಿ ಒಂದು ಕಪ್ ಚಹಕೊಟ್ಟರೆ ಅದು ಪುಣ್ಯದ ಮಾತಾದೀತು.

ರಂಗಭೂಮಿಯಲ್ಲಿ ಒಂದು ಆಕರ್ಷಣೆ ಇದೆ. ಅಲ್ಲಿ ಸಿನಿಮಾದಷ್ಟೇನೂ ಪೈಪೋಟಿ ಕಂಡುಬರುವುದಿಲ್ಲ. ನಟಿಯರ ಸ್ಪರ್ಧೆ ಇದ್ದರೆ ರಂಗಭೂಮಿಯ ಕೊರತೆ ಇದೆ. ಸಿನಿಮಾದಲ್ಲಿ ಬ್ರಾ ಬಿಚ್ಚಿ ಕುಣಿಯುವ ನಟಿಯರು ರಂಗಭೂಮಿಕೆಯಲ್ಲಿ ಮೈತುಂಬಾ ಬಟ್ಟೆ ಹಾಕಿಕೊಂಡು, ಮೈತುಂಬಾ ಸೆರಗೊದ್ದು ನಟಿಸಲು ಅಂಜುತ್ತಾರೆ. ಆದರೆ ಸಿನಿಮಾಕ್ಕಿಂತಲೂ ರಂಗಭೂಮಿಯಲ್ಲಿ ಭಿನ್ನ ಅನುಕೂಲತೆಗಳಿದ್ದು, ಸ್ವಲ್ಪ ಧೈರ್ಯ, ಉತ್ಸಾಹ, ಪ್ರತಿಭೆ ಇದ್ದರೆ ರಂಗಭೂಮಿಯಲ್ಲಿ ಮೇಲೆ ಬರುವ ಸಾಧ್ಯತೆ ಇದೆ. ಇದರ ಜೊತೆಗೆ ತಮ್ಮ ಮನೆಯ ಬುಡದಲ್ಲೇ ಇದ್ದುಕೊಂಡು ನಾಟಕದಲ್ಲಿ ಭಾಗವಹಿಸಬಹುದಾಗಿದೆ. ಜೊತೆಗೆ ವ್ಯಾಸಂಗವನ್ನೂ ಮುಂದುವರಿಸಬಹುದು. ಸಿನಿಮಾ ಸಂಖ್ಯೆ ಮತ್ತು ನಾಟಕಗಳ ತಯಾರಿ ಸಂಖ್ಯೆಯನ್ನು ನೋಡಿದಾಗ ಈ ಮಾತು ಇನ್ನು ಹೆಚ್ಚು ಸ್ಪಷ್ಟವಾಗುತ್ತದೆ. ಇಡೀ ರಾಜ್ಯದಲ್ಲೇ ಸಾವಿರಾರು ನಾಟಕಗಳು ಪ್ರತೀ ದಿನವೂ ಪ್ರದರ್ಶಿತವಾಗುತ್ತಿವೆ. ಸಿನಿಮಾಗಳ ಸಂಖ್ಯೆ ನೂರಾರುಗಟ್ಟಲೇ ಮಾತ್ರ.

ಇಷ್ಟೆಲ್ಲಾ ಇದ್ದರೂ ಕೂಡ ರಂಗಭೂಮಿಯು ನಟಿಯರನ್ನು ಆಕರ್ಷಿಸದಿರುವುದು ಒಟ್ಟಾರೆ ರಂಗಭೂಮಿಯ ದುರಂತವೇ ಸರಿ. ಯಾವ ಸಮಾಜದಲ್ಲಿ ಹೊಸ ಆಲೋಚನಾ ಶಕ್ತಿ ಹುಟ್ಟದೇ ಯಾವುದೋ ಪೂರ್ವಕಾಲದ ಪದ್ಧತಿಯನ್ನು ಅನುಸರಿಸುತ್ತಾ ಇರುತ್ತದೋ ಅಲ್ಲಿಯವರೆಗೂ ನಮ್ಮ ಪ್ರತಿಭಾವಂತ ನಟಿಯರು ರಂಗ ಭೂಮಿಯ ಮೇಲೆ ಮೆರೆಯಲು ಸಾಧ್ಯವಾಗುತ್ತದೆ. ತಮ್ಮ ಹೆಣ್ಣು ಮಕ್ಕಳಿಗೆ ನಾಟಕದಲ್ಲಿ ಭಾಗವಹಿಸುವ ಅವಕಾಶ ನೀಡಲು ಧೈರ್ಯ ಮಾಡುವುದೇ ಇಲ್ಲ. ಮೊದಮೊದಲು ಹುಡುಗಿಯರನ್ನು ನೋಡಿ ಜನರು ಆಶ್ಚರ್ಯ ಪಟ್ಟು ಮೂಗಿನ ಮೇಲೆ ಕೈ ಇಟ್ಟಿದ್ದು ಉಂಟು. ಹೊಟ್ಟೆಕಿಚ್ಚು ಪಟ್ಟು ನಿಂದನೆ ಮಾಡಿರುವುದೂ ಉಂಟು. ಆದರೆ ಇಂದು ಈ ಸಮಸ್ಯೆಗಳೇ ಇಲ್ಲ. ಕಾರಣ ಆಗಿನ ಸಮಾಜದ ಸ್ಥಿತಿ-ಗತಿ ಗಲಾಟೆಗಳನ್ನು ಆಲಿಸದೇ ಅವರು ಕಚೇರಿಗಳಲ್ಲಿ ಪುರುಷರೊಂದಿಗೆ ಕೆಲಸ ಮಾಡಿ ಸೈ ಎನಿಸಿಕೊಂಡಿದ್ದಾರೆ. ಈಗ ಆ ಪ್ರಶ್ನೆಯನ್ನು ಯಾರೂ ಎತ್ತುವುದಿರಲಿ ಏಕೆಂದರೆ ಈಗ ಕಚೇರಿಗಳಲ್ಲಿ ಪುರುಷರಿಗಿಂತಲೂ ಮಹಿಳೆಯರೇ ದಕ್ಷರೆನಿಸಿ ಕೊಂಡಿದ್ದಾರೆ.

ಒಂದು ನಾಟಕ ಕಂಪನಿಯು ನಟಿಯರನ್ನು ಸೇರಿಸಿಕೊಂಡರೆ ಸಾವಿರ ಸಮಸ್ಯೆಗಳನ್ನು ನಾವು ಆಹ್ವಾನಿಸುತ್ತಿದ್ದೇವೆ ಎಂದೇ ಅರ್ಥ. ಮಾತನಾಡುವ ನಾಲಿಗೆಗೆ ಇದು ಆಹಾರವಾಗಿ ಬಿಡುತ್ತದೆ. ಇವುಗಳನ್ನೆಲ್ಲಾ ಸ್ವೀಕರಿಸಬಲ್ಲ, ಎದೆತಟ್ಟಿ ನಿಲ್ಲುವವರು ಮಾತ್ರ ನಟಿಯರನ್ನು ಕರೆದುಕೊಂಡು ನಾಟಕ ಮಾಡುತ್ತಾರೆ. ಒಂದು ಕಾಲದಲ್ಲಿ ವೃತ್ತಿ ರಂಗಭೂಮಿಗಳಲ್ಲಿ ನಟಿಯರಿದ್ದರೆ ಹಲವಾರು ಸಮಸ್ಯೆಗಳು ಬರುತ್ತವೆ, ಕಂಪನಿಗಳು ಒಡೆದು ಹೋಗುತ್ತವೆ ಎಂಬ ಮನೋಭಾವನೆಯು ಎಷ್ಟೋ ವರ್ಷಗಳ ಕಾಲ ಇದ್ದು ನಂತರದ ದಿನಗಳಲ್ಲಿ ಆ ಮನೋಭಾವನೆಯು ಬದಲಾಗುತ್ತಾ ಹೋಯಿತು. ತದನಂತರ ಮಹಿಳೆಯರೇ ಸ್ವತಃ ನಾಟಕ ಮಂಡಳಿಗಳನ್ನು ಕಟ್ಟಿಕೊಂಡು ರಾಜ್ಯದಲ್ಲೆಲ್ಲಾ ನಾಟಕ ಪ್ರದರ್ಶನವನ್ನು ಮಾಡಿದರು.

ರಂಗಭೂಮಿಗೆ ಮಹಿಳೆಯ ಪ್ರವೇಶವಾದ ಕೂಡಲೇ ಲೈಂಗಿಕ ಸಂಬಂಧವಾದ ಕಲಂಕವನ್ನು ಹೊರಿಸುವುದು ಒಂದು ಪರಿಪಾಠವಾಗಿದೆ. ನಿಮ್ಮ ಮಗಳು ನಾಟಕದಲ್ಲಿ ಹುಡುಗರೊಂದಿಗೆ ಪಾರ್ಟು ಮಾಡ್ತಾಳಂತೆ, ಮದುವೆ ಆಗಲಾರದು, ಕೆಲವೊಮ್ಮೆ ಗಂಡಿನ ಕಡೆಯವರಿಗೆ ಚಾಡಿ ಮಾತನ್ನು ಹೇಳಿ ಮದುವೆಯನ್ನು ಮುರಿದ ದಾಖಲೆಗಳು ಎಷ್ಟೋ ನಿದರ್ಶನಗಳು ಇವೆ. ಸಾಮಾನ್ಯವಾಗಿ ಸೈನಿಕರಿಗೆ ಯಾವ ನೈತಿಕತೆ ಬಗ್ಗೆ ಹೇಳುತ್ತೇವೋ ಅದೇ ರೀತಿ ನಟಿಯರಿಗೆ ಹೇಳುತ್ತೇವೆ. ಇದರಿಂದ ಒಂದು ವಿಷಯವನ್ನು ನಾವು ಚನ್ನಾಗಿ ಅರಿಯಬಹುದು. ಜನರು ಕಲೆಯನ್ನು ಪ್ರೀತಿಸುತ್ತಾರೆ, ಕಲಾವಿದರ ಖಾಸಗಿ ಬದುಕನ್ನು ಸ್ವೀಕರಿಸುವುದೇ ಇಲ್ಲ.

ನಾವು ರಂಗಭೂಮಿಯ ಪಾವಿತ್ರ್ಯವನ್ನರಿಯದೇ ಕೆಲವರು ಅಮಂಗಲಕರವಾಗಿ ವರ್ತಿಸಿದ ಉದಾಹರಣೆ ಗಳೂ ಇವೆ. ಇದು ರಂಗಭೂಮಿಗೆ ನೇರವಾಗಿ ಸಂಬಂಧಿಸದೇ ಆ ವ್ಯಕ್ತಿಯ ಚಾರಿತ್ರ್ಯವನ್ನೇ ಅದು ಅವಲಂಬಿಸಿದೆ. ದೋಷ ಇರುವುದು ರಂಗಭೂಮಿಯಲ್ಲಲ್ಲ. ರಂಗಭೂಮಿಗೆ ಬಂದ ನಟ-ನಟಿಯರೊಡನೆ ನಾಟಕವಾಡುವ ನಿರ್ವಾಹಕನ ಕಣ್ಣು ತಪ್ಪಿಸಿ ಸುಖಪಡುವ ಅವಕಾಶಗಳು ಇರುತ್ತವೆ. ಆದರೆ ಇಂಥ

ಅವಕಾಶವನ್ನು ದುರುಪಯೋಗ ಮಾಡಿರಲಾರದ ಅನೇಕ ನಟಿಯರು ನಮ್ಮ ಮುಂದೆ ಇದ್ದಾರೆ. ನಿಜಕ್ಕೂ ಅವರು ಅಭಿನಂದನಾರ್ಹರೇ ಸರಿ. ರಂಗದ ಮೇಲೆ ಕಾಣಿಸಿಕೊಳ್ಳುವ, ಪ್ರಚಾರವೂ ಸಿಗದ ಪ್ರೇಕ್ಷಕರೇ ಗುರುತಿಸದ ಅಂದರೆ ರಂಗನಟಿಯರ ತಂದೆ, ತಾಯಿಗಳು ಮಗಳ ಭವಿಷ್ಯದ ಮೇಲೆ ಸದಾ ಕಣ್ಣಿಟ್ಟು ಕಾಯುತ್ತಿರುವ ಇವರ ಸಮಾಜದ ಹುಚ್ಚು ಪೆದ್ರಿಕ್ಕಿ ನಾಯಿಗಳ ಕಣ್ಣು ಮಗಳ ಮೇಲೆ ಬಿದ್ದೀತು ಎಂಬ ಭಯವನ್ನು ಬದಿಗೊತ್ತಿ ಕಲಾಸೇವೆಯನ್ನು ಮಾಡುತ್ತಿರುವ ತಪಸ್ವಿಗಳು ನಟಿಯರಿಗಿಂತಲೂ ಹೆಚ್ಚು ಪಾಲು ಅಭಿನಂದನೆಗಳು ನಟಿಯರ ಪೋಷಕರಿಗೆ ಸಲ್ಲಬೇಕಾಗಿದ್ದೇ ಆಗಿದೆ.

ರಂಗಭೂಮಿಯ ಪಾವಿತ್ರ್ಯವನ್ನು ಕಾಪಾಡಿಕೊಂಡುಬರುವುದು ಬರೀ ನಟಿಯರ ಕರ್ತವ್ಯವೇನಲ್ಲ. ಪ್ರತಿಯೊಬ್ಬ ಕಲಾಕಾರನು ತನ್ನ ದೇಹದ ಮತ್ತು ಮನಸ್ಸಿನ ಪಾವಿತ್ರ್ಯವನ್ನು ಪಾಲಿಸುವ ಅವಶ್ಯವಿದೆ. ಕಲಾವಿದನ ನಿಷ್ಕಳಂಕ ಜೀವನದಿಂದಲೇ ಜನರಿಗೆ ಕಲೆಯ ಮೇಲಿರುವ ಅಭಿಮಾನವು ನೂರುಪಟ್ಟು ಹೆಚ್ಚಾಗುವುದು. ಹೀಗಾದಲ್ಲಿ ಮಾತ್ರ ಮಹಿಳೆಯರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಲು ಮುಂದೆ ಬರುತ್ತಾರೆ. ನಮ್ಮ ಜನತೆಯೇ ಹೀಗೆ ಏನೋ ಆಯಿತು ಎಂದರೆ ಏನೆಲ್ಲಾ ಆಗಿ ಹೋಗಿದೆ ಎಂದು ಬಿಡುತ್ತಾರೆ. ಹಾಗೆಯೇ ಅವಸರದ ತಿರ್ಮಾನಕ್ಕೆ ಬರುವುದೂ ಉಂಟು. ರಂಗಭೂಮಿಗೆ ಬರುವ ಸ್ತ್ರೀಯರನ್ನು ಕೆಟ್ಟವರೆಂದು ಗ್ರಹಿಸುವುದೇ ಮೂಲಭೂತ ತಪ್ಪು. ಪುರುಷರೊಂದಿಗೆ ನಟಿಸುವ ಸ್ತ್ರೀಯರೆಲ್ಲರನ್ನು ಕೆಟ್ಟವರೆಂದು ಭಾವಿಸುವುದು ಜನರ ಕೀಳುಮನೋಭಾವನೆಯನ್ನು ಎತ್ತಿತೋರಿಸುತ್ತದೆ. ಈ ಮನೋಭಾವನೆ ತೊಲಗಲು ನಟಿಯರು ಹೆಚ್ಚು ಹೆಚ್ಚು ವಿದ್ಯಾವಂತರಾಗಬೇಕು. ಇಡೀ ಸಮಾಜದಲ್ಲಿ ಎಲ್ಲರೂ ವಿದ್ಯಾವಂತರಿದ್ದರೆ ಇಂಥ ಪರಿಸ್ಥಿತಿಯಲ್ಲಿ ನಾವು ಬದಲಾವಣೆಯನ್ನು ನಿರೀಕ್ಷಿಸಬಹುದು.

ಸ್ತ್ರೀವಾದಿಗಳು ರಂಗನಟಿಯರ ಬಗ್ಗೆ ತೆಗೆದುಕೊಂಡು ಎಚ್ಚರಗಳು

ಹಲವಾರು ಸ್ತ್ರೀವಾದಿಗಳು ರಂಗನಟಿಯರ ಬಗ್ಗೆ ಸಂಶೋಧನೆಯಲ್ಲಿ ತೊಡಗಿದ್ದಾರೆ. ವೇದಿಕೆಗಳಲ್ಲಿ ಅವರ ಸ್ಥಿತಿಗತಿಗಳ ಬಗ್ಗೆ ಮಾತನಾಡುತ್ತಾರೆ. ಬರವಣಿಗೆಯಲ್ಲಿ ಇವರ ಸೇವೆಯನ್ನು ಶ್ಲಾಘಿಸಿ ಬರೆಯುತ್ತಾರೆ. ಆದರೆ ಅಥೆಂಟಿಕ್ ಆಗಿ ಯಾರೂ ಇವರ ದೈನಂದಿನ ಬದುಕು-ಬವಣೆಗಳ ಬಗ್ಗೆ ಸಾಮಾಜಿಕ ಸುಧಾರಣೆಯಾಗಲಿ ಅಥವಾ ಆರ್ಥಿಕವಾಗಿ ಯಾವುದೇ ನೆಲೆಯನ್ನು ನಿಲ್ಲಲು ಸರಕಾರದಿಂದ ನೆರವಿನ ಯೋಜನೆ ಕಾರ್ಯರೂಪಕ್ಕೆ ತಂದಿಲ್ಲ. ಮಾಸಾಶನ ಬರುತ್ತಿದ್ದರೂ ಅದು ಎಷ್ಟರಮಟ್ಟಿಗೆ ಅವರಿಗೆ ತಲುಪುತ್ತಿದೆ ಎಂಬುದೊಂದು ಪ್ರಶ್ನೆ. ಆದರೆ ಇಂದು ಕೆಲವು ರಂಗನಟಿಯರು ಮಾಸಾಶನ ಪಡೆಯುತ್ತಿದ್ದಾರೆ. ಇನ್ನೂ ವಿಶೇಷವೆಂದರೆ ಇವರ ಮಕ್ಕಳು ಹಾಗೂ ಮೊಮ್ಮಕ್ಕಳು ಕುಟುಂಬದ ಇತರ ಸದಸ್ಯರಿಗೆ ತಲುಪಿ ಮುಪ್ಪಿನ ಕಾಲದಲ್ಲಾದರೂ ನಟಿಯರು ತಮ್ಮ ದುಡಿಮೆಗೆ ತಕ್ಕದಾದ ಫಲವನ್ನು ಪಡೆಯದಿರುವಂಥ ಬಿಕ್ಕಟ್ಟಿನ ಪರಿಸ್ಥಿತಿಯು ನಮ್ಮಲ್ಲಿದೆ. ಪ್ರತಿಭಾವಂತ ನಟಿಯರಿದ್ದರೂ ಅವರನ್ನು ಯಾರೂ ಗಮನಿಸುತ್ತಿಲ್ಲ. ಇದಕ್ಕೆ ಅದನ್ನು ಸರಕಾರ ಮತ್ತು ರಂಗನಟಿಯರು ಸಂಬಳ್ಳಿ ವಿವರಿಸಲಾಗಿದೆ.

ಒಂದು ವ್ಯವಸ್ಥೆಯನ್ನು ಪಲ್ಲಟಗೊಳಿಸಬೇಕಾದರೆ ಅದಕ್ಕೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಘರ್ಷಗಳ ಅನಿವಾರ್ಯತೆ ಇದೆ. ಆದರೆ ಶಾಸನಗಳ ಮೂಲಕ ಅವುಗಳನ್ನು ಜಾರಿಗೆ ತರುವುದು ಕಷ್ಟ ಸಾಧ್ಯ. ಈ ನಿಟ್ಟಿನಲ್ಲಿ ಸ್ತ್ರೀವಾದಿಗಳು ನಟಿಯರ ಬಗ್ಗೆ ಎಚ್ಚರವನ್ನು ಕೈಗೊಂಡರೆ ಇಲ್ಲಿ ನಟಿಯರ ಭದ್ರತೆಗೆ ಒಂದು ಹಂತದ ಬೆಳವಣಿಗೆ ಯಾಗಲು ಸಾಧ್ಯವಾಗುತ್ತದೆ.

ಸರಕಾರ ಮತ್ತು ರಂಗನಟಿಯರು : "ಕಲಾವಿದರ ಕಲೆ ಪ್ರೌಢವಾಗಬೇಕಾದರೆ ಅವರ ಜೀವನ ಉತ್ತಮವಾಗಿ ರಬೇಕು". ಅಂದಾಗ ಮಾತ್ರ ಕಲೆ ಅರ್ಥವಂತಿಕೆಯನ್ನು ಪಡೆಯಲು ಸಾಧ್ಯ. ಇದುವರೆಗೂ ಸರಕಾರವಾಗಲೀ ಅಥವಾ ಸಮಾಜಸೇವೆಗೆ ಸಂಬಂಧಿಸಿದ ಯಾವುದೇ ಸಂಘ-ಸಂಸ್ಥೆಗಳಾಗಲಿ ರಂಗನಟಿಯರ ಸೇವೆಯನ್ನು ಗುರುತಿಸಿ ಅವರಿಗೆ ಮಾಶಾಸನವಾಗಲೀ ಅಥವಾ ಭದ್ರತೆಯನ್ನಾಗಲೀ ಒದಗಿಸಿಲ್ಲ. ತಮಗೆ ಬೇಕಾದಾಗ ಮಾತ್ರ ಇವರನ್ನು ಬಳಸಿಕೊಂಡು ನಂತರ ಅವರ ಇರುವಿಕೆಯನ್ನೇ ಮರೆತುಬಿಡುತ್ತಾರೆ. ಮಾಸಾಶನ ನೀಡು ತ್ತಿದ್ದರೂ ಅದು ಸಂಪೂರ್ಣವಾಗಿ ನಟಿಯರನ್ನು ತಲುಪದೇ ಇರಲು ಹಲವಾರು ರಾಜಕೀಯ ಹಾಗೂ ಸಾಮಾಜಿಕ ಕಾರಣಗಳೂ ಇವೆ. ಅಂದರೆ ರಾಜಕೀಯವಾಗಿ ಯಾವ ಪಕ್ಷ ಆಡಳಿತದಲ್ಲಿ ದೆಯೋ ಅಥವಾ ಆ ರಾಜಕೀಯ ವ್ಯಕ್ತಿಗಳು ತಮಗೆ ಪರಿಚಯವಿರುವ ತಮಗೆ ಬೇಕಾದವರಿಗೆ ಮಾತ್ರ ಮಾಸಾಶನ ಮಾಡಿಸಿ ಇನ್ನುಳಿದವರಿಗೆ ದಾಖಲೆಯಲ್ಲಿ ಕೂಡ ಸೇರಿಸಿಕೊಳ್ಳದೇ ಇರುವ ದುರಂತ ನಮ್ಮ ನಟಿ ಯರದಾಗಿದೆ. ಹಳ್ಳಿಯ ರಾಜಕೀಯ ಕುತಂತ್ರಗಳೂ ಕೂಡ ನಟಿಯರ ಜೀವನದಲ್ಲಿ ಆಟವಾಡುತ್ತದೆ.

ನಟಿಯರು ವೃದ್ಧಾಪ್ಯದಲ್ಲಿ ಮಕ್ಕಳು, ಮೊಮ್ಮಕ್ಕಳು ಅಥವಾ ರಕ್ತಸಂಬಂಧಿಗಳೊಂದಿಗೆ ವಾಸಿಸುತ್ತಿದ್ದು ಕೆಲವೊಮ್ಮೆ ನಟಿಯರಿಗೆ ತಮ್ಮ ಮಾಸಾಶನ ತಮಗೇ ತಲುಪದಂಥ ಪರಿಸ್ಥಿತಿಯಾಗಿದೆ. ಇಂಥ ಸಂದರ್ಭ ನಟಿಯರು ಬದುಕಿನ ಅನಿವಾರ್ಯತೆಗಾಗಿ ಕೂಲಿ ಮಾಡಿ ಜೀವನ ಸಾಗಿಸಿದ್ದಾರೆ. ಬಾಳಸಂಗಾತಿಯಾಗಿ ಬಂದಿರು ವಂಥವರೂ ಕೈಬಿಟ್ಟಾಗ ಬೇರೆ ದಾರಿಕಾಣದೇ ರಂಗಭೂಮಿಯಲ್ಲಿ ಅವರ ಜೀವನ ನಿರ್ವಹಣೆಗೆ ಹಣ ಸಾಕಾಗದಾಗ ಕೂಲಿಗೆ ಕೈ ನೀಡಿರುವುದು ಸಹಜವೇ ಆಗಿದೆ. ಸಾಮಾಜಿಕವಾಗಿ ಕೌಟುಂಬಿಕ ಹೊಣೆಹೊತ್ತಿರುವ ನಟಿಯರು ನಿರ್ವಹಣೆಗಾಗಿ ಕೆಲವರು ಮಾಸಾಶನ ಸಾಲದೇ ಕೂಲಿಗೂ ಹೋಗುತ್ತಿದ್ದು ಕೆಲವರ ಕೌಟುಂಬಿಕ ಜೀವನವಂತೂ ಬೀದಿಪಾಲಾಗಿ ಇಂದಿಗೂ ಜ್ವಲಂತ ನಿದರ್ಶನಗಳು ನಮ್ಮ ಕಣ್ಣಮುಂದಿರುವ ಕುಟುಂಬಗಳೇ ದ್ಯೋತಕವಾಗಿವೆ.

ಕೆಲವು ನಟಿಯರಿಗೆ ಸರಕಾರವು ನಮಗೋಸ್ಕರ ಇದೆ. ಅದರಿಂದ ಪ್ರಯೋಜನವನ್ನು ನಾವು ಪಡೆದು ಕೊಳ್ಳಬೇಕು. ನಮ್ಮ ಸೇವೆ ಅಮೂಲ್ಯ ಹಾಗೂ ಗಣನೀಯ. ಅದಕ್ಕೆ ಯಾವತ್ತೂ ಪ್ರಾತಿನಿಧ್ಯ ಹಾಗೂ ಬೆಲೆ ಇದ್ದೇ ಇರುತ್ತದೆ ಎಂಬ ಅರಿವೇ ರಂಗನಟಿಯರಿಗಿಲ್ಲ. ಅದಕ್ಕೆ ಅನಕ್ಷರತೆ, ಮಾಧ್ಯಮದ ಕೊರತೆ ಹಾಗೂ ಸರಕಾರದ ನಿರ್ಲಕ್ಷ್ಯತೆಯೂ ಕಾರಣವಾಗಿದೆ. ಕನ್ನಡ ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ, ಮಹಿಳಾ ಮತ್ತು

ಮಕ್ಕಳ ಕಲ್ಯಾಣ ಇಲಾಖೆ ಈ ಎಲ್ಲಾ ಇಲಾಖೆಗಳಿದ್ದರೂ ರಂಗನಟಿಯರಿಗೆ ಸರಕಾರದಿಂದ ಸಂಪೂರ್ಣ ಸವಲತ್ತು ಅವರಿಗೆ ತಲುಪಿಯೇ ಇಲ್ಲ. ಕೆಲವರಿಗೆ ತಲುಪಿದರೂ ಅದರಿಂದ ಅವರಿಗೆ ತೃಪ್ತಿಯೇ ಆಗಿಲ್ಲ. ಉದಾ: ಸೆರೆಗಾರ ಗಂಗಮ್ಮ, ಮರಿಯಮ್ಮನಹಳ್ಳಿ "ನಾನು ಮಕ್ಕಳ ಭವಿಷ್ಯ ಹಾಗೂ ನನ್ನ ಕುಟುಂಬ ಮುನ್ನಡೆಸಿದ್ದೇನೆ. ಆದರೆ ಸರಕಾರದ ಯಾವ ಅನುಕೂಲತೆ ನನಗೆ ತಲುಪಿಯೇ ಇಲ್ಲ" ಎನ್ನುತ್ತಾರೆ. ಅಂದರೆ ನಟಿಯರಿಗೆ ಕಲಾಸೇವೆಗೆ ಸರಕಾರದ ಮಾನ್ಯತೆ ಇದೆ ಎಂಬ ತಿಳುವಳಿಕೆಯೇ ಅವರಿಗೆ ಇಲ್ಲ.

ವಟಮನಹಳ್ಳಿ ಜಾರಿಕರ ಹುಲಿಗೆಮ್ಮ "ನೀವು ನಮ್ಮ ಬಗ್ಗೆ ಬರೆದುಕೊಂಡು ಹೋಗಿ ಏನು ಮಾಡುತ್ತೀರಿ ಇದರಿಂದ ನೀವು ಸರಕಾರದ ಹಣವನ್ನು ತೆಗೆದುಕೊಳ್ಳುತ್ತೀರೇನೋ? ನಾವು ನಿಮಗೆ ಫೋಟೋ ಆಗಲಿ ಯಾವ ಮಾಹಿತಿಯನ್ನು ನೀಡುವುದಿಲ್ಲ. ನೀವು ಯಾರೋ ಏನೋ? (ಹಗರಿಬೊಮ್ಮನಹಳ್ಳಿ ತಾಲೂಕು ವಟಮನಹಳ್ಳಿ ಕ್ಷೇತ್ರಕಾರ್ಯ ಸಂದರ್ಶನ ಸಂದರ್ಭ, ಏಪ್ರಿಲ್ ೪, ೨೦೦೩).

ಸರಕಾರ ಕಾನೂನಿನನ್ವಯ ಮಾಸಾಶನವನ್ನು ಜಾರಿಗೊಳಿಸಿದೆ. ಆದರೆ ಅದರ ಪ್ರಮಾಣ ತುಂಬಾ ಕಡಿಮೆ. ಜೊತೆಗೆ ನಟಿಯರ ಮನೆಯಲ್ಲಿ ವಿದ್ಯಾವಂತರಿದ್ದರೆ ಅವರಿಗೆ ಮಾಸಾಶನ ಪಡೆಯುವುದು ಅಷ್ಟು ಕಷ್ಟವಾಗುವುದಿಲ್ಲ. ಆದರೆ ನಟಿಯರೇ ಪರದಾಡಿ ಮಾಸಾಶನ ಮಾಡಿಸಿಕೊಂಡದ್ದು ಭಗೀರಥ ಸಾಹಸವೇ ಆಗಿದೆ. ಇನ್ನು ಮುಂದೆ ಮಾಸಾಶನ ಪಡೆಯಬೇಕೆಂಬ ನಟಿಯರು ತಮ್ಮ ನಾಟಕದ hand bill, ತಮ್ಮ ಪಾಸ್‌ಪೋರ್ಟ್ ಸೈಜಿನ ಫೋಟೋ, ಆದಾಯದ ಪತ್ರ ಹೀಗೆ ಹಲವಾರು ದಾಖಲಾತಿಗಳನ್ನು ಸರಿಯಾಗಿ ಬರೆಯಿಸಿಕೊಂಡು ಕನ್ನಡ ಸಂಸ್ಕೃತಿ ಇಲಾಖೆಯ ಜಿಲ್ಲಾ ಕೇಂದ್ರದಲ್ಲಿ ಪ್ರಯತ್ನ ಮಾಡಬೇಕು. ಈ ಎಲ್ಲ ಕೆಲಸಗಳನ್ನು ಮಾಡಿಕೊಳ್ಳಬೇಕಾದರೆ ಅದೂ ಕಛೇರಿ, ಆಡಳಿತ ವ್ಯವಸ್ಥೆ ಗೊತ್ತಿರದ ನಟಿಯರ ಪಾಡಂತೂ ಪಡಿಪಾಟ್ಲೆ ಸರಿ. ಇಂಥ ಎಲ್ಲ ಗೋಳಿನ ನಡುವೆ ಸಂದಿಗ್ಧ ಪರಿಸ್ಥಿತಿಯಲ್ಲಿ ತೊಳಲಾಡುತ್ತಿದ್ದಾರೆ. ಅವರ ಜನನ ದಾಖಲಾತಿಗಳು ಸರಿಯಾಗಿ ಇರದೇ ವಯಸ್ಸಾಗಿದ್ದರೂ ಎಷ್ಟೋ ಕಛೇರಿಗಳಲ್ಲಿ ನಿಮಗೆ ಮಾಸಾಶನದ ವಯಸ್ಸು ಆಗಿಯೇ ಇಲ್ಲ ಎಂದು ಕಛೇರಿ ಮುಂದೆ ಹೋದ ನಟಿಯರನ್ನು ಹಿಂದಕ್ಕೆ ಕಳುಹಿಸಿರುವುದೂ ಸತ್ಯವಾಗಿದೆ. ಹೀಗೆ ಈ ರೀತಿಯ ನೋವು ಪಡೆದವರು ಜಿ.ಹನುಮಂತಮ್ಮ ಮರಿಯಮ್ಮನಹಳ್ಳಿ. ಈ ನಟಿಯು ಹಲವಾರು hand bill ಗಳನ್ನು ಆದಾಯ ಪತ್ರ, ಫೋಟೋ ಎಲ್ಲ ತೋರಿಸಿದ್ದರೂ ವಾಪಾಸು ಬಂದಿರುವೆ. ಸರಕಾರಿ ಕಛೇರಿಗೆ ಹೋದರೆ ಆಗ ಬಾ, ಈಗ ಬಾ, ಹೋಗಿ ಬಾ ಎನ್ನುತ್ತಾರೆ. ನಮಗೆಂದು ದೇವರು ನೆಮ್ಮದಿ ನೀಡುತ್ತಾನೋ ಎಂದು ನಮ್ಮ ಮುಂದೆ ಹೇಳಿ ಅತ್ತರು. (ಮರಿಯಮ್ಮನಹಳ್ಳಿ ಕ್ಷೇತ್ರಕಾರ್ಯ ಸಂದರ್ಭ, ೨೦೦೧, ನವೆಂಬರ್) ಇಂಥ ಪರಿಸ್ಥಿತಿಯನ್ನು ಬರೀ ಹನುಮಂತಮ್ಮ ಒಬ್ಬರೇ ಅನುಭವಿಸುತ್ತಿಲ್ಲ. ಹಲವಾರು ರಂಗನಟಿಯರ ಸ್ಥಿತಿ ಇದೇ ಆಗಿದೆ. ಇದಕ್ಕೆ ಸರಕಾರದ ನೌಕರರ ನಿರ್ಲಕ್ಷತೆಯೂ ಕಾರಣವಾಗಿ ರಬಹುದು.

ಕೂಡ್ಲಿಗಿಯ ಟಿ.ಭಾರತಿ (ಬಸಮ್ಮ) ಎಂಬ ನಟಿಯು ಹಡಗಲಿಯ ರಂಗಭಾರತಿಯ ಆಹ್ವಾನ ಪತ್ರಿಕೆಯನ್ನೇ ಇಟ್ಟು ಕೊಂಡು, ಅದು ಪ್ರಶಸ್ತಿ ಪತ್ರ ಎಂದು ನಮಗೆ ತೋರಿಸಿದರು. ಅಲ್ಪ ಸ್ವಲ್ಪ ವಿದ್ಯೆ ಕಲಿತಿರುವ ಇವರು

ನನಗೆ ಇನ್ನೂ ಮಾಸಾಶನ ಬರುವ ವಯಸ್ಸಾಗಿಲ್ಲವಂತೆ ನಮಗೆ ಕಛೇರಿಗಳಲ್ಲಿ ಸರಿಯಾಗಿ ಯಾರೂ ಮಾರ್ಗ ದರ್ಶನವನ್ನು ಮಾಡುವುದಿಲ್ಲ ಎಂದು ವಿಷಾದದಿಂದ ನುಡಿದು, ಸರಕಾರ ನಮ್ಮ ಮಕ್ಕಳಿಗೆ ನೌಕರಿಯನ್ನು ಕೊಟ್ಟರೆ ನಾವು ನೆಮ್ಮದಿಯಿಂದ ಜೀವನ ಮಾಡುತ್ತೇವೆ. ಈ ಅವಕಾಶವನ್ನು ನಮಗೆ ಒದಗಿಸಿದರೆ ಸರಕಾರದಿಂದ ನಾವು ಮಾಸಾಶನವನ್ನು ಬಯಸುವುದಿಲ್ಲ. ನಮ್ಮ ಮನೆಯ ದೀಪವನ್ನು ಬೆಳಗಿಸಿದಂತಾಗಿ ಜೀವನಕ್ಕೆ ಆಧಾರ ವಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ ಕೂಡ್ಲಿಗಿಯ ನಟಿ ಭಾರತಿ (ಕೂಡ್ಲಿಗಿ ಕ್ಷೇತ್ರಕಾರ್ಯ ಸಂದರ್ಭ, ೨೦೦೧, ಅಕ್ಟೋಬರ್)

ಸರಕಾರ ನಮಗೆ ಮಾಸಾಶನ ನೀಡುತ್ತಿದೆ ಆದರೆ ಆ ಮಾಸಾಶನದಿಂದ ನಾವು ನಮ್ಮ ಸಂಸಾರಕ್ಕೆ ಸಾಕಾಗುವುದಿಲ್ಲ. ಅನಿವಾರ್ಯವಾಗಿ ಕೂಲಿ ಮಾಡುತ್ತೇವೆ. ಸರಕಾರವು ಯಾವುದೇ ಕಾರ್ಯಕ್ರಮಗಳಿಗೆ ನೀರು ಪೋಲುಮಾಡುವಂತೆ ಹಣದ ಹೊಳೆಯನ್ನು ಹರಿಸುತ್ತದೆ. ಆದರೆ ನಮ್ಮಂಥ ಕಲಾವಿದರಿಗೆ ಕೊಟ್ಟರೆ ಸರಕಾರ ಕ್ಕೇನು ನಷ್ಟ? ಎಂದು ಕೇಳುತ್ತಾರೆ (ಹೆಚ್.ಶಾಂತಮ್ಮ ಮರಿಯಮ್ಮನಹಳ್ಳಿ ಕ್ಷೇತ್ರಕಾರ್ಯ ಸಂದರ್ಶನ, ೨೦೦೧ ಮಾರ್ಚ್ ೫).

ಈ ರೀತಿಯಲ್ಲಿ ನಟಿಯರು ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಾರೆ. ರಂಗಕ್ಷೇತ್ರದಲ್ಲಿ ಅವರು ಹಾಸ್ಯನಟಿ ಯರಾಗಿ ನಕ್ಕಿರುವುದನ್ನು ಬಿಟ್ಟರೆ ಅವರಿಗೆ ನಗು ಎನ್ನುವುದು ಹಬ್ಬ, ಹುಣ್ಣಿಮೆಯಂತೆ ಬರುವುದೇನೋ ಎಂಬಂತೆ ಭಾಸವಾಗುತ್ತದೆ. ಇನ್ನೂ ವಿಚಿತ್ರವೆಂದರೆ ಕೆಲವು ಕಡೆ ಕ್ಷೇತ್ರಕಾರ್ಯಕ್ಕೆ ಹೋದಾಗ ನಮ್ಮ ಮನೆಯ ಮೆಟ್ಟಿಲೇ ಹತ್ತಬೇಡಿರೆಂದರು. ಅವರ ದೈನಂದಿನ ಸಂದಿಗ್ಧ ಪರಿಸ್ಥಿತಿಯು ಏನಾಗಿದೆಯೋ? ಏನು ಆಗುತ್ತಿ ದೆಯೋ, ಏನನ್ನು ಅವರು ಅನುಭವಿಸುತ್ತಿದ್ದಾರೋ ಎಂದೆನಿಸಿಬಿಡುತ್ತದೆ.

ಸರಕಾರದಿಂದ ನಮಗೇನು ಪ್ರಯೋಜನ. ಇಡೀ ಬಳ್ಳಾರಿ ಜಿಲ್ಲೆಯಲ್ಲಿಯೇ ನಮಗೆ ಯಾವ ಅನನ್ಯತೆ ಇಲ್ಲದಾಗಿದೆ. ನಮ್ಮದೇ ಆದ ಒಂದು ಸಂಘಟನೆ ಇಲ್ಲ. ಸಂಘಟನೆ ಇದ್ದರೆ ಸರಕಾರದ ಮುಂದೆ ನಮಗೆ ಬೆಲೆ ಇದ್ದು, ನಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ವೈಯಕ್ತಿಕ ಹೋರಾಟಕ್ಕೆ ಯಾರು ಗಮನವನ್ನು ನೀಡುತ್ತಾರೆ ಎಂಬ ಮಾತು ರಂಗನಟಿಯರದಾಗಿದೆ.

ಬಳ್ಳಾರಿಗೆ ಕ್ಷೇತ್ರಕಾರ್ಯಕ್ಕೆ ನಾವು ಹೋದಾಗ ನಾವು ವೃತ್ತಿಯನ್ನಾಗಿ ಈ ಕ್ಷೇತ್ರವನ್ನು ಆರಿಸಿಕೊಂಡಿದ್ದೇವೆ ನಿಜ ಆದರೆ ಈ ವೃತ್ತಿಯಲ್ಲಿ ಇರುವವರಿಗೆ ಸಮಾಜದ ಗೌರವವಿಲ್ಲದಾಗಿದೆ ನಾವು ನಾಟಕದಲ್ಲಿ ಪಾತ್ರ ಮಾಡುವಾಗ ಬೇಕು, ಆದರೆ ಅದು ಮುಗಿದಾದ ಮೇಲೆ ನಮ್ಮನ್ನು ಕೇಳುವವರೇ ಇರುವುದಿಲ್ಲ. ಆದ್ದರಿಂದ ಕಲೆ ಎಲ್ಲೆಲ್ಲೂ ಕೊಲೆಯಾಗಿ ಬಿಟ್ಟಿದೆ. ಕಲಾವಿದರ ಕಲೆಗೆ ಮನ್ನಣೆ ನೀಡುತ್ತಾರೆ. ಆದರೆ ಕಲಾವಿದರ ಖಾಸಗಿ ಬದುಕಿನ ಬಗ್ಗೆ ಯಾರೂ ಗಮನವನ್ನು ಹರಿಸದಿರುವುದು ನಮ್ಮ ಜೀವನದ ದುರಂತವಾಗಿದೆ ಎನ್ನುತ್ತಾರೆ ಬಳ್ಳಾರಿಯ ನರಸಮ್ಮ ಎಂಬ ನಟಿ (ಕ್ಷೇತ್ರಕಾರ್ಯ ಸಂದರ್ಶನ, ೨೦೦೨, ಜನವರಿ).

ಹೀಗೆ ಸರಕಾರದ ಬಗ್ಗೆ ಇನ್ನೊಬ್ಬ ನಟಿ ಇನ್ನೊಂದು ಮಾತನ್ನು ಹೇಳುತ್ತಾರೆ. "ಸರಕಾರವೇನು ಯಾರನ್ನು ಕೀಳಾಗಿ ಹಾಗೂ ಮೇಲಾಗಿ ನೋಡುವುದಿಲ್ಲ. ವಯಸ್ಸಾದ ಅಥವಾ ಅರ್ಹತೆ ಇರುವ ಎಲ್ಲ ನಟಿಯರಿಗೆ ಮಾಸಾಶನ ನೀಡುತ್ತಿದೆ. ಅದರ ಉಪಯೋಗ ಸರಿಯಾಗಿ ಆಗುತ್ತಿಲ್ಲ. ಅದು ಸರಿಯಾಗಿ ನಟಿಯರಿಗೆ ತಲುಪದಿರಲು ಸರಕಾರ ಹೊಣೆಯಲ್ಲ. ಅದು ನಮ್ಮ ಆಡಳಿತ ವರ್ಗದ ಹೊಣೆಯಾಗಿದೆ ಎನ್ನುತ್ತಾರೆ ಏಣಗಿಯ ನೀಲಮ್ಮ ಎಂಬ ನಟಿ. ನಾವು ಯಾವುದನ್ನೇ ಆಗಲಿ ಬೇರೆಯವರ ಬಗ್ಗೆ ಆರೋಪವನ್ನು ಹೊರಿಸುವುದು ಸುಲಭ. ಆದರೆ ಅದಕ್ಕಿಂತಲೂ ಮುಂಚಿತವಾಗಿ ನಮ್ಮಲ್ಲಿ ಏನು ತೊಂದರೆ ಇದೆ. ನಮ್ಮ ತಪ್ಪುಗಳೇನು? ಎಂಬುವದರ ಅರಿವು ಮೊದಲು ನಮಗಾಗಬೇಕಿದೆ. ನಮ್ಮಲ್ಲಿ ಎಷ್ಟೋ ನಟಿಯರು ನಿರ್ಲಕ್ಷತೆಯಿಂದ ಕಾಟಚಾರಕ್ಕೆ ಬೇಕಾಬಿಟ್ಟಿಯಾಗಿ ಕೆಲವರು ವ್ಯಸನಗಳಿಗೆ ಬಲಿಯಾಗಿ ಜೀವನ ನಡೆಸುತ್ತಿದ್ದಾರೆ. ಅದು ನಮ್ಮ ತಪ್ಪಲ್ಲವೇ ಎನ್ನುತ್ತಾರೆ ನೀಲಮ್ಮ.

ನಟಿಯರ ಭವಿಷ್ಯಕ್ಕೆ ಕೆಲವು ಪರಿಹಾರೋಪಾಯಗಳು

೧. ನಾಟಕ ಶಾಲೆಗಳನ್ನು ಪ್ರಾರಂಭಿಸುವುದು.

೨. ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಶಾಲೆ ಪ್ರಾರಂಭಿಸುವುದು.

೩. ನಟಿಯರಿಗೆ ಸರ್ಕಾರ ಸಹಾಯಧನ, ಉಚಿತವಾಗಿ ಆಸ್ಪತ್ರೆಯ ಚಿಕಿತ್ಸೆ, ಗೌರವ ಮಾಸಿಕಧನ ನೀಡಬೇಕು.

೪. ವಿಶ್ವವಿದ್ಯಾಲಯಗಳಲ್ಲಿ ನಾಟಕ ವಿಭಾಗ ಆರಂಭಿಸುವುದು.

೫. ನಾಟಕ ಅಕಾಡೆಮಿ ಹೆಚ್ಚು ವಿಚಾರ ಸಂಕಿರಣ ಹಮ್ಮಿಕೊಳ್ಳುವುದರಿಂದ ಸಮಾಜದಲ್ಲಿ ಜಾಗೃತಿ ಮೂಡಲು ಸಾಧ್ಯ.

೬. ಪ್ರಶಸ್ತಿಗಳಲ್ಲಿ ನಟಿಯರಿಗೆ ಹೆಚ್ಚಿನ ಆದ್ಯತೆ ನೀಡುವುದು.

೭. ಹೆಚ್ಚು, ಹೆಚ್ಚು ನಾಟಕ ಸಂಸ್ಥೆಗಳ ಆರಂಭ.

೮. ಹವ್ಯಾಸಿ ಕಲಾವಿದರಿಗೆ ನಾಟಕಕ್ಕೆ ಕಾನೂನಿನಲ್ಲಿ ಇರುವ ಕಿರಿ ಕಿರಿ ತಪ್ಪಿದರೆ ಹೆಚ್ಚು ನಾಟಕ ಆಗಲು ಸಾಧ್ಯ.

೯. ಸಂಗೀತ ನೃತ್ಯ ಅಕಾಡೆಮಿಯಲ್ಲಿ ಮಹಿಳೆಯರಿಗೆ ಪ್ರಾಶಸ್ತ್ಯ ನೀಡುವುದು.

೧೦. ಪ್ರೌಢಶಾಲಾ ಮತ್ತು ಕಾಲೇಜು ಹಂತದಲ್ಲಿ ನಾಟಕಕ್ಕೆ ಸಂಬಂಧಿಸಿ ಪಠ್ಯ ನೀಡಬೇಕು ಮತ್ತು 'ನಾಟಕ ಶಿಕ್ಷಕರ' ನೇಮಕ ಮಾಡಿಕೊಳ್ಳುವುದು.

೧೧. ಪ್ರಯಾಣದಲ್ಲಿ ನಟಿಯರಿಗೆ ಬಸ್‌ಪಾಸ್ ತೆಗೆಸುವಿಕೆ.

೧೨. ನಟಿಯರ ಮಕ್ಕಳಿಗೆ ಸರ್ಕಾರ ವಿದ್ಯಾಭ್ಯಾಸ ಕೊಡಿಸುವುದು.

೧೩. ಬೇಸಿಗೆ ಶಿಬಿರದಲ್ಲಿ ರಂಗ ತರಬೇತಿ ಶಿಬಿರಗಳು ಹೆಚ್ಚಾಗಬೇಕು.

೧೪. ವಿದ್ಯುನ್ಮಾನ ಸಂಗೀತವಾದ್ಯಗಳ ಹಾವಳಿ ತಡೆಗಟ್ಟುವುದು.

೧೫. ಸಿನೇಮಾ ಹಾಡುಗಳ ಅನುಕರಣೆ ನಿಲ್ಲಿಸುವುದು.

೧೬. ರಂಗಗೀತೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು.

೧೭. ನಾಟಕ ರಚನಾಕಾರರು ಸ್ತ್ರೀಪರ ಕಾಳಜಿಯನ್ನು ನಾಟಕಗಳಲ್ಲಿ ಬಿಂಬಿಸುವುದು.

೧೮. ರಂಗಭೂಮಿ ಎಂದರೆ ಕಾಲ ಕಳೆಯಲು, ಹರಟೆಕೊಚ್ಚಲು ಒಂದು ನಿಮಿತ್ತ ಮಾತ್ರವಾಗದೇ ಬುದ್ಧಿ, ಮನಸ್ಸು, ಇಡೀ ವ್ಯಕ್ತಿತ್ವವನ್ನು ಒಳಗೊಳ್ಳುವ ಒಂದು ಕ್ರಿಯೆ ಎಂದು ಸಾರ್ವಜನಿಕರಿಗೆ ಅನಿಸಬೇಕು.

೧೯. ರಂಗಭೂಮಿಯು ಕಾವ್ಯದಂತೆ, ಕಾದಂಬರಿಯಂತೆ, ಸಂಗೀತದಂತೆ ಒಂದು ಜನತೆಯ ಸಂಸ್ಕೃತಿಯ ವಿಕಾಸದ ಚಿಹ್ನೆಕೂಡ ಎಂದು ತಿಳಿಯುತ್ತ ಬರಬೇಕು.

೨೦. ಸ್ವತಂತ್ರ್ಯ ಸಮಾಜದಲ್ಲಿ ಅಂತರರಾಷ್ಟ್ರೀಯ ಸಾಂಸ್ಕೃತಿಕ ಚಟುವಟಿಕೆಗಳು. ಆಗ ಸಾಧ್ಯವಾದ ತೆರೆದ ಮನಸ್ಸು ಇವೆಲ್ಲವೂ ಕೂಡ ಇಂದಿನ ಯುವಕರಲ್ಲಿ ಪ್ರಜ್ಞೆಯಾಗಿ ಕೆಲಸವನ್ನು ಮಾಡಬೇಕು.

೨೧. ವೃತ್ತಿಪರತೆ ಕಂಪನಿ ನಾಟಕದಲ್ಲಿ ಪ್ರತಿಯೊಬ್ಬರಿಗೂ ರಂಗಭೂಮಿ ಒಂದು ಜೀವನೋಪಾಯ ಅದೇ ಅವರ ವೃತ್ತಿ ಹಾಗಂದ ಮಾತ್ರಕ್ಕೆ ಅದನ್ನು ಕೀಳು ಎಂದು ಭಾವಿಸತಕ್ಕದ್ದಲ್ಲ. ಹವ್ಯಾಸಿ ರಂಗಭೂಮಿಯ ದೃಷ್ಟಿ ಬೇರೆ ಎಲ್ಲವೂ ತಕ್ಕದಾಗಿರಬೇಕು. ಪ್ರತಿ ವಿಷಯಕ್ಕೂ ಸೂಕ್ತ ಗಮನ ನೀಡಬೇಕು, ಯಾವುದೂ ಗೌಣವಲ್ಲ.

೨೨. ಪ್ರೇಕ್ಷಕರನ್ನು ಪ್ರೇಕ್ಷಾಗೃಹಕ್ಕೆ ಪ್ರವೇಶ ನೀಡುವ ರೀತಿಯಲ್ಲಿ ಕೂಡಾ ಕೌಶಲವಿರಬೇಕು. ಗಂಭೀರ ಮನೋಭಾವದಲ್ಲಿ ರಂಗಭೂಮಿಯ ಕುರಿತಾಗಿ ಚಿಂತಿಸಬೇಕು, ಸಂಪೂರ್ಣವಾಗಿಯೇ ತೊಡಗಿಸಿಕೊಳ್ಳಬೇಕು. ಒಂದು ನಾಟಕವೆಂದರೆ ಪ್ರತಿಯೊಬ್ಬರಿಗೂ ಪ್ರೇಕ್ಷಕರೂ ಸೇರಿದ ಹಾಗೆ ಸಮಗ್ರ ಅನುಭವ ನೀಡುವ ಪರಿಯಾಗಿ ರಂಗಭೂಮಿ ಉತ್ತುಂಗಕ್ಕೆ ಬರಬೇಕು.

೨೩. ಮಕ್ಕಳ ರಂಗಭೂಮಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು. ರಂಗಭೂಮಿ ತರಬೇತಿಗೆ, ನಿರ್ದೇಶನಕ್ಕೆ ಸೂಕ್ತರಾದ ನಟಿಯರನ್ನೇ ನೇಮಿಸಬೇಕು.

೨೪. ರಂಗ ಮಾಧ್ಯಮದ ಮೂಲಕ ಜನರ ನೈತಿಕ. ಬೌದ್ಧಿಕ ಮಟ್ಟವನ್ನು ಎತ್ತರಿಸಲು ಸರಕಾರ ಈ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

೨೫. ನಟಿಯರಿಗೆ ಇನ್ನೂ ಹೆಚ್ಚಿನ ಪರಿಶ್ರಮದ ಹಾಗೂ ಶಿಸ್ತಿನ ವ್ಯಾಸಂಗ ಕ್ರಮವನ್ನು, ತಜ್ಞರುಗಳಿಂದ ಪಾಠ ಪ್ರವಚನಗಳನ್ನು ಏರ್ಪಡಿಸಬೇಕು.

೨೬. ಎಲ್ಲಿ ರಂಗಾಸಕ್ತಿ ಕುಂಠಿತವಾಗಿದೆಯೋ ಅಲ್ಲೆಲ್ಲ ಕ್ರಿಯಾಶೀಲವಾಗಿ ಕಾರ್ಯೋನ್ಮುಖರಾಗುವುದಕ್ಕೆ ಅಕಾಡೆಮಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿ ರಂಗಾಸಕ್ತಿಯನ್ನು ಬೆಳೆಸುವುದಕ್ಕೆ ಸರ್ಕಾರ ಅನುವು ಮಾಡಿಕೊಡಬೇಕು.

೨೭. ಸರಕಾರವು ಸರಿಯಾದ ನೀತಿಗಳನ್ನು ರೂಪಿಸಿಕೊಂಡು ಅವುಗಳನ್ನು ಯಾವಾಗಲೂ ಅನುಷ್ಠಾನದಲ್ಲಿರುವಂತೆ ಕ್ರಮಕೈಗೊಳ್ಳಬೇಕು.

೨೮. ನಾಡಿನ ಸಂಸ್ಕೃತಿ ವಿಕಾಸಕ್ಕೆ ಪ್ರಾಥಮಿಕ ಮಟ್ಟದ ಪ್ರಜ್ಞೆ ಉಂಟಾಗಬೇಕಾದರೆ ಸರ್ಕಾರ ರಂಗಭೂಮಿಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿಕೊಳ್ಳಬೇಕು.

೨೯. ಪುರುಷ ಪ್ರಧಾನ ಮೌಲ್ಯಗಳು ಒಪ್ಪಿತ ಮೌಲ್ಯಗಳಾಗಿವೆ. ಆದರೆ ಸ್ತ್ರೀಪರ ಧೋರಣೆಗೆ ಸರಕಾರ ಹೆಚ್ಚಿನ ಗಮನಕೊಡಬೇಕು.

೩೦. ಹೊಸ ರೀತಿಯ ರಂಗ ಸಂಪ್ರದಾಯಕ್ಕೆ ಹುಟ್ಟು ಹಾಕಬೇಕು.

೩೧. ಗ್ರಾಮೀಣ ರಂಗಭೂಮಿಯನ್ನು ಆಧುನಿಕ ವಿದ್ಯಮಾನಕ್ಕೆ ತಕ್ಕಂತೆ ರೂಪಿಸಬೇಕು.

೩೨. ಜಾನಪದ ರಂಗಭೂಮಿಯನ್ನು ಮಾಧ್ಯಮಗಳ ಮುಖೇನ ಬಿಂಬಿಸಿ ಅದಕ್ಕೊಂದು ಶಾಸ್ತ್ರಬದ್ಧ ಗೌರವವನ್ನು ನೀಡಬೇಕು.

ನಟಿಯರ ಪರಂಪರೆಯು ಮುಂದುವರಿಯಲು ನಾವು ನಟಿಯರನ್ನೇ ಪ್ರಶ್ನಿಸಿದಾಗ ಅಂದರೆ ಮುಂದೆ ನಿಮ್ಮ ಮಕ್ಕಳನ್ನು ಕಲಾವಿದರನ್ನಾಗಿ ಮಾಡುತ್ತೀರಾ? ಎಂದು ಪ್ರಶ್ನೆ ಮಾಡಿದರೆ, ಕೆ.ನಾಗರತ್ನಮ್ಮನವರು "ಸರಿ ನಮ್ಮ ಮಕ್ಕಳನ್ನು ರಂಗಭೂಮಿ ಸೇವೆ ಮಾಡಲು ಬಿಡುತ್ತೇವೆ ಆದರೆ ರಂಗಭೂಮಿಯಲ್ಲಿ ಯಾವ ಆರ್ಥಿಕ ಭದ್ರತೆ ಇದೆ. ಜೀವನ ನಿರ್ವಹಣೆಗೆ ಅವರೇನು ಮಾಡಬೇಕು ಹೇಳಿ? ಎಂದು ನಮ್ಮನ್ನೇ ಮರು ಪ್ರಶ್ನೆ ಮಾಡಿದರು. ಅಂದರೆ ನಟಿಯರಿಗೆ ಆರ್ಥಿಕ ಭದ್ರತೆಯನ್ನು ಸರಕಾರ ನೀಡಿದರೆ ಮಾತ್ರ ಕೆಲ ನಟಿಯರು ಧೈರ್ಯವಾಗಿ ರಂಗ ಬದುಕಿಗೆ ಕಾಲಿಡುತ್ತಾರೆ. ಇಲ್ಲದಿದ್ದರೆ ಯಾರೂ ಇತ್ತೀಚೆಗೆ ನಟಿಯರಾಗಿ ಬರಲು ಇಷ್ಟ ಪಡಲಾರರು ಎನ್ನುತ್ತಾರೆ ಕೆ.ನಾಗರತ್ನಮ್ಮ.

ಕೂಡ್ಲಿಗಿ ಪದ್ಮರನ್ನು ಪ್ರಶ್ನಿಸಿದರೆ ರಂಗದ ಬದುಕು ನಮಗೆ ಸಾಕಾಗಿದೆ. ಅರ್ಹತೆಗೆ ತಕ್ಕಂಥ ಅವಕಾಶ ಇಲ್ಲಿ ಇಲ್ಲ. ಆದ್ದರಿಂದ ನಮ್ಮ ಮಕ್ಕಳು ಕೊರಗುವುದು ಬೇಡ. ಇಲ್ಲಿಯ ಬದುಕಿನಲ್ಲಿ ನಾವು ಕನಸು ಕಾಣಬಹುದೇ ವಿನಃ ಅದನ್ನು ವಾಸ್ತವದಲ್ಲಿ ಎಂದೂ ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಯಾವ ಕಾಲಕ್ಕೂ ನಮ್ಮ ಮಕ್ಕಳನ್ನು ಈ ಕ್ಷೇತ್ರಕ್ಕೆ ಕಾಲಿಡಲು ಬಿಡುವುದಿಲ್ಲ ಎನ್ನುತ್ತಾರೆ ಪಿ.ಪದ್ಮ.

ಕೂಡ್ಲಿಗಿಯ ಬಿ.ಶಿವಕುಮಾರಿ ಇವರು ನಮ್ಮ ಕಾಲಕ್ಕೆ ಇದು ಮುಗಿದು ಬಿಡಲಿ. ಮುಂದೆ ನಾವು ನಟಿಯರನ್ನಾಗಿ ಮಾಡುವುದನ್ನು ನಾನು ಎಂದಿಗೂ ಒಪ್ಪುವುದಿಲ್ಲ. ಈ ರಂಗಭೂಮಿ ಸೇವೆ ನನ್ನ ಕಾಲಕ್ಕೆ ಮುಗಿದು ಬಿಡಲಿ. ನಮಗೆ ಮನೆಯಲ್ಲಿ ಸರಿಯಾದ ಮಾರ್ಗದರ್ಶಕರು ಇಲ್ಲದೆ ಈ ಕ್ಷೇತ್ರವನ್ನು ಆರಿಸಿಕೊಂಡೆವು ಎಂದು ನೋವಿನಿಂದ ನುಡಿಯುತ್ತಾರೆ.

ಒಟ್ಟಾರೆ ರಂಗನಟಿಯರಲ್ಲಿ ಕೆಲವೊಂದಿಬ್ಬರು ಮಾತ್ರ ಚೆನ್ನಾಗಿದ್ದು ಬಹುಪಾಲು ನಟಿಯರು ಹೀನಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಎಲ್ಲ ಅವಹೇಳನ, ಅವಮಾನದಿಂದ ಕುಬ್ಜರಾಗಿದ್ದಾರೆ. ಇಂದಿಗೂ ಪ್ರಸ್ತುತದಲ್ಲಿ ಕೀಳರಿಮೆಯಿಂದ ಬದುಕುಳಿದಿದ್ದಾರೆ. ಕೆಲವರ ಬದುಕಂತೂ ನೆಪಮಾತ್ರ. ಆದರೆ ಅದರಿಂದ ಬದುಕು ತುಂಬಾ ದುಸ್ತರ ಹಾಗೂ ಊಹಿಸಲೂ ಸಾಧ್ಯವಿಲ್ಲದಂಥ ಸನ್ನಿವೇಶ. ಪುರುಷರ ಪೈಶಾಚಿಕ ಗುಣಗಳ ಸಂಗಾತಿಗಳಿಂದ ನೊಂದವರೇ ಹೆಚ್ಚಾಗಿದ್ದಾರೆ. ಈ ಪುರುಷಪ್ರಧಾನ ಸಮಾಜದಲ್ಲಿ ಮೌಲ್ಯವಿಲ್ಲದೆ ಪ್ರತಿಕ್ಷಣವೂ ಪರಿಹಾರವನ್ನು ಕಂಡುಕೊಳ್ಳಲು ಯೋಚಿಸುತ್ತಾ ಸಾಗುವುದೇ ಅವರ ಬದುಕಿನ ಪರಿಯಾಗಿದೆ.

ಈ ಕ್ಷೇತ್ರದಲ್ಲಿ ಕಾಲಿಟ್ಟು ಮತ್ತೆ ಹಿಂದಕ್ಕೆ ಹೋಗಿ ಸಂಗಾತಿಯೊಡನೆ ಮತ್ತೆ ರಂಗಭೂಮಿಗೆ ಕಾಲಿಡದೇ ಕೆಲವರು ಬದುಕುತ್ತಿದ್ದಾರೆ. ಇನ್ನೂ ಕೆಲವರು ಈ ಕ್ಷೇತ್ರಕ್ಕೆ ಬಂದು ಯಾವುದರಲ್ಲೂ ಸುಖವನ್ನು ಕಾಣದೇ ಸಾವಿಗೆ ಶರಣಾಗಿ ದುರಂತ ನಟಿಯರಾಗಿದ್ದಾರೆ. ಕೆಲವೊಂದಿಬ್ಬರು ಅಂದರೆ ನೂರಕ್ಕೆ ಒಬ್ಬರಂತೆ ಈ ಕ್ಷೇತ್ರದಲ್ಲಿ ನೆಮ್ಮದಿಯಿಂದ ಜೀವಿಸುತ್ತಿದ್ದರೂ ತಮ್ಮ ಮಕ್ಕಳನ್ನು ಮಾತ್ರ ನಾವು ಯಾರೂ ಯಾವ ಕಾಲಕ್ಕೂ ರಂಗಭೂಮಿಗೆ ಕಳುಹಿಸುವುದೇ ಇಲ್ಲ ಎನ್ನುವ ಧ್ವನಿಯೇ ಎಲ್ಲ ನಟಿಯರ ಒಳದನಿಯಾಗಿದೆ.

ಭವಿಷ್ಯತ್ತಿನ ದಿನಗಳಲ್ಲಿ ನಟಿಯರು ನಿರ್ದಿಷ್ಟವಾದ ಜೀವನ ಗುರಿ ಇಲ್ಲದೆ ತೊಳಲಾಡುತ್ತಿರುವುದರಿಂದ ಹಾಗೂ ಯಾವುದೇ ಆರ್ಥಿಕ ಭದ್ರತೆ ಇಲ್ಲದೆ, ಸಮಾಜದಲ್ಲಿ ಮೌಲ್ಯಯುತವಾದ ಅನನ್ಯತೆ ಇಲ್ಲದೆ, ನಟಿಯರ ಭವಿಷ್ಯ ಗೊಂದಲಮಯವಾಗಿರುವುದರಿಂದ ಯಾವುದೇ ನಟಿ ತಮ್ಮ ಮಗಳನ್ನು ಕಲಾವಿದೆಯನ್ನಾಗಿ ಮಾಡಲು ಹಿಂದೇಟು ಹಾಕುತ್ತಿದ್ದಾರೆ.

ಎಲ್ಲರೂ ಸತ್ವಯುತ ಬದಕನ್ನು ನಿರೀಕ್ಷಿಸುವವರೇ ಎಲ್ಲರ ಬದುಕು ಸುಂದರವಾಗಿರಬೇಕೆಂಬ ಆಸೆ ಪ್ರತಿಯೊಬ್ಬರಿಗೂ ಇರುತ್ತದೆಯೇ ಹೊರತು ಕೀಳಾಗಲೆಂದು ಯಾರೂ ಬಯಸುವುದಿಲ್ಲ. ಆದ್ದರಿಂದ ಇಂದಿನ ಎಲ್ಲ ಪಲ್ಲಟಗಳಲ್ಲಿ ನಟಿಯರ ಭವಿಷ್ಯತ್ತಿನಲ್ಲಿ ಹಲವಾರು ಸ್ಥಿತ್ಯಂತರಗಳಾಗಿವೆ. ಆದ್ದರಿಂದ ಎಲ್ಲಾ ನಟಿಯರ ಧ್ವನಿ ಮಾತ್ರ ಒಂದೇ ಸರಕಾರದಿಂದ "ಆರ್ಥಿಕ ಭದ್ರತೆ" ನಮಗೆ ಒದಗಿಸುವುದಾದರೆ ಇನ್ನೂ ಪ್ರಬುದ್ಧ, ಪರಿಣತ ನಟಿಯರು ರಂಗಭೂಮಿಗೆ ಬರಲು ಸಾಧ್ಯ ಎಂದು ನುಡಿಯುತ್ತಾರೆ.

ಈಗಿರುವ ಸ್ಥಿತಿಯು ಸುಧಾರಿಸಬೇಕಾದರೆ ಕಲಾವಿದರು ಸುಸಂಸ್ಕೃತರಾಗಬೇಕು. ನಾಟಕ ವೃತ್ತಿಗೆ ಗೌರವಾನ್ವಿತ ಸ್ಥಾನಮಾನಗಳು ಲಭಿಸಬೇಕು. ಸರಕಾರ ಪ್ರಶಸ್ತಿ-ಪುರಸ್ಕಾರಗಳನ್ನು ಮತ್ತು ಗೌರವಧನ ಜಾರಿಗೆ ತಂದಿರುವು

ದರಿಂದ ಕಲಾವಿದರ ಜೀವನದಲ್ಲಿ ತಕ್ಕ ಸುಧಾರಣೆ ಕಂಡುಬರುತ್ತದೆ. ಈ ದಿಶೆಯಲ್ಲಿ ಹೆಚ್ಚಿನ ಕೆಲಸಗಳು ನಡೆಯಬೇಕಿದೆ. ನಮ್ಮ ಕಲಾವಿದೆಯರಾದರೂ ಹಿಂದಿನ ಪರಂಪರೆಯನ್ನು ಗಮನಿಸಿ ಚಾರಿತ್ರ್ಯ ಶುದ್ಧಿ, ಕಲೆಯ ಬಗ್ಗೆ ನಿಷ್ಠೆ, ಸಂಸ್ಕೃತಿ ಗೌರವಗಳನ್ನು ತಮ್ಮದಾಗಿಸಿಕೊಂಡರೆ ರಂಗಭೂಮಿಯ ಗುಣಮಟ್ಟವನ್ನು ಹೆಚ್ಚಿಸಿ ನಾಟಕ ಪರಂಪರೆಯನ್ನು ಮುನ್ನಡೆಸಬೇಕಾಗಿದೆ.

ಅಧ್ಯಾಯ ೮

ಸಮಾರೋಪ

ಅಧ್ಯಾಯ ೮

ಸಮಾರೋಪ

'ಬಳ್ಳಾರಿ ಜಿಲ್ಲೆಯ ರಂಗನಟಿಯರು' ಅಧ್ಯಯನ ವ್ಯಾಪ್ತಿಯನ್ನು ಬಳ್ಳಾರಿ ಜಿಲ್ಲೆಗೆ ಸೀಮಿತಗೊಳಿಸಿದ್ದು, ರಂಗನಟಿಯರ ಪ್ರವೇಶಿಕೆ, ನಟಿಯರ ಸಾಮರ್ಥ್ಯ, ನಟಿಯರ ಬದುಕು, ಅದರ ವೈಪರೀತ್ಯ, ಬಾಲ್ಯ, ಶಿಕ್ಷಣ, ಪರಿಸರ, ತರಬೇತಿ, ಕಲಿಕೆ, ಕೌಟುಂಬಿಕ ಹಿನ್ನೆಲೆ, ಸಾಮಾಜಿಕ ಸ್ಥಾನಮಾನ, ನಟಿಯರ ದೃಷ್ಟಿಯಲ್ಲಿ ಸಮಾಜ, ಯೌವನ, ಮದುವೆ, ಮಕ್ಕಳು, ವೃದ್ಧಾಪ್ಯ, ಮಕ್ಕಳ ಭವಿಷ್ಯ ಹೀಗೆ ನಟಿಯರ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಅನನ್ಯತೆ ಈ ಎಲ್ಲಾ ವಿಷಯದ ಬಗ್ಗೆ ಸಂಪೂರ್ಣವಾಗಿ ಅಧ್ಯಯನವನ್ನು ಮಾಡಲಾಗಿದೆ. ವಸ್ತುಸ್ಥಿತಿಯಲ್ಲಿ ಯಾವುದೇ ಅಳುಕಿಲ್ಲದೆ ನಿಖರವಾಗಿ ಯಥಾವತ್ತಾಗಿ ಅಧ್ಯಯನವನ್ನು ಮಾಡಿದ್ದು ರಂಗನಟಿಯರ ವೈಪರೀತ್ಯ ಬದುಕಿಗೆ ನಮ್ಮ ದೇಶದ ರಾಜಕೀಯ, ಸಾಮಾಜಿಕ, ಧಾರ್ಮಿಕ ಕಾರಣಗಳು ಇವೆ.

ಬಳ್ಳಾರಿ ಜಿಲ್ಲೆಯ ರಂಗಭೂಮಿ ಪರಿಸರದಲ್ಲಿ ನಟಿಯರ ಅಭಿನಯ ಸಾಮರ್ಥ್ಯದ ಬಗ್ಗೆ ವಸ್ತುನಿಷ್ಠವಾಗಿ ವಿವರಿಸಲಾಗಿದೆ. ಒಂದು ಕಾಲದಲ್ಲಿ ನಾಟಕವನ್ನು ನೋಡುವುದೇ ಅಪರಾಧವಾಗಿರುವ ದಿನಗಳಲ್ಲಿ ರಂಗಭೂಮಿಗೆ ದಿಟ್ಟವಾಗಿ ಕಾಲಿಟ್ಟವರು ಬಳ್ಳಾರಿ ಜಿಲ್ಲೆಯ ರಂಗನಟಿಯರು. ಸ್ವಾತಂತ್ರ್ಯ ಪೂರ್ವದಲ್ಲಿಯೂ ಬಳ್ಳಾರಿ ಜಿಲ್ಲೆಯಲ್ಲಿ ಅನಕ್ಷರಸ್ಥರಾಗಿದ್ದರೂ, ನಟಿಯರು ಬುದ್ಧಿ ಚಾಣಾಕ್ಷತೆಯಿಂದ ಅಮೋಘವಾದ ಕಂಠಸಿರಿಯಿಂದ, ಅಭಿನಯ ಸಾಮರ್ಥ್ಯದಿಂದ ಪ್ರೇಕ್ಷಕರ ಮನವನ್ನು ಗೆದ್ದಿದ್ದಾರೆ.

ರಂಗಭೂಮಿಯಲ್ಲಿ ಪುರುಷರ ಸರಿಸಮಾನವಾಗಿ ನಿಂತು ತಂಡಗಳನ್ನು ಕಟ್ಟಿಕೊಂಡು ಹಲವಾರು ಕಂಪನಿಗಳಲ್ಲಿದ್ದು ನಾಡಿನಾದ್ಯಂತ ನಾಟಕ ಪ್ರದರ್ಶನವನ್ನು ನೀಡಿ, ಮೈಸೂರು ಅರಸರಿಂದ ಪೀತಾಂಬರವನ್ನು ಪಡೆದಂಥ ನಟಿ ನಾರಾಯಣದೇವರಕೆರೆಯ ಡಿ. ಸಂಜೀವಮ್ಮ. ಈ ಸಂಜೀವಮ್ಮ, ಹನುಮಂತಮ್ಮ ಅಪೂರ್ವ ಸಹೋದರಿಯರು. ಒಂದು ಕಾಲದಲ್ಲಿ ನಟನಾ ಸಾಮರ್ಥ್ಯದಿಂದ ವೃತ್ತಿರಂಗಭೂಮಿಯಲ್ಲಿ ಮೆರೆದು ವಿಶ್ವ ಕರ್ನಾಟಕ ನಾಟಕ ಮಂಡಳಿ ಎಂಬ ಸ್ವಂತ ಕಂಪನಿಯನ್ನು ಕಟ್ಟಿ ಈ ಕಂಪನಿಗೆ ಗುಬ್ಬಿ ವೀರಣ್ಣ, ಜಯಮ್ಮ ನಾಟಕ ವೀಕ್ಷಿಸಲು ಬರುತ್ತಿದ್ದರು ಎನ್ನಲಾಗಿದೆ. ಪ್ರಾರಂಭದ ಹಂತದಲ್ಲಿ ವಾಮನರಾಯರ ಕಂಪನಿ ಸೇರಿದ ಇವರು ನಂತರದಲ್ಲಿ ಗರುಡರ ಕಂಪನಿಯ ತರಬೇತಿ ಪಡೆದು, ನಟಿಯರಾಗಿ ಹೆಸರಾಗಿದ್ದ [illegible]

ಗುಳೇದಗುಡ್ಡ ಇವರ ಸ್ಥಾನ ತೆರವಾದಾಗ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಆಕೆಯ ಸ್ಥಾನವನ್ನು ಸಂಜೀವಮ್ಮ ತುಂಬಿದರು ಎನ್ನಲಾಗಿದೆ.

ಅಧ್ಯಯನದಲ್ಲಿ ರಂಗನಟಿಯರ ಜಾತಿವಾರು, ವರ್ಗವಾರು, ಕೌಟುಂಬಿಕ ನೆಲೆಗಳ ಬಗ್ಗೆ ಅಧ್ಯಯನವನ್ನು ಮಾಡಿದ್ದು ಅದರ ಫಲವಾಗಿ ಕೆಳವರ್ಗದವರೇ ಹೆಚ್ಚಾಗಿ ರಂಗನಟಿಯರಾಗಿದ್ದಾರೆ ಎಂಬುದು ತಿಳಿದು ಬಂದಿದೆ. ಅವಕ್ಕೆ ಹಲವು ಕಾರಣಗಳನ್ನು ಕಂಡುಕೊಳ್ಳಲಾಗಿದೆ. ರಂಗನಟಿಯರ ಬಗ್ಗೆ ಸ್ತ್ರೀವಾದಿಗಳ ಚಿಂತನೆ ರಂಗನಟಿಯರ ರಾಜಕೀಯ ಪ್ರಾತಿನಿಧ್ಯ ಇಂದು ಸಮೂಹ ಮಾಧ್ಯಮಗಳಲ್ಲಿ ರಂಗನಟಿಯರು ಸಾಂಸ್ಕೃತಿಕವಾಗಿ Expose ಆಗುತ್ತಿರುವುದು ಕೊನೆಯದಾಗಿ ಅವರ ಭವಿತವ್ಯದ ಬಗ್ಗೆ ಹಲವಾರು ಸಿದ್ಧಾಂತಗಳನ್ನಿಟ್ಟುಕೊಂಡು ರಂಗನಟಿಯರ ಶೋಷಿತ ನೆಲೆಗಳನ್ನು ತಾತ್ವಿಕವಾಗಿ ಚರ್ಚೆ ಮಾಡಲಾಗಿದೆ.

ಇಂದು ಬಳ್ಳಾರಿ ಜಿಲ್ಲೆಯಲ್ಲಿ ರಂಗನಟಿಯರು, ಜನಪದ ರಂಗಕಲಾವಿದೆಯರು, ವೃತ್ತಿರಂಗ ಕಲಾವಿದೆಯರು ಇವರನ್ನೆಲ್ಲಾ ಒಳಗೊಂಡ ಹವ್ಯಾಸಿ ಕಲಾವಿದೆಯರು, ಇವರ ಅನನ್ಯತೆ ಇವರಿಂದ ರಂಗಭೂಮಿಯ ಕೊಡುಗೆ. ಇವರ ಸಾಧಕ ಬಾಧಕಗಳೇನು? ಇಂದು ಬಳ್ಳಾರಿ ಜಿಲ್ಲೆಯ ರಂಗನಟಿಯರು ಯಾವ ನಿಟ್ಟಿನಲ್ಲಿ ಸಾಗುತ್ತಿದ್ದಾರೆ ಅವರ ಪರಂಪರೆಯನ್ನು ಮುಂದುವರಿಸಲು ಸಾಧ್ಯವೇ? ಒಂದು ವೇಳೆ ಸಾಧ್ಯವಿದ್ದರೆ ಅದಕ್ಕಿರುವ ಅಡ್ಡಿ ಆತಂಕಗಳ ವಿಶ್ಲೇಷಣೆ, ನಟಿಯರ ಮೂಲಭೂತ ಸಮಸ್ಯೆಗಳಾವುವು. ಇಂದು ಸಾಂಸ್ಕೃತಿಕವಾಗಿ ಅನನ್ಯತೆಯನ್ನು ಪಡೆದುಕೊಂಡಿರುವ ರಂಗನಟಿಯರು ಇತರ ನಟಿಯರ ಬಗ್ಗೆ ಹೊಂದಿರುವ ಅಭಿಪ್ರಾಯವೇನು? ನಟಿಯರ ಪರಂಪರೆ ಮುಂದುವರಿಯುವಂತೆ ಮಾಡಲು ಇವರ ಸಲಹೆ ಸೂಚನೆಗಳೇನು? ಹೀಗೆ ಹಲವಾರು ರೀತಿಯಲ್ಲಿ ನಟಿಯರ ಬಗ್ಗೆ ಕೂಲಂಕಷವಾಗಿ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಸಂಶೋಧನೆಯಿಂದ ಕಂಡುಕೊಂಡ ಫಲಿತಗಳು

೧. ಬಳ್ಳಾರಿ ಜಿಲ್ಲೆಯಲ್ಲಿ ರಂಗನಟಿಯರ ಬಹುದೊಡ್ಡ ಪರಂಪರೆಯೇ ಇದೆ.

೨. ಕೆಳವರ್ಗದಿಂದಲೇ ನಟಿಯರು ಹೆಚ್ಚಾಗಿ ಬಂದಿದ್ದಾರೆ.

೩. ಬಳ್ಳಾರಿ ಜಿಲ್ಲೆಯ ಕೊಡುಗೆ ರಂಗಭೂಮಿಗೆ ಶ್ಲಾಘನೀಯ.

೪. ರಂಗನಟಿಯರು ಇಡೀ ಜಿಲ್ಲೆಯಲ್ಲಿ ತಮ್ಮದೇ ಆದ ಅನನ್ಯತೆಯನ್ನು ಪಡೆದುಕೊಂಡಿದ್ದಾರೆ. ಒಂದು ಶತಮಾನದ ಹಿಂದೆಯೇ ಬಳ್ಳಾರಿ ಜಿಲ್ಲೆಯ ಮಹಿಳೆಯರು ರಂಗಪ್ರವೇಶವನ್ನು ಮಾಡಿದ್ದಾರೆ.

೫. ಬಳ್ಳಾರಿ ಜಿಲ್ಲೆಯಲ್ಲಿ ೨೦೦ಕ್ಕೂ ಹೆಚ್ಚು ಜನ ನಟಿಯರು ಸಿಗುತ್ತಾರೆ.

೬. ವಿಶೇಷವಾಗಿ ನಟಿಯರು ಬಳ್ಳಾರಿ, ಹೊಸಪೇಟೆ, ಕಂಪ್ಲಿ, ಮರಿಯಮ್ಮನಹಳ್ಳಿ, ಕೂಡ್ಲಿಗಿ, ಕೊಟ್ಟೂರು, ವಿರೂಪಾಪುರ, ಹಗರಿಬೊಮ್ಮನಹಳ್ಳಿ ಈ ಭಾಗದಲ್ಲಿಯೇ ಹೆಚ್ಚಾಗಿ ಇದ್ದಾರೆ.

೭. ಶಿರುಗುಪ್ಪ, ಸಂಡೂರು ತಾಲೂಕುಗಳಲ್ಲಿ ನಟಿಯರಿಲ್ಲ.

೮. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಮುಸ್ಲಿಂ ಸಮುದಾಯದ ನಟಿಯರಿದ್ದು ದೊಡ್ಡ ದೊಡ್ಡ ತಂಡಗಳನ್ನು ಅವರು ಕಟ್ಟಿಕೊಂಡು ರಂಗಭೂಮಿ ಸೇವೆ ಮಾಡಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಮುಸ್ಲಿಂ ಸಮುದಾಯದ ನಟಿಯರೇ ಇಲ್ಲದಿರುವುದು ವಿಶೇಷ ಸಂಗತಿ.

೯. ಈ ಜಿಲ್ಲೆಯ ನಟಿಯರು ಹಲವು ವೃತ್ತಿ ಕಂಪನಿಗಳಲ್ಲಿ ದುಡಿದು ನಂತರ ತಾವೇ ತಂಡಕಟ್ಟಿ ರಂಗಭೂಮಿ ಸೇವೆ ಸಲ್ಲಿಸಿದ್ದಾರೆ.

೧೦. ಬಳ್ಳಾರಿ ಜಿಲ್ಲೆಯ ರಂಗ ನಟಿಯರು ರಾಜ್ಯಾದ್ಯಂತ ಹೆಸರು ಮಾಡಿದ್ದಾರೆ.

೧೧. ಹಲವಾರು ನಟಿಯರು ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ.

೧೨. ನಟಿಯರಿಗೆ ಮೊದಲು ಶಿಕ್ಷಣವನ್ನು ಕೊಡಿಸಬೇಕು.

೧೩. ಬಳ್ಳಾರಿ ಜಿಲ್ಲೆಯ ನಟಿಯರಿಗೆ ರಂಗ ಶಾಲೆಗಳನ್ನು ತೆರೆಯಬೇಕು.

೧೪. ನಟಿಯರಿಗೆ ಸರಕಾರ ಆರ್ಥಿಕ ಭದ್ರತೆಯನ್ನು ಒದಗಿಸಬೇಕು.

೧೫. ವಿಶ್ವವಿದ್ಯಾಲಯ ಮಟ್ಟಗಳಲ್ಲಿ ನಾಟಕ ವಿಭಾಗವನ್ನು ಆರಂಭಿಸಬೇಕು.

೧೬. ನಟಿಯರಿಗಾಗಿ ಇರುವ ಸಂಸ್ಥೆಗಳು ವರ್ಷದಲ್ಲಿ ಎರಡು ಮೂರು ಶಿಬಿರಗಳನ್ನು ಏರ್ಪಡಿಸಬೇಕು.

೧೭. ಮಕ್ಕಳಿಗೆ ಪಠ್ಯ ಶಿಕ್ಷಣದಲ್ಲಿ ನಾಟಕಕ್ಕೆ ಸಂಬಂಧಿಸಿದ ಪಠ್ಯವನ್ನು ನೀಡುವಂತೆ ಸರಕಾರ ವ್ಯವಸ್ಥೆ ಮಾಡಬೇಕು.

೧೮. ಬುದ್ಧಿಜೀವಿಗಳು ಹೆಚ್ಚಾಗಿ ರಂಗಭೂಮಿಯ ಬಗ್ಗೆ, ನಟಿಯರ ಬಗ್ಗೆ ಚಿಂತನೆಯನ್ನು ಹರಿಸಬೇಕು.

೧೯. ರಂಗ ಮಾಧ್ಯಮದ ಮೂಲಕ ಜನರ ನೈತಿಕ, ಬೌದ್ಧಿಕ ಮಟ್ಟವನ್ನು ಎತ್ತರಿಸಲು ಸರ್ಕಾರ ಪ್ರಯತ್ನಿಸಬೇಕು.

೨೦. ನಟಿಯರಿಗೆ ಇನ್ನೂ ಹೆಚ್ಚಿನ ಪರಿಶ್ರಮದ ಹಾಗೂ ಶಿಸ್ತಿನ ಬಗ್ಗೆ ವ್ಯಾಸಂಗ ಕ್ರಮವನ್ನು ರಂಗತಜ್ಞರು, ಸಂಗೀತವಿದ್ವಾಂಸರಿಂದ ಪಾಠ ಪ್ರವಚನವನ್ನು ಏರ್ಪಡಿಸಬೇಕು.

೨೧. ಸರಕಾರ ಸ್ತ್ರೀ ಜೀವಪರ ಧೋರಣೆಗೆ ಹೆಚ್ಚಿನ ಆದ್ಯತೆಯನ್ನು ರಂಗಭೂಮಿಯಲ್ಲಿ ನೀಡಬೇಕು.

೨೨. ಗ್ರಾಮೀಣ ರಂಗಭೂಮಿಯನ್ನು ಆಧುನಿಕ ವಿದ್ಯಮಾನಕ್ಕೆ ತಕ್ಕಂತೆ ರೂಪಿಸಬೇಕು.

೨೩. ಜಾನಪದ ರಂಗಭೂಮಿಯನ್ನು ಮಾಧ್ಯಮಗಳ ಮುಖೇನ ಬಿಂಬಿಸಿ ಅದಕ್ಕೊಂದು ಶಾಸ್ತ್ರಬದ್ಧ ಗೌರವವನ್ನು ನೀಡಬೇಕು.

೨೪. ರಂಗನಟಿಯರಿಗೆ ಸಂಪೂರ್ಣವಾಗಿ ಎಲ್ಲ ಕ್ಷೇತ್ರಗಳಲ್ಲಿ ಬೆರೆಯುವಂತೆ ಯೋಜನೆಗಳ ಮೂಲಕ ಸರ್ಕಾರ ಅನುಷ್ಠಾನಕ್ಕೆ ತರಬೇಕು.

೨೫. ನಟಿಯರಿಗೆ ಪ್ರಯಾಣ ಮಾಡಲು ಬಸ್‌ಪಾಸ್ ಸೌಲಭ್ಯ ನೀಡಬೇಕು.

೨೬. ನಟಿಯರ ಮಕ್ಕಳಿಗೆ ಸರ್ಕಾರ ವಿದ್ಯಾಭ್ಯಾಸ ಕೊಡಿಸುವುದು.

೨೭. ರಂಗ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವುದು.

೨೮. ರಂಗ ಗೀತೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುವುದು.

೨೯. ನಾಟಕ ರಚನಾಕಾರರು ಹೆಚ್ಚು ಸ್ತ್ರೀಪರ ಕಾಳಜಿಯಲ್ಲಿ ನಾಟಕಗಳನ್ನು ಬರೆಯುವುದು.

೩೦. ರಂಗಭೂಮಿಯು ಕಾವ್ಯದಂತೆ, ಕಾದಂಬರಿಯಂತೆ, ಸಂಗೀತದಂತೆ ಒಂದು ಜನತೆಯ ಸಂಸ್ಕೃತಿಯ ವಿಕಾಸದ ಚಿಹ್ನೆಕೂಡ ಎಂಬ ಪ್ರಜ್ಞಾವಂತಿಕೆ ಪ್ರತಿಯೊಬ್ಬರಲ್ಲೂ ಮೂಡಬೇಕು.

೩೧. ಪ್ರತಿಯೊಬ್ಬ ಸಾರ್ವಜನಿಕರು 'ನಾಟಕ ಕೀಳು' ಎಂಬ ಭಾವನೆಯನ್ನು ಮೊದಲು ತೊಡೆದು ಹಾಕಬೇಕು.

೩೨. ಮಕ್ಕಳ ರಂಗಭೂಮಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿ ಈ ಮೂಲಕ ರಂಗ ತರಬೇತಿ, ನಿರ್ದೇಶನ, ಶಿಕ್ಷಣಕ್ಕೆ ಅರ್ಹರಾದ ನಟಿಯರನ್ನೇ ನೇಮಿಸಬೇಕು.

೩೩. ಹೊಸ ರೀತಿಯ ಯೋಜನೆಗಳನ್ನು ಸರ್ಕಾರ ಕೈಗೊಂಡಾಗ ನಟಿಯರು ಶಿಸ್ತುಬದ್ಧ ವ್ಯವಸ್ಥೆಯನ್ನು ಒಳಪಡುವಂತಾಗುತ್ತದೆ.

೩೪. ರಂಗಭೂಮಿಯೆಂದರೆ ಕಾಲ ಕಳೆಯಲು, ಹರಟೆ ಕೊಚ್ಚಲು ಒಂದು ನಿಮಿತ್ತ ಮಾತ್ರವಾಗದೇ ಬುದ್ಧಿ, ಮನಸ್ಸು ಇಡೀ ವ್ಯಕ್ತಿತ್ವವನ್ನು ಒಳಗೊಳ್ಳುವ ಒಂದು ಕ್ರಿಯೆ ಎಂದು ಸಾರ್ವಜನಿಕರಿಗೆ ಅನಿಸುವಂತೆ ಕಲಾವಿದರು, ರಂಗಭೂಮಿ ಪರಿವರ್ತನೆಗೊಳ್ಳಬೇಕು.

೩೫. ಪ್ರತಿಯೊಬ್ಬ ಕಲಾವಿದರಲ್ಲಿ ತೆರೆದ ಮನಸ್ಸು ವಿಶಾಲದೃಷ್ಟಿ ಕೋನ ವ್ಯಕ್ತಿಗಳಿರಬೇಕು.

೩೬. ತಮ್ಮ ವೃತ್ತಿಯ ಬಗ್ಗೆ ಸ್ವತಃ ಕಲಾವಿದರು ತಾವೇ ಗೌರವಭಾವದಿಂದ ಇದ್ದು ಇತರರು ಗೌರವ ಕೊಡುವಂತಿರಬೇಕು.

ಒಟ್ಟಿನಲ್ಲಿ ನಮ್ಮ ರಂಗ ಕಲಾವಿದೆಯರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಧಾರ್ಮಿಕ ವಾಗಿ ತಮ್ಮದೇ ಆದ ಅನನ್ಯತೆಯನ್ನು ಪಡೆದುಕೊಂಡು ಬಳ್ಳಾರಿ ಜಿಲ್ಲೆಯ ರಂಗ ಇತಿಹಾಸದಲ್ಲಿ ತಮ್ಮ ಉಜ್ವಲ ಪರಂಪರೆಯ ಛಾಪನ್ನು ಹೊತ್ತಿಸಿದ್ದಾರೆ. ಆದ್ದರಿಂದ ಅವರ ಸರ್ವತೋಮುಖ ಅಭಿವೃದ್ಧಿಗೆ ಸರಕಾರ ಶ್ರಮಿಸಿದರೆ ಸಾರ್ಥಕವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ರಂಗಭೂಮಿಯ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ರಂಗನಟಿಯರ ಬಗ್ಗೆ, ಸಂಗೀತಗಾರರ ಬಗ್ಗೆ ಇಂದು ಅವರೆಲ್ಲರ ಬಗ್ಗೆಯೂ ಒಂದೊಂದು ಸಂಶೋಧನಾ ಕೃತಿಯಾಗುವಷ್ಟು ಮಾಹಿತಿ ಇದೆ. ಮುಂದಿನ ವಿದ್ವಾಂಸರು ಈ ಕಾರ್ಯಕ್ಕೆ ತೊಡಗುವರೆಂದೇ ನನ್ನ ಅನಿಸಿಕೆ. ರಂಗನಟಿಯರಿಗೆ ಸರಕಾರದಿಂದ ಭದ್ರತೆ ಒದಗಿದರೆ ನಟಿಯರ ಪರಂಪರೆ ಮುಂದುವರೆದು ಬಳ್ಳಾರಿ ಜಿಲ್ಲೆಯ ರಂಗಭೂಮಿ ಬೆಳವಣಿಗೆಗೆ ಸಂಪೂರ್ಣ ಸಹಕಾರ ನೀಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಸರಕಾರ ಕ್ರಮಕೈಗೊಳ್ಳ ಬೇಕಾಗಿದೆ.

ಅನುಬಂಧ ೧

ರಂಗನಟಿಯರ ಪ್ರೊಫೈಲ್

ಅನುಬಂಧ ೧

ರಂಗನಟಿಯರ ಪ್ರೊಫೈಲ್



ಹೆಸರು	:	ಎಸ್.ಕಮಲಮ್ಮ
ವಯಸ್ಸು	:	೬೮
ತಾಯಿ	:	ದುರ್ಗಮ್ಮ (ಹಿನ್ನೆಲೆ ಗಾಯಕಿ)
ಊರು	:	ಕೊಟ್ಟೂರು
ವಿದ್ಯಾಭ್ಯಾಸ	:	೩ನೇ ತರಗತಿ
ನಾಟಕ	:	ಅಕ್ಷಯಾಂಬರ, ಬಡನಭೂತ, ಮಲ್ಲಮ್ಮ, ಹರಿಶ್ಚಂದ್ರ, ಭಸ್ಮಾಸುರ, ಗಂಡನ ಮನೆ



ಹೆಸರು	**:**	**ಕೆ.ನೀಲಮ್ಮ**
ವೃತ್ತಿ	:	ರಂಗ ಕಲಾವಿದೆ ಮತ್ತು ಲೇಖಕಿ
ಜಾತಿ	:	ಕುರುಬ (ಹಾಲುಮತ)
ವಿದ್ಯಾಭ್ಯಾಸ	:	೩ನೇ ತರಗತಿ
ಊರು	:	ಏಣಗಿ
ತಂದೆ	:	ಮಲ್ಲನಗೌಡ
ತಾಯಿ	:	ದ್ಯಾಮಕ್ಕ
ರಂಗಭೂಮಿ ಪ್ರವೇಶ	:	೧೫ ವರ್ಷದಲ್ಲಿ
ವಯಸ್ಸು	:	೪೫
ಪ್ರೋತ್ಸಾಹ	:	೧೦೦೦

ಮಾಸ್ತರ : ಏಣಗಿ ಖಾಸಿಂಸಾಬ್, ಉಲುವತ್ತಿ ವೀರಣ್ಣ

ರಂಗಭೂಮಿ : ೧. ಕುಮಾರೇಶ್ವರ ನಾಟಕ ಸಂಸ್ಥೆ, ಹೊಸದುರ್ಗ

೨. ಗುಡಿಗೇರಿ ಬಸವರಾಜ ಕಂಪನಿ

೩. ಹೊಳೆಹೊನ್ನೂರು ಬಾಳಪ್ಪ ಕಂಪನಿ

೪. ಇಳಕಲ್ಲು ಗೊಡೋಸಾಬ್ ಕಂಪನಿ

೫. ಮಕ್ಕಣ್ಣಯ್ಯ ಬಸವೇಶ್ವರ ನಾಟಕ ಸಂಸ್ಥೆ

೬. ಕಂಚಿಕೇರಿ ಶಾರದ ನಾಟಕ ಕಂಪನಿ

೭. ಮುಳುವಾಡ ಅಪ್ಪಣ್ಣ ಸಿದ್ಧರಾಮೇಶ್ವರ ನಾಟಕ ಕಂಪನಿ

೮. ದೇವಗಿರಿ ಕರೀಂಸಾಬ್ ಕಂಪನಿ

೯. ಪಂಚಾಕ್ಷರಿ ನಾಟಕ ಕಂಪನಿ



ಹೆಸರು : ಮನ್ನೂರು ಸುಭದ್ರಮ್ಮ

ಜನನ : ೧೯೩೯

ವೃತ್ತಿ : ರಂಗ ಕಲಾವಿದೆ, ರಂಗ ಕೋಗಿಲೆ

ಶಿಕ್ಷಣ : ೬ನೇ ತರಗತಿ

ಸಂಗೀತ ಗುರು : ಎಂ.ಚಂದ್ರಶೇಖರ ಗವಾಯಿ

ಊರು : ಬಳ್ಳಾರಿ

ತಂದೆ : ಜ್ವಾಲಾಪತಿ ಹಾರ್ಮೋನಿಯಂ ವಾದಕರು

ತಾಯಿ : ಭಾಗ್ಯಮ್ಮ

ರಂಗಭೂಮಿ ಪ್ರವೇಶ : ೧೨ನೇ ವಯಸ್ಸು, ೧೯೫೨ರಲ್ಲಿ ಮಂಗಳೂರಿನ ಶ್ರೀಧರರಾವ್ ಮಾಲೀಕತ್ವದ ಸುಮಂಗಲಿ ನಾಟ್ಯ ಸಂಘ, ಏಣಗಿ ಬಾಳಪ್ಪನವರ ಕಂಪನಿಯಲ್ಲಿ ಬಾಲ ನಟಿಯಾಗಿ

ವಯಸ್ಸು : ೬೦

ಪ್ರೋತ್ಸಾಹ : ತಾಯಿಯಿಂದ

ಮಾಸ್ತರ : ಬಸವರಾಜ ಮನ್ಸೂರು

ರಂಗಭೂಮಿ ಸೇವೆ : ಇಂದಿಗೂ

ಸಂಭಾವನೆ : ೩೦೦೦/-

ಹೆಸರು : ಬೆಳ್ಳಕ್ಕಿ ಚೌಡಮ್ಮ



ವೃತ್ತಿ : ರಂಗಭೂಮಿ

ವಿದ್ಯಾಭ್ಯಾಸ : ೫ನೇ ತರಗತಿ

ಊರು : ಚಿಂತ್ರಪಳ್ಳಿ

ತಾಯಿ : ತಿಂದಮ್ಮ


ವಯಸ್ಸು : ೬೫

ರಂಗಭೂಮಿ ಪ್ರವೇಶ : ೧೫ನೇ ವರ್ಷ

ಸಂಭಾವನೆ : ೧೦೦

ಮಾಸ್ತರ : ಕಂಟ್ಲಿ ಕೊಟ್ರಪ್ಪ, ಭವಾನಿ ಕೊಟ್ರಪ್ಪ, ಏಣಗಿ ಕಾಸಿಂಸಾಬ್, ಬನ್ನಿಕಲ್ಲು ನಾಗಪ್ಪ, ಅಂಬಳಿ ಪಂಚಯ್ಯ

ಹೆಸರು : ಬಿ.ಸುಜಾತಮ್ಮ



ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ವಿದ್ಯಾಭ್ಯಾಸ : ೭ನೇ ತರಗತಿ

ಊರು : ವಟಮನಹಳ್ಳಿ

ತಾಯಿ : ಚೌಡಮ್ಮ

ರಂಗಭೂಮಿ ಪ್ರವೇಶ : ೧೫ನೇ ವರ್ಷದಲ್ಲಿ

ವಯಸ್ಸು : ೪೦

ಪ್ರೋತ್ಸಾಹ : ಇಲ್ಲ

ಮಾಸ್ತರ : ಇಲ್ಲ

ರಂಗಭೂಮಿ : ೨೦ ವರ್ಷದಿಂದ

ಹೆಸರು : ಬಿ.ನಾಗರತ್ನಮ್ಮ



ಜಾತಿ : ವಾಲ್ಮೀಕಿ

ವಯಸ್ಸು : ೪೮

ವಿದ್ಯಾಭ್ಯಾಸ : ೫ ನೇ ತರಗತಿ

ತಾಯಿ : ಕೊತ್ಲಮ್ಮ

೧೫, ೧೬ ವರ್ಷ ನಾಟಕ

ನಾಟಕಗಳು : ಅಣ್ಣತಂಗಿ - ಗಂಗಾ ಪಾತ್ರ

ಆದರ್ಶಪ್ರೇಮ - ಕಮಲ



ಹೆಸರು : ದುರ್ಗಮ್ಮ ಬಿ.

ತಾಯಿ : ಬಾಳಾದ ಚೌಡಮ್ಮ

ವಯಸ್ಸು : ೬೦

ತರಬೇತಿ : ಸವಣೂರು ಲಿಂಗಪ್ಪ, ಹಾರ್ಮೋನಿಯಂ ಮಾಸ್ತರ,

ದುರ್ಗಾದಾಸರ ಸಮಕಾಲೀನ

ಹೆಸರು : ಬಿ.ನಾಗಮ್ಮ



ವೃತ್ತಿ : ರಂಗ ಕಲಾವಿದೆ

ಜಾತಿ : ನಾಯಕರು

ಶಿಕ್ಷಣ : ೫ನೇ ತರಗತಿ

ಊರು	:	ಬಳ್ಳಾರಿ
ತಂದೆ	:	ಬಸಪ್ಪ
ತಾಯಿ	:	ಬಸಮ್ಮ
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿ
ವಯಸ್ಸು	:	೨೬
ಪ್ರೋತ್ಸಾಹ	:	ಮನೆಯಿಂದ
ರಂಗಭೂಮಿ ಸೇವೆ	:	೧೫ ವರ್ಷದಿಂದ
ಸಂಭಾವನೆ	:	೧೦೦೦/-



ಹೆಸರು	**:**	**ಬಿ.ಶಾರದ**
ವೃತ್ತಿ	:	ರಂಗಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೫ನೇ ತರಗತಿ
ವಯಸ್ಸು	:	३೫
ತಂದೆ	:	ಬಸಪ್ಪ
ತಾಯಿ	:	ಮಾರಮ್ಮ
ಊರು	:	ವಿರೂಪಾಪುರ
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ
ಪ್ರೋತ್ಸಾಹ	:	ತಂದೆ, ತಾಯಿಯಿಂದ
ತರಬೇತಿ	:	ಮನೆಯಲ್ಲಿಯೆ
ಮಾಸ್ತರ	:	ಇಲ್ಲ
ಸಂಭಾವನೆ	:	೧೦೦೦ ದಿಂದ ೧೨೦೦
ರಂಗಭೂಮಿ ಸೇವೆ	:	೨೫ ವರ್ಷದಿಂದ



ಹೆಸರು : ಎಸ್.ಅಂಜಿನಮ್ಮ

ವೃತ್ತಿ : ರಂಗಕಲಾವಿದೆ

ಜಾತಿ : ವಾಲ್ಮೀಕಿ

ಶಿಕ್ಷಣ : ೪ನೇ ತರಗತಿ

ವಯಸ್ಸು : ೪೩

ತಂದೆ : ಹನುಮಂತಪ್ಪ

ತಾಯಿ : ಗಂಡೆಮ್ಮ

ಊರು : ವಿರೂಪಾಪುರ

ರಂಗಭೂಮಿ ಪ್ರವೇಶ : ಚಿಕ್ಕ ವಯಸ್ಸಿನಲ್ಲಿಯೇ

ಪ್ರೋತ್ಸಾಹ : ತಂದೆ, ತಾಯಿಯಿಂದ

ತರಬೇತಿ : ಇಲ್ಲ

ಮಾಸ್ತರ : ಇಲ್ಲ

ಸಂಭಾವನೆ : ೧೫೦೦ ದಿಂದ ೨೦೦೦

ರಂಗಭೂಮಿ ಸೇವೆ : ೩೦ ವರ್ಷದಿಂದ



ಹೆಸರು : ಜ್ಯೂನಿಯರ್ ಬಿ.ಶಿವಕುಮಾರಿ

ಜಾತಿ : ವಾಲ್ಮೀಕಿ

ವೃತ್ತಿ : ರಂಗಕಲಾವಿದೆ

ಕುಟುಂಬ : ಕೃಷಿಕ

ವಯಸ್ಸು : ೨೯

ಶಿಕ್ಷಣ : ೭ನೇ ತರಗತಿ

ತಾಯಿ : ಭರಮವ್ವ

ಊರು : ಕೂಡ್ಲಿಗಿ

ರಂಗಭೂಮಿ ಪ್ರವೇಶ : ೧೫

ಮಾಸ್ತರ : ರೇಣುಕಮ್ಮನ ಹತ್ತಿರ ತರಬೇತಿ

ಸಂಭಾವನೆ : ೮೦೦ರಿಂದ ೯೦೦

ಮರಣ ಹೊಂದಿದ್ದಾರೆ



ಹೆಸರು : ಟಿ.ಭಾರತಿ (ಬಸಮ್ಮ)

ಜಾತಿ : ವಾಲ್ಮೀಕಿ

ವೃತ್ತಿ : ರಂಗಕಲಾವಿದೆ

ವಯಸ್ಸು : ೩೫

ಶಿಕ್ಷಣ : ೫ನೇ ತರಗತಿ

ಊರು : ಕೂಡ್ಲಿಗಿ

ರಂಗಭೂಮಿ ಪ್ರವೇಶ : ೮ನೇ ವರ್ಷದಿಂದ

ಮಾಸ್ತರ : ಏಣಗಿ ಕಾಸಿಂಸಾಬ್

ಸಂಭಾವನೆ : ೮೦೦ರಿಂದ ೧೦೦೦

ರಂಗಭೂಮಿ ಸೇವೆ : ೨೫ ವರ್ಷಗಳಿಂದ



ಹೆಸರು : ಕೆ.ದುಶೀಲ

ವೃತ್ತಿ : ರಂಗಕಲಾವಿದೆ

ಶಿಕ್ಷಣ : ೪ನೇ ತರಗತಿ

ಜಾತಿ : ವಾಲ್ಮೀಕಿ

ಊರು : ಕೂಡ್ಲಿಗಿ

ತಾಯಿ : ದುರ್ಗಮ್ಮ

ಕುಟುಂಬ : ಕೃಷಿಕ

ರಂಗಭೂಮಿ ಪ್ರವೇಶ : ೧೪ನೇ ವರ್ಷದಿಂದ

ಪ್ರೋತ್ಸಾಹ : ಇಲ್ಲ

ಮಾಸ್ತರ : ಇಲ್ಲ

ಸಂಭಾವನೆ : ೮೦೦

ತರಬೇತಿ : ಸ್ವ ಆಸಕ್ತಿಯಿಂದ

ರಂಗಭೂಮಿ ಸೇವೆ : ೨೦ ವರ್ಷದಿಂದಲೂ



ಹೆಸರು : ಬಿ.ಶಿವಕುಮಾರಿ

ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ತಾಯಿ : ಶಾರದಮ್ಮ

ಶಿಕ್ಷಣ : ೧೦ನೇ ತರಗತಿ

ವಯಸ್ಸು : ೩೨

ಊರು : ಕೂಡ್ಲಿಗಿ

ಕುಟುಂಬ : ಕೃಷಿಕ

ರಂಗಭೂಮಿ ಪ್ರವೇಶ : ೧೨ನೇ ವರ್ಷದಲ್ಲಿದ್ದಾಗ

ಪ್ರೋತ್ಸಾಹ : ತಾಯಿ ಹಾಗೂ ಅಜ್ಜಿಯ ಪ್ರೋತ್ಸಾಹ

ಸಂಭಾವನೆ : ೧೦೦೦ ದಿಂದ ೧೨೦೦

ತರಬೇತಿ : ಇಲ್ಲ

ರಂಗಭೂಮಿ ಸೇವೆ : ೨೫ ವರ್ಷಗಳಿಂದ



ಹೆಸರು	**:**	**ಪಿ.ಪದ್ಮ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ತಂದೆ	:	ರಾಮಚಂದ್ರಪ್ಪ
ತಾಯಿ	:	ಹನುಮಂತಮ್ಮ
ಶಿಕ್ಷಣ	:	೭ನೇ ತರಗತಿ
ವಯಸ್ಸು	:	೪೭
ಊರು	:	ಕೂಡ್ಲಿಗಿ
ಕುಟುಂಬ	:	ಕೃಷಿಕ
ರಂಗಭೂಮಿ ಪ್ರವೇಶ	:	೧೦ನೇ ವರ್ಷದಲ್ಲಿದ್ದಾಗ
ಪ್ರೋತ್ಸಾಹ	:	ಚಿಕ್ಕಮ್ಮರಾದ ಲಕ್ಷ್ಮಿ ಪ್ರೇರಣೆಯಿಂದ
ಸಂಭಾವನೆ	:	೧೨೦೦ ದಿಂದ ೧೫೦೦
ತರಬೇತಿ	:	ಮನೆಯಲ್ಲಿಯೇ
ರಂಗಭೂಮಿ ಸೇವೆ	:	೩೫ ವರ್ಷಗಳಿಂದ
ಮಾಸ್ತರ	:	ನೀಲಕಂಠಾಚಾರ್ಯ



ಹೆಸರು	**:**	**ನಾಗರತ್ನಮ್ಮ ಬಿ.**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ತಾಯಿ	:	ಕೊತ್ಲಮ್ಮ
ಶಿಕ್ಷಣ	:	೫ನೇ ತರಗತಿ
ವಯಸ್ಸು	:	೪೮

ಊರು : ಕೂಡ್ಲಿಗಿ

ರಂಗಭೂಮಿ ಪ್ರವೇಶ : ೧೫ನೇ ವರ್ಷದಿಂದ

ಪ್ರೋತ್ಸಾಹ : ಮನೆಯಿಂದ

ರಂಗಭೂಮಿ ಸೇವೆ : ಇಪ್ಪತ್ತು ವರ್ಷಗಳು



ಹೆಸರು : ಸೋಗಿ ರತ್ನಮ್ಮ

ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ವಯಸ್ಸು : ೪೫

ಶಿಕ್ಷಣ : ೬ನೇ ತರಗತಿ

ಊರು : ನಾಗತಿ ಬಸಾಪುರ, ಈಗ ಸೋಗಿಯಲ್ಲಿ ವಾಸ

ರಂಗಭೂಮಿ ಪ್ರವೇಶ : ೧೦ನೇ ವಯಸ್ಸಿನಲ್ಲಿ

ತಂದೆ : ತುಮೆನಪ್ಪ

ತಾಯಿ : ಕಾಳಮ್ಮ

ತರಬೇತಿ : ಬೆಳವಿಗಿ ತುಳಸಿ ದಾಸರ ಕಂಪನಿ, ಗುತ್ತಲ ಕುಮಾರಸ್ವಾಮಿ ಕಂಪನಿ, ಕಡಪಟ್ಟಿ ಪ್ರಕಾಶ ಕಂಪನಿ

ಸಂಭಾವನೆ : ೧೦೦೦

ರಂಗಭೂಮಿ ಸೇವೆ : ಇಂದಿಗೂ



ಹೆಸರು	**:**	**ರಂಗವೇಣಿ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ನಾಯಕರು
ಶಿಕ್ಷಣ	:	ಇಲ್ಲ
ಊರು	:	ಬಳ್ಳಾರಿ
ತಂದೆ	:	ಮಲಿಯಪ್ಪ
ತಾಯಿ	:	ಚೌಡಾಂಬ
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲೆ
ವಯಸ್ಸು	:	೪೦
ಪ್ರೋತ್ಸಾಹ	:	ಮನೆಯಿಂದ
ಸಂಭಾವನೆ	:	೧೦೦೦ ದಿಂದ ೧೨೦೦



ಹೆಸರು	**:**	**ಬಿ. ಉಷಾರಾಣಿ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ನಾಯಕರು
ಶಿಕ್ಷಣ	:	ಇಲ್ಲ
ಊರು	:	ಬಳ್ಳಾರಿ
ತಂದೆ	:	ಉಚ್ಚಪ್ಪ
ತಾಯಿ	:	ಭೀಮಮ್ಮ
ರಂಗಭೂಮಿ ಪ್ರವೇಶ	:	೧೨ ನೇ ವರ್ಷದಿಂದ
ವಯಸ್ಸು	:	೪೫
ಪ್ರೋತ್ಸಾಹ	:	ಗಂಡನಿಂದ
ಮಾಸ್ತರ	:	ಈರಯ್ಯ ಮೇಷ್ಟ್ರು
ರಂಗಭೂಮಿ ಸೇವೆ	:	೩೦ ವರ್ಷದಿಂದ



ಹೆಸರು : ಚಾಮುಂಡೇಶ್ವರಿ

ವೃತ್ತಿ : ರಂಗ ಕಲಾವಿದೆ

ಜಾತಿ : ಜಂಗಮರು

ಶಿಕ್ಷಣ : ೬ನೇ ತರಗತಿ

ಊರು : ಯಳ್ಳಾರ್ತಿ (ಬಳ್ಳಾರಿ ಈಗಿರುವ ಸ್ಥಳ)

ತಂದೆ : ವೀರಭದ್ರಯ್ಯ ಸ್ವಾಮಿ

ತಾಯಿ : ಬಸಮ್ಮ

ರಂಗಭೂಮಿ ಪ್ರವೇಶ : ಅತೀ ಚಿಕ್ಕ ವಯಸ್ಸಿನಲ್ಲಿ

ವಯಸ್ಸು : ೩೦

ಪ್ರೋತ್ಸಾಹ : ತಂದೆಯಿಂದ

ಮಾಸ್ತರ : ತಂದೆಯೇ

ರಂಗಭೂಮಿ ಸೇವೆ : ೨೦ ವರ್ಷದಿಂದ

ಸಂಭಾವನೆ : ೨೦೦೦ ದಿಂದ ೩೦೦೦ ದವರೆಗೆ



ಹೆಸರು : ಕೆ.ನಾಗರತ್ನಮ್ಮ

ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ಶಿಕ್ಷಣ : ೧೦ನೇ ತರಗತಿ

ಊರು : ಮರಿಯಮ್ಮನಹಳ್ಳಿ

ತಂದೆ : ಮಾರಪ್ಪ

ತಾಯಿ : ಸಿದ್ದಮ್ಮ

ರಂಗಭೂಮಿ ಪ್ರವೇಶ : ಪ್ರೌಢಶಾಲಾ ಹಂತದಲ್ಲಿ

ವಯಸ್ಸು : ೫೦

ಪ್ರೋತ್ಸಾಹ : ತಂದೆಯಿಂದ

ಮಾಸ್ತರ : ಡಿ.ಎಂ.ತೋಟಯ್ಯ ಸ್ವಾಮಿ

ರಂಗಭೂಮಿ ಸೇವೆ : ಇಂದಿಗೂ

ಸಂಭಾವನೆ : ೨೦೦೦ ದಿಂದ ೩೦೦೦

ಹೆಸರು : ಬಿ.ಶಾರದ



ವೃತ್ತಿ : ರಂಗ ಕಲಾವಿದೆ

ಜಾತಿ : ನಾಯಕರು

ಶಿಕ್ಷಣ : ೫ನೇ ತರಗತಿ

ಊರು : ಮರಿಯಮ್ಮನಹಳ್ಳಿ

ತಾಯಿ : ತಿರುಮಲ (ರಂಗ ಕಲಾವಿದೆ)

ರಂಗಭೂಮಿ ಪ್ರವೇಶ : ಚಿಕ್ಕಂದಿನಲ್ಲಿ

ವಯಸ್ಸು : ೩೮

ಪ್ರೋತ್ಸಾಹ : ತಾಯಿಯಿಂದ

ಮಾಸ್ತರ : ಡಿ.ಎಂ. ತೋಟಯ್ಯಸ್ವಾಮಿ

ರಂಗಭೂಮಿ ಸೇವೆ : ಮೂರು ದಶಕಗಳಿಂದ

ಸಂಭಾವನೆ : ೧೦೦೦

ಹೆಸರು : ಸೆರೆಗಾರ ಗಂಗಮ್ಮ



ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ಶಿಕ್ಷಣ : ಇಲ್ಲ

ಊರು : ಮರಿಯಮ್ಮನಹಳ್ಳಿ

ರಂಗಭೂಮಿ ಪ್ರವೇಶ	: ಚಿಕ್ಕ ವಯಸ್ಸಿನಲ್ಲಿ
ಊರು	: ಮರಿಯಮ್ಮನಹಳ್ಳಿ
ವಯಸ್ಸು	: ೭೦
ಪ್ರೋತ್ಸಾಹ	: ಮನೆಯಿಂದ
ರಂಗಭೂಮಿ ಸೇವೆ	: ನಿರಂತರ
ಸಂಭಾವನೆ	: ೫೦೦/-



ಹೆಸರು	**: ಬಿ.ವಿಜಯಲಕ್ಷ್ಮಿ**
ವೃತ್ತಿ	: ರಂಗ ಕಲಾವಿದೆ
ಜಾತಿ	: ವಾಲ್ಮೀಕಿ
ಶಿಕ್ಷಣ	: ೮ನೇ ತರಗತಿ
ತಂದೆ	: ಹನುಮಂತಪ್ಪ
ತಾಯಿ	: ಹಂಪಮ್ಮ
ವಯಸ್ಸು	: ೨೫
ಊರು	: ವಿರುಪಾಪುರ
ರಂಗಭೂಮಿ ಪ್ರವೇಶ	: ೧೨ ವರ್ಷದಿಂದ
ಮಾಸ್ತರ	: ಕಣಕನಕಲ್ಲ
ಪ್ರೋತ್ಸಾಹ	: ಮನೆಯಿಂದ
ಸಂಭಾವನೆ	: ೧೦೦೦ ದಿಂದ ೧,೫೦೦
ತರಬೇತಿ	: ಇಲ್ಲ
ರಂಗಭೂಮಿ ಸೇವೆ	: ೧೫ ವರ್ಷದಿಂದ

ಹೆಸರು	:	ಭಾಗ್ಯಶ್ರೀ ಬಿ.
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೭ನೇ ತರಗತಿ
ತಂದೆ	:	ಮಾರಪ್ಪ
ತಾಯಿ	:	ಭರ್ಮಮ್ಮ
ಊರು	:	ವಿರುಪಾಪುರ
ವಯಸ್ಸು	:	೩೦
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ
ಪ್ರೋತ್ಸಾಹ	:	ಮನೆಯಿಂದ
ತರಬೇತಿ	:	ಇಲ್ಲ
ಸಂಭಾವನೆ	:	೧೦೦೦
ರಂಗಭೂಮಿ ಸೇವೆ	:	೫, ೬ ವರ್ಷದಿಂದ

ಹೆಸರು	:	**ಎಸ್.ನಾಗವೇಣಿ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೬ನೇ ತರಗತಿ
ತಾಯಿ	:	ನಾಗಮ್ಮ
ಊರು	:	ವಿರೂಪಾಪುರ
ವಯಸ್ಸು	:	೩೫
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ

ತರಬೇತಿ	:	ಮನೆಯಲ್ಲಿಯೇ
ಸಂಭಾವನೆ	:	೧೦೦೦ ದಿಂದ ೧೨೦೦
ರಂಗಭೂಮಿ ಸೇವೆ	:	೨೦ ವರ್ಷದಿಂದ್ದ
ಮಾಸ್ತರ	:	ಇಲ್ಲ

ಹೆಸರು	**:**	**ಕರಿಬಸಮ್ಮ**
ಜಾತಿ	:	ಮ್ಯಾಸ ನಾಯಕರು
ಶಿಕ್ಷಣ	:	ಇಲ್ಲ
ತಂದೆ	:	ಕರಿಬಸಪ್ಪ
ತಾಯಿ	:	ತಾಯಮ್ಮ
ಊರು	:	ವಿರುಪಾಪುರ
ವಯಸ್ಸು	:	೬೫
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ
ತರಬೇತಿ	:	ಇಲ್ಲ
ಸಂಭಾವನೆ	:	ಮೊದಲು ೨೫ ರೂಪಾಯಿ
ರಂಗಭೂಮಿ ಸೇವೆ	:	೧೦, ೧೫ ವರ್ಷದಿಂದ
ಮಾಸ್ತರ	:	ಇಲ್ಲ
ಪ್ರೋತ್ಸಾಹ	:	ಇಲ್ಲ

ಹೆಸರು	**:**	**ಬಿ.ಶಾರದ**
ವೃತ್ತಿ	:	ರಂಗಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೫ನೇ ತರಗತಿ

ವಯಸ್ಸು	:	೩೫
ತಂದೆ	:	ಬಸಪ್ಪ
ತಾಯಿ	:	ಮಾರಮ್ಮ
ಊರು	:	ವಿರೂಪಾಪುರ
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ
ಪ್ರೋತ್ಸಾಹ	:	ತಂದೆ, ತಾಯಿಯಿಂದ
ತರಬೇತಿ	:	ಮನೆಯಲ್ಲಿಯೆ
ಮಾಸ್ತರ	:	ಇಲ್ಲ
ಸಂಭಾವನೆ	:	೧೦೦೦ ದಿಂದ ೧೨೦೦
ರಂಗಭೂಮಿ ಸೇವೆ	:	೨೫ ವರ್ಷದಿಂದ

ಹೆಸರು	:	ಮಂಜುಳಾ ಎಂ.
ವೃತ್ತಿ	:	ರಂಗಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೯ನೇ ತರಗತಿ
ತಾಯಿ	:	ಪಕ್ಕೀರಮ್ಮ
ಊರು	:	ಕೂಡ್ಲಿಗಿ
ರಂಗಭೂಮಿ ಪ್ರವೇಶ	:	ಪ್ರೌಢಶಾಲಾ ಹಂತದಲ್ಲಿ
ಪ್ರೋತ್ಸಾಹ	:	ತಾಯಿಯಿಂದ
ತರಬೇತಿ	:	ಇಲ್ಲ
ಮಾಸ್ತರ	:	ಇಲ್ಲ
ಸಂಭಾವನೆ	:	೧೦೦೦ ದಿಂದ ೧೨೦೦
ರಂಗಭೂಮಿ ಸೇವೆ	:	೧೫ ವರ್ಷದಿಂದ

ಹೆಸರು	**:**	**ದುರ್ಗಮ್ಮ ಬಿ.**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ತಾಯಿ	:	ಬಾಣದ ಚೌಡಮ್ಮ
ಶಿಕ್ಷಣ	:	ಇಲ್ಲ
ವಯಸ್ಸು	:	೭೦
ಊರು	:	ಕೂಡ್ಲಿಗಿ
ಪ್ರೋತ್ಸಾಹ	:	ಸವಣೂರು ಲಿಂಗಪ್ಪ ಹಾರ್ಮೋನಿಯಂ ಮಾಸ್ತರ (ದುರ್ಗಾದಾಸರ ಸಮಕಾಲೀನರು)
ರಂಗಭೂಮಿ ಸೇವೆ	:	ನಿವೃತ್ತಿ
ಮಾಸ್ತರ	:	ಸವಣೂರು ಲಿಂಗಪ್ಪ

ಹೆಸರು	**:**	**ನಾಗರತ್ನಮ್ಮ ಹೊಸಮನಿ**
ವೃತ್ತಿ	:	ರಂಗ ಕಲಾವಿದೆ
ಶಿಕ್ಷಣ	:	ಪ್ರಾಥಮಿಕ ಶಾಲೆ
ವಯಸ್ಸು	:	೭೫
ತಾಯಿ	:	ಹುಲಿಗೆಮ್ಮ ಸಾಕುಮಗಳು
ಊರು	:	ಕೊಟ್ಟೂರು
ರಂಗಭೂಮಿ ಪ್ರವೇಶ	:	ಚಿಕ್ಕವಳಿದ್ದಾಗ
ಪ್ರೋತ್ಸಾಹ	:	ಹಣಗಿ ಚೆನ್ನಪ್ಪ
ಮಾಸ್ತರ	:	ಬಸವಣ್ಣಪ್ಪ (ಕಲಾಪತ್ರಿ)

ಹೆಸರು	: ಜೆ.ಮಂಜುಳಾ
ವೃತ್ತಿ	: ರಂಗ ಕಲಾವಿದೆ
ಶಿಕ್ಷಣ	: ೫ನೇ ತರಗತಿ
ವಯಸ್ಸು	: ೩೦
ತಾಯಿ	: ಶೇಕಮ್ಮ
ಊರು	: ಸೋಗಿ
ರಂಗಭೂಮಿ ಪ್ರವೇಶ	: ಚಿಕ್ಕವಳಿದ್ದಾಗ
ಪ್ರೋತ್ಸಾಹ	: ತಾಯಿಯಿಂದ
ಮಾಸ್ತರ	: ಸ್ವ ಆಸಕ್ತಿ
ಸಂಭಾವನೆ	: ೫೦೦ ರೂ

ಹೆಸರು	: ಕಮಲಮ್ಮ
ವೃತ್ತಿ	: ರಂಗ ಕಲಾವಿದೆ (ಈಗ ನಿವೃತ್ತಿ)
ಜಾತಿ	: ಹಾಸ್ಯಗಾರರು
ಶಿಕ್ಷಣ	: ೨ನೇ ತರಗತಿ
ವಯಸ್ಸು	: ೫೮
ತಂದೆ	: ನಿಂಗಪ್ಪ
ತಾಯಿ	: ಯಮುನಮ್ಮ
ಊರು	: ಹಡಗಲಿ
ರಂಗಭೂಮಿ ಪ್ರವೇಶ	: ಚಿಕ್ಕ ವಯಸ್ಸಿನಲ್ಲಿ
ಪ್ರೋತ್ಸಾಹ	: ಪಕ್ಕೀರಪ್ಪ ರಾಣೇಬೆನ್ನೂರು
ಮಾಸ್ತರ	: ಪಕ್ಕೀರಪ್ಪ
ರಂಗಭೂಮಿ ಸೇವೆ	: ೧೨ ವರ್ಷಗಳವರೆಗೆ

ಹೆಸರು	**:**	**ಕೆ.ನಾಗರತ್ನ**
ವೃತ್ತಿ	:	ರಂಗ ಕಲಾವಿದೆ
ಶಿಕ್ಷಣ	:	೬ನೇ ತರಗತಿ
ಜಾತಿ	:	ಮ್ಯಾಸ ನಾಯಕ
ತಾಯಿ	:	ಕರಿ ಬಸಮ್ಮ
ವಯಸ್ಸು	:	೪೦
ಊರು	:	ವಿರೂಪಾಪುರ
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ
ಪ್ರೋತ್ಸಾಹ	:	ತಾಯಿಯಿಂದ
ಸಂಭಾವನೆ	:	೨೦೦೦
ತರಬೇತಿ	:	ಮನೆಯಲ್ಲಿಯೇ
ರಂಗಭೂಮಿ ಸೇವೆ	:	೩೦ ವರ್ಷದಿಂದಲೂ



ಹೆಸರು	**:**	**ಬಳ್ಳಾರಿ ಲಲಿತಮ್ಮ**
ಜನನ	:	೧೯೨೩
ವೃತ್ತಿ	:	ರಂಗ ಕಲಾವಿದೆ
ಜಾತಿ	:	ಪಾತರದವರು
ಶಿಕ್ಷಣ	:	೬ನೇ ತರಗತಿ
ಊರು	:	ಆಮಿದ್ಯಾಲ
ತಂದೆ	:	ತಿಮ್ಮಪ್ಪ ಪಿಟೀಲು ವಿದ್ವಾಂಸರು
ತಾಯಿ	:	ವೀರಮ್ಮ
ರಂಗಭೂಮಿ ಪ್ರವೇಶ	:	ಮೊದಲು ಸಿನೇಮಾ ನಂತರ ನಾಟಕ ಪ್ರವೇಶ

ವಯಸ್ಸು : ೨೦೦೩

ಪ್ರೋತ್ಸಾಹ : ತಂದೆಯಿಂದ

ಮಾಸ್ತರ : ಕೆ. ಹಿರಣ್ಣಯ್ಯ

ರಂಗಭೂಮಿ ಸೇವೆ : ಜೀವನದ ಕೊನೆಕಾಲದವರೆಗೂ

ಸಂಭಾವನೆ : ೫೦೦/-

ಹೆಸರು : ಆದವಾನಿ ಲಕ್ಷ್ಮಿದೇವಿ

ವೃತ್ತಿ : ರಂಗ ಕಲಾವಿದೆ

ಊರು : ಬಳ್ಳಾರಿ

ರಂಗಭೂಮಿ ಪ್ರವೇಶ : ಚಿಕ್ಕ ವಯಸ್ಸಿನಲ್ಲಿ

ವಯಸ್ಸು : ೮೫

ಪ್ರೋತ್ಸಾಹ : ಸಿಡಿಗಿನ ಮಳೆ ಚಂದ್ರಯ್ಯ

ಮಾಸ್ತರ : ಜೋಳದರಾಶಿ ದೊಡ್ಡನಗೌಡ

ಹೆಸರು : ಕಮಲಮ್ಮ ಕೆ.ಬಿ.

ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ತಾಯಿ : ಓಬಮ್ಮ

ಶಿಕ್ಷಣ : ೫ನೇ ತರಗತಿ

ವಯಸ್ಸು : ೩೮

ಊರು : ವಿರೂಪಾಪುರ (ಸದ್ಯ ಕೂಡ್ಲಿಗಿಯಲ್ಲಿ ವಾಸ)

ಪ್ರೋತ್ಸಾಹ : ಮನೆಯವರಿಂದ

ರಂಗಭೂಮಿ ಸೇವೆ	:	೨೫ ವರ್ಷಗಳಿಂದ
ಮಾಸ್ತರ	:	ಇಲ್ಲ

ಹೆಸರು	:	**ಬಿ.ಅಂಬುಜಮ್ಮ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ಊರ ನಾಯಕರು
ಶಿಕ್ಷಣ	:	೩ನೇ ತರಗತಿ
ಊರು	:	ಬಳ್ಳಾರಿ
ತಂದೆ	:	ಭರಮಪ್ಪ
ತಾಯಿ	:	ಹುಲಿಗೆಮ್ಮ
ರಂಗಭೂಮಿ ಪ್ರವೇಶ	:	೧೨ ನೇ ವರ್ಷದಿಂದ
ವಯಸ್ಸು	:	೪೦
ಪ್ರೋತ್ಸಾಹ	:	ಮನೆಯಿಂದ
ಮಾಸ್ತರ	:	ಅಂಜಿನಮ್ಮ ಮಲಪನಗುಡಿ
ರಂಗಭೂಮಿ ಸೇವೆ	:	೩೦ ವರ್ಷದಿಂದ
ಸಂಭಾವನೆ	:	೩೦೦೦



ಹೆಸರು	:	**ಎಸ್.ಶ್ಯಾಮಲ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೪ನೇ ತರಗತಿ
ಊರು	:	ಮರಿಯಮ್ಮನಹಳ್ಳಿ
ತಾಯಿ	:	ಸುವರ್ಣಮ್ಮ

ರಂಗಭೂಮಿ ಪ್ರವೇಶ : ಚಿಕ್ಕ ವಯಸ್ಸಿನಲ್ಲಿ

ಊರು : ಮರಿಯಮ್ಮನಹಳ್ಳಿ

ವಯಸ್ಸು : ೫೫

ಪ್ರೋತ್ಸಾಹ : ತಾಯಿಯಿಂದ

ಮಾಸ್ತರ : ಡಿ.ಎಂ.ತೋಟಯ್ಯ ಸ್ವಾಮಿ

ರಂಗಭೂಮಿ ಸೇವೆ : ೧೦ ವರ್ಷ ಮಾತ್ರ

ಸಂಭಾವನೆ : ೫೦೦/-



ಹೆಸರು : ಎಸ್.ರೇಣುಕಾ

ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ಶಿಕ್ಷಣ : ೭ನೇ ತರಗತಿ

ಊರು : ಮರಿಯಮ್ಮನಹಳ್ಳಿ

ತಾಯಿ : ಸುವರ್ಣಮ್ಮ

ರಂಗಭೂಮಿ ಪ್ರವೇಶ : ಪ್ರಾಥಮಿಕ ಶಾಲಾ ಹಂತದಲ್ಲಿ

ವಯಸ್ಸು : ೫೦

ಪ್ರೋತ್ಸಾಹ : ತಾಯಿ ಹಾಗು ಅಕ್ಕನಿಂದ

ಮಾಸ್ತರ : ಡಿ.ಎಂ.ತೋಟಯ್ಯ ಸ್ವಾಮಿ

ರಂಗಭೂಮಿ ಸೇವೆ : ೨೫ ವರ್ಷಗಳವರೆಗೆ

ತರಬೇತಿ : ಇಲ್ಲ

ಸಂಭಾವನೆ : ೧೦೦೦/-

ಹೆಸರು	**:**	**ದಾದಮ್ಮನವರ ಹನುಮಮ್ಮ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ನಾಯಕರು
ಶಿಕ್ಷಣ	:	೪ನೇ ತರಗತಿ
ಊರು	:	ಮರಿಯಮ್ಮನಹಳ್ಳಿ
ತಂದೆ	:	ಹುಲುಗಪ್ಪ
ತಾಯಿ	:	ಹನುಮಮ್ಮ
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿ
ವಯಸ್ಸು	:	ಮರಣ ಹೊಂದಿದ್ದಾರೆ
ಪ್ರೋತ್ಸಾಹ	:	ಮನೆಯಿಂದಲೇ
ಮಾಸ್ತರ	:	ಗದಗ ದತ್ತಾತ್ರೇಯ ನಾಟಕ ಮಂಡಳಿ
ರಂಗಭೂಮಿ ಸೇವೆ	:	ಅಂತ್ಯದವರೆಗೂ

ಹೆಸರು	**:**	**ಸಂಜೀವಮ್ಮ (ದಾದಮ್ಮನವರ ಸಂಜೀವಮ್ಮ)**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ನಾಯಕರು
ಶಿಕ್ಷಣ	:	ಇಲ್ಲ
ಊರು	:	ನಾರಾಯಣದೇವರ ಕೆರೆ
ತಂದೆ	:	ಹುಲುಗಪ್ಪ
ತಾಯಿ	:	ಹನುಮವ್ವ
ರಂಗಭೂಮಿ ಪ್ರವೇಶ	:	ಚಿಕ್ಕಂದಿನಲ್ಲಿ
ವಯಸ್ಸು	:	ಮರಣ ಹೊಂದಿದ್ದಾರೆ
ಪ್ರೋತ್ಸಾಹ	:	ಮನೆಯಲ್ಲಿ

ಮಾಸ್ತರ	:	ಮಲ್ಲೇಶಪ್ಪ ಮನ್ನೂರು, ಬಸವಣ್ಣೆಪ್ಪ, ಬೇವೂರು ಭಾಷಾ ಸಾಹೇಬ
ರಂಗಭೂಮಿ ಸೇವೆ	:	ಸಂಪೂರ್ಣವಾಗಿ

ಹೆಸರು	**:**	**ಬಿ.ತಿರುಮಲ**
ಜಾತಿ	:	ನಾಯಕರು
ಶಿಕ್ಷಣ	:	ಇಲ್ಲ
ಊರು	:	ಮರಿಯಮ್ಮನಹಳ್ಳಿ
ತಾಯಿ	:	ಹನುಮವ್ವ
ರಂಗಭೂಮಿ ಪ್ರವೇಶ	:	೯ನೆ ವರ್ಷದಿಂದ
ವಯಸ್ಸು	:	೬೫
ಪ್ರೋತ್ಸಾಹ	:	ತಾಯಿಯಿಂದ
ಮಾಸ್ತರ	:	ಡಿ.ಎಂ. ತೋಟಯ್ಯ ಸ್ವಾಮಿ
ರಂಗಭೂಮಿ ಸೇವೆ	:	೫೦

ಹೆಸರು	**:**	**ಅನುರಾಧ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ಬ್ರಾಹ್ಮಣ
ಶಿಕ್ಷಣ	:	ಪಿ.ಯು.ಸಿ.
ಊರು	:	ಮರಿಯಮ್ಮನಹಳ್ಳಿ
ತಾಯಿ	:	ಕೃಷ್ಣವೇಣಮ್ಮ
ರಂಗಭೂಮಿ ಪ್ರವೇಶ	:	೧೦ ವರ್ಷದಲ್ಲಿ
ವಯಸ್ಸು	:	೩೦
ಪ್ರೋತ್ಸಾಹ	:	ತಾಯಿ

ಹೆಸರು	**:**	**ಬಿ.ಗಂಗಮ್ಮ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೧೦ನೇ ತರಗತಿ
ತಂದೆ	:	ಕಾಡಪ್ಪ
ತಾಯಿ	:	ಭರ್ಮಮ್ಮ
ಊರು	:	ವಿರೂಪಾಪುರ
ವಯಸ್ಸು	:	೪೫
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ
ಪ್ರೋತ್ಸಾಹ	:	ತಾಯಿಯ ಬಲವಂತ
ತರಬೇತಿ	:	ಚೌಡಾಪುರ ಚಿದಾನಂದಪ್ಪ
ಸಂಭಾವನೆ	:	೧೦೦೦ ದಿಂದ ೧೫೦೦
ರಂಗಭೂಮಿ ಸೇವೆ	:	೩೦ ವರ್ಷದಿಂದ

ಹೆಸರು	**:**	**ಎ.ಅಂಬುಜಮ್ಮ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ನಾಯಕರು
ಶಿಕ್ಷಣ	:	೭ನೇ ತರಗತಿ
ಊರು	:	ಮರಿಯಮ್ಮನಹಳ್ಳಿ
ತಂದೆ	:	ಹುಲುಗಪ್ಪ
ತಾಯಿ	:	ಬಸಮ್ಮ
ರಂಗಭೂಮಿ ಪ್ರವೇಶ	:	ಬಾಲ್ಯದಲ್ಲಿಯೇ
ವಯಸ್ಸು	:	೪೦
ಪ್ರೋತ್ಸಾಹ	:	ಮನೆಯಲ್ಲಿ

ಹೆಸರು	**:**	**ತಳವಾರ ಹಂಪಮ್ಮ**
ವೃತ್ತಿ	:	ರಂಗ ಕಲಾವಿದೆ
ಜಾತಿ	:	ವಾಲ್ಮೀಕಿ
ಶಿಕ್ಷಣ	:	೧೦ನೇ ತರಗತಿ
ತಂದೆ	:	ಹನುಮಂತಪ್ಪ
ತಾಯಿ	:	ಓಬಮ್ಮ
ಊರು	:	ವಿರೂಪಾಪುರ
ವಯಸ್ಸು	:	೨೯
ರಂಗಭೂಮಿ ಪ್ರವೇಶ	:	ಚಿಕ್ಕ ವಯಸ್ಸಿನಲ್ಲಿಯೇ
ಪ್ರೋತ್ಸಾಹ	:	ತಾಯಿಯಿಂದ
ತರಬೇತಿ	:	ಇಲ್ಲ
ಸಂಭಾವನೆ	:	೧೦೦೦ ದಿಂದ ೧೨೦೦
ರಂಗಭೂಮಿ ಸೇವೆ	:	೧೫ ವರ್ಷದಿಂದ

ಹೆಸರು	**:**	**ಬಂಡ್ರಿ ಸಿದ್ದಮ್ಮ**
ವೃತ್ತಿ	:	ರಂಗ ಕಲಾವಿದೆ
ವಿದ್ಯಾಭ್ಯಾಸ	:	೩ನೇ ತರಗತಿ
ಊರು	:	ಉತ್ತಂಗಿ
ತರಬೇತಿ	:	ಇಲ್ಲ
ತಾಯಿ	:	ಎಲ್ಲಮ್ಮ
ರಂಗಭೂಮಿ ಪ್ರವೇಶ	:	೨ನೇ ತರಗತಿ
ಪ್ರೋತ್ಸಾಹ	:	ಕೆ.ಎಂ. ಗಂಗಾಧರ ಶಾಸ್ತ್ರಿ

ಹೆಸರು : ಕೊಟ್ಟೂರು ಕೋಮಲ

ವೃತ್ತಿ : ರಂಗ ಕಲಾವಿದೆ

ಶಿಕ್ಷಣ : ೮ನೇ ತರಗತಿ

ಊರು : ಕೊಟ್ಟೂರು

ತಾಯಿ : ಪಕ್ಕಿರಮ್ಮ

ವಯಸ್ಸು : ೫೫

ಹೆಸರು : ಗಂಗಮ್ಮ ಬಿ.

ವೃತ್ತಿ : ರಂಗ ಕಲಾವಿದೆ

ಜಾತಿ : ವಾಲ್ಮೀಕಿ

ವಿದ್ಯಾಭ್ಯಾಸ : ೩ನೇ ತರಗತಿ

ಊರು : ವಟಮನಹಳ್ಳಿ

ಹೆಸರು : ಸಾವಿತ್ರಮ್ಮ

ವಿದ್ಯಾಭ್ಯಾಸ : ೫ನೇ ತರಗತಿ

ವೃತ್ತಿ : ಕಲಾವಿದೆ

ಜಾತಿ : ಲಿಂಗಾಯತ

ವಯಸ್ಸು : ೬೦

ತಂದೆ : ತೋಟಪ್ಪ

ತಾಯಿ : ಕಾಳಮ್ಮ

ಊರು : ಬಾಚಿಗೊಂಡನಹಳ್ಳಿ

ಮಾಸ್ತರ : ತೋಟಪ್ಪ

[illegible] : ಅರಶಿಣಗೋಡಿ ಕಂಪನಿ

ಹೆಸರು	**: ರಾರಾಳ ಕೊಟ್ರಬಸಮ್ಮ**
ಶಿಕ್ಷಣ	: ಇಲ್ಲ
ವೃತ್ತಿ	: ರಂಗ ಕಲಾವಿದೆ
ಜಾತಿ	: ಲಿಂಗಾಯತ
ವಯಸ್ಸು	: ೫೫
ತಂದೆ	: ತೋಟಪ್ಪ

ಹೆಸರು	**: ಅನ್ನಪೂರ್ಣ (ಹಂಪಮ್ಮ)**
ಶಿಕ್ಷಣ	: ೭ನೇ ತರಗತಿ
ವೃತ್ತಿ	: ರಂಗ ಕಲಾವಿದೆ
ಜಾತಿ	: ವಾಲ್ಮೀಕಿ
ವಯಸ್ಸು	: ೩೦
ತಾಯಿ	: ಚೌಡಮ್ಮ

ಹೆಸರು	**: ಕಮಲಮ್ಮ ಕೆ.ಬಿ.**
ವಿದ್ಯಾಭ್ಯಾಸ	: ೫ನೇ ತರಗತಿ
ಜಾತಿ	: ವಾಲ್ಮೀಕಿ
ತರಬೇತಿ	: ಇಲ್ಲ
ತಾಯಿ	: ಓಬಮ್ಮ
ಆಡಿರುವ ನಾಟಕಗಳು	: ಕುರುಕ್ಷೇತ್ರದಲ್ಲಿ ಉತ್ತರೆ ಭರಮಲಿಂಗಪ್ಪ ಮೊಮ್ಮಗಳು ಸಾಧ್ವಿ ಪಾತ್ರಗಳು
ಊರು	: ವಟಮನ ಹಳ್ಳಿ

ಸಂಭಾವನೆ	:	೮೦೦ - ೯೦೦
ತಾಯಿ	:	ಕಾಳಮ್ಮ
ಊರು	:	ಬಾಚಿಗೊಂಡನ ಹಳ್ಳಿ
ಮಾಸ್ತರ	:	ತೋಟಪ್ಪ
ಪ್ರೋತ್ಸಾಹ	:	ಅಕ್ಕನ ಪ್ರೋತ್ಸಾಹ

ಪ್ರಶಸ್ತಿ ಪುರಸ್ಕಾರಗಳು

೧. ಸುಭದ್ರಮ್ಮ ಮನ್ಸೂರು

ಸುಭದ್ರಮ್ಮನವರ ಕಲೆ ಹಾಗೂ ಕಂಠ ಕುರಿತು ಬದುಕನ್ನು ಕುರಿತು ಕನ್ನಡ, ಇಂಗ್ಲಿಷ್ ಹಾಗೂ ತೆಲುಗು ಪತ್ರಿಕೆಗಳು ಬರೆದಿವೆ. ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಹಿಂದು, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಪ್ರಮುಖವಾಗಿವೆ. ನಾಡಿನ ಹಾಗೂ ಹೊರನಾಡಿನ ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಅವುಗಳು

೧. ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

೨. ಕರ್ನಾಟಕ ಸಂಘ, ದೆಹಲಿ

೩. ಆಂಧ್ರ ಕಲಾ ಸಂಘ, ಬಳ್ಳಾರಿ

೪. ಮಿತ್ರ ಕಲಾ ಮಂಡಳಿ, ಬಳ್ಳಾರಿ

೫. ಕನ್ನಡ ಚಳುವಳಿ ಸಂಘ

೬. ರಾಜ್ಯೋತ್ಸವ ಪ್ರಶಸ್ತಿ

೭. ಖಾಸಗಿ ಸಂಘ-ಸಂಸ್ಥೆಗಳಿಂದ ನೂರಾರು ಸನ್ಮಾನಗಳು

೮. ಕನ್ನಡ ವಿಶ್ವವಿದ್ಯಾಲಯದಿಂದ ಪ್ರತಿಷ್ಠಿತ ನಾಡೋಜ ಪ್ರಶಸ್ತಿ-೨೦೦೩

೨. ಬಿ.ಶಿವಕುಮಾರಿ ಕೂಡ್ಲಿಗಿ

೧. ಹಲವಾರು ಸ್ಥಳೀಯ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿವೆ.

೨. ನಾಟಕ ಅಕಾಡೆಮಿ ಪ್ರಶಸ್ತಿ ೨೦೦೩

೩. ಕೆ.ನಾಗರತ್ನಮ್ಮ ಮರಿಯಮ್ಮನಹಳ್ಳಿ

೧. ೧೯೮೩ ಬಳ್ಳಾರಿ ಜಿಲ್ಲೆಯ ನ್ಯಾಯಾಂಗ ನೌಕರರ ಸಂಘ, ಬಳ್ಳಾರಿ

೨. ೧೯೭೬ ಬಳ್ಳಾರಿ ಯುವಜನ ಸೇವಾ ಮಂಡಳಿ (ಪ್ರಶಸ್ತಿ ಪತ್ರ)

೩. ೧೯೮೭ ರಾಜ್ಯೋತ್ಸವ ಸಮಿತಿ ದೋಣಿಮಲೈ

೪. ೧೯೮೪ ಪ್ರಗತಿಪರ ಮಹಿಳಾ ಸಂಘ, ಹೊಸಪೇಟೆ

೫. ೧೯೮೬ ಮಿತ್ರ ಮಂಡಳಿ, ಬಳ್ಳಾರಿ

೬. ೧೯೮೬ ಎಸ್.ಪಿ.ಪಿ. ಕ್ಲಬ್ ಕಾರ್ಗಲ್ (ಪ್ರಶಂಸನೀಯ ಪತ್ರ)

೭. ೧೯೮೫ ದುರ್ಗಾಂಬ ಕೃಪಾ ಪೋಷಿತ ನಾಟ್ಯಸಂಘ, ಬಳ್ಳಾರಿ (ಪ್ರಶಂನೀಯ ಪತ್ರ)

೮. ೧೯೮೮ ಕನ್ನಡ ಹಿತ ರಕ್ಷಕ ಸಂಘ ಕಂಪ್ಲಿ (ಕನ್ನಡ ರಾಜ್ಯೋತ್ಸವ ಸಂದರ್ಭ)

೯. ೧೯೮೮ ಮಿತ್ರ ಮಂಡಳಿ (ರಿ) ಜೋಗಫಾಲ್ಸ್ (ಕರ್ನಾಟಕ ರಾಜ್ಯೋತ್ಸವ ಸಂದರ್ಭ)

೧೦. ೧೯೯೦ ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಬಳಗಾನೂರು (ಗೌರವ ಪ್ರಧಾನ ಪ್ರಶಸ್ತಿ)

೧೧. ೧೯೮೯ರಲ್ಲಿ ಗಾಂಧಿ ನೇಚರ್ ಕ್ಯೂರ್ ಆಶ್ರಮ ಧಾರವಾಡ (ಪ್ರಶಸ್ತಿ ಪತ್ರ)

೧೨. ೧೯೮೬ ರಂಗಭೂಮಿ ಉಡುಪಿ

೧೩. ೧೯೮೭ ಲಲಿತಕಲಾರಂಗ, ಮರಿಯಮ್ಮನಹಳ್ಳಿ

೧೪. ೧೯೭೬ ಯುವಜನ ಸೇವಾ ಮಂಡಳಿ, ಬಳ್ಳಾರಿ

೧೫. ೧೯೮೯ ಕರ್ನಾಟಕ ನಾಟಕ ಅಕಾಡೆಮಿ ಮತ್ತು ಸಂಸ್ಕೃತಿ ಇಲಾಖೆ (ಅರ್ಹತಾ ಪತ್ರ)

೧೬. ಸದಸ್ಯರು ಕರ್ನಾಟಕ ನಾಟಕ ಅಕಾಡೆಮಿ

೧೭. ರಾಜ್ಯೋತ್ಸವ ಪ್ರಶಸ್ತಿ

೧೮. ಸಾವಿತ್ರಮ್ಮ ದೇಜಗೌ ಪ್ರಶಸ್ತಿ ಮೈಸೂರು

೪. ಪಿ.ಪದ್ಮ ಕೂಡ್ಲಿಗಿ

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಶ್ರೇಷ್ಠನಟಿ ಪ್ರಶಸ್ತಿ ಪಡೆದಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ೨೦೦೩

೫. ಎ.ವರಲಕ್ಷ್ಮಿ ಬಳ್ಳಾರಿ

ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದ್ದು ನಾಟಕ ಅಕಾಡೆಮಿಯವರು

೧. ೨೦೦೧ನೇ ಸಾಲಿನ ಗೌರವ ಪ್ರಶಸ್ತಿ

೬. ಬಳ್ಳಾರಿ ಲಲಿತಮ್ಮ

೧. ೧೯೮೦ರಲ್ಲಿ ರಾಜ್ಯ ಪ್ರಶಸ್ತಿ

೨. ೧೯೯೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿ

೩. ೧೯೭೭ರಲ್ಲಿ ನಾಟಕ ಅಕಾಡೆಮಿಯ ಪ್ರಶಸ್ತಿ

೪. ಚಲನಚಿತ್ರಗಳು ಬಾಲನಾಗಮ್ಮ, ಸುಭದ್ರಾ ಕಲ್ಯಾಣ, ಸುಮತಿ, ಚಂದ್ರಹಾಸ

೫. ಸಾಮಾಜಿಕ, ಪೌರಾಣಿಕಗಳಲ್ಲಿ ಅಭಿನಯಿಸಿದ್ದಾರೆ

೭. ಬಯಲಾಟದ ಸುಜಾತಮ್ಮ

ಬಯಲಾಟದ ಸ್ತ್ರೀ ವೇಷಧಾರಿಯಾಗಿ ಸುಮಾರು ೪೬ ವರ್ಷಗಳ ಸೇವೆ ಸಲ್ಲಿಸಿರುವ ಬಳ್ಳಾರಿಯ ಸುಜಾತಮ್ಮ ಅವರಿಗೆ ಈಗ ಸರ್ಕಾರಿ ಲೆಕ್ಕದಂತೆ ನಿವೃತ್ತಿ ವಯಸ್ಸು. ಭಜನಾ ಮಂಡಳಿಯ ಮುಖ್ಯಸ್ಥ ತಂದೆ ಭೀಮದಾಸಪ್ಪ ಅವರೊಡನೆ ಬಾಲ್ಯದಲ್ಲಿಯೇ ಭಜನೆಗಳನ್ನು ಹಾಡುತ್ತ ಊರೂರು ಅಲೆದ ಸುಜಾತಮ್ಮ ಅವರ ಬಯಲಾಟದ ಪ್ರವೇಶ ಆಕಸ್ಮಿಕ. ತಮ್ಮ ೧೨ನೆಯ ವಯಸ್ಸಿನಲ್ಲಿ 'ಗಿರಿಜಾ ಕಲ್ಯಾಣ'ದ ರತಿದೇವಿಯಾಗಿ ಅಟ್ಟ ಹತ್ತಿದ ಇವರು ಮುಂದೆ ಕನಕಾಂಗಿ, ದ್ರೌಪದಿ, ಭಾನುಮತಿ, ಸುಭದ್ರೆ, ಸೀತೆ, ಚಿತ್ರಾಂಗದೆ, ರಂಭೆ, ಪಾರ್ವತಿ, ಸುದೀಷ್ಣೆ, ಶಚಿ ಹೀಗೆ ಹೆಚ್ಚು ಕಡಿಮೆ ಬಯಲಾಟದ ಎಲ್ಲ ಪ್ರಮುಖ ಸ್ತ್ರೀ ಪಾತ್ರಗಳನ್ನು ಧರಿಸಿದ್ದಾರೆ. ತಮ್ಮ ಹಾಡು, ನೃತ್ಯಕ್ಕೆ ಮದ್ದಳೆಯನ್ನು ನುಡಿಸುತ್ತಿದ್ದ ಹನುಮಂತಪ್ಪ ಮಾಸ್ತರರ ಕೈ ಸುಜಾತಮ್ಮ ಅವರಿಗೆ ಬಯಲಾಟ ಕ್ಷೇತ್ರದಲ್ಲಿಯೇ ಮುಂದುವರಿಯಲು ಮತ್ತಷ್ಟು ಪ್ರೇರಣೆಯಾಯಿತು.

೮. ಬಳ್ಳಾರಿ ಸುಜಾತಮ್ಮ

೧. ೧೯೭೭ರಲ್ಲಿ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಪ್ರಶಸ್ತಿ

೨. ಬಳ್ಳಾರಿಯ ಸ್ಥಳೀಯ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ

೯. ಸೋಗಿ ರತ್ನಮ್ಮ

೧. ಚಿಂತನಶ್ರೀ

೨. ದಸರಾದಲ್ಲಿ ತಂಡ ಪ್ರದರ್ಶನ ೯೯ ಮೈಸೂರು ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ

ಬಳ್ಳಾರಿ ಜಿಲ್ಲೆಯ ರಂಗನಟಿಯರ ವೈಶಿಷ್ಟ್ಯತೆ

ನಟಿ / ಗಾಯಕಿಯರು	ನಿರ್ದೇಶಕಿಯರು	ತಂಡದ ನಾಯಕಿಯರು		ನೃತ್ಯಗಾರ್ತಿಯರು	ಒಂದೇ ಪಾತ್ರ ಮಾಡುವ ನಟಿಯರು	ಯಾವುದೇ ಪಾತ್ರವನ್ನಾದರೂ ಅಭಿನಯಿಸುವ ನಟಿಯರು
		ಜನಪದ ರಂಗಭೂಮಿ	ಸಾಮಾಜಿಕ			
ಸುಭದ್ರಮ್ಮ ಮನ್ಸೂರು	ಸೋಗಿ ರತ್ನಮ್ಮ	ಬಳ್ಳಾರಿ ಸುಜಾತಮ್ಮ	ಬಳ್ಳಾರಿ ಲಲಿತಮ್ಮ	ಜ್ಯೋತಿ ಬಳ್ಳಾರಿ	ಬಳ್ಳಾರಿ ಲಲಿತಮ್ಮ	ಕೆ.ವರಲಕ್ಷ್ಮಿ
ಬಿ.ಸಂಜೀವಮ್ಮ	ಏಣಗಿ ನೀಲಮ್ಮ	ಸೋಗಿ ರತ್ನ	ಕೆ.ನಾಗರತ್ನಮ್ಮ	ಪದ್ಮ	ಬಳ್ಳಾರಿ ಸುಜಾತಮ್ಮ	ಕೆ.ವರಲಕ್ಷ್ಮಿ
ಬಿ.ಹನುಮಂತಮ್ಮ	ಕೆ.ನಾಗರತ್ನಮ್ಮ	ಹವ್ಯಾಸಿ			ಸುಭದ್ರಮ್ಮ ಮನ್ಸೂರು	ಕೆ.ನಾಗರತ್ನಮ್ಮ
ಎಸ್.ಕಮಲಮ್ಮ		ಯಶೋಧರಾ ಶಿವರಾಜ್			ಪಿ.ಪದ್ಮ	ಬಿ.ತಿರುಮಲ
ತಳವಾರ ಹನುಮಂತಮ್ಮ					ಬಿ.ಶಿವಕುಮಾರಿ	ಬಿ.ಶಾರದಾ
ಬಳ್ಳಾರಿ ಲಲಿತಮ್ಮ						ಎಸ್.ರೇಣುಕಾ
ಸೋಗಿ ರತ್ನ						ಚಾಮುಂಡೇಶ್ವರಿ
ಕೆ.ನಾಗರತ್ನಮ್ಮ						ಎಸ್.ಅಂಜಿನಮ್ಮ
						ನಾಗರತ್ನಮ್ಮ ಹೊಸಮನಿ

ಜಿಲ್ಲೆಯ ನಟಿಯರ ಪಟ್ಟಿ : ತಾಲೂಕುವಾರು

೧. ಬಳ್ಳಾರಿ ತಾಲೂಕು

೧. ಬಳ್ಳಾರಿ : ಲಕ್ಷ್ಮಾಸಾನಿ, ಸುಜಾತಮ್ಮ, ಬಿ.ಪಾರ್ವತಮ್ಮ, ಮೀನಳ್ಳಿ ಪಾರ್ವತಮ್ಮ, ಅಂಜಿನಮ್ಮ, ಬಿ.ಉಷಾರಾಣಿ, ರಂಗವೇಣಿ, ಸುಭದ್ರಮ್ಮ ಮನ್ನೂರು, ಆದವಾನಿ ಲಕ್ಷ್ಮಮ್ಮ, ಬಳ್ಳಾರಿ ಲಲಿತಮ್ಮ, ಚಾಮುಂಡೇಶ್ವರಿ, ಬಿ.ನಾಗಮ್ಮ, ಆರ್.ರೇಣುಕಾದೇವಿ, ಹಳೇಬೀಡು ರಂಗನಾಯಕಮ್ಮ, ಎ.ವರಲಕ್ಷ್ಮಿ, ಜ್ಯೋತಿ ಬಳ್ಳಾರಿ, ರತ್ನಾಬಾಯಿ ಬಳ್ಳಾರಿ, ಭವಾನಿ, ಸುಶೀಲಾ ಬಳ್ಳಾರಿ, ವೀಣಾ ಆದವಾನಿ, ಸುಧಾ ಬಳ್ಳಾರಿ, ಭಾಗ್ಯ ಮೈಸೂರು, ಮಮತಾ, ಸರೋಜ, ಶ್ರೀಮತಿ ಯಶೋಧಾ ಶಿವರಾಜ್, ಸೌಭಾಗ್ಯ, ರಾಜಲಕ್ಷ್ಮಿ, ಗೌರಮ್ಮ ಗಂಗಾಧರ, ಎಚ್.ಎನ್. ಗೀತಾ, ಜಾನಕಿ, ಉಷಾ, ರೂಪಾ, ಇಂದಿರಾ, ರತ್ನಮ್ಮ ವಿಜಯಕುಮಾರ, ಕವಿತ, ಗೀತಾ, ಲೀಲಾ ದಾವಣಗೆರೆ, ರೇಣುಕಾ ಭಾವಿಹಳ್ಳಿ, ರೇಣುಕಾ ಹಿರೇಮಠ, ವಂದನಾ ಗದಗ, ಸಂಧ್ಯಾ, ರೇಖಾ, ನಾಗಮಣಿ, ಸುವರ್ಣ, ಪ್ರತಿಭಾ, ಬನಶಂಕರಿ, ಶಾಲಿನಿ, ಮಧು ಶಾಲಿನಿ

೨. ಕಪ್ಪಗಲ್ : ಹರಿಜನ ಹನುಮಂತಮ್ಮ, ಪದ್ಮಮ್ಮ

೩. ಕುಡಿತಿನಿ : (ತಾಯಿ-ಮಗಳು) ಪಾತರದವರು

೨. ಹಡಗಲಿ ತಾಲೂಕು

೧. ಹಡಗಲಿ : ಭಾಗ್ಯಮ್ಮ, ಕಮಲವ್ವ

೨. ಸೋಗಿ : ರತ್ನ, ಜೆ.ಗಂಗಮ್ಮ, ಜೆ.ಮಂಜುಳಾ

೩. ಉತ್ತಂಗಿ : ಬಂಡ್ರಿ ಸಿದ್ದಮ್ಮ

೪. ಹೊಳಗುಂದಿ : ಕಸ್ತೂರಿ

೫. ತಿಪ್ಪಾಪುರ : ಶಾಂತ

೬. ತಳಕಲ್ಲು : ಬಿ.ನಾಗಮ್ಮ

೩. ಹೊಸಪೇಟೆ ತಾಲೂಕು

೧. ಹೊಸಪೇಟೆ : ದೇವಕೆವ್ವಾ, ಮಧುರಾ, ಮಂಗಳಾ, ಹೊಸಪೇಟೆ, ಸರಸ್ವತಮ್ಮ, ಎಂ.ಅಂಬುಜಾ, ಭೀಮವ್ವಾ, ಜಯಮ್ಮ ಹೊಸಪೇಟೆ, ಶಾಂತಮ್ಮ, ಆರ್.ರೇಣುಕಾ, ಎಂ.ಅಂಬುಜಾ

೨. ಕಂಪ್ಲಿ : ನಾಗೇನಹಳ್ಳಿ ಪಾರ್ವತಮ್ಮ, ವಾಸಂತಿ, ಈರಮ್ಮ

೩. ಮರಿಯಮ್ಮನಹಳ್ಳಿ : ಡಿ.ಸಂಜೀವಮ್ಮ, ಡಿ.ಹನುಮಂತಮ್ಮ, ಬಾರಿಕರ ನಿಂಗಮ್ಮ, ತಳವಾರ ಹನುಮಂತಮ್ಮ, ಬಿ.ಲಿಂಗಮ್ಮ, ಮಣೆಗಾರ ಹನುಮಂತಮ್ಮ, ಸೆರೆಗಾರ ಸುವರ್ಣಮ್ಮ, ಜೋಗಿ ಬಸಮ್ಮ, ಸುಮತೆಮ್ಮ, ಸೆರೆಗಾರ ಗಂಗಮ್ಮ, ನಂದಿಹಳ್ಳಿ ರಾಮಕ್ಕ, ಎಂ.ಅಂಬುಜಾ, ತಿಮ್ಮಪ್ಪ ಬೂದಾಳು, ಶಾರದ ಕನಕವ್ವ, ಅರಿಸಿಕೆರೆ ಯಲ್ಲಮ್ಮ, ಪಾರ್ವತಿ, ರೇಣುಕಾ, ಚಿಕ್ಕಡಿ ಗಂಗಮ್ಮ, ಶೈಲಶ್ರೀ, ಶಾಂತಮ್ಮ, ಶ್ಯಾಮಲಾ, ಸಾವಿತ್ರಿ, ಮಗಂಳಾ, ಶಾರದಾ, ಕಲಾವತಿ, ಎನ್.ರೇಣುಕಾ, ಎಸ್.ರೇಣುಕಾ, ಕೆ.ನಾಗರತ್ನ, ಲಕ್ಷ್ಮಿ ಸುಬ್ಬಯ್ಯ, ಅಂಜಿನಾಬಾಯಿ, ಅನುರಾಧಾ ಮೈಸೂರು.

೪. ಕೂಡ್ಲಿಗಿ ತಾಲೂಕು

೧. ಕೂಡ್ಲಿಗಿ ಪಿ.ಪದ್ಮ, ಬಿ.ಶಿವಕುಮಾರಿ, ಜ್ಯೂ.ಶಿವಕುಮಾರಿ, ಸಬ್ ಜ್ಯೂ.ಶಿವಕುಮಾರಿ, ಚೌಡಮ್ಮ, ಜಯಮ್ಮ, ಜಿ.ಗೀತಾ, ಟಿ.ಭಾರತಿ, ಅಂಜಲಿ, ಸಿ.ಬಿ.ಓಬಳಮ್ಮ, ಬಿ.ನಾಗರತ್ನಮ್ಮ, ಕೆ.ವಿಶಾಲಾಕ್ಷಿ, ಕೆ.ದುಶೀಲ, ಸಿ.ಮಹಾದೇವಿ, ಕೆ.ವನಜಾಕ್ಷಿ, ಕವಿತ, ಗೌರಮ್ಮ, ಮಾಲಾವತಿ, ಲಕ್ಷ್ಮಿದೇವಿ, ಕೂಡ್ಲಿಗಿ, ನಾಗವೇಣಿ, ಗಂಟಿ ಹುಲಿಗೆಮ್ಮ, ಗಂಟಿ ಅಂಜಿನಮ್ಮ, ಎಚ್.ಶಾಂತಮ್ಮ, ಜಿ.ಶ್ಯಾಮಲ, ಪದ್ಮಾವತಿ, ಚಂದ್ರಕಲಾ, ಕಾಳಿರಮ್ಮ, ಶೈಲಶ್ರೀ, ಅಂಬುಜ, ಶ್ಯಾಮಲ, ಕಲಾವತಿ, ರಂಗವೇಣಿ, ಯಂಕಮ್ಮ, ಕೆ.ಗೀತಾ, ಕಮಲ, ಕೆ.ವೆಂಕಮ್ಮ, ಬಿ.ಎ.ವೆಂಕಮ್ಮ, ಜ್ಯೋತಿ, ಪದ್ಮ, ಡಿಸ್ಕೊ ಪದ್ಮ, ಲಕ್ಷ್ಮಿ, ಗೌರಮ್ಮ, ಅಂಜಿನಮ್ಮ ಕೂಡ್ಲಿಗಿ, ವಿಶಾಲಾಕ್ಷಿ, ಗಂಗಾ, ಸಣ್ಣ ಮುದ್ದಮ್ಮ, ದೊಡ್ಡ ಮುದ್ದಮ್ಮ, ಎಚ್.ರತ್ನಮ್ಮ, ವನಮಾಲ, ದಿವ್ಯಾ ಕುಮಾರಿ, ಗೀತಾ ಕೂಡ್ಲಿಗಿ, ರಾಧಾ ಕೂಡ್ಲಿಗಿ, ಸ್ವಪ್ನ ಇಳಕಲ್, ಉಮಾರಾಣಿ ಇಳಕಲ್.

೨. ವಿರುಪಾಪುರ : ಜೆ.ಗಂಗಮ್ಮ, ಎಸ್.ಅಂಜಿನಮ್ಮ, ನಾಗರತ್ನಮ್ಮ, ತಳವಾರ ಹಂಪಮ್ಮ, ಬಿ.ಶಾರದಮ್ಮ, ಕೆ.ನಾಗರತ್ಮ, ಎಸ್. ನಾಗವೇಣಿ, ಬಿ.ಲಕ್ಷ್ಮಿದೇವಿ, ಬಿ.ನಾಗಮ್ಮ, ಬಿ. ಕರಿಬಸಮ್ಮ, ಹಟ್ಟಿ ಮಾರಮ್ಮ, ಕರಿಬಸಮ್ಮ, ಬಿ.ವಿಜಯಲಕ್ಷ್ಮಿದೇವಿ, ಬಿ.ಭಾಗ್ಯಶ್ರೀ, ಕಾಸಿ ಚೆಟ್ಟಿ ಈರಮ್ಮ, ದೊಂಬರ ಎಲ್ಲಮ್ಮ, ಕರಿ ಮುದ್ದಮ್ಮ, ಹುಲಿ ಸಿದ್ದಪ್ಪನವರ ಚೌಡಮ್ಮ, ನಾಗರತ್ನಮ್ಮ.

೩. ಅಮ್ಮನಕೇರಿ : ಚೌಡಮ್ಮ, ಗಂಗಮ್ಮ

೪. ಶಿರಬಿ : ಬೇಡರ ಚೌಡಮ್ಮ

೫. ಕೊಟ್ಟೂರು : ನಾಗರತ್ನಮ್ಮ ಹೊಸಮನಿ, ಎಸ್.ಕಮಲಮ್ಮ, ಮಲ್ಲವ್ವ, ಲಕ್ಷ್ಮಿದೇವಿ, ಶಾರದಮ್ಮ ಕೊಟ್ಟೂರು, ಕೋಮಲ

೫. ಹಗರಿಬೊಮ್ಮನಹಳ್ಳಿ ತಾಲೂಕು

೧. ಹಗರಿಬೊಮ್ಮನಹಳ್ಳಿ : ಸಾವಿತ್ರಿ, ಹೆಚ್.ಬಿ. ಸರೋಜಾ

೨. ಬಾಚಿಗೊಂಡನಹಳ್ಳಿ : ಸಾವಿತ್ರಮ್ಮ, ಕೊಟ್ರ ಬಸಮ್ಮ

೩. ಏಣಗಿ : ನೀಲಮ್ಮ

೪. ಕೋಗಳಿ : ಗಂಗವ್ವ

೫. ಸೊನ್ನ : ಮಾದರ ದುರ್ಗವ್ವ, ಮಾದರ ಸೊಲ್ಲವ್ವ

೬. ಚಿಂತರಪಳ್ಳಿ : ಬೆಳ್ಳಕ್ಕಿ ಚೌಡಮ್ಮ

೭. ವಟಮನಹಳ್ಳಿ : ಬಿ. ಗಂಗಮ್ಮ, ಬಿ. ಸುಜಾತಮ್ಮ

ಅನುಬಂಧ ೨

ಗ್ರಂಥಋಣ

ಅನುಬಂಧ ೨

ಗ್ರಂಥಋಣ

೦೧. ಅ.ನ.ಕೃ, ನಾಟಕ ಕಲೆ, ಹಂಸಧ್ವನಿ ಪ್ರಕಾಶನ, ರಾಜಾಜಿನಗರ, ಬೆಂಗಳೂರು, ೧೯೭೧

೦೨. ಅನ್ನದಾನಿ ಹಿರೇಮಠ, ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು, ವೀರಶೈವ ಅ.ಸ.ಶ್ರೀ.ತೊ.ಸಂ. ಗದಗ

೦೩. ಅಶೋಕ ಟಿ.ಪಿ, ಗ್ರೊಟೊವ್‌ಸ್ಕಿ, ರಿಕ್ತ ರಂಗಭೂಮಿ, (ರಂಗಶಿಕ್ಷಣ ಸಾಹಿತ್ಯ) ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೨

೦೪. ಅಕ್ಷರ ಕೆ.ವಿ, ರಂಗ ಅನ್ವೇಷಣೆ, ಪೀಟರ್ ಬ್ರೂಕ್ ಮತ್ತು ಪಾಶ್ಚಾತ್ಯ ಪ್ರಯೋಗಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೨

೦೫. ಅಕ್ಷರ ಕೆ.ವಿ, ರಂಗಪ್ರಪಂಚ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ, ೧೯೯೪

೦೬. ಅಕ್ಷರ ಕೆ.ವಿ, ಮಾವಿನ ಮರದಲ್ಲಿ ಬಾಳೆಹಣ್ಣು, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ೧೯೯೮

೦೭. ಅಕ್ಷರ ಕೆ.ವಿ, ರಂಗಪ್ರಯೋಗ, (ರಂಗ ಅಭಿನಯ ರಂಗತಂತ್ರಗಳು ಮತ್ತು ರಂಗ ಸಿದ್ಧತೆಯ ಪರಿಚಯ) ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯

೦೮. ಅಕ್ಷರ ಕೆ.ವಿ, ರಂಗಪ್ರಪಂಚ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೨೦೦೦

೦೯. ಆದ್ಯ ರಂಗಾಚಾರ್ಯ, ಕನ್ನಡ ರಂಗಭೂಮಿಯ ಮೇಲೆ ಅದರ ಛಾಯೆ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಕವಿ ಶೈಲ, ಜಯಲಕ್ಷ್ಮಿಪುರಂ, ಮೈಸೂರು

೧೦. ಆದ್ಯ ರಂಗಾಚಾರ್ಯ, ನಾಟ್ಯಶಾಸ್ತ್ರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೮೪

೧೧. ಆದ್ಯರಂಗಾಚಾರ್ಯ, ರಂಗ ನಾಟಕಶಾಸ್ತ್ರ, (ತೆರೆ ಸರಿಯುವ ಮುನ್ನ) ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೧

೧೨. ಎನ್ಕೆ, ಉತ್ತರ ಕರ್ನಾಟಕ ರಂಗಭೂಮಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೩. ಒಡೆಯರ್ ಎಸ್.ಎಸ್.(ಸಂ) ಕನ್ನಡ ರಂಗಭೂಮಿ ಅಂದು ಇಂದು, ಕ.ವಿ.ವಿ. ಧಾರವಾಡ, ೧೯೭೪

೧೪. ಕಲಬುರ್ಗಿ ಎಂ.ಎಂ.(ಪ್ರ.ಸಂ.) ನಾಟ್ಯಭೂಷಣ ಕ.ರಂ.ಎ.ಅ.ಸ ಸಂಘ ನಿಯಮಿತ, ಬೆಳಗಾಂವಿ, ೧೯೯೮

೧೫. ಕೃಷ್ಣರಾವ್ ಯು.ಎಸ್, ಚಂದ್ರಭಾಗಾದೇವಿ, ಅಭಿನಯ ಕಲೆ, ಮೈಸೂರು ವಿ.ವಿ. ಮೈಸೂರು ೧೯೭೦

೧೬. ಕಾರಂತ ಬಿ.ವಿ. (ಸಂ) ಮುರಳೀಧರ ಉಪಾಧ್ಯ ಹಿರಿಯಡಕ, ಕರ್ನಾಟಕ ಸಂಘ, ೧೯೯೬, ಪುತ್ತೂರು. ದಕ್ಷಿಣ ಕನ್ನಡ

೧೭. ಕಿರಣ್ ಮೋಯಾ ರಾಹಾ, ಅನು: ರಂಗನಾಥ್ ಎಚ್.ಕೆ., ಬಂಗಾಳಿ ರಂಗಭೂಮಿ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ೧೯೯೪

೧೮. ಕುರ್ತಕೋಟಿ ಕೆ.ಡಿ, ವಾಸುದೇವ ಪ್ರಶಸ್ತಿ, ವಾಸುದೇವ ವಿನೋದಿನಿ ಬಾಗಲಕೋಟೆ, ೧೯೬೪

೧೯. ಕೋತಿನ ಎಸ್.ಎಂ, ವೃತ್ತಿರಂಗಭೂಮಿಯ ಪರಂಪರೆ, ಕರ್ನಾಟಕ ಭಾರತಿ, ೧೯೮೬

೨೦. ಗವೀಶ್ ಹಿರೇಮಠ, ರಂಗಕುಸುಮಗಳು, ಪ್ರಗತಿ ಪ್ರಕಾಶನ, ಕಲುಬುರ್ಗಿ, ೧೯೯೪

೨೧. ಗಿರಡ್ಡಿ ಗೋವಿಂದರಾಜು, ಇಂಗ್ಲೆಂಡಿನ ರಂಗಭೂಮಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೩

೨೨. ಗಿರಡ್ಡಿ ಗೋವಿಂದರಾಜು, ಚಂದ್ರಕಾಂತ ಕುಸನೂರ (ಸಂ) ಹವ್ಯಾಸಿ ರಂಗಭೂಮಿಯ ಸಮಸ್ಯೆಗಳು, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೮೦

೨೩. ಗಿರಡ್ಡಿ ಗೋವಿಂದರಾಜ, ನಾಟಕ ಸಾಹಿತ್ಯ ಮತ್ತು ರಂಗಭೂಮಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೯

೨೪. ಗುಡಿಹಳ್ಳಿ ನಾಗರಾಜ, ಚಿಂದೋಡಿ ಲೀಲಾ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ೧೯೯೯

೨೫. ಜಯಪ್ರಕಾಶ್ ಮಾವಿನಕುಳಿ, ರಂಗ ಪ್ರತಿಸ್ಪಂದನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೨೬. ಜೋಳದರಾಶಿ ದೊಡ್ಡನಗೌಡ, ನಾಟ್ಯ ಕಲಾಪೂರ್ಣ ಟಿ ರಾಘವರು, ಮೈಸೂರು ರಾಜ್ಯ, ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು, ೧೯೭೨

೨೭. ಜೋಳದರಾಶಿ ದೊಡ್ಡನಗೌಡ, ಸಂದೇ ನಾಸೋಯಿದೆ, ರಾಮೇಶ ಪ್ರಕಾಶನ, ಜೋಳದರಾಶಿ ೧೯೬೯

೨೮. ದಯಾನಂದ ಕಿನ್ನಾಳ, ಬಳ್ಳಾರಿ ಜಿಲ್ಲೆಯ ರಂಗಭೂಮಿ, ಪಿಎಚ್.ಡಿ ಪ್ರಬಂಧ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ (ಅ.ಪ್ರ.)

೨೯. ದೀಕ್ಷಿತ್ ಜಿ.ಎಸ್, ಕರ್ನಾಟಕ ಪರಂಪರೆ, ಸಾಹಿತ್ಯ ಸಂಸ್ಥೆ ಮತ್ತು ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೭೦

೩೦. ದುರ್ಗಾದಾಸ್ ಕೆ.ಆರ್, ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಸಮತಾ ಪ್ರಕಾಶನ, ಬೆಳಗಾವಿ, ೧೯೯೬

೩೧. ನರಸಿಂಹಶಾಸ್ತ್ರಿ ಕೆ.ಎಲ್, ಭರತಮುನಿ ವಿರಚಿತ ನಾಟ್ಯಶಾಸ್ತ್ರ, ಸುವಾಣಿ ಪ್ರಕಾಶನ, ಬೆಂಗಳೂರು, ೧೯೭೭

೩೨. ನರಸಿಂಹಾಚಾರ್ ಡಿ.ಎಲ್.(ಸಂ), ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೩೩. ನಾಗರಾಜ ಎ.ಎಸ್, ನಾಂದಿ, ಜಯ ಪ್ರಕಾಶನ ಬೆಂಗಳೂರು, ೧೯೯೭

೩೪. ನಾಯಕ ಹಾ.ಮಾ. (ಪ್ರ.ಸಂ.) ಪ್ರಾಚೀನ ಭಾರತೀಯ ನಾಟಕ, ಮೈಸೂರು ವಿ. ವಿ. ಮೈಸೂರು ೧೯೭೫

೩೫. ಪ್ರಕಾಶ ಕಂಬತ್ತಳ್ಳಿ, ರಂಗವಿಹಾರ, ಅಂಕಿತ ಪ್ರಕಾಶನ, ಜಯನಗರ, ಬೆಂಗಳೂರು, ೧೯೯೫

೩೬. ಪ್ರಕಾಶ ಗರೂಡ, ವೃತ್ತಿರಂಗಸ್ವರೂಪ (ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೩೭. ಪ್ರಹ್ಲಾದ್ ಮುದಗಲ್ಲ, ಕನ್ನಡ ರಂಗ ಪರಂಪರೆ, ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ, ಹುಬ್ಬಳ್ಳಿ, ೧೯೯೫

೩೮. ಪುಟ್ಟಸ್ವಾಮಯ್ಯ, ಕನ್ನಡ ರಂಗಭೂಮಿ ನಡೆದುಬಂದ ದಾರಿ, ಐ.ಬಿ.ಎಚ್, ಪ್ರಕಾಶನ, ಬೆಂಗಳೂರು, ೧೯೭೬

೩೯. ಬಸವರಾಜ ಜಗದಂಡಿ (ಡಾ) ಗರುಡ ಸದಾಶಿವರಾಯರ ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ಪ್ರಕಾಶನ- ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೩

೪೦. ಬಸವರಾಜ ಡೋಣೂರು, ರಂಗಪ್ರವೇಶ, ಕಲಾ ಗಂಗಾಧರ ಪ್ರಕಾಶನ, ಚಡಚಣ, ಧಾರವಾಡ

೪೧. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ, ೧೯[illegible]

೪೨. ಬಾಬೂರಾವ್ ದೇಸಾಯಿ, ಶಿವಮೂರ್ತಿಸ್ವಾಮಿ ಕಣಬರಗಿಮಠರು ಶ್ರೀ ಜ.ತೋಂ.ಮಠ, ಗದಗ, ೧೯೮೯

೪೩. ಮರುಳಸಿದ್ದಪ್ಪ ಕೆ, ಆಧುನಿಕ ಕನ್ನಡ ನಾಟಕಗಳು, ಲಿಪಿ ಪ್ರಕಾಶನ, ಬೆಂಗಳೂರು, ೧೯೯೩

೪೪. ಮೃತ್ಯುಂಜಯ ಹೊರಕೇರಿ, ರಂಗ ವೃತ್ತಿರಂಗ, ರವಿಕೀರ್ತಿ ಪ್ರಕಾಶನ, ಬಾದಾಮಿ, ೨೦೦೦

೪೫. ಮೋಹನ್ ಕೆ. (ಸಂ) ರಂಗಪರಂಪರೆ: ಪ್ರಯೋಗಶೀಲತೆ, (ರಂಗ ನಿರ್ದೇಶಕ ನಾಯರಿಯವರ ಕಲಾನಾಡಿಯ ಕಿರುಪರಿಚಯ, ಯಕ್ಷದೇಗುಲ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು ೧೯೯೭

೪೬. ರಂಗನಾಥ ಎಚ್.ಕೆ, ಕರ್ನಾಟಕ ರಂಗಭೂಮಿ, ಕನ್ನಡ ಸಾಹಿತ್ಯ ಪರಿಷತ್ತು, ೧೯೯೩

೪೭. ರಂಗನಾಥ, ಎಸ್.ಕೆ, ಗರೂಡ ಸದಾಶಿವರಾಯರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೩

೪೮. ರಂಗನಾಥ್ ಎಚ್.ಕೆ, ಕರ್ನಾಟಕ ವೃತ್ತಿರಂಗಭೂಮಿ, ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು, ೧೯೭೮

೪೯. ರಂಗನಾಥ್ಎಚ್.ಕೆ, 'ವೃತ್ತಿರಂಗದರ್ಶನ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩

೫೦. ರಾಜೇಂದ್ರ ಡಿ.ಕೆ, ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೦

೫೧. ರಾಮನಾಥ ಎಚ್.ಕೆ, ಕನ್ನಡ ರಂಗಭೂಮಿಯ ವಿಕಾಸ, ಅಭಿನಯ ಪ್ರಕಾಶನ, ಮೈಸೂರು, ೧೯೯೦

೫೨. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕದ ವೃತ್ತಿರಂಗಭೂಮಿ, ಇಳಾ ಪ್ರಕಾಶನ, ಬೆಂಗಳೂರು, ೧೯೯೪

೫೩. ರಾಮಕೃಷ್ಣ ಮರಾಠೆ, ಕೊಣ್ಣೂರು ನಾಟಕ ಕಂಪನಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೫೪. ರುಸ್ತುಂ ಭರೂಚಾ, ಕನ್ನಯ್ಯಲಾಲ್ ಬಿ.ಆರ್. ಕನ್ನಡಕ್ಕೆ: ವೆಂಕಟರಮಣ ಐತಾಳ್, ರಂಗಭೂಮಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೯೪

೫೫. ಲಲಿತ ಶ್ರೀನಿವಾಸನ್, ಕರ್ನಾಟಕ ನೃತ್ಯರಂಗ ನೃತ್ಯ ಶಿಲ್ಪಗಳು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು, ೧೯೯೪

೫೭. ವಸಂತ ಕವಲಿ, ನಟದಯಾಳು ಹಂದಿಗನೂರು ಸಿದ್ಧರಾಮಪ್ಪ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೮

೫೮. ವಿಜಯಾ ಸಿರಿ, ರಾ.ಹೊನ್ನಲಿಂಗಯ್ಯ, (ಸಂ) ಇಂದಿನ ರಂಗಕಲಾವಿದರು, ಬೆಂಗಳೂರು, ೧೯೮೬

೫೮. ವೀರಣ್ಣ ರಾಜೂರ, ಪಿ.ಜಿ.ಧುತ್ತರಗಿ, ಕರ್ನಾಟಕ ನಾಟಕ ಅಕಾಡೆಮಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು

೫೯. ವೀರಪ್ಪ ಎಸ್.ಎಸ್, ಮಹದೇವಸ್ವಾಮಿ ಎಂ.ಸಿ. (ಸಂ)ಕನ್ನಡ ರಂಗಭೂಮಿಯ ಶತಮಾನೋತ್ಸವ ೧೯೪೮

೬೦. ವಿರೂಪಾಕ್ಷ ನಾಯಕ,(ಸಂ) ಕನ್ನಡ ರಂಗಭೂಮಿ ಹಾಗೂ ಸ್ವಾತಂತ್ರ್ಯ ಚಳುವಳಿ, ರಂಗತೋರಣ, ಹೊಸ ಪಾತ್ರಾವಳಿ ಚಾಳ, ಮಾಳಮಡ್ಡಿ, ಧಾರವಾಡ, ೧೯೯೫

೬೧. ವೀರಭದ್ರಪ್ಪ ಕುಂ, ಸುಭದ್ರಮ್ಮ ಮನ್ಸೂರು, ಕರ್ನಾಟಕ ನಾಟಕ ಅಕಾಡಮಿ, ಬೆಂಗಳೂರು ೧೯೯೮

೬೨. ವೆಂಕಟರಾಮ್ ಎಸ್.ಎಸ್, ನವಕರ್ನಾಟಕ ಕೈಪಿಡಿ ರಂಗಭೂಮಿ, ನವಕರ್ನಾಟಕ ಪ್ರಕಾಶನ

೬೩. ವೆಂಕಟೇಶನ್ ಆರ್, ಜನಪದ ರಂಗಭೂಮಿ ಮತ್ತು ಆಧುನಿಕ ರಂಗಭೂಮಿ ಸ್ವರೂಪ-ಸಂರಚನೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ. ಹಂಪಿ, ೧೯೯೭

೬೪. ವೈಕುಂಠರಾಜು ಬಿ.ವಿ, ನಾಟಕ ರತ್ನ ಗುಬ್ಬಿ ವೀರಣ್ಣ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೩

೬೫. ವೈಕುಂಠರಾಜು ಬಿ.ವಿ, ಕನ್ನಡ ರಂಗಭೂಮಿ, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, ೧೯೯೭

೬೬. ಶ್ಯಾಮಸುಂದರ ಬಿದರಕುಂದಿ, ಸ್ವಾತಂತ್ರ್ಯ ಹೋರಾಟ ಮತ್ತು ರಂಗಭೂಮಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೮

೬೭. ಶಿವರಾಮ ಕಾರಂತ ಕೆ, ಕರ್ನಾಟಕದಲ್ಲಿ ನಾಟಕಗಳು, ಐ.ಬಿ.ಎಚ್.ಪ್ರಕಾಶನ,ಬೆಂಗಳೂರು, ೧೯೭೫

೬೮. ಶ್ರೀರಂಗ, ಕನ್ನಡ ರಂಗಭೂಮಿಯ ಪುರೋಭಿವೃದ್ಧಿ, ಕರ್ನಾಟಕ ವಿ.ವಿ. ಧಾರವಾಡ, ೧೯೬೮

೬೯. ಶ್ರೀರಂಗ, ಪ್ರೇಕ್ಷಕ ವರ್ಗ, ನಮ್ಮ ರಂಗಭೂಮಿಯ ಸಮಸ್ಯೆ, ಮೈಸೂರು ವಿ. ವಿ., ೧೯೬೯

೭೦. ಶ್ರೀರಂಗ, ನಾಟ್ಯಶಾಸ್ತ್ರದಲ್ಲಿ ನಾಟ್ಯಮಂಟಪ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೮೨

೭೧. ಶ್ರೀರಂಗ, ನಾಟ್ಯಶಾಸ್ತ್ರದ ನಟ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೮೨

೭೨. ಶ್ರೀರಂಗ, ನಾಟ್ಯಶಾಸ್ತ್ರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೮೪

೭೩. ಶ್ರೀರಂಗ, ಭಾರತೀಯ ರಂಗಭೂಮಿ, ನ್ಯಾಶನಲ್ ಟ್ರಸ್ಟ್, ಬೆಂಗಳೂರು

೭೪. ಶ್ರೀರಂಗ, ಸಾಹಿತಿಯ ಆತ್ಮ ಜಿಜ್ಞಾಸೆ, ಉಷಾ ಸಾಹಿತ್ಯಮಾಲೆ, ಮೈಸೂರು

೭೫. ಶೇಷಗಿರಿರಾವ್ ಎಲ್.ಎಸ್., ಗ್ರೀಕ್ ರಂಗಭೂಮಿ ಮತ್ತು ನಾಟಕ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೮೬

೨೬. ಸದಾನಂದ ಕನವಳ್ಳಿ, ನಾಟಕ ರತ್ನ ಗುಬ್ಬಿ ವೀರಣ್ಣನವರು, ವೀ. ಅ. ಸ. ಶ್ರೀ. ಜ. ತೋಂ.ಮಠ, ಗದಗ, ೧೯೭೯

೨೭. ಸಂಗಣ್ಣ ಮುದೇನೂರು, ಸೂಳೆ ಸಂಕವ್ವೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೧

೨೮. ಸಿಂಧುವಳ್ಳಿ ಅನಂತಮೂರ್ತಿ, ನನ್ನದು ಬಣ್ಣದ ಬದುಕು, ಗೀತಾ ಬುಕ್ ಹೌಸ್, ಮೈಸೂರು ೧೯೯೮

೨೯. ಸಿಂಧುವಳ್ಳಿ ಅನಂತಮೂರ್ತಿ, ಗುಬ್ಬಿ ಕಂಪನಿ, ಸುರುಚಿ ಪ್ರಕಾಶನ, ಸರಸ್ವತಿಪುರಂ ಮೈಸೂರು ೧೯೭೯

೩೦. ಸೀತಾರಾಮಯ್ಯ ಹ.ವೆಂ, ಎಂ.ವಿ.ಸುಬ್ಬಯ್ಯ ನಾಯ್ಡು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು ೧೯೭೨

೩೧. ಸೀತಾರಾಮಯ್ಯ ಹ.ವೆಂ, ಕರ್ನಾಟಕ ರಂಗಕಲಾವಿದರು, ಕಲಾಸಾಹಿತ್ಯ ಪ್ರಕಾಶನ, ಬೆಂಗಳೂರು ೧೯೮೩

೩೨. ಸುಬ್ಬಣ್ಣ ಕೆ.ವಿ.(ಅನು) ಸ್ತಾನಿಸ್ಲಾವ್‌ಸ್ಕಿಯ An Actor prepares - ರಂಗದಲ್ಲಿ ಅಂತರಂಗ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೮೨

೩೩. ಸುರೇಂದ್ರ ದಾನಿ (ಸಂ) ಕನ್ನಡ ರಂಗಪರಂಪರೆ, ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ, ೧೯೯೫

ಇಂಗ್ಲಿಷ್ ಕೃತಿಗಳು

01. Anniah Gowda, Indian Drama, Prasaranga, University of Mysore, 1974

02. Balwant Gargi, Folk Theatre of India, Published by Rupa & co. Jatra, 1991

03. Kapila Vatyayan, Traditional Indian Theatre, NBT, New Delhi, 1980

ನಿಯತಕಾಲಿಕೆಗಳು

೧. **ನೋವೇ ತುಂಬಿರುವ ಕಲಾವಿದೆಯರ ಬದುಕು** ಲೇ : ದ.ರಾ. ಪುರೋಹಿತ ಕಲಾದಗಿ, ಪ್ರಜಾವಾಣಿ, ಜುಲೈ, ೬-೨೦೦೩

೨. ಪ್ರಜಾವಾಣಿ ಪತ್ರಿಕೆ (ಸಾಪ್ತಾಹಿಕ ಪುರವಣಿ) ಲೇ: ಗುಡಿಹಳ್ಳಿ ನಾಗರಾಜ, ೨೦೦೨

೩. ಅಂತರಂಗ, ಲೇ: ಗವೀಶ್ ಹಿರೇಮಠ **"ನಾಗರತ್ನಮ್ಮ ಹೊಸಮನಿ ಅಂದು ಮಹಾರಾಣಿ ಇಂದು ಮಾನಸಿಕ ಅಸ್ವಸ್ಥೆ"** ವಿಜಯ ಕರ್ನಾಟಕ ಪತ್ರಿಕೆ, ಫೆಬ್ರವರಿ ೨೧-೨೦೦೩

೪. ಅಂತರಂಗ, **ಎಲ್ಲರಂತಲ್ಲ ಈ ರಂಗನಾಯಕಿ,** ಲೇ: ಗವೀಶ್ ಹಿರೇಮಠ, ವಿಜಯ ಕರ್ನಾಟಕ ಪತ್ರಿಕೆ, ೨೫ ಏಪ್ರಿಲ್ ೨೦೦೩

೫. **ವೃತ್ತಿ ರಂಗಭೂಮಿ ಕುಟುಂಬವೊಂದರ ಕಳಚಿದ ಕೊಂಡಿ,** ಲೇ: ಹಳ್ಳಿ ಸುರೇಶ, ಡಿ.ಬಿ. ನಾಯಕ್, ವಿಜಯ ಕರ್ನಾಟಕ ಪತ್ರಿಕೆ, ಫೆಬ್ರವರಿ ೨೧-೨೦೦೩

೬. **ಉತ್ತರ ಕರ್ನಾಟಕ ರಂಗವೈಭವದ ತಳಹದಿ,** ಲೇ: ಡಾ. ಡಿ. ರಾಮಕೃಷ್ಣ ಮರಾಠೆ, ಪ್ರಜಾವಾಣಿ, ಮಾರ್ಚ್ ೭-೨೦೦೩

೭. ಪ್ರಜಾವಾಣಿ, **ಮಹಿಳಾ ರಂಗಭೂಮಿಯ ಉಜ್ವಲ ಪರಂಪರೆಯ ಪ್ರತಿನಿಧಿ ಆರ್.ನಾಗರತ್ನಮ್ಮ,** ಲೇ : ಗುಡಿಹಳ್ಳಿ ನಾಗರಾಜ, ೨೦೦೧

೮. ಈ ನಮ್ಮ ಕನ್ನಡನಾಡು, ಬಳ್ಳಾರಿ ಲಲಿತಮ್ಮ, ಲೇ: ಬಸವರಾಜ ಅಸುಂಡಿ, ೨೦೦೧

೯. ಮಡಿಲಕ್ಕಿ, **ಜಾನಪದ ರಂಗಭೂಮಿ ಮತ್ತು ಮಹಿಳೆ,** ಲೇ: ಬಸವರಾಜ ಮಲಶೆಟ್ಟಿ, (ಸಂ) ಹೆಚ್.ಎಲ್. ನಾಗೇಗೌಡ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು, ೧೯೯೨

೧೦. ಸಂಯುಕ್ತ ಕರ್ನಾಟಕ, ರಂಗಭೂಮಿ ನಟಿ ವರಲಕ್ಷ್ಮಿ ನಾಟಕ ಅಕಾಡೆಮಿ ಪ್ರಶಸ್ತಿಗೆ ಆಯ್ಕೆ, [illegible]

೧೧. ಸಂಯುಕ್ತ ಕರ್ನಾಟಕ, ಬಯಲಾಟ ತಂಡ ಕಟ್ಟಿ ಬೆಳೆಸಿದ ಕಲಾವಿದೆ, ಲೇ: ಕೃಷ್ಣಮೂರ್ತಿ ಕುಲಕರ್ಣಿ, ೧೨- ೧೨-೨೦೦೧

೧೨. ಮಹಿಳಾ ಅಧ್ಯಯನ, ಸುಭದ್ರಮ್ಮ ಮನ್ಸೂರು, ಲೇ: ಸಂ. ಶೈಲಜಾ ಹಿರೇಮಠ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦

೧೩. ಸುಧಾ ವಾರಪತ್ರಿಕೆ, ಸಿನೇಮಾ ಆಕರ್ಷಣೆಗೆ ಸೋಲದ ಬಳ್ಳಾರಿ ಲಲಿತಮ್ಮ, ಲೇ: ಬಸವರಾಜ ಮಲಶೆಟ್ಟಿ, ೮- ೨-೨೦೦೧

ಸ್ಮರಣ ಸಂಚಿಕೆಗಳು

ಕಲಾಸಿರಿ ಸ್ಮರಣ ಸಂಚಿಕೆ, ಬಳ್ಳಾರಿ ಜಿಲ್ಲಾ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ ೨೪-೨೫ ಫೆಬ್ರವರಿ ೧೯೯೬, ಮರಿಯಮ್ಮನಹಳ್ಳಿ.